KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

MICROFILM ROLL

No 154

MICROFILM ROLL

No 154

ARS 34 APP 82

NAVAYUGA KANNADA WEEKLY

Copied From Roll No 153

From: 16 : 5 : 68

ARS 34 APP 82

NAVAYUGA KANNADA WEEKLY

Copied From Roll No 153

From: 16 : 5 : 68

ARS 34 APP 82

NAVAYUGA KANNADA WEEKLY

Copied From Roll No 153

From: 16 : 5 : 68

NAVAYUGA 9—5—1960
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಕಲೆ—ಸಂಸ್ಕೃತಿ

ಚೆಲುವಿನ ಹಚ್ಚೆ

ಬರೆದವರು:
ಶ್ರೀ ಸ. ನಾರಾಯಣ.

ಹಚ್ಚೆಯ ಸೌಂದರ್ಯ ಜನ ಸಾಮಾನ್ಯರಲ್ಲಿ ಮಾತ್ರವೇ ಅಲ್ಲದೆ ಸಾಗರಿಕರಲ್ಲಿಯೂ ಕಂಡು ಬರುತ್ತದೆ. ಭಾರತದಲ್ಲಿ ಅನೇಕ ಸ್ತ್ರೀಯರು, ಮೂಗು, ಗದ್ದ, ಕೈಗಳ ಮೇಲೆ ಹಚ್ಚೆ ಚುಚ್ಚಿಸಿಕೊಳ್ಳುತ್ತಾರೆ. ಹಳ್ಳಿಯ ಹೆಂಗಸರಲ್ಲಿ, ಹಿಂದಿನ ಕಾಲದ ಮಹಿಳೆಯರಲ್ಲಿ ಈ ಗುರುತು ಇಂದಿಗೂ ಕಾಣ ಬರುತ್ತದೆ. ಗುಡ್ಡಗಾಡಿನ ಜನತೆಯಲ್ಲಿ ಈ ಸಂಪ್ರದಾಯ ಅಧಿಕವಾಗಿರುತ್ತದೆ.

ಸೂಜಿಯ ಮುಖಾಂತರ ಚರ್ಮದಲ್ಲಿ ಬಣ್ಣ ತುಂಬಿ, ಚರ್ಮವನ್ನು ಸೀಳಿ ಮತ್ತು ಬರೆ ಕೊಟ್ಟು ಗುರುತು ಮಾಡುವ ಮೂರು ವಿಧಾನಗಳಿಂದ ಹಚ್ಚೆ ಚುಚ್ಚುತ್ತಾರೆ. ಸ್ತ್ರೀಯರ ಕೈಕಾಲುಗಳ ಮೇಲೆ, ಹಣೆಯ ಮೇಲೆ, ತುಟಿಯ ಅಡಿಯಲ್ಲಿ ಹಚ್ಚೆಯ ಗುರುತುಗಳಿರುವುದು ಸಾಮಾನ್ಯ. ಹಚ್ಚೆಯಲ್ಲಿ ಅನೇಕ ಬಗೆಯ ಚಿತ್ರ, ಹೆಸರು, ಲತಾಪುಷ್ಪಗಳನ್ನು ಚಿತ್ರಿಸುವರು. ಒಬ್ಬ ಸ್ತ್ರೀಯ ಕೈಕಾಲುಗಳ ಮೇಲೆ ಪೂರ್ಣ ಹಚ್ಚೆ ಚುಚ್ಚಿಸುವ ಕಾರ್ಯ ಮುಗಿಯ ಬೇಕಾದರೆ ಕೆಲ ತಿಂಗಳು ಬೇಕಾಗುವುದು.

ಭಾರತದಲ್ಲಿ ಮಾತ್ರವೇ ಅಲ್ಲದೆ ಪರದೇಶದ ಸ್ತ್ರೀಯರಲ್ಲಿಯೂ ಈ ಬಗೆಯ ನೈಸರ್ಗಿಕ ಅಲಂಕಾರ ರೂಢಿಯಲ್ಲಿರುವುದು ತಿಳಿದು ಬರುತ್ತದೆ. ಒಂದು ಬಾರಿ ಹಚ್ಚೆಯ ಗುರುತು ಮಾಡಿದರೆ ಅದನ್ನು ಯಾವ ಬಗೆಯಿಂದಲೂ ಅಳಿಸಲು ಸಾಧ್ಯವಿಲ್ಲ; ತೊಡದುಹಾಕುವಂತಿಲ್ಲ. ಆಸ್ಟ್ರೇಲಿಯಾದ ಪಶ್ಚಿಮ ತೀರದ ಪಾಲಿನೀಶಿಯಾದ ಜನರು ತಮ್ಮ ಶರೀರಗಳ ಮೇಲೆ ಶಾಶ್ವತ ಬಗೆಯ ಪುಷ್ಪಗಳ ಆಕಾರವನ್ನು ಹಚ್ಚೆಯ ಮೂಲಕ ಚುಚ್ಚಿಸಿಕೊಳ್ಳುತ್ತಾರೆ.

ನ್ಯೂಜಿಲೆಂಡಿನ ಕುಲೀನ ಸ್ತ್ರೀಯರು ಹಚ್ಚೆ ಚುಚ್ಚಿಸಿಕೊಳ್ಳುವ ರೀತಿ ವಿಚಿತ್ರಕರವಾದುದು. ಅಲ್ಲಿಯ ಬಾಲಿಕೆ ದೂಡ್ಡವಳಾದೊಡನೆ ಮೊದಲು ತುಟಿ ಮತ್ತು ಗದ್ದದ ಮೇಲ್ಭಾಗದಲ್ಲಿ ಚೂಪಾದ ಚೂರಿಯಿಂದ ಸೀಳಿ ಅದರಲ್ಲಿ ಕಪ್ಪು ವರ್ಣದ ಚೂರ್ಣ (ಸುಡಿ) ಯನ್ನು ತುಂಬುತ್ತಾರೆ. ಅಸಹನೀಯ ಯಾತನೆಯಾದರೂ ಅವಳು ಅದನ್ನು ಸಹಿಸಿಕೊಂಡಿರುತ್ತಾಳೆ. ಅನಂತರ ಹಚ್ಚೆ ಚುಚ್ಚಿದವಂಗೆ ಉಪಾಹಾರ ಕೊಡುತ್ತಾರೆ. ಮೊದಲು ಊರಿನ ಪ್ರಮುಖ ಮಂಗಳಿಗೆ ಹಚ್ಚೆ ಚುಚ್ಚುವಾಗ ಕರಬಲಿಯನ್ನು ಕೊಡುವ ಸಂಪ್ರದಾಯವಿತ್ತು.

ಮೆಲನೇಶಿಯಾದ ಸ್ತ್ರೀಯರ ಪ್ರಮುಖ ಸೌಂದರ್ಯವೆಂದರೆ ಹಚ್ಚೆ. ಇಲ್ಲಿಯ ಪುರುಷರಲ್ಲಿ ಹಚ್ಚೆ ಚುಚ್ಚಿಸಿಕೊಳ್ಳುವ ರೂಢಿ ಇಲ್ಲ. ಎಡ್ ಮಿರಲ್‌ಟಿ ದ್ವೀಪದಲ್ಲಿ ಮುಖ ಮತ್ತು ಎದೆಯ ತುಂಬ ಹಚ್ಚೆ ಚುಚ್ಚಿಸಿಕೊಳ್ಳುವ ಸಂಪ್ರದಾಯವಿದೆ. ಈ ಜನರ ಮೈ ಬಣ್ಣ ಕಪ್ಪಾಗಿರುವುದರಿಂದ ಹಚ್ಚೆಯ ಬಣ್ಣ ಕಾಣುವ ಸಲುವಾಗಿ ಅವರು ಚರ್ಮವನ್ನು ಸುಟ್ಟು, ಅಥವಾ ಸೀಳಿ ಹಚ್ಚೆಯನ್ನು ಗುರುತು ಮಾಡುತ್ತಾರೆ. ಕನ್ಯೆಗೆ ವಿವಾಹ ಪೂರ್ವದಲ್ಲಿಯೇ ಈ ಕಾರ್ಯ ಮಾಡುವರು. ಚುಚ್ಚಿಸಿಕೊಳ್ಳುವ ಸಂಕಟ ತಾಳಲಾರದೆ ಸ್ವಲ್ಪ ಸ್ವಲ್ಪವೇ ಚುಚ್ಚಿಸಿಕೊಳ್ಳುತ್ತಾ ಒಂದೊಂದು ಚಿತ್ರದ ಗುರುತು ಮುಗಿಯ ಬೇಕಾದರೆ ತಿಂಗಳುಗಳೇ ಬೇಕಾಗುವುದು.

ಫಿಜಿದ್ವೀಪದಲ್ಲಿ ಹಚ್ಚೆಯ ಗುರುತು ಇಲ್ಲದಿರುವ ಸ್ತ್ರೀಯನ್ನು ಹಿಡಿದು ಅವಳಿಗೆ ಬಲತ್ಕಾರದಿಂದ ಹಚ್ಚೆ ಹಾಕುವರು. ಮುಖದ ಮೇಲೆ ಸಣ್ಣ ಸಣ್ಣ ವರ್ತುಲಗಳನ್ನು ಮಾಡುವರು. ಮೊದಲ ದ್ವೀಪದ ಕುಲೀನ ಪುರುಷರು ತಮ್ಮ ಗಲ್ಲದ ಮೇಲೆ ಹಚ್ಚೆ ಹಾಕಿಸಿಕೊಳ್ಳುವರು. ಫೊಕೋರ ದ್ವೀಪದಲ್ಲಿ ಹಚ್ಚೆಯ ಕಾರ್ಯ ಆರಂಭವಾಗುವ ಮೊದಲು ಮಹಿಳೆ ಒಂದು ತಿಂಗಳ ಕಾಲ ಮನೆಯಲ್ಲಿ ಪರಿಶುದ್ಧಳಾಗಿದ್ದು ಪ್ರತಿಷ್ಠೆಯೂ ಸಮುದ್ರಸ್ನಾನ ಮಾಡಿ ಬರಬೇಕಾಗುತ್ತದೆ.

ಆಸ್ಟ್ರೇಲಿಯಾದಲ್ಲಿ ವಿವಾಹದ ಮೊದಲು ಹಚ್ಚೆ ಚುಚ್ಚುವರು. ಇಲ್ಲಿ ಉಬ್ಬುವ ಹಚ್ಚೆ ಚುಚ್ಚುವ ರೂಢಿ ಇದೆ. ಆರಂಭದಲ್ಲಿ ಕನ್ಯೆಯನ್ನು ಒಬ್ಬ ವೃದ್ಧ ಸ್ತ್ರೀ ಮನೆಯಿಂದ ಬೇರೆಡೆಗೆ ಕರೆದೊಯ್ದು ಹಚ್ಚೆ ಹಾಕುವ ಭಾಗಕ್ಕೆಲ್ಲ ಮಣ್ಣಿನ ರಾಡಿ (ಕೆಸರು) ಮೆತ್ತುವಳು. ಅನಂತರ ಹುಲ್ಲು ಎಲೆಗಳನ್ನು ರಾಶಿಹಾಕಿ ಸುಟ್ಟು ಅದರ ಹೊಗೆ ಕುಡಿಯಲು ಹೇಳುವಳು. ಆ ಸಂದರ್ಭದಲ್ಲಿ ಕನ್ಯೆಗೆ ಪತಿ ಸೇವೆಯ ಬಗ್ಗೆ ಉಪದೇಶ ದೊರೆಯುವುದು ಕನ್ಯೆ ವೃದ್ಧೆಯ ಎದುರಿನಲ್ಲಿ ಕುಳಿತುಕೊಳ್ಳುವಳು. ವೃದ್ಧೆ ಕನ್ಯೆಯ ತಲೆಯನ್ನು ತನ್ನ ತೊಣ ಕಾಲುಗಳಿಂದ ಒತ್ತಿ ಹಿಡಿದುಕೊಳ್ಳುವಳು. ಆಗ ಹಚ್ಚೆ ಚುಚ್ಚುವ ಪುರುಷರು ಕನ್ಯೆಯ ಬೆನ್ನಲ್ಲಿ ಒಂದು ಇಂಚು ಉದ್ದ, ಒಂದು ಇಂಚು ಅಗಲವಾದ ಗಾಯ ಮಾಡುವರು. ನೋವನ್ನು ತಾಳಲಾರದೆ ಅವಳು ಕಿರುಚುವಳು, ಪಾರಾಗಲು ಪ್ರಯತ್ನಿಸುವಳು. ಈ ಕಾರ್ಯ ಮುಗಿಯಲು ಸುಮಾರು ಒಂದು ಗಂಟೆ ಕಾಲ ಬೇಕಾಗುತ್ತದೆ. ಅನಂತರ ಅವಳ ಗಾಯಕ್ಕೆ ಎಣ್ಣೆ ಹಚ್ಚುವರು. ಅವಳ ತಲೆಗೆ ಪಕ್ಷಿಯ ಗರಿಯನ್ನು ಕಟ್ಟುವರು. ಅವಳು ಮರುದಿನ ಪೂರ್ಣ ಉಪವಾಸ ಮಾಡಬೇಕಾಗುತ್ತದೆ. ಕನ್ಯೆಯನ್ನೋವನ್ನು ಅನಂದದಿಂದ ಅನುಭವಿಸುವಳು. ತನ್ನ ಬೆನ್ನಲ್ಲಿ ಹಾಕಿದ ಹಚ್ಚೆ ಬಹು ಸುಂದರವಾಗಿದೆ ಎಂದು ತಿಳಿದಿರುತ್ತಾಳೆ. ಫ್ಯೂಗಿಯಾಸುಲ್ಲಿಯೂ ಹಚ್ಚೆ ಚುಚ್ಚುವ ರೂಢಿ ಇದೆ. ಸೂಜಿಯಿಂದ ಚರ್ಮದಲ್ಲಿ ವರ್ತುಲಾಕಾರದಲ್ಲಿ ಬಣ್ಣ ತುಂಬುವರು. ಜೋನಿಯೋ ದ್ವೀಪದ ನಾಯಿಫ ಜಾತಿಯ ಸ್ತ್ರೀಯರು ಹಚ್ಚೆ ಹಾಕುವುದರಲ್ಲಿ ಕುಶಲರು—ಪ್ರವೀಣರು ಎಂದು ಹೆಸರು ಪಡೆದಿದ್ದಾರೆ.

ಭಾರತದಲ್ಲಿ ಗುಡ್ಡಗಾಡು ಜನಾಂಗದವರಲ್ಲಿ, ಗ್ರಾಮೀಣ ಜನಾಂಗದವರಲ್ಲಿ ಹಚ್ಚೆಯನ್ನು ಹಾಕಿಸಿಕೊಳ್ಳುವ ಅಭಿರುಚಿ, ಸಂಪ್ರದಾಯ ಹೆಚ್ಚು. ಲಂಬಾಣಿ (ಬಂಜಾರರು) ಮಹಿಳೆಯರು ಹಚ್ಚೆ ಹಾಕಿಸಿಕೊಳ್ಳುವುದರಲ್ಲಿ ಅಗ್ರಗಣ್ಯರು. ಅವರ ಕೈ ಮೈಗಳು ಚಿತ್ರಮಯವಾಗಿರುತ್ತವೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಶಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಲಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಹೂಡ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೊರ್ತಿ, ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿಯರು, ಪರ್ಭಾಜಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಶದಪಡಿಸಲ್ಪಟ್ಟಿದೆ. ಹೊಸ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟಿ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನೆನಪಿನ ಮಣಿಗಳು

೫

"ಏನಿದೆ ಮಣ್ಣು?" "ಇದೇನೂ ರುಚಿಯಿಲ್ಲ, ಮಣ್ಣಿನ ಹಾಗಿದೆ"— ಹೀಗೆ ತಾತ್ಸಾರ ಮಾಡಿ ಹೇಳುತ್ತಾರೆ. ಹೌದು, ತಿಂದು ನೋಡಿಯೇ ಹೇಳುತ್ತಾರನ್ನಿ. ಅದು ಬಾಯಿಗೆ ಸ್ವಲ್ಪವೂ ಸೈಸಲಾಗದಂಥಾದ್ದು.

ಆದರೆ ಮಣ್ಣಿನ ಮಹತ್ವವನ್ನು ಆಲೋಚನೆ ಮಾಡಿದರೆ, ಹಾಗೆ ತಾತ್ಸಾರ ಮಾಡುವುದು ಎಷ್ಟು ತಪ್ಪು ಅಲ್ಲವೆನಿಸುವುದಿಲ್ಲವೆ?

ಒಂದು ಹೆಜ್ಜೆ ಮಣ್ಣಿಗಾಗಿ ಎಂತೆಂತಹ ವ್ಯಾಜ್ಯಗಳು! ಕೊಲೆ—ಹತ್ಯೆಗಳು! ಮಣ್ಣಿನಿಂದ ಕಾಣುವ ಕೆಟ್ಟ— ಗಾದೆಯೇ ಇದೆ.

ಅದೆಲ್ಲ ಯಾಕೆ? ಕಣ್ಣು ಮುಂದೆಯೇ ಇದೆಯಲ್ಲಾ? ಮಣ್ಣಿನಲ್ಲೇ ಹುಟ್ಟುವ ಕಬ್ಬು ಅಕ್ಕಿ, ಹಣ್ಣು ಮುಂತಾದುವೆಲ್ಲಾ ಪ್ರಾಣಿಗಳಿಗೆಯ ಮೇಲೆ ಎಂತೆಂತಹ ಅಧಿಕಾರ ನಡೆಸುತ್ತವೆ! ಅಂತಲೇ ಪುರಂದರ ದಾಸರು 'ಮಣ್ಣಿಂದಾ ತೀರಾ ಮಣ್ಣಿಂದಾ—' ಎಂತ ಎಂದೋ ಹಾಡಿದ್ದಾರೆ. ನಾವು ಕೂಡಾ—

"ನೋಡಿದರೆಲ್ಲಾ ಒಂದೇ ಮಣ್ಣು
ಬಗೆ ಬಗೆ ರುಚಿಗಳ ಹಣ್ಣು
ದೇವರ ಮಾಟ ವಿಚಿತ್ರದಾಟ
ದೇವರಿಡಿಸಿ ತಿನ್ನ"—ಎಂದು ಹೇಳೋಣ.

—ಎಂ. ರಂಗರಾವ್.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

6—5—1968

೨೦
ಪೈಸೆ

ಕಥಾ ಪ್ರಪಂಚ

ಹಣ್ಣೆಲೆ ಉದುರುವಾಗ ಹಸುರೆಲೆ ನಕ್ಕಿತು

ಶ್ರೀಮತಿ ಯಶೋದಾ ಯೆನ್. ಜೆನ್ನಿ

ಅಂಚೆಯವನು ಕೈಗಿತ್ತ ಕಾಗದದ ಮೇಲಿನ ಅಕ್ಷರಗಳನ್ನು ನೋಡಿಯೇ ಸಿಡಿಮಿಡಿಗೊಂಡು ಓದಲಾರಂಭಿಸಿದಳು ರೂಪಾ.

ಚಿರಂಜೀವಿ ಮಾಧವನಿಗೆ

ನಿನ್ನ ತಾಯಿಯ ಆಶೀರ್ವಾದಗಳು.

ನಾನು ಈ ಮೊದಲೇ ನಿನಗೆ ಐದಾರು ಪತ್ರಗಳನ್ನು ಬರೆದಿದ್ದರೂ ನೀನು ಯಾವುದಕ್ಕೂ ಪ್ರತ್ಯುತ್ತರವಿಲ್ಲದೆ ತಟಸ್ಥನಾಗಿ ಕುಳಿತಿರುವದನ್ನು ನೋಡಿ ವ್ಯಥೆಯಾಗಿದೆ. ಈ ಬಾರಿಯಾದರೂ ಹಾಗೆ ಮಾಡಲಾರೆಯೆಂದು ನಂಬಿದ್ದೇನೆ.

ನಿನ್ನ ತಂದೆಯವರು ಜಾಪೆ ಹಿಡಿದು ಆರುತಿಂಗಳಾದರೂ ನೀನು ಒಮ್ಮೆಯೂ ಕಣ್ಣಿನಿಂದ ನೋಡಲೂ ಬರಲಿಲ್ಲ. ಅವರಂತೂ ಮೊದಲಿನಿಂದಲೂ ಬಡತನದ ಕೊರಗಿನಿಂದಲೇ ಕಂಗಾಲಾದ ಜೀವ. ಈಗ ಕಾಯಿಲೆಯೊಂದಿಗೆ ನಿನ್ನ ಯೋಚನೆಯೂ ಸೇರಿ ಬರಿಯ ಅಸ್ಥಿಪಂಜರದಂತಾಗಿ ದಿನಗಳನ್ನೆಣಿಸುತ್ತಿದ್ದಾರೆ. ಮುಖ್ಯ ನನ್ನ ದುರದೃಷ್ಟ. ಮತ್ತೇನೆನ್ನಲಿ?

ನಿನ್ನ ತಂಗಿ ರಮೋಳಿಗಂತೂ ಮದುವೆಯ ಯೋಗವೇ ಇಲ್ಲವೇನೋ! ಪ್ರಾಯ ಬೇನೋ ಇಪ್ಪತ್ತೆರಡು ಮಿಕ್ಕಿತು. ಆದರೆ ಉಡಲು ಸರಿಯಾದ ಸೀರೆಯೂ ಇಲ್ಲದ ಹುಡುಗಿಯ ಕೈಹಿಡಿಯಲು ಯಾವ ಗಂಡು ಮುಂದೆ ಬಂದೀತು? ಆಕೆಯೂ ಒಂದು ರೀತಿಯ ವಿರಕ್ತಿಯಿಂದ ದಿನ ಕಳೆಯುತ್ತಿದ್ದಾಳೆ. ತಮ್ಮಂದಿರಿಬ್ಬರಿಗೂ ಅಂಗಿ ಹೊಲಿಸಿ ಬರುವ ಜಾತ್ರೆಗೆ ಎರಡು ವರ್ಷದಳಾದುವು. ಮೊನ್ನೆಮೊನ್ನೆಯ ತನಕ ಹರಕು ಅಂಗಿಯನ್ನೇ ಹೊಲಿದು ಹೊಲಿದು ಬಯ್ದು ಶಾಲೆಹತ್ತಿದೆ. ಈಗ ಒಂದು ತಿಂಗಳಿಂದ ಅಂಗಿಯಿಲ್ಲದೆಯೆಂದು ಮನೆಯಲ್ಲೇ ಇದ್ದಾರೆ. ನಾನೇನು ಮಾಡಲಿ? ಅವರ ಹಣೆಯಲ್ಲಿ ಬರೆದಂತಾಗಲಿ ಎಂದು ಸುಮ್ಮನಿದ್ದೇನೆ.

ತಂಗಿ ಸುಮಾ ಐದು ವರ್ಷವಾದರೂ ಒಂದು ವರ್ಷದ ಮಗುವಿನಷ್ಟೇ ಬೆಳೆದಿದ್ದಾಳೆ. ಭೋಡಿದವರು ಡಾಕ್ಟರರ ಹತ್ತಿರ ಹೋಗಿ ತೋರಿಸಿ ಎನ್ನುತ್ತಾರೆ. ಹೊಟ್ಟೆ ಬಟ್ಟೆಯದೇ ಚಿಂತೆ ಹೆಚ್ಚಾಗಿರುವಾಗ ಮದ್ದಿಗೆಲ್ಲಿಂದ ಹಣ ತರಲಿ ಎಂದು ಸುಮ್ಮನಿದ್ದೇನೆ.

ಹೆಚ್ಚೇನು ಬರೆಯಲಿ? ಯಾವಾಗಲೂ ಹೀಗೆಯೇ ಬರೆಯುತ್ತೇನೆಂದು ಬೇಸರಗೊಂಡೆಯಾ? ನಮ್ಮ ಮನೆಯ ನಿತ್ಯ ದಾರಿದ್ರ್ಯ ಗೋಳಿನ ಬಾಳು ಈಗ ನೀನು ಮರೆತಿದ್ದರೂ ಕೂಡ ಹಿಂದೆ ಅನುಭವಿಸಿದ್ದೇ ಅಲ್ಲವೇ? ಎಂದ ಮೇಲೆ ಈಗ ಮಾತ್ರ ಕಠಿಣ ಚಿತ್ತನಂತೆ ನೆನ್ನೆಲ್ಲರನ್ನೂ ಮರೆತಿರುವುದು ನನ್ನ ದೌರ್ಭಾಗ್ಯ. ಇರಲಿ ಬಿಡು. ಈ ಸಲ ಮಾತ್ರ ನೀನು ಕಂಡಿತ ಬರಲೇಬೇಕು. ನೀನು ಬಂದೆಯೆಂದರೆ ನನ್ನೆಲ್ಲ ಸಂಕಷ್ಟಗಳನ್ನೂ ಎದುರಿಸುವ ಶಕ್ತಿಯೂ ಬಂದೀತು. ಕಂಡಿತ ನಿರಾಸೆಗೊಳಿಸಬೇಡ. ಕಾಯುತ್ತಿದ್ದೇನೆ. ಸಾಧ್ಯವಾದರೆ ರೂಪಾಳನ್ನೂ ಮಗುವನ್ನೂ ಕರೆದುಕೊಂಡುಬಾ.

ಇಂತು ಆಶೀರ್ವಾದಗಳು.

ಕಮಲಮ್ಮ

ಪತ್ರವನ್ನೋದಿದ ರೂಪಾಳ ಮೊಗ ಸಿಟ್ಟಿನಿಂದ ಕೆಂಪಗಾಯಿತು. ಅಕೆ ಒಡನೆಯೇ ಕಾಗದವನ್ನು ಹರಿದು ಚೂರುಗಳನ್ನಾಗಿ ಮಾಡಿ ಕಿಟಕಿಯಿಂದ ಹೊರಗೆಸೆದಳು. ಆ ಕಾಗದದ ಚೂರುಗಳು ಗಾಳಿಯಲ್ಲಿ ಹಾರಿ ದೂರವಾದುದನ್ನು ನೋಡಿದ ಮೇಲೆ ಆವಳ ಮುಖಕ್ಕೆ ಪೆಮ್ಮದಿಯೆನಿಸಿ ವರಾಂಡದ ಕುರ್ಚಿಯಲ್ಲೊರಗಿ ಫಿಟ್ಟುಸಿಗರೆದಳು.

ಹಣ! ಹಣ! ಹಣ! ಯಾವಾಗ ನೋಡಿದರೂ ಒಂದೇ ಗೋಳು. ಒಂದೇ ರಾಗ. ತನ್ನ ಮಗ ದೊಡ್ಡ ಕುಬೇರನೆಂದುಕೊಂಡಿದ್ದಾರೇನೋ! ಬರುವ ಇನ್ನೂರು ರೂಪ್ಯಾಗಳಲ್ಲಿ ತಮ್ಮ ಜೀವನ ನೆಮ್ಮದಿಯಿಂದ ಸಾಗಿಸುವುದೇ ಕಠಿಣವಾಗುತ್ತಿದೆಯೆಂಬುದನ್ನು ಹಳ್ಳಿಯಲ್ಲಿ ದಿನ ಕಳೆಯುವ ಅವರೇನು ಬಲ್ಲರು? ಅಷ್ಟು ಹಣದ ಆಸೆಯಿದ್ದವರು ತಮ್ಮ ಮಗನನ್ನು ವಕಾಲತ್ತಿಗೋ ಡಾಕ್ಟರ ಪದವಿಗೋ ಏರಿಸದೇ ಬರೇ ಗುಮಾಸ್ತನ ಸ್ಥಾನದಲ್ಲೇಕೆ ಇರಿಸಬೇಕಾಗಿತ್ತು? ಐನೂರು ಪತ್ರಗಳಿಗೂ ಉತ್ತರವಿಲ್ಲವಂತೆ. ಹೂಂ... ಹೌದು. ಆ ಪತ್ರಗಳೆಲ್ಲವೂ ಮುದ್ದಿನ ಮಗನಭೈಸೇರುವ ಮೊದಲೇ ಮಾಯವಾಗುತ್ತವೆಯೆಂಬ ಗುಟ್ಟು ಅವರಿಗೆ ಹೇಗೆ ಗೊತ್ತಾದೀತು? ಮೊದಲೇ ಹಡಲು, ರಾತ್ರಿ ಹಡ್ಡಿನ ವಿಚಾರವನ್ನೇ ಯೋಚಿಸಿ ತಲೆ ಕೆಡಿಸಿಕೊಳ್ಳುವ ಇವರಿಗೆ ಅಲ್ಲಿಯ ಸಾವಿರ ಸಂಕಷ್ಟಗಳ ಗೋಳೂ ಕೇಳಿ ಇನ್ನೂ ಕಂಗಾಲಾಗಬಾರದೆಂದು ತಾನೇ ಮುಂಜಾಗ್ರತೆ ವಹಿಸುತ್ತಿದ್ದೇನೆ.

ಮದುವೆಯಾಗಿ ಎರಡು ವರ್ಷಗಳಾದರೂ ಒಂದು ಜತೆ ಚಿನ್ನದ ಬಳೆ ಮಾಡಿಸಲಿಕ್ಕೆ ಇವರಿಂದಾಗಲಿಲ್ಲ. ಕಳೆದ ವರ್ಷ ಒಂದೆಳೆಯ ಚೈನು ಮಾಡಿಸಬೇಕಾದರೆ ಚೊಚ್ಚಲ ಬಸುರಿ ಕಣ್ಣೀಗರೆದು ಹಟ ಹಿಡಿದು ಮತ ಬಿಟ್ಟು ಏನೆಲ್ಲ ಮಾಡಬೇಕಾಯ್ತು! ಇಲ್ಲವಾದರೆ ಅದೂ ಬರುತ್ತಿರಲಿಲ್ಲ. ಏನಾದರೂ ಕೇಳಿದ ಕೂಡಲೇ ಹಣದ ಲೆಕ್ಕಾಚಾರದ ಪಟ್ಟಿಯನ್ನೇ ಮುಂದಿಟ್ಟು ಬಳೆಗೆ ಕೈಕೊಟ್ಟು ಕುಳಿತು ಬಿಡ್ತಾರೆ. ನಾನೇನು ಮಾಡಲಿ? ಹೆಣ್ಣಾದ ಮೇಲೆ ಒಳ್ಳೆಯ ಸೀರೆ, ಒಡವೆಗಳ ಆಸೆ ಇಲ್ಲದಿರುತ್ತದೆಯೆ.? ಬಾಯಿಯಲ್ಲಿ ಮಾತ್ರ ಪ್ರೀತಿ, ಪ್ರೇಮ, ಅಂತ ಬಡಕೊಂಡರೆ ಸಾಕೇ? ಬೇಡ. ಮನುವಿಗೆ ಆರು ತಿಂಗಳಾಯ್ತು. ಮುದ್ದಿನ ಮೊದಲ ಮಗು. ಅವನನ್ನು ನೋಡಿದರೆ ನೋಡಿದವರು ಮತ್ಸರ ಪಡುವಂತಹ ಮುದ್ದಾದ ಮೋಹಕ ರೂಪ. ಚಿನ್ನದ ಗೊಂಬೆಯಂತಿದ್ದಾನೆ. ಅವನ ಕೊರಳಿಗೆ ಒಂದಳೆಯ ಹವಳದ ಸರ ಮಾಡಿಸಿ ಅಂತ ಎಷ್ಟು ದಿನಗಳಿಂದ ಹೇಳುತ್ತಿದ್ದೇನೆ! ನಿನ್ನೆ ರಾತ್ರಿ ಅದಕ್ಕಾಗಿಯೇ ಜಗಳವಾಡಿ ಕಣ್ಣೀಗರೆದು ಇನ್ನು ಮುಂದೆ ತವರಿನಲ್ಲೇ ಇದ್ದು ಬಿಡ್ತೇನೆ ಎಂದು ಹೆದರಿಸಿದ ಮೇಲೆ ಒಪ್ಪಿಗೆಯನ್ನೇನೋ ಕೊಟ್ಟಿದ್ದಾರೆ. ಇನ್ನು ತರುವುದು ಯಾವಾಗಲೋ ಮುಖ್ಯ ನನ್ನ ಅದೃಷ್ಟ. ಇಲ್ಲವಾದರೆ ನನ್ನ ಅಕ್ಕ ಅವಳ ಮಕ್ಕಳು ಬೇಕಾದಷ್ಟು ಚಿನ್ನಾಭರಣ ಹಾಕಿಕೊಂಡು ಎಷ್ಟೊಂದು ಸುಖವಾಗಿದ್ದಾರೆ!

ಈ ಎಲ್ಲ ಯೋಚನೆಗಳಿಂದ ರೂಪಾಳ ಮನಸ್ಸು ವ್ಯಥೆಯ ಭಾರದಿಂದ ಬಾಡಿತು.

ಮಾಧವ ಚಿಕ್ಕಂದಿನಿಂದಲೂ ಬಡತನದ ಬವಣೆಯಲ್ಲೇ ಬೆಳೆದವ. ತಂದೆ ತಾಯಂದಿರ ಅಪಾರ ತ್ಯಾಗ, ದುಡಿಮೆ ಶ್ರಮಗಳ ಫಲವಾಗಿ ಎಸ್. ಎಸ್. ಎಲ್. ಸಿ. ವರೆಗೆ ವಿದ್ಯಾಭ್ಯಾಸ ಮುಗಿಸಿ, ಉದ್ಯೋಗಕ್ಕಾಗಿ ಪಟ್ಟಣ ಸೇರಿದ. ಪಟ್ಟಣ ಸೇರಿದ ಮೇಲೆ ಕೈಯಲ್ಲಿ ಸಂಬಳ ಸಿಡಲಾರಂಭಿಸಿದಾಗ ಅಲ್ಲಿಯ ವಾತಾವರಣಕ್ಕೆ ತಕ್ಕಂತೆ ಶೆಸ್ಟಾಗಿ ಉಡುಪು ಧರಿಸಿ ತಿರುಗಾಡಲಾರಂಭಿಸಿದ. ಆಗಲೇ ರೂಪಾಳ ತಂದೆ ಮಗಳಿಗಾಗಿ ವರಾನ್ವೇಷಣೆಯಲ್ಲಿ ತೊಡಗಿದಾಗ ಮಾಧವನನ್ನು ಕಂಡು ಮದುವೆಯ ಮಾತೆತ್ತಿದರು. ಆವರೆಗೆ ಮದುವೆಯ ಯೋಚನೆಯನ್ನೇ ಮಾಡಿರದಿದ್ದ ಮಾಧವ ರೂಪಾಳನ್ನು ಕಂಡಾಗ ಇಂಥ ಹೆಣ್ಣನ್ನು ಕೈ ಹಿಡಿಯುವ ಭಾಗ್ಯವನ್ನು ಭಡವಂತನೇ ಒದಗಿಸಿಕೊಟ್ಟಾಗ ಕಳೆದುಕೊಳ್ಳುವುದುಂಟೇ ಎಂದು ಸಂತೋಷದಿಂದಲೇ ಸಮ್ಮತಿಯಿತ್ತ.

ಮದುವೆ ಮುಗಿಯಿತು. ರೂಪಾ ಹೆಸರಿಗೆ ತಕ್ಕಂತೆ ಆಕರ್ಷಕ ಹೆಣ್ಣು. ಸುಂದರಿಯೂ ಯುವತಿ. ಮಡದಿಯ ಸಾವಿನ ಸ್ಥಿತಿಯಲ್ಲಿ ಮಾಧವ ತನ್ನನ್ನು ತಾನೇ ಮರೆತ. ಅತನಿಗೆ ಸ್ವರ್ಗವೇ ಇಳಿಗೆ ಇಳಿದು ಬಂದಂತೆ ಭಾಸ ರೂಪಾ ದೇವಲೋಕದ 'ಅಪ್ಸರೆ'ಯಂತೆ ಕಂಡು ಬಂದಳು. ಆತ ರೂಪಾಳ ಸಂತೋಷಕ್ಕಾಗಿ ಅವಳನ್ನು ಸುಖವಾಗಿರಿಸಲಿಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧನಿದ್ದ. ರೂಪಾಳಿಗೆ ದೊಡ್ಡಲಿಂದಲೂ ಶೃಂಗಾರದ ಹುಚ್ಚು ಸ್ವಲ್ಪ ಹೆಚ್ಚೇ. ಎಳು ಹೆಣ್ಣು ಮಕ್ಕಳ ನಡುವೆ ಬೆಳೆದ ರೂಪಾಳ ತಂದೆಯೂ ಹೆಚ್ಚೇನೂ ಅನುಕೂಲವಂತರಲ್ಲದ್ದರಿಂದ ಅವಳ ಅಭರಣದ ಆಸೆ ತವರು ಮನೆಯಲ್ಲೂ ಪೂರ್ಣವಾಗದೇ ಇದ್ದುದು ಈಗ ಪ್ರಕಟವಾಗಿ ಮಾಧವನಿಗೆ ಹಿಂಸೆಯನ್ನುಂಟೊಡ್ಡಿತು. ಮದುವೆಯಾಗುವ ಮೊದಲು ರೂಪಾ ಕಂಡ ಸುಂದರ ಕನಸೆಂದರೆ ತನ್ನ ಸೌಂದರ್ಯಕ್ಕೆ ತಕ್ಕ ಅಲಂಕಾರದ ಒಡವೆಗಳನ್ನಿಟ್ಟುಕೊಂಡು ರಾಣಿಯಂತೆ ಮೆರೆಯುತ್ತಾ ಸುಖವಾಗಿ ಬದುಕಬೇಕೆಂದು. ಆದರೆ ಮಾಧವನ ಬಡತನ ಅವಳ ಆಶೋಗೆಯರವು ಕುಸಿಯುವಂತೆ ಮಾಡಿದುದಲ್ಲದೆ ಅತ್ತೆ ಮಾವಯ ತಾಪತ್ರಯಗಳೂ ಬೆನ್ನು ಹತ್ತುವುವೆಂದು ತಿಳಿದಾಗ ಅವಳ ಮನಸ್ಸು ಅಲ್ಲಿ ನಂತಾಯಿತು.

ಕನ್ಯೆಯನ್ನು ನೋಡಲು ಬಂದ ಅಡಂಬರದ ಉಡುಗೆಯ ಮಾಧವನ ಉಡುಪಿನ ಹಿಂದೆ ಹರಕು ಉಡುಗೆಯ ದೊಡ್ಡ ಕುಟುಂಬವೇ ಗೋಳಿಡುತ್ತಿದೆ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಗಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

Phone— 5711, 5712, 5713 } 3 Lines.

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

S. C. No. 256/1967

ಟಿ. ಗೋಪಾಲಕೃಷ್ಣ ಪೈ— ವಾದಿ

ಮತ್ತು

ನಂದಕ್ಕ ಪೆಟ್ಟಿ ಕೂಡಾ—ಪ್ರತಿವಾದಿರು.

ತಿನೇ ಪ್ರತಿವಾದಿ ಮಟ್ಟುಡಿ ಬಡಿಯಪೆಟ್ಟು ಮಟ್ಟುಡಿ ರಿಪಪೆಟ್ಟು ಅಳಿಯ, ಉಡುಪಿ ತಾಲೂಕು, ಹಿರಿಯಡಕ ಗ್ರಾಮದಲ್ಲಿರುವವರು ಎಂದಿಗೆ—

ವಾದಿಯ ಅಂಗಡಿಯಲ್ಲಿ ಪ್ರತಿವಾದಿಯ ನಡ್ಡಿದ ಲೇವಾದೇವಿ ಬಾಬ್ತು ಪ್ರತಿವಾದಿರಿಂದ ವಾದಿಗೆ ಬರಬೇಕು ಅಸಲು ಬಡ್ಡಿ ರೂಪಾಯಿ 126.76ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸಿದ್ಧಿವ್ಯಾಜ್ಯವು ತಾ. 31-5-1968 ಕ್ಕೆ ಯಿಡೋಣಾಗಿಯಿದೆ. ಆ ದಿನ್ನ 3 ನೇ ಪ್ರತಿವಾದಿಯು ಸ್ವತಃ ಯಾ ವಕೀಲರುಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಾಹರಿಸದೇ ಇದ್ದರೆ ಅಕನ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದ್ರಿ 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯಿದೆ.

H. Ramanath Pai
Advocate for Plaintiff
Udipi, Dated 4-5-1968

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೩೭
No. 37

ನವಯುಗ

ಸ್ಥಾಪಕರು:
ದಿ/ ಎ. ಬಿ. ಶೆಟ್ಟಿರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೧೩—೫ - ೧೯೬೮

ಗ್ರಹಚಾರ ಹಿಡಿದವರು

ಭಾರತೀಯ ರೇಲ್ವೆಗಳಿಗೆ ಇತ್ತೀಚಿಗಿನ ವರ್ಷಗಳಲ್ಲಿ ಭಾರೀ ಗ್ರಹಚಾರ ಹಿಡಿದಂತಿದೆ. ಹಿಂದೆ ಬಹಳಷ್ಟು ಅಪರೂಪಕ್ಕೆ ರೇಲ್ವೆ ದುರ್ಘಟನೆಗಳು ನಡೆಯುತಿದ್ದರೆ, ಇಂದದು ಮನೆಮೂತಾಗಿದೆ. ಅಪಘಾತ ನಡೆಯುವುದು; ಅದರ ವಿಚಾರಣೆಗೆ ಸಮಿತಿಯೊಂದನ್ನು ನೇಮಿಸುವುದ; ಅಪಘಾತಕ್ಕೆ ಗುರಿಯಾದವರಿಗೆ, ಅವರ ಕುಟುಂಬಕ್ಕೆ ಒಂದಷ್ಟು ಪರಿಹಾರ ಒದಗಿಸುವುದು; ಕೊನೆಯಲ್ಲಿ ಯಾರಯಾರದೋ ತಲೆಗೆ ಅಪಘಾತದ ಆರೋಪವನ್ನು ಹೊರಿಸುವುದ.—ಅಥವಾ ಬಿಟ್ಟುಬಿಡುವುದು, ರೇಲ್ವೆ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಅರ್ಭಟಿಸುವುದು— ಇವೆಲ್ಲ ದಿನಂಪ್ರತಿಯೆಂಬಂತೆ ನಡೆಯುವ ಘಟನೆಗಳು. ಎರೆಲ್ಲವುಗಳು ಹಿಂದೆಯೂ ನಡೆದಿವೆ; ಇಂದೂ ನಡೆಯುತ್ತಿವೆ; ಮುಂದೆಯೂ ನಡೆಯಬಹುದು. ಆದರೆ, ಅಪಘಾತಗಳು ಘಡೆಯುವುದಕ್ಕೆ ಚ್ಯುತಿ ಬಂದಿಲ್ಲ. ರೇಲ್ವೆ ಮಂತ್ರಿಯೊಬ್ಬ ರಾಜೀನಾಮೆ ಕೊಟ್ಟ ಮಾತ್ರಕ್ಕೆ ಅಪಘಾತಗಳು ನಿಂತಿಲ್ಲ. ರೇಲ್ವೆ ಮಂತ್ರಿ ಪ್ರತ್ಯಕ್ಷವಾಗಿ ಹಳಿಗಾಡಿಗಳನ್ನು ಘಡೆಸುವುದಿಲ್ಲ; ಮಾರ್ಗ ರಚಿಸುವುದಿಲ್ಲ. ಮಂತ್ರಿಯಾದವನು ಭೀತಿ ರೂಪಿಸುವಲ್ಲಿ ಘಿರತನಾಗುತ್ತಾನೆಯೇ ಹೊರತು ಅತನು ಅಪಘಾತಗಳಿಗೆ ನೇರವಾಗಿ ಕಾರಣವಾಗುವುದಿಲ್ಲ. ಈ ಅಪಘಾತಗಳಿಗೆ ರೇಲ್ವೆ ವಿಭಾಗದ ನೌಕರವರ್ಗವೇ ಹೊಣೆಯೆಂದು ಘೋಷಿಸಬೇಕಾಗುತ್ತದೆ.

ಅಪಘಾತಗಳು ಇಚ್ಚಗೆಯಲ್ಲಿ ಸಂಭವಿಸಬಹುದ; ಒಂದು ಪ್ರಕೃತ್ಯಾಯತ್ತ ಮತ್ತೊಂದು ಮಾನವಾಯತ್ತ. ಪ್ರಾಕೃತಿಕ ಅಪಘಾತಗಳನ್ನು ಮಾನವನು ತಡೆಯುವ ಪ್ರಯತ್ನಿಸಬಹುದು; ಆದರೆ, ಅದರ ಫಲಸಾಗುತ್ತಾನೆಂಬ ವಿಶ್ವಾಸವಿಲ್ಲ. ಆದರೆ, ಭಾರತದಲ್ಲಿ ಘಡೆಯುತ್ತಿರುವ ಅಪಘಾತಮಾಲೆ ಸಾಮಾನ್ಯವಾಗಿ ಎರಡನೆ ಬಗೆಯವೆಂದು ಖೇದದಿಂದಲೇ ಹೇಳಬೇಕಾಗುತ್ತದೆ. ಇತ್ತೀಚೆಗೆ ರಾಜ್ಯಸಭೇಂದ್ರಿ ಬಳಿಯ ಅನಸರ್ತಯ ದುರಂತವನ್ನೇ ಎತ್ತಿಕೊಂಡರೆ, ಒಂದೇ ಜೋಡಿ ಕಂಬಿಯದ್ದಾಗ, ಅದರಲ್ಲಿ ಗೂಡ್ಸ್ ಬಂಡಿ ನಿಂತಿರುವಾಗ, ಜನತಾ ಎಕ್ಸ್‌ಪ್ರೆಸ್ ಬಂಡಿಗೆ ನಿಲ್ದಾಣವನ್ನು ಪ್ರವೇಶಿಸಲು ಬಿಟ್ಟವರು ಯಾರು? ಪ್ರಕೃತಿಯಂತೂ ಅಲ್ಲವೇ ಅಲ್ಲ. ಸ್ಟೇಶನ್ ಮಾಸ್ಟರ್ ಅಧಿಕಾರಿಗಳದೇ ಇಲ್ಲಿ ತಪ್ಪು ಎಂಬುದನ್ನು ಯಾವ ಹೆಡ್ಡನೂ ತಿಳಿಯಬಹುದು. ಹೀಗೆಯೇ ಯಂತ್ರದೋಷ, ಹಳಿದೋಷ, ಮೊದಲಾದುವುಗಳ ಭಾರವೂ ಮಾನವನ ಮೇಲೆಯೇ ಬೀಳುವುದು. ರೈಲ್ವೇ ಮಂತ್ರಿಯಾಗಲೀ, ಪ್ರಕೃತಿಯಾಗಲೀ ಈ ದೋಷವನ್ನು ಸರಿಪಡಿಸುವುದಿಲ್ಲ; ದೂರವಾಗುವುದಿಲ್ಲ. ಅದು ಅದಕ್ಕೆ ಸಂಬಂಧಿಸಿದ ನೌಕರವರ್ಗವಿದೆ—ಇದು ಅವರವರ ಹೊಣೆಗಾರಿಕೆ. ರೈಲ್ವೆಗಳಲ್ಲಿ ಸಾವಿರಾರು ಯಾತ್ರಿಕರು ಸಂಚಾರ ಮಾಡುತ್ತಾರೆ, ಒಬ್ಬ ನೌಕರನ ಸಾವಿನೆಯಷ್ಟ ಅಜಾಗರೂಕತೆಯಿಂದ ಪರ್ವತದಂತಹ ಅಪಾಹುತಗಳು ಸಂಭವಿಸುವ ಸಾಧ್ಯತೆಯಿದೆ. ಇದನ್ನು ರೈಲ್ವೇನೌಕರವರ್ಗವೂ ತಿಳಿಯದಿಲ್ಲ. ಹಾಗಿರುವಾಗ ನೌಕರವರ್ಗವು ಜನತೆಯ ಪ್ರಾಣದೊಡನೆ ಚದುರಂಗವಾಡುವ ಅದಕ್ಷತೆ, ಅಜಾಗರೂಕತೆಗಳಿಗೆ ಅವಕಾಶ ನಾಡಿಕೊಡುವುದೆಂದರೆ ಅದು ರಾಷ್ಟ್ರಾಪರಾಧವೆಂದು ಹೇಳದೆ ಗತ್ಯಂತರವಿಲ್ಲ.

ಒಂದು ಮನೆಯ ಕಾರುಬಾರು ಸುಸೂತ್ರವಾಗಿ ಘಡೆಯಬೇಕಾದರೆ, ಯಜಮಾನನೊಬ್ಬನು ಮಾತ್ರ ಮೇಧಾವಿ ಇದ್ದರೆ ಸಾಲದು. ಮನೆಯ ಸರ್ವರೂ ಏಕಮನದಿಂದ ತಂತಮ್ಮ ಹೊಣೆಗಾರಿಕೆಯನ್ನು ಅರಿತು, ಮನೆಯ ಸುಸೂತ್ರತೆಗೆ ಶಕ್ತಿಮೀರಿ ದುಡಿಯಬೇಕು. ಇದು ರೈಲ್ವೆಯಂತಹ ಬೃಹತ್ ಸಾರಿಗೆ ವ್ಯವಸ್ಥೆಗೆ ಬಹಳ ಹತ್ತಿರ ಅನ್ವಯವಾಗುತ್ತದೆ. ಒಂದು ನಟ್ ಸಡಿಲಾದರೂ ಯಂತ್ರವು ಕೆಟ್ಟುಹೋಗುವ ಸಂಭವವಿದೆ. ಅಪಘಾತಕ್ಕೆ ಇದೂ ಕಾರಣಗಬಹುದು. ದಕ್ಷ ಪ್ರಾಮಾಣಿಕ, ರಾಷ್ಟ್ರಪ್ರೇಮಿ ಸೇವೆಯನ್ನು ನೌಕರರಿಂದ ಸರಕಾರ ನಿರೀಕ್ಷಿಸುತ್ತದೆ. ಆದರೆ, ನೌಕರರಿಗೆ ತೆಗೆದುಕೊಳ್ಳುವಾಗ ಈ ಗುಣಗಳಿಗೆ ಬೆಲೆ ಕಡಿಮೆಯಾಗುವುದೂ ಇದೆ. ನೌಕರರಿಗೆ ಸೇರಿದ ಮೇಲೆ ನೌಕರರ ಮನೋವೃತ್ತಿಯೇ ಬದಲಾಗುತ್ತಿದೆ. ರಾಷ್ಟ್ರನಿಷ್ಠೆ ಮಾಯವಾಗಿ ವ್ಯಕ್ತಿನಿಷ್ಠೆ ಅವರಲ್ಲಿ ಮನೆ ಮಾಡುತ್ತಿದೆ. ತಮ್ಮ ಉದ್ಯೋಗದ ಹೊಣೆಗಾರಿಕೆ ಮರೆತು ಹೋಗಿ, ಅರೆ ಮನಸ್ಸಿದಂದ, ಅದಕ್ಷತೆಯಿಂದ, ಬೇಜವಾಬ್ದಾರಿಯಿಂದ ಏನೋ ಒಂದಾಗರ ಕೆಲಸಮಾಗುವಂತಿದೆ. ಅನಸರ್ತಯ ದುರ್ಘಟನೆ ಇದಕ್ಕೊಂದು ಪ್ರಬಲ ಉದಾಹರಣೆ. ಇದಕ್ಕಾಗಿ ಅಪಘಾತವನ್ನು ತಡೆಯಲು ರೇಲ್ವೆ ವಿಭಾಗವು ತುಂಬ ಕಾಳಜಿ ವಹಿಸಬೇಕಾಗುತ್ತದೆ. ರೇಲ್ವೇ ವ್ಯವಸ್ಥೆಯೇ ಕೆಟ್ಟು ಹೋಗಿದೆ. ಅದುದರಿಂದಲೇ ಅಪಘಾತಗಳು ಸಂಭವಿಸುತ್ತಿವೆ ಎಂದು ಕೆಲವರ ಅಂಬೋಣ. ಇದನ್ನು ಸಂಪೂರ್ಣ ಅಲ್ಲಗಳೆಯಲಾಗುವುದಿಲ್ಲ. ವ್ಯವಸ್ಥೆಯನ್ನು ಸುಧಾರಿಸಿ ಸ್ಥಗೊಳಿಸುವತ್ರ ಸರಕಾರದ ಲಕ್ಷ್ಯ ಹರಿಯಬೇಕು; ಆದರೆ, ಅದರ ಜೊತೆಗೆ ರೇಲ್ವೆ ವಿಭಾಗದ ನೌಕರ ವರ್ಗವೂ ತಮ್ಮ ಕರ್ತವ್ಯವನ್ನು ಮಾಡಗುತ್ತು, ಅದನ್ನು ಶಕ್ತಿ—ಬುದ್ಧಿ ಸರ್ವಸ್ವವನ್ನು ಕೇಂದ್ರೀಕರಿಸಿ ನಿರ್ವಹಿಸಿ ಬೇರಂಬುದನ್ನೂ ಮರೆಯಲಾಗುವುದಿಲ್ಲ. ಮೊದಲನೆಯದು ದೀರ್ಘಕಾಲಿಕ ಯೋಜನೆಯಾದರೆ, ಎರಡನೆಯದು ಅಲ್ಪಾವಧಿಯ ತೀವ್ರತರವಾದ ಯೋಜನೆಯೆಂಬುದನ್ನು ನೆನಪಿಡಬೇಕು.

ಪೇಶಾವಂದ ಪೇಚು

ಪಾಕಿಸ್ತಾನದ ಪೇಶಾವರದ ಸಮೀಪದಲ್ಲಿರುವ ಅಮೆರಿಕನ್ ಎಲೆಕ್ಟ್ರಾನಿಕ್ಸ್ ನೆಲೆಯ ಬಗ್ಗೆ ಲೋಕಸಭೆಯಲ್ಲಿ ತುಂಬ ಚರ್ಚೆ ನಡೆಯಿತು. ಈ ನೆಲೆಯನ್ನು ವಿಸರ್ಜಿಸುವಂತೆ ಅಮೆರಿಕೆಯನ್ನು ಒತ್ತಾಯಿಸಬೇಕೆಂದು ಹಲವು ಸದಸ್ಯರು ಬಯಸಿದರು. ಈ ನೆಲೆಯು ಸೂಕ್ಷ್ಮಾತಿಸೂಕ್ಷ್ಮ ಉಪಕರಣಗಳಿಂದ ಕೂಡಿದ್ದು ಭಾರತವು ಇತರ ರಾಷ್ಟ್ರಗಳಿಗೆ ನೀಡುವ ಸಂದೇಶಗಳನ್ನು ತಡೆದು ಕೇಳುವ ಸಾಧ್ಯತೆಯಿದೆ. ಹಾಗಾಗಿ ಭಾರತಕ್ಕೆ ಈ ನೆಲೆಯಿಂದ ಗಂಡಾಂತರವಿದೆ. ಇದನ್ನು ಭಾರತಕ್ಕೆ ವಿರುದ್ಧವಾಗಿಯೂ ಬಳಸುವ ಸಾಧ್ಯತೆಇದೆ —ಇದು ಪಮ್ಮ ಕಳವಳ. ಅಮೆರಿಕೆಯ ರಾಯಭಾರಿ ಚೆಸ್ಟರ್ ಬೌಲ್ಸ್‌ರು ಬಹಿರಂಗವಾಗಿ ಘೋಷಿಸಿದ್ದಾರೆ—"ಭಾರತದ ವಿರುದ್ಧ ಇದರ ಬಳಕೆಯಾಗುವುದಿಲ್ಲ." ಅಮೆರಿಕೆಯು ಪಾಕಿಸ್ತಾನಕ್ಕೆ ನೀಡಿದ ಶಸ್ತ್ರಾಸ್ತ್ರಗಳನ್ನು ಭಾರತದ ವಿರುದ್ಧವಾಗಿ ಬಳಸಲಾಗುವುದಿಲ್ಲವೆಂಬ ಆಶ್ವಾಸನ ಐಸನ್ ಹಾವರರ ಕಾಲದಿಂದಲೂ ನೀಡಲಾಗಿತ್ತು. ಆದರೆ ಆಶ್ವಾಸನೆಯು ವಿಫಲವಾದುದನ್ನು ನಾವು ಕಂಡಿದ್ದೇವೆ. ಹಾಗಿರುವಾಗ ಪೇಶಾವರ ನೆಲೆಯೂ ದುರುಪಯೋಗವಾಗದೆಂದೇನು ವಿಶ್ವಾಸ? ಇದಕ್ಕೆರುವಂತೆ ಒಂದೇ ಒಂದು ಆಧಾರವೆಂದರೆ, ಪೇಶಾವರ ನೆಲೆಯು ಪಾಕಿಸ್ತಾನದ ಅಧಿಕಾರ ವ್ಯಾಪ್ತಿದೆ ಹೊರಗಾದುದು—ಅಲ್ಲಿ ಘಡೆಯುವುದು ಅಯೂಬರ ಕಾರುಭಾರಲ್ಲ, ಸದ್ಯಕ್ಕೆ ಜಾನ್ಸನ್ನರ ಆಜ್ಞೆ. ಆದರೆ, ಪಾಕಿಸ್ತಾನದ ಪ್ರಜಾಂಬಕ ರಾಷ್ಟ್ರಗಳಲ್ಲಿ ಒಂದಾದ ಅಮೆರಿಕೆಯು ಭಾರತವನ್ನು ದ್ವೇಷಿಸುವುದಿಲ್ಲವಾದರೂ ಪ್ರೀತಿಸುವುದೂ ಅಸ್ವಾಭಾವಿಕ. ಹಾಗಾಗಿ ಪೇಶಾವರ ಪೇಚಿಗೆ ಸಿಕ್ಕಿಕೊಂಡಂತೆ ಪೂರ್ಣ ನಂಬಿಕೆ ಸಾಲದು. ಅದೇಕಿದ್ದರೂ ಈವು ಒತ್ತಾಯಿಸಿದ ಮಾತ್ರಕ್ಕೆ ಅಮೆರಿಕೆಯವರು ಒಡುತ್ತಾರೆಯೆ? ಪ್ರಮುಖ ಕಾಲಬದ್ಧವನ್ನು ಭದ್ರಗೊಳಿಸುವುದೇ ನಮಗೆ ಶಾರಕ ಮಾರ್ಗ.

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ
ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು
ಸರ್ವ ವಿಧದಿಂದಲೂ ರೈತನ ಭಾಗ್ಯವಿಧಿಯಾಗಿವೆ
ದೇಶವಿಖ್ಯಾತವಾದ
ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು
ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಮೈಸೂರು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—
ವಿಕ್ಟರ್ ಟ್ರೇಡಿಂಗ್ ಕೊರ್ಪೊರೇಶನ್
ಫಳನೀರ್, ಮಂಗಳೂರು - 1
ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ
ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಜೀವವಿಮಾ ವ್ಯವಹಾರ ಸ್ಪರ್ಧೆಯ ಫಲಿತಾಂಶ

ಸಿಮ್ಲಾ—ದಿನಾಂಕ ೩೦ ಮತ್ತು ೩೧.೧೦.೧೯೬೮ ರಂದು ಜರುಗಿದ ಜೀವವಿಮಾ ವ್ಯವಹಾರದ ಪನ್ನೆಂಡನೇ ವಾರ್ಷಿಕ ನೆನಪಿನ ಸ್ಪರ್ಧೆಯ ಫಲಿತಾಂಶ ಇದೀಗ ಪ್ರಕಟಗೊಂಡಿದ್ದು ನಮ್ಮ ಉತ್ತರ ವಿಭಾಗದ ೧೭ ಶಾಖೆಗಳಿಗೂ ಸಿಮ್ಲಾದ ವಿಭಾಗದಾದ ಶ್ರೀ ಬ್ರಿಜ್ ಆರ್. ಭಾಗ್ಯರವರು ಹೆಚ್ಚಿನ ಪ್ರಾಂಶ ಪಡೆದುದರಿಂದ ಹಾಗೂ ಹೆಚ್ಚಿನ ಮೊತ್ತದ ವಿಮಾ ಮಾಡಿಸುವುದರಲ್ಲಿ ಸ್ಪರ್ಧೆಯ ಬಹುಮಾನ ದೊರಕಿಸಲು ಸಾಧ್ಯರಾಗಿದ್ದು ಅಭಿನಂದನೀಯ. ಶ್ರೀ ಭಾಗ್ಯರವರು ಈ ಅವಧಿಯಲ್ಲಿ ೧೦ ಪಾಲಿಸಿಗಳಿಗೆ ೭ ಲಕ್ಷದ ೨೦ ಸಾವಿರದ ಮೊತ್ತದ ವ್ಯವಹಾರ ಮಾಡಿದ್ದುದಾಗಿ ಎರಡೂ ಪ್ರಕಟ ಬಹುಮಾನ ಗಿಟ್ಟಿಸಲು ಅರ್ಹರಾಗಿದ್ದಾರೆ. ಅಲ್ಲದೆ ಇವರು ಈಗ ೩.೪ ವರ್ಷಗಳಿಂದಲೂ ವಿಮಾ ಕಾರ್ಯಕ್ಷೇತ್ರದ ಎಲ್ಲಾ ಸ್ಪರ್ಧೆಗಳಲ್ಲೂ ಬಹುಮಾನವೇ ಯಶಸ್ವಿಯಾಗಿದ್ದಾರೆ.

ಮದ್ರಾಸು ಗವರ್ನ್‌ಮೆಂಟ್ ಸ್ಕೂಲ್ ಆಫ್ ಇಂಡಿಯನ್ ಮೆಡಿಸಿನ್ ಇಗರ ಪ್ರಿನ್ಸಿಪಾಲರಾಗಿ ಉತ್ತಮ ಸೇವೆ ಸಲ್ಲಿಸಿದ್ದ

ವೈದ್ಯರತ್ನ ಕೇಪ್ಟನ್
ಜಿ. ಶ್ರೀನಿವಾಸ ಮೂರ್ತಿ

('ಮನೆಮದ್ದು'ಎಂಬ ಗೃಹವೈದ್ಯ ಪುಸ್ತಕಕ್ಕೆ ಮುನ್ನುಡಿ ಬರೆದು ಗ್ರಂಥಕರ್ತರಾದ ವಿ. ಆರ್. ಕೋಡಿಯಲ್ಲರನ್ನು ಹರಸಿದವರು.)

ಗೇಹ ರಾಜ್ಯದಲ್ಲಿ

ಗೆದ್ದದ್ದು ಯಾರ ಓಟಿನಿಂದ?

"ಕೇಳಿದ್ದೇನೆ?"

"ಏನನ್ನ?"

"ಹೇಳು ಕೇಳೋಣ...."

"ಹೇಳೋದೇನು ಬಂತು? ಕೇಳಿದವ್ರು ಹೇಳೋದನ್ನ ಬಿಟ್ಟಿಟ್ಟು...."

"ಅಲ್ವೆ, ಒಂದು ಪ್ರಶ್ನೆ..."

"ಕ್ಷಾಂ...."

"ತಾಯಿದೆ ಯೂರ ಮೇಲೆ ಪ್ರೀತಿ?"

"ಮಗಳ ಮೇಲೆ ."

"ಮಗಳಿಲ್ಲನ್ನು... ಆಗ?"

"ಆಗ? ಮಾಸ್ತಾರ ಮೇಲೆ! ಉಳಿದಿರೋ ಮಗನ ಮೇಲೆ...."

"ಸರಿಯೇ, ಇಬ್ರು ಮಗಂದಿರಿದ್ದರೆ?"

"ಇದು ಒಳ್ಳೇ ಕಥೆಯಾಯ್ತಲ್ಲಾ!"

"ಇದ್ದಲ್ಲಿ ಕಥೆಯೇನು ಬಂತೆ?"

"ಅಲ್ರಿ, ಮೊದ್ಲು ಒಂದು ಪ್ರಶ್ನೆ. ಆ ಮೇಲೆ ಪ್ರಶ್ನಾ ತಂತಿ ಕಡೀಲೇ ಇಲ್ಲ...."

"ನೋಡು, ಒಂದು ಸಿಂಪಲ್ ಕೊಶ್ಚನ್. ಎಸೆಂಬ್ಲೀಲಿ ಮಾನ್ಯ ಸದಸ್ಯರು ಕೇಳೋ ಹಾಗೆ. ಮತ್ತೆ ಅದಕ್ಕೆ ಮಂತ್ರಿಗಳ ಉತ್ತರ ಹೊರಟಂತೆ ಉಪಪ್ರಶ್ನೆಗಳು..."

"ಅಲ್ರಿ, ಉಪಪ್ರಶ್ನೆಗಳಿಗೆಲ್ಲಾ ಮಂತ್ರಿಗಳು ಎಲ್ಲಿ ಉತ್ತರ ಕೊಡ್ತಾರೆ? ಒಂದೆರಡಕ್ಕೆ ಕೊಟ್ಟ ಶಾಸ್ತ್ರ ಮಾಡ್ತಾರೆ, ಮುಂದೆ ನೋಟೀಸ್ ಅಂತ ಒದರಾಡ್ತಾರೆ...."

"ಅಂದ್ರೆ, ನೀಕು ಮಂತ್ರಿಯಲ್ಲ ನಲ್ಲಾ?"

"ಅದೇ ಈಗ ಬಂದಿರೋ ತೊಂದ್ರೆ.."

"ಇರ್ಲಿ, ಈಗ ಪ್ಲೀಸ್, ಉತ್ರ...."

"ನೋಡಿ, ಒಂದು ಮಾತಿದೆ..."

"ಏನಂತೆ?"

'ಹಿರೇ ಮಗ ತಂದೆಗೆ, ಕಿರೇ ಮಡತಾಯಿಗೆ ಪ್ರಿಯಾಂತ...'

"ಮತ್ತೆ ನಡುವಿನವರು...."

'ಅವ್ರೆಲ್ಲಾ ಶುನಶ್ಶೇಪರು....'

'ಹಹ್ಹಾಂ...ಅದಕ್ಕೇ ಹೋಡು, ಮಿತ ಸಂತಾನ ಯೋಜನೆ ಜ್ಯಾರಿಗೆ ತಂದಿರೋದು'

'ಏನು?'

'ಎರಡು ಅಥವಾ ಮೂರೇ ಮಕ್ಕಳು ಸಾಕೂಂತ ಅಂದಿರೋದ ,ಎರಡಾದರೆ ಶುನಶ್ಶೇಪನ ಪ್ರಶ್ನೆಯೇ ಇಲ್ಲ ಮೂರಾದರೂ ಎಲ್ಲಾ ಗಂಡು ಆಗೋ (ಇಲ್ಲವೇ ಎಲ್ಲಾ ಹೆಣ್ಣಾಗೋ) ಸಂದರ್ಭ ಅಪರೂಕ್....'

"ಸಾಕು, ಬಿಡೀಂದ್ರೆ...."

"ಅಲ್ವೇ, ಫಿನ್ನ ಈ ಓಬೀರಾಯನ ಕಾಲದ ಮಾತು ಬರೇ ಥಿಯರಿ ಮಾತ್ರ. ಪ್ರಾಕ್ಟಿಕಲ್‌ವಲ್ಲಿ ಬೇರೆಯೇ..."

"ಏನಂತೆ ಅದು?"

"ನೋಡು, ಇದೊಂದು ಭಾರೀ ಕತೆ"

"ಇದೆಲ್ಲಿಯದು?"

"ವಿದೇಶದ್ದು ವಿಲಾಯತಿದ್ದೇನೂ ಅಲ್ಲ. ನಮ್ಮ ಭಾರತದ್ದು. ವಿಶುದ್ಧ ಶುನಶ್ಶೇಪ ದೇಶದ್ದು...."

"ಹ್ಹಾಂ..."

"ಅಸ್ಸಾಮ ರಾಜ್ಯದ ಕಾಮರೂಪ ಜಿಲ್ಲೆಯ ಉತ್ತರ ಭಾಗದ ಒಂದು ಹಳ್ಳಿ...."

"ಹ್ಹಾಂ... ತಿಳೀತು"

"ಅಲ್ಲಿ ಗ್ರಾಮ ಪಂಚಾಯಿತಿಗೆ ಚುನಾವಣೆ ನಡೆಯಿತು...."

"ಹ್ಹಾ....ಸರಿ..."

'ಒಂದೇ ಸ್ಥಾನಕ್ಕೆ ಅಣ್ಣ—ತಮ್ಮ ಇಬ್ಬರೂ ನಾಮಪತ್ರ ಸಲ್ಲಿಸಿದರು...."

"ಬೇರೆ ಬೇರೆ ಪಾರ್ಟಿ..."

'ಪಾರ್ಟಿಯೇನು ಬಂತೆ? ಬೇಪಾರ್ಟಿಯಾಗಿ—ಸ್ವತಂತ್ರರಾಗಿ'

'ಅಂದರೆ, ಸರ್ವತಂತ್ರ ಸ್ವತಂತ್ರರಾಗೀನ್ನಿ.'

'ಸ್ವತಂತ್ರ ಅಂದ್ರೆ ಸಾಲದೇನು?'

'ಹೇಗೆ ಸಾಲುತ್ತೆ? ಸ್ವತಂತ್ರ ಅಂದ್ರೆ ಒಂದು ಪಾರ್ಟಿಯೂ ಆಗುತ್ತೆ ನೋಡಿ..'

'ಹ್ಹಾ....ಅದೂಕರೀನ್ನು....ಮುಂದೆಯಂ ಕೇಳು.'

'ಸರಿ....'

'ಅಣ್ಣ—ತಮ್ಮ ಇಬ್ಬರೂ ಒಂದೇ ಸ್ಥಾನಕ್ಕೆ ಸ್ಪರ್ಧಿಸಿದರು...'

'ಸರಿ...ಖಾಸಾ ಅಣ್ಣ-ತಮ್ಮರೇನು?'

'ಹೌದು, ಹೌದು...'

'ಹಹ್ಹಾಂ...ಮುಂದೆ?'

"ಊರಿನ ಗಣ್ಯರು ಈ ಇಬ್ಬರಲ್ಲಿ ಯಾರಾದರೊಬ್ಬರು ನಾಮಪತ್ರ ಹಿಂದೆ ತೆಗೆದುಕೊಳ್ಳಬೇಕೆಂದರು...."

"ಓ, ಈ ಅಣ್ಣ-ತಮ್ಮಂದಿರಿಗೆ ಅಗುತ್ತಿರಲಿಲ್ಲವೆಂದು ತೋರುತ್ತದೆ...."

"ಮುಂದೆ ಕೇಳು..."

"ಏನಾಯಿತು...."

"ಅಣ್ಣನೂ ಒಲ್ಲ; ತಮ್ಮನೂ ಒಲ್ಲ ಅಂತಾಯಿತು..."

"ಸರಿ..."

"ಊರವರು ಒಂದಾದರು. ಚುನಾವಣೆಯನ್ನೇ ಬಹಿಷ್ಕರಿಸಿದರು...."

"ಅಂದ್ರೆ ಪ್ರಜಾಪ್ರಭುತ್ವ ತಮಗೆ ಕೊಡ್ಮಾಡಿದ ಅಮರಾಧಿಕಾರವನ್ನ ತ್ಯಜಿಸಿಬಿಟ್ಟರು. ಈ ಜನನೇ ಹೀಗೆ – ಪ್ರಜಾಪ್ರಭುತ್ವಕ್ಕೆ ಪೂರ್ತ ನಾಲಾಯಕ್ಕು....ಇರ್ಲಿ, ಮುಂದೇನಾಯ ತ?'

'ಹಳ್ಳಿಗರಲ್ಲಿ ಯಾರೂ ಮತಹಾಕಲಿಲ್ಲ'

'ಅಂದ್ರೆ ಅಲ್ಲಿ ಮತದಾನವೇ ನಡೀಲಿಲ್ಲ?'

'ನಡಿಯ ದುಂಟೆ' ನಡಿಯಿತೂನ್ನು.ಸ್ಪರ್ಧಾಳುಗಳಿಬ್ಬರೂ ಮತದಾನ ಮಾಡಿಕೊಂಡರು.'

'ಅಂದರೆ?'

'ಅವರು ತಮತಮಗೆ ಅಥವಾ ಒಬ್ಬರಿನ್ನೊಬ್ಬರಿಗೆ ಮತ ಹಾಕಿ ಕೊಂಡರು.'

'ಹ್ಹಾಂ...."

'ಮತ್ತವರ ತಾಯಿಯು ಮತ ಹಾಕಿದಳು...'

"ಯಾರಿಗೆ?'

"ಶ್ಯಾ.... ಹಾಗೆಲ್ಲ ಕೇಳಬಾರದು.... ಗುಪ್ತ ಮತದಾನ ನಡೆದದ್ದು ತಾನೆ? ಅ ಪರಾಧವಾದೀತು."

'ಹ್ಹಾಂ.... ಇರಲಿ, ಯಾರು ಗೆದ್ದರು?'

"ಅಣ್ಣ ಗೆದ್ದುಬಿಟ್ಟ...."

"ಅಂದ್ರೆ, ತಾಯಿ ಅಣ್ಣನಿಗೆ ಓಟು ಹಾಕಿದಂತಾಯ್ತು...."

"ಅದೇ ನಾನಂದದ್ದು. ತಾಯಿಗೆ ಕಿರೇ ಮಗನ ಮೇಲೆ ಮಮತೆ ಅಂತ ಅಂದೆಯಲ್ಲಾ, ಅದೆಲ್ಲಾ ಗತಕಾಲದ ಮಾತಾಯ್ತೂಂತ...."

'ಓ...ಹಾಗೆ...ಅದ್ರೆ ನೋಡಿ...."

"ಏನು?"

"ಆ ಮಾತು ಎಂದೂ ಸುಳ್ಳಲ್ಲ..."

"ಈಗ ಸುಳ್ಳಾಯ್ತಲ್ಲೆ?'

'ಇಲ್ಲ....'

'ಏನು ಇಲ್ಲ'

"ತಾಯಿ ಮತ ಹಾಕಿರೋದು ಹಿರೇ ಮಗನಿಗಲ್ಲ; ಕಿರೇ ಮಡತಾಗೆ...'

"ಅಲ್ವೆ, ಹಿರೇವನಿಗೆ ಎರಡು ಓಟು, ಕಿರೇವನಿಗೆ ಒಂದು ಓಟು ಬಿದ್ದದ್ದು, ಮತದಾನ ಮಾಡಿದವ್ರು ತಾಯಿ ಮತ್ತೆ ಬ್ಬರು ಗಂಡು ಮಕ್ಕಳು ಮಾತ್ರ...'

"ಅದೆಲ್ಲಾ ಗೊತ್ತು. ನೋಡಿ, ಗುಪ್ತ ಮತದಾನದಲ್ಲಿ ಕಾರು ಯಾರಿಗೆ ಮತ ಹಾಕಿದರು ಎಂದು ಹೇಗೆ ಗೊತ್ತಾಗುವುದೂಂತ."

"ಅದೇ ಅದ ಅಂದೆನಲ್ಲಾ...."

"ನೋಡಿ, ನನ್ನ ಲೆಕ್ಕ ಪ್ರಕಾರ ನಡೆದದ್ದು ಹೀಗೆ...."

"ಆಯಮ್ಮಾ, ಹೇಗೆ ನಿನ್ನ ಲೆಕ್ಕಾಚಾರ ತಾಸ ಕೇಳೋಣ...."

"ಕೇಳಿ, ಅಣ್ಣ ಕುಟುಂಬದಲ್ಲಿ ಹಿರಿಯ; ತನ್ನ ಮತವನ್ನು ತಪ್ಪಗೇನೇ ಹಾಕಿಕೊಂಡ...."

"ಹೊಂ....ಸರಿ..."

"ತಮ್ಮ ಮತಗಟ್ಟೆಗೆ ಬಂದ, ಹಳ್ಳಿಗರು ಯಾರೂ ಮತ ಹಾಕುವುದಿಲ್ಲ ಅಂತ ಖಾತ್ರಿಯಾಯ್ತು. ತಾಯಿಯು ಅಣ್ಣನ ಆಸೆಗೆಗೊಳಪಟ್ಟಿದ್ದರೂ ಕಿರಿಮಗನ ಮೇಲಿನ ಪ್ರೇಮವನ್ನು ಬಿಟ್ಟುಕೊಡದೆ ತಪ್ಪಗೇ ಮತ ಹಾಕ್ತಾಳೆ; ತಾನೂ ತಪ್ಪಗೆ

(ಅತ್ತಕಡೆ ಮುಖ ಹೊರಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

O. S. No. 63/1968

ಲಾರೆನ್ಸ್ ಡಾಲ್ಫೀದಿ— ವಾದಿ
ಮತ್ತು
ತುಂಗಮ್ಮ ಶೆಡ್ತಿ ಕೂಡಾ — ಪ್ರತಿವಾದಿರು ಇವರೊಳಗೆ

ಪ್ರತಿವಾದಿರು

4) ಭವಾನಿ ಶೆಡ್ತಿ— ತುಂಗಮ್ಮ ಶೆಡ್ತಿ ಮಗಳು, ಸ್ವತಹಾ ಮತ್ತು ತನ್ನ ಮೈನರ್ ಮಕ್ಕಳು 7ನೇ ಪ್ರತಿವಾದಿ ಶಂಕರಚಂದ್ರ, 8ನೇ ಸುಧಾಕರ,9ನೇ ಶಯಶೀಲ 10 ನೇ ಸುಗುಣ ಇವರ ಗಾರ್ಡಿಯಾನಳಾಗಿ ಸಹಾ. ಉಡ್ಪಿ ತಾಲ್ಲೂ ಕೀಳೂರು ಗ್ರಾಮ.

5)ಜಲಜಾಕ್ಷಿ ಶೆಡ್ತಿ—ತುಂಗಮ್ಮ ಶೆಡ್ತಿ ಮಗಳು 6)ಪ್ರಭಾಕರ ಶೆಟ್ಟಿ-ರುದ್ರಮ್ಮ ಶೆಡ್ತಿ ಮಗ—ಉಡ್ಪಿತಾಲ್ಲೂ ಹಾರಾಡಿ ಗ್ರಾಮ.

11) ರುದ್ರಮ್ಮ ಶೆಡ್ತಿ, ಸಂಕಯ್ಯ ಹೆಗ್ಡೆರ ಪತ್ನಿ, C/o Sankayya Hegde, Hotel Kalpana, New Bus Stand, Hubli City — ಇವರಿಗೆ ಈ ಮೂಲಕ ತಿಳಿಯಬಡಿಸುವುದೇನೆಂದ್ರೆ—

ವಾದಿಗೆ ತಾ. 5-3-1956ರಲ್ಲಿ ರೂಪಾಯಿ 1,600/-ಕ್ಕೆ ಬರೆಕೊಟ್ಟ ಈಡು ಪಸ್ತಾವೇಜನ ಅಸಲು, ಬಡ್ಡಿ ವಗೈರೆಗೆ ವಾದಿಯು ಪ್ರತಿವಾದಿರ ಮೇಲೆ ಮೇಲ್ಮಂಡ ದಾವೆ ದಾಖಲು ಮಾಡಿದ್ದು ಆ ಖುರಿತು ಪ್ರತಿವಾದಿರಿಗೇನಾದರೂ ಆಕ್ಷೇಪಣೆಯಿರುವ ಸಂಗ್ತಿಯ ಸ್ಲಿ ಅದನ್ನು ತಾ. 10-6-1968ಕ್ಕೆ ಹಾಜ್ರಾಗಿ ಜಾಬ್ತೀರು ಮಾಡಿಕೊಳ್ಳಲಿಕ್ಕೆ ತಪ್ಪದೆರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for Plaintiff

ಉಡುಪಿ, 6—5—1968

ನೀವೂ ತಿಳಿಯಿರಿ

ಪ್ರಾಚೀನ ಪ್ರಸಿದ್ಧ ಪ್ರೇಮಾಖ್ಯಾನಗಳು

ಬರೆದವರು: ಶ್ರೀ ಸ. ನಾರಾಯಣ.

ಪ್ರೇಮ ಕಥೆಗಳನ್ನು ಆಧಾರವನ್ನಾಗಿಟ್ಟುಕೊಂಡು ಬರೆದ ಕಾವ್ಯಗಳ ಪರಂಪರೆ ಕೆವ್ವು ದೇಶದಲ್ಲಿ ಹೊಸದೇನಲ್ಲ. ರತ್ನಾವಳಿ, ಪದ್ಮಾವತಿ, ಲೀಲಾವತಿ ಮೊದಲಾದ ಪ್ರೇಮಾಖ್ಯಾನ ಕಾವ್ಯಗಳು ಭಾರತೀಯ ಭಾಷೆಗಳಲ್ಲಿ ಒಂದಲ್ಲ ಒಂದು ರೂಪದಲ್ಲಿ ದೊರೆಯುತ್ತವೆ. ಭಾರತದ ಐತಿಹಾಸಿಕ ರಾಜರುಗಳಲ್ಲಿ ಉದಯನ, ಶೂದ್ರಕ, ವಿಕ್ರಮಾದಿತ್ಯ ಮೊದಲಾದವರನ್ನು ಕುರಿತು ಅನೇಕ ಕಲ್ಪಿತ ಪ್ರೇಮಾಖ್ಯಾನಗಳು ಪ್ರಚಾರದಲ್ಲಿವೆ. ಐತಿಹಾಸಿಕ ವ್ಯಕ್ತಿಗಳಲ್ಲದೆ, ಕಲ್ಪಿತ ನಾಯಕರುಗಳ ಹೆಸರಿನಲ್ಲಿ ಅನೇಕ ಅದ್ಭುತ ರಮ್ಯ ಆಖ್ಯಾನಗಳು ಬಳಕೆಯಲ್ಲಿವೆ. ಸಂಸ್ಕೃತ, ಪ್ರಾಕೃತ, ಅಪಭ್ರಂಶ, ತಮಿಳು, ಕನ್ನಡ ಮೊದಲಾದ ಪ್ರಾದೇಶಿಕ ಭಾಷೆಗಳಲ್ಲಿ ಅಸಂಖ್ಯಾತ ಪ್ರೇಮಕಥೆಗಳು ದೊರೆಯುತ್ತವೆ. ಪ್ರಸಿದ್ಧ, ಅಪ್ರಸಿದ್ಧ ಕವಿಗಳ ಕಾವ್ಯಗಳಲ್ಲಿ ಪ್ರೇಮದ ಹಿರಿಮೆಯನ್ನು ಕಾಣಬಹುದು.

ವೇದೋಪನಿಷತ್ತುಗಳಲ್ಲಿ, ಪ್ರಾಚೀನ ಪ್ರಸಿದ್ಧ ಕಾವ್ಯಗಳಲ್ಲಿ, ಪುರಾಣಗಳಲ್ಲಿ, ಇತಿಹಾಸದಲ್ಲಿ ಪ್ರೇಮಕಥೆಗಳು ಬೆಳೆದು ಬಂದಿವೆ. ಜೈನ ಮತಾಖ್ಯಾನರಾದಿಯಾಗಿ ಹಲವಾರು ಮತೀಯರು ಪ್ರೇಮಕಥೆಗಳನ್ನು ಧರ್ಮ ಪ್ರಚಾರದ ಸಾಧನಗಳನ್ನಾಗಿ ಬಳಸಿಕೊಂಡರು. ಭಾರತೀಯ ಭಾಷಾ ಕಾವ್ಯ ನಾಟಕಗಳಲ್ಲಿ ಪ್ರೇಮ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ ಪಾಶ್ಚಾತ್ಯ ನಾಟಕ ಕಾವ್ಯಗಳಲ್ಲಿಯೂ ಪ್ರೇಮ ಪ್ರಸಿದ್ಧವಾಗಿದೆ; ಪ್ರಮುಖ ಸ್ಥಾನ ಪಡೆದಿದೆ. ಪ್ರಾಚ್ಯ ಹಾಗೂ ಪಾಶ್ಚಾತ್ಯ ಪ್ರೇಮಾಖ್ಯಾನಗಳಲ್ಲಿ ಸಾಕಷ್ಟು ಸಾಮ್ಯವಿರುವುದನ್ನು ಇಲ್ಲಿ ಸ್ಮರಿಸಬಹುದು.

ಸಂಸ್ಕೃತ ಸಾಹಿತ್ಯ ಪರಂಪರೆಯನ್ನು ಅನುಸರಿಸಿರುವ ಕನ್ನಡ ಸಾಹಿತ್ಯವೂ ಸಹ ಮೊದಲಿಗೆ ಜಾನಪದ ಪ್ರೇಮಕಥೆಗಳನ್ನು ಒಳಗೊಂಡಿದೆ. ಧರ್ಮ, ಉಪದೇಶ, ಕಾಲಧರ್ಮ, ಕಾವ್ಯ ಧರ್ಮಗಳಿಗೆ ಅನುಸಾರವಾಗಿ ಕ್ರಮೇಣ ಮೂಲ ರೂಪವನ್ನು ಬದಲಿಸಿರುವುದನ್ನು ನಾವು ಕಾಣುತ್ತೇವೆ.

ಆದಿಕವಿ ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಪಾಂಡು ಮಾದ್ರಿ, ಅರ್ಜುನ ಸುಭದ್ರೆ ಮೊದಲಾದವರ ಶೃಂಗಾರ ಚಿತ್ರಣವನ್ನು ರಮ್ಯವಾಗಿ ರೂಪಿಸಿದ್ದಾನೆ. ಅವನ ಆದಿ ಪುರಾಣದಲ್ಲಿ "ಶ್ರೀಮತಿ ವಜ್ರಜಂಘ" "ಲಲಿತಾಂಗದೇವ-ಸ್ವಯಂಪ್ರಭೆ"ಯರ ಪ್ರೇಮಕಥೆಗಳು ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿವೆ.

ನಾಗವರ್ಮನ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಉದಯಿಸಿದ ಪ್ರಥಮ ಪ್ರೇಮಾಖ್ಯಾನವೆಂದು ಹೇಳಬಹುದು. ನೇಮಿಚಂದ್ರನ "ಲೀಲಾವತಿ" ಜನಪ್ರಿಯ ಪ್ರೇಮ ಕಾವ್ಯ. ನಾಗವರ್ಮ ಬಾಣನ ಕಾದಂಬರಿಯನ್ನು ಅನುಸರಿಸಿದಂತೆ, ನೇಮಿ ಚಂದ್ರ ಸಂಬಂಧವಿನ ವಾಕವದತ್ತೆಯ ಕಥೆಯನ್ನು ಅನುಸರಿಸಿ ಲೀಲಾವತಿಯನ್ನು ರಚಿಸಿದ್ದಾನೆ. ಲೀಲಾವತಿ ಹದಿನಾಲ್ಕು ಆಶ್ವಾಸಗಳ ಶೃಂಗಾರ ಪ್ರಧಾನ ಚಂಪೂ ಕಾವ್ಯ. ಕನ್ನಡದ ಶೃಂಗಾರ ಕವಿಗಳಲ್ಲಿ ಮೂರನೆಯವನು ಅಂಡಯ್ಯ. ಕನ್ನಡದ ಸಾಹಿತ್ಯ ಪರಂಪರೆಯಲ್ಲಿ ಹೊಸ ಸಂಪ್ರದಾಯವನ್ನು ಬೆಳಕಿಗೆ ತಂದ ಕೀರ್ತಿ ಅಂಡಯ್ಯನಿಗೆ ಸಲ್ಲುತ್ತದೆ. ಅಚ್ಚ ಕನ್ನಡದಲ್ಲಿ ಸಂಪೂರ್ಣವಾಗಿ ಕಾವ್ಯವನ್ನು ರಚಿಸಿದ ಸಾಹಸಿಗ ಅಂಡಯ್ಯ. ಅವನ ಕಬ್ಬಿಗರ ಗಾನ ಹೊಸ ಬೆಳಕನ್ನು ಚೆಲ್ಲಿದ ಸುಂದರ ಕಾವ್ಯ. ಕನ್ನಡದಲ್ಲಿ ಪ್ರೇಮಾಖ್ಯಾನ ರಚಿಸಿದ ಪ್ರಸಿದ್ಧ ಕವಿಗಳಲ್ಲಿ ಪಳಚಂಪು ರಚಿಸಿದ ಜಾಂಡರಸ ಪ್ರಾಲ್ಕನೆಯವನು.

ಕವಿ ಜನ್ನನ ಯಶೋಧರ ಚರಿತೆ, ದೇವಕವಿಯ ಕುಸುಮಾವಳಿ, ಕವಿ ಮಲ್ಲನ ಮನ್ಮಥ ವಿಜಯ, ಕನಕದಾಸರ ಮೋಹನ ತರಂಗಿಣಿ, ಪಳ ಚರಿತ್ರೆ, ಕುಂಡಲಗಿರಿಯ ರಸಿಕ, ಸುಭೋರಂಜನ ವಿಲಾಸ, ರತ್ನಾಕರನ ಭರತೇಶ ವೈಭವ ಮೊದಲಾದವು ಕನ್ನಡದಲ್ಲಿ ಕಾಣಬರುವ ಸುಂದರ ಪ್ರೇಮ ಕಾವ್ಯಗಳು.

ದೇವರಾಜನ ಸೊಬಗಿನಸೋನೆ ಮತ್ತು ದೇವಚಂದ್ರನ ರಾಜಾವಳಿ ಕಥೆ ಇವುಗಳು ಕನ್ನಡದಲ್ಲಿ ದೊರೆಯುವ ಇನ್ನಿತರ ಸುಂದರ ಪ್ರೇಮಾಖ್ಯಾನಗಳೆಂದು ಹೇಳಬಹುದು. ಇವುಗಳಷ್ಟೇ ಅಲ್ಲದೆ ಇನ್ನೂ ಅನೇಕ ಪ್ರೇಮ ಕಥೆಗಳೂ ಕನ್ನಡ ಸಾಹಿತ್ಯದಲ್ಲಿ ಕಾಣಬರುತ್ತವೆ.

ಸೋಮರಾಜನ 'ಉದ್ಭಟ ಕಾವ್ಯ' ಕನ್ನಡ ಪ್ರೇಮಾಖ್ಯಾನಗಳಲ್ಲಿ ಹಲವು ದೃಷ್ಟಿಗಳಿಂದ ಪಣಾಗ್ರಗಣ್ಯವಾದುದು. ಕುಮಾರ ಪಾಲ ಗುರ್ಜರನ ಐತಿಹಾಸಿಕ ಕಥೆ. ಆದರೆ ಶುದ್ಧ ಪ್ರೇಮಾಖ್ಯಾನ ಎಂದು ಹೇಳುವಂತಿಲ್ಲ. ಇದರಲ್ಲಿ ಇತಿಹಾಸ, ಭಕ್ತಿ, ಶೃಂಗಾರಗಳು ಶವಸಾನಾಗಿ ಸೇರಿವೆ. ಶೃಂಗಾರ ಭಕ್ತಿಗಳೆರಡರಲ್ಲಿಯೂ ವೀರ ಶೈವ ಕವಿ ಸೋಮರಾಜನಿಗೆ ವಿಶೇಷ ಆಸಕ್ತಿ. ಸೋಮರಾಜ ತನ್ನ ಕೃತಿಯನ್ನು 'ಶೃಂಗಾರ ಸಾರ' ಎಂದು ಹೇಳುತ್ತಾನೆ.

ಗುರ್ಜರ ದೇಶದ ಭಿಲ್ಲಕೀ ನಗರದ ಅರಸ ಉದ್ಭಟ. ಶೌರ್ಯ—ಧೈರ್ಯಾದಿ ಸಕಲ ಸದ್ಗುಣ ಸಂಪನ್ನನಾದ ಉದ್ಭಟ ಪರಮ ಶಿವಭಕ್ತ, ಶಿವಭಕ್ತಿಯವನ ಮಂತ್ರಿ. ಒಮ್ಮೆ ಅವನ ಆಸ್ಥಾನಕ್ಕೆ ಓರ್ವ ಪರಕುಮಾರ ಆಗಮಿಸಿದ. ಸ್ವಾಗತ ಸತ್ಕಾರಗಳ ಅನಂತರ ಅರಸ ಆಗಮನದ ಕಾರಣವನ್ನು ಕೇಳಿದ. ತಾನು ಕೇವಲ ಮಹರ್ಷಿಗಳ ಶಿಷ್ಯ, ಗುರು ವಿಧಿ ಯಜ್ಞ ಯಾಗಾದಿಗಳಿಗೆ ನಿಘರ್ಜ ಮೊದಲಾದ ಅಸುರರು ಕಂಟಕರಾಗಿದ್ದಾರೆ. ಅವರ ವಿಘ್ನಗಳನ್ನು ಪರಿಹರಿಸಲು ದೊರೆಯನ್ನು ಕರೆಯ ಬಂದಿರುವುದಾಗಿ ಯುವಕುಮಾರ ತಿಳಿಸುತ್ತಾನೆ. ರಾಜ ದೈತ್ಯರನ್ನು ನಿಗ್ರಹಿಸಿ ಯಾಗರಕ್ಷಣೆ ಮಾಡುವುದಾಗಿ ವಚನ ನೀಡುತ್ತಾನೆ. ಮುನಿ ಕುಮಾರ ಹಿಂದಿರುಗುತ್ತಾನೆ.

ಭರವಸೆ ನೀಡಿದಂತೆ ಅರಸ ಉದ್ಭಟ ಪಡೆಯೊಡನೆ ವನ ಪ್ರಯಾಣ ಕೈಗೊಂಡ ಕೆಲವು ದಿನಗಳಲ್ಲಿ ಗುರ್ಜರ ಸುರನನ್ನು ಕೊಂದು ಯಾಗವನ್ನು ರಕ್ಷಿಸುತ್ತಾನೆ. ಅನಂತರ ಸೇನೆಯನ್ನು ರಾಜಧಾನಿಗೆ ಕಳುಹಿಸಿ ಅರಸ ತನ್ನ ಪಡೆಯನ್ನು ಜೊತೆ ಹಾದಿಯಲ್ಲಿದ್ದ ಸರೋವರದ ಬಳಿ ಹೋಗುತ್ತಾನೆ. ಸರೋವರದತೀರದಲ್ಲಿ ಸೇವಿಸಿ ಮರದ ನೆರಳಲ್ಲಿ ದಣಿವಾರಿಸಿಕೊಳ್ಳುತ್ತಿರುತ್ತಾನೆ.

ಆ ಸಮಯ ಕೈ ಸರಿಯಾಗಿ ಬೇಟೆಗಾರನೊಬ್ಬ ಬೇಟೆ ಮುಗಿಸಿಕೊಂಡು ಬರುತ್ತಾನೆ ಅವನೊಂದಿಗೆ ಸುಂದರ ದವಡೆಯಲ್ಲಿದ್ದ ಗಿಳಿಯೊಂದು ಇರುತ್ತದೆ. ಗಿಳಿಯ ಸ್ಥಿತಿಯನ್ನು ಕಂಡ ಅರಸ ಮರುಕಗೊಂಡು ಆ ಪಕ್ಷಿಯನ್ನು ಕೊಂಡು ಅದನ್ನು ಪಡೆಯುತ್ತಾನೆ. ಅರಸ ಗಿಳಿಗೆ ಶೈತ್ಯೋಪಚಾರ ಮಾಡುತ್ತಾನೆ. ಅದು ಚೇತರಿಸಿಕೊಂಡ ರಾಜನೇ ನೀನು ಯಾರು? ನಿನ್ನೇಕೆ ನನ್ನನ್ನು ಬಿಡುಡೆ ಮಾಡಿದೆ? ಎಂದು ಮನುಷ್ಯರಂತೆ ನುಡಿಯುತ್ತದೆ.

ಗಿಳಿಯ ಮಾತಿನಿಂದ ಆಶ್ಚರ್ಯಗೊಂಡ ಉದ್ಭಟ "ನನ್ನ ಸ್ವರಂತೆ ಮಾತನಾಡುವ ಶಕ್ತಿ ಹೇಗೆ ಬಂತು?" ಎಂದು ಕುತೂಹಲದಿಂದ ಪ್ರಶ್ನಿಸುತ್ತಾನೆ. ಗಿಳಿ ತನ್ನ ವೃತ್ತಾಂತವನ್ನು ತಿಳಿಸುತ್ತದೆ.

ನಾನು ಚಿದಂಗನೆಂಬ ಮುನಿಯ ಶಿಷ್ಯ. ನನ್ನ ಹೆಸರು ಶುಕ. ನಾನು ಒಂದು ದಿನ ಗುರುವಿನ ದೇವತಾರ್ಚನೆಗಾಗಿ ಹೂ ತರಲು ಹೋಟಿ. ಗುರುವು ನನ್ನ ಚಿತ್ತ ಚಾಂಚಲ್ಯವನ್ನು ಪರೀಕ್ಷಿಸಲು ಇಂದ್ರಜಾಲ ಒಂದನ್ನು ಹೂಡಿದರು. ನಾನು ಹೂಗಳೊಂದಿಗೆ ಹಿಂದಿರುಗುವ ಹಾದಿಯಲ್ಲಿ ವಿಚಿತ್ರ ಉದ್ಯಾನವಂಟಿದವಿತ್ತು. ಅದರಲ್ಲಿ ಅನೇಕ ಸುಂದರ ರಮಣಿಯರಿದ್ದರು. ಅಲ್ಲಿಯ ಶ್ರೀ ಚಕ್ರದ ಮಧ್ಯೆ ಓರ್ವ ಯುವತಿ ಇದ್ದಳು. ಗುರು ಚಿದಂಗರು ಆ ಸುಂದರಿಯನ್ನು ಪೂಜಿಸುತ್ತಿದ್ದರು. ಅಲ್ಲಿ ನಾನಾ ವಿಧ ಪುಷ್ಪಗಳೊಂದಿಗೆ ಮದಿರೆ ಮೊದಲಾದ ಅಸೇಯ ಪದಾರ್ಥಗಳು, ಮಾಂಸಾದಿ ಅಖಾದ್ಯ ವಸ್ತುಗಳು, ಹಂತದಿಂದ ತುಂಬಿದ ಚಿನ್ನದ ಕೊಡ ಇದ್ದವು. ಗಣಗಳು ಆ ಚಿನ್ನದ ಕೊಡವನ್ನು ಕೈಯಲ್ಲಿ ಹಿಡಿದಿದ್ದರು. ಸುಂದರಿ ಅದರಿಂದ ಸುರೆಯನ್ನು ತೆಗೆದುಕೊಂಡು ಸೇವಿಸಿದಳು. ಚಿದಂಗರಿಗೂ ಕುಡಿಸಿದಳು. ಈ ದೃಶ್ಯವನ್ನು ಕಂಡಾಗ ನನಗೆ ಅತೀವ ವೇದನೆಯಾಯಿತು. "ಎಂತಹ ಅಪಧರ್ಮವಾಯಿತು. ಇಂತಹ ಪಾಪಿಯನ್ನು ಗುರುವೆಂದು ಗೌರವಿಸಿದೆ, ಮಹಾತ್ಮನೆಂದು ಭ್ರಮಿಸಿದೆ, ಮೋಸ ಹೋದೆ, ಎಂದು ಪಶ್ಚಾತ್ತಾಪಪಟ್ಟೆ. ಅಷ್ಟರಲ್ಲೇ ಮಾಯೆ ಸಂಯಿತು ಕೇವಲ ಚಿದಂಗ ಮಹರ್ಷಿಗಳು ಅಲ್ಲಿದ್ದರು. ನಾನು ಬೆರಗಾದೆ. ಆ ಮಹಾತ್ಮರು ನನ್ನ ಮನವನ್ನು ಅರಿತು "ಇದೇ ನಿನ್ನ ಗುರುಭಕ್ತಿ! ನಿನ್ನದು ಅಂಚಲ ಭ

(ಎಂಟನೇ ಪುಟ ನೋಡಿರಿ)

ಪಿಗ್ಮಿಯಲಿ ಕೂಡಿಡಿರಿ ವಾರದ ಏಳುದಿನವೂ ೨೫ ಪೈಸೆ ನೀಡಿದರೆ ಏಳು ವರುಷದ ಕೊನೆಗೆ ಖಾತೆಯಲಿ ತುಂಬುವುದು ಏಳುನೂರು ರೂಪಾಯಿ

ಮಿತವ್ಯಯದ ಸಾರ ಮತ್ತು ಉಳಿತಾಯದ ಪರಿಪಾಠವನ್ನು ಕಲಿಸುವ ಪಿಗ್ಮಿ ನಿಮ್ಮ ಸಂಪತ್ತನ್ನು ಸರಳವಾಗಿ ರೂಪಿಸುವ ಶಕ್ತಿ.

ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಉಳಿತಾಯ ಖಾತೆಯಲ್ಲಿ ಹಣವನ್ನು ಕ್ರಮವಾಗಿ ಕೂಡಿಟ್ಟು ಈ ಸರಳ ಯೋಜನೆಯ ಸೌಲಭ್ಯ ಮತ್ತು ಪ್ರಯೋಜನವನ್ನು ಹೊಂದಿ ನಿಮ್ಮ ಸಂಪತ್ತನ್ನು ಬೆಳೆಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧಿತ ಸಂಪತ್ತು ರೂ. 100 ಕೋಟಿಗೂ ಮಿಕ್ಕಿ. ಶಾಖೆಗಳು. 231 ಟಿ. ಎ. ಪೈ, ಚೇಯರ್‌ಮೇನ್

• ಅಭಿಪ್ರಾಯ •

ಅಂತರ್ರಾಷ್ಟ್ರೀಯ ತಮಿಳು ಅಧಿವೇಶನ ಅಲ್ಲ - ಹಿಂದಿ ವಿರುದ್ಧ ಪ್ರಚಾರ ಸಭೆ

ಬರೆದವರು: ಶ್ರೀ ಶಿವಶಂಕರ

ಮದರಾಸು ಮಹಾ ನಗರದಲ್ಲಿ ವಿಚಿತ್ರ ಪರಿಸ್ಥಿತಿಯಲ್ಲಿ ಭಾರೀ ಪ್ರಚಾರ ಹಾಗೂ ವೈಭವದಿಂದ ದ್ವಿತೀಯ ಅಂತರ್ರಾಷ್ಟ್ರೀಯ ತಮಿಳು ಅಧಿವೇಶನ ಆರಂಭವಾಯಿತು. ಅದರ ಕಾರ್ಯಕಲಾಪಗಳೆಲ್ಲಾ ತಮಿಳನ್ನು ಅಲ್ಲ, ಆಂಗ್ಲ ಭಾಷೆಯಲ್ಲಿ ನಡೆದುವು. ತಮಿಳು ನಾಡು ಜನರ ಭಾಷೆ— ಆಂಗ್ಲ ಆಧುನಿಕ ನಾಗರಿಕ ಭಾಷೆಯೆಂಬ ಭಾವನೆಯಿಂದಲೇ ಹಾಗೆ ನಡೆದಿರಬಹುದು. ಆ ಅಧಿವೇಶನದ ಕೊನೆಯ ಘಟ್ಟದಲ್ಲಿಯೂ ದ್ರಾ. ಮು. ಕ. ವ ತಶ್ಶೈಜ ಬಣ್ಣವನ್ನು, ತನ್ನ ದುರುದ್ದೇಶವನ್ನು ಪ್ರಕಟಪಿಸಿತು. ಕೊನೆಯ ದಿನ ನೂತಾಡಿದವರಲ್ಲಿ ಹೆಚ್ಚಿನವರು ದ್ರಾ. ಮು. ಕ. ದ ಘುಂಗಿಣರು.

ದ್ರಾ. ಮು. ಕ. ಹಾಗೂ ದ್ರಾವಿಡ ಕಳ್ಳಗಮಿನ ಅವಿಶ್ರಾಂತ ಶ್ರಮದ ಫಲವೇ ತಮಿಳನ ಪುನರುಜ್ಜೀವನವೆಂದು, ಆ ಪಕ್ಷಗಳನ್ನು ಹೊಗಳುತ್ತ ತಿರು ಅಂಬುಗಣಪತಿ ಅರುಹಿದರು. ದ್ರಾವಿಡ ಕಳ್ಳಗಮಿನ ತಂದೆ ತಿರು ರಾಮಸ್ವಾಮಿ ನಾಯ್ಕರ್‌ರವರು ತಮಿಳು ನಾಡುಭಾಷೆಯೆಂದೂ, ಆಂಗ್ಲ ಆಧುನಿಕ ಅವಶ್ಯಕ ಭಾಷೆಯೆಂದು ಎಡೆಬಿಡದೆ ಹೇಳುತ್ತಿದ್ದಾರೆ. ಅದಕ್ಕೆ ತಮ್ಮ ಪ್ರತಿಭಟನೆಯಲ್ಲಿ ತೋರಿಸಲು ಭಾರತೀಯ ಜನಸಂಘದವರು ಸಮಯ ಕಾಯುತ್ತಿದ್ದರು. ವ. ದ್ರಾಸ್ ಮಹಾ ನಗರದ ಫಗರ ಸಭೆಯು [ದ್ರಾ. ಮು. ಕ. ದ. ಅಡಳಿತಕ್ಕೊಳಪಟ್ಟದ್ದು] ಅವರಿಗೆ ಗೌರವ ಸಲ್ಲಿಸಲು ಸಭೆ ಕರೆಯುವದೇ ಸರಿಯಾದ ಸಮಯವೆಂದು ಭಾರತೀಯ ಜನಸಂಘದವರು ಕಪ್ಪಂಗಿ ಬಡೆಯ ನಯೋವೃದ್ಧ ತಿರು ರಾಮಸ್ವಾಮಿ ನಾಯ್ಕರ್‌ರವರಿಗೆ ಕಪ್ಪು ಬಟ್ಟೆಯನ್ನು ಪ್ರದರ್ಶಿಸಲು ಏರ್ಪಾಡುಮಾಡಿದರು. ಒಡನೆ ದ್ರಾ. ಮು. ಕ. ದವರು ಭಾರೀ ಸಂಖ್ಯೆಯಲ್ಲಿ ಸೇರಿ ಭಾರತೀಯ ಜನಸಂಘದವರನ್ನು ಹದರಿಸಿ ಬಿಡಲು ಪ್ರಯತ್ನಿಸಿದರು. ಭಾರತೀಯ ಜನಸಂಘದ ಮಂತ್ರಿಗಳಿಗೆ ಜಾಗೂ ಜೋಲಿ ಸಿಗದೆ ಹೋಯಿತು. ಕಡೆಕತೆಯಿಂದ ಪತ್ರಿಕೆಗಳ ಮೂಲ ಸುಟ್ಟದಲ್ಲಿ ಅಚ್ಚಾಗುವಂತಹ ಭಾರೀ ದುರ್ಘಟನೆ ಜರಿಯುವುದು ತಪ್ಪಿ ಹೋಯಿತು. ಇದರಿಂದ ತಮಿಳನಮೇಲೆ ಪ್ರೇಮವಿರುವದು ಯಾರಿಗೆಂಬುದು ಸ್ಪಷ್ಟವಿದೆ. ಹಾಗಿದ್ದರೂ ದ್ರಾ. ಮು. ಕ. ಹಾಗೂ ದ್ರಾ. ಕ. ದ ಪರವಾಗಿ ತಿರು ಗಣಪತಿಯವರು ವಾದ ಹೂಡುತ್ತಿದ್ದಾರೆ!

ವ. ದರಾಸು ವಿಧಾನಸಭಾ ಸದಸ್ಯ ತಿರು ಅಸೈ ತಂಬಿಯವರು (ದ್ರಾ. ಮು. ಕ.) ತಪ್ಪ ಅಸೆಯನ್ನು ಅಧಿವೇಶನದಲ್ಲಿ ತೋಡಿಕೊಂಡರು. ದ್ವಿತೀಯ ಪ್ರಪಂಚ ತಮಿಳು ಅಧಿವೇಶನವೆಂದರೆ ದ್ರಾ. ಮು. ಕ. ದ ಸಾರ್ವಜನಿಕ ಸಭೆಯೆಂದೋ, ವಿಧಾನ ಸಭೆಯೆಂದೋ ಅವರು ಅರಿತುಕೊಂಡಿದ್ದಿರಬಹುದು. ಅವರು ತಮ್ಮ ಭಾಷಣದಲ್ಲಿ, ಉತ್ತರ ಭಾಷೆಯೊಂದಂ ಪ್ರಭಾವವು ತಮಿಳು ಜಾತಿಯನ್ನು ಗುಂಪುಗಳನ್ನಾಗಿ ಒಡೆದಿರುತ್ತದೆ. ದ್ವಿತೀಯ ಪ್ರಪಂಚ ತಮಿಳು ಅಧಿವೇಶನವು ಹಾಗೂ ಅಂತಹ ಸಂಬಂಧಪಟ್ಟ ಮಹಾಸಭೆಗಳು ಅದ್ಯಾವ ಭಾಷೆಗೂ ತಮಿಳನ ವೇಲೆ ಪ್ರಭಾವ ಬೀರಲು ಬಿಡುವುದಿಲ್ಲವೆಂಬುದನ್ನು ಪ್ರಸ್ಪಷ್ಟಪಡಿಸಬೇಕು. ಬೇರಾವ ಭಾಷೆಯೂ ಸರಕಾರಿ ಭಾಷೆಯಾಗುವುದನ್ನು ಅದು ಸಹಿಸಿಕೊಳ್ಳಲಾರದು. ಇನ್ನು ಮುಂದಕ್ಕೆ ತಮಿಳರು ಅದೆಂತು ಬಾಳಬೇಕು, ಅವರ ಮತವೇಧೋರಬೇಕು, ಅವರ ಉತ್ಸವ, ಹಬ್ಬ ಹರಿದಿನಗಳು ಯಾವವೆಂಬುದನ್ನು ಸಮ್ಮೇಳನವು ಸೂಚಿಸಬೇಕೆಂದು ಹೇಳಿದರು. ಸಮ್ಮೇಳನಕ್ಕೆ ಅಮೇರಿಕ, ರಶ್ಯ, ಇಸ್ರೇಲ್, ಮಲಯಾ ಮುಂತಾದ ದೇಶಗಳಿಂದಲೂ ಅನೇಕ ಪ್ರತಿನಿಧಿಗಳು ಬಂದಿದ್ದು, ಅದೊಂದು ಅಂತರ್ರಾಷ್ಟ್ರೀಯ ಅಧಿವೇಶನವಾಗಿತ್ತು. ಅಲ್ಲಿ ನೆರೆದವರಿಗೆ ಉತ್ತರ-ದಕ್ಷಿಣಗಳ್ಯಾವುವು? ಅಮೇರಿಕದ ಅಥವಾ ರಷ್ಯಾದ ಪ್ರತಿನಿಧಿಗೆ ಭಾರತದ ಸಂಪರ್ಕ ಭಾಷೆ ಯಾವದಾದರೇನಂತೆ? ಅವರು ಭಾರತದ ಸಂಪರ್ಕ ಭಾಷೆಯ ವಿಷಯದಲ್ಲಿ ತಲೆ ಹಾಕಲು ಸಾಧ್ಯವೇನು? ಅದು ನ್ಯಾಯವೇನು? ತಿರು ಅಸೈ ತಂಬಿಯವರಿಗೆ ಈ ಒಂದು ಸಾಮಾನ್ಯ ವಿಷಯವೂ ಆಗ ಜ್ಞಾಪಕಕ್ಕೆ ಬರಲಿಲ್ಲ, ಗೊತ್ತಾಗಲಿಲ್ಲ! ಹಿಂದಿಯ ಪ್ರಭಾವವನ್ನು ಅನ್ಯ ದೇಶಗಳ ಪ್ರತಿನಿಧಿಗಳು ಅದೆಂತು ತಡೆಯುವರು? ನಮ್ಮ ದೇಶದ ಅಗುಹೋಗುಗಳಲ್ಲಿ ಅವರು ತಲೆ ಹಾಕಲು ಸಾಧ್ಯವೇನು? ಇದೇಕೆ ಅವರಿಗೆ ಗೊತ್ತಾಗಲಿಲ್ಲ? ದ್ವೇಷವು ಅಂಧನನ್ನಾಗಿಸುತ್ತದೆ, ಮತಿಭ್ರಮೆಯನ್ನುಂಟುಮಾಡುತ್ತದೆಂಬುದಕ್ಕೆ ಇನೊಂದು ಉತ್ತಮ ಉದಾಹರಣೆ. ತಮಿಳರಿಗೆ ತಮಿಳರ ಮತ ಯಾವದು, ಹಬ್ಬಗಳ್ಯಾವವೆಂಬುದು ಗೊತ್ತಿಲ್ಲವೇನು? ಅದನ್ನು ತೀರ್ಮಾನಿಸಲು ಪ್ರಪಂಚದ ತಮಿಳರು ಒಂದಾಗಬೇಕೇನು? ಕನ್ನಡಿಗರ ಮತ ಬೇರೆ, ತಮಿಳರ ಮತ ಬೇರೆ ಏನು? ಉತ್ತರ ಪ್ರದೇಶದಲ್ಲಿ ಅಥವಾ ದಿಲ್ಲಿಯಲ್ಲಿರುವವರ ಹಬ್ಬಹರಿದಿನಗಳು ಬೇರೆ, ತಮಿಳರದ್ದು ಬೇರೆ ಏನು? ಕನ್ನಡಿಗರಂತೆ ತಮಿಳರೂ ಶೈವರೋ ವೈಷ್ಣವರೋ ಅಲ್ಲವೇನು? ಹಿಂದಿ ಮೂತಾಡುವವರು ಆಚರಿಸುವ ಮಕರ ಸಂಕ್ರಮಣ, ಯುಗಾದಿ, ದೀಪಾವಳಿ ಮುಂತಾದ ಹಬ್ಬಗಳನ್ನು ತಮಿಳರು ಆಚರಿಸುವದಿಲ್ಲವೇನು? ಇತರ ಭಾರತೀಯರಿಗಿಂತ ತಮಿಳರು ಅದೆಂತು ಭಿನ್ನವಿರಲು ಸಾಧ್ಯ? ತಮ್ಮ ಪಕ್ಷದ ವಿಷಯ ಸಂಭಾಂಗವಿರುವ ತನಿ ತಮಿಳ್ (ವಿಶೇಷ ತಮಿಳು) ಬಾವದ ವೇಲೆ ತಿರು ಅಸೈ ತಂಬಿಯವರು ಆ ಮಾತುಗಳನ್ನು ಅಡಿರುವರು.

ತಕ್ಕನಿಗೆ ರಿಕ್ಷ ಸಾಕ್ಷಿಯೆಂಬಂತೆ ಅಂದಿನ ಕಾರ್ಯಕಲಾಪಗಳನ್ನು ನಡೆಸಲು ಅಧ್ಯಕ್ಷಸ್ಥಾನದಲ್ಲಿದ್ದವರೂ ಅಂತಹವರೇ. ಅವರು ತಮ್ಮ ಭಾಷಣದಲ್ಲಿ, 'ಭಾಷಾ ಸಮಸ್ಯೆಯನ್ನು ಪರಿಹರಿಸಬಲ್ಲ ಭಾಷೆ ತಮಿಳೆಂಬುದನ್ನು ಸಮ್ಮೇಳನವು ಕೇಂದ್ರಕ್ಕೆ ತಿಳಿಸಬೇಕೆಂ'ದು ಹೇಳಿದರು. ಸಮ್ಮೇಳನದಲ್ಲಿ ಹಲವಾರು ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿರುವರು. ಅವರೂಗೂ ಭಾರತದ ಕೇಂದ್ರ ಸರಕಾರಕ್ಕೂ ಏನಾದರೂ ಸಂಬಂಧ ಇದೆಯೇ? ಈ ಸಮ್ಮೇಳನದ ತೀರ್ಮಾನಗಳನ್ನು ಭಾರತದ ಕೇಂದ್ರ ಸರಕಾರ ಕಾರ್ಯರೂಪಕ್ಕೆ ತರಬೆಕು. ಹಾಗೂ ಅದರಂತೆ ನಡೆದುಕೊಳ್ಳಬೇಕೆಂದೇನಾದರೂ ಒಡಂಬಡಿಕೆ ಮುಂಚೆಯೇ ನಡೆದಿತ್ತೇನು? ಅದೇನಿಲ್ಲ. ಹಾಗಿರುವಾಗ ಈ ಭಾಷಾ ಅಧಿವೇಶನ ಅಥವಾ ಅಧ್ಯಯನ ಸಂಗೋಷ್ಠಿಯು ಮೂತನ್ನು ಸಾರ್ವಭೌಮ ಭಾರತದ ಕೇಂದ್ರ ಸರಕಾರ ಕೇಳಬೇಕೇನು? ಈ ರೀತಿ ದ್ರಾ. ಮು. ಕ. ವು. ತನಗೆ ಬೇಕಾದವರನ್ನೇ ಅಂದಂದಿನ ಸಭೆಗಳಿಗೆ ಅಧ್ಯಕ್ಷರನ್ನಾಗಿ ಆರಿಸಿಕೊಂಡು ಹಿಂದೀ ವಿರುದ್ಧ ಪ್ರಚಾರ ಸಭೆಯನ್ನು ಎಡೆಸಿತು.

ಇವರೆಲ್ಲರಿಗೂ ಮಾರ್ಗದರ್ಶಕವೆನ್ನುವಂತೆ ದ್ರಾ. ಮು. ಕ. ದ ಮಂತ್ರಿಗಳು ನಡೆದುಕೊಂಡಿರುವರು. ತಮಿಳುನಾಡಿನ ಮುಖ್ಯ ಮಂತ್ರಿ ತಿರು ಅಣ್ಣಾ ದೊರೈಯವರು ಅಂದು ತಮ್ಮ ಪೂರ್ಣ ಭಾವದಲ್ಲಿದ್ದರು. ಪ್ರಪಂಚದ ಪ್ರತಿನಿಧಿಗಳೆದುರು ಉತ್ತರ ಭಾರತದ ಅರ್ಥರ ಹಿಂದೀ ಭಾಷೆಯ ಕುರಿತು ಹೀನಾಯವಾಗಿ ಮೂತಾಡುವ ಕೊನೆಯ ಸಂದರ್ಭ ಅದು. ತಮಿಳು ಭಾಷೆಯಲ್ಲಿರುವ ಚೇತನ, ಫಲವಂತಿಕೆ, ರೂಪಾಂತರ ಶಕ್ತಿ ಹಾಗೂ ಜಾತುರ್ಯವು ಬೇರಿನ್ನಾವ ಭಾಷೆಯಲ್ಲೂ ಇಲ್ಲವೆಂದು ಅವರು ಅಂದೊಡನೆ ಕೈಚಪ್ಪಾಳೆಗಳ ಶಬ್ದ ಜೋರಾಗಿ ಕೇಳಬಂತು. ಅಬ್ಬಾ! ತಮಿಳನ ಪ್ರತಿಭೆ ಹಾಗೂ ಶಕ್ತಿಯ ಕುರಿತು ಇದಕ್ಕಿಂತ ಇನ್ನೇನು ಹೆಚ್ಚ ಹೇಳಲು ಸಾಧ್ಯ? ತಿರು ರಾಮಸ್ವಾಮಿ ನಾಯ್ಕರ್‌ರವರು ತಮಿಳು ನಾಡು ಭಾಷೆಯೆಂದಾಗ ಹತ್ತಿರದಲ್ಲೇ ಇದ್ದು ಕಿವಿಯೂರಿ ಕೇಳಿ, ತುಟಿ ಎರಡು ಮಡಿರದ, ಅದಕ್ಕಿಂತಲೂ ಅವರನ್ನು ಮಿಂಡಿಸಿದವರನ್ನು ಸದೆಬಡೆಯಲು ಪ್ರಯತ್ನಿಸಿದ ದ್ರಾ. ಮು. ಕ. ದ ಅಣ್ಣಾರವರು ಪ್ರಪಂಚ ತಮಿಳು ಅಧ್ಯಯನ ಸಂಗೋಷ್ಠಿಯಲ್ಲಿ ತಮಿಳು ಭಾಷೆಗೆ ಪ್ರತಂತ್ರಾಸ್ಥಾನ ದಯಪಾಲಿಸುತ್ತಿದ್ದಾರೆ! ಕೈಚಪ್ಪಾಳೆಯ ಶಬ್ದನ್ನು ಕೇಳಿದ ಮೇಲೆ ಇನ್ನೂ ಮುಂದಂದು ಅವರು, ತಮಿಳಿಗೆ ತಿದ್ದುಪಾಟು ಹಾಗೂ ಶುದ್ಧೀಕರಣದ ಅವಶ್ಯಕತೆಯೇ ಇಲ್ಲವೆಂದರು. ವೈಜ್ಞಾನಿಕ ಯಾಂತ್ರಿಕ ರಂಗದ

With best compliments from:-

K. V. VEERAPPA,

PROPRIETOR,

SRI SHANKARANANDA MOTOR SERVICE,

MANDYA.

For the conveyance of Marriage, Excursion, and Tourist Parties special buses are provided.

Please contact.

ಲ್ಲಿ ತಮಿಳು ಪ್ರಯೋಜನವಿಲ್ಲವೆಂದೂ ಆಂಗ್ಲ ಭಾಷೆಯೇ ಇರಬೇಕೆಂದು ಹೇಳುವವರು ತಮಿಳಿಗೆ ತಿದ್ದುಪಡಿ, ಶುದ್ಧೀಕರಣದ ಆವಶ್ಯಕತೆ ಇಲ್ಲವೆಂದೂ ಅದೊಂದು ಮಹಾನ್ ಭಾಷೆಯೆಂದೂ ಹೊಗಳುತ್ತಿದ್ದಾರೆ.

ಅವರವರಿಗೆ ಅವರವರ ಭಾಷೆಯಮೇಲೆ ಅಭಿಮಾನ ಇರಬೇಕು. ಅದೇ ರೀತಿ ಆಯಾಯಾ ದೇಶದ ಜನರಿಗೆ ಆಯಾಯಾ ದೇಶದ ಭಾಷೆಗಳ ಮೇಲೆ ಗೌರವ ಹಾಗೂ ಸದಭಿಮಾನ ಇರಲೇಬೇಕು. ಎಲ್ಲೂ ದುರಭಿಮಾನ ಸಲ್ಲದು. ತಿರು ಅಣ್ಣಾದೊರೈಯವರ ಮಾತು ಇದರಲ್ಲಿ ಯಾವ ಜಾತಿಗೆ ಸೇರುತ್ತದೆ? ಭಾಷಾಭಿಮಾನವೇ, ಭಾಷಾ ದುರಭಿಮಾನವೇ? ಅಲ್ಲ, ಅದೇನಲ್ಲ, ಕೇವಲ ಭಾಷಣವೇ? ಅವರಿಗೆ ಅಷ್ಟು ಅಭಿಮಾನವಿದ್ದಲ್ಲಿ ಅವರು ತಿರು ರಾಮಸ್ವಾಮಿ ನಾಯ್ಕರ್‌ರವರಿಗೇಕೆ ನೂರೂ ಹೇಳಿರುವುದಿಲ್ಲ? ಅಷ್ಟೇ ಅಲ್ಲ; ಆಂಗ್ಲ ಭಾಷೆಯೊಂದೇ ವೈಜ್ಞಾನಿಕ ಪ್ರಪಂಚದ ಸಂಪರ್ಕ ಭಾಷೆಯಾಗಲು ಯೋಗ್ಯತೆಯುಳ್ಳದ್ದೆಂದು ಇವರೇ ಹೇಳಿಲ್ಲವೇನು? ಅಂದಿಗೆ ಅದೇ ಸರಿ, ಇಂದಿಗೆ ಇದೇಸರಿ ಏನು?

ಅದರೆ....ಆದರೆ....ಅದೇ ಅವರುಪ್ರಶಂಸಿಸುವ ಅವರ ಭಾಷೆಗೆ ಇನ್ನೊಂದು ಭಾಷೆ ಹೆದರಿಸುತ್ತಿದೆಯಂತೆ! ಹೆದರಿಸುತ್ತಿರುವ ಭಾಷೆ ಯಾದರೋ ತಮಿಳಿನೆದುರು ನಗಣ್ಯ. ಅಲ್ಲದೆ ಭಾಷಾರಂಗದಲ್ಲಿ ಅದೊಂದು ಭಾಷೆಯೇ ಅಲ್ಲ! ಈ ಭಾಷೆಯು ತಮಿಳನ್ನು ನಾಶಮಾಡಲು ಪ್ರಯತ್ನಿಸುತ್ತಿದೆ! ಇದನ್ನು ತಮಿಳರು ಸಹಿಸಿಕೊಳ್ಳುವುದುಂಟೇ? ಓ! ಪ್ರತಿನಿಧಿಗಳೇ! ಹಿಂತಿರುಗಿರಿ, ನೀವೀಗ ಹಿಂದಕ್ಕೆ ಹೋಗಿರಿ. ನಿಮ್ಮ ದೇಶದ ಜನತೆಯೆದುರು ಹೇಳಿರಿ—ತಮಿಳರಿಗೆ ಅವರ ಭಾಷೆಯಮೇಲೆ ಅಭಿಮಾನ ಇದೆ. ಅವರು ಆ ಭಾಷಾ ಆಕ್ರಮಣವನ್ನು ಸಹಿಸಿಕೊಳ್ಳಲಾರರು. ಅದನ್ನುದುರಿಸಿಯೇ ಬಿಡುವರು. ಇದನ್ನು ಕೇಳಿರಿ.

ಇದು ಶಾಟಕದ ಮೇಲಿನ ಮಾತುಗಳಲ್ಲ. ದ್ರಾ. ಮು. ಕ. ದ ಧುರೀಣರ ಮಾತುಗಳು. ಅಷ್ಟೇ ಅಲ್ಲ, ಇಂದಿನ ತಮಿಳ್ನಾಡಿನ ಮುಖ್ಯ ಮಂತ್ರಿಯವರ ಮುಖ್ಯ ಭಾಷಣದ ಮುಖ್ಯ ಮಾತುಗಳು!

ಈ ಮಾತುಗಳು "ಹಿಂದಿ ಹೇರುವಿಕೆ"ಯ ವಿರುದ್ಧ ದ್ರಾ. ಮು. ಕ. ದ ನಾಯಕರಾಡಿರುವ ಮಾತುಗಳೆವೆ. ಹಿಂದಿಯನ್ನು ಹೇರಲಾಗುತ್ತಿದೆ ಏನು? ಹಿಂದಿ ಆಕ್ರಮಣ ನಡೆಯುತ್ತಿದೆ ಏನು? ಪ್ರಪಂಚದ ಜನರೆದುರು ತನ್ನ ದೇಶದ ಭಾಷೆಯೊಂದರ ಕುರಿತು ಹೀನಾಯವಾಗಿ ಮಾತಾಡುವವರನ್ನು ಬೇರಿನ್ನೆಲ್ಲಾದರೂ ಕಾಣಲು ಸಾಧ್ಯವೇನು? ಹಿಂದಿ ಸಂಪರ್ಕ ಭಾಷೆಯಾಗುವ ವಿಷಯ ಭಿನ್ನಾಭಿಪ್ರಾಯಇರಲೂ ಬಹುದು. ಅದು ಪ್ರಯೋಗಿನವಿಷಯವಿದೆ. ಅದನ್ನು ಅವೇರಿಕಸಭೆರಿದುರೋ ರಷ್ಯನರೆದುರೋ, ಭೂತಾಕಾರ ಮಾಡಿ ಹೇಳಲಿಕ್ಕೇನಿದೆ? ಹೇಳುವದು ಭಾಷೆಗೇ ಡಿನ ವಿಷಯವಲ್ಲವೇನು? ಅಂತಹ ಕೆಲಸವನ್ನು ಜಯಚಂದ ಸಂತಾನ ಮಾತ್ರ ಮಾಡೀತು. ಅದು ಭಾರತ, ಚಿದಂಬರಂ ಸಂತಾನಕ್ಕೆ ಶೋಭನೀಯವಲ್ಲ. ತಿರು ಚಿದಂಬರಂನವರು ಆಕ್ರಮಣಗಾರೀ ಆಂಗ್ಲೇಯರಭಿಪ್ರೇತಿಸಲು ಹಡತು ಕಟ್ಟಿದಲ್ಲಿ, ಪೀಳಿಗೆಯು ಆಂಗ್ಲ ಭಾಷೆಯ ಆಡಳಿತದ ಇತಿಶ್ರೀಗಾಗಿ ಹಡಗು ಪಡೆಯನ್ನು ಕಟ್ಟಿಸಿತು. ಅದನ್ನು ಬಿಟ್ಟು ಆಂಗ್ಲ ಭಾಷೆಯ ಮೋಹದಿಂದ ಉತ್ತರ—ದಕ್ಷಿಣವೆಂದು ಉದ್ಧಟತನದಿಂದ ವರ್ತಿಸದು. ಶಾ. ೨ ರಂದು ಶಂಕರ ಜಯಂತಿ ಸುಮ್ಮನೆ ನಾವು ಆಚರಿಸಿದೆವು. ಶಂಕರಾಚಾರ್ಯರೆಂದೊಡನೆ ಅ ಧರ್ಮ ಮೋಟೆ ಮಾತ್ರ ಧರ್ಮ ಕಣ್ಮುಂದೆ ಬಂದು ನಿಲ್ಲುತ್ತದೆ. ನೋಡಲು ಅದೆಷ್ಟು ಸೌಮ್ಯ ಶಾಂತತೆ. ಆದರೆ ಅದೇ ಮೂರ್ತಿ ವಿಶ್ವಂಡವಾದಗಳ ಮರಣ ಹೋಮ ಮಾಡಿಬಿಟ್ಟಿತು. ಇಂದು ಅದೇ ರೀತಿ ಒಡಕಿನ ವಾದಗಳು ಕೇಳಿಬರುತ್ತಿವೆ. ಅವನ್ನು ನಾಶಗೊಳಿಸಿ ರಾಷ್ಟ್ರೀಯತೆಯ, ಒಗ್ಗಟ್ಟಿನ ಸಂಘಟನೆಯ ಧ್ಯೇಯವನ್ನು ಅವರ ಮುಂದಿಡ ವುದೆಂದರೆ ಶ್ರೀ ಶಂಕರಾಚಾರ್ಯರು ಮಾಡಿದ ಕಾರ್ಯಕ್ಕೆ ತಾನೇನೇ ರಾಷ್ಟ್ರೀಯ ಏಕತೆ ಎಂದೊಡನೆ ಶ್ರೀ ಶಂಕರಾಚಾರ್ಯರ ಹೆಸರು ತಾನೇ ತಟ್ಟನೆ ಜ್ಞಾಪಕಕ್ಕೆ ಬರುವದು? ದೇಶದ ಪ್ರಾಲ್ದೆಶಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ ಸಂಘಟನಾ ಕಾರ್ಯಕ್ಕೆ ಏರ್ಪಾಡು ಮಾಡಿರುವರು. ಭಾಷಾ ಸಮಸ್ಯೆ, ಪ್ರಾಂತೀಯ ಮನೋಭಾವನೆ... ವಗೈರೆಯಿಗೆಲ್ಲಾ ಅವರು ವಂದನ್ನು ಕಂಡುಹಿಡಿದಿರುವರು. ಅದನ್ನು ಜ್ಞಾಪಿಸಿಕೊಂಡಲ್ಲಿ, ಹಲವಾರು ವಿರುದ್ಧ ಪ್ರಚಾರ ಸಭೆಗಳು ನಡೆದೂ ಅವು ತಾತ್ಕಾಲಿಕ ಮತ್ತೆ ಧರ್ಮಧ್ವಜವೇ ಹಾರಾಡುವಲ್ಲುದೆಂಬುದನ್ನು ಅರಿತು ಕೊಂಡು ಅದಕ್ಕಾಗಿ ನಾವು ಪ್ರಾಣಜೀವನ ಪುಷ್ಪವನ್ನು ಅರ್ಪಿಸುವದರಲ್ಲಿ ಸಂದೇಹವಿಲ್ಲ. ಅದಕ್ಕೆ ಇದೇ ಶುಭದಿನವಲ್ಲವೇನು?

ಅಲಕ್ಷ್ಯ ಮಾಡಬೇಡಿರಿ—

ಹಲ್ಲುಗಳ ಸೌಂದರ್ಯ ಮತ್ತು ಆರೋಗ್ಯ

ಲೇಖಕರು: ಡಾ। ಸುಂದರ ಜೆ. ವಯ್ಯೋರಾನೀ, ಡೈರೆಕ್ಟರ್,
ಡೆಂಟಲ್ ಸ್ಟಡೀಸ್, ಮಣಿಪಾಲ

ಉತ್ತಮವಾದ ಆರೋಗ್ಯ, ಸುಂದರವಾದ ರೂಪ,—ಇವೆರಡನ್ನೂ ಸುಂದರ, ಸ್ವಚ್ಛವಾದ ಹಲ್ಲುಗಳಿಂದ ಪಡೆದುಕೊಳ್ಳಬಹುದು. ಇಂತಹ ಹಲ್ಲುಗಳನ್ನು ಸಂಪಾದಿಸಲು, ದಂತ ಚಿಕಿತ್ಸಕರ ಸಹಯೋಗದಷ್ಟೇ ಸ್ವಂತ ಪ್ರಯತ್ನವೂ ಅವಶ್ಯಕವಾಗಿದೆ. ಬಾಲ್ಯದಿಂದಲೇ ಹಲ್ಲುಗಳನ್ನು ನೀಟಾಗಿಯೂ ಸ್ವಚ್ಛವಾಗಿಯೂ ಇಟ್ಟುಕೊಳ್ಳುವ ಅಭ್ಯಾಸವನ್ನು ಬೆಳೆಸಿಕೊಂಡು ಬಂದರೆ, ಜೀವನ ಪರ್ಯಂತ ಹಲ್ಲುಗಳಿಂದ ನಾವು ಲಾಭಗಳಿಸಲು ಸಾಧ್ಯವಿದೆ. ಗರ್ಭಾವಸ್ಥೆಯಲ್ಲಿರುವಾಗಲೇ ಮಗುವಿನ ಬಗ್ಗೆ ತಂದೆತಾಯಿಗಳ ಕೆಲವು ಕರ್ತವ್ಯಗಳಿವೆ. ಕುಟುಂಬದ ಮರುವಿನ ಹಲ್ಲುಗಳ ರಕ್ಷಣೆಯ ಮತ್ತು ಪೋಷಣೆಯ ಕಡೆಗೆ ಗಮನವಿಡುವುದು ಅವುಗಳಲ್ಲೊಂದಾಗಿದ್ದು ಅದು ಪ್ರಾಮುಖ್ಯವೂ ಆಗಿದೆ. ಪ್ರಾರಂಭಿಕ ಅಧ್ಯಯನದ ಕಾಲದಲ್ಲಿಯೇ ಹಲ್ಲುಗಳ ಆರೋಗ್ಯದ ಕಡೆಗೆ ಗಮನವೀಯುವುದರಿಂದ, ಈ ಅಭ್ಯಾಸವು ಕೊನೆತನಕ ಅಳಿಯದೆ ಉಳಿದುಕೊಳ್ಳುವುದು. ಮಗುವು ಸಮಸ್ತ ಶರೀರದ ಕನ್ನಡಿಯೆಂದು, ಬಲ್ಲವರು ಸರಿಯಾಗಿಯೇ ಹೇಳಿದ್ದಾರೆ.

ಹಲ್ಲುಗಳ ಆವಶ್ಯಕತೆ ಯಾವಾಗ ಮತ್ತು ಏಕೆ? ಮಗುವಿನ ಆರೋಗ್ಯ ರಕ್ಷಣೆಗೆ ಹಾಲಹಲ್ಲುಗಳೂ ಸ್ಥಾಯಿ ಹಲ್ಲುಗಳಷ್ಟೇ ಅವಶ್ಯವಾಗಿವೆ. ಮಗುವು ತನ್ನ ಗಟ್ಟಿಯಾದ ಹಲ್ಲುಗಳಿಂದ, ಹಾಗೂ ರೋಗರಹಿತ ಬಾಯಿಯಿಂದ ಆಹಾರವನ್ನು ಜಗಿಯುವಾಗ, ಸ್ವಾಭಾವಿಕವಾಗಿ ಅದರ ದವಡೆಗಳು ವಿಕಾಸಗೊಳ್ಳುವುವು. ಮುಖವು ಹೃಷ್ಟಪುಷ್ಟವಾಗಿ ಸುಂದರವಾಗುವುದು. ಮಾತಾಡುವಾಗ ಉಚ್ಚಾರಣೆ ಸ್ಪಷ್ಟವಾಗುವುದು. ಅದುದರಿಂದ ಹಲ್ಲುಗಳ ಪ್ರಯೋಗ ಬರುವಾಗ ಆರೋಗ್ಯವಿಜ್ಞಾನವನ್ನು ಅಲ್ಲಗಳೆಯುವುದು ಸ್ವಾಥ್ಯಕ್ಕೂ ಸೌಂದರ್ಯಕ್ಕೂ ಹಾನಿಕಾರಕವಾಗಿದೆ.

ದುಸ್ವಭಾವ—ಹಲ್ಲುಗಳು ರೋಗಗ್ರಸ್ಥವಾಗಿದ್ದರೆ, ಮೂಲ ಪ್ರಕಾರಗಳಿಂದ ಆರೋಗ್ಯದ ಮೇಲೆ ದುಷ್ಪ್ರಭಾವ ಬೀರುವ ಸಂಭವವಿದೆ. ಮೊತ್ತಮೊದಲಾಗಿ ಬಾಯಿಯೊಳಗಿನ ಜೀವಾಣುಗಳೂ ಅವುಗಳ ವಿಷವು ರಕ್ತಪ್ರವಾಹದೊಡನೆ ಸೇರಿಹೋಗಿ, ಶರೀರದ ಬೇರೆಬೇರೆ ಭಾಗಗಳಿಗೂ ಹೋಗಿಬಿಡಬಹುದು. ಎರಡನೆಯದಾಗಿ—ನಮ್ಮ ಆಹಾರದೊಂದಿಗೆ ಜೀವಾಣುಗಳೂ ಹೊಟ್ಟೆಯೊಳಗೆ ಸೇರಿ, ಕರುಳುಗಳಲ್ಲಿ ಹಲವು ತೆರ ವಿಕಾರಗಳುಂಟಾಗಬಹುದು. ಕೊನೆಯದಾಗಿ—ಶ್ವಾಸೋಚ್ಛ್ವಾಸದ ಸಮಯ ಈ ಜೀವಾಣುಗಳು ಶ್ವಾಸಕೋಶವನ್ನು ಪ್ರವೇಶಿಸಬಹುದು.

ಹಲ್ಲುಗಳ ಸಾಮಾನ್ಯ ರೋಗ:- ಜಗತ್ತಿನಲ್ಲಿ ಸೇಕಡಾ ಹೊಂಭತ್ತಕ್ಕಿಂತ ಹೆಚ್ಚು ಮಂದಿ ದಂತರೋಗದಿಂದ ಪೀಡಿತರಾಗಿದ್ದಾರೆ. ಹಲ್ಲುಗಳ ರೋಗಗಳು ಮುಖ್ಯವಾಗಿ ಎರಡು ಬಗೆಯಾಗಿವೆ—ಹಲ್ಲುಗಳ ಕೊಳೆಯುವಿಕೆ ಮತ್ತು ಪಯೋರಿಯಾ.

ಹಲ್ಲುಗಳ ಕೊಳೆಯುವಿಕೆ ಎಂದರೇನು? ಇದೊಂದು ದಂತರೋಗ. ಇದರಿಂದ ಹಲ್ಲುಗಳ ಹೊರಭಾಗದ ಗಟ್ಟಿಯಾಗಿರುವ ರಕ್ಷಣೆ ಅವರಣವು (ಇನೇಮಲ್) ನಷ್ಟವಾದುವುವು. ಪರಿಣಾಮವಾಗಿ ಹಲ್ಲುಗಳ ಮಹತ್ವಪೂರ್ಣ ಭಾಗವು ಸವೆದು, ಅವು ಕೊರೆಯತೊಡಗುವುವು. ಉಂಡ ಮೇಲೆ ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರಾಂಶದೊಳಗಿನ ಕಾರ್ಬೋಹೈಡ್ರೇಟಿನ ಸೂಕ್ಷ್ಮ ಕಣಗಳಿಂದ ಒಂದು ತರದ ತೀಕ್ಷ್ಣ ದ್ರವ (ಶೇಜಾಬ್) ಉತ್ಪನ್ನವಾಗಿ, ಹಲ್ಲಿನ ಮೇಲ್ಭಾಗಕ್ಕೆ ಹಾನಿಯನ್ನೊಡ್ಡತ್ತದೆ. ಇದನ್ನೇ ಹಲ್ಲುಗಳ ಕೊಳೆಯುವಿಕೆ ಎನ್ನುತ್ತಾರೆ. ಮೊದಮೊದಲು ಹಲ್ಲಿನ ಯಾವುದಾದರೊಂದು ಸಣ್ಣ ಭಾಗಕ್ಕೆ ಹಾನಿಯುಂಟಾಗುವುದು. ಊಟ ಮಾಡುವ ಸಮಯ ಹಲ್ಲಿನ ಹೊರಕವಚ ಜಾರಿ, ಹಲ್ಲಿನ ಚಿಕ್ಕವುಟ್ಟ ಚಾರುಗಳು ಬಿದ್ದುಹೋಗಿ, ಹಲ್ಲಿನಲ್ಲಿ ತೂತಾಗಿರುವುದು ಪ್ರಮುಖವಾಗುತ್ತದೆ. ಕೆಲವು ತಿಂಗಳ ನಂತರ ಈ ತೂತುಗಳು ಮೆಲ್ಲಮೆಲ್ಲನೆ ದೊಡ್ಡದಾಗುತ್ತವೆ. ಬಟ್ಟೆಯಲ್ಲಿರುವ ಹಣ್ಣುಗಳಲ್ಲಿ ಒಂದು ಕೊಳೆತ ಹಣ್ಣು ಇದ್ದರೆ, ಎಲ್ಲ ಹಣ್ಣುಗಳೂ ಕೊಳೆಯುವಂತೆ ಕೊಳೆತ ಒಂದು ಹಲ್ಲು ಉಳಿದ ಹಲ್ಲುಗಳನ್ನೂ ಮೆಲ್ಲಮೆಲ್ಲನೆ ಕಡಿಸಿಬಿಡುತ್ತದೆ.

ಹಲ್ಲುಗಳ ರಕ್ಷಣೆ:- ವಿಟಾಮಿನ್, ಜೀವಸತ್ವ, ಬೆಣ್ಣೆಹಾಲು, ಮಾಂಸಖಂಡ, ಜಾಮ್ ಹಾಗೂ ಸಕ್ಕರೆಯಿಂದ ಆವರಿಸಲ್ಪಟ್ಟಂತಹ ಸಿಹಿ ತಿಂಡಿಗಳನ್ನು ಜಾಸ್ತಿರೂಪತೆಯಿಂದ ಬಹಳ ವಿರಳವಾಗಿ ಉಪಯೋಗಿಸುವದೇ ಹಲ್ಲುಗಳ ರಕ್ಷಣೆಗೆ ಸರಳ ಉಪಾಯ. ಈ ಖಾದ್ಯ ಪದಾರ್ಥಗಳಲ್ಲಿ ಹಲ್ಲಿಗೆ ಹಾನಿಯನ್ನುಂಟುಮಾಡುವ ಕಾರ್ಬೋಹೈಡ್ರೇಟು ಸೂಕ್ಷ್ಮರೂಪದಲ್ಲಿ ಇರುತ್ತದೆ. ಆದರೆ, ಸಂಲಿಗಮ್ ದಾರಾಗಿರುವ ಪದಾರ್ಥವು ಪ್ರಯೋಜನಕಾರಿ. ಅದು ಹಲ್ಲುಗಳ ರಕ್ಷಣೆಯ ಬಗ್ಗೆ ವಿಶೇಷ ಧ್ಯಾನವನ್ನೇ ಕೊಡುವುದಿಲ್ಲವೆಂದು ವಿಷಾದ ಪೂರ್ವಕವಾಗಿ ಹೇಳಬೇಕಾಗುತ್ತದೆ.

ತಮ್ಮ ಮುಖ ಮತ್ತು ಹಲ್ಲುಗಳ ರಕ್ಷಣೆ ಮಾಡುವ ಜವಾಬ್ದಾರಿಯು ಪ್ರತಿಯೊಬ್ಬರಿಗೂ ಇರಬೇಕು. ಹಲ್ಲುಗಳ ಸ್ವಚ್ಛತೆಯು ಅವುಗಳು ರೋಗಗ್ರಸ್ತವಾಗದಂತೆ ಕಾಪಾಡಿಕೊಳ್ಳುತ್ತದೆ. ಊಟವಾದೊಡನೆಯೇ ಸರಿಯಾದ ಕ್ರಮದಲ್ಲಿ ಹಲ್ಲುಗ

(ಸಂಪೂರ್ಣವೇ ಪುಟ ನೋಡಿರಿ)

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ;
ಹಾಗೂ ಎಲ್ಲಾ ತರದ ವಿಸ್ತಾರಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore - 2

ಪ್ರಾಚೀನ ಪ್ರಸಿದ್ಧ ಪ್ರೇಮಾಖ್ಯಾನಗಳು

(ಐದನೇ ಪುಟದಿಂದ)

ತ್ರ. ನೀನು ಗಿಳಿಯೊಗು" ಎಂದು ಕಪಿಸಿದರು. ನಾನು ಅವರ ಕಾಲಿಗೆರಗಿ ಮನ್ನಿಸಿ ಎಂದು ಬೇಡಿದೆ. ಅವರು ಶಾಪವಿಮೋಚನೆಯ ರೀತಿಯನ್ನು ತಿಳಿಸಿದರು. ನೀನು ಈಶ್ವರ ಪ್ರಸಾದಿಂದ ಹುಟ್ಟಿದ ಕನ್ಯೆಯನ್ನು ಸ್ಪರ್ಶಿಸಿದಾಗ ನಿನಗೆ ಮಾತನಾಡುವ ಶಕ್ತಿ ಬರುತ್ತದೆ. ಆಕೆಯ ಮದುವೆಯ ಸಾಲ್ಯನೆಯ ದಿನ ಓಕುಳಿಯಲ್ಲಿ ಮುಂದರೆ ನಿನಗೆ ಮರಳಿ ಮನುಷ್ಯ ಜನ್ಮ ಪ್ರಾಪ್ತವಾಗುತ್ತದೆ."

"ಶಾಪಗ್ರಸ್ತನಾದ ನಾನು ಗಿಳಿಯಾಗಿ ಮಾರ್ಗಾಡಾದೆ. ಪಕ್ಷಿ ಜಾತಿ ಧರ್ಮದಂತೆ ಹಾರುತ್ತಾ ಅರಣ್ಯವನ್ನು ತಲುಪಿದೆ ಒಂದು ದಿನ ಒಬ್ಬ ರಾಜಕುಮಾರ ಸರೋವರ ಒಂದರಲ್ಲಿ ಜಲಕ್ರೀಡೆಮಾಡುತ್ತಿದ್ದುದನ್ನು ಕಂಡೆ. ಅವಳ ತುಟಿಯನ್ನು ತೊಂಡೆಯ ಹಣ್ಣೆಂದು ಭ್ರಮಿಸಿ ಕಚ್ಚಲು ಹೋದೆ. ಅವಳು ನನ್ನನ್ನು ಹಿಡಿದುಕೊಂಡಳು. ಆದ ನನಗೆ ಮಾತನಾಡುವ ಶಕ್ತಿ ಲಭಿಸಿತು. ಆಕೆಯೇ ನನ್ನನ್ನು ಸಾಕಿಕೊಂಡಳು. ಕೆಲಕಾಲ ಕಳೆದ ಮೇಲೆ ಆಕೆಯಲ್ಲಿ ಯೌವನೋದಯವಾಯಿತು. ಅಘರೂಪಶಾದ ವರನನ್ನು ಹುಡುಕಿ ಕೊಡುವುದಾಗಿ ಅಲ್ಲಿಂದ ಹಾರಿದೆ. ಒಂದು ಮರದ ಮೇಲೆ ಕುಳಿತಿರುವಾಗ ಈ ಬೇಡನ ಬಲೆಗೆ ಬಿದ್ದೆ. ಅನಂತರ ನಿನ್ನ ಕೈಗೆ ಬಂದೆ" ಎಂದು ತಿಳಿಸಿತು.

ಗಿಳಿ ರಾಜನ ವೃತ್ತಾಂತವನ್ನು ಕೇಳಿ ತಿಳಿದುಕೊಂಡಿತು. ಯಾರನ್ನು ಅರಸಿಕೊಂಡು ಹೊರಟಿದ್ದೆನೋ ಅವನ ಕೈಗೆ ಸಿಕ್ಕಿದೆನಲ್ಲ ಎಂದು ಅದಕ್ಕೆ ಸಂತಸವಾಯಿತು. ಕೂಡಲೇ ಗಿಳಿ ರಾಜಕುಮಾರ ಸೌಂದರ್ಯವತಿಯ ನಗರಕ್ಕೆ ಹಾರಿ ಹೋಯಿತು. ಸೌಂದರ್ಯವತಿಗೆ ಉದ್ಭಟ ರಾಜನ ವೃತ್ತಾಂತವನ್ನು ತಿಳಿಸಿತು. ಅಲ್ಲಿಂದ ಹಿಂದಿರುಗಿ ಉದ್ಭಟ ದೇವನನ್ನು ಸಂಗಡಕರೆದೊಯ್ದು ಸೌಂದರ್ಯವತಿಯ ತಂದೆ ಸುಧರ್ಮ ರಾಜನಿಗೆ ಪರಿಚಯ ಮಾಡಿಕೊಟ್ಟಿತು.

ಉದ್ಭಟ ಸೌಂದರ್ಯವತಿಯರ ಭೇಟಿಯೂ ಫಲಿಯಿತು. ಅವರಲ್ಲಿ ಪರಸ್ಪರ ಅನುರಾಗವೂ ಮೂಡಿತು. ಅವರಿಬ್ಬರ ವಿವಾಹವೂ ವೈಭವದಿಂದ ನೆರವೇರಿತು. ಮದುವೆಯ ಓಕುಳಿಯಲ್ಲಿ ಗಿಣಿ ಮುಂದುವರ್ತ್ತಿ ನರ ಜನ್ಮವನ್ನು ಪಡೆಯಿತು.

ಉದ್ಭಟದೇವ ತನ್ನ ಸತಿ ಸೌಂದರ್ಯವತಿಯೊಡನೆ ನಾನಾ ವಿಧವಾದ ಭೋಗ ವಿಲಾಸಗಳಲ್ಲಿ ತಲ್ಲೀನನಾಗಿದ್ದ. ಒಮ್ಮೆ ಅವನು ಸತಿಯೊಂದಿಗೆ ಪಡೆಯೊಡುತ್ತಿರುವಾಗ ಗಗನ ಮಾರ್ಗದಲ್ಲಿ ಹೋಗುತ್ತಿದ್ದ ಶಿವಭಕ್ತ ಓಹಿಲಯ್ಯನನ್ನು ಕಂಡು ನಕ್ಕ. ಅವನ ನಗೆಯ ಕಾರಣವನ್ನು ಸೌಂದರ್ಯವತಿ ಕೇಳಿದಳು ಮತ್ತು ಕಾರಣ ತಿಳಿಸುವ ವರೆಗೆ ಅಟವಾಡುವುದಿಲ್ಲವೆಂದು ಹಟಹಿಡಿದಳು. ಆಗ ಉದ್ಭಟ ಓಹಿಲಯ್ಯನ ಕಥೆಯನ್ನು ಸಾದ್ಯಂತ ಆಕೆಗೆ ನಿರೂಪಿಸಿದ. ಇತರ ಶಿವಭಕ್ತರ ಕಥೆಗಳನ್ನು ಹೇಳಿ ತನ್ನನ್ನೆ ಶಾಪ ಶಿವನನ್ನು ಪೂಜಿಸಿ ಇಡಿ ತನ್ನ ಊರನ್ನೇ ಕೈಲಾಸಕ್ಕೆ ಕೊಂಡೊಯ್ದ.

ಪ್ರೇಮಿಗಳ ಸಮಾಗಮದೊಂದಿಗೆ ಕಾವ್ಯ ಮುಗಿಯುವುದಿಲ್ಲ. ಅಂತ್ಯಕ್ಕೆ ಭಕ್ತಿಯ ತಿರುವುಕೊಟ್ಟು ಕವಿ ಲೋಕ ಪರಲೋಕಗಳನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ಇದು ಶೃಂಗಾರ ಪ್ರಧಾನ ಕಾವ್ಯವಾದರೂ ಪೂರ್ಣ ಶೃಂಗಾರ ಕಾವ್ಯವಲ್ಲ. ಕವಿ ಸೋಮರಾಜ ಕಥೆಯಲ್ಲಿ ಶಿವಭಕ್ತಿಗೂ ಬೆಲೆಕೊಟ್ಟು ಬೆಳಕಿಸಿದ್ದಾನೆ.

ದೇವ ಕವಿಯ ಕುಸುಮಾವಳಿ ಕಾವ್ಯ ಕನ್ನಡದ ವಿಶುದ್ಧ ಪ್ರೇಮಾಖ್ಯಾನಗಳಲ್ಲೊಂದು. ನೇಮಿಚಂದ್ರನ ಲೀಲಾವತಿಯಂತೆ ಕುಸುಮಾವಳಿ ಸಹ ಕಲ್ಪನಾ ಕಥೆ. ಅದರ ಕಥೆಯನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಮದನಾವತಿ ಎಂಬುದೊಂದು ಪಟ್ಟಣ. ಇದರ ದೊರೆ ಮಣಿಕುಂಡಲ. ಅವನು ಚಿತ್ರಕೂಟದ ತಪ್ಪಲಿನಲ್ಲಿದ್ದ ಕಪಿಲ ಋಷಿಯ ಸಮೀಪದಲ್ಲಿ ಸುಂದರಿಯೊಬ್ಬಳನ್ನು ಕನಸಿನಲ್ಲಿ ಕಾಣುತ್ತಾನೆ. ಅರಸ ಮಂತ್ರಿ ಅವಳ ಅನ್ವೇಷಣೆಗಾಗಿ ಹೊರಡುತ್ತಾರೆ. ಕಪಿಲ ಋಷಿಯ ಆಶ್ರಮದಲ್ಲಿ ಅವರಿಗೆ ಸುಂದರ ಸ್ತ್ರೀ ವಿಗ್ರಹ ಕಾಣಸಿಕ್ಕಿತ್ತದೆ. ಆ ವಿಗ್ರಹದ ಬಗೆಗೆ ಮಣಿಕುಂಡಲ ಪ್ರಶ್ನಿಸಿದಾಗ ಕಪಿಲ ಅದರ ಕಥೆಯನ್ನು ಹೇಳುತ್ತಾನೆ.

ವಿಶ್ವಂಭರ ವಿಮಲ ಸುರಿಯ ಅರಸು ಪುತ್ರಕಾಮೇಷ್ಟಿ ಯಾಗ ಮಾಡಿ ಅವನು ಕಂದರ್ಪದೇವನೆಂಬ ಮಗನನ್ನು ಪಡೆಯುತ್ತಾನೆ. ಪ್ರಾಪ್ತವಯಸ್ಕನಾದ ಅವನಿಗೆ ವಿವಾಹ ಮಾಡಬೇಕೆಂದು ಅನೇಕರಾಜ ಪುತ್ರಿಯರನ್ನು ತೋರಿಸುತ್ತಾರೆ. ಆದರೆ ಅವನು ಯಾರನ್ನೂ ಒಪ್ಪುವುದಿಲ್ಲ. ಒಂದು ಬಾರಿ ಯಾರೋ ನೇಸುಹಾಕಿದ್ದ ಕುಸುಮಾವಳಿಯ ಚಿತ್ರವನ್ನು ನೋಡಿ ಅವಳಲ್ಲಿ ಅನುರಕ್ತನಾಗುತ್ತಾನೆ.

ಕಂದರ್ಪದೇವ ಮೋಹಪರವಶನಾಗಿ ಮಂತ್ರಿ ಕುವರ ವೇಧಾರ್ವನೊಡನೆ ಕುದುರೆಯೇರಿ ಪ್ರಯಾಣ ಬೆಳೆಸುತ್ತಾನೆ. ದಾರಿಯಲ್ಲಿ ಕಾಶಿಕನಂದಿಯಿಂದ ದಿವ್ಯಾಸ್ತ್ರಗಳನ್ನು ಪಡೆದು ಪದ್ಮಪುರಕ್ಕೆ ಬಂದು ಅಲ್ಲಿಯ ರಾಜ ವಜ್ರಜಂಘನ ವೈರಿ ಸಿಂಹವರ್ಮನನ್ನು ಕೊಂದು ವಜ್ರಜಂಘನಿಂದ ಕುಸುಮಾವಳಿಯ ನೆಲೆಯನ್ನು ತಿಳಿಯುತ್ತಾನೆ.

ಕುಸುಮಾವಳಿ ಚಕ್ರವಾಕ ಪುರದ ಅರಸ ಚಂದ್ರಪ್ರಭನ ಕುವರಿ. ಅವಳು ಕಂದರ್ಪದೇವನ ಚಿತ್ರವನ್ನು ಕಂಡು ಮೋಹಗೊಂಡಿರುತ್ತಾಳೆ. ಅವಳ ಗೆಳತಿ ಕಾಳಿಯ ದೇವಾಲಯದಲ್ಲಿ ಕಂದರ್ಪನನ್ನು ಆಕಸ್ಮಿಕವಾಗಿ ಕಂಡು ಕುಸುಮಾವಳಿ ಸುಸಂಗತಿಯನ್ನು ತಿಳಿಸಿ ಕರೆದೊಯ್ಯುತ್ತಾಳೆ. ಗೆಳೆಯನನ್ನು ಬಿಟ್ಟು ಕಂದರ್ಪದೇವ ಕುಸುಮಾವಳಿಯೊಂದಿಗೆ ಕುದುರೆಯೇರಿ ಊರಿಗೆ ಹಿಂದಿರುಗುವಾಗ ಹಾವಿಯಲ್ಲಿ ಒಂದು ಸಿಂಹ ಅಡ್ಡಗಟ್ಟುತ್ತದೆ. ಕುದುರೆ ಬೆದರುತ್ತದೆ. ಕುಸುಮಾವಳಿ ದಾರಿತಪ್ಪಿ ಬೇಡರ ಕೈಸೇರುತ್ತಾಳೆ. ಅವರಿಂದ ತಪ್ಪಿಸಿಕೊಂಡು ಕಪಿಲ ಋಷಿಯ ಆಶ್ರಮಕ್ಕೆ ಬಂದು ಆಶ್ರಯ ಬೇಡುತ್ತಾಳೆ. ಋಷಿ ಅವಳಿಗೆ ಯಾರಿಂದಲೂ ತೊಂದರೆಯಾಗದಂತೆ ಅವಳನ್ನು ಶಿಲಾಪ್ರತಿಮೆಯನ್ನಾಗಿ ಮಾಡುತ್ತಾನೆ. ಕಂದರ್ಪ ಸಿಂಹವನ್ನು ಕೊಂದು ಕುಸುಮಾವಳಿಯನ್ನು ಕಾಣದೆ ಕಪಿಲ ಋಷಿಗಳ ಆಶ್ರಮಕ್ಕೆ ಬರುತ್ತಾನೆ. ಋಷಿಯ ಅನುಗ್ರಹದಿಂದ ಕುಸುಮಾವಳಿ ಮತ್ತೆ ಜೀವ ಪಡೆಯುತ್ತಾಳೆ. ಕುಸುಮಾವಳಿ ಕಂದರ್ಪರ ಸಮಾಗಮವಾಗುತ್ತದೆ. ಇಬ್ಬರ ತಾಯಿತಂದೆಯರು ಆಶ್ರಮಕ್ಕೆ ಆಗಮಿಸುತ್ತಾರೆ. ಅಲ್ಲಿಗೆ ಗ್ರಂಥ ಮುಗಿಯುತ್ತದೆ. ಈ ಕಾವ್ಯದಲ್ಲಿ ಶೃಂಗಾರಕ್ಕೆ ವಿಶೇಷ ಸ್ಥಾನಕ್ಕೆ ಎಂಬುದು ಸ್ಪಷ್ಟವಾಗಿದೆ. ಇದೊಂದು ಸುಂದರ ಪ್ರೇಮಾಖ್ಯಾನ.

'ರಸಿಕ ಮನೋರಂಜನ ವಿಲಾಸ' ಸುಂದರ ಶೃಂಗಾರ ಪ್ರೇಮಾಖ್ಯಾನಗಳಲ್ಲೊಂದು. ಅದರ ಕರ್ತೃ ಕ್ರಿ. ಶ. ೧೯೯೦ರಲ್ಲಿದ್ದ ವೀರಶೈವ ಕವಿ ಕುಂಡಲಗಿರಿ. ಇದು ಹನ್ನೊಂದು ಆಶ್ವಾಸಗಳ ಚಂಪೂ ಕಾವ್ಯ. ಕವಿ ಈ ಪ್ರೇಮಕಥೆಗೆ ಪೌರಾಣಿಕ ಸ್ವರೂಪವನ್ನು ಕೊಟ್ಟಿದ್ದಾನೆ. ಈ ಕಥೆ ಶಿವ ಪಾರ್ವತಿಗೆ ಹೇಳಿದಂತಿದೆ.

ಓರ್ವ ವೇಶ್ಯೆ ಜನರನ್ನು ಆಕರ್ಷಿಸುವ ಉದ್ದೇಶದಿಂದ ಶಿವರಾತ್ರಿಯ ದಿನ ಕಾಳಿಯ ರತ್ನೇಶ್ವರ ದೇವಾಲಯದಲ್ಲಿ ಹಾವಭಾವ ವಿಲಾಸ ವಿಭ್ರಮಗಳಿಂದ ಹಾಡುತ್ತಾಳೆ. ಅವಳ ಗಾನವನ್ನೇ ಸೇವೆ ಎಂದು ತಿಳಿದ ಶಿವ ಸಂಪ್ರೀತನಾಗಿ ಅವಳಿಗೆ ಸದ್ಗತಿ ನೀಡುತ್ತಾನೆ. ರತ್ನೇಶ್ವರನ ಅನುಗ್ರಹದಿಂದ ವೇಶ್ಯೆ ತನ್ನ ಕೇಳು ಜನ್ಮವನ್ನು ಕಳೆದು ಮುಂದಿನ ಜನ್ಮದಲ್ಲಿ ರಾಜಕುಮಾರಿಯಾಗಿ ಜನಿಸುತ್ತಾಳೆ. ಆ ರಾಜಕುಮಾರಿ ರತ್ನಾವಳಿಯ ಶೃಂಗಾರ ಕಥೆ ಮುಂದುವರಿಯುತ್ತದೆ.

ಶ್ರೀ ವಿಲಾಸಪುರದ ರಾಜ ವಸುಭೂತಿಗೆ ಕಾತಿಯ ರತ್ನೇಶ್ವರನಅನುಗ್ರಹದಿಂದ ರತ್ನಾವಳಿ ಎಂಬ ಮಗಳು ಜನಿಸುತ್ತಾಳೆ. ಶತಲೇಖೆ, ಚಿತ್ರಲೇಖೆ ಮತ್ತು ಅನಂಗಲೇಖೆ ಅವಳ ಗೆಳತಿಯರು. ಒಂದ ರಾತ್ರಿ ರತ್ನಾವಳಿ ಕನಸಿನಲ್ಲಿ ಓರ್ವ ರಾಜಕುಮಾರನನ್ನು ಕಂಡು ಅವನಲ್ಲಿ ಮೋಹಗೊಳ್ಳುತ್ತಾಳೆ. ವಿರಹ ದೇವನೆಯಿಂದ ಬೆಂದು ಅವನನ್ನು ಹುಡುಕಿಕೊಂಡು ಬರುವಂತೆ ದೂತರನ್ನು ಕಳುಹಿಸುತ್ತಾಳೆ. ಹುಡುಕಿದಾಗ ಅವನು ಪತ್ನೀಯಾಗಿವುದಿಲ್ಲ. ಅವಳ ಸಖಿ ಚಿತ್ರಲೇಖೆ ಮೂರು ಲೋಕದ ಸುಂದರ ಯುವಕರ ಚಿತ್ರಪಟಗಳನ್ನು ಬರೆದು ತೋರಿಸುತ್ತಾಳೆ. ಅದರಿಂದ ತಾನು ಮೋಹಗೊಂಡಿರುವುದು ನಾಗಲೋಕದ ಶಂಖಚೂಡನ ಮಗ ರತ್ನಚೂಡನನ್ನು ಎಂದು ರತ್ನಾವಳಿಗೆ ಅರಿವಾಗುತ್ತದೆ. ಅವಳು ಸಖಿಯರ ಸಂಗಡ ಅವನನ್ನು ಅರಸುತ್ತಾ ಹೊರಡುತ್ತಾಳೆ. ನಾಗಲೋಕವನ್ನು ತಲುಪುತ್ತಾಳೆ. ಅಲ್ಲಿಯ ರಾಕ್ಷಸ ಅವಳನ್ನು ಹಿಡಿದುಕೊಳ್ಳುತ್ತಾನೆ. ರಾಕ್ಷಸನಿಂದ ತೊಂದರೆಗೊಳಗಾದ ರಮಣಿಯರ ರೋದನ, ಆರ್ತನಾದ ಸಮೀಪದಲ್ಲಿ ಮಲಗಿದ್ದ ರತ್ನಚೂಡನಿಗೆ ಕೇಳಿಸುತ್ತದೆ. ಆ ಮೊದಲೇ ರತ್ನಚೂಡ ಕನಸಿನಲ್ಲಿ ರತ್ನಾವಳಿಯನ್ನು ಕಂಡು ವಿರಹವೇದನೆಯಲ್ಲಿ ನರಳುತ್ತಿರುತ್ತಾನೆ. ಅವನು ಮಧ್ಯ ಪ್ರವೇಶಿಸಿ ರಾಕ್ಷಸ ಸುಬಾಹುವನ್ನು ಕೊಂದು ರತ್ನಾವಳಿಯನ್ನು ಪಾರು ಮಾಡುತ್ತಾನೆ. ಮುಂದೆ ರತ್ನಾವಳಿ ಮತ್ತು ರತ್ನಚೂಡರ ವಿವಾಹ ವೈಭವದಿಂದ ನೆರವೇರುತ್ತದೆ.

ಕಥಾವಸ್ತು ಹಿರಿದಾದುದೇನಲ್ಲ. ಕವಿ ಕುಂಡಲಗಿರಿ ವರ್ಣನೆಗೆ ವಿಶೇಷ ಗಮನ ಕೊಟ್ಟಿದ್ದಾನೆ. ಕೆಲವೆಡೆ ಪಾಂಡಿತ್ಯ ಪ್ರದರ್ಶನ ಮಿತಿಮೀರಿದೆ. ಕವಿ ತನ್ನ ಕಾವ್ಯ 'ಶೃಂಗಾರಸಾರ' ಎಂದು ಹೇಳಿಕೊಳ್ಳುತ್ತಾನೆ. ಶೃಂಗಾರ ನಿರೂಪಣೆ ಶ್ರೇಷ್ಠ ಮಟ್ಟದಲ್ಲಿದೆ ಎಂದು ಹೇಳಲಾಗುವಂತಿಲ್ಲ.

ಕನ್ನಡ ಸಾಹಿತ್ಯದಲ್ಲಿ ಅನೇಕ ಪ್ರೇಮಾಖ್ಯಾನಗಳಿವೆ. ಹಲವಾರು ಕಾವ್ಯಗಳಿಗೆ ಪ್ರೇಮ, ಶೃಂಗಾರಗಳೇ ಪ್ರಧಾನ ಸತ್ವಗಳಾದರೂ ಅವುಗಳು ಉನ್ನತ ಸ್ಥಾನದಲ್ಲಿಲ್ಲ. ಪ್ರೇಮಕಥೆಗಳಿಗೆ ಕೊರತೆ, ಸುಂದರ ಪ್ರೇಮ ಕಥೆಗಳು ಇಲ್ಲ ಎಂದು ಹೇಳುವಂತಿಲ್ಲ. ಸುಂದರ ಶೃಂಗಾರ ಕಾವ್ಯಗಳಿಗೆ ನಾಗವರ್ಮನ "ಕಾದಂಬರಿ", ನೇಮಿಚಂದ್ರನ "ಲೀಲಾವತಿ", ಅಂಡಯ್ಯನ 'ಕಬ್ಬಿಗರ ಕಾವ್", ರತ್ನಾಕರನ "ಭರತೇಶ ವೈಭವ" ಕನಕದಾಸರ "ನೋಹಪ ತರಂಗಿಣಿ" ಗಳನ್ನು ಇಲ್ಲಿ ಹೆಮ್ಮೆಯಿಂದ ಉದಾಹರಿಸಬಹುದು—ಸ್ಮರಿಸಬಹುದು.

ಶ್ರೀ ಪುರುಷರಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾಫಿಕ್)



ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಔಷಧಿ
ಪಾರಂಪರಿಕ ಆಯುರ್ವೇದ ಔಷಧಿ ಮತ್ತು ಕಲ್ಪ ಶೈಲಿಯ ಸಂಯೋಗದಿಂದ, ಇಷ್ಟಾಗಿ ಇರಲಿಂದ

SHANKAR PHARMACY
BHADRAVATI.(MYSORE)

ಹಲ್ಲುಗಳ ಸೌಂದರ್ಯ ಮತ್ತು ಆರೋಗ್ಯ

(ಎಳನೀ ಪುಟದಿಂದ)

ಳನ್ನು ಬ್ರಶ್ ಮಾಡುವ ಪದ್ಧತಿಯನ್ನು ಕೈಗೊಳ್ಳುವುದು ಹಲ್ಲುಗಳನ್ನು ಕೊಳೆಯುದಂತೆ ಮಾಡುವ ಸರ್ವಕ್ರೇಷ್ಠ ಸಾಧನ. ಹಲ್ಲುಗಳನ್ನು ಸ್ವಚ್ಛವಾಗಿಡುವುದು ಮತ್ತು ಆಹಾರಾಂಶವನ್ನು ಹಲ್ಲುಸಂದಿಯಿಂದ ತೆಗೆದು ಬಿಡುವುದು ಬ್ರಶ್ ಮಾಡುವುದರ ಉದ್ದೇಶ.

ಬ್ರಶ್ ಮಾಡುವ ಸರಳ ವಿಧಾನ ಹೀಗಿದೆ. ಬೇರೆ ಬೇರೆಯಾಗಿ ವಸಡುಗಳ ಮೇಲೆ ಸ್ವಲ್ಪಸ್ವಲ್ಪ ಬ್ರಶ್ ಮಾಡಿರಿ. ಮೇಲಿನ ಹಲ್ಲುಗಳನ್ನು ಮೇಲಿಂದ ಕೆಳಕ್ಕೂ, ಕೆಳಗಿನ ಹಲ್ಲನ್ನು ಕೆಳಗಿಂದ ಮೇಲಕ್ಕೂ ಬ್ರಶ್ ಮಾಡಿರಿ. ಜಗಿಯುವ ಹಲ್ಲುಗಳ ಮೇಲ್ಭಾಗವನ್ನು ತಿಕ್ಕಿ ತಿಕ್ಕಿ ಸ್ವಚ್ಛಗೊಳಿಸಿರಿ.

ಇಷ್ಟೊಂದು ಜಾಗರೂಕರಾಗಿದ್ದೂ, ಒಮ್ಮೊಮ್ಮೆ ಹಲ್ಲುಗಳಿಗೆ ಊಹಿಸದೆಯೆಂದು ರೋಗವು ತಗಲುವ ಸಂಭವವಿದೆ. ಅದುದರಿಂದ ಹಲ್ಲುಗಳನ್ನು ಆಗಾಗ್ಗೆ ಫಿಯುಮಿ ತರೂಪದಲ್ಲಿ ದಂತ ಚಿಕಿತ್ಸಕರಿಗೆ ತೋರಿಸುವುದೊಳ್ಳೆಯದು. ಅವರು ತೂತಾದ ಹಲ್ಲಿನಿಂದ ಕೊಳೆತ ಭಾಗವನ್ನು ಬೇರ್ಪಡಿಸಿ, ತೂತನ್ನು ತುಂಬಿಸಿ ಬಿಡುವರು. ಪ್ರಾರಂಭಿಕ ಸ್ಥಿತಿಯಲ್ಲೇ—ಅಂದರೆ ಹಲ್ಲು ನೋವಾಗುವ ಮೊದಲೇ ತೂತು ಮುಚ್ಚಿಸಿಕೊಳ್ಳುವುದು ಉತ್ತಮ. ಅನಂತರವಾದರೆ ಹೆಚ್ಚಿನ ನೋವನ್ನು ಅನುಭವಿಸ ಬೇಕಾಗುವುದು.

ಪಾಯೋರಿಯಾ:—ಇದು ವಸಡುದಳಿಗೆ ಹಲ್ಲುಗಳ ನಾಲ್ಕೂಕಡೆಗಳಲ್ಲಿರುವ ಸಹಾಯಕ ಎಲುಬುಗಳಿಗೆ ತಗಲುವ ರೋಗ. ಇದು ಒಂದಲ್ಲ ಒಂದು ಕಾರಣದಿಂದ, ಅಧಿಕಸಂಖ್ಯಾಕರನ್ನು ತನ್ನ ದುಷ್ಪ್ರಭಾವಕ್ಕೆ ಒಳಗಾಗಿಸುವುದು. ಆದರೆ, ಹೆಚ್ಚಿನ ಜನರು ಮೊದಮೊದಲು ಈ ರೋಗದ ಕಡೆಗೆ ವಿಶೇಷ ಗಮನವನ್ನು ಕೊಡುವುದಿಲ್ಲ. ಈ ರೋಗದ ಉಪಚಾರವನ್ನು ಪ್ರಾರಂಭದಲ್ಲೇ ಮಾಡಿರದಿದ್ದರೆ, ಮನುಷ್ಯನು ಹಲ್ಲುಗಳನ್ನೇ ಕಳಕೊಳ್ಳುವಂತಹ ಪರಿಸ್ಥಿತಿಯೊದಗಬಹುದು. ಇದರಿಂದ ನಮ್ಮದೇ ಜಠರೋದ್ಗಕ್ಕೂ ವಿಶೇಷ ಹಾನಿಯುಂಟಾದಬಹುದು. ಪೋಷಕ ಆಹಾರ ಸಾಮಗ್ರಿಗಳ, ಹಾಗೂ ಮುಖದ ಆರೋಗ್ಯ ವಿಚ್ಛಾನದ, ತಿಳುವಳಿಕೆಯ ಅಭಾವದಿಂದಲೇ ಭಾರತದ ಜನಗಣಾಮಾನ್ಯರಲ್ಲಿ ಈ ರೋಗವು ಹೆಚ್ಚಾಗಿ ಹಂಡಿಕೊಂಡಿದೆ.

ಪಾಯೋರಿಯಾದ ಸಾಮಾನ್ಯ ಲಕ್ಷಣಗಳು:-ಇವು ಮೂರು: 1) ಬ್ರಶ್ ಮಾಡುವಾಗ ಹಲ್ಲುಗಳಿಂದ ನೆತ್ತರು ಇಳಿಯುವುದು. 2) ವಸಡುಗಳು ಹಲ್ಲುಗಳಿಂದ ಬೇರ್ಪಡುವುದು. ಮತ್ತು 3) ಹಲ್ಲುಗಳು ಅಲ್ಲಾಡುವುದು ಹಾಗೂ ಒಂದನ್ನೊಂದು ಪ್ರತ್ಯೇಕಿಸುವುದು.

ಪಾಯೋರಿಯಾ ಉಂಟಾಗುವ ಕಾರಣಗಳು: ಹಲ್ಲುಗಳೆಡೆಯಲ್ಲಿ ಸಂಗ್ರಹವಾಗುವ ದಂತಮಲದಂತಹ ಕೊಳೆಯೇ ಪಾಯೋರಿಯಾ ಉಂಟಾಗಲು ಮುಖ್ಯಕಾರಣವಾಗಿದೆ. ವಸಡು ಹಲ್ಲನ್ನು ಬಿಗಿಹಿಡಿದಿರುವ ಆ ಭಾಗದಲ್ಲಿ ಅಂದರೆ ಹಲ್ಲುಗಳ ಕಾಣುವ ಅಂತದ ತೀರಾ ಕೆಳಗೆ ಪಲ ತಮಲವು ಸಂಗ್ರಹವಾಗುತ್ತದೆ. ಅದನ್ನು ಆಗಲೇ ಹೊರಗೆ ಹಾಕದಿದ್ದರೆ ಅದು ವಸಡುಗಳ ಒಳಕ್ಕೆ, ಹಲ್ಲುಗಳ ಬೇರಿನ ತನಕವೂ ಇಳಿದು ಬಿಡುತ್ತದೆ. ಕೆಳಗಿಳಿದ ದಂತಮಲವನ್ನು ಬ್ರಶ್ಶಿಂದಬೇರ್ಪಡಿಸಲಸಾಧ್ಯ. ಆದರೆ ದಂತ ವೈದ್ಯರು ತಮ್ಮ ವಿಶಿಷ್ಟ ಉಪಕರಣಗಳ ನೆರವಿನಿಂದ ಅದನ್ನು ಹೊರಗೆ ತೆಗೆದು ಹಾಕಬಲ್ಲರು. ಬೇಸದೊಳಗೆ ಮಧುಮೇಹದಂತಹ ರೋಗಗಳಿದ್ದರೆ ಅ ಕಾರಣದಿಂದಲೂ ಪಾಯೋರಿಯೂ ಉಂಟಾಗುತ್ತದೆ. ಅಂಥ ಸ್ಥಿತಿಯಲ್ಲಿ ಹಲ್ಲುಗಳನ್ನು ಬಿಗಿಹಿಡಿದಿರುವ ಸಹಾಯಕ ಎಲುಬು ಕರಗಿದಂತೆ ಭಾಸವಾಗುತ್ತದೆ. ಹಲ್ಲುಗಳು ಅಲ್ಲಾಡತೊಡಗುತ್ತವೆ.

ಪಾಯೋರಿಯಾ ಚಿಕಿತ್ಸೆ:— ಪ್ರಾರಂಭಿಕ ಸ್ಥಿತಿಯಲ್ಲಿ ಈ ರೋಗವನ್ನು ಸಂಪೂರ್ಣ ತಡೆಗಟ್ಟಬಹುದು. ಪಾಯೋರಿಯಾ ರೋಗಿಯು ಹಲ್ಲುಗಳನ್ನು ಕೀಳಿಸುವುದು ಉತ್ತಮವೆಂದು ಹೇಳುವುದು ಸರ್ವಥಾ ಸರಿಯಲ್ಲ. ಅನ್ಯ ರೋಗದಳ ಚಿಕಿತ್ಸಾ ವಿಧಾನದಂತೆ ಈ ರೋಗಕ್ಕೂ ಮೂಲ ಕಾರಣವನ್ನು ಕಂಡುಹಿಡುಕಿ, ಅದನ್ನೇ ಮೊದಲು ದೂರಗೊಳಿಸಬೇಕು. ಅನುಭವೀ ದಂತ ವೈದ್ಯರು ನಿಯಮಿತ ಸಮಯದಲ್ಲಿ ದಂತಮಲವನ್ನು ಹಲ್ಲುಗಳಿಂದ ಬೇರ್ಪಡಿಸಿ ಹಲ್ಲುಗಳನ್ನು ಪಾಲಿಷ್ ಮಾಡಿ, ಬೇರಾಕ ಕೊಳೆಯೂ ಹಲ್ಲುಗಳಲ್ಲಿ ಇಮೆಯಾಗದಂತೆ ಉಪಯುಕ್ತ ಸಲಹೆಗಳನ್ನೂ ಕೀಡಬಲ್ಲರು.

ರೋಗಿಯು ಮುಖ್ಯವಾಗಿ ಬ್ರಶ್ ಮಾಡುವ ವಿಧಾನವನ್ನು ಮೊದಲು ಕಲಿಯಬೇಕು. ಮತ್ತು ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳಬೇಕು. ಬೇರೆ ಯಾವುದಾದರೂ ಶಾರೀರಿಕ ಅವ್ಯವಸ್ಥೆಯಿಂದ ಪಾಯೋರಿಯೂ ರೋಗ ಉಂಟಾದ ಸಂದರ್ಭದಲ್ಲಿ ಅದರ ಮೂಲ ಕಾರಣ ಹುಡುಕುವುದರ ಬಗ್ಗೆ ರೋಗಿಯು ಒಮ್ಮೆ ತನ್ನ ಸಮಸ್ತ ಶರೀರವನ್ನು ಸಂಪೂರ್ಣ ಪರೀಕ್ಷೆಗೆ ಒಳಗಾಗಿಸುವುದು ಒಳ್ಳೆಯದು. ಅನಂತರ ಪಾಯೋರಿಯೂ ರೋಗವನ್ನು ದೂರಗೊಳಿಸಲು ತುಂಬ ಸುಲಭವಾಗುವುದು.

ಕೆಲವು ಹಾನಿಕಾರಕ ಅಭ್ಯಾಸ (ಚಟ) ಗಳು—ಸಿಟ ಮತ್ತು ದವಡೆಯ ಒಳಭಾಗವನ್ನು ಕಚ್ಚುವುದು, ಹೆಬ್ಬೆರಳು ಅಥವಾ ಯಾವುದೇ ಬೆರಳನ್ನು ಚೀಪುವುದು, ಬಾಯಿಯಿಂದ ಉಸಿರುಬಿಡುವುದು, ತಪ್ಪು ಕ್ರಮದಲ್ಲಿ ಫಿದ್ರಿಸುವುದು—ಇವೆಲ್ಲ ಹಲ್ಲುಗಳ ಆರೋಗ್ಯಕ್ಕೆ ಹಾನಿಕಾರಕವಾಗಿವೆ. ಈ ದುರ್ಭ್ಯಾಸಗಳು ಬಾಯಿಯನ್ನು ಸರಿಯಾಗಿ ಮುಚ್ಚಲು ಅಡ್ಡಿಪಡಿಸುತ್ತವೆ. ಇವುದಳ ಪರಿಣಾಮವಾಗಿ ಹಲ್ಲುಗಳು ವಕ್ರ (ಡೊರೆ)ವಾಗುವ ಸಾಧ್ಯತೆಯೂ ಇದೆ.

ಮಗುವಿನ ಮುಖಕ್ಕೆ ಆಘಾತ—ಎಂದಾದರೊಮ್ಮೆ ಮಗುವು ಕಳಕ್ಕೆ ಬಿದ್ದು, ಅದರ ಚಿಬುಕವು ಜಜ್ಜಿದಂತಾದರೆ, ಮಗುವನ್ನು ಓರ್ವ ಸಮರ್ಥ ದಂತ ಚಿಕಿತ್ಸಕರಿಗೆ ತೋರಿಸಿ, ಅದರ ದವಡೆಗಳನ್ನು ಚೆನ್ನಾಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಇಲ್ಲವಾದರೆ ಇಂತಹ ಅಘಾತದಳಿಂದ ಮಗುವಿನ ದವಡೆಗಳ ಮೇಲೆ ದುಷ್ಪರಿಣಾಮವುಂಟಾಗಿ, ಕೆಲವು ಸಮಯದ ನಂತರ ಮಗುವಿಗೆ ಬಾಯಿ ತೆರೆಯಲು, ಮುಚ್ಚಲು ಕಷ್ಟವಾಗಬಹುದು.

ಹಲ್ಲುಗಳ ಆರೋಗ್ಯಕ್ಕೆ ಪೌಷ್ಟಿಕ ಆಹಾರದೊಡನೆ ಸಂಬಂಧ—ಹಾಲು ಹಲ್ಲುಗಳು ಹುಟ್ಟುವ ಸಮಯ (ಮಗು ಆಗಿನಿ ಐದು ತಿಂಗಳಿಂದ ಎಂಟು ವರ್ಷ ಪ್ರಾಯದ ವರೆಗೆ) ಹಲ್ಲುಗಳ ರಚನೆಯನ್ನು ಬಲಪಡಿಸಲು ಕ್ಯಾಲ್ಸಿಯಮ್, ಫೋಸ್ಫೇರಸ್, ಮತ್ತು ವಿಟಮಿನ್ನುಗಳು ಸಾಕಷ್ಟು ಪ್ರಮಾಣದಲ್ಲಿ ಬೇಕಾಗುತ್ತವೆ. ಹೀಗೆ ಕ್ಯಾಲ್ಸಿಯಮ್ ಇತ್ಯಾದಿ ಸರಿಯಾಗಿ ದೊರಕಿಸಿಕೊಂಡ ನಂತರವೇ ಹಲ್ಲುಗಳು ಸರಿಯಾಗಿ ಬೆಳೆದು, ಮುಖವನ್ನು ಸುಂದರವಾಗಿ ಮಾರ್ಪಡಿಸುವುವು. ಶರೀರದ ಅನ್ಯಭಾಗಗಳ ಬೆಳವಣಿಗೆಗೆ ಪ್ರಮಾಣಬದ್ಧವಾಗಿರುವ ಶುದ್ಧ ಆಹಾರವು ಜೀವನ ಪರ್ಯಂತವೂ ಆವಶ್ಯಕವಾಗಿರುವಂತೆ ವಸಡುಗಳ ಹಾಗೂ ದವಡೆ ಹಲ್ಲುಗಳ ಸ್ವಾಸ್ಥ್ಯಕ್ಕೂ ಆವಶ್ಯಕವಾಗಿದೆ. ಸಾಮಾನ್ಯವಾಗಿ ಶಾರೀರಿಕ ಆರೋಗ್ಯಕ್ಕೆ ಲಾಭದಾಯಕವಾಗಿರುವ ಆಹಾರವೇ ಹಲ್ಲುಗಳಿಗೆ ಶಕ್ತಿವರ್ಧಕವಾಗಿದೆ.

ದಂತರೋಗಗಳನ್ನು ತಡೆಗಟ್ಟುವ ಕ್ರಮ:—ರೋಗಕ್ಕೆ ಚಿಕಿತ್ಸೆ ಮಾಡಿಸುವುದಕ್ಕಿಂತ, ರೋಗವನ್ನು ಬಾರದಂತೆ ಪ್ರತಿಬಂಧಿಸುವುದೇ ಉತ್ತಮವೆಂದು ನಮ್ಮ ಪೂರ್ವಜರ ಒಂದು ಹಳೇ ಗಾದೆ ಇದೆ. ಹಲ್ಲುಗಳ ಮಟ್ಟಿಗೆ ಅದು ಸಂಪೂರ್ಣ ಫಲವಾಗಿದೆ. ಜೀವನ ಪರ್ಯಂತ ನಿಮ್ಮ ಹಲ್ಲುಗಳು ನಿಮ್ಮ ಸೇವೆಯನ್ನು ಮಾಡಬೇಕಾದರೆ, ನೀವು ಅವುಗಳ ಸೇವೆಯನ್ನು ಅದೇ ರೀತಿ ಮನಃಪೂರ್ವಕವಾಗಿ ಮಾಡಲೇ ಬೇಕಾಗುವುದು. ನೆನಪಿರಲಿ: ಪ್ರಕೃತಿದತ್ತವಾಗಿರುವ ಹಲ್ಲುಗಳು ಕೃತಕ ಹಲ್ಲುಗಳಿಗಿಂತಚೆನ್ನಾಗಿ ಮತ್ತು ಅಧಿಕವಾಗಿ ಸೇವೆಸಲ್ಲಿಸಬಲ್ಲವು. ಇವುದಳ ಮೂಲಕ ನೀವು ಸುಲಭವಾಗಿ ಜಗಿಯಬಲ್ಲಿರಿ. ಮಾತಾಡಬಲ್ಲಿರಿ. ಮುಖ ಸೌಂದರ್ಯವನ್ನೂ ಆರೋಗ್ಯವನ್ನೂ ಸದಾ ರಕ್ಷಿಸಬಲ್ಲ. ಈ ಪ್ರಾಕೃತಿಕ ಹಲ್ಲುಗಳು ಬಾಯೊಳಗೆ ಆರಾಮವಾಗಿದ್ದು, ನಿಮ್ಮ ಹಲವು ತರದ ಚಿಂತೆ, ಬೇಸರ ಇತ್ಯಾದಿ ಮಾನಸಿಕ ರೋಗಗಳನ್ನೂ ಹೊಡೆದೋಡಿಸಬಲ್ಲವು.

ಹಲ್ಲುಗಳ ಬಗ್ಗೆ ಎಚ್ಚರಗೇಡಿ ಮಾಡಿರುವವರು, ಅದಕ್ಕಾಗಿ ತುಂಬಾ ಬೆಲೆಯನ್ನು ತೆರಬೇಕಾಗುವುದು. ಹಲ್ಲುನೋವು, ಚಿಕಿತ್ಸೆಗಾಗಿ ಹೊಡೆದ ವೆಚ್ಚ, ಕೊನೆಗೆ ಹಲ್ಲುಗಳನ್ನೇ ಕಳಕೊಂಡು ಮುಖಸೌಂದರ್ಯವನ್ನೂ ಕಳೆದುಕೊಳ್ಳುವುದು, —ಅನಂತರ ಜೀವನವೇ ಭಾರವೆನ್ನಿಸಿದರೆ ಅದರಲ್ಲಿ ಆಶ್ಚರ್ಯಪಡಬೇಕಾದ್ದೇನಿಲ್ಲ.

ಈ ಕೆಳಗೆ ಕೆಲವು ಸರಳ ಫಿಯುಮುಗಳನ್ನು ಸೂಚಿಸಲಾಗಿದೆ. ಅವುಗಳನ್ನು ಪಾಲಿಸಿ, ಹಲ್ಲುಗಳ ರಕ್ಷಣೆಯಲ್ಲಿ ಗಮನವಿಡದೆ ಇರುವುದುಂಟಾಗ ವಕಷ್ಟ—ನಷ್ಟದಳಿಂದ ದೂರವಾಗಿರಿ.

1) ರಾತ್ರಿ ಮಲಗುವುದಕ್ಕೆ ಮೊದಲು ಹಲ್ಲುಗಳನ್ನು ಕೊನೆಯ ಬಾರಿ ಬ್ರಶ್ ಮಾಡಿರಿ. ಅನಂತರ, ನಿನ್ನನ್ನು ತಿನ್ನಬೇತಿ. ಪ್ರಾತಃಕಾಲ ಎದ್ದೆಡನೆ ಹಲ್ಲುಗಳನ್ನು ಸ್ವಚ್ಛಗೊಳಿಸುವುದು ಎಷ್ಟು ಆವಶ್ಯಕವೋ! ರಾತ್ರಿ ನಿದ್ರಿಸುವುದಕ್ಕೆ ಮೊದಲೆರಡೆಯ್ಯೆ ಸ್ವಚ್ಛಗೊಳಿಸುವುದು ಅದಕ್ಕಿಂತ ಹೆಚ್ಚು ಆವಶ್ಯಕವಾಗಿದೆ.

2) ಆಹಾರವನ್ನು ಚೆನ್ನಾಗಿ ಜಗಿಯಿರಿ; ಸುಲಭವಾಗಿ ಜೀರ್ಣವಾಗುವುದು. ಮಲಬದ್ಧತೆಯೂ ಉಂಟಾಗುವುದಿಲ್ಲ

(3) ಗರ್ಭವತಿ ಸ್ತ್ರೀಯರು ವಿಶೇಷವಾಗಿ ಆಹಾರವನ್ನು ಪಯೋಗಿಸಿತಕ್ಕದ್ದು.

(4) ಬಾಲ್ಯಪ್ರಾಯದಲ್ಲಿ ಬೋರಲಾಗಿ (ಮುಖ ಕೆಳಗೆ ಮಾಡಿ) ಅಥವಾ ಮಗುಲಾಗಿ, ದವಡೆಗೆ ಕೈಹೂನಿಸಿಟ್ಟು ಮಲಗುವುದರಿಂದ, ದವಡೆಗಳ ಆಕಾರವೂ ಕೆಡುವುದು. ಬೆರಳು ಚೀಪುವುದರಿಂದಲೂ, ದವಡೆಗಳ ಆಕಾರವೂ ಸೌಂದರ್ಯವೂ ಕೆಡುವುದು. ಇದರಿಂದಲೂ, ಕೋರೆ ಹಲ್ಲುಗಳು ಹುಟ್ಟುವ ಸಂಭವವಿದೆ. ಆದುದರಿಂದ ಈ ದುರಭ್ಯಾಸಗಳನ್ನು ಬಾಲ್ಯದಲ್ಲೇ ದೂರಪಡಿಸಬೇಕು.

(5) ಹಲ್ಲು ತೂತುಬಿದ್ದಾಗ ಅಲಕ್ಷ್ಯ ಮಾಡಬೇಡಿರಿ. ಏಕೆಂದರೆ, ಕೊಳೆಗೆ ಇದರಿಂದ ಅಸಾಧ್ಯ ನೋವುಂಟಾಗುವುದು ಮಾತ್ರವಲ್ಲದೆ, ಹಲ್ಲೂ ಕೊಳೆತು ಹೋಗಬಹುದು. ಇದನ್ನು ಕೂಡಲೇ ಹಲ್ಲುಗಳ ಡಾಕ್ಟರರಿಗೆ ತೋರಿಸಿ, ತೂತು ಮುಚ್ಚಿಸಿಬಿಡಿರಿ.

(6) ಹಲ್ಲುಗಳಲ್ಲಿ ದಂತಮಲ ಅಥವಾ ಇನ್ನಿತರ ಕೊಳೆಯನ್ನು ಸಂಗ್ರಹವಾಗಲು ಬಿಡಬೇಡಿರಿ; ಇದು ಬೇರೆ ರೋಗಗಳನ್ನು ಆಹ್ವಾನಿಸಬಲ್ಲುದು.

(7) ಜೀವನ ಪರ್ಯಂತ ನಿಮ್ಮ ಹಲ್ಲುಗಳು ನಿನ್ನೊಡನೆ ಇರಬೇಕಾಗಿವೆಯೆಂಬುದನ್ನು ನೆನಪಿನಲ್ಲಿಡಿರಿ. ರೋಗಗ್ರಸ್ತ ಹಲ್ಲುಗಳೂ ಬೇರೆ ರೋಗಗಳಿಗೂ ಕಾರಣವಾಗಬಲ್ಲುದು. ಆದ್ದರಿಂದ ಇವುಗಳನ್ನು ಅಲಕ್ಷಿಸಬೇಡಿರಿ.

(8) ಹಲ್ಲು ನೋವಿನಿಂದ ನಿಮಗೆ ಬಾಧೆ ತಟ್ಟದಿರಬೇಕಾದರೆ, ಸಮಯ-ಸಮಯಕ್ಕೆ ನಿಮ್ಮ ಡಾಕ್ಟರರೊಡನೆ ಸಲಹೆ ಕೇಳುತ್ತ ಇರಿ.

(9) ಮಕ್ಕಳ ಹಲ್ಲುಗಳೂ ಅಷ್ಟೇ ಆವಶ್ಯಕವಾಗಿವೆ; ಎಂದರೆ ವರ್ಷ ಪ್ರಾಯದಿಂದಲೇ ಅವುಗಳನ್ನು ಹಲ್ಲುಗಳ ಡಾಕ್ಟರರಿಗೆ ತೋರಿಸಲು ಪ್ರಾರಂಭಿಸಿರಿ.

ಚೆನ್ನಾಗಿ ಗಮನಿಸಿರಿ: ಹಲ್ಲುಗಳ ಸೌಂದರ್ಯ ಮತ್ತು ಅವುಗಳ ಆರೋಗ್ಯದಲ್ಲಿಯೇ ನಿಮ್ಮ ಇತಿ ಜೀವನಮಾನದ ಸುಖ, ಶಾಂತಿ ಸೌಂದರ್ಯ ಮತ್ತು ವಿಶ್ರಾಂತಿ—ಇವುಗಳು ನೆಲಸಿಕೊಂಡಿವೆ.

॥ನವನ್ಯಾಯ ನ್ಯಾಯ॥

ಚೀನ—ವಾಕಸ್ಯಾದ ಗಳ ರಾಜಕೀಯ।
ವಿಸಿಯೊಳುಂಡದೊಳೆ ಬಳಕ ಗಣನೀಯ॥
ಅನುಕೂಲ ಪ್ರಣಯವಿತ್ತಂತದ ನೀಕ್ಷೆ।
ವನಕೆ ಹುಲಿಯದು, ರಕ್ಷೆ ಹುಲಿಗೆ ವನ
ರಕ್ಷೆ ॥೧॥

॥ರಾಜಕೀಯ ವಿಚಾರ॥

ರಾಜಕೀಯ ವಿಚಾರ ಸಂಕೀರ್ಣ ಸಭೆಗೆ।
ಹಾಜರೆಲ್ಲರು ಪ್ರಭೃತಿಗಳು
ಚರ್ಚೆಯೊಳಗೆ॥
ಅದ್ಭುತ ಗಳಿಗೆಗೆ ಬಂತು ಕೇಸರಿಬಾತು।
"ನಮ್ಮೊಳಗೆ ಕಹು ಬೇಡ"ವೆಂಬುದೇ
ಮಾತು॥೨॥

"ಕಶ್ಚಿತ್"

ಗೆದ್ದದ್ದು ಯಾರ ಓಟದಿಂದ ?

(ಸಾಲ್ಕನೇ ಸುಟದಿಂದ)

ಹಾಕಿಕೊಂಡರೆ, ಅಣ್ಣ ಸೋತುಹೋಗ್ತಾನೆ—ಇದು ಸಲ್ಲದೆಂದು ಯೋಚಿಸಿದ ಅವಳೂ—ಅಣ್ಣನಿಗೇನೇ ಮತದಾನ ಮಾಡಿದ...''

"ಛಲೆ....ಛಲೆ...."

"ತಾಯಿ ಮಾಮೂಲಿನಂತೆ ಕಿರೀ ಮಗನಿಗೇ ಮತಹಾಕಿದಳು. ಅಣ್ಣನಿಗೆ ಎರಡು, ತಮ್ಮನಿಗೆ ಒಂದು ಬಿತ್ತು. ಅಣ್ಣ ಗೆದ್ದ; ತಮ್ಮ ರೇಸಣಿ ಕಳೆದುಕೊಳ್ಳಲಿಲ್ಲ...''

'ಅಲ್ವೆ, ನಿನ್ನ ತಲೆ ಅಂದ್ರೆ ತಲೆ....'

'ಯಾಕೆ, ನಿಮ್ದು ತಲೆ ಅಲ್ವೆ?'

'ಏಯ್, ಇನ್ನು ನೋಡೋಕೆ ಸುತ್ತೆ ಹುಡ್ಕೊಂಡು ಬರಬೇಡಾಂದೆ....ಅಂತೂ ನಿನ್ನ ತಲೆ ಭಾರ ದೂರ ಓಡುತ್ತೆ....'

"ವಿ ಕ್ಷೆ ಎಂಥಾದ್ರಿ ಹಿಂದಿನಗಾಂದೆಗಳನ್ನು ಸುಳ್ಳು ಮಾಡೋಕೆಂದೇಗಾಳಿ ಸುದ್ದಿಗಳನ್ನ ಹರಡಿದ್ರೆ...'

"ಇದೇನೂ ಗಾಳಿ ಸುದ್ದಿ ಅಲ್ಲ. ಸತ್ಯ ಸುದ್ದಿ"

"ಹಾಗಾದ್ರೆ, ಯಾರು ಯಾರಿಗೆ ಮತ ಹಾಕಿದ್ರೂಂತ ಹೇಗೆ ಗೊತ್ತಾಯ್ತು? ಅದು ಹಾಗೆ ಆಗಬಹುದಾದ್ರೆ, ನಾನು ಹೇಳಿದ ಹಾಗು ಆಗಬಾರದೇನು?"

'ಹ್ಞೂಂ...ಆಯ್ತವ್ಮ. ಹೇಗಾದ್ರೆ ಏನಂತೆ? ಗೆದ್ದದ್ದು ಅಣ್ಣ ತಾನೆ?"

"ಅದ್ರೆ ತಾಯಿಯ ಓಟಿನಿಂದಲ್ಲ; ತಮ್ಮನ ಓಟಿನಿಂದ..."

"ಅಹನೊಬ್ಬ ಕಲಿಯುಗದ ಭರತ...."

"ಕಲಿಯುಗದ ರಾಮನಿಗೆ ಭರತ ಸಿಕ್ಕೇ ಸಿಗುತ್ತಾನೆ...."

"ಯಾರು ಬೇಡಾಂತಾರೆ?"

"ಬೇಡಾಂತಂದ್ರೆ ಕೇಳೋರು ಯಾರು?"

"ಏನೇ, ಭಾರ ದೂರುಗಟ್ಟಿ ನೋಡುತ್ತೀಯ?"

"ಏನೂ ಇಲ್ಲಾನ್ನಿ...ಹೀಗೆ?...."

"ಹ್ಞೂಂ...ತಿಳೀತು ಬಿಡು...."

"ಹ್ಞೂಂ....ಹ್ಞೂಂ...."

—ಗೋರಾ

ಶ್ರೀ ಎ. ರಾಮಣ್ಣನವರ ಉಮೇದ್ವಾರಿಕೆ

ಮೈಸೂರಿನ ವಿಜಯ ಪತ್ರಿಕೆಯ ಸಂಪಾದಕರೂ ಸಾರ್ವಜನಿಕ ಕಾರ್ಯಕರ್ತರೂ ಆದ ಶ್ರೀ ಎ. ರಾಮಣ್ಣನವರು ಮೈಸೂರು ವಿಧಾನ ಪರಿಷತ್ತಿಗೆ ಪದವೀಧರರ ಕಾರ್ಯಕ್ಷೇತ್ರದಿಂದ ಜನತಾ ಪಕ್ಷದ ಉಮೇದ್ವಾರರಾಗಿ ಸ್ಪರ್ಧಿಸಲಿದ್ದಾರೆಂದು ತಿಳಿದು ಬರುತ್ತದೆ.

ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ದೊಡ್ಡ ಪ್ರಮಾಣದ ಧನ ಸಹಾಯ

ತನ್ನ ಸೇವಾ-ಸೂತ್ರಕ್ಕನುಗುಣವಾಗಿ ಕೆನರಾ ಬ್ಯಾಂಕು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚಿನ ಸಹಾಯವನ್ನು ನೀಡಲು ಸದಾ ಪ್ರಯತ್ನ ಮಾಡಿಕೊಂಡು ಬಂದಿದೆ. ಏಕೆಂದರೆ, ಅವು ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ವಹಿಸುತ್ತಿರುವ ಪಾತ್ರದ ಮಹತ್ವವನ್ನು ಬ್ಯಾಂಕು ಚೆನ್ನಾಗಿ ತಿಳಿದುಕೊಂಡಿದೆ.
ಈಗಲೂ ಕೆನರಾ ಬ್ಯಾಂಕು 3000ಕ್ಕಿಂತಲೂ ಅಧಿಕ ಸಣ್ಣ ಉದ್ದಿಮೆಗಳಿಗೆ ರೂ. 11.5 ಕೋಟಿಗಿಂತಲೂ ಹೆಚ್ಚು ಧನಸಹಾಯ ಮಾಡುತ್ತಲಿದೆ ಮತ್ತು ಈ ಸಂಖ್ಯೆ ಒಂದೇ ಸಮನೆಯಾಗಿ ಹೆಚ್ಚಿಕೊಂಡು ಬರುತ್ತಿದೆ. ನೀವು ಸಣ್ಣ ಪ್ರಮಾಣದ ಉದ್ದಿಮೆದಾರರಾಗಿದ್ದರೆ, ನೀವು ಬಯಸುವ ಸಹಾಯ ಸಣ್ಣದಿರಲಿ ಅಥವಾ ದೊಡ್ಡದಿರಲಿ, ನಿಮ್ಮ ಸಮೀಪದ, ಕೆನರಾ ಬ್ಯಾಂಕಿನ ಶಾಖೆಯನ್ನು ಸಂದರ್ಶಿಸಿರಿ.
ನಿಮ್ಮ ಅಭಿವೃದ್ಧಿಯನ್ನು ಕಾಣಲು, ನಿಮ್ಮ ಯಶಸ್ಸಿನಲ್ಲಿ ಭಾಗ ವಹಿಸಲು, ಕೆನರಾ ಬ್ಯಾಂಕು ಯಾವಾಗಲೂ ಬಯಸುತ್ತದೆ.

ಕೆನರಾ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಲೈಟ್‌ಹೌಸ್ ಹಿಲ್, ಮಂಗಳೂರು-1,
ಆಡಳಿತ ಆಫೀಸ್: 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು-2.

141 ಕೋಟಿಗೂ ಮಿಕ್ಕಿದ ಸಂಪನ್ಮೂಲಗಳು — 245ಕ್ಕಿಂತಲೂ ಹೆಚ್ಚು ಶಾಖೆಗಳು — ಎಗತ್ತಿನಾದ್ಯಂತ ಪ್ರತಿನಿಧಿಗಳು

SISTA'S-CB-32 KAN

ಹಣ್ಣೆಲೆ ಉದುರುವಾಗ ಹಸುರೆಲೆ ನಕ್ಕಿತು

(ಎರಡನೇ ಪುಟ ನೋಡಿರಿ)

ಯೆಂಬುದು ತಿಳಿದುದೂ ಆಕೆಗೆ ಆ ಮೇಲೆಯೇ. ಆ ಗೋಳಿನ ಕತೆಯನ್ನು ಕೇಳಿದಾಗ ಆಕೆಯ ಶ್ರೀಮಂತಿಕೆಯ ವೈಭವದ ಜೀವನದ ಆಸೆಯೆಲ್ಲವೂ ಗಾಳಿಗೋಪುರವೆಂದು ತಿಳಿದಾಗ ಬಡತನದ ಜೀವನದ ಆತ್ಮೆಯ ಬಗ್ಗೆ ಕರುಣೆಯ ಬದಲು ಕರೋರತೆ ಬೆಳೆಯಿತು. ಆಕೆ ಆತ್ಮೆಯ ಮನೆಯನ್ನೇ, ದ್ವೇಷ, ತಿರಸ್ಕಾರಗಳಿಂದ ನೋಡಿದಳಲ್ಲದೆ ಪತಿಗೆ ಆ ಯೋಚನೆ ಬಾರದಷ್ಟು ಜಾಗ್ರತೆ ವಹಿಸಿದಳು. ತನ್ನ ಬೆಡಗು ಬಿನ್ನಾಣಗಳಿಂದ ದಿನಕ್ಕೊಂದು ರೀತಿಯ ನವೀನ ಅಲಂಕಾರದಿಂದ ರೂಪ ಯೌವನಗಳಿಂದ ಮಾಧವನನ್ನು ಮರುಳುಗೊಳಿಸಿ ಮೋಹಪಾಶದಿಂದ ಬಿಗಿದು ಬಂಧಿಸಿದಳು. ಮಾಧವನಾದರೋ ಆ ಬಂಧನದಲ್ಲಿ ತನ್ನಿರವನ್ನೇ ಮರೆತು ಆಕೆಯ ಸುಖಸಂತೋಷವೊಂದೇ ಜೀವನದ ಗುರಿ ಎಂದು ಆಕೆಯ ಬಯಕೆಗಳೆಲ್ಲವನ್ನೂ ಪೂರೈಸಲಿಕ್ಕಾಗಿ ಸಿಕ್ಕಿದಷ್ಟು ಕಡೆ ಸಾಲ ಮಾಡಿ ತೀರಿಸಲಿಕ್ಕಾಗದಾಗಲೂ ಬೇಕರಗೆಳ್ಳದೆ ಮಡದಿಯ ಮುಖವೊಲಿಸುತ್ತಿದ್ದ. ಕತೆಯಂತಹ ಮಡದಿ ಫಟಿಸುಂತೆ ಸಿಂಗರಿಸಿಕೊಂಡು ಪಕ್ಕದಲ್ಲಿ ಫಡೆಯುತ್ತಿದ್ದಾಗ ಎಷ್ಟೊಂದು ಜತೆ ಕಣ್ಣುಗಳು ತಮ್ಮನ್ನೇ ದಿಟ್ಟಿಸುತ್ತಿವೆ ಎಂಬುದರಿಂದ ಮಾಧವನಿಗೆ ತುಂಬ ಅಭಿಮಾನವೆನಿಸುತಿತ್ತು.

"ಗುಮಾಸ್ತನ ಮಡದಿ ಅಪ್ಸರೆಯಂತಿದ್ದಾಳೆ." ಎಂದು ಎಷ್ಟೋ ಮೆಚ್ಚುಗೆಯ ನುಡಿಗಳು ಮಾಧವನಿಗೆ ಕೇಳಿಸಿದಾಗ ಮಾಧವ ಹೆಮ್ಮೆಯಿಂದ ಉಬ್ಬಿಬಿಡುತ್ತಿದ್ದ. ಕೆಲವರು ಮತ್ಸರದಿಂದ ನೋಡುತ್ತಿದ್ದರೆ ಇನ್ನು ಕೆಲವು ಆಶ್ಚರ್ಯದಿಂದ ಅಭಿಮಾನದಿಂದ ನೋಡುತ್ತಿದ್ದರು. ಆದ ಮಾಧವ ಇಂತಹ ಹೆಣ್ಣನ್ನು ಕೈಹಿಡಿದ ತಾನೇ ಭಾಗ್ಯವಂತ ಎಂದು ಅಭಿಮಾನ ಹೆಮ್ಮೆ ಪಟ್ಟುಕೊಂಡರೆ ಆಶ್ಚರ್ಯವೇನು? ಎಂದ ಬೇರೆ ಅಂತಹ ಅಪರೂಪದ ಸುಂದರಿ ಅಲಂಕಾರ ಸಾಧನಗಳಿಗಾಗಿ ಹಂಬಲಿಸುವಾಗ ಅದನ್ನು ಇಲ್ಲ ಎನ್ನುವ ಕಠೋರತೆ ಹೇಗೆ ಬಂದೀತು? ಆದರೆ ತಂದುಕೊಡುವ ಸೌಭಾಗ್ಯತನಗಿಲ್ಲವಾಯಿತಲ್ಲ ಎಂದು ಎಷ್ಟೋ ಬಾರಿ ಪಶ್ಚಾತ್ತಾಪಪಟ್ಟುಕೊಳ್ಳುತ್ತಿದ್ದ. ಇಂತಹ ಸುಂದರ ಸುಖದಾಂಪತ್ಯದ ಫಲವಾಗಿ ಗಂಡು ಮಗುವಿನ ತಾಯಿಯಾಗಿ ರೂಪಾ ಮಾಧವನ ಆನಂದವನ್ನು ಇಮ್ಮಡಿಗೊಳಿಸಿದ್ದಳು.

ಆದರೆ....ಸುಂದರ ಶಿಶುವಿನ ಕೂರಲ್ಲಿ ಹವಳದ ಸರವೊಂದು ಶೋಭಿಸುತ್ತಿದ್ದರೆ ರೂಪಾಳಿಗಿಂತಹ ಸಂತೋಷವಾಗುತಿತ್ತು. ಮುದ್ದಿನ ಮಗುವಿನ ಸೌಂದರ್ಯ ಎದ್ದು ಕಾಣುವಂತಾಗುತಿತ್ತು. ಎಂಬುದೇ ಆಕೆಯ ಹಂಬಲ.

ನಿದ್ದೆಯಿಂದೆದ್ದ ಮಗುವನ್ನೆತ್ತಿಕೊಂಡು ಪತಿಯ ದಾರಿ ಕಾಯುತ್ತಾ ಕುಳಿತ ರೂಪ ಮಾಧವನನ್ನು ನೋಡಿ ಮುಗುಳ್ನಕ್ಕಳು ಆತ ನಗುತ್ತಲೇ ಪೆಟ್ಟಿಲೇರುತ್ತಿದ್ದಾಗ ಮಗು ತಂದೆಯನ್ನು ಗುರುತಿಸಿ ಅವನ ಕೈಗೆ ದಾರಿ ಮುಖವನ್ನು ಕೈಯಿಂದ ಹಿಡಿದೆಳೆದು ನಕ್ಕಿತು.

"ರಾಜಾ..ಚಿನ್ನಾ...ಮುದ್ದೂ...ಎಷ್ಟು ಬೇಗಗುರುತಿಸಿಬಿಟ್ಟೇ...." ಎನ್ನುತ್ತಾ ಮುತ್ತಿಟ್ಟ ಮಾಧವ ಕೈಯಲ್ಲಿದ್ದ ಪೆಂಟ್ಸಣವನ್ನು ಬಿಡಿಸಿದಾಗ ರೂಪಾ ಸಂಭ್ರಮದಿಂದ ಮುಂದೆ ಬಂದಳು. ಚಿನ್ನದಲ್ಲಿ ನೇಯ್ದ ಒಂದೆಳೆಯ ಹವಳದ ಸರ! ರೂಪಾಳ ಹೃದಯ ಸಂತಸದಿಂದ ತುಂಬಿ ಬಂತು. ಆಕೆ ಅವಸರವಸರವಾಗಿ ಮಗುವಿನ ಕೊರಳಿಗೆ ಸರವನ್ನು ಹಾಕಿ ಮಗುವನ್ನೆತ್ತಿಕೊಂಡು ತಬ್ಬಿಕೊಂಡು ಮುಡಿದಳು.

"ಈಗ ನಿನ್ನನ್ನು ಯಾರಾದರೂ ನೋಡಿದರೆ ಖಂಡಿತ ದೃಷ್ಟಿಯಾಗುತ್ತೆ ಮರೀ. ಅಗಲಿ. ಮಗುವಿನ ಮೇಲೆ ನಿನಗೆ ಮಮತೆಯಿದೇಂತ ಅಷ್ಟು. ನೀವು ತಂದೆಯೂದ್ದು ಸಾರ್ಥಕವಾಯ್ತು." ಎಂದು ನಕ್ಕಳು ರೂಪಾ. ಮಾಧವನೂ ಜತೆ ಸೇರಿ ನಗುತ್ತಿದ್ದಾಗ ಅಂಚೆಯವನು ತಂತಿವಾರ್ತೆಯನ್ನು ತಂದು ಕೈಗಿತ್ತ. "ರೂಪಾ... ತಂದೆಯವರು ಹೋಗಿಬಿಟ್ಟರಂತೆ." ತಂತಿಯನ್ನೋದಿದ ಮಾಧವ ಬೆಚ್ಚಿ ಬಿದ್ದು ನುಡಿದ.

"ಹೌದೇ ಪ್ರಾಯವೂ ಆಯ್ತು ಅನ್ನಿ. ಇನ್ನೂ ಇನ್ನೂ ಹೆರಳ್ತಾ ಇದ್ರೆ ನೋಡುವವರಿಗೂ ಕಷ್ಟವೇ" ಎಂದು ರಾಗವೆಳೆದ ಮಡದಿಯ ಮಾತಿಗೆ ಉತ್ತರವನ್ನೀಯುವ ಸಾಹಸ ಮಾಧವನಲ್ಲಿರಲಿಲ್ಲ ಮಗು ತಂದೆಯತ್ತ ನೋಡಿ ನಕ್ಕಿತು.

ವಿವೇಚನೆ

ಶೂದ್ರರಿಗೆ ವೇದಾಧಿಕಾರವಿದೆಯೇ?

ಲೇಖಕರು: ದಿವಂಗತ ಬಿ. ಬಿ. ಶೆಟ್ಟಿ, ಮುಂಬಾಯಿ.
ಸಂಗ್ರಾಹಕ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ವೇದ (ಶ್ರುತಿ) ವಿದ್ಯೆಯನ್ನು ಅಭ್ಯಸಿಸುವುದಕ್ಕೆ ಯಾರ್ಯಾರಿಗೆ ಅಧಿಕಾರವಿದೆಯೆಂಬ ದನ್ನು ಪರಿಶೀಲಿಸೋಣ ಅವನ್ನು ಕೇವಲ ಬ್ರಾಹ್ಮಣರು ಮಾತ್ರ ಓದುವುದಕ್ಕೆ ಅರ್ಹರೆಂದು ಕೆಲವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಇಂತಹ ಅಧಿಕಾರವಿರುವುದೆಂದು ಕೆಲವರು ಹೇಳುತ್ತಿರುವರು. ಅಲ್ಲದೆ ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಅಂತಹ ಅಧಿಕಾರವಿಲ್ಲವೆಂದು ಮತ್ತೆ ಹಲವರು ಹೇಳುತ್ತಿರುವರು. ಪಕ್ಷಪಾತರಹಿತವಾಗಿ ಯೋಚಿಸಿ ನೋಡಿದರೆ ಸ್ತ್ರೀಯರಿಗೂ ಶೂದ್ರರಿಗೂ ವೇದಾಧ್ಯಯನದ ಅಧಿಕಾರಇದ್ದಂತೆ ಸ್ಪಷ್ಟವಾಗುವುದು. ಅದು ಹೇಗೆಂದರೆ ಆಪಸ್ತಂಭಧರ್ಮ ಸೂತ್ರದಲ್ಲಿ

"ಅಥರ್ವಣಕ್ಕೆ ವೇದಕ್ಕೆ ಶೇಷ ಇತ್ತುಸ ದಿಶಂತಿ" ಆಪಸ್ತಂಭ ಧರ್ಮ ಸೂತ್ರ ಖಂ—೨೯.

"ಸ್ತ್ರೀ ಶೂದ್ರರಿಂದ ಅಥರ್ವ ವೇದವನ್ನು ಓದಿಸಬೇಕು" ಎಂದು ಬರೆಯಲ್ಪಟ್ಟಿರುವುದರಿಂದ ಅವರಿಗೆ ವೇದಾಧ್ಯಯನಾಧಿಕಾರ ಇದೆಯೆಂಬುದು ವಿದಿತವಾಗುತ್ತದೆ. ಇಷ್ಟೇಕೆ? "ಯಥೇಮಾಂ ವಾಚಂ

ಕಲ್ಯಾಣೀ ಮಾವದಾನಿ ಜನೇಭ್ಯಃ
ಬ್ರಹ್ಮರಾಜನ್ಯಾ ಭ್ಯಾಗ್ಂ

ಶೂದ್ರಾಯ ಚಾರ್ಯಾಯ ಸ್ವಾಯ
ಚಾರಣಾಯ ॥ ಯಜು. ಅ. ೨೬.

ವಿದ್ವಾಂಸರಾದ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ, ಸೇವಕಾದಿ ಅತಿ ಶೂದ್ರ ಸಮಸ್ತ ಮಾನವರ ನಿಮಿತ್ತ ಹೇಗೆ ನಾನು ವೇದವನ್ನೂ ಪ್ರಕಾಶಪಡಿಸಿದ್ದೇನೋ ಹಾಗೆಯೇ ನೀವೂ ಮಾಡಿರಿ" ಎಂದು ಪರಮಾತ್ಮನೇ ಆಜ್ಞಾಪಿಸಿರುವುದರಿಂದ ಎಲ್ಲಾ ಮನುಷ್ಯರಿಗೆ ವೇದಗಳನ್ನೋದುವ ಅಧಿಕಾರವಿರುವಂತೆ ಸ್ಪಷ್ಟವಾಗುತ್ತಿರುವುದ; ಮತ್ತು

"ಬ್ರಹ್ಮಕ್ಷತ್ರಿಯೌ ವೈಶ್ಯಾಂ ತ್ರಿವೃತ್ ಕ್ಷತ್ರಂ ಪಂಚದಶೇ ವಿಶಃ
ಸಪ್ತದಶಃ ಶೂದ್ರೋ ವರ್ಣ
ಏಕವಿಂಶ"

ಐತರೇಯ ಬ್ರಾಹ್ಮಣ ಪಂ. ಅ. ಶೂ. ೪

"ಬ್ರಾಹ್ಮಣನು ಒಂಭತ್ತು, ಕ್ಷತ್ರಿಯನು ಹದಿನೈದು, ವೈಶ್ಯನು ಹದಿನೇಳು, ಶೂದ್ರನು ಇಪ್ಪತ್ತೊಂದು ಈ ರೀತಿ ಅಗ್ನಿಸ್ತೋಮದಳಸ್ಸ ಆಚರಿಸಬೇಕೆಂದು ಐತರೇಯ ಬ್ರಾಹ್ಮಣದಲ್ಲಿನ ಅಗ್ನಿಸ್ತೋಮ ಪ್ರಕರಣದಲ್ಲಿ ಬರೆಯಲ್ಪಟ್ಟಿರುವುದ. ಸ್ತೋಮ ಸೆಂದರೆ ವೇದ ಮಂತ್ರ. ನಿರುಕ್ತದ ಸರ್ವ ಸಟ್ಟದ ಮೂರನೆಯ ಅಧ್ಯಾಯದ ಎರಡನೆಯ ಖಂಡದಲ್ಲಿ ಮೇಲಿನ ವಿವರಣೆ ದೊರಕುತ್ತದೆ. ಇದರಂತೆ ಬ್ರಾಹ್ಮಣರು ಒಂಭತ್ತು, ಕ್ಷತ್ರಿಯರು ಹದಿನೈದು, ವೈಶ್ಯರು ಹದಿನೇಳ, ಶೂದ್ರರು ಇಪ್ಪತ್ತೊಂದು ಮಂತ್ರಗಳಿಂದ ಯಜ್ಞ ಮಾಡಬೇಕೆಂಬ ವಿಧಿ ಇರುವದರಿಂದ ಇವರೆಲ್ಲರಿಗೂ ವೇದಾಧ್ಯಯನ ಅಧಿಕಾರವಿರುವುದೆಂಬುದು ನಿಸ್ಸಂದೇಹವಲ್ಲವೇ?

ಛಾಂದೋಗ್ಯ ಉಪನಿಷತ್ತಿನಲ್ಲಿ ನಾಲ್ಕನೆಯ ಪ್ರಪಾಠ ಎರಡನೆಯ ಖಂಡದಲ್ಲಿ

"ಹೀರೇತ್ವಾ ಶೂದ್ರೆ" ಎಂಬ ವಾಕ್ಯವನ್ನವಲೋಕನ ಮಾಡಿರಿ.

"ರಯಿಕ್ವ" ಎಂಬ ಮಹರ್ಷಿ "ಜಾಂಶ್ರುತಿ" ಎಂಬ ಶೂದ್ರನಿಂದ ವೇದವನ್ನು ಓದಿಸಿದನು. ಕಾಲ ಗೋತ್ರವಂಶದ 'ಜಾಬಾಲಿ'ಗೆ ಗೌತಮ ಮಹರ್ಷಿಯು ಉಪನಯನ ಸಂಸ್ಕಾರ ಮಾಡಿ ವೇದಾಧ್ಯಯನ ಮಾಡಿಸಿರುವುದು ಛಾಂದೋಗ್ಯದಲ್ಲಿ ಕಂಡು ಬರುತ್ತದೆ. ಋಗ್ವೇದದ ಹತ್ತನೆಯ ಮಂಡಲ ಮೂರನೆಯ ಅನುವಾಕ ಇಪ್ಪತ್ತರಿಂದ ಮೂವತ್ತನಾಲ್ಕನೆಯ ಸೂಕ್ತದ ವರೆಗಿನ ಹದಿನಾಲ್ಕು ಸೂಕ್ತಗಳನ್ನು 'ಗವಮೈಯುಷ'ನೆಂಬ ಋಷಿಯು ಪ್ರಚಾರ ಮಾಡಿ ಅನೇಕ ಋಷಿಗಳಿಂದ ಓದಿಸಿದನು. ಈತನು ಶೂದ್ರನು. ಇದಕ್ಕೆ ಪ್ರಮಾಣವು ಐತರೇಯ ಬ್ರಾಹ್ಮಣ ಎರಡನೆಯ ಖಂಡದ ಮೂರನೆಯ ಅಧ್ಯಾಯದಲ್ಲಿದೆ. 'ಕೌಶೀತಕಿ' ಬ್ರಾಹ್ಮಣದಲ್ಲಿಯೂ ಹೀಗೆಯೇ ಬರೆಯಲ್ಪಟ್ಟಿದೆ. ಹಾಗೆಯೇ ಪೂರ್ವೋಕ್ತ ಸೂಕ್ತಗಳನ್ನು ಪ್ರಚಾರ ಮಾಡಿರುತ್ತದೆ. 'ಪವಮಾನ ಯೈಯುಷನೇ' ಎಂಬ ಋಗ್ವೇದಾನು ಕ್ರಮಣಿಕೆಯಲ್ಲಿಯೂ ಈ

ಹನ್ನೊಂದು

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೆಲ್ ಶಿವ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಪಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಶಾಕಾಹಾರಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಪ್ರಾಣಾಂತಿಕ ಉದರ ಬಾಧೆ
ಎಲ್ಲಾತರದ ಸಿದಿತ ಮತ್ತು ನೋವುಗಳಿಗೆ
10 ವರ್ಷ ಪ್ರಾಯದ
ಡಾಕ್ಟರ್

NAVAYUGA 16—5—1969
Registered with the Registrar of News Papers for India under No. R. N. 3546/'57

REGD: No. B. G. 176
LICENCE No. 31
Licensed to Post without Prepayment

ಸೂಕ್ತಗಳ ಸಾಯಣ ಭಾಷ್ಯದಲ್ಲಿಯೂ ಬರೆಯಲ್ಪಟ್ಟಿರುವುದು. ಋಗ್ವೇದದ ಪ್ರಥಮ ಮಂಡಲ ಹದಿನೇಳನೆಯ ಅನುವಾಕ ೧೧೬ನೆಯ ಸೂಕ್ತದಿಂದ ೧೨೬ನೆಯ ಸೂಕ್ತದ ವರೆಗೂ ಇರುವವುಗಳನ್ನು ಪ್ರಸಿದ್ಧಿಪಡಿಸಿದವನು, 'ಕಕ್ಷಿವಾನ್' ಋಷಿ. ಈ ಕಕ್ಷಿವಾನನು ಅಂಗದೇಶದ ರಾಜನ ದಾಸೀಕುಮಾರನೆಂದು ಋಗ್ವೇದಾನುಕ್ರಮಣಿಕೆಯಲ್ಲಿಯೂ, ಈ ಸೂಕ್ತಗಳ ಮೇಲೆ ಬರೆಯಲ್ಪಟ್ಟ ಸಾಯಣ ಭಾಷ್ಯದಲ್ಲಿಯೂ ಮಹಾಭಾರತದಲ್ಲಿಯೂ ವಿವರಿಸಲ್ಪಟ್ಟಿರುತ್ತದೆ. ಅದಾ! ಯೂವ "ಗವಷ್ಟೈ ಉಷಾ" ಶೂದ್ರರ ಕುರಿತಾಗಿ ವೇದಗಳಲ್ಲಿ ಪ್ರಸಿದ್ಧಿ ಇದೆಯೋ ಅಂತಹವರ ಸಂತತಿ ಶೂದ್ರಜನಾಂಗಕ್ಕೆ ವರ್ತಮಾನ ಕಾಲದಲ್ಲಿ ದುರಾಗ್ರಹಿ ಮನೋವೃತ್ತಿಯ ಕೆಲವು ಸ್ವಾರ್ಥಿ ಬ್ರಾಹ್ಮಣರು 'ಶಿವನಿಗೆ ವೇದವನ್ನು ಕಿವಿಯೊರೆ ಕೇಳುವುದಕ್ಕೂ ಅಧಿಕಾರವಿಲ್ಲ' ಎಂದು ಹೇಳುತ್ತಿರುವುದು ಎಂತಹ ಶೋಚನೀಯ ವಿಷಯ? ಹಳ ಬುದ್ಧಿಯುಳ್ಳಈಮೂಢರುಇಷ್ಟರಿಂದಲೂ ತೃಪ್ತರಾದದೆ ಮತ್ತು ತಮ್ಮ ಕಲ್ಪನಾಚಾತುರ್ಯವನ್ನು ಈ ರೀತಿ ಪ್ರಚಾರಗೊಳಿಸಿದರು.

"ಶ್ರವಣೇಜತ್ರ ಜಪುಭ್ಯಾಂ ಶ್ರೋತಪರಿಪೂರ್ಣಾಂ ಉಚ್ಚಾರಣೇ ಜಿಹ್ವಾ
ಛೇದೋ ಧಾರಣೇ ಹೃದಯ ವಿದಾರಣಮಿತ್ಯಾದಿ"

"ಶೂದ್ರನು ವೇದವನ್ನು ಕೇಳಿದ್ದೇ ಆದರೆ ಸೀಸವನ್ನಾಗಲೀ, ಅರಗನ್ನಾಗಲೀ ಕರಗಿಸಿ ಅವರ ಕಿವಿಗಳಲ್ಲಿ ಹೊಯ್ಯಬೇಕು; ಮಂತ್ರವನ್ನು ಉಚ್ಚರಿಸಿದರೆ ನಾಲಗೆಯನ್ನು ಕೊಯ್ದುಬಿಡಬೇಕು, ಜ್ಞಾಪಕದಲ್ಲಿಟ್ಟುಕೊಂಡರೆ ಹೃದಯ ಛೇದನ ಮಾಡಬೇಕು" ಎಂದು ಕಠೋರ ಶಾಸನ ವಿಧಿಸಿದರು.

"ಏಹೀತೀ ಬ್ರಾಹ್ಮಣಸ್ಯಾದ್ರವೇತಿ ವೈಶ್ಯಸ್ಯ ಚ ರಾಜನ್ಯಸ್ಯ ಖಂದೋ—
ಶ್ವಾಥಾವೇತಿ ಶೂದ್ರಸ್ಯ
ಶತಪಥ್ ಕಾಂ ೧. ಪ್ರ. ೧ ಅ. ೧, ಬ್ರಾಹ್ಮಣ. ಕಂ. ೧೯"

'ನಾಲ್ಕು ವರ್ಣದವರು ವೇದ ಮಂತ್ರಗಳಿಂದ ಹವಿಸ್ಸನ್ನು ಶುದ್ಧೀಕರಿಸಬೇಕೆಂದು ಶತಪಥ ಬ್ರಾಹ್ಮಣ ಗ್ರಂಥದಲ್ಲಿಯೂ' ಹವಿಷ್ಯದೇಹಿತಿ ಬ್ರಾಹ್ಮಣಸ್ಯ—ಹವಿಷ್ಯದಾದ ಹೀತಿ ರಾಜನ್ಯಸ್ಯ। ಹವಿಷ್ಯದಾದ್ರವೇತಿ ವೈಶ್ಯಸ್ಯ। ಹವಿಷ್ಯದಾವೇತಿ ಶೂದ್ರಸ್ಯ। ಪೃಥಮಂ ವಾ ಸರ್ವೇಷಾಂ ವಾ॥ ಆ.ಶ್ರಾ.ಸೂ.೧-ಕಂ.೧೯.

ಮೇಲೆ ಬರೆದಿರುವ ನಾಲ್ಕು ಬೇರೆ ಬೇರೆ ಮಂತ್ರಗಳಿಂದಾಗಲೀ ಪ್ರಥಮ ಮಂತ್ರದಿಂದಾಗಲೀ ಯಜ್ಞ ವಿಧಾನದ ಹವಿಸ್ಸನ್ನು ಶುದ್ಧಿಗೊಳಿಸಬೇಕೆಂದು 'ಅಪಸ್ತಂಭ ಶ್ರೌತ ಸೂತ್ರ'ಗಳಲ್ಲಿ ಬರೆಯಲ್ಪಟ್ಟಿದೆ. ಇದರಿಂದಲೂ ಶೂದ್ರರಿಗೆ ವೇದಾಧಿಕಾರವಿದೆಯೆಂಬುದು ಸ್ಪಷ್ಟವಾಗುತ್ತದೆ. ಇದೇ ಪ್ರಕಾರ—

"ಆ ಚಾಂ ತೋ ದಶಾಯ ಗಾಯತ್ರೀ ಪ್ರಾಪಿತ ಸ್ತ್ರೀಪ್ಟ್ಯಾಯಾಶ್ ಮುಂಚಗಾ-
'ವರುಣಪ್ರಾಶಾತ್' ಗೋಭಿಲೀಯ ಪ್ರ.ಸ.ಕಂ.೧೦. ಇದರ ಮೇಲಿನ ಟೀಕೆಯಲ್ಲಿ "ತ ಪೇವ ಪ್ರಾಪಿತಂ ಮುಂಜಗಾಮಿತಿ ಮಂತ್ರಂ ಬ್ರೂಯಾತ್".'ಮಂತ್ರಂ ಬ್ರೂಯಾತ್' ಎಂಬುದರಿಂದ, ಮೇಲಿನ ಮಂತ್ರವು 'ನಾಪಿತ' (ಕ್ಷೌರಿಗ)ನಿಗೆ ಕೇಳಿಸುವಂತೆ ಪಠಿಸ ಮಾಡಬೇಕಾಗಿರುವುದರಿಂದ ಕ್ಷೌರಿಗನಿಗೆ ಕೂಡಾ ವೇದಾಧಿಕಾರವಿದೆಯೆಂಬುದು ಸ್ಪಷ್ಟವಾಗುತ್ತದೆ.

ತಯ್ಯೆವಾ ವೃತಾ ಶಿಷ್ಟಾದಸ್ತಪಿತಂ
ಯೂಜಯೇ ತ್॥

"ಅಪಸ್ತಂಭ ಶ್ರೌ.ಸೂ. ೯. ಕಂ. ೧೪.

ಮೇಲೆ ಉದಾಹರಿಸಲ್ಪಟ್ಟ ಯಜ್ಞಗಳಲ್ಲಿ ಸಮಸ್ತ ನಿಷಾದಗಳಿಂದ ಮಾಡಿಸಬೇಕೆಂದೂ "ಸಾವಿತ್ರೀಸುರೋ ಅದುವಾಕ್ಯಾ" ಗಾಯತ್ರಿ ಮಂತ್ರದಿಂದ ಆಹುತಿಕೊಡಿಸಬೇಕೆಂದೂ ಹೇಳಿರುವುದರಿಂದ ಶೂದ್ರನಿಗೆ ಗಾಯತ್ರಿ ಮಂತ್ರಾಧಿಕಾರ ಸಹ ಇದೆಯೆಂಬುದನ್ನು ಕಾರ್ಯಸ್ಥಗೊಳಿಸಲಾಗಿದೆ ಮತ್ತು;

"ಗಾಯತ್ರ ಛಂದಸೋ ಬ್ರಾಹ್ಮಣಾಃ ತ್ರಿಷ್ಟುಪ್ ಛಂದಸಃ
ಕ್ಷತ್ರಿಯಾಃ ಜಗತೀಛಂದಸೋ ವಿಶಃ
ಅನುಷ್ಟುಪ್ ಛಂದಸಃ ಶೂದ್ರಾಃ

"ಗಾಯತ್ರಿ ಮಂತ್ರದಿಂದ ಬ್ರಾಹ್ಮಣರೂ ತ್ರಿಷ್ಟುಪ್ ಛಂದಸ್ಸಿನಿಂದ ಶಾಂಖಾರ್ಯನ ಶ್ರೌತ ಸೂತ್ರ ಅಧ್ಯಾಯ ೪ರಲ್ಲಿ ಹೇಳಿರುವುದು ಸಹ ಶೂದ್ರರಿಗೆ ವೇದವನ್ನೋದುವ ಅಧಿಕಾರವಿದೆಯೆಂಬುದನ್ನು ಸ್ಪಷ್ಟೀಕರಿಸುತ್ತದೆ.

ಇದೇ ಪ್ರಕಾರ ಸಮಸ್ತ ಮಾನವ ಜಾತಿಗೆ ಶಾಸ್ತ್ರ ಅಧ್ಯಯನದ ಅಧಿಕಾರ, ಯಜ್ಞ, ಯೂಜನೆಗಳ ಅಧಿಕಾರ ಸಂಪೂರ್ಣವಿದೆಯೆಂಬುದು "ಶೈಮಿಷೀ ಸೂರ್ವಮಿ ಮಾಂಸ"ದಲ್ಲಿ ಸಹ ವಿಶದ ಬೆಳಕಿಲ್ಪಟ್ಟಿದೆ.

"ಫಲಾರ್ಥತ್ವಾತ್ ಕರ್ಮಣಃ ಶಾಸ್ತ್ರಂ ಸರ್ವಾಧಿಕಾರಂ ಸ್ಯಾತ್"

"ಪೂರ್ವ ಮಿಮಾಂಸ ಅ. ೬.

ವೇದಾಧ್ಯಯನವೆಂಬುದು ಯಜ್ಞಗಳಲ್ಲಿನ ಕರ್ಮವು. ಇದು ಮಾನವರೆಲ್ಲರಿಗೆ ಫಲವನ್ನು ಕೊಡುವುದು. ಬ್ರಾಹ್ಮಣ, ಕ್ಷತ್ರಿಯ, ಶೂದ್ರ, ಅತಿಶೂದ್ರ ಯಾರಾದರೇನು? ಯಾವನು ವಿದ್ಯಾಭ್ಯಾಸ ಮಾಡಲಿಚ್ಛಿಸುವನೋ, ಯಾರು ಜ್ಞಾನ ಪಿಪಾಸು ಆಗಿರುವನೋ ಅಂತಹವನಿಗೆ ವಿದ್ಯೆ ಅವಶ್ಯವಾಗಿ ಬರುವುದು. ಯಾವನು ಯಜ್ಞಾದಿ ಶುಭ ಕರ್ಮಗಳನ್ನಾಚರಿಸುವನೋ ಅವನಿಗೆ ಅದರ ಫಲವು ದೊರಕದಿರಲಾರದು. ಆದುದರಿಂದ ಪರಮ ಪುನೀತವಾದ ವೇದದಲ್ಲಿ ಅಮರ ಜ್ಞಾನ ಜ್ಯೋತಿಯನ್ನು ಯಾವ ತರದ ಪಕ್ಷಪಾತ, ಜಾತಿಭೇದ, ವರ್ಣ ಭೇದಗಳನ್ನಿಡದೆ ಸ್ತ್ರೀಯರು ಶೂದ್ರರೆಂಬ ತಾರತಮ್ಯವನ್ನಿಡದೆ ಸಕಲರಲ್ಲಿಯೂ ಬೆಳಗಿಸಿ ಜನಾಂಗದ ಸರ್ವತೋಮುಖವಾದ ಪ್ರಗತಿಯನ್ನುಂಟು ಮಾಡುವುದು ಮಾನವನ ಹಿತೈಷಿಗಳಾದ ವಿದ್ವಾಂಸರ ಆದ್ಯ ಕರ್ತವ್ಯವಾಗಿರುತ್ತದೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಲಲ್ ವೆಂಕಟ್ರಾವ್, ಎಲ್. ಎ.ಎಮ್.

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಶ್ರೀಪಾದಾಲ್ ವೈದ್ಯರತ್ನ ಕೇಶವ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಡಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿ, ಸಹೋದರಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳೂ ಸುಖೆಯಲ್ಲೇ ಮದ್ದು ಮಾಡುವ ವಿಧಾನವು ವಿಶದಪಡಿಸಲ್ಪಟ್ಟ ಗೃಹವೈದ್ಯ. ಹೊಸ ವಿಧಾನ ಸರಳಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನೆನಪಿನ ಮಣಿಗಳು ೬

ಅಳು—ದುಃಖ

ಒಂದೇ ಸವನೆ ಶೋಕವು ಕೇಳಿ ಬರುತ್ತಿರುವ ಮನೆಯೊಡರೆ ಅದೊಂದು ಸಾವು ಮನೆ.

ಸತ್ತರೆ ಎಲ್ಲರೂ ಶೋಕಿಸುತ್ತಾರೆ.

ಆದರಲ್ಲಿ ಹೆಂಗುಸರ ಶೋಕ ಉಚ್ಚಸ್ಥಾಯಿಯಾದು.

ಸತ್ತಮನೆಯಲ್ಲಿ ಅತ್ತಷ್ಟೂ ಮೆಚ್ಚುವರು.

ಅಳುಬಾರದವನನ್ನು ನೋಡಿ ದೂರುವರು.

ಸತ್ತರೆ ಅಳುಬಾರದಿರದು. ಅಪರಿಚಿತರು ಸತ್ತರೂ ದುಃಖಭಾವವೇ ಇರುತ್ತದೆ.

ಸತ್ತಮನೆಯಲ್ಲಿ ಬಾಯಿಬಿಟ್ಟು ಅಳದಿದ್ದರೆ 'ಕಲ್ಲುಮನಸ, ಸ್ವಲ್ಪವೂ ದುಃಖವಿಲ್ಲ, ರಾಕ್ಷಸ ಹೃದಯ' ಎಂದೆಲ್ಲ ಹೇಳುತ್ತಾರೆ.

ಹಾಗೆ ಯಾರಿಗೂ ತೋರಬಾರದೆಂಬ ಭಯದಿಂದ ಅಳುವವರು ಹಲವರು.

ಕೆಲವು ಪ್ರಾಂತದಲ್ಲಿ ಅಳುವಿನ—"ಸಾವಿನ ದಾಡು" ಕೂಡಾ ಇದೆ.

ನಿಜವಾದ ದುಃಖವು ಬಾಯಿಬಿಟ್ಟು ಕೊರಳೆತ್ತಿ ಅಳುವುದರಲ್ಲಿ ಇರಲಾರದು.

ಹಾಗೆ ಅಳುವುದರಲ್ಲಿ ಏನೋ ಸಾಧಿಸುವ ಉದ್ದೇಶವೇ ಅಡಗಿರುತ್ತದೆನ್ನಬಹುದು. ಮಗು ಅಳದಿದ್ದರೆ ಅದರ ಬಾಯಿಗೇನೂ ಸಿಕ್ಕದು.

ಆದರೆ, ಸತ್ತಮನೆಯಲ್ಲಿ ಎಲ್ಲರೂ ಮೌನವಾಗಿಯೇ ದುಃಖಸಿಕೊಂಡಿದ್ದರೆ ಅದು ಸತ್ತ ಮನೆಯೆಂದು ಇತರರಿಗೆ ತಿಳಿಯದು.

ಅಪಸ್ವರವಾಗಿ ಬೇರಾಗುವ ಇತರರ ಸಹಾಯವು ಬಾರದು. ಮುಂದಿನ ಕೆಲಸ ನೆರವೇರದು.

ಆದುದರಿಂದ ಸತ್ತ ಮನೆಯಲ್ಲಿ ಅಳಲೇಬೇಕು.

ಸ್ವಾಭಾವಿಕವಾಗಿ ಅಳುವುದರಲ್ಲಿ ಹೆಂಗಸರೂ ಮಕ್ಕಳೂ ಸಮರ್ಥರು.

ಮೃದು ಹೃದಯದವರಾದ ಅವರಿಗೆ ಬಾಯಿ ಮುಚ್ಚಿ ನಿಜವಾದ ದುಃಖ ಅನುಭವಿಸುವ ಶಕ್ತಿ ಇಲ್ಲ. ಅದು ಬಹಿರಂಗವಾಗಿ ಕೇಳಿಸುತ್ತಿರುತ್ತದೆ.

ಗಟ್ಟಿ ಹೃದಯವುಳ್ಳ ಹಂಡಸರದು ಒಳಗೊಳಗೆ ಅನುಭವಿಸುವ ದುಃಖ.

ಮುಖ್ಯ—ಬಾಯಿಬಿಟ್ಟು ಕೊರಳೆತ್ತಿ ಅಳುವ ಶಬ್ದವು ಏನೋ ಒಂದು ಸಹಾಯ—ಅಥವಾ ಕಾರ್ಯವನ್ನು ಸಾಧಿಸುವ ಉದ್ದೇಶವನ್ನೆ ಅಡಗಿಸಿಕೊಂಡಿದೆ ಎಂದು ಹೇಳಬಹುದು.

ಅಂತೆಯೇ ದುಃಖದ ಸೂಚನೆಗೆ ಮೌನವೂ ಅನುಸ್ಯೂತ.

—ಎಂ. ರಂಗಸ್ವಾಮಿ

Edited, Printed & Published by K. H. Shetty at the Navayuga Press, Udupi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

3—5—1968

೨೦ ಪೈಸೆ

ಕಥಾ ಪ್ರಸಂಗ

ಪ್ರೇತ ಹೇಳಿದ ಕತೆ

ಲೇಖಕರು: ಶ್ರೀ ಎಚ್. ಸುಬ್ರಾಯ ಭಟ್ಟ, ಚೋನಾಳಿ.

ನನ್ನ ಜೀವನದ ದುರಂತ ನಾಟಕ ಮುಕ್ತಾಯವಾಗುವ ದಿನ ಸಮೀಪಿಸಿದೆ ಎಂಬುದು ನನಗಾಗ ಅರಿವಾಗಿದ್ದಿಲ್ಲ. ಯಾವ ಸುಳಿವು ಸೂಕ್ಷ್ಮವೂ ನನ್ನ ದಮನಕ್ಕೆ ಬಾರದೆ ಹೋಯಿತಾಗ. ಇಂದಿಗೆ ಸರಿಯಾಗಿ ವರ್ಷ ಒಂದು ಸರಿದು ಹೋದ-ದರ ನೆನಪಿಗಾಗಿ ಮತ್ತೆ ಬಂದಿದೆಯಂಗಾದಿ.

ಂ ಂ ಂ ಂ

ಅಂದೂ ಯುಗಾದಿ ಹಬ್ಬ. ನಾವು ಮಾತ್ರ ಯಾವ ಹಬ್ಬವನ್ನೂ ಆಚರಿಸುತ್ತಿದ್ದಿಲ್ಲ. ಆದರೂ ನಾನಂದು ಮಿಂದು ಕೂದಲ ಸಿಕ್ಕ ಬಿಡಿಸಿಕೊಳ್ಳುತ್ತಿದ್ದೆ.

ಆಗ, "ಚಂದ್ರಾ! ಚಂದ್ರಾ!...." ಎಂದು ಯಾರೋ ಹೊರಗಿಂದ ಕೂಗುವ ಸದ್ದು ಕೇಳಿದ ನನ್ನಿಂದ ಮತ್ತಲ್ಲಿ ನಿಲ್ಲುವುದಾಗದೆ ಹೊರಗ್ಹಾಣಿಕೆ ಹೋಡಿದೆ.

ಬಗಲಲ್ಲೊಂದು ಮಗುವನ್ನೆತ್ತಿದ್ದ ಕೃಶಾಂಗನೆಯೊಬ್ಬಳು ಮುದುಕನ ಜೊತೆ ಮೂಡಿ ನಿಂತಿದ್ದುದು ಕಂಡಿತು. ಉರಿ ಬಿಸಿಲನಲ್ಲಿಯೇ ಬಹುದೂರ ನಡೆದುಬಂದಂತಿತ್ತು. ಮನೆಬಾಗಿಲಿಗೆ ಬಂದವರನ್ನು ಹಾಗೆಯೇ ಹೋಗಗೊಡುವುದು ಉಚಿತವಾಗಿ ಕಾಣದಾಯಿತು.

ಅಗುಳಿಯನ್ನು ತೆಗೆದು "ಬನ್ನಿ" ಎಂದು ಸ್ವಾಗತಿಸಿದೆ.

ಬೆವರನ್ನೊರಸಿಕೊಳ್ಳುತ್ತಾ ಒಳಗಡೆ ಬಂದು ಹಳ್ಳದ ಬೆಂಚಿನ ಮೇಲೆ ಉಸ್ಸೆಂದು ಕುಳಿತರು. ಗುರುತು ಪರಿಚಯ ವಿಲ್ಲವಾದರೂ ಬಿಸಿಲಿನಿಂದ ಬಂದವರಿಗೆ ಅಸರಡ ಆಗತ್ಯವಿರಬಹುದೆಂದು ತಣ್ಣೀರನ್ನು ತಂಬಿಗೆಯಲ್ಲಿ ತಂದು ಲೋಟದ ಜೊತೆಗೆ ಮುಂದಿರಿಸಿದೆ.

ಮುದುಕ ಮೊದಲು ನೀರು ಕುಡಿಯಲು ಮುಂಚಾಚಿದಾಗ ಆಗಂತುಕಳ ದೃಷ್ಟಿ ನನ್ನ ಮೇಲೆ ಕೇಂದ್ರೀಕೃತವಾಗಿದ್ದುವೆಂದು ತಿಳಿಯಲು ತಡವಾಗಲಿಲ್ಲ.

ಕ್ಷಣಕಾಲ ತಡೆದು ಅಪರಿಚಿತರನ್ನು ಮಾತನಾಡಿಸಲು ನಾನೇ ಮುಂದಾಗಬೇಕಾಯಿತು.

"ತಮ್ಮೂರು ಯಾವುದೋ ತಿಳಿಯಲಿಲ್ಲ" ಎಂದು ನಾನೇ ಕೇಳಿದೆ.

ನನ್ನ ಪ್ರಶ್ನೆಗುತ್ತರವನ್ನು ಕೊಡಲು ಮುದಾಕರೇ ಮುಂದಾದರು.

"ಕುಂದಾಪುರದಿಂದ ಆರು ಮೈಲು ದೂರ ಹಳನಾಡು ಗ್ರಾಮ."

ಅವರ ಮಾತನ್ನು ಕೇಳಿದ ನಾನಾಗ ಬೆಚ್ಚಿಬಿದ್ದೆ. ಜೊತೆಗೆ ಹಿಂದಿನದೆಲ್ಲವೂ ಒಮ್ಮೆ ನನ್ನ ಕಣ್ಮುಂದೆ ಸುಳಿದು ಹೋದಂತಾಯಿತು. ಹಿಂತಿದ್ದವಳಿಗಾಗ ತಲೆ ಸುತ್ತಿಬಂದಂತಾಯಿತು. ಒರಗಿ ನಿಂತ ಕುರ್ಚಿಯ ಮೇಲೆ ಮೆಲ್ಲ ಕುಳಿತುಕೊಂಡೆ. ನಾಲ್ಕು ವರ್ಷಗಳ ಹಿಂದಿನ ಘಟನೆಯ ನೆನಪಾಯಿತಾಗ.

ಂ ಂ ಂ

ನಾಲ್ಕು ವರ್ಷಗಳ ಹಿಂದಿನ ಮಾತು. ಕಾಲೇಜಿನಲ್ಲಾಗ ನಾನು ಮೊದಲನೆಯ ಹುಡುಗಿಯ ಲ್ಲಿದ್ದೆ. ಸದಾ ಏಕಾಂತನನ್ನೇ ಬಯಸುತಿದ್ದ ನಾನು ಗೆಳತಿಯರಿಂದಲೂ ವಂಚಿತಳಾಗಿದ್ದೆ. ಯಾವಾಗಲೂ ಓದು, ಕಾಲೇಜು ಇವುಗಳಲ್ಲಿಯೇ ದಿನ ಸರಿದು ಹೋಗುತ್ತಿತ್ತು.

ಹತ್ತಾರು ಮನೆಗಳ ಮಧ್ಯದಲ್ಲೊಂದು ರೂಮನ್ನು ಬಾಡಿಗೆಗೆ ಹಿಡಿದ ನಾವೊಂದು ಸ್ವಯಂಪಾಕದಿಂದಲೇ ಊಟೋಪಚಾರ ಪೂರೈಸಿಕೊಳ್ಳುತ್ತಿದ್ದೆ.

ನನ್ನ ಮನೆತನ ಶ್ರೀಮಂತಿಕೆಯಿಂದೇನೂ ಕೂಡಿರಲಿಲ್ಲವೆಂಬುದು ನಗೆಗೆ ಚೆನ್ನಾಗಿ ತಿಳಿದಿತ್ತು. ಹಾಗಾಗಿ ಯಾವಾಗಲೂ ನಾನು ಮಿತವ್ಯಯವನ್ನು ವಿಹರಿಸಡೆಯುತ್ತಿದ್ದಿಲ್ಲ.

ಗೆಳತಿಯರಿಂದ ಒಂಟಿ ಕೋಣ ಎಂಬ ಉಪನಾಮವನ್ನೂ ಪಡೆದಿದ್ದೆ. ನನಗೆ ಅದರಿಂದಾವ ದುಃಖ ಕೋಪವೂ ಉಂಟಾಗುತ್ತಿದ್ದಿಲ್ಲ.

ದಿನವೂ ನನ್ನಲ್ಲಿಯೇ ನಾನೇ ಸಂತೋಷಿಸುತ್ತಿದ್ದೆ. ಸದಾ ನನ್ನ ಮನ ಅರಳಿ ಹೂವಾಗಿರುತಿತ್ತು. ಗೆಳತಿಯರ ಕೊಂಕುನುಡಿ ಕೇಳಿದಾಗ ಬೇಸರದ ಬದಲಿಗೆ ಅನ ತಾಪ ಉಂಟಾಗುತಿತ್ತು. ಮನಸ್ಸಿನಲ್ಲಿಯೇ ಹಿರಿಯ ಆದರ್ಶ ಜೀವನದ ಕಲ್ಪನೆಯನ್ನು ಕಟ್ಟಿಕೊಳ್ಳುತ್ತಿದ್ದೆ. ಆನೇಕಾನೇಕ ಸುಂದರ ಸ್ವಪ್ನ ಕಾಣುತ್ತಿದ್ದೆ. ನನ್ನ ಬದುಕು ಕಂಡು ಹೆರವರು ಕರುಬಬೇಕೆಂದೂ ಬಯಸುತ್ತಿದ್ದೆ.

ಹುದಿ ಮೊದಲಿಲ್ಲದ ಆಶಾಗೋಪುರ ನನ್ನು ಕಟ್ಟಹೂರಟ ನನಗಾಗ ಬೇರಾವ ಕಲ್ಪನೆಯೂ ಬಾರದಾಯಿತು.

ದಿನಗಳು ಒಂದರ ಮೇಲೊಂದುರುಳಿ ಹೋಗುತಿದ್ದಂದರ ಪರಿವೆಯೇ ನನಗಾಗುತ್ತಿದ್ದಿಲ್ಲ. ಅಗಲೇ ಪರೀಕ್ಷೆಗೂ ಸಮೀಪಿಸಿತು.

ಪರೀಕ್ಷೆಯಲ್ಲಿ ಪಾಸಾಗುವುದೇನೂ ಕಷ್ಟವಲ್ಲವೆಂಬ ದೃಢಸಂಕಲ್ಪದಲ್ಲಿದ್ದ ನನಗಾಗ ಬೇರಾವ ಹೆದರಿಕೆಯೂ ಇರಲಿಲ್ಲ.

ಂ ಂ ಂ

ಅದೊಂದು ಮಧ್ಯಾಹ್ನ. ಆಗತಾನೆ ಕಾಲೇಜಿನಿಂದ ಬಂದು ಊಟಕ್ಕೆಂದು ಬಟ್ಟಲಕ್ಕಿಟ್ಟು ಅಣಿಯಾಗುತ್ತಿದ್ದೆ.

ಆಗ ಯಾರೋ ನನ್ನನ್ನುಕೂಗಿ ಕರೆದುದನ್ನು ಕೇಳಿ ಹೊರಬಂದು ನೋಡಿದೆ.

ಮುಖದಲ್ಲಿಳಿವ ದೆವರನ್ನುಜ್ಜುತ್ತಾ ನಡುಹರೆಯದವರ ಪರಿಚಯವಾಗಲಿಲ್ಲ.

"ಯಾರು ಬೇಕು ನಿಮಗೆ?" ಎಂದು ನಾನೇ ಪ್ರಶ್ನಿಸಿದೆ.

"ಚಂದ್ರಕಲಾ ಎಂಬವರು ಇದೇ ಅಲ್ಲವೇ?" ಎಂದು ನನ್ನನ್ನೇ ಮರಳಿ ಪ್ರಶ್ನಿಸಿದರು.

"ಹೌದು ನನ್ನಿಂದ ಏನಾಗಬೇಕಿತ್ತು? ತಾವಾರೋ ನನಗೆ ತಿಳಿಯದಿಲ್ಲ?" ಎಂದು ಅವರ ಉತ್ತರವನ್ನೇ ನಿರೀಕ್ಷಿಸಿ ನಿಂತೆ.

"ನಿಮ್ಮಲ್ಲೊಂದು ಮಾತನಾಡಬೇಕಿತ್ತು. ಅದನ್ನು ಹೀಗೆ ಹೊರಗಡೆ ನಿಂತಾಡುವಂತಿಲ್ಲ. ಅದು ಬೇರಾರ ಕಿವಿಗೂ ಬೀಳಬಾರದು" ಎಂದರು.

ಅಷ್ಟರ ವರೆಗೆ ಅವರು ಉರಿಬಿಸಿಲಿನಲ್ಲಿಯೇ ನಿಂತಿದ್ದರು. ನಾನವರನ್ನಾಗಿ ಒಳ ಕರೆದು ಕುರ್ಚಿಯಲ್ಲಿ ಕೂಡುವಂತೆ ಹೇಳಿದೆ. ಅವರಾಡಲಿರುವ ಮಾತೇನಿರಬಹುದೆಂಬುದನ್ನು ಊಹಿಸಲಾರದೆ ನನ್ನಲ್ಲಿಯೇ ನಾನು ಚಡಪಡಿಸುತ್ತಿದ್ದೆ.

'ಒಂದಿಷ್ಟು ನೀರು ಕುಡಿಯಲು ಕೊಡುವಿರಾ?' ಎಂದರವರು. ಬಿಸಿಲಿನಲ್ಲಿ ಬಂದವರಿಗೆ ನೀರು ಕೇಳಲೂ ಮರೆತ ನನ್ನ ಮರೆವಿಗಾಗಿ ನಾಚಿ ಒಳಗೋಡಿ ನೀರು ತಂದು ಮುಂದಿಟ್ಟೆ. ತಂಬಿಗೆಯ ನೀರನ್ನೆಲ್ಲಾ ಖರ್ಚು ಮಾಡಿದವರಂತಾಗ ಸಂತೃಪ್ತಿಯೊಡನಂತೆ ಕಾಣಿಸಿತು.

'ನಾನು ನಿಮ್ಮ ತಂದೆ ಸಮಾನನೆಂದು ತಿಳಿಯಿರಿ. ಆದ್ದರಿಂದ ನಿಮ್ಮನ್ನೀಗ ಏಕವಚನದಿಂದ ಕರೆಯ ಬಹುದಷ್ಟೇ?' ಎಂದರು.

'ಅದಕ್ಕೇನು ಧಾರಾಳವಾಗಿ ಕರೆಯಿರಿ' ಎಂದೆ.

'ನೀನೂ ಕುಳಿತುಕೋ ಚಂದ್ರ. ನಾನಾಡುವುದನ್ನೀಗ ನೀನು ಸಾವಧಾನವಾಗಿ ಕೇಳಬೇಕು.'

ಅವರ ಮಾತಿನ ಧಾಟಿಎಂಬುದು ನನ್ನ ಅಳಿದ ತಂದೆಯ ಪ್ರತಿರೂಪದಂತೆ ಕಂಡಿತು. ನಗರಿವಿಲ್ಲದೆಯೆ ಅವರ ಬಗ್ಗೆ ಆತ್ಮೀಯ ಭಾವನೆ ಬೆಳೆಯ ತೊಡಗಿತು.

"ನನಗೂ ನಿನ್ನಂತೆ ಇರುವ ಒಬ್ಬ ಮಗಳಿದ್ದಾಳೆ ಚಂದ್ರ. ನಿನ್ನನ್ನು ಕಂಡರೆ ನನಗೀಗ ನೆನಪಾಗುತ್ತಿದೆ."

ಆ ಮಾತುಗಳನ್ನಾಡುತ್ತಿದ್ದ ಅವರ ಕಣ್ಣುಗಳಿಂದ ಹರಿದು ಬರುವ ನೀರನ್ನು ಕಂಡು ನನಗೂ ಸಂಕಟವಾಯಿತು.

"ಅದೇಕೆ ಕಣ್ಣೀರು?" ಆಶ್ಚರ್ಯದಿಂದಲೇ ಕೇಳಿದೆ ನಾನು.

"ಮಗಳ ನೆನಪಾದಾಗ ಕಣ್ಣೀರು ಕೆಳಗಿಳಿದು ಬರುವುದು. ಇದೊಬ್ಬ ಮಗಳು ಕಣ್ಣೀರಿಟ್ಟಿ ಲೈತೊಳೆಯುವುದನ್ನು ಕಾಣಬೇಕಾಯಿತೆಂಬ ಸಂಕಟ ನನ್ನ ಶಕ್ತಿಯನ್ನೂ ಕುಂದಿಸ ತೊಡಗಿದೆ."

"ಅದರ ಕಾರಣವೇನು?"

"ಕಾರಣವೇನೆಂದು ಹೇಳಲಿ ಚಂದ್ರ? ಆವಳ ಪತಿಯ ಅನಾದರವೇ ಅದಕ್ಕೆ ಕಾರಣ. ಬೇರಾವುದೋ ಮೋಹ ಜಾಲದಲ್ಲಿ ಸಿಲುಕಿದ ಅವನ ಮನ ಸಂಪೂರ್ಣ ಕೆಟ್ಟಂತಿದೆ. ಕೈಹಿಡಿದ ಪತ್ನಿಯನ್ನೇ ಮರೆತು ನಡೆದರೆ ಎಳೆಯ ಜೀವ ಅದೆಂತು ಸಹಿಸೀತು ಹೇಳು?"

"ಛಿ! ಛಿ! ಎಂಥಹ ಕಠಿಣ ಹೃದಯ!" ಎಂಬ ಉದ್ಗಾರದ ಮಾತುಗಳು ನನಗರಿವಿಲ್ಲದೆ ನನ್ನ ಬಾಯಿಂದ ಹೊರ ಬಂದುವಾಗ,

ಮತ್ತೆರಡು ಕ್ಷಣ ಮೌನವಾಗುಳಿದವರನ್ನು ಕೇಳಿದೆ.

"ತಾವಿಲ್ಲಿಗೆ ಬಂದ ಕಾರಣ ಹೇಳಲೇ ಇಲ್ಲವಲ್ಲ?"

ಆಗವರು ನನ್ನ ಮುಖವನ್ನೇ ಪ್ರಶ್ನಾರ್ಥಕವಾಗಿ ನೋಡತೊಡಗಿದರು.

"ಅದೇನು ಹಾಗೇಕೆ ನೋಡುವಿರಿ? ಹೇಳಬೇಕಾದ ಮಾತನ್ನು ಸಂಕೋಚದಿಂದ ತಡೆಹಿಡಿದಂತೆ ಭಾವಗಾಗ ಕಂಡಿತು. ಆದ ನಾನು ಹುನಃ ಕೇಳಿದೆ.

"ಸಂಕೋಚವಿಲ್ಲದೆ ಹೇಳಬಿಡಿ"

"ನಾನು ಹೇಳುವ ಮೊದಲು ಮತ್ತೊಂದು ಮಾತು ಚಂದ್ರ"

"ಅದೇನದು?"

"ನನಗೀಗ ನಿನ್ನ ಸಹಾಯದ ಅಗತ್ಯವೂ ಇದೆ. ನೀನು ನೆರವಾದಲ್ಲಿ ನನ್ನ ಮಗಳ ಬಾಳೂ ಸುಖಮಯವಾಗುವುದು."

ಆ ಮಾತು ಕೇಳಿದ ನನಗಾಗ ಆಶ್ಚರ್ಯವಾಗದಿರಲಿಲ್ಲ. ಅಪರಿಚಿತರೊಬ್ಬರು ನನ್ನಲ್ಲೀಗ ತನ್ನ ಮಗಳ ಒಳಿತಿಗಾಗಿ ಯೋಚಿಸುತ್ತಿದ್ದಾರೆ, ಅವರಿಗಾಗಿ ನಾನಾವ ಸಹಾಯ ಮಾಡಬಲ್ಲೆನೆಂಬುದೇ ನನ್ನ ಯೋಚನೆಗೆ ನಿಲುಕದ ವಿಷಯವಾಗಿತ್ತು.

"ಅದೇಕೆ ಮೌನವಾದಿ ಮಗು? ಅವರು ಕೇಳಿದರು.

"ಹೇಳಿ ನನ್ನಿಂದಾವ ನೆರವು ಬೇಕೀಗ"

"ಅದನ್ನು ನೀನಿಂದು ನಡೆಸ ಬಲ್ಲೆನೆಂದು ವಚನ ಕೊಡಬಲ್ಲೆಯಾ ಹೇಳು?"

ಅವರ ಮಾತು ಕ್ಷಣ ಕ್ಷಣಕ್ಕೂ ನನ್ನ ಕುತೂಹಲವನ್ನು ಕೆರಳಿಸ ತೊಡಗಿತು. ವಚನ ಯಾಚಿಸಿದಾಗ ಸ್ವಲ್ಪ ಯೋಚಿಸಬೇಕಾದ ವಿಚಾರವಿರಬೇಕೆಂದು ಭಾವಿಸಿ ಯೋಚಿಸ ತೊಡಗಿದೆ. ಅದರಂತಹ ಅಪಾಯಕಾರಿ ಯಾವುದೂ ನನ್ನ ಮೆದುಳಿನಿಂದ ಹೊಳೆಯದಾಯಿತು.

"ಅದೇಕೆ ಸುಮ್ಮಸುಳಿದೆ ಚಂದ್ರ? ಅ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಯಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

86 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

Phone— 5711
5712
5713 } 3 Lines.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೩೮
No. 38

ನವಯುಗ

ಸ್ವಾಮಿಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೨೩—೫ – ೧೯೭೮

ಮೂಸೆ ಉಳಿಯಿತು

ಹರಿಯಾನಾದಲ್ಲಿ ಮರು ಚುನಾವಣೆ ನಡೆಯಿತು— ಡೊಂಬರಾಟ ಮುಗಿಯುವ ವೇಳೆ ಬಂತು. ಪಕ್ಷಾಂತರ ಪಿಡುಗಿಗೊಂದು ಇಂಜೆಕ್ಷನ್ ಹರಿಯಾನಾದ ಜನತೆ ಕೊಟ್ಟಿತು. ಕಳೆದ ಸಾರ್ವತ್ರಿಕ ಚುನಾವಣೆಗಳ ವೇಳೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದಿದ್ದ ರಾಜ್ಯಗಳಲ್ಲಿ ಹರಿಯಾನಾ ಒಂದು. ಆದರೆ, ವಿರೋಧೀ ಪಕ್ಷಗಳ ಪೀಕಲಾಟ—ಪಿತೂರಿ, ಕಾಂಗ್ರೆಸ್ಸಿಗರ ಅನಪೇಕ್ಷಿತ ಅತೃಪ್ತಿ— ಅಧಿಕಾರ ವ್ಯಾಮೋಹಗಳಿಂದ ಪಕ್ಷಾಂತರದ ಜಂಡ್ಯ ಅಂಟಿತು; ಕಾಂಗ್ರೆಸು ಬಹುಮತ ಕಳೆದುಕೊಂಡಿತು; ರಾಷ್ಟ್ರಪತಿ ಆಳಿಕೆ ಅಧಿವಾರ್ಯವೇ ಆಯಿತು. ಶೀಘ್ರವಾಗಿ ಮರುಚುನಾವಣೆಗಳು ನಡೆದುವು. ಜನತೆ ತಮ್ಮ ಒಲವೆಲ್ಲಿ ಎಂಬುದನ್ನು ತೋರಿಸಿಕೊಟ್ಟಿತು. ಕಾಂಗ್ರೆಸು ಹರಿಯಾನಾದಲ್ಲಿ ಸ್ಪಷ್ಟ ಬಹುಮತವನ್ನು ಪಡೆದು ಮತ್ತೆ ಅಧಿಕಾರ ಗ್ರಹಣ ಮಾಡುವಂತಾಯ್ತು. ಅಗ ಸ್ಥಾನಗಳಲ್ಲಿ ಅಲ್ಪ ಸ್ಥಾನಗಳನ್ನು ಗೆದ್ದು ಸುಭದ್ರವಾಗಿ ಆಡಳಿತ ಧೀರ್ಘಿಸುವ ಶಕ್ತಿಯನ್ನು ಪಡೆಯಿತು. ಅಲ್ಪ ಬಹುಮತದ ಗೊಂದಲದಿಂದ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ನಡೆದ ಡೊಂಬರಾಟದಿಂದ ಹರಿಯಾನಾದ ಜನತೆ ತಾನು ಪಾಠ ಕಲಿತಿದೆ; ಉಳಿದ ರಾಜ್ಯಗಳಿಗೆ ಪಾಠ ಕಲಿಸಿದೆ.

ಕಾಂಗ್ರೆಸು ಬಹುಮತದ ಪಕ್ಷವಾಯಿತು. ವಿಶಾಲ ಹರಿಯಾನ ಪಕ್ಷವು ೧೩ ಸ್ಥಾಪಗಳನ್ನು ಗೆಟ್ಟಿಸಿ ಎರಡನೆಯ ಸಂಖ್ಯಾಬಲ ಪಡೆದಿದೆ. ಪೆಟ್ಟುತಿಂದ ಪಕ್ಷವಂದರೆ, ಭಾರತೀಯ ಜನಸಂಘ. ಇದು ಸೋಲಿಗೆ ರಾಷ್ಟ್ರೀಯ ಕಾರಣಗಳೂ ಇರಬೇಕು. ಇತ್ತೀಚೆಗೆ ದೇಶದ ಬೇರೆ ಬೇರೆಡೆ ನಡದ ಜಾತೀಯ ಗಲಭೆಗಳಿಗೂ ಜನ ಸಂಘಕ್ಕೂ ತಾಳಿಕಟ್ಟುವವೂ ಇದ್ದಾರೆ. ಜನ ಸಂಘಕ್ಕೆ ೩೩ ಸ್ಥಾನಗಳಿಗೆ ಸ್ಪರ್ಧಿಸಿದ್ದರೂ ಗಳಿಸಿದ್ದು ೬ ಮಾತ್ರ. ಕಾಂಗ್ರೆಸ್ಸು ಇಷ್ಟೊಂದು ಅಧಿಕ ಪ್ರಮಾಣದಲ್ಲಿ ಜಯಗಳಿಸುವುದೆಂದು ಯಾರೂ ನಂಬಿರಲಿಲ್ಲ. ಅದು ಬಹು ಮತವನ್ನೇ ಪಡೆಯಲಾರದು ಎಂದು ವಿರೋಧೀ ಪಕ್ಷಗಳು ನಿರೀಕ್ಷಿಸಿದ್ದುವು. ಆದರೆ ಈಗ ಅವುಗಳ ನಿರೀಕ್ಷೆ ಸುಳ್ಳಾದುದು ಮಾತ್ರವಲ್ಲ; ಅವು ತಮ್ಮ ಮುಖಕ್ಕೆ ಮಸಿಯನ್ನೇ ಬಳಿಸಿಕೊಂಡುವು. ಇದು ಹೇಗಾಯಿತು ಎಂಬುದನ್ನು ಕಾಂಗ್ರೆಸ್ಸಿಗರು ಸರಿಯಾಗಿ ಮನಗಾಣಬೇಕು. ಅಧಿಕಾರವನ್ನು ಪಡೆಯಲು ಕಾಂಗ್ರೆಸ್ಸು ಸರ್ವಶಕ್ತಿಯಿಂದ ಹೋರಾಡಿದ್ದರೆ, ಅದನ್ನು ಅಧಿಕಾರದಿಂದ ದೂರವಿಡಲು ಇತರ ಪಕ್ಷಗಳೂ ಅದಕ್ಕಿಂತ ಹೆಚ್ಚಾಗಿ ಪ್ರಯತ್ನಿಸಿದುವು— ಇದು ನ್ಯಾಯವೇ, ಚುನಾವಣೆಗಳಲ್ಲಿ ಇದು ಸಹಜ, ಸ್ವಾಗತಾರ್ಹ. ಕಾಂಗ್ರೆಸ್ಸು ಉಳಿದ ರಾಜ್ಯಗಳಲ್ಲಿ ನಡೆದ ಡೊಂಬರಾಟದಿಂದ ನೊಂದಿದೆ; ಆದುದರಿಂದ ತನ್ನ ಪಕ್ಷೀಯ ಅಭ್ಯರ್ಥಿಯನ್ನು ಆರಿಸುವಾಗ ಕಾಂಗ್ರೆಸ್ಸು ಬಹಳ ಎಚ್ಚರ ವಹಿಸಿದ್ದು, ಪಕ್ಷಾಂತರ ರೋಗಪೀಡಿತರನ್ನು ಬಹಳ ದೂರವಿಟ್ಟದ್ದೇ ಈ ವಿಜಯದ ಒಂದು ಗುಟ್ಟು. ಹಲವು ಸಮಗಾರರ ಕೈಯಲ್ಲಿ ಚರ್ಮವನ್ನು ಕೊಡುವುದನ್ನು ಹರಿಯಾನಾ ಜನತೆ ಮೆಚ್ಚಲಿಲ್ಲ; ಕಾಂಗ್ರೆಸ್‌ನ ಕೈಯಿಂದಲಿಡಳಿತ ತಪ್ಪಿದರೆ ತಮಗೆ ಉಳಿಗಾಲವಿಲ್ಲವೆಂಬುದನ್ನು ಅದು ತಿಳಿದುಕೊಂಡಿತು. ಒಂದು ವಿಧದಲ್ಲಿ ಇದು ಶರಣಾಗತಿಯೂ ಹೌದು. ಇದನ್ನು ಜನತೆಯ ದೌರ್ಬಲ್ಯವೆಂದು ಕಾಂಗ್ರೆಸ್ಸು ತಿಳಿಯಬಾರದು; ಜನತೆಯ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳಬಾರದು; ಕೈಗೆ ಬಂದಿರುವ ಅಧಿಕಾರವನ್ನು ಜನತೆಯ ಹಿತಚಿಂತನೆ— ಯೋಗಕ್ಷೇಮದಲ್ಲಿ ಉಪಯೋಗಿಸಿ ರಾಜ್ಯ—ರಾಷ್ಟ್ರಗಳ ಪ್ರಗತಿ ಸಾಧಿಸಿ ಜನತೆಯ ಆಶೋತ್ತರಗಳನ್ನು ಸೂರೆಯಸಬೇಕು.

ಹರಿಯಾನಾದ ವಿಜಯ ಕಾಂಗ್ರೆಸ್‌ನ ಪ್ರತಿಷ್ಠೆಯ ಉಳಿಕೆ. ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಗೇರಿದ ಮೇಲೆ ಪಕ್ಷಾಂತರ ಪಿಡುಗು ಮಾಂಸವಾಗಿ ಹಬ್ಬಿ ಅದು ರಾಷ್ಟ್ರಪತಿ ಆಳಿಕೆಗೇ ನೂಕಿಮಾಡಿ ಕೊಟ್ಟದ್ದನ್ನು ನಾವು ಮರೆಯಬಾರದು.

ಪಶ್ಚಿಮ ಬಂಗಾಳ, ಉತ್ತರ ಪ್ರದೇಶಗಳಲ್ಲಿ ಎಂಥೆಂಥ ಚುನಾವಣೆಗಳು ನಡೆಯಲಿದ್ದ, ಹರಿಯಾನಾದಲ್ಲಿನ ಕಾಂಗ್ರೆಸ್ ವಿಜಯ ಮುಂದಿನ ವಿಜಯಗಳಿಗೆ ಸಾಂದೀಪನಿಗಳು; ಶ್ರೀ ನಿಜಲಿಂಗಪ್ಪನವರು ಪೂರ್ಣಾರ್ಥದಲ್ಲಿ ಅಧ್ಯಕ್ಷರಾಗಿ ಇದನ್ನು ಸಾಧಿಸಲಿ.

ಪತ್ರಿಕೆಯ ಮೇಲೆ ಗೆದಾಪ್ರಹಾರ

ಉಪಪ್ರಧಾನಿ—ವಿತ್ತಮಂತ್ರಿ ಮುರಾರ್ಜಿ ದೇಸಾಯಿಯವರ ೧೯೭೮—೭೯ನೆ ಸಾಲಿನ ಮುಂಗಡಪತ್ರ ಅಂಚೆ-ತಂತಿ ದರದಲ್ಲಿ ಅಮೂಲಾಗ್ರ ಪರಿಷ್ಕರಣವನ್ನೇ ಸೂಚಿಸಿತ್ತು. ಅಂಚೆ ಕಾರ್ಡು, ಅಂತರ್ದೇಶೀಯ ಪತ್ರ ಮತ್ತು ಪ್ರಾವರಣಗಳ ಬೆಲೆಯನ್ನು ಬಹುಪಾಲು ಹೆಚ್ಚಿಸಲು ಸೂಚಿಸಲಾಗಿತ್ತು. ಇದಕ್ಕಿಂತಲೂ ವೃತ್ತಪತ್ರಿಕೆಗಳ ಮೇಲಿನ ಅಂಚೆ ದರವನ್ನು ಮಿತಿಮೀರಿ ಏರಿಸಿದ್ದು ಎದೆ ಹಾರುವಂತಿತ್ತು. ಶ್ರೀ ಮುರಾರ್ಜಿಯವರು ಅಧಿಕ ಕರಾಕರಣೆಯ ಹೆಚ್ಚು ಸೂಚನೆಗಳನ್ನು ಮುಂದೂಡಿ, ಮತ್ತೆ ಅವುಗಳಲ್ಲಿ ಕೆಲವನ್ನು ಹಿಂತೆಗೆದುಕೊಳ್ಳುವ ಪ್ರವೃತ್ತಿಯವರು. ಆದರೆ, ಈ ಬಾರಿ ಅವರ ವರ್ತನೆ ಇದಕ್ಕೆ ದೂರವಾಯಿತು. ಅಂಚೆ ತಂತಿ ದರಗಳ ಹೆಚ್ಚಳವನ್ನವರು ಸಂಪೂರ್ಣವಾಗಿಯೂ ಸ್ವೀಕರಿಸಿದರೂ ಕೆಲವಂಶವಾದರೂ ಹಿಂತೆಗೆದುಕೊಳ್ಳುವರೆಂದು ಜನತೆಯು ನಿರೀಕ್ಷೆಗಳಿಟ್ಟಿತ್ತು. ವಾಸ್ತವವಾಗಿ ವೃತ್ತಪತ್ರಿಕೆಗಳ ಮೇಲಿನ ದರವನ್ನಾದರೂ ಅವರು ಇಳಿಸಬೇಕಾಗಿತ್ತು. ಅಂಚೆಯ ಮೂಲಕ ಹೋಗುವ ವೃತ್ತಪತ್ರಿಕೆಗಳ ಸಂಖ್ಯೆಯಾಗಿ ಕಡಿಮೆ ಆಗುತ್ತಿದೆ. ಸಣ್ಣ ವೃತ್ತಪತ್ರಿಕೆಗಳು ಆರ್ಥಿಕ ದುಸ್ಥಿತಿಯಿಂದ ಕಂಗಾಲಾಗಿಯೇ ನಡೆಯುತ್ತಿವೆ. ಬ್ರಹತ್ ಮತ್ತು ಮಧ್ಯಮ ಮಟ್ಟದವು ಮಾಡದ ಕೆಲಸವನ್ನು ಇವು ಜನಜನದ ಮನೆಮಟ್ಟ ಮನ ಮುಟ್ಟಿಸುತ್ತವೆ. ಮಂತ್ರಿಮಹಾಶಯರಿಂದರೂ ಇವುಗಳ ಪಾತ್ರದ ಕಾರ್ಯ, ಅವಶ್ಯಕತೆಯ ಕುರಿತು ಕಾಳಗಟ್ಟಲೆ ಭಾಷಣ ಬಿಗಿಯುತ್ತಾರೆ; ಹಾಳೆಗಟ್ಟಲೆ ಹೇಳಿಕೆ ಕೊಡುತ್ತಾರೆ. ಆದರೆ, ಈಗ ಹೆಚ್ಚಿಸಿದ ಅಂಚೆ ದರವು ದುಬಾರಿಯದು— ಇದನ್ನಾದರೂ ಹಿಂತೆಗೆದುಕೊಳ್ಳದುದು ಅವುಗಳ ಮೇಲೆ ಇಡೆದ ಗದಾಪ್ರಹಾರ. ಇದು ಸರಿಗೆ ಒಂದು ರೂಪಾಯಿ ಅಂಚೆ ಪಚ್ಚೆ ತಗಲುತ್ತಿದ್ದರೆ, ಮುಂದೆ ಅದು ಎರಡೂವರೆ ರೂಪಾಯಿಯಾಗುವುದು. ತಡವಾದರೂ ಚಿಂತಿಸ್ಸು; ವೃತ್ತಪತ್ರಿಕೆಗಳ ಮೇಲಿನ ಈ ಹೊಲಸಿನಂದ ತಲೆಧಿಂದನ್ನು ಇನ್ನು ಇಡಮಾಡದೆ ಇಳಿಸುವುದು ಅಗತ್ಯವಿದೆ; ಇಲ್ಲವಾದರೆ, ಸೋಲಿನ ತಲೆಯಾಜ್ಜು ಹೊರೆಯೇರಿಸಿದಂತಾಗಿ ಸಣ್ಣ ಪತ್ರಿಕೆಗಳು ಮುಗ್ಗುರಿಸಿಯಾವು. ಅಲ್ಲ ಮುಂದುವರಿಯುವುದು ಕಠಿಣ ಸಾಹಸವೇ ಸರಿ.

ಇನ್ನಿಲ್ಲದ ಕಡೆಂಗೋಡ್ಲು

ಕರ್ನಾಟಕ ಪರಿಷತ್ಪಾಲಕರಾಗಿರುವಾಗಲೇ ಮೃತ್ಯುಮುಖವಾದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಕನ್ನಡ ಸಾರಸ್ವತ ಲೋಕದ ತೇಜಸ್ವಿಗಳಾಗಿ ಕಂಗೆಡಿಸಿದ್ದವರು. ೧೯೦೪ರಲ್ಲಿ ಜನಿಸಿದ ಭಟ್ಟರು ಮುಳಿಯಾನ ನಾರಾಯಣಪ್ಪನವರಿಂದ ಸಾಹಿತ್ಯಾಧ್ಯಯನ ಮಾಡಿದರು. ಶ್ರೀ ಭಟ್ಟರು ಕವಿಗಳು, ಸಂಶೋಧಕರು, ಕತೆಗಾರರು, ಕಾದಂಬರಿಗಾರರು, ಎಲ್ಲಕ್ಕಿಂತ ಹೆಚ್ಚಾಗಿ ಅವರು ಪತ್ರಕರ್ತರು. ಮಂಗಳೂರಿನಿಂದ ಹೊರಡುವ "ರಾಷ್ಟ್ರ ಬಂಧು" ಸಾಪ್ತಾಹಿಕದ ಸಂಪಾದಕರಾಗಿ ಬಹುವರ್ಷ ಸೇವೆ ಸಲ್ಲಿಸಿದ ಬಳಿಕ ಅವರು "ರಾಷ್ಟ್ರಪತಿ" ಸಾಪ್ತಾಹಿಕದ ಪ್ರಾರಂಭದಿಂದ ಕೊನೆ ತನಕವೂ ಅದರ ಸಂಪಾದಕರಾಗಿದ್ದರು. ಪತ್ರಿಕೆಯ ಕಾರ್ಯಕ್ಕೆಂದೇ ಮನೆಯಿಂದ ಮಂಗಳೂರಿಗೆ ಬರುವಾಗ ಸ್ವಿಸರಾದರು. 'ವೃತ್ತಿ'ಯಲ್ಲಿ ಪ್ರಾಧ್ಯಾಪಕರಾದ ಡಿ. ಕಡೆಂಗೋಡ್ಲು ರವರು ಕಾರವಾರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇವರಿಗೆ ಕಡೆಂಗೋಡ್ಲು ಅವರಿಗೆ "ನವಯುಗ"ದ ಶ್ರದ್ಧಾಂಜಲಿ ಸಲ್ಲಿಸುವುದಷ್ಟೆ. ಅವರ ಆತ್ಮಕ್ಕೆ ಚಿರ ಶಾಂತಿ ಸಿಗಲೆಂದು ಹಾರೈಸುತ್ತೆವೆ.

ವಚನ ಸುಧೆ

ರೋಷಿತೇ ಸಾಮಾಜೈರ್ವಿದ್ಯಾ
ವನಂ ಗಾಹಿತಾ ಪೇಶಂ
ವಾಚಾ ದುರುಕ್ತಂ ಭೀಷ್ಮಂ
ನ ಸಂರೋಹತಿ ವಾಕ್ಶಲ್ಯಂ |

ಬಾಣದಿಂದ, ಅಥವಾ ಕೊಡಲಿಯಿಂದ ಕಡಿಯಲ್ಪಟ್ಟ ಕಾಡು ಮತ್ತೆ ಚಿಗುರೀತು; ಆದರೆ, ಕಟು ವಾಕ್ಯಗಳನ್ನಾಡಿದ ಮನಿಷಿಯಿಂದ ಗಾಯವು ಎಂದಿಗೂ ತುಂಬಿ ಬರುವುದಿಲ್ಲ.

ವಿದಾಯ ಸತ್ಕಾರ

ಕಾಪು ವಿಜಯ ಬ್ಯಾಂಕಿನ ಮೆನೇಜರರಾಗಿದ್ದ ಶ್ರೀ ಕೆ. ಭೋಜಾಂಜನೇಯ ಯುವರಾಗಿ ಬ್ರಹ್ಮಾವರಕ್ಕೆ ವರ್ಗವಾಗಿದ್ದು ಅವರನ್ನು ಬೀಳ್ಕೊಡುವ ಸಮಾರಂಭವು ತಾ. 18-5-78ರಂದು ಬ್ಯಾಂಕಿನ ಸಿಬ್ಬಂದಿಯವರಿಂದ ಬ್ಯಾಂಕಿನ ಆವರಣದಲ್ಲಿ ಜರಗಿಸಲ್ಪಟ್ಟಿತು. ಕಾಪು ಶಾಖೆಗೆ ಶ್ರೀ ಬಿ. ರಮಾನಂದ ರಾಯರು ಮೆನೇಜರರಾಗಿ ಬಂದಿರುವರು.

ಚಂದಾದಾರರು

ತಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯವಾಡಿ ಮನಿಯಾರ್ಡರ್‌ನ ಮೂಲ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

—ಮೆನೇಜರ್, ನವಯುಗ.

ನರಸಣ್ಣನ ಸರಸ



"ಹದಿನೆಂಟುವರ್ಷದ ಹೆಣ್ಣಿ ವಿವಾಹ ಯೋಗ್ಯಳು; ಇಪ್ಪತ್ತೈದು ವರ್ಷದ ವಿವಾಹಿತಳು ಒಂದು ಮಗುವಿನ ತಾಯಿ ಮಗಳು ಯೋಗ್ಯಳು.... ಮೂವತ್ತೈದು ವರ್ಷದ ವಿವಾಹಿತೆ ಎರಡು ಮಕ್ಕಳ ತಾಯಿಯೆ ಫಲಳು...ಹೇಗೆ?"

ಮುಖಚಿತ್ರ

'ಮೆನೆ-ಮದ್ದು' ಎಂಬ ಗೃಹವೈದ್ಯ ಪುಸ್ತಕದ ಗ್ರಂಥಕರ್ತರೂ ಸಾರ್ವಜನಿಕ ಕೆಲಸಗಾರರೂ ಆದ ಬೆಳ್ಳಿಜ್ಜೆಯ ಜನಪ್ರಿಯ
ಡಾ| ವೆಂಕಟ್ರಾಯ ಕೊರಡ್ಕಲ್

ವಿಚಾರ ವರ್ಷ

ರಾಮಾಯಣ ಹಾಗೂ ಜೀವನ ದರ್ಶನ

ಬರೆದವರು: ಶ್ರೀ ಕೆ. ಸಚ್ಚಿದಾನಂದ ಉಡುಪ

ದೇವಾಸುರ ಸಂಗ್ರಾಮ:-ರಾಮಾಯಣದ ಮೊದಲ ಸೀರನೇ ದೇವಾಸುರ ಸಂಗ್ರಾಮ. ದೈವೀ ಮತ್ತು ಆಸುರಿಯುಳ್ಳ ಲೇಖಿಸಲ್ಪಟ್ಟ ಒಪ್ಪವೇ "ದೇವಾಸುರ ಸಂಗ್ರಾಮ"ವೆಂಬ ಕಾವ್ಯ. ಇದರಲ್ಲಿ "ಕಟ್ಟಿದ" ಯೂ "ಒಳ್ಳೆಯದು" ಎಂಬೀ ಅರ್ಥಗಳು ಕಾಣಿಸಿಕೊಳ್ಳದೆ, ಬದಲು ಎರಡು ಪ್ರಕಾರದ ಜೀವದರ್ಶನ— ಎರಡು ಮೇಳದ ರೀತಿ ಸಿಯುವುದು ಕಾಣಿಸಿಕೊಳ್ಳುತ್ತವೆ.

ಋಗ್ವೇದದಲ್ಲಿ ಈ ದೇವಾಸುರ ಸಂಗ್ರಾಮವೆಂಬುದು ಎರಡು ಕಥೆಗಳ ರೂಪದಲ್ಲಿ ಬರೆಯಲ್ಪಟ್ಟಿದೆ. ಪ್ರಥಮ ಕಥಾಭಾಗದಲ್ಲಿ ರಾಮ ರಾವಣರ ಯುದ್ಧ ಇದೆ. ಅನಂತರದ ಭಾಗದಲ್ಲಿ ಕೌರವ ಪಾಂಡವರ ಕುರಿತು ವಿವರಣೆಯಿದೆ. ಸಂಗರವನ್ನು ಎರಡು ಮೇಳವಾಗಿ ವಿಂಗಡಿಸಿದರೆ, ಮೊದಲನೆಯ ಮೇಳದ ಮುಖ್ಯ ಸದಸ್ಯ ವಶಿಷ್ಠ ಹಾಗೂ ಎರಡನೆಯ ಮೇಳದ 'ಎದೆಗಾರ' ವಿಶ್ವಾಮಿತ್ರ.

ಒಟ್ಟಿನಲ್ಲಿ ದೇವಾಸುರ ಸಂಗ್ರಾಮವೆಂಬುದು ಎಂಡು ವೃತ್ತವಾಗಿ ಬೇರೆ ಬೇರೆ ತೆರನಾದ ಆಕಾರ, ರೀತಿ ಸಿಯುಮಗಳ ಎರಡ ಹೊಸ್ತು ಕಾವ್ಯವಾಗಿದೆ.

ಅಸ್ತಿತ್ವವಾದ ಮತ್ತು ಆತ್ಮದ ಜ್ಞಾನ:— "ಯಾವನು ಆತ್ಮದ ಕುರಿತು ತಿಳಿಯುವನೋ 'ಆತ್ಮವೆಂದರೇನು?' ಎನ್ನುವ ಪ್ರಶ್ನೆಗೆ ಉತ್ತರ ಕೊಡಲು ಸಮರ್ಥನೋ ಅತನು ಇಷ್ಟಾರ್ಥವನ್ನು ಪಿಂಡಿತವಾಗಿ ಪಡೆಯಲು ಸಾಧ್ಯಮ" ಎಂದು ಪ್ರಜಾಪತಿಯು ಅಂದಾಗ ದೇವತೆಗಳು ಹಾಗೂ ಅಸುರರು ಯೋಗ್ಯ ಪ್ರತಿನಿಧಿಗಳನ್ನು ಹುಡುಕಿ, ಆ ಪ್ರತಿನಿಧಿಗಳಾದ ಇಂದ್ರ ಮತ್ತು ವಿರೋಚನರನ್ನು ಪ್ರಜಾಪತಿಯ ಕಡೆಗೆ "ಆತ್ಮ"ದ ಕುರಿತು ತಿಳಿಯಲು, ಅದರ ಜ್ಞಾನಪ್ರಾಪ್ತಿಗಾಗಿ ಕಳುಹಿಸಿದರು.

ಈರ್ವರೂ ಬ್ರಹ್ಮಚರ್ಯವನ್ನು ಸ್ವೀಕರಿಸಿದ ಬಳಿಕ ಪ್ರಜಾಪತಿಯು "ಕಣ್ಣಮುಂದೆ ಕಾಣಿಸುವ ಮಹಿಮನೇ ಆತ್ಮ' ಅಥವಾ ಅಮೃತಮಯ ಅಭಯದಾತ ಬ್ರಹ್ಮ" ಎಂದಾಗ ಇಂದ್ರ ವಿರೋಚನರು ಸುಲಕಿತರಾಗಿ "ಗುರುಗಳೇ, ಹಾಗಾದರೆ ಕನ್ನಡಿಯ ಮುಂದೆ ಕಂಡಾಗ ಗೋಚರಿಸುವವನು ಬ್ರಹ್ಮನೆ?" ಎಂದು ಕೇಳಿದರು. ಪ್ರಜಾಪತಿಯು 'ಅಲ್ಲ'ವೆನ್ನಲಿಲ್ಲ; 'ಹಾಂ'ದನು.

ಕೂಡಲೇ ಇವರೀರ್ವರೂ ವಸ್ತ್ರ ಭೂಷಣದಿಳೊಂದಿಗೆ ಅಲಂಕರಿಸಿ ಸ್ವೀಕನಲ್ಲಿ ತಮ್ಮ ಪ್ರತಿಬಿಂಬವನ್ನು ಕಂಡು ಸಂತೋಷದಿಂದ ಹಿಮ್ಮರಳಿದರು. ವಿರೋಚನನು 'ದೇಹ'ವೇ ಆತ್ಮವೆಂದು ಅರ್ಥ ಕಟ್ಟಿದ. ಇಂದ್ರನಿಗೆ ಇದರರ್ಥ ತಿಳಿಯದೆ ಅಸಂತೋಷನಾಗಿ ಸೀದಾ ಪ್ರಜಾಪತಿಯಿದ್ದಲ್ಲಿಗೆ ಬಂದು ವಿಚಾರ ತಿಳಿಸಿದಾಗ ಪ್ರಜಾಪತಿಯು "ಸ್ವಪ್ನದಲ್ಲಿ ಅಥವಾ ನಿದ್ರೆಯಲ್ಲಿ ಮಹಿಮೂ ಪುರುಷನು ಬಂದು ಕಾಣಿಸಿಕೊಳ್ಳುವನೇ ಆತ್ಮನು' ಎಂದು ಇಂದ್ರನನ್ನು ಸಮಾಧಾನಿಸುವನು. ಈಗಲೂ ಇಂದ್ರನು ಅಸಂತೋಷನಾಗಿ ಬ್ರಹ್ಮಚರ್ಯವನ್ನು ಮತ್ತೂ ಪಾಲಿಸಬೇಕಾಯಿತು. ಕೊನೆಗೆ ಇನೊಂದು ವರ್ಷ ಬ್ರಹ್ಮಚರ್ಯ ವ್ರತವನ್ನು ಪಾಲಿಸಿದ ಬಳಿಕ "ಆತ್ಮ"ದ ಜ್ಞಾನ ಪ್ರಾಪ್ತವಾಯಿತು.

ಇದೇ ತಿಳುವಳಿಕೆಯ ಕಾರಣದಿಂದ ದೇವತೆಗಳು ಇಡೀ ಲೋಕದಲ್ಲಿ ಸಂಪೂರ್ಣ ಇಷ್ಟಾರ್ಥವನ್ನು ಪಡೆಯಲು ಯೋಗ್ಯರಾದರು. ಅಸುರರು ಕೇವಲ ದೈಹಿಕ ಶಕ್ತಿಯನ್ನಷ್ಟೇ ಪಡೆದರು.

ಅಸ್ತಿತ್ವವು ಮೂಲ. ತದನಂತರವೇ ಈ ಅಸ್ತಿತ್ವದಿಂದ ಸಂಸ್ಕಾರ ಅದರ್ಶಗಳನ್ನು ತಮ್ಮ ಅವಿದ್ಯಾ ಹಾಗೂ ದೇಹದ ಕಾರಣದಿಂದಲೇ ಅಸುರರಿಗೆ 'ದೇಹವೇ ಆತ್ಮ'.

ತಳಸಬೇಕಾದಾಗ ಪರ್ವತವನ್ನು ಕೈಯಲ್ಲಿ ಎತ್ತುವುದು, ಸಮುದ್ರವನ್ನು ಹುಡಿಹಿ ಸೀಡಿಸುವುದು ಅ ಯುವದ ಮಹತ್ವೀಯರಿಂದ ಮಾಡಲ್ಪಟ್ಟ ಈ ಎಲ್ಲಾ ಕಾರ್ಯದಳು ಸರ್ವಸಾಮಾನ್ಯವಾದವುಗಳಲ್ಲ. ಅಂದರೆ ಈ ಶ್ರೇಷ್ಠರು ಹೇಡಿಗಳಾಗದೆ ಅವಿದ್ಯಾ ದರ್ಶನ ದೀಕ್ಷಿತರು. ಅವರಿಗೆ ತಮ್ಮ ಅಸ್ತಿತ್ವದ ಮೇಲೆ ನಂಬಿಕೆಯಿದೆ. ಅಂತೆಯೇ ಸುರರಿಗೂ ತಮ್ಮ 'ಆತ್ಮದ ಜ್ಞಾನ' ಮೇಲೆ ವಿಶ್ವಾಸವಿದೆ. ಒಟ್ಟಿನಲ್ಲಿ ರಾಮಾಯಣ ಅಥವಾ ದೇವಾಸುರ ಸಂಗ್ರಾಮವೆಂಬುದು "ಅಸ್ತಿತ್ವ"ದ ವಿಶ್ವಾಸಿ ಶಕ್ತಿಯಿಂದ 'ಆತ್ಮಜ್ಞಾನ'ದ ವಿಶ್ವಾಸಿ ಶಕ್ತಿಯ ದ್ವಂದ್ವ ಚಿತ್ರದ ತಿರುಳು ರಾಮಾಯಣವೆಂಬ ದರ್ಶನ ಅಥವಾ ಮಾಯಾ ಜಗತ್ತು.

ಲಂಕೆ ಹಾಗೂ ಲಂಕಾ ನಿವಾಸಿಗಳು:— ಲಂಕೆಯ ನಿವಾಸಿಗಳು ಅಳ್ಳರೂ ಅಲ್ಲ, ಫೀಚರೂ ಅಲ್ಲ. ಅವರಲ್ಲಿ ಅಸುರದರ್ಶನದಲ್ಲಿ ದೃಢ ವಿಶ್ವಾಸವಿತ್ತು. ವಾಲ್ಮೀಕಿಯು ಒಂದುಕಡೆ ರಾವಣನನ್ನು "ಮಹಾತ್ಮ" ಎಂದು ಕರೆದಿದ್ದಾನೆ. ಲಂಕೆಯನ್ನು 'ಸುರಶಾಂ', ಅಥವಾ "ಯಶಸ್ವಿನೀ" 'ರಾವಣ ಬಾಹುಪಲಿತಂ' ಎಂದು ವರ್ಣಿಸಿದ್ದಾನೆ. ಮತ್ತೊಂದು ಕಡೆ ಸ್ತ್ರೀಯರನ್ನು "ಸ್ತ್ರೀಣಾಂ ಮಧ್ಯ ವಿದ್ಯಾಸಾಂ ದಿವಿಜಾಪ್ಸರಸಾಮಿವ ವೈಶಿಶ್ರಾನ ಕಾಂಚಿ ನಿನಂದನಸುರಾಣ್ಯೆ ಚ ಘಿಷ್ಟಿಷ್ಟಂ" ಎಂದು ವಿವರಿಸಲ್ಪಟ್ಟಿದೆ.

ಸುಂದರ ಕಾಂಡವನ್ನು ಓದಿದಾಗಲೇ ಲಂಕೆಯ ಶೋಭೆಯನ್ನು ಮನಗಾಣಬಹುದು. ರಾವಣನೇ ಈ ಲಂಕೆಯ "ಸ್ವಾಮಿ." ಅಥವಾ "ಗುರು". ಲಂಕೆಯವರು ತಮ್ಮ 'ದೈಹಿಕ ಅಸ್ತಿತ್ವ'ವನ್ನು ಅನುಸರಿಸಿ ದೇವಂನ್ನು ಆರಾಧಿಸುತ್ತಿದ್ದರು. ರಾವಣನಿಗೆ 'ದೈಹಿಕ ಅಸ್ತಿತ್ವ'ದ ಅಪರಿಮಿತ ವಿಶ್ವಾಸ. ಈ ವಿಶ್ವಾಸದಿಂದಲೇ ತನ್ನ ಸಜೀವವು ಭೂಮಿಯಿಂದ ಸ್ವರ್ಗಕ್ಕೆ ಹೋಗಬೇಕೆಂದು ಹಂಬಲಿಸುತ್ತಿದ್ದನು. ಆತ್ಮ ಸೂಕ್ಷ್ಮ ಶರೀರದ ಮಧ್ಯವಿದಿಂದ ವ್ಯತ್ಯಾಸವನ್ನು ಅನೇಕರು ಜಯಿಸಿದರು. ರಾವಣನಿಗೆ "ಸಜೀವ"ದ ವಿಜಯದ ಅಭಿರುಚಿಯಿರದೆ ಯೋಗ ಮಾರ್ಗದ ಮುಖಾಂತರ ವ್ಯತ್ಯಾಸವನ್ನು ಜಯಿಸುವ ಆಕಾಂಕ್ಷೆಯಿತ್ತು. ಯಮನ ಕೂಡೆ ಕಾದಾಟವೂ ಆಯಿತು. ರಾವಣನಿಂದ ಯಮನ ಸೇನೆಯು ಛಿನ್ನ ಭಿನ್ನವಾಯಿತು. ತನ್ನ ಬಿಲ್ಲ ಮೇಲೆ ಬಾಣ ಸೇರಿಸುತ್ತಾ "ಕ್ರುದ್ಧ ತ್ರಿಪುರಿಶಂಕರೇಣ ಯಥಾ" ಎಂದು ಬಾಣ ಹೊಡುವನು. ಯಮರಾಜನ "ರಥಂ ಲೋಕಾಭ್ಯಾ ವಹಂ"ದ ಸಮ್ಮುಖದಲ್ಲಿ ರಥದಲ್ಲಿ ಚಲಿಸುತ್ತಾ ಏಳು ರಾತ್ರಿಗಳ ಕಾಲದಷ್ಟು ಘೋರ ತುಮುಲ ಯುದ್ಧ ಹೂಡಿದರು. ಅಂತ್ಯದಲ್ಲಿ ಬ್ರಹ್ಮನ ಹಸ್ತಕ್ಷೇಪದಿಂದ ಯುದ್ಧವು ಕೊನೆಗೊಂಡಿತು.

ರಾವಣನು ಅನೇಕ ದೇವತೆಗಳನ್ನೂ, ದಾನವರನ್ನೂ, ಮನುಷ್ಯರನ್ನೂ ಹಾಗೂ ನಾಗಕನ್ನಿಕೆಗಳನ್ನೂ, ಅವರ ಪತಿ ಮತ್ತು ಬಂಧುಗಳನ್ನೂ ಹತ್ಯೆ ಮಾಡಿದನು. ನಾರಿಯರ ಅಪಹರಣ ಕಾರ್ಯವು ಸೀತಾಪಹರಣದ ಮೊದಲೇ ಆಗುತ್ತಿತ್ತು. ಉತ್ತರ ಕಾಂಡದಲ್ಲಿ ಅವನ ವಿಲಾಸ ಲೀಲೆಗಳನ್ನು ವಾಲ್ಮೀಕಿಯು ವಿಸ್ತಾರವಾಗಿ ವರ್ಣಿಸಿರುವನು. ಈ ವರ್ಣನೆಗಳನ್ನು ಓದಿದಾಗ "ಡಾನ್ ಜುವಾನ್"ನ ನೆನಪು ಬರುತ್ತದೆ.

ಉಪ ಸಂಪಾದಕರ ವರದಿ

ಒಂದು ನಗರದ ಪ್ರಧಾನ ವ್ಯಕ್ತಿಯ ಮನೆಯ ವಿವಾಹ ಮಹೋತ್ಸವದ ಬಗ್ಗೆ ವರದಿ ಮಾಡಲು ಸಂಪಾದಕರು ಉಪ ಸಂಪಾದಕರನ್ನು ಕಳುಹಿಸಿದರು.

ವರದಿ ನೋಡಿದೊಡನೆ ಸಂಪಾದಕರಿಗೆ ಸಹಿಸದಷ್ಟು ಕೋಪ ಬಂತು.

"ಇದೇನಯ್ಯಾ, ಬರೆದದ್ದು? ... ಅಲ್ಲಿನ ಸುಂದರಿಯ ರಾಗಿದ್ದ ಯುವತಿಯರ ಮಧ್ಯೆ ಭವಾನಿಯೂ ಇದ್ದದ್ದನ್ನು ಕಾಣಬಹುದಾಗಿತ್ತು...ಎಂದು ಬರೆದಿರುವಿರಿ...ಭವಾನಿ ಎಂದರೆ ಹೆಂಗಸಲ್ಲ. ಈ ನಗರದ ಬೇರೊಬ್ಬ ಪ್ರಧಾನ ವ್ಯಕ್ತಿಯ ಹೆಂಗಸು ಅಗಿರುವಳಲ್ಲಿ?"

"ಕ್ಷಮಿಸಬೇಕು; ಸಾರ್! ಅಲ್ಲಿ ಅದೆ ಭವಾನಿ ಯುವತಿಯರೆಡೆಯಲ್ಲಿ ಇದ್ದುದ ಸಂಪೂರ್ಣ ಸತ್ಯ..."

— ಎಚ್.ಎಂ. ವಿಜಯನಾರಾಯಣ

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ

ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು

ಸರ್ವ ವಿಧದಿಂದಲೂ ರೈತನ ಭಾಗ್ಯವಿಧಿಯಾಗಿದೆ

ದೇಶವಿಖ್ಯಾತವಾದ

ಜೇಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು:—

ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್

ಫಳನೀರ್, ಮಂಗಳೂರು - 1

ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ

ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಪರಿಚಯ

ವೀರನಾರಾಯಣನ ಗದಗು

ಬರೆದವರು : ಶ್ರೀ ಸ. ನಾರಾಯಣ.

ಗದಗು ಧಾರವಾಡ ಜಿಲ್ಲೆದುಷ್ಟಿರುವ ತಾಲ್ಲೂಕಿನ ಮುಖ್ಯ ಸ್ಥಳ. ಇದು ಪುರಾತನ ಪುಣ್ಯ ಭೂಮಿ ಮತ್ತು ಐತಿಹಾಸಿಕ ದೃಷ್ಟಿಯಿಂದಲೂ ಈ ಕ್ಷೇತ್ರಕ್ಕೆ ವಿಶೇಷ ಮಹತ್ವವುಂಟು. ಹಲವು ಪ್ರಸಿದ್ಧ ಕನ್ನಡ ಕವಿಗಳ ನೆಲೆ ಗದಗು ಎಂಬುದನ್ನು ಇಲ್ಲಿ ಸ್ಮರಿಸಬಹುದು.

"ಅಸ್ತಿ ದಕ್ಷಿಣಾಪಥೇ ದೆಲ್ವಲ ತ್ರಿಶತಮಧ್ಯೆ ಕ್ರತುಕೋ ನಾಮ ಮಹಾಗ್ರಹಾರಃ ಯಃ ಕಿಲ ಸಕಲ ಭೂಪಾಲ ಚೂಡಾಮಣೀನಾ ಪಾಂಡುಕುಲ ತಿಲಕೀನ ಮಹಾರಾಜ ಜನಮೇಜಯೇನ ಸರ್ಪಯಾಗೇತಪೋ ವಿದ್ಯಾವೃತ್ತ—ಸಂಪನ್ನೇಭ್ಯಃ ಸಾಷ್ಟಾ ಗೋತ್ರೇಭ್ಯಃ ಧ್ಯಾಯಪ್ರತ್ರೈಯ ಬ್ರಾಹ್ಮಣೇಭ್ಯಃ ದತ್ತಃ"—ಎಂದು ಗದಗಿನಲ್ಲಿರುವ ಒಂದು ಸಂಸ್ಕೃತ ಶಾಸನ ತಿಳಿಸುತ್ತದೆ.

ಪಾಂಡವ ಅರಸು ಮನೆತನದಲ್ಲಿ ಕೊನೆಯವನಾದ ಜನಮೇಜಯ ಚಕ್ರವರ್ತಿಯು ಇಲ್ಲಿ ಸರ್ಪಯಾಗವನ್ನು ಮಾಡಿ, ಈ ಕ್ರತುಕ ಅಗ್ರಹಾರವನ್ನು ತಪಸ್ವಿಗಳೂ, ಜ್ಞಾನಿಗಳೂ ಆದ ಇಪ್ಪತ್ತೆರಡು ಮಂದಿ ಬ್ರಾಹ್ಮಣರಿಗೆ ದಾನವಾಗಿ ನೀಡಿದ. ಅಂದಿನ 'ಕ್ರಮಕ್ಕೆ' ಅಗ್ರಹಾರವೇ ಇಂದಿನ 'ಗದಗ'. ಗದಗು ಮಹಾಭಾರತ ಕಾಲದಷ್ಟು ಪ್ರಾಚೀನವಾದುದು ಎಂಬುದು ಇದರಿಂದ ತಿಳಿದು ಬರುತ್ತದೆ.

ವೇದವ್ಯಾಸ ರಚಿತವಾದ 'ಭವಿಷ್ಯೋತ್ತರ ಪುರಾಣ'ದ ಹದಿನೆಂಟನೆಯ ಅಧ್ಯಾಯವು 'ಕ್ರತುಪುರ ಮಹಾತ್ಮ್ಯ'ವನ್ನು ಹೇಳುತ್ತದೆ. ಕ್ರತುಪುರ ಒಂದು ಪುಣ್ಯಕ್ಷೇತ್ರ. ಕ್ರತುವಿನ ಪ್ರಾರ್ಥನೆಯಂತೆ ತ್ರಿಮೂರ್ತಿ (ಬ್ರಹ್ಮ ವಿಷ್ಣು ಮಹೇಶ್ವರರು)ಗಳು ಇಲ್ಲಿನ ತ್ರಿಕೂಟೇಶ್ವರಪಲ್ಲಿ ಎಂದುಗೂಡಿದ್ದಾರೆ. ಈ ಪ್ರದೇಶ ಕುಬೇರಾಕ್ಷ ವನವೆಂದು ಪ್ರಸಿದ್ಧವಾಗಿತ್ತು. ಈ ಪ್ರದೇಶದಲ್ಲಿ ಕ್ರತು ಎಂಬವನು ಶಿವನನ್ನು ಕುರಿತು ತಪಸ್ಸುಮಾಡಿದ. ಈ ಕಾರಣದಿಂದ ಈ ಊರಿಗೆ ಕ್ರತುಪುರ ಎಂದು ಹೆಸರಾಯಿತು. ಕುಬೇರಾಕ್ಷನೆಂದರೆ 'ಗಜ' ಎಂದರ್ಥ. ಈ ಗಜದ ಎಂಬ ಹೆಸರಿನಿಂದಲೇ 'ಗದಗ' ಎಂಬ ಹೆಸರು ಬಂದಿರಬಹುದೆಂಬ ನಂಬಿಕೆಯೂ ಇದೆ. ಈ ಊಹೆ, ಕಲ್ಪನೆಗಳಿಗೆ ಆಧಾರವಿಲ್ಲದಿಲ್ಲ.

ಗದಗಿನಿಂದ ಸುಮಾರು ೩೦ ಮೈಲುಗಳ ದೂರದಲ್ಲಿ ಕಪ್ಪತಗುಡ್ಡ (ಕ್ರತೋತ ಗುಡ್ಡ) ಎಂಬ ಸ್ಥಳವಿದೆ. ಕಪೋತ ಪಕ್ಷಿ (ಪಾರವಾಳ)ಯ ಹೆಸರಿನಲ್ಲಿ ಇದು ಕಪ್ಪತ ಗುಡ್ಡವೆಂದಾಗಿದೆ. ಪ್ರಸಿದ್ಧ ದಾನಿ ಚಕ್ರವರ್ತಿ ಶಿಬಿಯು ಈ ಪ್ರದೇಶವನ್ನು ಆಳುತ್ತಿದ್ದ. ಅವನ ರಾಜಧಾನಿ ಈಗಿನ ಲಕ್ಕುಂಡಿ. ಶಿಬಿ ಮಹಾಧನಿಕ, ತ್ರೀಸ್ವದಾನಿ, ಸತ್ಯಸಂಧ. ಒಮ್ಮೆ ಅವನ ಸತ್ಯನಿಷ್ಠೆಯ ಪರೀಕ್ಷೆ ನಡೆಯಿತು. ಒಂದು ದಿನ ಒಂದು ಕಪೋತ ಪಕ್ಷಿಯ ಮೇಲೆ ಎರಗಿತು. ಕಪೋತ ಪಕ್ಷಿ ಧರ್ಮಿಷ್ಠನಾದ ಶಿಬಿ ಚಕ್ರವರ್ತಿಯ ಮೊರೆಹೊಕ್ಕಿತು. ಕಪೋತ ಪಕ್ಷಿಯು ಪ್ರಾಣ ರಕ್ಷಣೆಯ ಸಲುವಾಗಿ ಶಿಬಿ ತನ್ನ ದೇಹದ ಮಾಂಸ ಖಂಡವನ್ನೇ ಕೊಡುವುದಾಗಿ ಗಿಡಗನಿಗೆ ವಚನವಿತ್ತ. ಶಿಬಿಯು ದೇಹದ ಮಾಂಸವನ್ನು ಕತ್ತರಿಸಿ ತಕ್ಕಡಿಯಲ್ಲಿ ಹಾಕಿದಷ್ಟೂ ಗಿಡಗನ ತೂಕವು ಹೆಚ್ಚುತ್ತಾ ಹೋಯಿತ. ಆಗ ಶಿಬಿ ತನ್ನ ದೇಹವನ್ನೇ ಗಿಡುಗನಿಗೆ ಆಹಾರವಾಗಿ ಅರ್ಪಿಸಲು ಮುಂದಾದ. ಭಗವಂತ ಶಿಬಿಯ ಸತ್ಯನಿಷ್ಠೆ, ತ್ಯಾಗ ಮನೋಭಾವಗಳಿಗೆ ಮೆಚ್ಚಿ ಪ್ರತ್ಯಕ್ಷನಾದ. ಕಪೋತ (ಪಾರವಾಳ) ಪಕ್ಷಿಯು ಹೊರಟಲ್ಲಿಯೇ ಈ ಬೆಟ್ಟ ಕಪೋತ ಗುಡ್ಡವೆಂದಾಯಿತು.

ಶ್ರೀ ವೀರ ನಾರಾಯಣ ಗದಗಿಗೆ ಬಂದು ನೆಲೆಸಿದ ಬಗೆಗೂ ಒಂದು ಸ್ವಾರಸ್ಯಕರ ಸ್ಥಳ ಪುರಾಣ ಕಥೆ ಇದೆ. ಕ್ರತುವಿನ ಕಾಲದಲ್ಲಿ ಕಪೋತರೋಮ ಎಂಬ ರಾಕ್ಷಸನಿದ್ದ. ಅವನಿಗೆ ಗಾಂಗಾರ್ಜುನ, ಬೆಳ್ಳಿದತ್ತ ಮತ್ತು ಕಳಸಾಕ್ಷ ಎಂಬ ಧಾವ ಮೈದುನರಿದ್ದರು ಇವರು ಕ್ರಮವಾಗಿ ಶಾಗಾಧಿ, ಬೇಳಾಡಧಿ, ಕಳಸಾಪುರ ಎಂಬಲ್ಲಿ ವಾಸಿಸುತ್ತಿದ್ದರು. ಈ ಮೂವರೂ ಕ್ರತುವಿನ ತಪಸ್ಸಿಗೆ ವಿಘ್ನವನ್ನುಂಟುಮಾಡುತ್ತಿದ್ದರು. ಕಪೋತರೋಮ ಶಿವನನ್ನು ಕುರಿತು ಉಗ್ರ ತಪಸ್ಸು ಮಾಡಿದ. ಶಿವನನ್ನು ಮೆಚ್ಚಿಸಿದ. ತನಗೆ ದೇವತೆಗಳಿಂದ, ದೊರೆಗಳಿಂದ, ಮಾನವರಿಂದ ಸಾವು ಸಂಭವಿಸುವುದು ಬೇಡವೆಂದು ಬಯಸಿದ. ಈ ವರದಿಂದ ಕಪೋತರೋಮನಿಗೆ ಗರ್ವ ಬಲಿಯಿತು. ಮದೋನ್ಮತ್ತನಾಗಿ ಕ್ರತುವಿನ ತಪಸ್ಸಿಗೆ ಕಂಟಕನಾದ. ಕ್ರತು ತನ್ನ ತಪಸ್ಸಿನಿಂದ ಶಿವನನ್ನು ಪ್ರತ್ಯಕ್ಷ ಮಾಡಿಕೊಂಡು ಕಪೋತ ರೋಮನಿಂದ ತನ್ನ ಪ್ರಾಣ ರಕ್ಷಿಸಬೇಕೆಂದು ಬೇಡಿದ. ಈಶ್ವರನೇ ಕಪೋತರೋಮನಿಗೆ ವರನೀಡಿದ್ದ ಕಾರಣ ಬದರೀನಾಥಪಲ್ಲಿ ಯೋಗ ಸಮಾಧಿಯಲ್ಲಿದ್ದ ಯೋಗಿ ನಾರಾಯಣನನ್ನು ಆಶ್ರಯಿಸುವಂತೆ ಈಶ್ವರ ಕ್ರತುವಿಗೆ ಸೂಚಿಸಿದ. ಕ್ರತು ಬದರಿಕ್ಷೇತ್ರಕ್ಕೆ ತೆರಳಿ ಯೋಗಿ ನಾರಾಯಣನನ್ನು ಪ್ರಾರ್ಥಿಸಿದ. ಕ್ರತುವಿನ ಭಕ್ತಿಗೆ—ಪ್ರಾರ್ಥನೆಗೆ ಯೋಗಿ ನಾರಾಯಣ ಪ್ರಸನ್ನನಾದ. ಕ್ರತುವಿನ ಪ್ರಾರ್ಥನೆಯಂತೆ ಯೋಗಿನಾರಾಯಣ ವೀರನಾರಾಯಣನ ರೂಪ ಧರಿಸಿ ಕ್ರತು ಪುರವನ್ನು ಪ್ರವೇಶಿಸಿ ಕಪೋತಂಟಕರಾದ ದಾನವರನ್ನು ಸಂಹರಿಸಿದ. ಕ್ರತುವಿನ ಪ್ರಾರ್ಥನೆಯಂತೆ, ಶಿವನ ಆಜ್ಞೆ ಪಡೆದು ವೀರನಾರಾಯಣ ಕ್ರತುಪುರದಲ್ಲಿಯೇ ನೆಲೆಸಿದ.

ಈಶ್ವರನಿಗೂ ನಾರಾಯಣನಿಗೂ ಭೇದವಿಲ್ಲ. ಹರ—ಹರರಲ್ಲಿ ವ್ಯತ್ಯಾಸವಿಲ್ಲ ಎಂಬುದನ್ನು ಗದಗು ಪ್ರತಿಪಾದಿಸುತ್ತದೆ. ಹರಿ-ಹರ ಭೇದವನ್ನು ತೊಡೆದಿದೆ. ತ್ರಿಕೂಟೇಶ್ವರದಲ್ಲಿ ಶ್ರೀ ವೀರನಾರಾಯಣನನ್ನೂ, ಶ್ರೀ ವೀರನಾರಾಯಣನಲ್ಲಿ ತ್ರಿಕೂಟೇಶ್ವರನನ್ನೂ ಕಾಣುವ ಪಂಚಕ್ಷೋಭೆಗಳು ಇಲ್ಲಿ ಪರಿಚಯಿಸುತ್ತವೆ.

ಗದಗಿನ ವೀರನಾರಾಯಣ ದೇವಾಲಯದಲ್ಲಿ ಕ್ರಿ. ಶ. ೧೦೩೭ರಿಂದ ೧೧೯೯ರ ವರೆಗೆ ವಿವಿಧ ಕಾಲದ ಎಳು ಶಾಸನಗಳು ಕಾಣಬರುತ್ತವೆ. ಕಿ. ಶ. ೯೧೮ರಿಂದ ಕ್ರಿ. ಶ. ೧೩೯೯ರ ವರೆಗಿನ ಶಿಲಾಶಾಸನಗಳು ಐತಿಹಾಸಿಕ ದೃಷ್ಟಿಯಿಂದ ಬಹು ಮುಖ್ಯವಾದುವು. ಚಾಳುಕ್ಯರು (೧೧೮೬-೧೧೯೦) ಕಳಚೂರ್ಯರು (೧೧೬೧-೧೧೮೩) ಹೊಯ್ಸಳ ಬಲ್ಲಾಳರು (೧೦೪೬-೧೩೧೦) ದೇವಗಿರಿ ಯಾದವರು (೧೩೭೦—೧೩೧೦) ಮತ್ತು ವಿಜಯನಗರದರಸರು (೧೩೩೬—೧೫೮೬) ಇವರ ರಾಜ್ಯಭಾರಕ್ಕೆ ಗದಗು ಒಳಪಟ್ಟಿತ್ತು ಎಂದು ತಿಳಿದುಬರುತ್ತದೆ.

ಕ್ರಿ. ಶ. ೧೯೯೨ ಜುಲೈ ೨೭ರಂದು ಕರ್ನಾಟಕ ವೆಲ್ಫೇರ್ ಸೊಸೈಟಿಯು ಗದಗಿನ ಮೇಲೆ ದಾಳಿ ನಡೆಸಿದ. ಕಡೆಯ ಮಂಗಳ ಯುದ್ಧದಲ್ಲಿ ಗದಗು ಗಲಾಟೆಗಳ ಜನವರಿ ೬ರಂದು, ಜನವರಿ ೨೪ನ್ನೋಣಿಗೆ ಶರಣಾಗತವಾಯಿತು. ೧೮೨೭ ಸುಮಾರಿನಲ್ಲಿದ್ದ ಕ್ಯಾಪ್ಟನ್ ಕ್ಲಾಪ್ಸ್ ಗದಗಿನ ವರ್ಣನೆಯನ್ನು ಕೊಡಿದ್ದಾನೆ. ಅವನು ಆಗ ಗದಗಿನಲ್ಲಿ ಕೇವಲ ೮೦೦ ಮನೆಗಳು ಮಾತ್ರ ಇದ್ದವು ಎಂದು ತಿಳಿಸಿದ್ದಾನೆ.

ಭವ್ಯ ವಾಸ್ತುಶಿಲ್ಪ ಸರಂಜಿಗೆ ಗದಗಿನ ತ್ರಿಕೂಟೇಶ್ವರ ದೇವಾಲಯ ಒಂದು ಉತ್ತಮ ನಿದರ್ಶನ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ, ಬಾದಾಮಿಯ ಈಶ್ವರ ದೇವಾಲಯ, ಲಕ್ಕುಂಡಿಯ ಜೈನ ಮಂದಿರಗಳು ಚಾಳುಕ್ಯ ವಾಸ್ತು ಶಿಲ್ಪದ ಪ್ರಥಮ ಹಂತಗಳಾದರೆ ಗದುಗಿನ ತ್ರಿಕೂಟೇಶ್ವರ ದೇವಾಲಯ ಸರಸ್ವತಿ ದೇವಾಲಯ, ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯ ಅದೇ ಚಾಳುಕ್ಯ ವಾಸ್ತು ಶಿಲ್ಪದ ಹೆಚ್ಚು ಮುಂದುವರಿದ—ಸುಧಾರಿತ ದೇವಾಲಯದಳೆವೆ—ಎಂದು ಪ್ರಸಿದ್ಧ ಸಂಶೋಧಕ ಆರ್. ಎಸ್ ಪಂಚಮುಖಿ ಅಭಿಪ್ರಾಯ ಪಡುತ್ತಾರೆ. ಈ ದೇವಾಲಯಗಳು ಕ್ರಿ. ಶ. ೪ನೆಯ ಶತಮಾನಕ್ಕೆ ಸೇರಿದವು. ಗದುಗಿನ ಸೋಮೇಶ್ವರ ಸುಂದರ ದೇವಾಲಯಗಳಲ್ಲಿಂದು, ವೀರ ನಾರಾಯಣ ದೇವಾಲಯ ಕ್ರಿ. ಶ. ೧೧ನೆಯ ಶತಮಾನಕ್ಕೆ ಸೇರಿದುದು ಎಂದು ಸಂಶೋಧಕರು—ತಜ್ಞರು ನಿರ್ಣಯಿಸಿದ್ದಾರೆ. ಈ ಎಲ್ಲ ದೇವಾಲಯಗಳು ಸರ್ಕಾರದ ರಕ್ಷಣೆಯಲ್ಲಿವೆ.

ಕೋಳಿವಾಡದ ಕಾರಣಿಕ ನಾರಣಪ್ಪ ಕುಮಾರವ್ಯಾಸನೆಂಬ ಅಂಕಿತದಲ್ಲಿ, ಭಾಮಿನೀ ಷಟ್ಪದಿಯಲ್ಲಿ 'ಕರ್ಣಾಟಕ ಭಾರತ ಕಥಾ ಮಂಜರಿ'ಯನ್ನು ಗದಗಿನ ವೀರನಾರಾಯಣನ ಸನ್ನಿಧಿಯಲ್ಲಿ ರಚಿಸಿದ. ದೇವಾಲಯದಲ್ಲಿ ಇಂದಿಗೂ ನಾರಣಪ್ಪ ಕುಳಿತು ಬರೆದ ಕಂಬವನ್ನು ನಿರ್ದೇಶಿಸುತ್ತಾರೆ. ನಾರಣಪ್ಪ ವೀರನಾರಾಯಣನ ಅನನ್ಯ ಭಕ್ತ, ಅವನ ಕೆಂಕರ 'ವೀರನಾರಾಯಣ' ಕವಿ—ಲಿಪಿಕಾರ 'ಕುಮಾರವ್ಯಾಸ' ಎಂದು ತೋಳಿಕೊಳ್ಳುತ್ತಾನೆ ನಾರಣಪ್ಪ. ನಾರಾಣಪ್ಪನ ಮಹಾಭಾರತ ಗದಗಿನ ಭಾರತ ಮೊದಲು ಪ್ರಸಿದ್ಧವಾಗಿದೆ—ಪರಿಚಿತವಾಗಿದೆ. ಮಹಾಭಾರತ ಕಾವ್ಯದ ನಾಯಕ, ಪ್ರಧಾನ ಸಾಕ್ಷ್ಯಧಾರಿ ಸೂತ್ರಧಾರಿ ಎಲ್ಲವೂ ವೀರನಾರಾಯಣ. ವೀರನಾರಾಯಣನ ಉಜ್ವಲ ಶಕ್ತಿ, ಪ್ರತಿಭೆ, ತೇಜಸ್ಸುಗಳಿಂದಲಾವ್ಯ ಸರ್ವ ಜನಾದರಣೀಯ ವಾಗಿದೆ— ರವಣೀಯವಾಗಿದೆ. ನಾರಣಪ್ಪ ಜನಪ್ರಿಯ ಕನ್ನಡ ಕವಿ-ಭಕ್ತಕವಿ. ಗದುಗಿನ ಭಾರತ ಕನ್ನಡ ಸಾ

(ಎಂಟನೇ ಪುಟ ನೋಡಿರಿ)

ದೀಪಸ್ತಂಭದ ಬೆಳಕಿನಲ್ಲಿ

ಸಿಂಡಿಕೇಟ್ ಬ್ಯಾಂಕು ಕಳೆದ ನಲ್ವತ್ತೆರಡು ವರ್ಷಗಳಲ್ಲಿ ಸಾಧಿಸಿದ ಹಿರಿಮೆ, ಕಡಲ ತಡಿಯ ಬಂಡೆಯ ಮೇಲೆ ಅದ್ಭುತವಾಗಿ ನಿಂತ ದೀಪಸ್ತಂಭಕ್ಕೆ ಸಮನಾಗಿದೆ. ಸಹಸ್ರ ಸಹಸ್ರ ಮಂದಿ ಗಿರಾಕಿಗಳ ವಿಶ್ವಾಸಪೂರ್ಣ ವ್ಯವಹಾರದ ಭದ್ರ ತಳಪಾಯದ ಮೇಲೆ ಎದ್ದು ನಿಂತ ಈ ಸ್ತಂಭದ ತುದಿಯ ಸೋಪಾನದಿಂದ ಹರಿವುವ ಬೆಳಕಿನ ಛಾಯೆ ಮೈಲುಗಳಷ್ಟು ದೂರ ಹಬ್ಬಿ ದೂರದ ನಾಗರಿಕರಲ್ಲಿ ತೇಲುವ ಹಡಗುಗಳನ್ನು ನಿಶ್ಚಿತ ಜಾಗದೆಡೆಗೆ ಸಾಗಿಸಲು ಸಹಕರಿಸುತ್ತದೆ.

ಹಳ್ಳಿಗಳಿಗೆ, ಗಿರಾಕಿಗಳ ನಿರಂತರ ನೆರವು ಬ್ಯಾಂಕಿನ ಅಡಿಪಾಯದ ಶಿಲೆಯೆಂಬ ಭದ್ರತೆಯ ನೆಲೆಯಂತೆ ಹರಿವುವ ಸಾಧನೆಯ ಸ್ತಂಭದ ತುದಿಯಲ್ಲಿ ಸಾಂಕೇತಿಕ ದೀಪವನ್ನು ಬೆಳಗಿಸಿದೆ. ಅನುಕಾಲವೂ ಈ ದೀಪದ ಬೆಳಕು ನಮ್ಮ ಅಸಂಖ್ಯಾತ ಮಂದಿ ಗಿರಾಕಿಗಳ ಬದುಕಿಗೆ ಮಾರ್ಗದರ್ಶನ ನೀಡುತ್ತಿರಲೆಂಬುದೇ ಸಿಂಡಿಕೇಟ್ ಬ್ಯಾಂಕಿನ ಹೃದೈಕೆಯಾಗಿದೆ.

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ 100 ಕೋಟಿಗೂ ಮಿಕ್ಕಿ. ಶಾಖೆಗಳು: 231 ಟಿ. ಎ. ಪೈ, ಚೇಯರ್‌ಮೇನ್

ತಮಿಳು ಕಾನ್ಫರೆನ್ಸ್‌ಗೆ ಕೊನೆ - ಪರಿಣಾಮದ ಪ್ರತ್ಯಕ್ಷ

ಬರೆದವರು: ಶ್ರೀ ಶಿವಶಂಕರ.

ತಮಿಳುನಾಡಿನಲ್ಲಿ ನಡೆದ ಅಂತಾರಾಷ್ಟ್ರೀಯ ತಮಿಳು ಕಾನ್ಫರೆನ್ಸನ್ನು ಜಯಪ್ರದವಾಗಿ ನಡೆಸಲು ತಮಿಳುನಾಡು ಸರಕಾರವು ತನ್ನ ಪೂರ್ಣಶಕ್ತಿಯನ್ನು ಉಪಯೋಗಿಸಿತ್ತು. ಹಲವಾರು ದಿವಗಳ ಮುಂಚೆಯೇ ಪ್ರಚಾರ ಭರದಿಂದ ಸಾಗಿತ್ತು. ಎಲ್ಲಾ ವಿಧದ ಏರ್ಪಾಡುಗಳೂ ನಡೆದಿದ್ದುವು. ಅದು ನಡೆಯುತ್ತಿದ್ದ ಹಿಂದೀ ವಿರುದ್ಧ ಹೋರಾಟವು ತಡೆಹಿಡಿಯಲ್ಪಟ್ಟಿತ್ತು, ವಿದ್ಯಾರ್ಥಿಗಳು ಶಾಂತರಾಗಿದ್ದರು. ಲಕ್ಷೋಪಲಕ್ಷ ಜನತೆ ಕಾನ್ಫರೆನ್ಸನ್ನು ಕಂಡಿತು. ಕಾರ್ಯಸಾಧ್ಯವಾಗದೆ ಹಿಂದಕ್ಕೆ ಬಂದವರು ಅದೆಷ್ಟೋ ಮಂದಿ! ವೈಭವಕ್ಕೆ ಖರ್ಚಾದ ಹಣ ಮಳೆಗಾಲದ ಪ್ರವಾಹವೇ ಸರಿ. ಸರಕಾರ ಕೈಯ್ಯಾಳಿರುವಾಗ ದ್ರಾ.ಮು.ಕ.ವು ಧನ ಶೇಖರಣೆಗೆ ಹಿಂದಕ್ಕೆ ಬೀಳುವುದುಂಟೆ? ಏನೇ ಇರಲಿ, ಸುಮಾರು ಹತ್ತು ದಿವಗಳ ಕಾಲ ವಿದ್ಯಾರ್ಥಿಗಳ—ಹುಡುಗರ ಗಲಾಟೆ ಅದೇನಿರಲಿಲ್ಲ. ತಮಿಳು ಕಾನ್ಫರೆನ್ಸ್ ನಡೆಯುತ್ತಿದ್ದಾಗ, ಅಲ್ಲೇನು ನಡೆಯುತ್ತೆಂಬುದನ್ನು ಹಿಂದಿನ ಸಂಚಿಕೆಗಳಲ್ಲಿ ಕಂಡಿರುವೆವು. ಅದರ ಫಲವನ್ನಲ್ಲಿ ನಾವೀಗ ಕಾಣಬಹುದು. ಕಾಶರಕದ ಬೀಜವನ್ನು ಬಿತ್ತಿ, ಖರ್ಜೂರದ ಫಲವನ್ನು ಕಾಣಲು ಸಾಧ್ಯವೇನು?

ಅತ್ಯಂತ ಶ್ರೇಷ್ಠ ಭಾಷೆ ತಮಿಳಿನ ಮೇಲೆ ಭಾರತ ಭಾಷೆ ಹಿಂದಿ ಆಕ್ರಮಣ ನಡೆಯುವುದನ್ನು ಎದುರಿಸಲು ತಾವು ಹಿಂಜರಿಯುವುದಿಲ್ಲವೆಂದು ದ್ರಾ.ವ.ಮ.ಕ.ದ ಮಹಾನಾಯಕರು ಅಣ್ಣಾದೊರೈಯವರು ತಮಿಳು ಕಾನ್ಫರೆನ್ಸಿನಲ್ಲಿ ಘಂಟಾಘೋಷವಾಗಿ ಹೇಳಿದ್ದರು. ತಮಿಳು ಅಧಿವೇಶನದ ಸಮಯ ಕಾಲೇಜು ವಿದ್ಯಾರ್ಥಿಗಳು ಮುಖ್ಯಮಂತ್ರಿ ತಿರು ಅಣ್ಣಾದೊರೈಯವರನ್ನು ಭೇಟಿಯಾಗಿದ್ದರು. ಅವರದ್ದೊಂದು "ಕಾನ್ಫರೆನ್ಸ್" ನಡೆದಿತ್ತು; ಅಧಿವೇಶನದ ಪೂರ್ವದಲ್ಲಿ ಅಧಿವೇಶನದ ಕೊನೆಯವರೆಗೆ ಗಲಾಟೆ ಮಾಡಬಾರದೆಂದು. ದ್ರಾ.ಮು.ಕ. ಧುರೀಣರು ವಿದ್ಯಾರ್ಥಿ ಮುಖಂಡರ ಬಳಿ ಕೇಳಿಕೊಂಡಿದ್ದರು. ಆದುದರಿಂದಲೇ ಅಧಿವೇಶನ ಅಂತ್ಯವಾದೊಡನೆ ವಿದ್ಯಾರ್ಥಿಗಳ ಘೋಷಣೆ ಹಿಂದಿ ವಿರುದ್ಧ ಹೋರಾಟವನ್ನು ಮುಂದರಿಸಲಾಗುತ್ತದೆಂದು, ಅದರ ಪ್ರತಿಕ್ರಿಯೆಗಳು ಕಂಡುಬಂದುವು. ಕಣ್ಯಾಕುಮಾರಿ, ಸೇಲಂ, ಕೊಯಂಬುತ್ತೂರು, ನೀಲಗಿರಿ ಮತ್ತು ಧರ್ಮಪುರಿಯ ವಿದ್ಯಾರ್ಥಿಗಳು ಹೋರಾಟವನ್ನು ಕೈಬಿಡುವುದಿಲ್ಲವೆಂದು ಹಟ ಹಿಡಿದರು. ಮಧುರೈ, ರಾಮನಾಥಪುರಂ, ಸೇಲಂ, ತಿರುಚಿಲ್ಲವೇಲಿ ಮತ್ತು ಕೊಯಂಬುತ್ತೂರುಗಳಲ್ಲಿ ವಿದ್ಯಾರ್ಥಿಗಳು ಪುನ: ಗಲಾಟೆಗೆ ಆರಂಭಿಸಿಬಿಟ್ಟರು; ರೈಲುಬಳಕೆಯನ್ನು, ಬಸ್ಸುಗಳನ್ನು ತಡೆದು ಹಣಪಸೂಲಿ, ಘೋಷಣೆಗಳ ಕೂಗಾಟಕ್ಕೆ ತೊಡಗಿದರು. ರೈಲುಗಳು ನಿರ್ದಿಷ್ಟ ಸ್ಥಾನಕ್ಕೆ ನಿರ್ದಿಷ್ಟ ಕಾಲದಲ್ಲಿ ಹೋಗುವುದು ಸಾಧ್ಯವೇ ಇಲ್ಲವೆಂದಾಯಿತು. ದೊಣ್ಣೆ ಹಿಡಿದವರೆಲ್ಲರು ದೊಣ್ಣೆಪ್ಪ—ದೊಣ್ಣೆರಾಯರಾದರು. ಶಾಲೆ-ಕಲಾಶಾಲೆಗಳಲ್ಲಿ ಬರೆದಿದ್ದ ರಾಷ್ಟ್ರಗೀತೆಯ ಸಾಲುಗಳನ್ನು ಅಳಿಸಲಾಯಿತು. ತರಗತಿಯಿಂದ ಹೊರಗೆ ಬಂದು 'ಹೋರಾಟಗಾರ'ರೊಂದಿಗೆ ಸೇರದಿದ್ದ ವಿದ್ಯಾರ್ಥಿಗಳ ಶಾಲೆಗಳೊಳಗೆ ನುಗ್ಗಿ ಅಲ್ಲಿ ವಿದ್ಯಾರ್ಥಿನಿಗಳ ಜಡೆಗಳನ್ನು ಕತ್ತರಿಸಿ ಹಾಕಲಾಯಿತು. ಅದರ ಮೇಲೆ ಛಾಳಿ (ಮಂಗಲಸೂತ್ರ)ಗಳನ್ನು ಬಿಸಾಡಲಾಯಿತು. ಅದನ್ನು ತಡೆಯುವವರ್ಯಾರು? ಶಾಲೆ ಕಾಲೇಜುಗಳನ್ನು ಮುಚ್ಚಿಬಿಡೊಡನೆ ಮುಖ್ಯೋಪಾಧ್ಯಾಯರು—ಮುಖ್ಯೋಪಾಧ್ಯಾಯರು ಅದಕ್ಕೊಪ್ಪಿ ಒಡನೆ ಮುಚ್ಚಿಬಿಟ್ಟರು. ರೈಲು ಬಸ್ಸುಗಳನ್ನು ನಿಲ್ಲಿಸಿರೆಂದೊಡನೆ ಎಲ್ಲರೂ ನಿಲ್ಲಿಸಿಬಿಟ್ಟರು. ಕೊಯಮುತ್ತೂರು ಜಿಲ್ಲೆಯ ಕರಮಡೈಯಲ್ಲಿ ಬಸ್ಸು ಚಾಲಕನು ಫಿಲ್ಲಿಸಲು, ಒಪ್ಪದಿದ್ದಾಗ ವಿದ್ಯಾರ್ಥಿಗಳು ತಡೆದು ಫಿಲ್ಲಿಸಿದುದರ ಪರಿಣಾಮವಾಗಿ ವಿದ್ಯಾರ್ಥಿಯೊಬ್ಬನು ಬಸ್ಸಿಳಿಯಬಿದ್ದು ಪ್ರಾಣ ಕಳೆದುಕೊಳ್ಳಬೇಕಾಯಿತು. ಅದೇಲೆ ಬಸ್ಸು ಚಾಲಕರಿಗೆ ಬಸ್ಸೋಡಿಸಲು ಧೈರ್ಯ ಬಂದೀತೇ? ವಿದ್ಯಾರ್ಥಿಗಳಿಗೆ ಕೊಂಬು ಬಂದುಬಿಟ್ಟಿತು. ಕೊನೆಯಲ್ಲಿ ಸರಕಾರ ಅವರಿಗೆ ಮಣಿಯಬೇಕಾಯಿತು. ಎಲ್ಲಾ ವಿದ್ಯಾಸಂಸ್ಥೆಗಳನ್ನು ಅನಿರ್ದಿಷ್ಟ ಕಾಲ ಮುಚ್ಚಲಾಗಿದೆಯೆಂದು ಸಾರಬೇಕಾಯಿತು. ಮುಖ್ಯಮಂತ್ರಿ ತಿರು ಅಣ್ಣಾದೊರೈಯವರನ್ನು ವಿದ್ಯಾರ್ಥಿನಿಗಳ ಭೇಟಿಯಾಡುವುದಕ್ಕೆ. ಅನಿರ್ದಿಷ್ಟ ಕಾಲ ತಮಿಳುನಾಡಿನಲ್ಲಿ ವಿದ್ಯಾಸಂಸ್ಥೆಗಳನ್ನು ಮುಚ್ಚಿದ ದಕ್ಕೂ, ವೆರೆರಾಜ್ಯಗಳಲ್ಲಿ ಗಲಾಟೆಯು ಕಿಡಿ ಹಚ್ಚಿದುದಕ್ಕೂ ಏನಾದರೂ ಸಂಬಂಧವಿದೆಯೆ?

ದ್ರಾ.ಮು.ಕ.ವು ತಮಿಳು ಕಾನ್ಫರೆನ್ಸಿನ ನೆವವದಲ್ಲಿ ಭಾರತದ ಸಂಪರ್ಕ ಭಾಷೆಯ ವಿಷಯವನ್ನು ಅಂತಾರಾಷ್ಟ್ರೀಯ ಸಮಸ್ಯೆಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಿತು. ಆದರೆ ಅದಕ್ಕೆ ಅವರಿಗೆ ಕೈಯ್ಯಷ್ಟು ಫಲಸಿಗಲಿಲ್ಲ. ಅಮೆರಿಕ, ರಷ್ಯಾ, ಇಸ್ರೇಲ್, ಮಲೇಶಿಯಾ ಮುಂತಾದ ದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಆ ವಿಷಯದಲ್ಲಿ ತಲೆ ಹಾಕದೆ ಅಖಿಲ ಭಾರತ ದೃಷ್ಟಿಯಲ್ಲೇ ಮಾತಾಡಿದರು. ಇಸ್ರೇಲ್ ಅಷ್ಟಕ್ಕೇನೇ ನಿಲ್ಲದೆ ಕಾನ್ಫರೆನ್ಸಿನ ಕಾರ್ಯಕಲಾಪ, ಸಾಗ-ಸೋಗುಗಳನ್ನು ಕಂಡು ಬಕ್ಕೆತು ತಾವದೆಂತು ಭಾಷಾ ಸಮಸ್ಯೆಯನ್ನು ಪರಿಹರಿಸಿಕೊಂಡಿರುವುದಾಗಿ ತಿಳಿಸಿ, ಸಮಸ್ಯೆಗೆ ಕಾರಣ ಭಾಷೆಯಲ್ಲಿ ರಾಷ್ಟ್ರೀಯತೆಯ ಅಭಾವವೆಂಬುದನ್ನು ಸ್ಪಷ್ಟವಾಗಿ ಸೂಚಿಸಿತು. ಪ್ರತ್ಯೇಕತಾವಾದಿ ದ್ರಾ.ಮು.ಕ ದ ಕಿವಿಗೆ ಬೀಳುವದುಂಟೇ! ಅಲ್ಲಿ ಫಲ ಸಿಗದಿದ್ದುದರಿಂದ ದ್ರಾ.ಮು.ಕ ವು ಪುನ: ವಿದ್ಯಾರ್ಥಿ ವೇಷವನ್ನು ಹಾಕಿಕೊಂಡಿತು. ವಿದ್ಯಾರ್ಥಿಗಳು ಗಲಾಟೆ ಮಾಡಿದರು. ದ್ರಾ.ಮು.ಕ. ಸರಕಾರ ವಿದ್ಯಾಸಂಸ್ಥೆಗಳನ್ನು ಅನಿರ್ದಿಷ್ಟ ಕಾಲ ಮುಚ್ಚಬಿಟ್ಟಿತು.

ಈ ರೀತಿ ದ್ರಾ.ಮು.ಕ.ವು ಹಗೆಯ ಹೊಗೆಯನ್ನೆಬ್ಬಿಸುತ್ತಿದ್ದಾಗ ಕಾಲು ಕಳೆದುಕೊಂಡಿರುವ ಕಾಂಗ್ರೆಸ್ ಸುಮ್ಮನಿದ್ದೀತೇನು? ದ್ರಾ.ಮು.ಕ.ಕ್ಕಿಂತಲೂ ತೀವ್ರವಾಗಿ ಅದು ಸಂಪರ್ಕ ಭಾಷೆಯಾಗಿ ಹಿಂದಿ ಬರುವದನ್ನು ಎದುರಿಸಿತು. ತಮಿಳುನಾಡು ಮಾತ್ರ ಸ್ವರಾಜ್ಯವೆತ್ತಿದರೆ ಸಾಲದು. ದಕ್ಷಿಣ ಪ್ರದೇಶ ಅಥವಾ ದ್ರಾವಿಡ ನಾಡು ಪೂರ್ಣ ಹಿಂದಿ ವಿರುದ್ಧ ಘೋಷಣೆ ಎದ್ದೇಳಬೇಕು. ಆ ಘೋಷಣೆ ಮಾತ್ರ ಹಿಂದೀವಾಲಾಗಳಿಗೆ ಕೇಳೀತು. ಈ ಸಮಸ್ಯೆಗೆ ಹಿಂದೀವಾಲಾಗಳೇ ಕಾರಣ. ಉತ್ತರ ಭಾರತದ ಎಲ್ಲರಕ್ಷಗಳು ಈ ವಿಷಯದಲ್ಲಿ ಒಂದಾಗಿಬಿಟ್ಟವೆ. ಆದರೆ ದಕ್ಷಿಣ ಭಾರತದ ಪಕ್ಷಗಳೆಲ್ಲವೂ ಒಂದಾಗಿವೆ ಏನು? ತಮಿಳುನಾಡಿನ ಸರಕಾರ ಅದಕ್ಕಾಗಿ ಪ್ರಯತ್ನಿಸಬೇಕು. ದ್ರಾವಿಡನಾಡು ಒಕ್ಕೊರಲಿನಿಂದ ಹಿಂದಿ ಹೇರುವಿಕೆಯನ್ನು ಎದುರಿಸಬೇಕು. ಇಲ್ಲವಾದಲ್ಲಿ ತಮಿಳುನಾಡಿನ ಚಳುವಳಿಗೆ ಫಲಸಿಗಲಿಕ್ಕಿಲ್ಲ. ಈ ರೀತಿ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಹಾಗೂ ಸ್ವಜಲಿತ ತಮಿಳುನಾಡು ಕಾಂಗ್ರೆಸ್ಸಿನ ಅಧ್ಯಕ್ಷನು ಹೋದೆಡೆಗಳಲ್ಲೆಲ್ಲ ಬಿರುಸಿನಿಂದ ಪ್ರಚಾರ ಮಾಡಿದರು. ಜನತೆಯ ಮನಸ್ಸಿನಲ್ಲಿ ಗೊಂದಲವುಂಟಾಯಿತು. ದ್ರಾ.ಮು.ಕ.ಕ್ಕೆ ಬೆನ್ನು ತಟ್ಟಿದಂತಾಯಿತು.

ಅದರ ಪರಿಣಾಮ, ಅಂಗೈ ಹುಣ್ಣಿಗೆ ಕನ್ನಡಿ ಬೇಕೇನು? ದಕ್ಷಕ್ಷರಗಳಲ್ಲಿ ಪ್ರಕಟವಾಯಿತು—ಭಾರತದ ಸೇನೆ ಇರುವ ಕೋಟೆಯಲ್ಲಿ ಅಣ್ಣನ ತ್ರಿವರ್ಣ ಧ್ವಜವನ್ನು ಒಬ್ಬನು ಕೆಳಗಿಳಿಸಿಬಿಟ್ಟನು. ಭಾರತ ರಕ್ಷಣಾ ಪಡೆಯಿರುವಲ್ಲಿ ಹೀಗಾದಲ್ಲಿ ಇನ್ನು ಬೇರೆಡೆಗಳಲ್ಲೇನು ನಡೆದಿರಬಹುದೆಂಬ ದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು. ಅದು ರಾತ್ರಿಯಲ್ಲೂ ನಡೆದಿರಲಿಲ್ಲ. ಹಟ್ಟಿಹಾಗಲ ಹಗಲಿನಲ್ಲಿ ಘಟಿಸಿತು!

ಅಲ್ಲಿ ಧ್ವಜವನ್ನು ಕೆಳಗಿಳಿಸಿದುದಾದರೂ ಏತಕ್ಕಾಗಿ? ಸ್ವತಂತ್ರ ತಮಿಳುನಾಡಿನ ಪತಾಕೆಯನ್ನು ಹಾರಿಸಲಿಕ್ಕಾಗಿ ತಾನೇ? ಇಂತೆಯೇ ತಮಿಳುನಾಡಿನ ಹಲವಾರೆಡೆಗಳಲ್ಲಿ "ಸ್ವತಂತ್ರ ತಮಿಳುನಾಡಿ"ನ ಬಿಳಿ ಬಾವುಟವನ್ನು ಹಾರಿಸಲಾಯಿತು. ಈ ತಮೂಪೆಯಲ್ಲಿ ಬಸಳ ನೊಂದವರು ಶ್ರೀ ಚಿದಂಬರಂ ಪಿಳ್ಳೈ ಹಾಗೂ ಸುಬ್ರಹ್ಮಣ್ಯಂ ಭಾರತಿ. ಅಕ್ರಮಿಣಗಾರ ಆಂಗ್ಲೇಯರ ಪ್ರೋತ್ಸಾಹಿಲು ಶ್ರೀ ವಾ. ಪೂ. ಚಿದಂಬರಂ ಪಿಳ್ಳೆಯವರು ನೌಕಾ ಸಂಸ್ಥೆಯನ್ನು ಸ್ಥಾಪಿಸಿ, ಸ್ವಾತಂತ್ರ್ಯಕ್ಕಾಗಿ ಹಲವಾರು ರಂಗಗಳಲ್ಲಿ ಪ್ರಾಣವನ್ನು ತೃಣವೂನ ತಿಳಿದುಕೊಂಡು ಹೋರಾಡಿದ ಧೀರ ಪುರುಷ ಅವರು. ಅವರ ಜ್ಞಾಪಕಾರ್ಥವಾಗಿ ಕೂಪುಂ ಬುತ್ತೂರಿನಲ್ಲಿ ಒಂದು ಹೂದೋಟವಿದೆ. "ಸ್ವತಂತ್ರ ತಮಿಳುನಾಡಿ"ನ ಹಿಂದೀ ವಿರೋಧೀ ಹೋರಾಟಗಾರರು ಅಲ್ಲಿ ಸೇರಿದರು—ಮತ್ತು ಧ್ವಜವನ್ನು ಹಾರಿಸಿದರು. ಅವರ ಅಕ್ಷ ಅದೆಂತು ಚಿತ್ರಹಿಂಸೆ ಕೊಳಗಾಗಬಹುದು! ಇಂತಹ ಛಿದ್ರ ಕಾ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರ್ಯಕ್ಕಾಗಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರೇನು? ಕೇವಲ "ತಮಿಳುನಾಡು ತಮಿಳುನಾಡೆ"ಂಬ ಜಪ ಅವರು ಮಾಡುತ್ತಿದ್ದರೇನು? ಭಾರತಮಾತೆಗಿಂತ ಭಿನ್ನ ಮಾತೆಯನ್ನು ಅವರು ಭಾವಿಸಿಕೊಂಡಿರಲಿಲ್ಲ. ತಮಿಳು ಪ್ರಾಂತಅಲೆಯ ಅಂಗ ಇದೆ; ಅಷ್ಟೇ. ತಮಿಳುನಾಡಿನಲ್ಲೇ 'ತಮಿಳ್'ರು ಶ್ರೇಷ್ಠ ದೇಶ ಭಕ್ತರಿಗೆ ಅಪಮಾನ ಮಾಡಿದರು. ಬ್ರಿಟಿಷರಿಂದ ಸಾಧ್ಯವಾಗದಿರುವದನ್ನು ದ್ರಾ. ಮು. ಕ. ಮಾಡಿಸಿತು!

ಅಖಂಡ ಭಾರತದ ಚಿತ್ರವನ್ನು ಚಿಕ್ಕ ಮಕ್ಕಳಿಗೂ ಅರ್ಥವಾಗುವಂತೆ ಹಾಡಿದವರು ವರಕವಿ ಭಾರತಿ. ಇಲ್ಲಿ ಹಿಂದಿನೆಂಟು ಭಾಷೆಗಳಲ್ಲಿ ಹಾಡುವದು ಭಾರತಮಾತೆಯ ಸ್ತೋತ್ರವೆಂದವರು ಹೇಳಿರುವರು. ನಾವು ಒಂದಾಗಿ ಇದ್ದಳ್ಳಿ ಮಾತ್ರ ಬಾಳಬಹುದು, ಇಲ್ಲವಾದಲ್ಲಿ ಬೀಳುವೆವೆಂದವರು ಎಚ್ಚರಿಸಿರುವರು. ಅಂದು ಅವರ ಹೆಸರಿನಲ್ಲೇ ಅಪಹಾಸ್ಯ ನಡೆಯಿತು. ಚಿದಂಬರಂ ಪಿಳ್ಳೆ ಹೂಡೂಟದಲ್ಲಿ ಕೂಡಿ, "ಸ್ವತಂತ್ರ ತಮಿಳ ನಾಡಿ"ನ ಧ್ವಜವನ್ನು (ಕೊಡಿಯನ್ನು) ಹಾರಿಸಿದ ಹಿಂದಿ ವಿರೋಧಿ ವಿದ್ಯಾರ್ಥಿಗಳು ಭಾರತಿಯವರ ಹಾಡನ್ನು ಕೊಲೆಗೈದು ಹಾಡಿದರು. ಅವರು ಭಾರತವೆಂದು ಹಾಡಿದಲ್ಲಿ ಹುಡುಗರು ಸ್ವತಂತ್ರ ತಮಿಳುನಾಡೆಂದು ಹಾಡಿದರು. ದೇಶಭಕ್ತರಿಗೆ ದ್ರಾ.ಮು.ಕ. ಸಲ್ಲಿಸಿದ ಗೌರವ ಇದು!

ಕೇಂದ್ರ ಸರಕಾರದ ಲಾಂಛನವನ್ನು ಕೆಳಗಳಿಸಿ, ಸ್ವತಂತ್ರ ತಮಿಳುನಾಡಿನ ಕೇತುವನ್ನು ಮೇಲೇರಿಸಿ, ಸ್ವತಂತ್ರ ತಮಿಳುನಾಡಿನ ಹಾಡನ್ನು ಹಾಡಿದ ಮೇಲೆ ರಾಷ್ಟ್ರಗೀತೆಗೆ ಇನ್ನೆಲ್ಲಿ ಸ್ಥಾನವಿದೆಯೇ? ಅದನ್ನು ಯಾರಾದರೂ ಹಾಡಬಹುದೇ? ಹಿಂದಿ ವಿರೋಧಿಗಳು ಅದನ್ನು ಸಹಿಸುವಂತಿಲ್ಲ, ಆದುದರಿಂದಲೇ ಅವರು ವಿದ್ಯಾಸಂಸ್ಥೆಗಳಲ್ಲಿ ಹಾಗೂ ಇತರೆಡೆಗಳಲ್ಲಿ ಬರಿಯಲ್ಪಟ್ಟಿದ್ದ ದೇಶೀಯ ಗೀತೆಗಳ ಸಾಲಿಗೆ ಕಪ್ಪು ಬಳಿದಿರುವರು. ಇದು ಹುಡುಗರ ಕೆಲಸ, ಜವಾಬ್ದಾರಿಯ ಅರಿವುಳ್ಳವರು, ಹೊಣೆಗಾರಿಕೆ ಧರಿಸಿ ಹೊತ್ತಿರುವವರು ಹಾಗೆ ಮಾಡಿಲ್ಲವಲ್ಲವೆನ್ನುವ ಮಾತೇ ಬರಕೂಡದೆನ್ನುವಂತೆ ಕಂಡವರ ಮಕ್ಕಳನ್ನು ಬಾವಿಗೆ ದೂಡಿ ದ್ರಾ.ಮು.ಕ.ದವರು ಅಳ ನೋಡುತ್ತಿದ್ದಾರೆಂಬ ಮಾತು ಬರಕೂಡದೆನ್ನುವಂತೆ ಹುಡುಗರಿಗಿಂತ ನಾವೆಂದೂ ಹಿಂದೆ ಬೀಳುವದಿಲ್ಲವೆಂಬುದನ್ನು ಪ್ರಕಟಪಡಿಸಿದೆನ್ನುವಂತೆ, ಇದಕ್ಕೆಲ್ಲಾ ನಾವೇ ಮಾರ್ಗದರ್ಶಕರೆಂಬುದನ್ನು ಸ್ಪಷ್ಟಪಡಿಸಲಿಕ್ಕಾಗಿಯೇ ಅನ್ನುವಂತೆ ದ್ರಾ.ಮು.ಕ.ದಧುರೀಣರಿಗೆ ಬ್ಬರು, ತಮಿಳ್ನಾಡಿನ ಮಂತ್ರಿಯವರು, ರಾಷ್ಟ್ರಗೀತೆಗೆ ಅಡ್ಡ ಬಂದುಬಿಟ್ಟರು. ಮದ್ರಾಸ್ ಮಹಾನಗರದಲ್ಲಿ ತಮಿಳು ಕಾಸ್ಮೊಪಿಟನ್ಸ್ ಸಂಗಿದ ಮೇಲೆ, ಪ್ರತಿನಿಧಿಗಳಿಗೆ ತಮಿಳುನಾಡನ್ನು ತೋರಿಸುವ ಕಾರ್ಯಕ್ರಮ ಇತ್ತು. ಅವರ ಗೌರವಾರ್ಥ ಸಾರ್ವಜನಿಕರು ಸಭೆಸೇರಿದ್ದರು. ಅಂತಹ ಸಾರ್ವಜನಿಕ ಸಭೆಗಾಗಿ ನಗರಸಭಾ ಅಥವಾ ಪುರಸಭಾ ಅಧ್ಯಕ್ಷರೇ ಅಧ್ಯಕ್ಷಸ್ಥಾನವನ್ನು ಅಲಂಕರಿಸುವದು ಅಭ್ಯಾಸ. ಆದರೆ ಅಲ್ಲಿಗೆ ಬಂದಿದ್ದ ಈ ಅಮಾತ್ಯರು ಆ ಅಸನ ತನಗೇ ಬೇಕೆಂದು ಹಟ ಹಿಡಿದರು. ಮಂತ್ರಿಯ ಮುಖಕ್ಕೆ! ಸರಿ ಅವರಿಗೇನೇ ಬಿಟ್ಟುಕೊಡಲಾಯಿತು. ಇನ್ನೇನು ಸಭೆ ಆರಂಭವಾಗಬೇಕು. ಆರಂಭದಲ್ಲಿ "ಗಣಮುಖದ ಪಣಾಪಿರಿಗೆಲ್ಲ ಈಗ ಕೆಲಸವಿರುವದಿಲ್ಲ; ಮಂತ್ರಿಮಾಗಧರ ಹಾಡು ನಡೆಯಬೇಕು. ಆದರೆ ಇದು ಸಾರ್ವಜನಿಕ ಸಮಾರಂಭವಿದ್ದುದರಿಂದ ರಾಷ್ಟ್ರಗೀತೆಯನ್ನು ಹಾಡಲು ಏರ್ಪಾಡು ಮಾಡಲಾಗಿತ್ತು. ರಾಷ್ಟ್ರಗೀತೆಯೊಡನೆ ತಮಿಳುನಾಡಿನ ಅಸೆಂಬ್ಲಿರು (ಅಮಾತ್ಯರು) ಅದನ್ನು ಮೆಚ್ಚುವ ಬದಲು ರೊಚ್ಚಿಗೆದ್ದು ಬಿಟ್ಟರು; ಹಾಗೂ ಬಂದವರನ್ನು ಓಡಿಸಿಯೇ ಬಿಟ್ಟರು. ಪ್ರಕಂಚದ ನಾನಾ ರಾಷ್ಟ್ರದಿಂದ ಬಂದಿದ್ದ ಪ್ರತಿನಿಧಿಗಳೆದುರು 'ಅಖಂಡ ಭಾರತ'ದ ಈ ಚಿತ್ರವನ್ನು ಮಂತ್ರಿಗಳು ಎಡಗಿದರು! ಇದಾ ಅವರ ದೇಶಪ್ರೇಮದ ದ್ಯೋತಕ! ನಾನಾ ಪ್ರತಿನಿಧಿಗಳು ಆಹೂಯ ದೇಶದಲ್ಲಿ ಅಮಾತ್ಯರ ಈ ಸಾಹಸಕಾರ್ಯವನ್ನು ಹೇಳಬೇಕು!

ಸಚಿವರ ಸಾಹಸಕಾರ್ಯಗಳು ಅವರ ವಕ್ಷದ ಅನುಸಾರಕಂಗೆ ಪ್ರೇರಣಾ ಶಕ್ತಿ ತಾನೇ! ಮಂತ್ರಿಯವರೇ ಹಾಗೆ ವರ್ತಿಸಿದ ನಂತರ ಮಕ್ಕಳು ಇನ್ನೆಂತು ನಡೆದುಕೊಂಡಾರು? ಅದೊಂದು ಚಳ್ಳೆಕಾಯಿ ಕಥೆ ಕೇಳುತ್ತಾ ಇಲ್ಲವೇ? ರಾವಣನನ್ನು ಕೊಂದ ಮೇಲೆ ವಾನರ ಪಡೆಗೆ ಒಮ್ಮೆ ಶ್ರೀರಾಮನು ಔತಣಬೇರ್ಪಡಿಸಿದ್ದಾಗ, ಊಟದ ಸಮಯ ಅಕಸ್ಮಾತ್ ಒಂದು ಚಳ್ಳೆಕಾಯಿಬೀಜ ಮೇಲೆ ಹಾರಿತಂತೆ. ಅದನ್ನು ಕಂಡ ಆ ಕಪಿ ಅದಕ್ಕಿಂತ ಎತ್ತರ ನೆಗೆಯ ತಂತೆ. ಎಲಾ, ಇವನ! ನಾನೇನು ಇವನಿಗಿಂತ ಕಮ್ಮಿಯೇ? ಉಳಿದ ಮಂದಗಳೂ ಹಾರಿದುವಂತೆ. ಹಾಗೆ....

ಪ್ರಪಂಚ ತಮಿಳು ಪ್ರತಿನಿಧಿಗಳು ಇನ್ನೊಂದೆಡೆಯಲ್ಲಿ "ಸ್ವತಂತ್ರ ತಮಿಳುನಾಡಿ"ನವರ ಇನ್ನೊಂದು ಸಾಹಸಕಾರ್ಯವನ್ನು ಕಂಡರು. ಅವರು ಪ್ರಯಾಣ ಮಾಡುತ್ತಿದ್ದ ಬಸ್ಸಿನ ಮೇಲೆ ಕಾವೇರಿ, ನರ್ಮದಾ, ಗೋದಾವರಿ, ಗಂಗಾ, ಸಿಂಧು ಮುಂತಾದ ಭಾರತದ ನದಿಗಳ ಹೆಸರುಗಳಿದ್ದುವು. ಅವತ್ಯರ ಅನುಸಾರಕರಿಗೆ ಇಷ್ಟೇ ಸಾಕಾಯಿತು. ಒಬ್ಬನು ಆ ಬಸ್ಸಿನ ಮೇಲೇರಿ ಕಾವೇರಿಯನ್ನು ಬಿಟ್ಟು, ಇತರರನ್ನು ಕೆಳಗಳಿಸಿಬಿಟ್ಟರು. ಪ್ರತಿನಿಧಿಗಳು ಪರಮಾಶ್ಚರ್ಯದಿಂದ ಬಿಳಿಬಿಳಿ ನೋಡುತ್ತಿದ್ದಾರೆ! ಅದೆಲ್ಲ ತಾವು ಭಾರತದ ಗಡಿ ಬಿಟ್ಟು ಹೊರದೇಶಕ್ಕೆ ಬಂದಿರುವೆವೋ ಎನ್ನುವ ಸಂದೇಹ ಅವರಿಗೆ ಬಂತು- ಅದು ಕ್ಷಣಕಾಲ ಅಷ್ಟೇ. ಅವರಿಗೆ ಆರಂಭದಿಂದ ಅದು ಅಭ್ಯಾಸವಾಗಿ ಬಿಟ್ಟಿದೆ—ಇದು 'ತಮಿಳ್' ಪ್ರದರ್ಶನ!

ಪ್ರಪಂಚ ತಮಿಳು ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳು ಕಣ್ಣಾರೆ ಕಂಡ ಅಪೋಹ ದೃಶ್ಯಗಳಿವು. ತಮಿಳು ಕಾವ್ಯರಿ ಸ್ನಿನಿಂದ ಸ್ಫೂರ್ತಿ ಪಡೆದ ತಿರು ಅಣ್ಣಾದೊರೈಯವರ ಆಳ್ವಿಕೆ ತತ್ವದಿಂದ ಅದೇನು ಫಡೆಯುತ್ತಿದ್ದಾರೆಂಬುದನ್ನು ಅವರು ಕಂಡರು. ಅದರೂ ಅದರಲ್ಲಿ ಯೋಚನೆ ಮಾಡಬಲ್ಲವರು ನಾಣ್ಯಕ್ಕೆ ಎರಡು ಮುಖಗಳಿವೆಯೆಂಬುದನ್ನು ತಿಳಿದುಕೊಳ್ಳದಿರಲಾರರು. ತಮಿಳು ನಾಡೆಂದರೆ ಇಷ್ಟೇ ಏನ? ಅದು ಕಾಶ್ಮೀರ, ನಾಗಾಲೇಂಡಿನ ಸಾಲಿಗೆ ಸೇರಿದ್ದೇನು? ಇಂತಹ ಪ್ರಶ್ನೆಗಳು ಬರುವದು ಸ್ವಾಭಾವಿಕ. ಪ್ರಶ್ನೆಗಳ ಗೋಪುರಗಳನ್ನು ಕಲ್ಪಿಸಿಕೊಂಡೇ ಕಾಲಕಳೆಯಲು ಸಾಧ್ಯವಿರುವುದಿಲ್ಲ. ವ್ಯಾಸ ಜಯಂತಿ, ನರಸಿಂಹ ಜಯಂತಿ ಇವುಗಳ ಅರ್ಥವಾದರೂ ಆಗ ಏನಾಗಬಹುದು?

ಕಂಸನ ಎಲ್ಲೆಲ್ಲೂ ಕೃಷ್ಣನನ್ನು ಕಂಡನು. ಅವನನ್ನು ಕೊಲ್ಲಲು ಪ್ರಯತ್ನಿಸಿದನು. ಶಿಶುಪಾಲ ಅವಮಾನವಾಡುತ್ತಿದ್ದರೂ ಅವನಿಗೆ ಉದ್ದದ ಹಗ್ಗವನ್ನು ಕೊಡಲಾಯ್ತು. ಕೌರವರು ಅದೆಂತು ನಡೆದುಕೊಂಡರು? ದ್ರೋಹಕ್ಕೊಳಗಾದ ಭೀಷ್ಮಾಚಾರ್ಯ, ದ್ರೋಣಾಚಾರ್ಯರು ಅದೆಂತು ವರ್ತಿಸಿದರು? ಕೊನೆಯಲ್ಲಿ ಧರ್ಮವು ಗೆದ್ದಿತು. ಇದನ್ನು ವ್ಯಾಸ ಜಯಂತಿ ಜ್ಞಾಪಕಪಡಿಸುತ್ತಿದೆ. ಇಂದು ಅದೇ ರೀತಿ ಆಚಾರ್ಯರುಗಳು ಆಡುತ್ತಿದ್ದಾರೆ. ದ್ರಾ.ಮು.ಕ., ದ್ರಾ.ಮು.ಕ., ಶಿವಸೇನೆ, ಸರದಾರ ಸೇನೆ, ನಾಗ ಸೇನೆ, ತಮಿಳು ಸೇನೆ, ಗೋಪಾಲ ಸೇನೆ, ಬಸವ ಸೇನೆ, ಲಚ್ಚಿತ ಸೇನೆ, ಹಿಂದಿ ಸೇನೆ, ಅಖಾಲಿದಳ, ಮುಸ್ಲಿಮ್‌ಲೀಗ್, ಕಮ್ಯುನಿಸ್ಟ್ ಪಾರ್ಟಿಗಳು, ಕ್ರಿಸ್ತೀಯ ಮಿಶನರಿಗಳು.....ಸೇವೆಯ ಸಾಲು ಉದ್ದಕ್ಕಿದೆ. ಅದೆಷ್ಟು ಉದ್ದಕ್ಕಿದ್ದರೇನಂತೆ? ಧರ್ಮಕ್ಕೆ ತಾನೇ ಜಯ?

ಹರಿ ಎಲ್ಲಿ? ಹಾರಾಡುತ್ತಾನೆ ಹಿರಣ್ಯ. ಆ ಕಂಭದಲ್ಲಿ ಇದ್ದಾನೆಯೆ? ಈ ಕಂಭದಲ್ಲಿ ಇದ್ದಾನೆಯೆ? ಎಲ್ಲಿ, ಎಲ್ಲಿ? ಒಂದು ಪ್ರತಿ ಕೇಳಿಬರುತ್ತಿದೆ ರಾಷ್ಟ್ರೀಯತೆ ಎಲ್ಲಿದೆ, ಎಲ್ಲಿದೆ? ಅದರ ನಾಶಕ್ಕೆ ಸೇವೆಗಳು ಸಿದ್ಧವಾಗುತ್ತಿವೆ. ಒಡಕಿನ ಸ್ವರಗಳು ಕೇಳಿಬರುತ್ತಿವೆ. ಆಗ ಹರಿ ಪ್ರತ್ಯಕ್ಷನಾಗುತ್ತಾನೆ. ರಾಷ್ಟ್ರೀಯತೆಯು ಅಂತೆಯೇ ಗೋಚರವಾಗದಿರದು. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ವ್ಯಾಸ ಜಯಂತಿ, ನರಸಿಂಹ ಜಯಂತಿಗೆ ಮತಾತೀತ (ಮತಸಿರವೇಕ್ಷ?) ದೇಶದಲ್ಲಿ ಸಮಯವಿಲ್ಲವೆಂದು ಹೇಳಬಹುದು. ಆದರೆ ರಾಷ್ಟ್ರೀಯರು ಅದನ್ನು ಮರೆಯಲಾರರು. ರಾಷ್ಟ್ರ ದೇಗುಲದಲ್ಲಿ ಆ ಜ್ಯೋತಿ ನಂದಿತೆಂದರೆ ತೀರಿತು, ರಾಷ್ಟ್ರೀಯತೆಯ ಕೊಲೆಯಾಯಿತು. ಅದೆಂದೂ ಸಾಧ್ಯವಿಲ್ಲ.

ಕಲಿಯುಗದಲ್ಲಿ ಸಂಘವೇ ಶಕ್ತಿಯೆಂದು ಹೇಳಲಾಗುತ್ತಿದೆ. ಆದುದರಿಂದಲೇ ಈ ದೇಶವಿರೋಧಿ ಕಂಸರ, ಹಿರಣ್ಯರ ನಾಶಕ್ಕಾಗಿ, ಧರ್ಮ ಸಂಸ್ಥಾಪನೆಗಾಗಿ ರಾಷ್ಟ್ರದ ಪುನರುತ್ಥಾನಕ್ಕಾಗಿ ರಾಷ್ಟ್ರೀಯ ಸಂಘಟನೆಯು ಕಾರ್ಯ ನಡೆಯುತ್ತಿದೆ. ತಮಿಳುನಾಡಿನಲ್ಲಿ "ಸ್ವತಂತ್ರ ತಮಿಳುನಾಡಿನ ಬಾವುಟವನ್ನು ಹಾರಾಡಿಸುತ್ತಿದ್ದಾಗ, ಮಧುರೆಯಲ್ಲಿ ಕೆಲವು ದೇಶಪ್ರೇಮಿ ವಿದ್ಯಾರ್ಥಿಗಳು ಒಂದಾಗಿ ರಾಷ್ಟ್ರೀಯ ವಿದ್ಯಾರ್ಥಿ ಪರಿಷತ್ತಿನ ಹೆಸರಿನಲ್ಲಿ ಅದನ್ನೆದುರಿಸಲು ಅಂಗುಳಿದರು. ಆದುದರಿಂದ ಮಧುರೆಯಲ್ಲಿ ಆ ರೀತಿ ಬಟ್ಟೆಯನ್ನು ಹಾರಾಡಿಸಲು ಸಾಧ್ಯವಾಗದೆ ಹೋಯಿತು. ಇದೊಂದು ಉದಾಹರಣೆ. ರಾಷ್ಟ್ರೀಯ ಶಕ್ತಿಗೆ (ಸಂಘಟನೆಗೆ) ಇದು ಕಾಟ್ಟ ಗಂಟೆಂಬದಕ್ಕಿಂದು ನಿದರ್ಶನ ಅಷ್ಟೇ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಶಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾತ್ರೆಯಸಹಿತ ಉಪಾಹಾರಕ್ಕೆ ಜನ್ಮ ಸ್ಥಾಪ ಪಡೆದ ವಿಶಿಷ್ಟಾತ್ಮ ಹೊಟೆಲ್.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CI.-4.17-4/65-66 dated 26-4-1966.

ಅರುವತ್ತು ತುಂಬಿದ

ಶ್ರೀ. ನ. ಕೃ. ರವರ ಸಾಹಿತ್ಯ ವೈಖರಿ

ಬರೆದವರು: ರಾ. ವೆಂ. ಹೆಗಡೆ.

ಅವಳ್ಳರವರ ಉಜ್ವಲ ಶೈಲಿಯ "ಸಂಧ್ಯಾರಾಗ" ಕಾದಂಬರಿ ಓದದ ಕನ್ನಡಿಗರು ಯಾರೂ ಇದ್ದಿರಲಿಕ್ಕಿಲ್ಲ. ಇದ್ದರೆ ಅದು ಅವರ ದಾರ್ಭಾಗ್ಯವೆನ್ನಬೇಕು. ಸಣ್ಣ ಕತೆ, ಕಾದಂಬರೀ ಸಾಹಿತ್ಯ ಬರವಾಗಿರುವ ಕಾಲದಲ್ಲಿ ಕಾದಂಬರೀ ಸಾಹಿತ್ಯಕ್ಕೆ ನವ ಚೇತನ ತಂದು ಒರೆ ವ್ಯಕ್ತಿನಿಷ್ಠ ವ್ಯಕ್ತಿಗಳ ಮೇಲೆ ಒರೆಯ-ವ ಕಾದಂಬರಿಕಾರರನ್ನು ಹುಟ್ಟಿಸಿ, ಕಾದಂಬರಿ ಸಾಹಿತ್ಯದಲ್ಲೂ ಸಣ್ಣಕತೆಗಳಲ್ಲೂ, ವಾಸ್ತವೀಕತೆಗೂ ತುಂಬ ಸಾಮಾಜಿಕ ಪರಿಸರದ ಮೂಲೆಮೂಲೆಯಲ್ಲಿರುವ ವ್ಯಕ್ತಿಗಳ ಅಂತರಂಗ ಕೆದಕಿ ನೋಡಿ, ಅವರ ನೋವು, ನಲಿವುಗಳನ್ನು ನೋಡಿ ಅಂತಃಕರಣಪೂರ್ವಕವಾಗಿ ಕಲಾತ್ಮಕ ಪರಿಹಾರ ಸೂಚಿಸಿ, ಅವರನ್ನು ಚೇತೋಹಾರಿಗಳನ್ನಾಗಿ ಮಾಡಿರುವುದೇ ಕೃಷ್ಣರಾಯರ ಅದ್ವಿತೀಯ ಅವಿಸ್ಮರಣೀಯ ಸೇವೆ.

ಅ.ನ.ಕೃಷ್ಣರಾಯರು ಕತೆ, ವಿಮರ್ಶೆ, ಅನುವಾದ, ಜೀವನಚರಿತ್ರೆ, ಸಂಗ್ರಹಗಳನ್ನು ಮಾಡಿದ್ದರೂ ಅವರನ್ನು ಕಾದಂಬರೀಕಾರರೆಂದು ಕರೆಯುವುದು ನಮ್ಮ ಸಾಹಿತ್ಯಾಭಿಮಾನಿಗಳ ರೂಢಿ.

ಅ.ನ.ಕೃಷ್ಣರಾಯರು ಸಾಹಿತ್ಯನಿರ್ಮಾಣಕ್ಕೆ ಪ್ರೇರಣೆ, ಅವರ ಗುರುಗಳಾದ ಡಿ|| ಪಂಡಿತ ತಾರಾನಾಥರು ತಮ್ಮ ಹದಿನಾರನೇ ವಯಸ್ಸಿನಲ್ಲಿಯೇ "ಮದುವೆಯೋ ಮನೆ ಹಾಳೋ" ನಾಟಕ ರಚಿಸಿ ಸಾಹಿತ್ಯಕ್ಷೇತ್ರಕ್ಕೆ ಹೊರಳಿದರು. ೧೯೩೪ರಲ್ಲಿ ಅವರ ಪ್ರಥಮ 'ಜೀವನ ಯಾತ್ರೆ' ಕಾದಂಬರಿ ಪ್ರಕಟವಾಯಿತು. ಇಲ್ಲಿಂದಲೇ ಇವರು ಕಾದಂಬರೀಕಾರರೆಂದು ಗುರುತಿಸಿದರೆನ್ನಬೇಕು. ಜೀವನವನ್ನು ಕಲಾತ್ಮಕ ದೃಷ್ಟಿಕೋನದಿಂದ ವಿಮರ್ಶಿಸಿ ನೋಡಲು ಕಾದಂಬರೀ ಕ್ಷೇತ್ರ ಉತ್ತಮವೆಂದು ತಿಳಿದು, ಅವರು ಕಾದಂಬರಿಗಳಿಗೆ ಬಳಸಿಕೊಂಡಿರುವ ವಸ್ತುಗಳು ತುಂಬಾ ವೈವಿಧ್ಯ. ಅವರ ಆರಂಭದ ಕಾದಂಬರಿ ಜೀವನ ಯಾತ್ರೆ'ಯಿಂದ ಹಿಡಿದು 'ನಗ್ನಸತ್ಯ', 'ಶಶಿ ಸಂತಾನ', "ಅಪರಂಜಿ", ಕೃತಿಗಳು, ಕೀಚಕ ಕೊಳಚೆ ನಗರದ ವೇಶ್ಯಾ ಜೀವನದ ಚಿತ್ರಣಗಳು, "ಸಂಧ್ಯಾರಾಗ, "ಉದಯರಾಗ", ಪಟಸಾರ್ವಭೌಮ" "ಸಾಹಿತ್ಯ ರಕ್ಷ", "ಗಾಜಿನ ಮನೆ", "ಸಂಗ್ರಾಮ", "ಕನ್ನಡಮ್ಮನ ಗುಡಿಯಲ್ಲಿ" ಮುಂತಾದುವುಗಳಲ್ಲಿ ಸಮಾಜ ಸಂಸ್ಕರಣಕ್ಕೆ ತೊಡಗಿದ ಕಲಾವಿದರು, ಸಾಹಿತಿಗಳು, ಶಿಲ್ಪಿಗಳು, ಪತ್ರಿಕಾಕರ್ತರ ಜೀವನವನ್ನು ತಾವು ಕಾಣುತ್ತೇವೆ. 'ಅಮರ ಅಗಸ್ಟ್' ರಾಜಕೀಯ ಕೃತಿ, "ಮಂಗಳ ಸೂತ್ರ"ದಲ್ಲಿ ಸಾಮಾಜಿಕ-ಕೌಟುಂಬಿಕ ಕತೆ ಪಾತ್ರ ರಚನೆಯಲ್ಲಿ ಎತ್ತಿದ ಕೈ ಇವರು. ಸಂಭಾಷಣೆ, ಪ್ರಸಂಗ ವೇಷ ತುಂಬಾ ಸ್ವಿಷ್ಟವಾದುದಾಗಿದೆ. ಇಲ್ಲಿ ಅವರು ಕಣ್ಣಿಗೆ ಕಟ್ಟುವಂತೆ ಹೇಳುವ ರೀತಿಗೆ "ಜೀವನ ಯಾತ್ರೆ"ಯಲ್ಲಿ ಬರುವ ಭಟ್ಟರ ಪಾತ್ರವನ್ನು ಇಲ್ಲಿ ಒಂದಾಗಿ ಉದಾಹರಿಸಬೇಕು. ಭಟ್ಟರ ವೇಲಕ್ಕೆ ಎತ್ತಿ ಕಟ್ಟಿದ ಪಿಂಜಿ, ಪಟ್ಟೆ ಪಟ್ಟೆಯಾಗಿ ಬಳಿದುಕೊಂಡಿದ್ದ ವಿಭೂತಿಯ ರೇಖಾವಿನ್ಯಾಸ, ಹೇಂದೆಸಿದ್ದ ಜರೀ ಶಾಲು, ಕೊರಳಲ್ಲಿದ್ದ ರುದ್ರಾಕ್ಷಿ ಮಾಲೆ, ತೀಡಿ ಕಚ್ಚೆ ಹಾಕಿ ಉಟ್ಟಿದ್ದ ಕಿಕ್ಕೇರಿ ಮಗ್ಗದ ರೇಷ್ಮೆಯಂಚಿನ ಪಂಚೆ, ಇವೆಲ್ಲ ಶ್ರೀ ಕಳಸವಿಟ್ಟಂತೆ ಖಡ ಖಡಿಲೆಂದು ಕಂಚಿನಂತೆ ಶಬ್ದ ಮಾಡುತ್ತಾ ಭಟ್ಟರು ನಡೆದರೆಂದರೆ ಅವರ ಹೆಜ್ಜೆಯೇಂದಿ! ಕುಣಿಯುತ್ತಿದ್ದ ಗುಂಡು ಹೊಟ್ಟೆ" ಎಷ್ಟು ಚೆನ್ನಾಗಿದೆ!

ಸಮಾಜದಲ್ಲಿ ಪ್ರಚಲಿತವಿರುವ ಗಂಡು ಹೆಣ್ಣುಗಳ ಅನೈಗಿಕ್ಕ, ಲೈಂಗಿಕ ಜೀವನಗಳ ಆಗು ಹೋಗುಗಳ ಬಗ್ಗೆ, ಅದರ ಅನಾಹುತಗಳ ಬಗ್ಗೆ ತುಂಬ ಅಧ್ಯಯನ ನಡೆಸಿ ಬರೆದಿದ್ದಾರೆ, 'ನಗ್ನ ಸತ್ಯ'ದಲ್ಲಿ ವೇಶ್ಯಾ ಜೀವನದಿಂದ ಬಿಡುಗಡೆ ಹೊಂದಲು ಪ್ರಯತ್ನಿಸಿಯೂ ಅವಕಾಶ

ಸಿಗದೆ ಈ ಪಾಪ ಕೂಪಕ್ಕೆ ಇಳಿದು ನೊಂದು ಸಾಯುವ ಕಮಲಳ ಪಾತ್ರ, ಅವಳ ಅವ್ಯಾಜ ಪ್ರೇಮ ಓದಿಯೇ ಗ್ರಹಿಸಬೇಕು. 'ಶಶಿ ಸಂತಾನ' 'ಕಂಜಿಗತ್ತಲಿ'ನಲ್ಲಿ ವೇಶ್ಯಾ ಜೀವನ ದರ್ಶನ ಈ ಕೂಪದಲ್ಲಿ ತೊಳಲಾಡುವ ಜೀವಗಳ ಪಾಡು ನೋಡಿದರೆ ನಾಯಿ ಜೀವನವೂ ತುಂಬಾ ಒಳ್ಳೆಯದೆನ್ನಬೇಕು.

'ಉದಯರಾಗ' ಹೊಟೆಲ್ ಮೂಡೆಯ ಅಪ್ರತಿಮ ಕಲಾವಿದನಾಗಿ ರೂಪಗೊಂಡ ಕತೆ, (೧೯೩೪) 'ಸಂಧ್ಯಾರಾಗ' ಸಂಗೀತಗಾರನ ಕತೆ. 'ನಟ ಸಾರ್ವ ಭೌಮ' ಖಾಟಕ-ಕಲಾಜೀವಿ ರಾಜನ ಚಿತ್ರ, ಅವನು ಎದುರಿಸುವ, ಜಾತಿ, ಪ್ರಣಯ ಮೋಸದಲ್ಲಿ ತೊಳಲಾಟ, 'ಸಂಗ್ರಾಮ' ಶಿಲ್ಪಿಯ ಜೀವನ, ವರ್ಕ್ಸವಾದದ ಪಾಶವೀ ರೂಪ ಇಲ್ಲಿ ನೋಡಬೇಕು. 'ಅನ್ನನ್ನು ನಾನೇ ಕಂಡೆ' ಕೃತಿಯಲ್ಲಿ ಅಗಿಷ್ಟ ಕವಿಗಳ ಪಲಾಯನವಾದಿತ್ವವನ್ನು ಟೀಕಿಸಿ ಅವರು ಪದ್ಯ ಬರೆಯುವ ಸಂಜೀವಯಂತ್ರಗಳು ಎಂದಿದ್ದಾರೆ. 'ಕನ್ನಡಮ್ಮನ ಗುಡಿಯಲ್ಲಿ' "ಕಮ್ಯುನಿಸಂ ನಮ್ಮ ಸಾಮಾಜಿಕ ಜೀವನ, ಲಲಿತಕಲೆ, ಸಾಹಿತ್ಯವನ್ನೂ ರಷ್ಯಾದ ವಿಕ್ರೀತ ದಾರಿಯನ್ನಾಗಿ ಮಾಡಬೇಕೆಂದು ಶಕ್ತಿಮೀರಿ ಪ್ರಯತ್ನಿಸಿದೆ" ಎಂದಿರುವರು. ಈ ಅ.ಶವು 'ಗಾಜಿನ ಮನೆ''ದೀವಾರಾಧನೆ'ಯಲ್ಲಿ ದೊಡ್ಡದಾಗಿ ಬೆಳೆದಿದೆ, 'ಅಮರ ಅಗಸ್ಟ್' ಸ್ವಾತಂತ್ರ್ಯ ಸಂಗ್ರಾಮದ ಕೃತಿ ಎಂದರೆ ಸಾಕು, 'ಮರಳು ಮನೆ' 'ಕೀರ್ತಿ ಕಳಶ'ಗಳಲ್ಲಿ "ಶ್ರೀಮತಿ"ಗಳಲ್ಲಿ ರಾಜಕೀಯ, ಅಂತರಾಷ್ಟ್ರೀಯ ವಿಚಾರಧಾರೆ ಮಥಿಸಿದ್ದಾರೆ. 'ಸಾಹಿತ್ಯರತ್ನ'ದಲ್ಲಿಯ ಮೂರ್ತಿ ಪತ್ರಿಕೋದ್ಯಮಿಯೇ ಆಗಿದ್ದಾನೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಈ ಕಾದಂಬರಿಯಲ್ಲಿ ತಂದು; ಓದುಗ ಓದಬಲ್ಲ ಸಾಹಿತ್ಯದಲ್ಲಿಯೇ ಒಂದು ಚಾರಿತ್ರಿಕ ಸಂಗತಿ ತಿಳಿಯುವಂತೆ ಮಾಡುವದು ಈ ಕಾದಂಬರಿಯ ಉದ್ದೇಶ. 'ರುಕ್ಮಿಣಿ' 'ಗೃಹಲಕ್ಷ್ಮಿ' 'ತಾಯಿಮಕ್ಕಳು'ಗಳಲ್ಲಿ ಪಾತ್ರಗಳನ್ನು ಸ್ವೇಚ್ಛೆಯಾಗಿ ಕಾಣಿಸಿದರೂ ನಮ್ಮ ಸಂಸ್ಕೃತಿಯ, ನಮ್ಮ ನಾಡಿನ ಹೆಣ್ಣಿನ ಅಂತಃಕರಣವನ್ನು ಇಲ್ಲಿ ನೋಡಬೇಕು. 'ಬಣ್ಣದ ಬದುಕು' ಬೇಟೆಗಾರನ ಕುರಿತು ಬರೆದ ಕೃತಿ, ಹೇಳಿಕೊಳ್ಳುವಂತಹದಲ್ಲ. 'ಚಿತ್ರವಿಚಿತ್ರ' ಚಲನಚಿತ್ರದ ಕುರಿತು ಬರೆದಿರುವ ಕೃತಿ; 'ಕಟ್ಟಿದ ಬಣ್ಣ' ಮೈಸೂರು ಸಂಗೀತಗಾರರ, ಸಂಗೀತ ಕಲೆಯ ದುರವಸ್ಥೆಯ ಸ್ಥಿತಿಯು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ರೂಪ.

'ಮಂಗಳಸೂತ್ರ' ಹೆಸರಿಸಲೇ ಬೇಕಾದ ಕೃತಿ. ಜೀವನದಲ್ಲಿ ಸಿಹಿ-ಕಹಿ ಬಂದರೂ, ಜೀವನದ ಬಗ್ಗೆ ಗೌರವದಿಂದ ಬಾಳುವ ಸಂಸಾರ ಚಿತ್ರ "ಕಣ್ಣೀರು"ನಲ್ಲಿ ಬರುವ ವ್ಯಕ್ತಿ ಫಣಿಯ ಮನ್ನ ದುರಾಸೆ ಮನೆ ನುಂಗುವುದು, ನರಸಿಂಹನ ಹುಂಬತನ, ಗೌರಿಯ ಕರ್ತವ್ಯದಿಂದ ಈ ಕಾದಂಬರಿಗಳು ವೈರಗುಗೊಂಡಿವೆ. "ತಾಯಿಯ ಕರುಳು" ದುಷ್ಟಟ ಇಷ್ಟೇಟ್ ಆಟದ ವೆಂಕಟರಾಯನ ಇತಿಹಾಸ. ತಾವು ಕೆಲಸ ಮಾಡುವ ಬ್ಯಾಂಕಿನಿಂದಲೇ ಹಣ ತೆಗೆದು ಇಡೀ ಜೀವನವನ್ನೇ ದುರಂತವಾಗಿಸುವ ಚಿತ್ರ, "ಈಚಲು ಮರದನ್ನ" ಕಥಾನಾಯಕ ತನ್ನಾಶೆಗಾಗಿ ಹೆಂಡತಿಯನ್ನೇ ಪರರಿಗೆ ಕೊಡಲು ಪ್ರಯತ್ನಿಸುತ್ತಾನೆ. "ಕಾಮಿನಿ ಕಾಂಚನ" "ಕಾಂಚನ ಗಂಗಾ" ಸಿರಿವಂತಿಕೆಯ ಅಮಲಿನ ಚಿತ್ರಣ. "ಶ್ರೀಮತಿ" 'ಚಾತಕಪಕ್ಷಿ' ಅಂತರ್ಜಾತೀಯ ವಿವಾಹ ಸಮಸ್ಯೆ, ಮುಯ್ಯಿಗೆ ಮುಯ್ಯಿ' 'ಭೂಮಿ ತಾಯಿ' ಇವೂ ಚಾರಿತ್ರ ಕತಾವಸ್ತು.

ಹರಿಜನ ಸಮಸ್ಯೆ 'ಪಶ್ಚಾತ್ತಾಪ'ದಲ್ಲಿದೆ. 'ಪುನರ್ಜನ್ಮ'ವೂ ಈ ಮೇಲಿನ ಸಮಸ್ಯೆಗೆ ಮೂಲ. "ಜೀವ ಕಳೆ 'ಆಶೀರ್ವಾದ' ಅನುಗ್ರಹ" ಧರ್ಮ ಸಂಬಂಧವಾದ ತಾತ್ವಿಕ ಸ್ಥಿತಿಯನ್ನು ಸಾಮಾನ್ಯ ಜೀವನದಲ್ಲಿ ಅಳವಡಿಸಿಕೊಳ್ಳಬಹುದೆಂಬುದರ ಚಿತ್ರಣ; ೧೯೫೮ರಿಂದ ಐತಿಹಾಸಿಕ ಕೃತಿ "ವಿಜಯ ವಿದ್ಯಾರಣ್ಯ"ರಿಂದ "ಅಭಯ ಪ್ರಧಾನ"ದ ವರೆಗೆ ಏಳು ಕೃತಿಗಳು ರಚಿತವಾಗಿವೆ.

ನಾಟಕಗಳನ್ನು ಬರೆಯುವುದರಲ್ಲಿ ಯಶಸ್ವೀಯಾಗದಿದ್ದರೂ ತಾತ್ಕಾಲಿಕ ಪ್ರಶಂಸೆ, ಟೀಕೆಗೆ ಗುರಿಯಾದ್ದಾರೆ. "ಹುಲ್ಲುಕಡ್ಡಿಪಿಟ್ಟು ಟೀಕೆಗೆ ಗುರಿಯಾಗಿರುವ ಕೃತಿ. "ಜಾಲು", "ಧರ್ಮಸಂಕಟ", 'ರಾಜನರ್ತಕಿ', "ರಾಣಿ ಚೆನ್ನಮ್ಮ",

---

ವೀರನಾರಾಯಣನ ಗದಗು

(ಐತಿಹಾಸಿಕ ಸುಖದಿಂದ)

ಹಿಂದಿನ ವಿಕ್ರಮೇವಾದ್ವಿತೀಯ ಕೃತಿ.

ಗದಗು ಸಮುದ್ರ ವಟ್ಟದಿಂದ ಸುಮಾರು ೨೦೦೦ ಅಡಿ ಎತ್ತರದಲ್ಲಿದೆ. ಸುಂದರ ನೈಸರ್ಗಿಕ ದಿಕ್ಕಿನಲ್ಲಿ ಸುಮಾರು ೩೦ ಮೈಲದೂರದಲ್ಲಿ ಕಪ್ಪದ ಗುಡ್ಡದಲ್ಲಿ ಹೆನ್ನದ ಗಣಿಗಳಿವೆ. ಈ ಗುಡ್ಡದಲ್ಲಿ ಆಯುರ್ವೇದ ಔಷಧಿಗಳಿಗೆ ಅವಶ್ಯವಾದ ಅಮೂಲ್ಯ ಗಿಡಮೂಲಿಕೆಗಳೂ ಇವೆ ಎಂದು ಹೇಳುತ್ತಾರೆ. ಗದಗು ತಾಲ್ಲೂಕಿನ ಅನ್ನೇಯ ದಿಕ್ಕಿನಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ತುಂಗಭದ್ರಾ ನದಿ ಹರಿಯುತ್ತದೆ. ಚಾಮರಸ, ನಾರಣಪ್ಪನಂತಹ ಪ್ರತಿಭಾವಂತ ಕವಿಗಳ ನೆಲೆ ಗದುಗು ಎಂಬುದನ್ನು ಇಲ್ಲಿ ಮತ್ತೊಮ್ಮೆ ಸ್ಮರಿಸಬಹುದು.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾಫಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಔಷಧಿ
ಖಾಸರಿಯಾದ ಆಯುರ್ವೇದ ಔಷಧಿ ಕಷ್ಟ ಕೆಲ್ಲ ಕೈಕೊಟ್ಟ ಸಲಹೆಗಳಿಗೆ, ಇಷ್ಟರಿಗೆ ಇರಿಯಿರಿ

SHANKAR PHARMACY
BHADRAVATI (MYSORE)

"ಸ್ವರ್ಣಮೂರ್ತಿ" (ಸೀತಾ ಪರಿತ್ಯಾಗದ ಕಥೆ) ಕೆಲವು ನಾಟಕಗಳು.

ಕಲಾ ಸಾಹಿತ್ಯದಲ್ಲಿ ಇವರ ಸೇವೆ ಮೆಚ್ಚಲೇ ಬೇಕು. "ಮಿಂಚು", "ಪಾಪ ಪುಣ್ಯ", "ಕಾನುನ ಸೋಲು", "ಕಿಡಿ", "ಕಣ್ಣು ಮುಚ್ಚಾಲೆ", "ಅಗ್ನಿ ಕನ್ಯೆ", "ಶಿಲ್ಪಿ", "ಸಮರ ಸುಂದರಿ", ಇವರ ಸಣ್ಣ ಕತೆಯ ತಂತ್ರ ಸರಳವಾದದ್ದು ಎನ್ನಬೇಕು.

ಕನ್ನಡ ವಿಮರ್ಶೆ, ಜೀವನ ಚರಿತ್ರೆಯನ್ನೂ ಇವರು ಬರೆದಿದ್ದಾರೆ. "ಕನ್ನಡಕುಲ ರತ್ನಿಕರು" ಕನ್ನಡಕ್ಕಾಗಿ ದುಡಿದ ಮೂವತ್ತೈದು ಸಾಹಿತಿಗಳ ಜೀವನ, ಕೃತಿ ಪರಿಚಯ ಮಾಡಿಕೊಟ್ಟಿದ್ದಾರೆ. "ಕನ್ನಡ ಕಲಾವಿದರು" ಸಂಗೀತಗಾರರು, ಕುಶಲ ಕಲಾವಿದರ ಪರಿಚಯ.

"ಕೈಲಾಸಂ" ಕನ್ನಡಕ್ಕೊಬ್ಬನಾದ ನಾಟಕಕಾರನ ಜೀವನ ಚಿತ್ರಣ, ಕೃತಿದರ್ಶನ ವಿಮರ್ಶೆ, "ಬಾಪೂಜಿ", "ಸ್ವಾಮಿ ವಿವೇಕಾನಂದ", "ದೀನಬಂಧು ಕಬೀರ್" ಇನ್ನು ಕೆಲ ಕೃತಿಗಳು. ಭಾರತೀಯ ಚಿತ್ರಕಲೆಯಲ್ಲಿ ರವಿವರ್ಮನ ಸ್ಥಾನ' ರವಿವರ್ಮನ ಚಿತ್ರಕಲೆಯ ವಿಮರ್ಶೆ, ಈ ಕೃತಿಯ ಬಗ್ಗೆ ಇವರು ತುಂಬಾ ಟೀಕೆಗೊಳಗಾಗಿದ್ದಾರೆ. "ವೀರಶೈವ ಸಾಹಿತ್ಯ ಸಂಸ್ಕೃತಿ"; ಸಂಶೋಧನಾತ್ಮಕ 'ಸಾಹಿತ್ಯ ವತ್ತು ಯುಗಧರ್ಮ" 'ಸಾಹಿತ್ಯ ಮತ್ತು ಜೀವನ', 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ. "ಸಂಸ್ಕೃತಿಯ ವಿಶ್ವರೂಪ" ಭಾರತೀಯ ಕಲೆಯ ಬಗ್ಗೆ ಬರೆದ ಪ್ರಮುಖ ಕೃತಿ.

"ಅಖಂಡ ಕರ್ನಾಟಕ", "ಕನ್ನಡದ ದಾರಿ", 'ಕರ್ನಾಟಕದ ಹಿತ ಚಿಂತನೆ', ಕನ್ನಡಿಗರ ರಾಜಕೀಯ ಸಾಮಾಜಿಕ ಅಭ್ಯುದಯಕ್ಕಾಗಿ ಬರೆದ ಕೃತಿಗಳಾಗಿವೆ. 'ಮ್ಯಾಕ್ಸಿಂಗಾರ್ಕಿ' ಗಾರ್ಕೀಯ ಜೀವನ ಕುರಿತು ಬರೆದ ಕೃತಿ. 'ರಸಋಷಿ'ಯಲ್ಲಿ ಉಮರನ ರುಬಾಯಿಯದ ೫೧ ಪದ್ಯಗಳ ಅನುವಾದ. "ಮರುಳಸಿದ್ಧ ರಾಮ್ಯ" ಕೃಷ್ಣರಾಯರ ಸಂಪಾದಿತ ಕೃತಿ.

ಅ. ನ. ಕೃಷ್ಣರಾಯರ ಕಾದಂಬರಿಗಳಲ್ಲಿ ಒಂದು ವಿಶ್ವಕೋಶವೇ ಅಡಗಿದೆ. ಅವರ ಅಗಾಧ ಜ್ಞಾನ ನಿಧಿಯನ್ನು ಕಾವ್ಯ ಕಂಡು ಬೆರಗಾಗಬೇಕು. ಶೇಕ್ಸ್‌ಪಿಯರ್ ಮೂವತ್ತಾರು ನಾಟಕ ಬರೆದಿದ್ದಾನೆ ಎಂದು ನಾವು ಆಶ್ಚರ್ಯ ಪಡುವಂತೆ, ಮುಂದಿನ ಪೀಳಿಗೆ ಇವರ ಕೃತಿ ರತ್ನಗಳನ್ನು ನೋಡಿ ಆತ್ಮಾಶ್ಚರ್ಯ ಪಡುವೆ ಇರಲಾರದು.

ಪತ್ರಿಕಾ ಸಂಪಾದಕತ್ವದಿಂದ (ಕನ್ನಡ ನುಡಿ) ಹಿಡಿದು, ಸಾಹಿತ್ಯದ ಬಹುಮುಖ ಪ್ರಾಕಾರಗಳಲ್ಲಿ ಕೈಯಾಡಿಸಿ ಸಿದ್ಧಿಸಿಕೊಂಡ ಅವರ ಎಲ್ಲ ಕೃತಿಗಳೂ ಗಮನಾರ್ಹವಾಗಿವೆ.

ಇಂದೂ ಈ ಇಳಿ ವಯಸ್ಸಿನಲ್ಲಿ ಎಳೆಯಷ್ಟು ಚೇತನ ತೋರಿ, ಕನ್ನಡದ ಯುವಕರಿಗೆ ಮಾರ್ಗದರ್ಶಕ ನೀಡುತ್ತಿರುವ ಅ.ನ. ಕೃಷ್ಣರಾಯರು ಒಂದು ವ್ಯಕ್ತಿಯಲ್ಲಿ ಒಂದು ಅಪ್ರತಿಮ ಶಕ್ತಿ. ಈ ಅರುವತ್ತನೇ ಜನ್ಮದಿನೋತ್ಸವ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ ಅವರಿಗೆ ನಿಧಿ ಸಮರ್ಪಿಸುವುದು ನಮ್ಮೆಲ್ಲರ ಕರ್ತವ್ಯ. ಇದು ನಮ್ಮಿಂದಲು ಕನ್ನಡಕ್ಕೆ ಅರ್ಪಿಸುವ ಗೌರವ" ಎಂದರೆ ತಪ್ಪಾಗಲಾರದು.

ವಾರ್ಧಕ್ಯ ಬಾಧಿಸದ

ಪ್ರತಿಭಾವಂತರು

ಸಂಗ್ರಹ:— ಶ್ರೀ ಎಚ್. ಎಂ. ನಾರಾಯಣ ಭಟ್

ವಾರ್ಧಕ್ಯವು ಅಂಧಕಾರಮಯವೆಂದೂ ಬೇಜವಾಬ್ದಾರಿಯುತವೆಂದೂ ದಾಭಾರ್ಗ್ಯಕರವಾದ ಆಯುಷ್ಯಾಲವೆಂದೂ ಉದ್ಯೋಗದಿಂದ ನಿವೃತ್ತರಾದ ಅನೇಕ ಮಂದಿ ಭಾವಿಸುವರಾದರೂ ಪ್ರತಿಭಾನ್ವಿತರ ಆದರ್ಶಗಳು ಪ್ರತ್ಯೇಕ ಮತ್ತು ವಿಭಿನ್ನವೆಂದು ಸಾಹಿತ್ಯಕಾರರೂ ಚರಿತ್ರಕಾರರೂ ಅಭಿಪ್ರಾಯಪಡುತ್ತಾರೆ.

ಪ್ರಾಯಾಧಿಕ್ಯ ಗಳಿಸಿದವರಿಂದ ಜಗತ್ತಿಗೆ ಮಹತ್ತಾದ ಸಾಧನೆಗಳಾಗಿರುವುದಾಗಿ "ಲೋಂಗ್‌ಫೆಲೊ" ತನ್ನ ಕವಿತೆಯೊಂದರಲ್ಲಿ ವರ್ಣಿಸಿದ್ದಾನೆ.

ವೃದ್ಧರಾದ ಪ್ರತಿಭಾವಂತರಿಗೆ ವಾರ್ಧಕ್ಯ ಬಾಧಿಸದ್ದಾಗಿ ಅವರೇ ಆಗದೆಂದು "ಡಿಸ್ ರೇಲಿ" ಹೇಳಿದ್ದರು.

ಸಾಧಾರಣವಾಗಿ ಅಪೂರ್ವವಾದರೂ ಪ್ರತಿಭಾಶಾಲಿಗಳು ತಂತಮ್ಮ ಸಾಮರ್ಥ್ಯಗಳನ್ನು ಜೀವಮಾನದ ಕೊನೆಯ ವರ್ಷಗಳಲ್ಲೇ ಪ್ರದರ್ಶಿಸಿ ಪ್ರಶಸ್ತರಾಗಿದ್ದಾರೆ.

ತನ್ನ ಚಟುವಟಿಕೆಗಳನ್ನು ಎಂಭತ್ತೇ ವಯಸ್ಸಿನಲ್ಲೂ ನೆಲೆ ಹಿಡ್ಲಿಸಿದ ಪ್ಲೇಟೋ ತನ್ನ ಕೈಯಲ್ಲಿ ಲೇಖಿಸಿ ಸಹಿತವೇ ಕೊನೆಯ ಯುಸಿರಿಳಿದಿದ್ದನೆನ್ನಲಾಗಿದೆ.

"Treature on Old Age" ಎಂಬ ಮನೋಹರ ಕೃತಿಯನ್ನು ಸಿಸ್ಕೋ ತನ್ನ ಎಂಭತ್ತೇ ವಯಸ್ಸಿನಲ್ಲಿ ಬರೆದಿದ್ದನು.

"Dialogues of Motion"ನ್ನು ಗೆಲಿಲಿಯೋ ಪ್ರಕಾಶಕ್ಕೆಳೆಸಿದುದು ತನ್ನ ಎಂಭತ್ತೇ ವಯಸ್ಸಿನಲ್ಲಿ.

ಫ್ಯೂಟಿಸ್ ತನ್ನ "ಪ್ರಿನ್ಸಿಪಿಯ"ವನ್ನು ಬರೆದು ಮುಗಿಸಿದ್ದುದು ಎಂಭತ್ತೇ ವಯಸ್ಸಿನಲ್ಲಿ.

ಮೈಕಲ್ ಎಯಿಂಜಲೋ ಗೆ ಎಂಭತ್ತೇ ವಯಸ್ಸಿನ ವರೆಗೂ ವಾರ್ಧಕ್ಯದ ಅರಿವೇ ಆಗಿರಲಿಲ್ಲ.

ದೇವರು ಇನ್ನೂ ಎರಡು ವರ್ಷ ಆಯಸ್ಸು ಕೊಡಿದರೆ ಇನ್ನಷ್ಟು ಮನೋಹರ ಚಿತ್ರಗಳನ್ನು ಬರೆಯ ಬಯಸುವುದಾಗಿತ್ತೆಂದು ಎಂಭತ್ತೇ ವಯಸ್ಸಿನಲ್ಲಿ ಕೇರೋಟ್ ಹೇಳಿದ್ದನು.

ಲಿನಾಕರ್ ತನ್ನ ಎಂಭತ್ತೇ ವಯಸ್ಸಿನಲ್ಲಿಯೂ ಸಿಟೀಲು ವಾದನದಲ್ಲಿ ಕುಶಲತೆ ಪ್ರದರ್ಶಿಸಿದ್ದನು.

ಪರ್ಷಿಯಾದ ರಾಜನಿಗಿಂತಲೂ ತಾನು ತನ್ನ ಪ್ರವೃತ್ತಿಯಲ್ಲಿ ಸಂತುಷ್ಟನೆಂದು ಈ ಕಲಾವಿದ ಹೇಳಿದ್ದನು.

"Cosmos" ನ ಕೊನೆಯ ಸಂಪುಟಗಳನ್ನು ಜರ್ಮನ್ ಶಾಸ್ತ್ರಜ್ಞ ಅಲೆಕ್ಸಾಂಡರ್ ಹಂಬಾಲ್ಟ್ ಬರೆದುದು ಎಂಭತ್ತೇ ವಯಸ್ಸಿನಲ್ಲಿ. ಆಗಲೂ ಒಳ್ಳೆಯ ಆರೋಗ್ಯವಿತ್ತು.

ಎಂಭತ್ತೇ ವಯಸ್ಸಿನಲ್ಲಿಯೂ ದಿನಕ್ಕೆ ಎಂಟುಗಂಟೆಯ ಕಾಲ ಬರೆಯುತ್ತಿದ್ದ ವೆಟರನ್ ಲಿಯೋಪೋಲ್ಡ್‌ನ ಕೊನೆಯ ಕೃತಿಗಳು ಮೊದಲ ಕೃತಿಗಳಿಗಿಂತ ಉತ್ತಮ ಮಟ್ಟದವಾಗಿದ್ದವು.

ಮರಣ ಶಯ್ಯೆಯಲ್ಲಿ ಮಲಗಿಕೊಂಡೇ ತನ್ನ ವಿಶಿಷ್ಟ ಕೃತಿ "ದ ಬಿಟ್ರಾಯಲ್ ಆಫ್ ಮೇಯಿಸುವವ" (The Sad Shephard) — ಎಂಭತ್ತೇ ವಯಸ್ಸಿನಲ್ಲಿ ಬೆನ್ ಜೋಹ್ನಸನ್ ಬರೆದುದು.

ಎಂಭತ್ತೇ ವಯಸ್ಸಿನ ನಂತರವೇ ವಿಕ್ಟರ್ ಯೂಗೋ ಉತ್ಕೃಷ್ಟ ಕೃತಿಗಳನ್ನು ಬರೆದುದು.

ಟೆನ್ನಿಸನ್ ತನ್ನ ಎಂಭತ್ತೇ ವಯಸ್ಸಿನಲ್ಲಿಯೂ ಸಾಹಿತ್ಯಸೃಷ್ಟಿಯಲ್ಲೇ ನಿರತನಾಗಿದ್ದನು.

"Lives of the Poets" ಎಂಬ ಡಾ. ಜಿ. ಜಾನ್ಸನ್‌ನ ಕೃತಿ ಎಂಭತ್ತೇ ವಯಸ್ಸಿನಲ್ಲಿ ಬರೆದುದೆನ್ನಲಾಗಿದೆ.

ಎಂಭತ್ತೇ ವಯಸ್ಸಿನ ವರೆಗೂ ಟಾಲ್‌ಸ್ಟಾಯಿಯ ಲೇಖನಿ ಚಟುವಟಿಕೆಯಿಂದಿತ್ತು.

ತನ್ನ ಯೌವನ ಯುಕ್ತ ಮನಸ್ಸನ್ನೂ ಉತ್ಸಾಹವನ್ನೂ ಪ್ರತಿಭೆಯನ್ನೂ ಪ್ರಯೋಗಿಸಿ ಎಂಭತ್ತೇ ವಯಸ್ಸಿನ ಬಳಿಕವೂ ಎಚ್. ಜಿ. ವೆಲ್ಸ್ ಸಾಹಿತ್ಯ ಸೃಷ್ಟಿ ಮಾಡಿದ್ದನು.

ಥೋಮಸ್ ಹಾರ್ಡಿ ತನ್ನ ಬೃಹತ್ ಕವಿತೆಯನ್ನು ಬರೆದುದು ಎಂಭತ್ತೇ ವಯಸ್ಸಿನಲ್ಲಂತೆ!

ಬೆಂಜಮಿನ್ ಫ್ರಾಂಕ್ಲಿನ್, ಜೀವನ್ಸ್ ಮತ್ತು ಟ್ರೆಯಾನೋ ಮುಂತಾದವರೂ ತಂತಮ್ಮ ಸಾಮರ್ಥ್ಯಗಳನ್ನೂ ಪ್ರತಿಭೆಯನ್ನೂ ವೃದ್ಧಾಪ್ಯದಲ್ಲಿಯೇ ಪ್ರದರ್ಶಿಸಿದ್ದು.

ಟಿಟೀಲಿಯನ್ ಎಂಬ ಇಟಲಿಯ ಪೈಂಟರ್ ತನ್ನ ೯೦ನೇ ವಯಸ್ಸಿನಲ್ಲಿಯೂ ಮತ್ತೂ ತನ್ನ ಕಲೆಯ ಬಗ್ಗೆ ಇನ್ನೆಷ್ಟು ಕಲಿಯುವ ಕುತೂಹಲ ಪ್ರದರ್ಶಿಸಿದ್ದನು.

ಮೇರಿ ಸೋಮರ್ ವಿಲ್ಲಿಲಂನೇ ವಯಸ್ಸಿನಲ್ಲಿ ತನ್ನ ಅಮೂಲ್ಯ ಕೃತಿಗಳನ್ನು ಬರೆದಳು.

ಸಾಹಿತ್ಯೋತ್ಸವ

ಉಡುಪಿ, ಮೇ ೧—ಕಲಾವೃಂದವು ತಾ. ೧೧ರಂದು ಶ್ರೀ ಸ್ವಾಮಿಜಿ ಜಯಂತಿ ಸಾಹಿತ್ಯೋತ್ಸವವನ್ನು ಆಚರಿಸಿತು. ಕರ್ನಾಟಕದ ಸಾಲಿನಲ್ಲಿ ಸಿದ್ಧ ಸಾಹಿತ್ಯಕಾರ ಶ್ರೀ ನಾಡಿಗೇರ ಕೃಷ್ಣರಾಯರು ಅಂದಿನ ಪ್ರಧಾನ ಅತಿಥಿಗಳಾಗಬೇಕಿತ್ತು. ಮುಕ್ಕಾಲು ಕಾಲು ತಡವಾಗಿ ಸಮಾರಂಭವು ಆರಂಭವಾದಾಗ, "ಶ್ರೀ ನಾಡಿಗೇರರನ್ನು ಇನ್ನೂ ನಿರೀಕ್ಷಿಸುತ್ತಿದ್ದೆವೆ, ಏಕೆಂದರೆ ಅವರಿಂದ ಸಂದೇಶಾತ್ಮಕ ಉತ್ತರವಿನ್ನೂ ಬಂದಿಲ್ಲವೆಂದು ತಿಳಿಸಲಾಯಿತು. ಸಭಾಧ್ಯಕ್ಷ ಶ್ರೀ ಪೇಜಾವರ ಮಠದ ಶ್ರೀ ವಾದಿರಾಜರವರು ಉತ್ಸವದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಸುಬ್ರಾಯ ಪೂಂಜರವರು ಕಲೆಯ, ಪರಿಭಾಷೆಯೆಂಬ ಕುರಿತು ಉಪನ್ಯಾಸ ನೀಡಿದರು. ನೃಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಲು ಅವತಾರ ಮಾಡಿದನು, ಜನಪ್ರಿಯರವರೆಸಿದನು. ಈ ಸಾಹಿತ್ಯಕ್ಷೇತ್ರದ ಪಿಡುಗುಗಳು ಜಗತ್ತಿಗೆ ಜ್ಞಾನೋದಯ. ಮಾಡಲೆಂದು ಅಧ್ಯಕ್ಷರು ಹಾರೈಸಿದರು. ಕುಮಾರಿ ಮಾಲತಿ ಕಾರ್ಕಳ ಮತ್ತು ಬಳಗದ ಲಘು ಸಂಗೀತವೂ ಶ್ರೀ ಪಿ. ನರಸಿಂಹ ಉಪಾಧ್ಯರ ಕಾವ್ಯಾಭಿನಯವೂ ಉತ್ಸವಕ್ಕೆ ವಿಶೇಷ ಮೆರುಗನ್ನು ಕೊಟ್ಟಿತ್ತು.

ಪೂಂಜರ ಉಪಾಧ್ಯಕ್ಷ ಶ್ರೀ ಕೆ. ಸುಂದರ ಸಾಧು ಮಧ್ವಸ್ಥರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎಸ್. ಗೋವಿಂದ ರಾವ್‌ರವರು ಧನ್ಯವಾದವರ್ಷಿಸಿದರು.

ರಾತ್ರಿ ಶ್ರೀ ಸರಸ್ವತಿಯಾಗಿ ಮತ್ತು ಬಳಗದವರಿಂದ "ಸಮಯಕ್ಕೆಂದು ಸಾಳ್ಳು" ಎಂಬ ಸಾಮಾಜಿಕ ಪ್ರಹಸನವು ಅಭಿನಯಿಸಲ್ಪಟ್ಟಿತು. ಆ ವರ್ಷದ ಮಳೆ ಕುಮಾರಿ ಕಮಲಿಯವರು ಸೀತಾರಾಲ್ಲಾಣಿಯೆಂದು ಹರಿಕತೆಯನ್ನು ಮಾಡಿದರು. ಅಂಧಳಲ್ಲಿ ಶ್ರೀ ಕೆ. ಸೀತಾರಾಮ ಭಟ್ಟರು ಸ್ವಾಗತಿಸಿದರು. ಕಲಾ ಕಾರ್ಯದರ್ಶಿ ಟಿ. ಪದ್ಮನಾಭ ಭಟ್ಟರು ವಂದನಾರ್ಪಣೆ ಮಾಡಿದರು.

ಅದುವರೆಗೂ ಶ್ರೀ ನಾಡಿಗೇರರ ಆಗಮನದ ಸುದ್ದಿಯೇನಿಲ್ಲ. ಕೆಲವರಿಗೆ ಜನಕವೂ ಹುಟ್ಟಿ ಕೊನೆಗೂ ನಿರಾಶೆಗೊಂಡು ಮರಳಿತು.

ನಗೆ ಬಿಂದು

ಓರ್— "ವಕೀಲರೆ, ನನ್ನ ಮಾವ ಒಂದು ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ ಅವರನ್ನು 'ಬಚಾವ್' ಮಾಡಿದರೆ ನಿಮಗೆ ರೂ. ೧೦೮ ಲಕ್ಷ ತೆರಲೂ ಸಿದ್ಧ!"

ವಕೀಲ— "ನನಗೆ ಕ್ರಿಮಿನಲ್ ವ್ಯವಹಾರಗಳು ಮಟ್ಟಿ ಹೆಚ್ಚಿನ ಮಾಹಿತಿಯಿಲ್ಲ. ಆದರೂ ಅಷ್ಟು ಭೀಸುತ್ತಿರುವುದಾದರೆ ನಾನು ಆ ಕೊಲೆ ಸೈದವನೆಂದು ಕೋರ್ಟಿನಲ್ಲಿ ಒಪ್ಪಿಕೊಳ್ಳುತ್ತೇನೆ..."

—ಎಚ್. ಎಂ. ನಿಸಾಯನಾರಾಯಣ

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ವಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳು.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ.

ಟಿ. ಎಸ್. ಕೃಷ್ಣಮೂರ್ತಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—೨

"ಹೇರು ಹೊನ್ನು— ಸೂರೆ ಹೊನ್ನು"

ಕಥೆ— ಕತೆಗಳೆಂದರೆ ಮಕ್ಕಳಿಗೆಲ್ಲಾ ತುಂಬ ಇಷ್ಟ; ತಿಂಡಿಗಿಂತ ಹೆಚ್ಚಿನ ಇಷ್ಟ. ಕಥೆ ಹುಸ್ತಕ ನೋಡ ತ್ತಲೇ ಮುಖ ಹಿಗ್ಗಿ ಅರಳುತ್ತದೆ.

ಮಕ್ಕಳಿಗೆ ಮಾತ್ರವಲ್ಲ, ದೊಡ್ಡವರಿಗೂ ಕಥೆ ಎಂದರೆ ಮುಖ ಅರಳುತ್ತದೆ.

ಮಕ್ಕಳು ಆನಂದದಿಂದ ನಲಿದಾಡುವಾಗ ದೊಡ್ಡವರೂ ಸಂತೋಷ ಪಡುವುದು ಸಹಜವೇ.

"ಕತೆ ಹೇಳಿದವರಿಗೆ ಹೇರು ಹೊನ್ನು, ಕೇಳಿದವರಿಗೆ ಸೂರೆ ಹೊನ್ನು" ಎಂಬುದೊಂದು ಗಾದೆ.

ಗಾದೆಗಳಿಂದ ಇನ್ನು ಅಜ್ಜಿ-ಅಜ್ಜ ಪಿಜ್ಜ ಪಿಜ್ಜರ ಕಾಲದಿಂದ, ಹಿರಿಯರ ಅನುಭವದಿಂದ ಸೋಸಿ ಹೇಳಿದ ಸಾರ ವಾಕ್ಯ. ಅದಕ್ಕೇ "ಗಾದೆ ವೇದಕ್ಕೆ ಸಮ" ಅನ್ನುವುದು.

ಗಾದೆಯ ವಾಕ್ಯ ಸುಟ್ಟದಾದರೂ ಬಿಡಿಸಿದರೆ ವಿಶಾಲ ಅರ್ಥವಿದೆ; ಕತೆಯಿದೆ. ಕತೆ ಹೇಳಿದವರಿಗೆ ಹೇರು ಹೊನ್ನು ಕೊಡಬೇಕೆಂತಲೂ, ಕೇಳಿದವರಿಗೆ ಇದ್ದ ಹೊನ್ನೆಲ್ಲ ಸೂರೆಯಾಗಿ ಹೋಗುತ್ತದೆಂತಲೂ ಅರ್ಥ ಮಾಡಿಕೊಳ್ಳುವುದಲ್ಲ; ಇದು ವಿಪರೀತಾರ್ಥ. ಅನೇಕ ಒಳ್ಳೊಳ್ಳೆಯ ಮಾತುಗಳಿಗೂ ಹೀಗೆ ವಿಪರೀತಾರ್ಥ ಮಾಡಿಕೊಳ್ಳುವವರಿದ್ದಾರೆ. ಕತೆ ಹೇಳಿದವರಿಗೆ ಕೇಳಿದವರು ಏನಾದರೂ ಕೊಡುತ್ತಾರೆನ್ನುವ. ಆದು ಅವರವರು ಸಂತೋಷಪೂರ್ವಕವಾಗಿ ಯಥಾಶಕ್ತಿ ಕೊಟ್ಟದ್ದು. ಅದರಿಂದ ಸೂರೆಯೇನೂ ಆಗಬೇಗುವುದಿಲ್ಲ. ಕತೆಗಳೆಂದರೆ ನೀತಿ ನಡತೆಗಳನ್ನು ತುಂಬಿದ ಹೊನ್ನ ಭಂಡಾರ. ಅದನ್ನು ತಲೆಯೊಳಗೆ ಹೇರಿಕೊಂಡಿರುವವರು, ಎಷ್ಟು ಹೇಳಿದರೂ, ಅವರು ಹೊತ್ತಿರುವ ಹೇರು ಕಡಿಮೆಯಾಗುವುದಿಲ್ಲ. ಕೇಳಿದವರಿಗೆ ಮಾತ್ರ ಅವನ ಹೊನ್ನನ್ನು ಸೂರೆ ಮಾಡಿದಂತೆ ಆಗುತ್ತದೆ. ಕತೆಗಳ ಸೂರೆಯನ್ನು ಯಾರು ಬೇಕಾದರೂ ತಮ್ಮ ತಮ್ಮ ಶಕ್ತಿಗೆ ತಕ್ಕಷ್ಟು ಸಂಗ್ರಹಿಸಿಕೊಳ್ಳಬಹುದು. ಇದು ಆಗಾದಯ ಒಳಗಿನ ಅರ್ಥ.

ಈಗಂತೂ ಪತ್ರಿಕೆಗಳಲ್ಲಿ ಬಗೆ ಬಗೆಯ ಕತೆಗಳು ಬರುತ್ತವೆ. ಕೆಲವರು ದುಡ್ಡು ಕೊಟ್ಟು ಕೊಂಡುಕೊಂಡ ಓ ಕೊಳ್ಳುತ್ತಾರೆ. ಇನ್ನೂ ಅನೇಕರು ಓದುತ್ತಾರೆನ್ನಿ. ಹೆಚ್ಚೇ ಕಡಿಮೆಯೋ ಪತ್ರಿಕೆಗಳಿದೂ ದುಡ್ಡೂ ಬರುತ್ತ. ಅದೇ ಅವರಿಗೆ ಹೇರು ಹೊನ್ನು; ಓದಿದವರಿಗೆಲ್ಲ, ಸೂರೆ ಹೊನ್ನು. ಅಂದರೆ ಕತೆ ಪುಸ್ತಕ ಕೊಂಡುಕೊಳ್ಳುವವರಿಗೆ ಸ್ವಲ್ಪ ದುಡ್ಡಿಗೆ ಬೆಲೆಯಿಲ್ಲದ, ನೀತಿ ನಡತೆಗಳನ್ನು ತಿಳಿಸಿ ಸಂತೋಷಗೊಳಿಸುವಂತಹ ಹೊನ್ನಿನ ಸೂರೆಯನ್ನೆ ಬಾಚಿಕೊಂಡ ಯಾಗಲ್ಲವೆ? ನೀವೆಲ್ಲಾ ಕತೆ ಓದುವುದು ಸಂತೋಷದಿಂದ— ಸಂತೋಷ ಕ್ಕಾಗಿ ತಾನೆ?

"ಸಂತೋಷಂ ಜನಯೇತ್ ಪ್ರಾಜ್ಞಃ ತದ್ವೈನೇಶ್ವರ ಪೂಜನಮ್"

—ಎಂ. ರಂಗರಾವ್

ಸುರತ್ಕಲ್ಲಿನ ಮೈದಾನ

ಸುರತ್ಕಲ್ಲು ಪೇಟೆಯ ಹಳೆಯ ಸಂತೆಕಟ್ಟೆ ಹಾಗೂ ಆರೋಗ್ಯ ಕೇಂದ್ರದ ಸಮೀಪವಿರುವ ಸರಕಾರಿ ವಸತಿರುವ ನಾಲ್ಕೈದು ಎಕರೆ ಜಾಗವು ಗೋಚರ ಪ್ರದೇಶವೆಂದು ಈ ಮೊದಲು ಬೇರೆ ಯಾರಿಗೂ ಅಪೇಕ್ಷಕರಿಗೆ ಕೊಡದೆ ಮನ್ನಾ (ರಿಸರ್ವೇಶನ್) ಮಾಡಿತ್ತು. ಸುಮಾರು ಒಂದೂವರೆ ವರ್ಷದ ಹಿಂದೆ ಈಸ್ಥಳವನ್ನೆಲ್ಲಾ ತನಗೆ ಖಾಸಗಿಯಾಗಿ ಕೊಡಿಸಬೇಕೆಂದು ರಾಜಕೀಯ ಪ್ರಮುಖರು ಹಾಗೂ ರಾಜಕೀಯ ಸಂತ್ರಸ್ತರೆನ್ನಿಸಿದವರು ಒಬ್ಬರು ಅರ್ಜಿ ಬರೆಸಿದ್ದರು. ಆ ಬಗ್ಗೆ ಊರವರು M.L.A. ಮೂಲಕ ಜಿಲ್ಲಾಧಿಕಾರಿಗಳಿಗೆ ಅಕ್ಷೇಪಣೆ ವ್ಯಕ್ತಪಡಿಸಿದ್ದೂ ನಿಜವಾಗಿದೆ. ಇದೀಗ ಮುನಿಸಿಪಲ್ ಆಬಗೆಗೆ ಅಂತರಿಕವಾಗಿ ಬಹುಜನರು ಒತ್ತಾಯಿಸುವಂತೆಯೂ ಆ ಅಪೇಕ್ಷಕರಿಗೆ ಅದನ್ನು ಕೊಡಿಸುವಂತೆ ಅರ್ಜಿ ತಯಾರಾಗುತ್ತಿದೆಯೆಂದು ಕೇಳುತ್ತದೆ.

ಆದರೆ ಮಂಗಳೂರು ನಗರ ಸಭೆಯು ವಿಸ್ತಾರಗೊಂಡು ಪಾಂಜೆಯ ತನಕ ಹರಡಿ "ಕಾರ್ಪೊರೇಶನ್" ಆಗುವ ವಿಧಾನದ ಸರ್ಕಾರಿ ಘೋಷಣೆಯು ಕೇಳುತ್ತಾ ಇದೆ. ಸುರತ್ಕಲ್ಲಿನ ಮಧ್ಯಭಾಗದಲ್ಲಿರುವ ಹಾಗೂ ಹಲವಾರು ಗ್ರಾಮಗಳಿಗೆ ಸಂಪರ್ಕವುಳ್ಳ ಈ ಮೈದಾನ ಸ್ಥಳದಲ್ಲಿ ಇದುವರೆಗೆ ಹಲವಾರು ಸಾಂಸ್ಕೃತಿಕ ಪ್ರದರ್ಶನ, ಬಯಲಾಟ ನಡೆಸಿಗೆ ಅವಕಾಶವಿತ್ತು. ಇನ್ನು ಮೇಲೆ ಇಲ್ಲಿ ಇನ್ನೂ ಹೆಚ್ಚಿನದಾದ ವಿಹಾರ ಕೇಂದ್ರ, ಕರುಣರಿಗೆ ಹಾಗೂ ಮಕ್ಕಳಿಗೆ ಕ್ರೀಡಾಂಗಣ, ಸಾರ್ವಜನಿಕ ಸಭೆಗಳು, ಇತರ ಚಟುವಟಿಕೆಗಳು ನಡೆಯಲು ಏಕಮಾತ್ರ ದಿಕ್ಕುವಿರುವ ಈ ಜಾಗವನ್ನು ಸರ್ಕಾರವು ಅವುದೇ ತರದ ಬಲವಂತಕ್ಕೆಯಾದಾಗಲೀ, ಒತ್ತಾಸೆಯಿಂದಾಗಲೀ, ಅನ್ಯರಿಗೆ—ಅದೆಂತಹ ಘನ ಕಾರ್ಯಕ್ಕಾಗಲೀ ಮೀಸಲಾಗಿ— ಕೊಡಿಸುವುದು ಸೂಕ್ತವಲ್ಲ. ಇದರೊತ್ತಿನ ಸ್ಥಳಗಳನ್ನು ಸರ್ಕಾರಿಇದಾಗಲೀ ಮೀಸಲಾಗಿರಿಸಿದಂತೆ, ಈ ವಿಶಾಲ ಬಯಲನ್ನು ಮನ್ನಾ (ರಿಸರ್ವೇಶನ್) ಮಾಡುವುದು ನ್ಯಾಯಬದ್ಧವಾಗಿದೆ. ಅಪೊಬ್ಬರ ಹೆಸರಲ್ಲಿ ಅವುದು ಸಂಸ್ಥೆಯ ನೆಡೆದಲ್ಲಿ ಇದನ್ನ ಕೊಡಿಸುವುದು ಸರಿಯಲ್ಲವೆಂದು— ಸಕ್ಕಮವಲ್ಲವೆಂದು ತೋರುವುದಿಲ್ಲವೇ?

"ಜಯಂತ" ಮತ್ತು ಊರವರು
ಇಡ್ಯ (ಸುರತ್ಕಲ್ಲು)

ಶಾಲಾ ವರ್ಧಂತಿ

ಕಡಿಯುದ್ಯಾವರ— ಮಿತ್ತಬಾಗಿಲು ಪ. ಬ್ಯಾಂಕ್ ಆಡಳಿತಗೊಳಪಟ್ಟ ಕಡಿಯುದ್ಯಾವರ ಪಂಡ್ಯಾರ್ ಪ್ರೈಮರಿ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ದಿನಾಂಕ ೩-೬-೬೮ರಂದು ಬೆಳ್ಳಂಗಡಿ ತಾಲ್ಲೂಕ್ ಕಹಳೇಶ್ವರಾ ಶ್ರೀ ಮಹಮ್ಮದಾಲಿ, ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಪ್ರಾತಃಕಾಲ ಶ್ರೀ ವಿ. ವಿ. ಗೌಡರು ಧ್ವಜವನ್ನು ಆರೋಹಿಸಿದರು. ಮುಖ್ಯ ಅತಿಥಿಗಳಾದ ಬೆಳ್ಳಂಗಡಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾದ ಶ್ರೀ ಜಿ. ಎನ್. ಭಿಡೆಯವರು ಮತ್ತು ಪಂಡ್ಯಾರ್ ಎಕ್ಸ್‌ಟೆನ್‌ಶನ್ ಆಫೀಸರ್ ಶ್ರೀ ಮಹಾಬಲ ಶೆಟ್ಟಿಯವರು ಮಲೆನಾಡಿನ ವಿದ್ಯಾಭಿವೃದ್ಧಿಯ ಕುರಿತು ಭಾಷಣ ಮಾಡಿದರು. ಹಳೆ ವಿದ್ಯಾರ್ಥಿಗಳ ಕುಮಾರಿ ಅನುಸೂಯಾ ಅವರು—ಇಂದಿನ ಶಾಲಾ ಪ್ರಗತಿಯ ಕುರಿತು ಭಾಷಣ ಮಾಡಿದರು. ಶಾಲಾ ವರದಿವಾಚನ, ಬಹುಮಾನ ವಿತರಣೆ, ಇತ್ಯಾದಿಗಳೊಂದಿಗೆ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಬಾಲಕ ಧ್ರುವ, ಭಕ್ತ ಪ್ರಹ್ಲಾದ ನಾಟಕಗಳು, ಮತ್ತು ಹಳೆ ವಿದ್ಯಾರ್ಥಿಗಳಿಂದ ಮೋಹದ ಬಲೆ ಎಂಬ ತುಳು ನಾಟಕ, ಸುಧನ್ವಾರ್ಜುನ ಯಕ್ಷಗಾನ, ಇತ್ಯಾದಿ ಪ್ರದರ್ಶಿಸಲ್ಪಟ್ಟಿತು. ಪಂಚಾಯತಿ ಹಾಗೂ ಟೆಂಪರಾಮೆಂಟ್ ಕಮಿಟಿಯವರೂ ಉಪಸ್ಥಿತರಿದ್ದ ನೂರಾರು ಮಂದಿ ಊರ ಪರವೂ ಮಕ್ಕಳಿಗೆ ಸಿಹಿದಿದ್ದರು. ಕೊನೆಗೆ ಮುಖ್ಯೋಪಾಧ್ಯಾರ ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

TAX FREE

1

ಮೇ 1968

ಮೇ 1, 1968 ರಿಂದ
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಮತ್ತು ಅದರ ಸಹಾಯಕ ಬ್ಯಾಂಕುಗಳ
ಶಾಖೆಗಳೂ ಸಹ ತೆರಿಗೆರಹಿತ
5 ವರ್ಷದ ನಿರ್ದಿಷ್ಟ ಠೇವಣಾತಿಗಳನ್ನು
ಸ್ವೀಕರಿಸುತ್ತವೆ.

ತೆರಿಗೆ ರಹಿತ

5 ವರ್ಷದ ನಿರ್ದಿಷ್ಟ ಠೇವಣಾತಿಗಳು

ಅಂಚೆ ಕಚೇರಿಗಳಲ್ಲಿರುವಂತೆ,
ಠೇವಣಾತಿಗಳು 50 ರೂಪಾಯಿಗಳ
ಗುಣಿತಗಳಲ್ಲಿ ಇರಬೇಕು. ಅಂಚೆ
ಕಚೇರಿಗಳಲ್ಲಿ ತೆರಿಗೆ ಮುಂದ ನಿರ್ದಿಷ್ಟ
ಠೇವಣಾತಿಗಳು ಸೀಮಿತ ಹೀಗಿದೆ: ವ್ಯಕ್ತಿಗಳಿಗೆ
ರೂ. 25,000/- ಮತ್ತು
ಇಬ್ಬರು ವಯಸ್ಕರಿಗೆ ಕೂಡಿ ರೂ. 50,000/-.
5% ಸರಳ ಬಡ್ಡಿ ಅಥವಾ 4.55% ಚಕ್ರಬಡ್ಡಿ.
ವರಮಾನ ತೆರಿಗೆಯಿಂದ ವಿನಾಯಿತಿ.
ಪ್ರತಿ 100 ರೂ ಠೇವಣಾತಿ 5 ವರ್ಷಗಳನಂತರ
125 ರೂ. ಆಗುತ್ತದೆ.

5% ಸರಳ ಬಡ್ಡಿ
4.55% ಚಕ್ರಬಡ್ಡಿ

ಪ್ರತಿ ಠೇವಣಾತಿಗೂ ಪ್ರತ್ಯೇಕ ಪಾವತಿ ಪತ್ರಗಳು, ನಾಮಕರಣದ ಸೌಲಭ್ಯ ಉಂಟು, ಸಹ

ರಾಷ್ಟ್ರೀಯ ಉಳಿತಾಯ ಸಂಸ್ಥೆ

ಸಂಗ್ರಾಸ್ಯ ಸಂಕಲನಗಳು

‡‡

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಸಂಜ ಸುಮನ	1—20
ಮುತ್ತಿನ ಮಾಲೆ	1—80
ಸೂ ಗೊಂಚಲು	1—70
ಸಂಚಗಜ್ಞಾಯ	2—00
ವಿಶಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಂದಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಮುಡಿಮುಸ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೆಳಗಾಗಿ ಬರೆಯಿರಿ

ಸರ್ವಭಾರತ ಪುಸ್ತಕ ಭಂಡಾರ,
ಉಡುಪಿ.

ಪ್ರೇತ ಹೇಳಿದ ಕತೆ

(ಎರಡನೇ ಸುಟದಿಂದ)

ಬ್ಬಳು ಹತಭಾಗಿನಿಯನ್ನು ಕಾಪಾಡಿದ ಪುಣ್ಯದ ಜೊತೆಗೆ ಒಂದು ಸಂಸಾರವನ್ನು ಉಳಿಸಿದ ಕೀರ್ತಿಯೂ ನಿನ್ನದಾಗುವುದು."

"ಶನ್ನಿಂದ ಅಂತಹ ಮಹತ್ಕಾರ್ಯ ವಾಗುವುದಿದ್ದರೆ ಖಂಡಿತ ನಿಮ್ಮಾಣೆಯೂ ಗಿಯೂ ನನ್ನ ಕೈಲಾದ ಸಹಾಯ ಮಾಡ ಬಲ್ಲೆ."

ನನ್ನ ಮಾತುಗಳನ್ನು ಕೇಳಿದವರ ತು ಟಗಳಿಡೆಯಿಂದ ತಿಳಿನಗೆಯು ಸುಳಿಯೊಂ ದು ತೇಲಿ ಹೋಯಿತು. ಮ್ಲಾನವಾದ ಮುಖವಾಗ ಬೆಳದಿಂಗಳಿನಂತೆ ತೇಜೋ ಮಯವಾಯಿತು.

'ನೀನು ಮಾತನವಲ್ಲ ಚಂದ್ರ;ಜೇವತೆ. ನನ್ನ ಭಾಗದ ದೇವರು, ನೀನು' ಅಗ ನಾ ನು ತಬ್ಬಿಬ್ಬಾಗಿ ಕೇಳಿದೆ.

'ಇದೇನು ಒಮ್ಮೆಲೆ ನನ್ನ ಹೊಗಳ ಹೋಟರಿ?'

'ನಾನೀಗ ಹೊಗಳುತ್ತಿಲ್ಲ ಚಂದ್ರ. ನಿ ನ್ನ ಗುಣಗಾನ ಮಾಡಿದೆ. ನೀನಿನ್ನು ಭಾ ನುವನ್ನೇಂದೂ ನೋಡಕೂಡದು. ಹಾಗೆಂ ದು ವಚನವನ್ನು ನೀಡಿಬಿಡು.

ಆ ಮಾತುಗಳು ಅಂತ್ಯಗೊಳ್ಳುವ ಮೊ ದಲೇ ಅಗಸ ಕಳಚಿ ನನ್ನ ತಲೆಮೇಲೆ ಬಿ ದ್ದಂತಾಯಿತು. ಕುಳಿತ ನೆಲವೇ ಬಾಯ್ದೆ ರೆದು ನಿಂತಂತಾಯಿತು. ದೈಯ.ಲ್ಲಾ ಬೆ ವರ ರೋಮಾಂಚನಗೊಂಡಿತು.

ನನ್ನ ಸ್ಥಿತಿ ಕಂಡು ಅಗವರೂ ಬೆದರಿ ಬೇಕು.

'ಚಂದ್ರಾ ನೀನಿನ್ನೂ ಈ ಜಗತ್ತಿನಲ್ಲಿ ಹಾಲು ಹಸುಳೆಗೆ ಸಮಾನಳು. ಯಾವ ಬಿಲದಲ್ಲಿ ಯಾವ ಹಾವಿದೆ ಎಂಬುದು ನಿ ನಗನ್ನೂ ಅರಿವಿದ್ದಂತಿಲ್ಲ. ಬೈಗಿಯುವುದೆ ಲ್ಲಾ ಹಾಲೆಂದು ಭಂಬಬಾರದು ನೀಳು .....ಅವರ ಮಾತುಗಳು ಸಾಗುತ್ತಿ ದ್ದಂತೆ ಸಾವರಿಸಿಕೊಂಡು ಕೇಳಿದೆ.

'ಯಾರು ಭಾನುಶಂಕರನನ್ನೇ ನೀವು ಹೇಳಿದ್ದು?'

"ಹೌದಾ ಮಗು, ಅವನೇ ಪಪ್ಪಳಿಯು. ಅವನ ಓದಿಗಾಗಿ ಹಣವಿತ್ತು ಮಗಳನ್ನೂ ಧಾರೆಯೆರೆದ. ಇತ್ತೀಚೆಗೆ ಅವನ ಬುದ್ಧಿ ಯೇ ಬದಲಾದಂತೆ ಕಂಡಿತು. ಹೆಂಡತಿ ಯೆಂದರೆ ಅಲಕ್ಷ್ಯ. ಒಮ್ಮೊಮ್ಮೆ ಮಡ ದಿಯನ್ನು ಬಡುವ ಬೆದಂಕೆಯನ್ನೂ ಹಾಕ ತೊಡಗಿದನು. ಅವ ನಾಮ ಫಿಡ ವಿಚಾರ ತಿಳಿಯಲು ಮುಂದಾದಾಗ ಎಲ್ಲವೂ ತಿಳಿ ಯಿತು. ಹಾಗೆಯೇ ಮಡಳ ನೋ ವನ್ನು ನೋಡಲಾರದೆ ನಿನ್ನಿಷ್ಟಗೆ ಬರ ಬೇಕಾಯಿತು."

"ನೀವು ಈಗ ನನ್ನನ್ನು ಎಚ್ಚರಿಸಿ ದುದು ಮಂಬಾ ಒಳಿತಾಯಿತು. ಇಲ್ಲ ವಾಗಿದ್ದಲ್ಲಿ ನಷ್ಟಂದ ಮತ್ತೊಂದು ಬಡ ಪಾಯಿ ಮಣ್ಣಗೂಡುತ್ತಿತ್ತು."

"ನಾನಿನ್ನು ಬರುವೆ ಚಂದ್ರಾ."

ತಮ್ಮ ಕೆಲಸವಾದಂತೆ ಮೇಲೆದ್ದರು. ಆದರೆ ಮುಂದೆ ನನ್ನಿಂದಾವ ಮಾತು ಗಳೂ ಹೊಂಬೀಳಲಿಲ್ಲ.

ಅವರು ಹೋಗುವಾಗ ನನ್ನ ಹೃದಯ ವನ್ನೇ ಕಿತ್ತುಹೋದಂತಾಯಿತು. ಆದ ರಿಂದ ನನ್ನ ಹೊಟ್ಟೆಯ ಹಸಿವೂ ಹಿಂಗಿ ಹೋಗಿತ್ತು. ಮನಸ್ಸಿನಲ್ಲಾಗ ಭಾನು ಶಂಕರನ ಸುಂದರ ರೂಪು; ನಯ ಮಾತು, ಗಂಭೀರ ವ್ಯಕ್ತಿತ್ವ ಸುಳಿಸುಳಿದು ಬರತೊಡಗಿತು.

ಂ ಂ ಂ

ಕಾಲೇಜಿನ ಕಲೋಪಾಸಕ ಭಾನು ವಿನ ಪರಿಚಯವಾದುದು ಒಂದು ಅಕ ಸ್ಮಿಕ.

ಒಂದು ದಿನ ಪುಸ್ತಕ ತರಲೆಂದು ಲೈಬ್ರೇರಿಗೆ ಹೋಗಿದ್ದೆ. ಚಿಗುರು ಮೀ ಸೆಯ ಯುವಕನೊಬ್ಬ ಭಾವ ಪರವಶ ವಾಗಿ ವಿವೇಕಾನಂದರ ಗಂಭೀರ ವ್ಯಕ್ತಿತ್ವ ದಕ್ಕ ತನ್ನ ಲಕ್ಷ್ಯಪೂರ್ಣ ಕೋಟ ಹರಿಸಿ ನೋಡುತ್ತಿದ್ದಾಗ. ನನಗೆ ತುಂಬಾ ಮೋಜೆನಿಸಿತು. ಏನನ್ನೂ ನುಡಿಸುವೆ ಪುಸ್ತಕ ಕೊಂಡು ಹಿಂತಿರಳಿ ಬಂದೆ.

ಮರ ದಿನ ಅದೇ ಭಾವಚಿತ್ರದ ಜೊ ತೆಗೆ ಮತ್ತೊಂದು ತೂಗಾಡುವುದು ಕಂ ಡಬಂತು. ಅವರೆಡೂ ಒಂದೇ ಪಡಿ ಯಚ್ಚಿನವಂತಿದ್ದುವು ಆದರೆ ಮತ್ತೊಂ ದನ್ನು ಶೂನ್ಯವಾಗಿ ಪರೀಕ್ಷಿಸಿದಾಗ ಕಲಾ ಗಾರನ ಕೈಚಳಕವೆಂಬುದನ್ನು ತಿಳಿದು ನಾನಾಗ ದಂಗಾದೆ.

ಅಗ ಮನಸ್ಸು ತಡೆಯದೆ "ಅದ ನ್ನಾರು ಬಿಡಿಸಿದರು?'' ಎಂದು ಲೈಬ್ರೇ ರಿ ಕ್ಲಾರ್‌ಕನ್ನು ವಿಚಾರಿಸಿದೆ.

ಅಗವನು "ನಿಮಗಿನ್ನೂ ಗೊತ್ತಿಲ್ಲವೆ? ಭಾನು ಶಂಕರನೆಂದು ಅದೇ ಸಾರುತ್ತಿದೆ ಯಲ್ಲ" ಎಂದಾಡಿದ ಉತ್ತರ ಕೇಳಿದ ನನಗಾಗ ಆಶ್ಚರ್ಯದ ಜೊತೆಗೆ ಸಂತೋ ಷವೂ ಅಯಿತು.

ಅವನೊಬ್ಬ ಕಲಾಗಾರನೆಂಬುದನ್ನು ತಿಳಿಯದ ತನ್ನ ಮೌಢ್ಯತೆಗೆ ನಾಚಿ ಕೆ ನಿಸಿತು.

ನನಗಾವಾಗಲೂ ಅವನು ದಾರಿಯಲ್ಲಿ ಎದುರಾಗುತ್ತಿದ್ದ. ನಾನು ಎಲ್ಲರಂತೆ ಅವ ನೊಬ್ಬ ಪಥಿಕನೆಂದೆಣಿಸಿದ್ದೆ.

ಆದರವನ ಕಲಾಶ್ರಮ ಕಂಡವಳಿಗೆ ನನಗರಿವಿಲ್ಲದೆ ನನ್ನ ಒಲವು ಅವನತ್ತ ಹರಿಯತೊಡಗಿತು.

ಭಾವ ವನ್ನು ಕಾಣುವಾದ ನನ್ನ ತುಟಿ ಗಳೆಡೆಯಿಂದ ಮುಗುಳು ನೆಗೆಯು ಅತ್ಯೀ ಯತೆಯಿಂದ ಹೊರಬರುತ್ತಿತ್ತು. ಅದ ಕ್ಕುತ್ತರವೆಂಬಂತೆ ಅವನ ಮುಖವೂ ಅ ರಳಿ ಮಂದಾರವಾದಂತಾಗುತಿತ್ತು. ನನ ಗೆ ಸ್ವರ್ಗ ಕೈಸೇರಿದಷ್ಟಾನಂದವಾಗು ತಿತ್ತು.

ಮುಂದೆ ಮುಂದೆ ಇಬ್ಬರೊಲವೂ ಒಂ ದಾಗಿ ಆತ್ಮಗಳೆರಡೂ ಬೆರೆಯ ತೊಡಗಿ ದ್ದುವು.

ಭಾಮ ತಾನು ವಿವಾಹಿತನೆಂಬುದ ನ್ನು ನನ್ನಲ್ಲಿ ಹೇಳಲಿಲ್ಲ. ಅವನಲ್ಲಾವ ಕುಂದೂ ಕಾಣದ ನಾನು ಮುಂದೊಂ ದು ದಿನ ಭಾಮುವನ್ನೇ ಕೈಹಿಡಿಯಬೇಕೆಂ ಬ ದೃಢ ಸಂಕಲ್ಪವನ್ನೇ ಮಾಡಿದೆ.

ಆದರೆ ನನ್ನ ಯೋಚನೆಗಳೆಲ್ಲಾ ಒ ಮ್ಮೆಯೇ ಬಾಡಿಹೋಗಲಾಗಿ ಹೋದುದನ್ನು ಕಂಡು ಬಿಕ್ಕಿ ಬಿಕ್ಕಿ ಅಳತೊಡಗಿದೆ.

ಮುಂದೆ ನಾನು ಪರೀಕ್ಷೆಗೂ ಕೂಡದೆ ಮನೆಗೆ ತೆರಳಿದೆ ಆತ್ಮಂದೂ ಭಾನುವ ನ್ನು ಕಾಣಬಾರದೆಂಬ ದೃಢ ಸಂಕಲ್ಪದಿಂ ದಲೇ ಹೊರಟು ಬಂದು ಬಿಟ್ಟಿದ್ದೆ

ಂ ಂ ಂ

ಮನೆಯಲ್ಲಿಯೂ ವನಗಾಗ ಸವ ಯ ಸರಿಯದಾಯಿತು. ದಿನವಿನಕ್ಕೂ ಕುಳಿತು ಬೇಸರ ಹೆಚ್ಚಾಗತೊಡಗಿತು. ಮಗಳ ವ ಹುವೆಗಾಗಿ ತಾಯಿಯು ಓಡಾಟವೂ ಕಾಣತೊಡಗಿತು.

ನನಗೆ ಮದುವೆಯ ಯೋಚನೆಯೇ ಬಾರದಾಯಿತು. ಜನ್ಮದಲ್ಲೊಬ್ಬನಿಗೆ ಹೃ ದಯ ಧಾರೆಯೆರೆದ ಮೇಲೆ ಅದನ್ನೆಂದೂ ಕೇಳಬರಲಾರದೆಂಬುದು ಬೇರೆಯವರ ಗೇನು ಗೊತ್ತು?

ಹೃದಯ ಒಬ್ಬನಿಗಿತ್ತು ದೇಹ ಮ ತ್ತೊಬ್ಬನಿಗೀಯುವುದು ವಂಚನೆಯೆಂಬ ಭಾವ ಬರತೊಡಗಿದಾಗ ಮದುವೆಯಿಂ ದ ತಪ್ಪಿಸಿಕೊಳ್ಳುವ ದಾರಿ ಹುಡುಕತೊ ಡಗಿದೆ.

ದೀನ ದಲಿತರ ಸೇವೆಗೆಂದು ನರ್ಸ್ ತ ರಬೇತಿ ಪಡೆದ ಆಸ್ಪತ್ರೆ ಸೇರಿ ವರ್ಷವೆರ ಡು ಕಳೆಯಲು ಹೆಚ್ಚೇನೂ ಸಮಯ ಉ ಳಿದಿರಲಾರದು.

ನಾನಾಗ ರೋಗಿಗಳ ಎಡೆಯಿರುವಾದ ನನ್ನ ಕಷ್ಟ ಮರೆತು ದುಡಿಯುತ್ತಿದ್ದೆ. ಆ ದರೆ ಬಿಡುವಿನ ವೇಳೆ ಹಿಂದಿನ ನೆನಪಾಗ ದಿರುತ್ತಿದ್ದಿಲ್ಲ.

ಯೋಚನೆ ಹುಳಿಯೇ ನನ್ನ ಮೊದಲ ಕಾಂತಿ ಕಾರಿ ಕಣ್ಣಾಗಳೆರಡೂ ಗುಳಿ ಬೀ ಳತೊಡಗಿತು. ಕಪ್ಪಾಗಿದ್ದ ಕೂದಲೆಲ್ಲಾ ಬೆಳ್ಳಗಾಗತೊಡಗಿತು.

ಂ ಂ ಂ

ಕುಳಿತು ಕನಸು ಕಾಣುತಿದ್ದ ನನ್ನ ನಾಗ ಅಳವ ಮಗ ವಿನ ಸದ್ದು ಒಬ್ಬೆ ಲೇ ಎಚ್ಚರಿಸಿದಂತಾಗಿ ಬೆಚ್ಚಿಬಿದ್ದೆ.

ಮನೆಗೆ ಒಂದ ಅತಿಥಿಗಳಿಬ್ಬರೂ ಒಬ್ಬರ ಮ ಖವನ್ನೊಬ್ಬರು ನೋಡುತ್ತಿದ್ದರಾಗ. ಅವರಿಬ್ಬರ ಮ ಖದಲ್ಲಿಯೂ ಅದಾವುದೋ ನೋವಿನ ಸೆಳೆತದ ರೇಖೆ ಕಾಣುತ್ತಿತ್ತಾಗ.

ಆದ ಮೌನ ಸಹಿಸುವುದಾರದೆ ಕೇಳಿದೆ,

"ನೀವಾರೋ ತಿಳಿಯಲಿಲ್ಲ ನನಗೆ" ಎಂದು ಅವರ ಉತ್ತರವನ್ನೇ ಕಾದು ಕುಳಿತೆ

"ಚಂದ್ರಾ ನನ್ನ ಗುರ ತು ಹತ್ತಿಲ್ಲವೇ ನಿನಗೆ?" ಎಂದರವರು.

ನನ್ನ ಗುರ ತಿನ ಜೊತೆಗೆ ಅವರು ನನ್ನ ಹೆಸರನ್ನೂ ಮರೆತಂತಿತ್ತು. ಹಾಗಿರುವಾಗ ಹೂರೋ ನನ್ನ ಪರಿಚಿತರಿರಬೇಕೆಂದು ನೆನಪಿನ ಆಗರವನ್ನರಸತೊಡಗಿದೆ.

ಆದ ನನಗೆ ಸ್ವರ ಪರಿಚಿತವೆನಿಸತೊ ಡಗಿತ. ರೂಪು ಅದಲಾಗಿರಬಹ ದೆಂದೂ ಹಿಸಿದೆ. ಹಾಗೆಯೇ ಪ್ರಶ್ನೆಸೆ ಹುಡುಕತೊ ಡಗಿ ಅಳ್ಳಯ ಕಾಲಿಗೆ ತೊಡಗಿದಂತಾ ಯಿತು. ಹಿಂದೊಮ್ಮೆ ವನ್ನಿಂದ ವಚನ ಪಡೆದು ಶವ ಮಂಗಳ ಒಳಿತು ಬಯಸ ಲು ಅಂದಿದ್ದರಿವರೆಂಬುದನ್ನು ಸ್ಮರಿಸುತ್ತಿ ದ್ದಂತೆ ದೇಹವೆಲ್ಲಾ ಕಂಪಿಸ ಹತ್ತಿತು.

ಅದರಿಂದು ಮನ: ಸ್ತಿತ್ರೇಕೆ ಬಂದಿರ ಬಹುದೆಂಬುದನ್ನು ಮಾತ್ರ ಊಹಿಸ ದಾದೆ.

ಅಗವರೇ ಹೇಳ ಹೊರಟರು'ಚಂದ್ರಾ, ನಾನು ಇಟ ಕ. ನನಗೀಗ ತುಂಬಾ ಪಶ್ಚಾ ತ್ತಾಪವಾಗಿದೆ. ನಾನು ನಿನಗೆ ತುಂಬಾ ಅನ್ಯಾಯಮಾಡಿದೆ.'

ಅವರ ಮಾತುಗಳೇ ನನಗೆ ಅಧಾವಾ ಗಲಿಲ್ಲ ನಾನಾಗ ಕುಳಿತು ಅವರ ಮುಖವನ್ನೇ ಮಿಕಿಮಿಕಿ ನೋಡತೊಡ ಗಿದೆ.

"ತಂಗೀ ನನ್ನ ಮಾಂಗಲ್ಯ ಉಳಿಸು. ಈ ಕಂದನ್ನವ ಮೇಲೆ ಕರುಣೆ ಇಟ್ಟು ಅವರ ಜೀವನವನ್ನು ಕಾಪಾಡು" ಎಂದು ಆ ಚಿಕ್ಕಮಗುವನ್ನು ನನ್ನ ಮಾದಕಲ ದಲ್ಲಿ ಕೆಡವಿಳು ಆ ಕೈಕಂಗನೆ.

ನಾನಾಗ ಕೂಡಲೆ ಮೆಲೆದ್ದು ನೆಟೆದು ಫಿಂತು ಕೇಳಿದೆ, "ಅದಾದ್ದಾದೂ ಏನೆಂ ದು ಮೊದಲು ಹೇಳಿ."

"ತಾಗ! ಅವರು ನೀನಿಲ್ಲದೆ ಬದುಕುವಂ ತಿಲ್ಲ. ಬೇಗನೆ ಒಂದುಬಿಡು, ಅವ ರನ್ನುಳಿಸ ಪುಣ್ಯ ಕಟ್ಟಿಕೊಳ್ಳು" ಎಂ ದಾಡಿದ ಮಾತನ್ನು ಕೇಳಿದ ವನ್ನಿಂದ ಮತ್ತಲ್ಲಿ ಅರೆಕ್ಷಣವೂ ನಿಲ್ಲುವುದಾಗ ಲಿಲ್ಲ.

"ಎಲ್ಲಿ ನಡೆಯಿರಿ. ನನ್ನ ಸ್ವಾಮಿ ಯನ್ನು ನಾನೂ ಕಾಣಬೇಕು." ಎಂದು ಉಟ್ಟಬಟ್ಟೆಯಲ್ಲಿಯೇ ಹೊರಡಲು ಸಿದ್ಧ ನಾದೆ.

ಂ ಂ ಂ

ಆಸ್ಪತ್ರೆಯ ಬೆಡ್ಡಿಗಂಟೆ ಮಲಗಿದ್ದ ಭಾನುವನ್ನು ಕಂಡವಳಿಗೆ ದುಃಖ ಸಹಿಸ ಲಾಗಲಿಲ್ಲ.

ನನ್ನೆರಡು ಕಣ್ಣೀರ ಹನಿಗಳು ಅವರ ಮೈಮೇಲುದುರಿದಾಗ ನನ್ನ ಭಾನುವಿನ ಮುಚ್ಚಿದ ಕಣ್ಣುಗಳೆರಡು ಮೆಲ್ಲ ತೆರೆದ

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ, ಊಟ, ಉಪಾಹಾರದ ವ್ಯವಸ್ಥೆಯಿದೆ; ಹಾಗೂ ಎಲ್ಲಾ ತರದ ವಿಚಾರಿಸಿ.

HOTEL SATKAR

Boarding & Lodging

Near Corporation Office, 9, Mission Road

Bangalore - 2

NAVAYUGA 23—5—1968
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ವು. ದೇಹ ಕೃಶವಾಗಿದ್ದರೂ ಕಣ್ಣುಗಳ ಕಾಂತಿ ಕಂದಿರಲಿಲ್ಲ. ನನ್ನನ್ನೇ ನೋಡುವ ಧಾನ್ಯವಾದ ನನ್ನನ್ನು ಗುರುತಿಸಿದಂತಿಲ್ಲ ವೆಂಬ ಅರಿವಾಗಿ "ನಾನು ಚಂದ್ರ" ಎಂದೆ.

"ಸುಳ್ಳು! ಸುಳ್ಳು! ಸುಳ್ಳು! ಇನ್ನೆಲ್ಲಿಯ ಚಂದ್ರ?" ಎಂದು ಗುಳು ಗುಳು ಅಳತೊಡಗಿದಾಗ ಮತಿ ಭ್ರಮಣಿಯಿರಬಹುದೆ ಎಂಬ ಸಂದೇಹವೂ ಮೂಡಿತು.

ಆಗ ನಾನು ಪುನಃ ಹೇಳಿದೆ,

"ಹೌದು, ನಾನೇ ಚಂದ್ರ ನನ್ನ ಗುರುತು ನಿನಗೆ ಮರೆತಂತಿದೆ." ಅವರ ಮಾತ ಮತ್ತು ಕೈ ಹಿಡಿದ ಮಡದಿಯಿಬ್ಬರೂ ಹೊರಗಡೆಯೇ ನಿಂತಿದ್ದರಾಗಿ ಅವರನ್ನು ಕಂಡರೆ ಮತ್ತೂ ಉದ್ರೇಕಗೊಳ್ಳುವರೆಂಬ ವಿಚಾರ ನನಗೆ ಹೊಳೆದಲೇ ತಿಳಿದಿತ್ತು.

ಡಾಕ್ಟರರ ಅಪೇಕ್ಷೆ ಮೇರೆಗೆನನ್ನನ್ನರ ಸಿಕರೆಕಂದಿದ್ದರಲ್ಲಿಗೆ. ಯಾವ ಔಷಧೋಪಚಾರಕ್ಕೂ ಗುಣವಾಗದ ಕಾಹಿಲೆಯ ಕೊನೆಯ ಪ್ರಯೋಗವನ್ನಾಗಿ ನನ್ನನ್ನು ಉಪಯೋಗಿಸಿದ್ದರಂಗ

"ನೀನು ನಿಜವಾಗಿಯೂ ನನ್ನ ಚಂದ್ರ ಹೌದೆ?' ತಡೆ ಕಡೆದು ಕೇಳಿದರು ನನ್ನ ತಾಯಿ.

'ಹೌದು ಸ್ವಾಮಿ. ನಾನೇ ನಿಮ್ಮ ಚಂದ್ರ' ಅಂದೆ.

'ಹಾಗಾದರೆ ಅದರ ಪರೀಕ್ಷೆಯಾಗಬೇಕೇಕೆ' ಎಂದಳವರು.

'ಆಗಲಿ ದೊರೆ' ಎಂದೆ.

ಅದೇನನ್ನೊ ಕೊಟ್ಟು 'ಕುಡಿ' ಎಂದರು.

ಯಾವ ಯೋಚನೆಯೂ ಇಲ್ಲದೆ ಗಟ ಗಟಿಸಿ ಕುಡಿಯುವಾಗ "ಬೇಡ ಚಂದ್ರಾ! ತಡೆ' ಎಂದು ಕೈ ಎಳೆದ ತಾಯಿ ಸ್ವಲ್ಪ ಕುಡಿದರಾಗ,

ನಮ್ಮಿಬ್ಬರ ಗಲಾಟೆ ಕೇಳಿ ಜೊಗಿಗಿಂದ ಅವರ ಕಾವ ಮಡದಿ ಇಬ್ಬರೂ ಒಳಗೋಡಿ ಬಂದರು. ಆದರಾಗ ನಮ್ಮಿಬ್ಬರ ಕೈಕಾಲುಗಳು ತಣ್ಣಗಾಗತೊಡಗಿದ್ದುವು.

ನನಗಾಗಿಯೇ ಅವರು ಯಾವುದೋ ವಿಷ ಮುಚ್ಚಿಟ್ಟುಕೊಂಡಿದ್ದರೆಂಬುದು ಅವರಾರಿಗೂ ತಿಳಿದಂತಿರಲಿಲ್ಲ.

ನಮ್ಮಿಬ್ಬರ ಜೀವವನ್ನುಳಿಸಿಕೊಳ್ಳಲು ಡಾಕ್ಟರರಾಗ ತುಂಬಾ ಶ್ರಮವಹಿಸಿದರು. ಆದರೆ ಅವರ ಶ್ರಮವೆಲ್ಲಾ ವ್ಯರ್ಥವೆನಿಸಿ ಮರೆಯಲಾರದ ನನ್ನ ದುರಂತ ಜೀವನದ ಕನಸಮಾಪ್ತಿಯ ಜೊತೆಗೆ ಈ ಲೋಕದ ಸಂಬಂಧವೂ ಅ ಯುಗಾದಿ ದಿನದಂದು ಕಡಿದು ಹೋಯಿತು.

ನರಗಳ ಬೆಳವಣಿಗೆಗೆ ಪ್ರಾಣಿಸತ್ವ

ನರಗಳ ಬೆಳವಣಿಗೆಯನ್ನು ಉತ್ತೇಜಿಸಬಲ್ಲ ಪ್ರಾಣಿಸತ್ವ ಒಂದನ್ನು ನ್ಯೂಯಾರ್ಕ್‌ನ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಅಧ್ಯಯನ ಮಾಡುತ್ತಿದ್ದಾರೆ. ನರ್ವ ಗ್ರೋಥ್ ಫ್ಯಾಕ್ಟರ್ (ಎನ್‌ಜಿಎಫ್) ಎಂಬ ಈ ವಸ್ತುವು ಜೀವವೈಜ್ಞಾನಿಕ ಅಥವ ವೈದ್ಯದ ಬಳಕೆಗೆ ಉಪಯುಕ್ತವೇ ಹೇಗೆ ಎಂಬುದನ್ನು ಕಂಡುಹಿಡಿಯಲ್ಪಟ್ಟಿದೆ ವಿಜ್ಞಾನಿಗಳ ಸಂಶೋಧನೆಯ ಗುರಿ. ಇಲಿಗಳ ಕೆಳ ದವಡೆಯ ರಸಗ್ರಂಥಿಗಳಿಂದ ಈ ವಸ್ತುವನ್ನು ಸಿದ್ಧಗೊಳಿಸಲಾಗಿದೆ.

1000 ಇಲಿಗಳ ರಸಗ್ರಂಥಿಗಳಿಂದ, ಎರಡರಿಂದ ನೂರು ಮಿಲಿಗ್ರಾಂಗಳಷ್ಟು (ಒಂದು ಸಾವಿರದ ಒಂದಂಶ) ಎನ್‌ಜಿಎಫ್ ಅನ್ನು ಸ್ವೀಕರಿಸಲು ಡಾ। ಏಸಾಲ್ ಶೆಫ್‌ಕೇಸ್ ಮತ್ತು ಇನ್ನಿಬ್ಬರು ಅನುಭವೀ ಶಂಶ್ರಜ್ಞರು 10 ದಿನಗಳ ವರೆಗೆ ಸೂಕ್ಷ್ಮ ರಾಸಾಯನಿಕ ವಿಧಾನಗಳನ್ನು ಬಳಸಬೇಕಾಯಿತು.

ಎನ್‌ಜಿಎಫ್‌ನ ಕ್ರಿಯೆಗಳ ಬಗೆಗೆ ವಿವರಗಳು ತಿಳಿದಿಲ್ಲವಾದರೆ, ಅದು ಘಟಗಳ ರಿಪೇರಿಗೆ ಮತ್ತು ಘಾಯಗೊಂಡ ಅಥವಾ ವ್ಯಾಧಿಗೊಳಗಾದ ನರಗಳಪುನರುಜ್ಜೀವನಕ್ಕೆ ಸಹಾಯಕವಾಗಬಹುದು ಎಂದು ವಿಜ್ಞಾನಿಗಳು ಹೇಳಿದರು. ಎನ್‌ಜಿಎಫ್, ನ್ಯೂರಾನ್ ಅಥವಾ ನರಕೋಶಗಳನ್ನು ನ್ಯೂರೈಟ್‌ಗಳನ್ನು ಉತ್ಪಾದಿಸುವಂತೆ ಸ್ರಚೋದಿಸುತ್ತದೆ. ನ್ಯೂರೈಟ್‌ಗಳು, ನ್ಯೂರಾನ್‌ಗಳನ್ನು ಇಂದ್ರಿಯಗಳು ಮತ್ತು ಮಾಂಸಖಂಡಗಳೊಂದಿಗೆ ಸಂಪರ್ಕಗೊಳಿಸುವ ಸೂಕ್ಷ್ಮ ಎಳೆಗಳು.

ಸಂಶೋಧನೆ ನಡೆಸುತ್ತಿದ್ದಾಗ ಹೆಚ್ಚು ದ್ರವ್ಯಗಳಲ್ಲಿ ಬೆರೆಸಿದಾಗಲೂ ಎನ್‌ಜಿಎಫ್ ತನ್ನ ಗುಣವನ್ನು ಉಳಿಸಿಕೊಂಡುದನ್ನು ಕಂಡು ವಿಜ್ಞಾನಿಗಳಿಗೆ ಆಶ್ಚರ್ಯವಾಯಿತು. ಪ್ರಯೋಗಗಳಲ್ಲಿ ಎನ್‌ಜಿಎಫ್‌ನ ಕೇವಲ 10 ಕಣಗಳು 100 ನ್ಯೂರೈಟ್‌ಗಳನ್ನು ಉತ್ಪಾದಿಸಿದ ಷ್ಟು ಆದರೂ, ಇಂಥ ಮಿಶ್ರಣಕ್ಕೆ ಎನ್‌ಜಿಎಫ್‌ನ ಪ್ರಮಾಣ ಅತಿ ಸೂಕ್ಷ್ಮವಾದುದರಿಂದ ರಾಸಾಯನಿಕ ವಿಧಾನಗಳಿಂದ ಸತ್ವ ಶುದ್ಧವೆದು ಕಠಿಣ. ಈ ಪುಮಾಣ 25,000 ಟನ್‌ಗಳಷ್ಟು ಇತರ ಪದಾರ್ಥಗಳಲ್ಲಿ ಬೆರೆಸಿದ ಒಂದು ಸೈಕ್ಲೊಗ್ರಾಮ್‌ನಷ್ಟು (ಒಂದು ಗ್ರಾಮಿನ ಮಿಲಿಯದಲ್ಲೊಂದಂಶ) ಎನ್‌ಜಿಎಫ್.

ಪ್ರಸ್ತುತ ವಿಜ್ಞಾನಿಗಳು ಈ ವಸ್ತುವನ್ನು ದಶಲಕ್ಷ ಪಟ್ಟು ಸಾರ ಹೆಚ್ಚಿಸಿ ಅದರ ಸತ್ವವನ್ನು ಇನ್ನೂ ಹೆಚ್ಚಿಸಲು ಸಂಶೋಧನೆ ನಡೆಸುತ್ತಿದ್ದಾರೆ; ಇದರಿಂದ ಅದರ ಕ್ರಿಯೆಗಳನ್ನು ಅಧ್ಯಯನಮಾಡಲು ಮತ್ತು ಅದರ ರಾಸಾಯನಿಕ ರಚನೆಯನ್ನು ವಿಶ್ಲೇಷಿಸಲು ಸಾಧ್ಯವಾಗುವುದು. ಡಾ। ಶಿಂಕೇನ್ ಅವರೊಂದಿಗೆ ಡಾ। ಮಿಲ್ಟನ್ ಲಿವೀ ಹಾಗೂ ಎಲ್.ಡಿ. ಬ್ಯೂಕರ್ ಅವರು ಈ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಟಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳನೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಎ.ಎಮ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಬಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳನ್ನೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗ್ರಂಥವೆದು. ಹೊಸ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟಿ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನಾವು ರೈತರಾಗುವಾ

ರೈತರಾಗುವಾ
ನಾವು ರೈತರಾಗುವಾ!
ಕೈಯ ಕೆಸರ ಮಾಡಿಕೊಂಡು
ಹಾಲು—ಮೊಸರ ಉಣ್ಣುವಾ!
ಅರುಣ ಉದಯಿಸುವ ಮುನ್ನ
ಮನೆಯ ಬಿಟ್ಟು ತೆರಳುವಾ
ಅಲ್ಲಿ ತ್ಯಾಗ ಕರ್ಮಿಯಾಗಿ
ಹೊಲದಲ್ಲಿ ಎಡೆಬಿಡದೆದುಡಿಯುವಾ
ಉತ್ತಿ ಬಿತ್ತಿ ಕಳೆಯ ಕಿತ್ತಿ
ಸಜ್ಜಾಕ್ಕಿ ಸಕ್ಕರೆ ಬೆಳೆಸುವಾ
ಸಂಜೆ ಮುಸುಕು ಮುಚ್ಚುವ ಮುನ್ನ
ಮನೆಯ ಬಂದು ಸೇರುವಾ
ಕೂಳು! ಕೂಳು! ಎಂಬ ಕೂಗ
ನಮ್ಮ ನಾಡಿನಿಂದ ಓಡಿಸುವಾ
ಹಸಿದು ಕಿಂತ ಜನರಿಗೆ
ಕೊಡುಗೈಯಿಂದ ಹಂಚುವಾ
ಜನರ ಹೊಟ್ಟೆ ತುಂಬುವಂತೆ
ಬಾಳಿನಲ್ಲಿ ಚಲುವ ಹೊಮ್ಮಿಸುವಾ
ಗೆಲುವು ತುಂಬಿ ಕುಣಿಯುವಂತೆ
ನಾಡಿಗಾಗಿ ಹಗಲಿರುಳು ದುಡಿಯುವಾ
ಬಿಕ್ಷಾಪಾತ್ರೆಯ ಹಿಡಿದು ಬೇಡುವುದನ್ನ
ಇಂದಿನಿಂದಲೇ ನಾವು ಬಿಡಿಸುವಾ
ಮೈಯಸವೆಸಿ ಬೆವರ ಸುರಿಸಿ
ನಮ್ಮ ಮಕ್ಕಳ ಸಾಕುವಾ
ಇಂದು ನಮ್ಮ ನಾಡಿನ
ವಿಜಯ ಭೇರಿ ಹಾರಿಸುವಾ
ರೈತರಾಗುವಾ!
ನಾವು ರೈತರಾಗುವಾ!!

—"ಮಲ್ಲಿಕ"

॥ವರ್ಗರಹಿತ ಸಮಾಜ॥

ಉಳ್ಳವರು—ಇಲ್ಲದವರೆಂಬೆರಡು
ವರ್ಗ।
ಉಳ್ಳವನ ಧನಮಿಗಿಳಿತರದಂತೆ ಸ್ವರ್ಗ।
ಎಲ್ಲರೂ ಉಳ್ಳವರೆನಿಸಿಕೊಳ್ಳಲಿಲ್ಲ।
ಇಲ್ಲದವರಾಗಲಂದೂ ಸಿದ್ಧರಿಲ್ಲ ॥೨॥

ಏನನಾಹುತ?

ಬಾನುಲಿಯ ಸುದ್ದಿಯನು ಕೇಳುತ್ತ ಪುಳ್ಳ।
"ಏನಾಹುತ"ವೆಂದು ಉದ್ಗರಿಸಿ ಬಿಟ್ಟ॥
ಹೆರೆಯಮನೆಯಿರದಾಗಲಿಗಡಿಯಿಟ್ಟ
ಸಾವಧಾನದಿ ನಿಂತು ಬೀಡಿ ಹೊಗೆಬಿಟ್ಟ ॥೪॥

'ಶಕ್ತಿ'

Edited, Printed & Published by K. H. Shetty at the Navayuga Press, Udupi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

0—5—1968

೨೦
ಪೈಸೆ

ಕಥಾ ಪ್ರಪಂಚ

ನಾ ಕಂಡ ದೆವ್ವ

ಬರೆದವರು :
ಶ್ರೀ ಕೆ. ಸಚ್ಚಿದಾನಂದ ಉಡುಪ:

ಏಳು ಗಂಟೆಯಾಗಿರಬಹುದು, ಅಥವಾ ಎಂಟು ಗಂಟೆಗೆ ಇನ್ನು ಎರಡು-ಮೂರು ನಿಮಿಷಗಳಷ್ಟು ಬಾಕಿಯಿದ್ದಿರಬಹುದು. ನಾನು ಬಟ್ಟೆಬರೆಗಳನ್ನು ಬದಲಾಯಿಸಿ ಸ್ಟೇಷನ್ನಿನ ಕಡೆಗೆ ಹೋಗುವ ಅವಸರದ ಸಮಯದಲ್ಲಿ ಅವನಿಂದ ಫೋನು ಬಂದಿತು. ಅವನ ಮಾತುಗಳನ್ನು ಕೇಳುತ್ತಲೇ ಆಶ್ಚರ್ಯವಾಯಿತು.

"ನಾನು ಸ್ಟೇಷನ್ನಿನ ಬಳಿಯಲ್ಲಿರುವ 'ಭಾರತ್' ಹೋಟೇಲಿನಿಂದ ಮಾತನಾಡುತ್ತಿರುವೆನು. ಕೆಲವು ಪುಂಡ ವ್ಯಕ್ತಿಗಳು ನನ್ನ ಕೊಲೆಗೈಯಲು ಸಮಯ ಹುಡುಕುತ್ತಿದ್ದಾರೆ. ನಾನು ಅವರ ತಲೆ ಮರೆಸಿಕೊಂಡು ಈ ಹೋಟೇಲಿನ್ನು ಸೇರಿದ್ದೇನೆ. ನಾನಿಲ್ಲಿರುವೆನೆಂದು ಅವರು ಯಾವ ರೀತಿಯಲ್ಲಿ ತಿಳಿದುಕೊಂಡರೋ ಏನೋ? ನಾನು ಹೊರಗೆ ಬರುತ್ತಿರುವ ಸಮಯಕ್ಕಾಗಿ ಕಾಯುತ್ತಿದ್ದಾರೆ—"

ಸರಂತು ಮುಂದಿನ ಮಾತುಗಳನ್ನು ಕೇಳುವ ಆತುರದಲ್ಲಿದ್ದಾಗಲೇ ಆ ವ್ಯಕ್ತಿ ಫೋನನ್ನು ಕೆಳಗಿಟ್ಟ.

ಆದರೆ ಆ ವ್ಯಕ್ತಿಗೆ ಯಾವ ವಿರೋಧಿಗಳಿರಲಾರರು—ಎಂಬುದು ನನ್ನ ಶಂಕೆ. ಅವನೊಬ್ಬ ಶಾಂತಿ ಪ್ರಿಯ ವ್ಯಕ್ತಿ. ಆದರೆ ಅತಿಶಯಗಿ ಕುಡಿಯುವ ಅಸಾಮಿ. ಆದರೂ ಈ ಕುಡಿತದ ಕಾರಣದಿಂದ ವ್ಯಕ್ತಿಯ ಕೊಲೆಗೈಯಲು ಕಾರಣವೇ ಇಲ್ಲವಲ್ಲ!

ನಾನು ಅವನಿಗೋಸ್ಕರ ಏನು ಸಹಾಯವೆಸಗಲಿ ಎಂಬುದನ್ನು ಯೋಚಿಸಲು ಅಸಾಧ್ಯನಾದೆ. ಏನು? ಪೋಲೀಸರಿಗೆ ಫೋನು ಮಾಡಲೆ? ಛೆ! ಒಂದೊಮ್ಮೆ ಪೋಲೀಸರ ಸಹಾಯ ಕೇಳುವಂತಿದ್ದರೆ ಅವನೇ ಸ್ವತಃ ಅವರಿಗೆ ಫೋನು ಮಾಡಿರಬಹುದಲ್ಲವೇ? ನಾನೇಕೆ ಫೋನ ಮಾಡಲಿ?

ಕೂಡಲೇ ನನ್ನ ಕಾರನ್ನು 'ಭಾರತ್' ಹೋಟೇಲಿನ ಕಡೆಗೆ ಚಲಾಯಿಸಿದೆ. ಹೋಟೇಲ ಹೊಗೆ ಅತ್ಯಿತ್ತ ಕಣ್ಣುಹರಿಸಿದೆ. ಕೆಲವು ಜನರು ಬಳಿಯಲ್ಲೇ ಇದ್ದ ಸಂಚಾಯಿ ಅಂಗಡಿಯಿಂದ ಸಂಚಾಯಿ—ಸಿಗರೇಟುಗಳನ್ನು ತೆಗೆದುಕೊಳ್ಳುತ್ತಿದ್ದರು. ಆ ಹೊಟ್ಟ ವ್ಯಕ್ತಿ ತನ್ನ ಸ್ನೇಹಿತರಿಗೆ ಗಾಳಿಯನ್ನು ಬಿಟ್ಟ ಬಿಮ್ಮುತ್ತಿದ್ದ. ಮತ್ತೊಬ್ಬರು ಸುಟ್ಟ ವಿದ್ಯಾರ್ಥಿಗಳು ಕಂಡಿತವಾಗಿ ಸಿಗರೇಟುಗಳನ್ನು ಪಡಕೊಳ್ಳುತ್ತಿದ್ದರು. ಆದರೆ ನಾನು ಯಾವತ್ತೂ ಕೊಲೆಗಡುಕರನ್ನು ಕಾಣದಾದೆ.

ಂ ಂ ಂ

ಕಾರು ಪಾರ್ಕಿನ ಮುಂದುಗಡೆಯಿಂದ ಹಾದುಹೋಗಿ ಹೋಟೇಲ ಒಳಸೇರಿತು. ಹೋಟೇಲಿನ 'ಹೋಲ'ನಲ್ಲಿ ಕೆಲವರು ಕಾಫಿ ಕುಡಿಯುತ್ತಿದ್ದರು. ಅವನು ಈ ಜನರ ಜೊತೆಯಲ್ಲಿರಲಿಲ್ಲ. ನಾನು ಹೋಟೇಲಿನ ಕ್ಯಾಬಿನಿಗ ಕಡೆಗೆ ದೃಷ್ಟಿ ಹಾಯಿಸಿದೆ. ಹಾಂ ಕ್ಯಾಬಿನ್ನಿನ ಮೂಲೆಯೊಂದರಲ್ಲಿ ಆ ವ್ಯಕ್ತಿ ಕುಳಿತಿದ್ದನು. ಜಂಕೆಯಾಕಾರದ ಪಾದರಕ್ಷೆಯನ್ನು ತೊಟ್ಟ ಆತನ ಗುರುತು ಸಿಕ್ಕಿತು. ಮುಂದೆ ನಡೆದು ಕ್ಯಾಬಿನ್ನಿನ ಪರ್ದೆಯನ್ನು ಅತ್ತಕಡೆ ಚಲಿಸಿದಾಗ ಆ ವ್ಯಕ್ತಿ ಒಮ್ಮೆಲೆ ಬೆಚ್ಚಿಬಿದ್ದು ಕಲ್ಲಿನ ರೀತಿಯಲ್ಲಿ ನಿಂತುಕೊಂಡ. ಒಂದೊಮ್ಮೆ ನಾನು ಮಾತು ಪ್ರಾರಂಭಿಸದೆ ಹಿಲ್ಲುತ್ತಿದ್ದರೆ ಕಂಡಿತ ಆತನು ತನ್ನ ಭರ್ಚಿಯನ್ನು ನನ್ನ ಮುಖದ ಕಡೆಗೆ ಹಾರಿಸುತ್ತಿದ್ದ.

ನನ್ನ ಮಾತುಗಳನ್ನು ಕೇಳಿ ಬೆಚ್ಚಗಿದ್ದವನು ತಣ್ಣಗಾಗಿ ಕುಳಿತುಬಿಟ್ಟ. ಬೆವರನ್ನು ಸುರಿಸುತ್ತ ತರತರನೆ ನಡುಗುತ್ತಿದ್ದ. ಗಡ್ಡ ಮೀಸೆಗಳನ್ನು ಬೋಳಿಸದೆ ಇನ್ನೂ ವಿಳಂಬ ದಿನಗಳಾಗಿದ್ದಿತು. ಒಂದು ಕಪ್ ಚಾ ತಣ್ಣಗಾಗಿ ಒಂದು ರೀತಿಯ ಧೂಳು ಆ ಕಾಫಿಯ ಮೇಲ್ಗಡೆ ತೇಲುತಿತ್ತು. ಬಳಿಯಲ್ಲೇ ಒಂದು ದೊಡ್ಡ ಪ್ಲೇಟಲ್ಲಿ ತಂದಿದ್ದ ಆಮ್ಲೇಟು ಅರ್ಧದಷ್ಟು ತಿಂದು ಅಲ್ಲೇ ಉಳಿದಿತ್ತು.

"ಜನರು ಯಾರು? ಎಲ್ಲಿದ್ದಾರೆ" ನಾನು ಕೇಳಿದೆ.

"ಕೆಳಗೆ ಮೂಡ್ಡದಲ್ಲಿದ್ದಾರೆ"— ಅವನ ಉತ್ತರ.

"ನೀನು ಅವರನ್ನು ಮೊದಲಿನಿಂದಲೇ ತಿಳಿದಿರುವೆಯೋ?"

"ಇಲ್ಲ"

"ಹಾಗಾದರೆ ನಿನಗೆ ಅವರು ಕೊಲೆ ಮಾಡುವರೆಂದು ಯಾವ ರೀತಿಯಲ್ಲಿ ತಿಳಿಯಿತು?"

"ಇಲ್ಲ. ನನ್ನ ಹತ್ಯೆ ಮಾಡುವರೆಂದು ನನಗೆ ತಿಳಿದಿದೆ!"

'ನಿನ್ನ ಜೊತೆ ಅವರ ಯಾ ಅವರ ಜೊತೆ ನಿನ್ನ ಜಗಳವಾಗಿದೆಯೇ?"

"ಇಲ್ಲ"

"ಹಾಗಾದರೆ ನಿನ್ನ ಹತ್ಯೆ ಮಾಡಲು ಕಾರಣ?"

"ಅಂದರೆ ಅವರು ಅಲ್ಲಿ, ಹೊರಗೆ ನಿಂತಿರಲು ಕಾರಣ?'

"ಹೊಮ್ಮದಕ್ಕಾದರೂ ನಿಂತಿರಬಹುದು. ನಿನ್ನ ಹತ್ಯೆಗೆ ಯಾವುದಾದರೊಂದು ಕಾರಣವಿರಬೇಕೇ ವಿನಃ ಅವರು ನಿನ್ನ ಹತ್ಯೆ ಮಾಡಲು ಸಾಧ್ಯವೇ ಇಲ್ಲ!" ನಾನೆಂದೆ.

"ಅವರು ನನ್ನನ್ನೇ ನೋಡುತ್ತಿದ್ದಾರೆ ಹಾಗೂ ಅವರಲ್ಲಿ ಒಬ್ಬನಲ್ಲಿ ಚೂರಿಯೂ ಇದೆಯಲ್ಲಾ...."

ನನಗೆ ಇವನ ಹೊಸತ್ತು ಮಾತುಗಳು ಒಡಿಸಲಿಲ್ಲ. ನಾನು ಸುಮ್ಮನಾದೆ. ವೈಟರ್ ಬಂದಿದ್ದ ಕಾರಣ ಅವನಲ್ಲಿ ಒಂದು ಕಪ್ ಚಾ ತರಲು ಹೇಳಿದೆ. ವೈಟರ್ ನನಗೆ ಚಾ ತರಲು ಒಳ ಹೋದ.

"ಗಾಡಿ ತಂದಿರುವೆಯಲ್ಲವೇ?" ಮಿತ್ರನೆಂದ.

"ಹಾಂ"

"ನಾನು ಇಲ್ಲೇ ಕುಳಿತುಕೊಂಡಿರುವೆ. ನೀನು ಕಾರನ್ನು ಈ ಕೋಣೆಯ ಮುಂದೆ ಚಲಾಯಿಸಿಕೊಂಡು ಬಾ"

"ಕಾರು ಇಲ್ಲೇ ಸಮೀಪದಲ್ಲಿದೆ"

ಅವನು ಕೋಣೆಯ ಪರ್ದೆಯನ್ನು ಹೊರಕ್ಕೆ ಸರಿಸಿ ನೋಡಿದಾಗ ಕಾರು ಅಲ್ಲೇ ನಿಂತಿತ್ತು.

"ನೀನು ನನ್ನ ಜೊತೆಗೆ ಬಾ"—ಎಂದುಕೊಂಡು ಆಸನದಿಂದ ಎದ್ದುನಿಂತೆ. ವೈಟರ್ ಬಿಲ್ಲು ತಂದು ಮಿತ್ರನಿಗೆ ಕೊಟ್ಟ. ಮಿತ್ರ ಎರಡು ರೂಪಾಯಿ ನೋಟನ್ನು ಮೇಜಿನ ಮೇಲಿಟ್ಟ. ವೈಟರಿಗೆ ಅದನ್ನು ಕೊಂಡು ಹೋಗುವಂತೆ ತಿಳಿಸಿ, ವಸ್ತ್ರದಿಂದ ತನ್ನ ಮುಖವನ್ನು ಒರಸಿ ನನ್ನ ಜೊತೆಗೆ ಕ್ಯಾಬಿನಿಂದ ಹೊರ ಬಂದ.

ಹೊರಬರುವಾಗಲೆ ಅಳವಾದ ನಿಟ್ಟುಸಿರು ಬಿಟ್ಟ! ಬೆವರಿನ ಹನಿಗಳು ಮುಖದಿಂದ ಧರಧರನೆಂದು ಕೆಳಗುರುಳಿದುವು. ಬಟ್ಟೆಬರೆಗಳೆಲ್ಲವೂ ಬೆವರಿಂದ ಒದ್ದೆಯಾಗಿ ಮಿಂದುಬಂದಂತಿತ್ತು. ಮತ್ತೊಮ್ಮೆ ಹೆಚ್ಚಿನ ಉತ್ಸಾಹಭರಿತನಾಗಿ ಕಾರಿನ ಬಾಗಿಲನ್ನು ತೆರೆದು ಅದರ ಒಳ ಸೇರಿದ.

"ನಿನ್ನ ಆ ಜನರೆಲ್ಲಿದ್ದಾರೆ"—ನಾನು ಕಾರಿನ ಸ್ಟೇರಿಂಗನ್ನು ತಿರುಗಿಸುತ್ತ ಎಂದೆ.

ಅವನು ಮಾತಿತ್ತಲಿಲ್ಲ!

"ಇಲ್ಲಿ ಅಂತಹ ವ್ಯಕ್ತಿಗಳು ಯಾರೂ ಕಾಣಿಸುತ್ತಿದಿಲ್ಲವಲ್ಲಾ?" — ಮತ್ತೊಮ್ಮೆ ಪ್ರಶ್ನಿಸಿದೆ.

ಅವನು ಮತ್ತೂ ಸುಮ್ಮನಾದ!

ಕಾರು ಮನೆ ಸೇರಿದಾಗ—"ನೀನು ಕೊಲೆ ಮಾಡಲು ಯತ್ನಿಸುತ್ತಿದ್ದ ಜನ ಯಾರೆಂದು ತಿಳಿಸಲಿಲ್ಲ. ಈಗ ತಾನೆ ಮಾರ್ಗದ ಬದಿಯಲ್ಲಿದ್ದ ಆ ಜನರೇ" ಎಂದೆ.

"ಅವರು ಹೋಟೇಲಿನ ಒಳಗಿದ್ದರು." —ಅವನ ಮಾತುಗಳು ಸ್ವಚ್ಛವಾಗಿರದೆ ಪಡುಗುವಂತಿತ್ತು.

"ಹೋಟೇಲಿನ ಒಳಗೆ? ಎಲ್ಲಿ?"

"ಹೋಟೇಲಿನ ಹೋಲಿನಲ್ಲಿ ಕಾಫಿ ಕುಡಿಯುತ್ತಿದ್ದರು.

ನಾನು ಹೋಟೇಲಿನಿಂದ ಹೊರಬಂದಾಗ ಹಾಲ್ಯೆದು ವಂದಿ ಕಾಫಿ ಕುಡಿಯುತ್ತಿದ್ದುದು ನೆನಪಿಗೆ ಬಂತು. ಆದರೆ ಅವರು ನನ್ನ ಮೇಲೆ ಅಷ್ಟೊಂದು ವಿಶೇಷವಾದ ಗವ ನವನ್ನು ಕೊಟ್ಟಿಲ್ಲವಲ್ಲ?

"ಯಾರು, ಕೌಂಟರಿನ ಬಳಿಯಲ್ಲಿದ್ದವರೇ?"

"ಹಾಂ, ಹಾದು."

"ನೀನು ಪೋಲೀಸರಿಗೆ ಫೋನು ಮಾಡಿದ್ದೀಯೇ?"

"ಇಲ್ಲ"

"ಆಗ ಅವರು ಖಂಡಿತವಾಗಿಯೂ ಕೊಲೆ ಮಾಡ ವರು!" ಎಂದು ಕಾರಿನಿಂದ ಕೆಳಗೆ ಇಳಿದಾಗ ಅವನೂ ವಸ್ತ್ರದಿಂದ ಮುಖವನ್ನು ಒರಸುತ್ತಾ ಹೊರ ಬಂದ.

ನೀದಾ ಮನೆಗೆ ನಡೆಯಲು ತಿಳಿಸಿದೆ.

ಂ ಂ ಂ

ಮನೆಗೆ ಬಂದು ಒಂದು ಗ್ಲಾಸಿನಷ್ಟು ಫೀರನ್ನಿತ್ತೆ. ಫೀರನ್ನು ಕುಡಿದು ಸುಮ್ಮನೆ ಕೂತಾಗ ನಾನು ಕೊಲೆಗೈಯುವ ಜನರ ಕುರಿತು ಪ್ರಶ್ನೆಯನ್ನು ಕೇಳುತ್ತಾ ಇದ್ದೆ. ಆದರೆ ಅವನದೊಂದೇ ಉತ್ತರ "ಅವರು ನನ್ನನ್ನೇ ಕೊಲೆ ಮಾಡಲು ಯತ್ನಿಸುತ್ತಿದ್ದುದು ಹೊರತು ಬೇರೆಯವರದಲ್ಲ....' ಕಾರಣ ಕೇಳಿದಾಗ ಉತ್ತರವಿಲ್ಲ. ಒತ್ತಾಯಿಸಿದಾಗಲೂ ಕಾರಣದ ಒಂದಿಷ್ಟು ಅಂಶವನ್ನು ತಿಳಿಸಲು ಅಸಮರ್ಥನಾಗಿದ್ದನು.

ನಾನು ರಾಮನನ್ನು ಕರೆದು ಕಾಫಿ ತರಲು ಹೇಳಿದೆ.

ಅವನು ಹೋದನಂತರ "ಇವನಾರೆಂದು ಮಿತ್ರ ಕೇಳಿದ.

"ನನ್ನ ಕೆಲಸದಾಳು"

"ಮೊದಲೊಮ್ಮೆ ಬಂದಾಗ ಬೇರೊಬ್ಬನಿದ್ದ"

"ಅವನು ಈಗ ರಜೆಯಲ್ಲಿದ್ದಾನೆ"

ಅವನು ಮರು ಮಾತಿತ್ತಲಿಲ್ಲ. ಅವನ ಮುಖದಿಂದ ಬೆವರಿಳಿಯಿತು. ಗಾಬರಿಯಾದನೋ ಏನೋ?

"ಹೂಕೆ ಈ ರೀತಿ"ನಾನು ಕೇಳಿದೆ.

"ತುಸು ಸಮಯ ಸುಮ್ಮನಿದ್ದು ಮತ್ತೊಮ್ಮೆ ನನ್ನ ಬಳಿಗೆ ಬಂದು "ಇವನೇ ಅವಂಲ್ಲಿಬ್ಬ ವ್ಯಕ್ತಿ" ಮೆಲು ಮೆಲ ನೆಂದ.

"ಯಾರು?

ಅವನು ಬಾಗಿಲ ಕಡೆಗೆ ಕೈ ತೋರಿ

(ಹಿಂದಿನಿಂದ ಮುಂದೆ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಕಾಲೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

Phone— 5711
5712
5713 } 3 Lines.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೩೯
No. 39

ನವಯುಗ

ಸ್ವಾಮಿಕರು:
ದಿ|| ಎ. ಬಿ. ಶೆಟ್ಟಿರು

ಸಂಪಾದಕರ :
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೩೦—೫—೧೯೬೮

ವೀರ ವೀರೇಂದ್ರ ಪಾಟೀಲ

ಕರ್ನಾಟಕದ ಮುಖ್ಯಮಂತ್ರಿಯಾಗಿ ಬಹಳ ದೀರ್ಘ ಕಾಲ ಅಧಿಕಾರ ಚಲಾಯಿಸಿದ ನಿಜಲಿಂಗಪ್ಪನವರು ಎರಡು ದೋಣಿಗಳಲ್ಲಿ ಕಾಲಿಡುತ್ತ ಇನ್ನೂ ಮುಂದುವರಿಯಲು ಬಯಸಲಿಲ್ಲ. ಎಂತಲೇ ತನ್ನ ನಾಯಕ ಪಟ್ಟಕ್ಕೆ ರಾಜೀನಾಮೆ ಕೊಡಿದರು; ಹೊಸ ನಾಯಕನ ಆಯ್ಕೆಗೊಂದು ಅವಕಾಶ ಮಾಡಿಕೊಟ್ಟರು. ಎಲ್ಲರೂ ನಿರೀಕ್ಷಿಸಿದಂತೆ, ನಾಯಕ ಪಟ್ಟಕ್ಕೆ ಸ್ಪರ್ಧೆಯೂ ತುರಸಿಯಿಂದ ಉಂಟಾಯಿತು. ಶ್ರೀ ನಿಜಲಿಂಗಪ್ಪನವರ ಬಂಟ ವೀರೇಂದ್ರ ಪಾಟೀಲರೂ ಮೊಜಿ ಮುಖ್ಯ ಮಂತ್ರಿ ಹಾಗೂ ಹಾಲಿ ಆಹಾರ ಮಂತ್ರಿ ಬಿ. ಡಿ. ಜತ್ತಿಯವರೂ ನಾಯಕಪದದ ಅಭ್ಯರ್ಥಿಗಳೆಂಬುದು ಎಲ್ಲರಿಗೂ ಆರಂಭದಿಂದಲೇ ಗೊತ್ತು. ಇದರಲ್ಲಿ ಸೋಲು —ಗೇಲುಗಳ ನಿರ್ಧಾರ ಅನಿಶ್ಚಿತವಾಗಿತ್ತು. ಇಕ್ಕಡೆಯವರೂ ತಮ ತಮಗೆ ಬಹುಮತವೆಂಬಂತೆ ಅಂಕೆ—ಸಂಖ್ಯೆಗಳ ಲೆಕ್ಕಾಚಾರಕ್ಕೆ ತೊಡಗಿದರು. ಕೊನೆಗೂ ಪಕ್ಷಾಂತರಗೆನೇ ಒಳ ಮತಗಣನೆ ನಡೆಯಿತು ; ವೀರೇಂದ್ರ ಪಾಟೀಲರು ಅತ್ಯಧಿಕ ಮತಗಳಿಸಿ ಮುಂದೆ ಅವಿರೋಧ ಆಯ್ಕೆಗೊಳ್ಳುವ ಅಭ್ಯರ್ಥಿಯೆನಿಸಿದರು.

ಮುಂದೆ ನಡೆದುದು ಮಾಮೂಲಿ ಕ್ರಮ. ಗೆದ್ದವರನ್ನು ಎಲ್ಲರೂ ಹಾರ—ತುರಾಯಿ—ಹರ್ಷತಿರೇಕದಿಂದ ಅಭಿನಂದಿಸುವುದು—ಸಂಪೂರ್ಣ ಸಹಕಾರದ ದೆಂಬಲ ಕೊಡುವ ಭರವಸೆ ನೀಡುವುದು ಇತ್ಯಾದಿ ಇತ್ಯಾದಿ. ಗೆದ್ದವರ ನುಡಿ—ಸ್ಪರ್ಧೆ ಪ್ರಜಾಪ್ರಭುತ್ವಕ್ಕೆ ಉಚಿತವಾದದ್ದೇ— "ಇದುವರೆಗೆ ನಡೆದುದನ್ನೆಲ್ಲಾ ಮರೆತು ನಿಮ್ಮ ಶಿಶುವೆಂದು ತಿಳಿದು ಎನ್ನ ಕೈಹಿಡಿದು ಮುನ್ನಡೆಸಿ" ಇಷ್ಟು ಸಂಯಮ, ಮಿತಭಾಷೆ ಏನಯ್ಯ. ಆದರೆ, ಇವೆಲ್ಲವೂ ಗೆದ್ದವಂದೆಂಬುದು ಎಲ್ಲರಿಗೂ ಗೊತ್ತು. ಶ್ರೀ ವೀರೇಂದ್ರ ಪಾಟೀಲರ ಗೇಲು ಅಂದರೆ, ಶ್ರೀ ನಿಜಲಿಂಗಪ್ಪನವರ ಹತೋಟಿ ಇನ್ನೂ ಮೈಸೂರು ಪ್ರಾಂತೀಯ ಕಾಂಗ್ರೆಸ್ಸಿನ ಬೀಳಿಯೆಂದರ್ಥ. ಶ್ರೀಯುತರು ಇತ್ತೀಚೆಗೂಂದು ಕಡೆ ಎತನಾಡುವಾಗ, ಶ್ರೀ ರಾಮಕೃಷ್ಣ ಹೆಗ್ಗಡೆಯವಂತಹ ಯುವಕರು ತನ್ನ ಉತ್ತರಾಧಿಕಾರಿಯಾಗಬೇಕೆಂದು ಬಯಸಿದ್ದರು. ಶ್ರೀ ರಾಮಕೃಷ್ಣ ಹೆಗ್ಗಡೆಯವರು ತಿಪಟಾಂದವರಲ್ಲದೇ ಆವರು ನಾಯಕ ಪದಕ್ಕೆ ಬಂದಂತೆ ತಡೆಯುವಷ್ಟು ಇದುವರೆಗೂ ಮಹತ್ವದ ಪಾತ್ರವಹಿಸಿತ್ತು—ಎಂಬುದನ್ನು ಎಲ್ಲರೂ ಬಲ್ಲರು. ಶ್ರೀ ಪಾಟೀಲರಿಗೆ ಎಲ್ಲ ಅರ್ಹತೆಗಳೂ ಇವೆ. ಶ್ರೀ ನಿಜಲಿಂಗಪ್ಪನವರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾದವರು; ಮಂತ್ರಿಯಾಗಿ ತಂಬ ಅನುಭವವಿರುವವರು, ಯುವಕರೂ ಹೌದು. ಕಾಂಗ್ರೆಸ್ ಪಕ್ಷದಲ್ಲಿ ತಮ್ಮ ಪ್ರಭಾವವನ್ನು ಉಳಿಸಿ ಐಕ್ಯ ಸೂತ್ರದಲ್ಲಿ ಬಂಧಿಸಿಯೇ ವರ್ತಿಸಿ ಯಲು ಶಕ್ತ ಗುಣಗಳೂ ಇವೆ. ಎಲ್ಲಕ್ಕಿಂತ ಮುಖ್ಯವಾಗಿ ಶ್ರೀ ನಿಜಲಿಂಗಪ್ಪನವರು ಇಟ್ಟ ಹೆಜ್ಜೆಯ ಮೇಲೆಯೇ ಹೆಜ್ಜೆಯಿಡುವ ಮುಖ್ಯಮಂತ್ರಿಯವರಾಗುವುದು ಕಂಡಿತ. ಹಾಗಾಗಿ ಸರಕಾರದ ಕಾರ್ಯಕಲಾಪಗಳು, ನೀತಿ-ಧೋರಣೆಗಳು ಇದೇ ರೀತಿಯಾಗಿ ಮುಂದುವರಿಯುವುದು ಖಂಡಿತವೆ. ಸುಮಾರು ೧೫ ವರ್ಷಗಳ ಕಾಲ ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸಿರುವ ಶ್ರೀ ಪಾಟೀಲರಿಗಿನ್ನೂ ೪೪ ವರ್ಷ ಪ್ರಾಯ. ರಾಜಕಾರಣಿಗಳ ಭಾಷೆಯಲ್ಲಿ ಹೇಳುವುದಾದರೆ, ಇವರು ಇನ್ನೂ ತೀರ ಯುವಕರು—ಬಿಸಿ ರಕ್ತದವರು. ಪ್ರದರ್ಶನಪ್ರಿಯರಲ್ಲದ ಶ್ರೀ ಪಾಟೀಲರು ಉತ್ತಮ ಕಾರ್ಯಕರ್ತರ ; ಕೃತಿಶೀಲರ . ತಾವು ರಾಜ್ಯದ ದೇರೆದೇರೆ ಹುದ್ದೆಗಳಲ್ಲಿರುವಾಗ ತನ್ನ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ಅವರದ್ದು.

ಪರಸ್ಪರ ಕಚ್ಚಾಟದಿಂದ ಛಿದ್ರಛಿದ್ರವಾಗಿದ್ದ ಕರ್ನಾಟಕದ ಕಾಂಗ್ರೆಸ್ಸಿನಲ್ಲಿ ಇತ್ತೀಚೆಗಿನ ಎಳೆಂಟು ವರ್ಷಗಳಿಂದ ಒಂದು ಬಗೆಯ ಐಕ್ಯ ಮೂಡಿದೆ. ಇದಕ್ಕೆ ಶ್ರೀ ನಿಜಲಿಂಗಪ್ಪನವರೇ ಕಾರಣನೆಂದು ಹೇಳಬಹುದು. ಈ ಐಕ್ಯಭಾವನೆ ರಾಜ್ಯದ ಹಿತದೃಷ್ಟಿಯಿಂದ ಪೂರ್ತವಲ್ಲ, ದೇಶದ ಹಿತರಕ್ಷಣೆಗೂ ಅತ್ಯಗತ್ಯವಾದುದು. ಆದುದರಿಂದ ಇದನ್ನು ಉಳಿಸಿಕೊಂಡು ಹೋಗುವುದೂ ಅಗತ್ಯ. ಶ್ರೀ ಪಾಟೀಲರು ತನ್ನ ಹೊಸ ಹೊಣೆಗಾರಿಕೆಯನ್ನು ನಿರ್ವಹಿಸಿ ಸೂತ್ರವಾಗಿ ರಾಜ್ಯವನ್ನು ಮುನ್ನಡೆಸುವರೆಂದು ಎಲ್ಲರ ಆಶಯ . ಅವರ—ಅವರ ಸರಕಾರದ ಎಲ್ಲ ಒಳ್ಳೆಯಕಾರ್ಯಗಳಿಗೂ ಜನತೆಯ ಬೆಂಬಲವಿದ್ದೇ ಇದೆ. ಶ್ರೀ ಪಾಟೀಲರು ತಮ್ಮ ಸಹೋದ್ಯೋಗಿಗಳನ್ನು ಇಷ್ಟರಲ್ಲೇ ಆಯಸಿಕೊಂಡಿದ್ದಾರೆ—ಕೆಲವರನ್ನು ಮುಂದೆ ಆಯಸಿಕೊಳ್ಳಲೂ ಬಹುದು—ಆದರೆ, ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಳದಂತೆಯೇ ಇದು ವಿಸ್ತೃತ ಕಳೆಯದಿರುವುದೂ ಬಹುದು— ಎಲ್ಲ ಹಿತಾಸಕ್ತಿಗಳಿಗೂ ಪ್ರಾತಿನಿಧ್ಯ ದೊರೆಯಬಹುದು. ಹೀಗೆ ಮಾಡಿಯೇ ಶ್ರೀ ನಿಜಲಿಂಗಪ್ಪನವರು ಐಕ್ಯ ಸಾಧನೆಯಲ್ಲಿ ಯಶಸ್ವಿಯಾಗಿದ್ದಾರೆ. ರಾಜ್ಯದ ಹಿತದೃಷ್ಟಿಯ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರನ್ನು ಸ್ವಾಗತಿಸಿ, ಅವರು ತನ್ನ ಸಹೋದ್ಯೋಗಿಗಳೊಡನೆ ರಾಜ್ಯಕ್ಕೆ ನಿಷ್ಠಕ್ಷಪಾತ ಆಡಳಿತ ಒದಗಿಸುವಲ್ಲಿ ನಿರತರಾಗಲಿ, ಯಶಗಳಳಲಿಯೆಂದು ನಾವು ಹಾರೈಸುತ್ತೇವೆ.

ದಮ್ಮಿಲ್ಲದ ಡಿಗಾಲೆ

ಹಲವು ಸರಕಾರದ ಆಡಳಿತದಿಂದ ಬೆಡುಗಡೆ ಹೊಂದಿದ ಮೈಸೂರು ಅಧ್ಯಕ್ಷ ಡಿಗಾಲರ (ಸರ್ವಾಧಿಕಾರಿ) ಆಡಳಿತವಲ್ಲಿ ಒಂದು ಬಗೆಯ ತೃಪ್ತಿ ಹೊಂದಿತ್ತು. ಡಿಗಾಲರು ಮೈಸೂರ ಅಸಭಿಕ್ಷ ದೊರೆಯಾಗಿಯೇ ಸುಮಾರು ಹತ್ತು ವರ್ಷಗಳ ಆಡಳಿತ ನಡೆಸಿದರು. ಆದರಿಂದವರು ದೇಶದಲ್ಲಿ ಪ್ರಬಲ ವಿರೋಧವನ್ನೆದುರಿಸಬೇಕಾಗಿ ಬಂದಿದೆ. ಪ್ಯಾರಿಸ್ ನಗರವೀಗ ವಿದ್ಯಾರ್ಥಿ ಚಳುವಳಿಗಳ ನಗರವಾಗಿದೆ. ಡಿಗಾಲೆ ಎವರನ್ನು ಅಧಿಕಾರಗದ್ದುಗೆಯಿಂದ ಇಳಿಸುವ ದೃಢಸಂಕಲ್ಪವನ್ನು ಅಲ್ಲಿನ ವಿದ್ಯಾರ್ಥಿಗಳು ಮಾಡಿದ್ದಾರೆಂದು ಭಾರಿ ಸದ್ದು. ಇಂಡೋನೇಶ್ಯದಲ್ಲಿ ಅಧ್ಯಕ್ಷ ಸುಕರ್ಣರ ವಿರುದ್ಧ ಬಂಡೇಳುವಲ್ಲಿ ಮುಂದ ದ ಅಲ್ಲಿನ ವಿದ್ಯಾರ್ಥಿಗಳು ಕೊನೆಗೂ ತಮ್ಮ ಉದ್ದೇಶ ಸಾಧನೆಯಲ್ಲಿ ಯಶಗಳಿಸಿದ್ದನ್ನು ನಾವಿಲ್ಲಿ ನೆನೆಸುಕೊಳ್ಳಬಹುದು. ಭಾರತದ್ಯಾಯೂ ಅಲ್ಲಿ ಮಾಡಗಳಿಗೆ ಮೊದಲು ವಿದ್ಯಾರ್ಥಿಗಳ ಇಂಗ್ಲಿಷ್—ಹಿಂದೀಗಳ ವಿರುದ್ಧ ಬಂಡಾಟಕ್ಕೆ ತೊಡಗಿದಾಗ ಇಂಡೋನೇಶ್ಯದ ಘಟನೆಗಳು ಇಲ್ಲಿಯೂ ಪುನರಾವರ್ತನೆಗೊಳ್ಳಬಹುದೆಂಬ ಅಂಜಿಕೆ ಮೂಡಿದ್ದಂತು. ವಿದ್ಯಾರ್ಥಿನಾಯಕರೆನ್ನಿಸಿಕೊಂಡವರೂ ಇಂತಹ ಮಾತುಗಳನ್ನಾಡಿದ್ದುಂಟು. ಆದರೆ, ಕೇಂದ್ರ-ರಾಜ್ಯ ಸರಕಾರಗಳ ದೃಢ ಫಲ ವೆಯಿಂದ—ಮದ್ರಾಸ ಮಾತ್ರ ಇದಕ್ಕೆ ಹೊರತು— ಅಂತಹ ಅನಾಹುತ ನಡೆಯಲಿಲ್ಲ. ಪ್ಯಾರಿಸ್ ನಗರದಲ್ಲಿ ಕಾರ್ಮಿಕರು, ಝಾಡಮಾರಿಗಳ, ವಿದ್ಯಾರ್ಥಿಗಳು, ರೈತಜನರು—ಹೀಗೆ ಎಲ್ಲರೂ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಅಧ್ಯಕ್ಷ ಡಿಗಾಲೆಯವರು ತಮ್ಮ ಸಚಿವ ಸಂಪುಟದೊಡನೆ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಚರ್ಚಿಸುತ್ತಿದ್ದಾರೆ. ವಿಧ್ಯಾವಧಿ ಮತಗಣನೆಯೇ ಈ ಬಗೆಯ ಬಿಕ್ಕಟ್ಟಿಗೆ ಸರಿಯಾದ ಕಾರಣೋಪಾಯವಾಗಬಹುದೆ? ಆದರೆ, ಇವರಲ್ಲಿ ಡಿಗಾಲೆಯವರು ಗೆದ್ದ ಬಹುದೆಂಬ ವಿಶ್ವಾಸವಿಲ್ಲವಂತೆ! ಆದುದರಿಂದ ಈ ಚಳುವಳಿಯನ್ನು ಹತ್ತಿಕ್ಕಿ ತನ್ನ ವೀರ ಭದ್ರಗೊಳಿಸುವಲ್ಲಿಯೇ ಡಿಗಾಲೆ ನಿರತರಾದರೆ ಆಚ್ಚರಿಯಿಲ್ಲ. ಆದರೆ, ಈ ಪ್ರಯತ್ನದಲ್ಲಿ ಅವರು ಯಶಸ್ವಿಯಾಗುವರೇ?

> **ವಚನ ಸುಧೆ**
>
> ಹಂಚಿ ಹಸ್ತನೆತೇ ಹಂತಿ
> ದಶ ಹಂತಿಗವಾನ್ನತೇ ॥
> ಶತಮಂಶ್ವನ್ನತೇ ಹಂತಿ
> ಸಹಸ್ರಂ ಪುರುಷಾನ್ನತ ॥
>
> ಒಂದು ಪಶುವಿನಾಗಿ ಸುಳ್ಳಾಡಿದರೆ ಐದು ತಲೆಮಾರು, ದನಕ್ಕಾಗಿ ಸುಳ್ಳಾಡಿದರೆ ಹತ್ತು ತಲೆಮಾರು, ಕುದುರೆಗಾಗಿ ಸುಳ್ಳಾಡಿದರೆ, ನೂರು ತಲೆಮಾರು ಮತ್ತು ಮನುಷ್ಯನಿಗಾಗಿ ಸುಳ್ಳಾಡಿದರೆ ಸಾವಿರ ತಲೆಮಾರುಗಳು ನರಕವಾಸದಲ್ಲಿ ಕಳೆಯಬೇಕಾಗುವುದು.

ಚಂದಾದಾರರು

ತಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯವಾಡಿ ಮನಿಆರ್ಡರ್‌ರು ಮಾಡಿ ಕಳುಹಿಸಿಕೊಡುವಂತೆ ವಿನಂತಿಸುತ್ತೇವೆ.

—ಮೆನೇಜರ್, ನವಯುಗ.

ಶಾಲಾ ಕಟ್ಟಡದ ಉದ್ಘಾಟನೆ

ಉಡುಪಿ ತಾಲೂಕಿನ ಜನಸಾಮಾನ್ಯರು ಕಟ್ಟಿ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಗೆ ಶ್ರೀಮತಿ ಪಿ. ಲೀಲಾ ಬಾಯಿಯವರು ಸುಮಾರು ಇಪ್ಪತ್ತು ಸಹಸ್ರರೂಪಾಯಿಗಳ ವೆಚ್ಚದಿಂದ ಉದಾರವಾಗಿ ಕಟ್ಟಿಸಿಕೊಟ್ಟ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ. ೨೩ ರಂದು ದ. ಕ. ಜಿಲ್ಲಾ ಬೋರ್ಡ್ ಶಾಲೆಗಳ ಆಡಳಿತಾಧಿಕಾರಿ ಶ್ರೀ ಯು. ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಪಿ. ಕೃಷ್ಣಪ್ಪ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಶ್ರೀನಿವಾಸ ಶೆಟ್ಟಿ, ಎಂ ಎಲ್. ಸಿ., ಅವರು ಕಟ್ಟಡ ಉದ್ಘಾಟನೆಯನ್ನು ಮಾಡಿದರು. ಶ್ರೀ ಪಿ. ಆನಂದಹೆಗ್ಗಡೆ ಹೆಗ್ಗಡೆಯವರು ಶ್ರೀಮತಿ ಲೀಲಾ ಬಾಯಿಯವರ ಔದಾರ್ಯ ದಾನಕ್ಕಾಗಿ ಅವರನ್ನು ಅಭಿನಂದಿಸಿದರು. ಶಾಲೆಗಳ ಪರೀಕ್ಷಾಧಿಕಾರಿಗಳಾದ ಶ್ರೀ ಶ್ರೀಪತಿ ರಾವ್ ಪಲಿಮಾರ್‌ಕಾರರು ಭಾಷಣ ಮಾಡಿದ ಬಳಿಕ ಶ್ರೀ ಯು. ಶಿವರಾಮಗೌಡರು ಮಾತನಾಡುತ್ತಾ ಶ್ರೀಮತಿ ಲೀಲಾಬಾಯಿಯವರನ್ನು ಅಭಿನಂದಿಸಿ ಕೊಡುಗೆಗಾಗಿ ವಂದಿಸಿ ಆಡಳಿತದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಅದೇ ದಿನ ಸಾಜೆ ಶ್ರೀ ಶ್ರೀಪತಿ ರಾವ್ ಪಲಿಮಾರ್‌ಕಾರರ ಅಧ್ಯಕ್ಷತೆಯಲ್ಲಿ ಶಾಲಾ ವಾರ್ಷಿಕೋತ್ಸವವು ಜರಗಿತು.

ನರಸಣ್ಣನ ಕರಸ

'ದಿಪಲಿಯಲ್ಲಿ ಮೋಸದ ಮಾಸ್ಟರ್‌ರ್ ಜರಕೊಡಗಡೆಸುಂತೆ ... ಬೇಗ ನೋಡ ದೇ ಇರಬಹುದೋ ಏನೋ...'

ಮುಖಚಿತ್ರ
ಈ ಚಲಚಿತ್ರ ತಾರೆ
ಯಾರೆಂದು ಬಲ್ಲಿರಾ?

ಮೂಲ್ಕಿಯ ಸಾವಂತ ಅರಸರು

ಲೇಖಕರು: ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಪೀಠಿಕೆ:- ತುಳುನಾಡಿನ ಕೇಂದ್ರ ಪ್ರದೇಶದಲ್ಲಿರುವ ಮೂಲ್ಕಿಯು ತುಳುನಾಡಿನ ಇತಿಹಾಸದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದೆ. ದಂತ ಕಥೆಯೊಂದರ ಪ್ರಕಾರ ಪರಶುರಾಮನಿಗೆ ಪೊರ್ಟುಗೀಸರಿಗೆ ಹೆದರಿ ತಾನು ಇಲ್ಲಿಯ ಪ್ರಕೃತಿ ಸೌಂದರ್ಯವನ್ನು ನೋಡಿ ಲಂಕೆಯೆಂದು ಭ್ರಮಿಸಿ ತಪ್ಪಿ ಇಳಿದಿದ್ದರಿಂದ ಇದನ್ನು ಒಳಲಂಕೆಯೆಂದು ಕರೆಯುತ್ತಾರೆ. ಶಾಸನಗಳಲ್ಲಿ ಇದನ್ನು ಮೂಲಿಕಾಪುರವೆನ್ನುತ್ತಾರೆ. ಈ ಮೂಲಿಕಾಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಸಾವಂತರು ಹದಿನಾಲ್ಕನೆ ಶತಮಾನದ ವರೆಗೆ ಆಳಿದ್ದರು. ಅವರ ರಾಜ್ಯವು ಮೂಲ್ಕಿಯ ಹೊಳೆಯಿಂದ ಪಾವಂಜೆ ಹೊಳೆ ವರೆಗೂ ಪಶ್ಚಿಮದಲ್ಲಿ ಸಮುದ್ರದ ವರೆಗೂ ಪೂರ್ವದಲ್ಲಿ ಚಾಟ ಅರಸರ ಸೀಮೆ ವರೆಗೂ ಹಬ್ಬಿತ್ತು. ತುಳುನಾಡಿನಲ್ಲಿ ಸಾವಂತರ ವಿಚಾರ ಉಲ್ಲೇಖಿಸುವ ಮೊದಲು ನಗರದ ಶಾಸನದಲ್ಲಿ ಅವರ ವಿಚಾರ ಉಲ್ಲೇಖವಿದ್ದುದರಿಂದಲೂ ವತ್ತು ಗಿಳಿಯರ 'ಸೊರಬ' ಶಾಸನವು ಸಾವಂತರ ವಿಚಾರ ಉಲ್ಲೇಖಿಸುವುದರಿಂದಲೂ ಸಾವಂತರು ನಗರಿಂದ ಮೂಲ್ಕಿಗೆ ವಲಸೆ ಬಂದರೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಈ ಸಾವಂತರು ಮತದಿಂದ ಜೈನರು. ಈ ಅರಸರ ಪಟ್ಟ ಕ್ರಿ. ಶ. ೧೬೭೦ರ ವರೆಗೆ ಆಳಿದ ಸಂತಾನವಾಗಿತ್ತು. ಈ ಅರಸರು ತಾವು ಜಿನದತ್ತರಾಯನ ವಂಶವರೆಂತಲೂ, ಪಂಡಿತಾಚಾರ್ಯಕೀರ್ತಿಯ ಶಿಷ್ಯರೆಂತಲೂ ಹೇಳಿಕೊಳ್ಳುತ್ತಾರೆ. ಇವರಿಗೆ ಪಟ್ಟವಾಗುವುದು ಶಿವಮಂತಕಾರು ದೇವಸ್ಥಾನದಲ್ಲಿ. ಇವರಿಗೆ ಪಟ್ಟ ಕಟ್ಟುವವರು "ಗುರುರಾಯ ಭಟ್ಟರ" ಮನೆಯವರು. ಈ ಅರಸರು ಮೊದಲು ವಿಜಯನಗರದ ಅರಸರಿಗೆ ಕಪ್ಪಕೊಡುತಿದ್ದರು. ಮೊದಲು ಇವರ ರಾಜಧಾನಿ ಮೂಲ್ಕಿಯಿಂದ ಒಂದೂವರೆ ಮೈಲು ಪೂರ್ವಕ್ಕಿರುವ ಸೀಮಂತರು ಆಗಿತ್ತು. ಇಲ್ಲಿನ ದೇವರಾದ ಜನಾರ್ಧನ ಸ್ವಾಮಿ ಇವರ ಕುಲದೇವತೆ ಆಗಿದ್ದರು. ಈ ದೇವರ ಸಮಕ್ಷಮದಲ್ಲಿ ಈ ಅರಸರು ಪಟ್ಟವೇರುತಿದ್ದರು. ಇಲ್ಲಿ ಇವರು ಭವ್ಯ ಅರಮನೆಯನ್ನು ಮತ್ತು ಜೈನ ಬಸದಿಗಳನ್ನು ಕಟ್ಟಿಸಿದ್ದರು. ಇವರಿಗೂ ಮೂಡಬಿದ್ರೆಯ ಚಾಟ ಅರಸರಿಗೂ ಆಗಿಂದಾಗ್ಗೆ ಯುದ್ಧವಾಗುತಿದ್ದುವು, ಒಮ್ಮೆ ಈ ಯುದ್ಧದಲ್ಲಿ ಚಾಟರು ಸಾವಂತರನ್ನು ಸೋಲಿಸಿ ಅವರ ಅರಮನೆಯನ್ನು ಧ್ವಂಸ ಮಾಡಿದ್ದರು. ಇದರಿಂದಾಗಿ ಸಾವಂತರು ಸೀಮಂತರನ್ನು ಬಿಟ್ಟು ಮೂಲ್ಕಿಯ ಕೋಟೆಕೇರಿಗೆ ಬಂದು ನೆಲೆಸಿದರು. ಇಲ್ಲಿ ಇವರು ಅರಮನೆಯನ್ನೂ ಚಂದ್ರನಾಥ ಬಸದಿಯನ್ನೂ ಹಾಗೂ ಮಾನಸ್ತಂಭ ಮತ್ತು ಹನುಮನ ದೇವಸ್ಥಾನವನ್ನು ಕಟ್ಟಿಸಿದ್ದರು. ಈ ಅರಸರು ಕೋಟೆಕೇರಿಯಲ್ಲಿರುವಾಗ ಮೂಲ್ಕಿಯು ತುಳು ನಾಡಿನಲ್ಲಿ ಪ್ರಮುಖವ್ಯಾಪಾರಕೇಂದ್ರವಾಗಿತ್ತು. ಆಕ್ಕ ಪಕ್ಕದ ರಾಜರುಗಳು ನೌಕೆಯಲ್ಲಿ ಮೂಲ್ಕಿಗೆ ಬಂದು ವ್ಯಾಪಾರವನ್ನು ನಡೆಸುತಿದ್ದರು. ಕಂಫಿಗ II ಸಾವಂತನು ಆಳುವ ಕಾಲದಲ್ಲಿ ೧೪೮೮ ಗೋವೆಯಿಂದ ಗೌಡ ಸಾರಸ್ವತರು ಪೋರ್ತುಗೀಸರ ಬಾಧೆಯನ್ನು ತಾಳಲಾರದೆ ಇಲ್ಲಿಗೆ ಬಂದರು. ಇವರಿಗೆ ಸಾವಂತ ಅರಸರು ಆಶ್ರಯವನ್ನು ಕೊಟ್ಟದಲ್ಲದೆ ಪೂರ್ವ ದಿಕ್ಕಿಗಿರುವ ಕಾರ್ಯಸ್ಥಳದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಕೊಟ್ಟರು. ಒಳಲಂಕೆಯ ಅರಮನೆಯಿಂದ ನರಸಿಂಹ ದೇವರ ಪ್ರತಿಮೆಯನ್ನು ಮಾಡಿಕೊಟ್ಟ ಮೂಲ್ಕಿ ದೇವಸ್ಥಾನದಲ್ಲಿ ಸ್ಥಾಪಿಸಿ ಎಲ್ಲಾ ತರದ ಪಡಾಯ ವನ್ನು ಸಾವಂತರು ಮಾಡಿದ್ದರೆಂದು ಶ್ರೀಯುತ ಗಣಪತ ರಾವು ಐಗಳು ತಮ್ಮ "ಮುಕ್ತಿಕವಾದ"ದಕ್ಷಿಣ ಕನ್ನಡ ಜಿಲ್ಲೆ' ಇತಿಹಾಸದಲ್ಲಿ ಬರೆದಿರುತ್ತಾರೆ. ವೆಂಕಟ್ರಮಣ ದೇವಸ್ಥಾನದಲ್ಲಿರುವ ಉಗ್ರ ನರಸಿಂಹ ವಿಗ್ರಹವು ಮೊಳಲು ವಿಜಯನಗರ ದೇವಸ್ಥಾನದಲ್ಲಿ ಇತ್ತು ಎಂದೂ ಅದನ್ನು ಕಾಶಿಮಠ ಸಂಸ್ಥಾನದ ಶಾಂತಾ ವಿಜಯೇಂದ್ರ ತೀರ್ಥಸ್ವಾಮಿಯವರು ಕ್ರಿ. ಶ. ೧೬೯೧ರಲ್ಲಿ ಪ್ರತಿಷ್ಠಿಸಿದ್ದೆಂತಲೂ ಇಲ್ಲಿನ ಜನರಲ್ಲಿ ಪ್ರತೀತಿ ಇದೆ. ಒಟ್ಟಿನಲ್ಲಿ ಸಾವಂತ ಅರಸರು ಮೂಲ್ಕಿ ವೆಂಕಟ್ರಮಣ ದೇವಸ್ಥಾನವನ್ನು ಪ್ರೋತ್ಸಾಹಿಸಿದ್ದರೆಂದರೆ ತಪ್ಪಾಗಲಿಕ್ಕಿಲ್ಲ. ಗೌಡ ಸಾರಸ್ವತ ಬ್ರಾಹ್ಮಣರಿಗೆ ಆಶ್ರಯ ಕೊಟ್ಟುದರ ಪರಿಣಾಮವಾಗಿ ಪೋರ್ತುಗೀಸರು ಆಗಿಂದಾಗ್ಗೆ ಬಂದು ಮೂಲ್ಕಿ ಸಾವಂತ ಅರಸರನ್ನು ಪೀಡಿಸುತ್ತಿದ್ದರು. ಹಲವಾರು ಸಲ ಮೂಲ್ಕಿ ಸಾವಂತ ಅರಸರು ಅವರ ಆಕ್ರಮಣವನ್ನು ತಡೆಗಟ್ಟುವಲ್ಲಿ ಸಮರ್ಥರಾದರು. ಇದೇ ಸಮಯದಲ್ಲಿ ಅವರ ನೆರೆಯವರಾದ ಚಾಟರ ಆಕ್ರಮಣವನ್ನು ಎದುರಿಸಬೇಕಾಗಿ ಬಂತು. ಇಷ್ಟೆಲ್ಲಾ ಕಾರಣದಿಂದಾಗಿ ಇವರು ತಮ್ಮ ರಾಜಧಾನಿಯನ್ನು ಪಡುಪಣಂಬೂರಿಗೆ ವರ್ಗಾಯಿಸಿದರು. ಇಲ್ಲಿ ಇವರು ಅರಮನೆಯನ್ನೂ ಅನಂತತೀರ್ಥೇಶ್ವರ, ಚಂದ್ರನಾಥ, ಪಾರ್ಶ್ವನಾಥ ಮೊದಲಾದ ಜೈನ ಬಸದಿಗಳನ್ನೂ ಮತ್ತು ಆ ಜೈನ ಬಸದಿಗಳ ಮುಂಗಡೆ ಮಾನಸ್ತಂಭಗಳನ್ನೂ ಸ್ಥಾಪಿಸಿದರು. ಇವರ ರಾಜಧಾನಿಪಡುಪಣಂಬೂರಿನಲ್ಲಿರುವಾಗ ಈ ಅರಸರು ಇಕ್ಕೇರಿ ಅರಸರಿಗೆ ಕಪ್ಪವನ್ನು ಕೊಡುತ್ತಿದ್ದರು. ಕ್ರಿ.ಶ. ೧೬೦೮ರಲ್ಲಿ ಇಕ್ಕೇರಿಯ ವೆಂಕಟಪ್ಪ ನಾಯಕನು(೧೬೮೨-೧೬೩೦) ವಂಶಲ್ಲಿಗೆ ಅಗಮಿಸಿ ಇಲ್ಲಿಯ ಅರಸನೇ ದುಗ್ಗಣ್ಣ ಸಾವಂತನೊಡನೆ (೧೬೦೦-೪೦) ಒಪ್ಪಂದ ಮಾಡಿಕೊಂಡನು. ವೆಂಕಟಪ್ಪ ನಾಯಕನು ಮೂಲ್ಕಿಯ ಕೋಟೆಕೇರಿಯಲ್ಲಿ ಕೋಟೆಯನ್ನು ಕಟ್ಟಿಸಿದರು. ತುಳು ಜೈನರಾಜರು ಕೊಡಬೇಕಾದ ಕಪ್ಪವನ್ನು ಸೇರಿಸಿ ಒಂದರಷ್ಟು ವಿಧಿಸಿದನು. ಈ ಕಾಲದಲ್ಲಿ ಕೂಡಾ ಸಾವಂತ ಅರಸರು ಪೋರ್ತುಗೀಸರ ಉರಟಳವನ್ನು ಸಹಿಸಬೇಕಾಗಿ ಬಂತು. ಕೊನೆಗೆ ಈ ಅರಸರು ಪೋರ್ತುಗೀಸರಿಂದ ತಮ್ಮ ಪ್ರಜೆಗಳಿಗೆ ಬಾಧೆ ಬರದ ಹಾಗೆ ವರ್ಷಕ್ಕೆ ಲಂಗಮುಡಿ ಅಕ್ಕಿಯನ್ನು ಪೋರ್ತುಗೀಸರಿಗೆ ಕೊಟ್ಟ ಅವರ ಹಾವಳಿಯನ್ನು ಕಡಿಮೆಮಾಡಿದರು.

ಇಲ್ಲಿ ಆಳಿದ ದುಗ್ಗಣ್ಣ II ಸಾವಂತನು "ಜಿನಜನ ಚಿಂತಾಮಣಿ ಭವ್ಯ ಶಿರೋಮಣಿ" ಎಂಬ ಬಿರುದುಗಳನ್ನು ಧರಿಸಿದ್ದನೆಂದು ಪಡುಪಣಂಬೂರು ಶಾಸನವು ತಿಳಿಸುತ್ತದೆ. ಇದರಿಂದ ಇವನು ಜೈನಮತಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದನೆಂದರೆ ತಪ್ಪಾಗಲಾರದು. ಇಲ್ಲಿ ಆಳಿದ ಇನ್ನೊಬ್ಬ ಸಾವಂತ ಅರಸ ತಿರುಮಲೇಂದ್ರನು ಕವಿಗಳನ್ನು ಪ್ರೋತ್ಸಾಹಿಸಿದ್ದನು. ಇವನ ಆಸ್ಥಾನದಲ್ಲಿ ಸದ್ಭಾವಭಂಜ ಕವಿ ಇದ್ದಿದ್ದನು. ಇವನು ಸಾವಂತರ ಕುಲದೇವಿ ಜೈನ ದೇವತೆಯಾದ 'ಪದ್ಮಾವತಿ ಚಂತ್ರೆ' ಎಂಬ ಚಲೋದೊಂದು ಕನ್ನಡ ಕಾವ್ಯವನ್ನು ರಚಿಸಿದನು. ಇವನ ನಂತರ ಪಟ್ಟಕ್ಕೆಬಂದ ಚೆನ್ನಮ್ಮಾಜಿಯು ಅನಂತತೀರ್ಥ ಸ್ವಾಮಿಯ ಬಸದಿಗೆ ಧಾರೇ ಬಂಳಿಯಷ್ಟು ಬಿಟ್ಟಿದ್ದಳು. ಇವಳ ನಂತರ ಇವಳ ಮಗ ಚೆನ್ನಿಗ ಸಾವಂತನು ಹೈದರಾಲಿಯ ಉದಯದ ವರೆಗೆ ಆಳಿದ್ದನು. ಹದಿನೆಂಟನೆ ಶತಮಾನದ ಉತ್ತರಾರ್ಧದಲ್ಲಿ ಹೈದರಾಲಿಯು ಸಾವಂತರನ್ನು ಸೋಲಿಸಿ ಅವರ ರಾಜ್ಯವನ್ನು ವಶಪಡಿಸಿಕೊಂಡು ಅ ರಾಜವಂಶದವರಿಗೆ ವರ್ಷಾಸನವನ್ನು ಕೊಟ್ಟನು.

ರಾಜ್ಯಭಾರ ಕ್ರಮ:—ಈ ಅರಸರು ಇತರ ತುಳು ರಾಜರಂತೆ ಆಡಳಿತ ಅನುಕೂಲಕ್ಕಾಗಿ ತಮ್ಮ ರಾಜ್ಯವನ್ನು ಅನೇಕ ಮಡಿಹೆಗಳಾಗಿ ವಿಭಜಿಸಿ ಪ್ರತಿ ಮಾಗಣೆಗೆ ಒಬ್ಬಾಳರನ್ನು ಸೇವಿಸಿ ಆಳುತಿದ್ದರು. ಈ ರಾಜ್ಯಕ್ಕೆ ವಕಳ್, ಅತ್ತೂರು, ಕೂಡೆತ್ತೂರು, ಪಂಚಿ, ಒಳಲಂಕೆ, ಕಾನಾರ್ಪಾಡು, ಕುಚಿ ಊರು, ಬಪ್ಪನಾಡು ಮತ್ತು ತಾಳಿಪಾಡಿ ಮಲೆಂಬ ಒಂಭತ್ತು ಮಾಗಣೆಗಳಿದ್ದವು. ಈ ಅರಸರು ಕನಾರ್ಟಕ ಚಕ್ರವರ್ತಿಗಳ ರಾಜನೀತಿಯನ್ನು ಪಾಲಿಸುತಿದ್ದರು. ರಾಜ್ಯದಲ್ಲಿ ಧರ್ಮ ಪರಿಪಾಲನೆಗೂ, ಆಡಳಿತ ವ್ಯವಸ್ಥೆಗೂ, ನ್ಯಾಯ ಪರಿಪಾಲನೆಗೂ ಮತ್ತು ವ್ಯಾಪಾರ ಅಭಿವೃದ್ಧಿಗೂ ಹೆಚ್ಚಿನ ಗಮನ ಕೊಟ್ಟಿದ್ದರು.

(ಒಂಭತ್ತನೇ ಪುಟ ನೋಡಿರಿ)

ರಾಷ್ಟ್ರಕ್ಕೆ ಅನ್ನದಾತನಾದ ಅನುಭವಸ್ಥ ರೈತನ ಪ್ರಥಮ ಆಯ್ಕೆಯ
ಜವಾಹರ ಸ್ಟೆಂಡರ್ಡ್ ಡಿಸೆಲ್ ಇಂಜಿನುಗಳು ಮತ್ತು ಪಂಪು ಸೆಟ್ಟುಗಳು
ಸರ್ವ ವಿಧದಿಂದಲೂ ರೈತರ ಭಾಗ್ಯವಿಧಿಯಾಗಿಸಿ
ದೇಶವಿಖ್ಯಾತವಾದ
ಜೀಕೊ ಇಲೆಕ್ಟ್ರಿಕ್ ಮೋಟಾರುಗಳು, ಮೊನೊಬ್ಲಾಕುಗಳು ಮತ್ತು ಪಂಪುಗಳು
ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು—
ವಿಕ್ಟರ್ ಟ್ರೇಡಿಂಗ್ ಕೊರ್ಪರೇಶನ್
ಫಳನೀರ್, ಮಂಗಳೂರು - 1
ವೀಗಲ್ ಪೆಟ್ರೋಲ್ ಕೆರೊಸಿನ್ ಇಂಜಿನುಗಳಿಗೆ
ಮೈಸೂರು ರಾಜ್ಯಕ್ಕೆ ಹಂಚಿಕೆದಾರರು

ಭಾಷಾ ಸಮಸ್ಯೆ ಹಾಗೂ ಪರಿಹಾರ

ಲೇಖಕರು : ಶ್ರೀ "ರಾಷ್ಟ್ರಮೂರ್ತಿ"

ಅಸ್ವಾತಂತ್ರ್ಯದಿಂದ ತೊಳಲಾಡುತ್ತಿದ್ದ ಬಡ ಭಾರತ ದೇಶವು ಸ್ವಾತಂತ್ರ್ಯವನ್ನು ಪಡೆಯಿತು. ಸ್ವಾತಂತ್ರ್ಯವನ್ನು ಪಡೆಯುವ ಮೊದಲು ಭಾರತವು ಅನೇಕ ಕನಸುಗಳನ್ನು ಕಾಣುತ್ತಿತ್ತು. ಆ ಕನಸುಗಳಲ್ಲಿ ಹೆಚ್ಚಿನೆಲ್ಲಾ ಕನಸುಗಳು ಕನಸಾಗಿಯೇ ಉಳಿದಿವೆ. ಆ ಕನಸುಗಳು ಯಾವಾಗ ನನಸಾಗಿ ಪರಿಣಮಿಸುವವೊ?

ಒಂದು ದೇಶವು ಸ್ವಾತಂತ್ರ್ಯವನ್ನು ಪಡೆದೊಡನೇ ದೊಡ್ಡ ದೇಶವಾಗಲು ಅಸಾಧ್ಯ. ಅದರ ಕಾರ್ಯವು ಮತ್ತೆ ನಡೆಯ ಬೇಕಾಗಿದೆ. ನಮ್ಮ ದೇಶವು ಸ್ವತಂತ್ರವಾಗಿದೆಯೆಂಬುದನ್ನು ಬರೆ ಬಾಯಿಯಲ್ಲೇ ಹೇಳಿದರೆ ಸಾಲದು, ಕಾರ್ಯರೂಪದಲ್ಲಿ ತೋರಿಸಿಕೊಡಬೇಕಾಗಿದೆ. ಸ್ವತಂತ್ರ ದೇಶವೆಂದಾದ ಮೇಲೆ ಆ ದೇಶಕ್ಕೆ ಒಂದು ಸ್ವತಂತ್ರವಾದ ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ರಾಷ್ಟ್ರ ಭಾಷೆ ಇದ್ದೇ ಇರಬೇಕು.

ಭಾರತಕ್ಕೆ ಒಂದು ಸ್ವತಂತ್ರವಾದ ರಾಷ್ಟ್ರಧ್ವಜ ಹಾಗೂ ಒಂದು ರಾಷ್ಟ್ರ ಗೀತೆ—ಇವುಗಳೇನೋ ಇವೆ. ಆದರೆ ಆ ರಾಷ್ಟ್ರಧ್ವಜ ಹಾಗೂ ರಾಷ್ಟ್ರ ಗೀತೆಗಳಿಗೆ ಮನ್ನಣೆ ಕೊಡುವವರು ನಮ್ಮ ದೇಶದಲ್ಲಿ ಬರೇ ಅಲ್ಪ ಪ್ರಮಾಣದಲ್ಲೇ ದೊರೆಯುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಶಿಕ್ಷಣಾಂತರದಲ್ಲೇ ಹಲವರಿಗೆ ರಾಷ್ಟ್ರಗೀತೆಯು ಸರಿಯಾಗಿ ಹಾಡಲು ಬರುತ್ತಿಲ್ಲ.

ಅದಂತಿರಲಿ, ರಾಷ್ಟ್ರಭಾಷೆಯತ್ತ ದೃಷ್ಟಿ ಹಾಯಿಸುವಾ! ರಾಷ್ಟ್ರಭಾಷೆಯೆಂದೊಡನೆಯೇ ಎಷ್ಟೋ ಮಂದಿ ನಿಬ್ಬೆರಗೆಗೊಳ್ಳುತ್ತಾರೆ. ಕಾರಣವೇನೆಂದು ಕೇಳೇ ಊಹಿಸಿಕೊಳ್ಳಿ. ನಮ್ಮ ದೇಶವು ಸ್ವತಂತ್ರವಾದರೂ, ನಮ್ಮ ದೇಶಕ್ಕೆ ಒಂದು ಸ್ವತಂತ್ರವಾದ ರಾಷ್ಟ್ರಭಾಷೆಯಿಲ್ಲವೆಂದರೆ ಬಹಳ ಬೇಸರವಾಗುವುದು ಸಹಜವಾಗಿದೆ.

ಸಂಪೂರ್ಣ ದೇಶದ ಹಾಗೂ ರಾಜ್ಯಗಳ ಕಾರ್ಯಕ್ರಮಗಳ ಮತ್ತು ಸಾಹಿತ್ಯ ಕಾರರು ಹೆಚ್ಚಾಗಿ ಸಾಹಿತ್ಯ ರಚನೆ ಮಾಡುವ ಭಾಷೆಯೇ ರಾಷ್ಟ್ರಭಾಷೆ. ಭಾರತ ಬೃಹತ್ ದೇಶವೇನೋ ನಿಜ. ಆದರೆ ಇದರ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಭಾಷೆಗಳು ಇವೆ.

ನಮ್ಮ ದೇಶಕ್ಕೆ ರಾಷ್ಟ್ರ ಭಾಷೆಯೇ ಇಲ್ಲವೆ? ನಮ್ಮ ರಾಷ್ಟ್ರ ಸಂಸ್ಕೃತ ರಾಷ್ಟ್ರವೆಂದು ಕಾವ್ಯ ಹೇಳುತ್ತಿಲ್ಲವೆ? ಹಾಗಾದರೆ ನಮ್ಮ ದೇಶಕ್ಕೆ ಒಂದು ಸ್ವತಂತ್ರವಾದ ರಾಷ್ಟ್ರ ಭಾಷೆ. ಏಕಿಲ್ಲ? ದೇಶಕ್ಕೊಂದು ರಾಷ್ಟ್ರ ಭಾಷೆಯಿದ್ದರೆ ಪ್ರಾಂತೀಯ ಭಾಷೆಯ ಅಸ್ತಿತ್ವವು ಕಡಿಮೆಯಾಗುವುದೆ? ಇದೇ ದೇಶಕ್ಕೊಂದು ಸರ್ವಮಾನ್ಯ, ಸರ್ವ ಮೋಹ್ಯ ವಾತ್ತು ಸರ್ವ ಪ್ರಚಲಿತವಾದ ರಾಷ್ಟ್ರ ಭಾಷೆ ಇದ್ದೇ ಇರಬೇಕು. ಆಗಲೇ ನಮ್ಮ ದೇಶದ ಸಂಸ್ಕೃತಿ ಬೆಳೆ ಬಂದೀತು!

ರಾಷ್ಟ್ರ ಭಾಷೆ ಹಾಗೂ ಪ್ರಾಂತೀಯ ಭಾಷೆಗಳಲ್ಲಿ ಯಾವ ರೀತಿಯ ವಿರೋಧವೂ ಇರಲು ಸಾಧ್ಯವಿಲ್ಲ. ಒಂದು ವೇಳೆ ಒಂದು ರೀತಿಯ ವಿರೋಧವು ಕಂಡು ಬಂದರೆ ಅದಕ್ಕೂ ನಾವೇ ಕಾರಣರಾಗಿದ್ದೇವೆ. ನಮ್ಮಂದಾಗಿಯೇ ರಾಷ್ಟ್ರ ಭಾಷೆ ಹಾಗೂ ಪ್ರಾಂತೀಯ ಭಾಷೆಗಳಲ್ಲಿ ವಿರೋಧವು ಕಂಡುಬರುವುದು. ರಾಷ್ಟ್ರಭಾಷೆ ಹಾಗೂ ಪ್ರಾಂತೀಯ ಭಾಷೆಗಳ ಕಾರ್ಯಕ್ಷೇತ್ರಗಳು ಭಿನ್ನಭಿನ್ನವಾಗಿದ್ದು ಸ್ವತಂತ್ರವಾಗಿಯೂ ಇರಬಹುದು. ರಾಷ್ಟ್ರಭಾಷೆಯು ಉನ್ನತಿಯೊಂದಿಗೆ ಪ್ರಾಂತೀಯ ಭಾಷೆ ಹಾಗೂ ಸಾಹಿತ್ಯದ ಉನ್ನತಿಯು ಆಗದಿರಲಾರದು.

ಇಂಗ್ಲಿಷರ ಶಾಸನ ಕಾಲದಲ್ಲಿ ರಾಜ್ಯದ ಸಂಪೂರ್ಣ ಕಾರ್ಯವು ಇಂಗ್ಲಿಷಿನಲ್ಲೇ ಆಗುತ್ತಿತ್ತು. ಇದೇ ಅಂತರ್ಪ್ರಾಂತೀಯ ಸಂಬಂಧಗಳ ಮಾಧ್ಯಮ ವಾಗಿತ್ತು. ಶಾಲೆಗಳಲ್ಲಿ ಇಂಗ್ಲಿಷಿನ ಶಿಕ್ಷಣ ಅನಿವಾರ್ಯವಾಗಿತ್ತು. ಆದರೆ ಇಂಗ್ಲಿಷ್ ಖಂಡಾಕ್ಷಣ ದೇಶವು ದೊಡ್ಡದಾಗಲಾರದು. "ಇಂಗ್ಲಿಷ್ ಭಾಷೆಗಿಂತ ಶ್ರೇಷ್ಠ ಭಾಷೆ ಬೇರೆಯಿಲ್ಲ" ಎಂದು ಭಾವಿಸಿದ ಕಾರಣವೇ ಇಂದು ದೇಶದ ಸ್ಥಿತಿಯು ಕೆಟ್ಟುಹೋಗಿದೆ. ಇಂಗ್ಲಿಷ್ ಸಾಹಿತ್ಯದ ಕಾರಣ "ಶೇಕ್ಸ್" ಎಂಬ ಒಂದು ಹೊಸ ಭೂತವು ನಮ್ಮನ್ನು ಇಂದು ಕಾಡಿದೆ. ಹಾಗಂತ ಹೇಳಿ ಇಂಗ್ಲಿಷ್ ಭಾಷೆಯನ್ನು ತಿರಸ್ಕರಿಸಬೇಕಾಗಿಲ್ಲ. ಎಲ್ಲಾ ಭಾಷೆಗಳೂ ಶ್ರೇಷ್ಠವಾದವುಗಳೆ. ಅಯಾಯ ಭಾಷೆಗಳಲ್ಲಿ ಅನೂಹ್ಯ ಭಾಷೆಗಳ ಶ್ರೇಷ್ಠತೆ, ವಿಶಿಷ್ಟತೆ ಇದ್ದೇ ಇರುವುದು.

ಆದರೆ ಇದನ್ನು ಕಲಿಯಲು ತಂಬಾ ಸಮಯವು ಬೇಕಾಗುವುದೆಂಬುದನ್ನು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಶಾಲೆಗಳಲ್ಲಿ ಎಲ್ಲಾ ಪಾಠಗಳಿಗಿಂತಲೂ ಇಂಗ್ಲಿಷ್ ಪಾಠವು ಕಷ್ಟವು ಹೆಚ್ಚಾಗಿರುವುದು. ಕಾರಣ ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ತಿಳಿಯಬೇಕಾದರೆ ತುಂಬ ಸಮಯ ಸಾಕಾಗಲಾರದು. "ಇಂಗ್ಲಿಷ್" ನಮ್ಮ ದೇಶದ ರಾಷ್ಟ್ರಭಾಷೆಯಾಗಬೇಕೆಂದು ಹೇಳುವವರೆ ಇಂಗ್ಲಿಷಿನಲ್ಲಿ ಜಿನ್ನಾಗಿ ಪಳಗದವರಾಗಿರುವರು. ಇಂದು ನಮ್ಮ ದೇಶದ ಹೆಚ್ಚಿನ ಶಾಲೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಇಂಗ್ಲಿಷಿನಲ್ಲೇ ಅನುತ್ತೀರ್ಣರಾಗುತ್ತಾರೆ.

ನಮ್ಮ ದೇಶದಲ್ಲಿ ಇಂಗ್ಲಿಷ್ ಬಲ್ಲವರ ಸಂಖ್ಯೆ ಬಹಳ ಕಡಿಮೆ. ಭಾಷಾ ಸಮಸ್ಯೆಯಿಂದಾಗಿ ಇಂದು ಭಾರತೀಯರು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತದಲ್ಲಿ ವ್ಯವಹರಿಸಲು ಅಸಮರ್ಥರಾಗಿದ್ದಾರೆ. ನಮ್ಮ ದೇಶದ ಕುರಿತು ನಾವು ತಿಳಿಯದಿದ್ದರೆ ಬೇರೆ ದೇಶದವರಿಂದ ನಮಗೆ ಸರಿಯಾದ ಜ್ಞಾನವು ಬಂದೀತೇ? ಈ ಕಾರಣದಿಂದಾಗಿಯೇ ಭಾರತೀಯನು ರಾಷ್ಟ್ರೀಯತೆಯ ಭಾವನೆಯ ಸಮುಚಿತ ವಿಕಾಸವನ್ನು ತಿಳಿಯಲಾರ. ಇದರಿಂದ ಆತನ ರಾಷ್ಟ್ರೀಯ ಮನೋಭಾವನೆಯು ದೂರವಾಗುವುದರಲ್ಲಿ ಸಂಶಯವಿಲ್ಲ. ತನ್ನ ದೇಶದವರ ಮೇಲಣ ಪ್ರೇಮವೂ ಮಾಯವಾಗುವುದರಲ್ಲಿ ಸಂದೇಹವಿಲ್ಲ. ದೇಶದಲ್ಲಿ ಏಕತೆಯುಂಟಾಗಬೇಕಾದರೆ ಮೊತ್ತ ಮೊದಲಾಗಿ ಒಬ್ಬನು ಇನ್ನೊಬ್ಬರನ್ನು ಬಲ್ಲವನಾಗಬೇಕು. ಹಾಗಾಗಬೇಕಾದರೆ ದೇಶದ ಎಲ್ಲಾ ಜನರ ಭಾಷೆ ಒಂದಾಗಿರಬೇಕು. ಅದೇ ರಾಷ್ಟ್ರವು ಭಾಷೆಯಾಗಲು ಸಮರ್ಥವಾದ ದಾಗಿದೆ.

ದೇಶದ ಜನರ ವಿಚಾರ, ಭಾವನೆ, ಉದ್ದೇಶವೆಲ್ಲವೂ ಒಂದಾಗಿರಬೇಕಾದರೆ ಒಕ್ಕಟ್ಟಾಗಬೇಕು. ಒಕ್ಕಟ್ಟು ಬೆಳೆಗುಬೇಕಾದರೆ ರಾಷ್ಟ್ರ ಭಾಷೆ ಯೂ ಇರಬೇಕು. ಹಾಗಾದರೆ ಎಲ್ಲಾ ಭಾಷೆಗಳೂ ರಾಷ್ಟ್ರಭಾಷೆಯಾಗಬಲ್ಲವೆ? ಇದು ಅಸಾಧ್ಯ. ರಾಷ್ಟ್ರಭಾಷೆಯು ಸ್ಥಾನವು ಒಂದು ಭಾಷೆಗೆ ದೊರಕಬೇಕಾದರೆ ಆ ಭಾಷೆಯಲ್ಲಿ ಕೆಲವು ಗುಣಗಳು ಅವಶ್ಯವಾಗಿ ಇರಬೇಕಾಗಿದೆ.

1) ಆ ಭಾಷೆಯು ದೇಶದ ಹೆಚ್ಚಿನ ಜನರ ಭಾಷೆಯಾಗಿದ್ದು ಅಧಿಕವಾಗಿ ಪ್ರಚಾರದಲ್ಲಿರಬೇಕು. 2) ಆ ಭಾಷೆಯು ಕಲಿಯಲು ಕಠಿಣವಾಗದೆ ಸರಳವೂ ಸುಲಭವೂ, ಆಗಿರಬೇಕು. 3) ಅದರ ಸಂಬಂಧವು ದೇಶದ ಸಂಸ್ಕೃತಿ, ಸಭ್ಯತೆ, ಇತಿಹಾಸ ಇವುಗಳ ಮೇಲೆ ಆಧಾರಿತವಾಗಿರಬೇಕು. 4) ಅದರ ಲಿಪಿಯು ಸುಂದರವೂ ಸರಳವೂ, ವೈಜ್ಞಾನಿಕವೂ ಆಗಿರಬೇಕು.

ನಮ್ಮ ದೇಶದಲ್ಲಿ ಈ ಎಲ್ಲಾ ಗುಣಗಳನ್ನು ಪಡೆದ ಭಾಷೆ ಯಾವುದು ಗೊತ್ತೆ? ಈ ಎಲ್ಲಾ ಗುಣಗಳನ್ನು ಪಡೆದ ಭಾಷೆಯೊಂದೇ, ಅದೇ ಹಿಂದಿ.

ಹಿಂದಿ ಭಾಷೆಯು ನಮ್ಮ ದೇಶದ ಹೆಚ್ಚಿನ ಜನರ ಭಾಷೆ ಈ ಭಾಷೆಯು ದೇಶದಲ್ಲಿ ಅಧಿಕವಾಗಿ ಪ್ರಚಲಿತವಾಗಿದೆ. ದಕ್ಷಿಣ ಭಾರತದ ಕೆಲವು ಪ್ರಾಂತದ ಕಲವು ಮಾತ್ರ ಈ ಭಾಷೆಯನ್ನು ಅರಿತಿಲ್ಲ? ಒಂದು ದೃಷ್ಟಿಯಲ್ಲಿ ನೋಡುತ್ತಿದ್ದರೆ ದಕ್ಷಿಣ ಭಾರತದ ಹಿಂದಿ ಭಾಷೆಯನ್ನು ಬಲ್ಲವರು ಉತ್ತರ ಭಾರತದ ಹಿಂದೀ ಭಾಷಾ ಪ್ರವೀಣರಿಗಿಂತಲೂ ಅಧಿಕ ಪಾಂಡಿತ್ಯವುಳ್ಳವರಾಗಿದ್ದಾರೆ. ಹಿಂದಿಯ ಕುರಿತು ಅಧಿಕ ಜ್ಞಾನವನ್ನು ಪಡೆದು, ದಕ್ಷಿಣಭಾರತದ ಹಿಂದೀ ಭಾಷಾ ಪ್ರವೀಣರಿಗೆ ಹಿಂದೀ ವ್ಯಾಕರಣದಲ್ಲಿ ದಕ್ಷಿಣ ಭಾರತದ ಹಿಂದೀ ಬಲ್ಲವರೇ ಹೆಚ್ಚು ಮುಂದವರೆದಿದ್ದಾರೆ.

ಒಂದು ದೃಷ್ಟಿಯಲ್ಲಿ ನಮ್ಮ ದೇಶದ ಸಂಸ್ಕೃತಿಗೆ ಕಾರಣ ಸಂಸ್ಕೃತ ಭಾಷೆ. ಸಂಸ್ಕೃತ ಭಾಷೆ ಹಾಗೂ ಹಿಂದೀ ಭಾಷೆಯು ಲಿಪಿಯು ಒಂದೇ ಆಗಿದ ಹಿಂದಿಯಲ್ಲೂ ಸಂಸ್ಕೃತ ಭಾಷೆಯು ಪದಗಳಿವೆ. ಆದುದರಿಂದ ಕನ್ನಡಿಗರು ತುಂಬ ಶ್ರಮದಲ್ಲೇ ಹಿಂದೀ ಭಾಷೆ ಕಲಿಯಬಲ್ಲರು. ಇದು ಸರಳ ಭಾಷೆ. ಹಿಂದಿ ಹಾಗೂ ಇತರ ಕೆಲವು ಭಾಷೆಗಳನ್ನು ಒಟ್ಟಿಗೆ ಕಲಿಯಲಾರಂಭಿಸಿದರೆ ಮೊತ್ತ ಮೊದಲು ಬರುವ ಭಾಷೆ ಹಿಂದಿಯೇ ಆಗಿದೆ.

ಹಿಂದೀ ಭಾಷೆಯು ಆರಂಭವಾದುದು ಹತ್ತನೇ ಶತಮಾನದಲ್ಲಿ. ಹಿಂದೀ ಸಾಹಿತ್ಯವು ಇಂದು ಪ್ರಗತಿ ಪಥದಲ್ಲಿ ಅಗ್ರಸ್ಥಾನವಾಗಿದೆ. ಭಾರತ ದೇಶದ ಚರಿತ್ರೆ ಹಾಗೂ ಇತಿಹಾಸ ಪ್ರಸಿದ್ಧವಾಗಿ ಮೂಡಿಬಂದುದು ಸಂಸ್ಕೃತದಲ್ಲಾದರೆ, ಅದನ್ನು ಮತ್ತೆ ಪುಷ್ಟೀಕರಿಸಿದುದು ಹಿಂದೀ ಭಾಷೆ.

ಭಾರತ ದೇಶದ ಸಭ್ಯತೆಯ, ಸಂಸ್ಕೃತಿಯ ಪ್ರತೀಕವಾದ ವಿವಿಧ ಕಥೆ ಕವನ

(ಎಂಟನೇ ಪುಟ ನೋಡಿ)

ಪ್ರಪಂಚದ ಸುತ್ತ ನಿಮ್ಮ ಹಣ ಸಂಚರಿಸಬೇಕೇ?

ಸಿಂಡಿಕೇಟ್ ಬ್ಯಾಂಕು ಅಂತರಾಷ್ಟ್ರೀಯ ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ತರದ ಸೇವೆಯನ್ನು ಕೈಗೊಳ್ಳುತ್ತಿದೆ. ದೇಶದ ಪ್ರಮುಖ ನಗರಗಳಲ್ಲಿರುವ ನಮ್ಮ ವಿದೇಶೀ ವಿನಿಮಯ ಆಫೀಸುಗಳ ಮೂಲಕವೂ ಜಗತ್ತಿನಾದ್ಯಂತ ಪಸರಿಸಿರುವ ನಮ್ಮ ವಿದೇಶೀ ವಿನಿಮಯ ಪ್ರತಿನಿಧಿಗಳ ಮೂಲಕವೂ, ಹಣ ಪಾವತಿ, ಋಣಪತ್ರ, ಅಮದು—ರಫ್ತು ಇವೇ ಮೊದಲಾದ ಸೇವೆಯನ್ನು ಕೈಗೊಂಡು ನಾವಿನ ವಾಣಿಜ್ಯ, ಕೈಗಾರಿಕೆ ಮತ್ತಿತರ ಉದ್ಯಮಗಳ ಬೆಳವಣಿಗೆಯಲ್ಲಿ ಸಹಕರಿಸುವೆವು.

ವಿಶ್ವದಾದ್ಯಂತ ಬ್ಯಾಂಕಿಂಗ್ ಸೇವೆಗೆ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮೇಲ್ಪಟ್ಟು

ಶಾಖೆಗಳು: 231

ಟಿ. ಎ. ಪೈ, ಚೇರ್ಮನ್ ಮೇನೇಜರ್

ವಿಶ್ವಾಸ ಗಳಿಸಲು ವಿಶ್ವಪ್ರಯತ್ನ ನಡೆಸಿದಾಗ

ಬರೆದವರು: ಶ್ರೀ ಶಿವಶಂಕರೆ.

ದ್ರಾ. ಮು. ಕ.ದ ಧುರೀಣರು ಚಲಚಿತ್ರ, ನಾಟಕ, ಪತ್ರಿಕೆ, ವೇದಿಕೆ ಹಾಗೂ ಇತರ ರಂಗಗಳ ಮೂಲಕ ಎಡೆಬಿಡದೆ ಪ್ರಚಾರ ನಡೆಸಿದುದರಿಂದ ಪರಿಣಾಮವಾಗಿ, ಅವರ ಅಗ್ಗದ ಮಾತುಗಳ ಬಲೆಗಳಲ್ಲಿ ಪ್ರಖ್ಯಾತಿಗಾಗಿ ಪರಿತಪಿಸುತ್ತಿದ್ದ ವಿದ್ಯಾರ್ಥಿ ಪ್ರಮುಖರು ಸುಲಭವಾಗಿ ಸಿಕ್ಕಿ ಬಿದ್ದರು. ಆ ಮೇಲೆ ಅಲ್ಲೂ ಸೈಪೋಟಿ ಉಂಟಾಯಿತು. ವಿದ್ಯಾರ್ಥಿಗಳ ಪೂರ್ಣ ಬೆಂಬಲ ತಮ್ಮತ್ತ ಇದೆಯೆಂಬುದು ದ್ರಾ. ಮು. ಕ.ದ ಮುಂದಾಳುಗಳಿಗೆ ಮನದಟ್ಟಾದೊಡನೆ ಅವರನ್ನು ತಮ್ಮ ಪಕ್ಷದ ಪ್ರಚಾರಕ್ಕಾಗಿ ಪಳಗಿಸಲು ಪ್ರಯತ್ನಿಸಿದರು. ಕಳೆದ ಸಾರ್ವತ್ರಿಕ ಚುನಾವಣೆಯ ಸಮಯ ವಿದ್ಯಾರ್ಥಿ--ವಿದ್ಯಾರ್ಥಿನಿಯರು ನಡೆಸಿದ ಪ್ರಚಾರದ ಫಲದಿಂದಾಗಿ ದ್ರಾ. ಮು. ಕ. ಅಡಳಿತದ ಅಸ್ತಿತ್ವವನ್ನು ಗಿಟ್ಟಿಸಿಕೊಂಡಿತು. ಆಗಿನ ಕಾಂಗ್ರೆಸ್ಸಿನ ಅಧ್ಯಕ್ಷರು ಕಾಮರಾಜರನ್ನು, ಅವರ ಮನೆಯಂಗಳದಲ್ಲೇ, ರಾಜಕೀಯ ಪ್ರೌಢಿಯನ್ನಾಗಿ ವಿದ್ಯಾರ್ಥಿಗಳು ಫಿಲ್ಲಿಸಿ ಬಿಟ್ಟರು. ಕಾಂಗ್ರೆಸ್ಸಿನ ಇತಿಹಾಸದಲ್ಲೇ ಹಾಗೂ ದ್ರಾ. ಮು. ಕ.ದ ಚರಿತ್ರೆಯಲ್ಲೇ ಇದು ಹೊಸತು. ಇಷ್ಟರ ವರೆಗೆ ಆ ರೀತಿ ನಡೆದಿದಿರಲಿಲ್ಲ, ಅಖಿಲ ಭಾರತದ ದೊಡ್ಡ ಪಕ್ಷ, ಅಡಳಿತದ ಅಸ್ತಿತ್ವದಲ್ಲಿ ಕುಳಿತುಕೊಂಡಿರುವ ಪಕ್ಷದ ಅಧ್ಯಕ್ಷರನ್ನು ಓರ್ವ ವಿದ್ಯಾರ್ಥಿ ಸೋಲಿಸಿರುವ ಘಟನೆ ಇಷ್ಟರ ವರೆಗೆ ನಡೆದಿರಲಿಲ್ಲ. ದ್ರಾ. ಮು. ಕ. ತನ್ನ ವಿಜಯ ದುಂಧುಭಿಯನ್ನು ಮೊಳಗಿಸಿತು. ವಿದ್ಯಾರ್ಥಿ ವೃಂದದ ಬೆನ್ನು ತಟ್ಟಿತು: ಶಹಭಾಸ್! ಎಂದಿತು.

ನಮ್ಮದೇ ಸರಕಾರ ಇರುವಾಗ ನಮ್ಮನ್ನಿನ್ನು ತಡೆಯುವವರ್ಯಾರು? ವಿದ್ಯಾರ್ಥಿವೃಂದ ಕೇಳಲಾರಂಭಿಸಿತು. ದ್ರಾ. ಮು. ಕ ಕ್ಕೆ ಅತ್ಯಂತ ಅಚ್ಚುಮೆಚ್ಚಿನ ಹಿಂದೀ ವಿರೋಧಿ ಚಳುವಳಿಯನ್ನು ಮುಂದರಿಸಲು ಧಿಲ್ಲಿಯನ್ನು ನಡುಗಿಸಲು ವಿದ್ಯಾರ್ಥಿಗಳು ತೀರ್ಮಾನಿಸಿಕೊಂಡರು. ಇದರಲ್ಲಿ ತಾವು ಗೆದ್ದೇತೀರುವೆವೆಂಬ ವಿಶ್ವಾಸ ಅವರಿಗೆ ಎಷ್ಟರ ಮಟ್ಟಿಗಿತ್ತೆಂಬುದು ಅವರು ಪ್ರಧಾನಿಯವರ ಬಳಿ ನಡೆದುಕೊಂಡಿರುವ ರೀತಿಯಿಂದ ಗೊತ್ತಾಗುತ್ತದೆ. ಶ್ರೀಮತಿ ಇಂದಿರಾಗಾಂಧಿಯವರು ಈ ಹುಡುಗರನ್ನು ಬಹಳ ಸುಲಭವಾಗಿ ತನ್ನ ಸೆರಗಿನಲ್ಲಿ ಮುಚ್ಚಿಕೊಂಡುಹೋಗಬಹುದೇನು ಭಾವಿಸಿದ್ದರು. ಮಾತುಕತೆ ಆರಂಭವಾಯಿತು. ತಮಿಳ್ನಾಡಿನ ಮುಖ್ಯಮಂತ್ರಿ ತಿರು ಅಣ್ಣಾದೊರೈಯವರು ಇದಕ್ಕೆ ವಿಪರೀತ ಮಾಡಿದವರು. ಪಕ್ಷದಲ್ಲೇ ಮುಗುಳ್ನಕ್ಕುತ್ತಿದ್ದರು. ವಿದ್ಯಾರ್ಥಿಗಳ ಬಾಣದೆದುರು ಇಂದಿರಾಜೀ ತತ್ತರಿಸಿ ಹೋದರು, ತಪ್ಪಿಸಿಕೊಂಡಲ್ಲಿ ಸಾಕೆಂದು ಭಾವಿಸಿಕೊಂಡರು. ವಿದ್ಯಾರ್ಥಿಗಳ ಕೈಯಲ್ಲಿ ಸಿಕ್ಕಿಕೊಂಡ ಮೇಲೆ ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವೇನು? ವಿದ್ಯಾರ್ಥಿಗಳು ಅದೇನೇನೋ ಕೇಳಲಾರಂಭಿಸಿದರು. ಶ್ರೀಮತಿಜೀಯವರು ಅದೇನೇನೋ ಆಡಿಬಿಟ್ಟರು. ವಿದ್ಯಾರ್ಥಿಗಳು ತಾವು ಪ್ರಧಾನಿಯವರ ಬಳಿ ಮಾತಾಡುತ್ತಿದ್ದೇವೆಂಬುದನ್ನು ಮರೆತುಬಿಟ್ಟು, ವಿರೋಧಿಯ ಬಳಿ ವಾಗ್ವಾದ, ಅರಕ್ಕಿಂತಲೂ ವಾಗ್ಯುದ್ಧ ನಡೆಸುತ್ತಿರುವುದಾಗಿ ಭಾವಿಸಿಕೊಂಡರು. ಶ್ರೀಮತಿ ಜಿಯವರು ಆರಂಭದಲ್ಲಿ ತುಂಟ ಹುಡುಗರ ಬಳಿ ನಡೆದುಕೊಳ್ಳುವಂತೆ ವರ್ತಿಸಿದರು. ಅವರನ್ನು ತಿದ್ದುವ ಜವಾಬ್ದಾರಿ ತನ್ನದು. ತಪ್ಪು ದಾರಿ ಹಿಡಿಯುವಂತೆ ಬುದ್ಧಿವಾದ ಹೇಳುವದು ತನ್ನ ಹೊಣೆಯೆಂಬುದನ್ನವರು ಬದಿಗೆ ಸರಿಸಿ, ತುಂಟ ಹುಡುಗರ ಕಿವಿ ಹಿಂಡುವ ರೀತಿಯಲ್ಲಿ ಮಾತಾಡಿದರು. ಇಂತಹ ಸಂದರ್ಭವನ್ನು ವಿದ್ಯಾರ್ಥಿಗಳು ಬಿಟ್ಟುಕೊಡುವರುಂಟೇ? ಶ್ರೀಮತಿ ಇಂದಿರಾ ನೆಹ್ರೂಗೆ ಕೋಪ ಬಂದುಬಿಟ್ಟಿತು. ವಿದ್ಯಾರ್ಥಿಗಳಿಗೆ ಅದು ತಮಾಷೆ, ಹಾಸ್ಯವಾರ್ಗಕಡಿತು. ಅದರ ಲಾಭ ಪಡೆದುಕೊಳ್ಳಲು ಅವರು ಹಿಂಜರಿಯಲಿಲ್ಲ. ಇಂದಿರಾಜೀ ಕೋಪದಿಂದ ಮಾತುಕತೆಯನ್ನಾಡಿ ಅಲ್ಲಿಂದ ಹೊರಹೋಗಿಬಿಟ್ಟರು. ಓಡುವ ನಾಯನ್ನು ಕಂಡಾಗ ಹುಡುಗರು ಸುಮ್ಮನೆ ಬಿಡುವದುಂಟೆ?

ವಿದ್ಯಾರ್ಥಿಗಳಿಗೆ ಕೋಡುವಳು ಬಂದಂತಾಯಿತು. ಅವರು ಕಾಂಗ್ರೆಸ್ ಹೋರಗಳನ್ನು ಕಂಡಲ್ಲಿ ಕಾಲು ಕೆದರಿ ರಾಜಕೀಯ ಹೊಳೆ ಹೋರಾಟಕ್ಕೆ ಕರೆದರು. ಪತ್ರಿಕೆಗಳಿಗೆ ಅದು ಭಾರೀ ಆಹಾರವಾಯಿತು. ಅವರು ದಪ್ಪಕ್ಷರಗಳಲ್ಲಿ ಅದನ್ನು ಪ್ರಕಟಿಸಿದರು. ಮೂಗಾಮೂರಿಯ ಸುದ್ದಿಯು ವರ್ಣರಂಜಿತವಾಗಿ ಪತ್ರಿಕೆಗಳಲ್ಲಿ ಪ್ರಕಟವಾದುವು. ಇದರಿಂದ ವಿದ್ಯಾರ್ಥಿಗಳಿಗೆ ಮತ್ತಷ್ಟು ಹುರುಪು ಬಂತು. ಅವರು ಕಾಂಗ್ರೆಸೆಂದರೆ ಹಿಂದಿ—ತ್ರಿವರ್ಣ ಧ್ವಜಗಳೆಂದು ತಿಳಿದುಕೊಂಡು ಅವುಗಳನ್ನು 'ನಾಶ ಮಾಡಲಿ'ಕ್ಕಾಗಿ ಕಪ್ಪು ಬಳೆಯಲು, ಸುಟ್ಟು ಹಾಕಲು ಆರಂಭಿಸಿ ಬಿಟ್ಟರು. ಶಾಸ! ಈ ಕಾಂಗ್ರೆಸ್ ದಹಿಸದಲ್ಲಿ ಸಿಕ್ಕಿ ಬಿದ್ದವರು ಎಲ್ಲರೂ! ಈ ನಾಶಕಾರ್ಯವನ್ನು ಫಿಲ್ಲಿಸಬೇಕೆಂದು ದ್ರಾ. ಮು. ಕ.ದ ಮಂತ್ರಿವರ್ಗ ಕೇಳಿಕೊಳ್ಳಲಾರಂಭಿಸಿತು. ಆಸಕ್ತದಲ್ಲಿ ಅವರಿನ್ನು ಸರಿಯೂರಿ ಕುಳಿತುಕೊಂಡೇ ಇಲ್ಲ, ಅಷ್ಟರಲ್ಲೇ ಬಂಗಾಲ, ಹರಿಯಾಣ, ಪಂಜಾಬ.... ಅವರೆದೆ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ತಮ್ಮ ಪೀಠಕ್ಕೆ ಕೊಡಲಿ ಪೆಟ್ಟು ಬೀಳುತ್ತದೆಂದು ಅವರು ವಿದ್ಯಾರ್ಥಿಗಳ ಮುಂದೆ ಬಾಯ್ತೆರೆದು ಹೇಳಿ ನೋಡಿದರು. ವಿದ್ಯಾರ್ಥಿಗಳಿಗೆ ಕರುಣೆ ಹುಟ್ಟಲಿಲ್ಲ. ತಮಿಳು ಕಾನ್ವರೆನ್ಸ್ ನಡೆಯುವಾಗಲಾದರೂ ಸುಮ್ಮಗಿರಬೇಕೆಂದು ನಮ್ರತೆಯಿಂದ ಕೇಳಿಕೊಂಡರು. ತಮಿಳು ಕಾನ್ವರೆನ್ಸಿನ ಜವಾಬ್ದಾರಿಯನ್ನು ವಿದ್ಯಾರ್ಥಿ ಪ್ರಮುಖರಿಗೆ ವಹಿಸಿಕೊಡಲಾಯಿತು. ಕಳ್ಳತ ಕೈಯ್ಯಲ್ಲಿ ಖಜಾನೆಯ ಬೀಗದ ಕೈಕೊಟ್ಟರೆ, ಪಾಪ! ಅವನೇನು ಮಾಡುವವು? ವಿದ್ಯಾರ್ಥಿಗಳ ಪರಿಸ್ಥಿತಿಯೂ ಹಾಗೆಯೇ ಆಯಿತು. ತಮಿಳು ಕಾನ್ವರೆನ್ಸ್ ಕೊಟ್ಟೆಗೊಂಡುದೇ ತಡ, ವಿದ್ಯಾರ್ಥಿಗಳ 'ಹಿಂದಿ ವಿರುದ್ಧ ಯುದ್ಧ ಸುನಃ ಆರಂಭವಾಗಿ ಬಿಟ್ಟಿತು. ಈ ಸಲ ಅವರು ತಮ್ಮ ಚಟುವಟಿಕೆಯ ರಂಗವನ್ನು ವಿಸ್ತರಿಸಿಕೊಂಡರು. ಅವರಿಗೆ ಮಿಸ್ಟರ್ ರಾಜಗೋಪಾಲಾಚಾರಿ, ತಿರು ಅಣ್ಣಾದೊರೈ ಮುಂತಾದವರ ಮಾತು ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಮಾಡಿಸಿತು. ಅವರು ತಮಿಳ್ನಾಡಿನಲ್ಲಿ ಗಲಾಟೆ ಮಾಡುವದನ್ನು ಅಷ್ಟಕ್ಕೆನೇ ಸೀಮಿತಗೊಳಿಸದೆ ಪಕ್ಕದ ಆಂಧ್ರ, ಕೇರಳ ಮತ್ತು ಕರ್ನಾಟಕದ ಕೆಲ ಸ್ಥಳಗಳಿಗೆ ಹೋಗಿ ಅಲ್ಲಿ ಧ್ವಂಸ ಕಾರ್ಯ ನಡೆಸಿದರು. ಅಬ್ಬಾ! ಇವರೆಷ್ಟು ಚತುರರು! ತಮಿಳ್ನಾಡಿನಲ್ಲಿ ಅವರು 'ಉತ್ತರದ ವಿರುದ್ಧ' ಯುದ್ಧ ನಡೆಸಿದ್ದರು. ಅದುದರಿಂದ ಅವರು 'ಕೇಂದ್ರ ಸರಕಾರದ ಸೊತ್ತುಗಳ'ನ್ನು ನಾಶ ಮಾಡಿದರು. ಆಂಧ್ರ, ಕೇರಳ ಅಥವಾ ಕರ್ನಾಟಕ ಅವರ 'ನಾಡು' ಇರುವದಿಲ್ಲ.

ಹಾಗಿರುವುದರಿಂದಅಲ್ಲ ಅದೆ! ಧೋರಣೆಯನ್ನು ಅನುಸರಿಸಬೇಕಾಗಿರುವದಿಲ್ಲ. ಅದನ್ನೇ ಮಹಾರಾಷ್ಟ್ರ ಹಾಗೂ ಪಂಜಾಬ ಜನತೆ ಕಂಡುಕೊಂಡಿತು. ಆಂಧ್ರ, ಕೇರಳ ಹಾಗೂ ಕರ್ನಾಟಕಗಳಲ್ಲಿ ಗಲಾಟೆಗಳಾದೆಡೆಗಳಲ್ಲೆಲ್ಲಾ ರಾಜ್ಯ ಸರಕಾರದ ಸೊತ್ತು, ಕೇಂದ್ರ ಸರಕಾರದ ಸೊತ್ತುಗಳೆಂಬ ಭೇದಭಾವವನ್ನು ತೋರಿಸದೆ ಅವರು ಹಾಳುಗೆಡವಿದರು. ಅಲ್ಲಿ ದ್ರಾ. ಮು. ಕ. ಸರಕಾರ ಇರುವದಲ್ಲ—ಅಲ್ಲಿ ಇರುವದು ಕಾಂಗ್ರೆಸ್ ಹಾಗೂ ಮಿಶ್ರ ಸರಕಾರಗಳು. ಆ ನೆರೆರಾಜ್ಯಗಳಿಗೆ ಹೋಗಿ ಗಲಾಟೆ ನಡೆಸಲು ಅನುಕೂಲವಾಗುವಂತೆ ತಮಿಳ್ನಾಡಿನಲ್ಲಿ ವಿದ್ಯಾರಂಗಗಳನ್ನು ಮುಚ್ಚಲಾಯಿತು. ವಿದ್ಯಾರ್ಥಿಗಳಿಗೆ ದ್ವಿಗುಣವೆ ಉತ್ಸಾಹದಿಂದ ನಾಶಕಾರಕ ಕುಕೃತ್ಯಗಳಿಗೆ ಮುಂದಾದರು.

ಏನು ಮಾಡುವದು? ಏನು ಮಾಡುವದು? ದ್ರಾ. ಮು. ಕ.ದ ಮುಂದಾಳುಗಳು ತಲೆ ಕೆರೆದುಕೊಳ್ಳಲಾರಂಭಿಸಿದರು. ಭಾಷಾ ಬಡಬಾಗ್ನಿಯನ್ನು ಹತೋಟಿಗೆ ತರಲು ಸಾಧ್ಯ ಇರುವದಿಲ್ಲ. ಹತೋಟಿಗೆ ತರದಿದ್ದಲ್ಲಿ ಆ ಬೆಂಕಿಯಲ್ಲಿ ಬಿದ್ದು ಸುಟ್ಟು ಬೂದಿಯಾಗಲೇ ಬೇಕು. ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಹೋಗುತ್ತದಲ್ಲವೇ? ಏನು ಮಾಡುವದು? ವಿದ್ಯಾರ್ಥಿಗಳನ್ನು ಕರೆದು ಕೇಳಿದರು— ಹಿಂದಿ ವಿರೋಧಿಸುವ ಈ ಸರಕಾರ ನಿಮಗೆ ಬೇಕೆ? ಹಿಂದಿ ತರುವ ಸರಕಾರ ಬೇಕೆ? ಹೇಳಿ. ಈ ಸರಕಾರವೇ ಬೇಕೆಂದಾದಲ್ಲಿ ಗಲಾಟೆ ಫಿಲ್ಲಿಸಿರಿ. ಬೇಡವೆಂದಾದಲ್ಲಿ ಹೇಳಿರಿ. ನಿಮ್ಮೊಟ್ಟಿಗೆ ನಾವೂ ಸೇರಿಕೊಳ್ಳುತ್ತೇವೆ. ಅದನ್ನು ಬಿಟ್ಟಲ್ಲಿ ಅನ್ಯ ಉಪಾಯ—ದಾರಿ ಇನ್ನೇನಿದೆ? ಮನುಷ್ಯ ರಕ್ತದ ರುಚಿ ಕಂಡಿರುವ ಹುಲಿಯೆದುರಿಗೆ ಅಹಿಂಸಾ ತತ್ವ ಬೋಧಿಸಿದರೆ ಫಲ ಇದೆ ಏನು? ಅದುದರಿಂದಲೇ ವಿದ್ಯಾರ್ಥಿಗಳು ಹೇಳಿದರು— "ಧೈರ್ಯವಿದ್ದಲ್ಲಿ ನಮ್ಮೊಟ್ಟಿಗೆ ಸೇರಿಕೊಳ್ಳಿರಿ. ದೊರಗಳೇ, ರಾಜಾರೇ, ಚಕ್ರವರ್ತಿಗಳೇ ಬನ್ನಿರಿ. ಧಿಲ್ಲಿಗೇನೇ ಹೋಗೋಣ. ಕೆಂಪುಕೋಟೆ ಮೇಲೆ ಕಪ್ಪುಕೆಂಪು ಕೇಸರಿವನ್ನು ಹಾರಿಸೋಣ". ಅಸಾಧ್ಯೇಶರು ಅಸಹನದಿಂದ ಅಲುಗಾಡಲು ಈಗ ಸಿದ್ಧರಿಲ್ಲ. ಅದೆಂತಾದರೂ ವಿದ್ಯಾರ್ಥಿಗಳನ್ನು ಸಾಂತ್ವನಗೊಳಿಸಬೇಕು. ಹಲವಾರು ಬಗೆಗಳಲ್ಲಿ ವಿದ್ಯಾರ್ಥಿಗಳ ಬಳಿ ಹೇಳಿ ನೋಡಿದರು. "ಈ ವಿಷಯವನ್ನು ನಮಗೆ ಬಿಟ್ಟುಬಿಡಿ. ನೀವು ವಿದ್ಯಾಭ್ಯಾಸಕ್ಕೆ ಹಿಂತಿರುಗಿರಿ. ಹಿಂದಿ ಬಂದಂತೆ ನಾವು ತಡೆಯುತ್ತೇವೆ" ವಿದ್ಯಾರ್ಥಿಗಳಿಗೆ ಇಂತಹ ಪೊಳ್ಳು ಆಶ್ವಾಸನೆಗೆ ಮಾರುಹೋಗುವಂತಿಲ್ಲ. ಅದುದರಿಂದ ಅವರತ್ತ ಕಿವಿಗೊಡಲು ಒಪ್ಪಲಿಲ್ಲ. ಇದ್ದರೂ ತಮ್ಮ ಪ್ರಯತ್ನವನ್ನು ಅಸಾಧ್ಯೇಶರು ಬಿಡುವಂತಿಲ್ಲ. ಅವರು ಒಡನೆ ವಿಧಾನಸಭೆಯನ್ನು ಕರೆದರು.

ದಿಢೀರ್ ವಿಧಾನಸಭೆ ಕೂಡಿತು. ಇದು ಕೇವಲ ಒಂದು ದಿನಕ್ಕಾಗಿ. ತಮ್ಮ ಪೀಠದ ಭದ್ರತೆಗಾಗಿ ಮಂತ್ರಿ ಹಾಗೂ ವಿದ್ಯಾರ್ಥಿಗಳನ್ನು ಸಂತೈಸಲಿಕ್ಕಾಗಿ ಅದು. ಫಲವಾಗಿ ಅದು ತಮಿಳ್ನಾಡಿನ ರಾಜಕೀಯ ಪಕ್ಷಗಳ ಪರೀಕ್ಷಾಕಾಲವಾಗಿತ್ತು,

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ, ಹಾಗೂ ಎಲ್ಲಾ ತರಹ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore - 2

ಪರಿಚಯ

ಸ್ತೂಪಗಳ ನಗರ ಸಾಂಚಿ

ಬರೆದವರು: ಶ್ರೀ ಸ. ನಾರಾಯಣ.

ಭಾರತವನ್ನು ಭೌಗೋಳಿಕವಾಗಿ ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ವಿಂಧ್ಯ ಪರ್ವತವೇ ಈ ಎರಡು ಭಾಗಗಳಿಗೆ ಮಧ್ಯ ಬಿಂದು. ವಿಂಧ್ಯ ಪರ್ವತದ ಮೇಲ್ಭಾಗವನ್ನು ಉತ್ತರ ಭಾರತವೆಂದೂ, ಕೆಳ ಭಾಗವನ್ನು ದಕ್ಷಿಣ ಭಾರತವೆಂದೂ ಬೇಸಾಡಿಕುವುದು ಪದ್ಧತಿ. ವಿಂಧ್ಯ ಪರ್ವತಗಳ ಅಂಚಿನಲ್ಲಿ ಶಾಂತ ವಾತಾವರಣದಲ್ಲಿದೆ ಸಾಂಚಿ. ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಶಿಲ್ಪ ಕಲೆ ಮತ್ತು ಕಟ್ಟಡಗಳಿಗೆ ಸಾಂಚಿ ಉತ್ತಮ ನಿದರ್ಶನವಾಗಿದೆ. ಮಧ್ಯಪ್ರದೇಶದ ರಾಜಧಾನಿ ಭೂಪಾಲದಿಂದ ರೈಲಾಯತ್ತ ರೈಲು ಪ್ರಯಾಣ ಮಾಡುವಾಗ ಸಾಂಚಿ ನಿಲ್ದಾಣ ಸಿಗುತ್ತದೆ. ಸಾಂಚಿ ನಿಲ್ದಾಣದಿಂದ ಅನತಿ ದೂರದಲ್ಲಿ ವಿಶ್ವವಿಖ್ಯಾತ ಸ್ತೂಪಗಳಿವೆ.

ದೇಶವಿದೇಶೀಯ ಪ್ರೇಕ್ಷಕರನ್ನು (ಪ್ರವಾಸಿಗರನ್ನು) ಬೌದ್ಧ ಮತಾನುಯಾಯಿಗಳನ್ನು ಸಾಂಚಿ ಸ್ತೂಪಗಳು ಆಕರ್ಷಿಸುತ್ತವೆ. ಇದು ಬೌದ್ಧ ಯಾತ್ರಾ ಕೇಂದ್ರವಾಗಿ ಕೀರ್ತಿ ಪಡೆದಿದೆ. ಸ್ವತಂತ್ರ ಭಾರತದ ರಾಷ್ಟ್ರ ಲಾಂಛನವಾದ ಚತುರ್ಮುಖಸಿಂಹ ಮತ್ತು ಧರ್ಮಚಕ್ರದ ಮೂಲ ರೂಪ ಇಲ್ಲಿಯ ಸ್ತೂಪದಲ್ಲಿದೆ. (ನಮ್ಮ ಲಾಂಛನದಲ್ಲಿ ಧರ್ಮ ಚಕ್ರ ಕೆಳಕಡೆ ಇದ್ದು ಮೇಲ್ಭಾಗದಲ್ಲಿ ಚತುರ್ಮುಖ ಸಿಂಹವಿದೆ. ಆದರೆ ಸಾಂಚಿಯ ಸ್ತೂಪದಲ್ಲಿ ನಾಲ್ಕು ಸಿಂಹಗಳು ಧರ್ಮ ಚಕ್ರವನ್ನು ಹೊತ್ತು ನಿಂತಿವೆ.)

ಕ್ರಿ. ಪೂ. 2ನೆಯ ಶತಮಾನದಲ್ಲಿ ಅಶೋಕ ಚಕ್ರವರ್ತಿಯ ಕಾಲದಲ್ಲಿ ಸಾಂಚಿ ರೂಪುಗೊಂಡಿದೆ ಎಂದು ಇತಿಹಾಸಕಾರರು— ಸಂಶೋಧಕರು ಅಭಿಪ್ರಾಯಪಡುತ್ತಾರೆ. ಸಾಂಚಿಯಿಂದ ಎಂಟು ಮೈಲು ದೂರದಲ್ಲಿ ವಿದಿಶ ಎಂಬ ಊರಿದೆ. ಅಶೋಕನ ರಾಣಿ ದೇವಿ ವಿದಿಶಕ್ಕೆ ಸೇರಿದವಳು. ಕಳಿಂಗ ಯುದ್ಧದ ನಂತರ ಚಕ್ರವರ್ತಿ ಅಶೋಕನ ಮನೋಭಾವ ರಾಜನೀತಿ ಧರ್ಮ ನೀತಿಯಲ್ಲೇ ಬದಲಾದವು. ಅಹಿಂಸೆಯುಕ್ತ ಅಶೋಕನ ಗಮನ ಹರಿಯಿತು. ಜೀವ ಹಿಂಸೆಯನ್ನು ದೂರವಾಡಿ ಅಶೋಕ ಬೌದ್ಧ ಧರ್ಮಾನುಯಾಯಿಯಾದ.

ಬೌದ್ಧ ಮತಾನುಯಾಯಿಯಾದ ಅಶೋಕ ಮತ ಪ್ರಚಾರಕ್ಕಾಗಿ ಚೀನಾ, ಸಿಂಹಳ, ಬರ್ಮಾ, ಸಯಾಂ ಮತ್ತಿತರ ರಾಷ್ಟ್ರಗಳಿಗೆ ಬೌದ್ಧ ಭಿಕ್ಷು (ಸನ್ಯಾಸಿ) ಗಳನ್ನು ಕಳುಹಿಸಿದ. ಅಶೋಕ ತನ್ನ ಮಗ ಮಹೇಂದ್ರನನ್ನು ಸಿಂಹಳಕ್ಕೆ ಬೌದ್ಧ ಧರ್ಮ ಪ್ರಚಾರಕ್ಕಾಗಿ ಕಳುಹಿಸಿದ. ಮಹೇಂದ್ರ ಸಾಂಚಿಯಿಂದಲೇ ಪ್ರಯಾಣ ಬೆಳೆಸಿದ. ಬೌದ್ಧ ಧರ್ಮದ ಸಾರ ಸೌಂದರ್ಯಗಳ ಅಮರ ಸಂದೇಶವನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟ ಸ್ಥಳ ಸಾಂಚಿ.

ಸಾಂಚಿಯಲ್ಲಿ ಮೂರು ಸ್ತೂಪಗಳಿವೆ. ಅವುಗಳ ವಾಸ್ತು ಶಿಲ್ಪ ವಿನ್ಯಾಸ ಅದ್ವಿತೀಯವಾದವು. ೧೨೦ ಅಡಿ ವ್ಯಾಸದ ಬೃಹತ್ ಅಡಿ ಎತ್ತರದ ಸ್ತೂಪ ದೊಡ್ಡದು. ಇದರ ರಚನೆ ಅಶೋಕನ ಕಾಲದಲ್ಲಿ ಆರಂಭವಾಯಿತು. ಕ್ರಿ. ಪೂ. ೧ ಅಥವಾ ೨ನೆಯ ಶತಮಾನದಲ್ಲಿ ಅವನ ಉತ್ತರಾಧಿಕಾರಿಗಳಿಂದ ಈ ಸ್ತೂಪದ ನಿರ್ಮಾಣ ಕಾರ್ಯ ಮುಗಿಯಿತು. ಈ ಸ್ತೂಪದ ಸುತ್ತಲೂ ಬೇಲಿ ಇದೆ. ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಪ್ರವೇಶ ದ್ವಾರಗಳಿವೆ. ಈ ದ್ವಾರಗಳ ಮೇಲ್ಭಾಗದಲ್ಲಿ ಬೌದ್ಧ ಜಾತಕ ಕಥೆಗಳು, ಅಶೋಕ ಚಕ್ರವರ್ತಿಯ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಚಿತ್ರಿಕಟ್ಟಿವೆ. ಪೂರ್ವ ದ್ವಾರದಲ್ಲಿ ಗೌತಮ (ಭಗವಾನ್ ಬುದ್ಧ ದೇವನ ಪೂರ್ವಾಶ್ರಮದ ಹೆಸರು) ಅರಮನೆಯನ್ನು ತೊರೆದು ಹೋಗುತ್ತಿರುವ ಚಿತ್ರವಿದೆ. ಪಶ್ಚಿಮ ದ್ವಾರದಲ್ಲಿ ಬುದ್ಧನ ಏಳು ಅವತಾರಗಳನ್ನು ರೂಪಿಸಿದ್ದಾರೆ. ಮೇಲೆ ಬುದ್ಧನ ಪ್ರಥಮ ಬೋಧನೆ ಕೆಳಗೆ ಬೋಧಿವೃಕ್ಷದ ಕುರಿತ ಕಥೆ ಇದೆ ಈ ಮಹಾಸ್ತೂಪದ ಉತ್ತರ ದ್ವಾರರೂಪದಲ್ಲಿಯ ಪ್ರಕೃತಿಯ ವಿಕೋಪಕ್ಕೆ ಒಳಗಾಗದೆ ನಿಂತಿರುವ ವರ್ಣಗಳಿಂದ ಹಾಗೆಯೇ ಇದೆ. ಮೇಲ್ಭಾಗದಲ್ಲಿ ಬೌದ್ಧ ಧರ್ಮಚಕ್ರವಿದೆ. ಎಡ ಭಾಗದ ಕಂಬದ ಮೇಲೆ ಬುದ್ಧನು ಸಿಂಹಾಸನದ ಪರ್ಯಂಕವಾಗಿ ಅಂತರಾಳದಲ್ಲಿ ನಡೆಯುತ್ತಾ ಕಾಲಿನಿಂದ ಜ್ವಾಲೆ, ತಲೆಯಿಂದ ನೀರನ್ನು ಹೊರ ಚೆಲ್ಲುತ್ತಲಿರುವ ಚಿತ್ರವಿದೆ. ದಕ್ಷಿಣ ದ್ವಾರದ ಮೇಲ್ಭಾಗದಲ್ಲಿ ಬುದ್ಧದೇವನ ಜನನವನ್ನು ಪರಿಚಯ ಮಾಡಿ ಕೊಡುವ ಚಿತ್ರವಿದೆ.

ಸಾಂಚಿಯಲ್ಲಿ ಈ ಮಹಾ ಸ್ತೂಪದೊಂದಿಗೆ ಇನ್ನೆರಡು ಚಿಕ್ಕ ಸ್ತೂಪಗಳು, ಒಂದು ಅಶೋಕಸ್ತಂಭ ಇದೆ. ಅಶೋಕ ಸ್ತಂಭ ಭಗ್ನವಾಗಿ ಉದುರಿ ಬಿದ್ದಿದೆ. ಇದು ೪೨ ಅಡಿ ಎತ್ತರದ ಏಕಶಿಲಾ ಸ್ತಂಭ ಇದರ ಮೇಲೆ ಅಶೋಕನ ಮಾಹಿತಿಯೊಂದನ್ನು ಬ್ರಾಹ್ಮಿಲಿಪಿಯಲ್ಲಿ ಕೆತ್ತಲಾಗಿದೆ. 'ಬೌದ್ಧನು ಒಳ್ಳೆ ಪಂಥಗಳನ್ನು ತೊರೆಯಬೇಕು' ಎಂದು ಅಶೋಕ ಕರೆಯಿತ್ತಿದ್ದಾನೆ.

೩೯ ಅಡಿ ವ್ಯಾಸ ೨೨ ಅಡಿ ಎತ್ತರದ ಎರಡನೆಯ ಸ್ತೂಪ ಕ್ರಿ. ಪೂ. ೧೫೦ರಲ್ಲಿ ನಿರ್ಮಾಣವಾಯಿತು. ಎರಡನೆಯ ಸ್ತೂಪದ ಸುತ್ತಲೂ ಬಲವಾದ ಬೇಲಿ ಇದೆ. ಮಹಾ ಸ್ತೂಪಕ್ಕೆ ಈಶಾನ್ಯದಲ್ಲಿ ಸುಮಾರು ೫೦ ಅಡಿ ದೂರದಲ್ಲಿ ಒಂದೆಯ ಸ್ತೂಪವಿದೆ. ಈ ಸ್ತೂಪದ ನಿರ್ಮಾಣ ಕ್ರಿ. ಪೂ. ೧೫೦ರಿಂದ ೧೪೦ರೊಳಗಿನ ಕಾಲದ್ದೆಂದು ಇತಿಹಾಸಕಾರರು ಅಂದಾಜು ಮಾಡಿದ್ದಾರೆ. ಹಳೆಯ ನಿರ್ಮಾಣದ ಅವಶೇಷಗಳನ್ನು ಅಗೆದಾಗ ಎರಡು ಶಿಲೆಯ ಪೆಟ್ಟಿಗೆಗಳು ದೊರೆತವು. ಕಲ್ಲಿನ ಪೆಟ್ಟಿಗೆಗಳಲ್ಲಿ ಬುದ್ಧನ ಶಿಷ್ಯರುಗಳ ಅವಶೇಷವಿದ್ದವು. ಒಂದು ಪೆಟ್ಟಿಗೆಯಲ್ಲಿ ಸಾರಿಪುತ್ರ (ಶಾರಿಪುತ್ರ)ನ ಅವಶೇಷ ಮತ್ತೊಂದರಲ್ಲಿ ಮಹಾ ಮೊಗ್ಗಲಾನ (ಮಾದ್ಗಲ್ಯಾಯನ)ರ ಅವಶೇಷವಿತ್ತು. ಈ ಅವಶೇಷಗಳನ್ನು ಲಂಡನ್ನಿಗೆ ತೆಗೆದುಕೊಂಡು ಹೋಗಿ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂಗಳಲ್ಲಿಟ್ಟರು.

೧೯೧೨ ರಿಂದ ೧೯೧೮ ರ ವರೆಗೆ ಸ್ತೂಪಗಳ ಪುನರ್ ನಿರ್ಮಾಣ ಕಾರ್ಯ ನಡೆಯಿತು. ದ್ವಿತೀಯ ವಿಶ್ವ ಮಹಾಯುದ್ಧ

(ಒಂಭತ್ತನೇ ಪುಟ ನೋಡಿರಿ)

ಅದರೆ ಅವುಗಳು ನಡೆದುಕೊಂಡ ರೀತಿ....?

ವಿಧಾನಸಭೆಯ. ವಿಶೇಷ ಅಧಿವೇಶನ ಕೂಡಿತು. ಸಭೆಯ ಮುಂದಾಳು ತಿರುವೆಡಂಬುಳ್ಳಿಯನ್ನಾರವರು ದಿಢೀರ್ ಸಭೆ ಕರೆಯಲೇನು ಕಾರಣವೆಂಬುದನ್ನು ತಿಳಿಸಿದರು. ಭಾಷಾ ಬಡಬಾಗ್ನಿ ಹುಟ್ಟಿತ್ತಿದೆ. ಅದನ್ನು ತಡೆಯಲೇನು ಮಾಡೋಣ? ಇದನ್ನೇಯೋಚಿಸೋಣ. ಇತರ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸೋಣವೆಂದು ಅವರು ಹೇಳಿದರು. ಒಂದು ಮನೆಗೆ ಒಮ್ಮೆ ಬೆಂಕಿ ಬಿದ್ದಾಗ ಬಹಳ ಜನ ಅಲ್ಲಿ ನೆರೆದರು. ಅವರು ಬೆಂಕಿಯನ್ನು ಆರಿಸುವುದನ್ನು ಮನೆಯೊಳಗಣ ಸೊತ್ತುಗಳು ನಾಶವಾಗದಂತೆ ನೋಡಿಕೊಳ್ಳುವ ಬದಲು, ಮನೆಗೆ ಬೆಂಕಿ ಬೀಳಲೇನು ಕಾರಣ, ಅದನ್ನು ನೊಂದಿಸುವದೆಂತು, ನೊಂದಿಸಲು ನೀರು ತೆಗೆಯಲು ಬಾವಿ ಎಲ್ಲಿ ತೋಡಬೇಕು, ಅದು ಎಷ್ಟು ಆಳ ಇರಬೇಕು ಮುಂತಾದ ಪ್ರಶ್ನೆಗಳನ್ನು ಒಬ್ಬರಿಗಿಂತೊಬ್ಬರು ತಾರಕ ಸ್ವರದಲ್ಲಿ ಕೇಳುವುದಂತೆಲ್ಲೇ ಹೊತ್ತು ತೆಗೆದರಂತೆ. ಅವರ ಮಾತುಕತೆ ಮುಗಿಯುಲೇ ಇಲ್ಲ. ಮನೆ ಮಾತ್ರ ಭಸ್ಮೀಭೂತವಾಗಿ ಬಿಟ್ಟಿತು. ಮದರಾಸಿನ ವಿಶೇಷ ಅಧಿವೇಶನ ಅದರ ಜ್ಞಾಪಕವನ್ನು ತರುತ್ತದೆ- ದ್ರಾವಿಡ ಮುನ್ನೇತ್ರ ಕಾಳ್ಗಳಗಾಗಲೀ, ಕಾಂಗ್ರೆಸ್ಸಾಗಲೀ, ಸ್ವತಂತ್ರ ಪಾರ್ಟಿಯಾಗಲೀ, ಸಂಯುಕ್ತ ಸೋಷ್ಯಲಿಸ್ಟ್ ಪಕ್ಷವಾಗಲೀ, ಕಮ್ಯೂನಿಸ್ಟ್ ಪಾರ್ಟಿಯಾಗಲೀ, ಮುಸ್ಲಿಂ ಲೀಗಾಗಲೀ ತಮಿಳು ಅರಸು ಕಳ್ಳಗಂ ಆಗಲೀ ಪರಿಹಾರೋಪಾಯವನ್ನು ಸೂಚಿಸುವ ಬದಲು, ಈ ಸಂದರ್ಭದಲ್ಲಿ ಹೇಗೆ ಮಾತಾಡಲು, ತಮಗೆಷ್ಟು ಮತಗಳು ಸಿಕ್ಕಿಯುವೆಂಬುದನ್ನು ಗಮನದಲ್ಲಿಟ್ಟುಕೊಂಡೇ ಕಣದಲ್ಲಿಳಿದರು. ಹಿಂದಿಯನ್ನು ವಿರೋಧಿಸುವುದರಲ್ಲಿ ಇತರರಿಗಿಂತ ತಾವಿನಿತೂ ಹಿಂದುಳಿದಿಲ್ಲವೆಂಬುದನ್ನು ಅವರು ಎದೆಹಟ್ಟಿ (ಅದೆಕ್ಕಂಕಲೂ ವೇಣು ಕಟ್ಟಿ) ಗುಡುಗಿದರು. ಕೇಂದ್ರ ಸರ್ಕಾರವು ತಮಿಳ್ನಾಡಿಗೆ ಮಹಾಪರಾಧ ಕೂಡಿತು. ತಮಿಳಿಗೆ ಮೇಲೆ ಹಿಂದಿಯ ಹೊರೆಯನ್ನು ಹೇರಿ, ದ್ವಿತೀಯ ತರಗತಿಯ ಪ್ರಜೆಗಳನ್ನಾಗಿ ಮಾಡಿರುತ್ತದೆ. ಜನತೆ ಇದನ್ನು ಸಹಿಸಲಾರದು. ಅದಾಗಲೇ ಅವರು ತಮ್ಮ ಅಸ್ವಸ್ಥತೆಯನ್ನು ಪ್ರಕಟಪಡಿಸಿದ್ದಾರೆ. ದಿಲ್ಲಿ ಬಾದಶಹರೀಗ ಬಗ್ಗಲೇ ಬೇಕು. ಇಲ್ಲದಿದ್ದಲ್ಲಿ ಭಾಷಾ ಬಡಬಾಗ್ನಿ ತಣಿಯಲಾರದು. ಈ ನಾಶಕಾರಕ ಕೃತ್ಯಕ್ಕೆ ಉತ್ತರದ ಸರ್ಕಾರವೇ ಕಾರಣ. ಈಗಲಾದರೂ ಅದು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕು....

ಉತ್ತರ ಕುವರರನ ಪೌರುಷದ ಮಾತುಗಳಿಗೆ ಕೊನೆ ಇದೆ ಏನು? ತಾನೇ ಉತ್ತಮ ಉತ್ತಮ ಕುಮಾರರೆಂದು ಹೇಳಿಕೊಳ್ಳಲು ಹಿಂಜರಿಯುವವರು ವಿಶೇಷ ಅಧಿವೇಶನದಲ್ಲಿ ಅದೇನಾಡಿದರು?

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ತೆಂಗಿನ ತೋಟಕ್ಕೆ ಹೆಚ್ಚು ನೀರು ಬೇಕು

ತೋಟದ ಬೆಳೆಯಾಗಲಿ, ಹಣ್ಣಿನ ಬೆಳೆಯಾಗಲಿ ಯಾವ ಬೆಳೆಯೇ ಆದರೂ ಸರಿಯೇ, ಅವುಗಳ ಬೆತ್ತನೆ, ಗೊಬ್ಬರ ಮುಂತಾದುವುಗಳೇ ಅಲ್ಲದೆ ಜಮೀನಿನಲ್ಲಿ ಸಾಕಷ್ಟು ತೇವಾಂಶವಿದ್ದರೆ ಮಾತ್ರ ಬೆಳೆ ಚೆನ್ನಾಗಿ ಆಗಲು ಸಾಧ್ಯ. ಜಮೀನಿನಲ್ಲಿ ಹೆಚ್ಚು ತೇವಾಂಶ ವಿದ್ದರೂ ಕಡಿಮೆ ತೇವಾಂಶವಿದ್ದರೂ ಬೆಳೆಗೆ ಹಾನಿಕರ. ನೀರು ನಿಲ್ಲುವ ಜಮೀನಾದರೆಂತೂ ಬೆಳೆ ಚೆನ್ನಾಗಿ ಬೆಳೆಯುವುದಿಲ್ಲ, ಅಲ್ಲದೆ ರೋಗ ಹತ್ತುವುದು ಮತ್ತು ಇಳುವರಿಯೂ ಕಡಿಮೆ ಯಾಗುವುದು

ತೋಟದ ಬೆಳೆಗೆ ಸಾಮಾನ್ಯವಾಗಿ ನೀರು ಹಾಯಿಸುವುದು ಕಡಿಮೆ. ಮತ್ತು ಅದಕ್ಕೆ ಅನುಗುಣವಾದ ಮಣ್ಣು, ಹವಾಗುಣ ಮತ್ತು ಇತರ ಸೌಲಭ್ಯಗಳಿರುವೆಡೆಯಲ್ಲಿ ಮಾತ್ರ ತೋಟದ ವ್ಯವಸಾಯ ಮಾಡುವ ಪದ್ಧತಿ ಆದರೆ, ಇತ್ತೀಚೆಗೆ ತೋಟದ ಬೆಳೆಗಿರುವ ಬೇಡಿಕೆಯಿಂದಾಗಿ ಎಲ್ಲೆಡೆಯಲ್ಲಿಯೂ ತೋಟದ ವ್ಯವಸಾಯ ಕೈಗೊಳ್ಳಲಾಗುತ್ತಿದೆ. ಉದಾ:— ತೆಂಗು ವ್ಯವಸಾಯ.

ತೆಂಗನ್ನು ತೀರ ಪ್ರದೇಶಗಳಲ್ಲಿರುವ ಮರಳು ಮಣ್ಣು, ಗೋಡು ಮಣ್ಣು, ಜೇಡಿ ಮಣ್ಣು, ಮುಂತಾದ ಎಲ್ಲಾ ಬಗೆಯ ಮಣ್ಣುಗಳಲ್ಲೂ ಬೆಳೆಯಲಾಗುತ್ತಿದೆ ಆದರೆ ಅಡಕೆಯನ್ನು ಕೆಲವು ಆಯ್ದ ಎಡೆಗಳಲ್ಲಿ ಮಾತ್ರ ಬೆಳೆಯಲು ಸಾಧ್ಯ. ಪಶ್ಚಿಮ ತೀರ ಪ್ರದೇಶಗಳಲ್ಲಿ ತೆಂಗು ಮತ್ತು ಅಡಕೆಯನ್ನು ಬಹಳ ಕೆಚ್ಚಾಗಿ ಬೆಳೆಯುವರು. ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ತೆಂಗು ಮತ್ತು ಅಡಕೆ ಚೆನ್ನಾಗಿ ಬೆಳೆಗೂಗುತ್ತದೆ. ಏಕೆಂದರೆ ದಕ್ಷಿಣದಲ್ಲಿ ಆಗುವ ಮಳೆ ಅಡಕೆ ಮತ್ತು ತೆಂಗು ಬೆಳೆಗೆ ಬಹಳ ಅನುಕೂಲವಾಗಿದೆ. ತೆಂಗನ್ನು ಮರಳು ಮಣ್ಣು ಅಥವಾ ಮರಳು ಗೋಡು ಮಣ್ಣಿನಲ್ಲಿ ಬೆಳೆದರೆ ಫಲಿತಾಂಶ ಭಾವದಿಂದ ಬೆಳೆ ಹಾಳಾಗುವುದು ಹೆಚ್ಚು. ಜಮೀನಿನಲ್ಲಿ ಸಾಕಷ್ಟು ತೇವಾಂಶವಿಲ್ಲದಿದ್ದರೆ ಮಳೆದ ಎಲೆಗಳು ಉದುರಿ ಹೋಗುವುವು, ಗೊಂಚಲು ಬಿದ್ದು ಹೋಗುವುವು, ಎಳೇ ತೆಂಡು ಕೂಡಾ ಬೀಳಲಾರಂಭಿಸುವುವು.

ಬೇಸಿಗೆ ಕಾಲದಲ್ಲಿ ಜಮೀನಿನಲ್ಲಿನ ತೇವಾಂಶತೆ ಹೆಚ್ಚಿಸಲು ಸಾಕಷ್ಟು ನೀರು ಹಾಯಿಸುವುದೇ ಸುಧಾರಿತ ವ್ಯವಸಾಯ ಪದ್ಧತಿಯನ್ನು ಅನುಸರಿಸಿದರೆ ಮಾತ್ರ ತೆಂಗಿನ ಮರಗಳು ಚೆನ್ನಾಗಿ ಬೆಳೆದು ಹೆಚ್ಚು ಕಾಯಿ ಬಿಡುವುದು.

ಕಾಸರಗೋಡಿನಲ್ಲಿರುವ ಕೇಂದ್ರೀಯ ತೆಂಗು ಸಂಶೋಧನಾ ಕೇಂದ್ರದವರು ಕ್ಷೇತ್ರ ಪ್ರಯೋಗವನ್ನು ಮರಳುಗೋಡಿ ಮಣ್ಣಿನಲ್ಲೂ, ಕೇರಳದ ಕಣ್ಣಾನೂರು ಜಿಲ್ಲೆಯಲ್ಲಿರುವ ತೆಂಗು ಸಂಶೋಧನಾ ಕೇಂದ್ರದವರು ಮರಳು ಮಣ್ಣಿನಲ್ಲಿ ನಡೆಸಿದಾಗ ಬೇಸಿಗೆ ಕಾಲದಲ್ಲಿ ತೆಂಗಿನ ಗಿಡಗಳಿಗೆ ನೀರು ಹಾಯಿಸುವುದರಿಂದ, ಅದರಲ್ಲೂ ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ತೆಂಗಿನ ಗಿಡಗಳಿಗೆ ಬೇಸಿಗೆಯಲ್ಲಿ ನೀರು ಹಾಯಿಸುವುದರಿಂದ ಗಿಡಗಳೂ ಚೆನ್ನಾಗಿ ಬೆಳೆದು ಹೆಚ್ಚು ಕಾಯಿಗಳು ಬಿಟ್ಟಿದ್ದು ಕಂಡುಬಂದಿದೆ. ಕಾಸರಗೋಡಿನಲ್ಲಿ ನೀರು ಹಾಯಿಸದೇ ಇದ್ದ ಗಿಡಗಳಿಗಿಂತ ನೀರು ಹಾಯಿಸಿದ ಪ್ರತಿಯೊಂದು ಗಿಡದಲ್ಲೂ ಸರಾಸರಿ ೨೦ ತೆಂಗಿನ ಕಾಯಿಗಳು ಹೆಚ್ಚು ದೊರೆತವು. ಕಣ್ಣಾನೂರಿನಲ್ಲಿ ನಡೆಸಿದ ಪ್ರಯೋಗಗಳಲ್ಲೂ ಕೂಡ, ವರ್ಷಕ್ಕೆ ೫ ತೆಂಗಿನ ಕಾಯಿ ಕೊಡುತ್ತಿದ್ದ ಗಿಡಗಳಲ್ಲಿ ಸರಾಸರಿ ೩೦ ಕಾಯಿ ಬಿಟ್ಟಿದ್ದು ಕಂಡುಬಂದಿದೆ. ಪಶ್ಚಿಮ ತೀರಗಳಲ್ಲಿರುವ ಚೆನ್ನಾಗಿ ನೀರು ಬಸಿದು ಹೋಗುವಂತಹ ಜಮೀನಿನಲ್ಲಿ ತೆಂಗು ತೋಟವಿದ್ದರೆ ಸಮುದ್ರದ ನೀರು ಅಥವಾ ಹಳ್ಳು ನೀರು ಹಾಯಿಸಿದರೂ ಚೆನ್ನಾಗಿ ಬೆಳೆಯುಗುವುದು. ಉಪ್ಪು ಗೊಬ್ಬರ ಹಾಕಿದ ಕೂಡಲೆ ನೀರು ಹಾಯಿಸಿದರೆ ಇಳುವರಿಯೂ ಹೆಚ್ಚುವುದು.

ವರ್ಷಾಪೂರ್ತಿ ಚೆನ್ನಾಗಿ ಮಳೆಯಾಗುವ ಪ್ರದೇಶಗಳಲ್ಲಿ ಅಥವಾ ಬೇಸಿಗೆ ಕಾಲದಲ್ಲೂ, ತೇವಾಂಶತೆಯಿರುವಂತಹ ಮಣ್ಣಿನಲ್ಲಿ ನೀರು ಹಾಯಿಸದಿದ್ದರೂ ಬೆಳೆಗೆ ತೊಂದರೆಯಾಗದೆ. ಹಾಗಿಲ್ಲದಿದ್ದರೆ ನೀರು ಹಾಯಿಸಲೇ ಬೇಕು.

ಸೌರಾಷ್ಟ್ರ, ಮಹಾರಾಷ್ಟ್ರ, ಆಂಧ್ರ ಪ್ರದೇಶ ನಮ್ಮ ತೀರ ಪ್ರದೇಶ, ಮೈಸೂರಿನಲ್ಲಿನ ತೆಂಗು ತೋಟಗಾರರು ಬೇಸಿಗೆಯಲ್ಲಿ ತಪ್ಪದೇ ಗಿಡಗಳಿಗೆ ನೀರು ಹಾಯಿಸುತ್ತಾರೆ. ರೈತರು ತಮ್ಮ ತೋಟದಲ್ಲಿಗೆ ನೀರು ಹಾಯಿಸದಿರುವುದಕ್ಕೆ ಕೀಳಿನ ಅಭಾವವೇ ಮುಖ್ಯ ಕಾರಣ. ಬೇಸಿಗೆ ಕಾಲದಲ್ಲಿ ಪಶ್ಚಿಮ ತೀರ ಪ್ರದೇಶಗಳಲ್ಲಿರುವ ಬಾವಿಗಳಲ್ಲಿನ ನೀರು ಹೆಚ್ಚು ಬತ್ತಿಹೋಗುವುದು. ಅಥವಾ ನೀರು ಬಹಳ ಕಡಿಮೆ ದೊರೆಯುತ್ತದೆ. ಕೆಲವೆಡೆಗಳಲ್ಲಿ ಬೋರ್‌ವೆಲ್‌ಗಳನ್ನು ಅಗೆದು ಕಂಪ್ರೆಸರ್‌ಗಳ ಸಹಾಯದಿಂದ ತೋಟಕ್ಕೆ ನೀರು ಹಾಯಿಸಬಹುದು. ಕೆಲವು ತೆಂಗಿನ ಗಿಡಗಳನ್ನು ಮಾತ್ರ ಬೆಳೆಯುವ ರೈತರುಗಳ ಕೊಳಗಳಿಂದ ನೀರು ತಂದ ಕೈಯಿಂದಲೇ ಹಾಕಬಹುದು. ಪಂಚವರ್ಷಿಕ ಯೋಜನೆಯಲ್ಲಿ ತೆಂಗಿನ ತೋಟಗಾರರಿಗೆ ನೀರಾವರಿ ಕೆಲಸಕ್ಕಾಗಿಯೆಂದೇ ಸಹಾಯ ದ್ರವ್ಯ ಅಥವಾ ಸಾಲವನ್ನು ಕೊಡಲು ನಿರ್ಧರಿಸುವುದರಿಂದ ತೆಂಗಿನ ತೋಟಕಾರರು ಅಹಣವನ್ನು ಉಪಯೋಗಿಸಿಕೊಂಡು ಹೆಚ್ಚು ಉತ್ಪತ್ತಿ ಪಡೆಯ ಬಹುದು. ಈ ನೀರಾವರಿ ಕಾರ್ಯಕ್ರಮ ಕೈಗೊಳ್ಳುವುದರಿಂದ ರೈತರು ಹೆಚ್ಚು ತೆಂಗಿನ ಕಾಯಿಗಳನ್ನು ಪಡೆಯುವುದೇ ಅಲ್ಲದೆ ಅಂತರ ಬೆಳೆಯಾಗಿ ತರಕಾರಿ, ಗೆಡ್ಡೆ ಬೆಳೆ ಮುಂತಾದ ವಿಷ್ಟು ಬೆಳೆದು ಹೆಚ್ಚು ಲಾಭ ಪಡೆಯ ಬಹುದು.

ತೆಂಗಿನ ತೋಟದಿಂದ ಹೆಚ್ಚು ಇಳುವರಿ ಪಡೆದು ಲಾಭಕಂಪಾದಿಸಲು ಬೇಸಿಗೆಯಲ್ಲಿ ನೀರು ಹಾಯಿಸುವುದು ಬಹಳ ಅವಶ್ಯವಾದುದರಿಂದ, ನೀರನ್ನು ಪೋಲು ಮಾಡದೆ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ವಿಧಾನವನ್ನು ಅಳವಡಿಸಿಕೊಳ್ಳುವುದು ಅವಶ್ಯ. ಆದರೆ ಗಿಡಗಳಿಗೆ ನೀರು ಹಾಯಿಸುವ ವಿಧಾನ, ಎಷ್ಟು ದಿನಗಳಿಗೊಮ್ಮೆ ನೀರು ಹಾಯಿಸಬೇಕು, ಪ್ರತಿಸಲವೂ ಎಷ್ಟು ನೀರು ಹಾಯಿಸಬೇಕು, ಎಂಬುದು ಮಣ್ಣಿನ ಗುಣ ಮತ್ತು ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ.

ಅನೇಕ ಕಡೆಗಳಲ್ಲಿ ಗಿಡದ ಸುತ್ತಲೂ ಪಾತಿ ಮಾಡಿ, ಅಥವಾ ಹೊಂಡ ತೋಡಿ ನೀರು ಹಾಯಿಸುವ ಪದ್ಧತಿಯುಂಟು. ಪಾತಿ ಮಾಡಿ ನೀರು ಹಾಯಿಸುವುದೇ ಉತ್ತಮ ಗಿಡಗಳಿಗೆ ಅಡಿಗಡಿಗೆ ನೀರು ಹಾಯಿಸುವುದು, ಮಣ್ಣಿನಲ್ಲಿ ತೇವ ಎಷ್ಟು ದಿನ ಉಳಿಯುವುದು ಮತ್ತು ಶುಷ್ಕತೆಯ ಅಂಶವನ್ನನುಸರಿಸಿರುತ್ತದೆ. ಮರಳು ಮಣ್ಣಿರುವ ಕಡೆಗಳಲ್ಲಿ ವಾರಕ್ಕೊಂದು ಸಲ ನೀರು ಹಾಯಿಸಿದರೆ ಸಾಕು ಹೆಚ್ಚು ತೇವಾಂಶವಿರಬಲ್ಲ ಮಣ್ಣಿನಲ್ಲಿ ೭—೧೦ ದಿನಕ್ಕೊಮ್ಮೆ ನೀರುಹಾಯಿಸಿದರೆ ಸಾಕು. ಗಿಡಗಳ ಬೇರು ಚೆನ್ನಾಗಿ ನೀರು ಹೀರುವವರೆಗೂ ನೀರು ಹಾಯಿಸಬೇಕು, ನೀರು ಪೋಲಾಗದಂತೆ ನೋಡಿಕೊಳ್ಳಬೇಕು. ಜಿ. ಐ. ಅಥವಾ ಹೆಚ್. ಸಿ ಪೈಪುಗಳನ್ನು ಉಪಯೋಗಿಸುವುದು, ಸಾಮಾನ್ಯ ವಾಡಿಕೆ. ಗಿಡ ಚೆನ್ನಾಗಿ ಬೆಳೆದು ಒಳ್ಳೆಯ ಕಾಯಿಬಿಡಲು ಹಾಯಿಸಿದ ನೀರು ಚೆನ್ನಾಗಿ ಬಸಿದು ಹೋಗುವಂತೆ ಎಚ್ಚರಿಕೆ ವಹಿಸಬೇಕು. ಹೆಚ್ಚು ನೀರು ಹಾಯಿಸಿದರೆ ಅಥವಾ ಹೆಚ್ಚು ಬಾರಿ ನೀರು ಹಾಯಿಸಿದರೆ ಅಥವಾ ಹೆಚ್ಚು ಮಳೆ ಸುರಿದು ನೀರು ಹಾಳಾಗುವುವು. ನೀರು ಸರಿಯಾಗಿ ಬಸಿದು ಹೋಗದಿದ್ದರೆ ಅಥವಾ ನೀರು ನಿಂತರೆ ಗಿಡಗಳಿಗೆ ರೋಗಗಳು ಹತ್ತುವುವು.

ಭಾಷಾ ಸಮಸ್ಯೆ ಹಾಗೂ ಪರಿಹಾರ

(ಐದನೇ ಪುಟದಿಂದ)

ಯುಳ್ಳ ಭಾಷೆಯಾದ ನಮ್ಮ ರೀತಿ—ನೀತಿ, ಆಚಾರ—ವಿಚಾರ, ಧಾರ್ಮಿಕ, ಸಾಮಾಜಿಕ; ರಾಜನೈತಿಕ ಆದರ್ಶಗಳ ಛಾಯೆಯಾದ ಭಾರತೀಯ ದರ್ಶನ, ಧರ್ಮ ಹಾಗೂ ಕಲೆಗಳ ಪ್ರತೀಕವಾದ ಹಿಂದೀ ಭಾಷೆಯೇ ರಾಷ್ಟ್ರ ಭಾಷೆಯಾಗಲು ಸಮರ್ಥವಾದ ಭಾಷೆಯಾಗಿದೆ

ಕಲವರು ನಮ್ಮ ಸಂಸ್ಕೃತಿಗೆ ಕಾರಣವಾದ ಸಂಸ್ಕೃತವನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಹೇಳಬಹುದು. ಅದು ಕಠಿಣ ಸಾಧ್ಯ. ಒಂದು ವೇಳೆ ಅದನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕಾದರೆ ಅದನ್ನು ಪ್ರಚಾರ ಮಾಡಬೇಕು. ಇದು ಸಾಧ್ಯವಾಗುತ್ತೆ?

ಹಿಂದಿ ಭಾಷೆಯ ಹೆಸರಿನಲ್ಲಿ ಇಂದು ಕೆಲವೆಡೆ ಅತ್ಯಾಚಾರವು ನಡೆಯುತ್ತಿರುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ನಮ್ಮ ರಾಷ್ಟ್ರವನ್ನು ನಾವೇ ಹಾಳುಗೈಯ್ಯುತ್ತಿದ್ದೇವೆ! ಹಿಂದೀ ಭಾಷೆಯನ್ನು ನಿರಾಕರಿಸಿದರೆ, ಅದರ ಮೇಲಿನ ಪ್ರೀತಿಯನ್ನು ಕಳೆದ ಕೊಂಡರೆ ಪಮ್ಮ ದೇಶವನ್ನೇ ನಿರಾಕರಿಸಿದಂತಾಗುವುದು. ಹಿಂದಿಗೆ ಧಿಕ್ಕಾರವೂಡಿದರೆ ನಮ್ಮ ದೇಶಕ್ಕೇನೆ ಧಿಕ್ಕಾರ ಗೈದಂತಾಯ್ತು. ಆದುದರಿಂದ ನಮ್ಮ ದೇಶದ ಈ ಸ್ಥಿತಿಯನ್ನು ಮನಗಂಡು, ನಾವು ಎಚ್ಚತ್ತು, ದೇಶದ ಏಳಿಗೆಗಾಗಿ ದುಡಿಯಬೇಕಾಗಿದೆ.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ

ಹೊಟೆಲ್ ಶಿವ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಳಿಯ ಶುದ್ಧಾಹಾರ ಸುಖ-ರುಚಿಯಾದ ಭೋಜನ, ಸಕಲ ವಿಧದ ತಂಪಿತಿಪಸು
ಶಾಖಾಹಾರಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಾಲಾತ್ರ ಹೊಟೆಲ್.

ಮೂಲ್ಕಿಯ ಸಾವಂತ ಅರಸರು

(ನಾಲ್ಕನೇ ಪುಟದಿಂದ)

ಕಲೆ, ಸಾಹಿತ್ಯ, ಧರ್ಮಕ್ಕೆ ಪ್ರೋತ್ಸಾಹ:—ಇತರ ಕೆಳು ರಾಜರಂತೆ ಮೂಲ್ಕಿ ಸಾವಂತ ಅರಸರು ಕಲೆ, ಸಾಹಿತ್ಯ, ಮತ್ತು ಧರ್ಮಕ್ಕೆ ಪ್ರೋತ್ಸಾಹ ವಿತ್ತಿದ್ದರು. ಕುಲವಾರು ಜೈನ ಬಸದಿಗಳೂ, ದೇವಸ್ಥಾನಗಳೂ ಇನ್ನಿತರ ಕೆತ್ತನೆಗಳೂ ಇವರ ಕಾಲದಲ್ಲಿ ಸ್ಥಾಪಿಸಲ್ಪಟ್ಟಿತು. ಜೈನ ಬಸದಿಗಳ ಎದುರಿಗಿದ್ದ ಮಾನಸ್ತಂಭದಲ್ಲಿರುವ ಕೆತ್ತನೆಯೂ, ಜೈನ ಬಸದಿಗಳಲ್ಲಿ ಮುಖ್ಯವಾಗಿ ಅನಂತ ಸ್ವಾಮಿ ಬಸದಿಯ ವಿಗ್ರಹವೂ, ಅದರ ಕಂಭದಲ್ಲಿರುವ ಕೆತ್ತನೆಯೂ ಮೂಲ್ಕಿ ಸಾವಂತ ಅರಸರು ಕಲೆಗೆ ನೀಡಿದ ಪ್ರೋತ್ಸಾಹಕ್ಕೆ ವಿದರ್ಶನವಾಗಿ ಕಿ. ಮೂಲ್ಕಿ ಸಾವಂತ ಅರಸರು ಜೈನರಾದರೂ ಹಿಂದೂ ದೇವಸ್ಥಾನಗಳಿಗೆ ಉಂಬಳಿಯನ್ನು ಬಿಟ್ಟು ಹಿಂದೂಧರ್ಮವನ್ನು ಪ್ರೋತ್ಸಾಹಿಸಿದರು. ಇದೇ ರೀತಿಯಲ್ಲಿ ಅನ್ಯ ಮತದವರನ್ನು ಹಿಂಸಿಸಲಿಲ್ಲ. ಇವರ ರಾಜ್ಯದಲ್ಲಿ ಕುಲ ದೇವಸ್ಥಾನವಾದ ಶಿವಮಂತೂರು ಜನಾರ್ಧನ ದೇವಸ್ಥಾನ, ಬಪ್ಪನಾಡು ದೇವಸ್ಥಾನ ಪಾವಂಜೆ ಮಹಾಲಿಂಗೇಶ್ವರ ದೇವಸ್ಥಾನಗಳಿದ್ದವು. ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನವು ಇವರ ರಾಜ್ಯದ ಮುಖ್ಯ ದೇವಸ್ಥಾನವಾಗಿದೆ. ಈ ದೇವಸ್ಥಾನವು ಒಂಭತ್ತು ಮಾಗಣೆಯವರಿಗೆ ಹಕ್ಕಿರುವ ದೇವಸ್ಥಾನವಾಗಿದೆ. ಈ ದೇವಸ್ಥಾನವು ಸಾವಂತರು ಮೂಲ್ಕಿಗೆ ಬರುವ ಮೊದಲು ಕಟ್ಟಲಾಗಿತ್ತು ಎಂದು ತಿಳಿಸಲು ಇತಿಹಾಸಗಾರರಿಗೆ ಆಧಾರಗಳು ಸಿಕ್ಕಿವೆ. ಈ ದೇವಸ್ಥಾನವನ್ನು ಬಪ್ಪ ಖ್ಯಾತಿ ಕಟ್ಟಿಸಿದನೆಂಬುವುದಕ್ಕೆ ಪೋಷಕವಾದ ಸಾಂಪ್ರದಾಯಿಕ ದಂತಕಥೆಯೊಂದಿದೆ. ಈಗ ಇರುವ ದೇವಸ್ಥಾನವನ್ನು ಸೀಪೆಯವರು ಕೂಡಿ ದೊಡ್ಡದಾಗಿ ಕಟ್ಟಿದರು. ಇಕ್ಕೆರಿ ಜಯನಗರದಲ್ಲಿ ಒಂದೇ ದೇವರಾಯನು ಕ್ರಿ. ಶ. ೧೪೧೧ರಲ್ಲಿ ಉಂಬಳಿ ಬಿಟ್ಟಿದ್ದನೆಂದು ತಿಳಿಯುವ ಶಾಸನ ಇದೆ. ಇದೇ ರೀತಿಯಲ್ಲಿ ಪಾವಂಜೆಯ ಮಹಾಲಿಂಗೇಶ್ವರ ದೇವಸ್ಥಾನಕ್ಕೂ ವಿಜಯನಗರದ ಇಮ್ಮಡಿ ದೇವರಾಯನು ಉಂಬಳಿ ಬಿಟ್ಟಿದ್ದನು. ಸಾವಂತ ಅರಸರಿಗೆ ಸಾಹಿತ್ಯದಲ್ಲಿ ಆಸಕ್ತಿ ಇದ್ದಿತು. ಇವರು ಕವಿ ಪದ್ಮನಾಭನಿಗೆ ಪದ್ಮಾವತಿ ಚರಿತ್ರೆ ಬರೆಯಲು ಪ್ರೋತ್ಸಾಹಿಸಿದರು.

ಉಪಸಂಹಾರ:— ಸಾವಂತರು ಮೂಲ್ಕಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಮೂರು ಶತಮಾನಗಳ ವರೆಗೆ ಆಳಿದ್ದರು. ಆ ಕಾಲದಲ್ಲಿ ಇವರು ಕಲೆ, ಸಾಹಿತ್ಯ, ಧರ್ಮಕ್ಕೆ ಪ್ರೋತ್ಸಾಹಿತ್ತು, ಪರಕೀಯರ ಧಾಳಿಯನ್ನು ಹಿಡಿಗಟ್ಟಿ, ಸ್ವಾಮಾನವನ್ನು ಪ್ರೋತ್ಸಾಹಿಸಿ, ಈ ಪ್ರದೇಶವನ್ನು ಸುಭಿಕ್ಷವಾಗಿ ಮಾಡಿ ಕರ್ನಾಟಕ ಸಂಸ್ಕೃತಿಯನ್ನು ಬೆಳಗಿಸಿದರು.

(ಆಧಾರದಿಂದ)

[ಈ ಲೇಖನವನ್ನು ಬರೆಯಲು ಮಾರ್ಗದರ್ಶನವಿತ್ತ ಸ್ಪಿನ್ಸಿಪಾಲ್ ಶ್ರೀ ಪಿ. ಗುರುರಾಜ ಭಟ್ಟರಿಗೆ ಲೇಖಕರು ಕೃತಜ್ಞರಾಗಿದ್ದಾರೆ.]

ಸ್ಟೂಪಗಳ ನಗರ ಸಾಂಚಿ

(ಏಳನೇ ಪುಟದಿಂದ)

ಮತ್ತು ನಂತರ ಆಂಗ್ಲಸರ್ಕಾರ ಈ ಎರಡ ಪೆಟ್ಟಿಗೆಗಳನ್ನು ಭಾರತಕ್ಕೆ ಹಿಂದಿರುಗಿಸಿತು. ಈ ಪೆಟ್ಟಿಗೆಗಳು ಪ್ರದರ್ಶನದ ಸಲುವಾಗಿ ಸಿಂಹಳ, ಬರ್ಮಾ ಮತ್ತಿತರ ಆಗ್ನೇಯ ಏಷ್ಯಾ ರಾಜ್ಯಗಳಲ್ಲಿ ಸಂಚರಿಸಿದವು. ೧೯೫೨ನೆಯ ನವೆಂಬರ್ ತಿಂಗಳು ಮಹಾ ಸ್ತೂಪದ ಸಮೀಪದ ವಿಹಾರ ಒಂದರಲ್ಲಿ ಅಸ್ಥಿ (ಅವಶೇಷ) ಗಳನ್ನು ಸಮಾಧಿ ಮಾಡಿದರು.

'ಸಾಂಚಿ' ಎಂಬುದು ಶಾಂತಿ ಎನ್ನುವ ಪದದ ಅಪಭ್ರಂಶ ಎಂದು ಸುಪ್ರಸಿದ್ಧ ಸಂಶೋಧಕ, ಪ್ರಾಚ್ಯ ಶಾಸ್ತ್ರಜ್ಞ ಸುಬ್ರಹ್ಮಣ್ಯಂ ಅಭಿಪ್ರಾಯಪಟ್ಟರು. ಇನ್ನಭರತ ವಿದೇಶ ನಗರದ ಗಲಾಟೆಗಳಿಂದ ದೂರವಿದ್ದು ಸಾಂಚಿ ಪ್ರತ್ಯೇಕವಾಗಿ ರೂಪುಗೊಂಡಿತ. ಎನೆಯ ಶತಮಾನದ 'ಚೈತ್ಯ' (ವಂದಿ) ಗುಪ್ತ ದೇವಾಲಯ, ಅಶೋಕನ ರಾಣಿ ದೇವಿಗಾಗಿ ನಿರ್ಮಿಸಿದ ವಿಹಾರ—ಸಾಂಚಿಯ ಇತರ ಪ್ರೇಕ್ಷಣೀಯ ಸ್ಥಳಗಳು.

ಅನೇಕ ಬೌದ್ಧ ವಿಹಾರಗಳು, ಚೈತ್ಯಾಲಯಗಳು ಮತ್ತು ಹಿಂದೂ ದೇವಾಲಯಗಳು ಸಾಂಚಿಯ ಹತ್ತು ಮೈಲಿ ಸುತ್ತಳತೆಯಲ್ಲಿ ಅಲ್ಲಲ್ಲಿ ಕಾಣ ಬರುತ್ತವೆ. ಈವುಗಳಲ್ಲಿ ಸೊನಾರಿ, ಸತ್ಧಾರಾ, ಪಿಪಾಲಿಯಾ, ಅಂಧೇರ್ ಮುಂತಾದವು ಮುಖ್ಯ ಪ್ರೇಕ್ಷಣೀಯ ಸ್ಥಳಗಳು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O S. 342/1967

ವಾದಿ—ಯಡ್ತರೆ ಸೂರ್ಯಾಂಗ ಶೆಟ್ಟಿ

ಪ್ರತಿವಾದಿಗಳು —ಶೇಷಿ ಹೆಂಗ್ಸು ಸಾಹಾದ್ರಿದಾವೆಯಲ್ಲಿ

೪ನೇ ಪ್ರತಿವಾದಿ ಚಿಕ್ಕಯ್ಯ, ಯಲಕ್ಕಿ ಹೆಣ್ಣು ಮಂಜಿ ಹೆಂಗ್ಸಿನ ಮಗ.

೫ನೇ ಪ್ರತಿವಾದಿ ಮಾಂಚಿ ೧ನೇ ಪ್ರತಿವಾದಿ ಸುಬ್ಬಿ ಶೇಷಿ ಹೆಂಗ್ಸಿನ ಮಕ್ಕಳು.

ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದ ಯಲಕ್ಕಿ ಹಿಳ್ಳಿಯಲ್ಲಿರುವವರು — ಇವರಿಗೆ

ಇವರು ಕೂಡಾ ಪ್ರತಿವಾದಿರಿಂದ ವಾದಿಗೆ ಬಿದಾ ತಾ. 1-8-1964ರ ದಿನಾಂಕದ ನೋಟಿನ ಬಾಬ್ತು ಅಸಲು ಬಡ್ಡಿ ಬಾಕಿ ರೂ. 1168—26 ಪೈಸೆ ವ ಕೋರ್ಟ್ ಖರ್ಚಿಗೆ ಸಾಹಾ ದಾಖಲು ಮಾಡಿದ ಮೇಲ್ಕಂಡ ದಾವೆಯಲ್ಲಿ ಇಷ್ಟ ಹಾಜರಾತಿ ಬಗ್ಗೆ ಅಪೈರೆ ಸಾರಿಗೆ ತಾ. 4-6-1968 ಕ್ಕೆ ಯಿಟ್ಟಿರುತ್ತೆದೆ. ಈ ಕೂಡಲು ನಿಮ್ಮದೇನಾದರೂ ಆಕ್ಷೇಪಣೆ ಯಿರುವಲ್ಲಿ ಸದರಿ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ನೀವು ಸ್ವತಃ ವಕೀಲರ ಮುಖಾಂತರ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳತಕ್ಕದ್ದು. ತಪ್ಪದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ದಾವೆಯನ್ನು ಯೇಕ ಪಕ್ಷವಾಗಿ ತೀರ್ಮಾನಿಸಲು ಗುಕ್ತದೆಯಂತ ತಿಳಿಯ ಪಡಿಸಿರುತ್ತದೆ.

(ಕೋರ್ಟು ಅಪ್ಪಣೆ ಪ್ರಕಾರ)

ಎ. ರಾಜೀವ ಶೆಟ್ಟಿ, ಬಿ. ಎ;
ಬಿ. ಕಾಂ., ಬಿ. ಎಲ್.
ವಾದಿ ಪರ ಎಡ್ವೋಕೇಟ್

ಕುಂದಾಪುರ, ೩೦—6—1968

ಅನುಭವ

ಒಂದು-ಸುಖದ ಸಿಂಧು

"ಐದು ಕೋಳಿ, ಒಂದು ಎಮ್ಮೆಯಿಂದ ನನಗೆ ಅಷ್ಟೇನೂ ಸಂಪಾದನೆಯಾಗದು. ನಮಗೆ ಈಗಾಗಲೇ ಇಬ್ಬರು ಮಕ್ಕಳಿದ್ದಾರೆ. ನನಗೆ ಮೂರನೆಯ ಮಗು ಬೇಕಾಗಿಲ್ಲ" ಎಂದು ಹೇಳಿದಳು ಕೃಷ್ಣಾ ಜಿಲ್ಲೆಯ ಗನ್ನಾವರಂ ತಾಲೂಕಿನಲ್ಲಿರುವ ಅಬ್ಬನಾರ ಗ್ರಾಮದ ನಿವಾಸಿ ರಾಧ. ಆಕೆ ವಿದ್ಯಾವಂತೆಯಲ್ಲ; ಎಂದರೆ ಯೂಪೂಂದು ಪರೀಕ್ಷೆಯಲ್ಲೂ ಯಶಸ್ವಿಯಾಗಿಲ್ಲ. ಆದರೆ ಭಾರತೀಯ ಪರಿಜ್ಞಾನ ಹೊಂದಿರುವ ಜಾಣೆ ಆಕೆ.

ರಂಗರಾವ್ ರಾಧೆಯ ಪತಿ. ಆತ ನೊಬ್ಬ ಬೇಸಾಯಗಾರ. ಗನ್ನಾವರಂನಲ್ಲಿ ಜರುಗುತ್ತಾರಿ ಪದ್ಧತಿ ರದ್ದುಮಾಡಿದ ನಂತರ ಅವನ ಪಾಲಿಗೆ ಐದು ಎಕರೆ ಭೂಮಿ ಸಿಕ್ಕಿತು. ಆದರೆ ದುರದೃಷ್ಟ ಆ ಭೂಮಿ ಫಲವತ್ತಾಗಿಲ್ಲ.

"ಗೊಬ್ಬರ ಉಪಯೋಗಿಸಿ ಅಧುನಿಕ ಬೇಸಾಯ ಪದ್ಧತಿ ಅನುಸರಿಸಿದರೆ ಈಗಿನ ಭೂಮಿಯಲ್ಲೇ ಎರಡರಷ್ಟು ಬೆಳೆ ತೆಗೆಯಬಹುದಲ್ಲವೇ?"

"ಗೊಬ್ಬರವೇನೊ ಸಿಗುತ್ತದೆ. ಆದರೆ ಬೇಸಾಯಕ್ಕೆ ಅಗತ್ಯವಾದ ನೀರೇ ಸಿಗುವುದಿಲ್ಲ."

"ಒಂದು ಬೆಳೆ ಹೆಚ್ಚು ಗೊಬ್ಬರ ಹಾಗೂ ನೀರಿನ ಸೌಲಭ್ಯ ದೊರಕಿದರೆ, ನೀನು ಹೆಚ್ಚು ಬೆಳೆಯನ್ನು ಪಡೆಯಬಹುದು."

"ಛೆ ಛೆ, ಅದೆಲ್ಲ ಸಾಧ್ಯ? ಹಾಗಾದರೆ ಈಗಿರುವ ಭೂಮಿ ಸಾಲಾಗಿ ಹೋಗುತ್ತದೆ. ನನ್ನ ಮಕ್ಕಳಿಗೆ ಜೀವನೋಪಾಯಕ್ಕೆ ಮಾರ್ಗವೇ ಇರುವುದಿಲ್ಲ"

"ಹಾಗೇನು?"

"ನನ್ನ ಹೆಂಡತಿ ಪ್ರತಿ ತಿಂಗಳೂ ನೂಲು ತೆಗೆದ, ಹಾಲು ಸಾಮಾನ್ಯ ರೂಪಾಯಿ ಸಂಪಾದಿಸುತ್ತಳೆ. ಈ ಹೆಚ್ಚು ಸಂಪಾದನೆಯಿಂದಲೂ ನಾವು ವಸ್ತ್ರಗಳನ್ನು ಸಾಕಷ್ಟು ಕೊಳ್ಳಲಾರೆವು. ಎಮ್ಮೆಯಿದ್ದರೂ ನಮ್ಮ ವಸ್ತ್ರಗಳು ಹಾಲು, ಬೆಣ್ಣೆಗಳಿಂದ ವಂಚಿತರಾಗಿದ್ದಾರೆ. ನಾವು ಅವರಿಗೆ ಒಳ್ಳೆಯ ಬಟ್ಟೆ, ಉತ್ತಮ ಶಿಕ್ಷಣವನ್ನು ನೀಡಲಾರೆವು. ಹೇಗೂ ಜೀವನ ಸಾಗಿಸುತ್ತಿದ್ದೇವೆ" ಎಂದು ಗನ್ನಾವರದ ಸಂತಾನ ನಿಯಂತ್ರಣ ಶಿಬಿರದಲ್ಲಿ ಹೆಂಡತಿಯ ಜೊತೆಗೆಯ ಪಕ್ಕದಲ್ಲಿ ನಿಂತಿದ್ದ ರಂಗರಾವ್ ಹೇಳಿದ.

"ಅದು ಸರಿ. ನಿನಗೆ ಕೇವಲ ಇಬ್ಬರೇ ಮಕ್ಕಳಿರುವುದು?"

"ನಿಜ... ನನಗೆ ಒಂದೇ ವರುಷದ್ದಾಗ ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡಿಸಿಕೊಳ್ಳಲಾಗಿದ್ದೆ. ನಾನು ಹಾಗೆ ಮಾಡಿದ್ದರೆ ಚೆನ್ನಾಗಿತ್ತು" ಎಂದು ಹೆಮ್ಮೆ ಉತ್ಸಾಹಗಳಿಂದ ನುಡಿದಳು ರಾಧೆ.

ರಾಧೆಯು ಸೋದರ ಕೆಲವು ದಿವಸಗಳ ಹಿಂದೆ ಇದೇ ಚಿಕಿತ್ಸಾ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಳು. ಅದು ರಾಧೆಗೆ ಮಾರ್ಗದರ್ಶನ ನೀಡಿತ್ತಲ್ಲದೆ ಶಕ್ತಿ ಮೂಲವಾಯಿತ. ರಾಧೆ ಈಗ ಗರ್ಭವತಿ. ಈ ಮಾನವೀಯ ಸೇವಾ ಚಿಕಿತ್ಸಾ ಶಿಬಿರ ಏರ್ಪಡಿಸಿದ ಕಾರ್ಯಕರ್ತರಿಗೆ ಆಕೆಗೆ ಕೃತಜ್ಞತಾ ಭಾವನೆಯಿದೆ.

ಗನ್ನಾವರದ ಚಿಕಿತ್ಸಾ ಶಿಬಿರದಲ್ಲಿದ್ದ ಎಲ್ಲರನ್ನೂ ಹೆಸರ್ಮುಖದಿಂದ ನೋಡುತ್ತ ಮಗ ವೆಂಕಟೇಶನನ್ನು ಮಗಳು ಪದ್ಮಾವತಿಯನ್ನೂ ಕೈಹಿಡಿದು ನಡೆಸಿಕೊಂಡು ಪತಿಯೊಂದಿಗೆ ಮನೆಗೆ ಹೊರಟಳು.

ಈ ತೆರದ ಸಾವೇ ನಿನಗೆ?

ಕನ್ನಡಕೆ ಕರುನೀಯ ಕಸ್ತೂರಿ ಕವಿವರನೆ
ಡಂಬನಿಲ್ಲದ ಡೊಂಬ ಕನ್ನಡ ಡಿಂಗರಿಗ
ಗೋತ್ರವಾಯಿತುನಿನಗೆ ಹುಟ್ಟೂರುಕೊನೆಗು
ಡಗೆಯನರಿಯದ ಶಾವಿ ರೀಳು ರಾಕಿನ ಪಾವು
ಲುಲಿತಲೇಖನ ಲೇಖವಿರದ ಲೇಖಿಗ ಇನು
ಶಂಕರನಿನವಾಗಿಂದು ಕಷ್ಟಾರಬಾಧಿಸುವು
ಕಡದಾಳು ಕರಿಂಜರನೆ ಕನಡದ ಕಣ್ಣಡಿಯೆ
ರಕ್ತ ಚಂದದ ಕೀಡು ಸರಸಾಯನಚಿಸಿದೆ
ಭೇದ್ಯನಾಮದಿ ನೆಲಿಂಬಂತ ಕನ್ನಡದಿ ಕ—
ಟ್ಟಿರಿಕಿ ಪಡೆದಂಥ ನಿನಗೆ ಈ ತೆರದ ಸಾವೆ?

—ಎಸ್. ಪದ್ಮನಾಭ ನಾಯಕ್,
ಉಡುಪಿ.

(ತಾ ೧೮-೬-೮೦ರಂದು ಶ್ರೀ ಕಡಂಗೋಡ್ಲು ಶಂಕರ ಭಟ್ಟರ ನಿಧನದ ವಾರ್ತೆ ಓದಿದ ತಕ್ಷಣದಲ್ಲಿಯೇ ಕಂಬನಿದೊಡನೆ ಬರೆದ ಪದ್ಯ ಗಳು)

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 150 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಕಾಸರಗೋಡು ವಾರ್ತೆಗಳು

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಕಾಸರಗೋಡು ಪುರಸಭೆಯ ಪ್ರಥಮ ಅಧ್ಯಕ್ಷರಾಗಿ ಎಡ್ವೋಕೇಟ್ ಶ್ರೀ ಎಂ. ರಾಮಣ್ಣ ರೈ (ಎಡ ಕಮ್ಯೂ.)ಗೆ ಆಯ್ಕೆಯಾಗಿದೆ.

ಉಪಾಧ್ಯಕ್ಷರಾಗಿ ಶ್ರೀ ಕೆ. ಪಿ. ಪಾಧಿ ವರ್ಸ್ (ಸ್ವ.)ರ ಆಯ್ಕೆಯಾಗಿದೆ.

ನಗರ ಜೀವನ ಸುಗಮವಾಗುವಂತೆ ತನ್ನಿರುವಾದ ಪ್ರಯತ್ನ ಮಾಡುವುದಾಗಿ ಶ್ರೀ ರೈಗಳು ಸೂಚಿಸಿದರು. ಇಲ್ಲಿ ಆಗಬೇಕಾದುದು ಬಹಳ. ವಿದ್ಯುತ್ ವ್ಯವಸ್ಥೆ ಸರಿಯಿಲ್ಲ. ಮಿಣುಕು ದೀಪಗಳು ಮಾತ್ರ. ಕುಡಿಯಲು ಶುದ್ಧ ನೀರಿನ ಸೌಕರ್ಯವಿಲ್ಲ. ಶುಚಿತ್ವದ ಕಡೆಗೆ ವಿಶೇಷ ಗಮನ ಆಗಿಲ್ಲ. ಪ್ರಯಾಣಿಕರಿಗೆ ಸೌಕರ್ಯ ಸಾಲದು. ವಾಚನಾಲಯಗಳೂ ಪುಸ್ತಕ ಭಂಡಾರಗಳೂ ಕಡಿಮೆ. ಉದ್ಯಾನಗಳೆಲ್ಲ ಪುರಸಭಾ ಭವನ ವಿಸ್ತರಿಸಬೇಕು. ರಸ್ತೆಗಳು ಇಕ್ಕಟ್ಟಾಗಿವೆ.

೨೦ ಸದಸ್ಯರುಳ್ಳ ಪುರಸಭೆಯಲ್ಲಿ ಮುಸ್ಲಿಂ ಲೀಗ್ ೯; ಎಡಕಮ್ಯೂನಿಸ್ಟ್ ೧; ಕರ್ನಾಟಕ ಸಮಿತಿ ಮತ್ತು ಜನಸಂಘದ ಇಬ್ಬರಿಗೆ ೯ ಮತ್ತು ಸ್ವತಂತ್ರ ೧ ಇದ್ದಾರೆ. ಪ್ರಬಲವಾದ ಪ್ರತಿಪಕ್ಷವಿದೆಯೆಂಬುದು ಗಮನಾರ್ಹವಿದೆ.

ಸ್ವತಂತ್ರ ಉಮೇದುವಾರರು ಮೊದಲು ಕಾಂಗ್ರೆಸ್ ಬೆಂಬಲಿಗರೆನ್ನಿಸಿಕೊಂಡು ಮತ್ತೆ ಕಮ್ಯೂ.-ಲೀಗ್ ಇಬ್ಬರಿಗಂದಿಂದ ಅಳಸಿಕೊಳ್ಳುತ್ತ ಉಪಾಧ್ಯಕ್ಷ ಸ್ಥಾನಗಳಿಸಿದ್ದೆನ್ನಲಾಗಿದೆ.

ಕೃಷಿಕರಿಗೆ ನಷ್ಟ

ಮಳೆ ಸೋಲಿಸಿದ್ದರಿಂದಾಗಿ ಈ ತಾಲೂಕಿನ ಅನೇಕ ಅಡಿಕೆ ತೋಟಗಳು ನಾಶವಾಗಿವೆ. ಕೆಲವು ನಾಶವಾಗುತ್ತಲಿವೆ. ಅಂತೂ ಉತ್ಪಾದನೆಯಲ್ಲಿ ಸೇ. ೫೦ರಷ್ಟು ನಷ್ಟ ಸಂಭವಿಸಬಹುದೆಂದೂ, ಸರಕಾರವು ಕೃಷಿಕರಿಗೆ ಸೂಕ್ತ ಪರಿಹಾರ ಕೊಡಬೇಕೆಂದೂ, ವಿಧಾನ ಸಭಾ ಸದಸ್ಯರು ಶ್ರೀಗಳಾದ ಭಂಡಾರಿ ಮತ್ತು ಕುಣಿಕ್ಯಾಯರು ಕೇರಳ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಅನೇಕ ಕಡೆಗಳಲ್ಲಿ ಕುಡಿಯುವ ನೀರಿಗೇ ತ್ರಾಸು.

ಕೆಲವು ಗ್ರಾಮಗಳಲ್ಲಿ ನೀರುಕೋಟೆಲೆ ಹಬ್ಬುತ್ತಿರುವ ಪರದಿಗಳೂ ಇವೆ.

ನೇಂದ್ರ ಹಾಳೆಲು ಮಳೆ ಬಂದಿಲ್ಲ. ಕಳೆದ ಸಾಗ್ಗಿ ಮತ್ತು ಕೊಳೆಳ ಬೆಳೆಗಳೂ ನೀರಿಲ್ಲದೆ ನಷ್ಟಕ್ಕೀಡಾದವು.

In the Court of the Munsiff Udipi

P. & S. C. 11/1968

Janardhana Madiwala—Petitioner

The petitioner Janardhana Madiwala, has applied to this Court for issue of a Succession Certificate to collect the amounts in F. D. 48/67 of The Vijaya Bank Ltd. Udipi branch belonging to one Rama Madiwala now dead as per terms of a will executed by the said Rama Madiwala *on 1—7—1967 in favour of the* petitioner. The said petition is posted to 6—6—1968. If anybody has got any objection for the issue of the said Certificate they are hereby called upon to appear before this Court on the said date at 11 A. M., failing which a Succession Certificate will be issued in favour of the petitioner as prayed for.

Y. D. Hegde, *B.A., B.L.*
Advocate for Petitioner.

Udipi, 1—5—'68.

ಸುವೀರಾಜ್ಯ

ಸಮಾಜ ರಕ್ಷಣೆಯಲ್ಲಿ ಪೋಲೀಸರ ಪಾತ್ರ

ಶ್ರೀ ಆರ್. ದೇವ್.

ಅಪರಾಧದ ವಿರುದ್ಧ ಹೋರಾಟ ನಡೆಸಲು ಪ್ರತಿವರ್ಷವೂ ಅಪಾರ ಹಣವೆಚ್ಚವಾಗುತ್ತಿದೆ. ಲಭ್ಯವಿರುವ ಅಂಕಿ-ಅಂಶಗಳ ಪ್ರಕಾರ ಹೇಳುವುದಾದರೆ, ಯಾವುದೇ ಒಂದು ವರ್ಷದಲ್ಲಿ ವಿವಾದಗಳಿಗಾಗಿ ಅಥವಾ ಸಾಕ್ಷ್ಯ ನೀಡುವುದಕ್ಕಾಗಿ ಕೋರ್ಟು-ಕಚೇರಿಗಳಿಗೆ ಹೋಗುವವರ ಸಂಖ್ಯೆ ೮೦ ಲಕ್ಷಕ್ಕೂ ಹೆಚ್ಚಾಗುವುದೆಂದು ಲೆಕ್ಕ ಹಾಕಲಾಗಿದೆ. ಇನ್ನು ಕೋರ್ಟುಗಳ ಮುಖ್ಯಸ್ಥರು, ವಕೀಲರು, ಸೇವಕರು ಪೋಲೀಸು ಅಧಿಕಾರಿಗಳು, ಜೈಲುಗಳ ಅಧಿಕಾರಿಗಳು ಮತ್ತು ಅಪರಾಧ ನಿವಾರಣೆಗೆ ಸಂಬಂಧಿಸಿದ ಇತರ ಅಧಿಕಾರಿಗಳ ಸಂಖ್ಯೆ ಇನ್ನೂ ಹೆಚ್ಚಾಗಬಹುದು.

ನಮ್ಮ ದೇಶದ ನೂರಾರು—ಸಹಸ್ರಾರು ಜನ ಉತ್ಪಾದನಾ ಕ್ಷೇತ್ರದ ಹೊರಗೆ ಉಳಿಯುತ್ತಿರುವುದರಿಂದ ನಮ್ಮ ಆರ್ಥಿಕವ್ಯವಸ್ಥೆಯ ಮೇಲೆ ದುಷ್ಪರಿಣಾಮವಾಗುತ್ತದೆ.

ಅಪರಾಧಗಳಿಗೆ ತರಬೇತಿಗಾಗಿ ಬಂದಿರುವ ಈ ದುಬಾರಿ ವೆಚ್ಚವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ವಿಶ್ವದ ಸಮಾಜದ ವಿಜ್ಞಾನಿಗಳು ಅಪರಾಧ ನಿರೋಧ ಹಾಗೂ ಶಿಯಂತ್ರಣ ವಿಷಯವಾಗಿ ಈಗ ಗಂಭೀರವಾಗಿ ಆಲೋಚಿಸತೊಡಗಿದ್ದಾರೆ.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಅಪರಾಧ ನಿರೋಧ ಸಾಧ್ಯವೆ? ಸಾಧ್ಯ ಎಂದಾದರೆ ಎಷ್ಟರ ಮಟ್ಟಿಗೆ ಅದನ್ನು ನಿರೋಧಿಸಬಹುದು?

ಅಪರಾಧ ಮಾನವನ ದೈಹಿಕ-ಮಾನಸಿಕ ಸಾಮಾಜಿಕ ವ್ಯವಹಾರಗಳಿಂದ ಉತ್ಪತ್ತಿಯಾಗುತ್ತದೆ. ಈ ಕಾರಣದಿಂದ ಮಾನವ ಸಮಾಜದಲ್ಲಿ ಅಪರಾಧ ಸ್ವಲ್ಪ ಮಟ್ಟಿಗೆ ಅಪಾರ್ಯವೆಂದೇ ಹೇಳಬಹುದು. ಆದುದರಿಂದ ಸಂಪೂರ್ಣವಾದರೆ ಸಾಧ್ಯವಾಗಲಾರದು. ಏನೇ ಇರಲಿ, ಸಾಮರ್ಥ್ಯದಷ್ಟು ಅಪರಾಧ ನಿರೋಧ ಕಾರ್ಯಕ್ರಮದ ಪ್ರಕಾರ ಅಪರಾಧಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಲು ಸಾಧ್ಯ.

ನಿರೋಧ, ನಿವಾರಣೆಗಿಂತಲೂ ಉತ್ತಮ ಎಂಬುದು ಪೋಲೀಸ ಅಧಿಕಾರಿಗಳಿಗೆ ಗೊತ್ತಿಲ್ಲದೆಂತಲ್ಲ. ಹಾಗೆ ನೋಡಿದರೆ, ಈ ತತ್ವವೇ ಎಲ್ಲಾ ಪೋಲೀಸ್ ಕರ್ತವ್ಯಗಳ ಮೂಲವಾಗಿದೆ. ಅಪರಾಧ ನಿರೋಧಕ್ಕಾಗಿ ಪೋಲೀಸರು ಗಸ್ತು ತಿರುಗುವುದು ಮೊದಲೇ ಗೊತ್ತಿದ್ದ ಅಪರಾಧಿಗಳನ್ನು ಹಿಡಿದು ಶಿಕ್ಷೆಯನ್ನುವುದು ಇವೇ ಮೊದಲಾದ ವಿಧಾನಗಳನ್ನು ಅನುಸರಿಸುತ್ತಾರೆ.

ಅಪರಾಧಿಗಳಿಂದ ಸಮಾಜಕ್ಕೆ ರಕ್ಷಣೆ ಒದಗಿಸಲು ಅಪರಾಧಿಗಳನ್ನು ಪ್ರತಿಬಂಧಕ ಸ್ಥಾನದಲ್ಲಿಟ್ಟಿರೆಗೊಳಿಸಬೇಕಾದುದು; ಅಥವಾ ಅವರನ್ನು ಗಡೀಪಾರು ಮಾಡುವುದು ಇವೇ ಮೊದಲಾದ ಅನೇಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು. ಪೋಲೀಸರ ಈ ಸಾಹಸಕ್ರಮಗಳಿಂದ ಅಪರಾಧಗಳು ಕಡಿಮೆಯಾಗಿವೆಯಾದರೂ, ಇದರಿಂದ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗಿಲ್ಲ.

ಅಪರಾಧ ಶಾಸ್ತ್ರದ ಬಗ್ಗೆ ವಿಜ್ಞಾನದ ತಿಳಿವಳಿಕೆ ಹೆಚ್ಚಾಗುವುದರಿಂದ, ಅಪರಾಧ ನಿರೋಧ ವಿಧಾನಗಳಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಸಮಾಜ ವಿರೋಧಿಘಟನೆಗಳಿಗೆ ಕಾರಣವಾದ ಅಸಮಾಧಾನ, ಅಸಂತೃಪ್ತಿಯನ್ನು ಹೋಗಲಾಡಿಸಲು ಸರ್ಕಾರ ಈಗ ಗಮನ ಕೊಡಬೇಕಾಗಿದೆ. ಇದನ್ನೇ ಸ್ಪಷ್ಟವಾಗಿ ಹೇಳುವುದಾದರೆ, ಅಪರಾಧಿಯು ಸಮಾಜ ವಿರೋಧಿ ಭಾವನೆಗಳನ್ನು ಹೊರಹಾಕಲು ಅವನಿಗೆ ಪುನರ್ ಶಿಕ್ಷಣ ಕೊಡುವುದು, ಅಧುನಿಕ ಸಮಾಜ ರಕ್ಷಣಾ ಕಾರ್ಯಗಳ ಮುಖ್ಯ ಉದ್ದೇಶವಾಗಿದೆ. ಅಪರಾಧಿಯು ಒಮ್ಮೆ ಸಭ್ಯತೆಯ ಶಿಕ್ಷಣ ಪಡೆದನೆಂದರೆ ಅವನು ಮುನ್ನ ಸಮಾಜದೊಂದಿಗೆ ಹೊಂದಿಕೊಂಡು ಬಾಳಲು ಶಕ್ತಿಯುತ್ತಾನೆ. ಹೀಗೆ ಅಪರಾಧಿಯು ಸಮಾಜಕ್ಕೆ ಮರುಹುಟ್ಟಿದಂತಾಗುತ್ತದೆ.

ಅಪರಾಧಗಳನ್ನು ತಡೆಗಟ್ಟಿದರೆ ಅಪರಾಧ ಶಾಸ್ತ್ರಜ್ಞರ ಮತ್ತು ಪೋಲೀಸರ ಗುರಿಯಾಗಿರುವುದರಿಂದ ಅವರು ಒಂದಾಗಿ ಕೆಲಸ ಮಾಡಬೇಕಾಗಿದೆ. ಅಪರಾಧ ನಿರೋಧಕ್ಕಾಗಿ ಸಂಘಟಿತ ಯತ್ನ ಮಾಡಬೇಕಾಗಿದೆ. ಅಪರಾಧಿಗಳ ಸುಧಾರಣೆಯು ಅಪರಾಧಗಳನ್ನು ತಡೆಗಟ್ಟುವ ಹೊಸ ಕಾರ್ಯಕ್ರಮವು ಎಲ್ಲರ ಬೆಂಬಲ ಪಡೆಯಬಲ್ಲದು.

ಸಮಾಜ ರಕ್ಷಣೆಗಾಗಿ ಇತರ ಸಂಸ್ಥೆಗಳಿಗೆ ನೆರವಾಗುವುದಲ್ಲದೇ, ಪೋಲೀಸ್ ಅಧಿಕಾರಿಗಳು ಇನ್ನೂ ತ್ರಿಯಶೀಲ ಮಾತ್ರ ಪಾತ್ರಹಿಸಬೇಕು. ಅಧಿಕಾರಿಗಳ ಪ್ರಜಾಸ್ವಭಾವ, ಕಾರ್ಯಕ್ಷಮತೆಗಳು, ಸಾರ್ವಜನಿಕ ಸೇವೆಗಳ ಸಮಾಜೀಕರಣ ಈ ಅಂಶವು ಮೇಲೆ ಹೆಚ್ಚಿನ ಬೆಳಕು ಚೆಲ್ಲಿದೆ. ಬದಲಾಗಿರುವ ಪರಿಸ್ಥಿತಿಯಲ್ಲಿ ಪೋಲೀಸರು ಅಪರಾಧಿಗಳನ್ನು ಶಿಕ್ಷಿಸುವುದೇ ತಮ್ಮ ಕೆಲಸ—ಸುಧಾರಿಸುವುದಲ್ಲ ಎಂಬ ಹಿಂದಿನ ಧೋರಣೆಯನ್ನು ಕೈಬಿಟ್ಟು ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗಿದೆ ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಈ ಭಾವನೆ ಬಲವಾಗಿ ಬೆಳೆಯತೊಡಗಿದೆ.

ಬಾಲ ಅಪರಾಧಿಗಳ ಜೀವನ ಸುಧಾರಣೆಯಲ್ಲಿ ಪೋಲೀಸರು ಮಹತ್ವದ ಪಾತ್ರ ನಿರ್ವಹಿಸಬೇಕಾಗಿದೆ. ಸಮಾಜ ಸೇವೆಯೇ ಪೋಲೀಸ್ ಇಲಾಖೆಯ ಮುಖ್ಯ ಗುರಿ. ಈ ಗುರಿ ಸಾಧನೆಗೆ ಸಮಗ್ರ ಪೋಲೀಸ್ ಬಲವೇ ಸಜ್ಜಾಗಬೇಕು. ಅಪರಾಧಿಗಳ ಸುಧಾರಣೆಯಲ್ಲಿ ಅವರಿಗೆ ಪುನರ್ಶಿಕ್ಷಣ ಕೊಡಬೇಕು. ಅಪರಾಧಿಗಳ ಅಪರಾಧ ಪ್ರವೃತ್ತಿಯ ಬೇರನ್ನು ಸಮಾಜದ ಶಕ್ತಿಯ ಅಡಕವಾಗಿದೆ. ಇದೇ ಸಮಾಜ ಸೇವೆ. ಸುವೀರ ರಾಷ್ಟ್ರದ ಸಾಧನೆ ಹಾಗೂ.

ರಾಜಕೀಯ ರಾಜ್ಯ ಸಾಕು—ಪ್ರಜಾರಾಜ್ಯ ಬೇಕು

(ದತ್ತಾತ್ರಯ ಬಾರಡೇಜಿ)

ಭಾರತವು ಸ್ವತಂತ್ರವಾಗಿ ೨೦ ವರ್ಷಗಳಿದವು. ಆದರೆ ದೇಶದ ಸ್ಥಿತಿಯು ಮಾತ್ರ ಭಯಾನಕವಾಗಿಯೇ ಇದೆ. ಅಹಾರದ ಕೊರತೆ, ನಿರುದ್ಯೋಗ ಮತ್ತು ದಾರಿದ್ರ್ಯ ಎಂಬ ತ್ರಿವಿಧ ತಾಪಗಳಿಂದ ಇಡೀ ದೇಶವು ಹುರಿಯಲಿಸುತ್ತಲಿದೆ. ಸತ್ಯಾಗ್ರಹ, ಉಪವಾಸ, ದಂಗೆ, ಲೂಟಿ, ಮತಭೇದ, ಪೈಮನಸ್ಸು ಮೊದಲಾದ ಉತ್ಪಾತಗಳೂ ದುಷ್ಪ್ರವೃತ್ತಿಗಳೂ ದೇಶದಲ್ಲಿ ಹಾಹಾಕಾರ ಎಬ್ಬಿಸಿವೆ. ಇದೆಲ್ಲವೂ ಸ್ವರಾಜ್ಯದ ತಪ್ಪಲ್ಲ! ನಮ್ಮದು ಜನತಂತ್ರ ರಾಷ್ಟ್ರವೆಂಬುದನ್ನು ಜನರು ಮರೆತು ಬಿಟ್ಟಿರುವದೇ ಇಷ್ಟೆಲ್ಲ ಅನರ್ಥಗಳಿಗೆ ಕಾರಣವಾಗಿದೆ. ಬ್ರಿಟಿಷರಂತೆ ದಿಲ್ಲಿ ಸರಕಾರವೇ ನಮ್ಮೆಲ್ಲರ ಯೋಗಕ್ಷೇಮ ನೋಡಬೇಕು. ವಿಧಾನ ಸಭೆಗಳೇ ಪ್ರಾಂತಗಳ ಪರಿಪಾಲನೆ ಮಾಡಬೇಕು. ಸರಕಾರಿ ಕಚೇರಿಗಳೇ ನಮ್ಮ ಯೊವತ್ತೂ ಚಿಂತೆ ವಹಿಸಬೇಕು ಎಂದೇ ಜನರೆಲ್ಲ ಕೈಕಟ್ಟಿಕೊಂಡು ಕುಳಿತಿದ್ದಾರೆ. ಮತ್ತು ಇದರ ಫಲವನ್ನೇ ಕಾಣಿದು ಉಣ್ಣುತ್ತಿದ್ದೇವೆ! ಇಂದಿನ ರಾಷ್ಟ್ರನಾಯಕರೂ ಸಹ ಪಕ್ಷೋಪಪಕ್ಷಗಳನ್ನು ಕಟ್ಟಿ ಅದರ ಮಾಂತ್ರಿಕತೆಯ ಲೋಕೋದ್ಧಾರವನ್ನು ಸಾಧಿಸಲು ಹೆಣಗುತ್ತಿದ್ದಾರೆ! ಮತ್ತು ಇವರೆಲ್ಲರೂ ಬೀಸುತ್ತಿರುವ ವಿವಿಧ ವಿಚಾರಗಳ ಬಲೆಯಲ್ಲಿ ಬಿದ್ದು ಜನತೆಯು ವಿಲವಿಲಿ ಒದ್ದಾಡತ್ತಲಿದೆ!

ಆದರೆ ಪ್ರಜಾರಾಜ್ಯ, ಜನತಂತ್ರಗಳ ಮೂಲ ಅರ್ಥವನ್ನು ತಿಳಿದುಕೊಳ್ಳುವದು ಎಷ್ಟೊಂದು ಸುಲಭವಿದೆ! ಪ್ರತಿಯೊಬ್ಬ ಭಾರತೀಯನೂ ಸ್ವಸುರಾರ್ಥದಿಂದ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು. ಸಮಾಜವನ್ನು ಮುನ್ನಡೆಸಲು ಪ್ರತಿಯೊಬ್ಬನೂ ದುಡಿಯಬೇಕು. ಅಂದರೆ ಮಾತ್ರ ಪ್ರಜಾರಾಜ್ಯವು ಇಚ್ಛಿತ ಫಲವನ್ನು ಕೊಡಬಲ್ಲದು!

ಆದ್ದರಿಂದ ನಾವು ಯೊವುದೇ ರಾಜಕೀಯ ಪಕ್ಷದ ನೋರೆ ನೋಡುತ್ತ ಸ್ವಿಸ್ಸ್ರಾಯರಾಗಿ ಕೂಡುವದನ್ನು ಬಿಟ್ಟು ಬಿಡಬೇಕು. ಪರವಾತ್ಮನು ಸಹ ಉದ್ಧರೇದಾತ್ಮನಾತ್ಮನು— ಯೋಗಕ್ಷೇಮಂ ವಹಾಮ್ಯಹಂ. ತನ್ನ ಉದ್ಧಾರ ತಾನೇ ಮಾಡಿಕೊಳ್ಳುವ ಪ್ರಯತ್ನಿಸುವವರ ಯೋಗಕ್ಷೇಮವನ್ನಷ್ಟೇ ನಾನು ವಹಿಸುತ್ತೇನೆ ಎಂದು ಹೇಳಿದ್ದಾನೆ.

ಗ್ರಾಮ ಸಂಕಲ್ಪ, ಗ್ರಾಮ ದಾನ, ಗ್ರಾಮ ಸ್ವರಾಜ್ಯದಲ್ಲಿ ಇದೇ ಬೀಜಮಂತ್ರ ಅಡಕವಾಗಿದೆ! ನಾವು ಗ್ರಾಮಾಭಿಮುಖರಾಗಿ, ಚಿಂತನ ಮಾಡ ಹತ್ತಿದಾಗಲೇ ಮುಂದಿನ ಮಾರ್ಗ ನಮಗೆ ಹೊಳೆದೀತು. ಸಾಮಾನ್ಯ ಜನತೆಯಲ್ಲಿ ಚಿಂತನ ಶಕ್ತಿಯೇ ಇಲ್ಲದ್ದರಿಂದ ಅವರಿಗೆ ದಾರಿ ತೋರಿಸಿ ಕರೆದೊಯ್ಯುವ ಜವಾಬ್ದಾರಿ ಲೋಕ ಸೇವಕರ ಮೇಲೂ ಇದೆ.

(ಭಾಷಣ ಬಂದರಿಂದ)

ಮಂತ್ರಿಗಳ ಆಗಮನ:—

ಮಂತ್ರಿಗಳು ಬರುವರು
ಶೃಂಗರಿಸು ಬೇಗ ।
ರಾಜಬೀದಿಯ ದೀಪಸ್ತಂಭಕೂ
ಸುಯೋಗ ।

ಮಂತ್ರಿ ದೇವರ ನೋಡೆ ಭಾರಿ
ಜನ ಬಂದು ।
ಧನ್ಯರಾದರು ಮಾನವಧೂಳಿಸ್ಪ
ತಿಂದು ।

ಮಾರಸ್ಸ:—

ಮಾಸ್ಸೆಂಬುದು ಮಗನೆ ಗಗನದ
ಹಕ್ಕಿ ।
ಗಡಿಯ ಕಾಣದು ಹಾರಿ ಸಂತಸ
ಉಕ್ಕಿ ।
ಅದರೂ ಒಂದೊಮ್ಮೆ ಸಿಡಿಲಿಗೆ
ಸಿಕ್ಕಿ ।
ಧರೆಗುರುಳುವುದು ತಾನು ಮಣ್ಣು
ಮುಕ್ಕಿ ।

— "ದೇವಕಿ ನಂದ" ಸಿಜಾನ ಉ. ಕ.

ಕುಟುಂಬ ಯೋಜನಾ ಚಳವಳಿ ಉದ್ಘಾಟನೆ

ಕುಟುಂಬ ಯೋಜನಾ ಕೇಂದ್ರ ಚಳವಳಿವು ಇದೇ ತಾ. ೨೨ ರಂದು ಸುರತ್ಕಲ್ಲಿನಲ್ಲಿ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರಿಂದ ಉದ್ಘಾಟಿಸಲ್ಪಟ್ಟಿತು. ವಿದ್ಯಾವರ್ಧಕ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಎಂ. ವಾಸುದೇವ ರಾಯರು ಕುಟುಂಬ ಯೋಜನೆಯ ಮಹತ್ವದ ಕುರಿತು ಮಾತನಾಡಿದರು.

ಪ್ರಾರಂಭದಲ್ಲಿ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಯೋಜನಾ ಅಧಿಕಾರಿ ಶ್ರೀ ಕೆ. ಎಸ್. ಶ್ರೀನಿವಾಸ ರಾಯರು ಸ್ವಾಗತಿಸಿದರು. ಪ್ರಮುಖ ಹೆಲ್ತ್ ಸೆಂಟರ್ನ ಮೆಡಿಕಲ್ ಆಫೀಸರ್ ಡಾ. ಮೃತ್ಯುಂಜಯ ಧನ್ಯವಾದಾರ್ಪಣೆ ಮಾಡಿದರು.

ನಾ ಕಂಡ ದೆವ್ವ

(ಎರಡನೇ ಪುಟದಿಂದ)

ಸಿದ. ರಾಮುವಿಗೆ ಹೇಳುತ್ತಿರುವುದೆಂದು ಇವನ ಸಂಜ್ಞೆಯಿಂದ ತಿಳಿದು ಬಂದಿತು.

"ಇವನು ಫನ್ನ ಆಳು" ಮತ್ತೊಮ್ಮೆ ಹೇಳಿದೆ. "ಒಂದು ತಿಂಗಳಿನಿಂದ ನನ್ನಲ್ಲಿಯೇ ಇದ್ದಾನೆ. ನಮಗೆ ಇವನ ಕುರಿತೆಲ್ಲಾ ಗೊತ್ತಿದೆ!'

ಅವನು ಸುಮ್ಮನಿರುವುದನ್ನು ಕಂಡಾಗ ಫನ್ನ ಮಾತುಗಳನ್ನು ನಂಬಲುಅಸಮರ್ಥನಾಗಿರುವಂತೆ ತೋರುತಿತ್ತು. ರಾಮು ಕಾಫಿ ತರುವಷ್ಟರವರೆಗೆ ಅವನು ಸೋಫಾದ ಮೇಲೆ ಒರಗಿಕೊಂಡು ವಿಶ್ರಾಂತಿ ಪಡೆದ. ನಾನು ಒಳ ಹೋಗಿ, ರಾಮುವನ್ನು ಹೊರ ಹೋಗಲು ತಿಳಿಸಿ, ಸ್ವತಃ ಕಾಫಿ ತಯಾರಿಸಿ ಅವನಿಗೆ ಇತ್ತೆ. ಅವನು ಕಾಫಿ ಕುಡಿಯಲು ಹಿಂಜರಿದನು. ನಾನು ಒತ್ತಾಯಿಸಿದಾಗಲೇ ಅವನು ಕಾಫಿಕುಡಿಯಲು ಸಮರ್ಥನಾದನು. ಅವನನ್ನು ನೋಡುತ್ತಾ ಇದ್ದಾಗ ಬಾಯಿಯವರೆಗೆ ಕೊಂಡು ಹೋದ ಕಾಫಿ ಗ್ಲಾಸನ್ನು ಪುನಃ ಮೇಜಿನ ಮೇಲಿಟ್ಟ.

ನನಗೆ ಅವನ ಮೇಲೆ ಕೋಪ ಬಂದಿತು, ಏನೊಂದು ಮಾತೆತ್ತದೆ ಕಾಫಿಯನ್ನು ಕುಡಿದೆ. ತುಸು ಹೊತ್ತು ಸುಸ್ತಾದ ಬಳಿಕ ಕಾಫಿಯನ್ನು ಕುಡಿದ.

ನೆಪ್ಪೆಂಬರದ ದಿನಗಳಾದುದರಿಂದ ಛೇ ನನ್ನನ್ನು ಗಂಡಿಯ ಮೂಲಕ ತಿರುಗಾಯಿಸಿದೆ. ಈ ರೀತಿ ಇವನು ಯಾಕೆ ವರ್ತಿಸುವನೆಂದು ಬಹಳ ಆಶ್ಚರ್ಯವಾಯಿತು. "ರಾತ್ರಿ ಹೊತ್ತು ಇಲ್ಲೆ ಇರು" ಎಂದು ತಿಳಿಸಿದೆ. 'ಸರಿ'ಯೆಂದ. ಒಳಗಿಂದ ವಸ್ತ್ರಗಳನ್ನು ತಂದು ಕೊಟ್ಟೆ. ವಸ್ತ್ರವನ್ನು ಬದಲಾಯಿಸಲು ಒಪ್ಪಲಿಲ್ಲ.

"ಊಟ ಮಾಡುವಿಯೇ' ಎಂದಾಗಲೂ "ಇಲ್ಲ"ಎಂದನು.

ಈ ಬಾರಿ ನಾನು ಒತ್ತಾಯಿಸದೆ ಅವನನ್ನು ಕುಳ್ಳಿರಿಸಿ ಒಳ ಹೋಗಿ ಊಟಮಾಡಿದೆ. ಹೊರ ಬಂದಾಗ ಅವನು ಗಾಬರಿಯಾಗಿ ಬಿಟ್ಟಿದ್ದನು. ಎದ್ದು ಕೋಣೆಯಿಡೀ ಸುತ್ತುತ್ತಾ ಎಲ್ಲಿಯಾದರೂ ಅಡಗಿ ಕುಳಿತುಕೊಳ್ಳಲು ಸ್ಥಳವಿದೆಯೇ ಎಂದು ಹುಡುಕಾಡಿದ.

'ಏನು ಹೀಗೆ?' ನಾನು ಕೇಳಿದೆ.

'ಆ ಇವರು ಇಲ್ಲಿಗೆ ಬಂದಿದ್ದಾರೆ' ಎಂದು ಕಿಟಕಿಯ ಹೊರಗೆ ಕೈಚಾಚಿದ.

'ಎಲ್ಲಿದ್ದಾರೆ?" ಮತ್ತೊಮ್ಮೆ ಕೇಳಿದೆ.

"ಆ ಅಂಗಡಿಯಲ್ಲಿ!'

ಅಂಗಡಿಯ ವಿ.| ಗೋಪಾಲನದ್ದಾಗಿತ್ತು. ಅಲ್ಲಿ ಯಾರೂ ಕಣ್ಣಿಗೆ ಕಾಣಿಸಲಿಲ್ಲ.

'ನಿನಗೆ ಹೇಗೆ ತಿಳಿಯಿತು?" ನಾನೆಂದೆ.

"ಅವರು ಫನ್ನ ಕೂಲಿ ಮಾಡುವುದೋ ಸ್ವರ ಮಾತುಕತೆಯಾಡುತ್ತಿದ್ದಾರೆ."

ಅಂಗಡಿಯಲ್ಲಿ ಮಾತನಾಡುವ ಶಬ್ದ ಕೇಳಿ ಬರುತಿತ್ತು. ಆದರೂ ಸ್ಪಷ್ಟವಾಗಿ ಕೇಳಿ ಬರುತ್ತಿರಲಿಲ್ಲ.

'ಅವರು ಹಿಂದಿಯಲ್ಲಿ ಮಾತನಾಡುತ್ತಿರುವರು' ಅವನೆಂದ.

"ನಿನ್ನ ತಲೆ ಸರಿಯಿಲ್ಲ. ಹಿಂದಿಯಲ್ಲಿಲ್ಲ ಬಂಗಾಳಿಯಲ್ಲಿ. ಎಂದು ಕೋಪದಿಂದ ಪುತಿದೆ.

ಅವನು ಸುಸ್ತಾದ.

'ಒಂದೊಮ್ಮೆ ಆ ಜನರು ಅಲ್ಲಿದ್ದರೆ ಏನು ಮಾಡೋಣ? ಒಳ ಹೋಗಿ ಮಲಗಿಕೋ" ಎಂದೆ.

ಅವನು ನನ್ನ ಜೊತೆಗೆ ಒಳ ಬಂದು ನನ್ನ ಒದಿಯಲ್ಲೇ ಮತ್ತೊಂದು ಮಂಚದ ಮೇಲೆ ಮಲಗಿಕೊಂಡ.

"ದೀಪ ನಂದಿಸಲೇ?" ಎಂದಾಗ 'ಹಾಂ" ಎಂದ.

ದೀಪ ನಂದಿಸಿ ನಾನೂ ಮಂಚದ ಮೇಲೆ ಮಲಗಿದೆ. ತುಸು ಹೊತ್ತಾದ ಬಳಿಕ ಮಲಗಿದ್ದವನು ಎದ್ದು ಕುಳಿತು ಬಿಟ್ಟ! ಪುನಃ ಮಲಗಿದ. ಒಮ್ಮೆ ಅತ್ತಕಡೆ ಮುಖಮಾಡಿ ಮಲಗುತಿದ್ದ. ಮತ್ತೊಮ್ಮೆ ಇತ್ತಕಡೆ! ನಾನು ಸುಮ್ಮಗೆ ಅವನನ್ನೇ ನೋಡುತಿದ್ದೆ. ತುಸು ಸಮಯದ ಬಳಿಕ ನಿದ್ದೆಹೋದೆ. ಒಂದು ಗಂಟೆಯಷ್ಟು ನಿದ್ದೆ ಮಾಡಿದಾಗ ಪಕ್ಕನೆ ಹೆದರಿಹೋಗಿ ಕುಳಿತುಬಿಟ್ಟೆ! ನಾನೂ ಎಚ್ಚರಗೊಂಡು ಬೇಗ ದೀಪ ಹೊತ್ತಿಸಿದೆ. ಮಂಚದ ಮೇಲೆ ಹೆದರಿ ಕುಳಿತಿರುವುದನ್ನು ಕಂಡೆ.

"ಏನಾಯಿತು?' ಅವನನ್ನು ಕೇಳಿದೆ.

"ನನ್ನನ್ನು ಬಿಟ್ಟುಬಿಡು! ನನಗೆ ಹೊಡೆಯಬೇಡ; ದಮ್ಮಯ್ಯ" ಎನ್ನುತ್ತಾ ನನ್ನ ಕಾಲು ಹಿಡಿದ.

'ನಾನೇನು ನಿನಗೆ ಹೊಡೆಯುತ್ತಿರುವೆನೇ" ನಾನು ಆಶ್ಚರ್ಯವಾಗಿ ಕೇಳಿದೆ.

'ಇಲ್ಲ, ನೀನು ನನ್ನನ್ನು ಕೊಂದು ಬಿಡುವಿ. ದಮ್ಮಯ್ಯ, ನನ್ನನ್ನು ಬಿಡು- ನೀನು ಹೇಳಿದ ಕೆಲಸವನ್ನು ಮಾಡುತ್ತೇನ .... ದಮ್ಮಯ್ಯಾ....' ಅವನ ಕಣ್ಣುಗಳಿಂದ ನೀರು ಉದುರತೊಡಗಿದವು.

ನಾನು ಎಷ್ಟೋ ಬಾರಿ ಸಮಾಧಾನಪಡಿಸುವ ಪ್ರಯತ್ನ ಮಾಡಿದರೂ ಅವನು "ದಮ್ಮಯ್ಯಾ ನನ್ನನ್ನು ಕೊಲ್ಲಬೇಡ, ಬಿಟ್ಟುಬಿಡ!' ಎಷ್ಟುತ್ತಾ ಇದ್ದ. ನಾನು ಮತ್ತೆ ಸಮಾಧಾನಕ್ಕೆ ತರಲು ಹೋದನಾದೆ.

ಂ ಂ ಂ

ತುಸು ಸಮಯದ ನಂತರ ಸಮಾಧಾನಕ್ಕೆ ಬಂದು "ನನ್ನನ್ನು ಇಲ್ಲಿಂದ ಹೋಗ

ಅಮೃತ ಬಿಂದು

ಉತ್ತಮ ಪತ್ನಿಯು ಮನುಷ್ಯನ ಇಹದ ಸರ್ವ ಸಂಪತ್ತು, ಪರದ ಶಾಂತಿಯು ಸಾಧಾರ.

ಂ ಂ ಂ

ನನ್ನ ಪತ್ನಿಯನ್ನು ನಾನು ಕಾಣೆನಾದರೆ ಸ್ವರ್ಗವು ನನಗೆ ಸ್ವರ್ಗವಾಗಿ ಉಳಿಯದು.

ಂ ಂ ಂ

ದೀರ್ಘ ಜೀವನಕ್ಕೆ ಉತ್ತಮಪತ್ನಿಅತ್ಯಗತ್ಯ. ಏಕೆಂದರೆ ಜೀವನದ ಕಷ್ಟ ಕಾರ್ಪಣ್ಯಗಳ ಅರ್ಧವನ್ನೂ, ಕುಟ್ಟುಪೆಟ್ಟುಗಳ ಹೆಚ್ಚಿನಂಶವನ್ನೂ ಆಕೆ ಹೊರುತ್ತಾಳೆ.

ಂ ಂ ಂ

ಏನೂ ದೊರೆತರೂ ತನ್ನ ಯೋಗ್ಯತೆಗೆ ಸಾಕಷ್ಟು ದೊರೆಯಲಿಲ್ಲವೆಂಬುದೇ ಅಹಂಕಾರಿಯ ನಿಲುವು. ಅದ್ದರಿಂದ ಅಹಂಕಾರಿ ಎಂದೂ ಕೃತಜ್ಞನಾಗಿರನು.

ಂ ಂ ಂ

ಓದುವುದರಿಂದ ಜ್ಞಾನ ಸಂಗ್ರಹಿಸಬಹುದು. ಆದರೆ ಚಿಂತಿಸುವುದರಿಂದ ಮಾತ್ರ ಅದರ ರಸ ಸವಿ ವಿಂಗಡಿಸಲು ಸಾಧ್ಯ.

ಂ ಂ ಂ

ಓದುವುದಕ್ಕಿಂತ ಕಡಿಮೆ ವೆಚ್ಚದ ಮನೋರಂಜನೆಯಿಲ್ಲ. ಅದರಿಂದದೊರೆಯುವ ಚಿರ ಆನಂದವನ್ನು ಮರೆದುದೂ ಇಲ್ಲ.

ಂ ಂ ಂ

ಕ್ರೂರ ಕೃತ್ಯ ಮಾಡುವವರೆಲ್ಲರೂ ಹೇಯವಾಗಿ ವರ್ತಿಸುವವರನ್ನು ಸದಾ ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ತಮ್ಮ ಕುಕೃತ್ಯಕ್ಕಾಗಿ ನಾಚಿಕೆ ಪಡದವರನ್ನು ಕಂಡಾಗ ಆಶ್ಚರ್ಯವಾಗುತ್ತದೆ.

ಂ ಂ ಂ

ಹೊಗಳಿಕೆಯ ಸಿರಿಗಾಗಿ ಪ್ರಯತ್ನಿಸುವವರಲ್ಲಿ ಯೋಗ್ಯತೆಯ ಬಡತನ ತುಂಬಾ ಇದೆಯೆಂದು ತಿಳಿಯಬೇಕು.

ನನ್ನೂರು !

ಕೆಂಪು-ಕಪ್ಪು ಹೆಂಚಿನ ಮನೆಗಳ
ಉದ್ದ - ಅಗ್ಗ ದಾರಿಗಳ
ಓಡಾಡುವ ರೈಲು - ಬಸ್ಸುಗಳ
ತಿಳಿ ಬೆಳದಿಂಗಳ ಊರು
ನನ್ನೂರು!

ಸುಂದರ ಹೊಲಗಳ
ಕೆರೆ-ಕಟ್ಟೆ ಬಾವಿಗಳ
ಗುಡಿ ಗೋಪುರಗಳ
ತೆರೆ-ತೆರೆ ಗಿರಿ ಶಿಖರಗಳ ಊರು
ನನ್ನೂರು!

ಹಿರಿಯರ ಸಿರಿ
ಸಿರಿ ಹೊನ್ನಿನ ಹಿರಿ
ಚೆಲ ವಿನ ಒಲವಿನ ಕೇರಿ
ಇದಕಿಲ್ಲ ಬೇರೆ ಸಾಟಿ ಎಂದು
ಸಾರಿ ಹೇಳುವ ಊರು
ನನ್ನೂರು!

ನಾ ಜನಿಸಿದ ಊರು
ನಾ ಕುಡಿದ ಬಾವಿಯ ನೀರು
ನಾ ಉಂಡ ಅನ್ನಾ-ಸಾರು
ಓದಿದ ಶಾಲೆ ನೆಡೆದ ನೆಲ
ಬಿದ್ದು-ಎದ್ದ ಜಾಗವಿರುವ ಊರು
ನನ್ನೂರು!

ಬೆಂಗಳೂರಿನಿಂದ ಪೂನಾಕ್ಕೆ ಹೇರ ದಾರಿ
ಮಧ್ಯೆ ಹೊಳದುರ್ಗ ದಾಟಿದರೆ
ಬರುವ ರೈಲು ಫಿಲ್ವಾಣಿ
'ರಾಮಗಿರಿ' ಹೆಸರಿನ ಊರೇ
ನನ್ನೂರು!

—ಮಲ್ಲಾರಿ, ರಾಮಗಿರಿ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಶಂಕಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರುಜು ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾಫಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಸಾಕಷ್ಟಿರುವಾಗ ಅಯುರ್ವೇದ ಔಷಧಿ ಮತ್ತು ಕಲ್ಪ ಕೃತಿಯ ಸಲಹೆಗಳಿಗೆ, ಇವರನ್ನು ಅರಿಯಿರಿ

SHANKAR PHARMACY
BHADRAVATI (MYSORE)

NAVAYUGA 30—5—1968
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಕಾನೂನಿಗೊಂದು ಸಮಸ್ಯೆ

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು

ವಿದ್ಯಾರ್ಥಿಗಳ ಸಮಸ್ಯೆಯಾಗಲಿ ಅಥವಾ ಕಾಯ್ದೆ ಪ್ರಶ್ನೆಯಾಗಲೀ ಹೊಸದೇನೂ ಅಲ್ಲ. ಶಿಕ್ಷಣ ಸಂಸ್ಥೆಗಳು ಕಾಲಮಾನ ಪರಿಸ್ಥಿತಿಗೆ ಅನುಗುಣವಾಗಿ ವಿದ್ಯಾರ್ಥಿಗಳ ಕ್ರಿಯೆಗೆ ತಮ್ಮ ಪ್ರತಿಕ್ರಿಯೆಗಳನ್ನು ತೋರಿಸಿದ್ದುಂಟು. ಯುರೋಪಿನ ಹಿರಿಯ ಹಳೆಯ ವಿಶ್ವವಿದ್ಯಾನಿಲಯಗಳ ಅಧ್ಯಾಪಕರನ್ನು ವಿದ್ಯಾರ್ಥಿದಳ ಕೋರಿಕೆಯ ಮೇರೆಗೆ ಕೆಲಸದಿಂದ ತೆಗೆದು ಹಾಕಲಾಯಿತು. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನಲ್ಲಿ 'ಗೌನ್' ವಿರುದ್ಧ 'ಜೌನ್' ಚಳುವಳಿ ನಡೆದದ್ದು ಬ್ರಿಟಿಷ್ ಇತಿಹಾಸವನ್ನು ಅಲ್ಲವರೆಲ್ಲ ಅರಿತ ವಿಷಯ. ಹದಿಮೂರರಿಂದ ಹತ್ತೊಂಭತ್ತನೇ ಶತಮಾನದ ವಿದ್ಯಾರ್ಥಿಗಳು ಇಂದಿನ ವಿದ್ಯಾರ್ಥಿಗಳಿಗಿಂತ ಹೆಚ್ಚು ವಯಸ್ಸಾದವರಿದ್ದರು; ಮೇಲಾಗಿ ಶ್ರೀಮಂತ ಅಥವಾ ಅಧಿಕಾರ ಸಂಪನ್ನ ವರ್ಗದ ಮಕ್ಕಳೇ ವಿಶೇಷವಾಗಿ ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತಿದ್ದರು. ಈಗಿನಂತೆ ಕಾಯ್ದೆ-ಸುವ್ಯವಸ್ಥೆಯು ಪ್ರಜಾಸತ್ತಾತ್ಮಕ ಪದ್ಧತಿಯ ಆಧಾರ ಅಂಶವಾಗಿರಲಿಲ್ಲ.

ದ್ವಿತೀಯ ಜಾಗತಿಕ ಯುದ್ಧಾನಂತರ

ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭಕ್ಕಿಂತ ಮೊದಲಿನ ಒಂದು ಶತಮಾನ ಕಾಲಾವಧಿಯಲ್ಲಿ ಪ್ರಪಂಚದ ಬಹುಶಃ ಎಲ್ಲ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಕಾಯ್ದೆ-ಸುವ್ಯವಸ್ಥೆಗೆ ಮಾನ್ಯತೆಕೊಟ್ಟು, ಹೆಚ್ಚಿನ ಶಿಸ್ತಿನಿಂದ ವರ್ತಿಸಿದ್ದು ಕಂಡುಬಂದಿದೆ. ರಶಿಯಾದ ೧೯೧೭ ಕ್ರಾಂತಿಯಲ್ಲಿ ವಿದ್ಯಾರ್ಥಿಗಳು ಮಹತ್ವದ ಭಾಗವಹಿಸಿದ ವಿಷಯ ನನಗೆ ತಿಳಿಯದು. ಪ್ರಜಾಸತ್ತಾತ್ಮಕ ಮತ್ತು ಸರ್ವಾಧಿಕಾರ ಸಿದ್ಧ ರಾಷ್ಟ್ರಗಳ ನೂರಾರು ವಿದ್ಯಾರ್ಥಿದಳ ದ್ವಿತೀಯ ಮಹಾಯುದ್ಧದಲ್ಲಿ ಪಾಲ್ಗೊಂಡಿದ್ದರು. ಆ ನೇರೆಗೆ ಜಗತ್ತಿನ ಯಾವದೇ ಭಾಗದಲ್ಲಿ ವಿದ್ಯಾರ್ಥಿಗಳ ಅಶಿಸ್ತಿನ ಸಮಸ್ಯೆಯಾಗಲೀ ಅಥವಾ ವಿದ್ಯಾರ್ಥಿ ಮತ್ತು ಕಾನೂನಿನ ಪ್ರಶ್ನೆಯಾಗಲೀ ತಲೆದೋರಿರಲಿಲ್ಲ.

೧೯೪೦ರಿಂದ ಪರಿಸ್ಥಿತಿ ಬದಲಾಗಿದೆ. ಸಾಂಪ್ರದಾಯಿಕವಾಗಿ ಜಗತ್ತಿನ ವಿದ್ಯಮಾನಗಳನ್ನು ನಡೆಯಿಸುತ್ತಿರುವ ಹಳೆಯ ತಲೆಮಾರಿನ ಜನರು ಉತ್ತಮ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ತಪ್ಪಿದ್ದರಿಂದ ಸಶಿಕ್ಷಿತ ಯುವಕ ಜನಾಂದೋಲನ ಮಿಡಿಮಿಡಿಗೊಂಡಿತ್ತು. ದ್ವಿತೀಯ ಮಹಾಯುದ್ಧವು ಅನೇಕ ಸಂಗತಿಗಳನ್ನು ಒರೆಗೆ ಹಚ್ಚಿತು. ಎಂಥ ಪ್ರಬಲ ದಾಳಿಯನ್ನೂ ಒಗ್ಗಟ್ಟಿನಿಂದ ಕೂಡಿದ ಜನರು ಎದುರಿಸಬಲ್ಲರು; ಒಂದು ದೇಶದ ಸರಕಾರ ಎಷ್ಟೇ ಪ್ರಬಲವಾಗಿದ್ದರೂ ಕೇವಲ ಪಾಶವೀ ಶಕ್ತಿಯಿಂದ ತನ್ನ ಜನತೆಯನ್ನು ಧಿಯಂತ್ರಿಸಲು ಸಾಧ್ಯವಿಲ್ಲ ಎಂಬೀ ಮೊದಲಾದ ಸಂಗತಿಗಳು ಸ್ಪಷ್ಟವಾದವು. ದಕ್ಷಿಣ ಕೋರಿಯಾ, ತುರ್ಕಸ್ತಾನ, ಮತ್ತು ಇಂಡೋನೇಶಿಯಾ ದೇಶದಲ್ಲಿಯ ಸುಭದ್ರ ಸರಕಾರಗಳನ್ನು ವಿದ್ಯಾರ್ಥಿಗಳು ತಲೆಕೆಳಗಾಗುವಂತೆ ಮಾಡಿದ್ದಾರೆ. ಹೋರಾಡುತ್ತಿರುವ ವಿದ್ಯಾರ್ಥಿಗಳಿಗೆ ಕೆಲವು ವಿಶಿಷ್ಟ ಸೌಲಭ್ಯಗಳಿವೆ. ಅವರ ಸಂಖ್ಯೆ ಮತ್ತು ತಾರುಣ್ಯ ಅಂಶದಲು ಅವರ ಸಂಘಟನೆಗೆ ಪ್ರಚೋದಕ ಅಂಶಗಳಾಗಿವೆ. ದೇಶದ ಅಭಿವೃದ್ಧಿಗೆ ಕಂಕಣಬದ್ಧವಾದ ಯಾವದೇ ಸರಕಾರವೂ ತನ್ನ ಮುಂದಿನ ಜನತಾಂಗವನ್ನಿಸಿದ ವಿದ್ಯಾರ್ಥಿಗಳನ್ನು ನಾಶಪಡಿಸಲು ಸಾಧ್ಯವಿಲ್ಲ.

ಸತ್ಯಾಗ್ರಹ

ವಸಾಹತುಶಾಹೀ ಸಾಮ್ರಾಜ್ಯದ ಸರಕಾರವು ಭಾರತವನ್ನು ಆಳುತ್ತಿದ್ದಾಗ ಮಹಾತ್ಮಾ ಗಾಂಧೀಜಿಯವರು ಕಾನೂನು ಉಲ್ಲಂಘನೆ ಮಾಡಿದರು; ಕಾಯ್ದೆ ಭಂಗ ಚಳುವಳಿಗೆ ವಿದ್ಯಾರ್ಥಿಗಳನ್ನೊಳಗೊಂಡು ದೇಶದ ಎಲ್ಲ ಜನರ ಸಹಕಾರವನ್ನು ಅವರು ಕೋರಿದರು. ಆದರೆ ಮಹಾತ್ಮಾಜಿಯವರು ಪ್ರಾರಂಭಿಸಿದ್ದ ಸತ್ಯಾಗ್ರಹವು ಅಧಿಕಾರವನ್ನು ಚಲಾಯಿಸುತ್ತಿದ್ದ ಬ್ರಿಟಿಷರ ವಿರುದ್ಧ ವಿತ್ತೇ ಹೊರತು, ಕೇವಲ ಕಾನೂನುಗಳನ್ನು ಮುರಿಯುವುದಕ್ಕೆ ಇರಲಿಲ್ಲ. ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿಸಿದ ತಮ್ಮ ಹಿಂಬಾಲಕರಿಗೆ ಮಹಾತ್ಮಾಜಿಯವರು ಶಿಕ್ಷೆಯನ್ನು ಸಂತೋಷದಿಂದ ಅನುಭೋಗಿಸಬೇಕು ಎಂದು ಕೇಳಿಕೊಂಡಿದ್ದರು. ಗಾಂಧೀಜಿಯವರು ಕಾನೂನನ್ನು ಉಲ್ಲಂಘಿಸಿದರೂ, ಅವರ ಬಗ್ಗೆ ಅಗೌರವ ತಾಳಲಿಲ್ಲ. ಭಾರತೀಯ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಇತ್ತೀಚೆಗೆ ಬುದ್ಧಿಪೂರ್ವಕ ಕಾಯ್ದೆ ಉಲ್ಲಂಘನೆ ಮಾಡಿದ್ದಾರೆ. ಅವರೇನು ಗಾಂಧೀಜಿಯವರ ಜೀವಿತ ಅಥವಾ ಬೋಧನೆಯಿಂದ ಪ್ರಚೋದಿಸಲ್ಪಟ್ಟಿರು ಎಂದು ಹನಗೆನಿಸುವುದಿಲ್ಲ.

ವಿದ್ಯಾರ್ಥಿಗಳಿಂದ ಕಾನೂನು ಉಲ್ಲಂಘನೆ

ಭಾರತದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮಾಡಿದ ಕಾನೂನುಭಂಗ ಪ್ರಕರಣಗಳನ್ನು (೧) ವಿಶ್ವವಿದ್ಯಾನಿಲಯ ಪ್ರದೇಶದಲ್ಲಿ ನಡೆದವುಗಳು ಮತ್ತು (೨) ವಿಶ್ವವಿದ್ಯಾನಿಲಯ ಪ್ರದೇಶದ ಹೊರಗೆ ಘಡೆದವುಗಳು ಎಂದು ವಿಂಗಡಿಸಿ ಅವುಗಳನ್ನು ವಿಮರ್ಶಿಸಬಹುದು.

ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅನೇಗಾಲವೂ ತಮ್ಮ ಪ್ರದೇಶದಲ್ಲಿ ಕಾಯ್ದೆ-ಸುವ್ಯವಸ್ಥೆಯನ್ನು ಎತ್ತಿಹಿಡಿಯಬೇಕು. ಯಾವದೇ ಪ್ರಸಂಗದಲ್ಲಿ ಪೋಲೀಸರನ್ನು ವಿಶ್ವವಿದ್ಯಾನಿಲಯದ ಆವರಣದೊಳಗೆ ಬರಿಗೊಡಬಾರದು ಎಂಬ ಫಲುಮೆ ಹಾಸ್ಯಾಸ್ಪದ. ವಿಶ್ವವಿದ್ಯಾನಿಲಯದಲ್ಲಿರುವ ಅಧ್ಯಾಪಕವರ್ಗ, ಪ್ರಯೋಗಾಲಯದ ಮತ್ತು ವಾಚನಾಲಯದ ಬೆಲೆಯ ವಸ್ತುಗಳನ್ನು ಕಾನೂನು ವಿರೋಧಿಗಳಿಂದ ರಕ್ಷಿಸಿಕೊಂಡು ಬರುವದು ಅತ್ಯವಶ್ಯ ವಿಷಯ. ಪೋಲೀಸರನ್ನು ಯಾವ ವೇಳೆಗೆ ಕರೆಯಿಸಿಕೊಳ್ಳಬೇಕು ಎಂಬ ಮಾತು ಯೋಗ್ಯ ನಿರ್ಣಯಕ್ಕೆ ಬಿಟ್ಟಿರತಕ್ಕುದು. ವಿಶ್ವವಿದ್ಯಾನಿಲಯದ ಪ್ರದೇಶಕ್ಕೆ ಪೋಲೀಸರು ಗಲಭೆಯನ್ನು ಅಡಗಿಸಲು ಖಂಡಾಗ ಪೋಲೀಸರ ಕ್ರಮದ ಕಾರಿಯತೆ ತೀವ್ರವಾದಂತೆ, ನಿರಪರಾಧಿ ಜನರು ಅತ್ಯಾಚಾರಕ್ಕೆ ಒಳಗಾಗದಂತೆ ನೋಡಿಕೊಳ್ಳುವದು ಎಲ್ಲ ಅಧಿಕಾರಿಗಳ ನೈತಿಕ ಹೊಣೆಯಾಗಿದೆ.

ವಿಶ್ವವಿದ್ಯಾನಿಲಯದ ಹೊರಗೆ ವಿದ್ಯಾರ್ಥಿಗಳು ನಡೆಸಿದ ಗಲಭೆ, ದಂಗೆ, ಅಸ್ತಿ-ಪಾಸ್ತಿ ನಾಶ ಕೃತಿಗಳನ್ನು ಸಾಮಾನ್ಯ ಕಾಯ್ದೆಭಂಗ ಪ್ರಕರಣಗಳಂತೆ ನೋಡಿಕೊಳ್ಳಬೇಕು. ಸಾಮೂಹಿಕವಾಗಿ ಕಾಯ್ದೆಭಂಗ ಕೃತ್ಯ ಘಡೆದರೆ ಸಾಮಾನ್ಯ ನಾಗರಿಕರ ಮೂಲಭೂತ ಹಕ್ಕುಗಳಿಗೆ ಚ್ಯುತಿಬರುತ್ತದೆ. ಶಾಂತ ಪ್ರದರ್ಶನಗಳನ್ನು ಏರ್ಪಡಿಸಲು ಹೊರಟ ಮುಂದಾಳುಗಳು ತಮ್ಮ ಪ್ರದರ್ಶನವು ಹಿಂಸಾಚಾರಕ್ಕೆಳೆಯದಂತೆ ನೋಡಿಕೊಳ್ಳಬೇಕು. ಸಮಾಜದ್ರೋಹಿಗಳು ಸೇರಿ ಶಾಂತರೀತಿಯ ಪ್ರದರ್ಶನವನ್ನು ಹಾಳು ಮಾಡಿದರು ಎಂದು ಹೇಳಿದರೆ ಅದು ಅಸಮರ್ಥನೀಯ ನೆವ ಎಂದೇ ತಮ್ಮ ಭಾವನೆ. ಕಾಯ್ದೆಯನ್ನು ಹಾಳುಮಾಡುವ ವಿದ್ರೋಹಿಗಳು ಇದ್ದೇ ಇರುತ್ತಾರೆ. ಅಂಥವರನ್ನು ಗುರುತಿಸಿ ಭಾರತೀಯ ದಂಡ ಕಾನೂನಿನನ್ವಯ ಏಳೆ ಶಿಕ್ಷೆಗಳಿಕೆ ಅಡದು ಎಂಬ ವಿಷಯ ಅಸ್ಪಷ್ಟವಾಗಿದೆ.

ವಿದ್ಯಾರ್ಥಿಗಳ ಗಲಭೆಯಲ್ಲಿ ಹೊರುವದ ವಿಷಯವೇನೂ ಇಲ್ಲ. ಗಲಭೆಯಲ್ಲಿ ತೊಡಗಿದ ವಿದ್ಯಾರ್ಥಿಗಳು ಪ್ರಜಾಸತ್ತಾತ್ಮಕ ಕಲ್ಯಾಣ ರಾಜ್ಯದ ಮೌಲ್ಯಗಳನ್ನೇ ನಾಶಪಡಿಸುವರು. ಬುದ್ಧಿಪೂರ್ವಕ ಕಾನೂನನ್ನು ಉಲ್ಲಂಘಿಸುವ ಪ್ರಯತ್ನದಲ್ಲಿ ತಮ್ಮ ತಮ್ಮ ಕೆಲಸಗಳಿಗೆ ಹೊರಟ ನಾಗರಿಕರನ್ನು ಬಲಾತ್ಕಾರವಾಗಿ ತಡೆಹಿಡಿದು ಕಿರುಕುಳ ಕೊಟ್ಟ ಹೇಡಿತನದೇ, ಅಡಗಿದ್ದ ಅಸ್ತಿ-ಪಾಸ್ತಿ ಹಾಳು ಮಾಡುವ ಕೃತ್ಯ ತೊಡಗಿದ ಯುವಕರು ಕಾಯ್ದೆಕಾನೂನಿಗರ ಲಾಕ—ಅವರು ಹೇಡಿ ಹಿಂಡ.

(ಡಾ|| ಸಿ. ಡಿ. ಪೇಕಮುಖರ ಲೇಖನದಿಂದ)

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಹೆ. ಪ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಚಳವಳವೇಳೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ|| ಕೊರಡ್ಕಲ್ ವೆಂಕಟ್ರಾವ್, ಎಲ್.-ಎ.ಎಮ್.

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಶ್ರೀಪ್ಪನ್ ಜಿ ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿ, ಪರಿಚಿತರು ಇತರ ಎಲ್ಲ ಸಾಮಾನ್ಯ ಕಾಹಿಲೆಗಳೂ ಸುಲಭದಲ್ಲೇ ಮದ್ದು ಮಾಡುವ ವಿಧಾನವು ವಿಷದಪಟ್ಟಿದೆ. ಹೊಸ ವಿಧಾನ ಸರಿಸ್ಥಾನದಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೋಸ್ಟ್ ಖರ್ಚು ಹೇಳಿ)

— ಪ್ರತಿಗಳಿಗೆ ಅರಿಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udupi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

6—6—1968

೨೦
ಪೈಸೆ

ಚಿರಂಜೀವಿ

ಬರೆದವರು: ಶ್ರೀ ಸ. ನಾರಾಯಣ.

ಕೃಷ್ಣಪ್ಪನವರ ತೋಟದ ಕೀರ್ತಿ ಸುತ್ತಲ ಹತ್ತು ಹಳ್ಳಿಗಳಿಗೂ ಹರಡಿತ್ತು. ಅವರು ತೋಟವನ್ನು ಅಭಿವೃದ್ಧಿ ಪಡಿಸಲು ಶಕ್ತಿ ನೀರಿ ಶ್ರಮಿಸಿದ್ದರು. ರೈತರಂತೆ ಹಡಿಲು, ಮಳೆ, ಗಾಳಿ-ಛಳಿ ಎನ್ನದೆ ದೆವರು ಸುರಿಸಿ ದುಡಿದಿದ್ದರು. ಹತ್ತಾರು ವರ್ಷಗಳ ಅವರ ಪ್ರಯತ್ನ, ದುಡಿಮೆಯ ಫಲದಿಂದ ಅವರ ತೋಟ ತಲೆ ಎತ್ತಿ ನಿಂತಿತ್ತು. ಕೃಷ್ಣಪ್ಪನವರ ತೋಟವನ್ನು ಅವರ ಬಂಧು ಮಿತ್ರರು "ಮಲ್ಲಿಗೆ ಹಳ್ಳಿಯ ನಂದನ ವನ" ಎಂದು ಹೇಳುತ್ತಿದ್ದರು.

ತೋಟದ ಬಗ್ಗೆ ಇದ್ದ ಅಭಿಮಾನಕ್ಕಿಂತಲೂ ತಮ್ಮ ಮಗಳ ಬಗ್ಗೆ ಕೃಷ್ಣಪ್ಪನವರಿಗೆ ಇನ್ನೂ ಹೆಚ್ಚು ಅಕ್ಕರೆ. ರಾಜೇಶ್ವರಿ ಕೃಷ್ಣಪ್ಪನವರ ಒಬ್ಬಳೇ ಮಗಳು. ಸಂತಾನ ಪ್ರಾಪ್ತಿಗಾಗಿ ಅವರು ಅನೇಕ ಪೂಜೆ, ವ್ರತ, ನಿಯಮಗಳನ್ನು ಅನುಸರಿಸಿದ್ದರು, ಕಂಡ ಕಂಡ ದೇವರಿಗೆಲ್ಲ ಕೈ ಮುಗಿದಿದ್ದರು.

ಕೃಷ್ಣಪ್ಪನವರು ಹಳ್ಳಿಯ ರೈತರ ಒಡನಾಟದಲ್ಲಿ, ತೋಟದ ದುಡಿಮೆಯಲ್ಲಿ ಮಕ್ಕಳಿಲ್ಲದ ನೋವನ್ನು ಮರೆಯುತ್ತಿದ್ದರು. ಆದರೆ ಮನೆಯಲ್ಲಿ ಒಂಟಿಯಾಗಿಯೇ ಇರುತ್ತಿದ್ದ ಅವರ ಪತ್ನಿ ವಿಶಾಲಾಕ್ಷಮ್ಮನವರ ಕೊರಗು ದಿನದಿನಕ್ಕೆ ಹೆಚ್ಚತೊಡಗಿತು. ನಿತ್ಯ ಕಂಬನಿ ಸುರಿಸುವುದೇ ಅವರ ಹಣೆಯ ಬರಹವಾಯಿತು; "ಬಂಜೆ" ಎಂಬ ನುಡಿ ಅವರ ಹೃದಯವನ್ನು ಸದಾ ನೋಯಿಸುತ್ತಿತ್ತು. ವಂಶದ ಕುಡಿ ಇಲ್ಲದೆ ದಂಪತಿಗಳು ಕಂಗಾಲಾದರು.

ನರಸಿಂಹ ಪಂಡಿತರು ತ್ರಿಕಾಲ ಜ್ಞಾನಿಗಳೆಂದು ಪ್ರಸಿದ್ಧರಾಗಿದ್ದರು. ಅವರ ನುಡಿ ಸುಳ್ಳಾದ ಉದಾಹರಣೆಯೇ ಇರಲಿಲ್ಲ. ಸುತ್ತಲ ಹತ್ತು ಹಳ್ಳಿಗಳಲ್ಲಿ ಅವರ ಕೀರ್ತಿ ಹರಡಿತ್ತು. ಕೃಷ್ಣಪ್ಪನವರು ಒಮ್ಮೆ ಪಂಡಿತರನ್ನು ಭೇಟಿ ಮಾಡಿ ತಮ್ಮ ಮನದಳಲನ್ನು ತೋಡಿಕೊಂಡರು.

ಪಂಡಿತರು ಪ್ರಸಿದ್ಧ ಜ್ಯೋತಿಷಿಗಳಾಗಿದ್ದರು. ಕೃಷ್ಣಪ್ಪ ಮತ್ತು ವಿಶಾಲಾಕ್ಷಮ್ಮನವರ ಜಾತಕದಳನ್ನು ತೆಗೆದುಕೊಂಡು ಪೋಡಿ "ನೀವು ಏಂಗಿಶರಾಗಬೇಕಾದ ಕಾರಣವಿಲ್ಲ ಕೃಷ್ಣಪ್ಪ.... ಲೋಕ ಜನವಿಲಿತೆಯನ್ನು ಭಕ್ತಿಯಿಂದ ಆರಾಧಿಸು .... ನಿನ್ನ ಆಸೆ ಪೂರೈಸುತ್ತದೆ" ಎಂದು ಹೇಳಿದರು.

ಪಂಡಿತರ ನುಡಿ ಹುಸಿಯಾಗಲಿಲ್ಲ. ಕೃಷ್ಣಪ್ಪನವರ ಪೂಜೆಗೆ ತಕ್ಕ ಫಲ ದೊರೆಯಿತು. ವಿಶಾಲಾಕ್ಷಮ್ಮ ಗರ್ಭವತಿಯಾಗಿ ಹೆಣ್ಣು ಮಗುವಿಗೆ ಜನ್ಮವಿತ್ತರು. ಪಂಡಿತರೇ ಮುಂದೆ ನಿಂತು ನಾಮಕರಣ ಮಾಡಿದರು. ತಂದೆತಾಯಿಗಳ ಆಸೆಯಂತೆ ಮಗುವಿಗೆ ರಾಜೇಶ್ವರಿ ಎಂದು ಹೆಸರಿಟ್ಟರು. ರಾಜೇಶ್ವರಿ ಬೆಳೆಯತೊಡಗಿದಳು. ಅವಳ ತೊದಲ್ನುಡಿ ಮುದ್ದು ಮುಖಗಳನ್ನು ಕಂಡು ದಂಪತಿಗಳು ಆನಂದಿಸುತ್ತಿದ್ದರು. ದಿನಗಳು ಹಿಂದಾದವು.

ಗುಣ, ರೂಪ, ನಡತೆಗಳಲ್ಲಿ ರಾಜೇಶ್ವರಿಯದೇ ಒಂದು ವೈಶಿಷ್ಟ್ಯ. ಅವಳ ಗುಣ, ರೂಪ, ನಡತೆಗಳು ಹತ್ತು ಜನ ಒಪ್ಪಬಲ್ಲವಂತಾಗಿದ್ದವು. ಎಲ್ಲರ ಮುದ್ದು ಮಗಳಾಗಿ ಬೆಳೆದಳು ರಾಜೇಶ್ವರಿ.

ಕೃಷ್ಣಪ್ಪನವರು ಮಗಳಿಗೆ ಗಂಡು ಹುಡುಕ ತೊಡಗಿದರು. ಎಷ್ಟು ಕಡೆಗಳಲ್ಲಿ ಹುಡುಕಿದರೂ, ಎಷ್ಟು ಬಾರಿ ಪ್ರಯತ್ನಿಸಿದರೂ ಮಗಳಿಗೆ ಅನುರೂಪನಾದ, ಅವರ ಮನಸ್ಸಿಗೆ ಒಪ್ಪಿಗೆಯಾಗುವ ಗಂಡು ದೊರೆಯಲಿಲ್ಲ. ಕೊನೆಗೆ ಕೃಷ್ಣಪ್ಪನವರು ಪಂಡಿತರ ಮೊರೆಹೋದರು.

ಪಂಡಿತರು ರಾಜೇಶ್ವರಿಗೆ ಗಂಡು ಹುಡುಕಿ ಕೊಟ್ಟದ್ದು ಮಾತ್ರವೇ ಅಲ್ಲ, ಮುಂದೆ ನಿಂತು ವಿವಾಹವನ್ನೂ ನೆರವೇರಿಸಿದರು. "ಕೃಷ್ಣಪ್ಪ ಇನ್ನೂ ಲಂಗ ಹಾಕಿಕೊಂಡು ಓಡಾಡುತ್ತಿದ್ದ ರಾಜೇಶ್ವರಿ ಇವತ್ತು ಒಂದು ಮನೆ ಮಂಗಳಲಕ್ಷ್ಮಿ ಆದಳು" ಎಂದು ಸಂತಸದಿಂದ ನುಡಿದರು.

ಆನಂದ ಎಂ. ಎ. ಪದವೀಧರ. ಕಾಲೇಜು ಒಂದರಲ್ಲಿ ಉಪನ್ಯಾಸಕನಾಗಿದ್ದ. ಅವನಿಗೆ ವಿದ್ಯೆಯೊಂದಿಗೆ ವಿವೇಕವೂ ಇತ್ತು. ಆಪನದು ಹತ್ತು ಜನ ನೆಚ್ಚುವಂತಹ ಗುಣ, ನಡತೆ, ಸ್ವಭಾವ. ಪಂಡಿತರು ಆನಂದನ ತಂದೆಯ ಮಿತ್ರರು, ಪಂಡಿತರ ಮಾತು ಅವರ ಮನೆಯಲ್ಲಿ ವೇದವಾಕ್ಯ. ಯಾರೂ ಪ್ರತಿ ಹೇಳುತ್ತಿರಲಿಲ್ಲ ಆನಂದ ಆರಂಭದಲ್ಲಿ "ಹಳ್ಳಿಗಾಡು ಹುಡುಗಿ" ಎಂದು ರಾಜೇಶ್ವರಿಯನ್ನು ಬೇಡವೆಂದ. ಆದರೆ ಪಂಡಿತರು ಬಿಡಲಿಲ್ಲ. ಅವನನ್ನು ಹಳ್ಳಿಗೆ ಕರೆದೊಯ್ದರು. ಕೃಷ್ಣಪ್ಪನವರ ತೋಟವನ್ನು ನೋಡಿ ಆನಂದ ವಿಸ್ಮಯಗೊಂಡ. ಪ್ರಕೃತಿದೇವಿ ನಗುತ್ತಾ ನಿಂತಿರುವಂತಿದೆ ಎಂದುಕೊಂಡ. ರಾಜೇಶ್ವರಿಯನ್ನು ನೋಡಿದಾಗ 'ಈ ಮುಗ್ಧತೆ, ಸೌಜನ್ಯ' ದೊರೆಯುವುದಕ್ಕೆ ಪುಣ್ಯ ಬೇಕು ಎಂದುಕೊಂಡ. ಪಂಡಿತರು "ಕೃಷ್ಣಪ್ಪನವರ ಆಸ್ತಿಗಳು ಎಷ್ಟು, ಒಂದು ತೋಟ, ಇನ್ನೊಂದು ರಾಜೇಶ್ವರಿ. ರಾಜೇಶ್ವರಿ ನಿನ್ನವಳಾದರೆ ತೋಟವೂ ನಿನ್ನದೆ" ಎಂದರು.

'ಧನಗೆ ಅವರ ತೋಟದ ಅಗತ್ಯವಿಲ್ಲ. ಅವರ ಆಸ್ತಿ ಅವರಿಗೆ ಇರಲಿ" ಎಂದ ಆನಂದ.

"ಸರಿ ರಾಜೇಶ್ವರಿ ಮಾತ್ರವೇ ಸಾಕೆ?" ಎಂದು ನಗುತ್ತಾ ನುಡಿದರು. ರಾಜೇಶ್ವರಿ ಮತ್ತು ಆನಂದ ಪರಸ್ಪರಯರಾದರು.

ಮದುವೆಯಾದ ಮೂರು ವರ್ಷಗಳ ತರುವಾಯ ರಾಜೇಶ್ವರಿ ಗರ್ಭಿಣಿಯಾದಳು. ಅವಳ ತಂದೆತಾಯಿಯರ ಸಂಭ್ರಮ ಹೇಳತೀರದು, ಕೃಷ್ಣಪ್ಪ ಮತ್ತು ವಿಶಾಲಾಕ್ಷಮ್ಮ ಮಗಳನ್ನು ಮನೆಗೆ ಕರೆತಂದು ಹೂವಿನಂತೆ ನೋಡಿಕೊಂಡರು. ಅಳಿಯ ವಾರಕ್ಕೊಮ್ಮೆ ಪತ್ನಿಯನ್ನು ನೋಡಿಕೊಂಡು ಹೋಗುತ್ತಿದ್ದ.

ನವಮಾಸಗಳು ಕಳೆದ ತರುವಾಯ ರಾಜೇಶ್ವರಿ ಗಂಡು ಮಗುವಿಗೆ ಜನ್ಮ ಕೊಡಿದಳು. ಮಗು ಬಹು ಆಕರ್ಷಣೀಯವಾಗಿತ್ತು, ಆಂದವಾಗಿತ್ತು. ಮಧ್ಯದ ಮಗುವಿಗೆ ರಾಜೇಶ್ವರಿ "ಮನೋಹರ" ಎಂದು ಹೆಸರಿಟ್ಟಳು.

ಮನೋಹರ ತಾಯಿ ಮತ್ತು ಅಜ್ಜಿಯ ಮಮತೆಯ ಅಪ್ಪುಗೆಯಲ್ಲಿ ಬೆಳೆಯತೊಡಗಿದ. ಕೃಷ್ಣಪ್ಪನವರಿಗೆ ನೊಮ್ಮಗನನ್ನು ಕಂಡರೆ "ಬಾಲಕೃಷ್ಣ"ನ ನೆನಪು ಬರುತ್ತಿತ್ತು. ಮನೋಹರ ಒಂದು ವರ್ಷದ ಮಗುವಾದ.

ಒಂದು ದಿನ ಮಧ್ಯಾಹ್ನ ಕೃಷ್ಣಪ್ಪನವರು ಮನೆಯ ಮುಂದಿನ ಮಾವಿನ ಮರದ ಕೆಳಗೆ ಕುಳಿತು ಜೈಮಿನಿ ಭಾರತವನ್ನು ಓದುತ್ತಿದ್ದರು. ರಾಜೇಶ್ವರಿ ತಂದೆಯ ಬಳಿಗೆ ಒಂದು, "ಅಪ್ಪ, ಒಳಗೆ ಸ್ವಲ್ಪ ಕೆಲಸವಿದೆ.....ನಾನು ಅಮ್ಮ ಒಳಗೆ ಇರುತ್ತೇವೆ.....ಈ ತುಂಟ ಒಳಗೆ ಸುಮ್ಮನಿರುವುದಿಲ್ಲ. ಇಲ್ಲೇ ಮಲಗಿಸಿರುತ್ತೇನೆ...ನೋಡಿಕೊಳ್ಳುತ್ತಿರು....." ಎಂದು ಸವಿಾಪದಲ್ಲಿಯೇ ಹಾಸಿ ಮನೋಹರನನ್ನು ಮಲಗಿಸಿ ಒಳಕ್ಕೆ ನಡೆದಳು. ಮನೋಹರ ಕೈಯ ಹೆಬ್ಬೆರಳನ್ನು ಚೀಪುತ್ತಾ ಮಲಗಿದ್ದ. ಕೃಷ್ಣಪ್ಪನವರ ವಾಚನ ಮುಂದುವರಿತಿತ್ತು. ಸೀತಾವನವಾಸದ ಪ್ರಸಂಗ ಅವರ ಮೈಮನಗಳನ್ನು ತ್ರೇತಾಯುಗಕ್ಕೆ ಕರೆದೊಯ್ದಿತ್ತು.

ಮನದಳ ಚೀರಿದ್ದನ್ನು ಕೇಳಿ ಕೃಷ್ಣಪ್ಪ ಬೆಚ್ಚಿ ಹಿಂದಕ್ಕೆ ನೋಡಿದರು.

ಮನೋಹರನ ನೆತ್ತಿಯ ಬಳಿ ದೊಡ್ಡ ಕೃಷ್ಣಸರ್ಪ ಒಂದು ಹೆಡೆ ಬಿಚ್ಚಿ ಕುಳಿತಿತ್ತು. ಕೃಷ್ಣಪ್ಪನವರಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಹಾವು ಹೆಡೆಬಿಚ್ಚಿದೆ....ಮಗುವಿಗೆ ಕಚ್ಚಿದರೆ ಗತಿ ಏನ? ಎಂದು ಯೋಚಿಸಿದರು....ಅದನ್ನು ಓಡಿಸುವ ಬಗೆ ಯಾವುದು?....ಮಗುವನ್ನು ಹೇಗೆ ರಕ್ಷಿಸಬೇಕು? ಹಾವಿಗೆ ಹೊಡೆಯಲು ಹೋದರೆ ಪ್ರಾಣಾಪಾಯ.... ಎಂದು ಹತ್ತು ಬಗೆಯಲ್ಲಿ ಚಿಂತಿಸಿದರು. ರಾಜೇಶ್ವರಿ ಸ್ಮೃತಿ ತಪ್ಪಿ ಬಿದ್ದಿದ್ದಳು.

ಮನೋಹರ ತನ್ನ ಬಾಲಗೀತೆ ಹಾಡುತ್ತಾ ಮಲಗಿದ್ದ. ಹಾವು ಹೆಡೆ ಬಿಚ್ಚಿ ಸುಮ್ಮನೆ ಕುಳಿತಿತ್ತು. ವಿಶಾಲಾಕ್ಷಮ್ಮ ಮಗಳು ಕೂಗಿದ ಸದ್ದು ಕೇಳಿ ಹೊರಕ್ಕೆ ಓಡಿಬಂದು ಬಾಗಿಲ ಬಳಿ ನಡುಗುತ್ತಾ ನಿಂತಿದ್ದರು.

ಕೃಷ್ಣಪ್ಪನವರಿಗೆ ಅದೇನು ತೋಚಿತೋ? ಮಗುವನ್ನು ಎತ್ತಿಕೊಳ್ಳಲು ಹೋಗಲಿಲ್ಲ, ಹಾವನ್ನು ಹೆದರಿಸಲು, ಹೊಡೆಯಲು ಮುಂದಾಗಲಿಲ್ಲ. ಕುಳಿತಲ್ಲಿಂದ ಮೆಲ್ಲಗೆ ಎದ್ದು ಒಳಕ್ಕೆ ನಡೆದರು. ಬೆಳ್ಳಿಯ ಬಟ್ಟಲ ತುಂಬ ಹಸುವಿನ ಹಾಲನ್ನು ತುಂಬಿಕೊಂಡು ಬಂದು ಹಾವಿಗೆ ಸ್ವಲ್ಪ ದೂರದಲ್ಲಿಟ್ಟು 'ಯಾತಕ್ಕಾಗಿ ಬಂದಿದೀಯಪ್ಪ...ಯಾರಿಂದಲಾದರೂ ತಪ್ಪಾಗಿದ್ದರೆ ಕ್ಷಮಿಸಿ ಬಿಡು....ಹಾಲಿನಂತಹ ಸುಂದರ ಸಂಸಾರದಲ್ಲಿ ನಂಜು ಬೆರೆಸಿ ಹೋಗಬೇಡ...ಮಗು ನಮ್ಮೆಲ್ಲರ ಜೀವ....ಅದನ್ನು ಕಾಪಾಡಿಬಿಟ್ಟದ್ದೇನೆ ಸ್ವೀಕರಿಸು....' ಎಂದರು.

ನಾಗರ ಹಾವಿಗೆ ಅದೇನೆನಿಸಿತೋ? ಹಾಲಿನ ಬಟ್ಟಲ ಬಳಿಗೆ ಬಂದು ಬಟ್ಟಲಲ್ಲಿದ್ದ ಹಾಲನ್ನು ಹೀರಿ ಹೊರಟು ಹೋಯಿತು. ಮನೋಹರ ಆನಂದದಲ್ಲಿ ಕಲ್ಲೀನನಾಗಿದ್ದ. ಹಾವು ಗಿಡಗಳ ಮರೆಯಲ್ಲಿ ದೂರ ಹೊರಟು ಹೋಯಿತು. ಕೃಷ್ಣಪ್ಪನವರಿಗೆ ಜೀವ ಬಂದಂತಾಯಿತು.

ಶೈತ್ಯೋಪಚಾರ ನಡೆಸಿದ ಒಂದು ಗಂಟೆಯ ತರುವಾಯ ರಾಜೇಶ್ವರಿಗೆ ಸ್ಮೃತಿ ಬಂತು. ರಾಜೇಶ್ವರಿ ಎಚ್ಚರವಾದೊಡನೆ ಅಳುತ್ತಾ "ನನ್ನ ಮಗು ಗತಿ ಏನಮ್ಮ...ಮನೋಹರ ಎಲ್ಲವ್ವ.... ಅವನನ್ನು ಬಿಡಬಾರದಿತ್ತಮ್ಮ....ಮಗು ಎಲ್ಲವ್ವ...." ಎಂದಳು.

"ಮನೋಹರನಿಗೆ ಏನೂ ಆಗಿಲ್ಲ. ದೇವರು ದೊಡ್ಡವನು ರಾಜಿ..ನೀನೇನೂ ಗಾಬರಿಯಾಗಬೇಡ....ಹಾವು ಹೊರಟು ಹೋಯಿತು. ಮನೋಹರ ಇಂದು ಮತ್ತೆ ಪುನರ್ಜನ್ಮ ತಾಳಿದಂತಾಯ್ತು" ಎಂದರು ಕೃಷ್ಣಪ್ಪ. ವಿಶಾಲಾಕ್ಷಮ್ಮ ನೊಮ್ಮಗನನ್ನು ಎತ್ತಿಕೊಂಡು ನಿಂತಿದ್ದರು.

ರಾಜೇಶ್ವರಿ ಮಗನನ್ನು ಎತ್ತಿಕೊಂಡು ಅಪ್ಪಿ, "ನನ್ನ ಕಂದ" ಎಂದು ಮುತ್ತಿಟ್ಟಳು. ಕೃಷ್ಣಪ್ಪನವರ ಕಣ್ಣಿಂದ ಆನಂದಾಶ್ರು ಸುರಿಯಿತು.

ಕೃಷ್ಣಪ್ಪ ಮನೋಹರನ ಜಾಡಕವನ್ನು ಕೈಯಲ್ಲಿ ಹಿಡಿದು ಪಂಡಿತರ ಮನೆಗೆ ಓಡಿದರು. ಪಂಡಿತರು ಕೃಷ್ಣಪ್ಪನವರ ಆಸರವನ್ನು ಕಂಡು ಗಾಬರಿಯಾದರು.

"ಎಲ್ಲ ಆರೋಗ್ಯ ತಾನೆ ಕೃಷ್ಣಪ್ಪ?"

"ಏನು ಹೇಳಲಿ ಪಂಡಿತರೆ?"

"ಹೂಳೆ ಏನಾಯ್ತು?"

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ಜೈವಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯಹಣವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

Phone— 5711, 5712, 5713 } 3 Lines.

ಸಂಪುಟ ೪೭
VOL. 47
ಸಂಚಿಕೆ ೪೦
No 40

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೬—೬—೧೯೬೮

ವಿಜಯಿಯೊಂದ್ರ ವೀರೇಂದ್ರ

ಹೊಸ ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ತನ್ನ ಪ್ರತಿಸ್ಪರ್ಧಿಯನ್ನು ಅಪಾಡದಲ್ಲಿ ಬೀಳಿಸಿ ವಿಜಯಿಯೊಂದ್ರಾಗಿ ಅದ್ಭುತ ದಾಖಲೆಯನ್ನು ನಿರ್ಮಿಸಿದರು. ತನ್ನ ವಿಶಾಲ ಕಾಯವಾದರೂ ಹೊಸ ರಕ್ತ, ಬಿಸಿ ರಕ್ತದ ಸಚಿವ ಸಂಪುಟವನ್ನು ಅತಿ ತ್ವರಿತದಲ್ಲಿಯೇ ರಚಿಸಿ, ಅವರವರಿಗೆ ಖಾತೆಗಳನ್ನೂ ಹಂಚಿ, ಕೊಡಬೇಕಾದವರನ್ನೂ ಒದಗಿಸಿ (ಹೆಚ್ಚಿನವರಿಗೆ) ಪ್ರತಿಜ್ಞಾವಿಧಿ ಸ್ವೀಕರಿಸಿದ ದಿನವೇ ಕಾರ್ಯವಿಧಿಗೂ ಅಂಟಿಕೊಂಡಿರುವಂತೆ ಮಾಡಿ ಮತ್ತೊಂದು ವಿಕ್ರಮವನ್ನು ಸ್ಥಾಪಿಸಿದರು. ಯಾವ ರಾಜ್ಯದಲ್ಲಾ ಕೇಂದ್ರದಲ್ಲಾಗಲೂ ಇಂತಹ ಸಂದರ್ಭವೇಬಂದಿಲ್ಲವೆನ್ನಬೇಕು, ನಡೆಯದಿರುವ ರೀತಿಯಲ್ಲಿ ವಿದಾಯಗೊಳ್ಳುವ ಮುಖ್ಯಮಂತ್ರಿಯವರಿಂದಲೇ ಮುಖ್ಯ ಮಂತ್ರಿ ಪೀಠದಲ್ಲಿ ಆರೂಢಿತರಾಗಿ ಇನ್ನೊಂದು ಅಪೂರ್ವ ಇತಿಹಾಸವನ್ನು ಬರೆದರು—ಹೀಗೆ ತ್ರಿವಿಕ್ರಮಗಳನ್ನು ಸ್ಥಾಪಿಸಿದ ಈ ವಿಜಯಿಯೊಂದ್ರ ವೀರೇಂದ್ರ ಪಾಟೀಲರು ಕಾಂಗ್ರೆಸ್ ಪಕ್ಷದ ಕಾರಕರ ಮೇಲೆಯೇ ವಿಜಯ ಧ್ವಜವನ್ನು ನಾಟಿದರು. ಇಷ್ಟೊಂದು ಸಲೀಸಾಗಿ ಕಾರ್ಯಾರಂಭ ಮಾಡಿದ ಮುಖ್ಯಮಂತ್ರಿ ಪ್ರಾಯಃ ಕರ್ನಾಟಕದಲ್ಲಿ ಇದುವರೆಗೆ ಬಂದಿಲ್ಲವೆಂದರೂ ಸಲ್ಲುತ್ತದೆ.

ಶ್ರೀ ಪಾಟೀಲರ ಹೊಸ ಸಂಪುಟದಲ್ಲಿ ಮುಖ್ಯ ಮಂತ್ರಿಗಳನ್ನು ಕೂಡಿ ೧೨ ಜನ ಕ್ಯಾಬಿನೆಟ್ ಸಚಿವರು ಮತ್ತು ೧೧ ಜನ ಉಪ ಸಚಿವರೂ ಇದ್ದಾರೆ. ಇವೆಂಡು ಸುಂಪುಗಳ ನಡುವೆ ಏನೂ ಸ್ಟೇಟ್ ಸಚಿವರೂ ಕೂಡಿ ಒಟ್ಟು ೨೮ ಸದಸ್ಯರಿದ್ದಂತಾಗುತ್ತದೆ. ಪಕ್ಷೇತರ ಚುನಾವಣೆಯಲ್ಲಿ ತನ್ನನ್ನು ವಿರೋಧಿಸಿದ್ದ ಶ್ರೀ ಜತ್ತಿಯವರ "ಒಳ ಗಂಪಿ"ನಿಂದ ಒಂದು ಕ್ಯಾಬಿನೆಟ್ ದರ್ಜೆಯ ಮತ್ತೊಂದು ಉಪದರ್ಜೆಯ ಸಚಿವರನ್ನು ಸೇರಿಸಿಕೊಳ್ಳುವ ವಿಚಾರ ಅವರದ್ದಿದೆಯಂತೆ. ಆದರೆ, ಈ ವಿಚಾರ ಅದೆಷ್ಟರ ಮಟ್ಟಿಗೆ ಕಾರ್ಯಗತವಾದೀತೆಂದು ಹೇಳಬರುವಂತಿಲ್ಲ. ಒಂದು ವೇಳೆ ಇದು ಸಾಧ್ಯವೆನಿಸಿದರೆ, ೩೦ ವಂದಿಯ ಸುವಿಸ್ತೃತ ಮಂತ್ರಿಮಂಡಳವಾಗುವುದು. ಅಂದರೆ ಹಿಂದಿನ ಪಂಜಾಬಿನ ಕೈರನ್ಸರ ಸಂಪುಟವು ನೆನಪಿಗೆ ಬರುವುದು. ಕಾಂಗ್ರೆಸ್ ಶಾಸಕರಲ್ಲಿ ಸುಮಾರು ಕಾಲ್ಭಾಗದಷ್ಟು ಒಬ್ಬನು ಶಾಸನಾದರತಾಗುವುದು. ಕರ್ನಾಟಕ ರಾಜ್ಯದಲ್ಲಿ ಇಷ್ಟು ವಿಸ್ತಾರವಾದ ಮಂತ್ರಿ ಮಂಡಳ ಇದುವರೆಗೆ ಅಧಿಕಾರಕ್ಕೆ ಬಂದಿದ್ದಿಲ್ಲ. ಶ್ರೀ ನಿಜಲಿಂಗಪ್ಪನವರ ಸಂಪುಟವೇ ಹಿರಿದು, ದೊಡ್ಡದು, ವಿಶಾಲ ತಳಹದಿಯದು; ಉಳಿತಾಯ, ಮಿತವ್ಯಯಮಾತ್ರಾಶ, ಹಣಕಾಸಿನ ಅಭಾವದ ಮೇಲೆ ಸದಾಕಾಲ ಭಾಷಣ ಬಿಗಿಯುವ ಕಾಂಗ್ರೆಸ್ಸು ಈ ರೀತಿ ವಿಸ್ತೃತ ತಳಹದಿಯ ಸಂಪುಟ ರಚಿಸುವುದರ ಬಗ್ಗೆ ಅತೃಪ್ತಿ ಜನತೆ ವ್ಯಕ್ತಪಡಿಸುವುದು ಸಹಜ. ಸರಕಾರದ ಭದ್ರತೆ ಮತ್ತು ದಕ್ಷತೆಯನ್ನುಳಿಸಿಕೊಳ್ಳಲು ಇಂತಹ ಮಾರ್ಗ ಅಗತ್ಯವೆಂದು ಇದಕ್ಕೆ ಪಾಟೀಲರ ಪಾಟಿ ಸವಾಲು. ಇದನ್ನೇ ಅಧಿಕಾರ ದಾಹವೆಂದು ವಿರೋಧಿ ಪಕ್ಷಗಳು ಟೀಕಿಸಿ ಹೊರಟರೆ ಆಶ್ಚರ್ಯವಿಲ್ಲ. ರಾಜ್ಯಾಂಗದಲ್ಲಿ ಸಚಿವ ಸಂಪುಟದಲ್ಲಿ ಎಷ್ಟು ಸದಸ್ಯರಿರಬೇಕೆಂಬ ನಿರ್ದೇಶವಿಲ್ಲ— ಇದು ಮುಖ್ಯ ಮಂತ್ರಿಯವರಿಗೊಂದು ವರದಾನ. ಸಚಿವರೆಲ್ಲರಿಗೂ ಮೋಟಾರು ಕಾರು ಈ ಗಾಗಲೇ ದೊರಕಿದೆ. ಇನ್ನೇನು, ಸಂಬಾರಕ್ಕೂ ಅರಂಭವಾಗುತ್ತದೆ. ಜನತೆಯ ಕಷ್ಟ ಸುಖಗಳನ್ನು ಅರಿತುಕೊಂಡು ಕಾರ್ಯನಿರ್ವಹಿಸಬೇಕೆಂಬುದು ಗುರು ನಿಜಲಿಂಗಪ್ಪನವರ ಪ್ರಣವೋಪದೇಶ. 'ಸುಭದ್ರ" ಸರಕಾರವನ್ನು ಜನತೆ ಬಯಸುವುದಾದರೆ, ಅದಕ್ಕಾಗಿ ಅಲ್ಪ ಮಟ್ಟದ ತ್ಯಾಗವನ್ನೂ ಮಾಡಬೇಕಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲರು ಅಳತೆ ಹರಿಯದವರು; ಅವರ ಸಂಪುಟದ ಸದಸ್ಯರ ಸರಾಸರಿ ಪ್ರಾಯವೂ ಅಷ್ಟೇ. ಸಂಪುಟದ ಅತಿ ಹಿರಿಯ ಸದಸ್ಯರು ಕಂದಾಯ—ನ್ಯಾಯಾಂಗ ಸಚಿವರಾದ ಶ್ರೀ ಹೆಚ್. ವಿ. ಕಾಜಲಗಿಯವರು ಕಿರಿಯರೆಂದರೆ, ಗೃಹಶಾಖೆಯ ಉಪ ಸಚಿವ ಶ್ರೀ ಎಂ.ಶ್ರೀನಿವಾಸ್ ಪಾಟೀಲರು; ಮೊದಲನೆಯವರದು ೬೩ ವರ್ಷವಾದರೆ, ಎರಡನೆಯವರದು ೩೨. ಸರ್ವ ಸಾಮಾನ್ಯವಾಗಿ ಎಲ್ಲ ಜಿಲ್ಲೆಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಪ್ರಾತಿನಿಧ್ಯ ನೀಡುವ ಪ್ರಯತ್ನವನ್ನು ಶ್ರೀ ಪಾಟೀಲರು ಮಾಡಿದ್ದಾರೆ. ಸಚಿವರ ಆಯ್ಕೆ ಮತ್ತು ಖಾತೆಗಳ ಹಂಚಿಕೆಯಲ್ಲಿ ಅವರು ಪಟ್ಟಂತೆ ತೋರದಿರುವ ಪ್ರಯತ್ನವನ್ನು ಗಮನಿಸಿದರೆ, ಬಹಳಷ್ಟು ಮೊದಲೇ ಎಲ್ಲವೂ ನಿರ್ಧಾರವಾಗಿದ್ದಂತೆ ತೋರುವುದು. ಅಥವಾ ವಿರೋಧಿ ಪಕ್ಷದ ನಾಯಕ ಶಿವಪ್ಪನವರನ್ನು ಮಂತ್ರಿ "ಖಾತೀ ನೂಕು ಪಗ್ಗಲು" ಇತ್ತೆಂದು ಊಹಿಸಬಹುದು. ಅದೇನೇ ಇರಲಿ, ಶ್ರೀ ವೀರೇಂದ್ರ ಪಾಟೀಲರು ಹೊಸ ಸಂಪುಟವು ಅಧಿಕಾರದಲ್ಲಿ ಬಂದಿದೆಯೆಂಬುದನ್ನು ಆದಷ್ಟು ಶೀಘ್ರವಾಗಿ ಜನತೆಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುವ ಭರವಸೆ ನೀಡಿದ್ದಾರೆ. ಆಡಳಿತದಲ್ಲಿ ಬಿರುಸು, ಜನತೆಗೆ ಹಂಬಲಿಸುವಂತೆ ನೋಡುವುದಾಗಿ ಹೇಳಿದ್ದಾರೆ. ಹಣಕಾಸು ಲಭ್ಯವಾದರೆ ರಾಜ್ಯದ ತಿಪಸಾವಿರ ಹಳ್ಳಿಗಳಿಗೂ ವಿದ್ಯುತ್ ಸೌಲಭ್ಯ ಒದಗಿಸಲು ಅವರು ಸಿದ್ಧರೇ. ಇವೆಲ್ಲವೂ ಒಬ್ಬ ಹೊಸ ಮುಖ್ಯಮಂತ್ರಿ ಸಾಮಾನ್ಯವಾಗಿ ಅಡುವ ಮಾತುಗಳೇ. ಆದರೂ ಶ್ರೀ ಪಾಟೀಲರು ಇನ್ನೂ ರಾಜಕಾರಣದಲ್ಲಿ ಯುವಕರು; ಉತ್ಸಾಹಿಗಳು, ಕಾರ್ಯಶೀಲರು, ಸಾಧಕರು. ಅವರ ಸಂಪುಟದ ಸದಸ್ಯರಾದರೂ ಅವರನ್ನು ಸಂಪೂರ್ಣವಾಗಿ ಬೆಂಬಲಿಸುವವರೇ. ಆದುದರಿಂದ ವೀರೇಂದ್ರ ಪಾಟೀಲರಿಂದ ಜನತೆ ಬಹಳಷ್ಟನ್ನು ನಿರೀಕ್ಷಿಸುತ್ತದೆ—ಸರಕಾರದ ಕಾರ್ಯ ವಿಧಾನಗಳಲ್ಲಿ ವಿದ್ಯುದ್ವೇಗ ಮೂಡಬೇಕು; ಕನ್ನಡವು ರಾಜ್ಯದಲ್ಲಿ ಎಲ್ಲ ಹಂತಗಳಲ್ಲೂ ಆಡಳಿತ ಭಾಷೆಯಾಗಬೇಕು; ರಾಜ್ಯಕ್ಕೆ ಕರ್ನಾಟಕವೆಂದು ಹೆಸರಾಗಬೇಕು; ಅಭಿವೃದ್ಧಿ ಕಾರ್ಯಗಳು ವಿಧಾನವಾಗಿಯಾದರೂ ಸಮರ್ಪಕವಾಗಿ ಮಡೆಯಬೇಕು..... ಶ್ರೀ ಪಾಟೀಲರು ಜನತಾಶೋತ್ತರಗಳನ್ನು ಪೂರಯಿಸಿ ಯಶಗಳಿಸಲಿ. ಹೊಸ ಸಂಪುಟಕ್ಕೆ ಉತ್ಸಾಹದ ಸ್ವಾಗತ.

ಗಾಂಧಿ ವಿಕ್ರಮ

ಪ್ರಧಾನ ಮಂತ್ರಿ ಶ್ರೀಮತಿ ಗಾಂಧಿಯವರು ಹಲವು ದಿನಗಳ ವಿದೇಶ ಸಂಚಾರವನ್ನು ಮುಗಿಸಿ ಬಂದರು. ಆಸ್ಟ್ರೇಲಿಯಾ, ನ್ಯೂಜಿಲೇಂಡ್, ಮಲೇಶಿಯಾ ದೊಡಲಾದೆಡೆ ಇಂದಿರಾಜಿಯವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ಮುತ್ಸದ್ದಿತನದವುಗಳೇ. ಭಾರತ ದೊಡನೆ ವ್ಯಾಪಾರ, ಇಂಗ್ಲಂಡಕ್ಕೆ ನೆರವು ಇತ್ಯಾದಿಗಳ ವಿಚಾರದಲ್ಲಿ ಮಾತುಕತೆಗಳು ಸಫಲ—ವಿಫಲವಾಗಲಿ, ಸ್ನೇಹ ಸೌಹಾರ್ದತೆಗಳು ಬೆಳೆಯಲಿ, ಮುಖ್ಯವಾಗಿ ಹಿಂದೂ ಸಾಗರದಿಂದ ಬ್ರಿಟಿಷ್ ನಾವಿಕಾದಳ ನಿರ್ಗಮನಾನಂತರದ ರುದ್ರ ಪರಿಸ್ಥಿತಿಯತ್ತ ಎಲ್ಲರ ಲಕ್ಷ್ಯವೆಳೆದರು. ಕೆಂಪು ಚೀನಾವು ತನ್ನ ಬಲವನ್ನು ಬಲವಾಗಿ ಸ್ಥಾಪಿಸುವುದು. ಹಿಂದೂ ಸಾಗರ—ಶಾಂತ ಸಾಗರದ ತೀರ ದೇಶಗಳನ್ನು ಹೆದರಿಸುವುದು— ಎಂದು ಮುಂತಾಗಿ ಅವರ ಅಭಿಪ್ರಾಯ. ಇದಕ್ಕೆ ಪರಸ್ಪರ ಸಂರಕ್ಷಣಾ ಒಡಂಬಡಿಕೆ ಪರಿಹಾರವಲ್ಲ—ಇಂತಹ ಪರಿಹಾರವನ್ನು ಫಿಲಿಪ್ಪೈನ್ಸ್ ಭಾರತವೂ ಒಪ್ಪುವುದಿಲ್ಲ—ತಂತಮ್ಮ ರಕ್ಷಣೆಯನ್ನು ತಾವು ತಾವೇ ಮಾಡಿಕೊಳ್ಳಲು ಸೂಕ್ತ ಕಾರ್ಯ ನಡೆಸುವುದು. ಸರ್ವ ಸಾಮಾನ್ಯವಾದ ದ್ವೈತ್ಯ ಶಕ್ತಿಯತ್ತ ಎಲ್ಲರೂ ಮನವನ್ನು ಹರಿಸುವಂತೆ, ಮತ್ತದನ್ನು ಎದುರಿಸುವ ಸಿದ್ಧತೆ ಮಡೆಸುವಂತೆ ಎಲ್ಲರ ಮನವೊಲಿಸುವಲ್ಲಿ — ಅರ್ಥಾತ್ ಚೀನೀಯರು ಬಂದೆಕ್ಕೆ ಸುತ್ತಲು ಬಿಸಿಕಾವಲು ಇರುವುದು ಅತ್ಯವಶ್ಯವೆಂಬುದನ್ನು ಮಹಗಾಣಿಸುವಲ್ಲಿ—ಅವರು ಯಶಗಳಿಸಿದ್ದಾರೆ. ಇದೇನೂ ಕಡಿಮೆ ವಿಕ್ರಮವೆನ್ನುವಂತಿಲ್ಲ.

ಓಂ ತುಂಬಿದ
ಕನ್ನಡದ ಪ್ರಸಿದ್ಧ ಕಾದಂಬರಿಕಾರ
ಶ್ರೀ ಅ. ನ. ಕೃ.

ವಚನ ಸುಧೆ

ಅಪ್ರಶಸ್ತ್ರಾಪಿ ಕಾರ್ಯಾಣಿ
ಯೋ ಮೋಹಾದನು ತಿಷ್ಠತಿ
ಸ ತೇಷಾಂ ವಿಪರೀತ್ರಾಂಶಾಶ್
ಭ್ರಂಶ್ಯತೇ ಜೀವಿತಾದಪಿ॥

ಮೋಹವಶದಿಂದ ಯಾವುದೇ ಕಾರ್ಯವನ್ನು ಆರಂಭಿಸಿದರೆ ಆ ಕಾರ್ಯವು ಕೆಟ್ಟು ಹೋದಾಗ ಮನುಷ್ಯನು ಜೀವನದಿಂದಲೂ ಕೈ ತೊಳೆದುಕೊಳ್ಳುತ್ತಾನೆ.

ಅಮರಣ ಉಪವಾಸ

ಮಾಣಿಪಾಲ, ಮೇ ೩೧—ಯಾವುದೂ ಅನ್ಯಾಯವಾಗಿದ್ದಲ್ಲಿ ಸರಿಪಡಿಸುವುದಾಗಿ ಭರವಸೆ ಕೊಟ್ಟಿದ್ದಾಗ್ಯೂ ಅಧ್ಯಾಪಕ ವೃತ್ತಿಯಲ್ಲಿರುವಂತವರೊಬ್ಬರು ಅಮರಣ ಉಪವಾಸದಲ್ಲಿ ತೊಡಗಿದ್ದು ಕಷ್ಟಪಡುವ ಅಕಾಡಮಿ ಆಫ್ ಜನರಲ್ ಎಜ್ಯುಕೇಷನ್‌ನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯರು ಇಂದು ಇಲ್ಲಿ ತಿಳಿಸಿದರು.

ಮೇ ೧೧ರಿಂದ ಕೆಲವದಿಂದ ತೆಗೆದುಹಾಕಲ್ಪಟ್ಟ ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನ ಉಪನ್ಯಾಸಕರೊಬ್ಬರು ಅಮರಣ ಉಪವಾಸ ಕೈಕೊಂಡ ಬಗ್ಗೆ ಅವರು ಮಾತನಾಡುತ್ತಿದ್ದರು.

ಆ ಅಧ್ಯಾಪಕರಾಗಲೀ ವಿದ್ಯಾರ್ಥಿಗಳಾಗಲಿ ಕೊಟ್ಟಿದ್ದ ಭರವಸೆಗೆ ವಿರುದ್ಧವಾಗಿ ಕ್ರಮ ಕೈಕೊಳ್ಳಲಾಗಿಲ್ಲವೆಂದ ಡಾ| ಪೈ ಹೇಳಿದರು. ಆ ಉಪನ್ಯಾಸಕರು ಹೇಳಿಕೆ ತೆಗೆದುಕೊಂಡು ಆ ಕಾಲೇಜಿನ ಧರ್ಮದರ್ಶಿಗಳ ಮಂಡಳಿ ಅ ಕ್ರಮ ತೆಗೆದುಕೊಂಡಿತ್ತೆಂದರು.

ಅದ್ಭುತ ಶಾಂತಿ

ಪರ್ಕಳ, ಉಡುಪಿಯಿಂದ ನಾಲ್ಕು ಮೈಲು ದೂರದಲ್ಲಿರುವ ಪರ್ಕಳ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಕಳೆದ ತಿಂಗಳಲ್ಲಿ ಧ್ವಜಮರದಲ್ಲಿ ಎರಡು ದಿನ ಸತತ ಧಾರಾಕಾರ ಮಳೆಯಿದ ಪ್ರಾಯಶ್ಚಿತ್ತವಾಗಿ ಕಳೆದ ತಾ. ೩೬,೩೭,೩೮ ಈ ಮೂರು ದಿನಗಳಲ್ಲಿ ಅದ್ಭುತ ಶಾಂತಿ ನವಕ ಪ್ರಧಾನ ಕಲಶಾಭಿಷೇಕ, ಗಣ ಹೋಮ, ರಂಗ ಪೂಜೆ, ಲಕ್ಷ ಹೂವಿನ ಪೂಜೆ, ಸಂಕರ್ಷಣ ವಗೈರೆ ವಿಧ್ಯುಕ್ತವಾಗಿ ವಿಜೃಂಭಣೆಯಿಂದ ಜರಗಿತು.

ನರಸಣ್ಣನ ಸರಸ



"ಪಾಟೀಲರ ಸಂಪುಟದ ಸದಸ್ಯರಲ್ಲಿ ಒಬ್ಬರನ್ನುಳಿದು ಎಲ್ಲರೂ ಇಂಗ್ಲಿಷಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು..."

— ವಾರ್ತೆ

"ಕನ್ನಡ ನಾಡಿನ ಕನ್ನಡಮನಸ್ಕಳಿಗೆ ಕನ್ನಡ ಭಾಷೆಯು ಮರೆತ್ಹೋಯ್ತು, ಬಟ್ಟರ್ ಇಂಗ್ಲಿಷ್ ಬಲವಾಯ್ತು...."

—ಲಾವಣಿ

ಗೇಹ ರಾಜ್ಯದಲ್ಲಿ

ರಾಷ್ಟ್ರೀಯ ವಾಹನ — ಬೈಲಾಡಿ

"ಅಲ್ರಿ, ತುಸ ಇಲ್ಲಿ ಕೇಳೀಂದ್ರೆ....'

"ಮತ್ತೆ ನಾ ಮಾಡ್ತಿರೋದಾದ್ರೂ ಏನ?"

'ನೋಡಿ, ಅದೇನೋ ಸುತ್ತಕದ ಮೇಲೆ ಕಣ್ಣು ಹಾಯ್ಸುತ್ತಾ ಧ್ಯಾನಮಗ್ನರಾಗಿದ್ದೀರಿ ..."

"ಕೇಳೋದು ಕಿವಿಯಿಂದ ತಾನೆ? ಕಣ್ಣಿನಿಂದಲ್ಲವಲ್ಲಾ....'

"ಹಲ್ಲಾಂ ...ಅದ್ರೂ ನೂರ ಕಣ್ಣೂ ಕೇಳುತ್ತೇಂತ ನೀವೇ ಹಿಂದೊಂದು ಬಾರಿ ಅಂದಿದ್ರಲ್ಲ?"

"ಯಾರು, ನಾನೆ?"

"ಹಲ್ಲಾಂ....ಇದೇ ಮಹಾ ರಂಜರು ..."

'ಓ....ಸರೀನ್ನು. ಹಿನ್ನ ಕಣ್ಣಿನ ಮಾತನ್ನು ನನ್ನ ಕಣ್ಣೇ ಕೇಳುತ್ತೆ..'

"ಹೃದಯದ ಮಾತನ್ನ ಕಣ್ಣು ನೋಡಿಯೇ ಕೇಳುತ್ತೆ...."

"ಅದು ಸರೀನ್ನು...ಆದ್ರೆ ಹಾಗೆ ಕಣ್ಣಿಂದ ಕೇಳುವ, ನೋಡಿ ಕೇಳುವ ತಾಕತ್ತು ಎಷ್ಟು ಜನ್ರಲ್ಲಿದೆ?'

"ಅದೊಂದೂ ನಂಗೊತ್ತಿಲ್ಲ. ಆದ್ರೆ ನೋಡಿ...'

'ಏನು?'

"ಏನೂ ಇಲ್ಲ ಬಿಡಿ...."

'ಇದೊಳ್ಳೇ ಭೇಷಾಯ್ತಲ್ಲ...."

'ಅಲ್ರಿ, ಹೊಸ ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರ ಮತ್ತವರ ಸಂಪುಟ ಅಧಿಕಾರಕ್ಕೆ ಬಂತ ..."

"ನೋ ಕಮೆಂಟ್ ಪ್ಲೀಸ್....'

'ಯಾಕ್ರಿ ಅಷ್ಟೂ ಪುರ್ಕ?"

"ಪುರ್ಕಲ್ಲವೇ.... ರಾಜಕಾರಣ ನಮ್ಮಂಥನರಿಗ್ಯಾಕೆ?"

"ನೀವು ಏನೇ ಹೇಳ್ರಿ, ಪಾಟೀಲರು ಅರಂಭದಲ್ಲೇ ಹೇಳಿದಂತೆ ಪಡಕೊಂಡರು..."

"ಏನು?"

"ತಮ್ಮ ಮಂತ್ರಿಮಂಡಳದ ಸದಸ್ಯರ ಸರಾಸರಿವಯ್ಯಾ ಸುಮಾರು ೪೦-೪೫ ಅಂದಿದ್ರು. ಅದನ್ನು ಉಳಿಸಿಕೊಂಡ್ರು."

"ಸರಿ ಬಿಡೂನ್ನು. ಪ್ರಥಮ ಚಟಂಬಂದದಲ್ಲಿ ದಂತಭಗ್ನವಾಗಿಲ್ಲ. ಆದ್ರೆ ದಾಸ್ತ್ರಿಜಾತ್ಮರು ಅರಂಭಶೂರರು ಅಂತ ಪ್ರಾಹುತ ಔಕ್ತರೇಯವರ ಅಭಿಮತ."

"ಅದ್ರೆ ನೋಡಿ, ಸಾಕಷ್ಟು ಚಿಕ್ಕ ಚೊಕ್ಕ ಮಂತ್ರಿಮಂಡಳ ರಚಿಸುವ ಸಲಹೆಯನ್ನು ಸ್ವೀಕರಿಸಿದಂತಿಲ್ಲ...."

"ಯಾಕೆ ಇಲ್ಲ?"

"ಅಲ್ರಿ, ಈಗ್ಲೇ ೨೮ ಜನ ಇದ್ದಾರೆ. ಮತ್ತೆ ಇಬ್ಬರನ್ನು ಸೇರಿಸೋ ಯೋಜನೆ ಇದೆಯಂತ. ಇದೆಂತಹ ಚಿಕ್ಕ?"

"ಮೋದಮ್ಮ ಸಚಿವ ಸಂಪುಟ ಅಂದ್ರೆ ಕ್ಯಾಬಿನೆಟ್. ಈ ಕಿವಾಟದೊಳಗೆ ಇರುವವರು ಒಂದು ಡಜನ್ ಮಾತ್ರ. ಮತ್ತೊಂದು ಕುಸುರಿಯೂದರೆ ೧೩ ಆಯ್ತು..."

"ಉಳಿದವರು?"

"ಅವರು ಸ್ಟೇಟು ಸಚಿವರು, ಉಪ ಸಚಿವರು. ಇವರಿಗೆ ಸಚಿವರ ಸ್ಥಾನವೂ ಮಾನವೂ ಇಲ್ಲ. ಸಚಿವ ಸಂಪುಟದ ಸಭೆಯಲ್ಲಿ—ನೀತಿ ಧೋರಣೆಯಲ್ಲಿ—ಪ್ರವೇಶವಿಲ್ಲ—ಬಹಿಷ್ಕಾರ...."

"ಆಯ್ಯೋ...ಇದೆಂಥದು?"

"ಅದ್ರೂ ಅವರವರ ಭಾಷೆಗಳಿಗೆ ಸಂಬಂಧಿಸಿದ ಚರ್ಚೆ ನಡೆವಾಗ ಅಲ್ಲಾ ಸ್ಟೇಟು—ಉಪಸಚಿವರಿಗೆ ವಿಶೇಷ ಆಮಂತ್ರಣ ಹೋಗುವುದ ...."

"ಅಂದ್ರೆ, ಮಾಡೋಕೆ ಒಂದು ಡಜನ್, ತಿನ್ನೋಕೆಎರಡೂವರೆಡಜನ್...'

"ಬರೋಬರಿ. ಈಗ ನೋಡು, ಸಂಪುಟ ಚಿಕ್ಕದಾಯಿತಲ್ಲಾ? ಮತ್ತೆ ನೋಡು ನಿಜಲಿಂಗಪ್ಪ ಗುಂಪ —ಜತ್ತಿ ಗುಂಪು ಹಿಂದಿನಿಂದಲೂ ಇತ್ತು; ಈಗಲೂ ಇದೆ; ಮುಂದೆಯೂ ಇರುತ್ತೆ. ತಮಗಾಗದವರನ್ನು ದೂರದಲ್ಲಿಯೇ ಇಟ್ಟು ತಮ್ಮ ಚೇಲರ ಕುತ್ತಿಗೆಗೇನೇ ಹಾರ ಹಾಕಿದ್ದರಿಂದ ಚೊಕ್ಕವೂ ಆಯ್ತು!'

"ಹಲ್ಲಾಂ.... ಅಲ್ರಿ,"

'ಏನು?"

"ಭರತನನ್ನ ಯಾಕೆ ಹೊರಗಿಟ್ಟ ಈಲವ?'

'ಓ, ಭಾರೀ ಚರ್ಚೇದಾಗಿಯೇ ಕೇಳಿದೆ. ರಾಮ ದಿಗ್ಬಂಧಿತ ವನವಾಸದಲ್ಲಿದ್ದಾಗ, ಭರತ ಮುಖ್ಯಮಂತ್ರಿಯಾದ. ರಾಮ ಬಂದು ಆರು ವರ್ಷ ಅಧಿಕಾರ ನಡೆಸಿದ. ದೆಕಲಿಯ ಕರಿಗೋಗೊಟ್ಟು ಕೊನೆಗೂ ಲವನ ಕೈ ಹಿಡಿದು ಸಿಂಹಾಸನದಲ್ಲಿ ಕುಳ್ಳಿರಿಸಿ ಉಡಗೊರೆ ನೀಡಿ ಬೀಳ್ಕೊಂಡ. ಇನ್ನ ಭರತ? ಅವನ ಕತೆಯೇ ಬೇರೆ...'

"ಏನು? ಅವನೂ ಜತ್ತಿ ಪಾರ್ಟಿ ಸೇರಿದನೇನು?'

'ಛೆ...ಛೆ.... ಹಾಗೆ ವಿಭೀಷಣನ ಗಾಳಿ ಬೀಸುವುದು ಈ ಮುಪ್ಪಿನಲ್ಲಿ ಸಾಧ್ಯವಾದೀತೇನು? ಹುಟ್ಟು ಗುಣ ಗಟ್ಟು ಹೆತ್ತಿದರೆ ಬಿಡೋದಿಲ್ಲ ಅಂತಾರಲ್ಲ...."

"ಅಂದ್ರೆ?"

"ಇಲ್ಲಿ ಕೇಳು. ಕಂದಿ ಮೊದಲಿಂದಲೂ ಸ್ಪೀಕರ್ ಆಗಿದ್ದವರು. ರಾಮ ಚುನಾವಣೆಯಲ್ಲಿ ಸೋತಾಗ ಮಾತ್ರ ಭರತನಾಗಬೇಕಾಯ್ತು. ಈಗ ರಾಮನ ರಾಜ್ಯ ರಾಜ್ಯಕೀಯದಿಂದ ಪ್ರಮೋಶನ್ ಪಡೆದು ದೂರವಾದ್ದರಿಂದ ಸಂಪುಟದಲ್ಲಿಲ್ಲ..... ಇನ್ನು ಮುಂದೆ ಅವರು ಸ್ಪೀಕರ್ ಆಗುವ ಸಾಧ್ಯತೆ ಹೆಚ್ಚೂಂತ ಯಾರೋ ಭವಿಷ್ಯವಾದಿ ಅಂದಿದ್ದಾನಂತೆ...."

"ಅಲ್ರಿ, ಈಗಿನ ಸ್ಪೀಕರ್ ಬಾಳಿಗಾರವರನ್ನು ಮನೆಗೆ ಕಳಿಸ್ತಾರಾ? ಅವಿಶ್ವಾಸ ಠರಾವು ತರ್ತಾರಾ?

"ಯಾಕೆ ಇಷ್ಟೆಲ್ಲಾ ದ್ರಾವಿಡ ಪ್ರಣಾಯಾಮ?"

"ಮತ್ತೆ?"

'ಬಾಳಿಗಾರಿಗೆ ಪ್ರಾಯವಾಯ್ತು; ಆರೋಗ್ಯವೂ ಸರಿಯಿಲ್ಲ; ಇನ್ನೂ ಚಿಕಿತ್ಸೆ ಪಡೆಯುತಿದ್ದಾರೆ. ಮುಂದಿನ ಬಾರಿ ವಿಧಾನ ಸಭೆ ಸೇರುವಾಗ ಆನಾರೋಗ್ಯ—ಅಶಕ್ತಿಯಕಾರಣ ಮುಂದೂಡಿ ರಾಜೀನಾಮೆ ಕೊಡಿಸಿದರೆ ಸರಿ ತಾನೆ?"

"ಓ, ಅದು ಸರೀನ್ನು. ಆದ್ರೆ ಒಂದು ವೇಳೆ ಹಾಗಾಗದಿದ್ರೆ?"

'ಅಧಿಕಾರದ ಸೋಪದಿಂದ ಬಾಳಿಗಾರು ರಾಜಿ ಕೊಡದೆ ಇದ್ರೆ ಭರತನನ್ನ ಬಿಟ್ಟು ಹಾಕೋ ಕಾಗುತ್ತೆ? ಲವನ ಸಂಪುಟದಲ್ಲಿ ತೂರಿಕೊಳ್ಳಬಹುದು; ರಾಮನ ಖಾಸಗಿ ಕಾರ್ಯದರ್ಶಿಯಾಗಬಹುದು.... ಯಾವುದಾದರೂ ಬೋರ್ಡ್, ಕಮಿಟಿಯ ಛೇರ್ಮನ್ನ ಆಗಬಹುದು. ಮತ್ತೆ .... ಮತ್ತೆ, ಯಾವುದಾದರೂ ರಾಜ್ಯದ ರಾಜ್ಯಪಾಲರೂ ಆಗಬಹುದು...."

"ಅದೇ ಲಾಯಕ್ಕು ಅಂತ ತೋರುತ್ತೆ."

'ಹೌದೇ, ಸತ್ತ ಹುಲೀ ಮೇಲೆ ಕನ್ನದೂ ಒಂದೂಂತ ಕಲ್ಲೆಸೆದರಂತೆ..."

'ಅದೇನೇ ಇರ್ಲಿ, ರಾಮನ ನಿರ್ಗಮನ ನಭೂತೋ ನ ಭವಿಷ್ಯತಿ ಅಂದ ಹಾಗೆ ಆಯ್ತಂತೆ....ಆದರೆ, ಭರತನ ಗೈರುಹಾಜರಿ

(೦೦ಭತ್ತನೇ ಪುಟ ನೋಡಿರಿ)

ಪುತ್ತೂರು II nd Addl. ಮುನ್ಸಿಫ್ ಕೋರ್ಟಿನಲ್ಲಿ

R.E. P No. 334/1967
in S.C. No 209/1961

ಕೊರಗಪ್ಪ ಗೌಡ — ಅರ್ಜಿದಾರ.

ಮತ್ತು

1) ಉಮ್ಮಪ್ಪ, ದುಗ್ಗಮ್ಮ ಹೆಂಗ್ಸಿನ ಮಗಳು ನ. ಮೃತಪ್ಪ ಪೂಜಾರಿಹೆಂಡ್ತಿ. ಕೊಡಗು ಜಿಲ್ಲಾ ಪಡಪಾಲು ಗ್ರಾಮದ ಈಗ ಹಾಲಿ ಗೊಂಚೆಕೊಪ್ಪದಲ್ಲಿರುವವಳು.

2) ಶಾಂತಮ್ಮ- ಲಕ್ಷ್ಮಿ ಹೆಂಗ್ಸಿನ ಮಗಳು ವ, ನಿ. ಮೃತಪ್ಪ ಪೂಜಾರಿ ಹೆಂಡ್ತಿ, ಕೊಡಗು ಜಿಲ್ಲಾ ಭಾಗಮಂಡಲ ಕಾರುಮಂದ ಎಂಬಲ್ಲಿರುವವಳು—

ಕೂಡಾ — ಎದ್ರಿರು.

ನಾದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ಮೇಲ್ಕಂಡ ಅಮಲ್ಜಾರಿಯಲ್ಲಿ ಎದ್ರಿರ ಮೂಲಿ ಹಕ್ಕಿನ ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂ ಪುತ್ತೂರು ಸಬ್ ಡಿವಿಜ್ಜಿಗೆ ಸೇರಿದ ನಂದೊಗ್ರು ಗ್ರಾಮದ ಬಾಬ್ತು ಪಟ್ಟಾ ನಂಬ್ರ ೪೭ನೇಗೆ ಒಟ್ಟಿದ ಸರ್ವಾಧಿ ಅಸ್ತಿಯನ್ನು ತಾರೀಕು ೧೬—೭—೧೯೬೮ ರಲ್ಲು ಕೋರ್ಟು ಹುಕುಂ ಪ್ರಕಾರ ಜಪ್ತು ಪಡಿಸಿಯದೆ. ಆ ಕುರಿತು ಪಿಂಪಡೇಣಾವೆರೂ ಅಕ್ಷೇಪಣೆಗಳಿದ್ದಲ್ಲಿ ತಾರೀಕು ೧೦-೬-೧೯೬೮ ರಲ್ಲು ನೀವು ಸ್ವತಹಾ ಪ-ವಕೀಲರ ಮೂಲ್ಕ ಹಾಜ್ರಾಗಿ ಉಪದೆಸಿಸಿಕೊಳ್ಳತಕ್ಕದ್ದು. ತಪ್ಪದಲ್ಲಿ ನಿಮ್ಮ ಗೈರುಹಾಜರಿಯಿಂದ ಕೋರ್ಟಿನವರಿಗೆ ಯಾತ್ರೆ ಕಂಡಂತೆ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

(By Court order)

K. Subrahmanya Gowda
Advocate for Petitioner

Puttur, (S. K.) Late 1—5—1968

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. 2/1968 O. S. 191/1967

ವಾದಿ, ಅರ್ಜಿದಾರ—ಪಾವಲು ನೋರೆಂಜ

ಪ್ರತಿವಾದಿರು, ಯದ್ರಿರು—

—ಪದ್ದು ಮರಕಾಲ ಕೂಡಾ

ಮೇಲಿನ ದಾವೆಯ ವಾದಿ ಪಾವಲು ನೋರೆಂಜನು ಈ ದಾವೆಯ ೩ನೇ ಪ್ರತಿವಾದಿ ಸೋಮ ಮರಕಾಲ ೧೦ನೇ ಪ್ರತಿವಾದಿ ನಾರಾಯಣ ಮರಕಾಲ-ಮೃತ ಬಸವ ಮರಕಾಲನ ಮಕ್ಕಳು, ಉಡ್ಪಿ ತಾಲ್ಲೂ ಕೋಟೆಕಟ್ಟು ಗ್ರಾಮದಲ್ಲಿರುವವರಾಯಿದವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

1ನೇ ಪ್ರತಿವಾದಿ ಪದ್ದು ಮರಕಾಲ ಮತ್ತು 2ನೇ ಪ್ರತಿವಾದಿಳು ಶೇಕಿ ಮರಕಾಲ್ತಿ ಗಂಡ ವೃತ್ತಿಂದ 8ನೇ ವರೆಗಿನ ಪ್ರತಿವಾದಿರ ತಂದೆಯಾತ್ರಲಾಗಿ ಮೃತಪಟ್ಟ ಕೊಸಮರಕಾಲ ಮತ್ತು 9, 10ನೇ ಪ್ರತಿವಾದಿರ ತಂದೆ ಮೃತ ಬಸವ ಕೂಡಾ ವಾದಿಗೆ ತಾ. 14-2-68ರಲ್ಲು ರೂ. ನಿಕಿ ರುಪಾಯಿ 1500-00 ಕ್ಕೆ ಬರೆಕೊಟ್ಟ ಈಡು ದಸ್ತಾವೇಜಿನ ಬಾಬ್ತು ಹಣ ಬಡ್ಡಿ ಕೂಡಾ ರೂಪಾಯಿ 2268.46P. ಪ್ರತಿವಾದಿಂ ವಸೂಲು ಕೊಡದಯಿದ್ದದ್ದರಿಂದ ಈ ಕುರಿತು ವಾದಿಯು ಮೇಲಿನ ಕೋರ್ಟು O. S. 191/67ನೇಗೆ ಪ್ರತಿವಾದಿರ ಮೇಲೆ ದಾವೆ ಮಾಡಿ ತಾರೀಕು 29—8—67ರಲ್ಲಿ ಪಡದ ಪ್ರಿಲಿಮಿನರಿ ಡಿಕ್ರಿ ಮೇಲೆ ಫೈನಲ್ ಡಿಕ್ರಿ ಕೊಡ್ಸಬೇಕಾಗಿ ವಾದಿ, ಅರ್ಜಿದಾರನು ದಾಖಲ್ಲ ಮಾಡಿದ I.A.2/68ನೇ ಅರ್ಜಿಯು ತಾರೀಕು 11-6-68ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುತ್ತದೆ. ಆ ಕುರಿತು ಅರ್ಜ್ಜಿಪಗಳಿದ್ದರೆ ಸದ್ರಿ ಕೋರ್ಟಿನಲ್ಲಿ ತನ್ನ ದಿನ್ನ ಹಾಜ್ರಾಗಿ ಜಾಹೀರು ಪೂಡಿಕೊಳ್ಳತಕ್ಕದ್ದು. ತಪ್ಪದೆರೆ ನಿಮ್ಮನ್ನು ಅದಿಸ್ಸಯಿಲ್ಲದೆ ಕೋರ್ಟು ಮಾಡಿ ಮುಂದಿನ ಹುಕುಂ ಮಾಡಲ್ಪಡೀತು ಯಂಬ ಸಂಗ್ತಿ ತಿಳಿಯಪಡ್ಸಿರುತ್ತದೆ. ತಿಳಿದಿರಲಿ.

H.N. Hegde
Advocate for Petitioner

ತಾ. 28-5-68, ಮೊಕ್ಕಾಂ: ಕುಂದಾಪುರ

SR

ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡೆಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬ್ಯಾ ಎಲೆ
ಇವುಗಳಿಂದ ತಂತೂರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works, UDIPI, S.K.

ಭಾಷೆಗಳ ಬಿಸಿ ತಣಿಯಲಿ - ೧

ಬರೆದವರು:

ಶ್ರೀ ಎಂ. ರಂಗರಾವ್

ಗೊಂದಲ

ಇತ್ತೀಚೆಗೆ ಭಾಷಾ ಸಮಸ್ಯೆಯೊಂದು ದೊಡ್ಡ ಗೊಂದಲದ ವಿಷಯವಾಗಿ ಬಿಟ್ಟಿದೆ. ಇದರಲ್ಲಿ ಒಂದು ಪಂಗಡವೆನಿಸಿದ ತಮಿಳನವರು ಬಹಳ ತೀವ್ರತೆಯನ್ನು ಪ್ರದರ್ಶನ ಮಾಡುತ್ತಿದ್ದಾರೆ. ಅದಕ್ಕೆ ತಕ್ಕಹಾಗೆ ಹಿಂದಿಯ ಅಪ್ರಗಣ್ಯರೂ ತೀವ್ರತೆ ತೋರಿಸಿದರು. ಮುಕುಗಿನ ಗುದಮುಂಗೆಗಳೂ ಬಹಿರಂಗದ ಢಾಂ ಢೊಂಗಳೂ ಆದುವು. ಕಡೆಗೆ ದಣಿವು. ತುಸು ವಿಶ್ರಾಂತಿ.

ಈ ಸಂದರ್ಭದಲ್ಲಿ ಭಾರತದ ಉಪ ಪ್ರಧಾನಿಗಳು "ಭಾಷಾ ಸಮಸ್ಯೆ ಇನ್ನು ಹತ್ತು ವರ್ಷಗಳಲ್ಲಿ ಸುಮುಖವಾದ ರೀತಿಯಲ್ಲಿ ಒಡಂಬಡಿಕೆಯಾಗಿ ತೀರ ಹೋಗುತ್ತದೆ" ಎಂದು ತಮ್ಮ ಅಭಿಪ್ರಾಯ ತಿಳಿಸಿದರೆ, ತಮಿಳು ಪ್ರಧಾನಿಗಳು 'ಇಂಡಿಯೂ ಒಗ್ಗಟ್ಟಾಗಬೇಕಾದರೆ ಇನ್ನು ಇಪ್ಪತ್ತೈದು ವರ್ಷಗಳ ವರೆಗೆ ಚರ್ಚೆಯ ವಸ್ತುವನ್ನು ಮೂಲೆಗೆ ಹಾಕಿ ಬಿಡಬೇಕು" ಎಂದು ತಮ್ಮ ಅಭಿಪ್ರಾಯ ಹೊರಡಿಸಿದ್ದಾರೆ — ಅಮೆರಿಂಗಾದಲ್ಲಿ.

ಒಬ್ಬರಿದು ಹತ್ತು ವರ್ಷವಾದರೆ ಇನ್ನೊಬ್ಬರದು ಇಪ್ಪತ್ತೈದು ವರ್ಷ. ಹತ್ತರ ವರೆಗೆ ಹೋದ ಮೇಲೆ ಹತ್ತಾದರೇನು, ಇಪ್ಪತ್ತಾದರೇನು? ಎರಡೂ ಒಂದೇ ಎಂದಾಗುವುದಿಲ್ಲವೆ? ನೋಲು ಎಂಬ ಮಾತು ಬಾರದಿದ್ದರೆ ಸರಿ.

ಎರಡು ಕಡೆಯೂ ತುಂಬ ದಣಿದಿದೆ.

ದಣಿಯುವ ವಿಷಯ ತಾನೆ? ಅದರಲ್ಲೂ ಭಾಷೆಯ ವಿಷಯ; ಮಾತೃ ಭಾಷೆಯ ವರೆಗೂ ತಾಯ ವಂಧಾದ್ದು. ರಾಜಕೀಯವೂ ಬೆರೆಯುವುದರಿಂದ ಹೊಟ್ಟೆಯ—ಅರ್ಥಾತ್ ಉದ್ಯೋಗದ ಸಮಸ್ಯೆಯನ್ನೂ ಅಡಗಿಸಿಕೊಂಡಿರುವಂಥಾದ್ದು. ಅಂತೆಯೇ ಇಡಿಯ ದೇಶದಲ್ಲೇ ಒಂದೊಂದನ್ನು ಬೆಂಬಲಿಸುವ ಪಂಗಡಗಳಿದ್ದವು. ದಕ್ಷಿಣಾದಿಗಳು, ಉತ್ತರಾದಿಗಳು ಎಂಬ ಮುಖ್ಯ ಭೇದಗಳು ಕಾಣಿಸಿದುವು. ಇವನ್ನೆ ಹಿಂದಿವಾದಿಗಳೆಂದೂ, ಹಿಂದೇತರವಾದಿಗಳೆಂದೂ ಕರೆಯುವಂತಾಗಿದೆ.

ಹಿಂದೇತರ ವಾದಿಗಳಲ್ಲಿ ಅತೀ ತೀವ್ರವಾಗಿರುವವರು ತಮಿಳರೇ. ಅದಕ್ಕೇ ಭಾರತ ಉಪಪ್ರಧಾನಿಗಳ ಮಾತನ್ನೂ, ತಮಿಳು ಪ್ರಧಾನಿಯ ಮಾತನ್ನೂ ಈ ಮೇಲೆ ಎತ್ತಿ ತೋರಿಸಿದೆ.

ಜಗಳದ ಹುಟ್ಟು

ಸಾಮಾನ್ಯವಾಗಿ ಇಬ್ಬರಿದ್ದರೆ ಜಗಳವಷ್ಟೆ. ಇಬ್ಬರ ನಡುವೆ ಮೂರನೆಯವನ ಸೇರಿದಾಗಲೇ ಜಗಳ ಹುಟ್ಟುವುದು. ಭಾಷೆಯ ವಿಷಯದಲ್ಲಿ ಕೂಡಾ ಮೂರು ಭಾಷೆಗಳನ್ನು ಕುರಿತೇ ವಾದವಿವಾದಗಳು ಇಂಗ್ಲೀಷು, ಹಿಂದೀ ಮತ್ತು ಮಾತೃಭಾಷೆ. ಹಿಂದಿಯೇ ಮಾತೃ ಭಾಷೆಯಾಗಿದ್ದವರಿಗೆ ಆಂಗ್ಲದ್ವೇಷ ಮುಖ್ಯವಾಯಿತು. ಕಾರಣ ಅದು ಪರಕೀಯ ಭಾಷೆ, ಭಾರತೀಯರನ್ನು ತುಳಿದಾಳಿದವರ ಭಾಷೆ.

ಹಿಂದೇತರರಿಗೆ ಹಿಂದಿಯೂ ಆಂಗ್ಲವೂ ಬಹಳ ವರ್ಷ ಸರಿಸಮಾನವೇ ಆಗಿತ್ತು. ಎರಡೂ ಪರಕೀಯವೇ — ಅವರ ದೃಷ್ಟಿಯಲ್ಲಿ. ಆಂಗ್ಲವು ಅಚ್ಚ ಪರಕೀಯವಾದರೂ ಬಳಕೆಯಾಗಿ ಸೌಕರ್ಯ ಸಾಧನವಾಗಿತ್ತು. ಹಿಂದೀ ಸದ್ಯ ಪರಕೀಯ.—ಅಂದರೆ ಉತ್ತರಾಪಥದವರ ಭಾಷೆಯಾದರೂ ಅಖಿಲ ಭಾರತೀಯವಾಗಿ ಬರುವಾಗ ತಾನೆ? — ನೋಡಿಕೊಂಡರಾಯಿತು — ಎಂಬ ರೀತಿಯಲ್ಲಿ 'ಬೇಕಾಗ ಬಹುದಾದ ಪರಕೀಯ'ವಾಗಿತ್ತು.

ಆದರೆ ಭಾರತದ ಕೇಂದ್ರವು ಢಿಲ್ಲಿಯೂ ದುದರಿಂದ ಅವರು ಹಿಂದಿಯ ವಿಷಯದಲ್ಲಿ "ಇನ್ನು ತಡಮಾಡಬಾರದು" ಎಂಬ ಭಾವನೆ ತೋರಿಸಲು ತೊಡಗಿದುದರಿಂದ ಬಹಳ ಗೊಂದಲಕ್ಕೆ ಕಾರಣವಾಯಿತು.

ಸರ್ವದೃಷ್ಟವೂ ಸದದೃಷ್ಟವೂ ವಿರೋಧಪಕ್ಷಗಳಿಗೆ ತುಸು ರೆಕ್ಕೆಯೂ ಬಂದಹಾಗಾಗಿ, ಢಿಲ್ಲಿಗುದವತಿರೆ ಹಾಕುತ್ತಾ ದಣಿಯಬೇಕಾಯಿತು.

ತುಸು ವಿಶ್ರಾಂತಿ, ಕಿಡುಸುತ್ತು.

ಆಂಗ್ಲ ಚಕ್ರಾಧಿಪತ್ಯ

ಹೀಗೆಲ್ಲ ಬಿಸಿ ಬಿಸಿ ಯಾಕೆ? ಇದರ ಹಿಂದು ಮುಂದ, ಎಡ ಬಲಗಳನ್ನು ಕುರಿತು ಸ್ವಲ್ಪ ವಿಚಾರ ಮಾಡೋಣವೆ?

ಫ್ರೆಂಚರು, ಡಚ್ಚರು, ಪೋರ್ಚುಗೀಸರ ಹಾಗೆಯೆ ವ್ಯಾಪಾರಕ್ಕಾಗಿ ಆಂಗ್ಲರೂ ಈ ದೇಶಕ್ಕೆ ಬಂದರು. ಇಂಡಿಯ ದೇಶದೊಳಗಿದ್ದ ಸಣ್ಣ ಪುಟ್ಟ, ಹದವಾದ ಹಿರಿದಾದ ದೇಶಪಾಲಕರ ಬಲಾಬಲಗಳ ಘರ್ಷಣೆಗಳಲ್ಲಿ ತಾವು ತಮ್ಮ ಲಾಭದೃಷ್ಟಿಯಿಂದ ತಲೆಹಾಕಿದರು. ಅವರೊಳಗೆ ಪ್ರಥಮ ಹುಟ್ಟಿತು. ತಂತ್ರ ಹಾಗೂ ಬುದ್ಧಿಶಕ್ತಿಯ ಬೆಂಬಲದೊಂದಿಗೆ ಅದೃಷ್ಟವೂ ಕೂಡಿಬಂದು ಆಂಗ್ಲ ಬಣ ಇಡಿಯ ಭಾರತ ದೇಶವನ್ನೇ ತನ್ನ ಏಕ ಚಕ್ರಾಧಿಪತ್ಯಕ್ಕೆ ತಂದುಕೊಂಡಿತು.

ಆ ದಿನಗಳಲ್ಲಿ ಭಾರತೀಯರು ಏಕ ಚಕ್ರಾಧಿಪತ್ಯವನ್ನೇ ಮರೆತಿದ್ದರು. ಭಾರತೀಯ ಸಂಸ್ಕೃತಿಗೆ ತೀರ ಭಿನ್ನವಾದಂತಹ ಪರಕೀಯರ ಚಕ್ರಾಧಿಪತ್ಯವು ಭಾರತೀಯರಿಗೆ ಅದೇ ಹೊಚ್ಚ ಹೊಸತಿನ ಅನುಭವ. ಹಿಂದೆ ಮರಾಠಾಷ್ಟ್ರರು, ವಿಜಯನಗರದವರು, ಚೋಳರು, ಪಾಂಡ್ಯರು, ಮೊಗಲರು ತಮ್ಮ ತಮ್ಮ ಚಕ್ರಾಧಿಪತ್ಯವನ್ನು ನಡೆಸಿದ್ದರು. ಅಶೋಕ ಚಕ್ರಾಧಿಪತ್ಯವೂ ವಿಶ್ವವಂದಿತ್ಯನ ಚಕ್ರಾಧಿಪತ್ಯವೂ ಪ್ರಸಿದ್ಧವಾಗಿದ್ದುವು. ಚೋಳರಾಜನೊಬ್ಬ ಹಿಮಾಲಯದ ವರೆಗೆ ಜೈತ್ರಯಾತ್ರೆ ಮಾಡಿದ್ದುಂಟು. ಅಶೋಕ ಸಾಮ್ರಾಜ್ಯವು ದಕ್ಷಿಣಾಪಥವನ್ನೂ ಮುಟ್ಟಿದ್ದುಂಟು. ಉತ್ತರಾಪಥದವರು ದಕ್ಷಿಣಾಪಥದ ಮೇಲೆ ದೊಡ್ಡ ದೊಡ್ಡ ಯುದ್ಧಾಳಿ ಮಾಡಿ ಭಯಪಡಿಸಿದ್ದುಂಟು.

ಆದರೆ ಉತ್ತರಾಪಥದವರು ದಕ್ಷಿಣಾಪಥದವರನ್ನಾಗಲೀ, ದಕ್ಷಿಣಾಪಥದವರು ಉತ್ತರಾಪಥದವರನ್ನಾಗಲೀ, ಒಟ್ಟು ಆ ನೇತು ಹಿಮಾಚಲದ ಒಂದೇ ಚಕ್ರಾಧಿಪತ್ಯದಲ್ಲಿ ಒಂದು ಶತಮಾನದ ವರೆಗೆ ನೆಲೆಗೊಂಡು ಶಾಂತಿಯಿಂದ ಪರಿಪಾಲನೆ ಸಾಗಿಸಿದ್ದಾರೆಯೆ?

ಈ ಸಾಧನೆಯಲ್ಲಿ ತಟ್ಟನೆ ನೆನಪಿಗೆ ಬರುವವರು ಆಂಗ್ಲರು. ಅವರು ಸಾವಿರಾರು ವೈಲು ದೂರದಲ್ಲಿದ್ದು ಭಾರತ ದೇಶದಲ್ಲಿ ಏಕ ಚಕ್ರಾಧಿಪತ್ಯವನ್ನು ಸಾಧಿಸಿದ್ದಾರೆ.

ಒಗ್ಗಟ್ಟಿಗೆ ಕಾರಣ

ಆಂಗ್ಲರ ಪ್ರಭಾವವು ಇಲ್ಲಿ ಬೆಳಗುವುದಕ್ಕೆ ಮೊದಲು ಇಂಡಿಯೂ ದೇಶವೆಲ್ಲಾ ಒಂದೇ ಎಂಬ ಪ್ರಜ್ಞೆ ಪ್ರಜೆಗಳಲ್ಲಿ ತುಂಬಿಕೊಂಡಿತ್ತೆ? ಎಲ್ಲೋ ಸಾವಿರಕ್ಕೆ ಒಬ್ಬೆರಡು ಇದ್ದರೆ ಅಂಥವರಿಂದ ಏನಾದರೂ ಐಕ್ಯ ಸಾಧಿಸೀತು? ಅಂತಹ ಪ್ರಜ್ಞೆಗೆ ಪೋಷಣೆ ಕೊಟ್ಟ ಕೀರ್ತಿ ಆಂಗ್ಲ ಚಕ್ರಾಧಿಪತ್ಯಕ್ಕೆ ಉಂಟೆಂದು ಧಾರಾಳವಾಗಿ ಹೇಳಬಹುದಲ್ಲವೆ?

ಎಷ್ಟು ಒಂದೇ ದೇಶವಾಗಿದ್ದರೂ ಆಚೆ ಮನೆ—ಈಚೆ ಮನೆಗಳಿಗೆ ಭೇದವಿದ್ದೇ ಇರುವ ಹಾಗೆ ಭಾರತ ದೇಶವೂ "ಮೇರೋರ್ದಕ್ಷಿಣ ಪಾರ್ಶ್ವ-ಉತ್ತರ ಪಾರ್ಶ್ವ" ಎಂಬ ಭೇದವಿದ್ದೇ ಇದೆ.

ಭೇದದಲ್ಲಿ ಒಗ್ಗಟ್ಟು ಕಾಣಬೇಕಾದ್ದು ತಾನೇ ಸಮಾಜ ನೀತಿ? ಅದೇ ಭಾರತ ದೇಶಕ್ಕೂ ಅನ್ವಯಿಸುವುದಾದರೆ, ಉತ್ತರಾಪಥ ದಕ್ಷಿಣಾಪಥದವರು ಒಬ್ಬರಿಗೊಬ್ಬರು ಸಹಕರಿಸಿಕೊಂಡಿದ್ದುದಕ್ಕೂ, ಒಬ್ಬರ ಮೇಲೊಬ್ಬರು ದಂಡೆತ್ತಿ ಜಗಳಾಡಿಕೊಂಡಿದ್ದುದಕ್ಕೂ ತುಂಬ ಉದಾಹರಣೆಗಳು ಚರಿತ್ರೆಪುಟಗಳಿವೆ. ಎಲ್ಲಾ ನೆರೆಕರೆ ಹೊರಾ ಮನೆಗಳ ಹಾಗೆಯೇ.

ಅವೆಲ್ಲವನ್ನೂ ಏಕಕೃತ್ರದಿಂದ ಆಳವಿಗೆ ತಂದು ಆಳಿಕೊಂಡಿದ್ದವರು—ನಮಗೆ ಸ್ಪಷ್ಟವಾಗಿ ತಿಳಿಯುವ ಹಾಗೆ ಆಂಗ್ಲರೇ.

ಆಗ ಇಂಗ್ಲಿಷ್ ತನ್ನಂತೆಯೇ ಅಧಿಕಾರಿಗಳ ಭಾಷೆಯಾಯಿತು. ಇಂಗ್ಲಿಷ್ ಬಲ್ಲವರು ಅಧಿಕಾರಿಗಳಾಗತೊಡಗಿದರು. ಪ್ರಜೆಗಳ ದೃಷ್ಟಿಯಲ್ಲಿ ಕೂಡಾ ಇಂಗ್ಲೀಷರೂ, ಇಂಗ್ಲಿಷ್ ಭಾಷೆ ಬಲ್ಲ ಅಧಿಕಾರಿಗಳೂ, ಇಂಗ್ಲೀಷು ಭಾಷೆಯೂ 'ಅಬ್ಬಾ!' 'ಓಹೋ!' 'ಆಹಾ!' ಅಭಿಮಾನವಾಯಿತು. ತನ್ನಂತೆ ಬಂತು ಒಂದು ಬಗೆಯ ಆಸಕ್ತಿ ಆ ಇಂಗ್ಲಿಷಿನ ಮೇಲೆ. ಇಂಗ್ಲೀಷು ಕಲಿತರೆ ದೊಡ್ಡ ಹುದ್ದೆಗಳು ಬರುವುದೂ ಮುಖ್ಯ ವಿಷಯ ತಾನೆ? ಹೊಟ್ಟೆಯ ದೃಷ್ಟಿಯೂ ಒಂದು ಉಂಟಷ್ಟೆ?

ಇದಕ್ಕೆ ಸರಿಯಾಗಿ 'ಗಾಳಿ ಬೀಸುವಾಗಲೇ ತೂರಿಕೊಳ್ಳಬೇಕು' ಎಂಬ ನ್ಯಾಯವೂ ಇಂಗ್ಲೀಷರಿಗೆ ಗೊತ್ತು. ಅವರು ಇಂಗ್ಲೀಷಿನ ಪ್ರಸಾರಕ್ಕೆ ಸಕಲ ವಿಧ ಸೌಕರ್ಯಗಳನ್ನೂ ಮಾಡಿಸಿದರು. ಅವರೂ ದೇಶೀಯ ಭಾಷೆಗಳನ್ನು ಕಲಿತು ನಮ್ಮ ಮೆಚ್ಚುಗೆ ಗಳಿಸಿದರು. ಅವರ ಸ್ವತೀಯ ಅಭಿಮಾನದ ಹಾಗೂ ಮತ ಪ್ರಸಾರದ ಒಳತಂತ್ರವೂ ಅಡಗಿತ್ತು. ಅವರುಗಳ ಪ್ರಯತ್ನದಿಂದ ಸುಲಭವಾಗಿ ಜನತೆಗೆ ಸಿಗುವಂತಾದ ಶಬ್ದಕೋಶಗಳು ನಮಗೆಲ್ಲ ತುಂಬ ಪ್ರಯೋಜನಕ್ಕೆ ಬರಲಿಲ್ಲವೆ?

ಈ ಒಗ್ಗೂಡಿ ಅಧಿಕಾರ ಭಾಷೆಯಾ

(ಎಂಬುದೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಂಸದಿನ ತೀರ್ಮಾನವನ್ನು ಎದುರಿಸಿದಾಗ -

ಬರೆದವರು
ಶ್ರೀ ಶಿವಶಂಕರ

ಅನಿವಾರ್ಯ ಅದೆಂತಹವನನ್ನೂ ಆಕರ್ಷಿಸಿಕೊಳ್ಳುತ್ತದೆ. ಅಲ್ಲಿಯ ವರೆಗೆ ಸಲಪುವ ತನ್ನಳ ತಾನು ಹಾಗೆ ಮಾಡುತ್ತೇನೆ, ಹೀಗೆ ಮಾಡತೆನೆ ದೆ ನೇನೋ ಅಶ್ವಾಸನೆ ಅನುಸ್ಯೂಹಿಸಿದ ಅತಿರಥ ಮಹಾರಥರು ಅಕನದಲ್ಲಿ ಅಸೀನರಾದೊಡನೆ ಅವೆಲ್ಲಕ್ಕೂ ತಿಲಾಂಜಲಿ ಕೊಟ್ಟಬಿಟ್ಟು, ಅಲ್ಲಿ ಭದ್ರವಾಗಿದಲೇನೇನು ಮಾಡಬೇಕೋ ಹಾಗೆ ಮಾಡಲು ತೊಡಗುತ್ತಾರೆಂಬುದು. ಜನತೆಯ ಅಭಿಪ್ರಾಯ ಇದಕ್ಕೆ ಅಪವಾದವಾಗಿರುವವರು ಈ ಇಪ್ಪತ್ತು ವರ್ಷಗಳಲ್ಲಿ ಯಾರೂ ಅಕನಾಧೀಶರಾಗಿರುವದಿಲ್ಲ. ೧೯೪೭ ಆಗಸ್ಟ್ ೫ ದಿನೈದರ ಪೂರ್ವದ ಕಾಂಗ್ರೆಸ್ ಅಂದಿನ ರಾತ್ರಿ ಕಳೆದು ಹಗಲು ಒಂದೊಡನೆ ಬದಲಾಗಿರುವದನ್ನು ಕಂಡುಕೊಂಡ ಜನತೆ ಕ್ರಮಶಃ ಅದನ್ನು ಭೂಗರ್ಭದಲ್ಲಡಗಿಸಿ ಬಿಡಲು ಪ್ರಯತ್ನಿಸುತ್ತಿದೆ. ಆಗ ಕೆಲವರು ಅಗ್ಗದ ಪ್ರಚಾರಗಳಿಗೆ ಮಾರು ಹೋಗುವದು, ಅಲ್ಲದೆ ಅವಸರ ಪಡುವದೂ ಇದೆ. ತಾವು ಹಾಗೆ ಮಾಡಿದೆವೆಂಬ ದನ್ನು ತಮಿಳ್ನಾಡಿನ ವಿದ್ಯಾರ್ಥಿವೃಂದ ಕಂಡುಕೊಂಡಿತು. ದ್ರಾ. ಮು. ಕ. ಪ್ರಚೋದಿತ ವಿದ್ಯಾರ್ಥಿಗಳು ಹಿಂದಿ ವಿರೋಧಿ ಹಗೆಯ ಹಾವಿನ ಹೆಡೆಯ ಆಟಕ್ಕೆ ಮನಸೋತು ಅದಕ್ಕೆ ಮುತ್ತಿತ್ತಾಗ ಅದು ತನ್ನನ್ನು ಕಚ್ಚದಿರಲಾರದೆಂದು ಅವರು ತಿಳಿದುಕೊಂಡಿರಲಿಲ್ಲ. ಆ ವಿಷ ಸರ್ಪದೊಂದಿಗೆ ತಾವೂ ಕುಣಿದರು. ಅಕನದ ಬುಟ್ಟಿಯೊಳಗೆ ಹೋದಾಗ ಆ ವಿಷ ಜಂತು ಗಮ್ಮನುಳಿಯಿತು. ನಾಗ ನೃತ್ಯವನ್ನಾಡಿದ ವಿದ್ಯಾರ್ಥಿಗಳು ಕಾದು ನೋಡಿದರು. ಇನ್ನು ಪ್ರಯೋಜನವಿಲ್ಲವೆಂದರಿತು ರೊಚ್ಚೆದ್ದು ಕಾಶಕಾರಕ ಚಟುವಟಿಕೆಗಳಿಗೆ ಮುಂದಾದರು. ಅವರನ್ನು ಸಂತೈಸಲು ದ್ರಾ. ಮು. ಕ.ದ ದೊರೆಗಳು, ರಾಜರು, ಅಣ್ಣಾಗಳು, ತಂಬಿಗಳು (ತಮ್ಮಂದಿರು) ಪ್ರಯತ್ನಿಸಿ ನೋಡಿದರು. ಕೊನೆಯ ಉಪಾಯ ಸಂಸದಿನ ತೀರ್ಮಾನವನ್ನೆದುರಿಸಲು ವಿಧಾನ ಸಭೆಯ ವಿಶೇಷ ಅಧಿವೇಶನವನ್ನು ಕರೆಯುವದು. ಒಡನೆ ಸಭಾ ಸದಸ್ಯರಿಗೆ ಪ್ರಿಂಟ್ ಕರೆ ಹೋಯಿತು. ಇಂತಹ ಸಂದರ್ಭವನ್ನು ಅದ್ಯಾವ ಸದಸ್ಯರಾಗಲೀ ಬಿಟ್ಟು ಕೊಡುವದುಂಟೇ? ಎಲ್ಲರೂ ಒಂದಾದರು.

ಸಭೆಯ ಮುಂದಾಳು ತಿರುನೆಡಂಜುಳ್ಳಿಯನ್ಗಾರವರು ಅವಸರ ಅಧಿವೇಶನ ಸೇರಲೇನು ಕಾರಣವೆಂಬುದನ್ನು ಸದಸ್ಯರಿಗೆ ತಿಳಿಯಪಡಿಸಿದರು. ಭಾರತದ ಸಂಸದ್ ಭಾಷಾ ತಿದ್ದುಪಡಿ ಮಸೂದೆಯನ್ನು ತಂದಿರುವದರಿಂದ ರಾಜ್ಯದಲ್ಲಿ ಗೊಂದಲ ನೆಲೆಸಿರುತ್ತದೆ. ಇದು ಅಂದಿನ ಸಭೆಯ ಮುಂದಿದ್ದ ವಿಷಯ. ಈ ಕುರಿತು ವಿಚಾರ ವಿನಿಮಯ ನಡೆಯುವ ಸಲುವಾಗಿ ಇತರ ಕಾರ್ಯಕಲಾಪಗಳನ್ನು ವಜಾ ಮಾಡಲಾಯಿತು.

ಕಾಂಗ್ರೆಸ್ಸಿನ ಕಲಿಗಳು ತಮ್ಮ ಅಭಿಪ್ರಾಯವನ್ನು ವಿಧಾನ ಸಭೆಗೆ ತಿಳಿಸಿದರು. ಕಾಂಗ್ರೆಸ್ಸಿನ ಮುಖಂಡ ಶ್ರೀ ಕರುತಿರುಮಾನ್‌ರವರು, ಭಾಷಾ ತಿದ್ದುಪಡಿ ಮಸೂದೆಯಿಂದಾಗಿ ಭಾಷಾ ಬಡಬಾಗ್ನಿ ಭುಗಿಲ್ಲೆಂದು ಹಬ್ಬಿರುತ್ತದೆ. ಈ ಮಸೂದೆಯಿಂದಾಗಿ ಹಿಂದೀಯೇತರ ಜನರಿಗೆ ಹಿಂಸೆಯಾಗುತ್ತದೆಂಬ ಭಯ ಉಂಟಾಗಿರುತ್ತದೆ. ಅದುದರಿಂದ ಇದರ ಪರಿಹಾರಕ್ಕಾಗಿ ಭಾರತ ಸರಕಾರವು ಎಲ್ಲಾ ರಾಜಕೀಯ ಪಕ್ಷಗಳನ್ನು ಕರೆದು ಉಪಾಯವನ್ನು ಕಂಡುಹಿಡಿಯಬೇಕೆಂದರು. ಇದರಿಂದ ಅವರ ಪಕ್ಷದ ಸದಸ್ಯರಿಗೆ ಸಂತೃಪ್ತಿಯಾಗಲಿಲ್ಲ. ಅವರ ಪಕ್ಷದ ಮಾಜಿ ಮಂತ್ರಿ ಶ್ರೀ ಭೂವರಾಹನವರೆದ್ದು ಹಿಂದಿಯೇತರರ ವೇಲೆ ಬಿದ್ದಿರುವ ಅಕನಾಪಾಶ ಹೊರೆಯನ್ನು ತೆಗೆದ ಹಾಕುವ ಉಪಾಯವನ್ನು ಕಂಡುಹಿಡಿಯಲು ಸರ್ವಪಕ್ಷಗಳ ಸಭೆಯನ್ನು ಕರೆಯಬೇಕೆಂದು ಈ ವಿಶೇಷ ಅಧಿವೇಶನ ತೀರ್ಮಾನಿಸಿರುತ್ತದೆಂಬುದನ್ನು ಒಪ್ಪಿಕೊಳ್ಳಬೇಕೆಂದರು. ಎಂತಹ ಮಾತುಗಳು! ಕಾಂಗ್ರೆಸ್ ಹಿಂಬಾಲಕರು ಅದೇನನ್ನು ಅಪೇಕ್ಷಿಸಿದ್ದರು? ಭಾಷಾ ತಿದ್ದುಪಡಿ ಮಸೂದೆಯನ್ನು ತಂದವರ್ಯಾರು? ಕಾಂಗ್ರೆಸ್ಸಿಗರು ತಾನೇ? ಢಿಲ್ಲಿಯ ಕಾಂಗ್ರೆಸ್ ಬೇರೆ, ದ್ರಾಮು ಕಾಂಗ್ರೆಸ್ ಬೇರೆ ಏನು? ಅಲ್ಲಿಯ ಹೋರಿಗಳಿಗೂ ದ್ರಾಮು ಹೋರಿಗಳಿಗೂ ವ್ಯತ್ಯಾಸವಿರುವುದು ಸಹಜ ತಾನೆ! ಭಾಷಾ ತಿದ್ದುಪಡಿ ಮಸೂದೆಯಿಂದ ಅಸಮಾನ ಹೊರೆ ಬೀಳುತ್ತದೆಯೆಂಬುದನ್ನು ಮದರಾಸು ಹೋರಿಗಳು ಕಂಡುಕೊಂಡುವು. ಅದನ್ನು ತಪ್ಪಿಸಲು ಅವು ಪ್ರಯತ್ನಿಸುವದು ಸಹಜ ತಾನೇ? ಕಾವು ಹಾದು ಬಸವಣ್ಣಗಳಲ್ಲಿ, ಹೊರೆಯನ್ನು ಹೊರಲು ನಿರಾಕರಿಸಿರುವ ಮದರಾಸು ಗೂಳಿಗಳೆಂಬುದನ್ನವರು ಜನತೆಗೆ ಸ್ಪಷ್ಟಪಡಿಸಿದರು. ಹೊರೆಯನ್ನು ಹೊರಲು ಹೋರಿಗಳೇ ನಿರಾಕರಿಸಿದಾಗ ಇತರರು ಸುಮ್ಮನಿರುವರೇ? ಈ ರೀತಿ, ಸಂಸದಿನ ತೀರ್ಮಾನವನ್ನು ಪರಿಯೆನ್ನುವ ಬದಲು ಅದನ್ನೆದುರಿಸಲು ತಮಿಳ್ನಾಡಿನ ಕಾಂಗ್ರೆಸ್ಸು ಮುಂದಡಿ ಇಟ್ಟಿತು. ಅದಕ್ಕೆ ಕಾರಣವಾದರೂ ಏನು? ಅದನದ ವೇಲಿನ ಆಶೆ!

ಹಿಂದಿಗಾಗಿ ಹಗರಣ ನಡೆಸಿದವರಲ್ಲಿ ಸಂಯುಕ್ತ ಸೋಷ್ಯಲಿಸ್ಟ್ ಪಕ್ಷದವರೇ ಪ್ರಮುಖರು. ಅದುದರಿಂದಲೇ ಡಾಕ್ಟರ್ ರಾಮನುಮನೋಹರ್ ಲೋಹಿಯಾರವರು ಮರಣ ಶಯ್ಯೆಯಲ್ಲಿರುವದೆಂಬ ನಿಜವಾಗಿದ ಬಳಕರ ಸಮಾಚಾರ ಪ್ರಕಟವಾದೊಡನೆ ಅತಿಶೀಘ್ರ ಅವರ ಅಮಾನವಾಗಲೆಂದು ಅಂದ ಹಿಂದಿ ವಿರೋಧಿಗಳು ತಮಿಳ್ನಾಡಿನಲ್ಲಿ ಬಹಳ ವಂದಿ ಇದ್ದಾರೆ. ಅವರ ಪಕ್ಷ ಅದೆಂತು ನಡೆದುಕೊಳ್ಳುತ್ತದೆನ್ನುವದನ್ನು ರಾಜಕೀಯ ವೀಕ್ಷಕರು ಗಮನಿಸಿಕೊಂಡಿದ್ದರು. ಅವರಾದರೋ ಕಾಂಗ್ರೆಸ್ ಕೋಗಳು ಹೋದ ದಾರಿಯಲ್ಲೇ ಸಾಗಿದರು. ಅವರೂ ಕಾಂಗ್ರೆಸ್ಸಜ್ಜ ಹಾಕಿದ ಅ ದ ವ.ರಕ್ಕೆ ತಲೆಗೆ ಹಾಕಿಕೊಂಡರು. ಮತ ಬೇಟೆಯಲ್ಲಿ ಪಾರಂಗತರಾಗಿರುವ ಈ ಪಕ್ಷದ ಪ್ರಮುಖರು ಜನತೆಯ ಗಮನವನ್ನು ಸೆಳೆಯಲೊಳ್ಳುವ ಏಕ ಮೇವ ದೃಷ್ಟಿಯಿಂದ ತಮಿಳಿನ ಮೇಲೆ ತಮಗೆ ಅತೀವ ಅಭಿಮಾನವಿದೆಯೆಂಬ ದನ್ನು ಪ್ರಕಟಪಡಿಸಿದರು. ಸಂಸದಿನಲ್ಲಿ ತಮಿಳ್ನಾಡಿನಿಂದ ಹೋದವರು ತಮಿಳನಲ್ಲೇ ಮಾತಾಡಬೇಕು. ತಮಿಳು ಸರಕಾರೀ ಭಾಷೆ ಆಗಬೇಕು. ಯಾವಾಗದಿದ್ದಲ್ಲಿ ಸಂಸದ್ ಸದಸ್ಯರು ರಾಜೀನಾಮೆ ಕೊಡಬೇಕು. (ಕೊಟ್ಟಲ್ಲಿ ಅವರಿಗೇನು) ನಷ್ಟ? ಭಾಷಾ ತಿದ್ದುಪಡಿ ಮಸೂದೆಯಿಂದ ತಮಿಳರಿಗೆ ಅನ್ಯಾಯವಾಗಿದೆಯೂದ ಕಾರಣ ಅದನ್ನು ತಡೆದು ನಿಲ್ಲಿಸಬೇಕು...ಹೀಗೆ ಸಂಯುಕ್ತ ಸೋಷ್ಯಲಿಸ್ಟ್ ಪಕ್ಷದ ಪ್ರಮುಖ ಶ್ರೀ ನಲ್ಲ ಶಿವಂರವರು ತಮ್ಮ ಭಾಷಾ ಡಮರನ್ನು ಬಾರಿಸುತ್ತಿದ್ದಾಗ ಅ ದಕ್ಕೆ ಅಡ್ಡಿಯುಂಟು ಮಾಡಿದವರು ಮುಖ್ಯಮಂತ್ರಿ ತಿರು ಅಣ್ಣಾದೊರೈಯವರು. ಅವರಿಗೆ ಶ್ರೀ ನಲ್ಲ ಶಿವಂರವರ ಮಾತು ಹಳೆ ಹಾಳ್ಕವಾಗಿ ಕಂಡಿರಬೇಕು. ಅದಲ್ಲದಿನಿತೂ ಆಶ್ಚರ್ಯಕ್ಕೆ ಆ ರೆಯೇ ಇಲ್ಲ. ಅವರು ತಟ್ಟನೆ ಕೇಳಿಬಿಟ್ಟರು —ತಮಿಳು ಸರಕಾರಿ ಭಾಷೆ ಆಗುವ ವರೆಗೆ ಅದ್ಯಾವ ಭಾಷೆ ಸರಕಾರಿಭಾಷೆ ಆಗಬೇಕೇ? ನಲ್ಲಶಿವಂ ಸಾಧಾರಣದವರಲ್ಲ ಅವರೆ ತೂ ಅಕ್ಷನ್ಯಸ್ಥರಾಗಲಿಲ್ಲ ಅವರು ಬಳಿಕ ತ್ತರಿಸಿದ್ದವಿತ್ತು. ಯಾರೂ ತಾಗದ ಗ್ಯಾಣವದು. ಭಾಷಾ ತಿದ್ದುಪಡಿ ಮಸೂದೆ ತರುವ ಪೂರ್ವ ಇದ್ದ ಪರಿಸ್ಥಿತಿ ಮುಂದರಿಯಬೇಕೆಂದರು ಹೇಳಿದರು.

ಪೂರ್ವ ಪರಿಸ್ಥಿತಿ ಯಾವದು? ಸಂವಿಧಾನದಲ್ಲಿರುವದೇ? ಬಳಕೆಯಲ್ಲಿರುವದೇ? ಅದನ್ನವರು ಹೇಳಲು ಸಿದ್ಧರಿಲ್ಲ—ಕೇಳಲು ಮುಂದೆ ಬರುವವರೂ ಇಲ್ಲ. ತಮಿಳರ ತೆರೆ ವರೆಯಲ್ಲಿ ಶ್ರೀ ನಲ್ಲಶಿವಂ ತಲೆ ತಪ್ಪಿಸಿಕೊಂಡರು.

ಸಂಯುಕ್ತ ಸೋಷ್ಯಲಿಸ್ಟ್ ಪಾರ್ಟಿಯ ಪ್ರಮುಖರನ್ನು ಮೀರಿಸಲು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಪ್ರಮುಖರು ಪ್ರಯತ್ನಿಸಿದರು. ಅವರ ವತಿಯಿಂದ ಶ್ರೀ ಮಾರಿಮುತ್ತು ಮಾತಾಡಿದರು. ಭಾಷಾ ಮೂರಾಮಾರಿಗಿಂತ ದೇಶದ ಐಕ್ಯ ಹಾಗೂ ಪ್ರಗತಿಯೇ ಪ್ರಮುಖ ಸ್ಥಾನ ಪಡೆಯಬೇಕೆಂಬುದು ಮುತ್ತಿನಂತಹ ಮಾತು. ಅಲ್ಲ—ಭಾಷೆ ಇರುವದಾದರೂ ಏಕೆ? ಒಬ್ಬನ ಅಭಿಪ್ರಾಯವನ್ನು ಇನ್ನೊಬ್ಬನು ಅರಿತುಕೊಳ್ಳಲು ತಾನೇ? ಅಥವಾ ಜಗಳಾಡಿಕೊಳ್ಳಲೇನು? ತಮಿಳ್ನಾಡನ್ನು ಬಿಟ್ಟು ಇತರ ರಾಜ್ಯಗಳಲ್ಲಿ ಹೆಚ್ಚಿನವರಿಗೆ ಹಿಂದಿ ಅರ್ಥವಾಗುತ್ತದೆ. ಶ್ರೀಭಾಷಾ ಪರಿಹಾರೋಪಾಯವನ್ನು ರಾಜ್ಯ ಸರ್ಕಾರವು ಒಪ್ಪಿಕೊಳ್ಳಬೇಕೆಂದು ಶ್ರೀ ಮಾರಿಮುತ್ತುವರು ಹೇಳಿದರಾದರೂ ದ್ರಾ.ಮು.ಕ.ದ ಕೋಪಕ್ಕೆ ಬಲಿಯಾಗದಿರಬೇಕೆಂದೋ, ಏನೋ, ಅದೇ ಉಸಿರನ್ನಲ್ಲಿ ಶ್ರೀ ನಲ್ಲ ನಾವು ಹಿಂದಿ ಹೇರುವಿಕೆಯನ್ನೆದುರಿಸಲೇ ಬೇಕೆಂದರು.

ಕಾಂಗ್ರೆಸ್, ಸಂಯುಕ್ತ ಪಾರ್ಟಿ, ಪ್ರಜಾ ಪಕ್ಷಗಳಂತಹ ಅಖಿಲ ಭಾರತ ಪಕ್ಷಗಳು ಅಡ್ಡರಾಗ ಎಳೆದು ದೊಂಬರಲಾಗ ಹಾಕಿದಾಗ ಪ್ರೇಕ್ಷಕರ ಹಾಗೂ ಸಭಾ ಸದಸ್ಯರ ಗಮನ ಹಿಂದದ್ದು ತಿರು ಮಾ. ಪೇರಿ. ಶಿವಜ್ಞಾನ ಗ್ರಾಮಣಿಯವರತ್ತ. ಶ್ರೀಯುತರು ಶಿವ-ಶಿವ ಎನ್ನುತ್ತಾರೋ ಇಲ್ಲವೋ, ಆ ಜ್ಞಾನ ಅವರಿಗಿದೆಯೋ ಇಲ್ಲವೋ, ಆದರೂ ಅವರು ಮಾರೂಹೊತ್ತು ತಮಿಳು—ತಮಿಳೆನ್ನದೆ ಇರುವದಿಲ್ಲ. ಅದಕ್ಕಾಗಿಯೇ ಅವರು ತನ್ನದೇ ಆದ ತಮಿಳು ಅರಸು ಕಳ್ಳಗಮನ್ನು ಕಟ್ಟಿಕೊಂಡಿದ್ದಾರೆ. ಇದೂ ಒಂದು ರಾಜಕೀಯ ಪಕ್ಷ—ಅಗಾಗ. ಜುಟ್ಟಾವಣೆಯಲ್ಲಿ ಅವರು ಉದಯಿಸುವ ಸೂರ್ಯನ ಚಿತ್ರ ಲಾಂಛನವನ್ನೇ ಉಪಯೋಗಿಸಿಕೊಂಡು ಗೆದ್ದು ಬಂದಿದ್ದಾರೆ.



ಇಂತಹವರ ಅಭಿಪ್ರಾಯ ಕೇಳಲು ಉತ್ಸುಕರಾಗಿರುವದರಲ್ಲಿ ಆಶ್ಚರ್ಯವೇನು? "ತಮಿಳರ ಮಟ್ಟಿಗೆ ಹೇಳುವದಿದ್ದಲ್ಲಿ ಇಂಗ್ಲೀಷೂ ಹಿಂದಿಯೂ 'ಪರಕೀಯ ಭಾಷೆಗಳೇ ಇವೆ." ಕೇಳುವವರಿಗೆ ಆಶ್ಚರ್ಯವಾಗಿರಬಹುದು. ಶೈಚಿಪ್ಪಾಳೆಗಳ ಸದ್ದಿಗೇನೂ ಕೊರತೆ ಇಲ್ಲ. ಆಂಗ್ಲ ಹಾಗೂ ಹಿಂದಿಯನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಲು ಸಾಧ್ಯವೇನು? "ಇಂಗ್ಲಿಷ್ ಈ ದೇಶದ್ದಲ್ಲ ಆಡುವ ಭಾಷೆಯಲ್ಲ. ಆದುದರಿಂದ ಅದು ಜನತಾ ಭಾಷೆಯಾಗಿರಲು ಸಾಧ್ಯ ಇಲ್ಲ. ಆಂಗ್ಲ ಭಾಷೆಯಿಂದ ಪದವೀಧರರ ಒಳ್ಳೆಟ್ಟು ಸಾಧ್ಯವಿರಬಹುದೇ ವಿನಃ ನೈಜ ಪ್ರಗತಿ ಉಂಟಾಗಲು ಸಾಧ್ಯವೇ ಇಲ್ಲ." ಇಂತಹ ಸಂದರ್ಭದಲ್ಲಿಗೆನೇ ಕೆಲವರು ಹೊಂಚ ಹಾಕುತ್ತಾ ಇರುತ್ತಾರೆ. ಸಮಯ ನೋಡಿ ಕಾರ್ಯ ಸಾಧಿಸಿಕೊಳ್ಳುವವರು ಅವರು. ಈಗ ನಡುವೆ ಹಾಯ್ದುಬಿಟ್ಟ ಶ್ರೀ ಎಂ. ಪೋ. ಶಿ.ಯವರ ಬಣ್ಣಕ ಟ್ಟಾಪುತ್ತದೆ. ಅದುದರಿಂದ ಸ್ವತಂತ್ರ ಪಾರ್ಟಿಗಾ ಮಿಗ್ಗಂ ಹಂಡೆಯುವರು ಹಾಯ್ದೇ ಬಿಟ್ಟರು—ಹಾಗಿದ್ದಲ್ಲಿ ಕೊಂಡಿ ಭಾಷೆಯಾಗಿರಲು ಯಾವ ಭಾಷೆಯನ್ನು ನೀವು ಸೂಚಿಸುತ್ತೀರೆಂದು ಅವರು ಕೇಳಿದರು. ಶ್ರೀ ಗ್ರಾಮಣಿಯವರು ಗಡಬಡಿಸದೆ,ನನೋಗ ಬೇಕಾಗಿರುವದು ತಮಿಳಿಗೆ ಶಕ್ತಿ ತಾಣ. ತಮಿಳ್ನಾಡಿನಲ್ಲಿ ತಮಿಳಿಗೆ ಶಕ್ತಿ ತಾಣ ಸಿಕ್ಕಿದ ಮೇಲೆ ಸಂಪರ್ಕ ಭಾಷೆಯ ವಿಷಯ ನೋಡಿಕೊಳ್ಳೋಣವೆಂದು ಮಾತನ್ನು ಹಾರಿಸಿಯೇ ಬಿಟ್ಟರು. ಸಂಪರ್ಕ ಭಾಷೆಯ ಶುರಿತು ಯೋಚಿಸದಿದ್ದಲ್ಲಿ ಕೇಂದ್ರ ಸರಕಾರದೊಡನೆ ವ್ಯವಹಾರಕ್ಕೆಂತು ಸಾಧ್ಯ? ಅದಕ್ಕೂ ಶ್ರೀಯುತರು ಉತ್ತರಿಸಿರುವರು: ಭಾಂತದಿಂದ ತಮಿಳ್ನಾಡು ಪ್ರತ್ಯೇಕವಾಗಬೇಕೆನ್ನುವದು ಸರಿಯಲ್ಲ. ಹಾಗೆಂದಲ್ಲಿ ತಮಿಳರಿಗೆ ಆ ಹಕ್ಕು ಇರಕೂಡದೆಂದಲ್ಲ. ಪ್ರತೀ ರಾಜ್ಯಕ್ಕೂ ಹೆಚ್ಚಿನ ಸ್ವಾತಂತ್ರ್ಯ ಇರಬೇಕು. ಕೇಂದ್ರದ ಬಳಿ ರಕ್ಷಣೆ (ಸೇನೆ), ಅಂತರ್ರಾಷ್ಟ್ರೀಯ ಸಂಪರ್ಕ, ಸಂಪರ್ಕ—ಸಾರಿಗೆ ಮಾತ್ರ ಇರಬೇಕು. ಬೇರೆಲ್ಲಾ ಆಯಾಯಾ ರಾಜ್ಯಗಳಿಗೇನೇ ಬಿಟ್ಟುಕೊಡಬೇಕು. ಇದರಿಂದ ಕೇಂದ್ರದ ಕೆಲಸ ಕಮ್ಮಿ ಆಗುತ್ತದೆ. ಅಲ್ಲಿ ಕೆಲಸಕ್ಕೆ ಕೆಲವೇ ಜನ ಸಾಕು. ಅವರು ಅಲ್ಲಿಗೆ ಬೇಕಾದ ಭಾಷೆಯನ್ನು ಕಲಿತುಕೊಳ್ಳಲಿ. ಉದ್ಯೋಗಾವಕಾಶ ಅಲ್ಲಿಲ್ಲಿ ಅರ್ಥವಾಗುವದರಿಂದ ಆಯಾಯಾ ರಾಜ್ಯಗಳವರು ಅಲ್ಲಿಲ್ಲಿನ ಭಾಷೆಗಳನ್ನು ಕಲಿತುಕೊಳ್ಳುತ್ತಾರೆ. ಆಗ ಸಂಪರ್ಕ ಭಾಷೆ ಬೃಹದಾಕಾರಂ ತಳೆಯುವುದಿಲ್ಲ.

ಒಂದು ರೀತಿಯಲ್ಲಿ ಸರಿಯೇ ಇದೆ. ಆದರೆಯು ಒಂದು ದೇಶವೆಂದು ಪರಿಗಣಿಸಿದಲ್ಲಿ ನಾವು ಮತ್ತೆ ಬಾವಿಯೊಳಗಣ ಕಪ್ಪೆಗಳಾಗಿರಲು ಸಾಧ್ಯವೇ ಇಲ್ಲ. ಈ ರೀತಿ ಕೆಲವು ಪಕ್ಷಗಳು ಸಂಸದಿನ ತೀರ್ಮಾನಕ್ಕೆ ವಿರುದ್ಧವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದುವು. ಅಖಿಲ ಭಾರತೀಯ ಪಕ್ಷಗಳೂ, ಸ್ಥಳೀಯ ಪಕ್ಷಗಳೂ ಅದೆಂತು ಪರಿಸ್ಥಿತಿಯ ದುರ್ವಿನಿಯೋಗದಿಂದ ಲಾಭಪಡೆಯಲು ಸಾಧ್ಯವೆಂಬುದನ್ನು ತೂಗಿ ನೋಡುತ್ತಿರುತ್ತವೆಯೆಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ?

ಚಾರುಚಯನ

ಐದುವರ್ಷಗಳಲ್ಲಿ ಸ್ವರ್ಗ ಸೂರೆ

ಮಧ್ಯದ ತಪ್ಪಿದರೂ ಹೋಳಿಗೆ ತಪ್ಪುವುದಿಲ್ಲ. ಮಾತಬಹ ದಾದ ಸಂಚಾರ, ತುಂಬಬಹುದಾದ ಭಂಡಾರಗಳನ್ನು ಯಾವ ಮಂತ್ರಿಯೂ ಬಿಡುವುದಿಲ್ಲ. ಕೆಲವು ತೀರ್ಥಗಳ ಹಿಂದೆಯೇ ಪ್ರಧಾನಿ ಇಂದಿರಾ ಗಾಂಧಿ ಆಸ್ಟ್ರೇಲಿಯಾಕ್ಕೆ ಹಾರಬೇಕಿತ್ತು. ಈಜಲು ಹೋದ ಕೆನ್‌ಬೆರಾದ ಪ್ರಧಾನಿ ಸಮುದ್ರಗರ್ಭದಿಂದ ಹೊರಬರದೇ ಹೋದುದರಿಂದ ಆ ಮುಹೂರ್ತ ತಪ್ಪಿತು. ಪಂತಾಂತ ಸೂಚನೆ ಮಾಡಿಯೇ ಹೊಸ ದಿನವೊಂದನ್ನು ಹುಡುಕಿದರು. ಬೇಸಗೆ ಸೀಜನ್ನು ತಪ್ಪಿದರೆ, ದೀಪಾವಳಿ ಸೀಜನ್ನು. ಅದು ತಪ್ಪಿದರೆ ಇದು; ಇದು ತಪ್ಪಿದರೆ ಅದು. ಯಾರದೋ ಸೂತಕ ಬಂತು ಅಂತ ಅಂಕುರಿಸಿದ ಪ್ರಣಯವನ್ನು ಅರ್ಧದಲ್ಲೇ ಕಡೆಯುವುದು ಇಂದಿನ ದಿನಕ್ಕೆ ಅವಾಸ್ತವ. ಅಪ್ಪ ಒಪ್ಪಿದ ಹೆಣ್ಣಾದರೆ ಮಗ ಬಿಟ್ಟಾನು. ಮಗನೇ ಮನೆ ಮೆಚ್ಚಿಕೊಂಡಿದ್ದರೆ?

ಪ್ರಧಾನಿ ಇಂದಿರಾ ಆಸ್ಟ್ರೇಲಿಯಾದಲ್ಲಿ ಭಾರತವನ್ನು ಮುಗಿಲಿಗೇ ಹಾರಿಸಿಬಿಟ್ಟರು. ಇನ್ನು ಮೂರು-ನಾಲ್ಕು ವರ್ಷಗಳೊಳಗೆ ಭಾರತ ಆಹಾರ ಸ್ವಯಾಶ್ರಯವನ್ನು ನಿಲ್ಲಿಸಿಬಿಡುತ್ತದೆ — ಅರೆಹೊಟ್ಟೆ ತಿನ್ನುವುದು ಅಭ್ಯಾಸವಾಗಿ ಬಿಡುತ್ತದೆ—; ಐದು ವರ್ಷಗಳ ನಂತರ ವಿದೇಶೀ ನೆರವನ್ನು ಪಡೆಯುವುದನ್ನೂ ಸ್ಥಗಿತಗೊಳಿಸಿಬಿಡುತ್ತದೆ. ತನ್ನ ಕಾಲ ಮೇಲೆಯೇ ತಾನು ನಿಂತುಬಿಡುತ್ತದೆ. ಅಲ್ಲಿ ಪಡೆದ ಪ್ರಗತಿಯನ್ನು ಇಲ್ಲಿನವರು ಕಣ್ಣಾರೆ ಕಾಣ ಬನ್ನಿರೆ.... ಒಟ್ಟಿನಲ್ಲಿ ಈಗ ನಮಗೆ ಅಶನ ಬೇಕು, ವಸನ ಬೇಕು, ವಸತಿ ಬೇಕು. ಐದು ವರ್ಷಗಳ ನಂತರ ಸುತರಾಂ ಬೇಡ.

ಏಕೆ? ಭಾರತ ಆಸ್ಟ್ರೇಲಿಯದಂತೆ ಚಿಕ್ಕ ರಾಷ್ಟ್ರವಲ್ಲ; ಪ್ರಪಂಚದ ಅತ್ಯಂತ ದೊಡ್ಡ ರಾಷ್ಟ್ರಗಳಲ್ಲಿ ಒಂದು. ಹೂವು ದರಲ್ಲಿ? ವಿಸ್ತಾರದಲ್ಲಿ, ಮುಖ್ಯವಾಗಿ ಜನ ಸಂಖ್ಯಾ ವಿಸ್ತಾರದಲ್ಲಿ. ಇನ್ನೈದು ವರ್ಷಗಳಲ್ಲಿ ಭಾರತದ ನೆಲ ಸ್ವರ್ಗವಾಗುತ್ತದೆ, ಜನ ದೇವರಾಗುತ್ತಾರೆ; ವಳೆಯು ಬದಲು ಹಾಲು ಸುರಿಯುತ್ತದೆ—ನೀರಿನ ಬದಲು ಜೇನು ಹರಿಯುತ್ತದೆ ಇದು ಇಂದಿರಮ್ಮನ ಆಶಯ—ಭವಿಷ್ಯವಾಣಿ.

ಅದರೆ, ದೇ ಇಂದಿರಮ್ಮ ಇನ್ನೊಂದು ಮಾತನ್ನೂ ಆಡಿ ಭಾವೀ ದೇವರು ಭಾರತೀಯರನ್ನು ಎಚ್ಚರಿಸಿಬಿಟ್ಟರು. ಇದುವರೆಗೆ ಭಾರತದ ರಕ್ಷಣೆಯ ಭಾರವನ್ನು ಹಿಮಾಲಯೋ ನಮ್ಮ ನಗಾಧಿರಾಜ ವಹಿಸಿದ್ದ. ನಾವು—ಯಾನೇ ಭಾರತೀಯರು ಅಕರ್ಮಣ್ಯರಾಗಿ, ಕಣ್ಣು ಮುಚ್ಚಿ ಪದ್ಮಾಸನದಲ್ಲಿ ಯೋಗಾರೂಢರಾಗಿದ್ದೆವು. ಹಿಮಾಲಯ ತನ್ನ ಕರ್ತವ್ಯವನ್ನು ನಮ್ರ ಸೇವಕನಂತೆ, ಶಾಮಿಕನಂತೆ ನಿರ್ವಹಿಸಿದ. ಆದರೆ, ಈಗ? ಅದೇ ಹಿಮಾಲಯವನ್ನು ರಕ್ಷಿಸುವ ಕೆಲಸವನ್ನು ಪಾಲಿಗೆ-ಭೋಗ್ಯರಕ್ಷತಿರಕ್ಷಿತಃ ಹಿಮಾಲಯವನ್ನು ನಾವು ರಕ್ಷಿಸಿದರೆ, ಅದು ನಮ್ಮನ್ನು ರಕ್ಷಿಸುತ್ತದೆ. ಇಂದು ಹಿಮಾಲಯನೇ ಧ್ಯಾನಮಗ್ನನಾಗಿದ್ದಾನೆ.

ಹಿಂದೆ ಹಿಮಾಲಯ ಅಜೇಯ; ಅಮೂನವರ ಆವಾಸ ಭೂಮಿ; ದೇವಭೂಮಿ, ಪವಿತ್ರತಮ ಭೂಮಿಯು ಪರ್ವತಾರೋಹಿ ಬೂಟ ಧಾರಿ ಮಾನವರ ಪದದಲನದಿಂದ ಅಪವಿತ್ರವಾಯಿತ, ನಗಾಧಿರಾಜ ನಗರ್ಷಿ, ಮುನಿದ—ಚೀನೀಯನ್ನು ನಡೆಯಕೊಟ್ಟಿಭಾರತೀಯರಿಗೆ ಪಾಠಕಲಿಸಿದ.

ಇನ್ನೈದು ವರ್ಷಗಳಲ್ಲಿ ಭಾರತ ಸ್ವಯಂಪರಿಪೂರ್ಣವಾಗುವುದು—ಆ ವೇಳೆಯಾಗ ಹಂಗೂ ಇಲ್ಲ. ಅದುವರೆಗೆ ಭವತಿ ಭಿಕ್ಷಾಂದೇಹಿ.

ಸ್ವಾಧಾನಾಪನ್ನ ಭಾರತ:— ಭಾರತದಲ್ಲಿ ನಂದಿನವನ ಕಟ್ಟುವ ಪಾಲ್ಕನಿಯ ಪಂಚವಾರ್ಷಿಕ ಯೋಜನೆಯ ಆಶೋತ್ತರ ಪ್ರಚಾರಕರಲ್ಲಿ ಯಾವ ಮಂತ್ರಿ ಮಾಧವನಾಗಲೀ ಶಾಸಕನಾಗಲೀ ಹಿಂದಿಲ್ಲ. ಇದನ್ನೆಲ್ಲಾ ಕೇಳಿದೇ ಇವೆರಿಕ ಮರುಳಾಯಿತೋ ಏನೋ! ಅಣು ಅಸ್ತ್ರ ತಯಾರಿಸಬಲ್ಲ ಭಾರತವನ್ನು ಭದ್ರತಾ ಸಮಿತಿಯ ಶಾಶ್ವತ ಸದಸ್ಯನನ್ನಾಗಿ ಆರಿಸಬೇಕು ಎಂದು ಅದರ ಹೊಸ ಸದಸ್ಯರೊಬ್ಬರು ಉದ್ಗಾರ! ದೊಡ್ಡ (ದಡ್ಡ) ದೇಶ (ಅಸ್ತ್ರಾಸ್ತ್ರ ತಯಾರಿಸಬಲ್ಲದಾದರೂ ತಯಾರಿಸಲೊಪ್ಪದ ದೊಡ್ಡ ಆದರ್ಶ ದೇಶ) ಭಾರತ — ಸುಮಾರು ಕೋಟಿ ಜನರಿರುವ ಬೃಹದ್ದೇಶ. ಭಾರತವೆಂದರೆ ಸಾಮಾನ್ಯವೆ? ಮಾಡಿಯಲು ಹೂವಿಲ್ಲವಾದರೇನು, ಬಾಳೇ ನಾರಿಲ್ಲವೆ?

ಭದ್ರತಾ ಸಮಿತಿಯ ಶಾಶ್ವತ ಸದಸ್ಯರ ಸಂಖ್ಯೆಯನ್ನು ಎದರಿಂದ ಎಂಟಕ್ಕೋ ಒಂಭತ್ತಕ್ಕೋ ಏರಿಸುವ ಸಲಹೆ ಪರಿಶೀಲನಾರ್ಹ. ಆದರೆ, ಭಾರತಕ್ಕೆ ಭದ್ರತಾ ಸಮಿತಿಯಲ್ಲಿ ಸ್ಥಾನ ನೀಡಿದರೆ ಪಾಕಿಸ್ತಾನಕ್ಕೆ ಒರಲಾಗದ ಅಪಮಾನ. ಆದು ಸುತ್ತ ಕೆಂಪು ಚೀನಾದ ಬಾಲ ಬಿಗಿಹಿಡಿದು ಪ್ರತಿಯುನೋ ಕಪ್ಪುಪಕ್ಷಿವರನಾಗಿ ಬಿಟ್ಟರೆ? ವಿಶಾಲ ಕೆಂಪು ಚೀನಾದ ಬದಲು ಚಿಕ್ಕಂಗ ಕೈ ರಿವಿರ ಕಿಯ ದ್ವೀಪವನ್ನು ಗಾರವಿಸಿಂತೆ ಪಾಕಿಸ್ತಾನಕ್ಕೆ ಆ ಸ್ಥಾನವೇಕೆ ಕೊಡಬಾರದು?

ಹೋರಿ ಕಾಶ್ಮೀರ ಹತ್ಯಕ್ಕೆ

ಪಾಕಿಸ್ತಾನ—ಭಾರತಗಳ ನಡುವೆ ಸಮನ್ಯಾಯಾಲಯ ಹಂಡಿಸಿ. —ಇದರಲ್ಲಿ ಸಿಕ್ಕಿ ವಿಲಿ ವಿಲಿ ಒದ್ದಾಡುವವರು ಪಾಪ, ಭಾರತ ಸ್ವಯ ವಿದೇಶೀಯರು—ಈ ಜಾಲ ನಿವಾರಣೆಗೆ ಕಾಶ್ಮೀರ ಮಾನವೇ ನ್ಯಾಯಾಧೀಶ್ವರೆಂದು ಜ್ಞಾಪಿಸಿ ಅಯ್ಯೂಬರ ಆದೇಶ. ಕೇಳಿ ಕೇಳಿ ಇನ್ನಾ ಮಿಗಳ ಜ್ಯೋತಿಷ — ಹಿಂದಿ ಜ್ಯೋತಿಷಿಗಳ ಅರ್ಥವ್ಯಾಪ್ತಿ ತಿರುವುಮುರುವು. ಆದುದರಿಂದ ಯಾವ ಮಾತುಕತೆ ನಡೆದರೂ ಅದು ಪೂರ್ಣಗೊಳ್ಳುವುದಿಲ್ಲ. ಎಲ್ಲಿ ಆರಂಭವಾದರೂ ಎಲ್ಲಿ ಮುಟ್ಟಿಬೇಕೆಂದಿದ್ದರೂ ಪಾಕ್ ಹೋರಿ ಕಾಶ್ಮೀರದ ಹತ್ಯಕ್ಕೇ ಅದನ್ನು ಎಳೆಯುತ್ತದೆ; ಎತ್ತು ಏರಿಗೆಳೆಯುತ್ತದೆ, ಹೋರಿ ನೀರಿಗೆಳೆಯುತ್ತದೆ. ಪಡುವಣ ನಾರು ತುಂಡಾಗುತ್ತದೆ. ಪರಕ್ಕಾ ಆಣೆಕಟ್ಟಿನ ಸಂಬಂಧದಮಾತುಕತೆ ಕೆಟ್ಟುಹೋದುದು ಯಾವಯಿಕ್ಕಯಂತಾರಿ ಘಟನೆಯೂ ಅಲ್ಲ.

ಹೊಸ ರಕ್ತಾಕರ್ಷಣೆ

ಭಾಷಾವಾರು ರಾಜ್ಯಸ್ಥಾಪನೆಗಾಗಿ ಹೋರಾಡಿದ ಬಿಸಿರಕ್ತದ ಶಿವಲಿಂಗಪ್ಪನವರು ಇಂದು ತಮ್ಮ ರಕ್ತ ತುಸು ಕಣ್ಣಿಗಾಯಿತೆಂದ ಒಪ್ಪಿದ್ದಾರೆ ದೇಶದ ಐಕ್ಯತೆಗೆ ಭಂಗಬರುವುದಾದರೆ ಭಾಷಾವಾರು ರಾಜ್ಯಗಳನ್ನೇ ಕಿತ್ತುಹಾಕಬೇಕು ಎಂದವರು ಅಂದೋಣ. ಇದು ಇಂದಿನ ಹಳೆಯ ಹುಲಿಯ ಅಭಿಮತ ಅಂದಿನ ಕಳೆಯ ಹುಲಿಗಳ. ಭಾಷಾವಾರು ರಾಜ್ಯಬೇಡ—ದೇಶದ ಐಕ್ಯ ಮುರಿದೀತೆಂದ ಗ ಹೊಸ ರಕ್ತದ ಹುಲಿಗಳು ಕೇಳಲಿಕ್ಕೆ ದ್ವಿಭಾಷಾ ಮುಂಬಯಿ ರಾಜ್ಯದ ವಿಭಜನೆ, ನಾಗಾಂಬ್ರಾಜ್ಯ ರಚನೆ, ಪಂಜಾಬದ ತ್ರಿವಿಭಜನೆ ಇತ್ಯಾದಿಗ ಅಸ್ಸಾಮದ ಸರ್ವಾಂಗತಜೆ ಇ. ಇ. ಎಲ್ಲವೂ ಆಯ ಕಾಲದ ಹೊಸ ರಕ್ತದಾಹದೇ ಅ ದಾಹವನ್ನು ಅಂದಿನ ಹಳೆ ಹುಲಿಗಳು ನೀಗಿಸಿದ್ದಂತೆ ಇಂದಿನ ಹೊಸ ರಕ್ತದಾಹವನ್ನು ಹಳೆ ಹುಲಿಗಳು ತೀರಿಸಲೇ ಬೇಕಾಗುತ್ತದೆ. ಹೊಸ ರಕ್ತವನ್ನು ಆಕರ್ಷಿಸುವ ಉಪಾಯವಿದೊಂದೇ.

ಇತಿಹಾಸದ ಪುನರಾವರ್ತನೆಯೊಡನೆ ಮುಂದೇ ಮೂತು ಭಾರತದ ಮಟ್ಟಿಗೆ ಸರಿಯಾಗಿಯೇ ನಡೆಯುತ್ತಿದೆ. ಶಾಸ್ತ್ರಗಳ ಮಾತು ಎಂದೂ ಸುಳ್ಳಾಗದು.

—ಗೋ.

ಪುತ್ತೂರು ಎಡಿಶನಲ್ II ಮುನ್ಸಿಫ್ ಕೋರ್ಟಿನಲ್ಲಿ

O. S. 408/67

ತಾರೀಖು 18—6—68

ಶಂಭಟ್ಟ— ವಾದಿ

ಮತ್ತು

ಕೃಷ್ಣಭಟ್ಟ ಕೂಡಾ— ಪ್ರತಿವಾದಿರು.

ಪ್ರತಿವಾದಿಯವರ ಪರ ಪ್ರತಿವಾದಿ ಬಂಟ್ವಾಳ ತಾಲೂಕು, ಕರೋಪಾಡಿ ಗ್ರಾಮದ ಮುಗೆಳಿ ಎಂಬಲ್ಲಿದ್ದವರು ಮಾಣಿಲ ಬೈಲು ಸಾಂಕಯಣ ಭಟ್ಟ ಮಗ. ಕೇಶವ ಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯ ಕಡೆಯ ಪಾಲಿ ಮೃತರಾದ ಸುಬ್ರಾಯ ಭಟ್ಟರಿಗೆ ವಾದಿ ಶಂಭಟ್ಟರು ದಾಖಲಿಸಿದ ದಾವೆಯು ನಿಮ್ಮ ಹೆಸರು ಬಗ್ಗೆ ತಾ. 18—6—1968ಕ್ಕೆ ಇಟ್ಟಿದೆ. ಆದುದರಿಂದ ನೀವು ಆ ದಿನ 11 ಗಂಟೆ ಸರಿಯಾಗಿ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ಅಗಲಿ, ನಿಮ್ಮ ವಕೀಲರ ಮೂಲಕವಾಗಲೀ ಹಾಜರು ಆಗಿ ಪ್ರತಿವಾದಕರನ್ನು ಕೇಳಿಕೊಳ್ಳಬೇಕಾದ್ದು. ತಪ್ಪಿದರೆ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯದ ವಿಚಾರಣೆ ತೀರ್ಮಾನ ಮಾಡಲಾಗುವುದು. ತಿಳಿದಿರಲಿ.

By order of Court

Badekila Ishwara Bhat

Advocate for Plaintiff

ಪುತ್ತೂರು, ತಾ. 18.4.1968

ಭಾಷೆಗಳ ಬಿಸಿ ತಣಿಯಲಿ-೧

(ಎಡದೇ ಪುಟದಿಂದ)

ಗಿ ಸುಮಾರಿದ ಇಂಗ್ಲೀಷು ಭಾರತ ದೇಶದ ಹಳ್ಳಿ ವಸಗಳೆಳಗೂ ಪ್ರಭಾವ ಬೀರಿತು. ಅಖಿಲ ಭಾರತವೂ ಒಂದೇ ಎಂಬ ಏಕಮತ್ಯಕ್ಕೆ ಆಂಗ್ಲಾಧಿಕಾರವೂ ಆಂಗ್ಲ ಭಾಷೆಯೂ ಅಪ್ರಯತ್ನವಾಗಿಯೇ ಒಂದು ಸಾಧನವಾಯಿತು. ಇದನ್ನು ಅಲ್ಲವೆನ್ನಲು ಸಾಧ್ಯವೆಂಟೆ?

ಕಳ ಊರಿದ ಭಾಷೆ

ಹಾಗೆ ಅಚೇತನಾವಸ್ಥೆಯುಳ್ಳದ್ದ ಏಕ ಮತ್ಯವು ಅನೇಕ ಮಂಖಂಡರ ಪ್ರಯತ್ನಗಳಿಂದ, ಉಪದೇಶಗಳಿಂದ ಚೇತರಿಸಿ ಕೊಳ್ಳುವಂತಾಗಿ .... ಕೊನೆಗೆ ಆಂಗ್ಲರು ನಮ್ಮನ್ನು ಬಿಟ್ಟು ಹೋಗಲೇ ಬೇಕಾಗುವಷ್ಟು ಬಲಿಷ್ಠಗೊಂಡಿತು.

ಅಲ್ಲಿಯೇನೋ ಸ್ವಾತಂತ್ರ್ಯ ಕೊಟ್ಟು ಹೊರಟು ಹೋದರು ನಿಜ. ಆದರೆ ಭಾರತೀಯರ ವಿದುಳನೊಳಗೆ ಸೇರಿ ಹೋದ ಇಂಗ್ಲೀಷು ಭಾಷೆಯನ್ನು ಎತ್ತಿಕೊಂಡು ಹೋಗಲು ಅವರೂ ಆಗಲಿಲ್ಲ ಈ ಸಂದರ್ಭದಲ್ಲಿ 'ಆಧುನಿಕ ಯುಗ'ವೂ ಬಂದುದರಿಂದ ಅಡಿಗೇ ವನೆಯ ವರೆಗೂ ವಿದೇಶದಳ ಸಂಪರ್ಕವು ಅನಿವಾರ್ಯವೆನಿಸಿ.—ಅದೆಲ್ಲಾ ಇಂಗ್ಲೀಷಿನಿಂದಲೇ ಪ್ರವೇಶವಾದ ಕಾರಣದಿಂದಾಗಿ, ಇಂಗ್ಲೀಷು ಭಾಷೆಯನ್ನು ಬಿಟ್ಟು ಬಿಡಲು ಭಾರತ ದೇಶದ ಪ್ರಜೆಗಳಿಗೂ ಸಾಧ್ಯವಾಗಲಿಲ್ಲ

ಮಿದುಳಿಗೆ ಸಂಬಂಧಪಟ್ಟ ವಸ್ತು ಭಾಷೆ. ಭಾರತೀಯರಾದ ನಾವು ಭಾಷೆಯನ್ನು ವಾಗ್ದೇವಿಯೆಂಬಿ, ಸರಸ್ವತಿಯಾಗಿ ಕಾಣುವವರು. ಯಾವ ಭಾಷೆಯಾದರೂ, ಅದು ಒಬ್ಬರ ಅನ್ನಾದಿಂದಲೇ ಬಂದಿದ್ದರೂ ಕೂಡ, ಅವರ ಮೇಲೆ ವ್ಯಕ್ತಿಗಳ ಮೇಲಿನ ಕೋಪವನ್ನು ತೋರಿಸುವುದು ನ್ಯಾಯವೆನಿಸೀತೆ? ಸಾಪ ಸಂಪರ್ಕದಿಂದಾದರೂ ಮಗು ಹುಟ್ಟಿದಾಗ, ನಮ್ಮ ಹೃದಯವಂತಿಕೆ ಏನು ಹೇಳುತ್ತದೆ? ಕೊಲ್ಲಬೇಕಾಗುತ್ತದೋ ರಕ್ಷಿಸಬೇಕಾಗುತ್ತದೋ?

ಹಾಗಾದರೂ ಈಗ ನಾವು ಇಂಗ್ಲೀಷನ್ನು ಇಟ್ಟುಕೊಳ್ಳಬೇಕೋ ಬೇಡವೋ- ಇದೊಂದು ಪ್ರಶ್ನೆಯಾಗಿ ನಿಂತಿದೆ.

ಅದು ಹಿಂದೆ ಇಲ್ಲಿ ಇದ್ದ ಭಾಷೆಅಲ್ಲ. ಕಾಲ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದು. ಇಂದಿನ ಕಾಲ ಇತ್ತು, ಮತ್ತೆ ಹೋಯಿತ -ಎಂದು ಅಗಿದ್ದರೆ ಒಳ್ಳೆಯದಿತ್ತು. ಹಾಗಾದಲಿಲ್ಲ. ಹಾಗೆ ಅದರ ಬಲವನ್ನು ಕಮ್ಮಿ ಮಾಡಲು ಸ್ವಾತಂತ್ರ್ಯ ಪ್ರಾಪ್ತಿಯಾದ ಇಪ್ಪತ್ತುವರ್ಷಗಳಲ್ಲಿ ಏನು ಪ್ರಯತ್ನವಾಯಿತು?— ಬದಲಾಗಿ ಅದು ಸ್ಥಿರವಾಗಿರುವ ರೀತಿಯಲ್ಲಿ ತಾನೇ ದೇಶವಿತ್ತು? ಸ್ವಲ್ಪ ಹಣ ವಸತಿ ಇರುವ ಕುಟುಂಬದವರು ತಮ್ಮ ಮಕ್ಕಳನ್ನು, ಬಾಬ್ ಕಟ್ ಮಾಡಿಸಿ ಅದಕ್ಕೇ ತಕ್ಕ ದುಸ್ತುಗಳಿಂದ ಕಾನ್ವೆಂಟಿಗೆ ಕಳುಹಿಸುತ್ತಲೇ ಇದ್ದಾರೆ. ಅದು ಹಿಂದಿ ಕಾನ್ವೆಂಟೆ?—ಅಲ್ಲ.

ಯಾವ ದಿಕ್ಕಿಗೆ ಕಣ್ಣು ತಿರುಗಿಸಿದರೂ ಇಂಗ್ಲೀಷ್ ಪ್ರಭಾವ ಕಡಿಸುಯಾಗುತ್ತಿರುವ ಸೂಚನೆ ಕಾಣಿಸುತ್ತಿಲ್ಲ. (ಅದು ಇತ್ತೀಚೆಗೆ ಗೊಂದಲದ ಪರಿಣಾಮವಾಗಿ ತುಸು ಕಾಣಿಸುವುದಾದರೆ ಅಸಂಭವ ಬೇರೆ.)

ಭಾಷಾಭಿಮಾನ

"ಸ್ವತಂತ್ರ ಭಾರತೀಯರಿಗೆ ಅಖಿಲ ಭಾರತ ಸಂಪರ್ಕ ಭಾಷೆಯಾಗಿ ಒಂದು ಭಾರತೀಯ ಭಾಷೆ ಇರುವುದೇ ಭೂಷಣ. ಅದು ಹಿಂದೀಯಾಗಿರಲಿ," ಎಂದು ಸ್ವಾತಂತ್ರ್ಯದ ತಂದೆಯಾದ ಮಹಾತ್ಮಾ ಗಾಂಧಿ ಅಭಿಪ್ರಾಯ ಪಟ್ಟದನ್ನು ಎಲ್ಲಾ ಭಾರತೀಯರು ಅಲೋಚಿಸಿಕೊಂಡರು. ಹಾಗೆ ಹೇಳಿದ ಮಹಾತ್ಮರು ಇಂಗ್ಲೀಷು ಭಾಷೆಯ ಮೇಲೆ ಕೋಪವನ್ನಾಗಲೀ, ಅದನ್ನು ತೊಲಗಿಸಬೇಕೆಂಬ ಭಾವವನ್ನಾಗಲೀ ಪ್ರಕಟಿಸಿದ್ದಾರೆಯೇ? ಇರಲಾರದು. ಅದು ದಿನೇ ದಿನೇ ಹತ್ತಿರ ಹತ್ತಿರವಾಗುತ್ತಿರುವ ಪ್ರಪಂಚ ಸಂಪರ್ಕಕ್ಕೂ, ಆಧುನಿಕ ಜ್ಞಾನ ದಾಹದ ಶಾಂತಿಗೂ ಅಗತ್ಯವೆಂಬ ಭಾವನೆ ಮನಸ್ಸುಗಳ ಮನದಾಳದಲ್ಲಿ ಇದ್ದೇ ಇರಬೇಕು. ಅದುದರಿಂದ ಅದಕ್ಕೂ ಒಂದು ಮರ್ಯಾದೆಯ ಸ್ಥಾನವನ್ನು ಕೊಡುತ್ತ ಪ್ರಯೋಜನ ಪಡೆಸುವುದರಲ್ಲಿಯೆ ಭಾರತೀಯರ ಭವಿಷ್ಯ ಅಡಗಿದೆ.

ಯಾವುದಕ್ಕೂ ಒಂದು ಮಿತಿ ಉಂಟಷ್ಟೆ? ಪ್ರೀತಿ, ಪ್ರೇಮಗಳಲ್ಲಿಯೂ ಹಾಗೆಯೇ. ಪ್ರೀತಿ, ಪ್ರೇಮ, ಅಭಿಮಾನಗಳೆಲ್ಲಾ ಮಿತಿಯೊಳಗಿದ್ದರೇನೇ ಚೆನ್ನು. ಮಿತಿಮೀರಿದರೆ ಮೋಹವೆನಿಸುತ್ತದೆ. ಮೋಹವು ಅಂಧತ್ವಕ್ಕೇ ಮೂಲ. ಗಂಡ ಹೆಂಡತಿ, ಅಣ್ಣತಮ್ಮ, ಅಕ್ಕತಂಗಿಯರೊಳಗೆ ಕೂಡಾ ಬೆಸೆದುಕೊಂಡಿರುವ ಮೋಹವು ಎಲ್ಲೆ ಮೀರಿ ಮೋಹಾಂಧತೆಗೆ ತಿರುಗಿದರೆ ಶಾಂತಿ ಕೆಡುತ್ತದೆ.

ಭಾಷೆಯು ವಿಷಯದಲ್ಲಿಯೂ ಅಷ್ಟೇ. ಮಾತೃಭಾಷೆಯ ಮೇಲೆ ಪ್ರೇಮವಿರಬೇಕು. ಸೋದರ ಭಾಷೆಗಳ ಮೇಲೆ ಪ್ರೀತಿ ಬೇಕು. ದೇಶಭಾಷೆಯ ಮೇಲೆ ಅಭಿಮಾನ ಬೇಕು. ಪರಕೀಯರ ಭಾಷೆಯ ಮೇಲೆ ಗೌರವ ಬೇಕು.

ಇದೆಲ್ಲವೂ ಎಲ್ಲಿ ಕಟ್ಟಳೆಯಳಗಿದ್ದರೆ ಚೆಂದ. ಎಲ್ಲೆ ಮೀರಿದರೆ ದುರಭಿಮಾನವೆನಿಸಿ ಇನ್ನೊಬ್ಬರ ಸಿಟ್ಟಿಗೆ ಹುಲ್ಲಾಗುತ್ತದೆ.

ಅತ್ಯಭಿಮಾನವೂ ಮೋಹಾಂಧತೆಯೆನಿಸುತ್ತದೆ. ಅದರಿಂದ ಪರಭಾಷೆಗಳ ಮೇಲೆ ತಿರಸ್ಕಾರ ಭಾವನೆ ಉಂಟಾಗಿ ಅಭಿವೃದ್ಧಿಗೆ ತಡೆಯಾಗಿ ಪರಿಣಾಮವು ವಿಷಮವಾದೀತು.

ತೊಲಗಿಸ ಬೇಕಾದರೆ

ಇಂಗ್ಲೀಷಿನ ಅತಿರೇಕ ಅಭಿಮಾನದಿಂದ, ನಮ್ಮ ನಡಿಗೆ ಉಡುಗೆ ಭಾವನೆಗಳಲ್ಲಿ ಇಂಗ್ಲೀಷಿನವರನ್ನೇ ಅನುಕರಿಸುವುದಾದರೆ ಅದು ಅವಮಾನ. ಜಂಬಕ್ಕಾಗಿ ಮಾತೃ ಭಾಷೆಯನ್ನು ಕೆಡಿಸಿಕೊಂಡು ಇಂಗ್ಲೀಷನ್ನು ಮಾತೃ ಭಾಷೆಯೊಳಗೆ ಬೇಕಂತ ಹೊಗಿಸಿ ಹೊಗಿಸಿ ಮಾತಾಡುವುದು ಅವಮಾನ; ಅಪರಾಧ. ಅದರ ಬದಲಾಗಿ ಪರ ಭಾಷೆಗಳ ಅಧ್ಯಯನದಿಂದ ಮಾತೃ ಭಾಷೆಯನ್ನು ಪೋಷಿಸುವ ಕಾರ್ಯವಾಡಿದರೆ—ಅದು ಸ್ವಾಗತಾರ್ಹವಾದ ಕೆಲಸ.

ನಮ್ಮ ನಾಡಿನಲ್ಲಿ ಇಂಗ್ಲೀಷು ಮೋಹದಿಂದ ಕೆಡುಕು ತಂದವರೂ ಇದ್ದಾರೆ; ಅದೇ ಇಂಗ್ಲೀಷಿನಿಂದ ಕನ್ನಡವನ್ನು ಬೆಳೆಯಿಸಿದವರೂ ಇದ್ದಾರೆ.

ಒಟ್ಟಿನ ಮೇಲೆ ಕಳವೂರಿದ ಇಂಗ್ಲೀಷನ್ನು ತೊಲಗಿಸುವುದೆಂದರೆ, ಈ ಆಧುನಿಕ ವೈಜ್ಞಾನಿಕ ಯಾಂತ್ರಿಕ ಕಾಲದಲ್ಲಿ—ಪ್ರಪಂಚ ಸಂಪರ್ಕವಿಲ್ಲದೆ ಬದುಕಿ ಬೆಳೆಯಲು ಸಾಧ್ಯವಿಲ್ಲದ ಯುಗದಲ್ಲಿ ದೊಡ್ಡ ಬೊಂದು ತಡೆ ಹಾಕಿದಂತೆಯೇ ಆದೀತು.

ಏನೋ ಕಡ್ಡಾಯ ಕಾನೂನಿನ ಒತ್ತಾಯದಿಂದ ಇಂಗ್ಲೀಷನ್ನು ತೊಲಗಿಸಿದಂತೆ ಮಾಡಿದರೂ, ಅದು ಒಮ್ಮೆಲೇ ತೊಲಗುವ ಬಾಬತ್ತಲ್ಲ. ಜ್ಞಾನ ಪಿಪಾಸುಗಳು ಕಡ್ಡು ಮುಚ್ಚಿಯಾದರೂ ಇಂಗ್ಲೀಷಿನ ಸಂಪರ್ಕ ಇಟ್ಟುಕೊಳ್ಳುವಷ್ಟರ ಮಟ್ಟಿಗೆ ಅದು ಮನೆ ವಿಷಯವಾಗಿ ಹೋಗಿದೆ. ಅದರಿಂದ ಸಿಕ್ಕುವಂತಹುದು. ದೇಶಭಾಷೆಗಳಲ್ಲಿ ಸಿಗುವಂತೆ ಮಾಡುತ್ತಾ ಬಂದು, ಕ್ರಮೇಣ ಅದರ ಪ್ರಭಾವವನ್ನು ತಗ್ಗಿಸುತ್ತಾ ಹೋದರೆ, ಅದು ಹೊರಟುಹೋದಂತಾದೀತು. ಅದಕ್ಕೆ ಒಂದು ಪೀಳಿಗೆಯಷ್ಟು ಕಾಲಾಂತರವಾದರೂ ಬೇಕು.

ಭಾಷೆಯ ಗುಣ

ಭಾಷೆ ಮನಸ್ಸಿಗೆ ತಿಂಡಿತೀರ್ಥಗಳಿದ್ದಹಾಗೆ. ಈ ವಿಷಯದಲ್ಲಿ ಶಾಸನ ಮಾಡುವುದು ಸುಲಭ. ಶಾಸನವು ಅಮಲಿನಲ್ಲಿರುವುದು ಕಷ್ಟ. ತಿಂದು ಅಭ್ಯಾಸವಾಗಿ, ಆರೋಗ್ಯಕ್ಕೂ ಒಳ್ಳೆಯದಾಗಿರುವುದನ್ನು ಬಿಟ್ಟುಬಿಡಬೇಕೆಂದು ಶಾಸನ ಮಾಡಿದರೆ ಪಡೆದೀತೇ? ಹಾಗೆಯೇ ಇಷ್ಟವಿಲ್ಲದ್ದನ್ನು ಒತ್ತಾಯ ಮಾಡಿ ತಿನ್ನಿಸಲಿಕ್ಕಾದರೂ ಸಾಧ್ಯವಾದೀತೇ?

ಸ್ವಸಂತೋಷದಿಂದ ಇಷ್ಟಪಟ್ಟು ತಾನಾಗಿ ಕಲಿಯುವಂತಹುದು ಭಾಷೆ. ಭಾಷೆಯ ಬದಲು ಈ ರೀತಿಯಾಗಿಯೇ ಬೆಳೆದುಬಂದಿದೆ.

ನಾವು ಒಂದು ಅನ್ಯ ಭಾಷೆಯನ್ನು ಏಕೆ ಕಲಿಯುತ್ತೇವೆ? ಹೇಗೆ ಕಲಿಯುತ್ತೇವೆ?

ಅಸಲು, ಭಾಷೆಯ ಉದ್ದೇಶವೇ ಪರಸ್ಪರ ಅಭಿಪ್ರಾಯ ತಿಳಿಯಪಡಿಸುವುದು. ನಾವು ಪರವೂರಿಗೆ ಹೋದಾಗ, ಅಲ್ಲಿಯ ಭಾಷೆಯನ್ನು ಕಲಿಯಬೇಕಾದ್ದು ಅನಿವಾರ್ಯವಾಗಿ ಕಲಿಯುವ ಮನಸು ಹರಿಯುತ್ತದೆ; ಆಸಕ್ತಿ ಬೆಳೆಯುತ್ತದೆ. ಯಾವ ಅನ್ಯ ಒತ್ತಾಯದ ಅಗತ್ಯವೂ ಇಲ್ಲದೆ ಕಲಿಯುವಂತಾಗುತ್ತದೆ. ಹೆಚ್ಚಿನ ಉತ್ಸಾಹವೂ, ಅವಕಾಶವೂ, ಅಗತ್ಯವೂ ಇದ್ದವರು ಓದುವುದಕ್ಕೂ ಬರೆಯುವುದಕ್ಕೂ ಕಲಿತುಬಿಡುತ್ತಾರೆ. ಹೀಗೆಯೇ ಭಾಷೆಗಳು ಒಂದರೊಡನೊಂದು ಸಂಪರ್ಕಗೊಂಡು ಬೆಳೆದಿವೆ, ಬೆಳೆಯುತ್ತಲೂ ಇವೆ.

ಹೀಗೆ ಬೆಳೆಯುವ ಸ್ವಭಾವ ಉಳ್ಳವುಗಳೇ ಜೀವಂತ ಭಾಷೆ, ಬೆಳೆವಣಿಗೆ ಕುಂಠಿತ ಹೋದರೆ 'ಸತ್ತ"ಭಾಷೆ,—ಸಂಸ್ಕೃತದ ಹಾಗೆ, ಅಮರ ಭಾಷೆ; ಮುಂದಿನ ಕಾಲದಲ್ಲಿ ಇಂಗ್ಲೀಷು ಕೂಡಾ 'ಸತ್ತ' ಭಾಷೆ ಆಗುವುದೋ ಏನೋ— ನಮ್ಮ ಪಾಲಿಗೆ.

(ಮುಂದುವರಿಯುವುದು)

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯಬೇಡಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವೂ; ಊಟ, ಉಪಾಹಾರದ ವ್ಯವಸ್ಥೆಯೂ ಹಾಗೂ ಎಲ್ಲಾ ತರಹ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಸಂಜೆ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಸಂಚಗಜ್ಞಾಯ	2—00
ವಿಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಗುಡಿಮುತ್ತುಗಳು	1—50
ವಿಚಿತ್ರ ಕಳ್ಳಪೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೂಡಲಾಗಿ ಬರೆಯಿರಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.

READ & ADVERTISE IN NAVAYUGA WEEKLY

ರಾಷ್ಟ್ರೀಯ ವಾಹನ — ಬೈಲ್ಗಾಡಿ

(ನಾಲ್ಕನೇ ಪುಟದಿಂದ)

ಮಾತ್ರ ಉಳಿದವರ ಕಣ್ಣು ಕುಕ್ಕುತ್ತಿತ್ತಂತೆ...."

'ನೋಡೋಣ. ಭರತ ಏನಾಗುತ್ತಾನೇಂತ....'

"ಹ್ಞೂಂ....ಅಲ್ರಿ, ಇನ್ನೆಂದು ಸಂಗ್ತಿ

"ಏನ್ರಿಸಾ ಅದು?"

"ಅಲ್ರಿ, ದೇಶದಲ್ಲಿ ಸಾರಿಗೆ ಸಂಪರ್ಕ ವಾಯುವೇಗದಲ್ಲಿ ಬೆಳೆಯುತ್ತ ಬಂದಂತೆ ದುರ್ಘಟನೆಗಳು ಮನೋವೇಗವನ್ನು ಮೀರಿಸುತ್ತ ನಡೆಯುತ್ತವೆ....ಯಾಕೆ ಹೀಗೇಂತ?"

'ಓಹೋ...ರೇಲ್ವೆ ಅಪಘಾತದ ಬಗ್ಗೆ ಹೂತಾಡ್ತಿದೀಯೇನು?'

"ರೇಲೂಂತೇನ್ರಿ? ದಿನಾ ಪತ್ರಿಕೆ ತೆರೆದು ನೋಡಿದ್ರೆ ಇರುತ್ತೆ— ರೇಲು ದುರಂತ, ವಿಮಾನ ಅಪಘಾತ, ಬಸ್ಸು ಹಳಕ್ಕೆ ಬಾರಿತು, ದೋಣಿ ಮಗುಚಿತು.... ಇತ್ಯಾದಿ ಇತ್ಯಾದಿ...."

'ಹ್ಞೂಂ... ಅದು ಸರೀನ್ರಿ. ಸಾರಿಗೆ-ಸಂಪರ್ಕ ವಿಭಾಗದ ಅದಕ್ಷತೆಯೇ ಇದಕ್ಕೆ ಕಾರಣ ಅಂತ ಸಂಶತ್ತಿನಲ್ಲಿ ಆಕ್ರೋಶವಾಗುತ್ತಿದೆಯಲ್ಲಾ...."

"ಅಲ್ರಿ, ಒಂದೊಂದು ಅಪಘಾತಕ್ಕೆ ಒಬ್ಬೊಬ್ಬ ರೇಲ್ವೆ ಮಂತ್ರಿ ರಾಜೀನಾಮೆ ಕೊಡುತ್ತಾದಾರೆ, ಆ ವಿಭಾಗಕ್ಕೆ ಮಂತ್ರಿಯಿಲ್ಲದೆಯೇ ನಡೆಯಬೇಕಾಗುತ್ತೆ ಏನೋ!!"

ಅದನ್ನು ತಿಳಿಯದಷ್ಟು ದಡ್ಡರೇನು ನಮ್ಮ ಮಂತ್ರಿಗಳು? ದಿನಾ ಇಪ್ಪತ್ತು ಅಪಘಾತ ನಡೆಯಲಿ, ಯಾವನೇ ಮಂತ್ರಿ ರಾಜೀನಾಮೆ ಕೊಡೋಲ್ಲ. ಮತ್ತೆ ಕೇಳಿ, ಒಬ್ಬ ಮಂತ್ರಿ ರಾಜೀ ಕೊಟ್ಟೆ ಅಪಘಾತ ಮುಂದೆ ನಡೆಯೋದಿಲ್ಲಾಂತ ಭರವಸೆ ಯಾರು ಕೊಡ್ತಾರೆ?"

"ಅಲ್ರಿ, ಈ ರೇಲು ವಿಭಾಗ ಮತ್ತು ಕುಟುಂಬ ಯೋಜನಾ ವಿಭಾಗಗಳ ನಡುವೆ ಏನಾದರೂ ಗುಪ್ತ ಒಡಂಬಡಿಕೆ ನಡೆದಿದೆಯೋ ಅಂತ ಸಂದೇಹ ಬರುತ್ತದೆ.'

"ಯಾಕೆ?"

"ಸಂತಾನ ಶಕ್ತಿ ಹರಣ ಶಸ್ತ್ರ ಕ್ರಿಯೆಗೆ ಅಥವಾ ಊಪುಗಾಂಣೆಗೆ ಜನಪ್ರಿಯತೆ ಗಳಿಸುವಲ್ಲಿ ಅಸಮರ್ಥರಾದವರು...."

'ನಿನ್ನ ತಲೆ ಭಾರಿ ದೂರ ನೋಡಿತು ಕಣೋ... ಯಾರಾದರೂ ಕೇಳ್ರಿ ಏನಾದೀತು ಗೊತ್ತೆ? ಪುಣ್ಯಕ್ಕೆ ರಾಮರಾಜ್ಯ ಮುಗಿಯುತ್ತು ಇಲ್ಲವಾದ್ರೆ ಸೀತೆಗೆ ಮತ್ತೊ

ಭೈರವ ರಕ್ಷೆ—!!

ಕ

ಧೀಂಕಿಟ್ಟು ಪರಮೆಯೊಂದೆನ್ನ ಬಳಿ
ಸುಳಿದಿತ್ತು !
ಝೇಂಕರಿಸಿ ಸಿಹಿರಸವು ಸಿಗದೆನ್ನ
ಹಳಿದಿತ್ತು !

ಒಂದು ಕೂನಲಿ ಕೂತು
ಮಗದೊಂದ ಕದು ಸೋತು
ಬಿಂದು ರಸ ಮುಗಿದೊಡನೆ
ಹಾರಿತದೋ ಸುತ್ತು.

ವಧು ಹೀರಲ್ಕೆ ತಂದ
'ವಧುವಡೆರ'ನೋ ಫೀನ....?
ಮಧುರ ತರದಲ್ಲಿಹುದು
ಮಿಡುದಳದ ಹೂವು.

ಕರೆಯುತಿದೆ ಹೂ ನಿನ್ನ ಕನ್ನೆಡೆಗೆ
ಬಾರೆಂದು
ಸರಿಸರಿಯ ಭಾವದಿಂ ಚುಂಬಿಸಿದೆ
ನೀ ಒಂದು

ಹೀರಿದೆಯೋ ಸಿಹಿ ಬಿಂದು
ಹಾರು ಫೀ ಮುಂದ್ಮುಂದು.

ಪ್ರ್ಮ ವನವಾಸ ಅನುಭವಿಸಬೇಕಾಗುತ್ತತ್ತ...."

'ಹೋಗಲಿ ಬಿಡಿ... ನಮಗೇನಂತೆ? ನಾವು ವಿಮಾನದಲ್ಲೂ ಓಡಾಡುವುದಿಲ್ಲ; ರೇಲೂ ಬೇಡ. ಬಸ್ಸೂ ಊಳ್ಳಾಂ.... ದೋಣಿಯಂತೂ ಬೇಡವೇ ಬೇಡ.'

"ನಮಗೆ ಬೈಲ್‌ಗಾಡಿಯೇ ಸಾಕು. ನಮ್ಮ ದೇಶದ ರಾಷ್ಟ್ರೀಯ ವಾಹನವಿದು, ಅದಕ್ಕೆಂದೇ! ನಮ್ಮ ವಿಚಾರ, ನಮ್ಮ ರೀತಿ ಫೀತಿ—ಎಲ್ಲ ಬೈಲ್‌ಗಾಡಿಯಂತೆ. ದೇಶದ ಏಳಿಗೆಗೆ ಬಲಾಢ್ಯ ಪಕ್ಷ ಕಾಂಗ್ರೆಸ್ಸಿನ ಚುನಾವಣಾ ಚಿಹ್ನೆಯೂ ಬೈಲ್ ತಾನ?'

'ಹ್ಞೂಂ... ಗಾಡಿಗೆರಡು ಹೋರಿ. ಒಂದು ಮೂತ. ಇನ್ನೆಂದು ಕೃತಿ. ಇವೆರಡೂ ನಮ್ಮ ದೇಶದ್ದು ಸಮಾನಾಂತರವಾಗಿಯೇ ಹರಿಯುತ್ತವೆ —"

'ಅಂತಲೇ ನಾವಿಂತಿದ್ದೇವೆ...'

"ಎಂತು?"

'....ಇಂತು...."

—ಗೋರಾ

ಹೆದ್ದಾಗ್ದ ಅವೃತವ ಫೀಳು ಫಿಶಿನ
ತಿಂದು,
ಪಡೆಯುವೆಯೋ ಅಮರತೆಯು ಮತ್ತೆ
ಎಂದೆಂದು?

ಇದು ಕನಸು ಫೀನೆಣಿಸು
ನಿನ್ನಾತ್ಮವಂ ತಣಿಸು
ಒಂದು ದಿನ ಅತ್ಮವದು ತೊರೆಯುವುದು
ಸೊಗಸು

ನೀನದಶೆಶ್ರಮಿಸು, ಇದ ನೀನು ಜಯಿಸು
ನೀನು ಕಂಳಿತಿಹ ಹೂವು
ಬಯಸಿತೇ ಅದು ಸಾವು?

ಬಿಮ್ಮನೆ ಧರೆಗುರುಳಿ ಧಳಧಳಂ ಚೆಲ್ಲಿತ್ತು
ಹೆಮ್ಮೆಯಲ್ಲದಕೆಂದೆ ಬಂದೆಯೋ
ಫೀ ಹೊತ್ತ?

ವಿಶ್ವದಲಿ ಸಂಚರಿಸು
ವಿಶ್ವವನೆ ನೀನಗಿಸು
ನಶ್ವರವ ನೀ ದೂಡಿ ಅಶ್ವಮಿಲ ನೀಡು.

—ಶ್ರೀ ಮಂ. ಗೋ. ರಾವ್.

ವಲ್ಲಿಯಲ್ಲಿ ಕುಟುಂಬ ಯೋಜನಾ ತೀವ್ರ ಚಳವಳಿ

ಕುಟುಂಬ ಯೋಜನಾ ತೀವ್ರ ಪ್ರಚಾರ ಕಾರ್ಯಕ್ರಮವು ಅಂಗವಾಗಿ ತಾ. 24-5-69 ರಂದು ಭಾರತ ಸರಕಾರದ ಸಂಗೀತ ಮತ್ತು ನಾಟಕ ವಿಭಾಗದವರು ಬೆಂಗಳೂರಿನ ರವಿ ಕಲಾವಿದರಿಂದ "ಜಾಗೃತ ಭಾರತ" ಎಂಬ ಕುಟುಂಬ ಯೋಜನೆಯ ಕುರಿತು ನಾಟಕ ಏರ್ಪಡಿಸಿದ್ದರು.

ಅಧ್ಯಕ್ಷತೆ ವಹಿಸಿದ್ದ ಮಂಗಳೂರು ತಾಲೂಕು ಬೋರ್ಡ್ ಸದಸ್ಯ ಶ್ರೀ ಎಂ. ಆರ್. ಎಚ್. ಪೂಜಾರಿರವರು ಮಾತನಾಡಿ ಕುಟುಂಬ ಯೋಜನೆಯಂತಹ ಪ್ರಾಮುಖ್ಯ ಕಾರ್ಯಕ್ರಮದ ಕಡೆ ಜನರ ಗಮನವನ್ನು ಸೆಳೆಯಲು ಈರೀತಿಯ ನಾಟಕಗಳು ಪ್ರಬಲ ಮಾಧ್ಯಮ ಪಾತ್ರ ವಹಿಸಬಲ್ಲವೆಂದು ಹೇಳಿದರು.

ಸಮಾರಂಭದಲ್ಲಿ ಭಾಗವಹಿಸಿದ್ದ ರಾಜ್ಯದ ಕುಟುಂಬ ಯೋಜನಾ ಕಾರ್ಯಕ್ರಮದ ಡೆಪ್ಯುಟಿ ಡೈರೆಕ್ಟರ್ ಡಾ. ಎಸ್. ಪಿ. ರಾಜಯ್ಯರು ಮಾತನಾಡಿ ದಕ್ಷಿಣ ಜಿಲ್ಲೆಯ ಜನರು ಕುಟುಂಬ ಯೋಜನೆಯಲ್ಲಿ ಹೆಚ್ಚು ಪಾಲ್ಗೊಳ್ಳಬೇಕೆಂದರು.

ಸಂಗೀತ ಮತ್ತು ನಾಟಕ ವಿಭಾಗದ ದಕ್ಷಿಣ ರಾಜ್ಯಗಳ ಪ್ರಾದೇಶಿಕ ಡೆಪ್ಯುಟಿ ಡೈರೆಕ್ಟರ್ ಹಾಗೂ ನಾಟಕದ ಕರ್ತೃ ಡಾ. ಎಚ್. ಕೆ. ರಂಗನಾಥರವರು ನಾಟಕವನ್ನು ಪರಿಚಯ ಮಾಡಿಕೊಟ್ಟರು.

ತ್ರಿಭಾಷಾ ಸೂತ್ರ: —

ಇಂದಿರಾ ಸಾರಿದ ತ್ರಿಭಾಷಾ
ಸೂತ್ರ !
ಕಂದ ನೀ ಕೇಳದಿರು ಫೀವಿದರೆ
ಗೋತ್ರ !
ಮೊದಲಾಗಿ ಒಪ್ಪದಿದ್ದರೂ ಮಾಡೆ
ಲಗ್ನ !
ಸಂಸಾರ ಸಾಗುವುದು ನೋಡು
ನಿರ್ವಿಘ್ನ !

ಶಕಭಾಷಾ ಲಿಂಗಣ್ಣ: —

ಮುಖ್ಯಮಂತ್ರಿಯ ಪದವಿ
ಬಿಡಿಸಿನ್ನ ಬೇಡಿ
ತಾನಾಗಿ ಒಪ್ಪಿಸಿದುದು ಕಾಂಗ್ರೆಸ್
ಗಾದಿ
ಎರಡು ಹೆಂಡಿರ ಒಲಿಸಿ
ಸಂತೈಸುವವ ಜಾಣ
ನಿನ್ನುತ್ಸಾಹಕ್ಕೆ ಶಕಭಾಷಾ ಲಿಂಗಣ್ಣ

—'ದೇವಕ ನಂದ'

ಮಿರ್ಜಾನ, ಉ. ಕ.

ಕುಟುಂಬ ಯೋಜನಾ ತೀವ್ರ ಚಳವಳಿ

ಉಳ್ಳಾಲದ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದಿನ ಬಯಲಲ್ಲಿ ಕುಟುಂಬ ಯೋಜನಾ ತೀವ್ರ ಚಳವಳಿಯ ಅಂಗವಾಗಿ ತಾಂ. 18-5-69 ರಂದು ಸಾರ್ವಜನಿಕ ಸಭೆ ನಡೆದಿತ್ತು. ಶ್ರೀಮತಿ ಡಿ. ಕಲ್ಯಾಣ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ತಲಾವಾರಿ ಸಂಘಾಯತಿ ಅಧ್ಯಕ್ಷ ಶ್ರೀ ಪಕ್ಷ ರೈಗಳು ಮಾತನಾಡುತ್ತಾ ರಾಷ್ಟ್ರ ಬಲಿಷ್ಠವಾಗಬೇಕಾದರೆ ಆರ್ಥಿಕ ಭದ್ರತೆಬೇಕು ಸ್ವತಂತ್ರ ಬರುವ ಮೊದಲು ನೂರಮತ್ತು ಕೋಟಿ ಇದ್ದ ಜನಸಂಖ್ಯೆ ಈಗ ಇಪ್ಪತ್ತು ವರ್ಷಗಳಲ್ಲಿ ೫೦ ಕೋಟಿಯಷ್ಟು ಹೆಚ್ಚಿದರೆ ನಮ್ಮ ಸ್ವತಂತ್ರಕ್ಕೆ ಧಕ್ಕೆ ಬರಬೇಕು. ಹೀಗೆ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಕೊರತೆ ಬಟ್ಟೆ ಇಲ್ಲದೆ ಇರುವ ಜನಸಂಖ್ಯೆ ಒದಗಿಸುವುದು ಕುಟುಂಬ ಕಷ್ಟ ಇದರಿಂದ ಸಂತಾನ ನಿಯಂತ್ರಣ ಅಗತ್ಯ. ಎಂಟು ಹತ್ತು ಮಕ್ಕಳಿರುವ ಕುಟುಂಬಗಳಿಂದ ಎರಡು ಅಥವಾ ಮೂರು ಮಕ್ಕಳಿರುವ ಕುಟುಂಬ ಒಳ್ಳೆಯದು ಎಂದು ಹೇಳಿದರು. ಶ್ರೀಮತಿ ಎಸ್. ಕೆ. ಎಲ್ ಅವರು ಮಾತನಾಡುತ್ತಾ ವಿದ್ಯಾವಂತರು ಈಗಾಗಲೇ ಕುಟುಂಬ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಆದರೆ ಅವರು ತಮ್ಮಷ್ಟಕ್ಕೇ ಇದು ಇತರರಿಗೆ ಈ ವಿಷಯವನ್ನು ತಿಳಿಸುವುದಕ್ಕೆ ಮುಂದಾಗುತ್ತಿದ್ದಾರೆ. ಒಬ್ಬರು ಇನ್ನೊಬ್ಬರಿಗೆ ಈ ವಿಷಯವನ್ನು ತಿಳಿಸಿ ಮಂದಿಸ್ಥಾನ ಮಾಡಿದರೆ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ ಎಂದರು ಶ್ರೀಮತಿ ಸೀತಮ್ಮ ಅವರು ಮಾತನಾಡುತ್ತಾ ಜನಸಂಖ್ಯೆಹೀಗೆ ಹೆಚ್ಚುತ್ತಾ ಹೋದರೆ ಜನರಿಗೆ ಆಹಾರದೊರೆಯುವುದು ಮಕ್ಕಳಿಗೆ ಶಿಕ್ಷಣಕ್ಕೆಕಷ್ಟವಾಗಬಹುದು ಎರಡು ಮೂರು ಮಕ್ಕಳಿರುವುದು ಲೇಸು ಎಂದರು. ಕಾರ್ಯಗೋಷ್ಠಿಯ ಸಭೆಯ ಶ್ರೀ ಡಿ. ಶಾಂತಪ್ಪಯ್ಯನವರು ಕುಟುಂಬ ಯೋಜನೆಯ ಅವಶ್ಯಕತೆಗಳನ್ನು ವಿವರಿಸಿದರು. ಶ್ರೀಮತಿ ಡಿ. ಕಲ್ಯಾಣ ಶೆಟ್ಟಿಯವರು ತಮ್ಮ ಭಾಷಣದಲ್ಲಿ ಮಕ್ಕಳ ದೇವರಿಗೆ ಸಮಾನ ಅವರನ್ನು ಸರಿಯಾಗಿ ಪೂಜಿಸಬೇಕು ಅದರೆ ಅವರನ್ನು ಸರಿಯಾಗಿ ನೋಡಿಕೊಳ್ಳಲಾರದಿದ್ದವರು ಅಂತವ ಮಕ್ಕಳನ್ನು ಪಡೆಯದಂತೆ ನೋಡಿಕೊಳ್ಳಬೇಕು. ದೇಶದ ಆರ್ಥಿಕ ದೃಷ್ಟಿಯಿಂದ ತಾಯಿಂದಿರ ಆರೋಗ್ಯದೃಷ್ಟಿಯಿಂದ ಮತ್ತ ಸಂತತಿ ಇರುವುದು. ಸಾಕ್ಷಿ ಎಂದರು. ಶ್ರೀ ಶಿವಲಿಂಗ ಸ್ವಾಮಿ ಹಿರೇಮಠ ಅವರಿಂದ ಕುಟುಂಬ ಯೋಜನೆಯ, ಕುರಿತು ನಡೆದ ಪ್ರಶ್ನೆಗಳ ಜನರಲ್ಲಿ ಹೆಚ್ಚು ಪ್ರಜ್ಞೆಯ ಮನ್ನುಂಟು ಮಾಡಿತು.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ವಿತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಹಿಸಿರಿ

ವಾರ್ಷಿಕ ಚಂದಾ ರೂ. ೧೧.

ಉಣ್ಣೆಗಳಿಂದ ಜಾನುವಾರುಗಳ ರಕ್ಷಣೆಗೆ ಹೊಸ ಕ್ರಿಮಿನಾಶಕ

ಹೊಸ ಪ್ರಾಯೋಗಿಕ ಕ್ರಿಮಿನಾಶಕ ವೊಂದು ಜಾನುವಾರುಗಳಿಗೆ ಉಣ್ಣೆಗಳ ವಿರುದ್ಧ ರಕ್ಷಣೆ ನೀಡುವುದು. ಆದರೆ ಇದರ ಪರಿಣಾಮಕಾರಿತ್ವ ಹಾಗೂ ಸುರಕ್ಷಿತತೆಯು ಪ್ರಾಕ್ಷೆಗಳಿಂದ ಸ್ಥಿರಪಡುವವರೆಗೆ ಸಾರ್ವಜನಿಕ ಬಳಕೆಗೆ ದೊರಕುವುದಿಲ್ಲ.

ಡರ್ಸ್‌ಬಾನ್ ಎಂದು ಹೆಸರಿಸಲಾಗಿರುವ ಈ ಕ್ರಿಮಿನಾಶಕ "ಬೂಫಿಲಸ್ ಅನುಲೇಟಸ್" ಮತ್ತು ದಕ್ಷಿಣದ "ಬಿ. ಮೈಕ್ರೋಪ್ಲಸ್" ಎಂಬ ಉಣ್ಣೆಗಳನ್ನು ನಾಶಪಡಿಸುತ್ತದೆಂದು ಅಮೆರಿಕದ ಕೃಷಿ ಸಂಶೋಧನ ವಿಭಾಗದ ಕೀಟ ಶಾಸ್ತ್ರಜ್ಞರಾದ ಓವೆನ್ ಎಚ್. ಗ್ರಹಾಂ ಮತ್ತು ಜೋಜರ್ ಓ. ಡ್ರಮ್ಮಂಡ್ ವರದಿ ಮಾಡಿದ್ದಾರೆ.

ಉಣ್ಣೆಗಳು ಪ್ರಾಣಿಗಳ ರಕ್ತವನ್ನು ಹೀರಿ ಅವುಗಳನ್ನು ನಿಸ್ತ್ರಾಣಗೊಳಿಸುತ್ತವೆ. ಅಲ್ಲದೆ ಅವು ಪಶುಗಳಿಗೆ ತರಲಾದ ವಿನಾಶಕಾರೀ ರೋಗಗಳಲ್ಲೊಂದಾದ ಬೊವಿನ್ ಪಿರೋಪ್ಲಾಸ್ಮಾಸ್‌ಗೆ ವಾಹಕಗಳಾಗಿವೆ.

ಅವರು ನಡೆಸಿದ ಪ್ರಯೋಗಗಳಲ್ಲಿ ಡರ್ಸ್‌ಬಾನ್ ಬೆಳೆದ ಹಾಗೂ ಇನ್ನೂ ಬೆಳೆಯುತ್ತಲಿದ್ದ ಎಲ್ಲ ಉಣ್ಣೆಗಳನ್ನು ಸಾಯಿಸಿತು ಮತ್ತು ಹೆಣ್ಣು ಉಣ್ಣೆಗಳು ಅವು ಸಾಯುವ ಮುನ್ನ ಮೊಟ್ಟೆಗಳಿಡದಂತೆ ತಡೆಯಿತು ಎಂದೂ ಈ ಕೀಟಶಾಸ್ತ್ರಜ್ಞರು ಹೇಳಿದ್ದಾರೆ.

ಸಿಂಪಡಿಸುವಿಕೆಯಲ್ಲಿ, ಶೇಕಡ ಒಂದರ ಹತ್ತನೇ ಒಂದಂಶದಷ್ಟು ಅಲ್ಪ ಪ್ರಮಾಣದ ಡೋಸುಗಳೂ ಪರಿಣಾಮಕಾರಿಯಾಗಿ ಕೆಲಸ ಮಾಡಿದವು ಎಂದು ಎ. ಆರ್. ಎಸ್. ವಿಜ್ಞಾನಿಗಳು ತಿಳಿದರು. ಡರ್ಸ್‌ಬಾನ್ ಇರುವ ಡಿಪ್ ಟ್ಯಾಂಕ್‌ಗಳೂ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲವು. ಈ ಎರಡರಲ್ಲಿ ಯಾವುದೇ ವಿಧಾನವಾದರೂ ಒಂದು ವಾರದ ಅವಧಿಯಲ್ಲಿ ಉಣ್ಣೆಗಳನ್ನು ಹತೋಟಿಗೆ ತರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟನಲ್ಲಿ

P & S. C. No. 30/1968

ಮೃತ ಕೃಷ್ಣಯ್ಯ ಹೆಗ್ಡೆಯವರಿಗೆ ಬರತಕ್ಕ ಸೊತ್ತಿನ ಬಾಬ್ತು

ಎ ಮುತ್ತಯ್ಯ ಹೆಗ್ಡೆ— ಅರ್ಜಿದಾರರು

ಅರ್ಜಿದಾರರು ತನ್ನ ಮೃತಪಟ್ಟ ಸೋದರ ದೂರ ಉಡುಪಿ ತಾಲೂಕು ಪಂಡಾರು ಕೃಷ್ಣಯ್ಯ ಹೆಗ್ಡೆಯವರ ಹೆಸರಲ್ಲಿರುವ ರೂ. 450/- ಮೌಲ್ಯದ Government of India Securities- Post office National Savings Certificates ಗಳ ಬಾಬ್ತಿನ ಐವೇಜನ್ನು ವಸೂಲಿ ಬಾಬ್ತು ತನಗೆ ಸರ್ಟಿಫಿಕೇಟು ಕೊಡಿಸಬೇಕೆಂತ ಕೊಟ್ಟ ಅರ್ಜಿ ತಾರೀಖು 31-5-68ಕ್ಕೆ ತನ್ನಿಗೆ ಇದೆ. ಆ ಬಾಬ್ತು ಅಕ್ಷೇಪವಿದ್ದಲ್ಲಿ ಆ ದಿನದ ಬೆಳಿಗ್ಗೆ 11 ಘಂ. ಕೋರ್ಟು ಮುಂದೆ ಹಾಜರಾಗತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

(Sd) K. Rajaram Hegde

ಅರ್ಜಿದಾರರ ಎಡ್ವೊಕೇಟ್

ಮಂಗಳೂರು, 31—5—1968

ಚಂದನದ ಗೊಂಬೆ

ಚಂದನದ ಗೊಂಬೆಯಿದು
ಒಂದದಿ ಸೃಷ್ಟಿಸಿಹ
ಚಂದಿರನ ತಂಗಾಳಿಯ ಲಿ
ಬಳುಕುತಿರುವ ಈ ಬಾಲೆ
ಎಲ್ಲಿಂದ ಬಂದಳೋ? ಈ ರಮ್ಯ ಧಾರೆ.
ತುರುಬಿನಲಿ ಹೂ ಮಂಡಿದು
ತಂಗಾಳಿ ಸೊಬಗಿನಲಿ
ಪೈರು ಮರೆತು ನಿಂತಿಹಳು
ಎಂಥ ರಮ್ಯದ ನೋಟ
ಕಣ್ ಮನಗಳ ಕೂಟ
ಕನಸಿನಾ ದೊರೆಯು ಕಾಣದೆ ಅವಳು
ತವಕದಿ ಕಣ್ ಮನ ಚದುರಿಸಿಹಳು
ಹಂಬಾಣ ನೋಟದಿ ಪೈರ ಕಟ್ಟ ಮಾಟದಿ
ಸೇರಿಗಿನ ಸಿಂಗಾರಿನಿಂತಿಹಳು ಮೆಟ್ಟಿಲೇರಿ
ಇಂದಿರನ ಕಾಣದೆ ಅಂದದಿ ನಿಂತಿರುವ
ಹುರಿಯೊಳ ಮನಸಿದು ಕಡಿವಾಣ
ಮಾಗುತಿದೆ
ಇಳಿಯನ ಕಾಣದೆ ತವಕದಲಿ ಸುಡುತಿದೆ
ಮೆಟ್ಟಿಲೇರಿ ನಿಂತವಳು ದಿಟ್ಟವಾಗಿರದೆ
ಕೆಳಗಿಳಿದಳವಳು ಇಳಿಯನ ಕಾಣದೆ
ಮುಖವೆಲ್ಲ ಬಾಡಿತ್ತು
ಮೌನತ್ರ ತುಂಬಿತ್ತು
ವ ನದಿಸಿಯು ಕಾಣದೆ ವ ಮತಿಯು
ನುಸುಳಿತ್ತು
ಉದ್ಯಾವಪಲೆಲ್ಲ ನಿದ್ದೆಯಿಂ ತುಂಬಿತ್ತು
ಹೆಜ್ಜೆ ಹೆಜ್ಜೆಗೂ ಚಿಂತೆ ಅವರಿಸಿತ್ತು
ಲತೆಯಂತೆ ಇದ್ದವಳು ಲಘುವಾಗಿ
ಹೊರಟಳು
ಮುದ್ದಾದ ವ ನದಿಸಿಯು ಕಾಣದೆ ಅವಳು
ತಂಗಾಳಿ ಮೈಯೆಡ್ಡಿ ಪಡೆಯುತಿಹಳು

—ಅ. ಗ. ಜಯಕುಮಾರ

ಬೆಂಗಳೂರು ಆಯುರ್ವೇದಿಕ್ ಕಾಲೇಜು

ಅನುಶಾಸನ

ಸತ್ಯವನ್ನು ನುಡಿ.
ಧರ್ಮದಲ್ಲಿ ನಡೆ.
ಅಧ್ಯಯನವನ್ನು ಬಿಡಬೇಡ.
ಆಚಾರ್ಯರಿಗೆ ಪ್ರಿಯವಾದುದನ್ನು ಕೊಡು;
ಪರಂಪರೆಗೆ ಭಂಗ ತರಬೇಡ.
ಸತ್ಯವನ್ನು ತಪ್ಪಬೇಡ.
ಧರ್ಮವನ್ನು ಬಿಡಬೇಡ.
ಯೋಗ ಕ್ಷೇಮವನ್ನು ಉಪೇಕ್ಷಿಸಬೇಡ.
ಐಶ್ವರ್ಯವನ್ನು ಗಂಭಾವಿಸು.
ಕಲಿಯುವುದನ್ನೂ, ಕಲಿಸುವುದನ್ನೂ ಬಿಡಬೇಡ.
ದೇವಪಿತೃ ಕಾರ್ಯಗಳನ್ನು ಬಿಡಬೇಡ.
ತಾಯಿಯನ್ನು ದೇವರೆಂದು ಪ್ರೀತಿಸು.
ತಂದೆಯನ್ನು ದೇವರೆಂದು ಪೂಜಿಸು.
ಆಚಾರ್ಯರನ್ನು ದೇವರೆಂದ ಗೌರವಿಸು.
ಅತಿಥಿಗಳನ್ನು ದೇವರೆಂದು ಸತ್ಕರಿಸು.
ಶಿಂದ್ಯವಲ್ಲದ ಕೆಲಸಗಳು ಮಾತ್ರ ಮಾಡತಕ್ಕವು; ಬೇರೆಯವಲ್ಲ.
ನಮ್ಮ ನಡತೆಗಳಲ್ಲಿ ಒಳ್ಳೆಯದನ್ನು ಮಾತ್ರ ಅನುಕರಿಸು, ಬೇರೆಯದನ್ನಲ್ಲ.
ಶ್ರದ್ಧೆಯಿಂದ ಕೊಡತಕ್ಕದ್ದು.
ಶ್ರದ್ಧೆಯಿಲ್ಲದೆ ಕೊಡತಕ್ಕದಲ್ಲ.
ಸಂತೋಷದಿಂದ ಕೊಡತಕ್ಕದ್ದು.
ನಮ್ರತೆಯಿಂದ ಕೊಡತಕ್ಕದ್ದು.
(ದೇವರ) ಭಯದಿಂದ ಕೊಡತಕ್ಕದ್ದು
ಸೌಹಾರ್ದದಿಂದ ಕೊಡತಕ್ಕದ್ದು.

ಇದು ಅಪ್ಪಣೆ.
ಇದು ಉಪದೇಶ.
ಇದು ತಿಳುವಳಿಕೆಯ ತಿರುಳು.
ಇದು ನಡತೆಯ ವಿಧಿ.
ಹೀಗೆ ಮಾಡತಕ್ಕದ್ದು.
ಹೀಗೆಯೇ ನಡೆದ ಕೊಳ್ಳತಕ್ಕದ್ದು.

(ತೈತ್ತಿರೀಯೋಪನಿಷದ್)

ಕರ್ನಾಟಕ ಸಂಘ, ಉಡುಪಿ

ಇವರ ಜನಪ್ರಿಯ ಪ್ರಕಟಣೆಗಳು

***

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ॥ ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಡಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭಾಗ್ಯವತಿ)

ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

ವಾರ್ಷಿಕೋತ್ಸವ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘ ಇದರ 24ನೇ ವಾರ್ಷಿಕೋತ್ಸವವು ದಿನಾಂಕ 23ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಯಶಸ್ವಿಯಾಗಿ ನಡೆಸಲ್ಪಟ್ಟಿತು.

ಸಮಾರಂಭದ ಅಂಗವಾಗಿ ಜರಗಿದ 'ಭಕ್ತ ಸುಧನ್ವ' ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯಲ್ಲಿ ಶ್ರೀಗಳಾದ ನಾವೂರು ಜಯರಾಮ (ಹಾಡುಗಾರಿಕೆ) ಎಂ. ಕೃಷ್ಣ ಭಟ್ (ಮೃದಂಗ) ಬಂಡ್ಯಡ್ಕ ರಾಮಕೃಷ್ಣ (ಚೆಂಡೆ) ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್(ಸುಧನ್ವ) ಯು. ಬಿ ಗೋವಿಂದ ಭಟ್ ಸಾಹಿತ್ಯ ಸೇವಕ ಜಾಲ್ಸೂರು (ಅರ್ಜುನ) ಕೀರಿಕ್ಕಾಡು ಸುಬ್ರಹ್ಮಣ್ಯ ಭಟ್ (ಪ್ರದ್ಯುಮ್ನ) ಡಾ॥ ರಮಾನಂದ ಬನಾರಿ(ಶ್ರೀ ಕೃಷ್ಣ) ಮುಂತಾದವರು ಪಾಲ್ಗೊಂಡಿದ್ದರು.

ತದನಂತರ ಪ್ರದರ್ಶಿಸಲ್ಪಟ್ಟ 'ಶ್ರೀಕೃಷ್ಣ ವಿಜಯ' ಎಂಬ ಯಕ್ಷಗಾನ ನಾಟಕದಲ್ಲಿ ಸರ್ವಶ್ರೀ ಪಡ್ಲ ಗೋಪಾಲಕೃಷ್ಣ ಭಟ್, ಕೀ. ವ ಕೇಶವ(ಹಾಡುಗಾರಿಕೆ) ಎಂ. ಕೃಷ್ಣ ಭಟ್, ಬಂಡ್ಯಡ್ಕ ರಾಮಕೃಷ್ಣ (ಹಿಮ್ಮೇಳ) ಕಕ್ಕೇರ ಆಳ್ವ, ನಾ. ಜಯರಾಮ, ಕೆ.ವಿ.ನಾರಾಯಣ ರೈ, ಕೀನಕ್ಕ ಗೌಡ, ಬಿ.ವಿ ವಿನೋದ, ಕುಂಬಾಜೆ ಮಾಸ್ಟರ್ ಜತ್ತಪ್ಪ ರೈ, ರಾಮ ಪಾಟಾಳಿ, ಕಿನ್ಯಪ್ಪ ಗೌಡ, ಸಾಂಬಪ್ಪ ರೈ, ಕಲ್ಲಮೆ ಅಪ್ಪು ಪಾಟಾಳಿ, ಲಕ್ಷ್ಮಣ ಗೌಡ, ಕಲ್ಲಕ್ಕ ಬಾಬು ರೈ, ಮಾಸ್ಟರ್ ಸಾಂಬಕ್ಕ ರಾಧಾಕೃಷ್ಣ (ಪಾತ್ರಧಾರಿಗಳು) ಅವರು ಭಾಗವಹಿಸಿದ್ದರು.

ಈ ತನ್ನಳ್ಳಿ ಕುಮಾರಿ ಶಕಿಕಲಾ, ಪುಷ್ಪ ಗಂಧಿನಿಯರ ಹಿನ್ನೆಲೆ ಗಾಯನದಿಂದ ಕಳೆಗಟ್ಟಿ ಚಂದ್ರಿಕಾನೃತ್ಯ ಪ್ರದರ್ಶನವಿತ್ತು ಜನರಪ್ರಶಂಸೆಗೆ ಪಾತ್ರರಾದರು. ಅವರು ಮುಗಿಯುತ್ತಿರುವಾಗ ಮಾಸ್ಟರ್ ಡಿ ನಾರಾಯಣ ಬೇಡರ ನೃತ್ಯ ರೂಪಕವಿತ್ತು ಹಾಸ್ಯ ಚಟಾಕಿಗಳು ಪಾಲ್ಗೊಂಡುವು.

ಆರಂಭದಲ್ಲಿಡಾ॥ ಬನಾರಿಯವರುಎಲ್ಲರಿಗೂ ಸ್ವಾಗತ ಕೋರಿ ಯಕ್ಷಗಾನ ಸಂಘದ ಬೆಳವಣಿಗೆಯ ಕುರಿತು ತಿಳಿಯಪಡಿಸಿ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಕುಂದಾಪುರ ಮುನ್ಸೀಫ್ ಕೋರ್ಟನಲ್ಲಿ

O. S. 541/1967.

ಪರಮೇಶ್ವರಿ ಪುರಾಣಿಕ. —ವಾದಿ.

1 ಕಾಯಿಮ್ಮ, 2. ಮುಕೂರ, 3. ಬೈರ, 4. ಸುಬ್ಬಯ್ಯ —ಪ್ರತಿವಾದಿರು.

ಕುಂದಾಪುರ ತಾಲ್ಕು ಉಳ್ಳಿಂದ ಗ್ರಾಮದಲ್ಲಿರುವ ನಂದಮ್ಮನ ಮಗಳು 3ನೇ ಪ್ರತಿವಾದಿ ಮುಡೂರಿ ಹೆಂಗ್ಸಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿರು ವಾದಿಯ ತಂದೆ ಮೃತ ಅನಂತಯ್ಯ ಪುರಾಣಿಕರಿಗೆ ತಾ. 24.5.62 ರಲ್ಲು ರೂ. 752—00ಕ್ಕೆ ಬರಕೊಟ್ಟ ಡಿ ಮೊಂಡು ನೋಟಿನ ಬಾಬ್ತು ಹಣ ಬಡ್ಡಿಸಹಿತ ಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 8-7-68ಕ್ಕೆ ಮೇಲಿನ ಕೋರ್ಟನಲ್ಲಿ ತನ್ನಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಞಾಪಿಸಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುವುದೆ.

N. S. Parameshwariah
Advocate for Plff.
Date 1—3—68, Coondapoor.

ಚಂದಾದಾರರು

ಶಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಮನಿಯಾರ್ಡರು ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

—ಮೆನೇಜರ್, ನವಯುಗ.

ಚಿರಂಜೀವಿ

(ಎರಡನೇ ಪುಟದಿಂದ)

'ಅದೊಂದು ಅದ್ಭುತ ಕಥೆ...' ಎಂದು ಕೃಷ್ಣಪ್ಪ ನಡೆದ ಘಟನೆಯನ್ನು ಪಂಡಿತರಿಗೆ ತಿಳಿಸಿದರು.

"ನಿಜಕ್ಕೂ ಇದೊಂದು ಪವಾಡ ಕೃಷ್ಣಪ್ಪ'

"ಜಾತಕ ತಂದಿದ್ದೇನೆ ನೋಡಿಬಿಡಿ ಪಂಡಿತರೆ' ಎಂದರು ಕೃಷ್ಣಪ್ಪ.

ಪಂಡಿತರು ಮನೋಹರನ ಜಾತಕವನ್ನು ಕೈಗೆ ತೆಗೆದುಕೊಂಡು ಕೂಲಂಕಷವಾಗಿ ಗುಣಿಸಿದರು, ಎಲ್ಲವನ್ನು ಅರಿತರು. ಅವರಿಗೆ ಪರಮಾಶ್ಚರ್ಯವಾಯಿತು.

"ಕೃಷ್ಣಪ್ಪ'

"ಏನೆ ಪಂಡಿತರೇ'

"ನಿಮ್ಮ ಮೊಮ್ಮಗ ಮನೋಹರ ಅಂಶ ಪುರುಷ....ಹಾವನ್ನು ಗೆದ್ದ ಮಹಾಪುರುಷ....ಗಂಡಾಂತರ ಕಳೆಯಿತು....ಒಂದು ಹಾವು ಹೆಡೆ ಬಿಚ್ಚಿ ತಲೆಯ ಬಳಿ ಇರುವುದು ಎಂದರೇನು?... ಕಚ್ಚದೆ ಬಿಡುವುದು ಎಂದರೇನು....ಈ ಮಗುವಿನಲ್ಲಿ ಯಾವುದೋ ದೈವಿಕ ಶಕ್ತಿ ಇದೆ...ಅದರಿಂದಲೇ ಇಂತಹ ಅಪಾಯದಿಂದ ಪಾರಾದ....ಏನೂ ಯೋಚಿಸಬೇಡಿ....ನಿಮ್ಮ ಮೊಮ್ಮಗ ಚಿರಂಜೀವಿ...ಅವನು ಭಾಗ್ಯಶಾಲಿ..ಅವನು ಅಭೂತಪೂರ್ವವಂತ...ನಿಮ್ಮ ಪುಣ್ಯ, ಧರ್ಮ....ಸಾತ್ವಿಕ ನಡತೆ ಅವನನ್ನು ಕಾಪಾಡುತ್ತದೆ..." ಎಂದರು ಪಂಡಿತರು.

ಕೃಷ್ಣಪ್ಪನವರೊಂದಿಗೆ ಪಂಡಿತರು ಮನೆಗೆ ಬಂದರು. ಮನೆಯಲ್ಲಿ ಹೋಮ ಹವನಗಳನ್ನು ನಡೆಸಿದರು. ಭಕ್ತಿಯಿಂದ ಭಗವಂತನನ್ನು ಪೂಜಿಸಿ ಮನೆಯವರಿಗೆಲ್ಲ ತೀರ್ಥಪ್ರಸಾದಗಳನ್ನು ಹಂಚಿದರು.

"ನಿಮ್ಮ ಮಗ ಸಾಮಾನ್ಯನಲ್ಲಮ್ಮ ಅಂಶಪುರುಷ...ಭಾಗ್ಯಶಾಲಿ..... ಅವನಲ್ಲಿ ಯಾವುದೋ ಅಗೋಚರ ಶಕ್ತಿ ಇದೆ.... ನೀವೇನೂ ಯೋಚಿಸಬೇಡಿ....ಹಾವು ಒಂದು ಹೆಡೆ ಬಿಚ್ಚಿಯೋಡುದು ಅವನಿಗೆ ಒಂದು ಬಗೆಯಲ್ಲಿ ಅನುಗ್ರಹ" ಎಂದರು ಪಂಡಿತರು.

"ನಿಮ್ಮ ಆಶೀರ್ವಾದ ಪಂಡಿತರೆ" ಎಂದಳು ಲಕ್ಷ್ಮಿ.

ಮನೋಹರ ಕಿಲಕಿಲನೆ ನಗುತ್ತ ಮಲಗಿದ್ದ.

o o o

ಗೆಳೆಯ ರಂಗ ನನಗಾಗಿ ಕಾಯುತ್ತಿದ್ದ

"ಹೊರಡೋಣವೇ?" ಎಂದೆ.

"ಹೊತ್ತಾಯ್ತು, ಕಣೋ — ಎಲ್ಲರು ಬಂದಿರುತ್ತಾರೆ...ನಾವೇ ಪ್ರಧಾನ."

"ಇವತ್ತು ಹೊಸದೇನು ಅಲ್ಲವಲ್ಲ... ನಮ್ಮ ಹಣೆಯ ಬರಹ."

"ಮಾತು ಬೇಡ.... ಇನ್ನು ಹೊರಡೋಣ" ಎಂದು ಮೋಟಾರು ಸೈಕಲ್ ಸ್ಟಾರ್ಟ್ ಮಾಡಿದ.

ನಾವು ಮತ್ತು ರಂಗ ಕೈದಾಳವನ್ನು ತಲುಪಿದೆವು.

ಚೆನ್ನಕೇಶವನ ದೇವಾಲಯದ ಅಂಗಳದಲ್ಲಿ ಗೆಳೆಯರು ಹರಟೆ ಹೊಡೆಯುತ್ತಾ ಕುಳಿತಿದ್ದರು, ನಮ್ಮಿಬ್ಬರನ್ನು ಆದರದಿಂದ ಗುಂಪು ಸ್ವಾಗತಿಸಿತು. ಗೆಳೆಯ ರಾಜು ಗುಂಪಿನ ಹೊಸ ಸದಸ್ಯರನ್ನು ಪರಿಚಯ ಮಾಡಿಕೊಟ್ಟ. ಬಂದ. ಸಂತೋಷದಿಂದ ಕೈ ಮುಗಿದೆ. ಇವರು ಡಾ. ಚಿರಂಜೀವಿ ಸುಪ್ರಸಿದ್ಧ ವೈದ್ಯರು....ಗುಂಪಿನ ಗಣ್ಯ ಸದಸ್ಯರು...ಕಲಾ ಭಿಮಾನಿಗಳು ಇವರು ವಾಸೀ. ಹೆಚ್ಚು ಪರಿಚಯದ ಅಗತ್ಯವಿಲ್ಲ ಪರಿಚಯ...' ಎಂದ ರಾಜು. ಡಾ. ಚಿರಂಜೀವಿಯರ ಕೈಹಿಡಿದು "ಫಿಮ್ಮ ಹೆಸರು ತುಂಬ ಸೊಗಸಾಗಿದೆ ಡಾಕ್ಟರ್..." ಎಂದೆ

"ಏಕೆ ವಿಚಿತ್ರವಾಗಿದೆಯೆ?" ಎಂದು ನಗುತ್ತಾ ನುಡಿದರು ಚಿರಂಜೀವಿ.

"ವಿಚಿತ್ರ ಎಂದು ಹೇಳಲಾರೆ...ಆದರೆ ಏನು ಜನ ಚಿರಂಜೀವಿಗಳು ಧನಪಿಗೆ ಬರುತ್ತಾರೆ..ಅವರ ಜೊತೆಯಲ್ಲಿ ನೀವೊಬ್ಬರು". ಎಂದೆ.

"ಅವರ ಹೆಸರಿನ ಹಿನ್ನೆಲೆಯಲ್ಲಿ ದೊಡ್ಡ ಕಥೆಯೇ ಅಡಗಿದೆ'

"ಹಾಗೇನ ..ಆ ಕಥೆ ಕೇಳುವ ಸುಯೋಗ ಯಾವಾಗ' ಎಂದೆ ಉತ್ಸಾಹದಿಂದ.

"ಆ ಕಥೆಯನ್ನು ನಾವು ಹೇಳಿದರೆ ಪ್ರಯೋಜನವಿಲ್ಲ. ಚಿರಂಜೀವಿಯವರೇ ಹೇಳಬೇಕು"

"ನಾನು ಕಥೆಗಾರನಲ್ಲವಲ್ಲ?

"ನೀವು ಹೇಳಿ..ಹೇಗೆ ಹೇಳಿದರೂ ಸ್ವಾರಸ್ಯವಾಗಿರುತ್ತದೆ"

"ಅದು ನಿಮ್ಮದುರಿನಲ್ಲಿ!"

"ಹೇಳಿ ಡಾಕ್ಟರೆ, ನಾನು ಖಂಡಿತ ಆಕ್ಷೇಪಿಸುವುದಿಲ್ಲ" ಎಂದೆ.

"ಸಂತೋಷ....ನಿಮ್ಮ ಇಷ್ಟಕ್ಕೆ ಏಕೆ ಭಂಗತಂದಲಿ? ಹೇಳುತ್ತೇನೆ' ಎಂದು ಚಿರಂಜೀವಿ ಕಥೆಯನ್ನು ಆರಂಭಿಸಿದರು.

ಮೊದಲು ನೀವು ಓದಿದ ಕಥೆ ಡಾ. ಚಿರಂಜೀವಿಯವರು ಹೇಳಿದ ಕಥೆ.

ವಿಚಿತ್ರ ವಿಶ್ವ

ಅವರು ಪಾದಚಾರಿಯಾದರು

ಬಹುಕಾಲದ ಹಿಂದೆ, ಇಂದು ಸುಸಂಸ್ಕೃತವೆಂದು ಪರಿಗಣಿತವಾದ ದೇಶ ಬ್ರಿಟನ್ನು ಕೂಡ ಹಿಂದೆಯೇ ಇದ್ದ ಕಾಲ. ಸಾರಿಗೆ ಸಂಪರ್ಕದಲ್ಲಿ ಅಭಾವ—ಜನರು ತಂತಮ್ಮ ಕೆಲಸಕ್ಕೆ ನಡೆದೇ ಹೋಗಬೇಕು —ಪಾದಚಾರಿಯಾಗಿಯೇ ಮರಳಬೇಕು. ದೇಶಕ್ಕೆ ಭಾರೀ ಶ್ರಮ—ಆದರೆ, ಜನರಿಗೆ ಹೃದಯ ಸಂಬಂಧಿ ರೋಗವೆಂಬ ದೇ ಇರಲಿಲ್ಲ. ಎಲ್ಲ ನಾಗರಿಕರೂ ಸದೃಢರು ಕಷ್ಟನ್ನೂ ಅರಗಿಸಿಕೊಳ್ಳಬಲ್ಲಂಥವರು.

ಸಮಯ ಕಷ್ಟಿ ಪಕ್ಕ ತಿರುವಿತ. ಪಾಶ್ಚಾತ್ಯ ದೇಶಗಳಲ್ಲಿ ಜೀವನ ಪಟ್ಟ ಮಗಿಲು ಪಟ್ಟಿತು. ಗಂಡಸರು —ಹೆಂಗಸರು—ಎಲ್ಲರೂ—ಕುಳಿತೇ ಕೆಲಸ ಮಾಡುತ್ತಾರೆ ವಾಹನಗಳಲ್ಲಿಯೇ ಸಂಚರಿಸುತ್ತಾರೆ. ಲಿಫ್ಟುಗಳಲ್ಲಿಯೇ ಮೇಲೇರುತ್ತಾರೆ, ಇಳಿಯುತ್ತಾರೆ. ಪಾರ್ಕಿಂಗಲ್ಲಿ ಕಳೆತು ಕೊಂಡಲ್ಲಿಯೇ ಟೆಲಿವಿಜನ್—ಸಿನಿಮಾ ನೋಡುತ್ತಿರುತ್ತಾರೆ. ರಾತ್ರಿ ಹಾಯಾಗಿ ಮಲಗುತ್ತಾರೆ.

ಇವರಿಗೆ ದೇಹ ದಂಡಿಸುವ ಪ್ರಮೇಯವೇ ಇಲ್ಲ. ಹೆಚ್ಚೆಂದರೆ, ಊಟ ಮಾಡುವಾಗ ಆಹಾರವನ್ನು ಹಲ್ಲುಗಳಿಂದ ಜಗಿಯುವುದಷ್ಟೇ ಇವರ ಪಾಲಿಗೆ ಬಂದಿರುವ ದೊಡ್ಡ ತ್ರಾಸ-ವ್ಯಾಯಾಮ.

ತಿಂದ ಆಹಾರ ಜೀರ್ಣವಾಗಬೇಕಾದರೆ ಸಾಕಷ್ಟು ವ್ಯಾಯಾಮ ಬೇಕು. ದಂಡನೆಗೆರವಾದ ಪಾಶ್ಚಾತ್ಯರು ಕ್ಷೀಣಿಸುತ್ತಿದ್ದಾರೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹೃದಯ ರೋಗಕ್ಕೆ ಬಲಿಯಾಗುತ್ತಾರೆ— ಇದು ಬ್ರಿಟಿಷ್ ಡಾಕ್ಟರೊಬ್ಬರ ಅಭಿಮತ.

ಈ ಡಾಕ್ಟರು ಬಹಳ ಶ್ರೀಮಂತರು; ಹೃದಯ ರೋಗ ತಜ್ಞರು. ಸುಸಂಸ್ಕೃತ ಸುಖಾಗರಿಕ ದೇಶವೆಂದರೆಲ್ಲಿದ್ದುಕೊಂಡೂ ಇವರೀಗ ತಮ್ಮ ಕಾರನ್ನು ಕಾಯಿಬಿಟ್ಟಿದ್ದಾರೆ—ನಡೆದುಕೊಂಡೇ ಸಂಚಾರ—ತಮ್ಮ ಮನೆಯಿಂದ ಚಿಕಿತ್ಸಾಲಯದ ವರೆಗೆ ಲಂಡನ್ನದ ಬೀದಿಗಳಲ್ಲಿ ಪಾದಯಾತ್ರೆ—ನಡೆಯುತ್ತಾರೆ. ಇವರ ಮಾದರಿಯನ್ನು ಉಳಿದವರೂ ಅನುಸರಿಸಿದರೆ ಹೇಗೆ?

ಒಂದೆಡೆ ಕಾರುಗಳ ಖರೀದಿಗಾಗಿ ಮೇಲಾಟ; ಇನ್ನೊಂದೆಡೆ ಅಲ್ಪಗಳ ಮಾರಾಟ. ಪಾಶ್ಚಾತ್ಯರು ನಡೆದ ದಾರಿಯಲ್ಲಿ ನಾವೂ ನಡೆಯಬೇಕೆ?

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವ ಪ್ರಸಾದ

ಕುಂದಾಪುರ, ದ. ಕ.

ಫೋನ್: 77

ತಿಪಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಸಾಕೀಜಾತಿಯ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಾಲವಾದ ಹೊಟೆಲ್.

ರೈತನಿಗೆ

— ೧ —

ರೈತನೆ! ಎದ್ದೇಳ, ಬಂದಿಹುದು
ಮಳೆಗಾಲ!
ಮೂಡುವಾಗಿಹ ದಿಂದ. ಸೆಕೆಯುಕಾಲ;
ಮೈಗುಡುವ ಬಿಸಿಲ್ಲು, ಸೆಕೆಯು
ತಾಪವು ಇಲ್ಲ,
ಕಾನನದಿ ಉರಿಯ ತಿಹ ಕಾಳ್ಗಿಚ್ಚು
ಇಲ್ಲ.

— ೨ —

ಅಲ್ಲಿ ಸಾಗರತಾನ ಜೋರಾಗಿ ಗರ್ಜಿಸುತ
ನೀರ ತುಣಾಕುಗಳನ್ನು ಹೊರಗಟ್ಟುತ
ತಿಹನು,
ಪೆರೆಯ ರಾಷ್ಟ್ರಗಳಿಂದ ಯುದ್ಧ ಹೊಡಲು
ಬಂದ
ಸೇನೆ ತಾನೆಂಬಂತೆ ಭೋರ್ಗರೆಯು
ತಿಹನು.!

— ೩ —

ಮರುತನ ಬಲಿಯಲ್ಲಿ ಸಿಕ್ಕ ಮೋಡಗಳೆಲ್ಲ
ಒಂದಾಗಿ ಬಾನಿನಲಿ ಕೂಡುತಿಹವು,
ಮೇಘದಲಿ ತಿಕ್ಕಾಟ ಜೋರು,
ಜೋರಾಗುತಿದೆ,
ಗುಡುಗು, ಸಿಡಿಲ ಗಳಿಗೆ ಕೊಡೆಯು
ತಿಹವು.

— ೪ —

ಅದೋ, ನೋಡು, ಮೇಘಗಳು ದಕ್ಷಿಣಕೆ
ಸಾಗುತಿವೆ;
ಶಂಕರನ ದಿಸೆಯಲ್ಲಿ ವಿಂಚತಿಹುದು,
ಮಳೆ ಈಗಬರಬಹುದು ಇನ್ನೇನು ತಡವಿಲ್ಲ,
ನೀ ನೇಗಿಲನು ಹಿಡಿದು
ಹೊರಡಬಹುದು.

— ೫ —

"ಧಾರವಡದ ಬೆನ್ನೆಲುಬು' ಎನಿಸಿದವನೇ, ನಿನ್ನ
—ದೇಶದಲಿ ಆಹಾರ ಕಡಿಮೆ
ಯಾಗಿಹುದು;
ನೀನು ಬೆಳೆ ಬೆಳೆಸಿದರೆ ನವ ಗೆ ಸಿಗುವುದು
ಅನ್ನ
ಇಲ್ಲದಿರೆ ನಾವೆಂತು ಬದುಕಬಹುದು?

— ಶ್ರೀ ನ. ಭ ನೆಂಪು.

ಪ್ರೀತಿ

ಪ್ರೀತಿ ಎಂಬುದು ನೋಡು
ಚೆಲುವ ಗಿ ಲಾಬ
ಅತಿ ಮಧುರ ಕೋಮಲ
ಗೊತ್ತೇನು ಸಾಬ
ಪರಿಮಳದ ಹೀರಿ ನೂರದಿ
ನೋಡೆ ಚಂದ
ಹಿಡಿದು ಹಿಚುಕಿದರೆ ಇನ್ನೆಲ್ಲಿ
ಆನಂದ?

"ದೇವಕಿನಂದ

NAVAYUGA 6—6—1968
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಅಭಿಪ್ರಾಯ

ದುಷ್ಕೃತ್ಯವನ್ನು ಹೇಗೆ ದೂರಮಾಡಬಹುದು?

ಬರೆದವರು :
ಶ್ರೀ ಕೆ. ಸಚ್ಚಿದಾನಂದ ಉಡುಪ.

ಮನುಷ್ಯನಿಗೆ, ಅವನು ಯಾವುದೇ ಪಂಗಡಕ್ಕೆ ಸೇರಿರಲಿ ಅಥವಾ ಯಾವ ಜಾತಿಯವನಾದರೂ, ಹೊಟ್ಟೆ ಬಟ್ಟೆ, ಆಚಾರ, ವಿಚಾರ, ವ್ಯವಹಾರಗಳ ಅವಶ್ಯಕತೆಗಳು ಇದ್ದೇ ಇರುತ್ತದೆ. ಸಾಧಾರಣವಾಗಿ ಅವನು ಆಚಾರ ವ್ಯವಹಾರಗಳಿಗಾಗಿ ಮೊದಲು ಹಣವನ್ನು ಪೆಚ್ಚುಮಾಡಿ ಉಳಿಸುವುದನ್ನು ತನ್ನ ಹೊಟ್ಟೆಬಟ್ಟೆಗಳಿಗಾಗಿ ಉಪಯೋಗಿಸುತ್ತಾನೆ. ಏಕೆಂದರೆ ಅವನಿಗೆ ಅದನ್ನು ಬಿಟ್ಟು ಜೀವಿಸಲು ಅಸಾಧ್ಯ. ಈ ಅವಶ್ಯಕತೆಗಳು ಅವನಲ್ಲಿಲ್ಲದಿದ್ದರೆ ಅವನು ಕಳ್ಳತನ, ದರೋಡೆ ಮೊದಲಾದ ಕಾರ್ಯಗಳನ್ನು ಎಗ್ಗಿ ಹಣವನ್ನು ಶೇಖರಿಸುವ ಉಪಾಯ ಮಾಡುವನು ಅಥವಾ ದುರ್ಮಾರ್ಗದಲ್ಲಿ ನಡೆಯಲು ಯೋಚಿಸುವನು.

ಸಮಾಜದಲ್ಲಿ ಜನರ ರೀತಿ ನಿಯಮವನ್ನು ನೋಡಲಾರದೆ ಕಳ್ಳತನ ಹಾಗೂ ದರೋಡೆ ಮಾಡುವವರಿದ್ದರೆ ಇನ್ನು ಹಟಕ್ಕಾಗಿ ಯಾ ಕೆಡುಕು ಮಾಡಬೇಕೆಂಬ ಹಾಳು ಉದ್ದೇಶದಿಂದಕೆಲಸಮಾಡುತ್ತಾರೆ.

ಅವಶ್ಯಕತೆಗಳಿಗಿಲ್ಲದೆ ಕಳ್ಳತನ ಮಾಡುವವರಲ್ಲಿ ಮತ್ತೆ ಎರಡು ಪಂಗಡಗಳಿವೆ. ಮೈಬೆವರು ಸುರಿಸಿ ದುಡಿದರೂ ಅಥವಾ ಕಷ್ಟಪಡಲು ಸಿದ್ಧರಿದ್ದರೂ ಕೆಲಸ ಸಿಗದೆಲ್ಲದ ತಮಗೆ ಬೇಕಾಗುವಷ್ಟು ಸಿಗದಿದ್ದವರ ಕಾರಣ ಅ ಜನರು ಕಳ್ಳತನವನ್ನಿಸಿಕೊಳ್ಳುವಂತಹ ಕಾರ್ಯಗಳಲ್ಲಿ ಕೈಹಚ್ಚಲು ಮನಸ್ಸನ್ನು ಸೋಲು ಬಿಡುತ್ತಾರೆ. ಮೈ ಬಗ್ಗಿಸಿ ಕೆಲಸ ಮಾಡಲೊಲ್ಲದ ಪರರ ಒಡವೆಗಳನ್ನು ಕದ್ದು ಜೀವಿಸುವವರು ಮತ್ತೊಂದು ಪಂಗಡದವರು.

ಕೆಲವರು ತೀರ ಬಡವರು ಇರುತ್ತಾರೆ, ದುಡಿದರೂ ತಿನ್ನಲು ಸಿಗದಂತಹ ವ್ಯಕ್ತಿಗಳು. ಮತ್ತೆ ಕೆಲವರು ಇದಕ್ಕೆ ತದ್ವಿರುದ್ಧವಾಗಿರುವವರೂ ಇದ್ದಾರೆ. ಇವರನ್ನು ಪರಿಶೀಲಿಸಿ ನೋಡಿದಾಗ ಅವರಲ್ಲಿರುವ ಅಸಮಾನತೆ, ಇವರಲ್ಲಿನ ಪರಸ್ಪರ ಅವಿಶ್ವಾಸ, ಪರಸ್ಪರ ಸಹಕಾರ ಇವೆಲ್ಲವುದಕ್ಕೆ ಕಾರಣ ಕಳ್ಳತನ.

ಮುಂಜಾನೆಯಿಂದ ಸಂಜೆಯ ವರೆಗೆ ದುಡಿದ ಪರರ ಬೆಜಾನೆಗೆ ಹಣವನ್ನು ಸುರಿಸು ಸಂಜೆಗೆ ಬರಿಗೈಯಲ್ಲಿ ಬಂದರೆ, ಅಥವಾ ರಾತ್ರಿ ಹಗಲು ದುಡಿದು ಮೈಕೈ ನೋವೆನ್ನದೆ ಹೊತ್ತಿಗೊಪ್ಪತ್ತು ಊಟವಿಲ್ಲದಿದ್ದರೂ ಬೆಳೆಯನ್ನು ಬೆಳೆಸಿ, ಬೊಜ್ಜು ಬೆಳೆಸುವವನ ಬೊಜ್ಜಿಗೆ ಮತ್ತಷ್ಟು ತುಂಬಿಸಿ ಮನೆಗೆ ಬರಿಗೈಯಲ್ಲಿ ಬಂದರೆ ಜಗತ್ತಿನ ಬಡಜನರು ದಿನೇದಿನೇ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬಡವರಾಗುತ್ತಾರೆ. ಹಣವಂತರು ದಿನೇದಿನೇ ಶ್ರೀಮಂತರಾಗುತ್ತಾರೆ. ಹೀಗಾಗಿ ಹಿಂದೊಸ್ಥಾನದ ಕೋಟಿಗಟ್ಟಲೆ ಜನರು ಒಂದು ಹೊತ್ತು ಹೊಟ್ಟೆ ತುಂಬಾ ಉಂಡರೆಂದರೆ ಅದೊಂದು ದೊಡ್ಡ ಔತಣವೆಂದು ತಿಳಿಯುವರು. ಹೀಗಿರುವಾಗ ಕಳ್ಳತನವೆಂಬುದು ಹೇಗೆ ಕಡಮೆಯಾದೀತು? ಪರರ ಒಡವೆಗಳನ್ನು ಅಪಹರಿಸುವುದುಕಳ್ಳತನವೆಂದು ತಿಳಿದುಕೊಂಡರೆ ಬಡವರೆ ಹಣವನ್ನು ಧನವಂತರು ಅಪಹರಿಸುತ್ತಾರೆ. ಬಡವರು ಶ್ರೀಮಂತರ ಹಣವನ್ನು ಅಪಹರಿಸುತ್ತಾರೆ ಐಶ್ವರ್ಯವಂತರ ಬಡವರು ಶ್ರಮಶಕ್ತಿ ಧನವನ್ನು ಕಾನೂನಿನ ಸಹಾಯದಿಂದ ಹಗಲಿನಲ್ಲಿ ಕದಿಯುತ್ತಾರೆ. ಬಡವರು ಕಾನೂನಿನ ಸಹಾಯವಿಲ್ಲದೆ ಸಮಯ ಕಾಯುತ್ತಿದ್ದು ಅನುಕೂಲ ಒದಗಿದಾಗ ಧನಿಕರ ಹಣವನ್ನು ಕದಿಯುತ್ತಾರೆ. ಅಂದರೆ ತಮ್ಮಿಂದಲೇ ಕದಿಯಲ್ಪಟ್ಟ ಹಣವನ್ನು ದೈವೀ ನ್ಯಾಯವನ್ನು ಅನುಸರಿಸುವರು. ಶಕ್ತಿಮದದಿಂದ ಕೂಡಿದವರು ಮಾಡುವ ಮಾನವೀ ಕಾನೂನಿನ ಪ್ರಕಾರ ಯೋಗ್ಯವೆನಿಸುವ ಕಳ್ಳತನವು ಶ್ರೀಮಂತರೋ ಅಥವಾ ತಮ್ಮಿಂದಲೇ ಶಕ್ತಿಯುದುರುಪಯೋಗದಿಂದ ಕಸಕೊಳ್ಳಲ್ಪಟ್ಟದ್ದನ್ನು ದೈವೀ ನಿಯಮಗಳನುಸಾರವಾಗಿ ವಾಪಸು ಪಡೆದುಕೊಳ್ಳುವುದೇ? ಈ ಮಾನವೀ ಕಾನೂನುಗಳನ್ನು ಮಾಡುವವರು ಯಾರು? ನ್ಯಾಯನಿಯಾಮಕ ಸಭೆಗಳಿಗೆ ಹೋಗುವವರು ಯಾರು?

ಪೂರ್ವದಲ್ಲಿ, ಆಯಾಯ ಪ್ರದೇಶಗಳ ಜ್ಞಾನವೃದ್ಧರೂ ವಯೋವೃದ್ಧರೂ ಆದ ಹಿರಿಯರು ಜನರ ಆಚರಣೆ ವಿಚಾರಣೆಗಳನ್ನು ಸ್ಥಿರಪಡಿಸಿ ಸಮಾಜವು ಉನ್ನತ ಪರಿಸ್ಥಿತಿಯಲ್ಲೇರಬೇಕೆಂದು ಆ ಸಮಾಜಕ್ಕೆ ಯೋಗ್ಯವಾದ ಕಾನೂನುಗಳನ್ನು ಮಾಡುತ್ತಿದ್ದರು. ಇಂದು ಇಂತಹ ನ್ಯಾಯನಿಯಾಮಕ ಸಭೆಗಳು ವಿಚಿತ್ರ ಸ್ಥಿತಿಯನ್ನು ಹೊಂದಿವೆ. ಪ್ರಜೆಗಳ ಪ್ರತಿನಿಧಿಯೆಂದೆನಿಸಿ ಆ ಸಭೆಗಳಿಗೆ ಹೋಗಿ ಅಲ್ಲಿ ತಮ್ಮ ಸ್ವಾರ್ಥಗಳನ್ನು ಸಾಧಿಸಿಕೊಳ್ಳುತ್ತಾರೆ. ಧನಿಕರು ತಮ್ಮ ಧನವನ್ನು ದುರುಪಯೋಗಿಸಿ ಜನರ ಕಡೆಯಿಂದ "ವೋಟು"ಗಳನ್ನು ಸ್ವೀಕರಿಸಿ, ಆ ಸಭೆಗಳಿಗೆ ಹೋಗಿ ಅಲ್ಲಿ ತಮ್ಮ ಹಿತಸಾಧನೆಗಳನ್ನು ಪಡೆಯುವ ಉದ್ಯೋಗದಲ್ಲಿರುತ್ತಾರೆ. ತಮ್ಮ ಶಕ್ತಿಯನ್ನು ಬೆಳೆಸಿಕೊಳ್ಳುವುದೇ ಅವರ ಮುಖ್ಯ ಧ್ಯೇಯವಾಗಿರುವಾಗ ಅವರು ಕಾನೂನುಗಳನ್ನು ಮಾಡುವ ರೀತಿ ಎಂತು? ಇದೆಲ್ಲವನ್ನು ಕಂಡಾಗ ಸರಕಾರವೆಂಬುದು ಬರೇ ಮಾನವ ಮಾತ್ರನಿಗೆ ಇರದೆ ಅದು 'ಗುಣವಂತ'ನದುವೆನ್ನುವ ಅರ್ಥವಾಗುತ್ತದೆ. ಹೊಣೆಯಿದ್ದವರು ಕೇಳುವುದು ಸರಕಾರದ ಕೆಲಸ.

ಹೀಗಿರುವಾಗ ಕಳ್ಳತನದ ನಿವಾರಣೆಯೇ ಪಾಯ? ಕಳ್ಳತನವನ್ನು ವಿಶೇಷತಃ ಯಾರೂ ವಿನಾಕಾರಣ ಮಾಡುವುದಿಲ್ಲ. ಜನರಿಗೆ ತಮ್ಮ ತಮ್ಮ ಅವಶ್ಯಕತೆಗಳು ನೀಗುವಷ್ಟು ಸಿಕ್ಕಿದರೆ ಅವರಿಗೇನೂ ಹೆಚ್ಚಿಗೆ ಬೇಕಾಗುವುದಿಲ್ಲ. ಕಾಯಿದೇಶೀರೆ ಬಡಜನರ ಲೂಟಿಯಾಗುತ್ತಿರುವುದುನಿಲ್ಲಬೇಕು. ಸರಕಾರವು ಅಕಂಖ್ಯ ಬಡಜನರದು, ಬಡಜನರಿಗಾಗಿ ನಿಲ್ಲಬೇಕು. ಶ್ರಮಪಡದ ವರದೇ ಶ್ರಮದಿಂದ ಉತ್ಪತ್ತಿಯಾದ ವಸ್ತುವಿನಲ್ಲಿ ಅಥವಾ ಅದರ ಮೂಲಕಸ್ವತ್ತಿನಲ್ಲಿ ಹಕ್ಕಿರತಕ್ಕದ್ದು. ಅಂದರೆ ಸೋಮಾರಿತನದಲ್ಲಿ ಕುಳಿತು ಬೇರೆ ಜನರಿಂದ ತಮಗೋಸ್ಕರ ಕೆಲಸ ಮಾಡಿಸಿಕೊಂಡು ಬೊಜ್ಜು ಬೆಳೆಸಿಕೊಂಡು ಕುಳಿತಿರುವವರಿಗೆ ಈಗಿರುವ ಹಕ್ಕು ತಪ್ಪುವುದು. ಎಂದಿಗೆ ಶ್ರಮಪಡಲ ಹಿತಕ್ಕಷ್ಟಿಯು ಜಗತ್ತಿನಲ್ಲಿ ಶ್ರಮಜೀವಿಗಳೇ ಶ್ರಮದ ಬೆಲೆಯನ್ನು ಕಟ್ಟುವವರಾಗುವರೋ ಅಂದೇ ಜಗತ್ತಿನ ಅಸಮಾನತೆಗಳು ತಗ್ಗುವುವು. ಜನಸಾಮಾನ್ಯವು ಸುಖವನ್ನು ಕಾಣುವುದು. ಕಳ್ಳತನವೆನಿಸಿಕೊಳ್ಳುವ ಯಾ ದರೋಡೆಯೆಂಬ ಕೃತಿಯು ಜಗತ್ತಿನಿಂದ ಜಹಾಪಟ್ಟಿಗೆ ಪಾರಾಗುವುದು.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪ್ರ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಎಂ. ಎಸ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಂ. ಬಿ. ಬಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹಪೈಕ್ಯ. ಹೊರೆ ವಿಧಾನ ಸಮಸ್ಯಾತ್ಮಕಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರ. ಪ್ರತ್ಯೇ ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
S. C. 261/1967.

ಲಕ್ಷ್ಮೀನಾರಾಯಣ ವೈಲಾಯ — ವಾದಿ
1. ಲಚ್ಚವ್ವ ಸೆಟ್ಟಿ, ಲಕ್ಕಿಯ ಸೆಟ್ಟಿರ ಮಗಳು. 2. ಸಂಪಿಯ ಶೆಟ್ಟಿ, ಲಚ್ಚವ್ವ ಸೆಟ್ಟಿರ ಮಗ.

ಕಾರ್ಕಳ ತಾಲ್ಲೂಕು ಕುಡ್ಲೂರು ಗ್ರಾಮದ ಕಾನಬೆಟ್ಟು ಹಿಡ್ಲು ಎಂಬಲ್ಲಿರುವವರು— ಪ್ರತಿವಾದಿರು

ಸದ್ರಿ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಯ ಪಡಿಸುವುದೇನಂದ್ರೆ—

ನೀವು ವಾದಿರಿಗೆ ತಾ. 11—8—1965 ರಲ್ಲು ರೂಪಾಯಿ 225—00 ಕ್ಕೆ ಬರೆಕೊಟ್ಟ ಡಿಮಾಂಡ್ ಪ್ರೋಮಿಸರಿ ನೋಟಿನ ಅಸಲು ಒಡ್ಡಿ ರೂಪಾಯಿ 251—87ಕ್ಕೆ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾ. 12-6-1968ಕ್ಕೆ ನಿಮಗೆ ಅಕ್ಕರ ನೋಟಿಸಿನ ಬಗ್ಗೆ ಇಟ್ಟಿದೆ. ಆಕ್ಷೇಪಯಿದ್ದರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ದರೆ ನಿಮ್ಮ ಗೈರು ಹಾಜ್ರಿಯಲ್ಲಿ ದಾವೆ ತೀರ್ಮಾನವಾಗುವುದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff
Karkala, 26—5—68

"NAVAYUGA" Kannada Weekly is recommended for high Schools and Public Libraries by the Director of Public Instruction in Mysore, Bangalore vide their letter-No. CL-4,17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೧
No. 41

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೧೩—೬—೧೯೬೮

ಮಿತಿಮೀರಿದ ಕೃಪಾಂಕ

ಇತ್ತೀಚೆಗಿನ ವರ್ಷಗಳಲ್ಲಿ ಕಂಡು ಬರುತ್ತಿರುವ ಒಂದು ಸಂಗತಿ—ವಿದ್ಯಾಭ್ಯಾಸ ಮಟ್ಟದ ಇಳಿತ. ಇದರ ಪರಿಣಾಮ—ವಿದ್ಯಾರ್ಥಿಗಳ ಶಿಕ್ಷಣೇತರ; ಅಧಿಕ ಸಂಖ್ಯೆಯಲ್ಲಿ ಅನುತ್ತೀರ್ಣತೆ— ಸರಕಾರದ ಬೊಕ್ಕಸಕ್ಕೆ, ಮಕ್ಕಳ ಹೆತ್ತವರ ಕಿಸೆಗೆ ಕತ್ತರಿ—ರಾಷ್ಟ್ರೀಯ ದರೋಡೆ ಇದೇ ರೀತಿ ನಮ್ಮ ಪ್ರಗತಿ ಪಡೆಯುತ್ತ ಹೋದರೆ, ಇದು ಎಲ್ಲಿಯ ವರೆಗೆ ಬಂದು ಮುಟ್ಟೀತು?—ವಿಚಾರವಂತರು ವಿಚಾರಿಸಬೇಕಾದ ಅಂಶ ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪರಿಣಾಮವನ್ನು ನೋಡಿದ ಮೇಲಂತೂ ಪ್ರತಿಯೊಬ್ಬರ ಎದೆಯೂ ಒಡೆದೇ ಹೋಗುವಂತಹ ಪರಿಸ್ಥಿತಿ. ಇಡಿಯ ರಾಜ್ಯದ ಸರಾಸರಿ ಪರಿಣಾಮ ಸೇ. ೩೩.೭. ಸುಮಾರು ಮೂಕರಲ್ಲೆಲ್ಲಿಂದಂತೆ ಅಂದರೆ ಯಾರಿಗೆ ತಾನೇ ದಿಗಿಲಾಗದೆ ಹೋದೀತು? ಹಿಂದಿನ ವರ್ಷ ಈ ಸರಾಸರಿ ೩೫ನ್ನು ಮೀರಿತ್ತು. ಈ ವರ್ಷ ಇದಕ್ಕಾಗಿ ಪಟ್ಟ ಪ್ರಯಾಸವನ್ನು ಭಗೀರಥನ ಗಂಗೆಯನ್ನು ತರುವುದಕ್ಕೂ ಪಟ್ಟಿರಲಾರನು. 'ಧಾರಾಳ'ಪ್ರವಾಣದಲ್ಲಿ 'ಗ್ರೇಸ್ ಮಾರ್ಕ್' ಸೇರಿಸಿಯೂ ಈ ಪರಿಣಾಮವಾದರೆ, ನಿಜವಾದ ಉತ್ತೀರ್ಣತೆ ಇದರ ಮೂಕರಲ್ಲೆಂದು ಭಾವವೇ ಇದ್ದಿರಬಹುದು.

ಶಿಕ್ಷಣ ಮಟ್ಟದ ಇಳಿತವನ್ನು ಮುಂದುವರಿದ ಜಿಲ್ಲೆ ದಕ್ಷಿಣ ಕನ್ನಡದಲ್ಲಾ ನೋಡುತ್ತೇವೆ. ಇಲ್ಲಿಂದ ಈ ಬಾರಿ ಒಟ್ಟು ೧೧,೩೮೭ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತುಕೊಂಡಿದ್ದು ಇವರಲ್ಲಿ ೭,೪೫೮ ಮಂದಿ ಉತ್ತೀರ್ಣರಾಗಿದ್ದಾರೆ; ಅಂದರೆ ಸೇ. ೭೧.೫. ಕಳೆದ ವರ್ಷ ಈ ಸರಾಸರಿಯು ಸೇ. ೭೪.೨ ಇತ್ತೆಂಬುದನ್ನು ನಮ್ಮ ನೆನಪುವಾಗ ಈ ಜಿಲ್ಲೆಯೂ ಹಿಂದೆ ಸರಿಯುತ್ತ ಒಂದಿದೆಯೆಂಬುದನ್ನು ಮರೆಯಲಾಗದುವುದಿಲ್ಲ. ಉತ್ತರ ಕನ್ನಡವು ಭಾರೀ ಏಳ್ಗೆಯನ್ನು ಸಾಧಿಸಿದೆ. ಅದು ತನ್ನ ಸರಾಸರಿ ಉತ್ತೀರ್ಣತೆಯನ್ನು ಸೇ. ೧೧೧ ಕ್ಕೆ ಹೆಚ್ಚಿಸಿಕೊಂಡಿದೆ. (ಸೇ. ೫೨.೭) ಅಂತೂ ಬಿಜಾಪುರ, ಬೆಳಗಾಂವಿ, ರಾಯಚೂರು, ಧಾರವಾಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪರಿಣಾಮ ಸೇ ೩೩ಕ್ಕಿಂತ ಕಡಮೆ, ಚಿತ್ರದುರ್ಗ ಕೊನೆಯ ಸ್ಥಾನ ಗಳಿಸಿದೆ--(ಸೇ ೧೩.೪) ಇದನ್ನು ಪಡೆಯುವುದಕ್ಕೂ ಅದು ಬಹಳ ಪ್ರಯತ್ನ ಮಾಡಿದೆ- ಸೇ. ೬೧ಕ್ಕೆ ಪರಿಣಾಮವನ್ನು ಇಳಿಸಿಕೊಂಡಿದೆ. ಪ್ರಥಮ ಶ್ರೇಣಿಗಳಿಸಿದವರ ಸಂಖ್ಯೆ ಒಟ್ಟು ೨೬೩೮. ಇದರಲ್ಲಿ ೬೭೧ ದಕ್ಷಿಣ ಕನ್ನಡದವರು—ಪ್ರಥಮ ಹತ್ತು ಸ್ಥಾನ ಪಡೆದವರಲ್ಲಾ ಇಬ್ಬರು ದಕ್ಷಿಣ ಕನ್ನಡದವರು. ಸೇ. ೮೫.೦೬ರಷ್ಟು ಅಂಕಗಳನ್ನು ಗಳಿಸಿ ಪ್ರಪ್ರಥಮ ಸ್ಥಾನ ಗಳಿಸಿದ ಶ್ರೀ ಎಚ್. ತಿರುಮಲ ರಾವ್ ಮಂಗಳೂರಿನ ಪದುವ ಹೈಸ್ಕೂಲಿನವನು. ಇದೆಲ್ಲವೂ ಜಿಲ್ಲೆಯ ಸೌಭಾಗ್ಯವೇ. ಆದರೆ, ನಮ್ಮ ಜಿಲ್ಲೆಯಲ್ಲಿಯೂ ಫಲಿತಾಂಶ ಇಳಿಮುಖವಾಗುತ್ತ ಬರುತ್ತಿರುವುದು ಮಾತ್ರ ಕೋಚಿಸುವಂತೆ. ಈ ಇಳಿತಕ್ಕೆ ಯಾವ ಪೂರ್ವ ಶಿಕ್ಷಣವಿಲ್ಲದೆ ಟ್ಯೂಟೋರಿಯಲ್ಸ್ ಮಂಟಪಕ್ಕೋ ನೇರವಾಗಿ ಯೋ ಪರೀಕ್ಷೆಗೆ ಕೂಡುವ ಖಾಸಗಿ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಬೆಳೆಯುವುದೂ ಒಂದು ಪ್ರಬಲ ಕಾರಣ. ಅದೇನೇ ಇದ್ದರೂ ಖಾಸಗಿ ಕುಳಿತುಕೊಳ್ಳುವವರೂ ದಕ್ಷಿಣ ಕನ್ನಡಿಗರೇ. ಅವರೂ ಜಿಲ್ಲೆಯ ಗೌರವ ರಕ್ಷಣೆಯಲ್ಲಿ ನೆರವಾಗಬೇಕು.

ಇಲ್ಲಿ ಒಂದು ಸಂಗತಿ ನೆನಪಾಗುತ್ತದೆ. ಬಹಳ ಹಿಂದೊಮ್ಮೆ ಶಿಕ್ಷಣ ಮಂತ್ರಿಗಳು ಸೇ. ಐವತ್ತರಷ್ಟು ಫಲಿತಾಂಶವನ್ನು ಗಳಿಸದ ಹೈಸ್ಕೂಲುಗಳಿಗೆ ಸಹಾಯ ಧನದಲ್ಲಿ ಕೋತ ಮಾಡುವುದಾಗಿ ಒಂದಷ್ಟಿಂತ ಹೆಚ್ಚು ಬಾರಿ ಹೊಂಗೆಡಬಂದ್ದಾರೆ. ಆದರೆ, ಇದು ವರೆಗೂ ಇದು ಕಾರ್ಯರೂಪಕ್ಕೆ ಬಂದಿಲ್ಲ—ಅಥವಾ ಹೀಗೂ ಹೇಳಬಹುದಾದರೆ, ಅಷ್ಟು ಗಂಡಾಂತರ ಸರಕಾರಕ್ಕಿಲ್ಲ ಏಕೆಂದರೆ, ಸಾಮಾನ್ಯವಾಗಿ ಈ ಹೊಸ ಬಗೆಯ ದಂಡನೆಗೆ ಮೊತ್ತಮೊದಲು ಗುರಿಯಾಗುವುದು ಸರಕಾರಿ ಶಾಲೆಗಳೇ. ಈ ಶಾಲೆಗಳನ್ನು ದಂಡಿಸುವುದು ಅಂದರೆ ಹೇಗೆ? ಆ ಶಾಲೆಗಳ ಅಧ್ಯಾಪಕರು ಸರಕಾರಿ ನೌಕರರು— ಜನ ಕರತೆರಲು ಕಟ್ಟಿಸಿದರೆ, ಕಂದಾಯವನ್ನು ದಂಡಿಸಲಾಗುವುದಿಲ್ಲ. ವಿದ್ಯಾರ್ಥಿ ಖಾಪಾಸಾದರೆ, ಉಪಾಧ್ಯಾಯರನ್ನು ದಂಡಿಸುವುದು ಅಂದರೆ, ಅದು ನ್ಯಾಯ ಹೇಗಾದೀತು? ವಿದ್ಯಾರ್ಥಿಕಾರಿಗಳ ಸರಾಸರಿಯನ್ನು ಮೀರಿಯೂ ದಂಡಿಸುವಲ್ಲಿ ನ್ಯಾಯವಿದೆಯೆ? ಮೇಲಾಗಿ, ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದ ಮೇಲೆ ಶಾಲೆಯ ಮಟ್ಟವನ್ನು ಅಳೆಯುವ ಮಾನದಂಡವಾಗದೆ - ಈ ಭದ್ರ ಕೋಟೆ ಗುಮ್ಮ ಭೇದಿಸುವುದು ಹೇಗೆ? ವಿದ್ಯಾರ್ಥಿಗಳಲ್ಲಿಯೂ ಇತ್ತೀಚೆಗಿನ ವರ್ಷಗಳಲ್ಲಿ ಒಂದು ಬಗೆಯ ಅಸಡ್ಡೆ ಕಂಡು ಬರುತ್ತಿದೆ. ಪಾಸು ಮಾಡಲು ಗ್ರೇಸ್ ಮಾರ್ಕು ಸೇರಿಸುತ್ತಾರೆ—ಆಗ ಪಾಸಾಗುತ್ತೇವೆ—ಯಾಕೆ ಕಷ್ಟಪಡಬೇಕು?—ಇದು ಅಸ್ವಾಭಾವಿಕವೂ ಅಲ್ಲ, ಅಕ್ಷಮ್ಯವೂ ಅಲ್ಲ. ಆದರೆ, ಇದೇ ರೀತಿ ಮುಂದುವರಿದರೆ, ಮುಂದುವರಿದವರೂ ಹಿಂದುಳಿಯುತ್ತಾರೆ. ಹಿಂದುಳಿದವರ ಗತಿ? ಸರಕಾರದ ನೀತಿಯಲ್ಲೂ ಬದಲಾಗಬೇಕು. ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಅನುತೀರ್ಣರಾಗದಂತೆ ನೋಡಿಕೊಳ್ಳಲು ಗ್ರೇಸ್ ಮಾರ್ಕು ಸೇರಿಸುವುದು ಪರಿಹಾರವೆಂದೆಂದಿಗೂ ಆಗದು - ಈ ಸಂಪ್ರದಾಯ ವಿರುವ ತನಕ ಸಾಮಾನ್ಯ ವಿದ್ಯಾರ್ಥಿಗಳ ಅಭ್ಯಾಸ ಪಟ್ಟಾಗಿ ನಡೆಯುವುದಿಲ್ಲ. ವಿದ್ಯಾರ್ಥಿಯು ಒಂದೋ ಎರಡೋ ಮೂಣಗಳಿಗಾಗಿ ಅನುತ್ತೀರ್ಣನಾಗುವುದಾದರೆ ಮಾತ್ರ ಇಂತಹ ಕೃಪಾಂಕಗಳನ್ನು ಜೋಡಿಸಬಹುದಲ್ಲದೆ ಧಾರಾಳ ಸಂಖ್ಯೆಯಲ್ಲಲ್ಲ ರಾಜ್ಯದ ಸರಾಸರಿ ಉತ್ತೀರ್ಣತೆ ಕಡಮೆಯಾದರೂ ದುಃಖವಿಲ್ಲ, ಧಾರಾಳ ಕೃಪಾಂಕ ಕೊಡುವ ಪದ್ಧತಿಯನ್ನು ನಿಲ್ಲಿಸಬೇಕು, ಇಲ್ಲವಾದರೆ, ವಿಶ್ವವಿದ್ಯಾಲಯ ಮಟ್ಟವು ಪತ್ತಷ್ಟು ಕುಸಿಯುತ್ತದೆ. ನಮ್ಮ ವಿದ್ಯಾಭ್ಯಾಸದಲ್ಲಾ ಒಂದು ಬಗೆಯ ಉಬ್ಬರ (ನೋಟುಗಳಂತೆ) ತಲೆದೋರುತ್ತದೆ.

ಎರಡು ಹೆಜ್ಜೆಗಳು

ಹೊಸ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಜನಹಿತ ಸಾಧನೆಯಲ್ಲಿ ಸದಾ ತೊಡಗಿದ್ದಾರೆಂಬುದಕ್ಕೆ ಇತ್ತೀಚೆಗಿನ ಎರಡು ನಿರ್ಧಾರಗಳು ಬಲವಾದ ಸಾಕ್ಷಿಯೂ ಗಿವೆ ಪಂಪು ಸೆಟ್ಟುಗಳನ್ನು ವಂಜೂರು ಮಾಡಬೇಕಾದರೆ, ವಿದ್ಯುತ್ ಮಂಡಳಕ್ಕೆ ಸಾವಿರ ಸಾವಿರ ರೂಪಾಯಿಗಳ ರೇವಣಿಯ ಡಬೇಕು (ಸಾಲ ನೀಡಬೇಕು) ಎಂದು ಹಿಂದಿನ ಸರಕಾರ ನಿರ್ಧಾರ ಮಾಡಿತ್ತು. ಒಂದು ಸಾವಿರ ರೂಪಾಯಿಗಳ ಸಾಲ ನೀಡುವಷ್ಟು ಶಾಕತ್ತು ಕೃಷಿಕರ ಸಂಖ್ಯೆಯೆಷ್ಟು? ಇದರಿಂದ ರೈತ ಜನರಿಗೆ ವಿದ್ಯುತ್ ಮೀರಿದ ಅಸೌಕರ್ಯವಾದುದು ಎಂದು ಸರಕಾರದ ಗಮನಕ್ಕೆ ತಂದಾಗ, ವೀರೇಂದ್ರ ಪಾಟೀಲರು ತನ್ನ ಸಚಿವ ಸಂಪುಟದ ವೆಚ್ಚವೊದಲು ಸಭೆಗುಲ್ಲೇ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಈ ರೇವಣಿಯನ್ನು ಕೈತ್ತುಹಾಕುವ ನಿರ್ಧಾರ ಮಾಡಿ ರೈತ ಜನರ ಅಭಿನಂದನೆಗೆ ಪಾತ್ರರಾದರು. ವ್ಯಾಪಾರಿಗಳಿಗೆ ಲೈಸನ್ಸ್ ಫೀಸು ವಿಧಿಸುವ ನೀತಿಯ ಮಗಳಲ್ಲಾದ ಬದಲಾವಣೆಯನ್ನು ರಾಜ್ಯದ ವರ್ತಕರು ಬಲವಾಗಿ ವಿರೋಧಿಸಿ ಸೂರುಕಟ್ಟೆಯನ್ನೇ ಬಂದ್ ಮಾಡಿದ ಶಕ್ತಿ ಹರತಾಳವನ್ನಾಚರಿಸಿದರೂ ಪಾಟೀಲರು ಉತ್ತರ—ವಿಧಾನ ಸಭೆಯು ಮಂಜೂರು ಮಾಡಿದ ಶಾಸನವನ್ನು ಜಾರಿ ಮಾಡದೆ ಸಾಧ್ಯವಿಲ್ಲ. ಅದರಿಂದ ಏನಾದರೂ ಅಸೌಕರ್ಯವುಂಟಾಗುವುದಾದರೆ ದೂರೀಕರಣಕ್ಕೆ ಪ್ರಯತ್ನ ಮಾಡೋಣ. ವಿಧಾನ ಸಭೆ ಜನತಾ ಪ್ರತಿನಿಧಿಗಳ ಸಭೆ. ಜನಾಭಿಪ್ರಾಯವನ್ನು ಜನತೆಯೇ ಬದಲಿಸಬೇಕಲ್ಲದೆ ಮುಖ್ಯಮಂತ್ರಿಯಲ್ಲ—ಈ ಭಾವನೆ ನಿಜಕ್ಕೂ ಮೆಚ್ಚತಕ್ಕದ್ದು.

ನವ್ಯ ನವ್ಯ ಮಾತೃಭಾಷೆಯ ಬಗ್ಗೆ ನಾವು ಪ್ರೀತ್ಯಾದರಗಳನ್ನು ತೋರಿಸದಿದ್ದರೆ ನಾವು ನಿಜಕ್ಕೂ ಸ್ವರಾಜ್ಯ ಸುಖಿಗಳಾಗಲಾರೆವು. —ಮ. ಗಾಂಧಿ

ವಚನ ಸುಧೆ

ಅನರ್ಥಮರ್ಥತಃ ಪಶ್ಯ
ನರ್ಥೋ ಹ್ಯೈವಾಸ್ತ್ವನರ್ಥತಃ॥
ಇಂದ್ರಿಯೈರ್ಜಿತೈರ್ಜ್ಞಾನಃ
ಸ ದುಃಖಂ ಮನ್ಯತೇ ಸುಖಂ॥

ಇಂದ್ರಿಯ ವಶನಲ್ಲದ ಅಜ್ಞಾನಿಯು ಅರ್ಥವನ್ನು ಅನರ್ಥವೆಂದೂ ಅನರ್ಥವನ್ನು ಅರ್ಥವೆಂದೂ ತಿಳಿದು ವಿಷವನ್ನು ಸುಖವೆಂದೇ ಭ್ರಮಿಸಿ ತನ್ನ ಬದುಕನ್ನೇ ಕೇಡಾಗಿಸುತ್ತಾನೆ.

ಮುಖಚಿತ್ರ:

ಬಾಲದಿನಾಚರಣೆಯಿಂದು
ಜಾಗತಿಕ ಹಬ್ಬ.
ಬಲ್ಗೇರಿಯಾದಲ್ಲಿ ಜೂನ್ ೧೧ರಂದು
ಈ ಹಬ್ಬವನ್ನು ಆಚರಿಸುತ್ತಾರೆ.
ಅದರ ಒಂದು ದೃಶ್ಯ.

Navayuga Enterprise Ltd.,
Registered Office. Palukore, Udipi

NOTICE

The Register of members and Share transfer books of the Company will remain closed from 13th June to 10th July, 1968 (both days inclusive.)

(By order of the Board)

Udipi,
Date 2-6-1968.

K. Honnayya Shetty,
Managing Director.

ನರಸಣ್ಣನ ಸರಸ



ಶ್ರೀ ಶಿವಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾದುದಕ್ಕೂ ಚಿತ್ರದುರ್ಗ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶ ಕೀಳಾಗಿ ಕೃಷ್ಟವಾದುದಕ್ಕೂ ಏನೇನೂ ಸಂಬಂಧವಿರಲಾರದು....

ಗೇಹ ರಾಜ್ಯದಲ್ಲಿ

ಗಗನಚುಂಬಿಯುಡಿಯಲ್ಲಿ ಪಾತಳಿ

"ಅಲ್ರಿ, ಭಾರಿ ಸುಸಂಸ್ಕೃತರು ಅಂತ ಅಂದುಕೊಳ್ಳೋ ದೇಶಗಳಲ್ಲಿ ನಡೆವಷ್ಟು ಕೊಲೆಗಳು ವರ್ತಾವ ದೇಶಗಳಲ್ಲಿಯೂ ನಡೆಯುವುದಿಲ್ಲಾಂತ ತೋರುತ್ತೆ."

"ಹ್ಞೂಂ, ಒಂದು ರೀತಿಯಿಂದ ಅದೂ ಹೌದು ಅನ್ನು. ಆದರೆ, ಈ ಅನಾಗರಿಕತೆ— ಅಸಭ್ಯತೆ— ಅಸಂಸ್ಕೃತಿಯೆಲ್ಲ ಅಸಂಸ್ಕೃತ ಅಸಭ್ಯ ಅನಾಗರಿಕರ ಸಂಪರ್ಕದಿಂದ ಬಂದದ್ದು ಅಂತಿರಬಾರದ ?'

"ಅದೂ ಇರಬಹುದು— ಸ್ವಲ್ಪ ಮಟ್ಟಿಗೆ. ನೋಡಿ, ನಾನು ಹೇಳೋದಾದ್ರೆ, ಇಂದು ಯೂರು ಸುಸಂಸ್ಕೃತರು, ಸುನಾಗರಿಕರು, ಸುಸಭ್ಯರು ಅಂತ ಹೇಳಿಕೊಳ್ಳುತ್ತಾರೆಯೋ ಅವರು ಶುದ್ಧ ಕಾಡು ವಾಸಿಗಳು— ಪ್ರಾಣಿಗಳು..."

'ಈ ನಿರ್ಧಾರಕ್ಕೆ ಬರೋ ಮುಂಚೆ ನೀನು ಯಾವ ಜನಾಂಗವನ್ನು ದೃಷ್ಟಿಯಲ್ಲಿಟ್ಟು ಕೊಂಡಿದ್ದೀಯಂತ?'

"ಯೂರ್ಯಾರು ಯೂಕೆ? ನೋಡಿ, ಜಗತ್ತಿನ ಅತಿ ಹಳೆಯ ದೇಶಗಳಲ್ಲಿ— ಜನಾಂಗಗಳಲ್ಲಿ— ಭಾರತ— ಭಾರತೀಯರು.... ಒಂದು ತಾನೆ?"

'ಅಯ್ಯೋ, ಯೂರು ಅಲ್ಲಾಂತಾರೆ ಚೀನಾ, ಇರಾಕ, ಈಗಿನ ಸಂಸ್ಕೃತಿಗಳೂ ಅರಂಭದಲ್ಲಿ ಭಾರತೀಯ ಸಂಸ್ಕೃತಿಯಿಂದಲೇರಿತ್ತು ಅಂತ ನಾವು ಡಬ್ಬಿ ಬಡೆಯುವುದಿಲ್ಲವೆ?"

"ಅಲ್ರಿ, ನಿಮ್ಮ ಸಂಸ್ಕೃತಿ ಹಳೆಯದು ಅಂತ ಅಭಿಮಾನಪಡೋದ್ರಲ್ಲೇನು ತಪ್ಪು?'

'ತಪ್ಪು ಏನೂ ಇಲ್ಲ, ಯೊರದ್ದೂ ಇಲ್ಲ 'ಕುರುಡು ಕತ್ತಲೆಯಲ್ಲಿ ಜಗವೆ ಕಂಗೆಡುತಿರಲು ನೀನೆ ತಿಳಿವಿನ ಬೆಳಕನೆತ್ತಿ ತೋರೆ' ಅಂತ ವರ ಕವಿ ಬೈ ಹಾಡಿದ್ದಾರೆ... ನೀವನ್ನೋ ಮೂರು ನೂರಕ್ಕೆ ಕೂರರಷ್ಟು ಸತ್ಯ. ಇನ್ನು ಅತಿ ಹೊರದೇಶಗಳಲ್ಲಿ....?"

'ಮತ್ತಾವುದು? ಅಮೆರಿಕೆ ತಾನೆ?'

"ಹ್ಞೂನ್ನು. ಅಮೆರಿಕೆಯ ಚರಿತ್ರೆ ಆರಂಭವಾಗುವುದೇ ಹದಿನೆಂಟನೆ ಶತಮಾನದಿಂದ..."

"ನೋಡಿ, ಬ್ರಿಟಿಷರು ವಲಸೆ ಹೋಗಿ ನಿಲ್ಲುವ ತನಕ ಅಲ್ಲಿದ್ದವರು ಬರಿಯ ಅನಾಗರಿಕರು— ರೆಡ್ ಇಂಡಿಯನ್ನರು ತಾನೆ?"

'ಹ್ಞೂಂ. ಹಾಗೆಂತ ಹೇಳುತ್ತಾರೆ "

"ಈ ಇಪ್ಪತ್ನಾಲ್ಕೈವತ್ತು ವರ್ಷಗಳಲ್ಲಿ ಆ ಕಾಡು ವಾಸಿಗಳ ಸಂಪರ್ಕದಿಂದ ನೋಡಿ, ಅವೆರಿಕೆಯಲ್ಲಿ ಒಂದೆಡೆ ನಾಗರಿಕತೆಯ ಗಗನ ಚುಂಬಿ ತಲೆಯೆತ್ತಿದರೆ, ಮತ್ತೊಂದೆಡೆಯಲ್ಲಿ ಅನಾಗರಿಕತೆಯ ಪಾತಳಿ ತೋಡಲ್ಪಡುತ್ತಿದೆ...."

"ಓಹೋ, ಇದೆಲ್ಲಾ ದ್ರಾವಿಡ ಪ್ರಾಣಾಯಾಮ ಯೂಕೇಂತ ಗೊತ್ತಾಯ್ತು."

"ಯೂಕೆ?'

"ರಾಬರ್ಟ್ ಕೆನೆಡಿಯವರ ಹತ್ಯೆಯ ಬಗ್ಗೆ ತಾನೆ'

"ಅಯ್ಯೋ, ಈವೆಲ್ಲಿದ್ದೀರಿ! ಅವರನ್ನು ಯೂರು ಕೊಂದವರು? ಅವರು ಬರಿಯ ವಿಧನರಾದರು...."

'ಅದು ಸರೀನ್ನ. ಆದರೆ, ಅವರ ನಿಧಳಕ್ಕೆ ಕೊಲೆಯ ಪ್ರಯತ್ನವೇ ಕಾರಣ ತಾನೆ?'

'ಅದು ಹೌದು....ನೋಡಿ, ಐದು ವರ್ಷಗಳ ಕೆಳಗೆ ಇದೇ ಕೆನೆಡಿಯ ಅಣ್ಣ ಅಧ್ಯಕ್ಷ ಜಾನ್ ಕೆನೆಡಿಯವರನ್ನೂ ಗುಂಡಿಕ್ಕಿ ಕೊಂದ ಸುಸಂಸ್ಕೃತರು ಅವರು; ಎರಡು ತಿಂಗಳ ಹಿಂದೆ ಫಿಗ್ರೋ ನಾಯಕ ಮಾರ್ಟಿನ್ ಲೂಥರ್ ಕಿಂಗ್ ರನ್ನು ಕೊಲೆ ಮಾಡಿದ ಸಭ್ಯರು ಅವರು. ಇದೀಗ ಅಧ್ಯಕ್ಷ ಪದಾಭ್ಯರ್ಥಿ ರಾಬರ್ಟ್ ಕೆನೆಡಿಯವರಿಗೂ ಅದೇ ದಾರಿ ತೋರಿಸಿದ ಸುನಾಗರಿಕರು ಅವರು...."

'ಅಲ್ವೇ, ನೀನು ಹೀಗೇನೇ ಹೇಳುತ್ತಿ ಅಂತ ಅಧ್ಯಕ್ಷ ಜಾನ್ಸನ್ನರಿಗೆ ಗೊತ್ತು.... ಅದಕ್ಕೇ ಅವರು..."

"ಏನು ಮಾಡಿದ್ದಾರೆ?"

"ಮಾಡೋದೇನೆ? ಅಮೆರಿಕದ ೨೦ ಕೋಟಿ ಜನತೆ ಸೆನೇಟರ್ ಕೆನೆಡಿಯವರನ್ನು ಗುಂಡಿನಿಂದ ಹೊಡೆಯಲಿಲ್ಲ..."

'ಸಾಕು ಬಿಡೀಂದ್ರೆ.... ೨೦ ಕೋಟಿ ಜನತೆ ಯಾರಿಗೂ ಏನೂ ಮಾಡುವುದಿಲ್ಲ. ಮಾಡುವವರೊಬ್ಬರು, ಕೇಳುವವರು ನೂರು ಮಂದಿ. ನೋಡಿ, ಲಂಕೆಯ ರಾವಣನೊಬ್ಬ ಕೆಟ್ಟವನಾದ ಮಾತ್ರಕ್ಕೆ ಹನುಮಂತ ರಾಜಧಾನಿಯನ್ನು ಬೂದಿ ಮಾಡಬೇಕೆ? ರಾಮ ಲಂಕಾಸೇನೆಯನ್ನು ಕೊಲ್ಲಬೇಕೆ?'

"ಅದೆಲ್ಲಾ ಬಿಡು, ಪುರಾಣದ ಕತೆ...."

"ಅಂದ್ರೆ ಪುರಾಣದ ಕತೆ ಸುಳ್ಳೂಂತ ತಾನೇ ಈವನ್ನೋದು?"

"ಸುಳ್ಳು ಅಲ್ವೆ; ಅದ್ರೆ ನಂಬೋಕೆ ಆಧಾರ ಸಾಲದು.'

"ಎಂತಹ ಆಧಾರ?'

"ಆ ಕಾಲದ ಶಾಸನ ಒಂದು ಸಿಕ್ಕಿದರೆ ಬರೆಕೋಬರಿ ನಂಬಬಹುದು...."

"ಅದಕ್ಕೇನಾಗಬೇಕು? ಹಳೇ ಸವೇಕಲ್ಲನ್ನೋ ಸಡೆದ ಪೈಲುಕಲ್ಲನ್ನೋ ಕೆತ್ತು ತಂದು ಈಗ ತಾನೇ ಪದವಿ ಪಡೆದವನೊಬ್ಬನಿಂದ ಏನೇನೋ ಗೀಚಿಸಿ ಅದನ್ನು ದಾಳು ಬಾವಿಯಲ್ಲಿ ಹಾಕಿಸಿದರಾಯ್ತು. ಮುಂದಿನ ವರ್ಷ ಕೆಸರು ತೆಗೆಯೋ ಶಾಸ್ತ್ರ ಮಾಡಿ ಅದನ್ನು ಮೇಲೆತ್ತಿದರೆ ಸಾಕು...'

"ಅಲ್ವೆ, ಆ ಗೀಚಿದ ಗೀಟು ಓದೋಕೆ ಬರಬೇಕಲ್ಲಾ ?"

"ಅದು ಬೇರೆಯೇ ಹೊಸ ಲಿಪಿ, ಅದರ ಹೆಸರು ರಾಮ ಲಿಪಿ. ಅದ್ರಲ್ಲಿ ರಾಮ ಸೇತು ಕಟ್ಟಿ ಲಂಕೆಗೆ ಹೋಗಿ ದಿಗ್ವಿಜಯ ಮಾಡಿ...."

"ಇದು ಭಾರೀ ರಾಮ ಕಥೆ...."

'ಹೌದು. ನಿಮಗೆ ಹಾಗೇ...ಪಾಶ್ಚಾತ್ಯ ಶಂಖದಿಂದ ಸುರಿದದ್ದು ಮಾತ್ರ ತೀರ್ಥ....'

"ಅದು ಹಾಗೇ ಇರ್ಲಿ. ಭಾರತೀಯರೇ ಮಾ ಸಾಮಾನ್ಯರಲ್ಲ. ರಾಷ್ಟ್ರಪಿತನನ್ನೇ ಪಂಡಿಕ್ಕಿ ಕೊಂದ ಧೀರರು ತಾನೆ?"

"ಅಯ್ಯೋ, ನೀರಿದ್ದಲ್ಲಿ ಕೆಸರು ಇದ್ದೇ ಇರುತ್ತೆ. ಅದೇನೋ ಇಪ್ಪತ್ತು ವರ್ಷಗಳಲ್ಲಿ ಒಂದು ಕೊಲೆ. ಇದು ನೋಡಿ, ಎರಡು ತಿಂಗಳಲ್ಲೇ ಎರಡು...."

'ಹೋಗಲಿ ಬಿಡು, ರಾಬರ್ಟ್ ಕೆನೆಡಿಯವರಿಗೆ ತಮ್ಮ ಮೃತ್ಯುವಿನ ಛಾಯೆ ಮೊದಲೇ ಕಂಡು ಬಂದಿತ್ತಂತೆ.'

'ಅಂದ್ರೆ...'

'ಈ ಬಾರಿ ಬೇಡ, ಮುಂದಿನ ಬಾರಿ ಅಧ್ಯಕ್ಷೇಯ ಚುನಾವಣೆಗೆ ನಿಲ್ಲೋಂತ ಸಲಹೆ ಮಾಡಿದವರಿಗೆ ಹೇಳಿದ್ದರಂತೆ—ನಾಳೆ ಏನಾಗುತ್ತೇಂತ ಯಾರಿಗೆ ಗೊತ್ತು. ಆಷ್ಟೇಕ್ಕೆ ಮುಂದಿನ ಜುಲೈಯಲ್ಲೇ ನಾವು ಬದುಕಿರುವೆನೆಂಬುದಕ್ಕೇನು ಗ್ಯಾರಂಟಿ ಅಂತ...."

"ಓ, ಹಾಗಾದ್ರೆ ಅವರೊಬ್ಬ ಭವಿಷ್ಯದರ್ಶಿ...ಅಂತ ತಾನೇ ಈವನ್ನೋದು— ನಾವನ್ನುತ್ತೇನೆ—ಅವರು ಚುನಾವಣೆಗೆ ನಿಂತೇ ಇದ್ದಿಲ್ಲಾಂತಾದದ್ದು.... ಮತ್ತೆ ನೋಡಿ, ಕೊಲೆಗಾರನ ಅಪ್ಪ ಅಂದಂತೆ—'ನನ್ನ ಮಗ ಇಂತಹ ದುಷ್ಕೃತಿ ಎಂದು ಭಾವಿಸಿರಲಿಲ್ಲ' ಅಂತ..."

"ಅದು ಸರಿಯೇ. ಹೆತ್ತವರಿಗೆ ಮಕ್ಕಳೆಲ್ಲ ಬೃಹಸ್ಪತಿಗಳೇ, ಗಾಂಧಿಗಳೇ."

"ಏನೇ ಇರ್ಲಿ....ಕೆನೆಡಿಯವರ ಪೋಲೆ ಗುಂಡು ಬಿದ್ದುದು ಅವರು ಅಧ್ಯಕ್ಷರಾಗಬಾರದೆಂತ...."

"ಅಯ್ಯಪ್ಪ, ಅವರು ಅಮೆರಿಕದ ಅಧ್ಯಕ್ಷರಾಗುವ ಕಾಲ ಕಳೆದು ಹೋಯ್ತು. ಆದರೆ, ಅಮೆರಿಕನ್ನರ ಹೃದಯದಲ್ಲಿ ಅವೀನರಾಗುವ ಕಾಲ ಒದಗಿ ಬಂದಿದೆ.... ಮೊದಲಿನದು ಸುದೈವವೆನ್ನು; ಎರಡನೆಯದು ಸುಪುಣ್ಯವೆನ್ನಲೇಬೇಕು. ಮತ್ತೆ ನೋಡು, ಅವರ ಹೆಂಡತಿ ಹನ್ನೊಂದನೆಯ ಮಗುವಿನ ತಾಯಿಯಾಗುತ್ತಾರಂತೆ—ಇಂದೋ ನಾಳೆಯೋ...'

"ಓ...'

"ಏಕೆ ಮುಖ ಸಪ್ಪೆಯಾಯ್ತು?"

"ಪಾಪ, ಅವಳನ್ನ...."

"ಏನು"

'ಏನೂ ಇಲ್ಲ ಬಿಡಿ....'

"ಏಕೆ ಬಿಡಬೇಕು?"

"ಹಾಗಾದ್ರೆ ಹಿಡ್ಕೊಳ್ಳಿ...'

"ಅಲ್ವಾ, ಏನಾಗಿದೇಂತ...."

"ಆಗೋದೇನು?..."

"ತಿಳೀತು ಬಿಡು; ಗೂವುದಕ್ಕೂ ದೈವ ಪುಣ್ಯ ಕೂಡಿ ಬರಬೇಕು..."

"ಮತ್ತೆ ಹೇಳೋದೇನು?'

'ಹಾಗಾದ್ರೆ ಬಾರದು, ತೂ...'

—ಗೋರಾ.

ಉಡ್ಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

R.A. 23/68

ಸಿ.ಪಕೀರ್ ಸಾಹೇಬ.... ಅಪ್ಪಿಲಾಂಟ
ಮತ್ತು
ಬುಡಾನ್ ಸಾಹೇಬ.... ಯೆದ್ರಿ
ಯವರೊಳಗೆ

ಉಡ್ಪಿ ತಾಲ್ಲುಕ ಹೊಸಾಳ ಗ್ರಾಮದಲ್ಲಿ ಅಕ್ಕುರು ವಾಸ್ತವ್ಯಯಿರುವ ಬೇಂಗ್ರೆ ಹಸ್ಸನ್ ಸಾಹೇಬರ ಮಗ, ಬುಡಾನ್ ಸಾಹೇಬರಿಗೆ ತಿಳಿಯಪಡಿಸುವುದು—

ಕುಂದಾಪುರ ಕೋರ್ಟು O.S. 356/1965ರಲ್ಲಿ ಆದ ತೀರ್ಪಿನ ಮೇಲೆ ಅಪ್ಪಿಲಾಂಟನು ಕಾಯ್ದೆ ಮೇಲೆ ಮಾಡಿದ ಮೇಲ್ಮಾಕ್ಷೆದ ಅಪ್ಪೀಲು ತಾರೀಕು 6-7-1968ಕ್ಕೆ ಕಾಯ್ದೆ ನೋಟೀಸಿನ ಬಗ್ಗೆ ಯಿಟ್ಟಿದೆ. ಕಾಯ್ದೆ ಆಕ್ಷೇಪ ವರ್ಷ್ಯರೆ ಯಿದ್ದ ಆ ದಿನ್ನ ಬೆಳಗ್ಗೆ 11 ಗಂಟೆಗೆ ಈವು ಸ್ವತಹವಾಗಲಿ ಕೋರ್ಟು ವಕೀಲರ ಮುಖಾಂತರವಾಗಲೀ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಯಿಲ್ಲವಾದ್ರೆ ಏಕಪಕ್ಷವಾಗಿ ತೀರ್ಪು ಕೊಡಲಾದೀತು.

(ಕೋರ್ಟು ಹುಕ್ಮಿನ ಪ್ರಕಾರ)

B. Yogishwara Holla
Advocate for Appellant.

ಉಡ್ಪಿ, 6-9-68.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ವರ್ಷಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ತೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

Phone— 5711, 5712, 5713 } 3 Lines.

ಚಂದಾದಾರರು

ತಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಮನಿಯಾರ್ಡರು ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

—ಮೆನೇಜರ್, ನವಯುಗ.

ಭಾಷೆಗಳ ಬಿಸಿ ತಣಿಯಲಿ - ೨

ಬರೆದವರು: ಶ್ರೀ ಎಂ. ರಂಗರಾವ್.

ಸಂಪರ್ಕ ಭಾಷೆ

ಎಲ್ಲಾ ಭಾರತೀಯರೂ ಅಮೋದಿಸಿ ಕೊಂಡ ಹಿಂದೀ ಭಾಷೆ ಕೂಡಾ ಒಳ್ಳೆಯ ಸೌಹಾರ್ದ ವಿಧಾನದಲ್ಲಿ ಬೆಳೆದುಕೊಂಡು ಬರಬೇಕು, ಬೆಳೆಯುತ್ತಾ ಇತ್ತು ಅದರ ಪಾಡಿಗೆ.

ಸ್ವತಂತ್ರರಾಗಿರುವ ಭಾರತೀಯರಿಗೆ ಸಂಪರ್ಕ ಭಾಷೆಯಾಗಿ ಹಿಂದಿಯೂ, ಹೊರ ಜಗತ್ತಿನ ಸಂಪರ್ಕಕ್ಕಾಗಿ ಇಂಗ್ಲೀಷೂ, ತಮ್ಮ ಮಾತೃ ಭಾಷೆಯೂ ಅಗತ್ಯವೆಂದು ಹೇಳಿದ ಮಾತು; ಎಲ್ಲರೂ ಒಪ್ಪಿಕೊಂಡಿರುವಂತಹುದೇ.

ಅನೇಕ ಹಿಮಾಚಲ ಪರ್ಯಂತ ಬಹುತೇಕ ಎಲ್ಲರೂ ಹಿಂದಿಯನ್ನು ಒಪ್ಪಿಕೊಂಡಿರುವುದೂ ಹೇಳಬಹುದು. ಹಾಗೆ ಒಪ್ಪಿಕೊಂಡದ್ದು, ಭಾರತೀಯ ಪ್ರಜೆಗಳಲ್ಲೆಲ್ಲ ಅದು ಶ್ರೇಷ್ಠವೆಂಬುದಕ್ಕಾಗಿಯೋ, ಎಲ್ಲಾ ಯೋಗ್ಯತೆಗಳೂ ಅದಕ್ಕಿದೆ ಎಂಬ ದೃಷ್ಟಿಯಿಂದಾಗಿಯೋ ಅಲ್ಲ. ಅದು ಉತ್ತರ ಭಾರತದ ಅನೇಕ ಭಾಷೆಗಳಿಗೆ ಹತ್ತಿರ ಹತ್ತಿರವಾಗಿದ್ದು, ಸಂಸ್ಕೃತದ ತತ್ಸಮ, ತದ್ಭವ, ಅಪಭ್ರಂಶ ಪದಗಳೇ ತುಂಬಿದ್ದು, ಭಾಷಾ ಪ್ರತ್ಯಯದಿಂದ ಹೆಚ್ಚಿನ ಪ್ರಸಾರದಲ್ಲಿದೆ ಎಂದೂ, ಮಹಾತ್ಮಾ ಗಾಂಧಿಯವರು ಹೇಳಿದ್ದರೆಂತಲೂ, ಅದರ ಹೆಸರು ಹಿಂದೂ ದೇಶವನ್ನು ಸ್ಮರಣೆಗೆ ತರುವಂತಿರುವುದರಿಂದ ಜಗತ್ತಿಗೆ ಭಾರತ ದೇಶವನ್ನು ಹೋಲಿಸುವಂತಿದೆ ಎಂತಲೂ ಎಲ್ಲರೂ ಅದನ್ನು ಒಪ್ಪಿದ್ದರು. ಅಂತೆಯೇ ಹಿಂದೀ ಭಾಷೆ, ಭಾಷೆಗಳ ಸ್ವಾಭಾವಿಕ ಬೆಳವಣಿಗೆಯಂತೆ ಸ್ವಾಭಾವಿಕವಾಗಿ ಬೆಳೆಯುತ್ತಾ ಇತ್ತು.

ಅದು ಗಾಂಧಿಯ ಪ್ರಭಾವವು ತುಂಬಿರುವಿದ್ದ ಕಾಲ. ಅಂತಹ ಕಾಲದಲ್ಲಿ ಕೂಡ ಗಾಂಧೀ ವಿರೋಧಿಗಳೂ, ಗಾಂಧಿಯಂಬಲೇ ದೇಶ ಹಾಳಾಯಿತೆನ್ನುವವರೂ ಇದ್ದೇ ಇದ್ದರು. ಗಾಂಧಿ ಜೀವಂತವಿರುವಾಗ ಅಂತಹ ಅಪಸ್ವರದವರು ಹಾಗೆ ಮೂಲೆಗುಂಪಾಗಿ ಕುಳಿತರೆ ಅಶ್ಚರ್ಯವಿಲ್ಲ. ಒಂದು ವೇಳೆ ಮಹಾತ್ಮರು ಇಲ್ಲೇ, ಇನ್ನು ಮೇಲೆ ಹಿಂದೀ ಕಲಿತವರಿಗೆ ಉದ್ಯೋಗ, ಹುದ್ದೆ ಭಡತಿ ಸೌಕರ್ಯಗಳು ಹೇಳಿದ್ದರೆ, ಆಗ ವಿರೋಧಿಗಳೂ ಎದ್ದು ತಾಂಡವವಾಡುತ್ತಿತ್ತು.

ಹಾಗೆ ಹೇಳಲಿಲ್ಲ ಗಾಂಧಿ. ಹೇಳುವುದು ಬಲ ಕೂಡ ಆಗ ಹಿಂದೀ ಭಾಷೆಗೆ ಪ್ರಬಲವಾಗಿರುವ. ಮೊದಲು ಅದಕ್ಕೆ "ದೂಷ್ಟಾನೀ" ಎಂಬ ಹೆಸರಿತ್ತು. ಅದರ ಹಿಂದೀ ಎಂದೂ ಬದಲಾಯಿಸಲಾಯಿತು. ಒಟ್ಟಿನ ಮೇಲೆ ಹಿಂದೀ ಆಯಬೇಕು, ಜನಪ್ರಿಯವಾಗಬೇಕು, ಬೆಳೆದು ಉತ್ತಮ ವಯಸ್ಸು ಬಂದಾಗ ಅದನ್ನು ಸಂಪರ್ಕ ಭಾಷೆಯಾಗಿ ಪಟ್ಟಾಭಿಷೇಕ ಮಾಡಿಸಬೇಕು. ಉದ್ದೇಶದಲ್ಲಿ ಅದರ ಬೆಳವಣಿಗೆಯಲ್ಲಿ ಲಕ್ಷ್ಯ ಹಂಯಿಸಿದ್ದರೆ ಅದರ ಸಾರ ಅದು ಬೆಳೆದು ಬಲಗೊಳ್ಳುತ್ತಾ ಹೋಯಿತ್ತು.

ಶಾಸನದ ಭಯ

ಆದರೆ ಅದರ ಸ್ವಾಭಾವಿಕ ಬೆಳವಣಿಗೆಗೆ ತಾಳೆಹೊಳ್ಳುವಷ್ಟು ಸಹನೆ ಕೆಲ ಪಂಗಡದವರಿಗೆ ಇಲ್ಲದೆ ಹೋಯಿತು. ಅದೇ ಪ್ರಾಂತೀಯ ಭಾಷೆಯಾಗಿರುವುಳ್ಳವರಿಗೆ, ಅದನ್ನು ಅದಷ್ಟು ಬೇಗ ಪದವೀಧರನದೇ ಕೆಂಬ ಚಾಪಲ್ಯ ಸಹಜವಾದುದೇ. ಸಾಕಷ್ಟು ಬೆಳೆದಾಯಿತೆಂಬ ಭ್ರಮೆಯುಂಟಾಯಿತು. ಸೌಹಾರ್ದತೆಯ ಪ್ರಯತ್ನಗಳಿಂದ ಸಾಕಷ್ಟು ಸೌಲಭ್ಯತೆಗಳಿಂದ, ಧರ್ಮಾರ್ಥ ವಿಧಿಯೋಗಗಳಿಂದ ಹಿಂದಿಯ ಮೇಲೆ ಪ್ರಜೆಗಳ ಆಕರ್ಷಣೆಯನ್ನು ಗಳಿಸಿಕೊಂಡಾಯಿತೆಂದೇ ತಿಳಿದರು. ಇನ್ನು ಮುಮ್ಮನೆ ಬರೀ ಮಾತು ಹೇಳಿಕೊಂಡಿದ್ದರೆ ಎಂದೆಂದಿಗೂ ಇಷ್ಟೇ ಸರಿ. ಇಪ್ಪತ್ತು ವರ್ಷ ಕಾಲದೇ ಒಂದು ಭಾಷೆ ಬೆಳೆಯಲಿಕ್ಕೆ? ಇನ್ನೇಕೆ ಪರಕೀಯವಾದ, ದಾಸ್ಯದ ಕುರುಹಾದ ಆ ಇಂಗ್ಲಿಷ್? ಅದರ ಸ್ಥಾನದಲ್ಲಿ ಬಲಿನ್ನು ಹಿಂದೀ.

ಹೀಗೆ ಹಿಂದಿಯನ್ನು ಹೊಸ ಒತ್ತಾಯದಿಂದ ಎತ್ತಿ ಹಿಡಿದರು.

ಪಂಚವಾರ್ಷಿಕ ಯೋಜನೆಯಂತೆ ಭಾಷೆಯ ವಿಷಯದಲ್ಲಿಯೂ, ಇಂತಿಂಥಾ ವರ್ಷದಲ್ಲಿ ಹೀಗೆಹೀಗೆ ಆಗಲೇಬೇಕು ಎಂದು ಶಾಸನ ಹೇಳುತ್ತದೆ.

ಸಂವಿಧಾನದ ಶಾಸನ ಎನ್ನುವಾಗ ಅದು ಪ್ರಜೆಗಳಿಗೆ ಚುರುಕ್ ಎಂದು ಚುಚ್ಚಿದ ಹಾಗಾಯಿತು. ಮೊದಲಿನಿಂದಲೇ ಹಿಂದಿಯ ಮೇಲೆ ಅಸಮಾಧಾನಗೊಂಡಿದ್ದ ಜನರೆಲ್ಲ ಒಂದಾದರು. ತಮಿಳುನಾಡಿನಲ್ಲಿ ಹಿಂಸಾಚಾರಗಳು ನಡೆದುವು. ತಟ್ಟನೆ ಎಚ್ಚೆತ್ತ ನೆಹರೂ ಸರಕಾರ, ಶಾಸನದ ಸೂಜಿಯನ್ನು ಪೆಟ್ಟಿಗೆಯಲ್ಲಿ ಇಡುತ್ತ, ಹಿಂದೀಯೇತರ ಪ್ರಜೆಗಳು ತಾವಾಗಿ ಇಷ್ಟಪಡುವ ವರೆಗೂ ಹಿಂದೀ ವಿಷಯದಲ್ಲಿ ಒತ್ತಾಯ ಮಾಡುವುದಿಲ್ಲವೆಂದು ಭರವಸೆ ಕೊಟ್ಟಿತು.

ಶಾಂತವಾಯಿತು ತಕ್ಕಮಟ್ಟಿಗೆ.

ನೆಹರೂ ಹೋದರು; ಶಾಸ್ತ್ರಿಗಳು ಕೂಡ ಕಣ್ಮರೆಯಾದರು.

ನೆಹರೂ ಅನಂತರ

ಅವರೊಂದಿಗೇ ದೇಶದೊಳಗಿನ ದೊಡ್ಡ ದೊಡ್ಡ ಮನಸ್ಸುಗಳೂ ಹೋದವೇನೋ! ನೆಹರುವಿನ ಭರವಸೆ ಗಾಳಿಗಿಟ್ಟ ದೀಪದಂತಾಯಿತು. ಕಳೆದ ವರ್ಷ ಮತ್ತೆ ಗಲಿಬಿಲಿ ಎದ್ದಿತು. "ಇಂಗ್ಲೀಷನ್ನು ಅಧಿಕಾರ ಸ್ಥಾನದಿಂದ ತೆಗೆಯಬೇಕು. ಹಿಂದಿಯನ್ನು ಅಲ್ಲಿ ಕೂಡಿಸಬೇಕು" ಎಂಬ ಒತ್ತಾಯ ಬಲವಾಯಿತು.

ಅಖಿಲ ಇಂಡಿಯಾ ವ್ಯಾಪಿಯಾದ ಕಾಂಗ್ರೆಸ್ ಸರಕಾರವಾದರೂ ಮಾಡುವುದೇನು? ಅಖಿಲ ಭಾರತವನ್ನು ಏಕಚಕ್ರಾಧಿಪತ್ಯದಲ್ಲಿ ಆಳಲು ಹಿಂದಿನ ಚಕ್ರವರ್ತಿಗಳಿಗೂ ಸಾಧ್ಯವಾಗದಿರುವಾಗ, ಅದನ್ನು ಕಾಂಗ್ರೆಸ್ ಸರಕಾರ ಸಾಧಿಸಿಕೊಂಡು ಬರುತ್ತದೆ, ಫಿಜ. ಈ ಸಂದರ್ಭದಲ್ಲಿ ಭಾಷೆಯ ವಿಷಯದಲ್ಲಿಯಾದರೂ ಅಲ್ಲಿಯ ಕಾಂಗ್ರೆಸ್ ಪ್ರಜೆಗಳ ಮನಸ್ಸಿನಂತೆ ಇಲ್ಲಿಯ ಕಾಂಗ್ರೆಸ್ ಪ್ರಜೆಗಳ ಮನಸ್ಸು ಇಲ್ಲ. ಹೀಗಿರುವಾಗ ಕಾಂಗ್ರೆಸ್ಸೇತರ ಪ್ರಜೆಗಳ ಮನಸ್ಸನ್ನು ಯಾರು ಕೇಳಬೇಕು? ಅದೂ ಬೇರೆ ಬೇರೆ.

ಅಂತಹ ಒಂದು ಗುಂಪಿನವರೇ ಹಿಂದೀಯ ತೀವ್ರವಾದಿಗಳೆನಿಸಿದ್ದಾರೆ. ಅವರು ಕೂಡ ಹಿಂಸಾಚಾರದಲ್ಲಿ ದಕ್ಷಿಣಾದಿಗಳಿಗಿಂತ ತಾವೇನೂ ಕಡಮೆಯವರಲ್ಲವೆಂದು ಅದನ್ನು ತೋರಿಸಿಕೊಟ್ಟು, ತಮ್ಮಿಷ್ಟದಂತೆ ಭಾಷಾ ತಿದ್ದುಪಡಿ ಮಸೂದೆಯನ್ನು ಮಂಜೂರು ಮಾಡಿಸಲಿಕ್ಕೆ ಸಮರ್ಥರಾದರು.

ಅಂತಹರ ಒಲವು ಹೇಗೆಲ್ಲ ಹುಟ್ಟಿದಿತ್ತು! ಹಿಂದಿಯಲ್ಲಿ ಮಾತಾಡಲು ಬಾರದ ರಾಷ್ಟ್ರಪತಿಗಳು ಹಿಂದಿಯಲ್ಲೇ ಮಾತಾಡಬೇಕೆಂದು ಒತ್ತಾಯಿಸಿದ್ದಾರೆ. ಹಾಗೆಯೇ ಪ್ರಾಂತೀಯ ಭಾಷೆಗಳವರೂ ಒತ್ತಾಯಪಡಿಸಿದ್ದಾರೆ. ಬಿಸಿ ಬಿಸಿಯಾದ ವಿವಾದಗಳಲ್ಲೇ ಎದ್ದಿವೆ.

ಇವೆಲ್ಲಾ ಭಾಷೆಯ ಆರೋಗ್ಯವನ್ನೇ ಕೆಡಿಸುವಂತಹ ವಿಷಯಗಳಲ್ಲವೆ? ಎಂತಹ ಪರಿಸ್ಥಿತಿಯಲ್ಲಿ ಹಿಂದೀ ತಂಬೆ ಕಾರಾರಿಲ್ಲದೆ ಬೆಳೆ ಎತ್ತಿಕೊಂಡು ಬರಬೇಕಿತ್ತು? ಅವಕ್ಕೆ, ಪೋಷಕವಾಗಿ ಎಷ್ಟೆಷ್ಟು ಸೌಕರ್ಯಗಳೂ ಸೌಲಭ್ಯಗಳೂ ಪ್ರಜೆಗಳಿಗೆ ಎಟಕಿವೆ? ಧರ್ಮಾರ್ಥವಾಗಿ ಅಥವಾ ಕಡಮೆ ಖರ್ಚಿನಲ್ಲಿ ಹಿಂದೀ ಕಲಿಯುವ ಸೌಲಭ್ಯವು ಹಳ್ಳಿಹಳ್ಳಿಗಳ ವರೆಗೂ ಬಂದಿದೆಯೆ? ಹಿಂದೆ ಇಂಗ್ಲೀಷ ಯಾವ ರೀತಿಯಾಗಿ ಇಲ್ಲಿ ಬಳಕೆಯಾಗಿತ್ತು? ಒತ್ತಾಯದಿಂದ ಬಲಾತ್ಕಾರವಾಗಿ ಹೇರಿದರೇನೂ, ಪ್ರಜೆಗಳಿಗೇ ಅದರ ಮೇಲೆ ಮಮತೆ ಹುಟ್ಟುವ ಹಾಗೆ ಮಾಡಿದರೋ?

ಒಟ್ಟಿನ ಮೇಲೆ ಇದನ್ನು ಯಾತಕ್ಕೆ ಆಲೋಚನೆ ಮಾಡಿರುವಂತೆ ಕಾಣ ಕೊಡಿಸ್ಲಿ. ಶಾಸನ ಮಾಡಿ ಅಮಲುಪಡಿಸಿಬಿಟ್ಟರೆ ಸಫಲ ದೊರಕುವುದೆಂಬ ಹಂಬಲಿಗೊಂದೇ ಇದಕ್ಕೆ ಆಧಾರವಾಗಿರಬೇಕು.

ತಮಿಳಿನ ಪ್ರತ್ಯೇಕತೆ

ದಕ್ಷಿಣ ಭಾರತದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ತಮಿಳುನಾಡಿನಲ್ಲಿ ಒಂದು ಪಂಗಡದವರು ಮೊದಲಿನಿಂದಲೇ ಹಿಂದಿಯ ಮೇಲೆ ಕಹಿಭಾವ ಉಳ್ಳವರಾಗಿದ್ದರು. ಹೀಗಾಗಲು ಎರಡು ಕಾರಣಗಳನ್ನು ಹೇಳಬಹುದು. ಹೀಗೆ ಹೇಳುವಾಗ ತಮಿಳು ಭಾಷೆ ಮಾತಾಡುವವರನ್ನೆಲ್ಲಾ ಎರಡು ಭಾಗ ಮಾಡಬೇಕಾಗುತ್ತದೆ. ತಮಿಳನ್ನು ಮಾತ್ರ ಹಿಡಿದಿರುವವರೊಂದು; ವಿಸ್ತೃತ ದೃಷ್ಟಿಯುಳ್ಳ ವಿದ್ಯಾಭಿಮಾನಿಗಳದು ಇನ್ನೊಂದು.

ಇವರಲ್ಲಿ ವಿದ್ಯಾಭಿಮಾನೀ ತಮಿಳರು ತಮ್ಮ ಕಾಲಿಗೆಯನ್ನು ಹರಿತ ಮಾಡಿಕೊಂಡು ಚೆನ್ನಾಗಿ ತಿರುಗಿಸುತ್ತ, ಸಂಸ್ಕೃತ ಮಂತ್ರಗಳನ್ನೂ, ಪುರಾಣ ಪುಣ್ಯಕಥೆಗಳನ್ನೂ, ಗೀತೆ, ರಾಮಾಯಣ, ಭಾರತಗಳನ್ನೂ ತಿಳಿಸೋದಿ ಕಲಿಯುವುದರಲ್ಲಿ ಆಸ್ಥೆಯುಳ್ಳವರು. ಅವರ ತಮಿಳು ಅಕ್ಷರಗಳೂ ಉಚ್ಚಾರಗಳೂ ಅದಕ್ಕೆ ತಕ್ಕಂತೆ ಮಾರ್ಪಾಟಾಗಿವೆ. ಸಂಸ್ಕೃತ ಶ್ಲೋಕಗಳನ್ನು ತಮಿಳು ಅಕ್ಷರಗಳಲ್ಲೇ ಬರೆಯುವ, ಮುದ್ರಿಸುವ ಏರ್ಪಾಡೂ ಮಾಡಿಕೊಂಡಿದ್ದಾರೆ.

ಕೇವಲ ತಮಿಳರಾದ ಇನ್ನೊಂದು ಪಂಗಡದವರು ಸಂಸ್ಕೃತದ ಗೊಡವೆ

(ಎಂಟನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅ ಭಿ ಪ್ರಾ ಯ

ಹೊರದೇಶಗಳಿಂದ ಹಿಂದೂಗಳನ್ನು ಹೊರಗಟ್ಟುತ್ತಿಹರು!

ಬರೆದವರು: ಶ್ರೀ ಶಿವಶಂಕರ

ಅದಿನಿತೂ ಅಡೆತಡೆ ಇಲ್ಲದೆ ಭಾರತೀಯರು ಪ್ರಪಂಚದಲ್ಲೆಲ್ಲಾ ವ್ಯಾಪಾರಕ್ಕಾಗಿ ಹಾಗೂ ಧರ್ಮ ಜಾಗ್ರತಿಗಾಗಿ ಸಂಚರಿಸುತ್ತಿದ್ದರು. ಅಂದಿನ ದಿನಗಳಲ್ಲಿ ಅವರಿಗೆ ಆದೆಲ್ಲೆಲ್ಲಾ ಆದೇಶ ಅಲ್ಲದೆ ಅತ್ಯಂತ ಪ್ರೀತಿಪೂರ್ವಕ ಸ್ವಾಗತ ಸಿಗುತ್ತಿತ್ತು. ಸಮುದ್ರದಲ್ಲಿ ಅಲೆ ಅದೆಂದೂ ಒಂದೇ ರೀತಿ ತರವದಿಲ್ಲ. ಹಾಗಾಗಿದೆ ನಮ್ಮ ಪರಿಸ್ಥಿತಿ. ಇಂದು ಹೊರ ದೇಶಗಳಿಗೆ ನಾವು ಹೋಗುವದು ಹಾಗಿರಲಿ, ಆದೆಂದೋ ಯೋಗಿ ಅಲ್ಲಿ ನೆಲೆನಿಂತಿರ ವವರನ್ನೂ ಇಂದು ಹೊರಗಟ್ಟಲಾಗುತ್ತಿದೆ. ಈ ಅರ್ಧಚಂದ್ರ ಪ್ರಯೋಗ ಅಲ್ಲಿ ನಡೆಯುತ್ತಿದೆ, ಇಲ್ಲಿ ನಡೆಯುತ್ತಿದೆನ್ನಲು ಸಾಧ್ಯವಿಲ್ಲ. ಇಂದು ಎಲ್ಲೆಡೆಗಳಲ್ಲೂ ನಡೆಯುತ್ತಿದೆ. ಪೊನ್ನೆಯ ಎರೆಗೆ ನಮ್ಮದೇ ಅಂಗವಾಗಿದ್ದ ಬರ್ಮಾ ಹಾಗೂ ಶ್ರೀಲಂಕೆಯಲ್ಲಿ ಆ ಪ್ರದೇಶದ ಜನರು ಇತರ ಭೂಂತೇಯರನ್ನ ದೊರಗಟ್ಟುತ್ತಿದ್ದರೆ. ನಮ್ಮ ಮೇಲೆ ಆಕ್ರಮಣ ನಡೆಸಿ, ಬಲಾತ್ಕಾರದಿಂದ ಅಲ್ಲದೆ ಅಮಾನುಷ ರೀತಿಯಲ್ಲಿ ಪಡೆದುಕೊಂಡಿರ ವ ಪಾಕಿಸ್ಥಾನದಿಂದ ಹಿಂದೂಗಳನ್ನು ಹಿಂದಿಹೀರಿ ಹಿಪ್ಪೆಮಾಡಿ ಕುಪ್ಪೆಗೆ ಕಳ್ಳಲಾಗುತ್ತಿದೆ. ಹಾಗೆ ಪರಿಸ್ಥಿತಿ ಇರುವಾಗ ಅನ್ಯ ದೇಶಗಳು ನಮಗೆ ಸ್ವಾಗತ ಬಯಸುತ್ತಿವೆಯೆನ್ನುವ ಭ್ರಮೆಯಲ್ಲಿ ಬೀಳಲೂ ಇಂದು ಸಾಧ್ಯ ಇರುವದಿಲ್ಲ. ಬ್ರಹ್ಮಪ್ರದೇಶ, ಶ್ರೀಲಂಕ, ಗಾಂಧಾರ ಮುಂತಾದೆಡೆಗಳಲ್ಲಿರುವ ಜನರು, ತಾವು ಭಾರತೀಯರಲ್ಲವೆಂದು ಹೇಳಿಕೊಳ್ಳುತ್ತ ಇತರ ಭಾರತೀಯರನ್ನು ಹೊರಗಟ್ಟಲು ಕಾರಣವೇನು? ಆಫ್ರಿಕಾ, ಅಮೇರಿಕಾ ಮುಂತಾದೆಡೆಗಳಿಂದ ಭಾರತೀಯರನ್ನು ಬಡಿದಟ್ಟಲು ಕಾರಣವೇನು? ಭಾರತದಿಂದ ಅಮೇರಿಕಕ್ಕೆ ಹೋಗಿರ ವ ಓರ್ವ ಪಂಡಿತ ಮಹಾಶಯರು ಡಿಲ್ಲಿಯ ಆಂಗ್ಲ ವಾರ ಪತ್ರಿಕೆ "ಆರ್ಗನೈಸರ್"ನ ವಿಶೇಷಾಂಕ ಒಂದರಲ್ಲಿ ಬರೆದಿರುವ ಒಂದು ಲೇಖನದಿಂದ ಕೆಲ ವಿಷಯಗಳನ್ನು ಇಲ್ಲಿ ಕೊಡಲಾಗಿರುತ್ತದೆ:

ದುರ್ದೈವವಶಾತ್, ಪ್ರಪಂಚದ ಚರಿತ್ರೆಯ ಸಂಭವಗಳನ್ನು ಮರುಬಿಸುವ ನಿರ್ಧಾರಕ್ಕೆ ಭಾರತವು ಬಂದಿರುವಂತೆ ಭಾಸವಾಗುತ್ತಿದೆ. ಒಂದು ಸೂರ ನಲ್ವತ್ತು ವರ್ಷಗಳ ಪೂರ್ವ ಭಯಂಕರ ಅಹಾರಭಾವದ ಪರಿಸ್ಥಿತಿ ಸ್ವಿಟ್ಜರ್ಲೇಂಡಿನಲ್ಲಿದೆಯೆಂದು "ಲಂಡನ್ ಒಬ್ಸರ್ವರ್" ಪತ್ರಿಕೆ ಪ್ರಕಟಿಸಿತ್ತು. ಆಹಾರ ಅಭಾವಕ್ಕೆ ಕಾರಣ—'ಸಂಖ್ಯಾಸ್ವಕರ ದೇಶದಲ್ಲಿ ಮಿತಿಮೀರಿದ ಜನಸಂಖ್ಯೆ'! ಮಾಲ್ಥಸನು ತನ್ನ ಪ್ರಬಂಧವನ್ನು ಬರೆದಾಗ ಅವನ ಕಣ್ಣೆದುರಿನಲ್ಲಿ ಬಡ ಭಾರತದ ಚಿತ್ರವಿರಲಿಲ್ಲ; ಅವನು ಅವನ ಯುರೋಪಿನ ವಿಷಯವನ್ನೇ ವಿವರಿಸಿರುವನು. ಮತ್ತೆ ಸ್ವಿಟ್ಜರ್ಲೇಂಡ್ ಹೇಗೆ ಸುಧಾರಿಸಿಕೊಂಡಿತು? ಬಹಳ ಸುಲಭವಾಗಿ ಅದು ಪರಿಸ್ಥಿತಿಯನ್ನು ಬದಲಾಯಿಸಿಕೊಂಡಿತು. ಅಲ್ಲಿಂದ ಜನರನ್ನು ಅಮೇರಿಕ, ಆಸ್ಟ್ರೇಲಿಯಾ, ಕೆನಡಾ ಮತ್ತು ನ್ಯೂಝಿಲೇಂಡಿಗೆ ಕಳುಹಿಸಲಾಯಿತು. ಆ ರೀತಿ ಇತರ ಭೂಪ್ರದೇಶಗಳ ಪರಿಚಯ ಮಾಡಿಕೊಂಡು ಯುರೋಪು ಅಲ್ಲಿಗೆ ತನ್ನ ಪ್ರಜೆಗಳನ್ನು ಕಳುಹಿಸಿತು. ಜಪಾನು (ನಿಪ್ಪೋನ್) ನೂಡಿದ್ದಾದರೂ ಏನು? ಅದು ತನ್ನ ಪ್ರಜೆಗಳನ್ನು ಕೊರಿಯಾ, ಮಂಚೂರಿಯಾ, ಫಾರ್ಮೋಸಾಗಳಿಗೆ ಕಳಹಿಸಿತು. ಇಂದು ಚೀನಾ ಮಾಡುತ್ತಿರುವದಾದರೂ ಏನು? ಅದು ಟೈಬೆಟರನ್ನು ಅನ್ಯಾನ್ಯದೇಶಗಳಿಗೆ ಕಳುಹಿಸುತ್ತಿದೆ. ಆದರೆ ಭಾರತ ಏನು ಮಾಡುತ್ತಿದೆ? ಇದು ಇಂದಿನ ಪರಿಸ್ಥಿತಿ.

ಹಿಂದೆ, ಹಿಂದೂಸ್ಥಾನದ ಸ್ಥಿತಿ ಹೀಗಿರಲಿಲ್ಲ. ಇಲ್ಲಿಂದ ಜನರು ಆಗ್ನೇಯ ಏಶ್ಯಾಕ್ಕೆ ಹೋಗಿರುವರು. ಆದರಿದು ಇಂದು ಹಳೆಯ ಕಥೆ ಇದೆ. ಆ ಪ್ರದೇಶದಿಂದು ಬೈಬಲದ ಪ್ರಭಾವದ ಎಲುಬು ದೊಳಗಿದೆ. ಹೊಸಹೊಸ ಭೂಪ್ರದೇಶಗಳನ್ನು ಕಂಡ ಹಿಡಿದವರು ಬ್ರಿಟಿಷರಲ್ಲ. ಕೊಲಂಬಸ್, ಅಮೆರಿಗೊ ವೆಸ್ಪುಸಿ, ಕೆಬೋಟ್, ಪಿಝರ್ರೋ—ಇವರೆಲ್ಲರೂ ಇಂಗ್ಲೀಷರಾಗಿರುವದಿಲ್ಲ. ಫ್ರಾನ್ಸಿಸ್ ಡ್ರೇಕ್ ಮತ್ತು ವಾಲ್ಟರ್ ರೇಲಿಯವರು ದ್ವಿತೀಯ ದರ್ಜೆಯ ಸಮುದ್ರ ಚೋರರಾಗಿದ್ದರು. ಸ್ಪೇನಿನ ಹಾಗೂ ಇತರ ದೇಶಗಳ ಸಮುದ್ರ ಕಳ್ಳರು ತರುತ್ತಿದ್ದ ಸಂಪತ್ತನ್ನು ಕಂಡು, ಅವರ ಮೇಲೆರಗಿ, ಅದನ್ನು ಅವರು ಕೊಳ್ಳೆಹೊಡೆದರು ಅಷ್ಟೇ ಅಲ್ಲ, ಸೂರೆಗೊಳಗಾಗಿದ್ದ ದೇಶಗಳಿಗೆ ಹೋಗಿ ಆ ದೇಶವು ತಮಗೆ ಸೇರಿದ್ದೆಂದು ಸಾರಿಬಿಟ್ಟರು! ಅಲ್ಲಿಯ ನಾಗರೀಕತೆ ಹಾಗೂ ರಾಷ್ಟ್ರೀಯತೆಯನ್ನು ಹಾಳುಗೆಡವಿ ಅಲ್ಲಿ ತಮ್ಮ ನಾಗರೀಕತೆ ಹಾಗೂ ರಾಷ್ಟ್ರೀಯತೆಯ ಅಚ್ಚನ್ನೊತ್ತಿದರು. ಬ್ರಿಟಿಷರೂ ಬಹಳಷ್ಟು ಭೂಪ್ರದೇಶದ ಮೇಲೆ ತಮ್ಮ ಬಾವುಟವನ್ನು ಹಾರಿಸಿರುವರು.

ಏಂಗ್ಲೋ-ಸೆಕ್ಸನರ ಗುಣ ವಿಚಿತ್ರ ರೀತಿಯದ್ದಿದೆ. ಇತರರ ಇರುವಿಕೆಯತ್ತ ಅವರ ಲಕ್ಷ್ಯ ಅದಿನಿತೂ ಇರುವದಿಲ್ಲ. ಅತ್ತ ಅವರು ಗಮನ ಕೊಡುವದಿಲ್ಲ. ಬ್ರಿಟಿಷ್ ಪ್ರಯಾಣಿಕರು ಅದ್ಯಾವ ದೇಶಕ್ಕೆ ಹೋದರೂ ಅಲ್ಲಿ ತಮ್ಮ ಇಂಗ್ಲೀಷ್ ಭಾಷೆಯಲ್ಲೆ ಮಾತಾಡುವರಲ್ಲದೆ ಆಯಾ ಆಯಾ ದೇಶದ ಭಾಷೆಯಲ್ಲಿ ಮಾತಾಡುವ ಗೋಜಿಗೆ ಅವರು ಹೋಗುವದೇ ಇಲ್ಲ. ಇತರರು ಇವರ ಭಾಷೆಯಲ್ಲಿ ಮಾತಾಡಬೇಕು! ಇವರು ಬೇರೆ ಭಾಷೆಯಲ್ಲಿ ಮಾತಾಡುವದಿಲ್ಲ! ಹೋಲ್ಲೇಂಡಿನಲ್ಲಿ ಒಬ್ಬ ಪ್ರಯಾಣಿಕನಿಗೆ ಡಚ್ಚ್ ಭಾಷೆ ಬಾರದಿದ್ದಲ್ಲಿ ಅವನನ್ನು ಅಪೇಚಿತ ಅಥವಾ ಹೊಸಬನೆಂದು ಅಲ್ಲಿಯವರು ತಿಳಿದುಕೊಳ್ಳುತ್ತಾರೆ. ಅವನಿಗೆ ಸಹಾಯದ ಅಗತ್ಯ ಇದೆಯೆಂಬ ದನ್ನು ಅವರು ಗುರುತಿಸಿಕೊಳ್ಳುತ್ತಾರೆ. ಆದರೆ ಇಂಗ್ಲೇಂಡಿನ ಪರಿಸ್ಥಿತಿ ಹಾಗಿಲ್ಲ. ಅಲ್ಲಿ ಅದ್ಯಾವನಾದರೂ ಆಂಗ್ಲ ಭಾಷೆ ಆಡದಿದ್ದರೆ ಅವನನ್ನು ಹೀನ ಅವಿದ್ಯಾವಂತನೆಂದು (ಬ್ಲಡಿ ಇಡಿಯಟ್ರೇಟ್) ಹೇಳಲಾಗುತ್ತದೆ.

ಬ್ರಿಟನಿನ ಮೇಲೆ ನೋರ್ಮನ್ನರು ಆಕ್ರಮಣ ನಡೆಸಿದ್ದರು. ಆದ ಅವರು ಅಲ್ಲಿದ್ದ ಪ್ರಜೆಗಳನ್ನು ದೂರ ಗಡ್ಡಬೆಟ್ಟಗಳಿಗೆ ಅಟ್ಟಿದರು. ಅವರನ್ನು ಗುಲಾಮ ಜನರೆಂದು (ವೇಲ್ಸ್) ಕರೆದರು. ಅವರ ವೇಲ್ಸ್ ಭಾಷೆಯನ್ನು ಕ್ರಮಶಃ ನಾಶ ಮಾಡಿಬಿಟ್ಟರು. ಅದೇ ರೀತಿ ಸ್ಕಾಟ್‌ಲೇಂಡಿನ ಗೋಲಿಕ್ ಮತ್ತು ವಾಲ್ಸ್ ದ್ವೀಪದ ಮಾಂಕ್ ಜನರ ಭಾಷೆಗಳನ್ನು ಅವರು ನಾಶಮಾಡಿರುವರು. ಇದೇ ಇಂಗ್ಲೀಷರು ಇಂದು ಭಾರತದಲ್ಲಿ ಇಂಗ್ಲೀಷ್ ತಮ್ಮ ಹಿಂದುಗಡೆಯೇ ಬರುತ್ತಿದೆಯೆಂಬುದನ್ನು ಅರಿತುಕೊಂಡು, ಅದನ್ನು ತಪ್ಪಿಸಬೇಕೆನ್ನುವ ಭ್ರಮೆಯಿಂದ, ಇಲ್ಲಿ ನಡೆಯುತ್ತಿರುವ ಭಾಷಾ ಬಡಿದಾಟದ ಚಿತ್ರವನ್ನು ದೊಡ್ಡ ದೊಡ್ಡ ಶಿರೋನಾಮೆಗಳಡಿಯಲ್ಲಿ ಎಡೆಬಿಡದೆ, ಅವರ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ತಾವು ಇರುವದು ಗಾಜಿನ ಮನೆಯಲ್ಲೆಂಬುದನ್ನವರು ಮರೆತಿರುವಂತಿದೆ. ಇಂಗ್ಲೀಷಿನ ಈ ಆಕ್ರಮಣಕಾರಿ ಅಥವಾ ಸ್ವಾಭಾವಿಕ ಇಂಗ್ಲೆಂಡಿಗೆ ಮಾತ್ರ ಸೀಮಿತವಲ್ಲ; ಅದು ಪ್ರಪಂಚದ ನಾನಾ ಭಾಷೆಗಳನ್ನು ಬಲಿತೆಗೆದ ಕೊಂಡಿದೆ. ಅನ್ಯಾನ್ಯ ದೇಶಗಳ ಭಾಷೆಗಳನ್ನು ಆಹುತಿ ತೆಗೆದ ಕೊಂಡು ಅಲ್ಲಿ ಅದು ಅಳಿತ ಭಾಷೆಯಾಗಿ ಮೆರೆದಾಡುತ್ತಿದೆ. ಕೆನಡಾದಲ್ಲಂ ಹಾಗೆನೇ. ಅಲ್ಲಿಗೆ ಎರಡು ರೀತಿಯ ಆಕ್ರಮಣಗಾರರು ಹೋಗಿದ್ದರು—ಒಬ್ಬರು ಆಂಗ್ಲ ಭಾಷೆ ಮಾತಾಡುವವರು, ಇನ್ನೊಬ್ಬರು ಫ್ರೆಂಚ್ ಭಾಷೆ ಮಾತಾಡುವವರು. ಇವರಿಬ್ಬರೂ ಅಲ್ಲಿ ಆಕ್ರಮಣಗಾರರೇ ಹೌದು. ಅಲ್ಲಿಯ ಎಸ್ಕಿಮೋ ಹಾಗೂ ಕೆಂಪ ಜನರನ್ನು ಅವರು ಗುಡ್ಡ ಬೆಟ್ಟಗಳಿಗೆ ಹೊಡೆದಟ್ಟಿ, ಕೆಲವರನ್ನು ಗುಲಾಮರನ್ನಾಗಿ ಮಾಡಿಕೊಂಡು, ಅಲ್ಲಿನ ಸಾಂಪತ್ತನ್ನು ಸೂರೆಯಾಡಿರುವರು. ಈಗ ಇವರೊಳಗೆನೇ ಸಂದ್ಯಾಟ ನಡೆಯುತ್ತಿದೆ! ಭಾಷಾ ಬಾವುಟವನ್ನು ಮೇಲೇರಿಸುವದರಲ್ಲಿ ಅವರೊಳಗೆ ಬಡಿದಾಟ ನಡೆಯುತ್ತಿದೆ. ಬ್ರಿಟನನ್ನು ಬಗಿತದಟ್ಟುಕೊಂಡ ಏಂಗ್ಲೋ-ಸೆಕ್ಸನರು ಅಲ್ಲಿ ಸೇಲ್ಸ್ ಭಾಷೆಯನ್ನು ಬದಿಗೆ ಸರಿಸಿ ಬಿಟ್ಟಂತೆ, ಕೆನಡಾದಲ್ಲಿ ಫ್ರೆಂಚ್ ಭಾಷೆಯನ್ನು ಕೆಳಗೆ ದೂಡಿ ಬಿಡಲು ಪ್ರಯತ್ನಿಸುತ್ತಿದ್ದಾರೆ.

ಪ್ರಪಂಚದ ಅನ್ಯಾನ್ಯ ದೇಶಗಳಲ್ಲಿ ಇಂದು ಭಾರತೀಯ ವಂಶದ ಜನರನ್ನ ಕಾಣಬಹುದು. ಇವರ ಪೂರ್ವಜರಾರೂ ಅಲ್ಲಿಗೆ ಆಕ್ರಮಣಗಾರರಾಗಿ ಹೋಗಿರುವದಿಲ್ಲ. ಅಷ್ಟೇ ಅಲ್ಲ ಅವರಲ್ಲಿ ಹೆಚ್ಚಿನವರು ತಮ್ಮ ಸ್ವ-ಇಚ್ಛೆಯಿಂದ ಕೂಡಾ ಹೋಗಿರುವದಿಲ್ಲ. ಅವರನ್ನು ಬ್ರಿಟಿಷರು ಬಲಾತ್ಕಾರದಿಂದಲೋ, ಮೋಸದಾಟಗಳಿಂದಲೋ, ಅಸುಅನುಮತಿಗಳನ್ನು ತೋರಿಸಿಯೋ ಅಲ್ಲಿಗೆ ಕರೆದುಕೊಂಡು ಹೋಗಿರುವರು.

ಕೆನಡಾದಲ್ಲಿರುವ ಫ್ರೆಂಚರನ್ನು ಕಾಣಲು ಡಿಗಾಲೆ ಹೋಗಿದ್ದರು. ಕೆನಡಾ ಪ್ರಯಾಣವನ್ನವರು ಬೊಟಿಕುಗೊಳಿಸದೇ ಕಾಯಿತಾದರೂ ಹೋದೆಡೆಗಳಲ್ಲಿ ಫ್ರೆಂಚ್ ಪತಾಕೆಗಳನ್ನು ಅವರು ಬಹಳ ಶ್ರದ್ಧೆಯಿಂದ ಹಾರಿಸಿ ಬಂದಿರುವರು. ಅಲ್ಲಿನ ಫ್ರೆಂಚ್ ಜನರಲ್ಲಿ ಧೈರ್ಯೋತ್ಸಾಹಗಳನ್ನು ತುಂಬಿಸಿ ಬಂದಿರುವರು. ಪೂರ್ವ ಆಫ್ರಿಕಾಕ್ಕೆ ನಮ್ಮ ಪ್ರಧಾನಿ ಇಂದಿರಾ ಗಾಂಧಿಯವರು ಹೋಗಿದ್ದರು. ಅವರಿಗೆ ಅಲ್ಲಿನ ಭಾರತೀಯವಂಶದವರನ್ನು ಕಂಡಾಗ ನಾಚಿಕೆಯೆನಿಸಿತು. ಭಾರತದ ಸರಕಾರವಾದರೋ ಅನ್ಯಾನ್ಯ ದೇಶಗಳಲ್ಲಿ ಅಳಿದುಳಿದಿರುವ ಭಾರತೀಯ ವಂಶಜರಿಗೆ ಬೋಧಿಸುತ್ತಿರುವದಾದರೂ ಏನನ್ನ? ಭಾರತವನ್ನು ಮರೆತುಬಿಡಿ, ನೀವು ಭಾರತೀಯರೆಂಬುದನ್ನು ಮರೆತುಬಿಡಿರಿ. ಭಾರತಕ್ಕೂ ನಿಮಗೂ ಸಂಬಂಧವಿದೆಯೆಂಬುದನ್ನು ಮರೆತುಬಿಡಿರಿ. ಇತ್ಯಾದಿ.... ಫ್ರಾನ್ಸಿಗೂ ಭಾರತಕ್ಕೂ ಇರುವ ಅಂತರ—ವ್ಯತ್ಯಾಸವಿದೆಂದ ಪಂಡಿತ ಮಹಾಶಯರು ತಿಳಿಸಿ ಹೊರದೇಶಗಳಿಂದ ಹಿಂದೂಗಳನ್ನು ಹೊರಗಟ್ಟುತ್ತಿರುವದಕ್ಕೆ ಇದೊಂದು ಕಾರಣವೆಂದು ಸೂಚಿಸಿರುವರು.

ಅದೇ ಪೂರ್ವ ಆಫ್ರಿಕಾಕ್ಕೆ ಹುತಾತ್ಮ ಪಂಡಿತ ದೀನದಯಾಳ ಉಪಾಧ್ಯಾಯರು ಹೋಗಿದ್ದಾಗ, ಅಲ್ಲಿನ ಭಾರತೀಯ ವಂಶಜರನ್ನು ಕಂಡಾಗ ಅವರಿರುವ ದೇಶದ ಕೀರ್ತಿಕೇತುವನ್ನು ಗಗನಕ್ಕೇರಿಸಲು ಶ್ರಮಿಸಬೇಕಾಗಿ ಹೇಳಿದರಲ್ಲದೆ, ಅದ್ಯಾವ ಕಾರಣದಿಂದಾದರೂ ಅಲ್ಲಿಂದ ಹೊರದೂಡಲ್ಪಟ್ಟಾಗ ತಾವು ಅನಾಥರೆಂದು ಭಾವಿಸಬೇಕಾಗಿಲ್ಲ. ಭಾರತ ಅವರನ್ನು ಬಿಟ್ಟುಬಿಡುವದಿಲ್ಲವೆಂದು ಧೈರ್ಯವನ್ನು ತುಂಬಿರುವರು.

ಇಂತಹ ಘಟನೆಗಳು ಸಂಭವಿಸುತ್ತಿರುವದರಿಂದ ಭಾರತೀಯರನ್ನು ಹೊರದೇಶಗಳಿಂದ ಹೊರದೂಡಲು ಹಿಂದೆ—ಮುಂದೆ ನೋಡುತ್ತಿದ್ದಾರೆ. ಹಾಗಾದ್ದರೂ ಹಿಂದೂಗಳನ್ನು ಹೊರಗಟ್ಟಲು ಇನ್ನೇನು ಕಾರಣ?

ಸಾಮಾನ್ಯ ಸ್ಥಿತಿಗತಿಯಿಂದ ಮಾನವನನ್ನು ಮೇಲೆತ್ತಿ, ಪರಿಸ್ಥಿತಿಯ, ದೀನ ಹೀನ ದಾಸ್ಯದಿಂದ ಅವನು ಬಿಡುಗಡೆಹೊಂದಿ, ಸ್ವತಂತ್ರ ಜೀವನ ಶರನಾಗಬಲ್ಲನೆಂಬುದನ್ನು ಪ್ರಕಟಿಸಬಲ್ಲುದೇ ಸಾಹಿತ್ಯ.

—ಗಾರ್ಕಿ

o o o

ದೇಶದ ಬೆಲೆಯು ಹೆಚ್ಚು ಹೆಚ್ಚಾಗಿ ಭಾಷೆಯ ಬೆಲೆಯಿಂದ ಲಭಿಸುತ್ತದೆ.

—ನಂಜೇಶ

ಅನುಭವ

ನನಗೆ ನಾನೇ ಸಹಾಯ ಮಾಡಿಕೊಂಡೆ

"ಭಗವಂತ ಮಕ್ಕಳನ್ನೇನೋ ಕರುಣಿಸುತ್ತಾನೆ, ಆದರೆ ವಿಶ್ರಾಂತಿ, ಸಮೃದ್ಧಿಗಳನ್ನು ಕರುಣಿಸುವದಿಲ್ಲವಲ್ಲ"!–ಶ್ರೀಮತಿ ನಾಗೇಶ್ವರಮ್ಮ ನುಡಿದಳು.

ಪಾವಲೂರ ಕೋಟೇಶ್ವರ ರಾವ್ ಅವರ ಪತ್ನಿ ಶ್ರೀಮತಿ ನಾಗೇಶ್ವರಮ್ಮ ಅವರು ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ಗಣ್ಣಾವರಂ ತಾಲೂಕಿನ ಪಡ್ಡಾಪೊಗ್ರಾಲಾ ಹಳ್ಳಿಯಿಂದ ಬಂದವರು.

ಅವರಿಗೆ ಸುಖ, ಮೂರನೇ ಮಗುವು ಆಗುವದು ಬೇಡ ಅವಳಿಗೆ.

ಕಳೆದ ವರುಷದಲ್ಲಿ ಗಣ್ಣಾವರಂದಲ್ಲಿ ನೆರೆದ ಶಿಬಿರದಲ್ಲಿ ಸಾವಿರಾರು ಮಹಿಳೆಯರು ತಮ್ಮ ಪರಿವಾರವನ್ನು ನಿಯೋಜನೆಗೊಳಿಸಿಕೊಂಡು ಹೋದರು. ಅವರಲ್ಲಿ ನಾಗೇಶ್ವರಮ್ಮ ಒಬ್ಬರು.

"ಆರೋಗ್ಯದ ಕಾರಣಕ್ಕಾಗಿಯೋ ಅಥವಾ ಆರ್ಥಿಕ ಸ್ಥಿತಿಗತಿಯಿಂದಾಗಿಯೋ ನೀವು ಇಂತಹ ನಿರ್ಧಾರ ತೆಗೆದುಕೊಳ್ಳಲು ಇಚ್ಛಿಸಿದಿರಿ?"–ಎಂದು ಶಿಬಿರದಲ್ಲಿ ಶ್ರೀಮತಿ ನಾಗೇಶ್ವರಮ್ಮನವರನ್ನು ಪ್ರಶ್ನಿಸಿದಾಗ ಅವರು ಉತ್ತರವಿತ್ತರು."ನೀತ್ತ ಹೇಳಿದ ಎರಡನೆ ಕಾರಣದ ಗಲುವಾಗಿ."

ಅವರು ತಮ್ಮ ಸಂಸಾರದ ಸುಖ-ದುಃಖಗಳನ್ನು ಬಣ್ಣಿಸಿದರು. ನಾಲ್ಕು ವರುಷಗಳ ಹಿಂದೆ ಅವರ ವಿವಾಹವಾಯಿತು. ಅನ್ಯೋನ್ಯ ದಾಂಪತ್ಯ ಅವರದು. ಅವರ ಇಷ್ಟತ್ರೊಂದನೇ ವಯಸ್ಸಿಗೆ ಅವರ ಪ್ರಥಮ ಮಗು ಜನಿಸಿತು. ಮುಂದೆ ಮೂರು ವರುಷಗಳ ನಂತರ ಎರಡನೇ ಮಗುವು ಹುಟ್ಟಿತು. ಅವರಿಗಿರುವುದು ಬದು ಎಕರೆಯ ಭತ್ತದ ಭೂಮಿ. ಅದ್ದರಿಂದ ಈಗಿದ್ದ ಹುಡುಗರ ಪಾಲನೆಪೋಷಣೆ ಆಗಬೇಕು; ಶಿಕ್ಷಣ ಸಾಗಬೇಕು, ಮನೆಯ ರಥ ಉರುಳಬೇಕು.

ಮಹಿಳಾ ಆರೋಗ್ಯ ಸಂದರ್ಶಕಳು ಮನೆಗೆ ಬರುತ್ತಿದ್ದಳು. ಅವರ ಉಪದೇಶ ನಾಟಿತು. ಇನ್ನು ಹೆಚ್ಚು ಮಕ್ಕಳು ಬೇಡ ಎಂದೆನಿಸಿತು. ಆ ರೀತಿ ನಿರ್ಧರಿಸಿದ್ದಾಯಿತು. ಕಾಲ ಕೂಡಿ ಬಂದಿತು. ಗಣ್ಣಾವರಂ ಶಿಬಿರ ಏರ್ಪಟ್ಟಿತು.

"ನಾನೀಗ ಸುಖಿ. ಆರಾಮದಿಂದಿದ್ದೇನೆ" ಎಂದು ಅವಳು ಹೇಳುತ್ತಿರುವಾಗ ಅವಳ ಮುಖದಲ್ಲಿ ಲಾಸ್ಯವಾಡಿತು, ಆತ್ಮವಿಶ್ವಾಸ ಕುಡಿರಿತು.

'ನಿಮ್ಮ ನೆರೆಹೊರೆಯ ಗೆಳತಿಯರಿಗೆ

(ಒಂಭತ್ತನೇ ಪುಟ ನೋಡಿರಿ)

SISTA'S-CB-34



ನಿಮ್ಮ ಕುಟುಂಬದ ಭವಿಷ್ಯವು ಸುರಕ್ಷಿತವಾಗಿದೆಯೇ ?

ನಿಮ್ಮ ಕುಟುಂಬದವರ ಭವಿಷ್ಯಕ್ಕಾಗಿ ನೀವು ತಕ್ಕ ಏರ್ಪಾಡನ್ನು ಮಾಡಿರುವಿರಾ? ಮೃತ್ಯುಪತ್ರವನ್ನು ಬರೆದಿಟ್ಟಿದ್ದೀರಾ? ನಿಮ್ಮ ಟ್ರಸ್ಟ್ ಯಾರು ನಿರ್ವಹಿಸುವರು? ಜೀವನವು ಅನಿಶ್ಚಿತ, ಅವಘಡಗಳಿಗೂ ರೋಗರುಜಿಗಳಿಗೂ ಯಾವಾಗ ನಾವು ತುತ್ತಾಗುವೆವೆಂದು ಹೇಳುವುದಕ್ಕಾಗುವುದಿಲ್ಲ. ಕೆನರಾ ಬ್ಯಾಂಕು ನಿಮ್ಮ ಮೃತ್ಯುಪತ್ರದ 'ಎಗ್ಸಿಕ್ಯೂಟರ್' ಮತ್ತು 'ಟ್ರಸ್ಟೀ' ಆಗಿ ಕೆಲಸ ಮಾಡಲು ಸಿದ್ಧವಾಗಿದೆ. ಆದು ನಿಮ್ಮ ಪ್ರೀತಾತ್ಮರ ಭವಿಷ್ಯವು ಭದ್ರವಾಗಿರುವಂತೆ ಮಾಡಬಲ್ಲುದು. ನಿಮಗೆ ಸಮೀಪವಿರುವ ಕೆನರಾ ಬ್ಯಾಂಕಿನ ಶಾಖೆಗೆ ಬನ್ನಿರಿ, ಮತ್ತು ಈ ಮುಖ್ಯ ವಿಷಯದಲ್ಲಿ ಉಚಿತವಾಗಿ ನೀಡುವ ಸಲಹೆಗಳನ್ನು ಪಡೆಯಿರಿ. ನಿಮ್ಮ ಕುಟುಂಬವನ್ನು ಕೆನರಾ ಬ್ಯಾಂಕಿನ ಸಂರಕ್ಷಣೆಗೆ ಒಪ್ಪಿಸಿ ನಿಶ್ಚಿಂತರಾಗಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸ್: ಹೈಟ್‌ಹೌಸ್ ಹಿಲ್, ಮಂಗಳೂರು.
ಆಡಳಿತ ಆಫೀಸ್: 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

ರೂ. 141 ಕೋಟಿಗಿಂತಲೂ ಅಧಿಕ ಸಂಪನ್ಮೂಲಗಳು – 245ಕ್ಕಿಂತಲೂ ಅಧಿಕ ಶಾಖೆಗಳು – ಜಗತ್ತಿನಾದ್ಯಂತ ಪ್ರತಿನಿಧಿಗಳು

ಭಾಷೆಗಳ ಬಿಸಿ ತಣಿಯಲಿ — ೨

(ಐದನೇ ಪುಟದಿಂದ)

ಯನ್ನೇ ಬಿಟ್ಟವರು. ಕಲಿತುದೆಲ್ಲವನ್ನೂ ತಮಿಳಾಗಿ ಮಾಡಿಕೊಳ್ಳುವವರು. ಅದು ದರಿಂದ ತಮ್ಮ ನಾಲಿಗೆಯನ್ನು ಬರಡಾಗಿಯೇ ಇಟ್ಟುಕೊಂಡವರು. ಈ ವಿಷಯದಲ್ಲಿ ತುಸು ಸ್ಪಷ್ಟವಾಗಿ ತಿಳಿಯಬೇಕಾದರೆ, ತಮಿಳಿನ ವಿಶೇಷಗಳನ್ನೂ, ಅಸಾಕರ್ಯಗಳನ್ನು ಸ್ವಲ್ಪ ಕೇಳಬೇಕು.

ದಕ್ಷಿಣ ದೇಶದ ಭಾಷೆಗಳಲ್ಲಿ ಹೆಚ್ಚು ವ್ಯಾಪ್ತಿಯನ್ನವಾದದು ತಮಿಳೆಂದೂ, ಎರಡನೆಯದಾಗಿ ಕನ್ನಡವೆಂದೂ, ಅನಂತರ ತೆಲುಗು, ಮಲೆಯಾಳ ತುಳುಗಳೆಂದೂ ಭಾಷಾ ಸಂಶೋಧಕರು ಹೇಳುತ್ತಾರೆ. ಈ ಐದು ಭಾಷೆಗಳೂ ದ್ರಾವಿಡ ಭಾಷೆಯ ಒಂದೇ ಗುಂಪಿಗೆ ಸೇರುವಂತಹುದೆಂದೂ ಕೇಳುವವರು ಇರಬಹುದು. ಇವೆಲ್ಲ ಸಮಾನವಾಗಿ ಒಂದು ಗುಂಪಿನ ಹಾಗೆಯೇ ಕಾಣುತ್ತವೆ. ಆದರೆ ಮೇಲೆ ಹೇಳಿದ್ದನ್ನಷ್ಟೇ ತಮಿಳಿಗೂ ಸಂಬಂಧ ಸಾಮಾನ್ಯವಿದೆ.

ತಮಿಳುತನಕ್ಕೇ ಹೆಮ್ಮೆ ಎನಿಸುವಂತಹ, ತಮಿಳು ಭಾಷೆಯಲ್ಲಿ ಹೆಜ್ಜೆ ಹೆಜ್ಜೆಗೂ ತಲೆ ಹಾಕುವಂತಹ ವಿಶಿಷ್ಟಾಕ್ಷರವಾದ "ಳ" ಎಂಬ ಅಕ್ಷರ ಕನ್ನಡದಲ್ಲಿಯೂ ಬಳಕೆಯಲ್ಲಿತ್ತು—"ರಳ" ಎಂದು. ಹಾಗೆಯೇ ತಮಿಳಿನಲ್ಲಿರುವ ಎರಡನೆಯ ರಕಾರವೂ ಹಳೇ ಕನ್ನಡದಲ್ಲಿ "ಶಕಟರೇಫ" ಎಂದಿತ್ತು. ರಳಕುಳಕ್ಷಳ ಭೇದ ಕನ್ನಡಕ್ಕೆ ಅನಾವಶ್ಯಕವೆಂದು ಅನಂತರ ತೆಗೆದು ಹಾಕಲಾಯಿತು.

ಆದರೆ ತಮಿಳಿನಲ್ಲಿ ಅನೇಕವೂ ಹಾಗೆಯೇ ಇವೆ. ಎಲ್ಲರಿಂದಲೂ ಉಚ್ಚರಿಸಲು ಸರಿಯಾಗಿ ಬಾರದ ರಳಕಾರವನ್ನು ತಮಿಳಿನವರು ಕೂಡಾ ವ್ಯವಹಾರದಲ್ಲಿ ಸರಿಯಾಗಿ ಉಚ್ಚರಿಸುವುದಿಲ್ಲ. "ವಾಯು ಹಯಂ" ಎಂದೇ ಹೇಳುತ್ತಾರೆ. ಇರುವ ಎರಡು ರಕಾರಗಳನ್ನೂ ಎರಡು ನಕಾರಗಳನ್ನೂ ಯಾವ್ಯಾವ ಶಬ್ದಗಳಲ್ಲಿ ಹೇಗೆ ಹೇಗೆ ಬಳಸಬೇಕೆಂಬ ಬಗ್ಗೆ ಕಲಿತವರಲ್ಲೇ ತಪ್ಪೊಪ್ಪುಗಳಾಗುತ್ತಿವೆ.

ಹಾಗೆಯೇ ತಮಿಳಿನ ಅಕ್ಷರದಲ್ಲಾಗಲೀ, ಭಾಷೆಯಲ್ಲಾಗಲೀ ಮಹಾಪ್ರಾಣಗಳಿಲ್ಲ. ಆದುದರಿಂದ ತಮಿಳರಿಗೆ ಸಂಸ್ಕೃತದಿಂದ ಬಂದಂತಹ ಮಹಾಪ್ರಾಣಗಳನ್ನು ತಮಿಳು ಅಕ್ಷರಗಳಲ್ಲೇ ಓದಿಕೊಳ್ಳಲಿಕ್ಕೆ ಸುಲಭ ಮಾರ್ಗವಿಲ್ಲ. ಆದರೆ ಆರ್ಯರ ಸಂಸ್ಕೃತಿಯ ಬಳಕೆಯಾದಾಗ ಅನಿವಾರ್ಯವಾಗಿ ಆರ್ಯಶಬ್ದಗಳನ್ನು ಅವರು ತಮ್ಮ ಭಾಷೆಯಲ್ಲಿ ಸೇರಿಸಿಕೊಳ್ಳಲೇ ಬೇಕಾಯಿತು. ಆಗ ಅವರು ತಮ್ಮದೇ ಆದ ಒಂದು ವಿಶಿಷ್ಟ ಪದ್ಧತಿಯಲ್ಲಿ ಅದನ್ನು ಅಳವಡಿಸಿಕೊಂಡರು.

ಯಮನನ್ನು "ಎಮ" ಎಂದೇ ಬರೆಯಬೇಕು. ಹಾಗಂತ ಯಮುನೆಯನ್ನು "ಎಮುನೆ" ಎಂದು ಬರೆದರೆ ತಪ್ಪು. ಚ, ಶ ಎಂಬ ಅಕ್ಷರ ಭೇದಗಳಿದ್ದರೂ ಕೂಡಾ ಶಂಕರನನ್ನು "ಚಂಕರ" ಎಂದೇ ಬರೆಯಬೇಕು. ಚಂದ್ರನನ್ನು ಬರೆಯುವ ಚಕಾರದಿಂದಲೇ ಶಂಕರನನ್ನೂ ಬರೆಯಬೇಕಂತೆ. ರಾಜಾಚಿಯನ್ನು ಕೆಲವರು "ರಾಚಾಚಿ" ಎಂತಲೇ ಬರೆಯುತ್ತಾರೆ. ರಾಕ್ಷಸನನ್ನು ರಾಕ್ಷದನ್ ಇಲ್ಲವೇ ರಾಚ್ಚದನ್ ಎಂದೇ ಬರೆಯಬೇಕಲ್ಲದೆ ಕ್ಷ ಸ ಎಂಬ ಅಕ್ಷರಗಳಿದ್ದರೂ ಇದ್ದಕ್ಕಿದ್ದ ಹಾಗೆ ಬರೆಯುವುದಿಲ್ಲ. ಓದುವುದಕ್ಕೂ ಪದ್ಧತಿಗಳಿವೆ. ರಾಚ್ಚದನ್‌ದಲ್ಲಿಯ ಚಕಾರವನ್ನು ಸ್ಪಷ್ಟವಾಗಿ ಹೇಳಬಾರದು. ಹಾಗೆಯೇ ಜಕಾರ ಚಕಾರಗಳನ್ನೂ ಕೆಲಕೆಲವು ಕಡೆ ಸ್ಪಷ್ಟವಾಗಿ ಉಚ್ಚರಿಸಬಾರದು. ಒಟ್ಟಿನ ಮೇಲೆ ತಮಿಳು ಪ್ರವೇಶಕ್ಕೆ ತುಂಬ ಸುಲಭ. ಪ್ರವೇಶಿಸಿದ ಮೇಲೆ ತುಂಬ ಸಮಸ್ಯಾತ್ಮಕ.

ಬಹುಶಃ ಹೀಗೆಲ್ಲ ನಿಯಮಗಳನ್ನು ಇಟ್ಟುಕೊಂಡದ್ದು ಎಲ್ಲಾ ಸಂಸ್ಕೃತ ಶಬ್ದಗಳನ್ನೂ ತಮಿಳಿನಲ್ಲಿ ಇದ್ದಕ್ಕಿದ್ದ ಹಾಗೆ ಬರೆಯಲು ಸಾಧ್ಯವಿಲ್ಲದ್ದರಿಂದಲೇ ಆಗಿರಬೇಕು. ಉದಾ ಹರಣೆಗೆ: "ಧರ್ಮ ಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ" ಎಂಬ ದನ್ನು ತಮಿಳು ಅಕ್ಷರದಲ್ಲಿ ಬರೆದರೆ, ಓದುವವನಿಗೆ ಸಂಸ್ಕೃತ ಜ್ಞಾನವಿಲ್ಲದಿದ್ದರೆ 'ತರ್ಮಕ್ಷೇದ್ರೆ ಗುರುಕ್ಷೇದ್ರೇ ಸಮವೇದಾ ಯುಯುತ್ಸವ: ಮೂಮಗಾ ಡಾಂಡವಾ—ಟವಾ" ಎಂದೇ ಓದಿಯಾನು. ಏಕೆಂದರೆ ತಮಿಳಿನಲ್ಲಿ ವ್ಯಂಜನಗಳ ಗುಂಪಿನ ಒಂದೊಂದೇ ಅಕ್ಷರಗಳು ಮಾತ್ರವೇ. ಕಾಂತಿ ಎಂಬುದು ಗಾಂದಿಯೂ ಅದೀತು, ಗಾಂಧಿಯೂ ಅದೀತು, ಪಾಂಧಿಯೂ ಅದೀತು. ಬಾಯೂ ಎಂಬುದು ಬಾಬೂ ಆಗಬಹುದು, ಪಾಬೂ ಆಗಲೂಬಹುದು.

ಅದಕ್ಕೇ ವಿದ್ಯಾಭಿಮಾನಿಗಳಾದ ಬ್ರಾಹ್ಮಣರೇ ಮೊದಲಾದ ಗುಂಪಿನವರು ಸಂಸ್ಕೃತವನ್ನು ಅಭ್ಯಾಸ ಮಾಡಿಕೊಂಡು ಮುಂದುವರಿದಿದ್ದಾರೆ. ಇನ್ನೊಂದು ಪುಂಡ ಪದವರು ತೀವ್ರ ತಮಿಳುವಾದಿಗಳೆನಿಸಿದ್ದಾರೆ. ಇವರು ಕಲಿತದನ್ನೆಲ್ಲ ತಮಿಳಾಗಿಸುವವರು.

ಈ ಬಗೆಯ ತೊಂದರೆಗಳನ್ನು ಹೋಗಲಾಡಿಸಿಕೊಂಡು, ಅಕ್ಷರ ಪುಷ್ಟಿ ಮಾಡಿಕೊಂಡು ಕನ್ನಡ ತೆಲುಗು ಮಲೆಯಾಳಗಳವರು ಸಂಸ್ಕೃತವನ್ನು ಬೆನ್ನೆಲುಬಾಗಿ ಮಾಡಿಕೊಂಡು ತಮ್ಮ ಭಾಷೆಗಳನ್ನು ಬೆಳೆಸಿವೆ. ಇಂತಹ ನಮಗೆಲ್ಲ ಹಿಂದಿಯನ್ನು ಸುಲಭವಾಗಿ ಕಲಿಯಬಹುದಾಗಿದೆ. ಉಚ್ಚಾರ ಭೇದಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ.

ತಮಿಳರ ಪ್ರಚಾರ

ಹೀಗೆ ತಮಿಳು ಭಾಷೆಯಲ್ಲಿಯೇ ಉಚ್ಚಾರದ ಅಸಾಕರ್ಯವಿರುವುದರಿಂದ ಹಿಂದೀ ಭಾಷೆ ಕಲಿಯುವಾಗ ಅವರಿಗೆ ಶ್ರಮ ಉಂಟಾಗುವುದು ಸಹಜವೇ. ಆದುದರಿಂದಲೇ ತಮಿಳು ನಾಡಿನ ಒಂದು ಪಂಗಡದವರಿಗೆ ಮೊದಲಿನಿಂದಲೇ ಹಿಂದಿಯ ಮೇಲೆ ಕಹಿ ಭಾವನೆ ಇತ್ತು.

ಅದಕ್ಕೆ ಸರಿಯಾಗಿ ಆರ್ಯದ್ವೇಷ, ಬ್ರಾಹ್ಮಣ ದ್ವೇಷಗಳನ್ನು ಕಾರುವ ಪಕ್ಷಗಳಿಂದಾಗಿ ತಮಿಳಿನವರುವ ಅಸಾಕರ್ಯದ ಪ್ರತ್ಯೇಕತೆಯನ್ನೇ ಹೆಮ್ಮೆಯೆಂದು ಪ್ರಚಾರ ಬಲದಿಂದ ಪ್ರಜೆಗಳಲ್ಲಿ ತುಂಬಿಸಿಬಿಟ್ಟಿದ್ದಾರೆ.

ಬ್ರಾಹ್ಮಣ ದ್ವೇಷಿಗಳು ನಾಸ್ತಿಕರಂತೆ ವರ್ತಿಸಿದರೆ ಅದಕ್ಕೆ ಪರಿಹಾರವಾಗಿ ಆಸ್ತಿಕ ಪಂಗಡದವರು ಸಂಸ್ಕೃತ ಮಂತ್ರಗಳ ಮೇಲೆ ತ್ಯಾಜ್ಯ ಭಾವ ಉಂಟಾಗುವಂತೆ ಮಾಡಿ, ದೇವಾಲಯದ ಪೂಜೆಗಳು ತಮಿಳು ಮಂತ್ರಗಳಿಂದಾಗಬೇಕೆಂದು ತಮಿಳಿನಲ್ಲಿ ಮಂತ್ರ ರಚನೆಯನ್ನೂ ಮಾಡಿದ್ದಾರೆ. ಒಟ್ಟಿನ ಮೇಲೆ ತೀವ್ರ ತಮಿಳುವಾದಿಗಳೆಂತೂ ವಿತ ತಮಿಳುವಾದಿಗಳೆಂತಲೂ ಇಬ್ಬಗೆಯ ತಂಡಗಳಂದ ತಮಿಳುನಾಡು ತುಂಬಿದೆ ಎಂದುಹೇಳಬಹುದು. ಸದಭಿಮಾನ ಮೇರೆ ಮೀರಿ ದುರಭಿಮಾನದ ರೂಪ ತಾಳಿದೆ ಎಂದೂ ಹೇಳಬಹುದು. ಪ್ರತಿ ಸಿನಿಮಾದಲ್ಲಿಯೂ "ತಮಿಳು ತಾಯಿ" ಎಂಬ ಶಬ್ದ ಕೇಳದೆ ಇರುವುದಿಲ್ಲ. ಶಿವನನ್ನೇ "ತಮಿಳೇ" ಎಂದು ಸಂಬೋಧಿಸಿದ್ದಾರೆ. ಶಿವನ ನಾಮದಿಂದ ಮೊತ್ತ ಮೊದಲು ಹುಟ್ಟಿದ ಭಾಷೆ ತಮಿಳು ಎಂದು ಒಂದು ಸಿನಿಮಾ ಹಾಡಿನಲ್ಲಿ ಬರುತ್ತದೆ. ಸುಬ್ರಹ್ಮಣ್ಯನು ತಮಿಳರ ಸ್ವಂತ ದೇವನಂತೆ.

ಹೀಗೆ ಪ್ರಚಾರ ಬಲದಿಂದ ತಮ್ಮ ತಮಿಳಿಗೆ ಸಮಾನ ಬೇರಾವುದೂ ಇಲ್ಲ ಎಂದು ಪ್ರಜೆಗಳಿಗೆ ತೋರುವಂತೆ ಮಾಡಲಾಗಿದೆ. ಅದರಿಂದಾಗಿ ಹಿಂದಿಯ ಮೇಲೆ ತಾತ್ಸಾರ ಭಾವ ಉಂಟಾಗುವುದು ಸಹಜ ತಾನೆ?

ಪತ್ರಿಕೆಗಳು

ಇದಕ್ಕಾಗಿಯೇ ಪತ್ರಿಕಾವ್ಯವಸಾಯ ಮಾಡಿ, ತಾವೂ ಲಕ್ಷಾಧಿಪತಿಗಳಾಗಿ ಪ್ರಜೆಗಳಲ್ಲಿಯೂ ಓದುವ ಅಭಿರುಚಿಯನ್ನು ಬೆಳೆಸಿದ ಮಹನೀಯರೂ ತಮಿಳುನಾಡಿನಲ್ಲಿದ್ದಾರೆ. ಅವರು ಹೊರಡಿಸುವ ಪತ್ರಿಕೆ ಮನೆಮನೆಗೂ ಹೋಗುವಂಥಾದ್ದು. ಹುಡುಗ ಹುಪ್ಪಡಿಗಳಿಗೂ ಪ್ರಿಯವಾದದ್ದು. ಅಂತಹ ಸಾಮಾನ್ಯರಿಗೆ ಹಿಡಿಸುವಂತಹ ಭಂಡುಭಾಷೆಯಲ್ಲಿ, ಆದಕ್ಕೇ ಸ್ವಂತದೆನಿಸಿದ ಕೆಲವು ಶಬ್ದಗಳನ್ನೂ ಹುಟ್ಟಿಸಿ, ಅಲ್ಪ ಸಂಗತಿಗಳಿಗೆ ಭಾರಿ ಮಹತ್ವ ಕೊಡುತ್ತ, ಅತ್ಯಧಿಕ ಪ್ರಸಾರವನ್ನು ಸಂಪಾದಿಸಿಕೊಂಡಿದೆ. ಪ್ರಸಾರವು ಸ್ಥಿರವಾದ ಪಂತರ ತನ್ನ ಭಂಡುತನವನ್ನು ತುಸು ಕಡಿಮೆ ಮಾಡಿಕೊಂಡು ಪ್ರಸ್ತುತ ಮರ್ಯಾದೆಯ ಎಲ್ಲೆಯೊಳಗೇ ಕುಂತು ನಡೆಯುತ್ತದೆ.

ಅದೇ ರೀತಿಯಾಗಿ ಡಿ.ಎಂ.ಕೆ ಪಕ್ಷವು ಕೂಡಾ ಮೊದಲು ಜನಪ್ರಿಯತೆ ಗಳಿಸಿಕೊಳ್ಳಲಿಕ್ಕಾಗಿ ಪ್ರಾಂತೀಯತಾ ಭಾವನೆಗಳಗೂ, ಬ್ರಾಹ್ಮಣ ದ್ವೇಷ, ಮೊದಲಾದ ಭೇದಭಾವನೆಗಳಿಗೂ ಮಹತ್ವ ಕೊಡುತ್ತಾ ಬಂದು, ಸಾಕಷ್ಟು ಜನ ಬಲವು ಕೂಡಿಕೊಂಡಾಗ ಒಂದೊಂದಾಗಿ ತನ್ನ ಅವಗುಣಗಳನ್ನು ಕಳೆದುಕೊಳ್ಳುತ್ತಾ ಸಭ್ಯತನಕ್ಕೆ ಬರುತ್ತಿದೆ. ಅಂತೆಯೇ ಇವರ ಕೈ ಮೇಲಾಗಿ ಅಧಿಕಾರಕ್ಕೆ ಬಂದಿದ್ದಾರೆ. ಈಗ ಇವರು ಹಳೆಯ ತಮಿಳನ್ನು ಆಘನೀಕರಿಸಿ ತರುತ್ತಿದ್ದಾರೆ. ಬಸ್ಸಿಗೆ "ಪೇರೋಂದು" ಎಂದೂ, ಫ್ಯಾಕ್ಟರಿಗೆ "ಪಣಿಯ ನೈ" ಎಂದೂ ತಮಿಳರಿಗೇ ಅರ್ಥವಾಗದ ಪದಗಳನ್ನು ವ್ಯವಹಾರಕ್ಕೆ ಬಳಸಲಾರಂಭಿಸಿದ್ದಾರೆ.

ಈ ಬಗೆಯ ತಮಿಳರ ಅಚ್ಚ ಭಾಷಾಭಿಮಾನವನ್ನು ಕುರಿತು ಕನ್ನಡಿಗರೂ ಯೋಚನೆ ಮಾಡಬಹುದು. ಇನ್ನೊಂದು ತೀವ್ರತೆ ಒಳ್ಳೆಯದಲ್ಲದಿದ್ದರೂ ಇವರ ಅರ್ಥದಷ್ಟಾದರೂ ನಮಗಿದೆಯೆ?

ಪ್ರಯತ್ನಪಟ್ಟರೆ ತಮಿಳರ ಹಾಗೆಳನ್ನಡಿಗರಿಗೂ ಮಾಡಲು ಸಾಧ್ಯವಿದೆ. ಕನ್ನಡದ ಅಭಿಮಾನದಿಂದಾಗಿ ಎಲ್ಲರೂ "ಅಭಿನವ ಅಂಡಯ್ಯ"ರಾಗಿ ಅಚ್ಚಗನ್ನಡವೆಂದುಕೊಳ್ಳುತ್ತ ಅನ್ಯ ಭಾಷೆಯ ಶಬ್ದಗಳನ್ನು ವರ್ಜಿಸಿದರೆ ಏನಾದೀತು.? ಮುಂದುವರಿದುಕೊಂಡು ಬರುವ ಸಂಸ್ಕೃತಿಯನ್ನು ಹಿಂದಕ್ಕೆ ಒಯ್ಯುವುದು ಸರಿಯೆ? ಇತರ ಭಾಷೆಯ ಸಂಪರ್ಕದಿಂದ ತಾನು ಬೇರೆ ಎಂದುಕೊಂಡರೆ ಇತರರ ಮಧ್ಯೆ ಬಾಳುವೆ ನಡೆಸಲು ಸಾಧ್ಯವೆ?

ಹಾಗಂತ ಯಾವ ವಿರೋಧವನ್ನೂ ತೋರದೆ ಸುಮ್ಮನೆ ಕುಳಿತರೆ ಇಡಿಯ ಕನ್ನಡ ನಾಡೇ ತಮಿಳುಮಯವಾಗಿ ಹೋದೀತು. ತಮಿಳು ಸಿನಿಮಾಗಳಿಗೆ ಕನ್ನಡ ನಾಡಿನಲ್ಲಿ ಸ್ವಾಗತವಿರುವ ಹಾಗೆ ತಮಿಳುನಾಡಿನಲ್ಲಿ ಕನ್ನಡ ಸಿನಿಮಾಗಳಿಗೆ ಸ್ವಾಗತವಿಲ್ಲವಷ್ಟೆ?

ಒಂದು ಪ್ರಾಂತವನ್ನು ಕಬಳಿಸಿಕೊಳ್ಳಲು ಸಿನಿಮಾ ಒಂದೇ ಸಾಕಾದಲೂ ಬಹುದು. ಕನ್ನಡದಲ್ಲಿ ಸಿನಿಮಾ ಉದ್ಯಮದಲ್ಲಿ ತಮಿಳರನ್ನು ಲಾಭ ಬರುವುದಿಲ್ಲ. ಅಂತೆ

ಯೇ ಕನ್ನಡ ನಟಿಯರಿಂದ ತಮಿಳು ಸಿನಿಮಾವೇ ಬೆಳಗುತ್ತಾ ಇದೆ. ಕನ್ನಡ ಸಿನಿಮಾ ರಂಗವನ್ನು ಎತ್ತಿ ಹಿಡಿಯಲು ಕೆಣದ ಬಲವುಳ್ಳ ಕನ್ನಡ ಧನಿಕರಿಗೆ ಕಲಾಭಿಮಾನವಿಲ್ಲ; ಸ್ವಂತ ಲಾಭದ ವಿಚಾರವೂ ರಾಜಕೀಯವೂ ಇದ್ದರೆ ಅವರಿಗಾಯಿತು.

ಇಲ್ಲಿ ಮಾತಿಗೆ ಮುಂಚಾಗಿ ವಿಷಯಾಂತರವಾಯಿತು. ಕ್ಷಮೆ ಇರಲಿ,

ಒತ್ತಾಯ ಬೇಡ:

ತಮಿಳರ ಪ್ರಚಾರವನ್ನು ಕುರಿತು ಹೇಳಿದೆನಷ್ಟೆ? ಹಾಗೆ ಪ್ರಚಾರದ ಅತಿರೇಕಕ್ಕೆ ಹೋಗದೆ ಮರ್ಯಾದೆಯ ಎಲ್ಲೆಯೊಳಗೇ ಪಡೆಯುವ ಪತ್ರಿಕೆಗಳೂ, ತಮಿಳಿನಲ್ಲಿ ಹಲವಿವೆ. ಪ್ರತ್ಯೇಕ ಅಕ್ಷರಗಳಿಂದ ಸಂಸ್ಕೃತವನ್ನು ಕಲಿತು ಪಂಡಿತರಾದವರೂ ತಮಿಳರಲ್ಲಿದ್ದಾರೆ. ಬೀಡಿಬೀಡಿಗಳಲ್ಲಿ ಹಿಂದೀ ಪಾಠ ಪ್ರವಚನಗಳು ನಿರಾತಂಕವಾಗಿ ನಡೆದ ಕೊಂಡೂ ಇದ್ದುವು. ಪ್ರಸಿದ್ಧವಾದ ಹಿಂದೀ ಪ್ರಚಾರ ಸಂಸ್ಥೆಯೇ ತಮಿಳುನಾಡಿನ ಕೇಂದ್ರವಾದ ಮದ್ರಾಸಿನಲ್ಲಿ ತಾನೇ ಇದೆ? ವರುಷದಲ್ಲಿ ಎರಡು ಬಾರಿ ಹಿಂದೀ ಸಂಗ್ರಹಕ್ಕೆ ಕುಳಿತುಕೊಳ್ಳುವವರೂ ತಮಿಳರೇ ಹೆಚ್ಚು ಮಂದಿ. ಹೀಗೆಯೇ ಬಿಟ್ಟಿದ್ದರೆ ವಂದೆ ವಂದೆ ಹಿಂದೀ ಇಲ್ಲೆಲ್ಲಾ ತುಂಬಿ ಬಲವಾಗುತ್ತಿತ್ತು.

ಅದರೆ ತಮಿಳರಿಗಿರುವ ಸ್ವಾಭಾವಿಕವಾದ ತೊಂದರೆಗಳನ್ನು ಅರ್ಥ ಮಾಡಿಕೊಳ್ಳದೆ, ಹಿಂದಿಯನ್ನು ಶಾಸನ ಬಲದ ಮೂಲಕ ತಿಣಿಕುವ ಪ್ರಯತ್ನ ಮಾಡುವಾಗ, ಹಾಗೇನಿದೆ ಹಿಂದಿಯಲ್ಲಿ ಮಹಾ? ನಮ್ಮ ಭಾಷೆಯ ಹಾಗೆ ಅದೂ ಒಂದು ಪ್ರಾಂತೀಯ ಭಾಷೆ ತಾನೆ? ಹಿಂದಿಯೇ ಮಾತೃಭಾಷೆಯಾಗುಳ್ಳವರಿಗೆ ಹೆಗುರೆಂದರೇನು, ನಮಗೆ ಮಾತೃ ಭಾಷೆವೆಂದರೇನು? ಇಂಗ್ಲಿಷಿನಲ್ಲಿ ಕಲಿಯುತಕ್ಕುದನ್ನೆಲ್ಲ ಹಿಂದಿಯಲ್ಲಿ ಕಲಿಯುವುದಕ್ಕಿಂತ, ನಮ್ಮ ನಮ್ಮ ಭಾಷೆಯಲ್ಲೇ ಕಲಿಯಬಹುದಲ್ಲಾ? ಹಾಗೆ ನೋಡಿದರೆ ನಮ್ಮ ಭಾಷೆ ಹಿಂದಿಗಿಂತಲೂ ಹೆಚ್ಚಿನ ಪ್ರಾಚೀನ ಭಾಷೆಯೂ ಬಲವಾದ ಭಾಷೆಯೂ ಅಲ್ಲವೇನು? ಇದೆಲ್ಲ ಪ್ರತಿಯೊಬ್ಬ ಪ್ರಾಂತೀಯನ ತಲೆಯಲ್ಲಿಯೂ ಸುಳಿದಾಡುವ ಪ್ರಶ್ನೆಗಳು. ಕನ್ನಡಿಗರಿಗೂ ಸಹ.

ಇದನ್ನೆಲ್ಲ. ಪರ್ಯಾಲೋಚಿಸಿ ಕೊಂಡು ಹಿಂದೀವಿಷಯಕವಾದ ಒತ್ತಾಯವನ್ನು ಕಟ್ಟಿ ಮಟ್ಟಿಟ್ಟು, ಇಂಗ್ಲೀಷಿನ ಉಚ್ಚಾಟನೆಯನ್ನು ಬೇಗಾಗಿದ್ದರೆ ಮುಂದಿನ ತಲೆಮಾರಿಗೆ ಬಿಟ್ಟುಕೊಟ್ಟು, ನೆಮ್ಮದಿಯ ಭಂಗವಿಲ್ಲದೆ ಊರ್ಜಿತವಾಗಿ, ಈ ನಡುವೆ ಪಡೆದುದೆಲ್ಲ ಮರೆತು, ಸೌಹಾರ್ದತೆಯೂ ಒಳ್ಳೆಯ ಬಗೆಯೂ ಪಡೆದೇಳು ಭಾರತ ದೇಶದಲ್ಲಿ.

ಭಾಷೆಯ ವಿಷಯದಲ್ಲಿ ಮಾತ್ರ ಅವಾಹನೆ ಉಚ್ಚಾಟನೆಗಳು ತನ್ನಂತಾನೇ ಆಗುವಂತೆ ವಾತಾವರಣದಲ್ಲಿ ಎಡೆ ಮಾಡಿಕೊಡಬೇಕು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೧.

ನನಗೆ ನಾನೇ ಸಹಾಯ ಮಾಡಿಕೊಂಡೆ

(ಏಳನೇ ಪುಟದಿಂದ)

ನಿಮ್ಮನ್ನು ಅನುಸರಿಸಲು ಹೇಳಿದಿರಾ?"

"ಹೆತ್ತವರ್ಕ್ಕೂ ಹೆಚ್ಚು ಜನ ಗೆಳತಿಯರಿಗೆ ಹೇಳಿದ್ದೇನೆ. ಅವರಲ್ಲಿ ಎಷ್ಟೋ ಗೆಳತಿಯರು ಇದೇ ಶಿಬಿರಕ್ಕೆ ಬಂದಿದ್ದಾರೆ".

"ಇರಲಿ. ಹೆಚ್ಚು ಹೆಚ್ಚು ಮಕ್ಕಳನ್ನು ದೇವರು ಕರುಣಿಸಿದ, ಏನು ಹಾಗೆ?

"ಬಿಡಿ. ಮಕ್ಕಳನ್ನು ಕರುಣಿಸಿದ ಭಗವಂತ ಶಾಂತಿ ಸಮೃದ್ಧಿಗಳನ್ನು ಕರುಣಿಸುವನೆ? ನನಗೆ ನಾನೇ ನೆರವಾಗಬೇಕು. ಆಗ ಅವನೂ ನನಗೆ ನೆರವಾಗುವನು" ಎಂದು ಮಾತು ಮುಗಿಸಿ, ಕಾಯುತ್ತ ಕುಳಿತಿದ್ದ ಶಿಬಿರದ ವಾಹನವನ್ನು ಏರಿದಳು. ವಾಹನ ಇಂತಹ ಇನ್ನೂ ಅನೇಕ ಮಹಿಳೆಯರನ್ನು ಹೊತ್ತು ಅವರವರ ಗ್ರಾಮದತ್ತ ಧಾವಿಸಿತು.

ಆಳ್ವಾ ಪಿ. ಪಿ. ಪ್ರಭುಗಳಿಗೆ ವಿದಾಯ

ಕುಂದಾಪುರ ಅಸಿಸ್ಟೆಂಟ್ ಕಮಿಶನರ್ ಶ್ರೀ ಪಿ. ಪಿ. ಪ್ರಭುಗಳು ತಂಜಾವೂರಿಗೆ ವರ್ಗವಾಗಿ ಹೋಗುವ ಸೈಯಿಕ್ಕೆ ಅವರಿಗೆ ಉಡುಪಿಯ ಸತ್ಕಾರ ಸಮಿತಿಯ ಆಶ್ರಯದಲ್ಲಿ ತಾ. 31 ರಂದು ವಿದಾಯ ಸತ್ಕಾರ ಸಮಾರಂಭವೊಂದು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಉಡುಪಿಯ ತಹಶೀಲ್ದಾರರು ಸ್ವಾಗತಿಸಿ ಸಂದೇಶವಾಚನ ಮಾಡಿದರು. ವಿವಿಧ ಸಂಘ ಸಂಸ್ಥೆಗಳ ಪರವಾಗಿ ಹೂ ಹಾರ ಅರ್ಪಿಸಿದ ತರುವಾಯ ಶ್ರೀಗಳಾದ ಸುಧ್ವರಾಜರು ಶ್ರೀ ಬಿ. ಸೀತಾಪ್ಪ ಹೆಗ್ಡೆ, ಶ್ರೀ ಟಿ. ರಮೇಶ ಪೈಗಳು, ಶ್ರೀಯುತ ಪ್ರಭುಗಳು ಸಲ್ಲಿಸಿದ ಸೇವೆಯ ಗುಣ ಕಥನವಾಡಿದರು. ಶ್ರೀ ಪಿ. ಪಿ. ಪ್ರಭುಗಳು ಉತ್ತರಿಸುತ್ತಾ ಅಧಿಕಾರದ ಉಪಯೋಗ ಪಡೆದು ತನ್ನೊಳಿತ ಸೇವೆ ಸಲ್ಲಿಸುವುದೊಂದು ಭಾಗ್ಯವೇ ಸರಿ ಎನ್ನುತ್ತಾ ಇಲ್ಲಿಯ ಜನರು ಸ್ನೇಹಪರ ಕಾರ್ಯಕರ್ತರಾಗಿದ್ದರೆಂದರು.

ಪಿ. ಡಬ್ಲ್ಯೂ. ಡಿ. ಬಂಗಲೆಯಲ್ಲಿ ಆ ರಾತ್ರಿ ನಡೆದ ಭೋಜನ ಕೂಟದಲ್ಲಿ ಶ್ರೀ ಸುಧ್ವರಾಜರು ಭಾಷಣಗೈದರು. ಟೀಫಾ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಕೆ. ಲಕ್ಷ್ಮಣ ಶೆಟ್ಟಿಗಾ ಅತಿಥಿಗಳ ಗುಣಕಥನ ಮಾಡಿದರು. ಅತಿಥಿಗಳ ಸಮುಚಿತ ಉತ್ತರದ ಬಳಿಕ ಶ್ರೀ ರಂಗನಾಥ ಶೆಟ್ಟಿಯವರು ಧನ್ಯವಾದವನ್ನು ಅರ್ಪಿಸಿದರು.

ಶ್ರೀ ಕೃಷ್ಣ ಧರ್ಮಭೃತ್ರದ ಉದ್ಘಾಟನೆ

ಉಡುಪಿಯ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಸುಮಾರು ಒಂದು ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಶ್ರೀ ಕೃಷ್ಣ ಧರ್ಮಭೃತ್ರದ ಉದ್ಘಾಟನಾ ಸಮಾರಂಭವು ತಾ. 30ರಂದು ಉಡುಪಿ ಪುತ್ತಿಗೆ ಮಠದ ಶ್ರೀ ಸುಜ್ಞಾನೀಂದ್ರ ತೀರ್ಥ ವಿದ್ಯಾವಲ್ಲಭ ಶ್ರೀ ಪಾದಂಗಳವರಿಂದ ನೆರವೇರಿತು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಯುತ ಶ್ರೀ ಪೇಜಾವರ ಶ್ರೀಗಳವರು ವಹಿಸಿದ್ದರು. ಆರಂಭದಲ್ಲಿ ಶ್ರೀ ಪಿ. ರಂಗನಾಥ ಶೆಟ್ಟಿಯವರು ಸ್ವಾಗತಿಸಿದರು. ಕಟ್ಟಡದ ಮುಖ್ಯ ನಿರ್ಮಾಪಕರಾದ ಶ್ರೀ ಶಿರೂರು ವಸಿಷ್ಠ ಶ್ರೀ ಲಕ್ಷ್ಮೀ ಮನೋಜ್ಞ ತೀರ್ಥ ಶ್ರೀ ಪಾದಂಗಳವರು ಪ್ರಾಸ್ತಾವಿಕ ಭಾಷಣಗೈದರು. ಅಷ್ಟಮಠದ ಶ್ರೀ ಪಿ. ಶ್ರೀಪತಿ ಆಚಾರ್ಯರ ಸೇವಾಭಾವವನ್ನು ಕೊಂಡಾಡಿದರು. ಶ್ರೀ ದೇವೇಂದ್ರ ಪೆಜತ್ತಾಯರು ವಿರಚಿತವನ್ನು ಸಮರ್ಪಿಸಿದರು. ಪುತ್ತಿಗೆ ಮಠದ ಶ್ರೀ ಸುಜ್ಞಾನೀಂದ್ರ ತೀರ್ಥ ವಿದ್ಯಾವಲ್ಲಭ ಶ್ರೀ ಪಾದಂಗಳವರು ಭಕ್ತರ ಉದ್ಘಾಟನಾ ಕಾರ್ಯವನ್ನು ನೆರವೇರಿಸಿದರು. ಶ್ರೀ ಸೋದೆ ಮಠದ ಶ್ರೀ ವಿದ್ಯೇಶತ್ತಮ ತೀರ್ಥ ಶ್ರೀ ಪಾದಂಗಳವರು ಪ್ರವಚನಗೈಯುತ್ತಾ ಉಡುಪಿಯಲ್ಲಿ ಇಂತಹ ಒಳ್ಳೆಯ ಕೆಲಸಗಳಿಗೆ ಮಹಾಜನರ ಸಹಕಾರ ದೊರಕುವುದು ಸಂತೋಷವೆಂದರು ಅನಂತರ ಅಗ್ನಿಹೋತ್ರಿ ಶ್ರೀ ಅಲೆಪೂರು ನೀಲಕಂಠಾಚಾರ್ಯ ಪ್ರವಚನವಾಡಿದರು.

ಡಾ| ಟಿ. ಮಾಧವ ಪೈಗಳು ಪ್ರವಚನಗೈಯುತ್ತಾ ಉಡುಪಿಯ ವೈಭವ ಬೆಳೆಯುವುದಕ್ಕೆ ಶ್ರೀಗಳವರ ಹಾಗೂ ಜನಗಳ ನಡುವೆ ಏಕಚಿತ್ತವಾದ ಸಾಂಕರ್ಯ ಬೆಳೆಯಬೇಕೆಂದು ಹೇಳಿದರು. ಶ್ರೀ ಪಿ. ಶ್ರೀಪತಿ ಆಚಾರ್ಯರು ಪ್ರವಚನಗೈಯುತ್ತಾ ಈ ಭೃತ್ರದನ್ನು ಯೋಗ್ಯರೀತಿಯಲ್ಲಿ ಪರ್ಯಾಯ ಶ್ರೀಗಳವರು ನಡೆಸಿಕೊಂಡು ಹೋಗಬೇಕೆಂದು ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಪೇಜಾವರ ಶ್ರೀಗಳವರು ಪ್ರವಚನಮಾಡುತ್ತಾ ಶ್ರೀ ಕೃಷ್ಣ ಮಠದ ಬಹುಮುಖ್ಯ ಪ್ರಗತಿಯಲ್ಲಿ ಇದೊಂದು ಮೈಲಿಗಲ್ಲು ಎಂದರು. ಭೃತ್ರ ಕಾರ್ಯವನ್ನು ಕೈಕೊಂಡ ಶ್ರೀ ಶ್ರೀಪತಿ ಆಚಾರ್ಯರ ದಕ್ಷ ಕಾರ್ಯವನ್ನು ಕೊಂಡಾಡಿದರು.

ಶ್ರೀ ಪಿ. ಶ್ರೀಪತಿ ಆಚಾರ್ಯರನ್ನು ಸಭೆಯಲ್ಲಿ ಬೆಸಲಿ ಕುಳಿತಿದ್ದ ಎಲ್ಲಾ ಶ್ರೀ ಪಾದಂಗಳವರುಗಳು ಫಲ, ಮಂತ್ರಾಕ್ಷತೆಗಳನ್ನಿತ್ತು ಅನುಗ್ರಹಿಸಿದರು. ಶ್ರೀ ಪೆಜತ್ತಾಯರು ಈ ಪುಣ್ಯ ಕಾರ್ಯಕ್ಕೆ ನೆರವಾದವರಿಗೆ ಧನ್ಯವಾದ ಸಲ್ಲಿಸಿ ಬಾಕಿ ಇರುವ ಸಾಧಾರಣ ೩೫ಸಾವಿರ ರೂಗಳನ್ನು ಸಾರ್ವಜನಿಕರು ಉದಾರ ಮನಸ್ಸಿಂದ ತುಂಬಿಕೊಡಬೇಕೆಂದು ಪ್ರಾರ್ಥಿಸಿಕೊಂಡರು.

ವಿದಾಯ ಸತ್ಕಾರ

ಉಡುಪಿ, ಇಡ್ಲಿಯ ಪಾರ್ಸಲ್ ಕೋಲೇಜಿನಿಂದ ಉತ್ತಮ ಉದ್ಯೋಗದ ಮೇಲೆ ಹೋಗುತ್ತಿರುವ ಶ್ರೀ ಪಿ. ವಿ. ಆಚಾರ್ಯರನ್ನು ಶ್ರೀ ಎಸ್. ರಾಮಚಂದ್ರ ಪಾಂಗಣ್ಣಾಯರನ್ನೂ, ಬೀಳ್ಕೊಡಲು ಶ್ರೀ ಎಸ್. ಸೀತಾರಾಮ ಕಾಮತರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟ ಜರಗಿತು.

ಸಂಸ್ಥೆಯ ಜನರಲ್ ಮೆನೇಜರ್ ಡಾ| ಕೆ. ಕೆ. ಕಲ್ಯಾರರು ಸ್ವಾಗತಿಸಿ, ಅಗಲಲಿರುವ ಅಧ್ಯಾಪಕರ ಉಚಿತ ಗುಣಗಾನ ಮಾಡಿ ಹರಸಿದರು.

ವಿದ್ಯಾರ್ಥಿಗಳ ಪರವಾಗಿ ಕುಮಾರಿ ಶಶಿಕಲಾ, ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಇವರುಗಳು ಮಾತನಾಡಿದ ನಂತರ ಸಭಿಕರ ಪರವಾಗಿ ಶ್ರೀ ಕೆ. ವಿ. ರಾವ್, ಕೆ. ಎಸ್. ಶೆಟ್ಟಿ ಮೊದಲಾದವರು ಮಾತನಾಡಿದರು.

ಅಧ್ಯಕ್ಷರು ಪಾರ್ಸಲ್ ಕಾಲೇಜ್ ಕಳೆದ ಎಂಟು ವರ್ಷಗಳಿಂದ ಸಲ್ಲಿಸಿದ ಸೇವೆಯನ್ನು ಕೊಂಡಾಡಿ ಬೆಂಬಲದ ಆಶ್ವಾಸನೆಯನ್ನಿತ್ತರು. ಲಘು ಫಲಾಹಾರದೊಂದಿಗೆ ಸಭೆಯು ಹರಿಯಿತು.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೩-೦೦ [ಪ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ!

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ| ಕೊರಡ್ಲಲ್ ವೆಂಕಟ್ರಾವ್, ಎಲ್. ಐ.ಎಮ್.

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜೆ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿಯರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರವಿಸಲ್ಪಟ್ಟಿದೆ. ಹೊಸ ವಿಭಾಗ ಸಮಸ್ತವಾಗಿ ಸೇರಿಸಲ್ಪಟ್ಟಿದೆ.

ಬೆಲೆ: ರೂ. ೩-೦೦ (ಪ. ಖರ್ಚು ಬೆ ಕಿ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P. and S.C No 3/1968.

ವಜ್ರೇಶ್ವರಿ ಶೆಟ್ಟಿ, ನೀಲಾಮ್ಮ ಶೆಟ್ಟಿ ವಿಧವೆ, ಕಾರ್ಕಳ ತಾಲ್ಲೂ ಕಲ್ಲಮುಂಡ್ಕೂರು ಗ್ರಾಮದ ಕೊಟ್ಟಿಬಾಡಿಗುತ್ತು —ಅರ್ಜಿದಾರ್ಳು

ಮತ್ತು

ಜಗದೀಶ ಶೆಟ್ಟಿ ಸಕಾ 7 ಜನರು —ಎದ್ರಿರು

ಈ ಮೂಲಕ ತಿಳಿಯುವುದೇನೆಂದ್ರೆ—

ಅರ್ಜಿದಾರಳು ಅವಳ ಗಂಡನ್ನೂ ಸೇರಾಮ್ಮ ಶೆಟ್ಟಿ ಸೊತ್ತುಗಳಿಗೆ ತನಗೆ ವಾರಸುದಾರಳೆಂದು ಕೊಡಬೇಕೂ ತಾಕ್ಲು ಮಾಡಿದ ಮೇಲಿನ ಅರ್ಜಿ ತಾರೀಖು 8.7 1968ಕ್ಕೆ ಇಟ್ಟಿದೆ.

ಅಕ್ಷೇಪಣೆ ಇದ್ದವರು ಮೇಲ್ಕಂಡ ಕೋರ್ಟ್ ಮುಂದೆ ಸದ್ರಿ ದಿನ ಬೆಳಿಗ್ಗೆ 10.30 ಗಂಟೆಗೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಿಸಿಕೊಳ್ಳತ್ತು ಎಂತ ಈ ಮೂಲಕ ತಿಳಿಸಲಾಗುತ್ತದೆ.

(By order of the Court)

N.M. Adyanthaya
Advocate for Petitioner

Karkala, 7-6-68

ಇದಕ್ಕೆ ಸುಂಕವಿಲ್ಲ

ಅಂತಾರಾಷ್ಟ್ರೀಯ ಕಾರು—ಕೋಮೊಬೈಲ್

ಯುರೋಪಿನ ಪ್ರಸಿದ್ಧವು ಅಪ್ಪಟ ಅಂತಾರಾಷ್ಟ್ರೀಯ ಮೋಟಾರು ಕಾರು "ಕೋಮೊಬೈಲ್"ನ ಸ್ವರೂಪ ಮತ್ತು ಕಾರ್ಯಶಕ್ತಿ ಹೇಗಿರಬಹುದೆಂಬ ಬಗ್ಗೆ ಯುರೋಪಿನ ಮೋಟಾರು ಉದ್ದಿಮೆ ರಂಗದಲ್ಲಿ ಈಗಾಗಲೇ ಊಹಾಪೋಹಗಳು ಎದ್ದಿವೆ. ಅದರ ನಮೂನೆ ಮತ್ತು ವಿವರಗಳು ಇನ್ನೂ ಬಹುರಂಗವಾಗಿಲ್ಲ. ಜನಕ್ಕೆ ತಿಳಿದಿರುವುದು ಅದರ ರೂಪರೇಖೆ ಮಾತ್ರ. ಆದರೆ ಈ ಹೊಸ ಕಾರಿನ ಕೆಲವು ಲಕ್ಷಣಗಳು ನಿರ್ದಿಷ್ಟಪಟ್ಟಿವೆ. ಇದು ಕುಗ್ಗಿದಾಕೃತಿಯುಳ್ಳದ್ದು ಮತ್ತು ಆಕರ್ಷಣೀಯವಾದದ್ದು ಆಗಿರುತ್ತದೆ. ಇದರ ಇಂಜಿನ್ ವಾಂಕೆಲ್ ರೀತಿಯ ರೋಟರಿ ಶಕ್ತಿ ಉತ್ಪಾದನಾ ವ್ಯವಸ್ಥೆಯನ್ನು ಹೊಂದಿದೆ.

ಫ್ರಾನ್ಸಿನ ಸಿಟ್ರೋಯನ್ ಮತ್ತು ಜರ್ಮನಿಯ ಬೆಳೆಯುತ್ತಿರುವ ಮೋಟಾರು ಸಂಸ್ಥೆಯೊದ ಎನ್‌ಎಸ್‌ಯು— ಈ ಎರಡು ಪ್ರಖ್ಯಾತ ಸಂಸ್ಥೆಗಳು ಒಟ್ಟುಗೂಡಿ ಈ ಕಾರಿನ ನಮೂನೆಯನ್ನು ತಯಾರಿಸಿವೆಯೆಂದರೆ ಫಲಿತಾಂಶವು ಆಶ್ಚರ್ಯಕರವಾಗಿರಬೇಕು. ಸಿಟ್ರೋಯನ್ ಮೋಟಾರು ಉದ್ದಿಮೆಯ ಕಳೆಯ ಸಂಸ್ಥೆಗಳಲ್ಲಿ ಒಂದು. ಸಾಂಪ್ರದಾಯಿಕವಲ್ಲದ ಹೊಸ ಹೊಸ ಧಮೂನೆಗಳನ್ನು ಕಂಡುಹಿಡಿಯುವುದರಲ್ಲಿ ಮತ್ತು ಪ್ರಸಿದ್ಧ ಮಗಳನ್ನು ನಿರ್ಮಿಸುವುದರಲ್ಲಿ ಈ ಸಂಸ್ಥೆ ಹೆಸರುವಾಸಿಸಿದೂಗಿದೆ. ೧೯೩೦ರ ವೇಳೆಗೆ ಮುಂದಿನ ಚಕ್ರ ಚಾಲಿತ ಕಾರನ್ನು ಸಿಟ್ರೋಯನ್ ಸಂಸ್ಥೆ ತಯಾರಿಸಿತು ಮತ್ತು ಇದರ ಪ್ರಖ್ಯಾತವಾದ "ಟ್ರಾಕ್ಷನ್ ಅವ್ಯಾಂಟ್" ವಾಹನವನ್ನು ನಮೂನೆ ಮತ್ತು ಮೂಲತತ್ವಗಳಲ್ಲಿ ಯಾವ ಬದಲಾವಣೆಗಳಿಲ್ಲದೇ ಸುಮಾರು ಇಪ್ಪತ್ತು ವರ್ಷಗಳ ವರೆಗೆ ಮಾರಲಾಯಿತು. ಜಗತ್ತಿನಲ್ಲಿ ಪ್ರಸಿದ್ಧವಾಗಿ ಸ್ವಯಂಚಾಲಿತ ಬ್ರೇಕ್ ವ್ಯವಸ್ಥೆಯುಳ್ಳ ಕ್ರಾಂತಿಕಾರಿ ಡಿಎಸ್ ಮಾಡಲ್ ಕಾರನ್ನು ೧೯೫೬ರಲ್ಲಿ ಯೇ ಸಿಟ್ರೋಯನ್ ತಯಾರಿಸಿತು. ಅದು ಇಂದಿನ ಮಾರುಕಟ್ಟೆಯಲ್ಲಿ ದೊರಕುವ ಅತ್ಯಾಧುನಿಕ ಕಾರುಗಳಲ್ಲಿ ಒಂದಾಗಿದೆ.

ಅತ್ಯಂತ ಅನುಕೂಲವಾದ ಕಣ್ಣು ಕಾರಿನ ಉತ್ಪಾದನೆಯಲ್ಲಿ ಮೋಟಾರು ಸೈಕಲ್ ತಾಂತ್ರಿಕ ಅನುಭವನ್ನು ಬಳಸಿಕೊಳ್ಳುವುದೇ ಎನ್‌ಎಸ್‌ಯು ಸಂಸ್ಥೆಯ ವೈಶಿಷ್ಟ್ಯವಾದ್ದೆ. ಈ ಸಂಸ್ಥೆಯ ವರು ಮೋಟಾರು ಸೈಕಲ್ ಉತ್ಪಾದನೆಯಲ್ಲಿ ಅತ್ಯಂತ ಅನುಭವಶಾಲಿಗಳಾದರೂ ಮೋಟಾರು ಕಾರು ತಯಾರಿಕೆಗೆ ಕೊಡಗಾಗಿ ಕಾಲಿಟ್ಟವರು. ಪಶ್ಚಿಮ ಜರ್ಮನಿಯ ಯುದ್ಧಾನಂತರ ಮೋಟಾರು ಕೈಗಾರಿಕೆಯಲ್ಲೇ ಎನ್‌ಎಸ್‌ಯು ಕಾರು ಅತ್ಯಂತ ಯಶಸ್ವಿಯಾದದ್ದು.

ಅರನೇ ದಶಕದ ಪ್ರಥಮದಲ್ಲೇ ಈ ಸಂಸ್ಥೆಯು ಕ್ರಾಂತಿಕಾರಕವಾದ ರೋಟರಿ ವಾಂಕೆಲ್ ಇಂಜಿನ್ನನ್ನು ತಯಾರಿಸಿ ಅದರ ಲೈಸೆನ್ಸ್ ಹಕ್ಕಿನ ಸೂಲೀಕೃತ್ವದಿಂದಲೇ ಬೇಕಾದಷ್ಟು ಹಣವನ್ನು ಸಂಪಾದಿಸಿದೆ. ಅಂತಾರಾಷ್ಟ್ರೀಯ ಪ್ರಖ್ಯಾತಿಗಳಿಸಿರುವ ರೋಲ್ಸ್‌ರಾಯ್ಸ್, ಅಲ್ಫಾ ರೋಮಿಯೋ ಮತ್ತು ಜಪಾನಿನ ಟೋಕಿಯೋ ಕೋಗಿಯೋ ಸಂಸ್ಥೆಗಳು ಈ ಲೈಸನ್ಸನ್ನು ಉಪಯೋಗ ಮಾಡುತ್ತಿವೆ.

ವಿವಿಧ ಕಂಪನಿಗಳ ಜಂಟಿ ತಯಾರಿಕೆಯಿಂದಾಗಿ ಕೋಮೊಬೈಲ್ ಅಂತಾರಾಷ್ಟ್ರೀಯ ಕಾರಾಗಿದೆ. ಅನಂತರ ಇದನ್ನು ಸ್ವಿಡ್ಜರ್‌ಲೆಂಡಿನ ಜಿನೀವಾದಲ್ಲಿ ರಿಜಿಸ್ಟರ್ ಮಾಡಿಸಿರುವುದರಿಂದ ಕಾನೂನಿನ ಪ್ರಕಾರ ಇದು ಸ್ವಿಸ್ ಯಂತ್ರವಾಗಿದೆ. ಈ ಕಾರಿನ ಇಂಜಿನ್ನು ಲಕ್ಸೆಂಬರ್ಗಿನ "ಕೋಮೋಟಾರ್" ಕಾರ್ಖಾನೆಯದೂ ಇದರ ಬಾಡಿ ಫ್ರಾನ್ಸಿನ ಸಿಟ್ರೋಯನ್ ತಯಾರಿಕೆಯೂ ಮತ್ತು ಉಳಿದ ಭಾಗಗಳು ಎನ್‌ಎಸ್‌ಯು ಸಂಸ್ಥೆಯದ್ದೂ ಆಗಿರುತ್ತವೆ. ಫ್ರಾನ್ಸ್ ಮತ್ತು ಜರ್ಮನಿಯ ಡಿಸೈನ್ ತಜ್ಞರು ಈಗಾಗಲೇ ಕಾರ್ಯಾರಂಭ ಮಾಡಿರುವುದರಿಂದ ಫಲಿತಾಂಶವು ಶ್ರೇಷ್ಠತರ ಗತಿಯ ದಾಗಿ ಇದ್ದೇ ಇರುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಈ ಕಾರಿಗೆ ಎನ್‌ಎಸ್‌ಯು ಮಾದರಿಯ ಎರಡು ಚಕ್ರಗಳ ಮೋಟಾರ್ ಇಂಜಿನ್ ಮತ್ತು ಫ್ರೆಂಚ್ ಸಂಸ್ಥೆಯ ಡಿಎಸ್ ಮೊಡೆಲ್ಲಿಗಿಂತಲೂ ಅತ್ಯಾಧುನಿಕವಾದ ಬಾಡಿ ಇರಬಹುದೆಂದು ಊಹಿಸಲಾಗಿದೆ.

ಈ ಹೊಸ ಕಾರಿಗೆ ಏದು ಬಾಗಿಲುಗಳಿರುತ್ತವೆ. ಮುಂದಿನ ಚಕ್ರ ಚಾಲನೆಯಿಂದ ಕೂಡಿದ್ದು, ಚಾಲಕನ ನಿಯಂತ್ರಣಕ್ಕೊಳಪಟ್ಟಿರುವಂತಹದಾಗಿರುತ್ತದೆ.

ರಿಜಿಸ್ಟ್ರೇಶನ್ ಮತ್ತು ಲೈಸೆನ್ಸನ್ನು ಅಂತಾರಾಷ್ಟ್ರೀಯ ರೀತಿಯಲ್ಲಿ ಮಾಡುವುದರಿಂದ ಈ ತಯಾರಿಕೆ ವಿಶಿಷ್ಟವಾಗಿದೆ. ಈ ಕಾರು ಸುಂಕದ ಅಡ್ಡಿ ಆತಂಕಗಳಿಂದ ಮುಕ್ತವಾದ ಸಾಮಾನ್ಯ ಮಾರುಕಟ್ಟೆ ನೀತಿಗೆ ಒಳಪಡಿಸಿ ಉತ್ಪಾದಿಸಲಾದ ಪ್ರಪ್ರಥಮ ತಯಾರಿಕೆ. ಕಾರಿನ ಸಾರ್ವಜನಿಕ ಮಾರಾಟ ಆರಂಭವಾಗುವ ಹೊತ್ತಿಗೆ ಎಲ್ಲ ಸುಂಕಗಳೂ ರದ್ದಾಗಿರುತ್ತವೆ. ಇದರ ಬಿಡಿ ಭಾಗಗಳು, ಸರ್ವೀಸಿಂಗ್ ಮತ್ತು ಇತರ ಖರ್ಚುಗಳನ್ನು ಸಾರ್ವತ್ರಿಕವಾಗಿ ಕೊಡುವ ಮಾಡಲಾಗುವುದು ಮತ್ತು ಈ ಕಾರ್ಯವನ್ನು ಸಮರ್ಥ ರೀತಿಯಲ್ಲಿ ನೆರವೇರಿಸಲಾಗುವುದು.

ಸಂತಾಪ ಸೂಚಕ ಸಭೆ

ಮಣಿಪಾಲ, ಜೂನ್ ೭—"ಶ್ರೀ ಬಿ. ವೈಕುಂಠ ಬಾಳಿಗರು ಮಂತ್ರಿ ಹಾಗೂ ವಿಧಾನ ಸಭಾಧ್ಯಕ್ಷರಾಗಿ ರಾಜ್ಯದಲ್ಲಿ, ಪ್ರಗತಿ ಕಾರ್ಯಗಳಿಗೆ ಕಾಣಿಕೆಯ ಮಹಾವೃಕ್ಷಿಯಾಗಿದ್ದರು" ಎಂದು ಅಕಾಡಮಿ ಆಫ್ ಜನರಲ್ ಎಜ್ಯುಕೇಶನ್ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ.ಎಂ.ಎ ಪೈ ಇಂದು ಇಲ್ಲಿ ಹೇಳಿದರು.

ಶ್ರೀ ಬಾಳಿಗರು ಸ್ವಲ್ಪಕಾಲ ಅಕಾಡಮಿಯ ಅಧ್ಯಕ್ಷರಾಗಿದ್ದರಲ್ಲದೆ, ಅಕಾಡಮಿಯ ಪ್ರತ್ರಿಪರ ಕಾಲೇಜುಗಳ ಪ್ರಗತಿಯಲ್ಲಿ ಯೋಗಗಳೂ ವಿಶೇಷ ಆಸಕ್ತಿ ವಹಿಸುತ್ತಿದ್ದರೆಂದು ಅವರು ನುಡಿದರು.

ಕರ್ನಾಟಕ ಮೆಡಿಕಲ್ ಕಾಲೇಜ್ ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಧರ್ಮಾಧಿಕಾರಿಗಳು, ಅಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳು ಸಭೆಯಲ್ಲಿ ಸಂತಾಪ ಸೂಚಕ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಮಣಿಪಾಲ್ ಕಾಲೇಜಿನ ಡೀನ್ ಡಾ| ಎ. ಕೃಷ್ಣರಾವ್‌ರವರು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುತ್ತಾ, ಶ್ರೀ ಬಾಳಿಗರು ದಕ್ಷಿಣ ಕನ್ನಡದಲ್ಲಿ ಕೈಗಾರಿಕಾ ಹಾಗೂ ಕೃಷಿ ಕ್ಷೇತ್ರಗಳಿಗೆ ಪ್ರಗತಿಯನ್ನುಂಟುಮಾಡಲ್ಲಿ ಕೃಷಿಸಿದವರಲ್ಲೊಬ್ಬರೆಂದು ತಿಳಿಸಿದರು. ವಿಶ್ವಂಗಳ ಅಭಿವೃದ್ಧಿಗೆ ಸಾಮಾಜಿಕ ಕಾರ್ಯಗಳಿಗೆ ಅಕಾಡಮಿಯು ಎಲ್ಲಾ ಸಂಸ್ಥೆಗಳೂ ಇಂದು ಮುಳ್ಳಿದ್ದುವು.

ಸಹನಾಮೂರ್ತಿ — ಬಾಳಿಗಾ

ಎಪ್ರಿಲ್ ತಿಂಗಳಲ್ಲಿ ರಾಜ್ಯ ಶಾಸನ ಸಭೆಚುನಾವಣೆ— ಆರಂಭದ ದಿನ ತಮ್ಮೂರಿನವರಲ್ಲಿ ಆಸೀನರಾಗಿದ್ದ ಸಭಾಧ್ಯಕ್ಷರನ್ನು ಮುಂದಲ್ಲಿ ಯಾರೂ ಕಾಣಲಿಲ್ಲ; ಕೆಲ ದಿನಗಳನಂತರ, ಮದ್ರಾಸದಲ್ಲಿ ಚೆಕ್ಕೆಸ್ ನಡೆಯುತ್ತಿದೆ ಎಂದು ತಿಳಿಯಿತು— ಮೆದುಳಿಗೆ ಸಂಬಂಧಿಸಿದ ಶಸ್ತ್ರಕ್ರಿಯೆ. ಅಸ್ವಸ್ಥರಾಗಿದ್ದ ಸ್ಪೀಕರ್ ಬಂಟವಾಳ ವೈಕುಂಠ ಬಾಳಿಗಾರು ತಾ. ೬ರಂದು ಅಸ್ಪತ್ರೆಯಲ್ಲೇ ಕೊನೆಯುಸಿರೆಳೆದರು ತಮ್ಮ ಎಳನೆಯ ವಯಸ್ಸಿನಲ್ಲಿ.

ಶ್ರೀ ವೈಕುಂಠ ಬಾಳಿಗಾರದು ಬಂಟವಾಳರ ಹಿರಿಯ ವ್ಯಾಪಾರೀ ವ ನೆತ್ತ— 'ಕಂಪೆನಿ ಮನೆತನ'. ಈ ಮನೆತನದವರಿಗೆ ಉದಾರತೆ ಮತ್ತು ಮಾನವತೆಗಳು ವೈವೆತ್ತು ಬಂದಿದೆ. ೧೯೬೩ರ ಭಾರಿ ನೆರೆಯಲ್ಲಿ ಕಂಗಾಲಾದ ಅನೇಕರು ಈ 'ಕಂಪೆನಿ'ಯಿಂದ ಉಪಕೃತರಾಗಿದ್ದಾರೆ. ಶ್ರೀ ವೈಕುಂಠ ಬಾಳಿಗಾರೂ ಅಲ್ಲಿಯ ಹೈಸ್ಕೂಲೊಂದಕ್ಕೆ ಸಭಾ ಭವನವನ್ನು ಕಟ್ಟಿಸಿ ಕೊಟ್ಟಿದ್ದಾರೆ.

ಬಿ. ಎಸ್‌ಸಿ ಪದವೀಧರರಾದ ಮೇಲೆ ಶ್ರೀ ಬಾಳಿಗಾರ ಹೆತ್ತವರ ಅಪೇಕ್ಷೆಯಂತೆ ನ್ಯಾಯ ಶಾಸ್ತ್ರವನ್ನು ಕಲಿತರು ಮಂಗಳೂರಲ್ಲಿ ನ್ಯಾಯವಾದಿಗಳಾಗಿ ದುಡಿದರು. ವೃತ್ತಿಯಲ್ಲಿ ತೊಡಗಿದಾಗ ಶ್ರೀಯುತರಿಗೆ ಕಾಂಗ್ರೆಸಿನ ಗಾಳಿ ತಾಗಿತ್ತು. ಶುದ್ಧ ಖಾದಿ ಧಾರಿ ಬಾಳಿಗಾರನ್ನು ಎಲ್ಲಿಂದಲೂ ಗುರುತಿಸಬಹುದು. ತಮ್ಮ ಅವರ ವಯಸ್ಸಿನಲ್ಲೇ ಪ್ರತ್ಯಕ್ಷ ರಾಜಕಾರಣಕ್ಕೆ ದುಮುಕಿದ ವೀರಭದ್ರರಲ್ಲಿ ಶ್ರೀ ಬಾಳಿಗಾರದು ಮೇಲುಗೈ.

೧೯೫೨ರ ಚುನಾವಣೆಯಲ್ಲಿ ಜನವಿಶ್ವಾಸ ಪಡೆದು ಇವರು ಶಾಸನ ಸಭೆಗೆ ಚುನಾಯಿತರಾದರು ಅಂದು ಮೊತ್ತಮೊದಲು ಬಾರಿಗೆ ವಿಧಾನ ಸಭೆ ಪ್ರವೇಶಿಸಿದ ಬಾಳಿಗಾರು ಕೊನೆಯ ಗಳಿಗೆಯಲ್ಲೂ ಅದರ ಸದಸ್ಯರಾಗಿಯೇ ಉಳಿದರು. ಜನ ಅವರಲ್ಲಿಟ್ಟಿದ್ದ ವಿಶ್ವಾಸಕ್ಕೆ ಇದೊಂದು ನಿದರ್ಶನ.

ಈ ವರ್ಷ ಅವರು ಮಂತ್ರಿಯಾದರು — ನಿಜಲಿಂಗಪ್ಪ—ಜತ್ತಿ ಸಂಪುಟಗಳಲ್ಲಿ ಮುಂದೆ, ಸ್ಪೀಕರ್ ಕಂರಿಯವರು ತಾನು ಭರವಸೆಯಿಂದ ಅಲ್ಲಾಸಿಕೊಂಡ ಬಳಿಕ ಬಾಳಿಗಾ ಸ್ಪೀಕರ್ ಆದರು. ವಿಧಾನ ಸಭಾಧ್ಯಕ್ಷ ಪದ ಮುಳ್ಳಿನ ಹಾಸಿಗೆಯಾದರೂ ಅದನ್ನು ಯಶಸ್ವಿಯಾಗಿ ಹೊತ್ತ ಧೀಮಂತರು ಶ್ರೀ ಬಾಳಿಗಾರು. ಶ್ರೀ ಬಾಳಿಗಾರು ತಾಳ್ಮೆಯ ವ್ಯಕ್ತಿ, ಸಮಾಧಾನದ ಪದನ, ನ್ಯಾಯವಾದಿ. ಅವರ ವಯಸ್ಸು —ನಿಲುವು ಎಲ್ಲರಿಗೂ ಗೌರವಾಸ್ಪದ. ಅಂತಲೇ 'ಸಮರ್ಥ ಸ್ಪೀಕರ್' ಆಗಿ ಹೆಸರು ಪಡೆದರು.

ಮಂತ್ರಿ ಪದವಿಗೆ ಮೊದಲು ಅವರು ಮಣಿಪಾಲದ ಎಕಡೆಮಿ ಆಫ್ ಜನರಲ್ ಎಜುಕೇಶನ್ ಮತ್ತು ಜಿಲ್ಲೆಯ ಹಲವಾರು ಸಾಮಾಜಿಕ—ವಾಣಿಜ್ಯ ಸಂಘ, ಸಂಸ್ಥೆಗಳಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಭಾಗವಹಿಸಿ ಜನಪ್ರಿಯತೆಯನ್ನು ಗಳಿಸಿದ್ದರು. ಶ್ರೀ ಬಾಳಿಗಾರು 'ಅಜಾತ ಶತ್ರು'ವೆಂಬ ಕೀರ್ತಿಗೆ ಪಾತ್ರರು. ಅವರು ತಾ. ೬ರಂದು ವೈಕುಂಠವಾಸಿಗಳಾದುದು ಅತ್ಯಾಭಾವಿಕವೆನ್ನವಾದರೂ ಅನಪೇಕ್ಷಿತ.

ಶ್ರೀ ಬಾಳಿಗಾರ ಆತ್ಮಕ್ಕೆ ಚಿರಶಾಂತಿಯು ದೊರೆಯಲಿ; ಅವರಂತಹ ವ್ಯಕ್ತಿಯಿಂದಲೇ ಅವರ ಕೆರವಾದ ಸ್ಥಾನ ತುಂಬಿ ಬರಲಿ.

ಕರ್ನಾಟಕಕ್ಕೆ

ಯುವಜನ ಸಚಿವ ಸಂಪುಟ

ಕ್ಯಾಬಿನೆಟ್ ಸಚಿವರು:—

- ಶ್ರೀ ವೀರೇಂದ್ರ ಪಾಟೀಲ್— ಮುಖ್ಯಮಂತ್ರಿ, ಸಾಮಾನ್ಯ ಆಡಳಿತ, ಗೃಹಖಾತೆ, ದೊಡ್ಡ ಹಾಗೂ ಮಧ್ಯಮ ನೀರಾವರಿ ಹಾಗೂ ಜಲವಿದ್ಯುತ್ ಯೋಜನೆಗಳು.
- ಮಹಮ್ಮದಾಲಿ ಸಾರಿಗೆ, ಪ್ರವಾಸ ಮತ್ತು ಬಸ್ತಿ.
- ಬಿ. ರಾಚಯ್ಯ—ಕೃಷಿ ಹಾಗೂ ಕೈ.
- ರಾಮಕೃಷ್ಣ ಹೆಗ್ಡೆ—ಅರ್ಥ, ಯೋಜನೆ ವಿಚಾರ, ಎಲೆಕ್ಟ್ರಿಸಿಟಿ ಹಾಗೂ ಸಾಮಾನ್ಯ ಕೈಗಾರಿಕೆ ಮತ್ತು ಯೋಜನೆ.
- ಕೆ.ಪುಟ್ಟಸ್ವಾಮಿ—ಕಾರ್ಮಿಕ ಖಾಲಿ ಮೆಂಟರಿ ವಿಚಾರಗಳು, ಹಾಗೂ ಪ್ರಾಣಿಗಳ
- ಕೆ.ವಿ. ಶಂಕರೇ ಗೌಡ—ಶಿಕ್ಷಣ.
- ಸಿ.ಎಚ್. ನಾಡಗೌಡ—ಅಭಿವೃದ್ಧಿ ಪಂಚಾಯತ್ ರಾಜ್, ಕೈಗಾರಿಕೆಯ ಇಜಾರಾಗಳ ಸಮೇತ ಸಹಕಾರಿ ಖಾತೆ.
- ಕೆ.ಲಿಂಗಪ್ಪ—ಲೋಕೋಪಯೋಗಿ.
- ಕೆ. ರಾಜಶೇಖರಮೂರ್ತಿ—ಕೈಗಾರಿಕೆ, ವಾರ್ತೆ ಮತ್ತು ಪ್ರಚಾರ.
- ವೈ.ರಾಮಕೃಷ್ಣ—ಆರೋಗ್ಯ.
- ಮಂಗಳರಾವ್ ಪಾಟೀಲ್—ಸಮಾಜ ಕಲ್ಯಾಣ.
- ಎಚ್.ವಿ.ಕಾಜಲಗಿ—ಕಂದಾಯ ಮತ್ತು ಕಾನೂನು.

ಸ್ಟೇಟ್ ಸಚಿವರು:—

- ಎ.ಜೆ.ದೊಡ್ಡಮೇಟಿ—ಚಿಕ್ಕನೀರಾವರಿ.
- ಅಲಾಬಿರು ಹನುಮಂತಪ್ಪ—ಅರಣ್ಯ.
- ಜಿ.ಬಿ. ಶಂಕರರಾವ್—ವೆಚ್ಚನಿರ್ವಹಣೆ ಮತ್ತು ಪಶು ಸಂಗೋಪನೆ.
- ಎಚ್.ಸಿ ಲಿಂಗಾರೆಡ್ಡಿ—ಮತ್ಸ್ಯಗಾರಿಕೆ ಮತ್ತು ಬಂದರು.
- ಬಿ.ವಿಠಲದಾಸ ಶೆಟ್ಟಿ—ಆಹಾರ ಸಾಗಣೆ ಪೂರೈಕೆ.

ಉಪ ಸಚಿವರು:—

- ಎಚ್.ಸಿ.ಬೋರಯ್ಯ—ಸಾರಿಗೆ ಮತ್ತು ಪ್ರವಾಸ
- ಎ. ಪಿ. ಅಪ್ಪಣ್ಣ—ಕೈಗಾರಿಕೆ.
- ಡಿ.ಬಿ. ಪವಾರ್—ಕೃಷಿ.
- ಡಿ.ಪರಮೇಶ್ವರಪ್ಪ—ದೊಡ್ಡ ನೀರಾವರಿ ಮತ್ತು ವಿದ್ಯುತ್
- ಪಿ.ಎಲ್. ಗೌಡ—ಇಜಾರಾ.
- ಶ್ರೀಮತಿ ಬಸವರಾಜೇಶ್ವರಿ—ಸಾಮಾಜಿಕ ಕಲ್ಯಾಣ.
- ಕೊಟ್ಟಬಸವಯ್ಯ ಸೋಗಿ ಶಿಕ್ಷಣ.
- ಬಸವರಾಜಪಾಟೀಲ್-ಲೋಕೋಪಯೋಗಿ
- ಜಿ. ಶಮ್ಮಣ್ಣ ರೇಷ್ಮೆಕೃಷಿ
- ಮೊಹಿಲ್ ರಾವ್ ಪಾಟೀಲ್—ಗೃಹ ಖಾತೆ.
- ಬಸಪ್ಪ—ಆರೋಗ್ಯ.

ರಾಜೂ ಯೋಚಿಸುತ್ತಲೇ ಇದ್ದ...

(ಎರಡನೇ ಪುಟದಿಂದ)

ನಿನ್ನದು ಕೆಲಸ? ನಿನ್ನ ಈ ಕೂದಲಿನ ವೇಷದಿಂದಲೇ ನನ್ನ ಒಬ್ಬನೇ ಮನೆಯನ್ನು ಜಾಳುಜಾಳು ಹೊರಡುವಿಯೋ....." ಎಂದು ಬಯ್ಯಲು ಶುರುಮಾಡಿದನು.

ಇದು ಅವಳು ಪ್ರಥಮದಲ್ಲಿ ಕೇಳಿದ ಶೋಯುವ ಮಾತು. ಗಂಡನಮನೆಯಲ್ಲಿ ತನ್ನ ಸ್ವತಂತ್ರ ಮನೆಗಿಂತಲೂ ಅಧಿಕವಾದ ಅಸಹ್ಯಕೇಳಿಕೆಗಳು ಕಟುಮಾತುಗಳು.

ಶನಿವಾರದಂದು ಕೂಡಲಾಗಲೆನ್ನ ನೀ ಕಳಿ ಹೊಳೆದರೆ ಮನೆಯಿಂದೀ ಪ್ರಳಯವಾಗುವ ರೀತಿಯ ಸರವಿಡಿ ಎದ್ದು ಕಾಣುತ್ತಿತ್ತು. ಗಂಡನ ತಾಯಿ, ತನ್ನ ಗಂಡ ಎಲ್ಲಿ "ತನ್ನ ಕೂದಲಿನ ಶೃಂಗಾರದ ಹೊಸ ಬೇರುವ ಕೆಲಸಕ್ಕೂ ಕೈಹಾಕುವುದಿಲ್ಲ" ಎಂದಾಗ ಪತಿಯು ಕುಮುದಾಳಲ್ಲಿ "ಕುಮುದಾ, ಒಳ್ಳೆಯ ಮನೆತನದ ಸ್ತ್ರೀಯರು ಕೂದಲಿಗೆ ಶೃಂಗಾರಕ್ಕೆ ಪಮಾಣ ಮಾಡುವುದಿಲ್ಲ. ತಾಯಿ ಹೇಳಿದ ಹಾಗೆ ಮಾಡು. ಕೇಶರಾಶಿಯ ಶೃಂಗಾರದಿಂದ ಕುಚ್ಚಿಯೂಗಬೇಡ" ಎನ್ನುವನ್ನು.

ಪತಿಯ ಮಾತುಗಳನ್ನು ಕೇಳಿ ಕುಮುದಾಳು ಮಾತ್ರನ್ನು ದುಃಖಿಸುವುದು. ಇದರಿಂದ ಗಂಡನ ಮನೆಯ ಕೆಲಸವೂ ಒಳ್ಳೆಯ ರೀತಿಯಲ್ಲಾಗುವುದಿಲ್ಲ. ಗಳಿಗೆ ಗಳಿಗೆಯೂ ಶಿರಾಶಳಾಗಿ, ಉದಾಸೀನ ಭಾವದಿಂದ ಕೆಲಸವನ್ನು ಮಾಡುವಳು.

o o o

ಹಂಬೆ ಮನೆಯ ಹತ್ತಿರಲ್ಲೇ ಮನೆಯಂದು ಮನೆಯಿಟ್ಟು ಕುಮುದಾಳ ಸಮನಸ್ಕಳಾದ ಗೆಳತಿ ಈ ಮನೆಯಲ್ಲಿರುವಳು. ಬಿಡುವಿನ ವೇಳೆಗೆ ಬಂದು ಇಲ್ಲಿಯ ಸಹೋದರಿಯೊಡನೆ ಮಾತುಕತೆಗೆ ಪ್ರಾರಂಭಿಸುವಳು. ಸಹೋದರಿಯು ಕುಮುದಾಳ ಕೇಶರಾಶಿಯನ್ನು ಬಣ್ಣಿಸುವುದು ಅತ್ತಿಯ ಕಟು ಮಾತುಗಳನ್ನು ಟೀಕಿಸುವಳು.

ಕುಮುದಾ ಸಹೋದರಿಯ ಮಾತುಗಳನ್ನು ಸಮಾಧಾನ ಪಲಪೂರ್ವಕ ಕೇಳಿಸಿಕೊಳ್ಳುತ್ತಾ ಕುಳಿತು ಬಿಡುವಳು. ಈ ಮನೆಯಲ್ಲಿ ಮಾತ್ರದಕ್ಕೂ ಅರ್ಥವಿಲ್ಲ ಎಂಬಂತಿತ್ತು. ಇಲ್ಲಿಯ ಪರಿವಾರವೂ ಅಜ್ಞಾನವಾರ. ಸಹೋದರಿಯು ಸುಳ್ಳು ಕೊಡನ ಅಪಮಾನ ಕ್ಕಾ ಮಾತಾಡುವುದು ನಿಮಯ ಕೆಳದುವಳು.

ತಾಯಂಬಾಲ ತನ್ನ ಮನೆಯಾ ಕಟಿಕಿ ಮುಲ್ಲಿ ಕಳ್ಳಡಿಯುನ್ನಿಟ್ಟು ಹಲೆಯ ಕೂದಲನ್ನು ಶೃಂಗಾರ ಮಾಡುವಾಗ, ತನ್ನದಿ ಮುಖ್ಯ—ಹನ್ನೊಂದು ಹೆಣ ಕುಮುದನ ಪ್ರತಿಬಿಂಬವನ್ನು ಕಂಡಳು. ಅವನು ಸಹೋದರಿಯ ಕುಡುಕ ರಾಜ. ಈಗಿನ ರಾಜುವಿಗೆ ಕುಮುದಾಳಂದರೆಯುನುತ, ಅವಳಿಂತಲೂ ಅವಳ ಕೂದಲ ಮೇಲೆ ಸ್ತ್ರೀತಿ. ಕಣ್ಣು ಪ್ರತಿಬಿಂಬ ಮುಚ್ಚಿದೆ ಗಂಟೆ—ಗಂಟೆಗಳ ಸಮಯ ತಮಳ ಇಂದಳನ್ನು ನೋಡುತ್ತಾ ನಿಂತು ಬಿಡುವನು.

ರಾಜೂ ಕಾಲೆಯಿಂದ ಆರುತ್ತಲೇ ತನ್ನ ಸ್ವಂತ ಮನೆಗೆ ಹೋಗದೆ ಸೀಧಾ ಕುಮುದಾಳ ಮನೆಗೆ ಬರುವನು. ಕೆಟ್ಟ ಸುಳ್ಳು ಕೂಡಾ ಇವನಿಗೆ ಎಂದಿಯನ್ನು ಕೊಟ್ಟು ಸಾರಾಯನ್ನು ಕುಡಿಯುವಳು. ಪದ ನಂತರ ತನ್ನ ಕೇಶರಾಶಿಯ ಶೃಂಗಾರಕ್ಕಾಗಿ ತಯಾರಾಗುವಳು. 'ಬಾಳೂ ಪತ್ನಿ ಮನೆಗೆ ಬಾರದ ದಿನ ಕುಮುದಾಳಿಗೆ ಬಾಳುದಿನ.

ಇಂದು ಅವಳು ತನ್ನ ಗಂಡನ ಮನೆಗೆ ಹೋಗುವ ದಿನ. ನೆರೆಮನೆಯ ಸಹೋದರಿಯ ಮುಳ್ಳಿಗಾಲ್ಲ ಬೇಡಿಯಿಂದ ಹಂದಿ ತಿನ್ನುವಳಳ್ಳೂ, ಒಟ್ಟಿಬರೆಗಳನ್ನೂ ಇಂದು ಹಂಚಿದಳು. ಕೇಶರಾಶಿ ಡಾಕೂ ನಿಸಾ ಬಟ್ಟೆಬರೆಗಳನ್ನು ಕೈಯಲ್ಲಿ ಹಿಡಿದು ಕೊಳ್ಳುತ್ತಾ, ಪುರಿಯೊಬ್ಬರಿಗೂ ನೋಡುತ್ತಾ ಅತ್ತಿಂದಿತ್ತ ಓಡಕೊಡಗಿದರು.

ರಾಜೂ ಕಾಲೆಗೆ ಹೋದವನು ಇನ್ನೂ ಬರಲಿಲ್ಲ!

ಊರಿನ ಸ್ತ್ರೀಯರೆಲ್ಲರು ಇಂದು ಕುಮುದಾಳಲ್ಲಿ ಮಾತನಾಡುತ್ತಿದ್ದರು. ಅದರೇ ರಾಜೂ "ಕುಮುದಳ್ಳಾಳಿಗೆ ನಮಸ್ತೆ" ಎನ್ನುತ್ತಾ ಓಡೋಡುತ್ತಾ ಬಂದ.

ಒಮ್ಮೆಲೆ ಕುಮುದಾಳಿಗೇನೋ ನೆನಪು ಬಂತು. ಅವನು ರಾಜುವಿಗೆ ಪೇಟಯಿಂದ ಯಾವೊಂದು ವಸ್ತುವನ್ನು ತರಲು ಹೇಳಿದ್ದಿದ್ದಳು. ಹುಸು ಹೊಸ್ತು ಯೋಚಿಸಿ ಪುನಃ ಯಾಕುಯೋ ಒಂದು ವಿಷಯವನ್ನು ನೆನೆದು ರಾಜುವನ್ನು ಕೈಯಲ್ಲಿ ಹಿಡಿಯುತ್ತಾ ಚ್ಯಾಯಿಂಗ್ ರೂಮಿಗೆ ಕರೆದುಕೊಂಡು ಹೋದಳು. ನಡುಗುವ ಕೈಗಳಿಂದ ಕಪ್ಪಿಯನ್ನು ಪೆಟ್ಟಿಗೆಯಿಂದ ತೆಗೆದು ತನ್ನ ಮುಖದ ಮೇಲೆ ತೂಗುತ್ತಿರುವ ಕೂದಲಿನ ರಾಶಿಯನ್ನು ಕತ್ತರಿಸಿ ರಾಜುವಿನ ಕೈಗಿತ್ತಳು.

ಒಮ್ಮೆ ಆಶ್ಚರ್ಯ ದೃಷ್ಟಿಯಿಂದ ಕುಮುದಾಳನ್ನು ನೋಡುತ್ತಾ ನಿಂತುಬಿಟ್ಟನು. ಮಗುಡುಮ್ಮೆ ಕ್ಷೀಯಿಟ್ಟಿರುವ ಕೂದಲನ್ನು ನೋಡುತ್ತಾ ನಿಂತುಬಿಟ್ಟ!

ಕುಮುದಾ ರಾಜುವಿನ್ನು ಅಂಗಿಯ ಊಟಕ್ಕೆ ಕರೆದಳು.

ರಾಜೂ ಕೂದಲನ್ನು ಕೈಯಲ್ಲಿ ಹಿಡಿಯುತ್ತಾ ಎತ್ತನೋ ಯೋಚಿಸುತ್ತಾ ಕುಳಿತುಬಿಟ್ಟ!

— ಕಾಮಾ

ಹೊಗಿಡಗೆಗಳ ಬದಲು ಕಾಯಿಪಲ್ಲೆ ಬೆಳಸಿರಿ

(ಗಾಂಧೀಜಿ)

ಎಲ್ಲ ಹೂದೋಟಗಳನ್ನು ಕಾಯಿಪಲ್ಲೆ ಬೆಳೆಸಲು ಉಪಯೋಗಿಸಿಕೊಳ್ಳಬೇಕು. ಈ ಕಾರ್ಯದಲ್ಲಿ ಪಾಯಿದರಾದರೂ, ಗಣ್ಯರೇ ಸರಿ ಮೇಲ್ ಅಧಿಕಾರಿಗಳು ಮಾಂಬಾಗಿ ಮಾದರಿಯಾಗಿದೇಕಾಗಿ ನನ್ನ ಸಲಹೆ. ಏನೇನು ಮಿಸ್ತು ಹೂವಿನ ಕೀಳುವಿಕೆ ಬೇಗ ಬೆಳೆದ ಬರುತ್ತಿದೆ ಇಂದು ಸರಿಯಾದ ಸಾಮಾನ್ಯ ಜನರಿಗೂ ತಿಳಿಯುವಂತೆ ಪ್ರಾಂತಿಕ ಭಾಷೆಗಳಲ್ಲಿ ರಾಶಿಷ್ಟ ಹೆಸರುಪತ್ರಗಳನ್ನು ಪಯೋಗಿಸಿ ಸಂಶೋಧನೆಗಾಗಿ ಕೇಂದ್ರಸರ್ಕಾರ ಪ್ರಾಂತಿಕ ಸರ್ಕಾರದ ಮುಖೆಯ ಪರಿಷ್ಕರಿಸಿ ವಿಷಯಿಸಿಕೊಳ್ಳುತ್ತೇನೆ!

(ಪ್ರಜಾವಾಣಿ ೨೪-೨-೫೬).

ಕಾಯಿಪಲ್ಲೆಗಳ್ಳಿಯ ಮೂಲ ಸಂಶೋಧನೆಯನ್ನು ಕಂಡಹೆಗಳು ಪ್ರಯತ್ನಿಸಬೇಕೆ ಸಾಧಿಸುತ್ತ, ಇಲ್ಲಿ ಸಂಪದಾಯ ಸ್ವಸ್ಥ ಉಪಯುಕ್ತವಾದದ್ದೂ ಇರಬೇಕಿಲ್ಲ! ಪ್ರತ್ಯ ಉಪಯುಕ್ತವಿರುವ ವಸ್ತುವನ್ನು ಸಂಪದವಾಗಿಸಿದರೆ ಎಂಬುದಾಗಿ ನಂಬುವಂತೆ ಪ್ರಮಗೆ ಸರಿಯಾದಿರೂ ಯುಕ್ತವಾಗಿರುವ ವಸ್ತುವು ಸಂದರ್ಭ

ಅಗಿಬಲ್ಲದು ಎಂಬುದನ್ನೇ ನಾನು ತೋರಿಕೆ ಬಯಸುತ್ತೇನೆ!

(ಪ್ರಜಾವಾಣಿ ೩-೩-೫೬)

ಇಂದು ಭಾರತದ ಧರ್ಮಪ್ರಧಾನವಾದ ಅಹಾರದ್ರವ್ಯಗಳ ಅಭಾವವನ್ನು ಬಹುಪಾಲ್ಪಡಿಸಿ. ಇದಾದರೆಯೊಂದಿಗೆ ಅಲ್ಪಾಂಶದ ಜನರು ಉಪವಾಸ ಬಿದ್ದಿದ್ದುದಾದ ಬಿಸ್ತಿಗೆ ಪಟ್ಟಿದ್ದಾಗ ಕಾಯಿಪಲ್ಲೆಗಳು ಸೌಂದರ್ಯ ಹಾಗೂ ಮೌಲ್ಯದ ಬೆಲೆಯನ್ನು ಮೂಡಾಟಿಸಿದ್ದು ಬೆಳೆಸುವದು ಯ ಶ್ರೇಷ್ಠ ಅಂದ್ರೆ ಬಿಟ್ಟು ಉಪಯೋಗಕ್ಕಾಗಿ ಒಂದಾಗಿ ಗಿಡ್ಡಿಯಾಗಿ ಬೆಳೆದ ಹೆಸರಿಸಿ ಹೂದೋಟ ಹೊಗೆಗಳ ಬದಲು ಗುಣಕ್ಕೆ ಬೆಳೆಸಿದ್ದೆವು ಇಂದಾಗಲ್ಲಿ ಅಗಲಾದ ಮೇಲಾಗಲು ನನ್ನ ಹೆಣ್ಣಿಗೆ ಅಭ್ಯಾಸಮಾಡಿಸಿ ಕಾಯಿಪಲ್ಲೆ ಬೆಳೆಸಿದ್ದೆವೆ!

(ಪ್ರಜಾವಾಣಿ ೩-೩-೫೬)

ಎಲ್ಲ ಸಾಮಾನ್ಯರಿಗೆ ಕೈಗೆಟಕುವಂತೆ ಕಾಯಿಪಲ್ಲೆ ಬೆಳೆಸಬೇಕೆಂಬ ಕಿಚ್ಚಿಯಲ್ಲಿರುವ ಸರ್ಕಾರ ತೋಟಗಳಲ್ಲಿ ಬಾಡಿಗೆ ಇರುವ ಸಂಬಳಗಳಲ್ಲಿದ್ದು ತೋಟಗಳ್ಳನ್ನು ಹಾಳ್ಮಾಡಿ ಹೊಸ ಪ್ರಯೋಗಕ್ಕೆ ಕಾಯಿಪಲ್ಲೆ ಬೆಳೆಸಲು ಸಿದ್ಧವಾಗಿರಬೇಕು!

(ಪ್ರಜಾವಾಣಿ ೩-೩-೫೬)

ಎಲ್ಲ ಪ್ರಜೆಗಳಿಗೆ ಕೈಗೆಟಕುವ (ಕೈಗೆಟುಕುವಂತೆ) ಗೊಡ್ಡ ಕಾಯಿಪಲ್ಲೆ ಬೆಳೆಸುವ ಬಗ್ಗೆ ಕಾಳಜಿ ತೆಗೆದುಕೊಳ್ಳಬೇಕು, ಮತ್ತು ಸರ್ಕಾರಿಯ ಕಾರ್ಯವಾದ ಬಂಗಾರ ಬೆಳೆಯುವ ಪ್ರದೇಶದಲ್ಲಿ ಕಾಯಿಪಲ್ಲೆ ಬೆಳೆಸುವ ಪ್ರಯತ್ನ ಮಾಡಬೇಕು ಎಂಬ ಸಲಹೆ ಸಾರ್ವಜನಿಕರ ಕಡೆಯಿಂದ ಬಂದಿದೆ. ಇದನ್ನು ಸರ್ಕಾರ ಗಮನಿಸಿ ಕಾರ್ಯಕ್ಕೆ ಇಳಿಯಬೇಕು!

(ಪ್ರಜಾವಾಣಿ ೩-೩-೫೬)

ಅಗ್ರಿಕಾಲ್ಚರ್—ಅಲ್ಪಾಹಾರ

(ಗಾಂಧೀಜಿ)

ಪ್ರತಿಯೊಬ್ಬನೂ ತನ್ನ ಆಹಾರದಲ್ಲಿ ಬಗ್ಗೆ ಜಾಗ್ರತೆವಹಿಸುವುದಲ್ಲದೆ, ಒಂದು ಕೆಲಸ ಕಾರ್ಯಗಳನ್ನು ಅಭ್ಯಸಿಸಿ ಬೆಳೆದರೆ, ಎಲ್ಲ ಕಡೆಗಳಲ್ಲಿ ನಾಂದಿ ಹೊಂದಿ ಪ್ರಯತ್ನಗಳನ್ನು ಮಾಡಿ ಪ್ರಾಮಾಣಿಕರು ಮಾಡಿ ಅಗ ಒ ಮಾ ಮಾ ಬದಲು ಪ್ರಯತ್ನ ಮೊದಲಿಗೆ ಪ್ರಯತ್ನ ಪ್ರಯತ್ನ ಮಾಡಿ ಮಾಡಿ ಬಹುದೆ ಇದ್ದಾಗ ಮಾಡಿ ಮಾಡಿ ಮಾಡಿ

NAVAYUGA 13-6-1959
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಚಾರುಚೆಯನ

ಹಳೆ ದೇಹದಲ್ಲಿ ಹೊಸ ರಕ್ತ

ಕಾಂಗ್ರೆಸ್ಸು ಹೊಸ ರಕ್ತವನ್ನು ಅಳವಡಿಸಬೇಕು, ಯುವಕರು ಹೆಚ್ಚು ಹೆಚ್ಚಾಗಿ ಕಾಂಗ್ರೆಸ್ಸು ಸೇರಬೇಕು— ಇದು ಹಿರಿಯ ಕಾಂಗ್ರೆಸ್ಸಿಗರ ನಿಲ್ಲದ ಕೂಗು. ಯುವಕರ—ಬಿಸಿ ರಕ್ತದವರು ಕಾಂಗ್ರೆಸ್ಸು ಸೇರ ತ್ತಿಲ್ಲವೆ? ಕಾಂಗ್ರೆಸ್ಸು ಇಂಥವರನ್ನು ಏನ್ ಕಡೆ ಅಳವಡಿಸಿಕೊಳ್ಳುತ್ತಿಲ್ಲವೆ? ಈ ಪ್ರಶ್ನೆಗಳಿಗೆ ಸವಾಲು ರೂಪವಾಗಿದೆ ಈ ಘಟಕದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಚಿಂತನೆಯು. ಎಲ್ಲ ಜನರ ಬೆಂಬಲ ಸಂಪಾದಿಸಿದ ಸಮಸ್ಯೆಗಳಿಲ್ಲದ ಜನ್ಮದಿನ ಸಂಭ್ರಮವಾಗಿ ಕೊಂಡಾಡಿದರೂ ಇವರೆಲ್ಲರ ಹಣಕಾರಿ ಪ್ರಯತ್ನ ಒಂದು ಅಲ್ಪ ಮಾತ್ರ. ಒಂದು ವರ್ಷದಷ್ಟರೊಳಗೂ ಇದ್ದಾಗ್ಯೆನ್ನುವಾಗ ಯುವಜನರನ್ನು ಕಾಂಗ್ರೆಸ್ಸು ಆಕರ್ಷಿಸುತ್ತಿದೆ ಎಂದು ಹೇಳಲೇ ಬೇಕಾಗುತ್ತದೆ.

ಇದು ಬೆಂಗಳೂರಿನ ಕಥೆ. ಇನ್ನು ದಿಲ್ಲಿಯಂದರೂ ಹಲವಾರು ವರ್ಷಗಳಿಂದ ಇಂಥಹದೇ ವಿಷಯಂತೆ ಕೇಳಿಬರುತ್ತಿದೆ. ಯುವಕರನ್ನು ಕಾಂಗ್ರೆಸ್ಸಿಗೆ ಬರಹೇಳುವ ಮಾತುಗಳು ಇವೆಲ್ಲ. ಬೇಕಾಗಿಗೆ ಕೈ ಕಟ್ಟಿ ಕುಳಿತುಕೊಳ್ಳುವಂತಿದೆದೆಗೊಳ್ಳುತ್ತಾರೆ. ಹಳೆಯ ಹುಲಿಗಳ ಮುಖದಿಂದ ಹೊರಟಂಥ ನೀತಿಗಳನ್ನು ಈ ಹೊಸ ಮರಿಗಳು ಚಲವಾಗಿ ಒಪ್ಪಬೇಕು. ಇದಕ್ಕೆ ಯುವಕರ ಹೊಸ ಬಿಸಿರಕ್ತ ಅಸಿದ್ಧ, ಅವರ ಚಲ ನೇಲೆ ಯೂವುದೇ ಜವಾಬ್ದಾರಿಯನ್ನು ಹೊರಿಸಲು ಸಳಸರಿಗೆ ವಿಶ್ವಾಸವಿಲ್ಲ ಟೀಗೆ ಕದಿನಾಳ್ಕರ ಹುಡುಗ ಜೀವನದಲ್ಲಿ ಅಂತರ್ಸಿರಾಟಿಯೂಗಿರುವಂತೆ ಹಿಂ ಅಜರ ಹೊಸ ರಕ್ತದವ ರಾಜಕಾರಣದಲ್ಲಿರುತ್ತಾರೆ.

ಕಾಂಗ್ರೆಸ್ಸಿ ಶ್ವೇತಪಟ್ಟಿಂಡಿನಲ್ಲಿರುವವರು—ಹಳೆಯವರೇ, ಶ್ರೀಮತಿ ಗಾಂಧಿಯ ಕಡು ಪ್ರಧಾನಿ ಪದ ಬಜದಿಂದಷ್ಟೇ ಅವರ ನ್ನಿದ್ದಾರೆ—ಅಷ್ಟೂ ಆಶ್ಚರ್ಯ, ಈಗ ಅವರೂ ಅನಸ್ಥರ ಗಡಿ ಮುಟ್ಟಿದವರೇ. ಕಾಂಗ್ರೆಸ್ ಜಾತೀಯ ಸಮಿತಿಗೆ ಆಯ್ಕೆಗೊಂಡವರು ಮಹಾನ್ ಭಾವಪದದ ಹೊಸ ರಕ್ತ—ಯುವ ಪಡೆಯ ಅಲ್ಲವೇ ಅಲ್ಲ. ಉಪ್ಪಳ ಪ್ರದೇಶದ ಸಾಜ ಮುಖ್ಯಮಂತ್ರಿ ಚಂದ್ರಭಾನುಗುಪ್ತ, ಆಂಧ್ರ ಪ್ರದೇಶದ ಅನುಭವಿ ಮುಖ್ಯ ಮಂತ್ರಿ ಬ್ರಹ್ಮಾನಂದ ರೆಡ್ಡಿ, ಪಶ್ಚಿಮ ಬಂಗಾಳದ ಹಳೆಯ ಮುಖ ಅತುಲ್ಯ ಘೋಷ್, ಮಧ್ಯ ಪ್ರದೇಶದ ಸಮಸ್ಯೆಗಳ ಮುಖ್ಯ ಮಂತ್ರಿ ಡಿ. ಪಿ. ಮಿಶ್ರ—ಇವರ ಜಡ್ಡಿಗೆ ಇಂದಿರಾ ಸಂಪುಟದ ಸದಸ್ಯ ಡಾ. ರಾಮಸುಭಗ ಸಿಂಗ್, ಕೇಂದ್ರ ಪ್ರಣಾಳಿಗಳ ಹೊಸ ರಕ್ತದ ಪ್ರತಿನಿಧಿಯಾಗಿ ಕಾಂಗ್ರೆಸ್ ಅಧ್ಯಕ್ಷಪದ ಹೊರಲೂ ಮುಂಚಾಗಿದ್ದ ಡಾ. ಚಂದ್ರದೇವರ ಅಯ್ಯಂಗಾರ್ಯರಂತೆ ಹಳೆಯ ಮುಖಗಳು ದಿಗ್ಬಂಧನವನ್ನೇ ಹಾಕಿದ್ದರು. ಇದಕ್ಕೂ ಇದರೆಡೆಯ ಹಳೆಯದ ವ್ಯವಹಾರವನ್ನೂ ಕಾಣುವಾಗ, "ಹೆಟ್ಟಿಗೆ ನಿನ್ನ ಬಳಿಯಿರಲಿ; ಕೀಲಿಕೈ ನನ್ನ ಬಳಿ ಕೊಡಿ' ಎಂಬಂತೆ ಕಾಣುತ್ತದೆ. ಹೊಸ ಹರುಪ—ರಕ್ತ—ಸ್ವಭಾವ ಇದನ್ನು ಒಪ್ಪುವದಕ್ಕೆ ಪ್ರಾಥಮಿಕ ಶಾಲೆಯ ಪರತಂತ್ರ ಅಂಜುಗುಳಿ ಮಕ್ಕಳಲ್ಲ ಜಾಣೆ?

ಂ ಂ ಂ

ಸ್ವಾಪ್ನದ ರಾಜಧಾನಿ ಪ್ಯಾರಿಸ್‌ನಲ್ಲಿ ವಿಶ್ವಸಂಸ್ಥಾ ಸಂಧಾನ ಮಾಡುವುದೆ ನಡೆಯಲಿದೆಯೆಂದು ತಿಳಿದಾಗ, ಆ ಸುಂದರ ನಗರದ ಸುಂದರ ಶಾಂತ ವಾತಾವರಣದಲ್ಲಿ ಸಂಧಾನ ಫಲಿಸುವುದೆಂಬ ಅಭಿಪ್ರಾಯ ವ್ಯಕ್ತವಾಯಿತು. ಅದರೆ, ಮರುಕ್ಷಣದಲ್ಲಿಯೇ ಅಲ್ಲಿ ಅರಂಭವಾದ ರಾಷ್ಟ್ರವ್ಯಾಪಿ ಮಷ್ಕರ—ಗೊಂದಲ—ಅಶಾಂತಿಗಳ ಪರಿಣಾಮ ಸಂಧಾನ ಮಾಡುವವರ ಮೇಲೆ ಬೀರದಿದ್ದೀತೆ? ಹಲವಾರು ದಿನಗಳ ಉಪ್ಪಾಲಿಯೂಡಿದ ಅಧ್ಯಕ್ಷ ಡಿಗಾಲೆಯವರು ರಾಷ್ಟ್ರದ ಅಸಹಕಾರವನ್ನು ಎಂಟೆದೆಯಿಂದ ಎದುರಿಸಲು ಸಂಕಲ್ಪಿಸಿದ್ದಾರೆ. ಈ ನಡುವೆ ರಾಜ್ಯಶೀಯ ಕುಸಿತದೊಡನೆ ಅಧಿಕಾರ ಕುಸಿತವೂ ಅಲ್ಲಿ ಜರಿದೋಡುವ ಭೀತಿಯಿದೆ. ಫ್ರಾಂಸಿನ ವ್ಯವಹಾರವನ್ನು ನೆರೆಹರಿಯ ಕೆಲವು ದೇಶಗಳು ನಿಲ್ಲಿಸಿದ್ದರಿಂದ ಅವರ ಸ್ಥಿತಿಯೂ ಹೋಲಾಯಮಾನವಾಗಿದೆ. ಅದುದರಿಂದ ಅಸಮೌಲ್ಯ ಅನಿವಾರ್ಯವೆಂದು ಹಲವರು ಅರ್ಥಶಾಸ್ತ್ರಿಗಳ ಅಂಬೋಣ.

ಬ್ರಿಟನ್ನು ಸ್ಟರ್ಲಿಂಗ್‌ನ ಅಪಮೌಲ್ಯವನ್ನು ಘೋಷಿಸಿದ ಕೆಲಸಮಯದನಂತರ ಅದೆ ರಿತದ ಡಾಲರ್‌ಗೆ ಮತಿಭ್ರಮಸಿಯಾಯಿತು. ಆದರೆ, ಅದೆಂತೋ ವಿಶ್ವ ಪ್ರಯತ್ನಮಾಡಿ ಅಧ್ಯಕ್ಷ ಜಾನ್ಸನ್ರವರು ಇದು ವರೆಗೂ ಡಾಲರನ್ನು ಬಿಗಿ ಹಿಡಿದಿದ್ದಾರೆ. ಆದರೆ, ಅದು ಬಿಗಿತದಿಂದ ಯಾವ ಸಮಯಕ್ಕೂ ಜಾರಿಕೊಳ್ಳಬಹುದೆಂಬ ಭೀತಿಯಿದ್ದೇ ಇದೆ. ಇದೀಗ ಮೂರನೆಯ ಮಹಾ ರಾಷ್ಟ್ರ ಫ್ರಾನ್ಸ್‌ದೂ ಇಂತಹ ಸನ್ನಿವೇಶ ಎದುರಾದುದು ಅಶ್ಚರ್ಯ, ವಿಷಾದಕರವೂ. ಜಾಗತಿಕ ಆರ್ಥಿಕತೆಗೆ ಮಾರ್ಮಿಕ-ಕ್ಷಾಗ್ರತ್ರಿದೆಯೆಂಬ ಮಕ್ಕೆ ಇದೇ ಸಾಕ್ಷಿ ನಾಕು.

ಸಾಲ್ಕನೆಯ ಮಹಾ ರಾಷ್ಟ್ರ ರಷ್ಯ ಹಾಗೆಲ್ಲ ಪಕ್ಕನೆ ಜಲಕಗ್ಗಿಸುವುದಿಲ್ಲ. ಅದರೆ ಅದನ್ನು ಎಂತಾದರೂ ಮಾಡಿ ಅಪಮೂಸಪಡಿಸಬೇಕು...ಇಂದು ಕೆಂಪು ಚೀನಾದ ಹೆಬ್ಬಯಕೆ. ವಿಶ್ವಸಂಸ್ಥಾನ ಸಂಧಾನದ ಪ ಪುಟಕೆಗಳಿಗೆ ಗಣ್ಯ ಸ್ವಾಗತ ಕೋರಿದರೆ, ಕೆಂಪು ಚೀನ ವಿರೋಧಿಸಿತು—ವಿಯತ್ನಾಮದ ಜನತೆಯನ್ನು ಅಮೆರಿಕನ್ನರ ಬುಟ್ಟಿಯಲ್ಲಿ ಹುದುಗಿಸಲು ರಶ್ಯ ಸಂಚು ಮಾಡಿತ್ತಿದೆ ಎಂದು ಚೀನೀಯ ಅರೋಪ. ರಶ್ಯವೂ ಸುಮ್ಮನಾಗಲಿಲ್ಲ. ವಿಯತ್ನಾಮಿಗಳ ಭವಿಷ್ಯ ಚಿಂತಿಸದೆಯೇ ವಿಯತ್ನಾಮ ಸಮರವನ್ನು ಹರಡ ಪಲ್ಲಿ ಕೆಂಪು ಚೀನಾ ಅಶಕ್ತವಾಗಿದೆಯೆಂದು ಅದೂ ದೂರುತ್ತದೆ. ಭಾರತ ಮೇಲೂ ಕೆಂಪು ಚೀನಾ ಉಪಕಾರದಲ್ಲಿ ಸೋಲವಿಯತ್ತು ಭಾರತಕ್ಕೆ ಹಲವಾರು ಬಗೆಯ ನೆರವು ನೀಡಲು ಮುಂದೆ ಬಂದಿರುವುದನ್ನು ಅದು ಕೇಳಿ ತಳಮಳಗೊಂಡಿದೆ. ಭಾರತ—ಅಮೆರಿಕ—ರಷ್ಯಗಳು (ಪ್ರೈವೇಟ್ ಲಿಮಿಟೆಡ್ಡಾಗಿ) ಪರಸ್ಪರ ಪ್ರಯೋಜನಾರ್ಥವಾಗಿ, ಚೀನಾದ ಸುದ್ದಿ ಹಳೆಯ ವಿನಿಮಯ ಮಾಡಿಕೊಳ್ಳಬೇಕು ಎಂದು ಒಡಂಬಡಿಕೆ ಮಾಡಿಕೊಂಡಿವೆಯೆಂದು, ಚೀನಾದ ಸರಿಜ್ಞಾನ. ಅಂತೂ ಪಾಯಸದಲ್ಲಿ ಪಾಪಾಸು ಎಸೆಯುವ ಯಾವ ಅವಕಾಶವನ್ನೂ ಕೆಂಪು ಚೀನಾ ಬಿಟ್ಟುಗೊಡದೆ ಅಪೂರ್ವ ಸಾಧನೆಯನ್ನೇ ಮಾಡುವಲ್ಲಿ ನಿರತವಾಗಿದೆ. ಇದನ್ನು ಸಂಪೂರ್ಣ ಮರೆತಿರುವುದು ಭಾರತೀಯರಿಗಂತೂ ಸಾಧ್ಯವಿಲ್ಲ.

ಂ ಂ ಂ

ಹೊಳೆ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಶ್ರೀ ಬಿ. ಡಿ. ಜತ್ತಿಯವರನ್ನು ಕಂಡು, ಹೊಸ ರೀತಿಯ ಸಹಕಾರ ಅವರಿಂದ ಪಡೆಯುವುದು ಗೆಂಬುದರ ಬಗ್ಗೆ ಚರ್ಚೆ ನಡೆಸಿರುವುದು ಸುದ್ದಿ. ಈ ಮಾತುಕತೆಗಳು ಮುಂದುವರಿಯಲಿವೆಯೆಂದೂ ವದಂತಿ. ಶ್ರೀ ಜತ್ತಿಯವರ ಗಂಪಿಂ ಒಂದಿ ಬ್ರ ಗಳಿಗೆ ಸಂಪುಟದ ಸೇರಿದ ವಿಚಾರ ಪಾಟೀಲರಲ್ಲಿ ಸಂತಿ ಅದರೆ, ಮೂರು ರಿಂದ ಸದಸ್ಯ ಬೆಂಬಲ ಪಡೆ ಪಾಟೀಲರ ಗುಂಪಿಗೆ ಅ ಪ್ರತಿನಿಧ್ಯವಿರುವಾಗ, ಅಂಗಡಿ ಬಲಜತ್ತಿಗುಂಪಿಗೆ ಬರಿಯ ಎಂಡ ಪ್ರತಿನಿಧ್ಯ ಸಾಕಾದೀತೆ? ಅದರ ಮೇಲೆ ಜಾತಿಗಳ ಪ್ರಶ್ನೆ ಬೇರೆ ಇದೆಲ್ಲ ಘೋಟಾಳಿಗಿಂತ ಜತ್ತಿಯವರನ್ನು ರಾಜಕಾರಣದಿಂದ ಕೇಂದ್ರಕ್ಕೆ ಪ್ರಮೋಶನ್ ಕೊಡುವುದೇ ಒಳ್ಳೆಯದೆಂದು ನಿಜಲಿಂಗಪ್ಪ ಗುಂಪಿನ ಹೃದಯಾಂತರಾಳದ ಆಶಯವಿದ್ದರೂ ಇರಬಹುದು. ಇಂದಲ್ಲ ನಾಳೆಯಾದರೂ ಜತ್ತಿಯವರು ತಾನಿದ್ದೇನೆಂದು ಹೇಳಬಲ್ಲವರೇ. ಕೇಂದ್ರ ಇಚಿನ ಸಂಪುಟದಲ್ಲೂ ಇವರು ಸೇರುವ ಸಾಧ್ಯತೆ ಬಹಳ ಇದೆಯೆಂದೂ. ಹೇಳಲೇಳಿ ನ ರಾಜಕಿಯಾಯ ಯವರ ಅಧ್ಯಾಯ ಜತ್ತಿ ರಷ್ಟ ಸಂಪುಟದಲ್ಲಿ ಸೇರ ಇಂತ್ರ ಇಂದ ಮ್ಯ ಇದುವರೆಗೂ ಕಾಣ್ದುಕೆಂಡ ಬಂದಿ ಸಮಿತೀಲಸಕ್ಕೆ ಭಂಗ ಬಂದಾತು ಹಾಗಾಗಿ ಅವರನ್ನು ಯಾವುದಾದರೂ ರಾಜ್ಯದ ರಾಜ್ಯಪಾಲರಾಗಿ ಮಾಡಿ, ರಾಜ್ಯ ರಾಜಕಾರಣಕ್ಕೆ ಮಂಎನ ನಾ ವರ್ತಿಸಿ ಚ ಸಾಎನೆ ವೇಳೆ ಬಾರದಂತೆ ಬಲವಾದ ಬೇಲಿ ಹಾಕ ವ ಹವಣಿಕೆ ನಡೆದರೂ ಇರಬಹುದು. ಮಂ ಂಗಾಂದು ಜಾಣಾವಸ್ಥೆ ಕಳೆಯುತ್ತಂದರೆ, ಪಾಟೀಲರು ಅದ್ವಿತೀಯರಾಗಿಯೇ ತೀರುತ್ತಾರೆ. ಈ ಸಂಬಂಧದಲ್ಲಿ ಪ್ರಧಾನಿಯವರೊಂದಿಗೆ ಗುಪ್ತ ಮಾತುಕತೆಗಳು ನಡೆಯುತ್ತಿರಬಹುದು— ನಿಜಲಿಂಗಪ್ಪನವರು ದಿಲ್ಲಿಯಲ್ಲೇ ಇದ್ದಾರೆ ತಾನೇ? ಆದರೆ ಕಾಡುವ ಒಂದೇ ಪ್ರಶ್ನೆ ಜತ್ತಿಯವರು ಇದನ್ನು ಒಪ್ಪುತ್ತಾರೆಯೇ? ಒಪ್ಪದೆ ಮತ್ತೇನು ಮಾಡುತ್ತಾರೆ ಎಂದಿದಕ್ಕೆ ಸಾಟಿ ಸವಾಲು!

ಗೋರಾ

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು
ಬೆಲೆ : ಒಂದೂವರೆ ರೂಪಾಯಿ.
ಎರಡು ರೂ. ಸ್ಟಾಂಪು ಕಳುಹಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು
ಕರ್ಣಾಟಕದ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಕೆ. ಎಚ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 25-4-1966.

Printed & Published by K. H. Shetty at the Navayuga Press, Udupi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

20—6—1968

೨೦
ಪೈಸೆ

ಕಥಾ ಪ್ರಪಂಚ

ಉತ್ತರ ಬಂತು

ಬರೆದವರು: ಶ್ರೀ ಸ. ನಾರಾಯಣ

ತಂದೆ-ತಾಯಿ ಇಬ್ಬರೂ ಮಗನ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಅತನ ಮನ ಒಲಿಸಿಕೊಳ್ಳುವ ಆಸೆ ಇಬ್ಬರಿಗೂ ಇತ್ತು. ಇಬ್ಬರ ಅಭಿಪ್ರಾಯ ಭಿನ್ನವಾಗಿದ್ದರೂ ಮಗ ತಮ್ಮ ಮಾತಿಗೆ ಪ್ರತಿ ಹೇಳುವದಿಲ್ಲ ಎಕ್ಷುವ ಗಂಬಿಕೆಯನ್ನು ಇಬ್ಬರೂ ಹೊಂದಿದ್ದರು.

ಟೆಲಿಗ್ರಾಂ ತಲುಪಿದಾಗ ಶ್ರೀಧರನಿಗೆ ಆಶ್ಚರ್ಯವಾಯಿತು. ಕೊಡಲೇ ಹೊರಟು ಬಾ. ಉಳಿದ ಯಾವ ವಿಷಯವೂ ಇರಲಿಲ್ಲ.

ಶ್ರೀಧರ "ಮನೆಯಲ್ಲಿ ಯಾರಿಗಾದರೂ ತೊಂದರೆಯಾಗಿರಬಹುದೇ ಅಥವಾ ಇನ್ನೇನಾದರೂ ವಿಶೇಷವಿರಬಹುದೇ' ಎಂದು ಚಿಂತಿಸಿದ. ಅವನಿಗೆ ಏನೂ ತೋಚಲಿಲ್ಲ. 'ಮನೆಯಲ್ಲಿ ಯಾರಿಗೂ ಯಾವ ಬಗೆಯ ಕೇಡೂ ಸಂಭವಿಸದಿರಲಿ' ಎಂದು ಅವನ ಮನಸ್ಸು ಆಶಿಸಿತು.

"ಬೆಂಗಳೂರಿಗೆ ಹೋಗಲೇ ಅಥವಾ ಬೇಡವೇ?' ಎಂದು ಶ್ರೀಧರ ಬಹಳವಾಗಿ ಚಿಂತಿಸಿದ. ತಂದೆಯ ಟೆಲಿಗ್ರಾಂ ಅವನನ್ನು ಚಿಂತೆಗೀಡು ಮಾಡಿತ್ತು. ರಜೆ ಸಲಭವಾಗಿ ದೊರೆಯುತ್ತದೆ ಎನ್ನುವ ಗಂಬಿಕೆಯೂ ಅವನಿಗಿರಲಿಲ್ಲ. ಕೆಲ ಕಾಲ ತೂಗಾಡಿದ ಮನಸ್ಸು ಕೊನೆಯ ನಿರ್ಧಾರಕ್ಕೆ ಬಂತು. ಶ್ರೀಧರ ಬೆಂಗಳೂರಿಗೆ ಹೋಗಲು ನಿರ್ಧರಿಸಿದ. ರಜೆ ಪಡೆಯುವ ಸಲುವಾಗಿ ಕಂಪೆನಿಯ ಮ್ಯಾನೇಜರನ್ನು ಭೇಟಿ ಮಾಡಲು ನಡೆದ.

ಶ್ರೀಧರನ ಬೇಡಿಕೆಯನ್ನು ಸಾವಧಾನದಿಂದ ಕೇಳಿದ ಮ್ಯಾನೇಜರರು "ನೀವು ರಜೆ ತೆಗೆದುಕೊಂಡು ಎರಡು ತಿಂಗಳೂ ಮುಗಿದಿಲ್ಲ...ಹೇಲಾಗಿ ಈಗ ಒಪ್ಪಿಕೊಂಡಿರುವ ಎಲ್ಲ ಕಂಟ್ರಾಕ್ಟುಗಳನ್ನು ಇನ್ನು ಎರಡು ತಿಂಗಳಿನಲ್ಲಿಯೇ ಮುಗಿಸಬೇಕಾಗಿದೆ....ಹೆಚ್ಚು ಕಾಲವೂ ಇಲ್ಲ...ನಿಮ್ಮ ಮಾತಿನಲ್ಲಿ ನನಗೆ ನಂಬಿಕೆ ಇದೆ....ಆದರೆ ನಿಮಗೆ ರಜೆ ಕೊಟ್ಟರೆ ಉಳಿದವರು ಅದೇ ರಾಗವನ್ನು ಎಳೆಯುತ್ತಾರೆ....' ಎಂದರು.

'ಹಾಗಾದರೆ ರಜೆ ಕೊಡಲು ಸಾಧ್ಯವಿಲ್ಲವೇ ಸಾರ್?'

"ಬೇಸರಪಟ್ಟುಕೊಳ್ಳ ಬೇಡಿ ಶ್ರೀಧರ್ ..."

"..... .."

"ನಿಮಗೆ ರಜೆ ಕೊಡುತ್ತೇನೆ ಆದರೆ ಒಂದು ನಿಬಂಧನೆ"

"ಏನು ಸಾರ್"

"ನಿಮ್ಮಂತಹ ಉತ್ತಮ ಕೆಲಸಗಾರನನ್ನು ಕಳೆದುಕೊಳ್ಳಲು ನಾನು ಸಿದ್ಧನಿಲ್ಲ. ನಿಮಗೆ ರಜೆ ಕೊಡುತ್ತೇನೆ. ಕೇವಲ ಒಂದು ವಾರ ಮಾತ್ರ. ದಯವಿಟ್ಟು ಈ ಅವಧಿಯಲ್ಲಿಯೇ ನಿಮ್ಮ ಕೆಲಸವನ್ನು ಮುಗಿಸಿಕೊಂಡು ಬಿಡಿ.'

"ತುಂಬ ಕಡಿಮೆಯಾಯಿತು ಸಾರ್'

"ನಾನು ನಿಮ್ಮ ಹಾಗೆ ಕಂಪೆನಿಯ ಕೆಲಸಗಾರ. ನಿಮ್ಮ ಹೆಸ್ಟೆಸಿ ಎಂಬುದನ್ನು ಮರೆಯಬೇಡಿ, ಶ್ರೀಧರ್" ಎಂದರು ಮ್ಯಾನೇಜರರು.

"ಸಂತೋಷ ಸಾರ್" ಎಂದು ಕೃತಜ್ಞತೆಯಿಂದ ನುಡಿದ ಶ್ರೀಧರ.

— ೨ —

ಬೆಂಗಳೂರಿನಲ್ಲಿದ್ದ ವನೆ ತಲುಪುವವರೆವಿಗೂ ಶ್ರೀಧರನ ಮನಸ್ಸು ಹೊಯ್ದಾಡುತ್ತಿತ್ತು.

ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿರುವುದನ್ನು ಕಂಡಾಗ ಅವನ ಮನಸ್ಸಿಗೆ ನೆಮ್ಮದಿಯೂಯಿತು. ಟೆಲಿಗ್ರಾಂ ಕೊಟ್ಟು ಏಕೆ ಕರೆಸಬೇಕಿತ್ತು ಎಂದುಕೊಂಡ.

ಮಗನನ್ನು ಸಂತೋಷದಿಂದಲೇ ಸ್ವಾಗತಿಸಿದರು ರಾಮಣ್ಣನವರು.

"ಒತ್ತಿಯೋ ಇಲ್ವೋ ಅಂತಿದ್ದೆ ಸದ್ಯ ಬಂದಿಯಲ್ಲ ಬಿಡು" ಎಂದರು ರಾಮಣ್ಣ.

"ನಿಮ್ಮ ಟೆಲಿಗ್ರಾಂ ನೋಡಿ ಎಷ್ಟು ಗಾಬರಿಪಟ್ಟೆದ್ದೆ ಗೊತ್ತೇನಪ್ಪ? ಮನಸ್ಸು ತಡೆಯದೆ ಓಡಿಬಂದೆ."

"ನಿನ್ನ ಹತ್ತಿರ ಒಂದು ವಿಷಯ ಮಾತಾಡಬೇಕಿತ್ತು."

"ಏನಪ್ಪ ಅಂತಹ ಗುಟ್ಟು?"

'ಇನ್ನು ರಾಮ ಕೃಷ್ಣ ಅಂತ ಬಂದಿದ್ದೀಯ ಸ್ವಲ್ಪ ಸಾಧಾರಿಸಿಕೋ! ಎಲ್ಲ ಹೇಳುತ್ತೇನೆ. ನಾನು ಹೇಳದಿದ್ದರೂ ನಿಮ್ಮ ಮ್ಮ ಹೇಳ.ತ್ತಾಳೆ."

"ನಿಮ್ಮ ವಿಷಯವೇ ಅರ್ಥವಾಗುತ್ತಿಲ್ಲ' ಎಂದ ಶ್ರೀಧರ.

ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದ್ದರು. ಯಾವ ಬಗೆಯ ಚಿಂತೆಗೂ ಕಾರಣವಿರಲಿಲ್ಲ. ಆದರೆ ಅಪ್ಪ ಅಮ್ಮ ಇಬ್ಬರೂ ಯಾವುದೋ ಕಾರಣಕ್ಕೆ ಕೋಪ ಮಾಡಿಕೊಂಡಿದ್ದಾರೆ, ಬೇಸರಪಟ್ಟುಕೊಂಡಿದ್ದಾರೆ ಎಂಬ ಸಂಗತಿಯನ್ನು ಅರ್ಥಮಾಡಿಕೊಳ್ಳಲು ಶ್ರೀಧರನಿಗೆ ಹೆಚ್ಚು ಕಾಲ ಬೇಕಾಗಲಿಲ್ಲ.

ಅಪ್ಪ ಅಮ್ಮ ಪೂರ್ವ ಶಕ್ತಿಯನ್ನು ಎನ್ನುವ ಸಂಗತಿ ಶ್ರೀಧರನಿಗೆ ಮನವರಿಕೆಯಾಯಿತು. ಕಾರಣ ಗೂಢವಾಗಿಯೇ ಇತ್ತು. ಈ ಸಮಸ್ಯೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ.

ಕೇವಲಮ್ಮ ಮಗನನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡು ಉಪಚರಿಸಿದರು. ತಾಯಿಯ ಮನಸ್ಸಿನಲ್ಲಿ ಯಾವುದೋ ಆಸೆ, ಕೊರಗು ಉಳಿದಿದೆ ಎಂಬುದು ಶ್ರೀಧರನಿಗೆ ಬೇಗ ಮನವರಿಕೆಯಾಯಿತು. ಅಮ್ಮನ ಆರೋಗ್ಯ ಚನ್ನಾಗಿರಲಿಕ್ಕಿಲ್ಲ ಎನಿಸಿತು.

ಈ ಸಂಗತಿಯನ್ನು ತಾಯಿಯೊಂದಿಗೆ ಪ್ರಸ್ತಾಪಿಸುವುದು ಸೂಕ್ತವಲ್ಲ ಎಂದುಕೊಂಡು ಹಿರಿಯ ಅತ್ತಿಗೆಯೊಂದಿಗೆ ಆಲೋಚಿಸಿದ.

"ಅಮ್ಮನಿಗೆ ಮೈಯಲ್ಲಿ ಹುಷಾರಿಲ್ಲವೆ ಅತ್ತಿಗೆ?"

'ಹಾಸಿಗೆ ಹಿಡಿದು ಸುಲಗಿಲ್ಲವಪ್ಪ. ಮೂರು ದಿನ ತಲೆನೋವು ಅನ್ನುತ್ತಾರೆ. ನಾಲ್ಕು ದಿನ ಕೆಲಸ ಮಾಡುತ್ತಾರೆ. ಏ ಶ್ರಾಂತಿ ತೆಗೆದುಕೊಳ್ಳಿ ಅಂದರೆ ಸುಮ್ಮನೆ ಇರುವುದಿಲ್ಲ."

"ಇನ್ನೇನತ್ತಿಗೆ ಸಮಾಚಾರ?'

"ನಿಮಗೇನಪ್ಪ ಗೊತ್ತು'

'ಈ ಮಾತು ನಾನು ನಂಬೋದಿಲ್ಲ. ಏನೋ ಗುಟ್ಟು ಇದೆ. ಮುಚ್ಚುಮರೆಯಾಕೆ. ಹೇಳಿ ಬಿಡಿ."

"ಅತ್ತೆ ಮಾವ ಇಬ್ಬರೂ ನೀನು ಬರಲಿ ಅಂತ ಕಾಯುತ್ತಿದ್ದರು. ಇನ್ನು ನೀನು ಬಂದೆ. ಇವತ್ತು ಸಂಜೆಗೆ ಇಬ್ಬರೂ ಹೇಳುತ್ತಾರೆ ಯೋಚಿಸಬೇಡ."

"ನೀವು...'

"ನಿಮಗೇಕಪ್ಪ ಆದೆಲ್ಲ..."

"ಅಂತೂ ನೀನೆಲ್ಲ ಒಂದೆ...ನಾನೊಬ್ಬನೇ ಬೇರೆ..."

'ಇನ್ನು ಮುಂದೆ ಒಬ್ಬನೇ ಅನ್ನೋದಾಗಿಲ್ಲ ಇಬ್ಬರೂ....ಅದಕ್ಕಾಗಿಯೇ....'ಎಂದು ನಗುತ್ತಾ ನುಡಿದರು ಶ್ರೀಧರನ ಅತ್ತಿಗೆ ವೀಣಾಕ್ಷಮ್ಮ.

— ೩ —

ರಾಮಣ್ಣನವರು ಮಗನನ್ನು ಗೆಳೆಯ ಕೇಶವ ಮೂರ್ತಿಯ ಮನೆಗೆ ಕರೆದೊಯ್ದರು. ಚಂಚಲಾಳ ಸ್ವಚ್ಛತೆಯಿಂದ ತಾಟಿ ತಿಂಡಿಯ ಉಪಚಾರವೂ ಆಯಿತು. ಕೇಶವ ಮೂರ್ತಿ ಮುಕ್ತ ಕಂಠದಿಂದ ತಮ್ಮ ಮಗಳ ಮತ್ತು ಶ್ರೀಧರನ ಗುಣಗಾನ ಮಾಡಿದರು. ತಮ್ಮ ಅಧಿಕಾರ, ಹಣ ವೈಭವಗಳ ಹಿರಿಮೆಯನ್ನು ಹೇಳಿಕೊಂಡರು.

ಶ್ರೀಧರ ತಂದೆಯೊಂದಿಗೆ ಮನೆಯ ದಾರಿ ಹಿಡಿದ.

"ಹುಡುಗಿ ಹೇಗಿದ್ದಾಳಯ್ಯ, ಒಪ್ಪಿಗೆ ತಾನೆ" ಎಂದು ಪ್ರಶ್ನಿಸಿದರು ರಾಮಣ್ಣ.

"ಪಾಪ ದೇವಿದೆ ನೀನು ಅಮ್ಮ ಒಪ್ಪಿದರೆ ಆಯ್ತು'

"ನಿಮ್ಮಮ್ಮ ಒಪ್ಪೋದಿರಲಿ, ನೀನು ಒಪ್ಪಿದ್ದೀಯ ತಾನೆ"

"ನಿಮ್ಮ ಸ್ನೇಹಿತರಿಗೆ ಹಣ, ಅಧಿಕಾರ ವೈಭವ ಎಲ್ಲ...."

'ಅದೆಲ್ಲ ಈ ಕಾಲದಲ್ಲಿ ಸ್ವಾಭಾವಿಕ ಶ್ರೀಧರ್" ಎಂದನು ರಾಮಣ್ಣ.

"ಅದು ಸರಿಯಪ್ಪ ನನಗೆ..." ಎಂದು ಶ್ರೀಧರ ಪ್ರಾರಂಭಿಸಿದಾಗ ರಾಮಣ್ಣ "ಇನ್ನ ಮಾತನ್ನು ಉಳಿಸೋ ಭಾರ ನಿಂದು ಶ್ರೀಧರ. ನೀನು ಸಪ್ಪ ಮಾತನ್ನು ಒಪ್ಪುತ್ತೀಯ ಅಂತ ನಂಬಿ ಮಾರ್ತಿಗೆ ಮಾತು ಕೊಟ್ಟು ಬಿಟ್ಟಿದ್ದೇನೆ. ಚಂಚಲಾ ಲಕ್ಷಣವಾಗಿದ್ದಾಳೆ. ವಿದ್ಯಾವಂತೆ. ಸಾಕಷ್ಟು ವರದಕ್ಷಿಣೆ ಕೊಡ.ತ್ತಾನೆ. ಕಾರು ಕೊಡಿಸುತ್ತೇನೆ ಅಂತ ಹೇಳಿದ್ದಾನೆ. ಒಪ್ಪಿಕೊಂಡು ಬಿಡು" ಎಂದರು ರಾಮಣ್ಣ.

"ನೀನು ಹೇಳೋದೇನೋ ಸರಿಯಪ್ಪ. ಈ ವಿಷಯದಲ್ಲಿ ಅಮ್ಮನ ಅಭಿಪ್ರಾಯ' ಎಂದ ಶ್ರೀಧರ.

'ಅವಳಿಗೆ ಏನು ತಿಳಿಯುತ್ತದೆಯೋ... ಅದೊಂದು ವೆಸ್ಟ್.... ಅವಳಿಗೆ ಚಂಚಲಾನ ತಂದುಕೊಳ್ಳುವುದಕ್ಕೆ ಇಷ್ಟ ಇಲ್ಲ....

"ಅವಳ ನಿನಗೆ ಏನೂ ಹೇಳಿಲ್ಲವೇನೆ ಅವಳೇ ಹೇಳ್ತಾಳೆ ಕೇಳ....ವಂಚ್ಚುವಾಗಿ ನೀನು ಒಪ್ಪಿಕೊಂಡು ಬಿಟ್ಟರಾಯ್ತು. ಚಂಚಲಾ ನಿನಗೆ ತಕ್ಕ ಹುಡುಗಿ ....ಮತ್ತೆ ನಿಮ್ಮಮ್ಮ ಎನೋ ಹೇಳಿದಳು ಅಂತ ಒಪ್ಪಿಕೊಂಡು ಬಿಡಬೇಡ' ಎಂದರು ರಾಮಣ್ಣ.

— ೪ —

"ರಾಯರ ಕನ್ಯಾ ವೀಕ್ಷಣೆ ಮುಗಿಯ ತೇನು?" ಎಂದರು ಶ್ರೀಧರನ ಎರಡನೆಯ ಅತ್ತಿಗೆ ತಾರದಮ್ಮ.

'ಅತ್ತಿಗೆ, ನಿಮಗೂ ಒಂದು ಕಾಲ ಮಾಸ್ಯವೂಡಿ.

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಳಿಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಂಡಿತಿಂಡಿ ಹಾಗೂ ಅಯಸ್ಕ ಉಪಾಹಾರಕ್ಕೆ ಅಸ್ತ ಸ್ಥಾನ ಪಡೆದ ವಿಶ್ವಾಸಾರ್ಹ ಹೊಟೆಲ್.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೨
No. 42

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೨೦—೬—೧೯೬೮

ಜಾತೀಯ ಸೌಹಾರ್ದ ಸ್ಥಾಪನೆ

ಇತ್ತೀಚೆಗಿನ ಕೆಲವು ತಿಂಗಳುಗಳಿಂದ ದೇಶದ ತುಂಬ ಜಾತೀಯ ಗಲಭೆಗಳು ನಡೆಯಲು ತೊಡಗಿವೆ; ಇವು ಸಾವು-ನೋವುಗಳಿಗೆ ಕಾರಣವಾಗಿವೆ; ಮುಖ್ಯವಾಗಿ ದೇಶದ ಘನತೆಗೆ ಭಂಗತಂದಿದೆ, ಗೌರವಕ್ಕೆ ಕಳಂಕ ಬಳಿದಿವೆ. ಶಾಸ್ತ್ರಾ ಜಾತಿಗೆ ಸೇರಿದ ಪ್ರಜೆಗಳು ತುಂಬಿರುವ ನಮ್ಮ ವಿಶಾಲಕಾಯ ರಾಷ್ಟ್ರಕ್ಕೆ ಇದು ಎಂದಿಗೂ ಶೋಭೆಯನ್ನಾಗಲೀ ಮರ್ಯಾದೆಯನ್ನಾಗಲೀ ತರುವುದಿಲ್ಲ, ನಮ್ಮ ಜಾತೀಯ, ಭಾಷೀಯ, ಭೌಗೋಳಿಕವೆಂದಲಾದ ವಿಭಿನ್ನತೆಗಳಿದ್ದರೂ ಇವುಗಳಲ್ಲಿಯೇ ಏಕತೆಯನ್ನು ಕಂಡು ಮುಂದೆ ಬಂದು ತಲೆಯೆತ್ತಿನಿಂದವರು ನಾವು. ಇಲ್ಲಿ ಆಳಿದ ಮಾಗಲ್ಮಾನ ರಾಜರಲ್ಲಿ ಕೆಲವರು ಜಾತೀಯತೆಯ ಕೈವಾರಿಗಳಾಗಿದ್ದರೂ ಹೆಚ್ಚಿನವರು ಭಾರತೀಯತೆಯನ್ನೇ ನೆನ್ನಿಕೊಂಡಿದ್ದರು. ಆದರೆ, ಬ್ರಿಟಿಷರ ಆಳಿಕೆಯು ಕೊನೆಗೊಳ್ಳುವ ಕಾಲದಲ್ಲಿ ಜಾತೀಯ ಸೌಹಾರ್ದ ವಾಂದಿರದಲ್ಲಿ ಬರುಳು ಹುಟ್ಟಿತ; ಮುಂದೆ ದೇಶ ಇಬ್ಭಾಗವಾಯಿತ. ಆದರೂ ಜಾತೀಯ ಗಲಭೆಗಳು ಕಿಳ್ಳದೆ ಮುಗಿಲೇರಿದುವು, ಮತ್ತೆ ಇಳಿದವು, ಏರಿದುವು.

ಅಂಕಿ ಸಂಖ್ಯೆಗಳ ಆಧಾರದಿಂದ ಹೇಳಬಹುದಾದರೆ, ಮಹಾತ್ಮಾ ಗಾಂಧಿಯವರ ಬಲಿದಾನದ ಬಳಿಕ ೧೯೬೦ರ ತನಕ ಜಾತೀಯ ಗಲಭೆಗಳ ಸಂಖ್ಯೆ ತುಂಬ ಇಳಿಯಿತ. ೧೯೬೧ರಲ್ಲಿ ಅದು ಮತ್ತೆ ಉದ್ರಾವತಾರವನ್ನು ತಾಳಿತು. ೧೯೬೪ರಲ್ಲಿ ಇದು ತ್ರಿವಿಶ್ವರೂಪವತಾರಕ್ಕೆ ತೊಡಗಿದರೂ ಮುಂದಿನ ವರ್ಷ ಪಾಕಿಸ್ತಾನ ದೇಶವನ್ನು ಅಕ್ರಮಿಸಿದಾಗ ದೇಶದಲ್ಲಿ ಜಾತೀಯ ಸೌಹಾರ್ದ ಘನವಾಗಿ ಬೆಳೆಯಿತು. ೧೯೬೬ರಲ್ಲಿ ಗಲಭೆಗಳು ಮತ್ತೆ ಉಲ್ಬಣಗೊಂಡರೂ ೬೭ರಲ್ಲಿ ಇಳಿಯಿತು. ಈ ವರ್ಷ ಜಾತೀಯ ಗಲಭೆಗಳು ಮತ್ತೆ ಹೆಚ್ಚಿವೆ; ಏನಂಜಿಕೆಗೆ ಗುರಿ ಮಾಡಿವೆ. ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯೊಂದು ತಾ. ೨೦ರಂದು ಅ ಂ ಭ ವಾ ಯಿತು. ಇಲ್ಲಿ ಜಾತೀಯ ಗಲಭೆಗಳು ನಡೆಯದಂತೆ ಮಾಡುವ ಇಂಜೆಕ್ಷನ್ನುಗಳ ಸಂತೋಷನೆಯ ಬಗ್ಗೆ ವಿಚಾರ ವಿನಿಮಯ ಕಂಡಿಯುತ್ತದೆಂದು ತಿಳಿಯುತ್ತದೆ. ಜಾತೀಯ ಸಂಘ-ಸಂಸ್ಥೆಗಳನ್ನು ಬಹಿಷ್ಕರಿಸುವುದರಿಂದ ಜಾತೀಯತಾ ಭಾವನೆ ಬೆಳೆಯುವುದನ್ನು ತಡೆಗಟ್ಟಬಹುದೇ ಎಂಬ ದೊಂದು ಪ್ರಶ್ನೆ. ಇಂದು ದೇಶದ ನಾಲೆ ಮೂಲೆಯಲ್ಲಿಯೂ ಬೇರೆ ಬೇರೆ ಜಾತಿಗೆ ಸೇರಿದವರು ತಮ್ಮ ತಮ್ಮ ಜಾತೀಯ ಸಂಘಗಳನ್ನು ಕಟ್ಟಿಕೊಂಡು, ತಮ್ಮ ಜಾತಿಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಹುಡಿಯುತ್ತಿವೆ. ಇಂಥವು ರಾಜಕಾರಣದಿಂದ ಸಂಪೂರ್ಣ ದೂರವಿದ್ದು, ಸಾಮಾಜಿಕ ಸಂಸ್ಥೆಗಳಾಗಿಯೇ ಮುಂದುವರಿಯುತ್ತಿವೆ. ಇವುಗಳಿಂದ ಜಾತೀಯ ಉದ್ಧಾರ ಸಾಧ್ಯವಾಗುತ್ತದೆ; ಜಾತೀಯ ಗಲಭೆಗಳು ನಡೆಯಲಾರವು. ಜಾತೀಯ ಗಲಭೆಗಳಿಗೆ ಮುಖ್ಯ ಕಾರಣರು ರಾಜಕಾರಣಿಗಳೆಂದೇ ಹೇಳಬೇಕು. ಅಧಿಕಾರದಾಹ ಪೀಡಿತರಾದ ಈ ಮತಿಭ್ರಾಂತ ರಾಜಕಾರಣಿಗಳು ಜಾತೀಯ ಸೌಹಾರ್ದವನ್ನು ಕೆಡಿಸುವಲ್ಲಿ ಮುಂದಾಗುತ್ತಾರೆ; ಇದಕ್ಕಾಗಿ ತಿಳಿಗೇಡಿಗಳನ್ನು ಉದ್ರೇಕಿಸುತ್ತಾರೆ. ಗಲಭೆಗೆ ಕಾರಣಕರ್ತರಾಗುತ್ತಾರೆ. ಇಂಥವರು ಜಾತೀಯ ಸಂಘ-ಸಂಸ್ಥೆಗಳಲ್ಲಿ ಸೇರಿಕೊಂಡರೆ, ಅಲ್ಲಿಯೂ ಗಲಭೆ ಹೆಬ್ಬಿಸುತ್ತಾರೆ. ಅಲಿಘಢ್ ವಿಶ್ವವಿದ್ಯಾಲಯದ ಬಗ್ಗೆ ಕೇಳಿಬಂದ ವರದಿಗಳನ್ನು ಇಲ್ಲಿ ನೆನಪಿಗೆ ತರಬಹುದು. ರಾಜಕೀಯ ಪಕ್ಷಗಳೂ ಜಾತೀಯತೆಯನ್ನು ಕೆದಕಲು ಪೈರವಾಗತ್ತವೆ. ಚುನಾವಣೆಗೆ ಟಿಕೇಟು ಕೊಡುವಾಗ, ಗೆದ್ದು ಬಂದ ಮೇಲೆ ಅಧಿಕಾರವನ್ನು ಹಂಚಿಕೊಳ್ಳುವಾಗ ಕೂಡ ಜಾತೀಯತೆಯನ್ನೇ ಭದ್ರ ತಳಹದಿಯನ್ನಾಗಿ ಮಾಡಿಕೊಳ್ಳುತ್ತವೆ. ಉದ್ಯೋಗಾವಕಾಶ, ಕಾಲೇಜುಗಳಿಗೆ ಪ್ರವೇಶಗಳಲ್ಲೂ ಜಾತೀಯತೆ ತಾಂಡವವಾಡುತ್ತಿದೆ. ಹಿಂದುಳಿಯುವಿಕೆಯನ್ನು ವಿಧಾರಿಸುವಾಗಲೂ ಇದು ಪ್ರಭಾವ ಬೀರುತ್ತಿದೆ. ಜಾತೀಯತೆಯನ್ನೇ ಪ್ರಧಾನ ಧ್ಯೇಯವಾಗಿಟ್ಟುಕೊಂಡ ರಾಜಕೀಯ ಪಕ್ಷಗಳೂ ಇವೆ. ಇವೆಲ್ಲಕ್ಕೂ ಮುಟ್ಟುಗೋಲು ಹಾಕಲು ಸಾಧ್ಯವಿದೆಯೆ? ರಾಷ್ಟ್ರೀಯತೆ—ಮತ—ಜಾತಿಯೆಂಬ ಕಾಲ ಮುಗಿಯನ್ನು ಕಿತ್ತುಹಾಕಿ ಬರಿಯ ರಾಷ್ಟ್ರೀಯತೆಯ ಭದ್ರ ಬುನಾದಿಯಲ್ಲಿ ದೇಶವನ್ನು ಕಟ್ಟಲು ದೇಶಪ್ರಾಯಕರಿಗೆ ಸಾಧ್ಯವಿಲ್ಲವೇನು?

ಇದೇ ಜಾತೀಯತೆಗಿಂತಲೂ ಕರೀರವಾದ ವಿದೇಶನಿಷ್ಠ ರಾಜಕಾರಣಿಗಳಿದ್ದಾರೆ. ಸ್ವದೇಶ ದ್ರೋಹಿಗಳೂ ಇದ್ದಾರೆ. ವಿಭಜನಾವಾದಿಗಳಿದ್ದಾರೆ. ಇವರೆಲ್ಲರೂ ಜಾತೀಯ ಸೌಹಾರ್ದವನ್ನು ಕೆಡಕುವಲ್ಲಿ ತಂತಮ್ಮ ಪಾಲಿನ ಅಳಿಲ ಸೇವೆಯನ್ನು ಸಲ್ಲಿಸುತ್ತಲೇ ಇದ್ದಾರೆ. ಈ ರಾಷ್ಟ್ರ ವಿಘಾತುಕ ಪಕ್ಷಗಳನ್ನು ಬಹಿಷ್ಕರಿಸುವ ಸಾಹಸ ಯಾರಿಗಿದೆ? ಪಾರ್ಲಿಮೆಂಟು ಶಾಸನವನ್ನು ಮಾಡಬಹುದು; ಅದನ್ನು ಕಾರ್ಯರೂಪಕ್ಕೆ ತರುವ ಎದೆಗಾರಿಕೆ ಸರಕಾರಕ್ಕಿದೆಯೆ? ಭಾಷಾ ಶಾಸನವನ್ನೂ, ಭಾಷಾಗೊತ್ತುಳಿಯನ್ನೂ ಅನುಷ್ಠಾನಕ್ಕೆ ತರಲು ಅದು ಸಮರ್ಥವಾಗಿಲ್ಲವಲ್ಲ! ಶಾಸನಗಳಿಂದ ಜಾತೀಯತೆ ದೂರವಾದುದಿಲ್ಲ. ಕಾನೂನಿನ ಕ್ರಮಗಳಿಂದ ಜಾತೀಯ ಗಲಭೆಗಳು ತಲೆಯೆತ್ತದಿರುವುದಿಲ್ಲ ಜಾತಿಯಲ್ಲಿ ಒಂದು ದೇಶದವರು—ನಾವೆಲ್ಲ ಒಂದು ಎಂಬ ಭಾವನೆಯು ಎಲ್ಲ ಜಾತಿಯವರಲ್ಲೂ ಹುಟ್ಟಿ ಬೆಳೆಯುವಂತೆ ಮಾಡಬೇಕು; ಇದಕ್ಕೆ ಮಾರಕವಾದ ಕಾರ್ಯ ಪ್ರಣಾಳಿಗೆ ಕೂಡಲೇ ಪೂರ್ಣವಿರಾಮ ಹಾಕಬೇಕು.

ಆದರ್ಶದ ಬಿಗಿತ

ಸಪ್ತರಂಗೀಯ ಕೇರಳದ ಸರಕಾರಕ್ಕೂ ಒಂದು ಬಲವಾದ ಆದರ್ಶವಿದೆ. ಏನೇ ಆದರೂ ಅದು ಅಧಿಕಾರಕ್ಕೆ ಬಲವಾಗಿ ಅಂಟಿಕೊಳ್ಳುವ ಉದ್ದೇಶ—ಆದರ್ಶವಿಟ್ಟುಕೊಂಡಿದೆ. ಈ ಆದರ್ಶವನ್ನು ಕೇರಳದ ಜನ ಅರ್ಥಮಾಡಿಕೊಂಡಿದ್ದಾರೆ; ಅಂತಲೇ ಇತ್ತೀಚೆಗಿನ ನಗರ ಸಭಾ ಚುನಾವಣೆಗಳಲ್ಲಿ ಕಮ್ಯುನಿಷ್ಟರನ್ನು ಒದೆದು ಕಿತ್ತು ಹಾಕಿ ಮತ್ತೆ ಕಾಂಗ್ರೆಸ್ಸನ್ನು ಗದ್ದುಗೆಗೇರಿಸಿದ್ದಾರೆ. ಕೇರಳ ಸಂಯುಕ್ತ ರಂಗದ ಎಡಬಲ ಕಮ್ಯುನಿಷ್ಟ್ ಪಕ್ಷಗಳ ಸೈದ್ಧಾಂತಿಕ ವಿರೋಧ ನಂಬಾದ್ರಿಪಾದ—ಧಾಮಸರ ಹೋಂಚಾಟದ ಹನ್ನೆಲೆಯೆಂದು ಹೇಳಬಹುದು. ಮುಖ್ಯ ಮಂತ್ರಿಯವರು ತಮ್ಮ ಸಹೋದ್ಯೋಗಿಯ ಮೇಲೆ ಗಂಭೀರ ಆರೋಪ ಹೊರಿಸುತ್ತಾರೆಂದೇ ಹೊರತು, ಅವರನ್ನು ಸಂಪುಟದಿಂದ ಕಿತ್ತು ಹಾಕುವುದಕ್ಕೆ ಹೇಳಗುವುದಿಲ್ಲ. ಮಂತ್ರಿಯು ತನ್ನ ಮೇಲಿನ ಆರೋಪವನ್ನು ಋಜುಪಡಿಸಬೇಕು, ಇಲ್ಲವೇ ಬೇಷರತ್ತಾಗಿ ಕ್ಷಮೆ ಕೇಳಬೇಕು ಎನ್ನುತ್ತಾರೆ. ತಮ್ಮನ್ನು ಸಂಪುಟದಿಂದ ಕಿತ್ತು ಹಾಕುವ ಅಧಿಕಾರ ಮುಖ್ಯ ಮಂತ್ರಿಗಿಲ್ಲವೆಂದೂ ಸಂಪುಟದಲ್ಲಿ ತನ್ನ ಪ್ರತಿನಿಧಿ ಮಾಗಿರಬೇಕೆಂದು ತನ್ನ ಪಕ್ಷವೇ ಶಿಫಾರಿಸುವುದೆಂದೂ ಮತ್ತೊಂದು ಸವಾಲು. ಇದೆಂದು ವಾದ. ಇಂತಹ ನೂರಾರು ಭಿನ್ನಾಭಿಪ್ರಾಯಗಳಿದ್ದರೂ ಕಾಂಗ್ರೆಸ್ ವಿರೋಧ ಮತ್ತು ಅಧಿಕಾರ ಪೋಷಣೆಂಬ ಸಮಾನಸೂತ್ರದಿಂದಿರುವುದರಿಂದ ಕೇರಳ ಸರಕಾರ ಅಧಿಕಾರದಲ್ಲಿರುವುದು—ಜನತೆಗೆ ಜಾಗ್ರತೆ ತರುವುದು.

ಟಿ.ಬಿ. ಸೀಲು ಮಾರಾಟದಲ್ಲಿ ಉಡುಪಿ ತಾಲೂಕು ಬೋರ್ಡಿನ ವಿಕ್ರಮ

ದ.ಕ. ಜಿಲ್ಲಾ ಟಿ.ಬಿ. ಎಸೋಸಿಯೇಶನವರು ಅಕ್ಟೋಬರ್ ಟಿ.ಬಿ. ಸೀಲುಗಳ ಮಾರಾಟ ಮಾಡಿದವರಿಗೆ ಕೊಡುವ ರೋಲಿಂಗ್ ಶೀಲ್ಡ್ ಈ ವರ್ಷ ಉಡುಪಿ ತಾಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ದೊರಕಿರುತ್ತದೆ. ವೈಯಕ್ತಿಕವಾಗಿ ಮಾರಾಟ ಮಾಡಿದವರಲ್ಲಿ ಉಡುಪಿ ತಾಲೂಕ್ ಬೋರ್ಡ್ ಚೀಫ್ ಆಫೀಸರಾದ ಶ್ರೀ ಬಿ. ಸೀತಾರಾಮ ಶೆಟ್ಟಿಯವರಿಗೆ ದೊರಕಿರುತ್ತದೆ.

ಪಾಸ್ ಫಲಿತಾಂಶ

ಉಡುಪಿ,— ಜಿಲ್ಲೆಯ ಪಾಸ್ ಟ್ಯುಟೋರಿಯಲ್ ಕೋಲೇಜು ಮತ್ತು ಅದರ ಶಾಖೆಗಳ ಮೂಲಕ ಎಲ್ಲಾ ಭಾಗಗಳಲ್ಲೂ ಒಟ್ಟು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ 143 ಅಭ್ಯರ್ಥಿಗಳಲ್ಲಿ 154 ಜನರು ಪಾಸಾಗಿ 90.4% ಫಲಿತಾಂಶ ಪಡೆದಿದೆ. ಪಾಸಾದವರಲ್ಲಿ ಬೊಂಬಾಯಿಯ ಶ್ರೀ ಪಿ.ಪಿ. ಕಾಮತ್ ಎನ್ನುವವರು 54 ವರ್ಷ ವಯಸ್ಸಿನವರು.

> **ವಚನ ಸುಧೆ**
>
> ಯಾದೃಶೈಃ ಸಂಧಿವಿಶತೇ
> ಯಾದೃಶಾಂಶ್ಚೋಪಸೇವತೇ
> ಯಾದೃಗಿಚ್ಛೇಚ್ಚ ಭವಿತುಂ
> ತಾದೃಗ್ ಭವತಿ ಪೂರುಷಃ ||
>
> ತನ್ನ ಒಡನಾಡಿಗಳಂತೆ, ತಾನು ಸೇವಿಸುವ ಜನರಂತೆ, ಮತ್ತು ತಾನು ಬಯಸಿದಂತೆ ಮನುಷ್ಯನು ರೂಪುಗೊಳ್ಳುತ್ತಾನೆ.

ಕಾರ್ಕಳ ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

R. P. No. 319/1967.

ಲೂಯಿಸ್ ಯಾನೆ ಎಲೊಸಿಯಸ್
ಮತ್ತಾಸ್—Applicant.
ಮತ್ತು
ಯುಜಬೆಲ್ಲಾ ಡಿಸೋಜಾ ಬೈ ಸಹಾ
Opponents.
ಯಾವರೊಳಗೆ—

ಕೋರ್ಟ್ ಹ್ಯೂಂ ಕ್ರಾರ್ ಸರ್ವೆ ನಂ. ಹರಡಿಯ 3ನೇ ಎರ್ರಿ ಲೋರೆನ್ಸ್ ಡಿಸೋಜ 1, 4ನೇ ಎರ್ರಿ ಚಾರ್ಲಿಸ್ ಡಿಸೋಜಾ 2, ಪಾಸ್ಕಲ್ ಸೋಜಾ ಮಕ್ಕಳು, ಕಾರ್ಕಳ ತಾಲ್ಲೂಕು ಪಟ್ಟಿ ಗ್ರಾಮ, ಗಂಪದಕೋಡಿ ಎಂಬಲ್ಲಿರುವವರು — ಇವರಿಗೆ ಯಾ ಮೂಲ್ಯತೆಯನ್ನಾಡಿಸುವದೇನೆಂದರೆ —

ಅರ್ಜಿದಾರಗೆ ಎರ್ರಿಂದ ಕಳೆದ 1965-66ನೇ ವರುಷದ ಬಾಬ್ತು ಬಾಕಿ ಗೇಣಿಯನ್ನು ವಸೂಲು ಮಾಡಿಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಸರ್ವೆ ಅರ್ಜಿಯು ತಾ. 10-7-1968ಕ್ಕೆ ಸರ್ವೆ 2-4ನೇ ಎರ್ರಿರ ಹಾಜರಾತಿ ಬಗ್ಗೆ ಯಿಟ್ಟಿದೆ. ಆದ್ರಿಂದ ಸರ್ವೆ ಅರ್ಜಿ ಕುರಿತು ಅಕ್ಷೇಪ ಯಿದ್ದಲ್ಲಿ ಸರ್ವೆ ದಿನ ಬೆಳಗ್ಗೆ 11 ಗಂಟೆಗೆ ಸರ್ವೆ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸರ್ವೆ ಅರ್ಜಿ ಅವರ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆ.

H. K. Gopalkrishna Rao,
Vakil for Applicant.
Karkala, 15-6-1968.

ನರಸಣ್ಣನ ಸರಸ



"ಮದ್ಯಾಸದಲ್ಲಿ ಗುಡಿಸಲುಗಳನ್ನು ಸುಡುವ ಚಳುವಳಿ ಆರಂಭವಾಗಿದೆಯೇ ಅನ್ನೋ ಸಂದೇಹ...."

ಮುಂದಕ್ಕೆ

ಗೇಹ ರಾಜ ದಲ್ಲಿ

ಸ್ವಧರ್ಮೇ ನಿಧನಂ ಶ್ರೇಯಃ

"ಕೇಳಿದ್ದೇನೆ!"

"ಏನು?"

"ಮತ್ತೆನ್ನೆಂಥದು? ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪರಿಣಾಮ ಬಂತು!...'

"ಅಲ್ಲಿ, ಯಾರು ಬೇಡಾಂತಾರೆ?"

"ಬೇಡಾಂತಂದ್ರೂ ಪರೀಕ್ಷಾಮಂಡಳಿ ಸುಮ್ಮನಿರುತ್ತೆ?"

'ಅದಿರ್ಲಿ, ಬಂದ್ರೆ ಏನಾಯ್ತು?"

"ಬಂದ್ರೆ ಆಗೋದು ಮತ್ತೆನ್ನೇನು? ಪಾಸು, ಫೈಲು...."

'ಅಲ್ರಿ, ನಮ್ಮ ಜಿಲ್ಲೆಯ ಪರಿಣಾಮ ಭಾರೀ ಒಳ್ಳೇದಂತೆ. ಅಂತುಕೊಳ್ತಾ ಇದ್ರು ಸೇ. ೫೦ಕ್ಕಿಂತ ಕಡಿಮೆ ಪರಿಣಾಮ ಬಂದಿರೋ ಶಾಲೇನೇ ಇಲ್ಲಂತ."

"ಹ್ಹಹ್ಹನ್ನು.ಸೇ. ೭೧ನ್ನು ವಿಂಗಡೇಶಾ ದ್ರೆ ಹೀಗೇನೇ ಇರಬಹುದು."

"ಅಲ್ರಿ, ನೋಡಿ ಎಲ್ಲಿ ಕೇಳಿದ್ರೂ ಒಂದೇ ಅವ್ರದ್ದು ೯೬, ಇವ್ರದ್ದು ೯೦, ಅಚೆಯವ್ರದ್ದು ೯೩, ಈಚೆಯವ್ರದ್ದು ೮೪, ಓ ಅವ್ರದ್ದು ೧೦೦..."

"ಅಲ್ವೆ, ಎಲ್ಲಕ್ಕಿಂತ ಚಲೋ ರಿಸಲ್ಟು ನಮ್ಮದು...."

"ನಮ್ಮದೆಂಥದು?"

'ನಮ್ಮವ ಪಾಸಾಗಿ ಸೆಂಟ್ ಪರ್ಸಂಟ್ ರಿಸಲ್ಟ್ ತಂದ..."

"ಹೌದ್ರಿ, ಮತ್ತೆ ಹೇಳಿ, ಸಾಯಪ್ಪದಲ್ಲಿ ಗ್ರೇಸ್ ಮಾರ್ಕ್ ಸೇರಿ ೭೦ ಮಾರ್ಕ್"

"ಓಪ್ಪನಲ್ ಗಣಿತದಲ್ಲೂ ಹಾಗೆಯೇ ... ಅದು ಇಲ್ಲದಿರಬೇಕಿತ್ತು...ಅಗ...."

"ಏ, ಹಾಗೆಲ್ಲಾ ಮಾತಾಡಬಾರ್ದು..."

'ಯಾಕೆ?"

"ಅಲ್ವೆ, ನೋಡು, ಒಂದು ಶಾಲೆ. ಅಲ್ಲಿ ಪರೀಕ್ಷೆಗೆ ಕೂತಿರೋ ಮಕ್ಕಳು ೩೭ ಅನ್ನು. ಉತ್ತೀರ್ಣರು ೨೯ ಅಂದುಕೋ. ಫಲಿತಾಂಶ ಸೇ. ೭೮. ಆಯ್ತೂನ್ನು."

"ಹ್ಹಹ್ಹಂ...."

'ಇನ್ನೊಂದು ಶಾಲೆ. ಕೂತಿರೋರು ನೂರು. ಪಾಸಿರೋದು ಸೇ. ೭೮.'

"ಸರಿಯಾಯ್ತಲ್ಲಾ..."

"ಎಲ್ಲಿ? ನೂರು ಮಕ್ಕಳಿಗೆ ಪಾಠ ಹೇಳೋದು, ಅವ್ರ ಶಿಕ್ಷ ನೋಡೋದು ೩೭ ಜನ್ರನ್ನ ನೋಡಿಕೊಂಡಂತಲ್ಲ ಕಣೇ...'

'ಅಂದ್ರೆ ಇಲ್ಲೇನೂ ಫ್ಯಾಮಿಲಿ ಪ್ಲಾನಿಂಗ್ ರೂಲು...."

"ಅಂದ್ರೆ?'

"ಅಲ್ರಿ, ಕಡಿಮೆ ಮಕ್ಕಳು, ಹೆಚ್ಚು ಸುಖ ಸಂವೃದ್ಧಿ...."

'ಹ್ಹಾಂ...ಹಾಗೆಯೇ ನೋಡು ಮೂರು ಮಕ್ಕಳ ತಾಯ್ತಂದೆಯರಿಗಿಂತ ನೂರು ಮಕ್ಕಳ ತಾಯ್ತಂದೆಯರಿಗೆ ತ್ರಾಸ-ಕಷ್ಟ ಹೆಚ್ಚು ಅನುಭವ ಜಾಸ್ತಿ...."

"ಹ್ಹಾಹ್ರಿ... ಧೃತರಾಷ್ಟ್ರ-ಗಾಂಧಾರಿಯರು ಪಟ್ಟ ಭವಣೆ ಯಾರು ಮರೆತಾರು?"

"ಹಾಗೇನೇ..."

"ಹ್ಹಾಂ.... ಅಲ್ರಿ, ನೋಡಿ, ಏನೆಲ್ಲಾ ತಮಾಶೇಂತ..."

"ಏನು?"

"ನೋಡಿ, ಹಳೆಯ ಮೈಸೂರು:—ಮೂವರು ಕೃಷ್ಣನ ಮೈಸೂರು ಸೇ. ೩೦ ರಷ್ಟು ಮಾತ್ರ ಪರಿಣಾಮ ಪಡೆದು ಭಾರಿ ಹಿಂದೆ ಬಿದ್ದಿದೆಯಂತೆ. ಅಲ್ಲಿ ಸೇ. ೭೮ ಅತಿ ಹೆಚ್ಚಿನ ಫಲಿತಾಂಶವಂತೆ ಆಗುಂಬೆಯಲ್ಲಿ..."

"ಏ, ಅದು ನಮ್ಮ ಜಿಲ್ಲೆಗೆ ಭಾರೀ ಹತ್ತಿರ. ಆಸುದರಿಂದ ನಮ್ಮ ಗಾಳಿಯ ಪ್ರಭಾವ ಅದು..."

"ಇರಬಹುದೂನ್ನಿ. ಅದರೆ, ನಗರ, ಹಾಸನ, ಪಡಿಕೇರಿಯಳಿಗೂ ನಮ್ಮ ಗಾಳಿ ಬೀಸಲಿಲ್ಲವೇನು?"

'ಯಾವುದೋ ಒಂದು ದಿಕ್ಕಿನಿಂದ ಗಾಳಿ ಬೀಸಿತು...."

'ಸಾಕು ಬಿಡೀಂದ್ರೆ... ಗೆದ್ದ ಎತ್ತು ನಮ್ಮದೆಂದು ಪಾದಿಸಿದ್ರೇನು? ಬೇರೆಯವ್ರು ಎತ್ತು ಬೇರೆಯವ್ರದ್ದೇ.. ಇನ್ನು ಕೇಳಿ... ನಮ್ಮ ರಾಜಧಾನಿ....

'ಮಂಗಳೂರು..."

"ಅಲ್ರಿ, ಕರ್ನಾಟಕದ ರಾಜಧಾನಿ...'

"ಹ್ಹಾಂ....ಬೆಂಗಳೂರು...."

'ಹೌದು....ಅಲ್ಲಿಯೊಂದು ನಗರ ಕಾರ್ಪೋರೇಶನ್ನು....'

"ಸರಿ, ಇರ್ಲೀ ಬೇಕಲ್ಲಾ...."

"ಅದಕ್ಕೆ ಹದಿನೈದು ಹೈಸ್ಕೂಲುಗಳು ...."

"ಹ್ಹಾಂ.....ವಿದ್ಯಾ ಪ್ರಸಾರ ನಗರ ಪಾಲಿಕೆಯ ಧರ್ಮ...."

"ಸರಿಯಾಗಿ ಹೇಳಿದ್ರಿ....'

'ಏನು?"

"ವಿದ್ಯಾಪ್ರಸಾರ ಧರ್ಮಾಂತ..."

"ಏನೇ? ಧರ್ಮವನ್ನ ಅಪಾರ್ಥ ಮಾಡಿಕೊಂಡ್ಬಿಟ್ಟೇನು? ಧರ್ಮಾಂತಂದ್ರೆ ಕರ್ತವ್ಯ....ಕರ್ತವ್ಯಾಂತರ್ಥ...."

"ಅಂದ್ರೆ, ಮತ್ತೂ ಭೇಷಾಯ್ತು...."

"ಅಲ್ಲಿ. ಯಾರು ಬೇಡಾಂತಾರೆ?'

"ನೋಡಿ, ಈ ಕಾರ್ಪರೇಶನ್ನು ಗೀತೆಯ ಕರ್ಮಯೋಗವನ್ನು ಅಕ್ಷರಶಃ ಪಾಲಿಸುತ್ತಿದೆ...'

'ಅಂದ್ರೆ? ಅಧುನಿಕ ಕಾರ್ಪರೇಶನ್ನಿಗೂ ಹಳೆಯ ಗೀತೆಗೂ ಯಾವ ಬಾಂಧರಾಯಣ ಸಂಬಂಧ...?'

'ನೋಡ್ರಿ, ಕಾರ್ಪರೇಶನ್ನು ವಿದ್ಯಾ ಪ್ರಸಾರವನ್ನ ತನ್ನ ಧರ್ಮ—ಕರ್ತವ್ಯಾಂತ ಮಾಡ್ಕಿದೆ...'

"ಹ್ಹಾಂ..."

"ಸ್ವಧರ್ಮೇ ನಿಧನಂ ಶ್ರೇಯಃ; ಕರ್ಮಣ್ಯೇವಾಧಿಕಾರಸ್ತೇ.....ಗಳನ್ನ ಕಾರ್ಯರೂಪಕ್ಕೆ ತರುತ್ತಿದೆ...'

"ಏನೇ, ಎಂಥದೇ, ಏನಿದು ಒಗಟಿನಂತೆ ನಡಿಯುತ್ತಿರುವೆಯೋ ಪ್ರಿಯೆ..."

"ಮತ್ತೆನ್ನೇನನ್ನಲಿ ಪ್ರಾಣಪ್ರಿಯ! ಬೆಂಗಳೂರು ನಗರ ಕಾರ್ಪರೇಶನ್ ಅಡಳಿತೆಯ ೧೫ ಪ್ರೌಢ ಶಾಲೆಗಳ ಸರಸಾರಿ ಫಲಿತಾಂಶ ಸೇ. ೧೧ಕ್ಕೆ ಸವಿೂಪವಂತೆ...'

"ಬಲು ಸೋಜಿಗವ ನ.ಡಿಯುತಿಹೆಯಲ್ಲೆ? ಏನಿದು ಸಂಗತಿ? ಎಂತಿದು ಸಮಾಚಾರ ತಿಳಿದು ಬಂತೆ? ಸಾವರಿಯಬಹುದೇ ಪ್ರಿಯತಮೆ?'

'ನೀವರಿಯದ ವಿಷಯ ಸಾವರಿತೇನು ಪ್ರಿಯತಮ? ನೋಡಿ, ಜೋಗುಪಾಳ್ಯದಲ್ಲಿ ಸೇ. ೨೫, ಕಾಟೇರಿನಲ್ಲಿ ಸೇ. ೩, ಚಾಮರಾಜಪೇಟೆಯಲ್ಲಿ ಸೇ. ೯, ಮೂಗಡಿ ರಸ್ತೆಯಲ್ಲಿ ೪.೬, ಟಾಕ್ಸರ್ ಟೌನಿನಲ್ಲಿ ೧೦ಳ, ಟ್ಯಾನರಿ ರಸ್ತೆಯಲ್ಲಿ ೪.೩೫, ಕ್ಲೀವ್‌ಲ್ಯಾಂಡಿನಲ್ಲಿ ೫...."

"ಇದೇನು ಕೇಳ.ತ್ತಿರುವೆ ನಾವು? ದೊಡ್ಡ ಸಂಖ್ಯೆಗಳು ನಿನ್ನ ಕಂಠದಿಂದ ಹೊರಹುವುದೇ ಇಲ್ಲವೇನು?"

"ಹೊರಡದೆ ಏನಂತೆ? ಗಾಂಧಿ ನಗರದಲ್ಲಿ ಸೇ. ೨೭.೩...."

"ಹ್ಹಾಂ...ಬೆಂಗಳೂರು ನಗರ ಜಿಲ್ಲೆಯ ಫಲಿತಾಂಶ ಸೇ. ೯೯ ಇರಬೇಕು..."

'ಹ್ಹಾಂ...ಮತ್ತೆ ನೋಡಿ...ಬಳವನಗುಡಿ ಬಾಲಿಕಾ ಪ್ರೌಢ ಶಾಲೆಯ ಫಲಿತಾಂಶ ಭಾರೀ ಇಳಿದಿದೆ...'

'ಅಂದರೆ?'

'ಅಂದರೇನು? ಕಳೆದ ವರ್ಷ ಸೇ. ೨೯ ಇದ್ದುದು ಸೇ. ೫ ಅಂಕಗಳಷ್ಟು ಇಳಿದಿದೆ ....."

'ಪರೀಕ್ಷೆಗೆ ಕುಳಿತವರು ಕಳೆದ ವರ್ಷದವರಲ್ಲವಲ್ಲ!"

'ಅಲ್ರಿ, ರಾಜಧಾನಿಯಲ್ಲೇ ಹೀಗಾದರೆ, ಮತ್ತುಳಿದವರ ಗತಿಯೇನು?'

"ಮಾಡೋದೇನು? ಬೆಂಗ್ಳೂರಲ್ಲಿ ಶಿಕ್ಷಣಾಲಯಗಳ ಸಂಖ್ಯೆ ಮತ್ತು ಸಿನಿಮಾ ಥೇಟರುಗಳ ಸಂಖ್ಯೆಗಳ ನಡುವೆ ಜಂಗೀ ಕುಸ್ತಿ ನಡೆಯುತ್ತೆ...'

"ಹ್ಹಾಂ...."

"ಥೇಟರುಗಳು ದಿನಾ ಮೂರು ಆಟಗಳು, ಬೆಳಿಗ್ಗೆ ಮಾರ್ನಿಂಗು ಷೋ, ರಾತ್ರಿ ೧೨.೩೦ ಗಂಟೆಗೆ ಸ್ಪೆಷಲ್ ಷೋ, ಹೀಗೆ ಸರಾಸರಿ ಸಾಲ್ಕು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತವೆ, ಶಾಲೆ-ಕಾಲೇಜುಗಳದ್ದು ಒಂದೇ ಶಿಫ್ಟ್. ಗೆಲ್ಲೋದು ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲ ತಾನೆ?'

"ಹ್ಹಾನ್ನಿ. ಶಾಪೇ ಅನುಭವಿಸ್ದಿವಲ್ಲ? ಆ ಕೆಂಪೇಗೌಡ ರಸ್ತೆಯನ್ನು ದಾಟ ಬೇಕಾದ್ರೆ ಸಾಕೋ ಸಾಕಾಗಿ ಹೋಯ್ತು.... ಅಲ್ರಿ ಹೀಗೆ ಸರಕಾರದ ಹಣ ಹೋಲಾಗಿ ಹೋದ್ರೆ....'

"ಏನಾಗ ತ್ತೆ?'

"ಇಷ್ಟ ಅಲ್ವೆ?"

'ನಷ್ಟ? ಮತ್ತೆ ಲಾಭ ಯಾವುದು?"

'ಯಾವುದೂ ಇಲ್ಲಾಂತೀರಾ?"

"ಊ ಹ್ಹಾಂ....ನಮ್ಮ ಮಕ್ಕಳು ಚಳವಳಿ, ಪುಂಡಾಟಿಕೆ, ಸಿನಿಮಾ, ತಿರುಗಾಟ—ಹಂಟೆಗಳಿಂದ ಒಂಗೊಂದಂಶ ಎಳೆದು ವಿದ್ಯಾಭ್ಯಾಸದತ್ತ ಗಮನ ಹರಿಸ್ದ್ರೆ ನೂರಕ್ಕೆ ನೂರರಷ್ಟು ಫಲಿತಾಂಶ ಬರ.ತ್ತೆ ...."

"ಆ ಕಾಲ ಎಂದು ಬರುತ್ತೋ...'

"ಅದು ಬರಲಿಂತ ಆಸೆಪಟ್ಟರೆ ಫಲ ಬಲ್ಲಿ ಅಕಿಯಿಟ್ಟಂತಾಯ.ತಲ್ಲಿ?"

"ಅಂದ್ರೆ ವಿಧ್ಯಾಭ್ಯಾಸವನ್ನು ಮುಕ್ಕಟೆ ಮಾಡಿ ಸರಕಾರ ದಿವಾಳಿ ಹೋದ್ರೂ...."

"ಸ್ವಧರ್ಮೇ ನಿಧನಂ ಶ್ರೇಯಃ'

'ಒಳ್ಳೇ ಭೇಷಾಯ್ತು ಬಿಡಿ...."

'ಇಲ್ಲ...ಹಿಡೀರೇನೆ....'

—ಗೋರಾ.

ಸೇವೆನೆಂಬ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡೆಕೊಳ್ಳಿರಿ
ಎಸ್. ಆರ್.
ಬಾಹಿ ವಿಪ್ಲಾಣಿ ತಂಬಾಕು
ಮತ್ತು
ಬೊಂಬ್ಯಾ ಬಿಡಿ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works, UDIPI, S.K.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಶಂಕಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸಜ್ಜಾಯಗಳಲ್ಲಿಯೇ ತತ್ಪರಿಸುವಂತೆ ಪ್ರಚೋದಿಸುವ ಕೃತಿ

ಬೆಲೆ: 0-19 ಪೈಸೆ.

ರಿಯಾಂ ಪ್ರತಿಗಳಿಗೆ ವಿಚಾರಿಸಿರಿ:.

ನವಯುಗ ಪ್ರೆಸ್, ಉಡುಪಿ.

— ಮೆಚ್ಚುಗೆ —

ಮಾನವೀಯ ಸಂಬಂಧವನ್ನು ಬೆಳೆಸುವ ಸಿದ್ಧೌಷಧ

ಬರೆಹವರು : ಡಾ। ಸುಂದರ್ ಜೆ. ವಜೀರಾನಿ.

ಮೆಚ್ಚುಗೆಯ ವಿಶೇಷತೆಯೇನು? ಮನುಷ್ಯನ ದೈನಂದಿನ ಜೀವನದಲ್ಲಿ ಅದರ ಮಹತ್ವವೇನು?

ಜಗತ್ತಿನ ತಜ್ಞ ಸಮಾಜ ಶಾಸ್ತ್ರಜ್ಞರೇನೇರು ಏಕಮತದಿಂದ ಇದಕ್ಕೆ ಉತ್ತರವೀಯುತ್ತಾರೆ. 'ಮೆಚ್ಚುಗೆಯನ್ನು ಪಡೆಯುವ ಬಲವಾದ ಹಂಬಲವು ಮಾನವನ ಮೂಲಗುಣಗಳಲ್ಲಿ ಒಂದು ಸರ್ವಸಾಮಾನ್ಯ ತತ್ವ'ವೆಂದು ಮನೋವಿಜ್ಞಾನದ ಸುಪ್ರಸಿದ್ಧ ಹಾಗೂ ಮೂಲ ಪರಿಶೋಧಕರಾದ ಅಮೇರಿಕದ ವಿಜ್ಞಾನಿ ಡಾ। ವಿಲಿಯಂ ಜೇಮ್ಸರು ಅಭಿಪ್ರಾಯ ಕಟ್ಟಿದ್ದಾರೆ.

ಇತರರಲ್ಲಿ ಕಂಡು ಬರುವ ಪಾಂಡಿತ್ಯ, ಕುಶಲತೆ, ದಕ್ಷತೆ ಹಾಗೂ ಗುಣಗಳನ್ನು ಮೆಚ್ಚುವುದರಿಂದ ನಾವು ನಿಸ್ಸಂದೇಹವಾಗಿಯೂ ಅವರ ಸಾಹಚರ್ಯವನ್ನು ಗಳಿಸುವುದು ಮಾತ್ರವಲ್ಲದೆ ಅವರ ಬೆಂಬಲವನ್ನು ಪಡೆಯಬಹುದು. ಪರಸ್ಪರ ಹೀಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರಿಂದ ಮೆಚ್ಚುಗೆಯನ್ನು ಪಡೆದ ವ್ಯಕ್ತಿಗೆ ತನ್ನ ವ್ಯಕ್ತಿತ್ವದ ಮಹತ್ವದ ಅರಿವು ಆಗುವುದು ಮಾತ್ರವಲ್ಲದೆ ಅತನ ಆತ್ಮ ವಿಶ್ವಾಸವು ಬೆಳೆಯಲೂ ಸಾಧ್ಯ ಪ್ರೋತ್ಸಾಹಿಸಿದಂತಾಗುವುದು.

ಸಾಮಾನ್ಯವಾಗಿ ಸಮಾಜದಲ್ಲಿ ಯಾವ ವ್ಯಕ್ತಿಯೂ ತನ್ನ ಕಾರ್ಯಗಳ, ಯಾ ವಿಚಾರಗಳ ಬಗ್ಗೆ ಬೇರೆಯವರ ಮೆಚ್ಚುಗೆಯನ್ನು ಬಯಸದೇ ಇರುವುದು ಸ್ವತಃ ಆತ್ಮ ವಿಶ್ವಾಸಿಯಾಗಿಲ್ಲ. ಓರ್ವ ವ್ಯಕ್ತಿಯು ಮಾಡಿದ ಯಾವುದೇ ಕಾರ್ಯಕ್ಕೆ ಬೇರೆಯವರ ಮನ್ನಣೆ ಯಾ ನೆಚ್ಚಿಗೆ ದೊರೆತಾಗಲೇ ಆತನಿಗೆ ತೃಪ್ತಿಯಾಗುವುದು, ಆನಂದವಾಗುವುದು. "ನಾವು ನಡೆಸಿದ ಇವತ್ತಿನ ಪಾರ್ಟಿಹೇಗಿತ್ತು?' 'ಆ ಸಮಾರಂಭವು ಚೆನ್ನಾಗಿ ನಡೆಯಿತೇ?" "ನನ್ನ ಭಾಷಣವು ನಿಮಗೆ ಹೇಗನ್ನಿಸಿತು.?" "ನನ್ನ ಹಾಡು ನಿಮಗೆ ಮೆಚ್ಚಿಕೆಯಾಯಿತೆ?" ಎಂಬ ಪ್ರಶ್ನೆಗಳನ್ನು ಹೇಳುವ ನಿಮಗೆ ಅನೇಕ ಬಾರಿ ಕೇಳಿರಬಹುದಲ್ಲವೆ?

ನಮ್ಮಲ್ಲಿ ಹಲವರು ಹೆಚ್ಚಿನ ಪ್ರಸಂಗಗಳಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸುವುದಿಲ್ಲ. ಒಂದೋ ಅದರ ಅವಶ್ಯಕತೆ ಇಲ್ಲವೆಂದು ಅವರು ಭಾವಿಸಬಹುದು. ಅಥವಾ ನೆಚ್ಚಿಕೆಯನ್ನು ವ್ಯಕ್ತಪಡಿಸುವ ಇಷ್ಟವಿದ್ದರೂ ಸೂಕ್ತ ವಿಧಾನ ತಿಳಿಯದಿರಬಹುದು. 'ಹಿತ್ತಿಲ ಗಿಡ ಮದ್ದಲ್ಲ' ಎಂಬ ನಾಡೆಯನ್ನು ನೀವು ಕೇಳಿರಬಹುದು. ನಮ್ಮ ಅಕ್ಕಪಾಸಿನಲ್ಲಿರುವ ಯಾ ಸಮೀಪದಲ್ಲಿರುವ ವಸ್ತುವಿನ ಪ್ರಾಮುಖ್ಯತೆ ಮತ್ತು ಅದರ ಮಹತ್ವ ಯಾ ಬೆಲೆಯನ್ನು ಕಡಿಮೆ ಮಾಡಿ ಅಳೆಯುವ ಒಂದು ಮನೋವೃತ್ತಿ ಮಾನವನಲ್ಲಿದೆ. ವಸ್ತುವಿನ ಸಾಮೀಪ್ಯದಿಂದಾಗಿ ಅದರಲ್ಲಿರುವ ನ್ಯೂನತೆಗಳೇ ನಮ್ಮ ದೃಷ್ಟಿಗೆ ಗೋಚರವಾದುದ್ದರಿಂದ ಅದಕ್ಕೆ ಬದಲಾಗಿ "ದೂರದ ಬೆಟ್ಟ ನುಣ್ಣಗೆ" ಎಂಬ ನಾಣ್ಣುಡಿಯೂ ಪ್ರಸಿದ್ಧಿಯಲ್ಲಿದೆ. ದೂರದ ವಸ್ತುಗಳನ್ನು ಅವುಗಳ ವಾಸ್ತವಿಕ ಬೆಲೆಗಿಂತಲೂ ಅಧಿಕ ಬೆಲೆಯುಳ್ಳವೆಂದೂ ಅಲ್ಲದೆ ಅವುಗಳು ನ್ಯೂನಾತೀತವೆಂದೂ ಭಾವಿಸುವುದೂ ಮಾನವ ಸಹಜ ಸ್ವಭಾವ.

ಇನ್ನು ಹಲವಾರು ಪ್ರಸಂಗಗಳಲ್ಲಿ ನಾವು ನಮ್ಮ ಸುಟಂಬದ ಸದಸ್ಯರ ಯೋಗ್ಯತೆಯನ್ನೂ ಕಡಿಮೆಯಾಗಿ ಭಾವಿಸುತ್ತೇವೆ. ಹಾಗೆಯೇ ನಾವು ಮಾಡುತ್ತಿರುವ ಉದ್ಯೋಗ ಅಥವಾ ನಾವು ಕೆಲಸ ಮಾಡುತ್ತಿರುವ ಸಂಸ್ಥೆಗಳ ಬಗ್ಗೆ ಕೂಡಾ ನಮ್ಮ ಮನಸ್ಸಿನಲ್ಲಿ ವಿಶೇಷ ಮೆಚ್ಚುಗೆಯ ಅಭಿಪ್ರಾಯವಿರುವುದಿಲ್ಲ. ಇಂತಹ ಪ್ರಸಂಗಗಳಲ್ಲಿ ನಾವು ಹುಳುಕನ್ನೇ ಎತ್ತಿ ಹಿಡಿಯುತ್ತೇವೆ. ಹಾಗೆಯೇ ನಾವು ಯಾರ ವ್ಯಕ್ತಿತ್ವದ ಬಗ್ಗೆ ಅಲ್ಪಜ್ಞಾನ ಪಡೆದಿರುತ್ತೇವೋ ಅಂತಹವರ ಬಗ್ಗೆ ಬಹಳ ಉಚ್ಚ ಭಾವನೆಯನ್ನು ಇಟ್ಟುಕೊಂಡಿರುತ್ತೇವೆ. ಅವರನ್ನು ನಮಗಿಂತಲೂ ಅಧಿಕ ಅದೃಷ್ಟವಂತರೂ, ಸುಖಿಗಳೂ, ಎಂದು ಪರಿಭಾವಿಸುವ ಮನೋವೃತ್ತಿಯೂ ಹಲವರಲ್ಲಿದೆ. ನಮ್ಮ ಸಮೀಪದಲ್ಲಿರುವ ವಸ್ತುಗಳ ನ್ಯೂನತೆಗಳನ್ನು ನೋಡುವುದು ಮತ್ತು ದೂರದಲ್ಲಿರುವ ವಸ್ತುಗಳ ಮೆರಗನ್ನು ಮೆಚ್ಚುವುದು ಮಾನವ ಸಹಜ ಸ್ವಭಾವವಲ್ಲವೇ? ಆದರೆ ವರ್ತಮಾನ ಸಮಾಜ ಪ್ರಶಂಸಾ ಪ್ರಿಯವಾದುದು! ಈ ಸಮಾಜ ಮೆಚ್ಚುಗೆಯನ್ನು ವ್ಯಕ್ತಪಡಿಸದಿರುವ ಮನೋವೃತ್ತಿ ಓರ್ವನ ವ್ಯಕ್ತಿತ್ವದಲ್ಲಿ ಒಂದು ನ್ಯೂನತೆ ಎಂದು ಪರಿಗಣಿಸುವುದು!

ಹಾಗಾದರೆ ಮಾನವೀಯ ಸಂಬಂಧವನ್ನು ಬೆಳೆಸುವ ಕಾರ್ಯದಲ್ಲಿ ಅಡ್ಡಿಯಾಗುವ ಈ ನ್ಯೂನತೆಯನ್ನು ಹೋಗಲಾಡಿಸುವ ಉಪಾಯವೇನು? ದೈನಂದಿನ ಜೀವನದ ವ್ಯವಹಾರಗಳು ಸುಲಲಿತವಾಗಿ ಮುನ್ನಡೆಯಲು ಅನುಕೂಲವಾಗುವಂತೆ ನಮ್ಮ ಸಮಾಜದಲ್ಲಿರುವ ಹಲವಾರು ವ್ಯಕ್ತಿಗಳ ಬಗ್ಗೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಸ್ವಭಾವವನ್ನು ನಮ್ಮ ವ್ಯವಹಾರಗಳಲ್ಲಿ ತುಂಬುವ ಬಗೆ ಹೇಗೆ?

ಇದಕ್ಕೆ ಸುಲಭೋಪಾಯವೆಂದರೆ, ನಾವು ಎಲ್ಲಿ ನ್ಯೂನತೆ ಎತ್ತಿ ಹೇಳ ಬಯಸುತ್ತೇವೋ ಅದರ ಬದಲಾಗಿ ವಿಶೇಷತೆಗಳ ಶ್ಲಾಘನೆ ಮತ್ತು ಮೆಚ್ಚುಗೆಗಳನ್ನು ವ್ಯಕ್ತಪಡಿಸುವ ಅಭ್ಯಾಸವನ್ನು ಅಳವಡಿಸಿಕೊಳ್ಳಬೇಕು. ಒಬ್ಬ ವ್ಯಕ್ತಿಯ ಬಗ್ಗೆ ಚರ್ಚಿಸುವಾಗ ಆತನಲ್ಲಿರುವ ನಮಗೆ ಅಪ್ರಿಯವಾದ ತತ್ವಗಳನ್ನು ಬದಿಗಿಟ್ಟು ನಮಗೆ ಒಪ್ಪಿಗೆಯಾಗುವ ಸದ್ಗುಣಗಳ ಬಗ್ಗೆ ನಮ್ಮ ಸಂತೋಷವನ್ನು ವ್ಯಕ್ತಪಡಿಸುವುದು ಉಚಿತ. ಸಮಾಜದಲ್ಲಿ ನಡೆವ ಒಂದು ಒಳ್ಳೆಯ ಕಾರ್ಯದ ಬಗ್ಗೆ ನಮ್ಮ ಸಂತೋಷವನ್ನು ವ್ಯಕ್ತಪಡಿಸುವ ಸ್ವಭಾವವನ್ನು ಬೆಳೆಸಿಕೊಳ್ಳಬೇಕು. ನಮಗೆ ಹತ್ತಿರದವರಿಂದ ದೊರೆತ ಸಹಾಯಕ್ಕೆ ನಮಗೆ ಕೃತಜ್ಞತೆಗಳನ್ನು ಅರ್ಪಿಸುವುದರೊಡನೆ ಅಂತಹ ವ್ಯಕ್ತಿದಳ ಯೋಗ್ಯತೆ, ಕುಶಲತೆ ಹಾಗೂ ಅಳವಾದ ಜ್ಞಾನಕ್ಕೆ ನಮ್ಮ ಗೌರವವನ್ನು ತೋರಿಸುವ ಮನೋವೃತ್ತಿಯನ್ನು ನಾವು ಅಳವಡಿಸಿಕೊಳ್ಳಬೇಕು. ಇನ್ನು ನಮ್ಮ ಉದ್ಯೋಗದಲ್ಲಿಯೂ ನಮಗೆ ಅಪ್ರಿಯವಾದ ವಿಷಯಗಳ ಬಗ್ಗೆ ಹೆಚ್ಚಿಗೆ ಸರ್ಯಾಲೋಚಿಸದೆ, ಅದರಲ್ಲಿ ಪ್ರಿಯವಾದ ವಿಷಯಗಳ ಬಗ್ಗೆ ನಾವು ಯೋಚಿಸತೊಡಗಿದಾಗ ಅದೇ ಉದ್ಯೋಗ ನಮಗೆ ತೃಪ್ತಿಯನ್ನೀಯುವುದು. ಪ್ರತಿ ವಸ್ತು ಹಾಗೂ ಪರಿಸ್ಥಿತಿಗಳಲ್ಲಿ ಆಶಾವಾದಿ ದೃಷ್ಟಿಕೋಣವು ನಮ್ಮಲ್ಲಿ ಇಂತಹ ಗುಣಗಳನ್ನು ತುಂಬುವುದು. ನಾನು ಹಲವಾರು ಬಾರಿ ಇದೇ 'ಮೆಚ್ಚುಗೆಯ ತಂತ್ರ'ವನ್ನು ನನ್ನ ದೈನಂದಿನ ಜೀವನದಲ್ಲಿ ಪ್ರಯೋಗಿಸಿ ಇತರರ ಮೇಲೆ ಅದು ಉಂಟು ಮಾಡುವ ಅದ್ಭುತ ಪ್ರಭಾವವನ್ನು ಮನಗಂಡಿದ್ದೇನೆ. ಸಮಾಜದಲ್ಲಿ ನಡೆಯುವ ಪ್ರತಿ ಕಾರ್ಯದಲ್ಲಿಯೂ, ಪ್ರತಿ ವ್ಯಕ್ತಿಯಲ್ಲಿಗೂ ಒಂದಲ್ಲ ಒಂದು ವಿಶೇಷತೆ ಇರುತ್ತದೆ, ಒಳ್ಳೆಯ ಅಂಶ ಇರುತ್ತದೆ, ಆ ಒಳ್ಳೆಯ ತತ್ವವನ್ನು ಗ್ರಹಿಸಿ ನಾವು ಮೆಚ್ಚಬೇಕು. ನ್ಯೂನತೆದೆಗನ್ನು ಪ್ರಧಾನವಾಗಿಟ್ಟುಕೊಂಡು ಟೀಕಿಸುವುದರಿಂದ ಪರಸ್ಪರ ಮನೋಮಾಲಿನ್ಯ ಬೆಳೆಯುವುದಲ್ಲದೆ ಬೇರೇನೂ ಸಿದ್ಧಿಸುವುದಿಲ್ಲ.

ಆದುದರಿಂದ ನಾನು ಇತರರ ಬಗ್ಗೆ ವ್ಯಕ್ತಪಡಿಸಿದ ಮೆಚ್ಚುಗೆಯ ಮಾತುಗಳು ನಮಗೆ ನಿಕಟ ಮಿತ್ರರನ್ನು ಸಂಪಾದಿಸಿ ಕೊಡುವುದಲ್ಲದೆ ನಮ್ಮ ಜೀವನವನ್ನು ಆನಂದ ಹಾಗೂ ವಿಜಯದೆಡೆಗೆ ಕೊಂಡೊಯ್ಯುವುವು. ಸಮಾಜದಲ್ಲಿ ಪರಸ್ಪರ ಸಹಕಾರ, ಮೈತ್ರಿ ಮಾರ್ಗ ಮಾನವೀಯ ಸಂಬಂಧವನ್ನು ಬೆಳೆಸುವ ಉಪಯುಕ್ತವಾದ ಒಂದೇ ಒಂದು ಸಿದ್ಧೌಷಧ—ಮೆಚ್ಚುಗೆಯ ಅಭಿವ್ಯಕ್ತಿ—ಇನ್ನು ಶಕ್ತಿಶಾಲಿಯಾದ ಬೇರೆ ಔಷಧವು ವೈದ್ಯಕೀಯ ಶಾಸ್ತ್ರದಲ್ಲಿ ಇಲ್ಲವೆಂದರೂ ತಪ್ಪಾಗದು—"ಮೆಚ್ಚುಗೆ ಸಮಾಜದಲ್ಲಿ ಇಂದು ಎಷ್ಟು ವಿಫಲವಾಗಿದೆ! ಎಷ್ಟು ಅಗ್ಗವಾಗಿದೆ!! ಅದರೂ ಇದನ್ನು ಇತರರ ಮೇಲೆ ಪ್ರಯೋಗಿಸಿದಾಗ ಆಗುವ ಅದ್ಭುತ ಪ್ರಭಾವವೇನು?

ನಾನು ಒಂದು ಬ್ಯಾಂಕನ್ನು ಹುಡುಕುತ್ತಿದ್ದರೆ

ಶ್ರೀ ಎ. ಎಂ. ಅಧಿ

‡‡ ನನಗೆ ಎಲ್ಲ ಸೌಲಭ್ಯಗಳನ್ನೊದಗಿಸುವಷ್ಟು ದೊಡ್ಡದಾದ, ಆದರೆ ತನ್ನ ಭಾರೀ ಮಹಾಮಟಗಳ ನಡುವೆ ನನ್ನ ಖಾತೆಯು ಅಲ್ಪವೆಂದು ತೋರಿಬರುವಷ್ಟು ದೊಡ್ಡದಾಗಿರದ ಒಂದು ಬ್ಯಾಂಕನ್ನು ನಾನು ಹುಡುಕುವೆ.

‡‡ ಅಧುನಿಕ ವ್ಯಾಪಾರ, ವ್ಯವಹಾರಗಳಿಗೆ ನೆರವಾಗುವಂಥ ಸಾಧಾರ್ಹ ಸಂಸ್ಥೆಯಾಗಿದ್ದು, ನನ್ನ ಆರ್ಥಿಕ ಜೀವನದಲ್ಲಿ ಒಂದು ಸಹಾಯಕ ಪಾತ್ರವನ್ನು ವಹಿಸಿಕೊಳ್ಳಲು ಸಿದ್ಧವಾದ ಒಂದು ಬ್ಯಾಂಕನ್ನು ನಾನು ಹುಡುಕುವೆ.

‡‡ ಚಲಾವಣಾ ಸಂಪತ್ತಿನಲ್ಲಿ, ವಿಶಾಲ ಅನುಭವದಲ್ಲಿ, ಖ್ಯಾಮಾಣಿಕ ಸೇವೆಯಲ್ಲಿ ಮಿಗಿಲೆನಿಸಿದ್ದು, ಅದರೊಂದಿಗಿನ ವ್ಯವಹಾರವು ಸಂತೋಷದ ಸವಿನೆನಪನ್ನು ತುಂಬಿಕೊಡುವಂಥ ಒಂದು ಬ್ಯಾಂಕನ್ನು ನಾನು ಹುಡುಕುವೆ.

ಒಟ್ಟಿನಲ್ಲಿ ನನ್ನ ಆಯ್ಕೆ

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಶಾಖೆಗಳು: 230 ಕ್ಕೂ ಮಿಕ್ಕಿವೆ

ಚಲಾವಣಾ ಸಂಪತ್ತು: ರೂಪಾಯಿ 100 ಕೋಟಿಗೂ ಮಿಕ್ಕಿದೆ.

.....ವಿಶ್ವವ್ಯಾಪೀ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ

ಅಮೃತಾಂಜನ

ಎಲ್ಲಾ ನೋವುಗಳಿಗೂ ಸಿದ್ಧೌಷಧ

ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಮಾರುವ ಏಜೆಂಟರ್

ಚಾರುಚಯನ

ಹರಡುತ್ತಿರುವ ಕೆಲವು ಚಟಗಳು

ಕಂಪ್ಯೂಟರುಗಳು ಬಂದ ಬಳಿಕ ಕೆಲವು ಶೀಘ್ರವಾಗಿದ್ದೂ ಜೊಕ್ಕವಾಗಿದ್ದೂ ನಡೆಯುವುದು ಎಂಬ ಮಾತು ಈ ಬಾರಿಯ ಎಸ್ ಎಸ್ ಎಲ್ ಸಿ ಪರೀಕ್ಷಾ ಪರಿಣಾಮ ಹೊರಗೆಡಹುವಲ್ಲಿ ಸತ್ಯವಾಗಿಲ್ಲ. ಕಳೆದ ವರ್ಷ ಮನೆ ಪ್ರಕ್ರಿಯೆನ್ನು ಬಳಸಿಕೊಂಡೇ ಮೇ ಕೊನೆಯ ವಾರದಲ್ಲಿ ಪರಿಣಾಮ ಪ್ರಕಟಿಸಿದ ಪರೀಕ್ಷಾ ಮಂಡಳಿಯು ಈ ವರ್ಷ ಕಂಪ್ಯೂಟರ್‌ಗಳನ್ನೂ ಹೆಚ್ಚಿನ ಎರಡು ವಾರಗಳನ್ನೂ ತೆಗೆದುಕೊಂಡಿತು. ಇದಕ್ಕೆಲ್ಲಾ ಧಾರಾಳ ಕೃಪಾಂಕ ಜೋಡಿಸಬೇಕಾಗಿ ಬಂದುದೇ ಮುಖ್ಯ ಕಾರಣವೆನ್ನುವುದು ಬೇರೆ ವಿಚಾರ.

ವದಂತಿಗಳಂತೆ ಸುಮಾರು ೪೫೦ ಸಮಿಪದನ್ನು ಕೃಪಾಂಕ ಈ ಬಾರಿ ಜೋಡಿಸಲಾಗಿದೆಯಂತೆ. ಇಷ್ಟಾದರೂ ರಾಜ್ಯದ ಸರಾಸರಿ ಉತ್ತೀರ್ಣತೆ ಸೇ. ೩೫.೭. ದಕ್ಷಿಣ ಕನ್ನಡದ ಸರಾಸರಿ ಉತ್ತೀರ್ಣತೆ ಸೇ. ೭೧ನ್ನು ದಾಟಿದರೆ, ಉತ್ತರ ಕನ್ನಡದ ಸರಾಸರಿ ೫೦ನ್ನು ಮೀರಿದೆ. ಬಿಜಾಪುರ, ಧಾರವಾಡ, ಬೆಳಗಾಂವಿ ರಾಯಚೂರುಗಳು ಸಾಮಾನ್ಯವಾದರೆ, ಗ್ರಾಮಾಂತರ, ಬೆಂಗಳೂರು, ಮಂಡ್ಯ, ತುಮಕೂರು, ಚಿತ್ರದುರ್ಗಗಳು ನಿಷ್ಕೃಷ್ಟ— ಸೇ. ಹತ್ತಕ್ಕಿಂತ ತುಸು ಹೆಚ್ಚು.

ದಕ್ಷಿಣ ಕನ್ನಡದ ಈ ವಿಕ್ರಮವನ್ನೂ ಹಳೆ ಮೈಸೂರಿನ ಭಾರೀ ಸೋಲನ್ನೂ ಒಬ್ಬರು ಹೀಗೆ ಬರೆದಿದ್ದಾರೆ— "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇ. ೭೪.೮. ಮಿಕ್ಕ ಎಲ್ಲಾ ಜಿಲ್ಲೆಗಳಲ್ಲಿ ಕಡಿಮೆ ಅದರಲ್ಲೂ ಹಳೆ ಮೈಸೂರಿನ ಜಿಲ್ಲೆಗಳ ಫಲಿತಾಂಶ ತೀರ ಕೆಳ ಮಟ್ಟದಲ್ಲಿದೆ." ಇದಕ್ಕೆ ಕಾರಣ? "ಒಂದನೆಯದಾಗಿ ಶಾಲೆಗಳಲ್ಲಿ ಪಾಠ ಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ ..... ಉಪಾಧ್ಯಾಯರಲ್ಲಿ ಹೆಚ್ಚಿನವರು ಮನೆಯಲ್ಲೇ ಖಾಸಗಿ ಶಾಲೆ ಮಾಡಿಕೊಂಡಿದ್ದಾರೆಂದರೆ ತಪ್ಪಾಗಲಾರದು.... ಶಾಲೆಯಲ್ಲಿ ಪಾಠ ಸರಿಯಾಗಿ ನಡೆಯುವುದಿಲ್ಲವೆಂದು ಪೋಷಕರು ತಮ್ಮ ಮಕ್ಕಳನ್ನು ಉಪಾಧ್ಯಾಯರುಗಳ ಮನೆಗೆ ಕಳಿಸುತ್ತಾರೆ. ಅವರು ಅಲ್ಲಿಯೂ ಪಾಠ ನಡೆಯುವುದು ಅಷ್ಟಕ್ಕಷ್ಟೆ... ಪಾಸಾದವರನ್ನು ವಿಚಾರಿಸಿದರೆ, ಅವರಲ್ಲಿ ಹೆಚ್ಚಿನವರು ಶಾಲೆಯಲ್ಲಿ ಓದಿ ಮನೆಯಲ್ಲೇ ಶ್ರದ್ಧೆಯಿಂದ ಅಭ್ಯಾಸ ಮಾಡಿದವರು. ದಕ್ಷಿಣ ಕನ್ನಡದಲ್ಲಿ ಪಾಠ ಹೇಳುವುದು ಕೇಳಿಸಿಕೊಳ್ಳುವುದು ತೀರ ಕಡಮೆ.... ಪ್ರಥಮ ತರಗತಿಯಿಂದ ಎಸ್ ಎಸ್ ಎಲ್ ಸಿ ವರೆಗೆ ಒಂದೇ ಶಾಲೆಯಲ್ಲಿ ಕಲಿಯಲು ಅವಕಾಶವಿದೆ. ಒಳ್ಳೇ ಫಲಿತಾಂಶಕ್ಕೆ ಇದೂ ಒಂದು ಕಾರಣ....' ಇದು ಖಾಸಗಿ ಪಾಠ ಕೇಳಲು ತಪ್ಪಲ್ಲಿಗೆ ಬಾರದ ಹತಭಾಗ್ಯ ಅಧ್ಯಾಪಕರು, ಅಲ್ಲವೇ ಪಾಠ ಹೇಳಲು ಅಶಕ್ತರಾದ ಹೆತ್ತವರ ಅಭಿಪ್ರಾಯದಂತೆ ಕಂಡರೂ ಹಳೆಯ ಮೈಸೂರು ಭಾಗದವರದೇ ಇರಬೇಕು. ಅವರ ಹೃದಯ ಮಕ್ಕಳ ಅನುತ್ತೀರ್ಣತೆಗೆ ಮರುಗುವುದಕ್ಕಿಂತ ಹೆಚ್ಚಾಗಿ ಖಾಸಗಿ ಪಾಠ ಹೇಳುವ ಅಧ್ಯಾಪಕರ ಮೇಲೆ ರೇಗಿದೆ. ಹೇಗಿದ್ದರೂ ಈ ಸಂಗತಿ ವಾಸ್ತವಿಕತೆಗೆ ಹೆಚ್ಚು ದೂರವಲ್ಲ.

ಆದರೆ, ಇತ್ತೀಚೆಗೆ ದಕ್ಷಿಣ ಕನ್ನಡದಲ್ಲಿ ಪಾಠ ಹೇಳುವ ಚಟವಿಲ್ಲವಾದರೂ 'ಟ್ಯೂಷನ್', 'ಕೋಚಿಂಗ್'ಗಳ ಗಾಳಿ ಬೀಸತೊಡಗಿದೆ. ಹಳೆಯ ಮೈಸೂರಿನ ಸಂಪರ್ಕ ಗಾಢವಾಗಿ ಬೆಳೆಯುತ್ತ ಬಂದಂತೆ ಅಲ್ಲಿನ ಒಂದೊಂದೇ ಚಟಗಳು ಈ ಕರಾವಳಿ ಜಿಲ್ಲೆಗೆ ಇಳಿಯ ಹತ್ತಿವೆ. ಈ ಅನಿಷ್ಟ ಸಂಪ್ರದಾಯವನ್ನು, ದರ್ಪಟವನ್ನು, ರಾಜ್ಯದಲ್ಲಿ ನಿಲ್ಲಿಸಿ ಶಿಕ್ಷಣದತ್ತ ಹೆಚ್ಚು ಗಮನ ನೀಡುತ್ತಿದ್ದು ಸರಕಾರದ ಹೊಣೆ. ಖಾಸಗಿ ಪಾಠ ಹೇಳುವುದಕ್ಕೆ ಈಗಾಗಲೇ ನಿಷೇಧವಿದೆ. ಅನಿವಾರ್ಯ ಪ್ರಸಂಗಗಳಲ್ಲಿ ಪೂರ್ವಾನುಮತಿ ಕೊಡುವ ಕ್ರಮವೂ ಇದೆ. ಆದರೆ, ಲಂಚ ರುಸುವತ್ತುಗಳ ಬಲದಿಂದ ಕೋಟ್ಯಂತರಗಳ ವ್ಯವಹಾರ ನಡೆಯುವುದು ಸಾಧ್ಯವಿರುವಾಗ ಖಾಸಗಿ ಪಾಠ ಹೇಳಿ ಬೇಳೆಕಾಳು ಗಳಿಸುವ ಅಧ್ಯಾಪಕರಿಗೆ ಮಾತ್ರ ದಿಗ್ಬಂಧನ ಹಾಕುವುದು ನ್ಯಾಯವಾದೀತೆ? ಸಾಧ್ಯವಾದೀತೆ?

ಂ ಂ ಂ

ಅಧ್ಯಾಪಕರಿಗೆ ಖಾಸಗಿ ಪಾಠ ಹೇಳುವ ಚಟ, ನಾಗಾ ಜನರಿಗೆ ಬಂಡೇಳುವ ಚಟ. ದೇಶದ ಪೂರ್ವದ ನಾಗಾ ಗುಡ್ಡಗಾಡುಗಳಲ್ಲಿ ತೋರಿಕೆಗಾದರೂ ಕಂಡು ಬಂದಿದ್ದ ಶಾಂತಿಗೀಗ ಅಶಾಂತಿ ಗ್ರಹಣ ಬಡಿದಿದೆ. ಸ್ವತಂತ್ರ ನಾಗಾರಾಜ್ಯದ ಕನಸು ಕಾಣುತ್ತ ಅದಕ್ಕಾಗಿ ಹಂಬಲಿಸಿ ನ್ಯಾಯ ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ನಾಗಾ ಬಂಡುಗಾರರು ಅನರ್ಥಕ್ರಮಗಳಾಗಿದ್ದಾರೆ. ಭಾರತ ಸಂವಿಧಾನದ ಚೌಕಟ್ಟಿನೊಳಗೆ ಯಾವುದೇ ನ್ಯಾಯೋಚಿತ 'ಸಂಧಾನ'ಕ್ಕೆ ಭಾರತ ಸರಕಾರ ಸಿದ್ಧವಿದ್ದರೂ ಇದು ನಾಗಾ ಬಂಡುಗಾರರಿಗೆ ಅನಿಷ್ಟ. ಇದಕ್ಕಾಗಿ ಅವರು ಭಾರತದ ಶತ್ರು — ಹಿತಶತ್ರುಗಳ ಬಾಲಹಿಡಿದು ಸಹಾಯ ಪಡೆಯುತ್ತ ಬಂದಿದ್ದಾರೆ. ಭಾರತ—ಬರ್ಮಾ ಗಡಿಯನ್ನು ಅಕ್ರಮವಾಗಿ ಬಳಸಿಕೊಂಡು ಕೆಂಪು ಚೀನಾದೊಡನೆ ನಿಕಟ ಸಂಪರ್ಕ ಗಳಿಸಿದ್ದಾರೆ. ಅಲ್ಲಿ ಸಮರ ತರಬೇತಿ ಪಡೆದಿದ್ದಾರೆ. ಪಡೆಯುತ್ತಿದ್ದಾರೆ. ಯುದ್ಧೋಪಕರಣಗಳನ್ನು ಹೊಂದಿದ್ದಾರೆ. ಇತ್ತೀಚೆಗೆ ನಡೆದ ಭದ್ರತಾ ಪೋಲಿಸ್ ಮತ್ತು ಬಂಡುಗಾರ ನಾಗಾಗಳ ಹೋರಾಟದಲ್ಲಿ ಚೀನಾದವರ ತಯೊರಾದ ಎಂ ಎಂ ಮಷೀನ್‌ಗಳು, ರೈಫಲ್‌ಗಳು, ಮಧ್ಯಮ ಮತ್ತು ಸಾಮಾನ್ಯ ಮೆಷಿನ್ ಗನ್ನುಗಳು, ರಾಕೆಟ್ ಮತ್ತು ಅದನ್ನು ಹಾರಿಸುವ ಸಾಧನಗಳು, ಸ್ವಯಂಚಾಲಿತ ರೈಫಲ್‌ಗಳು ಮೊದಲಾದುವಲ್ಲದೆ ಭಾರೀ ಪ್ರಮಾಣದ ಮದ್ದುಗುಂಡುಗಳು ದೊರೆತಿವೆ.

ಭಾರತ—ಬ್ರಹ್ಮಪುತ್ರ ಗಡಿ ಸಂಪೂರ್ಣ ಮುಚ್ಚಿದ್ದರಿಂದ ಬಂಡುಗಾರರಿಗೆ ತುಸು ತ್ರಾಸವೆನಿಸಿದೆಯೇನೋ ನಿಜ. ಆದರೂ ತನ್ನ ದೇಶದಲ್ಲಿ ಸೈನಿಕ ತರಬೇತಿ ಪಡೆಯುತ್ತಿರುವ ಬಂಡುಗಾರ ನಾಗಾಗಳನ್ನು ನಾಗಾರಾಜ್ಯಕ್ಕೆ ಕಳುಹಿಸಿ ಅಲ್ಲಿ ಅಶಾಂತಿಯನ್ನು ಹರಡಿಸಲು ಕೆಂಪು ಚೀನಾವೇ ತ್ರೋತ್ಸಾಹ ನೀಡುತ್ತದೆ. ಪಾಕಿಸ್ತಾನವೂ ಈ ಅಶಾಂತಿಯ ಜ್ವಾಲೆಗೆ ತುಪ್ಪ ಸುರಿಯುತ್ತದೆ. ಹಾಗಾಗಿ ನಾಗಾ ಬಂಡುಗಾರರ ದುಷ್ಕೃತ್ಯಗಳನ್ನು ಕಂಡು ಸುಮ್ಮನಿರುವುದೆಂದರೆ, ಶತ್ರುಗಳಿಗೆ ಆಮಂತ್ರಣ ನೀಡಿದಂತೆ.

ರಾಜ್ಯಪಾಲ ಬಿ. ಕೆ. ನೆಹರು ಇದೇ ಅಭಿಪ್ರಾಯವನ್ನು ಕೆಲದಿನಗಳ ಹಿಂದೆ ವ್ಯಕ್ತಪಡಿಸಿದ್ದಾರೆ. ವಿದ್ರೋಹೀ ಚಟುವಟಿಕೆಗಳನ್ನು ಎಂದೆಂದಿಗೂ ಸಹಿಸಲಾಗದು; ಅವನ್ನು ಬಗ್ಗು ಬಡಿಯಲೇ ಬೇಕು, ಬಂಡುಗಾರ ನಾಗಾಗಳ ಅತ್ಯಾಚಾರ—ಕಾನೂನು ಬಾಹಿರ ಚಟುವಟಿಕೆಗಳಿಗೆ ಮುಟ್ಟಿಗೋಲು ಹಾಕಬೇಕು—ನಾಗಾ ರಾಜ್ಯದಲ್ಲಿ ತೀವ್ರ ಶಾಂತಿ ನೆಲಸಬೇಕು —ನೆಲಸುತ್ತದೆಂದು ಹಾರೈಸೋಣ.

ಂ ಂ ಂ

ಭಾರತಇತಿಹಾಸದ ಮೇಲೆಉತ್ತರ ಪ್ರದೇಶದಂತೆ ಪ್ರಭಾವವನ್ನು ಮತ್ತಾವ ರಾಜ್ಯವೂ ಬೀರಲಾರದು. ದೇಶದ ಮೂವರೂ ಪ್ರಧಾನಿಗಳನ್ನು ಕೊಡಿದ ರಾಜ್ಯವಿದು. ಈ ರಾಜ್ಯ ವಿಸ್ತಾರ ಮತ್ತು ಜನಸಂಖ್ಯೆಯೆರಡರ ದೃಷ್ಟಿಯಲ್ಲೂ ದೊಡ್ಡದು. ಇಲ್ಲಿನ ಜಿಲ್ಲೆಗಳು ೫೪. ಜನಸಂಖ್ಯೆ ಎಂಟು ಕೋಟಿ. ಭಾರತದ ಪಾರ್ಲಿಮೆಂಟಿನಲ್ಲಿ ಈ ರಾಜ್ಯ 'ಮನಸ್ಸು ಮಾಡಿದರೆ' ಏನೂ ಮಾಡಬಲ್ಲುದು. ಇಂತಹ ಪ್ರಭಾವಶಾಲೀ ರಾಜ್ಯಕ್ಕೀಗ ಗ್ರಹಣ ಬಡಿಯುವ ಕಾಲ ಬಂದಿದೆ.

ಶಾಲ್ಮಲೆಯ ಸಾರ್ವತ್ರಿಕ ಚುನಾವಣೆಯ ನಂತರ ಸ್ಥಿರ ಸರಕಾರ್ಯ ರಚಿಸಲು ಕಾಂಗ್ರೆಸ್ಸೂ, ಇತರ ಪಕ್ಷಗಳೂ ವಿಫಲವಾದುದರಿಂದ ಅಲ್ಲಿ ರಾಷ್ಟ್ರಪತಿ ಆಳಿಕೆ ಬಂತು. ಮುಂದೆ ವಿಧಾನ ಸಭೆಯನ್ನೂ ವಿಸರ್ಜಿಸಲಾಯಿತು. ಅಲ್ಲಿ ಮಧ್ಯಾವಧಿ ಚುನಾವಣೆಗಳು ನಡೆಯಲಿದ್ದು, ಇವುಗಳಲ್ಲಿ ಗೆಲ್ಲುವದನ್ನು ಉದ್ದೇಶವಾಗಿಟ್ಟುಕೊಂಡ ಕೆಲವಾದರೂ ಪಕ್ಷಗಳು ತಮ್ಮ ಚುನಾವಣಾ ಪೋಷಣೆಯಲ್ಲಿ ಹೊಸ್ಯ ಅಂಶವನ್ನು ಸೇರಿಸಲಿವೆ. ಅದುವೇ 'ಉತ್ತರ ಪ್ರದೇಶದ ಪುನರ್ನಿರ್ಮಾಣ.'

ವಿಶಾಲ ಹರಿಯಾಣಾ ಪಕ್ಷದ ನಾಯಕರಾದ ಬೀರೇಂದ್ರಸಿಂಗರು ಉತ್ತರ ಪ್ರದೇಶದ ಪಶ್ಚಿಮ ಜಿಲ್ಲೆಗಳು ಹರಿಯಾಣಾಕ್ಕೆ ಸೇರಬೇಕೆಂಬ ಚಳವಳಿಯನ್ನು ಆರಂಭಿಸುತ್ತಾರೆ. ಪ್ರಾದೇಶಿಕ ವೈಷಮ್ಯ ಮತ್ತು ಅಸಮಾನತೆಗಳಿಂದ ಪೂರ್ವ—ಪಶ್ಚಿಮ ಪ್ರತ್ಯೇಕತೆಯ ಪಾಪದ ರಾಜ್ಯ ಪುನರ್ನಿರ್ಮಾಣಕ್ಕೆ ಆಯೋಗದ ಮುಂದೆಯೂ ಬಂದಿತ್ತು. ಅಂದಿನ ಕೆಲವಂದನ್ನು ಬೆಂಬಲಿಸಿಯೂ ಇದ್ದರು. ಆದರೆ, ಸರ್ದಾರ ಪಾಣಿಕ್ಕರರು, ಇದನ್ನು ತಳ್ಳಿಹಾಕಿದರು. ಅಂದಿನ ಪ್ರಧಾನಿ ನೆಹರು ಇದಕ್ಕೆ ವಿರುದ್ಧವಿದ್ದರು. ಹಾಗಾಗಿ ಅಂದಿನಮ್ಮಿಗೆ ಆ ಪಾದ ತಣ್ಣಗಾದರೂ ಇದೀಗ ಮತ್ತೆ ಗರಮಾಯಿಸುತ್ತ ಬಂದಿದೆ. ಕೆಲವು ರಾಜ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅ ಭಿ ಪ್ರಾ ಯ

ಹೊರದೇಶಗಳ ಹಿಂದೂಗಳ ದುರವಸ್ಥೆ

ಬರೆದವರು: ಶ್ರೀ ಶಿವಶಂಕರ.

ಗಿಯೊನದ ಜನಸಂಖ್ಯೆಯಲ್ಲಿ ಅರ್ಧವಾಸಿ ಭಾರತೀಯ ಮೂಲದವರೇ ಇದ್ದಾರೆ. ಇದ್ದರೂ ಏನು ಫಲ? ಭಾರತೀಯರಿಗೆ ಭಾರತವನ್ನೇ ಆಳಲು ಅಸಾಧ್ಯವೆಂದಾದಲ್ಲಿ, ಇನ್ನು, ಅನ್ಯಾನ್ಯ ದೇಶಗಳಲ್ಲಿದ್ದು, ಅಲ್ಲಿ ಅದೇನು ಮಾಡಲು ಸಾಧ್ಯ ಇದೆ? ದಕ್ಷಿಣ ಆಫ್ರೀಕದ ಡರ್ಬ್ಬನ್ ಗಯೂಆ ಅಂದರೆ ಸುಂದರವಾದ ಪರಕಾರವು ಇದು ವರೆಗೂ ಅಲ್ಲಿನ ಜನಸಂಖ್ಯೆಯು ವರದಿಯನ್ನು ಪ್ರಕಟಿಸಿರುವದಿಲ್ಲ. ಅದೇತಕ್ಕೆ ಪ್ರಕಟಿಸುವದಿಲ್ಲ? ಅಲ್ಲಿ ಇಂದೂ ಭಾರತೀಯ ವಂಶಜರ ಸಂಖ್ಯೆಯೇ ಅಧಿಕವಿದೆ. ಈ ನೈಜ ವಿಷಯವನ್ನು ಮುಚ್ಚಿಡಲಿಕ್ಕಾಗಿ ಈ ಕುತಂತ್ರ! ೧೯೬೨ರ ವರೆಗೂ ಅಲ್ಲಿ ಅದೆಲ್ಲಾ ಪಾಕಿಸ್ಥಾನ ಪತಾಕೆ ಹಾರುತ್ತಿರಲಿಲ್ಲ. ಹಿಂದೂಗಳ ದೇವಸ್ಥಾನಗಳಲ್ಲಿ ಭಾರತದ ತ್ರಿವರ್ಣ ಬಾವುಟ ಹಾರಾಡುತ್ತಿತ್ತು. ಆದರೆ ಈಗ? ಆ ಚಿತ್ರವೇ ಪೂರ್ಣ ಬದಲಾಗಿಬಿಟ್ಟಿದೆ. ದೇವಾಲಯಗಳಲ್ಲಿದ್ದ ಧ್ವಜ ಬದಲಾಗಿರುತ್ತದೆ. ಅಲ್ಲಿ ಈಗ ಅಲ್ಲಿಯ ರಾಷ್ಟ್ರ ಧ್ವಜ ಹಾರಾಡುತ್ತಿದೆ. ಆದರೆ ಮಸೀದಿಗಳಲ್ಲಿ? ಈಗ ಅಲ್ಲಿ ಎಲ್ಲಾ ಮಸೀದಿಗಳಲ್ಲೂ ಪಾಕಿಸ್ಥಾನದ ಪತಾಕೆ ಹಾರಾಡುತ್ತಿದೆ! ಅದ್ಯಾವ ಮಸೀದಿಯೂ ಇದಕ್ಕೆ ಅಪವಾದವಾಗಿ ಇಲ್ಲವೇ ಇಲ್ಲ. ೧೯೬೨ರ ನಂತರ ನಾವು ಸಾಧಿಸಿರುವ ಪ್ರಗತಿ ಇದು! ಪರರಾಷ್ಟ್ರಗಳೊಡನೆ ಇಟ್ಟುಕೊಂಡಿರುವ ಸಂಪರ್ಕದ ರೀತಿ ಇದು!

ಇತ್ತೀಚೆಗೆ ಬ್ರಿಟಿಷ್ ಗಿಯೊನದಲ್ಲಿ ಪಡೆದದ್ದಾದರೂ ಏನು? ಭಾರತೀಯ ವಂಶದ ಬಾಲಿಕೆಯರ ಮೇಲೆ ಬಾರೀ ಅತ್ಯಾಚಾರ ನಡೆದಿರುವದನ್ನಷ್ಟಿವಿವರಿಸುವದಿಲ್ಲ. ಅಲ್ಲಿನ ಸಂಗದ್ ಅಲ್ಲಿನ ಪಂಡಿತರ ಹಿತಕ್ಕೆ ವಿರುದ್ಧವಾದ ಕಾನೂನೊಂದನ್ನು ತರಲಿಕ್ಕಿದೆ. ಅದನ್ನು ಖಂಡಿಸಿ, ಅಲ್ಲಿಗೆ ಆಗಮಿಸಿದ್ದ ಸ್ವಾಮಿ ಚಿನ್ಮಯಾನಂದರವರು ಮಾತಾಡಿದ್ದರು. ಒಡನೆ ಅಲ್ಲಿನ ಪ್ರಧಾನಿ ಮಿಸ್ಟರ್ ಬರ್ನ್‌ಹಾಮರು ಸ್ಥಳೀಯ ವಿಷಯದಲ್ಲಿ ಪರಕೀಯ ಚಿನ್ಮಯಾನಂದ ಕೈ ಹಾಕುತ್ತಿರುವದಾಗಿ ಆಪಾದಿಸಿದರು. ಅಲ್ಲಿಯ ಪತ್ರಿಕೆಗಳು ಆದದ್ದು ದೊಡ್ಡ ದಪ್ಪಕ್ಷರಗಳಲ್ಲಿ ಮೊದಲ ಪುಟದಲ್ಲಿ ಪ್ರಕಟಿಸಿದುವು. ಅಲ್ಲಿಗೆ ರೋಮನ್ ಕೆಥೋಲಿಕರ ಮಂತ್ರಿಯ ಗುರು ಒಬ್ಬರು ಹೋಗಿದ್ದರೆಂದಿಟ್ಟುಕೊಳ್ಳೋಣ. ಅವರು ಅಲ್ಲಿಯ ಸ್ಥಳೀಯ ಕೆಥೋಲಿಕರ ಹಿತದೃಷ್ಟಿಯಿಂದ ಸ್ವಾಮಿ ಚಿನ್ಮಯಾನಂದರಂತೆ ಆಡುತ್ತಿದ್ದಲ್ಲಿ, ಆಗ ಅದನ್ನು ಅವರು ಖಂಡಿಸುತ್ತಿದ್ದರೇ? ಸ್ಥಳೀಯ ವಿಷಯದಲ್ಲಿ ಕೆಥೋಲಿಕರ ಗುರು ತಲೆಹಾಕುತ್ತಿರುವದಾಗಿ ಅವರು ಆಪಾದಿಸುತ್ತಿದ್ದರೇನು? ಇಲ್ಲ—ಖಂಡಿತಾ ಇಲ್ಲ. ಏಕಕ್ಕೆ? ಅವರಿಗೆ ಗೊತ್ತು, ಚೆನ್ನಾಗಿ ಗೊತ್ತು—ಕ್ರಿಸ್ತೀಯ ಗುರುವಿನ ವಿಷಯ ತುಟಿ ಎರಡು ಮಾಡಿದಲ್ಲಿ ರೋಮ್ ರೊಚ್ಚಿಗೇಳುತ್ತದೆ. ಆದರೆ ಗಾಂಧೀ ಭಾರತ ಭಕಾರವನ್ನು ಎತ್ತುವದಿಲ್ಲ. ಸ್ವಾಮಿಜೀಯವರಾದರೋ ಆ ದೇಶದಿಂದ ಬಂದಿದ್ದಾರೆ. ಅವರ ಕುರಿತು ಅದೆಷ್ಟು ಆಗ್ಗವಾಗಿ ಆಡಿದರೂ ಅದ್ಯಾರೂ ಅವರ ಸಹಾಯಕ್ಕೆ ಬರುವದಿಲ್ಲವೆಂಬುದು ಅವರಿಗೆ ಚೆನ್ನಾಗಿ ಗೊತ್ತು.

ಹೊರದೇಶಗಳಿಂದ ಹಿಂದೂಗಳನ್ನು ಹೊರಗಟ್ಟುತ್ತಿರುವದಕ್ಕೆ ಭಾರತದಲ್ಲಿ ಖರ್ಬಲ ಸರಕಾರ ಇರುವದೇ ಕಾರಣವೆಂದು ಈಗ ಅಮೆರಿಕದಲ್ಲಿ ಸಂಸ್ಕೃತ ಸ್ವಾಧ್ಯಾಪಕರಾಗಿರುವ ಪಂಡಿತ ಉಪ್ರಬುದ್ಧರವರು ಅಲ್ಲಿಯ ಆಂಗ್ಲ ವಾರಪತ್ರಿಕೆ 'ಆರ್ಗನೈಸರ'ನ ವಿಶೇಷ ಸಂಚಿಕೆಯಲ್ಲೇ ಖಚಿತವೊಂದರಲ್ಲಿ ವಿವರಿಸಿರುವರು.

ಅದ್ಯಾವ ಪರರಾಷ್ಟ್ರದಲ್ಲೇ ಆಗಲಿ, ನಾವು ತಂಗಿ ಬಾಳಬೇಕಾದ್ದು ಮೊದಲು ಅಲ್ಲಿಯ ರಾಷ್ಟ್ರೀಯತೆಯನ್ನು ಮಾನ್ಯ ಮಾಡಬೇಕು. ಇಲ್ಲಿಂದಬ್ರಿಟನ್‌ಗೆ ಹೋಗಿ ಹಿಂದೂಗಳು ತಂಗಬೇಕಾದಲ್ಲಿ (ಅಲ್ಲಿಯ ಸರಕಾರ ಬಿಡಬೇಕಲ್ಲ!) ಅಲ್ಲಿಯ ರಾಷ್ಟ್ರೀಯತೆಯನ್ನು ನಾವು ಗೌರವದಿಂದ ಕಾಣಬೇಕು. ತಂಗಿದ ಮೇಲೆ ನಮ್ಮ ಜನಸಂಖ್ಯೆಯ ಬಲದ ಮೇಲೆ ಪ್ರತ್ಯೇಕ ರಾಷ್ಟ್ರವನ್ನು ಕೇಳುವದಂತೂ ಘೋರ ಪಾಪವೇ ಇದೆ. ಪಂಡಿತಜೀಯವರು ವಿವರಿಸಿರುವದು ಅಂತಹ ವಿಷಯವಲ್ಲ. ಯೂರೂಇಲ್ಲದ ದ್ವೀಪಗಳಲ್ಲಿ ಹಿಂದೂಗಳು, ಕೆಲ ಕಾರಣಾಂತರಗಳಿಂದಾಗಿ ಹೋಗಿ ತಂಗಿ ಅದನ್ನು ನಂದನವನವನ್ನಾಗಿ ಮಾಡಿದಮೇಲೆ ಕುತಂತ್ರದಿಂದ ಕೆಲವರು ಅವರನ್ನು ಹದ್ದಿನಕೆಳಟ್ಟುಕೊಂಡು ರಾಜ್ಯಭಾರ ಮಾಡಿಕೊಂಡು, ಇವೀಗ ಆ ಸಮಗ್ರ ಜನತೆಯನ್ನು ಹೊರಗಟ್ಟಲಾಗುತ್ತಿರುವ ವಿಚಿತ್ರ ಆಂತರಿಕ ನೈಜ ವಿಷಯವನ್ನು ಅವರು ವಿಚಾರಿಸಿದ ವಂಶಜರ ಮುಂದಕ್ಕಿಟ್ಟಿದ್ದಾರೆ. ಹಿಂದೂ ವಂಶಜರನ್ನು ಈ ಹೊರಗಟ್ಟಲು ಅಲ್ಲಿಯ ಆಡಳಿತದ ಲಗಾವ ಎತ್ತಿ ಹಿಡಿದುಕೊಂಡಿರುವವರಿಗೆ ಧೈರ್ಯ ಬರಲು ಇಲ್ಲಿಯ ನಿರ್ಬಲ ಸರಕಾರ ಕಾರಣವೆಂಬುದಂತಲ್ಲಿ ನಿತೂ ಸಂದೇಶ ಇರುವದಿಲ್ಲ. ಹಿಂದೂ ದೇಶದಲ್ಲೇ ಹಿಂದೂಗಳ ಸಂಖ್ಯೆ ಕುಗ್ಗುತ್ತ ಬರುತ್ತಿರುವಾಗ (ಇತರೊಡನೆ ಹೋಲಿಸುವಾಗ) ಇನ್ನೂ ಅವರು ಅಲ್ಲಿ ಹಿಂದೂಗಳಾಗಿ ಉಳಿದಿರುವದು ಅವರ ಮುಂದಿರುವ ದೊಡ್ಡ ಪ್ರಶ್ನೆಯಲ್ಲವೇ? ಪರಾಂತರಕ್ಕಾಗಿ ಕ್ರಿಸ್ತೀಯ ಮಿಶನರಿಗಳು ಅನ್ಯಾನ್ಯ ದೇಶಗಳಿಗೆ ಹೋಗುತ್ತಿದ್ದಾರೆ. ಹಿಂದೂದೇಶದಲ್ಲಿ ಅವರಿಗೆ ಬಾಗಿಲು ತೆರದಿಡಲಾಗಿದೆ. ಅವರ ಮಂತ್ರಿಯ ಗುರು ಬಂದಾಗ ಇಲ್ಲಿಯ ಅತ್ಯುಚ್ಚ ಜನತಾ ಪ್ರತಿನಿಧಿಗಳು ಅವರಿದ್ದಲ್ಲಿಗೆ ಧಾವಿಸಿ ಬರುತ್ತಾರೆ! ಹಾಗಿರುವಾಗ ಅಲ್ಲಿ ಅವರು ಇನ್ನು ಹಿಂದೂಗಳಾಗಿ ಬಾಳುವದು ಕ್ಷಯಿಸುವೇನೆ! ಅನ್ಯಾನ್ಯ ದೇಶಗಳಿಂದ ಅವ್ಯಾಹತವಾಗಿ ಅನ್ಯಾನ್ಯ ಮತಗಳ ಪ್ರಚಾರಕರು ಹಿಂದೂದೇಶಕ್ಕೆ ದಿನಬೆಡದೆ ಬರುತ್ತಿದ್ದಾರೆ. ಅವರಿಗೆ ನಮ್ಮ ಸರಕಾರ ಸತ್ಯಾಂಶ ಹೇಳುತ್ತಿದೆ. ಆದರೆ ನಮ್ಮ ಸರಕಾರ ಅನ್ಯಾನ್ಯ ದೇಶಗಳಲ್ಲಿರುವ ಹಿಂದೂಗಳಿಗಾಗಿ ಇಲ್ಲಿಂದ ಯಾವ ಪಂಡಿತರನ್ನಾದರೂ, ಸ್ವಾಮಿಗಳನ್ನಾದರೂ, ದಾಸರನ್ನಾದರೂ ಕಳುಹಿಸಿದೆಯೇ? ಅವರಾಗಿಯೇ ಸ್ವಉತ್ಸಾಹದಿಂದ ಹೋಗುತ್ತೇವೆನ್ನುವಾಗಲೂ ತಡೆಯುತ್ತಿರುವ ಸರಕಾರ, ಅದಾಗಿಯೇ ಕಳುಹಿಸುವ ಮಾತು ಬಹಳ ದೂರ ಉಳಿದು ಬಿಟ್ಟಿತು. ಕಳುಹಿಸುವ ವಿಷಯ ಹಾಗಿರಲಿ, ಇಲ್ಲಿರುವವರನ್ನು ಹೇಗೆ ನೋಡಿಕೊಳ್ಳಲಾಗುತ್ತಿದೆ? ಮಾತೇಯ ಪೈದಿಗಳಂತೆ ನೋಡಿಕೊಳ್ಳಲಾಗುತ್ತಿದೆ! ದೇಶವನ್ನು ಕ್ರಿ. ಪೂ. ಇಪ್ಪತ್ತನೇ ಶತಮಾನಕ್ಕೊಯ್ಯುತ್ತಿರುವರೆಂಬ ಅಪಾದನೆ ಅವರ ತಲೆಯ ಮೇಲೆ ಸದಾಸಿದ್ಧ! ಪರರಾಷ್ಟ್ರಗಳಿಂದ ಪರಕೀಯ ಮತಪ್ರಚಾರಕರ ಪ್ರವಾಹವೇ ಹರಿದು ಬರುತ್ತಿದೆಯೊದರೂ ಇಲ್ಲಿ ಅದನ್ನೆದುರಿಸಿದವರ ಗತಿ ಏನಾಗುತ್ತಿದೆ? ಸರಕಾರದ ಕೋಪಕ್ಕೆ ಅವರು ತುತ್ತಾಗಬೇಕಾಗುತ್ತದೆ. ಮಂಗಳೂರು ಜಿಲ್ಲೆಯಂತಹ ಶಾಂತ ಜಿಲ್ಲೆಗಳ ದೇವಸ್ಥಾನಗಳಲ್ಲಿ, ವಿಗ್ರಹದ ಮೇಲಿರುವ ಒಡವೆಗಳ ಕಳವು ಸಾಧಾರಣವಾಗಿ ಬಿಟ್ಟಿದೆ ಇಂದು. ಇಷ್ಟು ಅಖಂಡ ಭಾರತದಲ್ಲಿ ಅದೆಂತು ಘಡಿಸುತ್ತಿದನ್ನವದನ್ನು ವಿವರಿಸಬೇಕಾಗಿಲ್ಲ. ಕಾಶ್ಮೀರದಲ್ಲಿ ಒಂದು ಮತದವರ ಒಂದು ರೋಗ ಕಾಣಿಸಿಕೊಳ್ಳುತ್ತಿದಾಗ ಮಲಗಿದ ಸರಕಾರ ಇಷ್ಟು ವಿಗ್ರಹಗಳ ಕಳವಾಗುತ್ತಿರುವಾಗ ಹಾಗೂಗಿ ಮಲಗಿಕೊಂಡಿದೆಯೆನ್ನುವಾಗ, ಅನ್ಯ ದೇಶಿಗರವರು ಅಲ್ಲಿನ ಜೀವಂತ ವಿಗ್ರಹಗಳನ್ನು ಅಲ್ಲಿರಲು ಬಿಡುವದುಂಟೇ? ಇದನ್ನು ಯೋಚಿಸುವವರು ಯಾರಾದರೂ ಇದ್ದಾರೆಯೇ?

ದೇಶ ವಿಭಜನೆಯ ಘೋರ ಪಾತಕಕ್ಕೆ ನಾವು ಹಿಂಜರಿಯಲಿಲ್ಲ. ಅನಂತರ ಕಾಶ್ಮೀರ, ಬೆಗುಬಾರಿ, ಕಚ್ಚ್...ಕೊನೆಯೇ ಇಲ್ಲ. ಚೈನಾಕ್ಕೂ ಬಹಳಷ್ಟು ಭೂಪ್ರದೇಶವನ್ನು ಬಿಟ್ಟುಕೊಟ್ಟಿದ್ದೇವೆ. ಈ ರೀತಿ ಕೊಡುವದನ್ನೇ ಸಂಯೆನ್ನುವದರೇ ಪದ್ದುಗೆಯ ಮೇಲೆ ಕುಡದ್ದಾಗಿ ಕುಳಿತುಕೊಂಡಿದ್ದಾರೆ. ಹಿಂದೂಗಳ ಸಂಖ್ಯೆ ಗಣನೀಯವಿರುವಲ್ಲಿ ಅಕ್ಕ ರಾಷ್ಟ್ರಗಳು ಅಲ್ಲಿಂದ ಹಿಂದೂಗಳನ್ನು ಹೊರಗಟ್ಟಲು ಇದೂ ಒಂದು ಕಾರಣ ಇರಬೇಕು. ಅಲ್ಲಿನ ಹಿಂದೂಗಳು ಇದೇ ರೀತಿ ಮಾಡಿಯೊರೊಬ ಭೀತಿ ಅವರಲ್ಲಿದೆ. ಇದಕ್ಕೆ ಯಾರು ಕಾರಣ? ಪ್ರಜಾತಂತ್ರ ಇರುವಾಗ (ಅದೆಷ್ಟು ದಿನ ಅದನ್ನು ಅದುಮಿಡಲು ಸಾಧ್ಯ) ಹಿಂದೂಗಳ ಅತಳಕದ ಅಸಹನೆಯನ್ನೇ ತರಬೇಕಾಗುತ್ತದೆ ಆಗ ಅವರು ಭೂದಾನಕ್ಕಾರಂಭಿಸಿದಲ್ಲಿ?

ಧಾರ್ಮಿಕ ವಿಶ್ವವಿಜೇತ ಸ್ವಾಮಿ ವಿವೇಕಾನಂದರು ಈ ಪ್ರಶ್ನೆಯ ಕುರಿತು ಯೋಚಿಸಿದ್ದರೆ? ಅವರ ಮಾತುಗಳು ಈ ರೀತಿ ಇವೆ:

"ಯುರೋಪಿಯನರೆ! ನಿಮ್ಮನ್ನೊಂದು ಪ್ರಶ್ನೆ ಕೇಳುತ್ತೇನೆ. ಇದುವರೆಗೆ ನೀವು ಹೋಗಿರುವ ಹೊಸ್ಯದೇಶದನ್ನು ತಾನೆ ನೀವೆಲ್ಲಕ್ಕೆ ತಂದಿರುವಿರಿ? ದುರ್ಬಲ ಜನಾಂಗಗಳನ್ನು ಕಂಡ ಕಡೆಯಲ್ಲೆಲ್ಲ ಬುಡಮಟ್ಟ ತೊಡೆದು ಹಾಕಿದಿರಿ. ನೀವು ಅವರ ಭೂಮಿಯಲ್ಲಿ ಬೇರೂರಿ ಅವರನ್ನು

(ಒಂಭತ್ತನೇ ಪುಟ ನೋಡಿರಿ)

ಕಾಂಡೆಗಳಿಗಂತೂ ಇದುವೇ ಚಟ.

ಇತ್ತೀಚೆಗೆ ಉತ್ತರ ಪ್ರದೇಶದ ಪೂರ್ವ ಜಿಲ್ಲೆಗಳ ಪಾರ್ಲಿಮೆಂಟ್ ಸದಸ್ಯರು ಪ್ರಧಾನಮಂತ್ರಿಗಳಿಗೆ ಸಲ್ಲಿಸಿರುವ ಮನವಿಯೊಂದರಲ್ಲಿ ರಾಜ್ಯ ಸರಕಾರವು ಪೂರ್ವ ಜಿಲ್ಲೆಗಳನ್ನು ಕಡೆಗಣಿಸುತ್ತಿದೆ; ಇದನ್ನು ಕೂಡಲೇ ಪರಿಹರಿಸದಿದ್ದರೆ, ನಾವು ದೇಶಯೋಗಲು ಪ್ರಯತ್ನನ ನಡೆಸಬೇಕಾಗಬಹುದು ಎಂಬ ಬೆದರಿಕೆ ಮನ್ನು ಪೂರ್ವಭಾವಿಯಾಗಿಯೇ ಹಾಕಿದ್ದಾರೆ. ಭಾರತ ಸರಕಾರದಲ್ಲಿಯೂ ಪಾರ್ಲಿಮೆಂಟಿನಲ್ಲಿಯೂ ಉತ್ತರ ಪ್ರದೇಶದ ಪ್ರಭಾವ ಪ್ರಾಬಲ್ಯದಲ್ಲಿ ಭಾರಿಯಿರುವುದರಿಂದ ಪ್ರಧಾನಿ ಇಂದಿರಾ ಗಾಂಧಿ ತಲೆಬಾಗಿದರೂ ಬಾಗಬಹುದು. ಕಂದೆ ಬೊಂಬಾಯಿಯನ್ನು ವಿಭಜಿಸಬೇಕಾಗಿ ಬಂದ ಕಠಿನ ಪರಿಸ್ಥಿತಿ ಮಂಗಳೂರಿಗೂ ಬಾರದಿರಲಿ...ಬಂದರೆ?

ಹೀಗೆಯೆ ಪಡೆದರೆ ದೇಶದ ಕಥೆ?

—ಗೋ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಬೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3.

Phone— 5711
5712
5713 } 3 Lines.

ಕ್ಷೇತ್ರ ಪರಿಚಯ

ಶ್ರೀ ರಾಮೇಶ್ವರ

ಬರೆದವರು .

ಶ್ರೀ ಎಚ್. ಎಂ ನಾರಾಯಣ ಭಟ್.

ರಾಮೇಶ್ವರ ಪವಿತ್ರ ಸ್ಥಳವಾಗಿದ್ದು ಅಲ್ಲಿ ಆಗಾಗ ನಿಸರ್ಗ ಪ್ರಕೋಪದಿಂದುಂಟಾಗುವ ಜೀವಿಗಳನ್ನೂ ಪ್ರವಾಸಿಗಳಿಗೊದಗುವ ಆಸೌಕರ್ಯವನ್ನೂ ಅಗಾಧ ಸ್ಥಿತಿ ಹೋಗುತ್ತದೆ.

ಆದರೂ ಅನೇಕ ವಿಧದ ನೈಸರ್ಗಿಕ ಬೆದರಿಕೆಗಳನ್ನು ಅತಿ ಜೀವಿಸಿದ ಈ "ದಕ್ಷಿಣ ಕಾಶಿ"ಯಾಗಿ ರಾಮೇಶ್ವರವಿಂದೂ ರಾರಾಜಿಸುತ್ತಿದೆ.

ರಾಮೇಶ್ವರದ ನೆನಪಿನೊಂದಿಗೇ ಶ್ರೀ ರಾಮನ ವನವಾಸದ ಕಷ್ಟ ಪರಂಪರೆಗಳ—ಸಹಿಷ್ಣುತೆಗಳ ಒಗ್ಗೂ ಸ್ಮರಿಸಬಹುದುಂಟಾಗುತ್ತದೆ.

ಶ್ರೀರಾಮನ ವನವಾಸ ಕಾಲದ ಕರ್ಮಭೂಮಿಯಾಗಿಯೂ ಮರ್ಮಭೂಮಿಯಾಗಿಯೂ ವರ್ತಿಸಿದ ರಾಮೇಶ್ವರದ ಬಗ್ಗೆ ಎಲ್ಲ ಭಾರತೀಯರುಗಳಿಗೂ ಅಭಿಮಾನವಿರುವುದು ಸ್ವಾಭಾವಿಕ.

ಸೇತು ಬಂಧನವು ರಾಮಾಯಣದ ಮಟ್ಟಿಗೆ ಮಾತ್ರವೇ ಅಲ್ಲ, ಇದಕ್ಕೆ ಚಾರಿತ್ರಿಕ ಹಾಗೂ ಶಾಸ್ತ್ರೀಯ ಪ್ರಾಧಾನ್ಯಗಳಿವೆ.

ಇಂದಿಗೂ ಇಷ್ಟೆಲ್ಲಾ ತಾಂತ್ರಿಕ ಪರಿಣತರಿದ್ದೂ ಧನುಷ್ಕೋಡಿಯ ಬಳಿ ಒಂದು ಅಣೆಕಟ್ಟು ಅಥವಾ ಸೇತುವೆ ನಿರ್ಮಿಸುವುದು ಅಷ್ಟು ಸುಲಭವಲ್ಲ ಹಾಗಾದರೆ ರಾಮಾಯಣ ಕಾಲದ ಭಾರತೀಯ ತಾಂತ್ರಿಕ ನಿಪುಣತೆಯ ಬಗ್ಗೆ ಊಹಿಸಬಹುದಾಗಿದೆ.

ಶ್ರೀರಾಮನಿಂದ ಪ್ರತಿಷ್ಠೆ

ರಾವಣನನ್ನು ಸಂಹರಿಸಿದ ಬಳಿಕ ಅಗಸ್ತ್ಯ ಮಹರ್ಷಿಗಳ ಉಪದೇಶದನ್ವಯ ಶ್ರೀರಾಮನು ಬ್ರಹ್ಮಹತ್ಯಾ ಪಾಪದೋಷ ಪರಿಹಾರಕ್ಕಾಗಿ ರಾಮೇಶ್ವರದಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದಾಗಿ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.

ಕೈಲಾಸದಿಂದ ಶಿವಲಿಂಗವನ್ನು ತರಲು ಆಂಜನೇಯನನ್ನು ನಿಯೋಗಿಸಲಾಗಿತ್ತು. ಆದರೆ ವಾಯು ಪುತ್ರನಾದ ಆಂಜನೇಯನು ನಿರ್ದಿಷ್ಟ ಸಮಯಕ್ಕೆ ಬಂದು ಸೇರಿಲ್ಲ. ಹೀಗಾಗಿ ಸೀತಾದೇವಿಯು ಮಣಲಿನಿಂದಲೇ ನಿರ್ಮಿಸಿದ ಶಿವಲಿಂಗವನ್ನು ನಿಶ್ಚಿತ ಸುಮುಹೂರ್ತದಲ್ಲೇ ಪ್ರತಿಷ್ಠಿಸಿ ಪೂಜಿಸಲಾರಂಭಿಸಿದಾಗ ಆಂಜನೇಯನೂ ಆಗಮಿಸಿದನು

ಆ ಸ್ವಾಮಿಭಕ್ತ ಹನುಮಂತ ತಂದಿದ್ದ ಶಿವಲಿಂಗವನ್ನು ಬಲ ಭಾಗದಲ್ಲಿ ಪ್ರತಿಷ್ಠಿಸಲಾಯ್ತು.

ಹೀಗೆ ಶ್ರೀರಾಮನು ಪ್ರತಿಷ್ಠಿಸಿದ ಈಶ್ವರ ಕ್ಷೇತ್ರ "ರಾಮೇಶ್ವರ"ವಾಯ್ತು ಶಿವನೂ ಶ್ರೀರಾಮನಾಥ ಸ್ವಾಮಿಯೆಂದು ಕರೆಯಿಸಿಕೊಂಡನು.

ದೇವರೇ ಅವತಾರವೆತ್ತಿದ ಶ್ರೀರಾಮ ಪ್ರತಿಷ್ಠಿಸಿದ್ದರಿಂದಾಗಿ ಶ್ರೀರಾಮನಾಥ ಸ್ವಾಮಿ ಲಿಂಗದ ಮಹಾತ್ಮೆ ವಿಶಿಷ್ಟವಾಯ್ತು.

ಪಾವನವಾದ ಈ ವಿನಯ ಪ್ರದರ್ಶನದ ಮೂಲಕ ಶ್ರೀರಾಮನು ತನಗೇ ಒಂದು ಅನಶ್ವರ ಸ್ಮಾರಕವೊಂದನ್ನು ನಿರ್ಮಿಸಿಕೊಂಡಂತೆಯೂ ಕೆಲವರು ವರ್ಣಿಸಿದ್ದಾರೆ.

ಅಷ್ಟೇ ಅಲ್ಲ. ಆ ಬಳಿಕ ಆರಾಧಕರಿಗೂ, ಸಂತೋಷಕರಿಗೂ ಸ್ಥಳ ನಿರ್ಣಯದ ಬಗ್ಗೆ ಯಾವುದೇ ಸಂದೇಹಕ್ಕೆ ಅಥವಾ ಊಹಾಪೋಹಗಳಿಗೆ ಆಸ್ಪದವಿಲ್ಲದಂತೆಯೂ ಈ ಲಿಂಗ ಪ್ರತಿಷ್ಠೆ ಸಹಾಯವೆಸಗಿತು.

ಪಟ್ಟಾಭಿಷೇಕದ ತರ ವಾಯು ಶ್ರೀರಾಮನು ಮತ್ತೆ ಒಮ್ಮೆ ಈ ಪುಣ್ಯ ಸ್ಥಳವನ್ನು ಸಂದರ್ಶಿಸಿದ್ದನು

ಪಾಂಡವರೂ ಬಲರಾಮನೂ ಶ್ರೀರಾಮೇಶ್ವರವನ್ನು ಸಂದರ್ಶಿಸಿದ್ದರೆನ್ನಲಾಗಿದೆ.

ಎಲ್ಲರ ಪವಿತ್ರ ಕ್ಷೇತ್ರ

ಓರ್ವ ಪಾಂಡ್ಯ ರಾಜನು ತನ್ನ ಸಂದರ್ಶನ ವೇಳೆ ಅನುಭವಿಸಿದ ದಿವ್ಯ ದರ್ಶನದ ಪ್ರೇರಣೆಯಿಂದಾಗಿ ಇಲ್ಲಿ ವಿಷ್ಣು ವಿಗ್ರಹವೊಂದನ್ನೂ ಪ್ರತಿಷ್ಠಿಸಿದನು.

ಹೀಗೆ ಶೈವರಿಗೂ ವೈಷ್ಣವರಿಗೂ ಇದು ಮತ್ತಷ್ಟು ಪವಿತ್ರ ಸ್ಥಳವಾಗಿ ಪರಿಗಣಿಸಲ್ಪಟ್ಟಿತೆನ್ನಲಾಗಿದೆ.

ಕರ್ನಾಟಕ ಮೂಲದ ಕಲ್ಯಾಣ, ಮಳಕ ಮೂಲದ ತೆಪ್ಪೋತ್ಸವ ಹಾಗೂ ಪ್ರತಿಷ್ಠಾಮಹೋತ್ಸವ ಇತ್ಯಾದಿ ಅನೇಕ ಉತ್ಸವಗಳಿದ್ದರೂ ಮಹಾ ಶಿವರಾತ್ರಿ (ಕುಂಭ ಮಾಸ)ಯಲ್ಲಿ ಅತಿ ವಿಶೇಷ.

ಮನೋಹರವಾಗಿ ಬೆಳೆದ ದೇಗುಲ

ಶ್ರೀರಾಮನಿಂದ ಪ್ರತಿಷ್ಠಾ ವೇಳೆ ಒಂದ ಪರ್ಣ ಶಾಲೆಯಲ್ಲಿದ್ದ ಶ್ರೀರಾಮನಾಥ ಸ್ವಾಮಿ ಇಂದು ಕಾಣುವ ಭವ್ಯ ಮಂದಿರದೊಳಗಾಗಿದುದು ಅನೇಕ ಶತಮಾನಗಳೆಡೆಯಲ್ಲಿ.

೧೨ನೇ ಶತಮಾನದಲ್ಲಿ ವಿಕ್ರಮ ಬಾಹು (ಸಿಂಹಳದ ರಾಜ); ೧೫ನೇ ಶತಮಾನದಲ್ಲಿ ಉದ್ಯಾನ ಸೇತುಪತಿ (ರಾಮನಾಡು) ಮತ್ತು ಪಾಂಡ್ಯ ರಾಜರೂ ರಾಮೇಶ್ವರ ಕ್ಷೇತ್ರದ ಬೆಳವಣಿಗೆ ಮತ್ತು ಪ್ರಕಾಶಕ್ಕೆ ತುಂಬಾ ದುಡಿದವರು.

"ಸುರಂಗ ಮಾರ್ಗ", ಕಣ್ಣಳ್ಳಿನ ಕಂಬಗಳ ಸಾಲು, ಉನ್ನತ ಗೋಪುರಗಳು, ರಾಜಕುಗಳು—ನಟರಾಜನ – ನಂದಿಯ-ಲಕ್ಷ್ಮಿಯ ಇತ್ಯಾದಿ ಶಿಲ್ಪಕಲಾ ಕುಶಲತೆಗಳು! ಇವೆಲ್ಲಾ ರಾಮೇಶ್ವರ ಕ್ಷೇತ್ರದ ಮನೋಹರತೆಗೆ ಮೆರಗು ಕೊಟ್ಟಿವೆ.

ಸತ್ತವರ ಹೆಸರಲ್ಲಿ ಉದ್ಯಮ

ಇಲ್ಲೊಂದು ಜಲಾಂಧಿಯೂ! ದಕ್ಷಿಣ ದುಬಾಸಾಗರವೂ ಬಂಗಾಳ ಕೊಲ್ಲಿಯೂ ಮಿಲನವಾಗ ವ ಪವಿತ್ರ ಸಂಗಮ.

ಧನುಷ್ಕೋಡಿಯಲ್ಲಿ ತೀರ್ಥಸ್ನಾನವನ್ನು ಪ್ರಕೃತಿ ಪ್ರಕೋಪಗಳೇ ನಿಷೇಧಿಸಿವೆ ಆದ್ದರಿಂದ "ಪಿತೃಕರ್ಮ"ಗಳನ್ನು ಪರಿವರ್ತಿಸುವಲ್ಲೇ 'ಸಂಕಲ್ಪಸ್ನಾನ'ವಾಗುತ್ತದೆ.

ಇತರರ "ಪಿತೃಕರ್ಮ"ಗಳನ್ನು ನೆರವೇರಿಸುವುದಕ್ಕಾಗಿಯೇ ಸುಮಾರು ೩೦೦ಕ್ಕೂ ಮೀಸ್ಕೆ "ಶಾಸ್ತ್ರಿ"ಯರು ಈ ಸಮುದ್ರ ದಂಡೆಯಲ್ಲಿ ಕಾದಿರುವರು.

ತೀರ್ಥಸ್ನಾನ

ಸಮುದ್ರ ಸಂಗಮದಲ್ಲಿ ಮಾತ್ರವಲ್ಲ ಅನೇಕ ಬಾವಿಗಳ ಪೈಕಿನಲ್ಲಿಯೂ 'ತೀರ್ಥಸ್ನಾನ'ವಾಗಿ "ದೇವರ ದರ್ಶನ"ವಾದ ಬಳಿಕ ಸ್ವಲ್ಪ ಪಶ್ಚಿಮಕ್ಕೆ ಗಂಧಮಾದನ ಪರ್ವತ (ರಾಮ ಪಾದ)ವನ್ನೇರಿಯೇ ಮರಳುವುದು ವಿಹಿತ. ಆಗಲೇ ಮುಕ್ತಿಗೆ ಸಂಪ್ರಾಪ್ತಿ ಮತ್ತು ಅಧ್ಯಾತ್ಮಿಕ ಶಾಂತಿ.

ಈ ಸ್ಥಳದಿಂದ ಹನುಮಂತ ಲಂಕೆಗೆ ಹಾರಿದ್ದೆನ್ನಲಾಗುತ್ತಿದೆ. ಈ ಪರ್ವತಾರೋಹಣದಿಂದಾಗಿ ಸೇತುವೆಯ ವಿಹಂಗಮ ನೋಟಕ್ಕೆ ಅನುಕೂಲ. ನಿಸರ್ಗ ಸುಂದರ ದೃಶ್ಯಗಳು ಎಂದೆಂದಿಗೂ ಸ್ಮರಣೀಯ.

ಈ ಕಣ್ಣು ಭೂಧಾನ—ಉದ್ದಿನ ಪದಲ್ಲಿ ಉಳುವುದೂ, ಮಣ್ಣನ್ನು ಕೇಳುವುದೂ, ಮಣ್ಣಿನ ಉದ್ದಿಮೆಗಳನ್ನು ಪ್ರಾರಂಭಿಸುವುದೂ ಕೂಡದೆಂಬ ಪ್ರಾಚೀನ ಕಟ್ಟಳೆ ಇಂದಿಗೂ ಅಮಲುಗೊಳ್ಳಬಡುತ್ತಿದೆ ಈ ವಿಶ್ವಾಸದಿಂದಾಗಿ ಇಷ್ಟನ ಪೈಮಾಸಿಗಳು ಸಂದರ್ಶಕರ ಔದಾರ್ಯದಿಂದಲೇ ಜೀವಿಸಬೇಕಾಗುತ್ತದೆ.

ಮಣ್ಣಿನ ಸವೆತವನ್ನು ತಡೆಗಟ್ಟಲು ಇಂತಹ ವಿಶ್ವಾಸಗಳೂ ಸಹಾಯ ಮಾಡಿವೆ.

ಈ ಪ್ರದೇಶದಲ್ಲಿ ಖನಿಜ ತೈಲ ಪೈಪೈಪಗಳಿರುವುದಾಗಿಯೂ ಪ್ರತೀತಿ. ಇಲ್ಲಿಂದ ರಾಷ್ಟ್ರದ ವಿವಿಧ ಭಾಗಗಳಿಗೆ ಯಾತ್ರಾರ್ಥಿಗಳು ತೀರ್ಥವನ್ನು ಕೊಂಡು ಹೋಗುವುದಿದೆ



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ಶಾಲಾ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಚ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O.S. 1/68

ಮಹಾರಾಷ್ಟ್ರ ಎಜುಕೇಶನ್ ಕೋಆಪರೇಶನ್ ಲಿಮಿಟೆಡ್, ಉಡುಪಿ—ವಾದಿ

ಮತ್ತು

V. ಅಬ್ದುಲ್ ಖುದ್ದೂಸ

— ಪ್ರತಿವಾದಿ

ಇದರೊಳಗೆ

ಪುತ್ತೂರು ತಾಲ್ಲೂ ಜಲ್ಲಿರು ಗ್ರಾಮದಲ್ಲಿರುವ ಅಬ್ದುಲ್ಲಾ ಬ್ಯಾರಿಯವರ ಮಗ N ಮಹಮ್ಮದ್, ವ್ಯಾಪಾರಸ್ಥ, ಮೂರನೇ ಪ್ರತಿವಾದಿರಾದ ನಿಮ್ಮ ಈ ಮೂಲಕ ತಿಳಿಸುವುದೇನೆಂದರೆ,

ಪ್ರತಿವಾದಿರಾದ ನಿಮ್ಮ ಕೂಡುವಳಿಯಂದ ತಾ. 6.12.65ರಲ್ಲಿ ನಡೆದ ಹಯಿರ್ ಪರ್ಚೇಸ್ ಎಗ್ರಿಮೆಂಟಿನ ಬಾಬ್ತು ವಾದಿಗೆ ಬಾಕಿ ಆಗಬೇಡು ಪಸ್ಲಿಗಾಗಿ ಮೂಡಿದ ಮೇಲ್ಮಂಡ ದಾವೆಯು ತಾ. 6.7.68ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿರುತ್ತದೆ. ಆ ದಿನ ನಿಮ್ಮ ದೇವಾದರೆ ಉದಾದರೆ ಇದ್ದಲ್ಲಿ ಮೇಲ್ಮಂಡ ಕೋರ್ಟು ಮುಂದೆ ಉದಾಹರಿಸತಕ್ಕದ್ದು ಎಂತ ಈ ಮೂಲಕ ತಿಳಿಸೋಣವಾಗಿದೆ.

M. Damodar Kamath

Advocate for Plaintiff

Udipi, Dated 10-6-68.

ಹೊರದೇಶಗಳ ಹಿಂದೂಗಳ ದುರವಸ್ಥೆ

(ಎಳೆನೇ ಪುಟದಿಂದ)

ಎಂದೆಂದಿಗೂ ನಿರ್ನಾಮ ಮಾಡಿದಿರಿ. ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲೇಂಡ್, ಪೆಸಿಫಿಕ್ ದ್ವೀಪಗಳು, ದಕ್ಷಿಣ ಆಫ್ರಿಕ— ಈ ಎಲ್ಲ ದೇಶಗಳಲ್ಲಿನ ಶಿವನ್ನು ಇತಿಹಾಸ ಏನು ಹೇಳುತ್ತದೆ? ಅಲ್ಲಿನ ಆ ಮೂಲ ನಿವಾಸಿಗಳು ಏನು ಈಗಿಲ್ಲದ್ದಾರೆ? ನೀವು ಅವರನ್ನೆಲ್ಲಾ ಸೀದಾ ಕೊಂದೇ ಹಾಕಿದಿರಿ. —ಅವರೇನು ಕಾಡುಮೃಗಗಳೋ ಎಂಂತೆ ಎಲ್ಲರ ರೀತಿ ಮಾಡಲು ನಿಮಗೆ ಶಕ್ತಿ ಸಾಲದಾಯಿತೋ, ಅಂಥ ಕಡೆ ಮಾತ್ರ ಅಲ್ಲಿನ ರಾಷ್ಟ್ರಗಳೂ ಉಳಿದುಕೊಂಡಿವೆ... ಭಾರತವೂ ಎಂದೂ ಆ ರೀತಿ ಮಾಡಲಿಲ್ಲ."

ಹೀಗಿದ್ದರೂ ಹಿಂದೂಗಳನ್ನು ಹೊರದೇಶಗಳಿಂದ ಹೊರಗಟ್ಟುತ್ತಿರಲು ಕಾರಣವೇನು?

ಸ್ವಾಮಿಜಿಯವರ ಮಾತುಗಳೇ ಇಲ್ಲಿವೆ:

"ಅಚಾರ ವಿಚಾರಗಳಲ್ಲಿ ಪೂರ್ಣವಾಗಿ ಯುರೋಪಿಯನರಂತೆ ಆಗಿರುವ ನನ್ನ ದೇಶಬಾಂಧವರೇ! ನಿಮ್ಮನ್ನು ಸಂಬೋಧಿಸುತ್ತಿದ್ದೇವೆ! ಇಲ್ಲಿ ಕೇಳಿ! ಹಗಲಿರುಳು ಕಣ್ಣೀರಿಡ ಕ್ರಿಸ್ತಾಯ ರೋಪಿಯನರೆದುರಲ್ಲಿ ನಾವು ಪತಿತರಾದ್ದೇವೆ. ವೃಗಗಳ ಮಟ್ಟಕ್ಕೆ ಇಳಿದುಹೋಗಿದ್ದೇವೆ. ಹೇ, ಐರೋಪ್ಯರೇ ನೀವೇ ನಮ್ಮ ಉದ್ಧಾರಕರು. ನಮ್ಮ ಮೇಲೆ ದಯೆ ತೋರಿ. ನಮ್ಮನ್ನು ಈ ಅಧೋಗತಿಯಿಂದ ಉದ್ಧಾರಮಾಡಿ' ಎಂದು ಹಲುಬುತ್ತಿರುವ ದೇಶಬಾಂಧವರೇ ಇಲ್ಲಿ ಕೇಳಿ! ಮತ್ತು ನೀವುಗಳು ಭಾರತಕ್ಕೆ ಯೇಸು ಬಂದಿದ್ದಾನೆ. ಕಾಲಕ್ರಮದಲ್ಲಿ ಈ ಶ್ವರಾಜ್ಞೆಯು ಪೂರ್ತಿಯಾದ ದೇಶಂದು ಕೂಗಿ ಬೆಬ್ಬಿಸುತ್ತಿರುವ ನೀವುಗಳು ಸಹ—ತನ್ನ ಮಾತು ಕೇಳಿ ಅಯ್ಯೋ, ಬೆಪ್ಪರೇ! ಯೇಸುವೂ ಇಲ್ಲಿಗೆ ಬಂದಿಲ್ಲ, ಜೆಹೋವಾನೂ ಇಲ್ಲಿಗೆ ಬಂದಿಲ್ಲ. ಅವರು ಬಂದೇಯೂ ಇಲ್ಲ. ಅವರಿಗೆ ತಮ್ಮ ಮನೆವ ರಗಳನ್ನು ಉಳಿಸಿಕೊಳ್ಳುವದೇ ಸಾಕು ಸಾಕಾಗಿದೆ. ಇನ್ನು ನಮ್ಮ ದೇಶಕ್ಕೆ ಬರುವಷ್ಟು ಅವರಿಗೆ ಬಿಡುವೆಲ್ಲಿ?

ಇಲ್ಲಿ ನೋಡಿ! ಅದೇ ಸನಾತನ ಶಿವನು ಮುಂಚಿನಂತೆಯೇ ಕುಳಿತಿದ್ದಾನೆ. ರುಧಿರಪ್ರಿಯೆ ಕಾಲಿಕಾ ಮಾತೆಯು ತನ್ನೆಲ್ಲ ಪರಿವಾರದೊಂದಿಗೆ ಪೂಜೆಯನ್ನು ಸ್ವೀಕರಿಸುತ್ತಿದ್ದಾಳೆ. ಅದೇ ಪ್ರೇಮಮಯಿ ಗೋಪಾಲಕೃಷ್ಣನು ತನ್ನ ಮುರಲಿಯನ್ನು ನುಡಿಸುತ್ತಿದ್ದಾನೆ. ಹಿಂದೊಮ್ಮೆ ಇದೇ ಶಿವನು ತನ್ನ ನಂದಿಮುನ್ನೇರಿಂಡಮರು ಬಾರಿಸುತ್ತಾ ಭಾರತದಿಂದ ಹೊರ ಹೊರಟು ಒಂದುಕಡೆ ಸುಮಾತ್ರ, ಬೋರ್ನಿಯೋ, ಸೆಲೆಬಸ್, ಆಸ್ಟ್ರೇಲಿಯಾಗಳಿಂದ ಹಿಡಿದು ಅಮೇರಿಕದ ವರೆಗೆ ಇನ್ನೊಂದು ಕಡೆ ಸಿಬೀರಿಯಾ, ಚೀನಾ, ಜಪಾನ್‌ಗಳಿಂದ ಮೊದಲ್ಗೊಂಡು ಸೈಬೀರಿಯಾ ವರೆಗೆ ಎಲ್ಲೆಡೆ ತನ್ನ ವೃಷಭವನ್ನು ಮೇಯಿಸಿದ್ದ. ಈಗಲೂ ಅದನ್ನೇ ಮಾಡುತ್ತಿದ್ದಾನೆ. ಇಂದಿಗೂ ಕಾಲಿಕಾ ಮಾತೆಯು ಚೀನಾ, ಜಪಾನುಗಳಲ್ಲಿ ಪೂಜೆ ಸ್ವೀಕರಿಸುತ್ತಿದ್ದಾಳೆ. ಕ್ರಿಶ್ಚಿಯನರು ಅವಳನ್ನೇ (ಮೊರಿಯಮ್ಮನ್) ಕುಮಾರಿ ಮೇರಿಯಾಗಿ ಪರಿವರ್ತಿಸಿ, ಯೇಸು ಕ್ರಿಸ್ತನ ತಾಯಿಯೆಂದು ಪೂಜಿಸುತ್ತಿದ್ದಾರೆ.....

ಆದರೆ ನೀವು (ಹಿಂದೂಗಳು) ಆ ಪುರಾತನ ಶಿವನ ಉಪ್ಪುಂಡು ಅವನಿಗೇ ಬಯ್ಯುವಿರಿ; ಮತ್ತು ಪರದೇಶಿ ಉದ್ಧಾರಕನ ಗುಣಗಾನ ಮಾಡುವಿರಿ.....

"ವಿದೇಶೀಯರ ಮುಂದೆ ಅಳುತ್ತಾ ಹೋಗಿ, "ನಾವು ಬಹು ಹೀನರು, ನೀಚರು, ಪತಿತರು. ನಮ್ಮಲ್ಲಿರುವದೆಲ್ಲ ಪೈಶಾಚಿಕ ಸಂಗತಿಗಳೇ—" ಎನ್ನುವಂತಹ ನನ್ನ ದೇಶಬಾಂಧವರಿಗೆ ನಾನು ಹೇಳುವದಿಷ್ಟೇ ಇರಬಹುದು. ನೀವು ಹೇಳುವದೆಲ್ಲ ನಿಮ್ಮ ಒಗ್ಗೆ ನಿಜವಿರಬಹುದು. ನಿಮ್ಮ ಮಾತಿನಲ್ಲಿ ವಿಶ್ವಾಸವಿಡುತ್ತೇನೆ. ಆದರೆ, ಆ "ನಾವು" ಎನ್ನುವದರಲ್ಲಿ ಇದೀ ರಾಷ್ಟ್ರವನ್ನೇಕೆ ಸೇರಿಸಿಕೊಳ್ಳುವಿರಿ? ಹೇಳಿ ಸ್ವಾಮಿ, ಇದು ಹೂವ ನ್ಯಾಯ?'

ಸ್ವಾಮಿ ವಿವೇಕಾನಂದರು ತಮ್ಮ ಅಧೋಗತಿ ಹಾಗೂ ಹೊರ ದೇಶಗಳಿಂದ ಹಿಂದೂಗಳನ್ನು ಹೊರಗಟ್ಟುತ್ತಿರುವದಕ್ಕೇನು ಕಾರಣವೆಂಬುದನ್ನು ಸೂಚಿಸಿರುವರು.

ಅದಕ್ಕೆ ನಿರ್ಬಲ ಸರಕಾರ ಕಾರಣ ಇದೆ. ಆದರೆ ಪ್ರಜಾಪ್ರಭುತ್ವದಲ್ಲಿ ಎಲ್ಲಾ ಹೊಣೆಯನ್ನು ಸರಕಾರದ ಮೇಲೆ ಹೇರುವದರಲ್ಲಿ ಅರ್ಥ ಇರುವದಿಲ್ಲ. ಜನತೆಯ ಜವಾಬ್ದಾರಿಯೂ ಇದೆ. ಸರಕಾರ ನಿರ್ಬಲವಿದ್ದಲ್ಲಿ ಅದನ್ನು ಹಳೆಯ ಬಟ್ಟೆಯನ್ನು ಬದಲಾಯಿಸಿದಂತೆ, ಬದಲಾಯಿಸುವ ಅಧಿಕಾರ ಜನತೆಗಿದೆ. ಸರಕಾರವಾದರೋ ಜನತೆಯ ಮನೋನೆಲೆಯನ್ನರಿತುಕೊಂಡು ವರ್ತಿಸುತ್ತದೆ. ತಾನು ಮಾಡಿದ್ದಕ್ಕೆಭಂಗಬಾರದೆನ್ನುವ, ಗೆದ್ದೆತ್ತಿನ ಬಾಲ ಹಿಡಿಯುವವರಿರುವ ವರೆಗೆ ಅದುತನ್ನ ಅಧಿಕಾರ ಚಕ್ರವನ್ನುಉರುಳಿಸುತ್ತಇರುತ್ತದೆ. ಆಗ ದೇಶದೊಳಗಿರುವವರು ಅದನ್ನು ಅನುಭವಿಸಲೇ ಬೇಕಾಗುತ್ತದೆ,ಮಾತ್ರವಲ್ಲ, ಹೊರನಾಡುಗಳಲ್ಲಿರುವ ಅದೇಶದ ವಂಶಜರೂ ಕಷ್ಟವನ್ನು ಅನುಭವಿಸ ಬೇಕಾಗುತ್ತದೆ. ಇಂದು ,ನಾವು ಕಾಣುತ್ತಿರುವದು ಇದನ್ನೇ.

ಪಾಕಿಸ್ತಾನ ಹಿಂದೂಗಳಿಗೆ ಕಡು ಹಿಂಸೆ ಕೊಟ್ಟು ಮತಾಂತರಗೊಳಿಸುತ್ತಿರುವಾಗ, ಬರ್ಮ, ಲಂಕೆಯಲ್ಲಿರುವ ಬೌದ್ಧೇತರ ಹಿಂದೂಗಳನ್ನೇಡಿಸುತ್ತಿರುವಾಗ, ದಕ್ಷಿಣ ಆಫ್ರಿಕಾದಲ್ಲಿರುವ ಹಿಂದೂಗಳನ್ನು ಹೊರಗಟ್ಟುತ್ತಿರುವಾಗ ನಮ್ಮ ಜನತೆ ಘಕಾರವೆತ್ತದೆ ಸರಕಾರ ಮಾಡಿದಕ್ಕೆ ಸಹಕರಿಸುತ್ತ ಬರುತ್ತಿರುವದರಿಂದ ಹೊರದೇಶಗಳು ಹಿಂದೂಗಳನ್ನು ಹೊರಹಟ್ಟುತ್ತಿವೆ. ಆಸೀರಿಕೆದಿಂದ ಫ್ರೆಂಚರನ್ನು ಹೊರಗಟ್ಟಲು ಸಾಧ್ಯವಾಯಿತೇನು? ಇಲ್ಲ. ಇದೇ ಫ್ರಾನ್ಸ್ ಒಬ್ಬ ಮನುಷ್ಯನಂತೆ ಎದ್ದು ನಿಲ್ಲುತ್ತದೆ. ಆಗ ಅವ ರಾಜಕೀಯ ವಿವಾದಗಳೆಲ್ಲವೂ ಸಮುದ್ರದ ಪಾತಾಳದಲ್ಲಿ ಮುಳುಗಿ ಹೋಗುತ್ತವೆ. ದುರ್ಭಾಗ್ಯವಶಾತ್ ನಮ್ಮ ನೆಲೆ—ಎಲ್ಲರೂ ನಗುವಂತಹದ್ದಿದೆ. ನಾವೇ ಸರ್ವತ್ರೇವೆ! ಒಗ್ಗಟ್ಟಿನಿಂದ ಒಂದಾಗಿ ಓರ್ವನಂತೆ ಎದ್ದುನಿಲ್ಲುವ ಆಧ್ಯಾತ್ಮ ನಮಗಿನ್ನೂ ಬಂದಿಲ್ಲ. ಕಲಿಯುಗದಲ್ಲಿ ಸಂಘವೇ ಶಕ್ತಿಯಿದೆಯೂಡಂ ಅದನ್ನು ನಾಶಮಾಡಲಿಕ್ಕಾಗಿಯೇ ನಾವು ಪ್ರಯತ್ನಿಸುತ್ತಿದ್ದೇವೆ! ಇನ್ನಾದರೂ ನಾವು ಇದನ್ನರಿತು ಕೂಡಿ ಬಾಳದಿದ್ದಲ್ಲಿ ಕಾಶ್ಮೀರ, ಕಚ್ಛ, ಬೆರಬಾರಿ, ಗಡಿಪ್ರದೇಶಗಳನ್ನು ಬಿಟ್ಟುಕೊಡುತ್ತ, ಅನ್ಯಾನ್ಯ ದೇಶಗಳಲ್ಲಿ ಅದೆಂದೋ ಕ್ರಿ.ಪೂ.ದಲ್ಲಿ ಹೋಗಿ ತಂಗಿರುವ ಹಿಂದೂ ವಂಶವನರನ್ನು ಅಲ್ಲಿರುವ ಅಡಳಿತ ಶಕ್ತಿ ಹೊರದಬ್ಬುತ್ತಿರುವದನ್ನು ಕಾಣುತ್ತ ಕೈಲಾಗದವರಂತೆ ಅನ್ಯರ ಬಳಿ ಮಂಡಿಯೂರಿ ಕ್ಷಾಯಕ್ಕೆ, ರಿಯಾಯತಿಗೆ, ಸಹಾಯಕ್ಕೆ ಹಲ್ಲು ಕಿರಿಯುತ್ತ ಇರಬೇಕಾಗುತ್ತದೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲವೇನು?

ಪತ್ರವ್ಯವಹಾರ

ಸಹಕಾರಿ ಇಲಾಖೆಯಲ್ಲಿ ಸ್ವಾರ್ಥಿಗಳ ಕೈವಾಡ

ಅಯ್ಯಾ ಸಂಪಾದಕರೇ,

ನಮ್ಮ ರಾಜ್ಯದ ನೂತನ ಮಂತ್ರಿಮಂಡಲವು ಸನ್ಮಾನ್ಯ ಮುಖ್ಯಮಂತ್ರಿಗಳೂ "ಸಹಕಾರಿ ಸಂಸ್ಥೆ"ಗಳಲ್ಲಿ ಸ್ವಾರ್ಥಿಗಳ ಕೈವಾಡಗಳಿಂದ ಬಡಜನತೆಗೆ ಅನ್ಯಾಯಗಳಾಗುತ್ತಿವೆ ಎಂಬುದನ್ನು ಅರಿತುಕೊಂಡು ಬಹಿರಂಗಪಡಿಸಿದ್ದಕ್ಕಾಗಿ ಅಭಿನಂದನೆಗಳು.

ಬೆಳ್ಳಂಗಡಿತಾಲೂಕಿನಲ್ಲಿ ಬಾಗಲು, ಕಡಿರುದ್ಯಾವರ, ಗ್ರಾಮಗಳಿಗೆ ಪ್ರತ್ಯೇಕ ಸೇವಾ ಸಹಕಾರಿ ಸಂಘ ಬೇಕೆಂಬುದನ್ನು ಇಲಾಖಾ ಅಧಿಕಾರಿಗಳು ಒಪ್ಪಿದ ನಂತರ ಅವರ ಆದೇಶಾನುಸಾರ ರೂಪ್ಯಾ ೯,೦೦೦/- ಸಾಲುಪಟ್ಟಿಗೆ ದಿಪೋಜಿಟ್ ಮಾಡಿ ಪಿರಿಸ್ಥ ಸಂಖ್ಯೆಯ ಸದಸ್ಯರನ್ನು ಸೇರಿಸಿ ಸಂಘ ರಜಿಸ್ಟ್ರಿ ಮಾಡಲು ವಿನಂತಿ ಮಾಡಿ ಸಂಬಂಧ ಪಟ್ಟ ಅಧಿಕಾರಿಗಳು ತಿರಸ್ಕರಿಸಿದ್ದು ಅತೀ ಆಶ್ಚರ್ಯವಾಗಿ ಕಾಣುತ್ತದೆ. ಈ ಕಾರಣ ಮಾಡಿಕೊಂಡ ಅತೀ ಲಾ ಕೂಡಾ ಪಲಕಾರಿಯೆಂದೆಂತೆ ಕಾಣುವುದಿಲ್ಲ. ಸಾಲುಪಟ್ಟಿಗೆ ಕಟ್ಟಿ ಅರು ತಿಂಗಳಾದರೂ ವ್ಯವಹಾರಶೀಲವಾದದ್ದನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಇದೊಂದು ಸ್ಪಷ್ಟ ನಿದರ್ಶನವಾಗಿದೆ ತಕ್ಷಣ ನಡೆಸಿ ಜನತೆಯ ಬೇಡಿಕೆ ಪೂರೈಸಲು ವಿನಂತಿ— ಗ್ರಾಮಸ್ಥ.

ಶ್ರೀ ಎಂ. ಗೋಪಾಲಕೃಷ್ಣ ಅಡಿಗರಿಗೆ ಸ್ವಾಗತ

ಉಡುಪಿ, ಇದೇ ತಾ. ೧೦ರಂದು ಉಡುಪಿಯ ಕರ್ನಾಟಕ ಸಂಘದವರು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲರಾಗಿ ಅಧಿಕಾರ ಸ್ವೀಕಾರಮಾಡಿದ ಸುಪ್ರಸಿದ್ಧ ಕನ್ನಡ ಸಾಹಿತಿ ಶ್ರೀ ಎಂ. ಗೋಪಾಲಕೃಷ್ಣ ಅಡಿಗರನ್ನು ಸತ್ಕರಿಸಲು ಸ್ಥಳೀಯ ಅಪೂರ್ವ ಹೋಟೇಲಿನಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು.

ಆರಂಭದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಸಿ. ರಂಗನಾಥ ಶೆಟ್ಟಿಯವರು ಸ್ವಾಗತಿಸಿದರು. ಶ್ರೀ ಬನ್ನಂಜೆ ಗೋವಿಂದ ಬಾಯರು ಕಡೆಂಗೋಡ್ಲು ಶಂಕರಭಟ್ಟರ ಪ್ರಧಾನತ್ವಾಗಿ ಸಂಸಾರ ವ್ಯಕ್ತಪಡಿಸಿದ ಕರುವಾಯಿ ಆಳುರವರ ಸ್ಥಾನ ಪ್ರಾಪ್ತಿಗೆ ಸಲ್ಲಿಸಲಾಯಿತು. ಅನಂತರ ಉಡುಪಿಯ ಸಂತೆ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಮಾಧವಾಚಾರ ರಾಯರು ಶ್ರೀ ಅಡಿಗರ ಕುರಿತು ಮಾತನಾಡಿದರು.

ಶ್ರೀ ಅಡಿಗರು ಉತ್ತರಿಸುತ್ತಾ ತಾನು ತನ್ನ ಊರಿಗೆ ಮರಳಿ ಬಂದುದಕ್ಕೆ ಸಂತೋಷವ್ಯಕ್ತಪಡಿಸುತ್ತಾ ಉಡುಪಿಯಲ್ಲಿ ಸಾಹಿತ್ಯಾಭಿಮಾನಿಗಳೂ ದ್ರವ್ಯವಂತರೂ ಇರುವುದರಿಂದ ಅವರ ನಡುವೆ ಹೆಚ್ಚಿನ ಸೇವೆ ಸಲ್ಲಿಸಲು ಸಾಧ್ಯವೆಂದು ಹೇಳಿದರು.

ಕರ್ನಾಟಕಸಂಘದಅಧ್ಯಕ್ಷ ಶ್ರೀ ಪ್ರಿನ್ಸಿಪಾಲ್ ಕುಂಟಿ ಪಂಡಾಸ ಬಿಟ್ಟರು ಮೊತ್ತಕಾಡುತ್ತಾ ಪ್ರಿನ್ಸಿಪಾಲರಾಗಿದ್ದವರು ಸಾಹಿತಿಗಳೂ ಆಗಿದ್ದರೆ ಒಂದರ ಸೇವೆನನ್ನ ಇನ್ನೊಂದರಲ್ಲಿ ಸಮರ್ಪಿಸಿಕೊಳ್ಳಬಹುದಾಗಿದೆ ಎಂದು ಹೇಳಿ ಧನ್ಯವಾದ ಸಮರ್ಪಿಸಿದರು.

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

SC No 33/1963

ಕೆನರಾ ಫಿನೆನ್ಸ್ ಯುಸಿಟ್(ಪ್ರೈ) ಇದರ ಮಾನೇಜರ್ ಎಂ. ಗೋವಿಂದ —ವಾದಿ

ಮತ್ತು

ಕೆ. ಸಂಜೀವ ಕೋಟ್ಯಾನ ಕೂಡಾ —ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿ ಶ್ರೀ ಕೆ. ಸಂಜೀವ ಕೋಟ್ಯಾನ, ಕೆ ಗುಡ್ಡೆ ಅವರವರ ಮಗ, ಬಸ್ ಕಂಡೆಕ್ಟರ್, ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಸಂತೆಕಟ್ಟೆ, ಉಡುಪಿ ಕಸ್ಬಾ, ಉಡುಪಿ ತಾಲೂಕು, ಉಡುಪಿ ಪೋಸ್ಟು (ಸದ್ರಿ ಉಡುಪಿ ತಾಲೂಕು ಕಡೆಕಾರು ಗ್ರಾಮದ ಪಡುಕುದ್ರಿನಲ್ಲಿ ವಾಸಿಸುತ್ತಿದ್ದಾರೆ) ಇವರಿಗೆ—

ನೀವು ಕೂಡಾ ವಾದಿ ಫಿರ್ಯಾದಿಯ ತಾ. ೩೧—೧೧—೧೯೬೬ರಲ್ಲಿ ರೂಪಾಯಿ ೪೦/-ನ್ನು ಸಾಲ ಪಡೆಕೊಂಡು, ಬರೆಕೊಟ್ಟ ದಿಮಾಂಡು ಪ್ರೊಮಿಸರಿ ನೋಟಿನ ಪಾಟ್ಟು ಅಸ್ಲು ಬಾಕಿ, ಬಡ್ಡಿ ವಗೈರೆ ಮೊತ್ತಕ್ಕೆ ಬಗ್ಗೆ ಮಾಡಿದ ಮೇಲ್ಮಾಸಿದ ದಾವೆಯು ತಾ. ೨೮—೬—೧೯೬೮ರಂದು ನಿಷ್ಕ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ತಾ. ೨೮—೬—೧೯೬೮ರಂದು ಬೆಳಗ್ಗೆ ಘಂಟೆ ೧೧-೦೦ಕ್ಕೆ ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಈ ಕೋರ್ಟಿನಲ್ಲಿ ಹಾಜರಾಗಿ ಉದಾಹರಣೆಗೆಗೆಯಾದರೂ ಇದ್ದಲ್ಲಿ ಜಾಹಿರುಪಡಿಸಬೇಕೆಂದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ (Ex-parte) ದಾವೆಯ ಮುಂದಿನ ತನ್ನಿ ನಡೆಸೋಣವೆಂದು ಎಂಬ ಸಂಗತಿ ಈ ಮೂಲಕ ನಿಮಗೆ ತಿಳಿಸಿಸುವದೆ.

ಸಿ. ಬಾಲಕೃಷ್ಣ ಆರ್. ಶೆಟ್ಟಿ.

ವಾದಿಯ ಕಡೆ ಎಡ್ವೋಕೇಟ್.

ಉಡುಪಿ, ದಿ. ೧, 15.6.1968

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, ೨, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ ಹಾಗೂ ಎಲ್ಲಾ ತರದ ವಿಚಾರಿಸಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

ಹಿಂದಿನಂತಿಲ್ಲ!

ನನ್ನ ಮೊನ್ನೆಯ ತನಕ ನಮ್ಮೂರು ಕಿರಿದು|
ಚೊಕ್ಕ ಚಿನ್ನದ ಹಾಗೆ ಗುಣದಲ್ಲಿ ಹಿರಿದು.||
ಇಂದು ಪಟ್ಟಣವನ್ನು ಹಿಂದಿನಂತಿಲ್ಲ|
ಕತ್ತೆ ಮೇದೆಡೆಯಲ್ಲಿ ಮತ್ತೆ ಮೇದಿಲ್ಲ||೧||

॥ಸೋಂಕು॥

ಬಿಗಿಯ ಕಾಲ್ ಕುಪ್ಪಸಕೆ ಬಿಗಿಯ
ಮೇಲಂಗಿ|
ಬಿಗಿಯ ಮೂತಿಯು— ನಳಿಲಿ ಕೋಡಂಗಿ||
ಮೊನ್ನೆಗನ ಬಿಗಿ ನೋಡಿ ಬಿಗಿಯೂದ ತಾತ|
ಉಬ್ಬಸವು ಬಿಗಿಯೂಗಲುಸಿರೇ ಬೋತಾ!
॥೨॥

"ಕಶ್ಚಿತ್"

ಕಾರ್ಕಳ ವ ಎನ್ಸೀಫ್ ಕೋರ್ಟ್‌ನಲ್ಲಿ

O. S. No. 129/1961

R. E P No. 695/1966

ವಾದಿ–ಬಾಕಿಂಗಳ ಅಂಣ್ಣ ಭಟ್.
—ಅರ್ಜಿದಾರ

ಮತ್ತು

ಪ್ರತಿವಾದಿ–M. ವೆಂಕಟ್ರಮಣ, ಯದ್ರಿ–
ಯವರೊಳಗೆ

ಯದ್ರಿ M ವೆಂಕಟ್ರಮಣ, ಮುದ್ರಿಬೆಟ್ಟು ಪುಟ್ಟಯ್ಯನವರ ಮಗ, ಕಾರ್ಕಳ ತಾಲ್ಲೂಕು ಬಡಗಸುಖಾರು ಗ್ರಾಮಸ್ತರು—

ಮೇಲಿನ ಅಮ್ಮಜ್ಞಾಂಯಲ್ಲಿ ನಿಮ್ಮ ಹಕ್ಕಿನ ಬಾಬ್ತು ಜಪ್ತು ಆದ ಆಸ್ತಿಯ ವಿಕ್ರಯದ ಬಗ್ಗೆ ಹಾಜರು ಆದ ಯೇಲಂ ಯಿಸ್ತಿಹಾರಿನ ಶರತ್‌ಗಳನ್ನು ಮಂಜೂರು ಮಾಡಿದ ಬಗ್ಗೆ ಮತ್ತು ಆಸ್ತಿಯ ಏಲಂ ಸಮಯದ ಡಾರ್ಸ್ಟಿಗೆ ನಿಲ್ಲುವ ಬಗ್ಗೆ ಅರ್ಜಿದಾರನು ಕೇಳಿದ ಪರ್ಮಿಶನ್ ಮತ್ತು ಡಕಾರ್ಸ್ಟಿಗೆ ನಿಲ್ಲುವಲ್ಲಿ ಡಕಾರ್ಸ್ಟಿನ ಹಣ ಡಿಕ್ರಿಯಲ್ಲಿ ವಜಾಮಾಡುವರೆ ಹುಕುಂ ಆಪೇಕ್ಷಿಸಿದ ಅರ್ಜಿಯು ಕೂಡ ತಾರೀಕು 2—7—1969 ರಲ್ಲು ಮೇಲ್ಕಂಡ ಕೋರ್ಟ್‌ನಲ್ಲಿ ಬೆಳಿಗ್ಗೆ 10 ಗಂಟೆಗೆ ತಪ್ಪಿಗೆ ಯಿಡಲಾಗಿರುವದರಿಂದ ಮೇಲಿನ ವಿಷಯಗಳಲ್ಲಿ ನಿಮ್ಮ ಉದಾಹರಣೆಯು ಯಾರುವಲ್ಲಿ ನೀವು ಸ್ವತಹಾ ಅಥವ ವಕೀಲರ ಮುಖಾಂತರ ಹಾಜರು ಆಗಿ ತಿಳಿಸಿಕೊಳ್ಳದಿದ್ದರೆ, ಸದರಿ ಅರ್ಜಿಯು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿ, ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

S. Rajagopala Achar
Advocate for Petitioner
Karkala, 14-6-68

ಕಾರ್ಕಳ ಮುನ್ಸೀಫ್ ಕೋರ್ಟ್‌ನಲ್ಲಿ

O. S No 507/1967.

M. Subba, ಜಾರು ಪೂಜಾರಿ ಮಗ, ಕಾರ್ಕಳ ತಾಲ್ಲೂಕು ಪ್ರಾಂತ್ಯ ಗ್ರಾಮದ ಮೂಡಬಿದ್ರಿ — ವಾದಿ.

ಮತ್ತು

K ರಾಗವೇಂದ್ರ ನಾಯ್ಕ, ರಾಮಚಂದ್ರ ನಾಯ್ಕರ ಮಗ, ಕಂಟ್ರಾಕ್ಟರ್, ಉಡಿ ತಾಲ್ಲೂಕು ಶಿವಳ್ಳಿ ಗ್ರಾಮದ ಮಣಿಪಾಲ
—ಪ್ರತಿವಾದಿ.

ನೀವು ವಾದಿಯಿಂದ ಪಡೆದ ಮುಂದಿ ಬಾಬ್ತು ವಾದಿಗೆ ಬರಬೇಕಾದ ಮೊಬಲಗು ಬಗ್ಗೆರೆ ಕೇಳಿ ವಾದಿಯು ನಿಮ್ಮ ಮೇಲೆ ರೂ. 1261-16 ಬರೆಸಿಕೊಳ್ಳುವರೆ ನಿಮ್ಮ ಮೇಲೆ ಮಾಡಿದ ಈ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟ್‌ನಲ್ಲಿ ತಾರೀಕು 11-7-1968ನೇ ಬೆಳಿಗ್ಗೆ 10 ಗಂಟೆಗೆ ಯಿಟ್ಟಿರುವದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಯಾರುವಲ್ಲಿ ನೀವು ಸದರಿ ತಾರೀಕಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರು ಆಗಿ ಜ್ಞಾಪೀಸು ಮಾಡಿಕೊಳ್ಳಬಹುದಾಗಿಯೂ ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಕೋರ್ಟ್ ಹುಕುಮು ಪ್ರಕಾರ ಈ ಮೂಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

S. Rajagopala Achar,
Advocate for Plaintiff.
Karkala, 14-6-1968.

ಕೃತಿ ಪರಿಚಯ

ವಿದ್ಯಾರ್ಥಿಗಳಿಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ, ನ.)

ಪುರೂರವ: (ಗೀತ ನಾಟಕ).

ಬರೆದವರು: ಶ್ರೀ. ಮೊಗಸಾಲೆ.

ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕೆನ್ನಿಗೋಳಿ, ದ. ಕ.

ಪುಟಗಳು: ೬೪. ಬೆಲೆ: ರೂ. ೧.೫೦.

ಇತಿಹಾಸದಲ್ಲಿ ವಿಶ್ವವಿಜಯದ ಹೇರಾಸೆಯಿಟ್ಟು ಭಾರತವನ್ನು ಮೊತ್ತ ಮೊದಲು ಬಾರಿಗೆ ಆಕ್ರಮಿಸಿದ ಯವನ ರಾಜ ಸಿಕಂದರ, ವತ್ತಾತನನ್ನು ಎಂಟೆದೆಯಿಂದ ಎದುರಿಸಿದ ಪುರೂರವರ ಪ್ರಸಿದ್ಧ ಜನಜನಿತ ಕಥೆಯೇ ಈ ಗೀತ ನಾಟಕದ ಕಥಾವಸ್ತು. ಸಿಕಂದರ ತನ್ನ ಬಾಹುಬಲದಿಂದ ಪುರೂರವನನ್ನು ಗೆಲ್ಲಲಿಲ್ಲ; ಕಿರಾಯುಧನಾದ ಆತನನ್ನು ಅಂಭಿ ಸೆರೆಹಿಡಿದು ಸಿಕಂದರನ ಬಳಿಗೊಯ್ಯುತ್ತಾನೆ. ಪುರೂರವನಿಂದ ತನ್ನ ಪತಿಯು ವೃತ್ತಿವಪ್ಪತ್ತಾನೆಂದು ಬಲವಾಗಿ ನಂಬಿದ್ದ ರುಕ್ಸಾನೆ ತಾನೂಬ್ಬ ಯವನ ಸಿಪಾಹಿಯ ಪತ್ನಿಯ ಂದುಕೊಂಡು ಆತನಿಂದ ಪತಿಭಿಕ್ಷೆಯನ್ನು ಬೇಡುತ್ತಾಳೆ. ಪುರೂರವ ಕೈಕಟ್ಟಿ ಅಭಯ ಕೀಡ ತ್ತಾನೆ. ಇದು ಅಧರ್ಮ ಸಿಕಂದರನ ಜೀವಮಾಳುಲು ಕಾರಣವಾದಂತೆ ಪುರೂರವನ ಗೌರವ ಕ್ಷೆಗೂ ಭಧ್ರ ಟಕ್ಷೆಯಾಗುತ್ತದೆ.

ಗೀತ ನಾಟಕದಲ್ಲಿ ಬಳಸಿದ ಭಾಷೆ ಹಳೆ—ನಡ ಗನ್ನಡಕ್ಕೆ ಸಮೀಪವಿದೆ. ದಿ| ಗೋವಿಂದ ಪೈಯವರ ಮತ್ತು ಶ್ರೀ ಅ. ಗಾ. ಕೆನ್ನಿಗೋಳಿಯವರ ಶೈಲಿಯ ಪ್ರಭಾವ—ಸೆರಗು ಇಡಿ ನಾಟಕದಲ್ಲಿ ಕಾಣುತ್ತದೆ. ಅಲ್ಲಲ್ಲಿ ಬಳಸಿದ ಗಾದೆ ಮಾತ ಗಳು, ಲೋಕೋಕ್ತಿಗಳು ಮಾತುಗಳು ಶೈಲಿಯ ಪ್ರಭಾವೋತ್ಪಾದಕ ಗುಣಕ್ಕೆ ಕಳಶವಿಟ್ಟಿವೆ.

ಗೀತ ನಾಟಕವಾದರೂ ಇದರಲ್ಲಿ ರಂಗ ಭೂಮಿಯ ಕತ್ತ್ವಗಳನ್ನು ಅಳವಡಿಸಿಕೊಂಡಿಲ್ಲವಾದುದರಿಂದ ಅಭಿನಯ ದೃಷ್ಟಿಯಿಂದ ಇದು ಅನುಪಯುಕ್ತವೇ. ಬಗೆ—ಉದ್ದ ಸಂವಾದಗಳು ಸಾಹಿತ್ಯಕ ದೃಷ್ಟಿಯಿಂದ ಉತ್ತಮವಿದೆ. ಒಟ್ಟಿನಲ್ಲಿ "ಪುರೂರವ" ಸಾಹಿತ್ಯಕ ಗೀತ ನಾಟಕಗಳಲ್ಲಿ ಈ ದಶಕದ ಉತ್ತಮ ನಾಟಕಗಳಲ್ಲಿ ಒಂದು ಎನ್ನಬಹುದು.

೦ ೦ ೦

ಶ್ರೀಶಕ ೧೮೯೦ನೆಯ ಶೇಲಕ ನಾಮ ಸಂವತ್ಸರದ ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗವು ಹಿಂದಿನ ವರ್ಷಗಳಂತೆಯೇ ವಿವಿಧ ಜ್ಯೋತಿಷ್ಯ ವಿಚಾರಗಳಿಂದ ಕೂಡಿ ಪ್ರಕಟವಾಗಿದೆ. ವಿವಾಹ, ಉಪನಯನ ಮುಹೂರ್ತಗಳು, ತೇಜಿ ಮಾಂದಿ ವಿಚಾರ, ಮಳೆ ಬರುವ ಯೋಗ, ದ್ವಾದಶ ರಾಶಿಯವರ ಭವಿಷ್ಯ ಮೊದಲಾದ ಹತ್ತಾರು ಅವಶ್ಯಕತೆಗಳು ಇದರಲ್ಲಿದ್ದು ಒಂದು ಪಟ್ಟಿ ಜ್ಯೋತಿರ್ವಿದ್ವಾಂಸರೇ ಆಗಿದ್ದ ಕನ್ನಡಿಗರಿಂದ ನಿರ್ಣಯವಾದ ತಿಥಿ—ಯೋಗ ನಕ್ಷತ್ರ, ಕರಣಗಳೂ ನವೀನ ಸಿದ್ಧಾಂತಾನುಸಾರ ಗುಣಿಸಲ್ಪಟ್ಟಿವೆ. ಎಲ್ಲಾಗೂ ಅತ್ಯಂತ ಉಪಯುಕ್ತವಾದ ಈ ದೊಡ್ಡ ಪಂಚಾಂಗದ ಬೆಲೆ ರೂ. ೧—೫೦, ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರಿಯವರಿಂದ ರಚಿತವಾದ ಇದನ್ನು ಆರ್ಯ ವೈಶ್ಯ ಸಂಘ, ರಂಗಂಪೇಟೆ (ಸುರಪುರ) ಇವರು ಪ್ರಕಟಿಸಿದ್ದಾರೆ. —ಗೋಕಾ.

ಹೊಸ ಪ್ರಕಟಣೆಗಳು

೧. Milagres College, Kallianpur Magazine. Vol 1; 1968

Editor in chief. Prof. P. Gururaja Bhat

೨. Karnataka at a glance by Sri K. Narayana Ballal. Published by Rekha Prakashana, 62-17th Cross, Malleshwaram, Bangalore-3 Price: Rs. 1.00

೩. ದೇವಭೂಮಿ ಗೋವಾಂತರ

ಲೇಖಕರು: ಶ್ರೀ ಶಾ. ಮಂ. ಕೃಷ್ಣರಾಯ.

ಪ್ರಕಾಶಕರ: ಸಾಹಿತ್ಯಸದನ, ಮಾರಿಬಾಂದ, ಮಡಗಾಂವ (ಗೋವಾ) ಬೆಲೆ. ರೂ. ೪.೦೦

೪. ವಸಂತಗೀತೆ (ಕಾದಂಬರಿ)

ಬರೆದವರ: ಕುವೂರಿ ಎನ್. ಶಾಂತಾ. ಬೆಲೆ. ರೂ. ೨.೫೫

೫. ಕಂಗೊಳಿಸುವ ಕಟೀಲು

ಲೇಖಕರ: ಶ್ರೀ ಕೊ. ಅ. ಉಡುಪ. ಬೆಲೆ: ರೂ ೦.೫೦.

ಮೇಲಿನ ೪ ಮತ್ತು ೫ನೆ ಪುಸ್ತಕಗಳ ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕೆನ್ನಿಗೋಳಿ, ದ. ಕ.

ವಿಶೇಷ ಯಾವತಾಶ.

ಆಹಾರ ಸಚಿವ ಶ್ರೀ ವಿಠಲದಾಸ ಶೆಟ್ಟರ ಪ್ರವಾಸ ಕಾರ್ಯಕ್ರಮ

ಆಹಾರ ಖಾತೆಯ ಸ್ಟೇಟ್ ಸಚಿವ ಶ್ರೀ ವಿಠಲದಾಸ ಶೆಟ್ಟಿಯವರು ಜೂನ್ ೧೭ರಿಂದ ೨೪ರ ತನಕ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ಪ್ರವಾಸ ಕೈಕೊಂಡಿದ್ದಾರೆ.

ತಾ. ೧೭ರಂದು ಬೆಳಿಗ್ಗೆ ಬೆಂಗಳೂರಿನಿಂದ ಹೊರಟು ಮಧ್ಯಾಹ್ನ ಪುತ್ತೂರು ತಲಪಿ ಅಲ್ಲಿಂದ ಕಬಕ ಮೂಲಕ ವಿಟ್ಲಕ್ಕೆ ತೆರಳುವರು. ಮರುದಿನ ಉಳ್ಳಾಲ ಚೆಕ್‌ಪೋಸ್ಟ್ ಪರಿಶೀಲಿಸಿ ಅಳಿಕೆಯ ಲೋಕಸೇವಾ ವೃಂದವನ್ನು ಸಂದರ್ಶಿಸಿ ತಾ. ೧೯ರಂದು ವಿಟ್ಲದಿಂದ ಬಿ ಸಿ ರೋಡಿಗೆ ತೆರಳಿ, ಪೊಳಲಿಗಾಗಿ ಮಂಗಳೂರಿಗೆ ಬರುವರು. ಅಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿಯಾಗಿ, ಮರುದಿನ ಬೆಳಿಗ್ಗೆ ಪತ್ರಿಕಾಕರ್ತರೊಡನೆ ಮಾತನಾಡಿ ಪೆರ್ಡೂರಿಗೆ ತೆರಳುವರು. ಅಲ್ಲಿಂದ ಕುಂದಾಪುರಕ್ಕಾಗಿ ಉಡುಪಿಗೆ ಬರುವರು. ಅಲ್ಲಿಯ ಕಾಂಗ್ರೆಸ್ ಸದಸ್ಯರನ್ನೂ ಆಹಾರ ಸಲಹಾ ಸಮಿತಿಯ ಸದಸ್ಯರನ್ನೂ ಭೇಟಿಯಾಗಿ ಸಂಜೆ ಧರ್ಮಸ್ಥಳಕ್ಕೆ ತೆರಳುವರು.

ತಾ ೨೦ರಂದು ಕಲ್ಲಡ್ಕಕ್ಕಾಗಿ ಮಾರ್ಗ ಅನಂತಾಡಿಗೆ ತೆರಳುವರು. ಅನಂತರ ಪುತ್ತೂರಿಗೆ ತೆರಳಿ ಅಲ್ಲಿ ತಂಗುವರು. ಜಾಲ್ಸೂರ್ ಚೆಕ್ ಪೋಸ್ಟ್, ಅಲ್ಲಿಂದ ಸಾಳ್ಯಕ್ಕೆ ಭೇಟಿನೀಡುವರು ಪುತ್ತೂರಿನ ಪ್ರಹಾರ ಸಲಹಾ ಸಮಿತಿಯ ಸದಸ್ಯರನ್ನೂ ಜನತೆಯ ಪ್ರತಿನಿಧಿಗಳನ್ನೂ ಭೇಟಿಯಾಗಿ ಬೆಂಗಳೂರಿಗೆ ಮರಳುವರು.

ಕಾರ್ಕಳ ಲೇಂಡ್ ಟ್ರಿಬ್ಯೂನಲ್ ಕೋರ್ಟ್‌ನಲ್ಲಿ

R. P. No. 150/1968

ಲೂಯಿಸ್ ಯೂನಿ ಎಲೊಸಿಯಸ್ ಮತ್ತೈಸ್ —Applicant

ಮತ್ತು

ಯಿಜಬೆಲ್ಲಾ ಡಿ ಸೋಜ ಬ್ರೈ ಸಾಹ — Opponents

ಯವರೊಳಗೆ

ಕೋರ್ಟ್ ಹುಕುಂ ಪ್ರಕಾರ ಸದ್ರಿ ವೃದ್ಧ ಹರಜಿಯ ೩ನೇ ಎದ್ರಿ ಲೋರೆನ್ಸ್ ಡಿಸೋಜಾ ೨. ಪಾಸ್ಕಲ್ ಡಿಸೋಜರ ಮಕ್ಕಳು, ಕಾರ್ಕಳ ತಾಲ್ಲೂಕು ಸಿಟ್ಟಿ ಗ್ರಾಮ ಗಂಗಪದಕೋಡಿ ಎಂಬಲ್ಲಿರುವವರು ಯವರಿಗೆ ಯಿಷಯವು ತಿಳಿಯಪಡಿಸಾವದೇನೆಂದ್ರೆ —

ಅರ್ಜಿದಾರಿಗೆ ಎದ್ರಿಂದ ಕಳೆದ 1966 1967ನೇ ವರುಷದ ಬಾಬ್ತು ಬಹಾ ಗೇಣಿಯನ್ನು ಸ್ವೀಕರಿಸಿ ಮಾಡಿಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 19-7-1968ಕ್ಕೆ ಸದ್ರಿ 2-4ನೇ ಎದ್ರಿರ ಹಾಜರಾತಿ ಬಗ್ಗೆ ಯಿಟ್ಟಿದೆ. ಆದ್ರಿಂದ ಸದ್ರಿ ಅರ್ಜಿ ಕುರಿತು ಆಕ್ಷೇಪ ಯಿದ್ರೆ ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿ ಆವರ ಗೈರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ.

H. K. Gopalkrishna Rao,
Vakil for Applicant.
Karkala, 15-6-68

An appeal to the Voters of the Mysore South-West Graduates Constituency

Dear Voter,

The Mysore South-West Graduates Constituency (comprising of Mysore, Coorg & South Canara Districts) election to the Mysore Legislative Council is to be held on 23—6—68

I am happy to have the privilege of approaching you—the most alert & well informed section of the Indian electorate—for your first preferential Vote in my favour. I am the candidate of the Janatha Party.

Please permit me to mention that I was closely associated with the freedom movement. I have participated in every campaign starting from 1938.

I assure you that I will continue to fight for all good causes & will endeavour continuously to retain your confidence as the candidate who got the 1st preferential vote.

I remain,
Sincerely Yours
A. RAMANNA
Editor "Vijaya" &
Organizing Secretary, Janatha Party,
Mysore-1.

ಉತ್ತರ ಬಂತು

(ಎರಡನೇ ಪುಟದಿಂದ)

"ಹಾಗ್ನ ಅಲ್ವೋ ಮಹರಾಯ, ಇದೋ ವಿಷಯ ಕೇಳಿದೆ"

'ತೋಳ ಹಳ್ಳಕ್ಕೆ ಬಿದ್ದರೆ ಅಳಿಗೊಂದು ಕಲ್ಲು ಗಾದೆ ಕೇಳಿಲ್ಲೆ"

"ಸಾಕಪ್ಪ ಈ ವೇದಾಂತ...."ಅಂದ ಹಾಗೆ ಅತ್ತೆ ಮಾಹಡಿ ಮೇಲೆ ಇದ್ದಾಳೆ. ನಿನ್ನನ್ನು ಕಳುಹಿಸು ಅಂತ ಹೇಳಿದರು, ಹೋಗಿಬಾ"

'ಅಪ್ಪಣೆ' ಎಂದು ಕೈಮುಗಿದ ಶ್ರೀಧರ.

ಶ್ರೀಧರ ತಾಯಿಯನ್ನು ಹುಡುಕಿಕೊಂಡು ಮಡಡಿಯ ಮೇಲಿನ ಕೋಣೆಗೆ ಹೋದ. ಕಮಲಮ್ಮ ಕೋಣೆಯಲ್ಲಿರಲಿಲ್ಲ. ಆ ವೇಳೆಗೆ ಕಮಲಮ್ಮ ಹಸುವಿನ ಕೊಟ್ಟಿಗೆಗೆ ಬಂದಿದ್ದರು. ಚಿಕ್ಕ ಕರುವಿನ ಬಳಿ ಕುಳಿತು ಅದನ್ನೆ ಹಸಿರು ಹುಲ್ಲು ಹಾಕುತ್ತಿದ್ದರು. ಮಗನನ್ನು ಕಂಡೊಡನೆಯೇ 'ಬಾರೋ ಇಲ್ಲೇ ಇದ್ದೇನೆ" ಎಂದರು.

'ಏನಮ್ಮ, ಏನೋ ಕರೆದೆಯಂತೆ'

"ಯಾರ ಹೇಳಿದರು?"

"ಅತ್ತಿಗೆ ಹೇಳಿದರು.... ಅದು ಸರಿ.... ನಮ್ಮ ಮನೆಯಲ್ಲಿ ಇಷ್ಟ ಜನ ಇದ್ದಾರೆ ಆಳುಗಳು ಇದ್ದಾರೆ. ಹೇಳಿದರೆ ಮಾಡುತ್ತಾರೆ... ಮೊದಲೇ ನಿನ್ನ ಕೈಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ವೃಥಾ ಅಯಾಸ ಮಾಡಿಕೊಳ್ಳುತ್ತೀಯ..... ನಾಳೆ ಹೆಚ್ಚು ಕಡಿಮೆ ಆದರೆ ನೋಡಿಕೊಳ್ಳೋರು ಯಾರು..... ತನ್ನ ಎಷ್ಟು ದಿನ ನೆಮ್ಮ ಈ ದುಡುಮೆ?' ಎಂದ ಶ್ರೀಧರ.

"ನಿನ್ನ ಹೆಂಡತಿ ಈ ಮನೆಗೆ ಬರೋ ತನಕ"

"ಸರಿಹೋಯ್ತು ಕಣಮ್ಮ...ನೆನ್ ಹೆಂಡತಿ ಈ ಮನೆಯಲ್ಲೆಲ್ಲ ಕೆಲಸ ಮಾಡುತ್ತಾಳೆ ಅಂತ ಏನು ಖಾತ್ರಿ...?'

"ಈ ವನೆಯ ಎಲ್ಲ ಕೆಲಸ ಮಾಡುವಂತಹ ಹುಡುಗಿನ್ನೇ ಹುಡುಕಿದ್ದೇನೆ. ಕಣೋ"

'ಹಾಗಂದರೇನವ್ವ...."

"ಮುಚ್ಚುಮರೆ ಏನೂ ಇಲ್ಲ ಶ್ರೀಧರ. ಲಕ್ಷ್ಮಿನ ಈ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳೋಣ ಅಂತ ಇದ್ದೇನೆ"

"ನಿರ್ಧರಿಸಿ ಬಿಟ್ಟಿದ್ದೀಯಾ ಅವ್ವ"

'ಹೂನಪ್ಪ" ಎಂದಳು ಕಮಲಮ್ಮ.

'ಅಪ್ಪ, ಕೇಶವ ಮೂರ್ತಿ ಮಗಳು ಚಂಚಲಾನ ಮದುವೆ ಮಾಡಿಕೋ ಅಂತಾರೆ ನೀನು ಲಕ್ಷ್ಮಿನ ಮದುವೆ ಮಾಡ್ಕೋ ಅಂತೀ. ಯಾರನ್ನ ಮದುವೆ ಮಾಡಿಕೊಳ್ಳಲಿ" ಎಂದ ಶ್ರೀಧರ.

'ಚಂಚಲಾ ಶ್ರೀಮಂತರ ಮನೆಯ ಮಗಳು. ಅವಳಿಗೆ ಪ್ರಯತ್ನಪಟ್ಟರೆ ಗಂಡು ಸೊರಯುವುದು ಕಷ್ಟವಿಲ್ಲ. ನಿನಗೆ ಗೊತ್ತಿರುವ ಹಾಗೆ ಅಣ್ಣನ ಆಸ್ತಿ ಅಂದರೆ ಆತನ ಐದು ಜನ ಹೆಣ್ಣು ಮಕ್ಕಳು. ಮೊದಲ ಮೂರು ಜನರ ಮದುವೆಗಾಗಿ ತಿರ್ಥ ದುಕ್ಕಾಲು ಆಸ್ತಿ ಹೋಯಿತು. ಲಕ್ಷ್ಮಿ ಲಕ್ಷಣವಾಗಿದ್ದಾಳೆ. ಅಣ್ಣನಿಗೆ ಸಹಕಾರು ರೂಪಾಯಿ ವರದಕ್ಷಿಣೆ ಕೊಡುವ ಶಕ್ತಿ ಇಲ್ಲ. ಲಕ್ಷ್ಮಿಗೆ ಹೆಚ್ಚು ವಿದ್ಯೆ ಇಲ್ಲ. ಆದರೆ ಲಕ್ಷಣವಾದ್ದಾಳೆ. ಸಂಸಾರ ನಿರ್ವಹಿಸುವ ಶಕ್ತಿ ಅವಳಿಗಿದೆ. ನಿನ್ನನ್ನು ನಂಬಿ ಅಣ್ಣನಿಗೆ ಮಾತು ಕೊಟ್ಟಿದ್ದೇನೆ. ಲಕ್ಷ್ಮೀನ ಒಪ್ಪಿಕೊಂಡು ಬಿಡು. ನಿಮ್ಮ ತಂದೆಗೆ ಶ್ರೀಮಂತಿಕೆ ಹೆಚ್ಚು ಹಿಡಿದಿದೆ, ಅವರು ಚಂಚಲಾಳನ್ನೇ ಸೊಸೆ ಮಾಡಿಕೊಳ್ಳಲು ಪಣತೊಟ್ಟಿದ್ದಾರೆ' ಎಂದರು ಕಮಲಮ್ಮ.

"ಹಾಗಾದರೆ ಈಗ ನೀನು ಅಪ್ಪ ಮಾತಾಡೋಲ್ಲವೇನವ್ವ" ಎಂದ ಶ್ರೀಧರ. ಕಮಲಮ್ಮ ಮಗನ ಕಡೆಗೆ ನೋಡಿದರಷ್ಟೆ, ಮಾತನಾಡಲಿಲ್ಲ.

'ನನಗೆ ಏನು ಹೇಳಬೇಕೋ ತಿಳಿಯುವುದಿಲ್ಲಮ್ಮ. ನೀನು ಅಪ್ಪ ಒಪ್ಪಿಕೊಂಡರೆ ಆಯ್ತು ನನ್ನದೇನಿದೆ?"

'ಅಂದ ಹಾಗೆ ಚಂಚಲಾನ ಒಪ್ಪಿಕೊಂಡು ಬಂದಿದ್ದೀಯೇನ ?'

"ಉಹುಂ'

"ಹಾಗಾದರೆ ಲಕ್ಷ್ಮೀನ ಒಪ್ಪಿಕೊಂಡು ಬಿಡು"

"....."

"ಇಷ್ಟವಿಲ್ಲವೆ?'

"ಈಗ ನಾನು ಏನೂ ಹೇಳಲಾರೆನವ್ವ ಬೊಂಬಾಯಿಗೆ ಹೋಗಿ ಕಾಗದ ಬರೆಯುತ್ತೇನೆ. ಯೋಚಿಸಲು ಸ್ವಲ್ಪ ಕಾಲಾವಕಾಶಬೇಕು. ಈ ವಿಷಯದಲ್ಲಿ ಒಂದೇ ಬಾರಿಗೆ ಏನನ್ನು ನಿರ್ಧರಿಸಿ ಹೇಳುವಂತಿಲ್ಲ' ಎಂದ ಶ್ರೀಧರ.

— ೫ —

"ಶ್ರೀಧರನಿಂದ ಕಾಗದ ಬಂತೋ ರಾಮು' ಎಂದು ಪ್ರಶ್ನಿಸಿದಳು ಕೇಶವ ಮೂರ್ತಿ.

'ಅವನ ಕಾಗದ ಬಂದರಷ್ಟು ಬಿಟ್ಟರಷ್ಟು ಮೂರ್ತಿ. ನೆಮ್ಮದಿ ಎಂದಿಗೂ ನನ್ನ ಮಾತು ತೆಗೆದು ಹಾಕುವುದಿಲ್ಲ. ಒಪ್ಪಿಕೊಂಡಿದ್ದೇನೆ ಎಂದು ಬರೆಯುವುದಕ್ಕೆ ಅವನಿಗೆ ನಾಚಿಕೆ. ನಿನ್ನಂತಹ ಮಾವ, ಚಂಚಲಾಳಂತಹ ಹೆಂಡತಿ ಸಿಗ ಕಷ್ಟತ್ತಾರೆ ಎಂದರೆ ಬೇಡ ಎಂದು ಹೇಳುವಂತಹ ಮೂರ್ಖ ಅಲ್ಲ ಕಣಾಯ್ಯ. ನನ್ನ ಮಗ. ನೀನು ಚಿಂತೆ ಇಲ್ಲದೆ ಮದುವೆ ಏರ್ಪಾಡು ಮಾಡಿಕೋ" ಎಂದು ಗೆಳೆಯನಿಗೆ ರಾಮಣ್ಣ ಪೂರ್ಣ ಭರವಸೆ ನೀಡಿದರು.

ಕೇಶವ ಮೂರ್ತಿ ಗೆಳೆಯನ ಮಾತಿನಿಂದ ಹಿಗ್ಗಿದರು.

o o o o

'ಕಮಲ ಶ್ರೀಧರ ಕಾಗದ ಬರೆದಿದೇನವ್ವ" ಎಂದು ಹಂಗಿಯನ್ನು ಪ್ರಶ್ನಿಸಿದರು ಅವಳ ಅಣ್ಣ ರಘು.

"ಅವನ ಕಾಗದ ಬರೆಯಲ್ಲ ಕಣಣ್ಣ'. ಆದರೆ ಮೂರ್ತಿಯಮ್ಮತಿ ಲಕ್ಷ್ಮಣನನ್ನು ತ್ತಾಳಲ್ಲ ಹಾಗೆ ಅವನು ಒಪ್ಪಿಕೊಂಡಿದ್ದಾನೆ. ಲಕ್ಷ್ಮಿಗು ಕೈಹಿಡಿಯುವುದಕ್ಕೆ ಅವನು ಸುಮ್ಮ ಮಾಡಿದ್ದ. ಸಂಕೋಚವಿಲ್ಲದೆ ಎಲ್ಲ ವಿಷಯಗಳನ್ನು ಹೇಳಿದ್ದೇನಣ್ಣ. ಈ ಕಾರಣದಿಂದಲಾದರೂ ತೌರಿನ ಸಂಬಂಧ ಉಳಿಯಲಿ ಅನ್ನುವ ಆಸೆ ನನಗೂ ಇದೆ." ಎಂದರು ಕಮಲಮ್ಮ.

'ಎಲ್ಲ ಸರಿಯಮ್ಮ ಬಡವನ ವ ದಳನ್ನು ಶ್ರೀಧರ ಒಪ್ಪುತ್ತಾನೇನವ್ವ?"

'ಅಣ್ಣ ನೀನು ಹಾಗೆಲ್ಲ ಹೇಳಬಾರದು. ಒಡವರು, ಶ್ರೀಮಂತರು ಯಾರ ? ಶ್ರೀಧರನಿಗೆ ಎಂದಿಗೂ ಅಂತಹ ಕೆಟ್ಟ ಬುದ್ಧಿ ಬರುವುದಿಲ್ಲ. ಶ್ರೀಧರ ಒಪ್ಪಿ ಕಾಗದ ಬರೆಯದೆ ಇದ್ದರೂ ಅವನು ಲಕ್ಷ್ಮೀನ ಖಂಡಿತ ಒಪ್ಪಿದ್ದಾನೆ. ನೀನೇನು ಯೋಚನೆ ಇಡ ಬೇಡ" ಎಂದರು ಕಮಲಮ್ಮ.

"ನಿನ್ನ ಗಂಡ ಚಂಚಲಾನೇ ನನ್ನ ಮನೆ ಸೊಸೆ ಎಂದು ಹೇಳಿಕೊಂಡಿದ್ದ ಹಂತೆ, ಶ್ರೀಧರ ಲಕ್ಷ್ಮಿ ಮದುವೆ ಕೆಡೆಸುಲು ಸಾಧ್ಯವಿಲ್ಲ ಎಂದು ಶಪಥ ಮಾಡಿದ್ದಾನಂತೆ.'

'ಇಲ್ಲದ ಯೋಚನೆ ಕಟ್ಟಿಕೊಂಡು ಕೊರಗ ಬೇಡವಣ್ಣ, ನಿಶ್ಚಿಂತೆಯಿಂದ ಊರಿಗೆ ಹೋಗು. ಶ್ರೀಧರ ನಿನಗೆ ಕಾಗದ ಬರೆಯುವಂತೆ ಏರ್ಪಾಟು ಮಾಡುತ್ತೇನೆ' ಎಂದು ರೋಷದಿಂದ ನುಡಿದರು ಕಮಲಮ್ಮ.

— ೬ —

"ಅಂತೂ ನೀವು ನಿಮ್ಮ ಹಟ ಬಿಡುವುದಿಲ್ಲ ಅನ್ನಿ"

'ನನಗೆ ವಿವೇಕ ಹೇಳ್ತೀಯಲ್ಲ ನೀನೆ ಹಟ ಏಕೆ ಬಿಡಬಾರದು"

'ನಾನು ಶ್ರೀಧರನ ಒಳ್ಳೆಯದಕ್ಕೆ ತಾನೇ ಹೇಳುತ್ತಿರೋದು'

'ಶ್ರೀಧರ ನಿನಗೆ ಒಬ್ಬಳಿಗೇ ಅಲ್ಲ ಕಣಣ್ಣ ಮಗ. ಅವನ ನನಗೂ ಮಗ. ಅವನ ಸುಖ ದುಃಖ ನಾನು ಯೋಚಿಸಿದ್ದೇನೆ... ನಿನಗೆಷ್ಟು ಹಳ್ಳಿ, ಕೋಪ ಇರಬೇಕಾದರೆ ಏನೂ ಹೊಸ್ತ ಗಂಡಸು ನನಗೆಷ್ಟು'

"ನಿಮಗೆ ಕರುಣೆ, ಅನುಕಂಪ ಸ್ವಲ್ಪವೂ ಇಲ್ಲ'

'ನೀನು ನನಗೆ ಉಪದೇಶ ಮಾಡಬೇಕಾದ ಅಗತ್ಯವಿಲ್ಲ'

"ನೀವು ನನ್ನ ಮಾತು ಕೇಳಿದ್ದರೆ ಹೀಗೇಕೆ ಆಗ ತ್ತಿತ್ತು. ಲಕ್ಷ್ಮಿನ ಶ್ರೀಧರನಿಗೆ ಚಂದ ಕೊಂಡು ಮದುವೆ ಮಾಡಿದರೆ ನಿಮ್ಮ ಗಂಟೇನ ಜೋಗುತ್ತದೆ?"

"ಮೂರ್ತಿ ಪನ್ನ ಸ್ನೇಹಿತ ಅವನಿಗೆ ಮಾತು ಕೊಟ್ಟಿದ್ದೇನೆ'

'ನಾನು ಅತ್ತೆಯಿಗೆ ಮಾತು ಕೊಟ್ಟಿದ್ದೇನೆ. ಶ್ರೀಧರ ಲಕ್ಷ್ಮಿ ಮದುವೆ ಅದರೆ ತೌರು ಮನೆಯ ಸಂಬಂಧ ಉಳಿಯುತ್ತದೆ...ಲಕ್ಷ್ಮಿ ಬಂಗಾರದಂತಹ ಹುಡುಗಿ"

"ಚಂಚಲಾ ಏನು ಕುರುಡಿಯೇ ಲಕ್ಷ್ಮಣವಾಗಿಲ್ಲೆ ಶ್ರೀಧರ ಚಂಚಲಾ ಮದುವೆ ಆಗ್ಲಿ ಬೇಕಾದ್ರೆ ಲಕ್ಷ್ಮಿಗೆ ಬೇರೆ ಗಂಡು ಗೊತ್ತು ಮಾಡಿ ಮದುವೆ ಮಾಡೋಣ"

"ನಿಮ್ಮ ಕಣ್ಣಾ-ಭೂತಿ ಏನೂ ಬೇಡ ....ಶ್ರೀಧರ ಲಕ್ಷ್ಮಿನ ಒಪ್ಪಿ ಕೊಳ್ಳುತ್ತಾನೆ ಮದುವೆ ಆದು ಯೋಚನೆ ನಡೆಯುವುದಿಲ್ಲ ನೋಡ ತ್ತೀನೆ'

ಶ್ರೀಧರಚಂಚಲಾನ ಯೋಚನೆ ಮದುವೆ ಮಾಡಿಕೊಳ್ಳುವುದಿಲ್ಲ ನಾನು ಹೋಡಿ ಕೊಳ್ಳುತ್ತೇನೆ.....ನೀನು ಅನಾವಶ್ಯಕವಾಗಿ ರೇಗಿಸುತ್ತಿದ್ದೀಯ....'

"ನಿಮ್ಮೆಲ್ಲರಿಗೇ ಅಲ್ಲ ಕೋಪ ಬರೋದು ನನಗೂ ಬರುತ್ತದೆ' ಎಂದು ಕೋಪದಿಂದಲೇ ನುಡಿದರು ಕಮಲಮ್ಮ. ರಾಮಣ್ಣ ದಾಪುಗಾಲು ಹಾಕುತ್ತಾ ಹೊರಟು ಹೋದರು.

o o o o

ಎರಡು ವಾರಗಳ ತರುವಾಯ ಶ್ರೀಧರ ಬೊಂಬಾಯಿಯಿಂದ ಪತ್ರ ಬರೆದ.

—"ಅಪ್ಪ ಅಮ್ಮ ನಿಮ್ಮಿಬ್ಬರ ಕಲಹ ನೆಳನ್ನು ಪರಿಹರಿಸಿ ನಿಮ್ಮನ್ನು ಬೇಸರ ಪಡಿಸಲಾರೆ. ಇಬ್ಬರ ಸಲಹೆಯನ್ನು ಒಪ್ಪಲು ಸಾಧ್ಯವಿಲ್ಲ. ಒಬ್ಬರ ಮಾತನ್ನು ಒಪ್ಪಿದರೆ ಇನ್ನೊಬ್ಬರಿಗೆ ಬೇಸರ.

ರಜನಿ ನನ್ನ ಗೆಳೆಯ ಪ್ರಾಣಕ್ಕಿಂತ ಹೆಚ್ಚು. ನಾನು ಮತ್ತು ರಜನಿ ಪರಸ್ಪರ ಒಪ್ಪಿದ್ದೇವೆ. ವಿವಾಹವಾಗಲು ನಿರ್ಧರಿಸಿದ್ದೇನೆ. ಮುಂದಿನ ವಾರ ನಾನು ಮತ್ತು ರಜನಿ ನಿಮ್ಮಲ್ಲಿಗೆ ಬರುತ್ತೇವೆ. ಈ ನಿರ್ಧಾರವನ್ನು ಯಾವ ಕಾರಣದಿಂದಲೂ ಬದಲಿಸಲಾರೆ."

ಸ್ತ್ರೀ ಪುರುಷರೆಲ್ಲರ ನಾಜೂಕಿಗೆ ಅರ್ಹವಾದ
"ನವಜೀವನ ಕಲ್ಪಂ" (ಲಿ.)
(ಆಯುರ್ವೇದಿಯ ಟಾನಿಕ್)



"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CL-4.17-4/65-66 dated 28-4-1966.

NAVAYUGA 20—6—1968
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃಷಿಕರಂಗ

ನೀರು ಪೂರೈಕೆಗೆ ಹೊಸ ಯೋಜನೆ

ಕಳೆದ ಇಪ್ಪತ್ತು ವರ್ಷಗಳಿಂದಲೂ ಪಶ್ಚಿಮ ವಿಜ್ಞಾನಿಗಳು, ಇಂಜನಿಯರುಗಳು, ಯೋಜಕರುಗಳು ದಿನೇ ದಿನೇ ಏರುತ್ತಿರುವ ಜನಸಂಖ್ಯೆಗಾಗಿ, ಎಳೆ-ನೀರು ಹುಟ್ಟುವಳಗಳ ಅಧಿಕ ಉತ್ಪಾದನೆ, ಕಾರಖಾನೆಗಳ ಸ್ಥಾಪನೆ ಮುಂತಾದುವುಗಳ ಕಡೆ ಹೆಚ್ಚು ಗಮನವೀಯುತ್ತಿದ್ದಾರೆ. ಈ ಗುರಿಯ ಸಾಧನೆಗಾಗಿ ನದಿ ಕೊಳ್ಳಗಳ ಯೋಜನೆಗಳ ಸ್ಥಾಪನೆಗಾಗಿ, ಕಾಲೆ, ಕೆರೆ, ಬಾವಿಗಳನ್ನು ಕಟ್ಟುವ ಸಲುವಾಗಿ ಹೆಚ್ಚು ಕ್ಷೇತ್ರವನ್ನು ನೀರಾವರಿಗೆ ಒಳಪಡಿಸುವ ಉದ್ದೇಶದಿಂದ ಭೂಜಲ ಮೂಲಗಳನ್ನು ಬಳಸಿಕೊಳ್ಳಲು ಬಹಳ ಹಣ ಖರ್ಚುಮಾಡಲಾಗುತ್ತಿದೆ. ಪರಿಣಾಮವಾಗಿ ೫ ಕೋಟಿ ಎಕರೆಗಳಿದ್ದದ್ದು ಈಗ ೯ ಕೋಟಿ ಎಕರೆಗಳಿಗೆ ವಿಸ್ತರಿಸಲಾಗಿದೆ. ಆದರೆ ನಿರೀಕ್ಷಿಸಿದಷ್ಟು ನೀರಾವರಿಯ ಎಕರೆವಾರು ಉತ್ಪತ್ತಿ ಹೆಚ್ಚಲಿಲ್ಲ. ಬಹುಶಃ ನೀರಿನ ಪೂರೈಕೆಯಿಂದ ಮಾತ್ರ ಅಪೇಕ್ಷಿತ ಗುರಿ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಭೂಮಿಯ ಸಾರಗಳಿಗೆ ನಷ್ಟವಾಗದಂತೆ ಭೂಮಿಗೆ ನೀರು ಮತ್ತು ಇತರ ವಸ್ತುಗಳನ್ನು ಸರಿಯಾದ ಪ್ರಮಾಣದಲ್ಲಿ ಸರಿಯಾದ ಕಾಲಕ್ಕೆ ಒದಗಿಸುವಂತಾದರೆ ಮಾತ್ರ ಹುಟ್ಟುವಳಿಯ ಪ್ರಮಾಣವೂ ಹೆಚ್ಚುವುದು. ಹೆಚ್ಚು ಇಳುವರಿ ಕೊಡುವ ಹೊಸ ತಳಿಗಳಿಗೆ ಹೆಚ್ಚು ಗೊಬ್ಬರ ಹಾಕಿದರೆ, ಅದಕ್ಕೆ ತಕ್ಕಂತೆ ಪ್ರತಿಫಲ ನೀಡುವುವು. ಆದ್ದರಿಂದ ನಾವು ಹೊಸ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಬೇಕಾಗಿದೆ. ನೀರಾವರಿ ಸೌಲಭ್ಯವಿರುವ ಎಡೆಗಳಲ್ಲೆಲ್ಲಾ ಹೆಚ್ಚು ಸಲ ಸೈರು ಬೆಳೆಯುವ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ಇದುವಷ್ಟು ನೀರನ್ನೇ ಬೋಲು ಮಾಡದೆ ಹೆಚ್ಚಿನ ಬೆಳೆಗಳ ಉಪಯೋಗಕ್ಕಾಗಿ ಬಳಸಬೇಕು.

ಇತ್ತೀಚೆಗೆ ಭಾರತಕ್ಕೆ ಭೇಟಿಯಿತ್ತಿದ್ದ ಅಮೆರಿಕಾ ಸಂಶೋಧನಾ ವಿಜ್ಞಾನಿಗಳು, ದೇಶದ ಅನೇಕ ಭಾಗಗಳಲ್ಲಿ ನೀರಿನ ಸಂಶೋಧನೆಗೆ ಸಂಬಂಧಿಸಿದ ವಿಷಯವನ್ನು ಅಧ್ಯಯನ ಮಾಡಿ ನೀರು ವ್ಯವಸ್ಥೆ ಸಂಶೋಧನೆಯನ್ನು ಬಲಗೊಳಿಸುವ ಸಲುವಾಗಿ ನೀರನ್ನು ಬಳಸುವುದು, ಒಣಗಿಸುವುದು; ವಾಹನ ಸೌಕರ್ಯ, ನೀರಾವರಿಯ ಕಸ,ಳಿಗೆ ನಿಯಂತ್ರಣ ವಿತರಣೆ, ನಾಲೆಗಳ ವ್ಯವಸ್ಥೆ, ಯಂತ್ರಗಳ ಅವಶ್ಯಕತೆ, ಭೂನೀರಿನ ಶಾಸ್ತ್ರ ಇವೇ ಮೊದಲಾಗಿ ಸಂಬಂಧಿಸಿದ ಅನೇಕ ಸಮಸ್ಯೆಗಳಿಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಶಿಫಾರಸು ಮಾಡಿದ್ದಾರೆ.

ಭಾರತೀಯ ಕೃಷಿ ಸಂಶೋಧನಾ ಮಂಡಳಿಯವರು, ಈ ಸಂಶೋಧನೆಗಳ ಬಗ್ಗೆ ಅನೇಕ ಯೋಜನೆಗಳನ್ನು ಕೈಗೊಂಡು ಈಗಾಗಲೇ ಆರಂಭಿಸಿದ್ದಾರೆ.

ಕಳೆದ ಮೂರು ಪಂಚವಾರ್ಷಿಕ ಯೋಜನೆಗಳ ಕಾಲಾವಧಿಯಲ್ಲಿ, ಅನೇಕ ಫೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಆದರೆ ಈ ಯೋಜನೆಗಳಿಂದ ಲಭ್ಯವಾಗುವ ನೀರಿನ ಎಲ್ಲಾ ಪ್ರಮಾಣದ ಉಪಯೋಗವಾಗುತ್ತಿಲ್ಲ. ಹಾಗೂ ನಿರೀಕ್ಷಿಸಿದಷ್ಟು ಬೆಳೆಯಾಗುತ್ತಿಲ್ಲ. ಈ ಅಸಮರ್ಥತೆಗೆ ಕಾರಣ ಮುಖ್ಯವಾಗಿ ಪದಿಕೊಳ್ಳದ ಯೋಜನೆಗಳಲ್ಲಿ ತಕ್ಕ ಪ್ರಮಾಣದ ಫೀರಿನ ವ್ಯವಸ್ಥೆಯ ಪದ್ಧತಿಗಳ ಬಗ್ಗೆ ಇರುವ ಜ್ಞಾನದ ಕೊರತೆ. ಇದನ್ನರಿತ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಭಾಕ್ರಾ, ತುಂಗಭದ್ರಾ ಮತ್ತು ಹಿರಾಕುಡ್, ಯೋಜನೆಗಳಲ್ಲಿಯ ಕ್ಷೇತ್ರಗಳಲ್ಲಿನ ಮೂರು ಕೇಂದ್ರಗಳಲ್ಲಿ (ಹಿಸ್ಸಾರ, ಸಿರಗ.ಪ್ಪಾ ಮತ್ತು ಅತ್ಯಿಬಿರಾಗಳಲ್ಲಿ) ಸಹಕಾರದೊಂದಿಗೆ ಸಂಯುಕ್ತ ಸಂಶೋಧನಾ ಯೋಜನೆಯೊಂದನ್ನು ಆರಂಭಿಸಿದೆ. ಇದರ ಗುರಿ ಮಣ್ಣು ಹಾಗೂ ಬೆಳೆಯ ಮೇಲೆ ನೀರಾವರಿಯ ಪರಿಣಾಮ ಮತ್ತು ನೀರಿನ ಸಮರ್ಥ ಉಪಯೋಗದ ಸಲುವಾಗಿ ಸೂಕ್ತ ತಾಂತ್ರಿಕತೆಗಳನ್ನು ಅಭಿವೃದ್ಧಿಗೊಳಿಸುವುದು.

ನೀರಾವರಿಯ ಮಂಜೂರಿ ಪ್ರದೇಶಗಳ ಹತ್ತು ಬೇರೆ ಬೇರೆ ಕೇಂದ್ರಗಳಲ್ಲಿ ಹೆಚ್ಚು ಅನ್ವಯಕರವಾದ ನಮೂನೆಯ ಸಂಶೋಧನೆಯನ್ನು ಕೈಗೊಳ್ಳಲಾಗುವುದು. ಇದರಲ್ಲಿ—ನೀರಾವರಿ ಮಂಜೂರಿ ಪ್ರದೇಶಗಳಲ್ಲಿ ನೀರಾವರಿ ಸದ್ಧತಿಗಳನ್ನು, ಭೂಮಿ ತಯಾರಿಕೆ ಮತ್ತು ಬೆಳೆ ಬಿತ್ತನೆಯ ಮಾದರಿಗಳನ್ನು ಮತ್ತು ವಿವಿಧ ಕೃಷಿ ಹವಾಮಾನ ಹಾಗೂ ಮಣ್ಣಿನ ವಿಭಾಗಗಳ ಸಲುವಾಗಿ ಸೂಕ್ತ ಕೃಷಿ ಪದ್ಧತಿಗಳನ್ನು ಅಭಿವೃದ್ಧಿಗೊಳಿಸಲಾಗುವುದು.

ಮಣ್ಣಿನಲ್ಲಿ ಉಪ್ಪಿನಾಂಶ ಹೆಚ್ಚಾಗಿರುವ ಸಮಸ್ಯೆಯ ಬಗ್ಗೆ ಸಂಶೋಧನೆ ಪಡೆಸಲು ಜಲ ಪ್ರವಾಹದಿಂದುಟಾದ ನೆರೆಯ ಪ್ರದೇಶಗಳಲ್ಲಿ ಒಂದು ಕೇಂದ್ರ ಪ್ರಯೋಗಾಲಯವನ್ನು ಸ್ಥಾಪಿಸಲಾಗುವುದು. ಈ ಕೇಂದ್ರವು ಮಣ್ಣು ಉಪ್ಪಾಗುವ ಸಮಸ್ಯೆಗಳ, ಫೀರು ಬಸಿಯುವ ನಾಲೆಗಳ ಮತ್ತು ವ್ಯವಸ್ಥಾಪಕ ಪದ್ಧತಿಗಳ ವಿವಿಧ ಅಂಗಗಳ ಮೇಲೆ ಮೂಲ ಭೂತ ಹಾಗೂ ಪ್ರಾತ್ಯಕ್ಷಿಕ ಸಂಶೋಧನೆಯನ್ನು ಕೈಗೊಳ್ಳಲಾಗುವುದು, ಜಲ ಪ್ರವಾಹದಿಂದುಂಟಾದ ಉಪ್ಪು ಹಾಗೂ ಕರಾವಳಿಯ ಉಪ್ಪಿನ ಮಣ್ಣಿನ ಪ್ರದೇಶಗಳಲ್ಲಿ ಮೂರು ವಿಭಾಗ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯಿದೆ.

ಈಗಾಗಲೇ ವಿವಿಧ ಕೃಷಿ ಹಾಗೂ ಇಂಜನಿಯರಿಂಗ್ ಸಂಸ್ಥೆಗಳು ಫೀರಿನ ವ್ಯವಸ್ಥೆಯ ತಂತ್ರಗಳ ಅಭಿವೃದ್ಧಿಯ ಸಲುವಾಗಿ ಅಸಂಘಟಿತವಾದ ಅನೇಕ ಯತ್ನಗಳನ್ನು ಮಾಡಿವೆ. ಇವುಗಳು ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡುವುದರ ಜೊತೆಗೆ ಮಣ್ಣಿನ ವಿಜ್ಞಾನಕ್ಕೆ ಸಂಬಂಧಿಸಿದ ಮುಖ್ಯವಾದ ಸಮಸ್ಯೆಗಳಲ್ಲಿಯೂ ಸಂಶೋಧನೆ ತೀವ್ರಗೊಳಿಸಲಿವೆ.

ಈ ಸಂಶೋಧನೆಗಳ ಫಲವಾಗಿ ಬೆಳೆಯ ಉತ್ಪಾದನೆಯಲ್ಲಿ ಉಂಟಾಗಿರುವ ಅಡ್ಡಿಗಳು ಫಲಾರಹಿತವಾಗಿ, ಅತ್ಯಂತ ಮಿತವ್ಯಯದಲ್ಲಿ ಹಾಗೂ ಸಮರ್ಥವಾದ ರೀತಿಯಲ್ಲಿ ನೀರಿನ ವ್ಯವಸ್ಥೆಯಾಗುವ ಸಾಧನಗಳು ಹಾಗೂ ಮಾರ್ಗಗಳನ್ನು ಕಂಡು ಹಿಡಿಯುವಂತಾಗುವ ನಿರೀಕ್ಷೆಯಿದೆ.

ಕೇವಲ ನೀರಾವರಿಯ ಅವ ಕೂಲತೆಯಿರುವ ಪ್ರದೇಶಗಳಲ್ಲಿ ಅಲ್ಲದೆ, ಮಳೆ ನೀರಿನ ಪ್ರದೇಶಗಳಲ್ಲಿಯೂ ಮಣ್ಣು ಹಾಗೂ ನೀರಿನ ಸಂರಕ್ಷಣೆಗೆ ಉತ್ತಮ ತಂತ್ರದ ಸಂಧಾನೆಯ ಯೋಜನೆಗಳನ್ನು ಇರಿಸಿಕೊಳ್ಳಲಾಗಿದೆ. ಏಕೆಂದರೆ ಈ ಪ್ರದೇಶಗಳಲ್ಲೂ ಅಧಿಕ ಉತ್ಪಾದನೆಯ ಗುರಿ ಸಾಧಿಸುವುದು ಅವಶ್ಯ. ಈ ಬಗ್ಗೆ ಭಾರತೀಯ ಕೃಷಿ ಸಂಶೋಧನಾ—ಪರಿಷತ್ತು ಇತ್ತೀಚೆಗೆ ಮಣ್ಣು ಹಾಗೂ ನೀರು ಸಂರಕ್ಷಣೆಯ ತರಬೇತಿ ಮತ್ತು ಪ್ರಶ್ನೆಪೆಕೆ ಪಡೆಸುವ ಕೇಂದ್ರಗಳನ್ನು ತೆರೆದಿದ್ದು, ಮಣ್ಣಿನ ಅತ್ಯಲ್ಪ ನಷ್ಟದೊಂದಿಗೆ ಉತ್ಪಾದನೆ ಹೆಚ್ಚಿಸುವಲ್ಲಿ ಮಳೆ ನೀರಿನಪಾತ್ರ್ಯವನ್ನು ಸಂಧಾರಿಸುವುದಕ್ಕಾಗಿ ಮಾರ್ಗಗಳನ್ನು ಕಂಡು ಹಿಡಿಯಲು ಈ ಕೇಂದ್ರಗಳಲ್ಲಿ ಕಾರ್ಯ ಸಂಘಟನೆಯನ್ನು ಯೋಜಿಸಲಾಗುತ್ತಿದೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ!

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು ಡಾ॥ ಕೊರಡ್ಲಲ್ ವೆಂಕಟ್ರಾವ್, ಎಲ್. ಎ.ಎಸ್.,

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಸ್. ಎ. ಸಿ. ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡಸರು, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಸುಲಭದಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿ ಗೃಹಪೈದ್ಯ. ಹೊರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪ್ರ. ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಸಿವಿಲ್ ಜಡ್ಜರ
ಕೋರ್ಟಿನಲ್ಲಿ
O.S. No. 34/67

ಯೆಜ್ಜ ಶೆಟ್ಟಿ ಕೊಡಾ—ವಾದಿರು,
ಮತ್ತು
ಶೀನ ಶೆಟ್ಟಿ ಕೊಡಾ—ಪ್ರತಿವಾದಿರು,
ಯವರೊಳಗೆ,

ಮೇಲಿನ ದಾವೆಯ ಪ್ರತಿವಾದಿರು,
6. ಕೃಷ್ಣಯ್ಯ ಯಾನೆ ಅಪ್ಪು ಶೆಟ್ಟಿ-ವೀರಣ್ಣ ಶೆಟ್ಟಿ ಮಗ, 10. ವಿಠಲ ಶೆಟ್ಟಿ-ಲೋಕಯ್ಯ ಶೆಟ್ಟಿ ಮಗ, 29. ಶಾರದಾ ಶೆಟ್ಟಿ- ಪೂವ ಶೆಟ್ಟಿ ಮಗಳು —

ಉಡುಪಿ ತಾಲ್ಲೂಕು ಕಾಂಗಾಳ ಗ್ರಾಮದಲ್ಲಿರುವವರು.

ಮೇಲಿನ ಪ್ರತಿವಾದಿರಿಗೆ ಯಿ ಮೂಲ್ಯ ತಿಳಿಯಪಡಿಸುವುದೇನೆಂದರೆ: —

ವಾದಿರು ಪ್ಲೇಂಟಿನ A ತೆಡ್ಯೂಲಿನಲ್ಲಿ, ಕಾಣಿಸಿದ ಆಸ್ತಿಗಳಲ್ಲಿ ಹಿಸೆ ವಗೈರೆ ಕೇಳಿ ಮೇಲಿನ ದಾವೆಯನ್ನು ಮಾಡಿರುತ್ತಿರಾಗಿಯೂ ಸದ್ರಿ ದಾವೆಯು ನಿಮ್ಮ ಹಾಜ್ರಾತಿಯ ಬಗ್ಗೆ ಮೇಲಿನ ಕೋರ್ಟಿನಲ್ಲಿ ಪರಿಕ್ಷೆ 6.7.68ಕ್ಕೆ ಸರಿಯಾಗಿ ಯಿಟ್ಟಿರುತ್ತಾಗಿಯೂ ಸದ್ರಿದಾವೆಯಲ್ಲಿ ನೀವು ಸಾಧಿಸುವಂತಿದ್ದು ಯಿದ್ದಲ್ಲಿ ಸದ್ರಿ ದಿವಸ ಹನಲು 10 ಗಂಟೆಗೆ ಮೇಲಿನ ಕೋರ್ಟ್ ಮುಂದೆ ಹಾಜ್ರಾಗಿ ಜಾಬ್ತೀರು ಮಾಡಿಕೊಳ್ಳತಕ್ಕದ್ದಾಂಥಲ್ಲಿ, ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನ ಮಾಡಲ್ಪಡುವುದು ಎಂತಲೂ ಸಕಾರ ಯಿ ಮೂಲ್ಯ ನಿಮಗೆ ತಿಳಿಸೋಣಾಗುತ್ತದೆ.

(By order of the Court)
B. Ananda Shettiy
Advocate for Plaintiff
Udipi.,S. K. Dated, 6-6.68.

Edited, Printed & Published by K. H. Shetty at the Navayuga Press, Udipi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



27—6—1968

೨೦
ಪೈಸೆ

ಕಥಾ ಪ್ರಪಂಚ

ಉಭಯ ಸಂಕಟ

ಬರೆದವರು.

ಶ್ರೀ ಕೆ ಸಚ್ಚಿದಾನಂದ ಉಡುಪ

ನಮ್ಮ ಎದುರುಗಡೆಯ ಮನೆಯ ಸ್ತ್ರೀ ಯೋರ್ವಳು ಸದಾ ಸಾಯಂಕಾಲ ನಾಲ್ಕು ಗಂಟೆಗೆ ಸರಿಯಾಗಿ ರಿಕ್ಷಾದಲ್ಲಿ ಎಲ್ಲಿಗೋ ಹೊರಡುವಳು. ಒಂಬತ್ತು-ಹತ್ತು ವರ್ಷ ಹರೆಯದ ಮುಗ್ಧ ಬಾಲಕನ ಹೊರತು ಬೇರ್ಯಾರೂ ಅವಳ ಜೊತೆಯಲ್ಲಿಲ್ಲ. ಪ್ರತಿನಿತ್ಯವೂ ಸಮಯಕ್ಕೆ ಸರಿಯಾಗಿ, "ಟಿನ್ ಟಿನ್...." ಎಂದು ಶಬ್ದವಾಡಿಸುತ್ತಾ ರಿಕ್ಷಾ ಬಂದು ಮನೆಯ ಎದುರು ಬದಿಯಲ್ಲಿ ನಿಲ್ಲುವುದು. ಅವಳ ರಿಕ್ಷಾ—ಯಾತ್ರೆಯನ್ನು ನಾನು ಸದಾ ಇಣಿಕುತ್ತಿದ್ದೇನೆ.

ಅಂದು ಸಾಯಂಕಾಲ ನಾನು ಮನೆಯ ಜಗಲಿಯಲ್ಲಿರುವಾಗ ರಿಕ್ಷಾ "ಟಿನ್ ಟಿನ್" ಎಂದು ಶಬ್ದವಾಡಿಸುತ್ತಾ ಮನೆಯ ಎದುರುಗಡೆಗೆ ಬಂದು ನಿಂತಿತು. ತಿರುಗಿ ನೋಡಿದೆ. ಮೈದುವಾಗಿ ಮಂಗಳ್ಳಗುತ್ತಾ "ಶ್ರೀ....ಫೀವಿರೀಪುದುಲ ಮನೆಯಲ್ಲಿ ಆಲ್ಲವೇ? ಶಾಮ ಫಿಮ್ಮನ್ನು ಸದಾ ನೋಡುತ್ತಿದ್ದೇನೆ, ಅದಕ್ಕೆ ಫಿಮ್ಮಲ್ಲಿ ಶುಶು ಕೇಳಿದುದು' ಎಂದು ನನ್ನಲ್ಲಿ ಅಂದಳು.

'ಹಾ" ಎಂದು ನಾನು ಸಂಕ್ಷಿಪ್ತವಾಗಿ ನುಡಿದೆ.

"ಸ್ಪೆಷ್ಯಲ್ ಬೈಲ್ ಬರುವ ಹೊತ್ತಾಯಿತೇ?" ಎಂದು ನನ್ನನ್ನು ಕೇಳುತ್ತಿರುವಾಗ ನನ್ನ ಮುಖದ ಮೇಲೆ "ತಿಳಿದಿಲ್ಲ" ಎನ್ನುವ ಭಾವನೆ ಛಾಪಿಸಿದಾಗ ಅವಳು ಮತ್ತೊಮ್ಮೆ ತನ್ನ ಗಡಿಯಾರದ ಸಮಯದ ಕಡೆಗೆ ಅಲಕ್ಷಿಸದೆ ನನ್ನ ಗಡಿಯಾರದ ಕಡೆಗೆ ದೃಷ್ಟಿ ಹಾಯಿಸಿದಳು. ನಾನು ಅವಾಕ್ಕಾಗುವ ತೆರದಲ್ಲಿ ಸ್ವಸ್ಥವಾಗಿ ನಿಂತುಬಿಟ್ಟೆ. ನನ್ನ ಉತ್ತರದ ನಿರೀಕ್ಷೆಯ ಪ್ರತೀಕ್ಷೆಯ ಅವಕಾಶದಲ್ಲಿರಲು ಸಾಧ್ಯವಾಗಿತ್ತೋ ಏನೋ? ಅವಳು ರಿಕ್ಷಾದ ಯಜಮಾನನಲ್ಲಿ "ಸಮಯವಾಯಿತು! ಗಾಡಿ ಬೇಗ ನಡೀಲಿ ರೈಲು ಸ್ಟೇಷನ್‌ಗೆ ತಲುಪಿದೆಯೋ ಏನೋ" ಎಂದಳು. ರಿಕ್ಷಾವಾಲಾ ಗಾಡಿಯನ್ನು ಮತ್ತೂ ರಭಸವಾಗಿ ಮುಂದೆ ಚಲಾಯಿಸಿದ.

ಅವಳು ಚಿನ್ನಾಭರಣಗಳನ್ನು ಅಧಿಕವಾಗಿ ಧರಿಸಿಲ್ಲಿ. ಆದರೆ ಅವಳ ಕುತ್ತಿಗೆಯಲ್ಲೊಂದು ಸುಂದರ 'ನೆಕ್ಲೇಸ್' ದೃಷ್ಟಿಯನ್ನು ಆಕರ್ಷಿಸುವಂತೆ ಮಾಡುತ್ತಿತ್ತು. ಪ್ರತಿದಿನವೂ ರೇಶ್ಮೆಯ ಸೀರೆ ವಣ್ಣದ ಸೀರೆಯನ್ನು ಉಡುತ್ತಿದ್ದಳು. ಈ ಸೀರೆಯ ಮೇಲೊಂದು ಬಂಗಾರದ ಹೂಗೊಂಚಲನ್ನು ನೇತಾಡಿಸುತ್ತಿದ್ದರು. ಹಣೆಯಲ್ಲೊಂದು 'ಸಿಂಧೂರ'ದ ಬಿಂದು. ಕೈಯಲ್ಲಿರುವ ಜೇಬಿನಲ್ಲಿ ಒಂದಿಷ್ಟು ಪುಡಿಕಾಸು—ಅಂತೂ ಒಂದು ಕ್ಷಣಕ್ಕೆ ಸಾಕ್ಷಾತ್ ದೇವತಾ ರೂಪಿಯೇ ಗೋಚರಿಸುವಂತೆ ಗೋಚರಿಸುವಳು.

ಇದೇ ರೀತಿಯ ಘಟನೆ ಮತ್ತೊಮ್ಮೆ ನಡೆಯಿತು. ಅಳಳು ಬಾಗಿಲು ತೆರೆದು ಹೊರಬರುತ್ತಿರುವಾಗ ನಾನು ಮನೆಯ ಹೊರಗಡೆ ನಿಂತಿದ್ದೆ. ನನ್ನನ್ನು ನೋಡಿ ಕ್ಷೇಮ ಸಮಾಚಾರ ಕೇಳಿದಳು. ಮತ್ತೊಮ್ಮೆ ಬೇಗನೆ ರಿಕ್ಷಾದಲ್ಲಿ ತನ್ನ ಹುಡುಗನ ಜೊತೆಗೆ ಕುಳಿತಳು. ರಿಕ್ಷಾದವನು ಕುದುರೆಯ ಶರಾಬು ಅಂಗಡಿಯ ಕಡೆ ಧಾವಿಸುವ ರೀತಿಯಲ್ಲಿ— ರೇಸಿನಲ್ಲಿ ಭಾಗವಹಿಸಿದ ಓಟಗಾರನು ಒಡುವ ರೀತಿಯಲ್ಲಿ ಗಾಡಿಯನ್ನು ವೇಗವಾಗಿ ಚಲಾಯಿಸಿದ. ಇವಳ ಪತಿ ಎಂದೂ ಇವಳ ಜೊತೆಗೆ ಹೋಗದಿರುವುದು ಆಶ್ಚರ್ಯದ ಮಾತು.

ಇವಳ ಪತಿಯ ಹಾಶಯರ ಮಿತ್ರತ್ವನನಗಿದೆ ಆದರೂ ಇವರ ಈ ತೆರನಾದ ನಿಯಮದ ಗುಟ್ಟು ಗೊತ್ತಾಗಲಿಲ್ಲ. ಅಸುವಾಸಿನ ಜನರ ಬಾಯಿಯಲ್ಲಿಯೂ ಇದೇ ಮಾತಿನ ಮೇಲೆ ಚರ್ಚೆ. ಅಂತೂ ರಹಸ್ಯ ತೆರೆಯುವುದೆಂತೂ ಅಸಾಧ್ಯವಾಗಿತ್ತು. ಈವ ಹಾಶಯರ ಹೆಸರೇನೋ ತಿಳಿಯಿತ— 'ಸುಂದರ ರಾಜರು' ಎಂದು. ಇವರ ಸಂಸಾರ ಇಲ್ಲಿಗೆ ಬಂದು ಒಂದು ತಿಂಗಳು ಕಳೆದರೂ, ನಾನು ಅವರಲ್ಲಿಗೆ ಹಲವುಬಾರಿ ಹೋಗುವ ಪ್ರಯತ್ನ ಗೈದರೂ ನಿರರ್ಥಕವಾಯಿತು. ಎಂದರೆ ನಾನಲ್ಲಿಗೆ ಕಾಲಿರಿಸುತ್ತಲೇ ಮುಖವಿಡೀಕಂಪಿಸತೊಡಗುವುದು.

ಅಂದು ರಜಾದಿನ—ಭಾನುವಾರ. ನಾನು ಕಿಟಕಿಯ ಬಳಿಯಲ್ಲಿ ಕುಳಿತು ಮೊಸರ ಪತ್ರಿಕೆಯೊಂದರ ಪುಟ ತಿರುವ ತೊಡಗಿದೆ. ಒಮ್ಮೆ ಕಿಟಕಿಯ ಹೊರ ಬದಿಗೆ ಕಾಣುತ್ತಿರುವ ಮನೆಯ ಮುಂದೆ ದೃಷ್ಟಿ ಹರಿಯಿತು. ಆಗ ಸಾಯಂಕಾಲದ ಮೂರುವರೆ ಗಂಟೆಯಾಗಿತ್ತು. ಆ ಸ್ತ್ರೀಯು ಶೃಂಗಾರದಲ್ಲಿ ಮಗ್ನಳಾಗಿದ್ದಳು. ತುಸು ಸಮಯದ ಬಳಿಕ ಹುಡುಗನ ಕೈಹಿಡಿಯುತ್ತಾ ರಿಕ್ಷಾದಲ್ಲಿ ಕುಳಿತಿರುವಾಗ ನೇಕೆ ನಾಲ್ಕು ಗಂಟೆ.

ನನ್ನ ಮನಸ್ಸು ಹಿಡಿತದಲ್ಲಿರಲಿಲ್ಲ. ಅವಳು ಹೋದಾಕ್ಷಣ ಕಾಲಿಗೆ ಸ್ಲಿಪರ್‌ನ್ನು ಸಿಕ್ಕಿಸುತ್ತಾ ಅವಳ ಮನೆಯತ್ತ ನಡೆದೆ. ಸುಂದರರಾಜರು ನನ್ನನ್ನ ನೋಡುತ್ತಲೇ "ಮಹಿಯ ಒಳಬನ್ನಿ" ಎಂದರು. ಶಾಮನ ತೆರನಿನಂತೆ ಒಳ ನಡೆದೆ.

ಮನೆಯು ಅಂದವಾಗಿ ಅಲಂಕರಿಸಿತ್ತು. ಗೋಡೆಯಲ್ಲಿ ಹಿರಿಯ ಕಲಾವಿದರ ಚಿತ್ರಗಳು ನೇತಾಡುತಿದ್ದುವು. ಸುಂದರರಾಜರು ನನ್ನನ್ನು ಸೋಫಾದ ಮೇಲೆ ಕುಳ್ರಿಸುತ್ತಾ ಸ್ವತಃ ತಾನೂ ನನ್ನ ಜೊತೆಗೆ ಕುಳಿತರು. "ಅಲ್ಲಿಯ' "ಇಲ್ಲಿಯ" ಎಂದು ನಾನಾ ಕಡೆಯ ಸುದ್ದಿಯ ಮೇಲೆ ಮಾತುಕತೆಯಾಡಿದ ಬಳಿಕ ನಾನೆಂದೆ— "ನೋಡಿ, ಒಂದೊಮ್ಮೆ ಫೀವು ನನ್ನನ್ನ "ಅಧಿಕ ಪ್ರಸಂಗಿಯಲ್ಲ." ಎಂದು ಭಾವಿಸಿದರೆ ನನ್ನದೊಂದು ಮಾತು. ಫಿಮ್ಮನ್ನು ಭೇಟಿಯಾಗಿ ಕುಟುಂಬ ಪ್ರಸನ್ನನಾದರೂ ಫನ್ನದೊಂದು ಶಂಕೆಯನ್ನು ತಾವು ಸಮಾಧಾನ ಮಾಡಬಹುದೇ?"

"ಹಾಂ...ಹಾಂ...ನಿಮ್ಮ ಶಂಕೆಯೇನೂಂತ ತಿಳಿಯಿತು ನನ್ನ ಪತ್ನಿಯ ವಿಚಾರವಲ್ಲವೇ?..." ಎನ್ನುತ್ತಾ ಸುಂದರರಾಜರು ಗಂಭೀರರಾದರು. "ಇದೇ ಪ್ರಶ್ನೆಯನ್ನೇ ನನ್ನಲ್ಲಿ ಜನರನೇಕರು ಕೇಳುತ್ತಿದ್ದಾರೆ. ಒಂದು ವರ್ಷದ ಮೊದಲು ನಾವು ಕಲಕತ್ತೆಯಲ್ಲಿದ್ದೆವು ಅಲ್ಲಿಯೂ ಜನರು ಇದೇ ಪ್ರಶ್ನೆಯನ್ನೇ ಕೇಳುತ್ತಿದ್ದರು. ಆದರೆ ನಾನು ಸ್ವತಃ ಇದರ ಅರ್ಥವನ್ನು ಅರಿಯಲಸಾಧ್ಯನಾಗಿ ಕೇಳುವವರನ್ನು ಸಮಾಧಾನಿಸಿದೆ.' ಎನ್ನುತ್ತಾ ಸುಂದರರಾಜರು ಸುಮ್ಮನಾದರು.

'ನನ್ನ ಮಾತನ್ನು ಯಾವ ರೀತಿಯಲ್ಲಿ ಮುಂದುವರಿಸಲೀ?" ಎನ್ನುವ ಯೋಚನೆಯಲ್ಲಿರುವಾಗಲೇ ಸುಂದರರಾಜರು ಮಾತು ಮುಂದುವರಿಸುತ್ತಾ, 'ನಾನು ಮುಂಬಯಿ ವೈಭೂತಾನಲ್ಲಿದ್ದೆ. ಅಲ್ಲೇ ನನ್ನದು ಭವ್ಯ ಮನೆಯಿತ್ತು. ನನ್ನ ವಿದ್ಯಾಭ್ಯಾಸವು ಇಲ್ಲೇ ಆಯಿತು. ಒಂದು ಬಾರಿ ಮನೆಯಲ್ಲೊಂದು ನಡೆದ ಪೂಜಾ ಸಮಾರಂಭಕ್ಕೆ ಕುಟುಂಬದ ಜನರೆಲ್ಲರೂ ಸೇರಿದ್ದರು. ನನ್ನ ತಾಯಿಗೆ ಆಗಾವಿ ಇದ್ದ ಹುಡುಗಿಯೋರ್ವಳನ್ನು ಕಂಡು ಮನಸುಂಬಿತು. ಅಂದೇ ನನ್ನ ಮನಸ್ಸು ಆ ಹುಡುಗಿಯ ವದುವೆಯ ವಿಚಾರವಾಗಿ ಮಾತುಗತೆಯಾಯಿತು" ಎಂದರು.

ಈಗ ಸಾಯಂಕಾಲದ ಸಮಯ ಮುಗಿಯುತ್ತಾ ಬಂದಿತು. ಬೆಂಕಿ ಪೊಟ್ಟಣದಿಂದ ಬೆಂಕಿಕಡ್ಡಿಯನ್ನು ತೆಗೆದು ದೀಪ ಉರಿಸಿದರು.

"ಮದುವೆಯೂ ಆಯಿತು. ತದನಂತರ ನಾನು ನನ್ನ ಪತ್ನಿಯಿಬ್ಬರೂ ಕಲಕತ್ತೆಗೆ ಪ್ರಯಾಣಿಸುವ ಸಂದರ್ಭದಲ್ಲಿ ಪರಿವಾರದ ಜನರೆಲ್ಲರೂ ನನ್ನ ಪತ್ನಿಯನ್ನು ಮನತುಂಬಾ ಹೊಗಳಿದರು. ಕೆಲವರು 'ಇಂತಹ ಪತ್ನಿ ಸಿಗಬೇಕಾದರೆ ಪತಿಯು ಎಷ್ಟು ಪುಣ್ಯ ಮಾಡಿರಬೇಕೋ?' ಎಂದರು ತಾಯಿಯವರೂ ನನ್ನ ಪತ್ನಿಯನ್ನು "ಸಾಕ್ಷಾತ್‌ಲಕ್ಷ್ಮೀ'ಯೆಂದೇ ಸಂಬೋಧಿಸಿದರು. ಸ್ವಲ್ಪ ಕಾಲದಲಿ ನಮ್ಮಿಬ್ಬರ ಜೀವನವು ಮುಂದುವರಿಯಿತು. ಜನರೆಣಿಸಿದ್ದು ಸಫಲವಾಯಿತು. ತಾಯಿಯವರು ನಮ್ಮ ಮದುವೆಯ ಒಂದುವರ್ಷದ ಬಳಿಕ ಸ್ವರ್ಗವಾಸಿಯಾದರು. ತಂದೆಯವರು ಪತ್ನಿ ತೀರಿಸಿದ ದುಃಖದಿಂದ ತೂಳಲುತ್ತಾ ಬಂಗಾಳದಲ್ಲಿ ವಾಸಿಸಿದರು.—ಈಗ ಎಂದೂ ನನ್ನ ಎದೆಗೆ ಒಂದು ತಿಂಗಳಿನ ಹೆರಿಯದಾಗಿತ್ತು.

"ಬಳಿಕ ಬಂಗಾಳಿಗಳ ಪ್ರಯಾಣಬೆಳೆಸಿ ಮುಂದುವರಿಸಿದ ಬಳಿಕ ಇವರು ಸಿಂಗಾಪುರದ ಮೇಲೆ ಗೋಳಾಟ ನಡೆಸಿದರು. ನಾಲ್ಕು ಮೂಲೆಗಳಲ್ಲೂ ಒಂದೆ ಸರದ ಅಶಾಂತಿ ಚಿಹ್ನೆ ಮೂಡಿತು. ಸಿಂಗಾಪುರವೆಲ್ಲವೂ ನಾಶವಾಗತೊಡಗಿತು. ರಂಗೂನು ಕೂಡಾ ಖಾಲಿಯಾಯ್ತು. ಜನರು ತಮ್ಮೆಲ್ಲಾ ಸರಕುಗಳನ್ನು ಒಯ್ಯಲು ಅಸಾಧ್ಯವಾಗಿ ಖಾಲಿ ಕೈಯಲ್ಲೇ ಭಾರತಕ್ಕೆ ಮರಳಿ ಬರಲಾರಂಭಿಸಿದರು. ನೂರು ನುಗ್ಗಿ ಸರ್ವ ಪ್ರಯತ್ನದಿಂದ ಭಾರತಕ್ಕೆ ಬರುವ ಹಡಗಿನ ಟಿಕೇಟನ್ನು ಪಡೆದುದಾಯಿತು. ಪತ್ನಿ ಮಕ್ಕಳು

(ಹನ್ನೊಂದನೇ ಸುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ



ಹೊಟೇಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ನಿಪುಣ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಂಡಿತಿನಿಸು
ಹಾಗೂ ಕುಳಿತ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ನಿಳವೆತ್ತ ಹೊಟೇಲ್.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧ
ಎಲ್ಲಾಕಡೆ ಸಿದ್ಧ
10 ವರ್ಷ ಉಪಯೋಗ
ಸಾರ್ವಭೌಮ ಔಷಧಾಲಯ

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೩
No. 43

ನವಯುಗ

ಸ್ಥಾಪಕರು:
ಬಿ. ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೨೭—೬—೧೯೬೮

ಬೆಕ್ಕಿನ ಕೊರಳಿಗೆ ಗಂಟೆ

ಜಮ್ಮೂ ಕಾಶ್ಮೀರ ರಾಜ್ಯದ ಶ್ರೀನಗರದಲ್ಲಿ ರಾಷ್ಟ್ರೀಯ ಐಕ್ಯ—ಭಾವೈಕ್ಯದ ಬಗ್ಗೆ ತಜ್ಞರು ಸಭೆ ಸೇರಿ ಚರ್ಚಿಸಿದರು. ದೇಶದಲ್ಲಿ ಜಾತೀಯತೆ, ಪ್ರಾಂತೀಯತೆ, ಭಾಷೀಯತೆ ಮೊದಲಾದ ವಿಚ್ಛಿದ್ರಕಾರಿ ಶಕ್ತಿಗಳ ಬಲಸಂವರ್ಧನೆಯಾಗುತ್ತಿದೆಯೆಂದೂ ಇದನ್ನು ದಮನಗೊಳಿಸಿ ಹೋದರೆ, ದೇಶದ ಮೇಲೆ ಆಕಾಶವೇ ಕಳಚಿ ಬಿದ್ದೀತೆಂದೂ ಒಬ್ಬೊಬ್ಬರೂ ಅಭಿಪ್ರಾಯಪಟ್ಟರು. ಕೆಲವು ಸಮಿತಿಗಳು ನೇಮಕಗೊಂಡವು; ಅವು ತಮ್ಮ ವರದಿಯನ್ನು ಸಲ್ಲಿಸಿ ದೇಶದಲ್ಲಿ ಭಾವೈಕ್ಯ ಸ್ಥಾಪನೆಯನ್ನು ಹೇಗೆ ಸಾಧಿಸಬಹುದು ಎಂದು ಸಲಹೆ ನೀಡಿದುವು. ಮುಖ್ಯವಾಗಿ ಎಲ್ಲರ ಗಮನ ಹರಿದದ್ದು ಶಿಕ್ಷಣದ ಮೇಲೆ. ಶಿಕ್ಷಣ ಸಂಸ್ಥೆಯಲ್ಲಿ, ಬೋಧನಾಕ್ರಮದಲ್ಲಿ ಆಮೂಲಾಗ್ರ ಪರಿವರ್ತನೆಯಾಗಬೇಕು—ಕಾರಣ, ಇಂದಿನ ಶಿಕ್ಷಣ ಕ್ರಮವು ಹಿಂದಿನ ಗುರುಕುಲಾದಿ ಪದ್ಧತಿಯದು, ಭಾವೈಕ್ಯದ ಆದರ್ಶವನ್ನು ಬಾಲ್ಯ ಕಾಲದಿಂದಲೇ ಮಗುವಿನ ಮನಸ್ಸಿನಲ್ಲಿ ಪ್ರತಿಬಿಂಬಿಸಬೇಕು. ಈ ತತ್ವ ವ್ಯವಹಾರಕ್ಕಿಂತ ಹೆಚ್ಚಾಗಿ ಆದರ್ಶಕ್ಕೆ ಹತ್ತಿರವಾಗಿದೆಯೆಂದೇ ಹೇಳಬೇಕು.

ಇಂದು ನಾವೇನು ಕಾಣುತ್ತೇವೆ? ಇಂದಿನ ಶಿಕ್ಷಣ ಕ್ರಮವು ಜಾತೀಯತೆಯನ್ನು, ಪ್ರಾದೇಶಿಕ ಮನೋಭಾವವನ್ನು, ಭಾಷಾಭೇದವನ್ನು ಭೋಧಿಸುತ್ತಿದೆಯೆ? ಸರಕಾರಿ ಹುದ್ದೆಗಳಿಗೆ, ಶಾಲೆ ಕಾಲೇಜುಗಳಿಗೆ ಪ್ರವೇಶ ಪಡೆಯುವ ವೇಳೆಯಲ್ಲಿ ಚಿಕ್ಕ ದೊಡ್ಡ ಮಗುವಿನ ಮನಸ್ಸಿನಲ್ಲಿ ಜಾತೀಯತೆ ಮೂಡಲು ಆರಂಭವಾಗುತ್ತದೆ. ಇದನ್ನು ಕೃತಿಯಿಂದ ದೂರವಾಡಿ ತೋರಿಸಬೇಕಲ್ಲದೆ ಬರಿಯ ಆದರ್ಶವನ್ನು ಕಲಿಸುವುದರಿಂದ, ಅಥವಾ ಎಳೆಯ ತಲೆಗಳಿಗೆ ತುರುಕಿಸುವುದರಿಂದ ಲ್ಲ. ಪ್ರಾದೇಶಿಕ ಮನೋಭಾವ-ಪ್ರಾಂತೀಯತೆಯ ಬೀಜವನ್ನು ರಾಜಕೀಯ ಪಕ್ಷಗಳೇ ಆರುಭದಲ್ಲಿ ಬಿತ್ತಿದುವು; ಅವುಗಳೇ ಬೀಜವನ್ನು ಮೊಳಕೆ ಬರಿಸಿ, ಬೆಳೆಸಿದವು. ಈಗ ಅದು ಸರ್ವವ್ಯಾಪಕವಾಗಿ ಹೆಡೆ ಬಿಚ್ಚಿ ಕಚ್ಚ ತೊಡಗಿದರೆ ಯಾರನ್ನು ದೂರಬೇಕು? ಶಿಕ್ಷಣ ಕ್ರಮವನ್ನಾಗಲೀ ಶಿಕ್ಷಕರನ್ನಾಗಲೀ ಇದಕ್ಕಾಗಿ ಗೆಡುಕ್ಕು ಮಾಡುವುದೆಂದರೆ, ಕರ-ಮೇಲೆ ನ್ಯಾಯವೇ ಸರಿ. ಇದೇ ನ್ಯಾಯವನ್ನು ಭಾಷೀಯತೆಯ ಬಗ್ಗೆಯೂ ಅಳವಡಿಸಬಹುದು. ಭಾವೈಕ್ಯಕ್ಕೆ ಮಾರಕವೆಂದು ಬಲವಾಗಿ ನಂಬಿರುವ ಶತ್ರುಶಕ್ತಿಗಳೆಲ್ಲಾ ಸರಕಾರ ಮತ್ತದರ ವ್ಯವಹಾರ ನೀತಿ ಹಾಗೂ ಸ್ವಾರ್ಥ ಸಾಧಕ ರಾಜಕಾರಣಿಗಳೇ ಕಾರಣ. ಸಚ್ಚಾರ್ಯ ಸಾಧಿಸಿ ನಾಯಕಪಟ್ಟ ಗಳಿಸಲು ಅಶಕ್ತರಾದ 'ಉತ್ಸಾಹಿ'ಗಳು ಒಂದಲ್ಲ ಒಂದು ಬಗೆಯ ಚಳುವಳಿಯ ಮುಂದಾಳುಗಳಾಗಿ ಬೆಳಕಿಗೆ ಬರುತ್ತಾರೆ. 'ದಂಡಂ ದಶ ಗುಣಂ ಭವೇತ್' ಎಂಬಂತೆ ಈ ಚಳುವಳಿ ಗಾರರಿಗೆ ಎಲ್ಲರೂ ಹೆದರಿಯೇ ಹೆದರುತ್ತಾರೆ. ಇತ್ತೀಚೆಗಿನ ಹಿಂದೀವಿರೋಧಿ ಚಳುವಳಿಯಲ್ಲಿ ತಮ್ಮ ವಾಹನ— ಕಟ್ಟೆಡಗಳು ಉಳಿಯಲಿ ಎಂಬ ಆಶೆಯಿಂದಲೇ ಡಿ. ಡಬ್ಲ್ಯೂ. ಎಚ್. ಬೋರ್ಡನ್ನು ಹಾಕಿಕೊಂಡವರೇ ಹೆಚ್ಚಲ್ಲದೆ, ಹಿಂದಿ ದ್ವೇಷವೆಂದವರ ಸಂಖ್ಯೆ ಕಡಿಮೆಯೇ. ದಕ್ಷಿಣ ರಾಜ್ಯಗಳಲ್ಲಿ ವ್ಯಾಪಕವಾಗಿ ಹರಡಿದ್ದ ಹಿಂದೀ ವಿರೋಧಿ ಚಳುವಳಿ, ಉತ್ತರ ರಾಜ್ಯದಲ್ಲಿ ಉಲ್ಬಣಗೊಂಡಿದ್ದ ಇಂಗ್ಲೀಷ್ ವಿರೋಧಿ ಚಳುವಳಿಗಳಹಿನ್ನೆಲೆಯಲ್ಲಿದ್ದ ಧ್ಯೇಯ—ಗುರಿಯೇನು? ಒಂದು ಪಕ್ಷದ ಮೇಲೆ ಮತ್ತೊಂದು ಪಕ್ಷವು ಮೆಟ್ಟಿ ನಿಲ್ಲಬೇಕೆಂಬ ಆಕಾಂಕ್ಷೆ—ಇವುಗಳಲ್ಲಿ ನಾಯಕ ಮಣಿಗಳೆನ್ನಿಸಿಕೊಂಡವರು ವಿರುದ್ಧ ರಾಜಕಾರಣಿಗಳು. ದೇಶದಲ್ಲಿ ಮಳೆಬಾರದೆ ಕ್ಷಾಮಡಾಮರಗಳು ತಲೆದೋರಿದಾಗಲೂ ಇದಕ್ಕೆ ಅಧಿಕಾರದಲ್ಲಿರುವ ಸರಕಾರವನ್ನು ದೂರುವ ಜನ, ವಿದ್ಯಾರ್ಥಿಗಳನ್ನು ತಮ್ಮ ಕಡೆ ಸೆಳೆದು ಕೊಂಡರು—ವಿದ್ಯಾರ್ಥಿಗಳ ಹೆಸರಿನಲ್ಲಿ ರಾಜಕಾರಣಿಗಳು ದೊಂಬಿಯೆಬ್ಬಿಸುವ ಸಾಹಸ ಮಾಡಿದರು. ಇಷ್ಟೆಲ್ಲಾ ನಷ್ಟ-ಕಷ್ಟಗಳು ರಾಜಕಾರಣಿಗಳ ಪ್ರೇರಣೆಯಿಂದಲೇ ಆದುದು.

ಯಾವುದೇ ಪತ್ರ ಪುಸ್ತಕ ಅಥವಾ ಪಾಠಕ್ರಮ ಇಲ್ಲದೇ ಶಿಕ್ಷಕರು ಜಾತೀಯತೆಯನ್ನು, ಪ್ರಾದೇಶಿಕತೆಯನ್ನು ಭಾಷೀಯತೆಯನ್ನು ಬೆಳೆಸುವುದಿಲ್ಲ. ಭಾವೈಕ್ಯಕ್ಕೆ ಭಂಗ ತರುವಂತಹ ಯಾವ ಕೆಲಸವನ್ನಾಗಲೀ ಪ್ರತ್ಯಕ್ಷ—ಪರೋಕ್ಷದಲ್ಲಿ ಮಾಡುತ್ತವೆಯೆಂದು ಎದೆ ತಟ್ಟಿ ಹೇಳುವಂತಿಲ್ಲ. ಶಿಕ್ಷಣ ಕ್ರಮದಲ್ಲಿ, ಬೋಧನಾಕ್ರಮದಲ್ಲಿರುಧಾರಣೆಯಾಗುವ ಅಗತ್ಯವಿರಬಹುದು. ಹೆಚ್ಚು ಪರಿಣಾಮಕಾರಿಯಾಗಿ ವಸ್ತು, ಜ್ಞಾನವನ್ನು ವಿದ್ಯಾರ್ಥಿಗೆ ನೀಡುವ ಆವಶ್ಯಕತೆ ಇರಬಹುದು. ಪಠ್ಯಸುಸ್ತಕಗಳಲ್ಲಿನ ವಿಷಯ ಸಂಚಯ, ಅವುಗಳ ವಿನ್ಯಾಸ, ಪ್ರದರ್ಶನಗಳಲ್ಲಿ ಸುಧಾರಣೆ ಬೇಕಾಗಬಹುದು. ಆದರೆ, ಎಲ್ಲದಕ್ಕೂ ಶಿಕ್ಷಣವನ್ನು ಶಿಕ್ಷಕರನ್ನು ದೂರುವುದು, ಶಿಕ್ಷಣದಿಂದಲೇ ಭಾವೈಕ್ಯ ಸಾಧ್ಯವೆನ್ನುವುದು ಬಹುದೊಂದುಬಟೆ ಶಿಕ್ಷಣದ ಸಂಪೂರ್ಣ ಅಧಿಕಾರವಿರುವಕಾರಕ್ಕೆ ಕೂರುವುದರಿಂದ, ಇದಕ್ಕಾಗಿ ಅದು ನೀರನಂತೆ ವ್ಯಯ ಮಾಡುವುದರಿಂದ, ಇದರ ಮೇಲೆ ಹನ್ನೆಲ್ಲಾ ಪ್ರಯೋಗಗಳನ್ನು ಮಾಡಬಯಸುತ್ತಿದೆ. ಭಾವೈಕ್ಯಕ್ಕೆಂದು ಬೆಕ್ಕು. ಅದನ್ನು ಸಾಧಿಸುವುದು ಎಂದರೆ, ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವುದು. ಯಾವ ಇಲಿಯಿಂದಲೂ ಈ ಕೆಲಸ ಸಾಧ್ಯವಿಲ್ಲ. ಮಾನವನ ಸಹಾಯವೇ ಬೇಕಿದೆ. ಸರಕಾರಗಳು ಬರಿಯ ಆದರ್ಶ—ಧ್ಯೇಯ—ಘೋಷಣೆ ಮತ್ತು ಚಟಗಳನ್ನು ಬಿಟ್ಟು ಕೊಟ್ಟು ವ್ಯವಹಾರವಿಗಾಗಿ ಕಾರ್ಯತತ್ಪರರಾಗಬೇಕು: ರಾಜಕೀಯ ಪಕ್ಷಗಳಲ್ಲಿ ಪರಸ್ಪರ ಸೈದ್ಧಾಂತಿಕ ಭೇಧಗಳಿರಬೇಕೇ ಹೊರತು, ಪಕ್ಷ ವಿರೋಧ, ಚಳುವಳಿಯತೆಗಳಿರಬಾರದು; ಸೈದ್ಧಾಂತಿಕ ತತ್ವಗಳನ್ನು ರಾಷ್ಟ್ರೀಯ ವೇದಿಕೆಗಳ ಮೂಲಕವೇ ಪ್ರಚಾರ ಮಾಡಬೇಕು; ರಾಷ್ಟ್ರ ಫಿಸ್ಮೆ ಎಲ್ಲ ರಾಜಕಾರಣಿಗಳಲ್ಲಿರಬೇಕು.

ಭಾರತೀಯರು ಯಾರು?

ಭಾರತದ ಭೂತ ಮಾಜಿ ರಾಷ್ಟ್ರಪತಿ ಡಾ| ಎಸ್. ರಾಧಾಕೃಷ್ಣನ್ ರವರು 'ಭಾರತೀಯ' ಪದದ ವ್ಯಾಖ್ಯೆಯನ್ನು ಹೀಗೆ ಮಾಡಿದ್ದಾರೆ: ಪ್ರಾಚೀನ ಕಾಲದಿಂದಲೂ ಭಾರತವು ಪೋಷಿಸಿರುವ ಉನ್ನತ ಆದರ್ಶ ಹಾಗೂ ಮೌಲ್ಯಗಳ ಬಗ್ಗೆ ಶ್ರದ್ಧೆ ಇಟ್ಟವನೇ ಭಾರತೀಯ. ಶ್ರೀ ಪಗೆರದಲ್ಲಿ ರಾಷ್ಟ್ರೀಯ ಸಮಿತಾವಂಡಳಿಯ ಸಭೆಯಲ್ಲಿ ಪ್ರಧಾನಿ ಇಂದಿರಾಗಾಂಧಿಯವರು ಉಲ್ಲೇಖಿಸಿ ಪರಿಭಾಷೆಯನ್ನು ಬೆಂಬಲಿಸಿದರು. ಈ ಲಕ್ಷಣವನ್ನು ನಾವು ಮನಃಪೂರ್ವಕ ನೆಚ್ಚಿಕೊಂಡ ಅವರಂತೆ ಭಾರತೀಯರನ್ನು ಹೆಸರಿಸಿದರೆ, ಅವರನ್ನು ಮಾತ್ರ ಭಾರತದಲ್ಲಿ ಉಳಿಯಗೊಟ್ಟರೆ, ಉಳಿದವರು ಎಷ್ಟಿಗೆ ನಿರಾಶ್ರಿತರಾಗಿ ಹೋಗಬೇಕು? ಕೆಲವರು ಕೆಂಪು ಚೀನ, ರಶ್ಯಾ, ಪಾಕಿಸ್ತಾನ, ಅಮೆರಿಕ ಹಾಗೂ ಬ್ರಿಟನ್ನುಗಳಿಗೆ ವಲಸೆ ಹೋಗಬಹುದಾದರೂ ಹೆಚ್ಚಿನವರು ವರದ ನೆರೆಗೂ ನೀರೂ ಇಲ್ಲದೆ ಸಾಯಬೇಕಾಗಬಹುದು. 'ಭಾರತೀಯ'ರು ಅಲ್ಪಸಂಖ್ಯಾಕರಾಗುತ್ತಿರುವ ಭಾರತಕ್ಕೆ ವಿದೇಶೀ ಹೆಣ್ಣುಗಳೂ ಬರತೊಡಗಿದರೆ ಮತ್ತೆ ಮುಂದೇನು?

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
R. E. P. 151/67
in O S. 137/64

ಸರಸ್ವತಿ ಸಹಾ — ಅರ್ಜಿದಾರರು
ಮತ್ತು
ಲಕ್ಷ್ಮಿಮತಿ ಸಹಾ— ಎದ್ರಿರು.

ಬಂಟ್ವಾಳ ತಾಲ್ಲೂ ಸರಪಾಡಿಗ್ರಾಮದ ಅಟ್ಲೂಟ್ಟು ಎಂಬಲ್ಲಿರುವ ದೇವಾಂಮ ಹೆಂಗಸ್ಸಿನ ಮಗಳು ಲಕ್ಷ್ಮಿಮತಿಯವರಿಗೆ—

ಮೇಲಿನ ಅರ್ಜಿದಾರರಿಗೆ ನಿಮ್ಮಿಂದ ಬರಬೇಕಿತ್ತು ಅಪೇಜಿನ ಬಗ್ಗೆ ಮಾತಿನಂತೆ ಇದರಿಂದ ನಿಮ್ಮ ಸ್ತ್ರೀರಾಸ್ಯಯನ್ನು ಇಷ್ಟಪಡಿಸಿ ಎಲ್ಲರಿಗೆ ತಿಳಿಸಲೇ ಇಟ್ಟಿರುತ್ತದೆ. ಆದುದರಿಂದ ನಿಮ್ಮ ಸ್ತ್ರೀರಾಸ್ಯ ಏನ್ರಯದ ಬಗ್ಗೆ ಏನಾದರೂ ಆಕ್ಷೇಪಣೆ ಮಿದ್ದರೆ ತಾ. ೩೧-೦-೧೯೬೮ ರಲ್ಲಿ ಸದ್ರಿ ಕೋರ್ಟಿನ ಮುಂದೆ ಬೆಳಗ್ಗೆ 11 ಗಂಟೆಗೆ ವಕೀಲರ ಮೂಲಕ ಯಾ ಸ್ವತಃ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನ ತಿನ್ನ ಪಾಡಿ ಆಪೇಕ್ಷಿಸಲ್ಪಟ್ಟು ಮುಂದಿನ ರೀತಿ ನಡೆದೀತು. ತಿಳಿದಿರಿ.

(ಸಹಿ ಮತ್ತು ಹುದ್ದೆ)
N J Kadamba
Advocate for Petitioner
ಬೆಳ್ತಂಗಡಿ ತಾ. 11—6—1968

ವಚನ ಸುಧೆ

ಪರಸ್ತ್ರೀಕಳತ್ರಾನಿ
ಫಲಾನಿ ಪರದ್ರವ್ಯಾಣಿ ಚ
ಸ ಸಾಹಸ್ರಕಿರಣಂ ತೇಭ್ಯೋ
ಪೀಡಾಂ ಚಾಸ್ಯ ವಿನಶ್ಯತಿ॥

ಮನುಷ್ಯನಾದ ಯಾ ಪಕ್ಷವಾಗುವದಕ್ಕೆ ಮೊದಲೇ ಕೊಯ್ದುದರಿಂದ ಪಡೆಯಲಾರ; ಬದಲು ಪೀಡೆಯನ್ನೂ ನಾಶ ಮಾಡುತ್ತದೆ.

ಹಿಂದೀ ಪ್ರಮಾಣಪತ್ರ ವಿತರಣೆ

ಉಡುಪಿ ಹಿಂದೀ ಪ್ರಚಾರಸಮಿತಿಯ ವಾರ್ಷಿಕೋತ್ಸವ ಪ್ರಮಾಣಪತ್ರ ವಿತರಣಾ ಸಮಾರಂಭವು ಉಡುಪಿ ಡಾ. ಎಂ. ಪೈ ಕ್ಷಯ ಚಿಕಿತ್ಸಾಲಯದಲ್ಲಿ ಜಿಲ್ಲಾ ಪರೀಕ್ಷಾಧಿಕಾರಿ ಶ್ರೀ ಎಸ್. ಎಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ತಾ. 15ರಂದು ಜರಗಿತು.

ಶ್ರೀ ಎ. ಪಿ. ಅಪ್ಪಯ್ಯರ ಸ್ವಾಗತಾನಂತರ ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರು ವರದಿಯನ್ನಿತ್ತರು. ಉಡುಪಿ ತಾಲೂಕು ಪರೀಕ್ಷಾಧಿಕಾರಿ ಶ್ರೀ ಪರಮಾನಂದ ಫಲಿಮಾರ್‌ರು ಪ್ರಮಾಣಪತ್ರ ವಿತರಣೆ ಮಾಡಿದರು.

ಅಧ್ಯಕ್ಷರು ಜ್ಞಾನವಿಕಾಸಕ್ಕಾಗಿ ಭಾಷಾ ಪ್ರಾಮುಖ್ಯತೆಯನ್ನು ವಿವರಿಸಿದರು. ನಾಟಕ ಪ್ರದರ್ಶನದೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಮಹಾಗಣಪತಿ ಹೈಸ್ಕೂಲಿನ ಉದ್ಘಾಟನೆ

ಪಡುಬಿದ್ರಿ, ಅದಮಾರು ಮಠ ಎಜ್ಯುಕೇಶನಲ್ ಕಾಮಿಟಿಯವರಿಂದ ಕಟ್ಟಲ್ಪಟ್ಟ ಮಹಾಗಣಪತಿ ಹೈಸ್ಕೂಲಿನ ಉದ್ಘಾಟನೆಯು ಹೈಸ್ಕೂಲು ವಿಭಾಗದ ಮೆಟ್ಟಿಲ ತೈಲ್ಕರಣದ ಶ್ರೀ ರಂಗಾಂಜನೇಯಂದಿಂದ ನೆರವೇರಿತು.

ದ.ಕ. ಜಿಲ್ಲಾ ವಿದ್ಯಾಧಿಕಾರಿ ಎಸ್.ಎಸ್. ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಜಿ. ಎಸ್. ಪರಶುರಾಮ ನಾಯಕರು ಸ್ವಾಗತಿಸಿದರು. ಮಠದ ಶ್ರೀ ವಿಭುಧೇಶ ತೀರ್ಥ ಶ್ರೀ ಪಾದಂಗಳವರು ಹೈಸ್ಕೂಲು ಸ್ಥಾಪನೆಯ ಉದ್ದೇಶವನ್ನು ವಿವರಿಸಿದರು.

ಸಹಕಾರ ಸಂಘಗಳ ಬಹುಪ್ರಕಾರ ಕಟ್ಟಿ ಎಂ.ಎಲ್.ಎ. ಮತ್ತು ಶ್ರೀ ವಿ. ಎ. ಶೆಟ್ಟರು ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಸಿ.ಸಂಕಟ್ಟಮಾಚಾರ್ಯರು ಧನ್ಯವಾದವನ್ನರ್ಪಿಸಿದರು.

ನರಸಣ್ಣನ ಸರಸ



ಒಳ್ಳುಳಿದ ವಿದ್ಯಾವಂತ ನಿರುದ್ಯೋಗಿಗಳ ಸಾಲಿಗೆ ಸೆಟ್ಟಲು ಸಹಕಾರ ನೀಡುವುದಕ್ಕಿಂತ ಹೇಲಿಗಾಗಿ ಸ್ಯಯತ್ನವನ್ನೇ ವಿದ್ಯಾರ್ಥಿಗಳು ಮಾಡುತ್ತಿದ್ದಾರೆಯೇ!...

ಮುಂದುರಿ

ಗೇಹರಾಜ್ಯದಲ್ಲಿ

ಸೋಲೋದಕ್ಕೆ ಸಿದ್ಧರಾಗಬೇಕು

"ಏನು, ಈ ದಿನ ಭಾರೀ ಹೊಡತ್ತಿ?"

'ಅಲ್ಲಾ, ಪ್ರತಿದಿನ ಬೇಗ ಬಂದು ಒಂದು ದಿನ ತಡ ಮಾಡಿದ ಕೂಡ್ಲೆ ನಿಂದು ಸುರುವಾಗುತ್ತೆ...."

"ಅಲ್ರಿ, ಆಸ್ಟ್ರೇಲಿಯದ ಸಿಡ್ನಿಯಲ್ಲಿ ಒಂದು ಸಂಘ ಆರಂಭವಾಗಿದೆಯಂತೆ...'

'ಹ್ಞೂಂ...."

"ಎಲ್ಲಾದ್ರೂ ಅಲ್ಲಿಗೆ ಫೋನು ಮಾಡ ಬೇಕಾದೀತೋ ಅಂತ..."

"ಅಲ್ವೆ, ನಾವು ಬರೋವಾಗ ತಡ ವಾಗೋದಕ್ಕೂ ಆ ಸಂಘಕ್ಕೂ ಏನಾ ಸಂಬಂಧವಿದೇಂತ?'

"ಅಲ್ರಿ, ನೋಡಿ, ಅಲ್ಲಿ ಇನ್ನೂ ಮುಂದೆ ವಾಹನ ಚಾಲಕರು ಈ ಸಂಘದ ಕಚೇರಿಗೆ ಫೋನ್ ಮಾಡಿದರೆ ಸರಿ, ಕೂಡಲೇ ಒಬ್ಬ ಚಾಲಕ ಬರುತ್ತಾನೆ. ಅವನಿಗೆ ಏನೇನು ಮಾಡಬೇಕೂಂತ ಹೇಳಿದ ಮೇಲೆ ತಾನು ಇಷ್ಟಪೂರ್ತಿಯಾಗಿ ಕುಡಿದು ಮತ್ತನಾಗಿ ಬಿದ್ದು ಬಿಡಬಹುದು...."

'ಹ್ಞೂಂ...ಮತ್ತೆ?"

"ಬಂದಿರುವ ಸಂಘದ ಪ್ರತಿನಿಧಿ ಚಾಲಕ ಅವನನ್ನೂ ಅವರ ವಾಹನವನ್ನೂ ಅವರು ಹೇಳಿದ್ದಲ್ಲಿಗೆ ಒಯ್ದು ಮುಟ್ಟಿಸುತ್ತಾನೆ....'

"ಬಿಟ್ಟಿಯಾಗಿ...."

"ಹಾಗಿರಲಾರದೂನ್ನಿ. ಏನಾದರೂ ತುಸು ಪ್ರತಿಫಲ ಪಡೆಯಬಹುದೂನ್ನಿ."

"ಅಂತಹ ಸಂಸ್ಥೆಯೊಂದು ನಮ್ಮೂರಿಗೆ ಬೇಕು ಅಲ್ಲವೆ?'

'ಬೇಕೇನೋ ನಿಜ. ಆದರೆ, ಸಂಘವು ಕಳಿಸುವ ಚಾಲಕನು ಬರುವಾಗಲೇ ಉನ್ಮತ್ತನಾಗಿ ಬಂದಾನು....

"ಅದೂ ಹೌದು, ಒಂದು ಮಾಡ ಹೋಗಿ ಒಂಭತ್ತು ಮಾಡಿದಂತಾದೀತು.

"ಮತ್ತೆಂಥದು? ಇಷ್ಟಕ್ಕನಾಲ್ಕು ಗಂಟೆಯೂ ಫುಲ್ ಲೋಡು ಮಾಡಿಕೊಂಡು ಬಿದ್ದಿರೋ ಜನರಿಂದ ಯಾವ ಕಾರ್ಯವಾದೀತು? ಅದೇ ನೋಡಿ ಆಕ್ಸಿಡೆಂಟುಗಳು ಏಕ್‌ಸಾನ್ ನಡೆಯುತ್ತಲೇ ಇರುತ್ತದೆ...."

"ಕಾಲು ಜಾರಿದ್ರೆ ಅನೇನೂ ಬೇಕುತ್ತೆ...."

"ಅದು ಸರೀನ್ನಿ. ಇದು ಕಾಲು ಜಾರೋದಲ್ಲ, ಕಾಲನ್ನ ಜಾರಿಸೋದು. ತಾನಾಗಿಯೇ ಜಾರಿಕೊಳ್ಳೋರು ಎಂಥ ಒಳ್ಳೇ ಕೆಲ್ಸ ಮಾಡಿಯಾರು?"

'ಅದಿರ್ಲಿ, ಆಸ್ಟ್ರೇಲಿಯದ ಸಂಘೀಯು ಚಾಲಕ ಮನೆ ಮುಟ್ಟಿಸಿದ ಮೇಲೆ ಏನು ಮಾಡ್ತಾನೆ?"

'ಮತ್ತೆ ಮಾಡೋದೇನು? ಕಾಸಿನ ಚಾಲಕನನ್ನ ಹಾಸಿಗೆಯ ಮೇಲೆ ಮಲಗಿಸಿ, ಹೊದಿಕೆ ಹೊದಿಸಿ ಹೋಗುತ್ತಾನೆ...."

'ಸುಣ್ಣಕ್ಕೆ ಬೆಟ್ಟಗೆಯ ಒಳಗಲ್ಲ...."

'ಎಂಥ ಅಭದ್ರ ಮಾತಾಡ್ತೀರಿ?"

'ಅಲ್ವೆ ಕಂಠಪೂರ್ತಿ ಕುಡಿದ್ರೂ ಪ್ರಾಣ ಹೋಗೋಲ್ಲ...."

"ಹೋದ್ರೆ ಹೋಗುತ್ತೆ....ಅದಕ್ಕೇನು ಮಾಡೋದು ?"

"ಅಂತೂ ಕುಡಿಯುವವರಿಗೆ ಕುಡಿಯ ಬಯಸುವವರಿಗೆ ಸಾಕಷ್ಟು ಅವಕಾಶ ಮಾಡಿಕೊಡುತ್ತದೆ ಅನ್ನು ಈ ಸಂಘ...."

"ಸರಕಾರಕ್ಕೆ ಲಾಭ....ಜನಕ್ಕೂ ಪೆಟ್ಟು..."

"ನಮಗೂ ಅಂಥ ಸಂಘವೊಂದು ಬೇಕು ಅನ್ನಿಸುತ್ತೆ...."

"ನಮಗೆ? ನಮಗೆ ಅಂದ್ರೆ ನಂ ದೇಶಕ್ಕೆ...ನಂ ರಾಜ್ಯಕ್ಕೆ ನಂ ಜಿಲ್ಲೆಗೆ ನಂ ಊರಿಗೆ."

"ನಮಗೇನೂ ಡ್ರೈವಿಂಗ್ ಗೊತ್ತಿಲ್ಲ ತಾನೆ? ಕಟ್ಟಿಕೊಳ್ಳಲಿ ಬೇಕಾದ್ರು..."

"ನಮ್ಮೂರಲ್ಲಿ ಬಂದ ಡ್ರೈವರ ಟ್ಯಾಕ್ಸಿಯನ್ನೂ ಪ್ಯಾಸೆಂಜರನ್ನೂ ರಟ್ಟಿಸಿಯೇ ಬಿಟ್ರಾನೋ ಅಂತ...."

'ಅದಕ್ಕೇ ಇದು ಇಲ್ಲಿ ಅಗ್ಲಿಲ್ಲ...ಇಲ್ಲಿ ಅಗ್ಬೇಕಾದ್ರೆ ನೋಡಿ, ಇರೋ ಹೃದಯ ತೆಗೆದು ಬೇರೆಯ ಹೃದಯ ಜೋಡಿಸಬೇಕು...."

"ಏ, ಹಾಗೆಲ್ಲ ಅನ್ನ ಬೇಡ....'

"ಯಾಕೆ?"

"ಅದಲಿ ಹೃದಯ ಜೋಡಿಸುವುದು-ಅಂತಹ ಮಾತಾಡುವುದು ಕಾನೂನು ವಿರುದ್ಧವಾಗೋ ಕಾಲ ಬಂಬುದು..."

'ಓಹೋ, ಸದ್ಯ ಬಂದಿಲ್ಲ ತಾನೆ?'

'ಇಲ್ಲ, ಆದ್ರೂ ಬರುವ ಸಂಭವವಿದೆ...."

"ಏನೆ, ಭಾರೀ ಜೋತಿಷ್ಯ ಮಾಡ ಭವಿಷ್ಯ ಬರೆದ ಹಾಗೆ ಹೇಳ್ತೀರಿ?'

"ನೋಡು, ಬ್ರಿಟನ್ನಿನ ಡಾಕ್ಟರರೊಬ್ಬರು ಹೀಗೆ ಹೃದಯವನ್ನು ಕಸಿ ಮಾಡುವುದನ್ನು ಕಾನೂನಿನ ಮೂಲಕ ತಡೆ ಹಿಡಿಯಬೇಕೆಂದು ವಿನಂತಿಸಿ ಕೊಂಡಿದ್ದಾರಿ..."

"ಒಳ್ಳೇ ತಮಾಷೆ ಯಾಯ್ತಲ್ಲಾ ಇದು?...."

"ಯಾಕೆ?"

"ಅದ್ರಿ, ಒಂದೆಡೆ ಕಸಿ ಮಾನವನನ್ನು ಫಿಟ್ಟಿಸುವುದರಲ್ಲಿ ಹೋರಾಡಲು ವೈದ್ಯರ ಸೇನೆ ಸೊಂಟಕಟ್ಟಿದರೆ, ಇವರೊಬ್ಬರು ಶಾಯಸೆದಲ್ಲಿ ವಾವಾಸು ಎಸೆಯುತ್ತಾರಲ್ಲಾ? ಅವರೇನು ಹುಚ್ಚರೆ? ಅಥವಾ ಕಂಠಪೂರ್ತಿ..."

"ಛೆ...ಛೆ...ಹಾಗೆಲ್ಲ ತಿಳಿಯದ್ದನ್ನಾಡಿ ನಾಲಿಗೆ ಕೆಡಿಸಿಕೊಳ್ಳಬಾರ್ದು. ಅವ್ರು ತನ್ನ ವಾದಕ್ಕೆ ಕಾರಣ ನೀಡ್ತಾರೆ. ಇದುವರೆಗೆ ಪರ ಹೃದಯ ಹೊಂದಿದ ೨೧ ಜನರಲ್ಲಿ ಈಗ ಬದುಕಿರುವವರು ಬರಿಯ ೫ ಜನ. ಇವರೂ ಯಾವಾಗ ಕೊನೆಯುಸಿರೆಳೆಯುತ್ತಾರೋ ಯಾರಿಗೆ ಗೊತ್ತು? ಈ ಶಸ್ತ್ರ ಚಿಕಿತ್ಸೆ ಮರಣ ದಂಡನೆಯನ್ನೇ ಬಹುವಾಗಿ ಹೋಲುತ್ತದೆ....ಆದುದರಿಂದ ಇದು ನ್ಯಾಯ ದೃಷ್ಟಿಯಿಂದಲೂ ಸಮರ್ಥನೀಯವಲ್ಲ.'

"ಹ್ಞೂಂ.....ಅದೂ ಹೌದೂನ್ನಿ. ಬದಲಿ ಹೃದಯ ಜೋಡಿಸುವುದು ಅಂದ್ರೆ ಎರಡು ಜೀವಗಳನ್ನು ತೆಗೆಯುವುದಂತ ಅರ್ಥ..."

"ಕೆಲವೊಮ್ಮೆ ಈ ಅರ್ಥ ಶಿಷ್ಟವಾಗುವುದೂ ಇದೆ..."

"ಅಲ್ರಿ, ನಮ್ಮ ಪಂಜಾಬದ ಒಬ್ಬ ಡಾಕ್ಟರು ನವಜಾತನವನನ್ನು ದಯಾಳಾಗಿಸುವ ಯಂತ್ರವೊಂದನ್ನು ಹುಡುಕಿದ್ದಾರಂತಲ್ಲಾ?...."

'ಮೊನ್ನೆ ಎಲ್ಲೋ ಓದಿದ ನೆನಪು. ಇದರ ಮೂಲಕ ಅವರೇ ಮೊದಲು ಯುವಕರಾಗುವರಂತೆ. ೫೦ ವರ್ಷದವರು ೪೦ರಂತಾದರಂತೆ. ಮುಖದ ಸುಕ್ಕು ದೂರವಾಯಿತಂತೆ. ನರನಾಡಿಗಳಲ್ಲೂ ಉತ್ಸಾಹ ಮೂಡಿದೆಯಂತೆ....'

"ಈ ಯಂತ್ರ ಭಾರೀ ವಿದೇಶ ವಿನಿಮಯ ಗಳಿಸೀತು....'

'ಹೇಗೆ?"

'ತಾವಿನ್ನೂ ಹದಿಹಾರರ ಯುವತಿಯರಂತೆ ತೋರುವಂತಾದಲು ವಿದೇಶೀ ಮಹಿಳಾಮಣಿಯರು ಈ ಯಂತ್ರಕ್ಕೆ ಭಾರೀ ಬೇಡಿಕೆಯಿಟ್ಟಾರು...'

"ಓಹೋ, ಹಾಗೋ! ಅದೇಕೆ ಹಾಗೆ? ನಮ್ಮ ದೇಶದವರೇನು ಹಿಂದಿದ್ದಾರೆಯೆ? ಯಾವ ಹೆಂಗಳೂ ಮುಡುಕಿಸೂಗ ಬಯಸುವುದಿಲ್ಲ. ಮುತ್ತೈದೆತನದಲ್ಲೇ ಸಾಯೋಕೆ ಇಷ್ಟಪಡೋದು ಮಾತ್ರಾತಕ್ಕೆಂದೆ?"

"ನೀವು ಭಾರೀ ಚೂಟಿ ಇದ್ದೀರಿ."

"ಏನ್ನ ಹಾಗೇನೇ ಅನ್ನು...."

"ಅಲ್ರಿ ಐಕ್ಯ ಪ್ರತಿವಾದಕ, ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣರು 'ರಾಷ್ಟ್ರೀಯ ಐಕ್ಯ ಮಂಡಳಿ'ಯ ಸಭೆಯಲ್ಲಿ ಭಾಗವಹಿಸುವುದಿಲ್ಲವಂತೆ....ಏಕೆ?"

"ಅವರ ದೃಷ್ಟಿಯಲ್ಲಿ ಇಂದಿನ ರೀತಿಯಲ್ಲಿ ರಚಿತವಾಗಿರುವ ರಾಷ್ಟ್ರೀಯ ಐಕ್ಯತಾ ಮಂಡಳಿಯಿಂದ ಪರಿಸ್ಥಿತಿಗೆ ಅಗತ್ಯವಾದ ಯಾವ ಸಾಧನೆಯನ್ನೂ ಸಾಧಿಸಲು ಸಾಧ್ಯವಾಗದು."

'ಇದು ಭಾರೀ ಒಳ್ಳೆಯದು. ಅಲ್ರಿ, ಮಂಡಳಿಯ ಸದಸ್ಯರಲ್ಲೇ ಐಕ್ಯವಿಲ್ಲವೆಂದ ಮೇಲೆ..."

"ಅದೇ ಅನ್ನೋದು. ಪ್ರತಿಯೊಬ್ರೂ ತಾನೇ ಬುದ್ಧಿವಂತ, ತಾನು ! ಇದೇ ಸರಿ, ತಾನು ಅಂದದ್ದನ್ನ ಎಲ್ಲರೂ ಒಪ್ಪಿಕೊಳ್ಳಲೇ ಬೇಕು ಅಂತ ಪಟ್ಟು ಹಿಡಿದ್ರೆ ಪ್ರಜಾಪ್ರಭುತ್ವವೆಲ್ಲಿ ಬಂತು?"

"ಪ್ರಜಾಪ್ರಭುತ್ವ ಅಂದ್ರೆ ಸೋಲಬೇಕು—ಗೆಲ್ಲಬೇಕು...."

"ಅಲ್ವೆ, ಗೆಲ್ಲೋ ಬಯಸುವವರು ಸೋಲೋದಕ್ಕೂ ಸಿದ್ಧರಾಗಬೇಕುತಾನೆ?"

"ಹ್ಞೂಂ, ಪಮ್ಮನ್ನು ನೋಡಿದ್ರೆ ಗೊತ್ತಾಗೋದಿಲ್ವೆ?"

"ಮತ್ತೆ? ಹೀಗಿದ್ರೆ ಮಾತ್ರ ಪ್ರಜಾಪ್ರಭುತ್ವ...ಇಲ್ಲವಾದ್ರೆ ಸರ್ವಾಧಿಕಾರ..."

ಹ್ಞೂಂ...."

ಗೋರಾ.

ಮೈ ಸುಟ್ಟುಕೊಂಡವರ ಚಿಕಿತ್ಸಾ ಕೇಂದ್ರದ ಪ್ರಗತಿ

ಮಣಿಪಾಲ, ಜೂನ್ ೧೯ ಅಮೆರಿಕ ಸರಕಾರದ ನೆರವಿನಿಂದ ಇಲ್ಲಿಯ ಕಸ್ತೂರ್‌ಬಾ ಜನರಲ್ ಆಸ್ಪತ್ರೆಯಲ್ಲಿ ಆರಂಭಿಸಿರುವ ಮೈ ಸುಟ್ಟುಕೊಂಡವರ ಚಿಕಿತ್ಸಾ ಕೇಂದ್ರದ ಪ್ರಥಮ ವರ್ಷದಲ್ಲಿ ೫೩ ಮಂದಿಗೆ ಚಿಕಿತ್ಸೆ ನಡೆಸಲಾಗಿದೆ ಇತರ ೪೫ ರೋಗಿಗಳಿಗೂ ಚಿಕಿತ್ಸೆ ನಡೆಸಲಾಯ್ತು. ಎಲ್ಲ ರೋಗಿಗಳ ಬಗ್ಗೆ ವಿವರಗಳನ್ನು ದಾಖಲು ಮಾಡಲಾಗುತ್ತಿದೆ. ಚರ್ಮದ ಹೊದಿಕೆ ಒದಗಿಸುವುದಕ್ಕಾಗಿ ಚರ್ಮದ ಬ್ಯಾಂಕನ್ನು ಆರಂಭಿಸಲಾಗಿದೆ.

ಸಾಮೂಹಿಕಕಾರ್ಯಕರ್ತ ಶ್ರೀ ಪಿ. ಐ. ಜಾರ್ಜ್‌ರವರು ಮೈ ಸುಟ್ಟುಕೊಂಡವರ ಬಗ್ಗೆ ನಡೆಸಿದ ಸಮೀಕ್ಷೆ ಇಂತಹ ಅಪಘಾತಗಳನ್ನು ತಡೆಯುವ ಸಾಧ್ಯತೆಯನ್ನು ತಿಳಿಸಿದೆ. ಇಂತಹ ರೋಗಿಗಳ ಕುಟುಂಬದವರಿಗೂ, ಗ್ರಾಮಸ್ಥರಿಗೂ ಅವರು ಈ ಬಗ್ಗೆ ಮಾಹಿತಿ ಕೊಡುತ್ತಿದ್ದಾರೆ.

ಕೇಂದ್ರದ ಸಮರ್ಥ ಕಾರ್ಯಕ್ಕಾಗಿ ಡಾ| ಟಿ. ಎಂ. ಎ ಪೈಯರ ನೇತೃತ್ವದಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಲಾಗಿದೆ. ಗುಣಹೊಂದಿದವರಿಗೆ ಪುನರುದ್ಯೋಗ ಒದಗಿಸುವ ಬಗ್ಗೆ ಈ ಸಮಿತಿ ತೀರ್ಮಾನಮಾಡುತ್ತದೆ.

ವೈದ್ಯಕೀಯ ಹಾಗೂ ತತ್ಸಂಬಂಧದ ಉದ್ಯೋಗಿಗಳಿಗೆ ಮೈ ಸುಟ್ಟುಕೊಳ್ಳುವುದರ ನಿವಾರಣೆ ಹಾಗೂ ಅದರ ರೋಗಿಗಳ ಚಿಕಿತ್ಸೆಯ ಬಗ್ಗೆ ಈ ಕೇಂದ್ರದಲ್ಲಿ ತರಬೇತಿಕೊಡಲು ಉದ್ದೇಶಿಸಲಾಗಿದೆ.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

O. S. No. 424/66

Ex. C. 5/1967

ಅರ್ಜಿದಾರ — ಚಂದ್ರಶೇಖರ ಮಯ್ಯ

ಎದ್ರಿ — ಶೀನ ಅಕ್ಕಾಲಿ.

ಉಡ್ಪಿ ತಾಲ್ಲೂಕು ಗಂಡಿ ಗ್ರಾಮದಲ್ಲಿರುವ ಲಕ್ಷ್ಮಣ ಅಕ್ಕಾಲಿ ಮಗ ಶೀನ ಅಕ್ಕಾಲಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಸದ್ರಿ ವ್ಯಾಜ್ಯದಲ್ಲಿ ಎದ್ರಿಯ ಹಕ್ಕಿನ ಸ್ತರಿ ಆಸ್ತಿಗಳನ್ನು ಯೇಲಂಮಾಡುವ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಯೇಲಂ ಆಸ್ತಿಗಳಿಗೆ ಸಂಬಂಧಗಳನ್ನು ನಿರ್ಣಯಿಸುವ ಬಗ್ಗೆ ತಾ. 20-7-1968ಕ್ಕೆ ಮೇಲಿನ ಕೋರ್ಟಿನಲ್ಲಿ ಕನ್ಸಿಗೆ ಇರುತ್ತದೆ. ಆ ಕಾಲಕ್ಕೆ ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟುಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿದೆ.

G. V. Aithal,

Advocate for Petr.

Coondapoor, Date 5-6-1968.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

R. E. P. No. 151/67

ಕೆ. ಎ. ರಾಮಯ್ಯ(ದಾವೆ)

— ಕಾರ್ಯನಿರ್ವಾಹಕ

ಕೆ. ಸುಬ್ರಾಯ ಆಗಿ — ಅರ್ಜಿದಾರ

ಮತ್ತು

ರಾಮ ಎಸ್. ಶ್ರೀಯನ್ — ಎದ್ರಿ

ಯವರೆಕಡೆಗೆ

ಪ್ರತಿವಾದಿ— ಎದ್ರಿ:—ರಾಮ ಎಸ್. ಶ್ರೀಯನ್, ದೂಮ ಮರಕಾಲರ ಅಳಿಯ, ಉಡ್ಪಿ ತಾಲೂಕು ಮಟ್ಟು ಗ್ರಾಮಯವರಿಗೆ—

ಮೇಲ್ಕಂಡ ಅಮಲ್‌ಜ್ಞಾರಿಯಲ್ಲಿ ಮೃತಪಟ್ಟಿದ್ದಾರನ ವಾರೀಸುದಾರನನ್ನಾಗಿ ಸೇರಿಸಿಕೊಳ್ಳಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 1-7-68ಕ್ಕೆ ಕನ್ಸಿಗೆ ಯಿಟ್ಟಿದೆ. ಆ ದಾವೆದಿನ್ನಲ್ಲಿ ವಿಮುಗೇನಾದ್ರೂ ಆಕ್ಷೇಪವಿದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯ ವಿಚಾರಣೆ ನಡೆಯುವುದು.

(By order of the Court)

Sd/- D. P. Kotiankar,

ಅರ್ಜಿದಾರನ ತಡೆ ಅಡ್ವೋಕೇಟು.

ಉಡ್ಪಿ, ತಾ. 19-6-68

ಸಾಹಿತ್ಯ ಪರಿಚಯ

ಶ್ರೀ ಹರ್ಷನ ನಾಟಕಗಳು

ಬರೆದವರು: ಶ್ರೀ ಸ. ನಾರಾಯಣ

ಕ್ರಿ. ಶ. ೬೦೬ರಿಂದ ಕ್ರಿ. ಶ. ೬೪೮ರ ವರೆಗೆ ಸ್ಥಾಣೇಶ್ವರವನ್ನಾಳಿದ ಶ್ರೀ ಹರ್ಷ ವರ್ಧನ ಇತಿಹಾಸಕಾರರಿಗೆ, ಸಂಸ್ಕೃತ ಸಾಹಿತ್ಯಾಭಿಮಾನಿಗಳಿಗೆ ಚಿರಪರಿಚಿತ. ಉತ್ತರ ಭಾರತವನ್ನು ಆಳಿದ ಪ್ರಸಿದ್ಧ ಅರಸರುಗಳಲ್ಲಿ ಶ್ರೀ ಹರ್ಷನೂ ಒಬ್ಬ. ಇವನಿಗೆ ಶ್ರೀ ಹರ್ಷ, ಹರ್ಷದೇವ, ಹರ್ಷವರ್ಧನ ಎಂಬ ಹೆಸರುಗಳು ಇದ್ದಂತೆ ತಿಳಿದು ಬರುತ್ತದೆ.

ನಾಗಾನಂದ, ರತ್ನಾವಳಿ ಪ್ರಿಯದರ್ಶಿಕೆ ಈ ಮೂರು ನಾಟಕಗಳು ಶ್ರೀ ಹರ್ಷನ ಕೃತಿಗಳು. ಈ ಮೂರು ನಾಟಕಗಳ ಕರ್ತೃ ಶ್ರೀ ಹರ್ಷನಾಗಿದೆ ಬಾಣ ಅಥವಾ ದ್ರಾವಕ ಕವಿಗಳು ಇರಬಹುದೆಂಬ ಭಾವನೆಯೂ ಇತ್ತು. ಚೈನಾ ದೇಶದ ಯಾತ್ರಿಕ ಹುಯಾನತ್ಸಾಂಗ್ "ನಾಗಾನಂದ" ಶ್ರೀ ಹರ್ಷಳ ಕೃತಿ ಎಂದು ಉಲ್ಲೇಖಿಸಿದ್ದಾನೆ ಮತ್ತು ಬಾಣನೂ ಈ ಸಂಗತಿಯನ್ನು ಪ್ರಸ್ತಾಪಿಸುತ್ತಾನೆ. ಬಾಣವರ ಕವಿ. ಇವನು ಶ್ರೀ ಹರ್ಷನ ಆಸ್ಥಾನ ಕವಿ. ಶ್ರೀ ಹರ್ಷಳ ಆಶ್ರಯದಲ್ಲಿ ಬಾಣ ಕವಿಯಲ್ಲದೆ ಮಯೂರ, ಮಾತಂಗ ದಿವಾಕರ ಮೊದಲಾದ ಕವಿಗಳು ಇದ್ದರು.

ಶ್ರೀ ಹರ್ಷ ಸುಪ್ರಸಿದ್ಧ ಕವಿಯಾಗಿರುವಂತೆಯೇ ವಿಖ್ಯಾತ ಅರಸ. ಜೀವನದಲ್ಲಿ ಹಲಬಗೆಯ ಸಮಸ್ಯೆಗಳನ್ನೂ, ಶತ್ರುಗಳನ್ನೂ ಎದುರಿಸಿ ಹೋರಾಡಿ ಯಶಸ್ಸುಗಳಿಸುತ್ತಾನೆ. ಅವನ ಆತ್ಮಸ್ಥೈರ್ಯ, ಕಷ್ಟಸಹಿಷ್ಣುತೆ, ದೂರಾಲೋಚನೆ, ವಿವೇಕಗಳು ವಿಶೇಷವಾದುವು. ದಕ್ಷಿಣ ಭಾರತವನ್ನೂ ಗೆಲ್ಲುವ ಆಸೆಯಿಂದ ಶ್ರೀ ಹರ್ಷ ಅಗಾಧ ಸೈನ್ಯದೊಂದಿಗೆ ದಂಡೆತ್ತಿ ಬರುತ್ತಾನೆ. ಚಾಲುಕ್ಯ ಅರಸು ಮನೆತನದ ಎರಡನೆಯ ಪುಲಿಕೇಶಿ ಅವನನ್ನು ನರ್ಮದಾ ನದಿಯ ತೀರದಲ್ಲಿ ಎದುರಿಸಿ ಸೋಲಿಸುತ್ತಾನೆ. ಮುಂದೆ ಹರ್ಷದಾನದಿ ಉತ್ತರ ದಕ್ಷಿಣ ಭಾರತದ ಮೇರೆಯಾಗುತ್ತದೆ.

ಶ್ರೀ ಹರ್ಷಳ ನಾಗಾನಂದ ನಾಟಕದಲ್ಲಿ ಐದು ಅಂಕಗಳಿವೆ. ಮೊದಲೆರಡು ನಾಂದಿ ಪದಗಳು ಬುದ್ಧನಿಗೆ ಸಮರ್ಪಿತವಾಗಿವೆ. ನಾಟಕದ ಮೊದಲೆರಡು ಅಂಕಗಳು ನಾಯಕ ಜೀಮೂತವಾಹನ ಮತ್ತು ನಾಯಕಿ ಮಲಯವತಿಯ ಪ್ರೇಮ ಮತ್ತು ವಿವಾಹವನ್ನು ಸಂಬಂಧಿಸಿದ ಸಂಗತಿಗಳನ್ನು ಒಳಗೊಂಡಿವೆ. ಮೂರನೆಯ ದೃಶ್ಯದಲ್ಲಿ ಅರಮನೆ ಹಾಗೂ ಜೀಮೂತವಾಹನನ ಸಂಬಂಧಿಗಳ ಪರಿಚಯ ಉಂಟಾಗುತ್ತದೆ.

ನಾಲ್ಕನೆಯ ಅಂಕ (ದೃಶ್ಯ)ದಲ್ಲಿ ಜೀಮೂತವಾಹನ ಗರುಡನಿಗೆ ಆಹಾರವಾಗಿ ಹೋಗಲಿದ್ದ ಶಂಖಚೂಡನಿಗೆ ಬದಲಾಗಿ ತಾನು ಹೋಗುವ ಸಂಗತಿ ಪ್ರಸ್ತಾಪಿಸಲ್ಪಟ್ಟಿದೆ. ಜೀಮೂತವಾಹನ ತಂದೆ-ತಾಯಿ, ಸಖ, ಸಂತೋಷ, ಪತ್ನಿ ಎಲ್ಲರನ್ನು ತೊರೆದು ನಾಗನಿಗೋಸ್ಕರ ಆತ್ಮಬಲಿದಾನಕ್ಕೆ ಸಿದ್ಧನಾಗುತ್ತಾನೆ. ಐದನೆಯ ಅಂಕದಲ್ಲಿ ಗರುಡ ಜೀಮೂತವಾಹನನನ್ನು ಆಹಾರಕ್ಕಾಗಿ ಬಂದಿರುವ 'ನಾಗ' ನೆಂದೇ ಭಾವಿಸಿ ತನ್ನ ಚೂಪಾದ ಕೊಕ್ಕಿನಿಂದ ಮಾಂಸವನ್ನು ಎಳೆದು ತಿನ್ನ ತೊಡಗುತ್ತಾನೆ. ಆದರೆ ಗರುಡನಿಗೆ ಸ್ವಲ್ಪ ಕಾಲದಲ್ಲಿಯೇ ತಾನು ಕೊಲ್ಲತ್ತಿರುವುದು ನಾಗನನ್ನಲ್ಲ, ವಿದ್ಯಾಧರ ರಾಜ ಕುಮಾರ ಜೀಮೂತವಾಹನನನ್ನು ಎಂಬ ಸಂಗತಿ ತಿಳಿಯುತ್ತದೆ. ನಾಯಕ ಜೀಮೂತ ವಾಹನನು, ಕ್ಷಮಿಸುವಂತೆ ಗರುಡ ಪ್ರಾರ್ಥಿಸುತ್ತಾನೆ. ಅಂದಿನಿಂದಲೇ ಅಹಿಂಸಾವ್ರತವನ್ನು ಅನುಸರಿಸಲು ಸಂಕಲ್ಪ ಮಾಡುತ್ತಾನೆ. ಕೆಲ ಹೊತ್ತಿನಲ್ಲಿಯೇ ನಾಗನಕ ಜೀಮೂತ ವಾಹನ ಗರುಡನ ಗಾಯದಿಂದ ನೋವನ್ನು ತಾಳಲಾರದೆ ಕಣ್ಮುಚ್ಚುತ್ತಾನೆ. ನಾಗನಕನ ಪ್ರಾಣ ಉಳಿಯುವ ಸಲುವಾಗಿ ಗೌರೀ ದೇವಿಯ ಪ್ರಾರ್ಥನೆ ನಡೆಯುತ್ತದೆ. ಕೆಲಹೊತ್ತಿನಲ್ಲಿಯೇ ಗರುಡ ದೇವಲೋಕದಿಂದ ಅಮೃತಕಲಶವನ್ನು ತಂದು ಅಮೃತವರ್ಷ ಸುರಿಸುತ್ತಾನೆ. ಅಶರೀರಿಕ್ಷತ ಅಮೃತವರ್ಷದಿಂದ ಗತಿಸಿದ್ದ ಹಾವುಗಳೆಲ್ಲ ಪುನರ್ಜನ್ಮ ಪಡೆಯುತ್ತವೆ. ಸರ್ಪ (ನಾಗ) ಕುಲಕ್ಕೆ ಅಪರಿಮಿತ ಆನಂದವಾಗುತ್ತದೆ. ಜೀಮೂತವಾಹನನು ಜೀವಂತವಾಗುತ್ತಾನೆ. ಅವನ ಬಂಧುಬಳಗಕ್ಕೆ, ಪತ್ನಿಗೆ ಮಿತಿಯಾನಂದವಾಗುತ್ತದೆ. ನಾಟಕ ಆನಂದದೊಂದಿಗೆ ಸುಖಾಂತ್ಯವಾಗುತ್ತದೆ. ನಾಗಗಳ ಆನಂದದೊಂದಿಗೆ ನಾಟಕ ಸುಖಾಂತವಾಗಿ ಮುಕ್ತಾಯವಾಗುವುದೆಂದು ನಾಟಕಕ್ಕೆ 'ನಾಗಾನಂದ' ಎಂದು ನಾಮಕರಣ ಮಾಡಿರುವುದು ಸಮಂಜಸವಾಗಿದೆ.

ನಾಗಾನಂದ ನಾಟಕ ಹಲವಾರು ದೃಷ್ಟಿಗಳಿಂದ ಗಣನೀಯ ಗೌರವ ಸ್ಥಾನವನ್ನು ಪಡೆದಿದೆ. ನಾಟಕದಲ್ಲಿ ಹಿಂದೂ ಮತ್ತು ಬೌದ್ಧ ಧರ್ಮಗಳ ಪ್ರಭಾವ ಸಮವಾಗಿರುವುದನ್ನೂ, ಎರಡು ಧರ್ಮಗಳಿಗೂ ಸಮಾನ ಪ್ರಾಶಸ್ತ್ಯವಿರುವುದನ್ನೂ ಕಾಣಬಹುದಾಗಿದೆ. ನಾಗಾನಂದ ನಾಟಕವನ್ನು ಪಠಿಸಿದಾಗ, ವಿಮರ್ಶೆ ಪಡಿಸಿದಾಗ ನವಗೆ ಮುಖ್ಯವಾಗಿ ಎರಡು ಸಂಗತಿಗಳು ಅಂದರೆ ಹಿಂದೂ ಬೌದ್ಧ ಧರ್ಮಗಳ ಪ್ರಾಧಾನ್ಯತೆ ಅರಿವಾಗುತ್ತದೆ.

ಮೊದಲನೆಯದಾಗಿ ನಾಂದಿ ಶ್ಲೋಕಗಳು ಭಗವಾನ್ ಬುದ್ಧನಿಗೆ ಸಮರ್ಪಿತವಾಗಿವೆ. ದಯಾಪೂರ್ಣ ದೃಷ್ಟಿಯಿಂದ ನಾಟಕದ ನಾಯಕ ಬೌದ್ಧ ಧರ್ಮವನ್ನು ಹೊಂದಿದ್ದ. ಆದರೆ ಅವನು ಆರ್ಯ (ಹಿಂದೂ) ಧರ್ಮ ವಾತಾವರಣದಲ್ಲಿ ಬರೆದಿರುತ್ತಾನೆ. ನಾಟಕದ ಕಥಾವಸ್ತುವೂ ಬೌದ್ಧ ಧರ್ಮದ ಆಧಾರದ ಮೇರೆಗೆ ರೂಪುಗೊಂಡಿದೆ. ಆತ್ಮನಿವೇದನೆ, ಆತ್ಮಬಲಿದಾನ ಬೌದ್ಧ ಧರ್ಮದ ಪ್ರಮುಖ ಮಾರ್ಗಗಳು. ಈ ದೃಷ್ಟಿಯಿಂದ ನಾಗಾನಂದ ನಾಟಕ ಬೌದ್ಧ ಧರ್ಮಕ್ಕೆ ವಿಶೇಷ ಪ್ರಾಧಾನ್ಯತೆ ಕೊಟ್ಟಿರುವ ನಾಟಕವಾಗಿದೆ. ಎರಡನೆಯದಾಗಿ ಜೀಮೂತವಾಹನನ ತಂದೆ ಮತ್ತು ತಾಯಿ ಪೂರ್ವದ ಆರ್ಯ ಧರ್ಮಾನುಸಾರವಾಗಿ ಕಾಡಿನಲ್ಲಿ ವಾನಪ್ರಸ್ಥಾಶ್ರಮದಲ್ಲಿ ವಾಸಿಸುತ್ತಿರುತ್ತಾರೆ. ನಾಟಕದ ನಾಯಕಿ ಮಲಯವತಿ ಜಗನ್ಮಾತೆ ಗೌರಿಯ ಅನನ್ಯ ಭಕ್ತೆ. ಜೀಮೂತವಾಹನ ಗೌರಿ. ದೇವಿಯಿಂದಲೇ ಪತಿಯ ಪ್ರಾಣ ಪಡೆಯುತ್ತಾನೆ.

ನಾಗಾನಂದ ನಾಟಕದಲ್ಲಿ ಪಾತ್ರಗಳು ಸಮವಾಗಿ ಸೇರಿವೆ. ಆದರೆ ಕರುಣ (ಶಾಂತಿ) ಮತ್ತು ವೀರರಸಗಳಿಗೆ ಪ್ರಾಧಾನ್ಯತೆ ವಿಶೇಷವಾದ ಮೊದಲ ಮೂರು ಅಂಕಗಳಲ್ಲಿ ಶೃಂಗಾರ ರಸಕ್ಕೆ ಪ್ರಾಧಾನ್ಯತೆ ದೊರೆತಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಶೃಂಗಾರ ರಸಕ್ಕೆ ಜೊತೆಯಾಗಿರುವಂತೆಯೇ ಮೂರನೆ ಅಂಕದ ಮೊದಲ ಭಾಗದಲ್ಲಿ ಹಾಸ್ಯರಸ ಸೇರಿರುವುದನ್ನು ಕಾಣಬಹುದು. ಈ ಅಂಕದಲ್ಲಿ ನಿರೂಪಿಸಿರುವ ಹಾಸ್ಯ ವ್ಯಂಗ್ಯ ಹಾಸ್ಯವಾಗಿರದೆ ನಾಟಕದ ಕಥೆಗೆ ವಿಶೇಷ ಸಂಬಂಧವನ್ನು ಕಲ್ಪಿಸಿ ಕೊಡುತ್ತದೆ.

ನಾಗಾನಂದ ನಾಟಕದ ಮೊದಲೆರಡು ಅಂಕಗಳು ನಾಯಕ ಜೀಮೂತವಾಹನ ಮತ್ತು ನಾಯಕಿ ಮಲಯವತಿಯರ ಪ್ರೇಮ-ವಿವಾಹಾದಿ ಸಂಗತಿಗಳನ್ನು ಒಳಗೊಂಡಿವೆ. ಕೊನೆಯ ಎರಡು (ನಾಲ್ಕು ಮತ್ತು ಐದು) ಅಂಕಗಳಲ್ಲಿ ನಾಯಕನ ಉದಾತ್ತ ಗುಣ, ಆತ್ಮ ನಿವೇದನೆ ಬಲಿದಾನಗಳ ಸಂಗತಿ ಪ್ರಕಟವಾಗಿದೆ. ಉಳಿದ ಭಿಕ್ಷುಕ, ರೌದ್ರ, ಕರುಣಾರಸಗಳು ಗರುಡ, ಜೀಮೂತವಾಹನನ ತಂದೆ ತಾಯಿ, ಮಲಯವತಿ, ಶಂಖಚೂಡನ ತಾಯಿ ಇವರಪಾತ್ರಗಳಲ್ಲಿ ಮೂಡಿಬಂದಿದೆ. ಅದ್ಭುತ ರಸ ಗೌರಿಯ ದರ್ಶನ ಸಂದರ್ಭದಲ್ಲಿ ಮೂಡಿಬರುತ್ತದೆ. ನಾಟಕದ ಕಥಾವಸ್ತು-ಪಾತ್ರಗಳನ್ನು ಎಲ್ಲವೂ ದೂರದೇಯ, ಅಂಶಗಳನ್ನು ಇಲ್ಲಿ ಪಾತ್ರವೂ ಅನಾವಶ್ಯಕ ಎನಿಸುವುದಿಲ್ಲ. ಪಾತ್ರ ನಿರೂಪಣೆ ಮಂದವಾಗಿದ್ದು ನಾಟಕದ ಯಶಸ್ಸಿಗೆ ಕಾರಣವಾಗಿದೆ.

ಹಾಸ್ಯ ಪಾತ್ರಮತ್ತು ವಸ್ತು ಸನ್ನಿವೇಶಗಳು ಉತ್ತಮ ಶ್ರೇಣಿಯಲ್ಲಿ ಸೇರಿಸಲ್ಪಟ್ಟಿವೆ. ಚೀನಾ ದೇಶದ ಯಾತ್ರಿಕ ಹುಯಾನತ್ಸಾಂಗ್ "ನಾಗಾನಂದ" ನಾಟಕವನ್ನು ರಸಜ್ಞನನ್ನು ವೀಕ್ಷಿಸಿ, ಅನಂದಿಸಿ ಪ್ರಶಂಸಿಸಿದ ಸಂಗತಿ ತಿಳಿದು ಬರುತ್ತದೆ. ಹರ್ಷನ ನಾಟಕಗಳಲ್ಲಿ "ನಾಗಾನಂದ" ನಾಟಕಕ್ಕೆ ಮೊದಲ ಸ್ಥಾನ ದೊರೆಯುತ್ತದೆ.

(ಎಂಟನೇ ಪುಟ ನೋಡಿರಿ)

ನೂರು ಬೇಡಿಕೆ : ಒಂದು ಉತ್ತರ

ನಮ್ಮ ಬದುಕಿನ ಬೇಡಿಕೆಗಳು ಒಂದಲ್ಲ, ಎರಡಲ್ಲ, ನೂರು! ಉದ್ಯೋಗ, ವಿಹಾರ, ಮನೆಯಾತಳತೆ, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಪಾಲನೆ, ವಿವಾಹ..... ಹೀಗೆ ಒಂದರ ಜೊತೆಗೆ ಇನ್ನೊಂದು ಬೇಡಿಕೆ ಸದಾ ಎದುರಾಗುತ್ತದೆ. ನಿತ್ಯ ಆದಾಯವಿರಲಿ, ಮಾಸಿಕ ವರಮಾನವಿರಲಿ ಅವು ಬದುಕಿನುದ್ದಕ್ಕೂ ಬರುವ ಬೇಡಿಕೆಗಳನ್ನು ಇದಿರಿಸಿ ತಕ್ಕ ಪರಿಹಾರ ನೀಡಲಾರವು. ಕ್ರಮವಾಗಿ ಕೂಡಿಟ್ಟ ಹಣ ನಮ್ಮ ಬದುಕಿನ ಸಮಸ್ಯೆಗಳನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸಬಲ್ಲುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದು ಹಣ ಕೈಸೇರಿದಂತೆ ಅದರಲ್ಲಿ ಕೂಡಿಟು. ಬನ್ನಿರಿ. ಹಣದ ಬೇಡಿಕೆ ಬಂದಾಗ ಖಾತೆಯಿಂದ ಬೇಕಷ್ಟು ಮೊತ್ತವನ್ನು ಹಿಂತೆಗೆಯಿರಿ. ಮರಳಿ ಹಣ ಕೈಗೆ ಬಂದಾಗ ಅದನ್ನು ಖಾತೆಯಲ್ಲಿ ತುಂಬಿರಿ. ಎಷ್ಟೊಂದು ಅನುಕೂಲ! ತೀರಾ ಸರಳ ಮಾದರಿಯ ಖಾತೆಯಿದು.. ಅದರ ಪ್ರಯೋಜನ ಹೊಂದಲು ತಮಗೆ ಸಮೀಪವಿರುವ ನಮ್ಮ ಬ್ಯಾಂಕಿನ ಶಾಖೆಯಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮೀಟ್ಟ. ಶಾಖೆಗಳು. 250ಕ್ಕೂ ಮೀಟ್ಟ. ಟಿ. ಎ. ಪೈ, ಚೆಯರ್‌ಮೇನ್

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

S.C. No.41/68

ದಾವೆದಾರ ಶ್ರೀ ಬಿ. ಕೃಷ್ಣ ಭಟ್ಟ—ವಾದಿ ಮತ್ತು

ಅಪ್ಪಿ ಪೂಜಾರ್ತಿ ಕೂಡಾ ೨ ಪ್ರತಿವಾದಿರು ಇವರೊಳಗೆ

1. ಅಪ್ಪಿ ಪೂಜಾರ್ತಿ, 2. ಸಂಜು-ಪೂಜಾರ್ತಿ —ಅಕ್ಕ ಮಗ್ಗಿನ ಮಕ್ಕಳು, 3. ಗುಲ್ಲಿ ಪೂಜಾರ್ತಿ—ಶೀಲಿ ಹೆಂಗ್ಸಿನ ಮಗಳು, ಉಡ್ಪಿ ತಾಲ್ಲೂಕು ಪಡುಗ್ರಾಮ.

ವಾದಿರು ಪ್ಲೆಂಟು ನಿವೃತ್ತಿಗೋಸ್ಕರ ಪಿಂಡ. ಮೇಲೆ ಮಾಡಿದ ಮೇಲಿನ ದಾವೆಯ ತಾರೀಖು 26-6-68ಕ್ಕೆ ತಪ್ಪಿಗೆ ಯಿಟ್ಟಿರುವುದರಿಂದ ಅದ್ದಲ್ಲಿ ಸಾಧಿಸುವುದಿದ್ದರೆ ಮೇಲಿನ ತಾರೀಖು ಹಗಲು ಗಂಟೆ 11ಕ್ಕೆ ಈ ಕೋರ್ಟಿನಿಂದ ಹಾಜರಾಗಿ ಜಾಹೀರುಮಾಡಿಕೊಳ್ಳುವುದು.

Y.C.S.Hegde.
Advocate for Plaintiff.

ಉಡ್ಪಿ, ತಾ. 17.6.68.

ಅಭಿಪ್ರಾಯ

ಭಾರತದ ಅಪೂರ್ವ ದೃಶ್ಯ

ಬರೆದವರು: ಶ್ರೀ ಶಿವಶಂಕರ.

ದೇಶದೊಳಗೆ ಅಧಿಕಾರ ಲಾಲಸೆಯಿಂದ ಇಲ್ಲಿರುವ ರಾಜಕೀಯ ಪಕ್ಷಗಳು ಒಂದನ್ನು ಇನ್ನೊಂದು ಶತ್ರು ಪಡೆಯುಂತೆ ಕಾಣುತ್ತಿದ್ದು, ಅದನ್ನು ಮುರಿದುಬಿಡಲು, ಅದೇಕೂ ಮಾಡಲೂ ಸಿದ್ಧವಾಗಿ ನಿಂತಿವೆ. ರಾಜಕೀಯ ಮಣಿಗಳನ್ನು ಹುಡಿಮಾಡಿ ಬಿಸಾಡಲಾಗುತ್ತಿರುವಾಗ ಸಾಮಾನ್ಯ ಕಾರ್ಯಕರ್ತನ ವಿಷಯ ಹೇಳಬೇಕಾಗಿರುವಂತಿಲ್ಲ. ಈ ರಾಜಕೀಯ ಪಕ್ಷಗಳಲ್ಲಿ ಹೆಚ್ಚಿನವು ಹೊರ ರಾಷ್ಟ್ರಗಳೊಂದಿಗೆ ನೇರ ಹಾಗೂ ಪರೋಕ್ಷ ಸಂಬಂಧವನ್ನಿಟ್ಟುಕೊಂಡಿವೆ ಕೆಲವು ಪರದೇಶಗಳತ್ತ ಆಸೆಯ ನೋಟವನ್ನು ಬೀರುತ್ತಿವೆ. ಕೆಲವು ಪಕ್ಷಗಳು ಚೈನಾ ರಷ್ಯಾದತ್ತ, ನೋಡಿದಷ್ಟು ಇನ್ನು ಕೆಲವು ಅಮೇರಿಕಾ-ಇಂಗ್ಲೆಂಡ್‌ಗಳತ್ತವೂ, ಮತ್ತೆ ಕೆಲವು ಪಾಕಿಸ್ತಾನ-ಅರಬ ದೆಶಗಳತ್ತವೂ ನೋಡುತ್ತಿವೆ. ಆ ದೇಶದಳ್ಳಿ ಮಳೆ ಬಂದಲ್ಲಿ ಅವರು ಇಲ್ಲಿ ಕೊಡೆ ಹಿಡಿಯುತ್ತಾರೆ! ಹೇಗಾದರೂ ಸರಿ; ಅಧಿಕಾರದ ಆಸನ ಕೈಗೆ ಸಿಕ್ಕಿದಲ್ಲಿ ಸರಿ.

ಮತೀಯ ಮಟ್ಟದಲ್ಲೂ ಹಾಗೆನೇ. ಅವರ ಪವಿತ್ರ ಕ್ಷೇತ್ರಗಳಿರುವುದು ಇಲ್ಲಿ ಅಲ್ಲ. ಇಲ್ಲಿರುವ ಪವಿತ್ರ ಕ್ಷೇತ್ರಗಳು ನಾಶವಾದಾಗಲೇ ಅವರಿಗೆ ಆತ್ಯಾನಂದ! ಮಹೇಶ್ವರನ ಮಂದಿರ ಮಸೀದಿಯಾದಾಗ ಅವರಿಗೆ ಮಹಾನಂದವಾಗುತ್ತದೆ. ಶ್ರೀ ಕೃಷ್ಣನ ದೇವಾಲಯವು ಕ್ರಿಸ್ತ ದೇವಾಲಯವಾದಾಗಲೇ ಅವರಿಗೆ ಅತೀವ ಆನಂದ. ಇಲ್ಲಿಯ ಮಸೂಯಮ್ಮನ ದೇವಸ್ಥಾನಗಳು ಮೇರಿಯ ಮಂದಿರಗಳ ದಾಗಲೇ ಅವರಿಗೆ ಮಹಾಸಂತಸ. ಭಾರತ ಇನ್ನೂ ಪೂರ್ಣ ಪಾಕಿಸ್ತಾನವಾಗದಿರುವುದಕ್ಕೆ ಪಶ್ಚಾತ್ತಾಪ ಪಡುವವರು ಕೆಲವರು. ಡಚ್ಚರು, ಫ್ರೆಂಚರು, ಆಂಗ್ಲೇಯರು ಅಲ್ಲದೆ ಪೋರ್ಚುಗೀಸರು ಇಲ್ಲಿಂದ ಕಾಲ್ಕಿಗೆದ ದಕ್ಕೆ ಕಣ್ಣೀರಿಟ್ಟವರು ಕೆಲವರು. ದೇವಸ್ಥಾನಗಳು ಕಾರ್ಮಿಕರ ಕಾರ್ಯಾಲಯಗಳೆಂಬ ರಾಜಕೀಯ ರಂಗವಾಗಲಿಲ್ಲವಲ್ಲಾ ಎನ್ನುತ್ತ ಕರುಬುವವರು ಕೆಲವರು.

ಸಂಸ್ಕೃತ ಹಾಗೂ ಇತರ ಭಾರತೀಯ ಭಾಷೆಗಳ ಸರ್ವನಾಶ ಇನ್ನೂ ಆಗಿರುವದಿಲ್ಲ, ಇಂಗ್ಲೀಷ್ ಇನ್ನೂ ಬರಲಿಲ್ಲವಲ್ಲಾ ಎಂದು ಕಡಬಡಿಸುತ್ತಿರುವವರು ಕೆಲವರು. ಭಾರತೀಯರತೆಯ ಬುಡ ಮೇಲಾಗಿ ಪಾಶ್ಚಾತ್ಯತೆಯ ಪಾರ ಇನ್ನೂ ಆರಂಭವಾಗಲಿಲ್ಲವಲ್ಲಾ ಎಂದು ಅಳುತ್ತಿರುವವರು ಕೆಲವರು. ಅವರಿಗೆ ಚೈನೀ ವೀರರು, ರಷ್ಯಾದ ಧೀರರು, ಬ್ರಿಟನಿನ ಪರಾಕ್ರಮಿಗಳ, ಅಮೇರಿಕದ ವಿಜ್ಞಾನಿಗಳ...ಜೀವನ ಚರಿತ್ರೆ ಕಿವಿಗೆ ಬಿದ್ದಾಗಲೇ ಸ್ವರ್ಗ; ಭಾರತೀಯರ ಜೀವನ ಚರಿತ್ರೆ ಕಿವಿಗೆ ಬಿದ್ದಾಗ ಲೆಲ್ಲ ನರಕದಲ್ಲಿ ಬಿದ್ದಂತಾಗುತ್ತದೆ. ಈ ಪಾಪಿಗಳ, ಕಾಫಿರರ, ಪ್ರತಿಗಾಮಿಗಳ ವಿಷಯ ತಿಳಿದುಕೊಳ್ಳುವದು ನ್ಯಾಯವೇನು?

ಮತ್ತೆ ಕೆಲವರ ಮನೋಭಾವನೆಯು ಮಹದಾಶ್ಚರ್ಯಕರವಾದದ್ದೇ ಇದೆ. ಇಲ್ಲಿಯವರು ಆಡಳಿತ ನಡೆಸಲು ಸಮರ್ಥರಲ್ಲ. ಅವರು ಗುಲಾಮರಾಗಿರಲೂ ಗುಲಾಮರಾಗಿರಲೂ ಯೋಗ್ಯರು. ಅದುದರಿಂದ ಅಮೇರಿಕನರೋ, ಬ್ರಿಟಿಷರೋ, ರಷ್ಯನರೋ...ಇಲ್ಲೀಶ್ವರರಾಗಿದ್ದು ಭಾರತೀಯರು ಅವರಂದಂತೆ ನಡೆದುಕೊಳ್ಳುತ್ತಿರಬೇಕೆಂಬುದು ಅವರ ಅಭಿಲಾಷೆ ಇದನ್ನು ಹೇಳಿಕೊಂಡಷ್ಟು ಅವರಿಗೆ ತೃಪ್ತಿ ಇಲ್ಲ. ತನ್ನ ಪರಂಪರೆಯ ಅರಮನೆ ಹಾಗೂ ಅನ್ಯ ದೇಶೀಯರ ಗುಣಗಾನವೇ ಅವರ ನಿತ್ಯಕರ್ಮವಾಗಿ ಬಿಟ್ಟಿದೆ. ಅದಕ್ಕೆ ಅಪವಾದವಾಗಿ ಅದ್ಯಾರಾದರೂ ತಾನು ಸಶಕ್ತ ಭಾರತೀಯನೆಂದಲ್ಲಿ ಅವನಿಗೆ ಶನಿದೆಸೆ ಆರಂಭವಾಗಿ ಬಿಡುತ್ತದೆ.

ದೇವಾಲಯಗಳಲ್ಲಿಂದು ಕಳವಾಗುತ್ತಿರುವ ವಿಗ್ರಹ ಹಾಗೂ ಪೂಜಾವಸ್ತು ಮತ್ತು ಆಭರಣಗಳಿಗೆ ಲೆಖ್ಖವೇ ಇಲ್ಲ. ಆ ವಿಷಯ ಅದ್ಯಾನನೂ ಆಲೋಚಿಸುವದೇ ಇಲ್ಲ. ಕಾಶ್ಮೀರದಲ್ಲಿ ಕಾಣಿಯಾದ ಕೂದಲನ್ನು ಹುಡಕಿ ಕಂಡುಹಿಡಿಯುವವರೆಗೂ ಥಿಲ್ಲಿ ಪದ್ದುಗೆ ಗಡಗಡ ನಡುಗುತ್ತಿತ್ತು. ಅಲ್ಲಿನ ದೇವಾಲಯಗಳು ಧ್ವಂಸವಾಗುತ್ತಿರುವದನ್ನು ತಡೆಯಲು ಇಂದೂ ಸಾಧ್ಯವಾಗಿರುವದಿಲ್ಲ. ಅಲ್ಲಿಂದು ಒಂದು ಕೂದಲಿಲ್ಲ. ಜೀವಂತ ಸ್ತ್ರೀಯರ ಕೂದಲ ರಾಶಿಯನ್ನೇ ಪುಂಡರು ಶತ್ರುರಿಸಿ ಹಾಕುತ್ತಿರುವಾಗಲೂ ಅದನ್ನು ತಡೆಯುವ ಶಕ್ತಿ ಯಾರಿಗೂ ಬಂದಿಲ್ಲ. ಹಿಂದೂ ದೇವಸ್ಥಾನಗಳ ಮೇಲೆ ಭಾರತ ಸರಕಾರಕ್ಕೆ ಹತೋಟಿ ಇದೆ. ಅಲ್ಲಿನ ಆದಾಯದಲ್ಲಿ ಪಾಲು ಪಡೆದ ಕೊಳ್ಳುತ್ತಿದೆ. ಆ ದಾಯ ಇಲ್ಲದಿರುವ ಜೀರ್ಣಾವಸ್ಥೆಯಲ್ಲಿರುವ ದೇವಸ್ಥಾನಗಳನ್ನು ದುರಸ್ತಿಗೊಳಿಸಲು ಯಾವ ಸರಕಾರವೂ ಸಿದ್ಧವಿಲ್ಲ. ಆದರೆ ಅದನ್ನು ಪ್ರಾಚೀನ ಕಟ್ಟಡದ ಸಾಲಿಗೆ ಸೇರಿಸಲೂ ಪರಿಶ್ರಮಿಸಲು ಅದು ಸಿದ್ಧವಾಗಿದೆ.

ಮೂರಿಕಾಂಬಾ, ಕಾಳಿಗುಡಿಗಳಲ್ಲಿಕೋಣಗಳನ್ನು ಬಲಿಕೊಡುತ್ತಿದ್ದದನ್ನು ಸಹಿಸಲು ಅಹಿಂಸಾ ಪ್ರಿಯ ಸರಕಾರಕ್ಕೆ ಸಾಧ್ಯವಾಗಿಲ್ಲವಾದರೂ, ಅದೇ ಸರಕಾರಕ್ಕೆ ಗೋಮಾತೆಯ ವಧೆಯನ್ನು ತಪ್ಪಿಸಲು ಸಾಧ್ಯವಾಗಿರುವದಿಲ್ಲ.

ಈ ರೀತಿ ದಿಲ್ಲಿಯಲ್ಲಿ ಆಧುನಿಕ ದರ್ಬಾರ ಹಾಗೂ ರಾಜ್ಯದಲ್ಲಿ ಅವರ ಪ್ರತಿನಿಧಿಗಳ ಸರಕಾರ, ಇನ್ನೂ ಕೆಲವೆಡೆ 'ನಮುಂಸಕ' ಅಧಿಕಾರ ಲಾಲಸೀ ಸರಕಾರ ಅಲ್ಲದೆ ದೇಶ ವಿರೋಧಿಗಳ ಸರಕಾರ ಸಂಗಾಯವಾಗಿ ಸಾಗುತ್ತಿದೆಯೊದರೂ, ಅನ್ಯಾನ್ಯ ದೇಶಗಳಿಂದ ಭಾರತೀಯರನ್ನು ಹೀರಿ ಹೊರದಬ್ಬುತ್ತಿರುವಾಗಲೂ ಇಲ್ಲಿನ ಜನತೆ ಅದಿನಿತೂ ಮನೋವೇದನೆ ಇಲ್ಲದವರಂತೆ ವರ್ತಿಸುತ್ತಿದೆ. ಅಲ್ಲದೆ, ಭಾಷೆ, ರಾಜ್ಯ, ಜಾತಿಯ ಹೆಸರಿನಲ್ಲಿ ಕೈಹೊಡೆದಾಡಿಕೊಳ್ಳುತ್ತಿದೆ. ಇನ್ನೂ ರಾಷ್ಟ್ರೀಯ ಪ್ರಜ್ಞೆ ಹೆಚ್ಚಿನವರಲ್ಲಿ ಬಂದಿರುವುದಿಲ್ಲ. ಅವರು ಬಾಯಿ ಬ್ರಿಟಿಷರಾಗುವದಕ್ಕೆ ಪ್ರಯತ್ನಿಸುತ್ತಿದ್ದಾರೆ ಅದೇ ಬ್ರಿಟನ್ ಭಾರತೀಯರನ್ನು ಈ ನಿಶ್ಚಿಷ್ಟ ಸ್ಥಿತಿಗಳಿಸಿರುವದಲ್ಲದೆ ಬ್ರಿಟನಿನಿಂದಲೂ ಅಲ್ಲಿ ತಂಗಿರುವ ಭಾರತೀಯರನ್ನು ಗುಲಾಮಿಗಿ ಜೀವಿಸ ನಡೆಸುತ್ತಿರುವ ಭಾರತೀಯರನ್ನು ಹೊರಗಟ್ಟುತ್ತಾ ಇದೆ. ಹೀಗೆ ದೇಶದೊಳಗೂ, ವಿದೇಶಗಳಲ್ಲೂ ಭಾರತೀಯರು ಇಂದ ಹೆಮ್ಮೆಯಿಂದ ಗೌರವದಿಂದ ಬಾಳುವಂತಿಲ್ಲ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಮಾಜವನ್ನಳೆಯುವ ಮಾನದಂಡ

ಪಾಚನಾಭಿರುಚಿ

ಬರೆದವರು: ಶ್ರೀ ಬಿ. ನರಸಿಂಗ ರಾವ್.

'ಓದು ಬಾರದವ ಕಣ್ಣಿದ್ದೂ ಕುರುಡ' ಅನ್ನುತ್ತಾರೆ. ಇದು ನೂರಕ್ಕೆ ನೂರು ಸತ್ಯ. ಓದಿನಿಂದ ದೊರೆಯುವುದಾದ ಅನುಭವ, ಜ್ಞಾನ, ಆನಂದ ಸ್ವಾನುಭವದಿಂದ ದೊರೆಯಲಾರದು.

ಪುಸ್ತಕವೆಂದರೆ -- ಅದು ಕಾದಂಬರಿಯಿರಲಿ, ಚಾರಿತ್ರಿಕವಿರಲಿ, ವೈಜ್ಞಾನಿಕವಿರಲಿ—ಅದು ಮಾನವನ ಅನುಭವದ ರಸಪಾಕ. ತನ್ನ ಅನುಭವವನ್ನೂ, ವಿಚಾರವನ್ನೂ ಇತರರೊಡನೆ ಪಾಲ್ಗೊಳ್ಳುವುದು ಮಾನವ ಸ್ವಭಾವ. ಪುಸ್ತಕವು ಇದಕ್ಕೆ ಅತ್ಯುತ್ತಮ ಮಾಧ್ಯಮ.

ಹಿಂದೆ ತಾಳೆಯ ಗರಿಗಳ ಮೇಲೆ ಬರೆದ ಗ್ರಂಥಗಳೇ ಇದ್ದವು. ಇಂದಾದರೋ ಕಾಗದದ ಹಾಳೆಯ ಆ ಸ್ಥಾನವನ್ನಾಕ್ರಮಿಸಿದೆ. ಹಿಂದಿನಂತೆ ಇಂದು ಜ್ಞಾನವು ಪಂಡಿತ ವರ್ಗದ ಸೊತ್ತಾಗಿಲ್ಲ. ಜನ ಸಾಮಾನ್ಯರಿಗೂ, ಅಭಿರುಚಿಯಿದ್ದರೆ, ಸರಸ್ವತಿಯ ಭಂಡಾರದ ಕೀಲಿಯನ್ನೊಡೆಯಬಹುದು.

"ಓದು ವಿಕೆಯು ಹೆಚ್ಚಿದಂತೆ ನಾವೆಷ್ಟು ಅಜ್ಞಾನಿಗಳಾಗಿದ್ದೆವು! ಇನ್ನೂ ಎಷ್ಟು ಅಜ್ಞಾನವು ನಮ್ಮಲ್ಲಿದೆ!" ಎಂಬ ಅನುಭವ ನಮಗಾಗುತ್ತದೆ

ಓದ ವಿಕೆಯಿಂದ ದೊರೆಯುವ ಲಾಭ ಅನೇಕ ಏಕಾಕಿಯೊಬ್ಬನಿಗೆ ಪುಸ್ತಕವೊಂದು ದೊರೆತರೆ —ಅತನಿಗೆ ಅಭಿರುಚಿಯುಳ್ಳದ್ದು, ಅತನ ಏಕಾಂತ ಇಲ್ಲದಾಗಿ, ಬೇಸರವೆನಿಸದು. ಓದುವಿಕೆಯಿಂದನಮಗೆ ಲೇಖಕನು ಸ್ವಾನುಭವವನ್ನು, ಅತನ ವಿಚಾರವನ್ನು ವಿವರಿಸುತ್ತಾನೆ. ಇವು ವಾಚಕನಿಗೆ ಮಾರ್ಗದರ್ಶಕ, ಕೈದೀವಿಗೆ. ಮತ್ತೆ ಹಾಸ್ಯ-ಕಥೆ ಕಾದಂಬರಿಗಳು ಓದುವಾಗ ಆಗುವ ಮನೋರಂಜನೆ ಇನ್ನೆಲ್ಲಿಂದ ದೊರಕೀತು?

ಇಂದು ಪುಸ್ತಕಗಳೇ ಇಲ್ಲದಿರುತ್ತಿದ್ದರೆ ...? ಈ ಲೋಕದ ಆಗು—ಹೋಗುಗಳ ಪ್ರಚಾರವಾಗುತ್ತಿರಲಿಲ್ಲ. ದೈನಿಕ ಪತ್ರಿಕೆಗಳಲ್ಲಿ ಪ್ರಚಾರಗೊಳ್ಳುವ ವಾರ್ತಾ ವಿವರಣೆಗಳು, ನಮಗೆ ಅಮೇರಿಕಾದಲ್ಲೇನು ನಡೆಯುತ್ತಿದೆ, ಹತ್ತಿರದ ಹಳ್ಳಿಯಲ್ಲಿ ಏನು ನಡೆದಿದೆ, ವಿಶ್ವವೆಲ್ಲ ಸಾಗುತ್ತಿದೆ ಎಂಬಿತ್ಯಾದಿ ಸಾಮಾನ್ಯ ಜ್ಞಾನ ನೀಡುತ್ತವೆ. ದೈನಿಕಗಳನ್ನು ಓದದವರು ತೀರಾ ಕಡಿಮೆ ಅಥವಾ ಯಾರೂ ಇಲ್ಲ.

ಒಂದು ಸಮಾಜದ ಮಾನಸಿಕ ಪ್ರಗತಿ

ಆದೋಗತಿಯನ್ನು ಅಳೆದುಬೇಕೆಂದಿದಲಿ ಇದಕ್ಕೋಸ್ಕರ ಅಲ್ಲಿರುವ ಜನರ ವಾಚನಾಭಿರುಚಿಯನ್ನು ಗಣನೆಗೆ ತೆಗೆದರೆ ಸಾಕು. ಅಶ್ಲೀಲ ಕಾದಂಬರಿ, ವೃತ್ತಪತ್ರಿಕೆಗಳು ಅಲ್ಲಿ ಜನಪ್ರಿಯವಿದ್ದರೆ ಸಮಾಜದ ಮಾನಸಿಕ ಅಧಃಪತನವಾಗಿದೆಯೆಂದರ್ಥ. ರಾಜಕೀಯ ವಿಚಾರಗಳಿಗೆ ಅಲ್ಲಿ ಅಧಿಕ ಸ್ವಾಗತವಿದ್ದರೆ ಜನರಿಗೆ ರಾಜಕೀಯದಲ್ಲಿ ಆಸಕ್ತಿಯಿದೆಯೆಂದಾಯಿತು. ಅಂತೆಯೇ ಧಾರ್ಮಿಕ ಗ್ರಂಥಗಳಿಗೆ ಹೆಚ್ಚು ಮನ್ನಣೆ ಆ ಸಮಾಜದಲ್ಲಿದ್ದರೆ ಜನರು ಸಾತ್ವಿಕರು, ಆದರ್ಶವಾದಿಗಳು ಎಂದು ತಿಳಿಯುವುದ.

"ಲೇಖನಿಯು ಖಡ್ಗಕ್ಕಿಂತಲೂ ಶಕ್ತಿಶಾಲಿ" ಎಂಬ ಆಂಗ್ಲ ಗಾದೆಯಿದೆ. ಲೇಖನಿಯಿಂದ ಹೊರಬಂದ ವಿಚಾರದ ಅಲಗು ಹರಿತವಾದ ಕತ್ತಿಯ ಅಲಗಿಗಿಂತಲೂ ಸಣ್ಣಾಮಕಾರಿಯೆಂದು ಇದರ ಅರ್ಥ. ಲೋಕದಲ್ಲಿ ಕಮ್ಯುನಿಸ್ಟ್ ಕ್ರಾಂತಿ ಪಡೆಯಲು ಪ್ರೇರಣೆ, ಮಾರ್ಗದರ್ಶನ ಕಾರ್ಲ್ ಮಾರ್ಕ್ಸ್‌ನ "ದಾಸ್‌ಕೆಪಿಟಲ್" ಎಂಬ ವಿಚಾರ ಪ್ರಚೋದಕ ಗ್ರಂಥ.

ಆದುದರಿಂದ ಒಂದು ಸಮಾಜವನ್ನು, ರಾಷ್ಟ್ರವನ್ನು ಕಟ್ಟುವುದರಲ್ಲಿ, ರೂಪಿಸುವದರಲ್ಲಿ ರಾಜಕಾರಣಿಗಿರುವಷ್ಟೆ ಹೊಣೆಗಾರಿಕೆ, ಪತ್ರಿಕೆ, ಪುಸ್ತಕಗಳಿಗಿವೆ ಕರ್ತಾರ್ ಲೇಖಕರ ಹೊಣೆಗಾರಿಕೆಯು ರಾಜಕಾರಣಿಯ ಹೊಣೆಗಾರಿಕೆಯಿಂದ ಕಡಿಮೆಯೇನಲ್ಲ. ಜೀನಾದಲ್ಲಿ ಮಾವೊ-ತ್ಸೆ-ತುಂಗ್ ಸ್ವತಃ ಲೇಖಕನೂ, ರಾಜಕಾರಣಿಯೂ ಆಗಿದ್ದಾನೆ. ಅಂತೆಯೇ ಅಲ್ಲಿ ಮಾವೋ ಸರ್ವಸ್ವವಾಗಿದ್ದಾನೆಂದರೆ ಅತಿಶಯೋಕ್ತಿಯಲ್ಲ.

ಪ್ರತಿಯೊಬ್ಬನೂ ತನ್ನ-ತನ್ನ ವಾಚನಾಭಿರುಚಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಪ್ರತಿಯೋರ್ವನಿಗೆ ರುಚಿಯಲ್ಲೂ ವೈವಿಧ್ಯವಿದೆ. ಕೆಲವರಿಗೆ ಪತ್ತೇದಾರಿ ಕಾದಂಬರಿ ಇಷ್ಟ. ಇತರರಿಗೆ ಮೈಚಾರಿಕ ಲೇಖನಗಳಲ್ಲಿ ಆಸಕ್ತಿ. ಇನ್ನಿತರರಿಗೆ ವೈಜ್ಞಾನಿಕ, ಚಾರಿತ್ರಿಕ ವಿಷಯಗಳು ಪ್ರಿಯ. ಈ ರೀತಿ ವೈವಿಧ್ಯಮಯ ರುಚಿಯೇ ಎಲ್ಲರದ್ದು. ಆದರೂ ಕೇವಲ ಅನ್ಯವಹಾರಿಕ ಜ್ಞಾನವನ್ನೆ ತಲೆಗೆ ತುಂಬಿಕೊಳ್ಳುವುದು ಒಳಿತಲ್ಲ. ಕೇವಲ ಪತ್ತೇದಾರಿ ಕಾದಂಬರಿ ಓದುವುದು ಮನೋರಂಜನೆಯಷ್ಟೆ ಆಗಬಹುದು. ಜ್ಞಾನಶಕ್ತಿ, ವೈಚಾರಿಕ ಶಕ್ತಿ ಬೆಳೆಯಲು ಅಲ್ಪಸ್ವಲ್ಪ ಇನ್ನಿತರ ವಿಷಯಗಳನ್ನು—ಲೋಕದ ಆಗುಹೋಗುಗಳನ್ನರಿಯಲು ರಾಜಕೀಯ, ವೈಜ್ಞಾನಿಕ ಲೇಖನಗಳನ್ನು—ಅಲ್ಪಸ್ವಲ್ಪ ಓದುವುದು ಉತ್ತಮ. ಇಲ್ಲವಾದರೆ ಭವಿಷ್ಯ ಬಾಳು ಕೂಡ ಅಂಧಕಾರದಂತೆ ಅದೀತು.

ಪುಸ್ತಕವನ್ನು ಓದಿ ಮುಗಿಸಿದಾಗ ನಾವು ಹಿಂದಿನ ಮನುಷ್ಯರೇ ಅಲ್ಲ; ನವ್ಯ ಬಾಳಿನಲ್ಲಿ ಹೊಸತೊಂದು ವಿಚಾರಧಾರೆಯನ್ನು ನಾವು ಹರಿಯಗೊಡತ್ತೇವೆ. ಇದರಿಂದಾಗಿ ಜೀವನದಲ್ಲಿ ಹೊಸತೊಂದು ಅಧ್ಯಾಯವನ್ನು ಬರೆಯುತ್ತೇವೆ.

ಆದುದರಿಂದ ವಾಚನಾಭಿರುಚಿಯನ್ನು ಬೆಳೆಸಿರಿ. ಪುಸ್ತಕ ಹುಳು ಮಾತ್ರ ಆಗದಿರಿ. ಓದುವಿಕೆಯಾಗಿ ಓದಬೇಡಿ. ಓದುವುದರಿಂದ ಲಾಭ ಪಡೆಯುವಂತೆ ಓದಿ. ಆದರೆ ಒಂದು ಮಾತು. ಓದಿ—ಓದಿ ಮಾತ್ರ ಮರುಳಾಗಬೇಡಿ—ಕೋಚ ಭಟ್ಟನಂತೆ!

ಇದು ಬರಿಯ ಅಂಕಿತನಾಮ

ವಿವೇಕದ ಹಲ್ಲುಗಳ ವಾಸ್ತವಿಕ ಪರಿಚಯ

ಬರೆದವರು: ಡಾ॥ ಸುಂದರ್ ಜಿ. ನಜಿರಾನಿ.

ಸಾಮಾನ್ಯವಾಗಿ ಮಾನವನ ಜೀವನದಲ್ಲಿ ಹೆರನೆಂಟನೇ ವಯಸ್ಸಿನಿಂದ ಇಪ್ಪತ್ತೈದನೆಯ ವರ್ಷದ ವರೆಗಿನ ಅವಧಿಯಲ್ಲಿ ಮೂಡುವ ವಿವೇಕದ ಹಲ್ಲುಗಳು ಹಲವರ ಬಾರಿ ಉಳಿದ ಹಲ್ಲುಗಳಿಗೆ ಅಡ್ಡಿ ಮಾಡುವುದು ಮಾತ್ರವಲ್ಲದೆ ಇನ್ನು ಕೆಲವು ಪ್ರಕರಣಗಳಲ್ಲಿ ವಿದ್ಯಾರ್ಥಿಗಳಿಗೆ ಅವರ ಕಾಲೇಜ ಜೀವನದ ದಿನಗಳಲ್ಲಿ ಸಾಮಾನ್ಯವಾಗಿ ಆಗಾಗ ತೊಂದರೆಯ ಸೀಮೆಯುವ ಮೂಲಕಾರಣವಾಗುತ್ತದೆ.

ಮೇಲು ಮತ್ತು ಕೆಳ ದವಡೆಗಳಲ್ಲಿ ಮೂಡುವ ಈ ಹಲ್ಲುಗಳ ಸಂಖ್ಯೆ ಒಟ್ಟು ನಾಲ್ಕು ವಿಶಾಲವಾದ ಪ್ರಕ್ರಿಯೆಗಳನುಗುಣವಾಗಿ ಮನುಷ್ಯನ ದವಡೆಗಳು ಕಿರಿದಾಗಿ ಹೋಗುತ್ತಿರುವುದರಿಂದಾಗಿ ಅವು ಹೆಚ್ಚಿನ ಪ್ರಕರಣಗಳಲ್ಲಿ ಮನುಷ್ಯನ ಯುವಾವಸ್ಥೆಯಲ್ಲಿ ಮೂಡುವ ಈ ನಾಲ್ಕು ಹಲ್ಲುಗಳಿಗೆ ಅವಶ್ಯಕವಾದಷ್ಟು ಅವಕಾಶವನ್ನೀಯಲು ಅಸಮರ್ಥವಾಗುತ್ತವೆ.

ಅದರಿಂದಾಗಿ ಈ ವಿವೇಕದ ಹಲ್ಲುಗಳು ನೊಂದಲಿನ ಹಲ್ಲುಗಳ ಸಾಲುಗಳಲ್ಲಿ ಬೆಳೆಯದೆ ಒಕ್ಕೆಕೊರೆಯಾಗಿ ಕುಳ್ಳುವುವು. ಆಗ ಇವು ಆಹಾರವನ್ನು ಜಗಿಯುವ ಕಾರ್ಯವನ್ನು ಮಾಡಲು ಅಸಮರ್ಥವಾಗಿ ಸ್ಥಿರಪಡೆದಿರುತ್ತವೆ.

ಅವ್ಯವಸ್ಥಿತವಾಗಿ ಮೂಡಿ ಬಂದ ವಿವೇಕದ ಹಲ್ಲುಗಳ ಪರ್ಶ್ವದಲ್ಲಿರುವ ಹಲ್ಲುಗಳು ಕೂಡ ಅವುಗಳ ಸಂಸರ್ಗದಿಂದಾಗಿ ಕೆಲವು ಅಂಟು ರೋಗಗಳಿಗೆ ಒಳಗಾಗಿ ಕೊಂದರ್ಗೀಡಾಗುವುವು. ವಿದ್ಯಾರ್ಥಿಗಳಿಗೆ ಮಾನಸಿಕ ಶ್ರಮ ಅತ್ಯಧಿಕವಾಗಿರುವ ಪರೀಕ್ಷಾ ಸಮಯದಲ್ಲಿ ಈ ಹಲ್ಲುಗಳು ತುಂಬಾ ನೋವನ್ನುಂಟು ಮಾಡಿ ತೊಂದರೆಯನ್ನು ಕೊಡುವುವು. ಮಾನವನ ಭವಿಷ್ಯ ಜೀವನವನ್ನು ರೂಪಿಸುವ ಸಂದಿಗ್ಧ ಸಂಧಿಕ್ಷಣವಾದ ಪರೀಕ್ಷಾ ಭವನದಲ್ಲಿಯೂ ಈ ವಿವೇಕದ ಹಲ್ಲುಗಳು ತುಂಬ ಪೀಡೆಯನ್ನುಂಟು ಮಾಡಿ ವಿದ್ಯಾರ್ಥಿಯ ಬುದ್ಧಿ ಶಕ್ತಿಯನ್ನು ಕುಂಠಿತಗೊಳಿಸುವುದ ಇದೆ. ಹೀಗಾದರು ಬಾರಿ ಈ ವಿವೇಕದ ಹಲ್ಲುಗಳು ಯುಕ್ತ ಸಮಯದಲ್ಲಿ ಹೊರಗೆ ಮೂಡಿ ಬರುವುದಿಲ್ಲ. ಅಂತಹ ಮೂಡಿ ಬಾರದ ವಿವೇಕದ ಹಲ್ಲುಗಳಿಂದಾಗಿ ದವಡೆಯ, ಉಳಿದ ಜಾಗಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಹಲ್ಲುಗಳು ಅವ್ಯವಸ್ಥಿತ ರೂಪದಲ್ಲಿ ಹೊರ ಮೂಡಲಾರಂಭಿಸುವುವು ಆದರಿಂದಾಗಿ ಪಾಯೋರಿಯಾ ಎಂಬ ವಸಡಿನ ಸಂಬಂಧಪಟ್ಟ ರೋಗಕ್ಕೆ ಮನುಷ್ಯನು ತುತ್ತಾಗುವನು.

ಈ ಹಲ್ಲುಗಳಿಗೆ ವಿವೇಕದ ಹಲ್ಲುಗಳೆಂಬ ಹೆಸರು ಜಾರಿಯಲ್ಲಿದ್ದವಾಗಿದ್ದರೂ ಕೂಡಾ ಪ್ರಕೃತಿಯ ವಿವೇಕದೊಡನೆಯಾವ ರೀತಿಯಲ್ಲಿಯೂ ಇವುಗಳ ಸಂಬಂಧವಿಲ್ಲ. ಆದುದರಿಂದ ಯಾವ ಲಂಚಯೋಗಕ್ಕೂ ಬಾರದೆ ಪದೇ ಪದೇ ಈ ಹಲ್ಲುಗಳು ನೋವನ್ನುಂಟುಮಾಡಿ ತೊಡಗಿದಾಗ ಅವುಗಳನ್ನು ಹಂತಕ್ಕೆ—ವೈದ್ಯರ ಸಲಹೆಯ ಮೇರೆಗೆ ಕೀಳಿಸುವುದೇ ಉತ್ತಮವಾಗಿರುತ್ತದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ವರ್ಷಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - ೨.

Phone— 5711, 5712, 5713 } 3 Lines.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ನಿಮಗೆ ಸೌಕರ್ಯವನ್ನು; ಊಟ, ಉಪಾಹಾರದ ವ್ಯವಸ್ಥೆಯಿದೆ
ಹಾಗೂ ಎಲ್ಲಾ ತರದ ವಿಶೇಷವಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore 2

ಕಣ್ಮರೆಯಾದ ಕವಿಕೋಗಿಲೆ

ಕೋಗಿಲೆಯದೊ ಹಾರಿತು
ನಾಕಲೋಕ ಸೇರಿತು
ಕವಿಗಿಂಪಿನ ನಲ್ವಾಡಿನ
ದನಿ ಕೇಳಿಸದಾಯಿತು।
ಕಾಕ ಘೂಕ ಮಧ್ಯದಲ್ಲಿ
ತನಗೆ ಸಿಗದು ಸುಖವು ಇಲ್ಲಿ
ಎಂದು ಹಾರಿಹೋಯಿತು।
ಭೋಗಗೀತ ಜನಪ್ರೀತ
ವಾಗಿ ಬತ್ತೆ ರಸಪ್ರೀತ
ಹೂತ ಚಿಗುರದಾಯಿತು।
ಕೋಗಿಲೆಯ 'ಕುಹೂ' ಗಾನ
ಕೇಳ್ವರಿಲ್ಲವೆಂದು ಬಾನ
ದಾಟಿ ಸ್ವರ್ಗಕೇರಿತು।
ಶವ ಕೋಗಿಲೆ ಅಮರ ವಿಜಯ
ಬಿಟ್ಟಹೋದ 'ಹಣ್ಣುಕಾಯಿ'
ಅಮರ ಕಾವ್ಯಮೆಳಸಿತು।
ಮಧುರ ಕಾವ್ಯಲೋಕದಲ್ಲಿ
ಮಧ ಮಧುರ 'ಪತ್ರ-ಪುಷ್ಪ'
ಕನ್ನಡಿಗರ ಕಣ್ಣೆನಲ್ಲಿ
ಸುರಿಯುತಲಿದೆ ದುಃಖಬಾಷ್ಪ।
ಅಮರನಾದ ಕೋಗಿಲೆ
ಹಾಡು ಸ್ವರ್ಗದಿಂದಲೆ।

—ಕಾವ್ಯಾರಾಧಕ.

(ಶ್ರೀ. ವಿ. ಸೀತಾರಾಮಯ್ಯ ಕಣ್ಮರೆಯಾದ ಖ್ಯಾತ ಕವಿ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರನ್ನು ಸ್ಮರಿಸಿ ಬರೆದ ಶ್ರದ್ಧಾಂಜಲಿ)

ಆತ್ಮ ಜ್ಞಾನವನ್ನು ಚಿಂತನೆಯಿಂದ ಲಭ್ಯವಾಗುವುದಕ್ಕಿಂತ ಹೆಚ್ಚಾಗಿ ಕರ್ಮಾಚರಣೆಯಿಂದ ದೊರೆಯುತ್ತದೆ. ನಿಮ್ಮ ಕರ್ತವ್ಯದಲ್ಲಿ ಆಸಕ್ತರಾಗಿರಿ—ಅಂದರೆ ನಿಮ್ಮ ನೀರೀಕ್ಷೆಯೆಂದು ನಿಮಗೆ ತಿಳಿಯಲು ಬಹಳ ಕಾಲ ಹಿಡಿಯದು.

ಕೊಡುವುದನ್ನು ಕೊಟ್ಟರೆ ಉಳಿದದ್ದೆಷ್ಟೆಂದು ತಿಳಿಯುತ್ತದೆ.

ಎಷ್ಟು ನಿರಂಕುಶಾಧಿಕಾರವೂ ಕೆಟ್ಟದ್ದೇ. ಆದರೆ ಸ್ವಾತಂತ್ರ್ಯದ ಸಾಧನವನ್ನು ಉಪಯೋಗಿಸುವ ನಿರಂಕುಶಾಧಿಕಾರವು ಎಲ್ಲಕ್ಕಿಂತ ಅನಿಷ್ಟ.

ಮಾನವನ ಸತ್ಯ ಭಕ್ತಿಯ ಆಧ್ಯಾತ್ಮಿಕ ಸಾಧನೆಯಲ್ಲಿ ಒಂದು ಮಹತ್ವದ ಅಂಶ.

ಶ್ರೀ ಹರ್ಷನ ನಾಟಕಗಳು

(ಐದನೇ ಪುಟದಿಂದ)

ರತ್ನಾವಳಿ ನಾಲ್ಕು ಅಂಕಗಳ ನಾಟಕ. ಸಿಂಹಳದ ರಾಜಕುಮಾರಿ ರತ್ನಾವಳಿಯ ಕಥೆ ನಾಟಕದ ಕಥಾವಸ್ತು. ರತ್ನಾವಳಿ ಸಾಗರಿಕೆ ಎಂಬ ಹೆಸರಿನಿಂದ ವಾಸವದತ್ತೆಯ ದಾಸಿಯಾಗಿರುತ್ತಾಳೆ. ಅವಳ ವಿವಾಹ ಕೌಶಾಂಬಿಯ ಉದಯನನೊಂದಿಗೆ ನೆಡೆವೇರಿರುತ್ತದೆ. ರತ್ನಾವಳಿ ವತ್ತಡಗಳ ಕಾರಣದಿಂದ ಗುಪ್ತ ನಾಮದಿಂದ ಮರೆಯಾಗಿರ ಬೇಕಾಗಿರುತ್ತದೆ. ರತ್ನಾವಳಿ ನಾಟಕಕ್ಕೆ ಕಾಳಿದಾಸನ ಮಾಳವಿಕಾಗ್ನಿ ಮಿತ್ರ ಅಧಾರವಾಗಿದೆ—ಮಾದರಿಯಾಗಿದೆ ಎಂದು ಹೇಳಬಹುದು. ನಾಯಕಿ ರತ್ನಾವಳಿ ಮತ್ತು ಅವಳ ರತ್ನಾಹಾರದ ಕಾರಣದಿಂದ ನಾಟಕಕ್ಕೆ "ರತ್ನಾವಳಿ" ಎಂದು ಹೆಸರು ಬಂದಿದೆ. ರತ್ನಾಹಾರ ನಾಯಕಿಯನ್ನು ಕಂಡು ಹಿಡಿಯಲು ಮತ್ತು ಅವಳನ್ನು ಗುರುತಿಸಲು ಕಾರಣವಾಗುತ್ತದೆ. ಓದುಗರ ಆಕ್ಷೇಪಣೆಯನ್ನು ಕೇಳಿ ಸುವಂತಹ ರಮಣೀಯ ಕೃತಿ 'ರತ್ನಾವಳಿ' ನಾಟಕ ಎಂದು ಧಾರಾಳವಾಗಿ ಹೇಳಬಹುದು.

'ಪ್ರಿಯದರ್ಶಿಕ' ರತ್ನಾವಳಿಯಂತೆಯೇ ನಾಲ್ಕಂಕಗಳ ನಾಟಕ. ಉದಯನನ ಪ್ರೇಮ ಕಥೆಯೇ ನಾಟಕದ ಮುಖ್ಯ ಕಥಾವಸ್ತು. ಈ ನಾಟಕದ ನಾಯಿಕೆ ಪ್ರಿಯದರ್ಶಿಕೆ ಅರಸು ಶುಮಾರಿಯಾದರೂ ಅನೇಕ ಅಡಚಣೆಗಳಿಂದ—ಆಕಂಕಗಳಿಂದ ಅರಣ್ಯಿಕ ಎಂಬ ಹೆಸರಿನಿಂದ ರಾಣಿ ವಾಸವದತ್ತೆಯ ದಾಸಿಯಾಗಿರಬೇಕಾಗಿರುತ್ತದೆ. ರಾಣಿ ವಾಸವದತ್ತೆಯಾ ವಯೋವೃದ್ಧ ಗೆಳತಿ ಸಂಕೃತ್ಯಾಯನಿ ಮತ್ತು ವಿದೂಷಕ ಅರಸನ ಪ್ರೇಮ ಪ್ರಕರಣದಲ್ಲಿ ಸಹಾಯಕರಾಗುತ್ತಾರೆ. ವಾಸವದತ್ತೆ ಉದಯನನನ್ನು ವಿವಾಹವಾಗುವ ಕಾಲದಲ್ಲಿ ಒಂದು ನಾಟಕವನ್ನೇ ಕೂಡಬೇಕಾಗಿರುತ್ತದೆ.

ಪ್ರಿಯದರ್ಶಿಕ ನಾಟಕದಲ್ಲಿ ಹೊಸ ಬಗೆಯ ಪ್ರೇಮ ಪ್ರಕರಣ ಒಂದು ಮೂಡಿ ಬರುತ್ತದೆ. ಅರಸ ಉದಯನ ತನ್ನ ಪಾಲಿನ ಜಾಣ್ಮೆಯ ತಂತ್ರವನ್ನು ಸಮರ್ಪಕವಾಗಿ ಅರಿತು ಅಭಿನಯಿಸುತ್ತಾನೆ. ಅರಣ್ಯಿಕ ರಾಣಿ ಸುವಾತ್ರವನ್ನು ಅಭಿನಯಿಸುತ್ತಾಳೆ. ವಾಸವದತ್ತೆ ಸಂಗತಿ ಎನ್ನ ತಳಿದು ಅರಣ್ಯಿಕೆಯನ್ನು ಬಂಧಿಸಿ ಸೆರೆಯಲ್ಲಿಡುತ್ತಾಳೆ. ವಾಸವದತ್ತೆ ಮರೆಯಾದ ಶರುವಾಯ ಅರಣ್ಯಿಕ ವಿಷ ಸೇವಿಸಿ ಗುಣಪಡಿಸಲು ಉಳಿದಿದ್ದ ವೈದ್ಯ ವೃತ್ತಿ ಉದಯನ ಬಳಿಗೆ ಬರುತ್ತಾಳೆ. ಅರಮನೆಯಲ್ಲಿ ಅಜ್ಞಾತವಾಗಿ ರಾಣಿಯ ಚಿಕ್ಕಪ್ಪ (ಚಿಕ್ಕಮ್ಮನ ಗಂಡ) ಅಲ್ಲಿಯೇ ಇದ್ದು ಅರಣ್ಯಿಕೆಯನ್ನು ಗುರುತಿಸಿ ಹೆಣ್ಣರಸ ಕುವರಿ ಪ್ರಿಯದರ್ಶಿಕೆ ಎಂದು ಹೇಳುತ್ತಾಳೆ; ಉದಯನನು ಮಂತ್ರವಿದ್ಯೆಯಿಂದ ಅವಳನ್ನು ಗುಣಪಡಿಸಿ, ಪುನಃ ಕೃಷ್ಣಣಿ ಬರುವಂತೆ ಮಾಡುತ್ತಾನೆ. ವಾಸವದತ್ತೆಗೆ ಪ್ರಿಯದರ್ಶಿಕೆ ತನ್ನ ತಂಗಿ ಎನ್ನುವ ಸಂಗತಿ ತಿಳಿಯುತ್ತದೆ. ಉದಯನ ಮತ್ತು ಪ್ರಿಯದರ್ಶಿಕೆಯರ ವಿವಾಹಕ್ಕೆ ಸಂತೋಷದಿಂದ ಸಮ್ಮತಿಸುತ್ತಾಳೆ.

ಹರ್ಷನ ಕೃತಿಗಳಲ್ಲಿ ತಮ್ಮದೇ ಆದ ಸೊಬಗು, ರಮಣೀಯತೆಯನ್ನು ಕಾಣಬಹುದು. ರತ್ನಾವಳಿ ಮತ್ತು ಪ್ರಿಯದರ್ಶಿಕೆ ನಾಟಕಗಳ ಮೂಲಕ ಹರ್ಷನ ಹೆಸರು ಸಂಸ್ಕೃತ ಸಾಹಿತ್ಯ ಶ್ರೇಣಿಯಲ್ಲಿ ಮೆರೆಯದಿದ್ದರೂ ಕಥಾವಸ್ತು ಮತ್ತು ಪಾತ್ರಪೋಷಣೆಯ ದೃಷ್ಟಿಯಿಂದ ಅವುಗಳಿಗೆ ಗಣನೀಯ ಸ್ಥಾನವನ್ನು ಗಳಿಸಿಕೊಟ್ಟಿದೆ. ಎರಡು ನಾಟಕಗಳ ಕಥಾವಸ್ತು ಅದ್ವಿತೀಯವಾಗಿದೆ ಮತ್ತು ಪರಿಣಾಮಕಾರಿಯಾಗಿದೆ. ಕವಿ ಹರ್ಷನ ಜಾಣ್ಮೆಯುಳ್ಳ ಶಕ್ತಿಗೆ ಪ್ರಿಯದರ್ಶಿಕಾ ನಾಟಕ ಉದಾಹರಣೆಯಾಗಿದೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ನ.)

ಸುಧನ್ವ ಕಾಳಗ: (ಅರ್ಥ ಸಹಿತ).

ಲೇಖಕರ: ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ.

ಪ್ರಕಾಶಕರು: ಎಸ್. ರವೀಂದ್ರನಾಥ ಶೆಟ್ಟಿ, ಸುಬೋಧ ಸಾಹಿತ್ಯ ಭಂಡಾರ ಹಿರಿಯಡಕ (ದ. ಕ.)

ಪುಟಗಳು: ೬೪ ಬೆಲೆ: ರೂ. ೧-೦೦.

ಯಕ್ಷಗಾನ ಪ್ರಸಂಗಗಳಲ್ಲಿ ಸುಧನ್ವ ಕಾಳಗವು ಮನೋಜ್ಞವೂ ಮರ್ಮಸ್ಪರ್ಶಿಯೂ ಆದುದು. ಎಂತಲೇ ಇದು ಅತ್ಯಂತ ಜನಪ್ರಿಯ ಪ್ರಸಂಗಗಳಲ್ಲಿ ಒಂದೆನಿಸಿದೆ. ಜಿಲ್ಲೆಯ ಪ್ರಖ್ಯಾತ ಯಕ್ಷಗಾನ ಅರ್ಥಧಾರಿಗಳಲ್ಲಿ ಒಬ್ಬರಾದ ಶ್ರೀ ಸೀತಾನದಿ ಗಣಪಯ್ಯ ಶೆಟ್ಟರು ಈ ಪ್ರಸಂಗದ ಪದ್ಯಗಳಿಗೆ ಅರ್ಥವಿಶ್ವಾಸಿ ಅರ್ಥ, ಬರೆದು ಅಭ್ಯಾಸಿಗಳಿಗೆ ತುಂಬ ಉಪಕಾರ ಮಾಡಿದ್ದಾರೆ. ಸರಳ ಸುಂದರ ಭಾಷೆ, ಸುಲಭಗ್ರಾಹಿ ಶೈಲಿ ಪುಸ್ತಕಕ್ಕೆ ಮೆರಗನ್ನಿತ್ತಿದೆ. ಯಕ್ಷಗಾನ ಕಲಾಭ್ಯಾಸಿಗಳಿಗಿದೊಂದು ಉತ್ತಮ ಕೈಪಿಡಿ. ಶ್ರೀ ಶೆಟ್ಟರ ಶ್ರಮ ಸಂಪೂರ್ಣ ಸಾರ್ಥಕ.

ಯೋಗಿರಾಜ ಸ್ವಾಮಿ ದಯಾನಂದ ಸರಸ್ವತಿ.

ಬರೆದವರು: ಪಂಡಿತ್ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿ.

ಪ್ರಕಾಶಕರು: ಶುದ್ಧ ಧರ್ಮ ಪ್ರಚಾರಕ ಗ್ರಂಥಮಾಲಾ, ಬೆಂಗಳೂರು.

ಪುಟಗಳು: ೬೮. ಬೆಲೆ: ರೂ. ೨-೦೦.

"ಆರ್ಯ ಸಮಾಜ"ದ ಪ್ರವರ್ತಕ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಜೀವನ ಮೇಲೆ, ಅವರ ದೇಶಹಿತ ದುಡಿಮೆ, ಸೇವೆಗಳ ಮೇಲೆ ಬೆಳಕು ಚೆಲ್ಲುವ ಎಂಟು ಲೇಖನಗಳ ಸಂಗ್ರಹವಿದು. ಸ್ವಾಮಿ ದಯಾನಂದರ ಕಾಲದಲ್ಲಿ ಭಾರತ ದೇಶ ಮತ್ತು ಹಿಂದೂ ಮತಗಳು ಸರ್ವ ಪ್ರಕಾರೇಣ ಹೀನ ದೆಸೆಯಲ್ಲಿದ್ದು ಅವನ್ನೆಲ್ಲ ಸ್ವಾಮಿಯವರು ಉಳಿಸಿದ ಸೇವೆ, ತೋರಿಸಿದ ಧೈರ್ಯ, ಇರಿಸಿದ ಸ್ಥೈರ್ಯಗಳ ಪರಿಚಯವಿಲ್ಲಿದೆ.

ಇಲ್ಲಿನ ಲೇಖನಗಳ ಭಾಷಾ ಶೈಲಿಯನ್ನು ನೋಡುವಾಗ ಹಿಂದೀ ಭಾಷೆಯ ಅನೂದಿತ ಲೇಖನಗಳಂತೆ ಭಾಸವಾಗುವಷ್ಟು ಅದರ ಪ್ರಭಾವ ಬಿದ್ದುದು ದೃಗ್ಗೋಚರವಾಗುತ್ತಿದೆ. ಭಾಷೆ—ಶೈಲಿ ಕೆಲವೆಡೆ ಅನಾವಶ್ಯಕವಾಗಿ ಜಟಿಲವೆನಿಸಿದೆ. ಉದಾಹರಣೆಗೆ "ಜಪರು ಒಂದು ಬೇಳೆ ಕೋಪೋದ್ರಿಕ್ತರಾದಲ್ಲಿ ದಯಾನಂದರ ವ್ಯಾಖ್ಯಾನಕ್ಕೆ ಶ್ರುತಿಬಂಧಕ ಹೇರಬೇಕಾದೀತು ಎಂಬುದನ್ನು ಅವರಿಗೆ ತಿಳಿಸಿರಿ ಎಂದು ಆದೇಶವಿತ್ತರು, ಲಕ್ಷ್ಮೀನಾರಾಯಣರ ಬಹಳ ಭಯಭೀತರಾಗಿ ಸ್ವಾಮಿ ದಯಾನಂದರನ್ನಿಗೆ ಬಂದು 'ತಾವು ಇಂಗ್ಲೀಷರನ್ನು ಅಪ್ರಸನ್ನಮಾಳಿಸಿದರೆ ಏನಾದರೂ ತೊಂದರೆಗಳು ಬರಬಹುದಲ್ಲವೆ?' ಎಂದು ವಿನೀತಭಾವದಿಂದ ಕೇಳಿಕೊಂಡರು. ಕತ್ಯಾಲ..." (ಪುಟ 41) ಇತ್ಯಾದಿ.

ಶ್ರೀ ಸ್ವಾಮಿ ದಯಾನಂದರ ಜೀವನ ಪರಿಚಯ ಯುವ ಜನಾಂಗದಲ್ಲಿ ಸ್ಫೂರ್ತಿಯನ್ನೂ ದೇಶಪ್ರೇಮವನ್ನೂ ಮೂಡಿಬಲ್ಲದು. ಈ ನಿಬಂಧ ಸಂಗ್ರಹ ಅವರ ಆದರ್ಶ ಜೀವನದ ವಿವಿಧ ಮುಖಗಳ ಮೇಲೆ ಕಿರಣ ಬೀರುವುದು. ಇದ ದರಿಂದ ಸ್ವಾಗತಾರ್ಹ ಕೃತಿ. ಇಂತಹ ಪುಸ್ತಕಗಳಿಂದ ಪರಿಪೂರ್ಣ ಪ್ರಯೋಜನ ಪಡೆಯುವಂತಾಗಬೇಕಾದರೆ, ಶೈಲಿಯು ಸರಳವಿರಬೇಕು. ಓದುಗಳ ಪುಸ್ತಕದ ಬೆಲೆಯೂ ತುಸು ಏರಿಕೆಯಲ್ಲಿದೆಯೆ ನ್ನಬಹುದು.

ಪರಮ ಪೂಜ್ಯ ಗುರುದೇವ ಸ್ವಸ್ತಿ ಶ್ರೀ ನೇಮಿಸಾಗರ ವರ್ಣಿಜಿಯವರು:

ಲೇಖಕರ: ಶ್ರೀ ಮೂನಾಡು ವರ್ಧಮಾನ ಹೆಗ್ಗಡೆ.

ಪ್ರಕಾಶಕರು: ಶ್ರೀ ಮಹಾವೀರ ಭಜನಾ ಮಂಡಳಿ, ಮೂಡುಬಿದಿರೆ, ದ. ಕ.

ಪುಟಗಳು: ೪೮; ಬೆಲೆ: ರೂ. ೧-೦೦.

ಪುಟ್ಟ ಗ್ರಾಮದ ಆಯಕಳದಲ್ಲಿ ಸಣ್ಣ ಮನೆಯಲ್ಲಿ ಜನಿಸಿ ತಮ್ಮ ಪೂರ್ವಜನ್ಮ ವಾಸನೆಯಿಂದೆಂಬಂತೆ ಪರನೋಜ್ವಲ ದೀಪಸ್ತಂಭದಂತೆ ಬಾಳಿ, ಸುಷ್ಟುಮುತ್ತಲಿನ ಲಕ್ಷಾಂತರ ಜೈನ ಮತೀಯ ಬಂಧುಗಳು ತಮ್ಮ ಅಂತರ್ಯದಲ್ಲಿ ಪರಂಜ್ಯೋತಿ ಪರಮಾತ್ಮ ಪ್ರಕಾಶ ಪಡೆದು ಧನ್ಯರಾಗುವಂತೆ ಪ್ರೇರೇಪಣೆ ಕೊಡಿ ತನ್ನ ಜನ್ಮ ಸಾರ್ಥಕಗೊಳಿಸಿದ ಗುರುದೇವ ನೇಮಿಸಾಗರ ವರ್ಣಿಜಿಯವರ ಜೀವನ ಚರಿತ್ರೆಯಿದು. ಪೂರ್ವಣಿ ಮೂಸ್ತರೆಂದು ಹೆಸರಾಗಿ, ಕಾರ್ಕಳ ಮಠದ ಸ್ವಸ್ತಿ ಶ್ರೀ ಲಲಿತಕೀರ್ತಿ ಪಂಡಿತಾಚಾರ್ಯರ ಸ್ವಾಮಿಯವರಿಂದ ಬ್ರಹ್ಮಚರ್ಯ ದೀಕ್ಷೆ ಪಡೆದು, 'ಗುರುದೇವ'ರು ಜೈನ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಕಾರ್ಕಳ ಮಠದ ಪೀಠಾಧಿಕಾರವನ್ನು ಸ್ವೀಕರಿಸಿದರೂ ಮುಂದೆ ಶ್ರವಣಬೆಳಗೊಳದ ಪೀಠವನ್ನಿವರು ಅನಿವಾರ್ಯವಾಗಿ ಏರಬೇಕಾಯಿತು. ಅಲ್ಲಿ ಸಮಾಜದ ಸರ್ವತೋಮುಖ ಪ್ರಗತಿಗಾಗಿ ದುಡಿದರೂ, ಅದೇ ಸಮಾಜದ ದುಷ್ಟ ಶಕ್ತಿಗಳ ಕೀಟಲೆಯಿಂದ ನೊಂದು ಅಧಿಕಾರವನ್ನು ಉತ್ತರಾಧಿಕಾರಿಗಳಿಗೆ ಒಪ್ಪಿಸಿ ತಾವು ಉಜ್ರೆಯಲ್ಲಿ ಬಂದು ನೆಲಸಿದರು. ಶ್ರೀ ಧರ್ಮಸ್ಥಳ ಮಂಜಯ ಹೆಗ್ಗಡೆಯವರ ಸೌಜನ್ಯದಿಂದ ಅಲ್ಲಿಯೇ ಕೈಲಾದ ಸೇವೆ ಸಲ್ಲಿಸಿ ಆದರ್ಶ ಕುಲಪತಿಯಾಗಿ ಕೊನೆಯುಸಿರೆಳೆದರು.

ಜೈನ ಸಮಾಜದಲ್ಲಿ "ಗುರುದೇವ"ರೆಂದು ಹೆಸರಾದ ಶ್ರೀ ಸ್ವಾಮಿಯವರು ಜೀವನವನ್ನು ಸಮಾಜೋನ್ನತಿಗಾಗಿ, ಸಮಾಜ ಜಾಗೃತಿಗಾಗಿ ತೇದವರು. ಗಂಧದ ಕೊರಡು ತಾನು ಸವೆದು ಸುರಿಗೆ ಸುವಾಸನೆ ಕೊಡುವಂತೆ, ಹಿತ್ತಿ ತಾನುರಿದು ಮತ್ತಲವನಿಗೆ ಬೆಳಕು ಕೊಡುವಂತೆ ಬಳಿದವರು. ಇವರ ಪುಣ್ಯ ಚರಿತ್ರೆಯನ್ನು ಬರೆದು ಅವರ ಶಿಷ್ಯರಲ್ಲೊಬ್ಬರಾದ ಶ್ರೀ ಮೂನಾಡು ವರ್ಧಮಾನ ಹೆಗ್ಗಡೆಯವರು ಉತ್ತಮ ಕಾರ್ಯ ಮಾಡಿದ್ದಾರೆ. ಶ್ರೀ ವರ್ಧಮಾನ ಸ್ವಾಮಿ ಬಸದಿ (ಮೂನಾಡು)ಯ ಜೀರ್ಣೋದ್ಧಾರಕ್ಕೆ ಈ ಗ್ರಂಥಮಾಲೆಯ ಪುಸ್ತಕ ಮಾರಾಟದಿಂದ ಬಂದ ಹಣವನ್ನು ವಿನಿಯೋಗಿಸುವ ಉದಾತ್ತತೆಯನ್ನೂ ತೋರಿಸಿದ ಧರ್ಮಭೀರುಗಳಿವರು. ಶ್ರೀಯುತರ ಅಭಿಲಾಷೆಗಳು ನೆರವೇರಲಿ.

ಶ್ರೀಮತಿ ಇಂದಿರಾ ಗಾಂಧಿ -

ಲೇಖಕಿ: ಶ್ರೀಮತಿ ಜಿ. ಎಸ್. ಬಿ.

ಪ್ರಕಾಶಕರು, ವಾಸುದೇವ ಪಬ್ಲಿಕೇಶನ್ಸ್ ಓ/ಓ ಕೆ. ಭೋಜರಾವ್ ಮತ್ತು ಕಂಪೆನಿ, ಕೊಡಿಯಾಲಬೈಲು, ಮಂಗಳೂರು-3.

ಪುಟಗಳು ೧೪; ಬೆಲೆ: ರೂ. ೦-೨೫.

ಚಾರು ಚೆಯನ

ಮೂರು ಅಪೂರ್ವ ಸುದ್ದಿಗಳು

ಸುದ್ದಿಯು ಸತ್ಯವಾಗಿದ್ದರೂ ಕೇಳಿದವರು ನಂಬದಂತಹವೂ ಕೆಲವಿರುವುದುಂಟು. ಸುಳ್ಳುಗಾರರು ಸೃಷ್ಟಿಸಿದ ಸುದ್ದಿಗಳು ಸ್ವಾರಸ್ಯಕರವಿರುತ್ತವೆ; ಅದಕ್ಕಿಂತಲೂ ಸ್ವಾರಸ್ಯತಮವಾದ ಸುದ್ದಿಗಳಿಗೆ ನಮ್ಮ "ಭಾರತ" ಜನ್ಮ ನೀಡುತ್ತಿದೆ—ಶತ್ರ ಕ್ರಿಯೆ ಇದಕ್ಕೆ ಅವಶ್ಯಕ—ಸಹಜ ಪ್ರಸವವಿದು. ಯಾರಾದರೂ ಮಗುವನ್ನು ಕಂಡು ನಗಬಹುದು. ಇದು ಕೇಳಿ ಕರುಹಾಕಿದ ಕಥೆಯಲ್ಲ.

ಭಾರತದ ಸಂಸ್ಥಾನಗಳ ರಾಜ ಮಹಾರಾಜರು ತಮ್ಮ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿ ತಾವು ರಾಜಧನದೊಡನೆ ಕೆಲವು ವಿಶೇಷ ಸೌಲಭ್ಯಗಳನ್ನು ಮಾತ್ರ ಪಡೆಯಲು ಒಪ್ಪಿದ್ದರಷ್ಟೆ? ಜಗತ್ತಿನ ಆದರ್ಶವಾದೀ ಬೃಹತ್ ಪ್ರಜಾರಾಜ್ಯ ಭಾರತದಲ್ಲಿ ಕೆಲವರಿಗೆ ಮಾತ್ರ ವಿಶೇಷ 'ಹಕ್ಕು'ಗಳನ್ನು ಕೊಡುವುದು ಸರಿಯಲ್ಲವೆಂಬ ಮಾನವ ಹಿತಕಾರಿ ಭಾವನೆ ನಡಾಡಿತು. ಇದರಂತೆ ರಾಜ—ಮಹಾರಾಜರಿಗೆ ಇರುವ ವಿಶೇಷಾಧಿಕಾರಗಳನ್ನೂ ಕ್ರಮೇಣ ರಾಜಧನವನ್ನೂ ನಿಲ್ಲಿಸಿ ಬಿಡುವ ಬಗ್ಗೆ ಸಮತಾವಾದಿಗಳು ಭಾರೀ ಉತ್ಸಾಹದಿಂದ್ದಾರೆ. ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕೆಲವೆಡೆ ಕಾಂಗ್ರೆಸ್ಸು ಈ ರಾಜ-ಮಹಾರಾಜಾಧಿಬಿರುದಾಂಕಿತರಿಂದಾಗಿ ಪರಾಜಯವನ್ನಪ್ಪಬೇಕಾದುದು ಯಾರಿಂದಲೂ ಮರೆಸಲಾಗಿಲ್ಲ. ಹಾಗಾಗಿ, ಸಮಾಜವಾದ ಮಾದರಿಯಲ್ಲಿ ಕಲ್ಯಾಣ ರಾಷ್ಟ್ರ ಕಟ್ಟಹೊರಟಿರುವ ಕಾಂಗ್ರೆಸ್ಸಿನ ಕಟು ದೃಷ್ಟಿಯೂ ಈ ರಾಜ-ಮಹಾರಾಜರ ಮೇಲೆ ಬಿತ್ತು. ಈ ಸಮಾಜ-ರಾಜ ಮಹಾರಾಜರನ್ನು "ಶ್ರೀಸಾಮಾನ್ಯ"ರನ್ನಾಗಿ ಮಾಡುವ ಬಗ್ಗೆ ಗಹನ ಪರ್ಯಾಲೋಚನೆ ನಡೆಯುತ್ತಿದೆ.

ಈ ಮಹಾರಾಜರು ತಮ್ಮ ಸ್ಥಾನಮಾನಗಳನ್ನು ಉಳಿಸಲು ಸುಸಂಘಟಿತರಾಗಿದ್ದಾರೆ. ಹಾಗೆಯೇ ಇವರನ್ನು ಖಡಾಖಡಿಯಾಗಿ ಎದುರಿಸಲು ಸಿದ್ಧವಿಲ್ಲದ ಕಾಂಗ್ರೆಸ್ಸು 'ಮಾತುಕತೆಯ' ಮುಖವಾಡ ಹೊತ್ತು ಇವರು ತಾವಾಗಿಯೇ ಸಂಸ್ಥಾನಗಳನ್ನು ತ್ಯಜಿಸಿದಂತೆ ಈ ವಿಶೇಷ ಸೌಲಭ್ಯಗಳನ್ನೂ ರಾಜಧನವನ್ನೂ ಬಿಟ್ಟು ಬಿಡುವ ಬಗ್ಗೆ ಒತ್ತಡವನ್ನು ಹೇರುತ್ತಿದೆ.

ಇಂದಲ್ಲ, ನಾಳೆಯಾದರೂ ಈ ಮಾಜಿ ರಾಜ-ಮಹಾರಾಜರು ತಮ್ಮ ಸೌಲಭ್ಯಗಳನ್ನು ಕಳೆದುಕೊಳ್ಳುವುದು ಕಂಡಿತವೇ. ಸ್ವತಂತ್ರ ಮತ್ತು ಜನಸಂಘ ಪಕ್ಷಗಳನ್ನು ಹೊರತುಪಡಿಸಿ ಇವರೆಲ್ಲರೂ ಇವರ ಮೇಲೆ ಗೃಧ್ರದೃಷ್ಟಿ ಬೀರುತ್ತಲೇ ಇದ್ದಾರೆ. ಸಮಾನತೆ ಮತ್ತು ಸಹೋದರತೆಯ ಈ ಯುಗದಲ್ಲಿ ಕಾನೂನಿನ ದೃಷ್ಟಿಯಲ್ಲೂ ಒಂದು ಕಣ್ಣಿಗೆ ಮಾತ್ರ ಬೆಣ್ಣೆ ಸುರಿಯುವುದು ಅನ್ಯಾಯದ ಸರಮಾವಧಿ.

ಅದೇನಿದ್ದರೂ, ರಾಜ, ಮಹಾರಾಜ ಎಂದು ಕರೆಸಿಕೊಳ್ಳುವ ಹಂಬಲ ಭಾರತೀಯರಲ್ಲಿ 'ಬಕಲ'ವಿದೆ. ಶ್ರೀ ಸಾಮಾನ್ಯನೊಬ್ಬನನ್ನು "ಮಹಾರಾಜ" ಎಂದು ಕರೆದರೆ, ಆತ ರೋಮಾಂಚನಗೊಳ್ಳುತ್ತಾನೆ. ಬಹುಮಾನದ ಆಸೆಯಿಂದ, ಲಕ್ಷಾಂತರ ಗಳಿಸುವ ಮಹತ್ವಾಕಾಂಕ್ಷೆಯಿಂದ ಜೂಜು, ಸಟ್ಟಾ, ಲಾಟರಿ, ಕುದುರೆ ರೇಸುಗಳಲ್ಲಿ ಆಕಸ್ಮಿಕವಾದ ಭಾರತೀಯರು ಸುಕ್ಕಟೆ ಪದವಿಪ್ರಿಯರೂ ಹೌದು. ಒಂದು 'ಪದವಿ"ಗಾಗಿ ಸಹಸ್ರಾರು ರೂಪಾಯಿಗಳನ್ನು ನೀರಿನಂತೆ ಚೆಲ್ಲುವವರಷ್ಟು ನಾವು ನೋಡುತ್ತಿದ್ದೇವೆ. ಪಂಜಾಬದ ಮಾಜಿ ರಾಜರೊಬ್ಬರು ಒಂದು ಸಲಹೆ ಕೊಡಿದ್ದಾರೆ. 'ರಾಜ" ಪದವಿಗೆ ಪ್ರಭಾವವಿಲ್ಲ. ಅದನ್ನು ಸಾರ್ವಜನಿಕವಾಗಿ ಹರಾಜು ಹಾಕಬಹುದು. ಹರಾಜಿನಲ್ಲಿ ಅದನ್ನು ವಹಿಸಿಕೊಳ್ಳುವ ಶ್ರೀಮಂತರು ತುಂಬ ಇದ್ದಾರೆ. ಪದವಿಯ ಬಣ ಹೆಚ್ಚೆಯಿಂದ ಮಾಜಿ ರಾಜಪರಿವಾರ ದುಡಿದ ಗಂಪಾದಿಸಲು ಸಾಧ್ಯವಿಗೆ ಪಡುತ್ತಿದ್ದಾರೆ. ಹೆರಾಜು ಹಾಕಿ ಬಂದ ಹಣವನ್ನೇನು ಮಾತಬೇಕು? ಮಾಜಿ ರಾಜರ ಅಭಿಪ್ರಾಯದಂತೆ, ಕೇಂದ್ರ ಸರಕಾರವೂ ರಾಜ ಮಹೆತನದವರೂ ಹಂಚಿಕೊಳ್ಳಬೇಕು.

ಅಂದರೆ, ಮಾಜಿ ರಾಜರೂ ಅವರ ಮನೆತನದವರೂ ಮೈಮುರಿಯದೆ ಹೊಟ್ಟೆ ತುಂಬಿಸುವ ಇರಾದೆಯುಳ್ಳೇ ಇನ್ನೂ ಇದ್ದಾರೆ! ಹಟ್ಟುಗುಣ ಗಟ್ಟಿ ಹತ್ತಿದರೂ ಬಿಡುವದಿಲ್ಲ!

ಂ ಂ ಂ

ಖಾಸಗಿ ಮತ್ತು ಸರಕಾರಿ ನೌಕರಿಗಳಲ್ಲಿ ಒಂದು ಮಾತ್ರ ಭೇದ. ಅಧಿಕೃತ ನೌಕರನಿಗೆ ಖಾಸಗಿ ರಂಗದಲ್ಲಿ ಏಳಿಗೆಯಿಲ್ಲ; ಕೃಷ್ಟ ನೌಕರನಿಗೆ ಸರಕಾರಿ ವಲಯದಲ್ಲಿ ಉನ್ನತಿಯಿಲ್ಲ. ನಿಷ್ಠ ನೌಕರನು ಖಾಸಗಿ ರಂಗದಲ್ಲಿ ದಿನ ದಿನಕ್ಕೂ ಏಗುತ್ತ ಹೋಗುತ್ತಾನೆ. ದೇಶದ ಖಾಸಗಿ ಸಂಘ ಸಂಸ್ಥೆಗಳ ಬೆಳವಣಿಗೆಯ ಹಿಂದೆ ಇಂತಹ ನಿಷ್ಠ ನೌಕರರ ದುಡಿಮೆ ಇದ್ದೇ ಇದೆ. ಆದರೆ, ಸರಕಾರಿ ವಲಯದಲ್ಲಿ ಇಂಥ ನೌಕರ ಯಾವ ಕಾಲಕ್ಕೂ ಉನ್ನತಿಯನ್ನು ಹೊಂದುವುದಿಲ್ಲ. ತನ್ನ ಅಗಾಧ ನೌಕರ ಸಾಗರ—ಅದರ ಸೇವಾ ನಿಯಮಗಳು—ಅಗಾಗ ಬದಲಾಯಿಸುತ್ತಿರುವ ಅಧಿಕಾರಿಗಳು—ಮಂತ್ರಿಗಳು—ರಾಜಕಾರಣದ ಹಗರಣ ಇವುಗಳಿಂದಾಗಿ ತನ್ನ ನೌಕರರ ಹಿತಚಿಂತನೆಯತ್ತ ಗಮನ ಹರಿಸಲು ಯಾರಿಗೂ ಬಿಡುವಿಲ್ಲ. ಎಂದೋ ಯಾರೋ ಏಕೋ ಮಾಡಿಟ್ಟ ಸೇವಾನಿಯಮಗಳವೆ. ಅವನ್ನೇ ನಮ್ಮ ಸರಕಾರ ಮುಂದುವರಿಸಿದೆ

ಶಾಲೆಯ ಅಧ್ಯಾಪಕವರ್ಗದಲ್ಲಿ ಸೇವಾನಿಯಮಗಳು ಅ ವರ್ಗದಲ್ಲೇ ಅಸಮಾಧಾನ ಮೂಡಿಸಿರುವುದು ನಮಗೇನೂ ಅರಿಚಿತವಲ್ಲ. ಅದರ ಪರಿಣಾಮವನ್ನೂ ನಾವೂ ನಮ್ಮ ವಿದ್ಯಾರ್ಥಿಗಳೂ ಇಂದು ಅನುಭವಿಸುತ್ತಿದ್ದೇವೆ. ಮುಂದಕ್ಕೂ ಅನುಭವಿಸಲು ಸಿದ್ಧರಿರಬೇಕು. ಹೈದರಾಬಾದದಲ್ಲಿ ಇತ್ತೀಚೆಗೊಂದು ಸತ್ಕಾರ ಸಭೆ ನಡೆಯಿತು. ಇದನ್ನು ಸಂಘಟಿಸಿದವರು ರೇಲ್ವೆ ನೌಕರ ಸಂಘದವರು. ರೇಲ್ವೆ ಅಧಿಕಾರಿಗಳ ವರ್ಗಾವಣೆಗಾಗಿಯಲ್ಲ, ರೇಲ್ವೆ ಮಂತ್ರಿಗಳ ಅಗಮನಕ್ಕಾಗಿಯೂ ಅಲ್ಲ. ಅವರು ಮಾಜಿ ರೇಲ್ವೆ ನೌಕರರನ್ನು ಅಭಿನಂದಿಸಿದರು. ಹಾರತುರಾಯಿ ಅರ್ಪಿಸಿದರು; ಉಡುಗೊರೆ ನೀಡಿದರು. (ಅವರಿಗೇನೂ ಮೊನ್ನೆ ಮೊನ್ನೆ ಮದುವೆಯೂದುದಲ್ಲ. ವರ್ಗವಾದವರೂ ಅಲ್ಲ) ಯಾಕೆ ಈ ಸಮಾರಂಭ? ಅವರು ತಮ್ಮ ೩೦ ವರ್ಷಗಳ ಸೇವೆಯನ್ನು ಅತ್ಯಂತ ನಿಷ್ಠೆಯಿಂದ, ಅತ್ಯಂತ ಯಶಸ್ವಿಯಾಗಿ ಮಾಡಿದರು. ಇದರಲ್ಲೇನು ವಿಶೇಷ ಕೇಳುತ್ತೀರಾ? ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅವರು ಒಂದೇ ಒಂದು "ಭಡ್ತಿ'ಯನ್ನು ಪಡೆದಿಲ್ಲ. ಇಂತಹ ಅಪೂರ್ವ ವಿಕ್ರಮ ಅನಾಮಾನ್ಯ ಸಾಧನೆ. ಇವರೋ ಅನಾಮಾನ್ಯರು, ಎಂತಲೇ ಈ ಅಪೂರ್ವ ಸತ್ಕಾರ.

ಂ ಂ ಂ

ಭಾರತದಲ್ಲಿ ಮಾತ್ರ ಈ ಬಗೆಯ ಸೋಜಿಗಗಳು ನಡೆಯುವುದಿಲ್ಲ, ನಮ್ಮ ನೆರೆಯ ಶ್ರೀ ಲಂಕೆ ಅಥವಾ ಸಿಲೋನಿನಲ್ಲಾ ನಡೆಯುವುದುಂಟು. ಎಷ್ಟಾದರೂ ಗಾಳಿ ಬೀಸದಿರುತ್ತದೆಯೆ!? ಅದರೆ, ಈಗ ಬಂದಿರುವುದು ಅಪೂರ್ವ ಸಲಹೆಯಲ್ಲ, ಅಪೂರ್ವ ಸಾಧನೆಯ ಬಗ್ಗೆಯೂ ಅಲ್ಲ.

ಒಬ್ಬ ವ್ಯಕ್ತಿ. ಪ್ರಾಯ ೫೮ ವರ್ಷ. ವೃತ್ತಿ ದುಡಿಮೆ. ಮೊನ್ನೆ ಮೊನ್ನೆ ದಿನ ಪೂಲ್ಲಾ ದುಡಿದ; ಬಳಲಿದನೆಂದಿಟ್ಟುಕೊಳ್ಳಿ. ಸಂಜೆ ಮನೆಗೆ ಬಂದ. ರಾತ್ರಿ ಮನೆ ಮುಂದಿನ ಜಗಲಿಯಲ್ಲಿ ಒರಗಿದ. ಬಳಲಿದ ದೇಹವನ್ನು ವಿಶ್ರಾಂತಿಗೆ ತಡ ಮಾಡದೆ ತಬ್ಬಿ ಕೊಂಡಳು.

ಮರುದಿನ ಮುಂಜಾವ. ಮಲಗಿದವ ಎಂದೂ ಏಳುವ ಹೊತ್ತಿಗೆ ಏಳಲಿಲ್ಲ. ಕರೆಯಲು ಬಂದವರು ಬೆಚ್ಚಿ ಬಿದ್ದರು. ಯಾಕೆ? ದೇಹ ರಕ್ತದ ಮಡುವಲ್ಲಿ ಮುಳುಗಿದೆ. (ಯಾರು ಖೂನಿ ಮಾಡಿದರು?) ಆತನ ದೇಹವನ್ನು ಇರುವೆಗಳು ಮುತ್ತಿಕೊಂಡಿದೆ—ನಿಜವಾಗಿ ಆತನ ಪ್ರಾಣ ಹಾರಿ ಹೋಗಿತ್ತು—ದೃಶ್ಯ ಅಪೂರ್ವವಿತ್ತು.

ಮರಣೋತ್ತರ ಶಸ್ತ್ರಕ್ರಿಯೆ ನಡೆಯಿತು. ವೈದ್ಯಾಧಿಕಾರಿ ಪರೀಕ್ಷಿಸಿ ವರದಿ ನೀಡಿದರು. ಅದರಂತೆ ಆತನ ಖೂನಿ ನಡೆದಿತ್ತು ಮಾನವರಿಂದಲ್ಲ; ಇರುವೆಗಳಿಂದ! ಇರುವೆಗಳು ಆತನನ್ನು ಕಡಿದುವು. ಶಸ್ತ್ರಾಘಾತವಾಗಿ ರಕ್ತಸ್ರಾವವಾಯಿತು. ಈ ಕಾರಣದಿಂದಾತ ಮೃತ್ಯುವನ್ನಪ್ಪಿದ. ಇಷ್ಟೇ ಕುತೂಹಲ ಮುಗಿಯಲಿಲ್ಲ. ರಕ್ತಸ್ರಾವದಿಂದಾದರೂ ಅಸಹಜ ಮೃತ್ಯು ಸಂಭವಿಸಿದೆ? ಆಕಸ್ಮಿಕ ಸಾವುಗಳ ವಿಚಾರಣಾಧಿಕಾರಿಯೂ ಪರೀಕ್ಷಿಸಿ ಬರೆದುಕೊಂಡ—ಪ್ರಕೃತಿ ಸಹಜ ಕಾರಣಗಳಿಂದಾಗಿಯೇ ಸಾವು ಸಂಭವಿಸಿದೆ. ಯಮರಾಯನು ಇರುವೆಯ ರೂಪದಲ್ಲಿಯೂ ಬರುತ್ತಾನೆ ಎಂದಾಯಿತು.

—ಗೋ.

ಲೋಕನಾಯಕ ಜವಾಹರಲಾಲರ ಏಕಸಾತ್ರ ಪುತ್ರಿಯಾಗಿ, ಇಂದು ಭಾರತದ ಪ್ರಧಾನಿಯಾಗಿರುವ ಶ್ರೀಮತಿ ಇಂದಿರಾಗಾಂಧಿಯವರ ಜೀವನ ಚರಿತ್ರೆಯನ್ನು ಸಂಗ್ರಹವಾಗಿ ತಿಳಿಯಬಡಿಸುವ ಪುಸ್ತಕವಿದು. ಭಾಷೆಯು ಸರಳವಿದ್ದರೂ ಕೆಲವೆಡೆ ವ್ಯಾಕರಣ ದೋಷಗಳೂ ಶಬ್ದದೋಷಗಳೂ ಬಂದಿರುವುದು ಶೋಚನೀಯ. ಉದಾಹರಣೆಗೆ 'ಮಗುವಿಗೆ.....ನಾಮಕರಣ ಮಾಡಿದರು' (ಪುಟ ೧) ಮಾತಾಪಿತೃರ ಮನೆತನ (ಅದೇ ಪುಟ) ಇತ್ಯಾದಿ. ಕಾಂಗ್ರೆಸ್ ಅಧ್ಯಕ್ಷ ಸ್ಥಾನದಲ್ಲಿದ್ದಾಗ ದ್ವಿಭಾಷಾ ರಾಜ್ಯಬೊಂಬಾಯಿಯವಿಭಜನೆಮತ್ತು ಕೇರಳದ ಕಮ್ಯುನಿಸ್ಟ್‌ಸರಕಾರವನ್ನು ಕಿತ್ತೊಗೆದುದು ಅವರ ಪ್ರಮುಖ ಹೆಜ್ಜೆಗಳೆಂದು ಲೇಖಕಿ ಹೇಳಿದ್ದರೂ ಇದರಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ಒಂದು ಪಕ್ಷದ ಆಡಳಿತೆಯನ್ನು ಕಿತ್ತೊಗೆಯುವ, ಒಂದು ರಾಜ್ಯವನ್ನು ವಿಭಜಿಸುವ ಅಧಿಕಾರ ಒಂದು ರಾಜಕೀಯ ಪಕ್ಷದ ಅಧ್ಯಕ್ಷರಿಗಿರುವುದಿಲ್ಲ. ಅದರಲ್ಲೂ ಇವೆರಡೂ ತಪ್ಪು ಹೆಜ್ಜೆಗಳಾದುದರಿಂದ ಇವನ್ನು "ಸಾಧನೆ"ಯೆನ್ನದೆ "ಹನ್ನಡೆ"ಯೆನ್ನುವವರೂ ಇದ್ದಾರೆ. "ಎಳೆಯರಿಗಾಗಿ ಬರೆದ ಪುಸ್ತಕದಲ್ಲಿ ಅಸಂಬದ್ಧತೆಗಳಿಗವಕಾಶವಿರುವುದು ಸ್ವಲ್ಪದೆನಿಸುತ್ತದೆ.

—ಗೋ.ರಾ

ಖಾಸಗಿ ಮತ್ತು ಸರಕಾರಿ ನೌಕರಿಗಳಲ್ಲಿ ಒಂದು ಮಾತ್ರ ಭೇದ. ಅಧಿಕೃತ ನೌಕರನಿಗೆ ಖಾಸಗಿ ರಂಗದಲ್ಲಿ ಏಳಿಗೆಯಿಲ್ಲ; ಕೃಷ್ಟ ನೌಕರನಿಗೆ ಸರಕಾರಿ ವಲಯದಲ್ಲಿ ಉನ್ನತಿಯಿಲ್ಲ. ನಿಷ್ಠ ನೌಕರನು ಖಾಸಗಿ ರಂಗದಲ್ಲಿ ದಿನ ದಿನಕ್ಕೂ ಏಗುತ್ತ ಹೋಗುತ್ತಾನೆ. ದೇಶದ ಖಾಸಗಿ ಸಂಘ ಸಂಸ್ಥೆಗಳ ಬೆಳವಣಿಗೆಯ ಹಿಂದೆ ಇಂತಹ ನಿಷ್ಠ ನೌಕರರ ದುಡಿಮೆ ಇದ್ದೇ ಇದೆ. ಆದರೆ, ಸರಕಾರಿ ವಲಯದಲ್ಲಿ ಇಂಥ ನೌಕರ ಯಾವ ಕಾಲಕ್ಕೂ ಉನ್ನತಿಯನ್ನು ಹೊಂದುವುದಿಲ್ಲ. ತನ್ನ ಅಗಾಧ ನೌಕರ ಸಾಗರ—ಅದರ ಸೇವಾ ನಿಯಮಗಳು—ಆಗಾಗ ಬದಲಾಯಿಸುತ್ತಿರುವ ಅಧಿಕಾರಿಗಳು—ಮಂತ್ರಿಗಳು—ರಾಜಕಾರಣದ ಹಗರಣ ಇವುಗಳಿಂದಾಗಿ ತನ್ನ ನೌಕರರ ಹಿತಚಿಂತನೆಯತ್ತ ಗಮನ ಹರಿಸಲು ಯಾರಿಗೂ ಬಿಡುವಿಲ್ಲ. ಎಂದೋ ಯಾರೋ ಏಕೋ ಮಾಡಿಟ್ಟ ಸೇವಾನಿಯಮಗಳವೆ. ಅವನ್ನೇ ನಮ್ಮ ಸರಕಾರ ಮುಂದುವರಿಸಿದೆ

ಶಾಲೆಯ ಅಧ್ಯಾಪಕವರ್ಗದಲ್ಲಿ ಸೇವಾನಿಯಮಗಳು ಅ ವರ್ಗದಲ್ಲೇ ಅಸಮಾಧಾನ ಮೂಡಿಸಿರುವುದು ನಮಗೇನೂ ಅರಿಚಿತವಲ್ಲ. ಅದರ ಪರಿಣಾಮವನ್ನೂ ನಾವೂ ನಮ್ಮ ವಿದ್ಯಾರ್ಥಿಗಳೂ ಇಂದು ಅನುಭವಿಸುತ್ತಿದ್ದೇವೆ. ಮುಂದಕ್ಕೂ ಅನುಭವಿಸಲು ಸಿದ್ಧರಿರಬೇಕು. ಹೈದರಾಬಾದದಲ್ಲಿ ಇತ್ತೀಚೆಗೊಂದು ಸತ್ಕಾರ ಸಭೆ ನಡೆಯಿತು. ಇದನ್ನು ಸಂಘಟಿಸಿದವರು ರೇಲ್ವೆ ನೌಕರ ಸಂಘದವರು. ರೇಲ್ವೆ ಅಧಿಕಾರಿಗಳ ವರ್ಗಾವಣೆಗಾಗಿಯಲ್ಲ, ರೇಲ್ವೆ ಮಂತ್ರಿಗಳ ಅಗಮನಕ್ಕಾಗಿಯೂ ಅಲ್ಲ. ಅವರು ಮಾಜಿ ರೇಲ್ವೆ ನೌಕರರನ್ನು ಅಭಿನಂದಿಸಿದರು. ಹಾರತುರಾಯಿ ಅರ್ಪಿಸಿದರು; ಉಡುಗೊರೆ ನೀಡಿದರು. (ಅವರಿಗೇನೂ ಮೊನ್ನೆ ಮೊನ್ನೆ ಮದುವೆಯೂದುದಲ್ಲ. ವರ್ಗವಾದವರೂ ಅಲ್ಲ) ಯಾಕೆ ಈ ಸಮಾರಂಭ? ಅವರು ತಮ್ಮ ೩೦ ವರ್ಷಗಳ ಸೇವೆಯನ್ನು ಅತ್ಯಂತ ನಿಷ್ಠೆಯಿಂದ, ಅತ್ಯಂತ ಯಶಸ್ವಿಯಾಗಿ ಮಾಡಿದರು. ಇದರಲ್ಲೇನು ವಿಶೇಷ ಕೇಳುತ್ತೀರಾ? ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅವರು ಒಂದೇ ಒಂದು "ಭಡ್ತಿ'ಯನ್ನು ಪಡೆದಿಲ್ಲ. ಇಂತಹ ಅಪೂರ್ವ ವಿಕ್ರಮ ಅನಾಮಾನ್ಯ ಸಾಧನೆ. ಇವರೋ ಅನಾಮಾನ್ಯರು, ಎಂತಲೇ ಈ ಅಪೂರ್ವ ಸತ್ಕಾರ.

ಂ ಂ ಂ

ಭಾರತದಲ್ಲಿ ಮಾತ್ರ ಈ ಬಗೆಯ ಸೋಜಿಗಗಳು ನಡೆಯುವುದಿಲ್ಲ, ನಮ್ಮ ನೆರೆಯ ಶ್ರೀ ಲಂಕೆ ಅಥವಾ ಸಿಲೋನಿನಲ್ಲಾ ನಡೆಯುವುದುಂಟು. ಎಷ್ಟಾದರೂ ಗಾಳಿ ಬೀಸದಿರುತ್ತದೆಯೆ!? ಅದರೆ, ಈಗ ಬಂದಿರುವುದು ಅಪೂರ್ವ ಸಲಹೆಯಲ್ಲ, ಅಪೂರ್ವ ಸಾಧನೆಯ ಬಗ್ಗೆಯೂ ಅಲ್ಲ.

ಒಬ್ಬ ವ್ಯಕ್ತಿ. ಪ್ರಾಯ ೫೮ ವರ್ಷ. ವೃತ್ತಿ ದುಡಿಮೆ. ಮೊನ್ನೆ ಮೊನ್ನೆ ದಿನ ಪೂಲ್ಲಾ ದುಡಿದ; ಬಳಲಿದನೆಂದಿಟ್ಟುಕೊಳ್ಳಿ. ಸಂಜೆ ಮನೆಗೆ ಬಂದ. ರಾತ್ರಿ ಮನೆ ಮುಂದಿನ ಜಗಲಿಯಲ್ಲಿ ಒರಗಿದ. ಬಳಲಿದ

ದಯಮಾಡಿ
ನಿಮ್ಮ ಚಂದಾ ಹಣ
ಕಳುಹಿಸಿ ಕೊಡಿರಿ
ತನ್ಮೂಲಕ 'ನವಯುಗ'ಕ್ಕೆ
ಸಹಕಾರ ನೀಡಿರಿ
ವಾರ್ಷಿಕ ಚಂದಾ ರೂ. ೧೦

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಕಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಸುಡಿಮುತ್ತುಗಳು	1—50
ವಿಚಿತ್ರ ಕಳ್ಳಸೇಟಿ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕಚೆಲಾಗಿಗೆ ಬರೆದು
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಎಲ್ಲೆಲ್ಲಿ ಏನೇನು?

ನೂತನ ಆಡಳಿತ ಮಂಡಳಿ

ಶಿರ್ಸಿ (ದ.ಕ.) 17.6.68. ಸ್ಥಳೀಯ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕ ಮಹಾಸಭೆಯು ತಾ 14.6.1968ರಂದು ಡಾ|| ಪೈ ಆರ್. ಕೆಟ್ಟ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಬಿ ಬಾಲಕೃಷ್ಣ ಶೆಟ್ಟಿ ವಾರ್ಷಿಕ ವರದಿಯನ್ನೋದಿಲೆಕ್ಕಪತ್ರಗಳನ್ನರ್ಪಿಸಿದರು. ಡಾ|| ಪಿ. ಆರ್ ಭಟ್ ಧನ್ಯವಾದವಿತ್ತರು.

ಶ್ರೀಯುತರುಗಳಾದ ಬಿ. ಜಯರಾಮ ಶೆಟ್ಟಿ (ಅಧ್ಯಕ್ಷ), ಡಾ ಕೆ.ಎಲ್ ವೆಂಕಟೇಶ್ವರ (ಉಪಾಧ್ಯಕ್ಷ), ಡಾ ಪಿ. ಆರ್. ಭಟ್ (ಕಾರ್ಯದರ್ಶಿ ನಿಕಟ ಕೋಶಾಧಿಕಾರಿ) ಎಸ್. ಎಸ್. ಶಿವಾನಂದ ಪೈ (ಉಪಕಾರ್ಯದರ್ಶಿ), ಎಲ್. ಮೊಗೇನ್ ಬಾಲಕೃಷ್ಣ ಶೆಟ್ಟಿ ಮತ್ತು ಎಸ್ ಕಟ್ಟಾನಂದ ಪ್ರಭುರವರು)— ಇವರನ್ನೊಳಗೊಂಡ ನೂತನ ಆಡಳಿತ ಮಂಡಳಿಯನ್ನು ರಚಿಸಲಾಯ್ತು.

Date of Hearing 3-7-'68.

In the Court of the
IInd Addl. Munsif,
Puttur (S. K.).

Execution Case No. 90/1968.
O. S No 36/1967 of Belthangady
Munsif Court.

Bende Ganapathi Bhatta ...
Decree-Holder.

—Vs—

Ananth Hebbara and others ...
Judgment-Debtors.

To

Judgment-Debtors,

(1) Ananth Hebbara, s/o
Hari Hebbara.

(2) Hari Hebbara } Sons of
(3) Vamana Moorthi } Ananth
(4) Ramesha Hebbara } a Hebbara.

All residing in Hathyadka
Village, Belthangady Tq.

You have filed to satisfy a decree passed against you on the 17th day of October 1967, in O.S. No. 36/1967 in favour of Decree-Holder for Rs. 1,120/- you are hereby prohibited and restrained until the further order of this Court from transferring or charging the property specified in the schedule hereunto annexed by sale, gift or otherwise, and that all persons be and they are hereby prohibited from receiving the same by purchase, gift or otherwise.

Schedule.

Property situated in Hathyadka Village, Belthangady Tq

S. No	S. D. No	Kissam	Extent
2/3	1A Portion.	Bagayat.	1—03½
2/4	4	Dry	0—30
2/5	1 Portion	do	1—50½

(By Order of the Court)

A. Soorappaya,
Vakil for Decree-Holder.

Puttur, S. K.
Date 11—6—1968.

ಬೆಳ್ಳಣ್ಣಿ ಪಂಚಾಯತಿನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ

ಬೆಳ್ಳಣ್ಣಿ, ತಾ. 19:—ಬೆಳ್ಳಣ್ಣಿ ಪಂಚಾಯತಿನ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯು ತಾ. 19.6.68ರಲ್ಲಿ ರೆವೆನ್ಯೂ ಇನ್ಸ್‌ಪೆಕ್ಟರ್ ಕೆ ಕೃಷ್ಣರಾವ್ ಚುನಾವಣಾಧಿಕಾರಿಯವರ ನೇತೃತ್ವದಲ್ಲಿ ಜರಗಿತು. ಈ ಪಂಚಾಯತಿಗೆ ಆಯ್ಕೆಯ ಕಾಲಾವಳಿಯಲ್ಲಿ ಬೋರ್ಡ್ ಸದಸ್ಯರೂ, ವಿದ್ಯಾವರ್ಧಕ ಸಂಘದ (ರಿ) ಚೇರ್ಮನ್ ಸೆಕ್ರೆಟರಿಗಳೂ ಮನೆಮನೆಯ ಪುಸ್ತಕದ ಸ್ತರಿಗಳ ಕರ್ತೃರೂ ಆದ ಡಾ|| ಕೊರಡ್ಕಲ್ ವೆಂಕಟರಾಯರು ಅಧ್ಯಕ್ಷರಾಗಿಯೂ ಬಿ. ಗೋಪಾಲಕೃಷ್ಣ ಶಂಕ್ರಿಯವರು ಉಪಾಧ್ಯಕ್ಷರಾಗಿಯೂ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ತಿಳಿದು ಬಂದಿದೆ.

ಟಿ.ಬಿ. ಮುದ್ರೆಗಳು ಮೂವರಿ

ಬೊಂಬಾಯಿಯ ಸಂಸ್ಥೆ ಬಹುಮಾನ ಗೆದ್ದಿತು.

ಈ ವರ್ಷದ ಅಕ್ಟೋಬರ್ ತಿಂಗಳ ಅದಂಭವಾಗುವ ಕ್ಷಯರೋಗ ಮುದ್ರೆಗಳ ಮಾರಾಟದ ಅಂದೋಳನಕ್ಕಾಗಿ ಭಾರತೀಯ ಕ್ಷಯರೋಗ ಸಂಸ್ಥೆಯು ಮುದ್ರೆಯ ಮಾದರಿಯನ್ನು ಆರಿಸಿದೆ. ಬೊಂಬಾಯಿಯ ಜಾಹೀರಾತು ಸಲಹಾ ಸಂಸ್ಥೆಯಾದ ಎಫೀಶ್ಯಂಟ್ ಆಡ್ವರ್ಟೈಸಿಂಗ್ ಅಂಡ್ ಫಿಲ್ಮ್‌ನ ಕಲಾ ವಿಭಾಗವು ಈ ಮಾದರಿಯನ್ನು ರೂಪಿಸಿದೆ. ಪೂರ್ಣವಿಕಸಿತ ಕಮಲ ಪುಷ್ಪದ ಅವಿಕಸಿತ ಮೊಗ್ಗೆಯೊಂದು ಮುದ್ರೆಯ ಮಾದರಿ. ಇದು ಬದುಕು ಮತ್ತು ಪ್ರಸನ್ನತೆಯ ಸಂಕೇತವನ್ನು ಪ್ರತಿನಿಧೀಕರಿಸುತ್ತದೆ. ತಮ್ಮ ಕಾಗದಪತ್ರಗಳು, ಸಂದೇಶಗಳು, ಉಡುಗೊರೆಯ ಪ್ಯಾಕಿಂಗಗಳನ್ನು ಅಲಂಕರಿಸಬಯಸುವವರಿಗೆ ಈ ಮಾದರಿಯಲ್ಲಿ ಸಿದ್ಧಪಡಿಸಿದ ಟಿಬಿ ಮುದ್ರೆಗಳು ಮೆಚ್ಚಿಗೆಯಾಗುತ್ತವೆಯೆಂಬ ವಿಶ್ವಾಸವಿದೆ. ಕಮ್ಮ ಸಂಗ್ರಹದಲ್ಲಿ ಮುದ್ರೆಯ ಮೇಲಿನಲ್ಲಿ ಹೂವಿನ ಮುದ್ರೆಯನ್ನು ಲೋಕೋಪಕಾರಿಗಳೂ ಮೆಚ್ಚುತ್ತಾರೆ. ಕ್ಷಯರೋಗ ಪ್ರಸಾರವನ್ನು ತಡೆಯಬೇಕು, ಆರೋಗ್ಯದಲ್ಲೇ ತಿಳಿದುಬಂದಲ್ಲಿ ಕ್ಷಯರೋಗಿಗಳನ್ನು ಗುಣಪಡಿಸಿ ಸಾಮಾನ್ಯ ಜೀವನ ಮತ್ತು ಚಟುವಟಿಕೆಗಳಲ್ಲಿ ಅವರು ಮುಂದುವರಿಯುವಂತೆ ಮಾಡಬಹುದೆಂಬ ಸಂದೇಶವನ್ನು ಟಿಬಿ ಮುದ್ರೆಯು ಜನತೆಗೆ ಮುಟ್ಟಿಸುತ್ತದೆ.

ಮಾನ್ಯ ಬಿ. ವಿಠಲದಾಸಶೆಟ್ಟಿರ ಸಂದರ್ಶನ

ರಾಜ್ಯದ ಆಹಾರ ಮಂತ್ರಿ ಶ್ರೀ ಬಿ. ವಿಠಲದಾಸ ಶೆಟ್ಟರು ಉಡುಪಿಗೆ ಭೇಟಿ ಕೊಟ್ಟಾಗ ಉಡುಪಿ ಚೇಂಬರ್ ಆಫ್ ಕಾಮರ್ಸ್ ಅವರನ್ನು ಸ್ವಾಗತಿಸಿತು. ಡಾ|| ಮಾಧವ ಪೈಯವರು ಮಾತಾಡಿ, ಈಗಿನ ಆಹಾರೋತ್ಪಾದನೆಯ ಪ್ರಮಾಣವನ್ನು ಆಧುನಿಕ ಕೃಷಿ ಪದ್ಧತಿಯಿಂದ ನಾಲ್ಕರಷ್ಟೆಂದಂಶದಷ್ಟು ಹೆಚ್ಚಿಸಬಹುದು; ಗ್ರಾಮಾಂತರ ಪ್ರದೇಶ ಅಭಿವೃದ್ಧಿಯಾಗಬೇಕು ಎಂದರು. ಚೇಂಬರಿನ ಅಧ್ಯಕ್ಷ ಶ್ರೀ ಟಿ. ದಿನೇಶ ಪೈಯವರು ಮನವಿಯೊಂದನ್ನು ಅರ್ಪಿಸಿ, ಸಿಗಿತೆ ಪ್ರದೇಶಗಳಿಂದ ಕೊರತೆ ಪ್ರದೇಶಕ್ಕೆ ಆಹಾರಧಾನ್ಯ ಸಾಗಿಸಲು ಸಿಬಂಧನೆಗಳನ್ನಾದರೂ, ಲೈಸೆನ್ಸ್ ಹೊಂದಿದ ವ್ಯಾಪಾರಿಗಳು ರಾಜ್ಯದ ಯಾವುದೇ ಭಾಗದಲ್ಲಿ ವ್ಯಾಪಾರ ನಡೆಸಲು ಅನುಮತಿ ಇರಬೇಕು, ಆಹಾರ ವಿಷಯವನ್ನು ಪೋಲೀಸ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವರ್ಗಾಯಿಸಬೇಕು, ಲೆವಿ ಪದ್ಧತಿ ಕೈಗೆದುಕೊಳ್ಳಬೇಕು ಅಥವಾ ಮಾರುಕಟ್ಟೆಯ ಬೆಲೆಯಲ್ಲಿ ಸರಕಾರ ಆಧಾನ್ಯ ಕೊಳ್ಳಬೇಕು, ಕರಾವಳಿ ಪ್ರದೇಶದಲ್ಲಿ ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯಬೇಕೆಂದು ಮಂತ್ರಿಗಳಿಗೆ ಕೇಳಿಕೊಂಡರು. ಇದಕ್ಕೆ ಉತ್ತರಿಸುತ್ತ ಮಾನ್ಯ ಮಂತ್ರಿಗಳು ಆಹಾರ ಧೋರಣೆಯಲ್ಲಿ ಕೇಂದ್ರದ ಅಭಿಪ್ರಾಯ ಇದೆ. ಅಡಳಿತದಲ್ಲಿನ ದೋಷದೋಷಗಳನ್ನು ದೂರ ಮಾಡಲು ನಿಮ್ಮೆಲ್ಲರ ಸಲಹೆ ಬೇಕು. ಕಳ್ಳಬೆಕಿಯಿಂದ ಹಣ ಮಾಡುವ ಜನರು ಪೋಲೀಸರ ಮೇಲೆಯೇ ಕೈಮಾಡಿರುವಾಗ ಆಹಾರ ವಿಷಯವನ್ನು ರೆವಿನ್ಯೂ ವಿಭಾಗಕ್ಕೆ ಬದಲಿಸಲು ಕಾಲ ಪರಿಪಕ್ವವಾಗಿಲ್ಲ. ನ್ಯಾಯ ಬೆಲೆಯ ಅಂಗಡಿ ಬೇಕು. ಲೆವಿ ಬೇಡವೆಂದ ರಾಗದು. ಅಗಸ್ಟ್ ತಿಂಗಳಲ್ಲಿ ರಾಜ್ಯದ ಆಹಾರ ಸಂಬಂಧದ ಹೊಸ ನೀತಿ ರೂಪಿಸುವುದಾಗಿ ಹೇಳಿ ಎಲ್ಲರ ಸಹಕಾರ ಬಯಸಿದರು.

ಶ್ರೀ ಕೆ. ಪ್ರಭಾಕರ ಪೈಯವರು ಧನ್ಯವಾದ ಸಮರ್ಪಿಸಿದರು. ಮಾನ್ಯ ಸಚಿವರು ಶ್ರೀಕೃಷ್ಣ ಮಠವನ್ನು ಸಂದರ್ಶಿಸಿ, ಉಡುಪಿ ಆಹಾರ ಸಮಿತಿ ಮತ್ತು ತಾಲೂಕು ಬೋರ್ಡಿನ ಅಧ್ಯಕ್ಷ ಸದಸ್ಯರೊಂದಿಗೆ ವಿಚಾರವಿನಿಮಯ ಮಾಡಿದರು.

ಪ್ರಶಸ್ತಿಪತ್ರ ವಿತರಣೆ

ಕಡಿಯಾಳಿಯ ಯು. ಕಮಲಾ ಬಾಯಿ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಪ್ರಶಸ್ತಿಪತ್ರ ವಿತರಣೆಯು ತಾ. ೧೬ರಂದು ಪದ್ಮಶ್ರೀ ಡಾ|| ಟಿ. ಮಾಧವ ಪೈಯವರಿಂದ ನೆರವೇರಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಅನಂತಯ್ಯ ಹಂದೆಯವರು ಸ್ವಾಗತ ಭಾಷಣ ಮಾಡುತ್ತ ಶಾಲೆಯ ಈ ವರ್ಷ ಶೇ. ೧೦೦ರಷ್ಟು ಫಲಿತಾಂಶ ಪಡೆದಿದ್ದಾರೆಂದೂ ಮೊದಲಮಟ್ಟ ಎರಡನೆಪಾಸ್ಟ್‌ಗಳಲ್ಲಿ ಉತ್ತೀರ್ಣತೆ ಶೇ. ೧೦೦ರಷ್ಟು ಇದೆಯೆಂದೂ ಹೇಳಿದರು. ಶಾಲಾ ಪ್ರಮುಖ ಶ್ರೀ ಕೆ. ಕೆ. ಪೈಯವರು ಉತ್ತಮ ಫಲಿತಾಂಶಕ್ಕಾಗಿ ಅಭಿನಂದಿಸಿದರಲ್ಲದೆ ಶಾಲಾ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಎಲ್ಲರ ಸಹಕಾರ ಬಯಸಿದರು. ಪದ್ಮಶ್ರೀ ಪೈಯವರು ವಿದ್ಯಾರ್ಥಿಗಳು ಅವಕಾಶ ಪ್ರಾಪ್ತವಿರುವಾಗ ಚೆನ್ನಾಗಿ ಕಲಿಯಬೇಕು ಎಂದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದ ಮಣಿಪಾಲ್ ಕಾಲೇಜ್ ಆಫ್ ಎಜುಕೇಶನ್‌ನ ಪ್ರಿನ್ಸಿಪಾಲ್ ಶ್ರೀ ಕೆ. ಆರ್. ಹಂದೆಯವರು ವ್ಯಕ್ತಿತ್ವ ನಿರೂಪಣೆಯ ಆವಶ್ಯಕತೆಯನ್ನು ಪ್ರತಿಬಿಂಬಿಸಿ ಇರುವುದಾಗಿ ಆದರ್ಶ ವಿದ್ಯಾರ್ಥಿಯಾಗುವದು ಅಗತ್ಯವೆಂದರು. ಕೊನೆಯಲ್ಲಿ ಶ್ರೀ ಎಸ್. ಗೋಪಿಚಂದ ರಾವ್ ಅವರು ಧನ್ಯವಾದ ಸಮರ್ಪಿಸಿದರು.

ಪುತ್ತೂರು IInd A ಮುನ್ಸಿಫ್ ಕೋರ್ಟ್‌ನಲ್ಲಿ

R.E.P. 369/1967
O.S. 580/1933.

ಸರಸ್ವತಿ ಅಮ್ಮ —ಅರ್ಜಿದಾರಳು.
ರೆಮಾ ಬ್ಯಾಂಕ್ ಲಿಮಿಟೆಡ್ —ಎದ್ರಿರು.

2ನೇ ಎದ್ರಿ ಬಾಲಕೃಷ್ಣ, ಕೇಶವ ಪಂಜಿಕಣ್ಣಯರ ಮಗ, ಮಂಗಳೂರು ಶಕ್ತಿ ಕೊಡಿಯಾಲ್‌ಬೈಲಿನ ಕರೆಂಗಲ್‌ವಾಡಿ ಎಂಬಲ್ಲಿ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ಮೇಲಿನ ವ್ಯಾಜ್ಯದಲ್ಲಿ ದಿಕ್ರೀಹೊಂದಿದ ಅರ್ಜಿದಾರಳು ಸ್ಥಿರಾಸ್ತಿ ಯೇಲಂ ಬಗ್ಗೂ, ಸದ್ರಿ ಯೇಲಮಿನಲ್ಲಿ ಎಲ್ಲರಂತೆ ಹಕ್ಕಾರ್ಸ್ತಿಗೆ ಸಲ್ಲುವರೆ ಪರ್ಮಿಶನ್ ಕೊಡಿಸಬೇಕೆಂತ ವಗೈರೆ ಅರ್ಜಿ ದಾಖಲು ಮಾಡಿರುತ್ತಾಳೆ. ಆದ್ರಿಂದ ವಿಕ್ರಯದ ಇಸ್ತಿಹಾರಿನ ಶರತ್ತುಗಳನ್ನು ಫರ್ಕಾಯಿಸುವರೆ 1969ನೇ ಝ್ಯುಲಿ ಹುಲ್ಲ 4ನೇ ತಾರೀಕು ನಿಶ್ಚಯಿಸೋಣಂತಾಗಿ ಯದೆಂತ ನಿಮಗೆ ಇದರಿಂದ ತಿಳಿಸೋಣಂತಾಗುತ್ತದೆ.

(ಕೋರ್ಟ್ ಹುಕ್ಮ ಪ್ರಕಾರ)

P. A. ARIGA,
Advocate for Petitioner.

Puttur, 11-6-1968.

ಟೆಲಿಫೋನ್ ಮೂಲಕ ಎಕ್ಸ್—ರೇ ಚಿತ್ರಗಳು

ಟೆಲಿಫೋನ್ ತಂತಿಗಳ ಮೂಲಕ, ರೋಗಿಗಳ ಎಕ್ಸ್—ರೇ ಛಾಯಾ ಚಿತ್ರಗಳನ್ನು ರೋಗನಿದಾನಕ್ಕಾಗಿ ಹಲವೇ ನಿಮಿಷಗಳಲ್ಲಿ ದೀರ್ಘ ದೂರಗಳಿಗೆ ಕಳಿಸಬಹುದು....

ಅಮೆರಿಕದಲ್ಲಿ ನಡೆಯಲಾದ ಪ್ರಯೋಗವೊಂದರಲ್ಲಿ, ದೀರ್ಘ ದೂರದ ಟೆಲಿಫೋನ್ ತಂತಿಗಳ ಮೂಲಕ ಎಕ್ಸ್—ರೇ ಚಿತ್ರವೊಂದನ್ನು ಪ್ರಥಮ ಬಾರಿಗೆ ಯಶಸ್ವಿಯಾಗಿ ಪ್ರೇಷಿಸಲಾಯಿತು. ಈ ಹೊಸ ತಂತ್ರದಿಂದಾಗಿ ರೋಗಿಗಳಿಂದ ತೆಗೆಯಲಾದ ಎಕ್ಸ್—ರೇ ಚಿತ್ರಗಳನ್ನು ತೀಕ್ಷ್ಣವಾಗಿ ತಜ್ಞರು ಪರಿಶೀಲನೆಗೆ ಒಡಗಿಸಲು ಸಾಧ್ಯವಾಗುವುದು.

ಪ್ರಸ್ತುತ ಅನೇಕ ಸಂದರ್ಭಗಳಲ್ಲಿ ರೇಡಿಯಾಲಜಿಸ್ಟರು ತತ್‌ಕ್ಷಣ ದೊರಯದಿದ್ದಾಗ ಎಕ್ಸ್—ರೇ ಚಿತ್ರಗಳನ್ನು ಅಂಚೆಯ ಮೂಲಕ ಕಳಿಸಲಾಗುತ್ತಿದೆ. ಇದರಿಂದಾಗಿ ರೋಗನಿದಾನವು ಹಲವು ದಿನಗಳಷ್ಟು ವಿಳಂಬವಾಗುವುದು. ಎಕ್ಸ್—ರೇ ಚಿತ್ರಗಳ ಟೆಲಿಫೋನ್ ಪ್ರೇಷಣೆಯು ಈ ವಿಳಂಬವನ್ನು ತಗ್ಗಿಸಿ ಕೆಲವೇ ನಿಮಿಷಗಳಲ್ಲಿ ಚಿತ್ರಗಳನ್ನೊದಗಿಸಬಲ್ಲುದು; ಇದರಿಂದ ರೋಗಿಗೆ ಕೂಡಲೇ ಸೂಕ್ತ ಚಿಕಿತ್ಸೆಯನ್ನು ಒದಗಿಸಲು ಸಾಧ್ಯವಾಗುವುದು.

ಪ್ರಸಕ್ತ ಪ್ರಯೋಗದಲ್ಲಿ ಹೆಂಗಸಿನ ತಲೆ ಬುರುಡೆಯ ಎಕ್ಸ್—ರೇ ಚಿತ್ರದ ಕಪ್ಪು—ಬಿಳುಪು ಪ್ರತಿಯನ್ನು ಬಳಕೆಮಾಡಲಾಯಿತು. ವಿಸ್‌ಕಾನ್ಸಿನ್ ರಾಜ್ಯದ ಚಿಕ್ಕ ನಗರ ವಾಸಾದಲ್ಲಿರುವ ಯುನೈಟೆಡ್ ಪ್ರೆಸ್ ಇಂಟರ್ ನ್ಯಾಷನಲ್ (ಯು ಪಿ ಐ)ನ ಕಚೇರಿಯಲ್ಲಿರುವ ಒಂದು ಟೆಲಿಫೋಟೋ ಯಂತ್ರ (ತಂತಿಗಳ ಮೂಲಕ ಚಿತ್ರಗಳನ್ನು ಪ್ರೇಷಿಸುವ ಸಾಧನ)ದ ವೇಗವನ್ನು 210 ಮೈಲಿಗಳ ದೂರದಲ್ಲಿ ಚಿಕಾಗೋದಲ್ಲಿರುವ ಯು ಪಿ ಐ ಕಚೇರಿಗೆ ಪ್ರೇಷಿಸಲಾಯಿತು. ಈ ಕಾರ್ಯ ಕೆಲವು ನಿಮಿಷಗಳಲ್ಲಿ ಪೂರ್ಣವಾಯಿತು. ಚಿಕಾಗೋ ಕಚೇರಿಯಲ್ಲಿರುವ ಯಂತ್ರವು ಪ್ರೇಷಿಸಲಾದ ಚಿತ್ರದ ನೆಗೆಟಿವ್‌ನ್ನು ಮುದ್ರಿಸುತ್ತಾದಿಸಿತು. ವಾಸಾ ಕ್ಲಿನಿಕ್‌ನಲ್ಲಿ ಚಿಕಿತ್ಸೆಯನ್ನುಪಾಗಿಗುವ ಮೈರನ್ ಮಾರ್ಹೀಡ್ ಅವರ ಮೇಲ್ವಿಚಾರಣೆ ಮುಖ್ಯ ಈ ಪ್ರಯೋಗವನ್ನು ನಡೆಸಲಾಯಿತು.

ಈ ಪ್ರಯೋಗದಲ್ಲಿ ಜನರಲ್ ಟೆಲಿಫೋನ್ ಕಂಪೆನಿ ಭಾಗವಹಿಸಿತ್ತು; ಅದು ತನ್ನ ನೌಲಭ್ಯಗಳನ್ನು ಪ್ರಯೋಗದಲ್ಲಿ ಬಳಸಲು ನೀಡಿತ್ತು.

ಉಡ್ಪಿ ಮುನ್ಸಿಫ್ ಕೋರ್ಟ್‌ನಲ್ಲಿ

S. C. No. 59/196

Dr K. ಶ್ಯಾಮ ರಾವ್, ಜನರಲ್ ಪೇಶಂಟ್ ಕೆ. ಗುರುರಾಜ ರಾವ್... ವಾದಿ.

ಮತ್ತು

ಹುಸೆನ್ ಸಾಹೇಬ್, ಅಲ್ಲಿ ಸಾಹೇಬರ ಮಗ, ಉಡ್ಪಿ ತಾಲ್ಕಾ ಉದಿಯಾವರ ಗ್ರಾಮದಲ್ಲಿರುವವ —ಪ್ರತಿವಾದಿ.

ಸದ್ರಿ ಪ್ರತಿವಾದಿ ಹುಸೆನ್ ಸಾಹೇಬರಿಗೆ—ವಾದಿಗೆ ನಿಂಮಿಂದ ಬರತಕ್ಕ ಜಾಲಗೇ ಬಾಬ್ತು ಗೇಣಿ ಬಾಕಿ ಬರಸೂಲು ಕೇಳಿ ವಾದಿಯು ನಿಮ್ಮ ಮೇಲೆ ದಾಖಲ್ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 5-7-1968ಕ್ಕೆ ನಿಮ್ಮ ಉದಾಹರಣೆಗೆ ಇಟ್ಟಿರುವದರಿಂದ ನೀವು ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಸ್ವತಹ ಯಾ ವಕೀಲರ ಮುಖಾಂತ್ರ ಹಾಜರ್ರಾಗಿ ಈ ಕೇಸಿನ ಮುಂದೆ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರ್ರಾತಿಯಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಂತಾಗುತ್ತದೆ.

(*By order of the Court*)

P. Ramachandra Rao,
Advocate for Plaintiff.

ಉಡ್ಪಿ ತಾ. 24.6.1968.

ಉಭಯ ಸಂಕಟ

(ಎರಡನೇ ಪುಟದಿಂದ)

ಮಗುವನ್ನು ಹಡಗಿನೊಳಗೆ ಸಾಗಿಸಿ ನಾವೂನು ಸರಕುಗಳನ್ನು ಕೊಂಡಯ್ಯಲು ಹೋದಾಗಲೇ ಹಡಗು ಹೊರಟು ಹೋಯಿತು! ಅತ್ಯಧಿಕ ಜನಸಂಖ್ಯೆಯ ದೇಶದಿಂದ ಜನರನೇಕರು ಅಲ್ಲೇ—ನನ್ನಂತೆ—ಉಳಿಯುವಂತಾಯಿತು. ಪತ್ನಿ ಜೋರಾಗಿ ನನ್ನನ್ನು ಕೂಗಿದಳು. ಮಗುವೂ ಹಡಗಿನ ಒಂದು ಮೂಲೆಯಲ್ಲಿ ಬಿದ್ದು ಕೂಗುತಿತ್ತು! ಜನರೆಲ್ಲರೂ ಅವಳನ್ನು ಸಮಾಧಾನಿಸತೊಡಗಿದರು. ಆದರೂ ಅವಳು ಹಡಗಿನಿಂದ ಕೆಳದುಮುಕುವಂತೆ ವರ್ತಿಸುತ್ತಿದ್ದಳು. ನಾನು ದಡದಲ್ಲಿಯೇ ನಿಂತು ಅವಳನ್ನು ಬೀಳ್ಕೊಟ್ಟೆ. "ನೀವು ಈ ರೀತಿ ಏಕೆ ಚಿಂತೆ ಮಾಡುವಿರಿ? ಇನ್ನೊಂದು ಹಡಗದಲ್ಲಿ ಅವರು ಖಂಡಿತವಾಗಿಯೂ ಬರುವರು" ಎಂದು ಜನರನೇಕರು ಅವಳನ್ನು ಸಮಾಧಾನಿಸಿದರು. ಹಡಗು ಕಲ್ಕತ್ತವನ್ನು ತಲುಪಿತು. ನಾನು ಮುಂಚೆಯೇ ಪತ್ನಿಯು ತನ್ನವಳಿಗೆ ತಂತಿಯನ್ನು ಕಳುಹಿಸಿದುದರಿಂದ ಅಲ್ಲೇ ಇರುವ ಮನೆಯನ್ನು 'ಬುಕ್' ಮಾಡಿಟ್ಟಿದ್ದೆ. ಪತ್ನಿಯನ್ನು ಹಡಗಿನಿಂದ ಕೆಳಗಿಳಿಯುತ್ತಲೇ ಮನೆಗೆ ತಲುಪಿಸಿದೆ. ಪತ್ನಿಯು ದುಃಖ, ಚಿಂತೆ ಮೊದಲಾದುವುದರಿಂದ ಕ್ಷೀಣವಾಗಿ ಬಿಟ್ಟಿದ್ದಳು. ನಡುಗುತ್ತಿರುವ, ದುಃಖಿಸುತ್ತಿರುವ ಕಣ್ಣುಗಳಿಂದ ಸದಾ ನನ್ನನ್ನು ಕಾಯುತ್ತಿದ್ದಳು. ಯಾರೊಡನೆ ಮಾತನ್ನು ಕೇಳತ್ತಿರಲೂ ಇಲ್ಲ. 'ಇವಳ ಆರೋಗ್ಯ ಬಹಳ ಕ್ಷೀಣವಾಗಿದೆ. ಚೆನ್ನಾದ ಆರೈಕೆಯಲ್ಲಿಡುವುದು ಉತ್ತಮ'ವೆಂದು ಡಾಕ್ಟರು ತನ್ನವಳಿಗೆ ಸಲಹೆಯಿತ್ತರು.

ಇತ್ತ ನಾಗುರ್‌ಂಗೂನಿನಿಂದ ಕಾಲ್ನಡಿಗೆಯಿಂದಲೇ ಅರ್ಧ ದಾರಿಯ ವರೆಗೆ ಧಾವಿಸಿ ಬಂದೆನು. ನನ್ನ ಜೊತೆ ಇನ್ನೂ ಅನೇಕ ಭಾರತೀಯರು ಸೇರಿದ್ದರು. ನಡೆದು ನಡೆದು ನಾಶಾಗಿ ಬೆಂಡಾಗಿ ಹೋಗಿದ್ದೆ. ಒಂದು ತಿಂಡಿಗಳಷ್ಟು ಕಾಲ ಅನ್ನವಿಲ್ಲದೆ ಬಳಲಿ ಹೋದೆ. ನನ್ನ ಪರಿಸ್ಥಿತಿಯು ಚಿಂತಾಜನಕ ಸ್ಥಿತಿಯಲ್ಲಿತ್ತು.

ಅರ್ಧ ದಾರಿಯಲ್ಲೇ ಸ್ಪೆಷಲ್ ಪೈಲಿನ ಮೂಲಕ ಕಲಕತ್ತಾ ತಲುಪಿದೆ. ಆ ಗಾಡಿ ಕಲಕತ್ತಾ ತಲುಪುವಾಗ ಸುಮಾರು ಎಂಟು ಗಂಟೆ ಗಂಡಯಿಂದ ಹೊರಬರುತ್ತಲೇ ಪತ್ನಿ ಹಾಗೂ ನನ್ನ ಹುಡುಗರಿಬ್ಬರೂ ಕಾಣಿಸಿಕೊಂಡರು. ನನ್ನನ್ನು ನೋಡಿ ಅವರಿಬ್ಬರಿಗೂ ಗುರುತು ಹಚ್ಚಲು ಅಸಾಧ್ಯವಾಯಿತು. ನಾನು ಪತ್ನಿಯನ್ನು ಹಲವಾರು ಬಾರಿ ಹೆಸರೆತ್ತಿ ಕರೆದೆ. ನನ್ನನ್ನು ನೋಡಿದರೂ 'ಹೂಂ' ಎಂದು ಸಿಗೊಡಲಿಲ್ಲ. ನಾನು ಹತ್ತಿರಕ್ಕೆ ಬಂದು ಅವರಿಬ್ಬರನ್ನೂ ಆಲಿಂಗಿಸಿದಾಗ ಅವಳು ಹಠಾತ್ತನೆ ಕೊಂದು ಕೂಗಿಬಿಟ್ಟಳು. ಅದೆಂತಹ ಆರ್ತನಾದ! ಆ ದೊಬ್ಬೆಯನ್ನು ನನ್ನ ಜೀವನಾಂತ್ಯದ ವರೆಗೂ ಮರೆಯಲಾರೆ ಕಂಡಿತ! ನಾನು ಆಶ್ಚರ್ಯ ಚಕಿತನಾದೆ! ಬಾರಿಬಾರಿಯಾಗಿಯೂ 'ನಾನು ನಿನ್ನ ಪತಿ'ಯೆಂದಾಗ ಅವಳು 'ಅಲ್ಲ'ವೆಂದಳು."

ವಿಜ್ಞಾನ ಲೋಕ

ಪ್ಲಾಸ್ಟಿಕ್‌ನ ಅದ್ಭುತ ಪ್ರಪಂಚ

ಭೂಮಿಯ ಮೇಲೆ ಮನುಷ್ಯನು ತನ್ನ ಜೀವನವನ್ನು ಆರಂಭಿಸಿದಂದಿನಿಂದಲೂ, ತನಗೆ ಬೇಕಾದ, ತನ್ನ ಸೌಕರ್ಯವನ್ನು ವರ್ಧಿಸಿಕೊಳ್ಳುವುದಕ್ಕೆ ಸಾಧಕವಾಗುವ ವಸ್ತುಗಳನ್ನು ಕಂಡು ಹಿಡಿಯುವುದರಲ್ಲಿ ತೊಡಗಿಯೇ ಇದ್ದಾನೆ. ಪುರಾತನ ಗ್ರೀಕರಿಗೆ ಭೂಮಿ, ನೀರು, ಗಾಳಿ, ಬೆಂಕಿಗಳ ಮೇಲೆ ಮಾತ್ರ ನಂಬಿಕೆಯಿತ್ತು. ಈ ನಾಲ್ಕು ವಸ್ತುಗಳನ್ನು ತನ್ನ ಅವಶ್ಯಕತೆಗಳ ಪೂರೈಕೆಗೆ ಯಾವ ಯಾವ ರೀತಿ ಬಗ್ಗಿಸಿ ಕೊಳ್ಳುವುದು ಸಾಧ್ಯವಾದೀತೆಂಬ ಪ್ರಯೋಗಗಳಲ್ಲಿ ಮನುಷ್ಯ ನಿರತನಾದ. ಪ್ರಾಚೀನ ಸಂಶೋಧನೆಗಳು ನಾನಾ ರೂಪಗಳನ್ನು ಪಡೆದವು.

ರಸಾಯನ ಶಾಸ್ತ್ರ, ಹಾಗೂ ಭೌತಶಾಸ್ತ್ರಗಳ ಬೆಳವಣಿಗೆಗಳಿಂದ ಮನುಷ್ಯನಿಗೆ ಈ ಮೇಲೆ ತಿಳಿಸಿದ ಆಧಾರ ವಸ್ತುಗಳಿಂದ ನೂತನ ಹಾಗೂ ಆಕರ್ಷಣೀಯ ವಸ್ತುಗಳನ್ನು ತಯಾರಿಸಲು ಸಾಧ್ಯವಾಯಿತು.

ಇಂದಿನ ಯಾಂತ್ರಿಕರು ಹಿಂದಿನ ಕುಶಲಿಗಳ, ವಿಜ್ಞಾನಿಗಳ, ತತ್ವಜ್ಞಾನಿಗಳ ಪೀಳಿಗೆಗೆ ಸೇರಿದವರಾಗಿದ್ದಾರೆ. ಪ್ಲಾಸ್ಟಿಕ್ ಕ್ಷೇತ್ರದಲ್ಲಿ ಆಗಿರುವಂತಹ ಅಸಾಧಾರಣವಾದ ಪ್ರಗತಿಯು ಬೇರಾವುದೇ ಕ್ಷೇತ್ರದಲ್ಲಿಯೂ ಆಗಿಲ್ಲವೆಂದೆನ್ನಬಹುದಾಗಿದೆ. ಕೆಲವು ವರ್ಷಗಳ ಹಿಂದೆ ಪ್ಲಾಸ್ಟಿಕ್ ತಯಾರಿಕೆಯು ಯಾವ ವಿಧವಾದ ಮುನ್ನಡೆಯನ್ನೂ ಸಾಧಿಸದಿದ್ದಾಗ ಕೆಳಗೆ ಬಿದ್ದರೆ ಒಡೆದು ಚೂರಾಗುವಂತಹ ಗುಣದ ಪ್ಲಾಸ್ಟಿಕ್‌ನ್ನು ಮಾತ್ರ ತಯಾರಿಸಲಾಗುತ್ತಿತ್ತು. ಪ್ಲಾಸ್ಟಿಕ್‌ನ ಮತ್ತೊಂದು ವಿಶೇಷ ರೂಪವೆನಿಸಿದ ಸೆಲ್ಯೂಲಾಯ್ಡನ್ನು ಕೇವಲ ಅಗ್ಗದ ಗೊಂಬೆಗಳನ್ನು ತಯಾರಿಸುವುದಕ್ಕೆ ಮಾತ್ರ ಬಳಸಲಾಗುತ್ತಿತ್ತು. ಬೇಕ್‌ಲೈಟ್ ವಸ್ತುಗಳು ಬೀಳಿಬಿಡುತ್ತಿದ್ದುವು. ಇಲ್ಲವೇ ಒಡೆದುಹೋಗುತ್ತಿದ್ದುವು. ಇಂದು ಪ್ಲಾಸ್ಟಿಕ್‌ನ ಅಸಾಧಾರಣ ಮುನ್ನೆಗೆತವನ್ನು ಗಮನಿಸಿದರೆ, ಎಷ್ಟು ತಜ್ಞರು ಎಂತೆಂಥಹ ಸಂಶೋಧನೆಗಳನ್ನು ನಡೆಸಿರಬಹುದೆಂದು ಬೆಕ್ಕಸವಾಗುತ್ತದೆ. ಇಂದಿಗೂ ಪ್ಲಾಸ್ಟಿಕ್‌ನ ವಿಶ್ವಶೋಭೆಯ ಅಭಿವೃದ್ಧಿಯನ್ನು ಸಂದೇಹಿಸುವವರು ಯಾರಾದರೂ ಇದ್ದರೆ, ಅವರು ಈಚೆಗೆ ಪಶ್ಚಿಮ ಜರ್ಮನಿಯಲ್ಲಿ ನಡೆದ ಪ್ಲಾಸ್ಟಿಕ್ ವಸ್ತು ಪ್ರದರ್ಶನದ ಬಗ್ಗೆ ಹೊರ ಬಿದ್ದಿರುವ ಪುಸ್ತಕಗಳನ್ನಾದರೂ, ಚಲಚ್ಚಿತ್ರದಲ್ಲಾದರೂ ನೋಡಬೇಕು. ಜಾಗರಿಕತೆಯಲ್ಲಿ ಅತಿ ಮುಂದುವರಿದ ಜರ್ಮನ್ನರೇ ಈ ಪ್ರದರ್ಶನವನ್ನು ಕಂಡು ಫಿಟ್ಟರಾದರೆಂದರೆ ಪ್ಲಾಸ್ಟಿಕ್‌ನ ಪ್ರಗತಿಯು ಯಾವ ಹಂತವನ್ನು ಮುಟ್ಟಿರಬೇಕು!

ಲೋಕ, ಗಾಜು, ಮರ, ಒಟ್ಟಿ ಮುಂತಾದ ಯಾವುದೇ ವಸ್ತುಗಳ ಜಾಗವನ್ನು ಪ್ಲಾಸ್ಟಿಕ್‌ನಿಂದ ಆಕ್ರಮಿಸಿಕೊಳ್ಳಲು ಸಾಧ್ಯವಿದೆ. ಆಧುನಿಕ ಪ್ಲಾಸ್ಟಿಕ್‌ನ ಸರ್ವವ್ಯಾಪಕತೆಗೆ ಒಂದು ಅತ್ಯುತ್ತಮ ನಿದರ್ಶನವಾಗಿ ಈಚೆಗೆ ಸಿದ್ಧವಾಗಿರುವ ಪ್ಲಾಸ್ಟಿಕ್ ಕಾರನ್ನು ಉದಾಹರಿಸಬಹುದು. ಅದರಲ್ಲಿನ ಮೋಟಾರ್ ಒಂದರ ವಿನಾ, ರೇಡಿಯೇಟರ್ ಗ್ರಿಲ್, ಬಾಷ್ಪಿಸ್ ಬಾಡಿ, ಸ್ಪ್ರಿಂಗುಗಳು, ಚಕ್ರಗಳು, ಬ್ರೇಕು ಮುಂತಾದವನ್ನೆಲ್ಲಾ ಪ್ಲಾಸ್ಟಿಕ್‌ನಿಂದಲೇ ಸಿದ್ಧವಾಗಿವೆ.

ಪ್ಲಾಸ್ಟಿಕ್‌ನಲ್ಲಿ ಹಲವಾರು ವಿಧಗಳನ್ನು ಕೂಡ ತಯಾರಿಸಲಾಗುತ್ತಿದೆ. ಪೊಲೊಥರ್, ಲುಪೊಲೆನ್ ಎಂಬ ಜರ್ಮನಿಯಲ್ಲಿ ತಯಾರಾದ ಪ್ಲಾಸ್ಟಿಕ್ ಸಾಂದ್ರತೆಯಲ್ಲಿ ಉಕ್ಕಿಗಿಂತ ಮೂರು ಪಟ್ಟು ಕಮ್ಮಿಯಿದ್ದರೂ ಶಕ್ತಿಯಲ್ಲಿ ಎರಡು ಪಟ್ಟು ಹೆಚ್ಚಾಗಿರುತ್ತದೆ.

ಈಗಾಗಲೇ ಸಾಧಿಸಲಾಗಿರುವ ಪ್ರಗತಿಯನ್ನು ಆಳವಾಗಿ ನೋಡಿದರೆ, ಇಷ್ಟರಲ್ಲೇ ಪ್ಲಾಸ್ಟಿಕ್‌ಗಿಂತ ಹಿಂದಿನ ಶತಮಾನಗಳ ವರೆಗಿನ ತೂಕದ ಹಡಗುಗಳನ್ನೂ, ಲೊಕೋಮೋಟಿವ್ ಚಕ್ರಗಳನ್ನೂ, ವಿಮಾನಗಳನ್ನೂ ತಯಾರಿಸುವ ಸಾಧ್ಯತೆಯಿದೆ.

ಗುಂಡು ಹೊಡೆದರೂ ಒಳಗೆ ಪ್ರವೇಶಿಸಲು ಸಾಧ್ಯವಿಲ್ಲದಂತಹ ಕವಚ, ತಿರಸ್ಕಾರದನ್ನ ಪ್ಲಾಸ್ಟಿಕ್‌ನಿಂದ ತಯಾರಿಸಲಾಗಿದೆ. ಭೂಮಿಯ ಫಲವತ್ತತೆಯನ್ನು ಅಧಿಕಗೊಳಿಸಲು ಕೃತಕ ಸಂಯೋಜನೆಯಿಂದ ತಯಾರಾದ ಪ್ಲಾಸ್ಟಿಕ್ ನೊರೆಯನ್ನು ವಜ್ರದೊಂದಿಗೆ ಬೆರೆಸುವ ಪ್ರಯೋಗಗಳು ಪೂರ್ಣಯಶವನ್ನು ಪಡೆದಿವೆ.

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ಕರ್ಣ ಪ್ರತಿಗಳಿಗೆ ವಿಶೇಷ ಸವಲತ್ತುಗಳು

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/63-66 dated 29-4-1966.

NAVAYUGA 27—6—1968
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No: 31
Licensed to Post without Prepayment

ಜಿಜ್ಞಾಸೆಯ ವಿಷಯ

ಬಡ ರೈತನ ಕೂಳಿನ ಕೂಗು

ಬರೆದವರು: ಐ. ಎಚ್. ಶಾಂತಾರಾಮ ಶೆಟ್ಟಿ.

ಕೂಳು, ಕೂಳು, ಕೂಳು— ಇದು ಹಸಿದ ಹೊಟ್ಟೆಯ ಗ್ರಾಮೀಣ ಕೃಷಿಕ ಜನತೆಯ ಆರ್ತನಾದ

ಕೃಷಿ ಪ್ರಧಾನ ರಾಷ್ಟ್ರ ಭಾರತದಲ್ಲಿ ಕೃಷಿಕರಿಗೆ ಕೂಳಿಗಾಗಿ ಪರದಾಡುವುದು ಸೋಜಿಗ.

ನಮ್ಮ ಸರ್ಕಾರವೇನೊ ಕೂಳಿಗೆ ಬೇಕಾದಷ್ಟು ಅಕ್ಕಿಯನ್ನು ಅಧಿಕವಾಗಿ ಉತ್ಪಾದಿಸಲಿಕ್ಕೆ ರಾಸಾಯನಿಕ ಗೊಬ್ಬರ ಕಾರ್ಖಾನೆ, ಟ್ರಾಕ್ಟರ ಕಾರ್ಖಾನೆಯೆಂದು ಸ್ಥಾಪಿಸಿರುತ್ತದೆ. ಸಾಧ್ಯವಿದ್ದಷ್ಟು ಮಟ್ಟಿಗೆ ಪರದೇಶದಿಂದ ಅಕ್ಕಿ ಆಮದು ಮಾಡಿಕೊಳ್ಳುತ್ತಲೂ ಇದೆ. ಅಂತಿರುವಾಗ ಬೆಳಗಾರ ರೈತನ ಕೂಳಿಗೆ ಅಕ್ಕಿ ಇಲ್ಲವೆಂದರೆ ನಂಬುವಂತದ್ದಲ್ಲ.

ಅಕ್ಕಿ ಏನೋ ಇದೆ ಆದರೆ ಬಡ ಕೃಷಿಕನಿಗೆ ಉಣ್ಣುವುದಕ್ಕೆ ಮಾತ್ರ ಅಕ್ಕಿ ಇಲ್ಲ! ಇದಕ್ಕೆ ಯಾರು ಹೊಣೆ? ಸರ್ಕಾರವೂ? ಬೆಳೆಗಾರನೊ? ದಾಸ್ತಾನುಗಾರನೊ? ಅಥವಾ ಬಳಕೆದಾರನೊ? ಬೆಳೆದುದನ್ನು ಇಟ್ಟುಕೊಳ್ಳುವ ಪರಿಸ್ಥಿತಿಯಲ್ಲಿಲ್ಲದ ರೈತನ ತಲಾ ಆದಾಯ ಸಾಧಾರಣ ಕೃಷಿ ಕಾರ್ಮಿಕನದಾದರೆ ೪ ರೂಪಾಯಿ ಸಣ್ಣ ಹಿಡುವಳಿದಾರ ಕೃಷಿಕನದಾದರೆ ೭ ರೂಪಾಯಿ. ಕಮ್ಮಿ ಆದಾಯದ ಕೃಷಿಕರು ಮುಡಿಗೆ ೫೦ ರೂಪಾಯಿ ಕೊಟ್ಟು ಅಕ್ಕಿ ತೆಗೆದು ಕೊಳ್ಳುವ ಸ್ಥಿತಿಯಲ್ಲಿಲ್ಲ.

ಗದ್ದೆಯಲ್ಲಿ ಬೆವರು ಸುರಿಸಿದ ರೈತರು ಹೊಟ್ಟೆ ಹಸಿದಾಗ ಸುಮ್ಮನಿರುವರೇ?

ತಮ್ಮ ರಟ್ಟೆಯ ಫಲ ಇನ್ನೊಬ್ಬರು ಉಂಡು ತೇಗುತ್ತಿರುವಾಗ ಹಸಿದ ಹೊಟ್ಟೆಯ ಕಷ್ಟಪಟ್ಟ ರೈತರು ದಂಗೆ ಎದ್ದರೂ ಆಶ್ಚರ್ಯವಲ್ಲ. ಗದ್ದೆಯಲ್ಲಿ ದುಡಿವ ಕೃಷಿಕನ ಹೊಟ್ಟೆ ಹಸಿಯುತ್ತಾ ಇದ್ದರೆ ದೇಶ ಏಳಿಗೆಯಾಗಲಾರದು.

ನಮ್ಮ ಪ್ರಜಾಪ್ರಭುತ್ವ ಸುಗಮವಾಗಿ ಯಶಸ್ವಿಯಾಗಿ ನಡೆಯುವುದು ಕೃಷಿಕನನ್ನು ಅವಲಂಬಿಸಿದೆ. ಜನತೆಯ ಹೊಟ್ಟೆ ತುಂಬಿಸುವ ಕೃಷಿಕನನ್ನು ತೃಪ್ತನಾಗಿಸಿದರೆ ದೇಶದ ಏಳಿಗೆಯನ್ನು ಕೆಲವೇ ಸಮಯದಲ್ಲಿ ಸಾಧಿಸಲು ಸಾಧ್ಯ.

ನಮ್ಮ ಸರ್ಕಾರ ಇಷ್ಟು ದೊಡ್ಡಮಟ್ಟದ ರೈತ ಹಿತ ನೀತಿ ಹೆಜ್ಜೆಯಿಂದ ಉಳುಮೆ ರೈತ ಕೂಲಿಯಿಂದ ದೊಡ್ಡ ಜಮೀನುದಾರರ ವರೆಗೆ ಎಲ್ಲರಿಗೂ ಬೇಸರ ಪಟ್ಟಿರುವರೆಂಬುದರ ನಿದರ್ಶನಕ್ಕೆ ಭೂ ಸುಧಾರಣೆಯಿಂದಾದ ಗ್ರಾಮಾಂತರ ಪರಿಸ್ಥಿತಿಯೊಂದೆ ಸಾಕು.

ಸರ್ಕಾರವು ರೈತಹಿತ ಸಾಧನೆಯಾಗುತ್ತದೆಂದು ಭಾವಿಸಿದ್ದ ಈ ಭೂ ಸುಧಾರಣೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಆರ್ಥಿಕ ಅಭದ್ರತೆ ತಲೆದೋರಿ ಗ್ರಾಮ ಪರಿಸ್ಥಿತಿ ಹದಗೆಟ್ಟು, ಹಳ್ಳಿ ಜನತೆಯಲ್ಲಿ ಒಬ್ಬರಿಂದೊಬ್ಬರಿಗೆ ವೈಷಮ್ಯ ಹುಟ್ಟುವಂತಾಗಿದೆ.

ಭೂಸುಧಾರಣೆಯಿಂದರೆ ಇಷ್ಟೇ ಎಂದು ರೈತ ಕಾರ್ಮಿಕ ಕೇಳುವಂತಾದರೆ, ವ್ಯಕ್ತಿಗಿಂತ ಕಾನೂನು ಮುಖ್ಯ ಎಂದು ಸಣ್ಣ ಹಿಡುವಳಿದಾರ ಹೇಳುವಂತಾಗಿದೆ.

ಸರ್ಕಾರದ ಕಾನೂನಿನಂತೆ ಭೂಮಿ ತನ್ನದೆಂದು ಉಳುವ ಕಾರ್ಮಿಕ ರೈತನ ಹೇಳಿಕೆ.

ಸಂವಿಧಾನದ ೩೧ನೇ ಅನುಚ್ಛೇದದ ಪ್ರಕಾರ ಭೂಮಿ ಭಿನ್ನದಾಗುವುದಿಲ್ಲ. ಸುಪ್ರೀಂ ಕೋರ್ಟ್ ಸಲಹೆ ಜನತೆಯ ಮೂಲಭೂತ ಹಕ್ಕು ಕಸಿಯಲು ಸರ್ಕಾರಕ್ಕೆ ಸುಲಭ ಸಾಧ್ಯವಿಲ್ಲವೆಂತ ಹೇಳಿದೆ. ಅಂತಿರುವಾಗ ಭೂಮಿ ಭಿನ್ನದಾಗುವುದಿಲ್ಲ ಎಂದು ರೈತ ಮೂಲೀಕನ ವಾದ. ಈ ಇಬ್ಬರ ಹಕ್ಕು ಸ್ಥಾಪನೆ ಜಗಳದಾಟದೊಳಗೆ ಗ್ರಾಮ ಶಾಂತಿ ಕದಡಿ ಗ್ರಾಮ ಇಬ್ಭಾಗವಾಗುತ್ತದೆ. ಅಲ್ಲದೆ ಇದರಿಂದ ರೈತ ಕಾರ್ಮಿಕ ಇದ್ದುದನ್ನು ಕಳೆದುಕೊಂಡರೆ, ಭೂಮಿ ಮೂಲೀಕನಿಗೆ ಬರುವ ಭೂ ಆದಾಯವು ತಪ್ಪಿ ಹೋಗುತ್ತದೆ.

ಭೂಕಾಯಿದೆಯಿಂದ ಇಂಥಾದರೆ ತೆರಿಗೆ ಕಾಯಿದೆಯಿಂದ ಇನ್ನೊಂದು ರೀತಿಯಲ್ಲಿ ಸಣ್ಣ ಹಿಡುವಳಿದಾರ ಕೃಷಿಕ ಬಳಲುವಂತಾಗಿದೆ.

ಇದಕ್ಕೆ ಉದಾಹರಣೆಯಾಗಿ ೨೫ ಮುಡಿ ಅಕ್ಕಿ ಅಸ್ತಿಯಿರುವ ಸಣ್ಣ ಕುಟುಂಬವನ್ನೆ ಆರಿಸೋಣ. ವಿದ್ಯೆಯಿಲ್ಲದೆ ಸಂಪಾದಿಸಲು ಸಾಧ್ಯವಿಲ್ಲದೆ ಈ ಸಂಸಾರಕ್ಕೆ ಹಿರಿಯರು ಅರ್ಜಿಸಿದ ಅಸ್ತಿಯಿಂದಲೆ ಜೀವನ ಮಾಡಬೇಕು. ಅತಿ ಸಂಸಾರದ ಈ ಕಾಲದಲ್ಲಿ ತಲೆವಾರು ಸಿಕ್ಕಿದ ಅಸ್ತಿಯಿಂದ.

ವಿದ್ಯೆ ಇಲ್ಲದ ಇವರಿಗೆ ಭೂ ಆದಾಯವಿನಾ ಬೇರೆ ಆದಾಯವಿಲ್ಲ.

ಇವರು ಜೀವನ ಮಾಡುವುದೆ ಕಷ್ಟವಾಗಿರುವಾಗ ಇದರೊಡನೆ ಸರ್ಕಾರ ಕೈ ತೆರಬೇಕು—ಲೆವಿ, ಭೂತೆರಿಗೆ, ಸರ್ಚಾರ್ಜು ಎಂದು. ಕೃಷಿಕರು ಸರ್ಕಾರಕ್ಕೆ ಇದನ್ನು ತೆರುವುದಕ್ಕಾಗಿ ಕೆಲವೊಮ್ಮೆ ಮನೆಯಲ್ಲಿ ಇದ್ದುದಲ್ಲವನ್ನೂ ಸಿಕ್ಕ ಬೆಲೆಗೆ ಒತ್ತೆ ಇಡಬೇಕಾಗಿ ಬರುತ್ತದೆ.

ಮಾರಿ ಮಾರಿ ಬರಿದಾದ ರೈತರು ಮಾನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡದ್ದೂ ಉಂಟು.

ಇದು ಸ್ವತಂತ್ರ ಭಾರತದ ಮಧ್ಯಮ ತರದ ಕೃಷಿಕ ಹಿಡುವಳಿದಾರರ ಪರಿಸ್ಥಿತಿ.

ನಮ್ಮ ಜನತಾ ಸರ್ಕಾರವು ಜೀಪುಗಳಲ್ಲಿ ಓಡಾಡುವ ಅಧಿಕಾರಿಗಳು ಮಾಡಿರುವ ವರದಿಯನ್ನೋದಿ ನಂಬಿ ಕುಳಿತರೆ ಇನ್ನು ಕೆಲವೆ ಸಮಯದಲ್ಲಿ ಕೃಷಿಕಾರ್ಯ ಮಾಡುವ ರೈತನು ನಮ್ಮಲ್ಲಿ ಸಿಕ್ಕಲಿಕ್ಕಿಲ್ಲ.

ಆದುದರಿಂದ ಸರ್ಕಾರ ಸಣ್ಣ ಹಿಡುವಳಿದಾರ ಕೃಷಿಕರಿಗೆ ಮಿಕ್ಕುಳಿದ ಉದ್ಯಮಗಳಿಗೆ ಕೂಡುವ ನೆರವಿನಂತೆ ನೆರವನ್ನು ಕೊಟ್ಟು ರೈತರು ಕೃಷಿ ಬಗ್ಗೆ ಆಸ್ಥೆ ವಹಿಸುವಂತೆ ಮಾಡಬೇಕು.

ಇದರ ಮೊದಲು ಹಂತವಾಗಿ ಕಂದಾಯ, ಕೃಷಿ ಉತ್ಪತ್ತಿ ತೆರಿಗೆ ಇಲ್ಲದಂತೆ ಉದ್ಯಮ ಕೃಷಿರಂಗವಾಗಬೇಕು. ಪ್ರಜಾಪ್ರತಿನಿಧಿಯಾಗಿ ಅಧಿಕಾರದಲ್ಲಿರುವವರು ದಲಿತ ರೈತ ಜಮೀನುದಾರ ವರ್ಗದವರ ಹಿತದ ಕಡೆಗೆ ಗಮನ ಕೊಡದೆ ಇದ್ದರೆ ಹೊಟ್ಟೆ ಬಟ್ಟೆಯಾಗುವ ಕೃಷಿಕಾರ್ಯವನ್ನು ಗ್ರಾಮೀಣ ಪ್ರದೇಶದ ರೈತರು ಬಿಟ್ಟು ಪಟ್ಟಣ ಪ್ರದೇಶಕ್ಕೆ ವಲಸೆ ಹೋಗಿ ಕೈಗಾರಿಕಾ ಕಾರ್ಮಿಕರಾಗುವುದು ಕಂಡಿತ.

ಆದರಿಂದ ಉಳಿತಾಯವಿಲ್ಲದ ಉದ್ಯಮದಲ್ಲಿ ತೊಡಗಿರುವ ಕೃಷಿಕರು ಕೃಷ್ಟಿಯ ಪರಿಪೂರ್ಣ ಜೀವನ ಕಡೆಸಲು ಸಹಾಯಕವಾಗುವಂತೆ ಕೃಷಿ ದುಡಿಮೆ ಬಗ್ಗೆ ಕೃಷಿಕರಿಗೆ ಅದರ ಹುಟ್ಟುವಂತೆ ಮಾಡಬೇಕು.

ಇದು ದೇಶ ಕಲ್ಯಾಣ ದೃಷ್ಟಿಯಿಂದ ಒಳ್ಳೆಯದು. ದೇಶಹಿತದ ಬಗ್ಗೆ ಕೃಷಿಕನನ್ನು ಒಗ್ಗಿಸಿಕೊಂಡರೆ ನಮ್ಮ ಸಾಂಕೃತಿಕ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 5/1967

ವಾದಿ—ಶ್ರೀನಿವಾಸ ಜಾಕ್ಸ
ಪ್ರತಿವಾದಿರು— ಯುವಂಜಲೀಸ್
ಸುಬ್ರಾಡೊಬಾಯಿ ಕೂಡಾ

೩೦ರಿಂದ ೬ನೇವರೆಗಿನ ಪ್ರತಿವಾದಿಯವರಿಗೆ ತಿಳಿಯಪಡಿಸುವುದೇನಂದರೆ:—

೩ನೇ ಪ್ರ. ಮೇರಿ ದಾಲ್ಫಿದಿ, ೩ನೆ ಪ್ರ. ಪಾರ್ಗರೆಟ್ ದಾಲ್ಫಿದಿ, ೪ನೆ ಪ್ರ. ವಲೆಂಸ್ ದಾಲ್ಫಿದಿ, ೫ನೆ ಪ್ರ. ಫ್ರೆಡ್ರಿಕ್ ದಾಲ್ಫಿದಿ — ಫಾಸ್ಕಲ್ ದಾಲ್ಫಿದಿಯ ಮಕ್ಕಳು, ಕುಂದಾಪುರ ಕ್ಲಬ್ ಗ್ರಾಮಸ್ಥರು.

ವಾದಿಯು ಪ್ರಸ್ತುತ ಪೈಗೆರೆಯವರು ಲೆಕ್ಕಿಸೆತನ ನಿವೃತ್ತಿಗೆಗೋಸ್ಕರ ಮೇಲ್ಕಂಡ ದಾವೆ ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ಕಾರ್ಯ 22.7.68ಕ್ಕೆ ಕಷ್ಟಗೆ ಯಿಟ್ಟಿರುವುದರಿಂದ ಆ ಕಾರಣ ನಿಮ್ಮ ಕಡೆಯ ಉಪಾಹಂಡ ದಾಖಲು ಮಾಡಲು ಯುದ್ಧ ಪಕ್ಷದಲ್ಲಿ ಸದ್ರಿ ಕಾರ್ಯದ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟ್‌ನಲ್ಲಿ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು. ಆ ಪ್ರಕಾರ ಸದ್ರಿ ದಿವಸ ಹಾಜರಾಗದಿರಿಕ್ಕೆ ಕಷ್ಟದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರುಹಾಜರಿಯಲ್ಲಿ ಕೇಳಿ ಪೈಸಲು ಮಾಡಿಕೊಡುವುದೆಂತ ನಿಮಗೆ ತಿಳಿಸೋಣಾಗುತ್ತದೆ.

M. Madhava Rao
Advocate for Plff.

ತಾರೀಕು. 15—6—68,
ಸ್ಥಳ: ಕುಂದಾಪುರ

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪೋಸ್ಟ್ ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ!

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.ಎಸ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿಯರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಸುಖಕರವಾಗಿ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹಸ್ಥರ್ಮ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೋಸ್ಟ್ ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udupi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

4—7—1968

೨೦
ಪೈಸೆ

ಕಥಾ ಪ್ರಪಂಚ

ವಿಷ ಚಕ್ರ

ಬರೆದವರು: ಶ್ರೀ ಸ. ನಾರಾಯಣ

ದೇಸಾಯಿ ಮೋಟಾರು ಸೈಕಲನ್ನು ಪೋಲೀಸು ಸುಪರಿಂಟೆಂಡೆಂಟರ ಕಚೇರಿಯಲ್ಲಿ ವೇಗವಾಗಿ ಓಡಿಸಿದ. ಮೋಟಾರು ಸೈಕಲು ಆತಿ ವೇಗದಿಂದ ಓಡತ್ತಿತ್ತು, ದೇಸಾಯಿಗೆ ಪ್ರಾಣದ ಲಕ್ಷ್ಯವೇ ಇದ್ದಂತಿಲ್ಲ. ಅವಾಯ, ಅಪಘಾತಗಳನ್ನು ಚಿಂತಿಸುವಷ್ಟು ವೇಳೆ ಅವನಿಗಿರಲಿಲ್ಲ.

ಮೋಟಾರು ಸೈಕಲು ಪೋಲೀಸು ಸೂಪರಿಂಟೆಂಡೆಂಟರ ಕಛೇರಿಯ ಬಳಿ ನಿಂತಿತ. ದೇಸಾಯಿ ಸೈಕಲಿನಿಂದಿಳಿದು ಒಳಕ್ಕೆ ನಡೆದ. ಮೇಲಧಿಕಾರಿಗಳ ಪ್ರಿಯ ಮಿತ್ರರು ಎಂಬ ಕಾರಣದಿಂದ ಯಾವ ಸಿಪಾಯಿಯೂ ಅವನನ್ನು ತಡೆಯಲಿಲ್ಲ. ದೇಸಾಯಿ ನೆಳೆಯನ ಕೋಣೆಯತ್ತ ಅತರದಿಂದ ನಡೆದ.

ಪೋಲೀಸು ಸುಪರಿಂಟೆಂಡೆಂಟ್ ವಿನಾಯಕ್ ಹಳೆಯ ಕೇಸೊಂದರ ಕಾಗದ ಪತ್ರಗಳನ್ನು ಓದತ್ತಾ ಕುಳಿತಿದ್ದರು. ಕೋಣೆಯ ಬಾಗಿಲ ಬಳಿ ಹೆಜ್ಜೆಯ ಶಬ್ದವಾದೊಡನೆ ಕತ್ತೆತ್ತಿ ನೋಡಿದರು. ಗೆಳೆಯ ದೇಸಾಯಿಯನ್ನು ಕಂಡೊಡನೆಯೇ ಅವರಿಗೆ ಪರಮಾನಂದವಾಯಿತು.

"ಸುಸ್ವಾಗತ ದೇಸಾಯಿ....ಈ ಕೊತ್ತಿನಲ್ಲಿ ನಿನ್ನನ್ನು ಫಿರೀಕ್ಷಿಸಿರಲಿಲ್ಲ ಬೋಬಾಯಿಯಿಂದ ಯಾವಾಗ ಬಂದೆ?" ಎಂದು ವಿನಾಯಕ್.

ದೇಸಾಯಿಯ ಕಣ್ಣುಗಳು ಬೆಂಕಿಯ ಕಿಡಿಗಳನ್ನು ಹೊರ ಚೆಲ್ಲುತ್ತಿದ್ದವು. ಮೊದಲೇ ಕೆಂಪಾಗಿದ್ದ ಅವನ ಮುಖ ಕಾದ ತಾಮ್ರದ ತಗಡಿನಂತಾಗಿತ್ತು. ಗೆಳೆಯ ಮಿತಿ ಮೀರಿ ಮದ್ದು ಸೇವಿಸಿದ್ದಾನೆ ಎಂಬುದನ್ನು ವಿನಾಯಕ್ ಅರಿತರು.

ದೇಸಾಯಿ ಮೇಜಿನ ಬಳಿಗೆ ಬಂದು "ಭಮಸ್ತೆ ಭಾಯಿ" ಎಂದ. ವಿನಾಯಕ್ 'ನಮಸ್ತೆ' ಎಂದು ಕೈ ಜೋಡಿಸಿದರು. ದೇಸಾಯಿ ತನ್ನ ಕೋಟಿನ ಜೇಬಿನಲ್ಲಿದ್ದ ಪಿಸ್ತೂಲನ್ನು ತೆಗೆದು ಮೇಜಿನ ಮೇಲಿಟ್ಟ.

'ಏನಿದು ದೇಸಾಯ್.....ಇಷ್ಟೆಗೇಕೆ ಕಂಗೆಟ್ಟಿ. ಏನಿದರ ಅರ್ಥ'

"ಇಬ್ರಾಹಿಂನನ್ನ ಈ ಪಿಸ್ತೂಲಿನಿಂದ ಹೊಡದು ಕೊಂದಿದ್ದೇನೆ. ನನ್ನನ್ನು ಅರೆಸ್ಟ್ ಮಾಡಿ" ಎಂದು ತನ್ನೆರಡು ಕೈಗಳನ್ನು ಮುಂದೆ ಚಾಚಿದ ದೇಸಾಯಿ.

"ನಿಮಗೆ ತಲೆ ಕೆಟ್ಟಿಲ್ಲ ತಾನೆ ದೇಸಾಯಿ?"

"ನನ್ನ ಮಾತಿನಲ್ಲಿ ಸಂಬೆಕ ಇಲ್ಲೆ ವಿನಾಯಕ್?"

"ಆತ್ಮೀಯ ಮಿತ್ರ, ಹುಚ್ಚಿದಿ, ನಿಮ್ಮ ಬಲಗೈಯಂತಿದ್ದ ಇಬ್ರಾಹಿಂಖನ್ನ ಕೊಲೆ ಮಾಡಿದ್ದೇನೆ ಎಂದು ಹೇಳುತ್ತೀರಿ....ಈ ಹಾಟಕ ಏಕೆ? ಅದೇನು ವಿಷಯ ಹೇಳಿ"

"ನಾನು ಕುಡಿದಿದ್ದೇನೆ, ಬುದ್ಧಿ ಸರಿಯಿಲ್ಲ ಎಂದು ಭಾವಿಸಿದ್ದೀರಾ?"

"ಹಾಗಲ್ಲ ದೇಸಾಯ್, ಈ ಮಾತನ್ನು ನಾನೇ ಅಲ್ಲ, ಭಗವಂತನೂ ನಂಬುವುದಿಲ್ಲ."

"ನನ್ನ ಇಂಜಿನಿಯರಿಂಗ್ ವರ್ಕ್ ಶಾಪಿನ ಛೇರಿಗೆ ಮ್ಯಾನೇಜರ ಕೋಣೆಯಲ್ಲಿ ಇಬ್ರಾಹಿಂ ಹೆಣ ಬಿದ್ದಿದೆ. ಬೇಕಾದರೆ ನೋಡಿ ಬನ್ನಿ."

"ದೇಸಾಯ್!"

"ನಾನು ಸುಳ್ಳು ಹೇಳುತ್ತಿಲ್ಲ, ವಿನಾಯಕ್, ಸಾರಿ....ಸೂಪರಿಂಟೆಂಡೆಂಟ್ ಸಾಬ್"

"ನಂಬಿಕೆಯ, ಪ್ರಾಮಾಣಿಕ ಮಿತ್ರನನ್ನು ಏಕೆ ಕೊಂದಿರಿ, ಅದಾದರೂ ಹೇಳಿ" ಎಂದು ವಿನಾಯಕ್ ದೇಸಾಯಿಯ ಕೈಗಳನ್ನು ಹಿಡಿದು ಕೇಳಿದರು.

"ಹೆಚ್ಚಾಗಿ ಹೇಳುವುದಕ್ಕೇನಿಲ್ಲ ನಾಲಿಗೆಯೇ ಬರುವುದಿಲ್ಲ...ನನ್ನನ್ನು ಒಂದೇ ಮಾತಿನಲ್ಲಿ ಹೇಳುತ್ತೇನೆ... ಹೆಚ್ಚು ಕೇಳಬೇಡಿ...ಇಬ್ರಾಹಿಂ ಮಿತ್ರದ್ರೋಹಿ ವಿಶ್ವಾಸಘಾತುಕ.... ರಾಕ್ಷಸ....ನನ್ನ ಬಾಳನ್ನೆ ಹಾಳ ಮಾಡಿದ...." ಎಂದು ಉದ್ವೇಗದಿಂದ ನುಡಿದ ದೇಸಾಯ್.

ವಿನಾಯಕ್ ಫೈಲ್ಸಿನ ಕಟ್ಟು ಯೋಚಿಸಿ ಸ್ವಾಂತಕ್ಕೆ ಇಳಿದರು.

"ನನ್ನ ಮಾತಿನಲ್ಲಿ ನಂಬಿಕೆ ಇಲ್ಲವಾದರೆ ಫೋನ್ ಮಾಡಿ....ವಿಷಯ ತಿಳಿಯುತ್ತದೆ....ನನ್ನನ್ನು ಸೊದಲು ಅರೆಸ್ಟ್ ಮಾಡಿಬಿಡಿ..."

"ನಂಬಿಕೆಯ ವಿಷಯವಲ್ಲ ದೇಸಾಯ್ ....ಇದು ಸಮಸ್ಯೆಯಾಯಿತ. ದಯವಿಟ್ಟು ಎರಡು ನಿಮಿಷ ಕುಳಿತುಕೊಳ್ಳಿ. ಯೋಚಿಸೋಣ"

"ಸಾಹೇಗ ನಿಮ್ಮ ಗೆಳೆಯನಾಗಿ ಬಂದಿಲ್ಲ, ಅಪರಾಧಿಯಾಗಿ ಬಂದಿದ್ದೇನೆ..... ನ ನು ಸೇಡು ತೀರಿಸಿ ಕೊಂಡಿದ್ದೇನೆ.... ಕೊಲೆ ಮಾಡಿದ್ದೇನೆ...ನನ್ನ ಬಗ್ಗೆ ಮರುಕ, ಅನುಕಂಪ ಅಗತ್ಯವಿಲ್ಲ ವಿನಾಯಕ್ ....ನಾನು ತಪ್ಪಿಸಿಕೊಳ್ಳಲು ಅವಕಾಶವಿತ್ತು....ಆತ್ಮಹತ್ಯೆ ಮಾಡಿಕೊಳ್ಳಬಹುದಿತ್ತು... ಆದರೆ ನನಗೆ ಅವುಗಳಿಂದ ಸಮಾಧಾನವಿಲ್ಲ...ನಾನು ಕೊಲೆಗಾರ, ಕಾನೂನಿನ ಪ್ರಕಾರ ನನಗೆ ಶಿಕ್ಷೆಯಾಗಲೇ ಬೇಕು...ದಯೆ ತೋರಬೇಡಿ ವಿನಾಯಕ್ ....ಎಂದು ಉದ್ವೇಗದಿಂದ ನುಡಿದ ದೇಸಾಯಿ.

ಮೇಜಿನ ಮೇಲಿದ್ದ ಟೆಲಿಫೋನಿನ ಗಂಟೆ ಬಾರಿಸಿತು. ವಿನಾಯಕ್ ರಿಸೀವರನ್ನು ಕೈಗೆತ್ತಿ ಕೊಂಡರು.

"ಹಲೋ....ಸೂಪರ್‌ಡೆಂಟ್ ವಿನಾಯಕ್ ಸ್ಪೀಕಿಂಗ್"

"ನಮಸ್ತೆ ಸಾರ್...ನಾನು ಇನ್‌ಸ್ಪೆಕ್ಟರ್ ಶಿವರಾಜ್ ಮಾತನಾಡುತ್ತಿರೋದು"

"ಏನು ವಿಶೇಷ"

"ನಮಭಾರತ್ ಇಂಜನಿಯರಿಂಗ್ ವರ್ಕ್‌ಶಾಪಿನಲ್ಲಿ ಸಂಸ್ಥೆಯ ಪಾಲುದಾರ ನವಾಬ್ ಇಬ್ರಾಹಿಂರ ಕೊಲೆಯಾಗಿದೆ... ...ಕೊಲೆ ಮಾಡಿದವರು ಸುಪ್ರಸಿದ್ಧ ಇಂಜಿನಿಯರ್ ಮತ್ತು ಸಂಸ್ಥೆಯ ಮಾಲೀಕರು ಅದ ವಿಷ್ಣು ಕಾಂತ್ ದೇಸಾಯ್.... ಕೊಲೆ ಮಾಡಿ ದೇಸಾಯ್ ಮೋಟಾರ್ ಸೈಕಲು ಹತ್ತಿ ಪರಾರಿಯಾಗಿದ್ದಾರೆ....ಅವರನ್ನು ಹಿಡಿಯಲು, ಶೋಧಿಸಲು ತಂಡ ಹೋಗಿದೆ. ಮರದಿ ಬಂದೂಡನೆಯೇ ವತ್ತೆ ಫೋನ್ ಮಾಡುತ್ತೇನೆ" ಎಂದರು ಪೋಲೀಸ್ ಇನ್‌ಸ್ಪೆಕ್ಟರು.

"ಓಸ್" ಎಂದು ವಿನಾಯಕ್ ರಿಸೀವರನ್ನು ಫೋನಿನ ಮೇಲೆ ಕುಕ್ಕಿದರು.

"ನನ್ನ ವಿತ್ರರನ್ನು ನಾನೇ ಪ್ರೈದುಮಾಡಿ...ಅಪರಾಧಿ ಎಂದು ಹೇಳಬೇಕಾದ ಪರಿಸ್ಥಿತಿ ಒದಗಿ ಬಂತಲ್ಲ ದೇಸಾಯಿ.... ಇಂತಹ ಅಕಾರ್ಯಕ್ಕೆ ನೀನೇಕೆ ಕೈಹಾಕಿದೆ...ಒಂದು ಕಡೆ ಮಿತ್ರ....ಒಂದುಕಡೆ ಕರ್ತವ್ಯ...." ಎಂದು ನೊಂದು ನುಡಿದರು ವಿನಾಯಕ್.

"ನ್ಯಾಯ ಎಲ್ಲಿದೆ ಒಂದೇ ಅಲ್ವೆ ವಿನಾಯಕ್?"

"ನ್ಯಾಯ ಹೇಗಾದರೂ ಇರಲಿ, ಕೊಲೆ ಕಾರಣವನ್ನಾದರೂ ಹೇಳಬಾರದೆ ದೇಸಾಯ್"

"ನಿನಗೊಬ್ಬನಿಗೆ ಹೇಳುವ ಆಸೆ ನನಗಿಲ್ಲ. ಕ್ಯಾಯೂಲಯದಲ್ಲಿ ಹೇಳಲೇಬೇಕಾಗಿದೆಯಲ್ಲ!" ಎಂದು ವಿಷಾದದಿಂದ ನಕ್ಕ ದೇಸಾಯ್.

"ಸಂಗತಿ ಅಷ್ಟು ರಹಸ್ಯವೇ ದೇಸಾಯ್?"

"ಅದು ರಹಸ್ಯಮಯ ಸ್ವಾರಸ್ಯಕರ ಸಂಗತಿ. ಇಲ್ಲೇ ಇದೆ ನೋಡು" ಎಂದು ತನ್ನ ಜೇಬಿನಲ್ಲಿದ್ದ ಕವರನ್ನು ತೆಗೆದು ಗೆಳೆಯನ ಕೈಗಿತ್ತ ದೇಸಾಯ್.

ಂ ಂ ಂ

ಪ್ರಿಯತಮ,

ಇದು ನಿಮಗೆ ಬರೆಯುತ್ತಿರುವ ಅಂತಿಮ ಪತ್ರ. ನೀವು ಇಷ್ಟರಿಗೆ ಬರುವ ವೇಳೆಗೆ ನಾನು ಮರಳಿ ಬಾರದ ಊರಿಗೆ ತೆರಳಿರುತ್ತೇನೆ. ಜೀವನದಲ್ಲಿ ಎಷ್ಟೋ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದೆ. ವಿಧಿ ನನ್ನನ್ನು ವಂಚಿಸಿತು. ನನ್ನ ಬಾಳ ಆಶಾಗೋಪುರ ನುಚ್ಚುನೂರಾಯಿತು. ನನ್ನ ಶಕ್ತಿ, ಚೈತನ್ಯ, ಆತ್ಮವಿಶ್ವಾಸ, ಅಭಿಮಾನ ಎಲ್ಲವೂ ಅಡಗಿಹೋಗಿವೆ. ನಾನು ಸಜೀವ ಪ್ರೇತವಾಗಿ ಉಳಿದು ಬರೆಯುತ್ತಿದ್ದೇನೆ ಹಾವಿಗೆ ಹಾಲೆರೆದು ಸಾಕಿದರಿ. ಹಾವು ಕಚ್ಚಿತು. ಸರ್ಪದ ವಿಷ ನನ್ನ ಮೈಮನಗಳನ್ನು ಸುಡತ್ತಿದೆ. ಅದಕ್ಕೆ ಆತ್ಮಹತ್ಯೆಯೊಂದೇ ಅಂತಿಮ ಪರಿಹಾರ. ಅದರ ವಿನಃ ಬೇರೆ ಏನೂ ನನಗೆ ತೋಚುತ್ತಿಲ್ಲ.

"ನೀವು ಬೊಂಬಾಯಿಯಿಂದ ಹಿಂದಿರುಗಿದಾಗ ನಿಮಗೆ ಶುಭ ಸುದ್ದಿಯೊಂದನ್ನು ಹೇಳಲ ತವಕಿಸುತ್ತಿತ್ತು. ನೀವು ತಂದೆಯಾಗಲಿದ್ದೀರಿ ಯೆಂದುಹೇಳಲು ಹಾತೊರೆಯುತ್ತಿತ್ತು ನ ಲಿಗೆ. ಆದರೆ ನೀವು ಬಂದಾಗ ನನ್ನ ಆತ್ಮಹತ್ಯೆಯ ಅಶುಭ ವಾರ್ತೆಯ ಪತ್ರ ನಿಮ್ಮ ಕೈಸೇರಿರುತ್ತದೆ. ನಾನೇನು ಮಾಡಲಿ? ವಿಧಿಯ ಚಿತ್ತ.

"ನಮ್ಮ ಪರಸ್ಪರ ಭೇಟಿ, ವಿವಾಹ, ಪ್ರೇಮದ ಗತ ಸಂಗತಿಯನ್ನು ಒಮ್ಮೆ ನೆನಪು ಮಾಡಿಕೊಳ್ಳಿ. ಅದೆಷ್ಟು ಮಧುರ! ಅದೆಷ್ಟು ಆನಂದ! ಬಾಳನ್ನು

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

Ex.C. 52/68

O.S. 142/1924

ಅರ್ಜಿದಾರರು — ಶಾಂತೇರಮ್ಮ ಮತ್ತು

ಎದ್ರುರು — 1. ಲಕ್ಷ್ಮೀನಾರಾಯಣ ಉಡ್ಪ
2. ನಾಗೇಂದ್ರ ಉಡ್ಪ, ರಾಮ-
ಕೃಷ್ಣ ಉಡ್ಪನ ಮಗ.
3. ಶಂಕರನಾರಾಯಣ ಉಡ್ಪ,
ಯಜ್ಞನಾರಾಯಣ ಉಡ್ಪನ ಮಗ
ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದಲ್ಲಿರುವವರು.

3. ನೀವು ಎದ್ರಿಗೆ ತಿಳಿಯಪಡಿಸುವುದು —

ಕಳೆದ ಶೋಭಕೃತು ಸಂವತ್ಸರ ಆದಿಯಿಂದ ಪರಾಭವ ಸಂವತ್ಸರ ಅಂತ್ಯದ ವರೆಗಿನ ಅಸನಾರ್ಥ ಬಾಕಿ ಬಗ್ಗೆ, ನಿಮ್ಮ ಮೇಲೆ ಸಹಾ ಮೇಲ್ಮಂಡ ಡಿಕ್ರಿ ವಿಧಿಸ್ತಕಾರ ಅರ್ಜಿದಾರಳು ಕೋರ್ಟಿಗೆ ಅಮಲ್ಜಾರಿ ಅರ್ಜಿಸಲ್ಲಿಸಿರುತ್ತಾಳೆ. ಅಮಲ್ಜಾರಿ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ತಾ. 27-7-1968ರಲ್ಲಿ ಹಗಲು 11 ಗಂಟೆಗೆ ಮೇಲ್ಮಂಡ ಕೋರ್ಟುಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

/ಕೋರ್ಟು ಹುಕುಂ ಪ್ರಕಾರ/

A.S.N. HEBBAR,

ಅರ್ಜಿದಾರಳ ಎಡ್ವೋಕೇಟ್.

ಕುಂದಾಪುರ, 19-6-1968.

ಸುವ್ಯವಸ್ಥಿತ ರಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಲ್ಲಿ
ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3.

Phone— 5711, 5712, 5713 } 3 Lines.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೪
No. 44

ನವಯುಗ

ಉಡುಪಿ ೪—೭—೧೯೬೮

ಸ್ಥಾಪಕರು:
ವಿ| ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಯಥಾರ್ಥದ ಕತ್ತೆ

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಜನ್ಮ ಶತಾಬ್ದಿ ಎದುರು ಬಂದಿದೆ. ದೇಶದೊಳಗೂ ವಿದೇಶಗಳಲ್ಲಿಯೂ ಅದ್ದೂರಿಯಿಂದ ಈ ಶತಮಾನೋತ್ಸವವನ್ನು ಆಚರಿಸುವ ಬಗ್ಗೆ ನಾನಾ ವಿಧಗಳಿಂದ ಸೂತ್ರ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ ಭಾರತೀಯ ರಿಜರ್ವ್ ಬೇಂಕು ಮಹಾತ್ಮಾ ಗಾಂಧಿಯವರ ಚಿತ್ರವಿರುವ ಫೋಟುಗಳನ್ನು ಮೊತ್ತಮೊದಲಾಗಿ ಹೊರಡಿಸಲು ನಿರ್ಧರಿಸಿದೆ. ಮಹಾತ್ಮರು ಭಾರತಕ್ಕೆಷ್ಟೇ ಮಹಾತ್ಮರಾಗಿರಲಿಲ್ಲ; ಇಡಿಯ ವಿಶ್ವವೇ ಅವರನ್ನು ಮಹಾತ್ಮರೆಂದು ಗೌರವಿಸುತಿತ್ತು; ಇಂದಿಗೂ ಗೌರವಿಸುತ್ತಿದೆ. ಆದುದರಿಂದ ಈ ಗಾಂಧಿ ಶತಮಾನೋತ್ಸವ ಭಾರತೀಯರಿಗೆ ವಿಶ್ವಜನರಿಗೆ ಒಂದು ದಾರಿ ದೀಪ. ಅವರು ಬೋಧಿಸಿದ್ದ ತತ್ವಗಳನ್ನು ಮತ್ತೆ ನೆನಪಿಸಿಕೊಳ್ಳುವ ಒಂದು ಸುವರ್ಣಾವಕಾಶ.

ಚುನಾವಣೆಗಳಲ್ಲಿ ಕಾಂಗ್ರೆಸ್ ಹಲವು ರಾಜ್ಯಗಳ ಅಧಿಕಾರ ಸೂತ್ರವನ್ನು ಕೈಬಿಟ್ಟಿರುವಾಗ, ಪಕ್ಷವು ತತ್ವನಿಷ್ಠೆಯಿಂದ ಸಂಪೂರ್ಣ ದೂರ ಸರಿದು ಶುದ್ಧ ವ್ಯವಹಾರ ನೀತಿಗೆ ಶರಣಾಗಿರುವಾಗ, ಪಾಯಶಕ್ತ ಸುಸಂಘಟನೆ, ಪಕ್ಷನಿಷ್ಠೆ, ತತ್ವನಿಷ್ಠೆ, ಜನಪ್ರೇಮ ಮೊದಲಾದ ಸದ್ಗುಣಗಳ್ಳುವುಗಳಿಂದ ಕಾಂಗ್ರೆಸ್ಸು ವಂಚಿತವಿರುವಾಗ, ಅಧಿಕಾರ ವ್ಯಾಮೋಹ, ಅಧಿಕಾರ ತ್ಯಾಗ ನಿರೋಧ, ಗುಂಪುಗಾರಿಕೆ, ಪರಸ್ಪರ ಹಗೆತನ, ಪೈಮನಸ್ಸು, ಸಂಪೂರ್ಣ ವ್ಯವಹಾರ ಮಾರ್ಗಗ್ರಹಣ — ಇತ್ಯಾದಿ ದುರ್ಲಕ್ಷಣಗಳಿಂದ ಕಾಂಗ್ರೆಸ್ಸು ಭ್ರಷ್ಟವಾಗುತ್ತಿರುವ ವೇಳೆ ಈ ಗಾಂಧಿ ಶತಮಾನೋತ್ಸವ ಬಂದಿರುವುದೂ ಭಾಗ್ಯವೇ. ಶತಮಾನೋತ್ಸವದ ಸ್ಮಾರಕವಾಗಿ ಇಡಿಯ ದೇಶದಲ್ಲಿ ಸಂಪೂರ್ಣ ಪಾನಪ್ರತಿಬಂಧವನ್ನು ಅನುಷ್ಠಾನಕ್ಕೆ ತರಬೇಕು ಎಂದು ಗಾಂಧಿ ಸ್ಮಾರಕ ನಿಧಿಯು ಕೇಳಿಕೊಂಡಿದೆ; ಈ ದಿಸೆಯಲ್ಲಾದರು ಸಾಧ್ಯವಾದಷ್ಟು ಒತ್ತಾಯವನ್ನಾದರೂ ಹೇರುತ್ತಿದೆ. ಮಹಾತ್ಮಾ ಗಾಂಧಿಯವರ ರಚನಾತ್ಮಕ ಕಾರ್ಯಗಳಲ್ಲಿ ಪಾನಪ್ರತಿಬಂಧವೂ ಒಂದಾಗಿತ್ತು. ಕಾಂಗ್ರೆಸ್ ಅಧಿಕಾರ ವಹಿಸಿದ ಎಳೆತನದಲ್ಲಿಯೇ ಮದ್ಯಪಾನವನ್ನು ನಿರೋಧಿಸ ವಿಧೇಯಿಸುವುದನ್ನು ಸ್ವೀಕರಿಸಿತು. ಹಚ್ಚಿನ ರಾಜ್ಯಗಳಲ್ಲಿ ಇದು ವ್ಯವಹೃತವಾಯಿತು. ಆದರೆ, ಇದು ಮುಂದೆ 'ಆದರ್ಶ' ಮಾತ್ರವಾಯಿತು; ಜನ ಕುಡಿಯುವುದನ್ನು ಕಡಮೆ ಮಾಡಿಲ್ಲ; ಸರಕಾರದ ಬೊಕ್ಕಸವೂ ಬರಿದೋ ಬರಿದು. ಆದುದರಿಂದ ಒಂದೊಂದೇ ಸರಕಾರಗಳು ಇದನ್ನು ಸಡಿಲುಗೊಳಿಸಿದುವು—ಪಾನ ಪ್ರತಿಬಂಧ ಗಾಂಧೀಜಿಯವರ ಆದರ್ಶ ಮಾತ್ರವಾಗಿ ಪುಸ್ತಕಗಳಲ್ಲಿ ಉಳಿಯಿತು. (ದುಃಖಾತ—ಮದ್ರಾಸಗಳ ಅನುವಾದ)

ಜನತೆ ಆದರ್ಶವನ್ನು ಮೆಚ್ಚುವುದಿಲ್ಲ; ಅದಕ್ಕಾಗಿ ಆದರ್ಶವನ್ನು ಬಿಟ್ಟುಕೊಡುವುದು ಸರಿಯೆ? ಅಥವಾ ಆದರ್ಶವನ್ನೇ ವ್ಯವಹಾರ್ಯಗೊಳಿಸಲು ಪ್ರಯತ್ನಿಸಬೇಕೆ? ಆದರ್ಶವನ್ನು 'ಆದರ್ಶ'ವೆಂದೇ ತಿಳಿದು ನಡೆಯುವಷ್ಟು ದಿಟ್ಟ ಅದನ್ನು ವ್ಯವಹಾರ್ಯವನ್ನಾಗಿ ಮಾಡುವುದು ಸಾಧ್ಯವಿಲ್ಲ. ನಮ್ಮ (ಕಾಂಗ್ರೆಸ್) ಸರಕಾರಗಳು ಈ ಆದರ್ಶವನ್ನು ವ್ಯವಹಾರ್ಯಗೊಳಿಸುವ ಯೂವ ಹೆಜ್ಜೆಯನ್ನಿಟ್ಟಿವೆ? ಕುಟುಂಬ ನಿರೋಧವೂ ಒಂದು ಆದರ್ಶ; ಅದನ್ನೂ ಹಲವರು ನಿರೋಧಿಸುತ್ತಾರೆ; ಆದರೆ ಅಂತವರನ್ನೂ ಸಮಜಾಯಿಸಿ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಡಿಸುವಲ್ಲಿ ಸಾಫಲ್ಯ ದೊರೆತಿದೆ. ಕಳ್ಳತನ, ಕೊಲೆ, ಸುಲಿಗೆ ಇತ್ಯಾದಿಗಳ ಪ್ರತಿಬಂಧನವೂ ಒಂದು ಆದರ್ಶ ಮಾತ್ರ. ಇದನ್ನು ವ್ಯವಹಾರಕ್ಕೆ ತರುವಲ್ಲಿ ಸರಕಾರಗಳು ಸಂಪೂರ್ಣ ವಿಫಲವಾಗಿವೆ. ಏಕೆಂದರೆ, ಇಂದು ಪತ್ತೆ ಹಚ್ಚಲಾದ ಇಂತಹ ಅಪರಾಧಗಳ ಸಂಖ್ಯೆ ಅಕಾಶ ಮುಟ್ಟಿದೆ. ಈ ವಿಫಲತೆಯನ್ನೇ ಮುಂದಿಟ್ಟು ಇವನ್ನೂ ಶಾಸನಬದ್ಧಗೊಳಿಸಿದರೆ, ಜನ ಖುಶಿಪಡುವುದಾದರೂ ಹೇಗೆ? ಸರ್ವಪಾತವನ್ನು ಶಾಸನಬದ್ಧಗೊಳಿಸುವ, ಆಕಯವಿರುವ ಸರಕಾರ ನೈತಿಕ ಅಧಃಪತನಕ್ಕೆ ನಾಂದಿ ಹಾಡೀತು ಅಷ್ಟೆ.

ಇವೆಲ್ಲಾ ನೋಡುವಾಗ ನನಗೆ ಕಂಡಾಯವುದಿಷ್ಟೆ. ನಾವಿಂದು 'ಆದರ್ಶ'ವನ್ನು ಪರ್ಯಾಪ್ತದಷ್ಟು ಎತ್ತರ ಮಾಡಿತೋರಿಸ ಹೊರಟಿದ್ದೇವೆ; ಅದನ್ನು ಮುಟ್ಟಲು ದೇವರಿಂದಲೂ ಅಸಾಧ್ಯವೆಂದು ಪ್ರಚಾರ ಮಾಡುತ್ತ ಜನತೆಯು ಆ 'ಪರ್ವತ'ವನ್ನು ನೋಡದಂತೆ ಮರೆಮಾಡುತಿದ್ದೇವೆ. ತೀರ ಪಾತಳಿಯನ್ನೇ ಜನತೆಗೆ ತೋರಿಸಿ ಇದರಲ್ಲಿಯೇ ಇಳಿಯಿರಿ ಎಂದು ಸಲಹೆ ಕೊಡುತ್ತೇವೆ. ಪರ್ವತ ಶಿಖರವನ್ನು ಏರಿ, ಅಲ್ಲಿನ ಬಾವಿಯ ಶುದ್ಧ ನೀರಿನ ಬದಲು ಪಾತಳಿಯಲ್ಲಿಳಿದು ಅಲ್ಲಿನ ಕೊಳೆ ಕೀರನ್ನೇ ಕುಡಿಯುವ ಪ್ರಶ್ನೆಯ ಪ್ರೇರಣೆಯನ್ನು ನಾವು ಕೀಡ ಹೊರಟಿದ್ದೇವೆ. ಹೀಗೆಯೆ ನಡೆದರೆ, ಒಂದು ದಿನ ನ್ಯಾಯಾಲಯಗಳನ್ನೂ ಮುಚ್ಚಬೇಕಾಗಬಹುದು; ಸರಕಾರದ ಆಗತ್ಯವೂ ಇರಲಾರದು. ಸರಕಾರ—ನ್ಯಾಯ ಎಲ್ಲವೂ ಆದರ್ಶಗಳೇ ತಾನೆ?

ಗಾಂಧಿ ಶತಮಾನೋತ್ಸವಕ್ಕೆ ಪೂರ್ವಭಾವಿಯಾಗಿ ಗೋವೆಯಲ್ಲಿ ಸೇರಲಿರುವ ಎಐಸಿಸಿಯ ಸಭೆಯಲ್ಲಿ ಪಾನ ಪ್ರತಿಬಂಧ ಪ್ರಶ್ನೆ ಬರಲಿಸಿ ಚರ್ಚೆಯ ವಸ್ತುವಾಗುವುದು. ಉಪಪ್ರಧಾನಿ ಮುರಾರ್ಜಿ ಭಾಯಿಯವರೂ ಅವರ ಬೆರಳ ಸಂಖ್ಯೆಯ ಅನುಯಾಯಿಗಳೂ ಪಾನ ಪ್ರತಿಬಂಧವನ್ನು ವ್ಯವಹಾರಕ್ಕೆ ತರಬೇಕೆಂದು ಬಲವಾಗಿ ಸಮರ್ಥಿಸುವರು ಆದರೆ, ಅವರಿಗೆ ಬೆಂಬಲ ಸಿಗುವುದೆ? ಹಾಲನ್ನು ಕಂಡೊಡನೆ ಬಿಸಿಯೆಂದು ಬೈಯಿಸಿ ಓಡಿಹೋಗುತ್ತಿದ್ದತೆ ನ್ಯಾಲಿರಾವ ನಬೆಕ್ಕನ್ನ ಹಾಲು-ಕುಡಿಸುವದು ಹೇಗೆ? ಕಾಂಗ್ರೆಸ್ ಅಧ್ಯಕ್ಷರು ಮುರಾರ್ಜಿಯವರ ನಡುವೆ ಸಾವಾನ್ಯ ಭಿನ್ನಾಭಿಪ್ರಾಯ ಈಗಾಗಲೇ ಮೂಡಿದೆ. ಇವಿಂದು ಆದರ್ಶದ ಕುದುರೆಯನ್ನು ದೂರಕ್ಕೆ ತಳ್ಳಿ ಯಥಾರ್ಥದ ಕತ್ತೆಯನ್ನೇರಲೇಬೇಕೆ? ಸವಾರಿ ಮಾಡುತ್ತಿದ್ದೇವೆ. ಇನ್ನು ಆದರ್ಶವನ್ನು ಹಿಡಿಯುವತಿದೆಯೆ?

ಆನಂದ ಮಾರ್ಗ

"ಆನಂದ ಮಾರ್ಗ"ವೆಂದರೇನೆಂದು ಆ ಸಾಧುಗಳನ್ನು ಕೇಳಿ ನೋಡಿ. ತಮ್ಮ ಸಾಹಸ ಪ್ರದರ್ಶನವನ್ನು ಮಾಡಿ ತೋರಿಸಿ 'ಇದುವೇ' ಎಂದವರು ಉತ್ತರಿಸಿಯಾರು. ಬಂಗಾಳ—ಬಿಹಾರ ರಾಜ್ಯಗಳ ಗಡಿ ಭಾಗದ ಒಂದು ಸಂಸ್ಥೆಯಿದು. ಇದೂ ಒಂದು 'ಸೇನೆ'ಯಂತೆ ಸುಸಂಘಟಿತ ಮಂಪು.

ಇದರ ಪ್ರಾಯ ಬರಿಯ ಐದು ವರ್ಷ. ಈ ವಾಮನ ಮೂರ್ತಿ ಅನೇಕ ಶೈಕ್ಷಣಿಕ ಶಾಲೆಗಳನ್ನು ನಡೆಸುತ್ತಿದೆ. ಅಮೆರಿಕೆಯ ಖಾಸಗಿ ಸಂಸ್ಥೆಯೊಂದರಿಂದ ಹತ್ತು ಸಾವಿರ ಡಾಲರ್ ಪಡೆಯುವುದರಲ್ಲಿ (ಕ್ರಾಸು ಪರಿಹಾರಕ್ಕೆಂದು) ಯಶಗಳಿಸಿದೆ. ಈ "ಆನಂದ ಮಾರ್ಗಿ"ಗಳು ಸಾಧುಗಳು ಇವರ ಸಂಚಾರ ಮೋಟಾರು ಸೈಕಲ್‌ಗಳಲ್ಲಿ ಮಾಡುವುದು ದಾರಿಗರ ಸುಲಿಗೆ. ಬಾಯಲ್ಲಿ ರಾಮನಾಮ ಜಪಿಸುವವ ಬಗಲಲ್ಲಿ ಚೂರಿ ಹಿಡಿದಿದ್ದಾನೆ. ಈ ಮುಂಪಿನ ಮೇಲೆ ಅನೇಕ ಅಪರಾಧಗಳನ್ನು ರಾಜ್ಯ ಸರಕಾರ ಹೇರಿದೆ. ಹಲವು ಸಾಧುಗಳನ್ನೂ ಬಂಧಿಸಿದೆ. ಆದರೆ, 'ಆನಂದ ಮಾರ್ಗ'ವು ಜನತೆಗೆ ಭಯೋತ್ಪಾದಕ ಗುಂಪಾಗಿಯೇ ಬೆಳೆಸುತ್ತಿದೆ. ಆನಂದ ಮಾರ್ಗಿಗಳು ಎದುರಾಎದುರು ಸಾಹಸ ತೋರಿಸಿ ಬೂಟ—ಸುಲಿಗೆ ಮಾಡುತಿದ್ದಾರೆ, ಇದು ಅಪರಾಧ. 'ಮುಂದೆ ಭಲಾ ಎಂದು ಹಿಂದಾಡಿಕೊಂಬವರ' ನೀತಿ?

ಬ್ರಹ್ಮಾವರ ಪಂಚ್ಯಾತ್

ತಾ. ೩೦.೬.೬೩ರಂದು ಬ್ರಹ್ಮಾವರ ಪಂಚಾಯತ್ ಬೋರ್ಡಿನ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯು ರವಿನ್ಯಾ ಇಲಾಖಾಧಿಕಾರಿಗಳ ನೇತೃತ್ವದಲ್ಲಿ ಜರಗಿ ಶ್ರೀ ಬೆಂಜಮಿನ್ ಪ್ರಭಾಕರ ಅಮ್ಮಣ್ಣನವರು ಅಧ್ಯಕ್ಷರಾಗಿಯೂ ಶ್ರೀ ಸಾಂಬಶಿವ ಶೆಟ್ಟರು ಉಪಾಧ್ಯಕ್ಷರಾಗಿಯೂ ಚುನಾವಣೆಪಟ್ಟಿದ್ದಾರೆ.

ಮುಖಚಿತ್ರ

ಕಳೆದ ಎಪ್ರಿಲ್‌ನಲ್ಲಿ ಜರಗಿದ ಸೈನ್ಯಸೂರು ವಿಶ್ವವಿದ್ಯಾನಿಲಯದ ಪದವಿ ಪ್ರಪ್ರಥಮ ಪರೀಕ್ಷೆಗಳಲ್ಲಿ ರ್‍ಯಾಂಕ್ ಗಳಿಸಿದ ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿ—ವಿದ್ಯಾರ್ಥಿನಿಯರು.

ವಚನ ಸುಧೆ

ಪೂಜಾರಿಯೂ ಮಹಾಭಾಗಾಃ
ಪುಣ್ಯಾಶ್ಚ ಗೃಹದೀಪ್ತಯಃ
ಸ್ತ್ರಿಯಃ ಶ್ರಿಯೋ ಗೃಹಸ್ಯೋಕ್ತಾ
ಸ್ತಾಸ್ತಾ ರಕ್ಷ್ಯಾ ವಿಶೇಷತಃ ||

ಸ್ತ್ರೀಯರು ಗೃಹಲಕ್ಷ್ಮಿಯರು. ಅವರು ಅತ್ಯಂತ ಸೌಭಾಗ್ಯಶಾಲಿಯರು; ಪೂಜಾರ್ಹರು; ಪವಿತ್ರರು, ಗೃಹಕ್ಕೆ ಶೋಭೆಯಾಗಿರುವವರು. ಆದುದರಿಂದ ಅವರನ್ನು ಎಚ್ಚರಿಕೆಯಿಂದ ಸಂರಕ್ಷಿಸ ಬೇಕು.

ಬಿಳಿ ಮಚ್ಚೆಗಳಿಂದ ಕೊರಗುವಿರೇಕೆ ?

'ಅಮೃತಧಾರೆ' ಎಂಬ ನಮ್ಮ ಚಿನ್ನಾಗಿ ಪರಿಶೋಧಿತವಾದ ಆಯುರ್ವೇದೀಯ ಔಷಧವು ಬಿಳಿ ಮಚ್ಚೆಗಳನ್ನು ಸಂಪೂರ್ಣ ಹೋಗಲಾಡಿಸುವುದರಲ್ಲಿ ಸಹಕಾರಿಯಾಗಿದೆ. ಅದು 1946ರಿಂದಲೂ ವಿಶೇಷ ಪ್ರಸಿದ್ಧಿಯಾಗಿದೆ. ಬರೇ ಮೂರು ದಿವಸಗಳ ವರೆಗೆ ನಮ್ಮ ಔಷಧವನ್ನು ಲೇಪಿಸುವುದರಿಂದ ಬಿಳಿ ಮಚ್ಚೆಗಳ ಬಣ್ಣವು ಬದಲಾಗಲು ಆರಂಭವಾಗುತ್ತದೆ. ಈ ಸದೀರ್ಘ ಅವಧಿಯಲ್ಲಿ ಸಾವಿರಾರು ಜನರು ಇದರಿಂದ ಗುಣಹೊಂದಿದ್ದಾರೆ ಮತ್ತು ನಾವು ಅಧಿಕ ಸಂಖ್ಯೆಯಲ್ಲಿ ಪ್ರಶಂಸಾಪತ್ರಗಳನ್ನು ಪಡೆದಿರುತ್ತೇವೆ. ಬಿಳಿ ಮಚ್ಚೆಗಳ ಸಂಪೂರ್ಣ ವಿವರವನ್ನು ಬರೆದು ಕೂಡಲೇ ಆರ್ಡರು ಕಳಿಸಿರಿ ಮತ್ತು ಅದು ಎಷ್ಟು ಬಲಶಾಲಿಯಾಗಿದೆ ಎಂಬುದನ್ನು ನೋಡಿರಿ. ಪ್ರಚಾರಾರ್ಥವಾಗಿ ಬಾಹ್ಯ ಲೇಪನದ ಒಂದು ಸೀಸೆ ಔಷಧವನ್ನು ಧರ್ಮಾರ್ಥವಾಗಿ ಕೊಡಲಾಗುವುದು. ಮಿತ ಸಂಗ್ರಹವಿರುವುದರಿಂದ ಕೂಡಲೇ ಆರ್ಡರು ಕಳಿಸಿರಿ ಮತ್ತು ಈ ಸುವರ್ಣ ಸಂದರ್ಭವನ್ನು ಕಳಕೊಳ್ಳ ಬೇಡಿರಿ. ಸಕಲಿಗೆ ಮರುಳಾಗಬೇಡಿರಿ.

SHRI SAMAJ KALYAN—90, P. O. KATARISARAI (GAYA)

ನರಸಣ್ಣನ ಸರಸ



'ತಿರುವನಂತಪುರದಲ್ಲಿ ಊಟ, ಕಾಫಿ ತಿಂಡಿಗಳ ಬೆಲೆ ಕಡಿಮೆಯಾಯಿತಂತೆ— ನಾವೂ ನುಗಳ ಬೆಲೆ ಇಳಿದದ್ದರಿಂದ...'

"ನವಯುಗದಲ್ಲಿ ಬೆಲೆ ಒಮ್ಮೆ ಏರಿದರೆ ಮತ್ತೆ ಇಳಿಯುವುದೇ ಇಲ್ಲ!"

ಗೇಹರಾಜ್ಯದಲ್ಲಿ

ತಲೆಯಿದ್ದವರಿಗೆಲ್ಲಾ ತಲೆನೋವು

"ಅಂತೂ ಇನ್ನು ನಾವೆಲ್ಲಾ ಕಾರು ಕೊಳ್ಳೋಕಾಲ ದೂರವಾಯ್ತು..."

'ಯಾಕೆ ಹಾಗಂತೀರಿ?"

"ಕಾರು ಯಾರೂಕೊಳ್ಳಬಹುದೋನ್ನು ಕಡಿಮೆ ಬೆಲೆಯ ಹೊಸ ಸಣ್ಣ ಕಾರನ್ನಾದ್ರೂ ಸಾಯೋದಕ್ಕೆ ಮೊದಲುಕೊಂಡು ಮತ್ತೆ ಮೂರೋಣಾಂತಿದ್ದೆ..."

'ಅಲ್ಲ, ದತ್ತು ಇಲ್ಲದವರಿಗೆ ಕಾರು ಕೊಳ್ಳೋ ಯೋಚನೆ ಏನಂತೆ? ಹೆಳವನಿಗೆ ನರಿದಾಡೊ ಚಿಂತೆ ಅಂತೆ.'

"ಅಲ್ರೆ, ನಮ್ಮ ವರ್ಷದ ಮೊದಲು ಕೇಳುತಿದ್ದ ಮೂರು-ಐದು ಸಾವಿರ ರೂಪಾಯಿಗಳಿಗೆ ಸಣ್ಣ ಕಾರು ಸಿಗತ್ತೇಂತ ಜನವಿಗೆ ಕುಟುಂಬ ಸಹಾಯಕ ಯೋಜನೆ ಇದೂಂತ ಯೋಜನೆ ಕಾರ್ಯರೂಪಕ್ಕೆ ಬರಲು ತಡವಾದ ಒಂದೊಂದೇ ವರ್ಷದಲ್ಲಿ ಕಾರಿನ ಬೆಲೆಯು ಎರಡೆರಡು ಸಾವಿರದಷ್ಟು ಹೆಚ್ಚಾಯ್ತು ಅಂತಾ.'

'ಏನಂತೆ? ಈಗ ಹತ್ತಾಗಿದೆಯೇನು?"

"ಈಗ ಆಗಿರೋದು ಹತ್ತು ಅಲ್ಲ; ಹಿಡಿದಿರೋದು ನಮಗೆಲ್ಲಾ ಮತ್ತು?"

'ಏನಂತೀರಾ?'

"ಅನ್ನೋದೇನ? ನಮ್ಮ ರಾಜ್ಯದ ಮಂತ್ರಿಗಳು ಸಣ್ಣ ಕಾರಿನ ಹೆಂಡತಿಯೂರ್ಲಿದ್ರು, ನಾವೆಲ್ಲಾ ಅದನ್ನು ಅವ್ರ ತಾಂತ ಭಾವಿಸಿ ಕಡಿದು ಬಿಟ್ಟೆವು."

"ಏನಾಯ್ತೊಗೆ?'

"ಆಗೋದೇನೆ? ಖಾವೆಲ್ಲಾ ಜೂಖ್‌ನಲ್ಲೇ ಫೂಲ್ ಆಗಿ ಬಿಟ್ಟೆವು...."

"ಅಂದ್ರೆ?"

'ನೋಡು, ಯೂರನ್ನಾದರೂ ನಂಬಬಹುದು ಅದ್ರೆ ಮಂತ್ರಿಗಳನ್ನು ನಂಬಲೇ ಬಾರದೂಂತ ತೀರ್ಮಾನಕ್ಕೆ ಬಂದಿಟ್ಟಿದ್ದೇನೆ...."

"ಇದ್ರಲ್ಲಿ ವಿಶೇಷವೇನಿದೇಂತ? ತಂಗಿನ ಕಾಯಿಗಾಗಿ ಹೊನ್ನೇಮರ ಹತ್ತಿದವ್ರಂತೆ ನಿನ್ನತೆ..."

"ಅಲ್ಲ, ತಮ್ಮನ್ನು ಪೂರ್ತಿ ನಂಬಬೇಡಿ ಅಂತ ಮಂತ್ರಿಗಳು ಹೋದಲ್ಲಿ ಬಂದಲ್ಲಿ ಹೇಳ್ತಾ ಇರ್ತಾರೇನ್ತು."

"ಹಾಗಿರುವಾಗ, ರಾತ್ರಿ ಕಂಡ ಬಾವಿಗೆ ಹಗಲು ಬಿದ್ದದ್ದು ಬಿದ್ದೋರದ್ದೇ ತಪ್ಪು."

"ಅಯ್ತಪ್ಪ, ಮತ್ತೀಗ ಮಾಡೋಣಾದ್ರೂ ಏನು?"

"ಅಲ್ರಿ, ಈಗ ಆಗಿರೋದಾದ್ರೂ ಏನು?"

"ಮತ್ತಿನ್ನೇನು? ಉಪಪ್ರಧಾನಿ ಕಂ ಅರ್ಥ ಮಂತ್ರಿ ಮುರಾರ್ಜಿ ಭಾಯಿ ಬೆಂಗಳೂರಿಗೆ ಬಂದಿದ್ರಲ್ಲಾ...."

"ಹ್ಹಾಂ, ಮೈಸೂರು ವಿಶ್ವವಿದ್ಯಾಲಯದಲ್ಲಿ ಹಿಂದೂ ತತ್ತ್ವಶಾಸ್ತ್ರಾಧ್ಯಯನ ಪೀಠವನ್ನು ಉದ್ಘಾಟಿಸಲಿಕ್ಕೆ ಬಂದವ್ರು ..."

'ಹೌದು ಹೌದು, ಅವರು ಬೆಂಗಳೂರಿನ ರಾಣ್ಣದಿಂದ ಹೊರ ಬರುತ್ತಿರುವಾಗ, ಒಬ್ಬ ಚಪ್ರಕಲಾವಿದ ಒಂದು ನಕ್ಷೆಯನ್ನು ತೋರಿಸಿದ....'

'ಇದು ಯಾವ್ದರದ್ದು?"

"ಅದೇ, ಮೂನರಥಿಯೋಜನೆ ಸಣ್ಣ ಕಾರಿನ ಕಾರ್ಖಾನೆಯದ್ದು!'

"ಅಂದ್ರೆ ಕಾರ್ಖಾನೆ ಆಗುತ್ತೇಂತಾಯ್ತು."

'ಅದೇನೆ ಇರ್ಲಿ ಭ್ರಮೆ—"

'ಯಾಕೆ?'

"ಆಗ, ಭಾಯಿ ಏನೆಂದರು ಗೊತ್ತೆ?"

'ಏನು?'

"ಕುದುರೆಯ ಮುಂದೆ ಗಾಡಿ ಕಟ್ಟಲು ನೀವು ಪ್ರಯತ್ನಿಸುತ್ತಿದ್ದೀರಿ."

"ಅಂದ್ರೆ?"

"ಕುದುರೆಯೇ ಇಲ್ಲ; ಗಾಡಿ ತಯಾರಿಟ್ಟಿದ್ದೀರೇಂತ...."

"ಇದೊಳ್ಳೆ ಕಥೆಯಾಯ್ತಲ್ಲ! ಅಲ್ರಿ, ರಾಜ್ಯಸರಕಾರ ಇನ್ನು ವರ್ಷ ಗೋಗರೆದ್ದೂ ಕಲ್ಲಿನ ಮೇಲೆ ಮಳೆ ಸುರಿದಂತಾಯ್ತಲ್ಲಾ...."

"ಅಷ್ಟು ಮಾತ್ರವಲ್ಲ; ಸದ್ಯೋ ಭವಿಷ್ಯತ್ತಿನಲ್ಲಿ ಈ ಯೋಜನೆಯ ಬಗ್ಗೆ ನಿರ್ಣಯ ಕೈಕೊಳ್ಳುವ ಸಾಧ್ಯತೆಯನ್ನೂ ಸಂಪೂರ್ಣವಾಗಿ ತಳ್ಳಿಹಾಕಿದರು...."

"ಎಂಬಲ್ಲಿಗೆ ಇತಿಶ್ರೀ ಅಂತಾಯ್ತು."

"ಅಲ್ರಿ ಯಾಕಂತೆ ತಳ್ಳಿಹಾಕೋದು?"

"ನೋಡು, ಈಗಾಗಲೇ ಐದನೇ ವಲಯದಲ್ಲಿ ಮೂರು ಕಾರು ಫಿನರ್ಾಣ ಸಂಸ್ಥೆಗಳಿವೆ. ಕಡಿಮೆ ಒಂದು ಲಕ್ಷ ಕಾರನ್ನಾದರೂ ಉತ್ಪಾದಿಸಬೇಕಾದ ನಾವ್ಯ ಪ್ರೆಯ ಫಲ ಲಾಭದಾಯಕವಲ್ಲ ಅಂತ."

"ಏನೋ...ಅದ್ರೂ ಈ ಸ್ಪಷ್ಟನೆಯನ್ನು ಮೊದಲೇ ಹೇಳಬಹುದಿತ್ತಲ್ಲಾ!"

'ಹ್ಹಾಂ....ಹೇಳಬಹುದಿತ್ತು. ಆದರೆ ಎಲ್ಲಾ ರಾಜ್ಯಗಳೂ ಬೇಡಿಕೆಯನ್ನು ಮುಂದಿಟ್ಟಿರುವಾಗ...."

"ಇದೇ ನಮ್ಮ ಸಮಸ್ಯೆ."

"ಯಾವುದು?'

"ನೋಡಿ ಪ್ರತಿಯೊಂದು ಯೋಜನೆ ಯೂಹತನ್ನ ರಾಜ್ಯದಲ್ಲೇ ಆಗಬೇಕು ಅಂತ ಎಲ್ಲಾ ರಾಜ್ಯಗಳೂ ಹಠ ಹಿಡಿದರೆ ಹೇಗೇಂತ?"

"ಇನ್ನು ಹೆದರ ಬೇಕಾಗಿಲ್ಲ. ಇದಕ್ಕೂ ಮುರಾರ್ಜಿ ಭಾಯಿ ಪರಿಹಾರ ಕಂಡು ಹಿಡಿದಿದ್ದಾರೆ..."

'ಯಾವುದದು?"

"ನೋಡು ಕಳೆದ ವರ್ಷ ಗಡಂಗುಗಳನ್ನು ಏಲಂ ಹಾಕಿದ್ದಾರೆ ನೋಡು, ಹಾಗೆ ಯಾವ ರಾಜ್ಯ ಹೆಚ್ಚು ಹಣ ಕೊಡುತ್ತದೆಯೋ ಆ ರಾಜ್ಯಕ್ಕೆ ಆ ಯೋಜನೆ...'

'ಹಾಗಾದರೆ, ಚೆನ್ನಾಗಿತ್ತೆ. ಕೇಂದ್ರ ಸರಕಾರಕ್ಕೂ ತುಸ ಉಸಿರು ಬಿಡಬಹುದು."

'ಏನು ಉಸಿರು ಬಿಡೋದು? ಖಾಸ, ದೇಶದ ಒಳಗೆ ಮಾತ್ರವಲ್ಲ, ಹೊರಗೂ ಅದು ಉಸಿರು ಹಿಡಿದಿದೆ...."

"ಅಂದರೆ?"

"ಅಂದರೆ ನಮ್ಮದೊಂದು ಬೆಳಯಾನೆ ಲಂಡನಿನಲ್ಲಿದೆ. ಈ ಆನೆಯನ್ನು ನೋಡಿಕೊಳ್ಳಲು ಒಟ್ಟು ೧೦೦ ಶಿಬ್ಬಂದಿ. ಈ ಶಿಬ್ಬಂದಿಯೂ ತಮ್ಮ ವೇತನ ಹೆಚ್ಚಿಸಬೇಕೆಂದು ಮುಷ್ಕರ ಹೂಡಲಿದ್ದಾರೆ; ಇಬ್ಬರಂಗೂ ಈಗಲೇ ಹೂಡಿದ್ದಾರೆ...."

"ಅಲ್ರಿ, ಲಂಡನಿನಲ್ಲಿ ನಾವ್ಯಾಕೆ ಆನೆ ಸಾಕಬೇಕು?"

"ಯಾಕೆ ಅಂದ್ರೆ? ಅದು ದೇಶದ ಗೌರವ...'

"ಅಲ್ರಿ, ನಮ್ಮೂರಲ್ಲಿ ಒಬ್ಬಿಬ್ರು ಇದ್ರೆ ಒಂದು ನೆಪ.ನ್ನು ಚೆನ್ನಾಗಿ ನೋಡ್ಕೋತಾರೆ? ಅಲ್ಲಿ ಒಂಬೈನೂರು ಜನ ಅಂದ್ರೆ ...."

"ಅದು ಆನೆಯ ಗೌರವ...."

'ಈ ಒಣ ಗೌರವದಿಂದ ಮಾನ ಕಳೆದುಕೊಳ್ಳುವುದಕ್ಕಿಂತ ನಾಕರರನ್ನು ತೆಗೆದು ಹಾಕಬಹುದಲ್ಲಾ?"

"ಅಲ್ಲಿಗೆ ದೇಶದ ಗೌರವ ಕಡಮೆಯಾಯಿತು...'

'ಅಂದ್ರೆ, ಆನೆಯನ್ನು ಮಾರಿ ಬಿಡಬಹುದಲ್ಲಾ?'

"ಗಿರಾಕಿ ಬೇಕಲ್ಲಾ?"

"ಗಿರಾಕಿ ಯಾಕಿಲ್ಲ? ಇಲ್ಲಿಂದ ಪ್ರತಿ ವರ್ಷವೆಂಬಂತೆ ಆನೆನುರಿಗಳು ಹೆಡಗು ಹತ್ತುತ್ತಿರವಾಗ? ಒಂದು ವೇಳೆ ಗಿರಾಕಿಯೇ ಇಲ್ಲದನ್ನು, ಮರಳಿ ಭಾರತಕ್ಕಾದರೂ ತಂದು ಹಾಕಬಹುದಲ್ಲಾ?...."

"ಲೇ, ಇದು ಅಂಥಿಂಥ ಬೆಳಯಾನೆಯಲ್ಲ ಕಣೇ. ಲಂಡನಿನಲ್ಲಿರುವ ಭಾರತೀಯ ರಾಯಭಾರಿ ಕಛೇರಿಗೆ ಅಹಿಸರು

"ಓ ಏನು ತಮಾಷೆ ಮಾಡ್ತಿರಿ ನನ್ನನ್ನು ಫೂಲ್ ಮಾಡಿಬಿಟ್ರಿ...."

"ನೋಡು ಎಲ್ಲ ಮಂತ್ರಿಶಾಖೆಗಳೂ ತಮ್ಮ ಪ್ರತಿನಿಧಿ ಲಂಡನಿನಲ್ಲಿರಬೇಕೆನ್ನುತ್ತವೆ. ಹಾಗಾಗಿ ತೆಗೆದರೆ...."

"ಇದೊಳ್ಳೇ ತಮಾಶೆ..."

'ನೋಡು ದಾರಿಯಲ್ಲಿ ಹೋಗುವವರಿಗೆಲ್ಲ ಸಂಕುಗಾರ ನೌಕರರು ಭಾರತ ಪೈಕಮಿಷನ್ ಸಿಬ್ಬಂದಿಯ ಶೋಷಣೆಯ ಸ್ಥಿತಿಗತಿಗಳ ಬಗ್ಗೆ ಕರಪತ್ರಗಳನ್ನು ಹಂಚುತಿದ್ದಾರೆ 'ಶೋಷಣೆಯನ್ನು ಇನ್ನು ಸಾಕ.ಮಾಡಿ' ಎಂದು ಬರೆದ ಭಿತ್ತಿಪತ್ರವನ್ನು ಪ್ರದರ್ಶಿಸುತಿದ್ದಾರೆ..."

'ಸರಿಯಾಯ್ತು ಬಿಡಿ...."

"ಏನು?"

'ಇಲ್ಲಿ ಮಾಡುವುದನ್ನೇ ನೌಕರರು ಅಲ್ಲಿಯೂ ಮಾಡ.ತ್ತಿದ್ದಾರೇನ್ನಿ....'

"ಹ್ಹಾಂ...'

"ಅಂತೂ ನಮ್ಮ ಇಂದಿರಮ್ಮನಿಗೊಂದು ತಲೆನೋವು..."

"ತಲೆಯಿದ್ದವರಿಗೆಲ್ಲಾ ತಲೆನೋವು ಇದ್ದದ್ದೇ ಅನ್ನು...."

"ಫಿಮಗ ನೋಯುತ್ತಿದೆಯ?"

"ವತ್ತ ನಿನ್ನ ಮಾತ್ರ ನೋವು?'

"....ಅಯ್ಯೊ...'

'ಹ್ಹಾಂ....."

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟನಲ್ಲಿ

Ex. C. No. 38/1968.
O. S. No. 224/1954

ಅಗಳಿ ರಾಮರಾವ್ —ಅರ್ಜಿದಾರ

ಮತ್ತು

ಸೀತಮ್ಮ ಕೂಡಾ ಇತರರು —ಎದ್ರಿಯರು ಇದರೊಳಗೆ.

ಎರಡನೇ ಎದ್ರಿ ಶಂಕ್ರಾಯ ಅಗಳಿ, ಅಗಳಿ ಶ್ಯಾಮರಾಯನ ಮಗ, ಉಡುಪಿ ತಾಲೂಕು ಕೋಟಿ ಗ್ರಾಮದಲ್ಲಿ ವಾಸಿಸುತ್ತಿರುವವನು, ಕಟಪಾಡಿ ಪೋಸ್ಟ.

ಮೇಲ್ಕಂಡ ವ್ಯಾಜ್ಯದಲ್ಲಿ ದಿಕ್ಕಿ ಶೊಂದಿದವಾದಿಯು ನಿವೃತ್ತಿ ಕೇಳಿ ದಾಖಲು ಮಾಡಿದ ಅಮಲ್‌ಜ್ಯಾರಿಯು ತಾ. 7.6.1968ಕ್ಕೆ ನಿಂದು ಹಾಜರು ಬಗ್ಗೆ ಇಟ್ಟಿರುವುದರಿಂದ ಸದ್ರೀ ಅಮಲ್‌ಜ್ಯಾರಿಯಲ್ಲಿ ಉದಾಹರಿಸುವುದಿದ್ದರೆ, ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಹಾಕೀರು ಮಾಡಿಕೊಳ್ಳತಕ್ಕದ್ದು.

P. N. Krishnamoorthy Rao,
Advocate for Petitioner.

ಉಡುಪಿ, ತಾರೀಕು 27.5.1968.

ಸ್ತ್ರೀ ಪುರುಷರಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಮಾತರಿಯಾಸಿ ಆಯುರ್ವೇದ ಔಷಧಿ ಮತ್ತು ಶಕ್ತಿ ವೈದ್ಯಕೀಯ
ಸೆಲಿಬೆಗಳಿಗೆ, ಇತರಿಗೆ ಇರಿಯಿರಿ

SHANKAR PHARMACY
BHADRAVATI (MYSORE)

ಹೊಸಕೆರೆ ಚಿದಂಬರಯ್ಯನವರ
ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

450 ಪುಟಗಳ ಪವಿತ್ರ ಕಿಸೆ ಹೊತ್ತಿಗೆ
ಬೆಲೆ ರೂ. 1-50
ನವಯುಗ ಪ್ರೆಸ್, ಉಡುಪಿ

ವಿ ಮೋಂ ಸೆ

ನಮ್ಮ ಹೆಮ್ಮೆಯ ವಸ್ತು-ಧರ್ಮ

ಲೇಖಕರು: ಶ್ರೀ ಎಂ. ಬಿ. ಎಸ್.

. ಅನಾದಿಕಾಲದಿಂದಲೂ ನಮ್ಮ ಜೀವನವನ್ನು ಅಭಿವೃದ್ಧಿಗೊಳಿಸಿದ ಅನೇಕ ದೈವಿಕಭಾವದ ಮಹಾತ್ಮರು ಭರತ ಖಂಡದಲ್ಲಿ ಜನಿಸಿದ್ದರು.

ಕಳೆದ ಶತಮಾನದಲ್ಲಿ ರಾಜಾರಾಮ ಮೋಹನ ರೊಯ್‌ರವರು ನಮ್ಮ ಧರ್ಮದೀಪಿಕೆಯನ್ನು ಝಳಪಿಸಿದರು. ಅವರ ಬೆನ್ನಿನಲ್ಲೆ ದೇವೇಂದ್ರನಾಥ ಠಾಕೂರ ಮತ್ತು ಕೇಶವಚಂದ್ರಸೇನರು ಬ್ರಹ್ಮತತ್ವವನ್ನು ಜಗಕ್ಕೆ ವಿವರಿಸಿದರು. ಅನಂತರ ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯಧರ್ಮವನ್ನು ಸವಿಸ್ತಾರವಾಗಿ ಬೋಧಿಸಿದರು. ಮಹಾರಾಷ್ಟ್ರ ದೇಶದಲ್ಲಿ ಮಹಾದೇವ ಗೋವಿಂದ ರಾನಡೆಯವರು ಪ್ರಾರ್ಥನಾ ಸಮಾಜವನ್ನು ಸಂಸ್ಥಾಪಿಸಿದರು. ಈ ಮಹಾತ್ಮರೆಲ್ಲ ನಮ್ಮ ಮತದಲ್ಲಡಕವಾಗಿರುವ ಕೆಲವು ವಿರೋಧಾಭಾಸದ ನ್ಯೂನತೆಗಳನ್ನು ವಿಚಾರವಂತರಿಗೆ ತೋರಿಸಿ ಕೊಟ್ಟರು.

ರಾಜಕೀಯ ಖಂಡವಿಶೇಷವೆಯಾಗದೆ ಧಾರ್ಮಿಕ ಕಾರ್ಯಗಳು ಸರಿಯಾಗಿ ಸಾಗವು ಎಂಬ ಅಭಿಪ್ರಾಯಪಟ್ಟ ಕೆಲವು ದೇಶಸೇವಕರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ತನುಮನಧನಗಳನ್ನು ಸಮರ್ಪಿಸಿದರು; ಆಧ್ಯಾತ್ಮಿಕ ಜ್ಞಾನವು ಪ್ರಸಾರವಾಗದೇ ದೇಶಕ್ಕೆ ಎಂದೂ ಅಭಿವೃದ್ಧಿಯಾಗದು ಎಂಬುದನ್ನು ಶ್ರೀರಾಮಕೃಷ್ಣ ಧರ್ಮಪ್ರಚಾರಕ ಮಂಡಲಿಯು ಇಲ್ಲಿ ದೇಶದಲ್ಲಿ ಅನೇಕಾನೇಕ ಧರ್ಮಸಂಸ್ಥೆಗಳನ್ನುಂಟುಮಾಡಿ ಧರ್ಮಸೇವೆ, ದೇಶಸೇವೆ ಮಾಡಿ ಕೃತಾರ್ಥರಾದರು. ಈ ಆತ್ಯುತ್ತಮ ಸೇವೆಯು ಈಗಲೂ ವಿಶಾಲವಾಗಿ ನಡೆಯುತ್ತಿದೆ— ಉತ್ತರ ಹಿಂದುಸ್ಥಾನದಲ್ಲಿ ಸ್ವಾಮಿ ರಾಮತೀರ್ಥ ಪ್ರಚಂಡ ಧರ್ಮಪ್ರಚಾರ ಮಾಡಿದರು. ಅವೇ ರೀತಿ, ಜಪಾನು ದೇಶಗಳಲ್ಲೂ ಹಲವರು ಈ ಪುಣ್ಯಾತ್ಮರ ಶಿಷ್ಯರಾದರು. ರಾಜಕೀಯರಂಗದಲ್ಲಿ ಮಹಾತ್ಮಾ ಮೋಹನದಾಸ ಕರ್ಮಚಂದ ಗಾಂಧಿಯವರು ಮಹತ್ತರವಾದ ದೇಶಸೇವೆ ಮಾಡಿ ದರಿದ್ರನಾರಾಯಣರಾದರು.

ಈ ಶತಮಾನದಲ್ಲಿ ಮಹಾಜ್ಞಾನಿ ಗೋಪಾಲಕೃಷ್ಣ ಗೋಖಲೆಯವರು ಭಾರತ ಸಮಾಜ ಸೇವಾ ಸಂಘವನ್ನು ಏರ್ಪಡಿಸಿ ದೇಶದ ಐಕ್ಯತೆಗಾಗಿ ಬಹಳ ಕಾರ್ಯಗಳನ್ನು ನಿಸ್ವಾರ್ಥ ಬುದ್ಧಿಯಿಂದ ಮಾಡಿ ಕೀರ್ತಿಗೊಂಡರು. ಲೋಕಮಾನ್ಯ ತಿಲಕರು ನಿರ್ಭೀತಿಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹಲವು ವರ್ಷ ಖಂಡನದಲ್ಲಿದ್ದು, ಅಲ್ಲಿ ಮಹತ್ವವಾದ ಲೋಕಪ್ರಸಿದ್ಧ 'ಗೀತಾರಹಸ್ಯ'ವನ್ನು ಬರೆದು ಧರ್ಮಸಾಹಿತ್ಯಶಿರೋಮಣಿಯೂಹರು. ಶ್ರೀ ಅರವಿಂದ ಘೋಷರು ಮೊದಲು ರಾಜಕೀಯ ಸೇವೆಮಾಡಿ, ವೃದ್ಧಾಪ್ಯದಲ್ಲಿ ಯೋಗಾಭ್ಯಾಸಿಗಳಾಗಿ, ಏಕಾಂತ ವಾಸಿಗಳಾಗಿ ನಮ್ಮ ಧರ್ಮದ ದೀಪವನ್ನು ಬೆಳಗಿಸಿದರು. ತಿರುವನಾಮಲೆಯ ಶ್ರೀ ರಮಣ ಮಹರ್ಷಿಯವರು ಆತ್ಮಸ್ವರೂಪದ ಸ್ಥಿತಿಸ್ವವನ್ನು ಪಸಗೆ ಗೋಚರ ಮಾಡಿದರು. ಹಲವು ಪಾಶ್ಚಾತ್ಯ ಶಿಷ್ಯಜ್ಞಾನಿಗಳು ಕೂಡ ಈ ಯೋಗಿಗಳ ಪಾದಸೇವೆ ಮಾಡುತ್ತಿದ್ದರು.

ಸಾಹಿತ್ಯರಂಗದಲ್ಲಿ ರವೀಂದ್ರನಾಥ ಠಾಗೂರರು ತಮ್ಮ ಗೀತಾಂಜಲಿ ಮತ್ತು ವಿಶ್ವಭಾರತಿ ಕೃತಿಗಳನ್ನು ಬರೆದು ಲೋಕಪ್ರಸಿದ್ಧರಾದರು. ಇವರ ಕವಿತಾ ರಚನೆಯು ನವರಸಭೂತವಾಗಿ, ನಮ್ಮ ಸಾಹಿತ್ಯಕ್ಕೆ ಹೊಸಕಳೆಯನ್ನು ಕೊಟ್ಟಿತು. ಸತ್ಯವೇ ದೇವರು ಎಂಬುದನ್ನು ಕೂಲಂಕಷವಾಗಿ ಮಹಾತ್ಮಾ ಗಾಂಧಿಯವರು ವಿವರಿಸಿ ಒಂದು ಗ್ರಂಥವನ್ನು ಆಂಗ್ಲ ಭಾಷೆಯಲ್ಲಿ ಬರೆದಿರುವರು. ಅಂತೂ ಹಲವು ಪ್ರಸಿದ್ಧ ಪುರುಷರ ಉತ್ಕರ್ಷದಿಂದ ನಮ್ಮ ಧರ್ಮವು ಈ ತನಕ ಉಳಿದಿದೆ.

ನಮ್ಮ ದೇಶವು ಎಲ್ಲಾ ಮತಗಳಿಗೂ ಮನ್ನಣೆ ಕೊಡುತ್ತಿದೆ. ಎಲ್ಲಾ ಮತಗಳಲ್ಲೂ ಧರ್ಮವೇ ಪ್ರಾಮುಖ್ಯ ಸ್ಥಾನವನ್ನು ಪಡೆದಿರುತ್ತದೆ. ಭರತ ಖಂಡವು ಅನಾದಿಯಿಂದಲೂ ಧರ್ಮಕ್ಷೇತ್ರನೆಂಬ ನಾಮದಿಂದ ಕರೆಯಲ್ಪಟ್ಟಿದೆ—ಧರ್ಮಸಂಸ್ಥಾಪನೆಗಾಗಿ ಪರಮಾತ್ಮನು ಅನೇಕಬಾರಿ ಅವತಾರವಾಗಿ ಜನಿಸಿದ ಈ ನಮ್ಮ ಪುಣ್ಯಭೂಮಿಯು ಎಂದಿಗೂ ಮಲಿನವಾಗದು. ಅಲ್ಲಲ್ಲಿ ಮಲಿನತ್ವವು ಆಗಾಗ್ಯೆ ತೋರಬಂದರೂ, ಅದು ಬರ ಪ್ರಾಯವುಳ್ಳವರನ್ನು ಮುಟ್ಟಿಸುವುದು.

೩) ಧರ್ಮಕ್ಷೇತ್ರಗಳನ್ನೂ ರಕ್ಷಿಸುವುದು.

೪) ನಮ್ಮ ಸಂಪ್ರದಾಯಗಳನ್ನು ಅಚರಿಸಿ ಭಗವಂತನಿಗೆ ಸಂಬಂಧಿಸಿದ ಹಲವು ವಿಧದ ವ್ರತಗಳನ್ನು ಬಹುಶ್ರದ್ಧೆಯಿಂದ ಆಚರಿಸುವುದು.

೫) ಆಚಾರವಾದ ಶೋಕಾನುಭವ, ಜೀವನಾನುಭವ, ಮತ್ತು ನೀತಿ ಮಾರ್ಗವನ್ನು ತೋರಿಸುವ ನಮ್ಮ ಪ್ರಸಿದ್ಧ ಕಾವ್ಯಗಳಾದ ರಾಮಾಯಣ, ಭಾರತ, ಭಾಗವತಗಳನ್ನು ಓದಿ ತಿಳಿದು ಆನಂದಪಡುವುದು.

೬) ವೇದಗಳಲ್ಲಿ ಅಡಕವಾದ ಧರ್ಮವನ್ನು ಪ್ರಶಂಸಿಸುವುದು.

೭) ಸುಖ-ದುಃಖಗಳನ್ನು ಏಕ ರೀತಿಯಲ್ಲಿ ತುಲನೆಮಾಡಿ ಧೈರ್ಯದಿಂದ ದೇವರನ್ನು ಮರೆಸದೇ ಕರ್ಮಗಳಲ್ಲಿ ನಾಗಿಸುವುದು.

ಭರತ ಖಂಡವು ಕಾತ್ವಿಕ ವಿಚಾರದಳ ಭಂಡಾರವೆಂದು ಇಡಿ ಜಗತ್ತು ಒಪ್ಪಿಕೊಂಡಿದೆ—ಈ ಉತ್ತಮವಾದ ಬಿರುದನ್ನು ನಾವು ಎಂದೂ ಕಳಕೊಳ್ಳಬಾರದು. ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಮತ್ತು ಕೌಶಲ್ಯ ವಿಷಯಗಳಲ್ಲಿ ಭಾರತವು ಜಗತ್ತಿನಲ್ಲಿ ಉತ್ತಮ ಸ್ಥಾನವನ್ನು ಗಳಿಸಿದೆ—ಶಾಂತಿಯ ಪ್ರಭಾವವನ್ನು ನಮ್ಮ ದೇಶವು ಇಡಿ ಜಗತ್ತಿಗೆ ತೋರಿಸಿದೆ, ತೋರಿಸುತ್ತಲೂ ಇದೆ—ಅಹಿಂಸೆಯ ಪ್ರಬಲ ಶಕ್ತಿಯಿಂದ ಸಮರಕ್ಕಿಳಿಯದೆ ನಮಗೆ ಸ್ವಾತಂತ್ರ್ಯತೆ ಲಭಿಸಿತು ಎಂದು. ಅದು ಕಾರಣ, ನಮ್ಮ ಧರ್ಮವನ್ನು ನಾವು ಸದಾ ಕಾಪಾಡಿ ಧರ್ಮನಿಷ್ಠರಾಗಿ ಫಲಾಪೇಕ್ಷೆಯಿಲ್ಲದೆ ನಮ್ಮ ನೈಮಿತ್ತಿಕ ಕರ್ಮಗಳನ್ನು ಮಾಡಿದರೆ ಕರುಣಾ ಸಾಗರನಾದ ಶ್ರೀಮನ್ನಾರಾಯಣನು ನಮ್ಮ ದೇಶವನ್ನು ಎಂದೂ ರಕ್ಷಕ್ಕೆ ಗುರಿಮಾಡನು.

ಕರ ಕಾಲು ಪಂಚಾಯಿತು ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ತಾ. 21-6.62ರಲ್ಲಿ ಕುರುಕಾಲು ಪಂಚಾಯತಿನ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯು ಕಾಪು ಟೋಲೇಕರ ಕಛೇರಿ ವಿಸ್ತರಣಾಧಿಕಾರಿ ಶ್ರೀ ಮೋಸಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷ ಸ್ಥಾನಕ್ಕೆ ಡಾ|| ಕೆ. ಶ್ರೀನಿವಾಸ ಭಟ್ಟರ್ಯಾಕೆ ಪಿ. ನರಸಿಂಹ ಆಚಾರ್ಯರೂ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಶ್ರೀ ಲಿಯೋ ಕ್ವಾಡ್ರಸ್ ಸರ್ವಾನುಮತದಿಂದ ಆಯಸ್ಕಟ್ಟರು. ಅಧ್ಯಕ್ಷ ಸ್ಥಾನಕ್ಕೆ ಇಬ್ಬರು ಸ್ಪರ್ಧಿಗಳಿಗೆ ಗುಪ್ತಮತದಾನವಾಗಲು ಡಾ|| ಶ್ರೀನಿವಾಸ ಭಟ್ಟರಿಗೆ 10 ಮತಗಳೂ, ನರಸಿಂಹ ಆಚಾರ್ಯರಿಗೆ ಕೇವಲ 5 ಮತಗಳೂ ದೊರಕಿ ಡಾ|| ಶ್ರೀನಿವಾಸ ಭಟ್ಟರು ಬಹುಮತದಿಂದ ಆಯಸ್ಕಟ್ಟರು. ಜಯಶಾಲಿಗಳಾದ ಅಧ್ಯಕ್ಷ, ಉಪಾಧ್ಯಕ್ಷರನ್ನು ಹೂಮಾಲೆಗಳಿಂದ ಅಲಂಕರಿಸಿ ಗ್ರಾಮಾಭಿವೃದ್ಧಿಯ ಕುರಿತು ಎಲ್ಲರೂ ಸಹಕರಿಸಿ ಮನಃಪೂರ್ವಕ ದುಡಿಯಬೇಕೆಂಬ ಕುರಿತು ಶ್ರೀ ಕುರುಕಾಲು ಗಣಪಯ್ಯ ಶೆಟ್ಟರೇ ಮೈಕ್ರೆ ಕೆಲವರ ಭಾಷಣಗಳಾಗಿ ಲಘು ಉಪಾಹಾರದೊಂದಿಗೆ ಸಭಾಮುಕ್ತಾಯವಾಯ್ತು.

ನಮ್ಮ ಯೊಲ.....

ಅತಿ ಪ್ರಾಚೀನ ಕಾಲದಿಂದಲೂ "ಓ ಬೇಲೆ...." ಕೇಳಿದ ನಮ್ಮ ಭಕ್ತರ ಗದ್ದೆಗಳಲ್ಲಿ ಇಂದು ಆಧುನಿಕತೆಯ ಸ್ವರವು ಹೊರಸೂಸುತ್ತಿದೆ. ಜಾಪಾನೀ ಪದ್ಧತಿ, ಸಿಂಥ್ರಿಗೊಬ್ಬರ, ಪಂಚವರ್ಷಿಕ ಯೋಜನೆ—ಇವುಗಳ ಹಿನ್ನೆಲೆಯಲ್ಲಿ ಹೊಸ ಆರ್ಥಿಕ ಕಲ್ಪನೆಯೂ ಸೇರಿಕೊಂಡಿದೆ. ಕಷ್ಟದ ಹೊರೆಯನ್ನು ಹಗುರಗೊಳಿಸಿ, ಗ್ರಾಮಜೀವನದ ಸಮಸ್ಯೆಯನ್ನು ಹೆಚ್ಚಿಸಲು "ಸಿಂಡಿಕೇಟ್" ತನ್ನ ಬ್ಯಾಂಕಿಂಗ್ ಸೇವೆಯನ್ನು ನೀಡುವುದು; ಜೀವನ ಮಟ್ಟವನ್ನು ಉತ್ತಮಗೊಳಿಸಲು ಯತ್ನಿಸುವುದು. ರೈತರ ದಿನಕ್ಕೆತ್ತದ ಸಮಸ್ಯೆಗಳಲ್ಲಿ ಪಾಲುಗೊಂಡು, ಅವರ ಅಭಿವೃದ್ಧಿಗೆ ಸಾಲ ಮತ್ತು ಇನ್ನಿತರ ವೈಜ್ಞಾನಿಕ ಸಲಹೆಗಳ ಮೂಲಕ ಸಿಂಡಿಕೇಟ್ ಬ್ಯಾಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗವು ಸಹಕರಿಸುತ್ತದೆ.

ಹೆಚ್ಚಿನ ಮಾಹಿತಿಗೆ, ದಕ್ಷಿಣ ಕನ್ನಡ ಜಿಲ್ಲೆಯ ನಿಮ್ಮ ಹತ್ತಿರದ ಶಾಖೆಯನ್ನು ಸಂದರ್ಶಿಸಿರಿ.....

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 230ಕ್ಕೂ ಮಿಕ್ಕೆ

ಚಲಾವಣಾ ನಿಧಿ: ರೂಪಾಯಿ 100 ಕೋಟಿಗೂ ಮಿಕ್ಕೆ.

ಟಿ. ಎ. ಪೈ, ಚೆಯರ್‌ಮೇನ್.

READ & ADVERTISE IN NAVAYUGA WEEKLY

ರಾಷ್ಟ್ರಪತಿ ಆಳಿಕೆಯ ರಾಜಮಾರ್ಗ

ಪಕ್ಷಾಂತರ ಪಿಡುಗು ಶಾಲ್ಯನೆಯ ಸಾರ್ವತ್ರಿಕ ಚುನಾವಣೆಯ ವರದಾನ—ಅಥವಾ ಪಾಪದ ಕೂಸು ಎನ್ನಿ ಬೇಕಾದರೆ. ಈ ಕೂಸು ಬ್ರಹ್ಮರಾಕ್ಷಸನಾಗಿ ಬೆಳೆಯಿತು; ಉತ್ತರದ ಒಂದೊಂದೇ ರಾಜ್ಯವನ್ನು ಕಬಳಿಸಿತು; ಹರಿಯಾನ, ಪಂಜಾಬ, ಪಶ್ಚಿಮ ಬಂಗಾಳ, ಬಿಹಾರ, ಮಧ್ಯ ಪ್ರದೇಶ, ಉತ್ತರ ಪ್ರದೇಶಗಳಲ್ಲಿ ಒಂದು ಸರಕಾರ ಬಿತ್ತು, ಮತ್ತೊಂದು ಬಂತು; ಅದೂ ಬಿತ್ತು ಬಿತ್ತು ಎನ್ನುವ ಪರಿಸ್ಥಿತಿ. ಹರಿಯಾನ್ವಪಶ್ಚಿಮ ಬಂಗಾಳ, ಉತ್ತರ ಪ್ರದೇಶಗಳಲ್ಲಿ ಮಧ್ಯಂತರ ಚುನಾವಣೆಗಳಿಗೆ ಪೂರ್ವಭಾವಿಯಾಗಿ ರಾಷ್ಟ್ರಪತಿ ಆಳಿಕೆ ಬಂತು. ಕುಮಾರಸ್ವಾಮಿ ಚುನಾವಣೆಗಳು ನಡೆಯುವ ಕಾಂಗ್ರೆಸ್ ನಿಶ್ಚಲ ಬಹುಮತ ಗಳಿಸಿ ಮತ್ತೆ ಗದ್ದುಗೆಗೇರಿತು. ಪಶ್ಚಿಮ ಬಂಗಾಳದಲ್ಲಿ ಇನೇ ಚಳ-ಬೇಗೆದಿಕ್ಕೆ ನಡುವೆ ಮಧ್ಯಂತರ ಚುನಾವಣೆಗಳು ನಡೆಯಬೇಕೆಂದು ಭಾರೀ ಸಿದ್ಧತೆ ನಡೆಯುತ್ತಿದೆ. ಉತ್ತರ ಪ್ರದೇಶದಲ್ಲೂ ಅಷ್ಟೆ.

ಒಮ್ಮೆ ಉತ್ತರ ತುಂಬ ಬಿಸಿ ಡೊಂಬರಾಟ ಆಡಿದ ಈ ಪಕ್ಷಾಂತರ ಪಿಡುಗು—ಪಾಪದ ಕೂಸು—ಪಾಪಕಾರ್ಯದಲ್ಲೇ ತತ್ಪರರಾಗಿರುವಂತೆ ಭಾಸವಾಗಿದೆ. ಹಾಗಾಗಿ "ದೂರದರ್ಶಿ" ರಾಜಕಾರಣಿಗಳು, "ಜನಾದರ" ಕಳೆದುಕೊಳ್ಳಬೇಕಾದೀತೆಂಬ ಹೆದರಿಕೆಯಿಂದ "ಪಾಪ" ಮಾಡಲು ಹಿಂದು ಮುಂದು ನೋಡುತ್ತಿದ್ದಾರೆ. ಹರಿಯಾನದಲ್ಲಿ ಪಕ್ಷಾಂತರ ಪೀಡಿತರು ಸಂಪೂರ್ಣ ನೆಲಸಮವಾದುದನ್ನು ಕಂಡೂ ಅವರು ಕುರುಡರಂತೆ ವರ್ತಿಸುವುದೆಂದರೆ, ತಮ್ಮ ಕಾಲುಗಳಿಗೆ ತಾವೇ ಕೊಡಲಿ ಹಾಕಿಕೊಂಡಂತೆ ಎಂದು ಅರಿಯದಷ್ಟು ತಿಳಿಗೇಡಿಗಳೇ ಅವರು? ಆದುದರಿಂದಲೇ, ಬಿಹಾರದ ಮುಖ್ಯಮಂತ್ರಿ ಶ್ರೀ ಭೋಲಾ ಪಸ್ವಾನ್ ಶಾಸ್ತ್ರಿಯವರು ತನ್ನ ಸಹೋದ್ಯೋಗಿಯೊಬ್ಬರ ಅನ್ಯಾಯದ ಒತ್ತಡಕ್ಕೆ ಜಗ್ಗದೆ ರಾಜಿನಾಮೆ ಕೊಡಿದರು, ಇಲ್ಲಿ ಪ್ರತಿ ಸರಕಾರ ರಚಿಸಲು ಕಾಂಗ್ರೆಸ್ಸು ಬಹುಮಟ್ಟಿಗೆ ಸಿದ್ಧವಿಲ್ಲವಾದುದರಿಂದ—ಹರಿಯಾನವು ಅಹಿಳೆಯ ಶರೀರದಲ್ಲಿ ಹೊಸ ಶಕ್ತಿಯೂದಿದೆ—ರಾಷ್ಟ್ರಪತಿ ಆಡಳಿತ ಹೇರಿ ಮತ್ತೆ ಮಧ್ಯಂತರ ಚುನಾವಣೆಗಳನ್ನು ನಡೆಸುವುದೇ ಸೂಕ್ತಪರಿಹಾರ—ಇದು ರಾಜಿನಾಮೆ ಕೊಡಿದ ಮುಖ್ಯಮಂತ್ರಿಗಳ ಸಲಹೆ—ರಾಜಕೀಯ ನೇತಾರರ ಅಭಿಪ್ರಾಯವೂ ಹೌದು.

ಪಂಜಾಬ ರಾಜ್ಯದಲ್ಲಿ ಕಾಂಗ್ರೆಸ್ ಬೆಂಬಲ ಪಡೆದು ಲಚ್ಚನ್‌ಸಿಂಗ್ ಗಿಲ್ ಗದ್ದುಗೆ ಗೇರಿದ್ದು, ಮೊನ್ನೆ ಮೊನ್ನೆ ಬಜಟ್ ಅಧಿವೇಶನದಲ್ಲಿ ಸ್ಪೀಕರರು ತಿಳ್ಳರಲಾಗ ಜಾತಿದ್ದು, ಹೊಸಕಾಸಿನ ಸಂಬಂಧದ ವಿಧೇಯಕ ಸಂಖ್ಯಾತಾಗಿದೆ. ಇಷ್ಟು ಎಂದು ಮುಂತಾದ ಹೆಗರಣದಿಂದ ಸಾಂವಿಧಾನಿಕ ಬಿಕ್ಕಟ್ಟು ಕೊಟೆಗೆ ಹೋದದ್ದು ಎಲ್ಲರಿಗೂ ತಿಳಿದ್ದು. ಆದರೂ ಗಿಲ್ ಇನ್ನೂ ಇದ್ದಾರೆ. ಇದೀಗ ಹರಿಯಾನಾದ ವಿಜಯ ಪಂಜಾಬ ಕಾಂಗ್ರೆಸ್ಸಿನಲ್ಲೂ ಹೊಸ ಆಸೆ ಮೂಡಿಸಿದೆ. ಗಿಲ್ಲರನ್ನು ಪದಚ್ಯುತಿಗೊಳಿಸಿ ತಾವೇ ಸರಕಾರವೇರಿ ರಚಿಸಬಾರದ? ಆದರೆ, ಕೇಂದ್ರ ಕಾಂಗ್ರೆಸ್ ನಾಯಕರು ಇದಕ್ಕೆ ಒಪ್ಪುವುದಿಲ್ಲ; ರಾಷ್ಟ್ರಪತಿ ಆಳಿಕೆ ಹೊರಿಸಿ, ಮಧ್ಯಂತರ ಚುನಾವಣೆಗೆ ದಾರಿ ಮಾಡೋಣ; ಕೀವು ಹರಿಯಾಗಿಗಳಂತೆ ನಿಶ್ಚಲ ಬಹುಮತ ಪಡೆದು ಬನ್ನಿ. ಮತ್ತೆ ಕೈರಾನ್ನರ ಪ್ರಸಾದ ತೋರಿದರೂ ಚಿಂತೆಯಿಲ್ಲ—ಇದು ಕೇಂದ್ರ ಧೋರಣೆ.

ರಾಷ್ಟ್ರಪತಿ ಆಳಿಕೆಗೆ ಇನ್ನೂ ಕೆಲವು ರಾಜ್ಯಗಳು ಒಳಗಾಗುವುವು ಎಂಬುದು ರಾಜ್ಯಕೀಯ ಭವಿಷ್ಯವಾದಿಗಳ ಬಿಚ್ಚು ನುಡಿ. ಮಧ್ಯ ಪ್ರದೇಶದಲ್ಲಿ ಒಮ್ಮೆ ಪಕ್ಷಾಂತರಗೊಂಡ (ಮೂಜಿ ಕಾಂಗ್ರೆಸ್) ನಾಯಕರು ಮತ್ತೆ ಕಾಂಗ್ರೆಸ್ ಸೇರಿತ್ತಾರಂತೆ! ಬಂಗಾಳದ ಡಾ। ಪಿ. ಸಿ. ಘೋಷರೂ ಅವರ ಸಹಚರರೂ ಇವರಿಗೆ ಸುರುಗಳಾಗಿರಬಹುದು. ಅವರೊಂದಿಗೆ ಇನ್ನೂ ಕೆಲವರು ಕಾಂಗ್ರೆಸ್ ಸೇರುತ್ತಾರೆಂದು ಬಲವಾದ ಸುದ್ದಿ. ಇವರು ಅಧಿಕಾರ ದಾಹ ಪೀಡಿತರು ಇರಬೇಕು. ಇದು ಕಾಕ್ಷ್ಯ ರೂಪಕ್ಕೆ ಬಂದರೆ ಅಂ ಜನ ಶಾಸಕರು ಕಾಂಗ್ರೆಸ್ ಸೇರುತ್ತಾರೆ. ಇವರನ್ನು ಕೂಡಿ ಡಿ. ಪಿ. ಮಿಶ್ರ ಅಥವಾ ಮತ್ತೊಬ್ಬರು ಸರಕಾರ ರಚಿಸುವ ಆಶೆಯಿಟ್ಟು ಕೊಂಡಿದ್ದರೆ ತಪ್ಪೇನು? ಆದರೆ, ಈ ಆಸೆ, ಗಿಳಿ—ಬೂರುಗಿ ಹಣ್ಣಿನ ಕತೆಯೂದೀತೆ? ಆದುದರಿಂದ ಅಲ್ಲಿಯೂ ಮಧ್ಯಾವಧಿ ಚುನಾವಣೆಗೇ ತಾರಣೋಪಾಯವೆಂದು ಹಿರಿಯ ಕಾಂಗ್ರೆಸ್ ನಾಯಕರ ವಿಶ್ವಾಸ.

ಈ ಮೂಲೆ ಇಲ್ಲಿಗೇ ಮುಗಿಯಲಿಲ್ಲ. ಸಂಯುಕ್ತರಂಗ ಸರಕಾರಗಳಲ್ಲಿ ಇದುವರೆಗೂ ಶಾಂತತೆ ನೆಲಸಿಕೊಂಡಿದ್ದ ಒರಿಸ್ಸಾದಲ್ಲಿ ಈಗ ಅಶಾಂತತೆ ಮೂಡಿದೆ. ಸಚಿವ ಸಂಪುಟದಲ್ಲಿ ಭಿನ್ನಾಭಿಪ್ರಾಯ ಹುಟ್ಟಿದೆ—ಶ್ವಶಂಕ್ರ ಪಕ್ಷ ಮತ್ತು 'ಜನತಾಕಾಂಗ್ರೆಸ್'ಗಳ ನಡುವೆ—ಎಂದು ಕೇಳ ವದಂತಿ. ಇದನ್ನು ನಂಬಿಯೇ ಇರಬೇಕು, ಕಾಂಗ್ರೆಸ್ಸು, ಪಿಎಸ್‌ಟಿ ಮತ್ತು ಎಸ್ಸೆಸ್ಪಿ ಜತೆಗೂ ಎಡ ಕಮ್ಯುನಿಸ್ಟರು ಸೇರಿ ಒಟ್ಟು ಮೂರು ಅವಿಶ್ವಾಸ ನಿರ್ಣಯಗಳನ್ನು ಮಂಡಿಸಿದ್ದಾರೆ. ಇದರ ಚರ್ಚೆ ಬಿರುಸಿನಿಂದ ನಡೆಯುತ್ತದೆ. ಅಧಿಕಾರಿಪ್ರಿಯರು ಮತದಾನದ ವೇಳೆ ಭಿನ್ನಾಭಿಪ್ರಾಯ ಮರೆತು ಬಿಡದಿದ್ದರೆ ಅಲ್ಲೂ ರಾಷ್ಟ್ರಪತಿ ಆಳಿಕೆಗೆ ದಾರಿ ಸುಗಮವಾದೀತು.

ಇಷ್ಟೆಲ್ಲ ಆದ ಮೇಲೆ ದಕ್ಷಿಣದ ರಾಜ್ಯಗಳತ್ತವೂ ತುಸು ದೃಷ್ಟಿ ಹರಿಸಬಹುದು. ಆಂಧ್ರ-ಕರ್ನಾಟಕಗಳಲ್ಲಿ ಕಾಂಗ್ರೆಸ್ ಸರಕಾರಗಳೇ ಇವೆ-ಸುಭದ್ರವಾಗಿಯೇ ಇವೆ. ಮದ್ರಾಸ ಯೂನೇ ತಮಿಳು ನಾಡಿಗಳ ಡಿ. ಎಂ. ಕೆ. ಸರಕಾರ ಧಾರಾಸರಸ್ವತಿಯ ಜಡೆ ಹಿಡಿದೆಳೆಯುವ ದುಶ್ಶಾಳನನಾಗಿ(?) ಬೇಕಷ್ಟು ಬೆಂಬಲ ಕೀಡಿವೆ ಅದರೂ ತನ್ನ ಪಾಪ ತನ್ನನ್ನೆ ಮುಂಗುವುದೆಂಬ ಭೀತಿ ಅದರ ಮನದಲ್ಲಿಷ್ಟ ಮೂಡಿದೆ. ಹಾಗಾಗಿ ಕೀಚ ಸಭೆಯಲ್ಲಿ ವಸ್ತ್ರಾಪಹರಣಕ್ಕೆ ತೊಡಗದೆ ಕತ್ತಲೆಯಲ್ಲೇ ಆ ಬಗೆಯ ಕಾರ್ಯಕ್ಕೆ ಉತ್ತೇಜನ ಕೀಡುತ್ತಿದೆಯೆನ್ನಬಹುದು. ಅಲ್ಲಿಷ್ಟ ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲು ಬೇಕಾಗುವಷ್ಟು ಬೆಂಬಲ ಪಡೆಯುವ ಆತ್ಮವಿಶ್ವಾಸ ವಿರೋಧ ಪಕ್ಷಗಳಿಗಿಲ್ಲ. ಹಾಗಾಗಿ ಡಿಎಂಕೆ ಭದ್ರವಾಗಿದೆಯಾದರೂ ಪಂಜಾಂಗ ಮಾತ್ರ ಕಂಪಿಸುತ್ತಿದೆ—ಒಂದು ಬಲವಾದ ಬಿರುಗಾಳಿಯೋ ಮಧ್ಯಮ ಮಟ್ಟದ ಭೂಕಂಪವೂ ಸಂಭವಿಸಿದರೆ ಅದು ಉರುಳಿಯೇ ಉರುಳುವುದು-ಆಗ ಅಲ್ಲೂ ರಾಷ್ಟ್ರಪತಿ ಆಳ್ವಿಕೆ!

ತಮ್ಮೊಳಗೆ ಎಷ್ಟೇ ಭಿನ್ನಮತಗಳಿದ್ದರೂ ಸಾರ್ವಜನಿಕ ವೇದಿಕೆಯ ಮೇಲೆಯೇ ಒಬ್ಬರು ಇನ್ನೊಬ್ಬರನ್ನು ಕೆಣಕ್ಕೆಳೆದರೂ "ಕಾಂಗ್ರೆಸ್ ವಿರೋಧಿ" ಸಂಜೀವಿನಿಯಿಂದಾಗಿ ಬೆಸೆದು ನಿಂತ ಸರಕಾರ ಕೇರಳದ ಏಳು ಬಣ್ಣದ ಸರಕಾರ—ಇ. ಎಂ. ಎಸ್. ಪಂಬಾಣದರಿವಾದರು ಈ ಏಳು ಬಣ್ಣದ ಸರಕಾರ ರಚಿಸಿದಾಗ ಇದು ಕಾಮನಬಿಲ್ಲಿನ ಸರಕಾರವೆಂದು ಹಾಸ್ಯ ಮಾಡಿದವರುಂಟು. ಆದರೆ, ಈ ಹದಿನಾರು ತಿಂಗಳುಗಳಲ್ಲಿ ಕಣ್ಣು ಮಾಸುತ್ತ ಬಂದರೂ ಈ ಕಾಮನಬಿಲ್ಲು ಇನ್ನೂ ಇದೆ. ಈಗ ಕೆಲವು ದಿನಗಳಿಂದ ಅರೋಪ—ಪ್ರತ್ಯಾರೋಪಗಳು ಬಟ್ಟ ಬಯಲಿಗೆ ಬಂದಿವೆ. ಮೂರೋ ಸಾಹಿತ್ಯ ಪ್ರಚಾರ, ದೇವರುದಿಂದ ಗೆಂಚಕಾರ, ಸಾಮಾಜಿಕ ಕ್ರಾಂತಿ—ಎಂದು ಮುಂತಾದ ಮಾತುಗಳು ಮೇಲಿಂದ ಮೇಲೆ ಕೇಳಿ ಬರುತ್ತಿವೆ ಎಡ-ಬಲಗಳ ಗಡಿಬಿಡಿ ಹೆಚ್ಚಿದೆ. ಪಂಬಾದರಿಯವರ ಶಕ್ತಿಯಲ್ಲಿ ಕಲ್ಲು ತುಂಬಿದಂತಾಗಿದೆ. ಈಗ ಅವರೇನು ಮಾಡುತ್ತಾರೆ? "ಸಾಮಾಜಿಕ ಕ್ರಾಂತಿಗೆ ತಕ್ಕ ಹಿನ್ನೆಲೆ" ನಿರ್ಮಾಣವಾಗಿದ್ದರೆ (ಇದು ಅವರೇ ಗೊತ್ತು) ರಾಜಿನಾಮೆ ನೀಡಿ, ಕ್ರಾಂತಿಯ ನಾಯಕತ್ವ ವಹಿಸಿ ಅರಾಜಕತೆಗೆ ದಾರಿಮಾಡಿ ಕೊಡಬಹುದು; ಅದಾಗಿಲ್ಲವಾದರೆ ಕಾಲ ಪರಿಪಕ್ವವಾಗುವವರೆಗೂ ಹಾಗೂ ಹೀಗೂ ಅಧಿಕಾರಕ್ಕೆ ಜೋತು ಬಿದ್ದು ಮುಂದೆ ಕ್ರಾಂತಿಕಾರಿಗಳಾಗಬಹುದು.

ಕೇಂದ್ರ ಸರಕಾರ ಕೇರಳದ ಬಗ್ಗೆ ತೀವ್ರ ಗಮನವಿರಿಸಿದೆ. ಅಲ್ಲಿ ನಂಬೂದರಿ ಹೋಳಿಗೆ ಹಂಚಿಯ ಮೇಲೆ ಕಾಯುತ್ತಿರುವುದನ್ನು ಅದು ನೋಡುತ್ತಿದೆ. ಒಂದು ಕಡೆ ಭರಣಿಯ ತುಪ್ಪ ಘಮಘಮಿಸುತ್ತಿರುವುದೂ ಮೂಗಿಗೆ ಬಡಿಯುತಂಟೆ? ಹೋಳಿಗೆ ಕಾದು ತುಪ್ಪಕ್ಕೆ ಜಾರುವ ಮೊದಲೇ ಕೇರಳವನ್ನು ಉಳಿಸಬೇಕಾದುದು ಕೇಂದ್ರದ ಧರ್ಮ. ಇದನ್ನು ಅದು ಪರಿಪಾಲಿಸದೆ ಹೋದರೆ ಪ್ರಜಾತಂತ್ರ ಪರಿಪೂರ್ಣ ಅತಂತ್ರವಾಗದೆ.

ವಿಚಾರ ವರ್ಷ

ಶ್ರೀ ಬಿ. ನರಸಿಂಗ ರಾವ್

ಸಂದರ್ಭದ ಸದುಪಯೋಗ

'ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ'. ಇದು ಸಂದರ್ಭವನ್ನು ಸದುಪಯೋಗಿಸದೆ ವತ್ತಿ ಬವಣೆಪಡುವವರು ಆತ್ಮ-ತೃಪ್ತಿ ಪಡೆಯಲು ಕಾರಣವಾಗುವ ಸೊಲ್ಲು. ದೊರೆತ ಸಂದರ್ಭವನ್ನು ಸಮಯಕ್ಕೆ ಕರಿಯಾಗಿ ಸದುಪಯೋಗಿಸದೆ ತಪ್ಪ ಭಾಗ್ಯ, ಹಣೆಬರಹದನ್ನು ಹಳಿಯುವವರು ನಮ್ಮಲ್ಲಿಯೇ ಎಷ್ಟಿಲ್ಲ!

ಉದಾಹರಣೆಗೆ 'ಪರೀಕ್ಷಾರ್ಥಿ'ಗಳನ್ನಿಸಿದ ವಿದ್ಯಾರ್ಥಿಗಳನ್ನೆ ತೆಗೆದುಕೊಳ್ಳಿ—ತಮ್ಮ ಶಕ್ತಿ-ಸಾಮರ್ಥ್ಯ, ಜ್ಞಾನಾರ್ಜನೆಯ ಪ್ರದರ್ಶನಕ್ಕೆ ಅವಂಗೆಲ್ಲ ಇರುವ ಸಾಮಾನ್ಯ ರಂಗವು ಪರೀಕ್ಷೆ. ಆದರೆ ಫಲಿತಾಂಶ ಹೊರಬಿದ್ದಾಗ ತಿಳಿಯುವುದೇನು? ಕೆಲವರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರೆ, ಹಲವರು 'ಜನತಾ ಕ್ಲಾಸ್'ನಲ್ಲಿ ತೇಗಡೆಯಾಗುತ್ತಾರೆ. ಮತ್ತೂ ಹಲವರು ನಾಪಾಸ್. ಸಂದರ್ಭದ ವಿನಿಯೋಗದಲ್ಲಾದ ಭೇದವೇ ಇದಕ್ಕೆ ಕಾರಣ. ಸಮಯವನ್ನು ಎಲ್ಲರಿಗೂ ಒಂದೇ ರೀತಿಯಲ್ಲಿ ಆ ಪರಮಾತ್ಮನು ಹಂಚಿದ್ದಾನೆ. ಆದರೆ ವರ್ಷವೀಡೀ ಬೀದಿ ಕಾಮಣ್ಣಗಳಾಗಿ ಅಲೆದು, ಸಿನಿಮಾದ ಸಂಗಿನಲ್ಲಿದ್ದು, ಮಜಾಮಾಡಿದಾಕ್ಷಣ ಪಾಸು ಪರೀಕ್ಷೆಯಲ್ಲಿ ದೇವರಿಗೇ ಪ್ರೀತಿ. ಸಂದರ್ಭದ ದುರುಪಯೋಗ ಅಥವಾ ಅವಹೇಳನವೇ ಇದರ ಕಾರಣವೆನ್ನದೆ ನಿರ್ವಾಹವಿಲ್ಲ.

ಜಗತ್ತಿನಲ್ಲಿ ಕೆಲವರು ಮಹಾ ಪುರುಷರೆನಿಸಿ ಜನಮಾನ್ಯರಾದರು. ಹೆಚ್ಚಾದವರು ಸಾಮಾನ್ಯರಾಗಿ ಹುಟ್ಟಿ ಅಂತೆಯೇ ಸತ್ತರು. ಕೆಲವರಂತೂ ಕುಖ್ಯಾತರೂ ಆದರು. ಕಾರಣಿಸ್ಪಷ್ಟ. ಸಂದರ್ಭವನ್ನು ಸದುಪಯೋಗಿಸಿ ಉಚ್ಚ ಆದರ್ಶಗಳನ್ನು ಪಾಲಿಸಿ, ಜ್ಞಾನ ತೃಷೆಯನ್ನು ತಣಿಸಿ ಜನರಿಗೂ ಪ್ರೇರಣೆ ನೀಡಿ, ಒಬ್ಬ ಗಾಂಧೀಜಿಯಾದ. ಬಡ ಬೋರೆ ಗೌಡ ತನ್ನ 'ಹಣೇಬಾಲ'ವನ್ನು ಹಳಿದರೂ—ಹಳಿದೂ ದಿನ ದೂಡಿದ. ಒಂದು ದಿನ ಸತ್ತೇ ಹೋದ. ಆದರೆ ಗಾಂಧೀಜಿ ಸತ್ತರೂ, ಅವರಂತಾದರು—ಜನಮನದಲ್ಲಿ. ಮತ್ತೋರ್ವ ಮಹಾ ಕಿಲಾಡಿ ಕಿಟ್ಟನಾಗಿ ಕಳ್ಳನಾಗಿ ಜೈಲು ಸೇರಿದ ಸಂದರ್ಭವನ್ನು ದುರುಪಯೋಗಿಸಿ, ತನ್ನನ್ನೇ ಆಹುತಿ ಗೈದು, ಕುಖ್ಯಾತನಾದ.

ಸಂದರ್ಭ, ಸಮಯವಕಾಶವನ್ನು ಎಲ್ಲರಿಗೂ ಏಕ ರೀತಿಯಲ್ಲಿ ಅತ ಹಂಚುತ್ತಾನೆ ಎಂದೆನಷ್ಟೆ? ಅದರ ಉಪಯೋಗವನ್ನು ಮಾತ್ರ ನಾವು ಮಾಡಬೇಕಾದದ್ದು. ಅದನ್ನೂ ದೇವರ ಪಾಲಿಗೆ ಬಿಡುವುದು ಮೂರ್ಖತನ. ಸ್ವಯಂ ಸಹಾಯ ಗೈಯುವಾತನ ಸಹಾಯಕ್ಕೆ ಮಾತ್ರ ದೈವವೂ ಸಹಾಯ ಗೈಯುವುದು ಎಂಬುದು ಪರಿಯಲಾದದ ಅನುಭವ.

ಆದುದರಿಂದ ಸಂದರ್ಭ ದೊರೆತಾಗ, ಸಮಯ ವಿರುವ ಮೊದಲೇ, ಕೈಯಾರಿ

ವೈಜ್ಞಾನಿಕ ಸಾಧನೆ

ಮುದುಕರಿಗೂ ಕಾಯಕಲ್ಪ

ಕಾರುಣ್ಯವಿದ್ದಾಗ ಎಲ್ಲರೂ ದುಡಿಸಿಕೊಳ್ಳುತ್ತಾರೆ. ಆದರೆ ವಯಸ್ಸಾದ ಮೇಲೆ ವೃದ್ಧರಕ್ಷ ಮನೆಯವರೂ ಕಡೆಗಣಿಸಲು ಆರಂಭಿಸುತ್ತಾರೆ. ಆಗ ಜೀವಕ್ಷದ್ದೂ ಬಿಗುಪ್ಪೆ ಮೂಡುವುದು ಸ್ವಾಭಾವಿಕ. ಈ ಅಸಹಾಯಕರನ್ನು ಸಮಾಜ ಮತ್ತು ಸರಕಾರ ನೋಡಿಕೊಳ್ಳಬೇಕು.

ರಾಟರ್‌ಡಾಮ್‌ನ ನಗರಸಭಾ ಆಸ್ಪತ್ರೆಗಳ ಕೇಂದ್ರಗಳಲ್ಲಿ ವಯಸ್ಸಾದವರನ್ನು ಚಟುವಟಿಕೆಗೊಳಿಸಿ ಪುನಃ ದಿನನಿತ್ಯ ಜೀವನದಲ್ಲಿ ಸ್ವತಂತ್ರರನ್ನಾಗಿ ಮಾಡಲು ಉಪಯೋಗಿಸಿದ ಕಾಯಕಲ್ಪ ವ್ಯಾಯಾಮಗಳು ಬಹಳ ಯಶಸ್ವಿಯಾಗಿವೆ. ೧೯೬೭ರಲ್ಲಿ ನೆದರ್‌ಲ್ಯಾಂಡಿನಲ್ಲಿ ಸ್ಥಾಪಿತವಾದ ಮೊಟ್ಟ ಮೊದಲನೆಯ ಈ ಆಸ್ಪತ್ರೆಯು ಕೆಲಸಗಳನ್ನು ಅಭ್ಯಾಸ ಮಾಡಲು ಪ್ರಪಂಚದ ಅನೇಕ ಭಾಗಗಳಿಂದ ವಿಶೇಷ ತಜ್ಞರು ಇಲ್ಲಿಗೆ ಬರುತ್ತಿದ್ದಾರೆ.

ಸ್ಥಾಪನೆ:—ಈ ಆಸ್ಪತ್ರೆಯ ಮುಖ್ಯಾಧಿಕಾರಿ ಡಾ| ಬ್ರಾಡ್‌ಬಾರ್ಟ್ ಇವರು ಮುದುಕರ ರೋಗದ ಪೈದ್ಯಕೀಯದಲ್ಲಿ ಅಗ್ರಗಾಮಿಗಳು. ೧೯೫೭ರಲ್ಲಿ ಡಾ| ಬ್ರಾಡ್‌ಬಾರ್ಟ್‌ರವರು ಗ್ಯಾರಿಯಾಟ್ರಿಕ್ಸ್‌ನಲ್ಲಿ ವಿಶೇಷ ಅಭ್ಯಾಸ ಮಾಡಲು ನಿಶ್ಚಯಿಸಿದರು. ಅವರು ನೆದರ್‌ಲ್ಯಾಂಡಿಗೆ ಹಿಂತಿರುಗಿದ ತಕ್ಷಣವೇ ರಾಟರ್‌ಡಾಮ್ ಆರೋಗ್ಯ ಇಲಾಖೆಯಲ್ಲಿ ಸೋಶಿಯಲ್ ಗ್ಯಾರಿಯಾಟ್ರಿಕ್ಸ್ ಡಿಪಾರ್ಟ್‌ಮೆಂಟಿನ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟರು. ಇದರ ಜೊತೆಗೆ ಧೀರ್ಘ ವ್ಯಾಧಿಗಳಿಗೊಳಗಾಗಿದ್ದ ಮುದುಕರ ಎರಡು ಶಾಖೆಗಳನ್ನೂ ಇವರಿಗೆ ವಹಿಸಲಾಯಿತು.

ವ್ಯಾಯಾಮಗಳು:—ಈ ರಿಯಾಕ್ಟಿವೇಷನ್ ಸೆಂಟರಿನಲ್ಲಿರುವ ರೋಗಿಗಳಲ್ಲಿ ಪಾರ್ಶ್ವವಾಯುಗಳು, ಸೊಂಟದ ಮೂಳೆ ಮುರಿದವರು, ಕಾಲು ಮುರಿದವರು, ಸಂಧಿವಾತದ ರೋಗಿಗಳು, ನರದೌರ್ಬಲ್ಯದಿಂದ ಬಳಲುವವರು ಇದ್ದಾರೆ. ಅವರು ನಿತ್ಯವೂ ವ್ಯಾಯಾಮವನ್ನು ಮಾಡಬೇಕಾಗುತ್ತದೆ. ದೀರ್ಘ ವ್ಯಾಧಿಗಳಿಗೊಳಗಾಗಿದ್ದವರು ಆಸ್ಪತ್ರೆಗೆ ಸೇರಿದ ಕೆಲವು ದಿನಗಳ ನಂತರ ಸಾಮಾನ್ಯ ಜೀವನವನ್ನು ನಡೆಸಲು ಸಮರ್ಥರಾಗಿ ಮನೆಗೆ ಹಿಂದಿರುಗುತ್ತಾರೆ.

ಮನೆಗೆ ಹಿಂತಿರುಗುವುದು:—ಡಾ| ಬ್ರಾಡ್‌ಬಾರ್ಟ್‌ರವರ ಹೇಳಿಕೆಯ ಪ್ರಕಾರ ಸೇಕಡಾ ಅಂಬತ್ತು ರೋಗಿಗಳು ಎರಡು ಅಥವಾ ಮೂರು ತಿಂಗಳ ಉಪಚಾರದನ್ನು ಪಡೆದ ನಂತರ ತಮ್ಮ ಮನೆಗೆ ಹಿಂತಿರುಗಲು ಸಮರ್ಥರಾಗುತ್ತಾರೆ. ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ಡಾ| ಬ್ರಾಡ್‌ಬಾರ್ಟ್‌ರವರ ತಂಡದವರು ರೋಗಿಯ ಮನೆಯು ಯೋಗ್ಯವಾಗಿದೆಯೇ ಎಂಬುದನ್ನು ಪರೀಕ್ಷಿಸುತ್ತಾರೆ. ಅದು ಯೋಗ್ಯವಾಗಿಲ್ಲದೇ ಹೋದರೆ ನೆದರ್ಲ್ಯಾಂಡಿನಲ್ಲಿ ಲೆಕ್ಕವಿಲ್ಲದೆ ಬೆಳೆಯುತ್ತಿರುವ ವೃದ್ಧರಿಗೆ ಅನುಕೂಲವಾದ ಮನೆಗಳಿಗೆ ಕಳಿಸಲಾಗುತ್ತಿದೆ.

ತರಬೇತಿ ಹೊಂದಿದ ಕೆಲಸಗಾರರು:— ಡಾ| ಬ್ರಾಡ್‌ಬಾರ್ಟ್ ತಮ್ಮ ಕೆಲಸದಲ್ಲಿ ಎದುರಿಸುತ್ತಿರುವ ತೊಂದರೆಗಳಲ್ಲಿ ತರಬೇತಿ ಹೊಂದಿದ ಕೆಲಸಗಾರರು ಇಲ್ಲದೇ ಇರುವುದು ಒಂದಾಗಿದೆ. ಆದ್ದರಿಂದಲೇ ತಮ್ಮವರೇ ತರಬೇತಿ ಕೊಟ್ಟು ಅವರಿಂದ ವಿಶೇಷ ಕೆಲಸ ತೆಗೆದುಕೊಳ್ಳುತ್ತಿದ್ದಾರೆ. ಇವರ ಕೆಲಸವು ಬಹು ಯಶಸ್ವಿಯಾಗಿದ್ದು ರಿಯಾಕ್ಟಿವೇಷನ್ ಸೆಂಟರ್ ಸಂಸ್ಥೆಗಳಿಗೆ ಸ್ವದೇಶದಲ್ಲಿಯೂ ಪರದೇಶದಲ್ಲಿಯೂ ಮಾದರಿಯಾಗಿದೆ.

ಮುದುಕರ ಸೇವಾಕೇಂದ್ರ:— ಆರೋಗ್ಯವಂತರಾದ ವೃದ್ಧರ ಸಂಘವೊಂದು ನೆದರ್ಲ್ಯಾಂಡಿನಲ್ಲಿ ರಾಷ್ಟ್ರವ್ಯಾಪ್ತಿಯ ಅಸ್ತಿತ್ವವನ್ನು ಕೆರಳಿಸಿದೆ. ೧೯೬೮ರಲ್ಲಿ ಫ್ರೈಸ್‌ಲ್ಯಾಂಡ್ಸ್‌ನ ಲೀವರ್ಡೆನ್ನಿನಲ್ಲಿ ತೆರೆಯಲಾದ ವೃದ್ಧರ ಸೇವಾಕೇಂದ್ರವು ಯಶಸ್ವಿಯೆಂದು ಸಿದ್ಧವಾಗಿದೆ. ಇಲ್ಲಿ ೬೫ ಅಥವಾ ಅದರ ಮೇಲ್ಪಟ್ಟ ವೃದ್ಧರು ಉಪಯುಕ್ತವಾದ ಉದ್ಯೋಗಗಳಲ್ಲಿ ಕಾಲ ಕಳೆಯಲು ಅವಕಾಶವಿದೆ. ಇಲ್ಲಿ ಅಟ್ಟ, ಅಯ್ದು ಶೇಖರಿಸಿದ ಪ್ರಂಥಾಲಯದಿಂದ ಓದು ಮತ್ತು ಜೊತೆ ಜೊತೆಯಾದ ಊಟ ಮುಂತಾದ ಸೌಕರ್ಯಗಳನ್ನು ಪಡೆಯಲು ಅವಕಾಶವಿದೆ. ಅವರು ಇಷ್ಟಪಡುವುದಾದರೆ ತಮ್ಮ ಒಟ್ಟಿಗೆಗಳನ್ನು ತಂದು ಮಡಿ ಮಾಡಿ ಇಸ್ತ್ರಿ ಮಾಡಿಕೊಳ್ಳಬಹುದು. ಕೂದಲು ದಾಹುವ ಮತ್ತು ಸ್ನಾನದ ಅನುಕೂಲತೆಗಳೂ ಇವೆ.

ಇದು ಮೊಟ್ಟಮೊದಲು ಕ್ರಿಶ್ಚಿಯನ್ ರಫಾರ್ಮಡ್ ಕಮ್ಯೂನಿಟಿಯಿಂದ ಪ್ರಾರಂಭಿಸಲ್ಪಟ್ಟರೂ ಈಗ ಎಲ್ಲರಿಗೂ ಪ್ರವೇಶ ದೊರೆಯುತ್ತದೆ. ಸುಮಾರು ೩೦೦ ವೃದ್ಧರು ಈ ಕೇಂದ್ರದ ನೆರೆಹೊರೆಯಲ್ಲಿ ಜೀವಿಸುತ್ತಿದ್ದಾರೆ.

ಸ್ವಂತ ಸಂಗೀತ ಮಂಡಲಿ:—ಈ ಕೇಂದ್ರದ ಚಟುವಟಿಕೆಗಳಲ್ಲಿ ಮುಖ್ಯವಾದುದು ಪ್ರತಿ ಬುಧವಾರದ ಬೆಳಿಗ್ಗೆ ಉತ್ಸುಕರಾದ ಸಂಗೀತಗಾರರು ಪೂರ್ವ ನಿಗದಿತಗಾಗಿ ಕಾಯುತ್ತಾ ನಿಂತಿರುವುದು ಕಂಡು ಬರುವುದು. ಸಂಗೀತ ಮಂಡಳಿಯಲ್ಲಿ ಹೆಚ್ಚು ಸುಂದಿ ವ ಹಿಳೆಯರಿದ್ದರೂ ಹಲ ಕೆಲವು ಗಂಡಸರೂ ಅದರಲ್ಲಿ ಭಾಗವಹಿಸುತ್ತಾರೆ.

ವೃದ್ಧರ "ತಾಯಿ":—ಈ ಕೇಂದ್ರದ ಮೇಲ್ವಿಚಾರಕರಾದ ಶ್ರೀಮತಿ ಡಿ. ರಾವೆಯವರು ಮೊದಲು ವಿವಾಹ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದರು. ಅವರು ತಮ್ಮ ನಿತ್ಯ ಕೆಲಸದಲ್ಲಿ ಕೆಲವು ಗಂಟೆಗಳನ್ನು ತಮ್ಮ ಕೇಂದ್ರದ ಸದಸ್ಯರ ಯಾವುದೇ ಸಮಸ್ಯೆಯ ಬಗ್ಗೆ ಸಮಾಲೋಚನೆ ನಡೆಸಲು ಮೀಸಲಾಗಿಟ್ಟಿದ್ದಾರೆ. ಪ್ರತಿನಿತ್ಯ ಭೇಟಿ ಕೊಡುವವರು ಅಕಸ್ಮಾತ್ ಬರದೇ ಹೋದಾಗ ಅವರು ತಾವೇ ಸ್ವತಃ ಅವರ ಮನೆಗೆ ಭೇಟಿಕೊಟ್ಟು ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾರೆ. ಶ್ರೀಮತಿ ಡಿ. ರಾವೆಯವರ ಸಹ ಉದ್ಯೋಗಿಗಳಲ್ಲಿ ಪೂರ್ಣಕಾಲ ಕೆಲಸ ಮಾಡುವವರು ಕೇವಲ ಮೂರು ಜನ. ಆದರೆ ಅವರಿಗೆ ಸಂಸ್ಥೆಯಿಂದ ಸೇವಕರು ಸಹಾಯ ಮಾಡುತ್ತಾರೆ.

ಹೆಚ್ಚು ವೃದ್ಧರ ಸಂಖ್ಯೆ:—ನೆದರ್‌ಲ್ಯಾಂಡಿನಲ್ಲಿ ಒಂದು ಮಿಲಿಯನ್ ಅಥವಾ ಒಟ್ಟು ಜನ ಸಂಖ್ಯೆಯ ಶೇಕಡಾ ೧೫ರಷ್ಟು ಜನರು ೬೫ ವರ್ಷಕ್ಕೆ ಮೇಲ್ಪಟ್ಟವರಿದ್ದಾರೆ. ಪ್ರಪಂಚದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯ ಈ ವೃದ್ಧರು ಸ್ವಾಭಾವಿಕವಾಗಿಯೇ ಸರ್ಕಾರಕ್ಕೆ, ಮುನಿಸಿಪಾಲಿಟಿಗೆ ಮತ್ತು ಖೈಯುಕ್ತಿಕ ಸಂಘಗಳ ಮೇಲೆ ಅವಲಂಬಿಸಬೇಕಾಗುತ್ತದೆ. ರಾಷ್ಟ್ರದೃಷ್ಟಿಯಂತೆ ಈ ವಿಧವಾದ ಸಾಗರಿಕರಿಗೆ ಮನೆಯ ಅಪುಕೂಲತೆಗಳನ್ನು ಒದಗಿಸಲು ಅನೇಕ ವಿಧವಾದ ಯೋಜನೆಗಳು ಕಾರ್ಯಗತವಾಗಿವೆ. ಖಾಯಿಲೆ ಬಿದ್ದಾಗ ಅವರ ಸ್ಥಿತಿಗತಿಗಳಿಗನುಗುಣವಾಗಿ ಬೇರೆ ಬೇರೆ ಸಂಸ್ಥೆ ಅಥವಾ ಮನೆಗಳಲ್ಲಿ ಉಚಿತವಾಗಿ ಸಲಾಗುವುದು. ಈ ರೀತಿಯಲ್ಲಿ ಡಚ್ಚರು ತಮ್ಮ ಇಳಿವಯಸ್ಸಿನ ಸಹೋದ್ಯೋಗಿಗಳಿಗೆ ಸಹಾಯ ಒದಗಿಸಲು ಪ್ರಯತ್ನಿಸುತ್ತಿದ್ದಾರೆ.

ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರ

ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಸುಟ್ಟಗಾಯಗಳ ಚಿಕಿತ್ಸೆಗಾಗಿ ಸುಸಜ್ಜಿತ ಕೇಂದ್ರವಿದೆ. ಇದಕ್ಕೆ ಅಮೆರಿಕದ ಸರಕಾರ ನೆರವಿತ್ತಿದೆ.

ಸುಟ್ಟ ಗಾಯಗೊಂಡವರನ್ನು ತಕ್ಷಣ ಈ ಕೇಂದ್ರಕ್ಕೆ ತರಬಹುದು. ಹಣ ಕೊಡಲು ಸಾಧ್ಯವಿಲ್ಲದವರಿಗೆ ಉಚಿತ ಚಿಕಿತ್ಸೆ ನಡೆಸಲಾಗುವುದು. ಅಂಬುಲೆನ್ಸ್ ಅಗತ್ಯವಿದ್ದರೆ ಆಸ್ಪತ್ರೆಗೆ ಟೆಲಿಫೋನ್ (ಉಡುಪಿ ೨೩೪) ಮೂಲಕ ತಿಳಿಸಬಹುದು.

ಯಕ್ಷಗಾನ

'ಇಂದ್ರ ಗರ್ವಭಂಗ'—ಎಂಬ ಯಕ್ಷಗಾನ ತಾಳಮದ್ದಳೆಯು ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಕಳೆದ ದಿನಾಂಕ ೩೦ರಂದು ನಡೆಸಲ್ಪಟ್ಟಿತು.

ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘದವರು ಇದನ್ನು ನಡೆಸಿಕೊಟ್ಟದ್ದು—ಶ್ರೀ ಕೀರಿಕ್ಕಾಡು ಪೂಸ್ಯರ್ ವಿಷ್ಣು ಭಟ್ಟರು ಅಧ್ಯಕ್ಷತೆ ವಹಿಸಿದ್ದರು. ವೈದಸ್ಥಾಳ ಶ್ರೀ ಕೆ.ವಿ. ಭಂಡಾರಿ—ಅವರು ಕೊನೆಯಲ್ಲಿ ಧನ್ಯವಾದವಿತ್ತರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 385/65

Ex. Case. 69/1968

P.N. ಸದಾನಂದ ರಾವ್ ಕೂಡಾ —ಅರ್ಜಿದಾರರು

ಮತ್ತು

ನೆಲ್ಲಿ ಡಿ ಸೋಜ ಕೂಡಾ—ಎದ್ರಿರು

೨. ಇಸ್ಮಾಯಿಲ್ ಮುಸ್ತಾರೇಜ್ಜ, ೩ ಉಲ್ಲಿಯ ಮುಸ್ತಾರೇಜ್ಜ, ೪ ಪೀಯುಸ್ ಮುಸ್ತಾರೇಜ್ಜ — ದೇವಿಯಲ್ ಯೂನಿ ಡಾಲ್ ಮುಸ್ತಾರೇಜ್ಜ ಸ ಮಕ್ಕಳು; ಉಡುಪಿತಾಲೂಕು ಶಿವಳ್ಳಿಗ್ರಾಮದ ವೆಂಬಳ್ಳಿಯಲ್ಲಿರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅಮ್ಲಜ್ಯಾರಿ ಅರ್ಜಿಯಲ್ಲಿ ಅರ್ಜಿದಾರರ ಕಡೆ ದಾಖಲಾದ ಸ್ಥಿರಾಸ್ತಿ ವಿಲಂ ಇಸ್ಟ್ರಾಕ್ಟಿನ ಪ್ರಕಟಗಳನ್ನು ಪ್ರಕಟಿಸುವುದರ ತಾ. 17.7.1968ಕ್ಕೆ ಇದೇರಾಗಿದ್ದು ಅದರ ಕಲಂ ೧,೪,೬ನೇ ಎದ್ರಿರಿಗೇನಾದರೂ ಆಕ್ಷೇಪಣೆಯಿರುವ ಸಂಗ್ತಿಯಲ್ಲಿ ಅವನ್ನು ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಕ್ಕದ್ದೆಂಬ ಸಂಗತಿ ಯನ್ನು ಮೂಲಕ ತಿಳಿಸಲಾಗಿಯದೆ.

P.N. Madhava Rao,

Vakil for Decree-holders.

ಉಡುಪಿ, ೨೩.6.1968.

ವಿಷಯ
ಅತ್ಯುತ್ತಮ ಬೀಡಿಗಳು

ಅದರ ಉಪಯೋಗ ಪಡೆಯಬೇಕು.]

ಸಂದರ್ಭ ಸಾಧಕರೂ, ಅದರ ದುರುಪಯೋಗ ಪಡೆಯುವವರೂ ಇದ್ದಾರೆ. ಓರ್ವ ಬಡವಾಯಿ ಏಕಾಕಿಯಾಗಿ ರಸ್ತೆಯಲ್ಲಿ, ನಡು ರಾತ್ರಿ ಸಂಚಾರಿಸುತ್ತಾನೆಂದು ತಿಳಿಯಿರಿ. ಆಗ ಓರ್ವ ದರೋಡೆಕೋರನು ಆತನನ್ನು ಗದರಿಸಿ, ಆತನೊಡನಿದ್ದದನ್ನು ಹಾರಿಸಿ ಕೊಂಡೊಯ್ಯುವುದು ಸಂದರ್ಭದ ದುರುಪಯೋಗವಾಯಿತು. ಇದು ಅನ್ಯಾಯದ ಪರಮಾವಧಿ ಎನಿಸುತ್ತದೆ.

ಬಾಳಲ್ಲಿ ಸಹಸ್ರಾರು ಸಂದರ್ಭಗಳು ನಮಗೆ ದೊರೆಯುತ್ತವೆ. ಪ್ರತಿಯೋರ್ವನ ಸಾಮರ್ಥ್ಯ, ಸಹನೆ, ಸಾಧ್ಯತೆಗೆ ಇದೊಂದು ಸವಾಲು. ಧೈರ್ಯಗೆಡದೆ ಅವನ್ನು ಉಪಯೋಗಿಸುವುದು ಮಾನವ ಧರ್ಮ. ಹಾಗೆ ಮಾಡದೆ ಕೊನೆಗೆ ಸೋತು 'ಹಣೆಬರಹ'ವನ್ನು ಹಳಿಯುವುದು ತಪ್ಪು. ಮುಂಚೆಹೋದ ಕಾರ್ಯಕ್ಕೆ ಚಿಂತಿಸಲೇ ಬೇಕು. ಇದರಿಂದಾಗಿ ಮುಂದೆ ಹಾಗಾಗದಂತೆ ನಮಗೆ ಅನುಭವದ ಬಾರ ದೊರೆಯುತ್ತದೆ ಅಷ್ಟೆ.

ನೀವು—ನಿಮ್ಮ ಆರೋಗ್ಯ

ಹೊಗೆಬತ್ತಿ ಸೇವನೆ ಮತ್ತು ಬಾಯಿಯ ಕೇನ್ಸರ್

ಬರೆದವರು:
(ಡಾ॥ ಸುಂದರ್ ಜೆ. ವಿಶ್ವೇಶ್ವರಾನ್, ಡೈರೆಕ್ಟರ್, ಡೆಂಟಲ್ ಸ್ಟಡೀಸ್ ಮಣಿಪಾಲ)

ಕೇನ್ಸರ್ (ಅರ್ಬುದ) ಸಾವನ್ನು ತರುವ ರೋಗ. ರೋಯಲ್ ಕೋಲೇಜ್ ಆಫ್ ಫಿಸಿಶಿಯನ್ಸ್, ಲಂಡನ್‌ನ ಇತ್ತೀಚಿನ ವರದಿ ಪ್ರಕಾರ ಶ್ವಾಸಕೋಶದ ಅರ್ಬುದದಿಂದ ನರಳುವವರ ಸಂಖ್ಯೆ ಹೆಚ್ಚಿರುತ್ತದೆ. ಸಿಗರೇಟು ಸೇದುವಿಕೆಯು ಹೆಚ್ಚಿದಂತೆ ಈ ರೋಗದಿಂದ ನರಳುವವರ ಸಂಖ್ಯೆಯು ಹೆಚ್ಚಿದೆ. ಅಲ್ಲದೆ ಸಿಗರೇಟು ಸೇವನೆ ಅಕಾಲಿಕ ಮರಣಕ್ಕೆ ಕಾರಣವಾಗಬಹುದು.

ಧೂಮಪಾನ ಮತ್ತು ದೈಹಿಕ ಆರೋಗ್ಯ ಸಂಬಂಧವಾದ ಸಮ್ಮೇಳನವು ಇತ್ತೀಚೆಗೆ ನ್ಯೂಯೋರ್ಕ್‌ನಲ್ಲಿ ಸೇರಿತ್ತು. ಅದರಲ್ಲಿ ಮಾತನಾಡುತ್ತಾ ಸೆನೆಟೊರ್ ಕೆನೆಡಿಯವರು ಸಿಗರೇಟು ಸೇವನೆಯು ದ್ವಿತೀಯ ಜಾಗತಿಕ ಯುದ್ಧ, ಕೊರಿಯಾ ಯುದ್ಧ, ವಿಯೆಟ್‌ನಾಂ ಯುದ್ಧಗಳಿಗಿಂತಲೂ ಹೆಚ್ಚು ಮರಣಗಳಿಗೆ ಪ್ರತಿ ವರ್ಷವೂ ಕಾರಣವಾಗುತ್ತಿದೆ ಎಂದಿರುವರು.

ಈಚಿನ ಪರಿಶೀಲನೆ ಮತ್ತು ವರದಿ ಪ್ರಕಾರ ನಮ್ಮ ದೇಶದಲ್ಲಿ ಬಾಯಿಯ ಸಂಬಂಧವಾದ ಅರ್ಬುದ ರೋಗದ ಸಮಸ್ಯೆಯು ಪಾಶ್ಚಾತ್ಯ ದೇಶಗಳಲ್ಲಿರುವುದಕ್ಕಿಂತಲೂ ಹೆಚ್ಚು ತೀವ್ರವಾಗಿದೆ. ಇದಕ್ಕೆ ವೀಳ್ಯ, ಬೀಡಿ, ಸಿಗರೇಟು, ಅಡಿಕೆಗಳ ಹೆಚ್ಚಿನ ಉಪಯೋಗಗಳು ಕಾರಣವಾಗಿರಬಹುದೆಂದು ತಿಳಿದುಬಂದಿದೆ. ವೀಳ್ಯ ಹಾಕುವುದರಿಂದ ಬಾಯಿಯೊಳಗಿನ ಅರ್ಬುದ ರೋಗಕ್ಕೆ ಕಾರಣವಾಗಬಹುದು. ದಕ್ಷಿಣ ಭಾರತದ ಜನರಲ್ಲಿ ಪರೀಕ್ಷೆ ಹೆಚ್ಚಿಗೆ ಬಂದ ಎಲ್ಲಾ ಅರ್ಬುದ ರೋಗಗಳಲ್ಲಿ ಸೇ. ಶರಷ್ಟು ಬಾಯಿ ಮತ್ತು ದವಡೆಗಳಿಗೆ ಸಂಬಂಧಿಸಿದುದಾಗಿದೆ. ಪಾಶ್ಚಾತ್ಯರಲ್ಲಿ ಇದು ಬರೇ ಸೇ. ೩.೪ರಷ್ಟಿದೆ.

ತಜ್ಞರ ಅಭಿಪ್ರಾಯ

ರಾಸಾಯನಿಕ ಶಾಸ್ತ್ರ ತಜ್ಞ, ನೋಬೆಲ್ ಪಾರಿತೋಷಿಕವನ್ನು ಪಡೆದ ಅಮೇರಿಕದ ಹೆಸರಾಂತ ವಿಜ್ಞಾನಿ ಡಾ॥ ಲೈನಸ್ ಪಾಲಿಂಗ್‌ರ ಅಭಿಪ್ರಾಯದಂತೆ ದಿನಕ್ಕೆ ಒಂದು ಪೇಕೆಟಿನಂತೆ ಸೇವನೆಮಾಡಿದವನ ಆಯುಷ್ಯದಲ್ಲಿ ೮ ವರ್ಷಗಳಷ್ಟು ನಷ್ಟವಾಗುವುದು. ಅಂತೆಯೇ ದಿನಕ್ಕೆ ೨ ಪೇಕೆಟಿನಂತೆ ಎಳೆಯುವುದರಿಂದ ೧೮ ವರ್ಷದಷ್ಟು ಕಡಮೆಯಾಗುವುದು. ಪ್ರೆಂಚ್ ಆರೋಗ್ಯ ತಜ್ಞ ಪ್ರಿಯರೇ ಡೈಲ್ ಈ ಅಭಿಪ್ರಾಯವನ್ನು ಸಮರ್ಥಿಸುತ್ತ ಸಿಗರೇಟು ಸೇವನೆಯಿಂದ ಆಯುರ್ಮಾನವು ಕಡಮೆಯಾಗುವುದೆಂದಿರುವರು.

ಡಾ॥ ಜಸ್ಟಿನ್— ಭಾರತದ ಕೇನ್ಸರ್ ಸೊಸೈಟಿಯ ತಜ್ಞರೂ ಪಾಕಿಸ್ತಾನದ ಅರ್ಬುದ ತಜ್ಞರೂ ಬಾಯಿ, ಮತ್ತು ಶ್ವಾಸಕೋಶಗಳ ಕೇನ್ಸರ್‌ಗಳ ಮುಖ್ಯ ಕಾರಣವು ಹೊಗೆ ಬತ್ತಿ ಸೇವನೆಯೆಂದಿದೆ, ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಅಮೇರಿಕದಲ್ಲಿ ಅರ್ಬುದ ರೋಗದ ತಜ್ಞರಾದ ಡಾ॥ ಎಚ್. ಎಸ್. ಹಡ್ಸನ್‌ರ ಅಭಿಪ್ರಾಯದಂತೆ ಸಿಗರೇಟು ಸೇವನೆಯು ಕಣ್ಣುಗಳ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಅಮೇರಿಕದ ಇಲಿನೈ ವಿಶ್ವವಿದ್ಯಾಲಯದಲ್ಲಿ ಅವರು ನಡೆಸಿದ ಸಂಶೋಧನೆಯಿಂದ ಸಿಗರೇಟು ಸೇವನೆಯನ್ನಾರಂಭಿಸಿದ ಅನಂತರ ಸ್ತ್ರೀಯರಲ್ಲಿ ಬಾಯಿಯ ಅರ್ಬುದ ಗಂಡಸರಲ್ಲಿರುವಂತೆ ಹೆಚ್ಚಿದ ದು ಕಂಡು ಬಂದಿದೆ.

ಅರ್ಬುದ ರೋಗವು ಜನರ ಪ್ರಬಲ ಶತ್ರು. ಹೊಗೆ ಸೊಪ್ಪಿನ ಉತ್ಪಾದಕರೂ ಸಿಗರೇಟಿನ ತಯಾರಕರೂ ಫಿಲ್‌ಟರ್ ತಯಿಸಿರುವ ಸಿಗರೇಟುಗಳೆಂದು ಜಾಹೀರಾತು ಕೊಡುತ್ತಾ ಜನರ ಆರೋಗ್ಯದೊಂದಿಗೆ ಅಪಾಯಕರವಾದ ರೀತಿಯಲ್ಲಿ ಆಟವಾಡುತ್ತಾರೆ ಫಿಲ್‌ಟರ್‌ನ ಪ್ರಯೋಜನಗಳ ಪ್ರತಿಪಾದನೆಯು ಜಾಹೀರಾತಿಗಾಗಿ ಮಾಡಿದ ಒಂದು ಆಟ.

ಅರ್ಬುದ ರೋಗದ ಸರಿಯಾದ ಕಾರಣ ಇನ್ನೂ ತಿಳಿದಿಲ್ಲ. ಆದರೆ ದೀರ್ಘಕಾಲದ ಅಭ್ಯಾಸಗಳಿಂದ ಉಂಟಾಗುವ ಪೀಡನೆಯು ಅರ್ಬುದ ಉಂಟಾಗಲು ಇರುವ ಕಾರಣಗಳಲ್ಲಿ ಒಂದು ಎಂಬುದು ಪ್ರಸಿದ್ಧವಾದ. ಸಿಗರೇಟು ಸೇವನೆಯು ಬಾಯಿ ಮತ್ತು ಶ್ವಾಸಕೋಶಗಳ ಮೇಲೆ ಬೀರುವ ಪರಿಣಾಮಗಳಿಂದಾಗಿ ಅರ್ಬುದಕ್ಕೆ ಕಾರಣವಾಗಬಹುದು.

ಹೊಗೆಬತ್ತಿ ಸೇವಿಸುವವರಿಗೆ ನನ್ನ ಸೂಚನೆ ಸ್ಪಷ್ಟ. ಮತ್ತು ಖಂಡತಃ ಅವಾಯದುಸು - ಅಭ್ಯಾಸವನ್ನು ನಾಳೆಗೆ ಎಂದು ಮುಂದುವರಿಸದೆ ಕೂಡಲೇ ನಿಲ್ಲಿಸುವುದು. ಹೊಗೆಸೊಪ್ಪಿನ ಉಪಯೋಗವನ್ನು ಸ್ವಲ್ಪ ಸ್ವಲ್ಪವೇ ಕಡಿಮೆ ಮಾಡಿ ಅಭ್ಯಾಸವನ್ನು ಕಡೆಗೆ ತಿಲ್ಲಿಸಬಹುದು ಎಂಬುದು ತಪ್ಪು ತಿಳುವಳಿಕೆ. ಅಲ್ಲದೆ ಅಸಾಧ್ಯವಾದ ಕೆಲವು ಅಭ್ಯಾಸವು ಹಾನಿಕಾರಕವೆಂದಾದುದರಿಂದ ಅದು ಕೂಡಲೇ ಶಾಶ್ವತವಾಗಿ ನಿಲ್ಲಬೇಕು. ಒಮ್ಮೆಗೆ ನಿಲ್ಲಿಸಿದ ಬಳಿಕ ಪುನಾರಂಭ ಮಾಡಬಾರದು.

ಜೀವನವು ದೀರ್ಘವಲ್ಲ. ಅದು ಇನ್ನೂ ಕುಂಠಿತಗೊಳ್ಳಬಾರದು ಹೊಗೆಬತ್ತಿ ಸೇವನೆಯು ಮುಖ್ಯ ಕಾರಣವಾಗಬಹುದು. ಆದುದರಿಂದ ಯಾವುದೇ ನೆವದಿಂದಲೂ ಹೊಗೆಸೊಪ್ಪಿನ ಸೇವನೆಯನ್ನು ನಿಷೇಧಿಸಬೇಕಾದುದು ಅವಾಯಕರ.

ಸಾರ್ವಜನಿಕರಿಗೆ ಅರ್ಬುದ ರೋಗದ ಪ್ರಾರಂಭಿಕ ಸ್ಥಿತಿಯ ಲಕ್ಷಣಗಳು ತಿಳಿದಿರಬೇಕಾದುದು ಅವಶ್ಯ. ಅಲ್ಲದೆ ತಜ್ಞರಿಂದ ಅವಶ್ಯಕವಾದ ಸಲಹೆಗಳನ್ನು ಕೇಳುವುದೂ ಅಗತ್ಯ. ಪ್ರಾರಂಭಿಕ ಸ್ಥಿತಿಯಲ್ಲಿ ಕಂಡು ಹಿಡಿಯಲ್ಪಟ್ಟಲ್ಲಿ ಅರ್ಬುದವನ್ನು ಸಂಪೂರ್ಣ ಗುಣಪಡಿಸಬಹುದು.

ಅದರ ಐದು ಮುಖ್ಯ ಲಕ್ಷಣಗಳೇನೆಂದರೆ (೧) ದೀರ್ಘ ಕಾಲದಿಂದಿರುವ ಪಿಡನೆ. ೨) ಎರಡು ವಾರಗಳಲ್ಲಿ ಸಂಪೂರ್ಣ ಗುಣವಾಗದಿರುವ ವ್ರಣ ೩) ಅಸ್ಪಷ್ಟ ಸ್ಥಿತಿಯಲ್ಲಿ ಹಿ.ಕಾಲದಿಂದಲೂ ಇದ್ದ ಬಾಯಿ ಹಕ್ಕನೆ ಬೆಳೆದು ವೃದ್ಧಿಯಾಗಲು ಆರಂಭವಾಗುವುದು. ೪) ಅತಿರೇಕ ರಕ್ತಸ್ರಾವ ೫) ಭಾರ ಕಡಮೆಯಾಗುವುದು.

ನನ್ನ ಅನುಭವದಲ್ಲಿ ಪ್ರಾರಂಭಿಕ ಸ್ಥಿತಿಯಲ್ಲಿ ಅರ್ಬುದ ರೋಗವನ್ನು ಕಿತ್ತೆಸೆಯುವುದು ಬಹಳ ಅವಾಯ, ಬಹಳ ಹೆಚ್ಚು ಅರ್ಬುದ ರೋಗ ಪೀಡಿತರಾದ ಇವನ್ನು ಫಲಿತಾಂಶವುದರಿಂದ ಅಧಿ ಬಹಳ, ಸಮಯ, ಸೂಕ್ಷ್ಮ, ಪ್ರಾಣ ಸಂಕಟಗಳಿಗೆ ಪರಿಯಾಗಿಬೇಕಾಯಿತು.

ಆಹಾರ ವಿಭಾಗದಲ್ಲಿ
ಹೊಸ ಪ್ರಯೋಗ ಮಾಡಲು ಕರೆ

ಮಂಗಳೂರು, ಜೂನ್ ೨೦—ಆಹಾರ ವಿಭಾಗದಲ್ಲಿ ಸಾಮಾನ್ಯ ಜನತೆಯ ಜೀವನದ ಮೇಲೆ ಪರಿಣಾಮಕಾರಿಯಾಗುವಂತೆ ಯಾವುದೇ ತರದ ಹೊಸ ಸ್ಫೂರ್ತಿಗಳನ್ನು ತಾನು ನಡೆಸುವುದಿಲ್ಲವೆಂದು ಆಹಾರ ಸಚಿವ ಶ್ರೀ ದಿ. ವಿರಲಿದಾಸ ಶೆಟ್ಟರು ಹೇಳಿದರು. ಅದರ ಬಿಟ್ಟುಗಡ್ಡೆ ಅತ್ತು ಇತರ ಗಡ್ಡೆಗಳಿಗೆ ಒಂದೇ ರೀತಿಯ ಲೆವಿ ಸಂಗ್ರಹಣೆಯ ಬಗ್ಗೆ ತಾನು ಪುನರ್ವಿಮರ್ಶಿಸುತ್ತಿದ್ದೇನೆ ಎಂದು ನುಡಿದರು. ಬಡ ಜನರನ್ನು ಕಷ್ಟದಿಂದ ತಪ್ಪಿಸುವುದೇ ಅವರ ಉದ್ದೇಶವೆಂದರು ರಂಬ್ಯಾದ ಯಾವುದೇ ಆಹಾರ ಧೋರಣೆಯನ್ನು ಕೈಗೊಳ್ಳುವಾಗ ಕೇಂದ್ರದೊಡನೆ ಅನುಮತಿ ಪಡೆಯಬೇಕಾಗಿದೆ. ಯಾವುದೇಕ್ಕೂ ಸ್ವಾತಂತ್ರ್ಯವಿಲ್ಲವೆಂದರು. ತಾನು ಭವಿಷ್ಯದಲ್ಲಿ ಒಳ್ಳೆಯದನ್ನೇ ಜನತೆಗೆ ಮಾಡುವೆನೆಂದರು.

ಆರಂಭದಲ್ಲಿ ಪ್ರೆಸ್ ಕ್ಲಬ್ ಅಧ್ಯಕ್ಷ ಶ್ರೀ ಯು. ನರಸಿಂಹ ರಾವ್‌ರವರು ಸ್ವಾಗತಿಸಿದ್ದು ಕೊನೆಯಲ್ಲಿ ಶ್ರೀ ಗೋಪಾಲಕೃಷ್ಣರವರು ಧನ್ಯವಾದವರ್ಪಿಸಿದರು.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ.

ಸಂಭಾಷಣೆಯಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಬೆಲೆ: ರೂ. 2—00.

ಪುಸ್ತಕದ ಬೆಲೆಯೊಂದಿಗೆ 50 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನನಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ಸ.)

ಪಂಪ ರಾಮಾಯಣದ ಕಥೆ:- ಸಾರ ಸಂಗ್ರಾಹಕರು: ಶ್ರೀ ಎಡನಾಡು ಗೋಪಾಲಕೃಷ್ಣ ಭಟ್ಟ; ಪ್ರಕಾಶನ: ಯಂಗಪುರುಷ ಪ್ರಕಟಣಾಲಯ, ಶಿವಮೊಗ್ಗೆ. ದ. ಕ.; ಪುಟಗಳು: ೧೪೦; ಬೆಲೆ: ರೂ. ೨-೫೦.

ಅಭಿನವ ಪಂಪನೆಂದು ಹೆಸರಾಂತ ಹನ್ನೊಂದನೇ ಶತಮಾನದ ಕವಿ ನಾಗಚಂದ್ರನ 'ಶ್ರೀರಾಮಚಂದ್ರನ ಚರಿತ ಪುರಾಣ'ವು 'ಪಂಪರಾಮಾಯಣ'ವೆಂಬ ಹೆಸರು ಪಡೆಯಿತು. ಆದಿ ಕವಿ ಪಂಪನು ಆದಿ ಪುರಾಣದಲ್ಲಿ ಅಧ್ಯಾತ್ಮವನ್ನೂ ಭಾರತ (ವಿಕ್ರಮಾರ್ಜುನ ವಿಜಯ)ದಲ್ಲಿ ಲಾಕಿಕವನ್ನೂ ಬೆಳಗಿದರೆ ಅಭಿನವ ಪಂಪನು ಏಕೈಕ ಕೃತಿಯಲ್ಲೇ ಎರಡನ್ನೂ ಬೆಗಿದನೆನ್ನಬೇಕು.

ಮತದಲ್ಲಿ ಜೈನನಾದ ನಾಗಚಂದ್ರನು ತನ್ನ ಮತಾನುಸಾರವಾಗಿ ಈ ರಾಮ ಚರಿತೆಯನ್ನು ಆ ಕಾಲದ ಪದ್ಧತಿಯಂತೆ ಚಂಪೂ ಕಾವ್ಯರೂಪದಲ್ಲಿ ಬರೆದಿದ್ದಾನೆ. ವಿಮಲ ಸೂರಿಯ 'ಪದ್ಮ ಚರಿತಂ' (ಪಉಮ ಚರಿಯ ಮತ್ತು ರವಿ ಶೇಣನ 'ಮಹಾಪುರಾಣ'ಗಳಿಂದ ಈ ಸ್ಫೂರ್ತಿಯನ್ನೂ ಮಾತೃಕೆಯನ್ನೂ ಪಡೆದಂತೆ ಭಾಸವಾಗುತ್ತದೆ. ಸರಳ ನಿರೂಪಣೆ, ಸರಸ ಸುಂದರ ವರ್ಣನೆ, ಭಾವೋತ್ಕಾದಕ ಶೈಲಿಗಳಿಗೆ ನಾಗಚಂದ್ರನು ತ್ರಿವೇಣಿ ಸಂಗಮ. ರಾಮನ ಕಥೆಯನ್ನು ವಾಲ್ಮೀಕಿ ರಾಮಾಯಣಕ್ಕಿಂತ ತುಸು ಭಿನ್ನವಾಗಿ ಚಿತ್ರಿತವಾದ 'ಪುರಾಣ ತಿಲಕ'ವಿದು. ಇಲ್ಲಿನ ರಾವಣನು "ದುರಂತ ರಾವಣ"ನ ಚಿತ್ರ. ರಾಮ ಅಹಿಂಸಾ ವ್ರತಸ್ಥ. ಇದಕ್ಕಾಗಿ ಸೂಕ್ತ ಬದಲಾವಣೆ ಜೈನ ರಾಮಾಯಣಗಳಲ್ಲಿ ಕಾಣುವುದು ಸಹಜ.

ಮಹಾ ಕಾವ್ಯಗಳ ಅಧ್ಯಯನ—ಅಧ್ಯಾಪನಗಳು ದುರ್ಲಭವಾಗುತ್ತಿರುವ ಈಗಿನ ಸಮಯದಲ್ಲಿ ಆ ಕಾವ್ಯಗಳ ಪರಿಚಯ ರಾಸ್ವಾದಕ್ಕರಲ್ಲಿ ಅಧ್ಯಯನಕ್ಕೆ ಪ್ರೇರಕ ಶಕ್ತಿಯಾಗಬಹುದು. ಶ್ರೀ ಗೋಪಾಲಕೃಷ್ಣ ಭಟ್ಟರು ಇಂತಹ ಶಕ್ತಿಯ ಸೆಲೆಯೊಂದನ್ನು ಕನ್ನಡಿಗರ ಮುಂದಿಟ್ಟಿದ್ದಾರೆ. ಅತ್ಯಂತ ಸುಂದರ ಮತ್ತು ಸರಳವಾದ ಹೊಸಗನ್ನಡ ಗದ್ಯರೂಪದಲ್ಲಿ ಈ ಪಂಪ ರಾಮಾಯಣ ಸಾರವನ್ನು ಕಡೆದಿದ್ದಾರೆ. ಮೂಲಗ್ರಂಥದಲ್ಲಿನ ಸರಳ ಅಲಂಕಾರಗಳನ್ನೂ ವರ್ಣನೆಗಳನ್ನೂ ಲೋಕೋಕ್ತಿಗಳನ್ನೂ ಸಂಗ್ರಹದಲ್ಲಿ ಉಳಿಸಿಕೊಂಡು ಮೂಲಕ್ಕೆ ಬಹಳ ಹತ್ತಿರ ಬರುವಂತೆ ಎಚ್ಚರಿಕೆ ವಹಿಸಿದ್ದಾರೆ. 'ಬರ ಸೈನ್ಯವು ಗಾಳಿಗೆ ಎದುರು ನಡೆವ ನೋಡದಂತೆ ರಾಮಲಕ್ಷ್ಮಣರನ್ನು ಅರಸುತ್ತ ಮುನ್ನಡೆಯಿತು'—ಸರಳ ಅಲಂಕಾರವನ್ನೂ ಮಾರ್ಮಿಕ ಅರ್ಥವನ್ನೂ ಇಲ್ಲಿ ಗುರುತಿಸಬಹುದು. "ಪರಾಂಗನಾ ವಿರತಿ". "ಕಾವರೇ ಕಣಿಗೊಂಡರು" ಮೊದಲಾದ ಸರಳ ಲೋಕೋಕ್ತಿಗಳನ್ನು ಸಂಗ್ರಹದಲ್ಲೂ ನೋಡಬಹುದು.

ಒಟ್ಟಿನಲ್ಲಿ 'ಪಂಪರಾಮಾಯಣದ ಕಥೆ' ಯೊಂದು ಉತ್ತಮ ಕಾಣಿಕೆ. ಬೇವಸ, ಕೃಶಾನು, ಆನರ್ಘ್ಯ, ಧ್ವಜಿನಿ, ಮೊದಲಾದ ಅನೇಕ ಪದಗಳಿಗೆ ಸರಳ ಅರ್ಥವನ್ನೂ ಕೊಡುವ ಪ್ರಾಶಿಷ್ಟ್ಯವೂ ಕೂಡಿರುತ್ತಿದ್ದರೆ ಮತ್ತಷ್ಟು ಜನ ಸಾಮಾನ್ಯರಿಗೆ ಮತ್ತಷ್ಟು ಪ್ರಯೋಜನಕಾರಿಯಾಗುತ್ತಿತ್ತು.

ಫಲ ಜ್ಯೋತಿಷ್ಯಸಾರ ಸಂಗ್ರಹ

ಲೇಖಕರು: — ಶ್ರೀ ಕೆ. ವಿ. ಕೃಷ್ಣಪ್ಪ
ಪ್ರಕಾಶಕರು: ಜ್ಯೋತಿಷ್ಯ ಸಂಶೋಧನಾ ಕೇಂದ್ರ, ಬೆಂಗಳೂರು-೧೯; ಪುಟಗಳ: ೫೬; ಬೆಲೆ: ರೂ. ೧-೦೦.

ಹೆಸರೇ ಸೂಚಿಸುವಂತೆ ಇದು ಜ್ಯೋತಿಷ್ಯದ ಫಲ ವಿಭಾಗಕ್ಕೆ ಸಂಬಂಧಪಟ್ಟ ಗ್ರಂಥ. ಜಾತಕನು ಹುಟ್ಟುವಾಗ ಗ್ರಹಗಳಿರುವ ಸ್ಥಿತಿ ಮತ್ತು ಗೋಚರ ವೇಳೆ ಗ್ರಹಗಳಿರುವ ರಾಶಿಗಳ ವೇಳೆ ಆತನ ಭವಿಷ್ಯವನ್ನು ಹೇಳುತ್ತಾರಾದರೂ ಈ ಜ್ಯೋತಿಷ್ಯ ಶಾಸ್ತ್ರದಲ್ಲೇ ಕೆಲವೊಂದು ಭಿನ್ನಮತಗಳಿವೆ. ಇವನ್ನು ಅನುಭವಶಾಲಿ ಜ್ಯೋತಿಷಿಗಳು ತಮ್ಮ ಅನುಭವದಿಂದ ಬಗೆಹರಿಸಬೇಕು. ಪ್ರಸಿದ್ಧ ಜ್ಯೋತಿಷಿಗರೂ ಜ್ಯೋತಿಷ ಗ್ರಂಥಕರ್ತರೂ ಆದ ಶ್ರೀ ಕೃಷ್ಣಪ್ಪನವರು 'ಫಲ ಜ್ಯೋತಿಷ್ಯಸಾರ ಸಂಗ್ರಹ'ದಲ್ಲಿ ಪ್ರಾಚೀನ ಗ್ರಂಥ ನಿರ್ದೇಶಿತ ಫಲವನ್ನೊಡನೆ ತನ್ನ ಅನುಭವದ ಮೂಸೆಯನ್ನೂ ಮುಂದಿಟ್ಟಿದ್ದಾರೆ. ಇದು ಜ್ಯೋತಿಷಿಗಳಿಗೂ ಜ್ಯೋತಿಷ್ಯ ಶಾಸ್ತ್ರಕ್ಕೂ ಒಂದು ಉತ್ತಮ ಕೊಡುಗೆ.

—ಗೋರಾ.

ಮಾನವನ ಕೈಯಲ್ಲಿ ಉಳಿಯ ಬೇಕಾದರೆ ಸ್ವಾತಂತ್ರ್ಯವೂ ಮರ್ಯಾದಿತವಾಗಿರಬೇಕು.

ಲೋಕಸೇವಾ ವೃಂದದಲ್ಲಿ ಆಹಾರ ಸಚಿವರು

ಅಳಿಕೆ — "ನನಗೆ ಇನ್ನೊಂದು ಸಂಭ್ರಮದ ಸ್ವಾಗತವನ್ನೇನೂ ನೀವು ಮಾಡಬೇಕಾಗಿರಲಿಲ್ಲ. ನಾನು ಈಗಲೂ ತಮ್ಮ ಮೊದಲಿನ ವಿಠಲದಾಸ್ ಶೆಟ್ಟಿಯೇ ಇದ್ದೇನೆ. ಮಂತ್ರಿಯಾದವನಿಗೆ ಇಂತಹ ಸ್ವಾಗತವೇನೋ ದೊರಕಬಹುದೆ. ಅದರೆ ನಿಮ್ಮೆಲ್ಲರ ಪ್ರೇಮವು ಪೂರ್ಣವಾಗಿ ದೊರೆಯುತ್ತದೆ ಎಂಬ ಭರವಸೆಯಿಲ್ಲ. ನನಗೆ ಬೇಕಾದುದು ತಮ್ಮ ಹಾರ್ದಿಕ ಪ್ರೇಮ.

ನಾನು ಮಂತ್ರಿಯಾದೆನಾದರೆ ಈ ಪ್ರದೇಶಕ್ಕೆ ಹೆಚ್ಚಿನ ಲಾಭವಾದೀತೆಂಬ ಆಶೆಯನ್ನು ನೀವೇನೋ ಇಟ್ಟುಕೊಂಡಿರಬಹುದು. ಆದರೆ ನಾನು ಈ ಒಂದು ಪ್ರದೇಶಕ್ಕೆ ಮಾತ್ರವೇ ವಿಶೇಷವಾಗಿ ವಿನಸ್ತ ಮಾಡಲಾಗುವುದಿಲ್ಲ. ಇಡೀ ದೇಶದ ಹಾಗೂ ಸಮಸ್ತ ರಾಷ್ಟ್ರದ ಹಿತದೃಷ್ಟಿಯನ್ನು ಮುಂದಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲವಾದರೆ ನನ್ನನ್ನು ಈ ಸ್ಥಾನಕ್ಕೆ ನೀವು ಏರಿಸಿದಿರಿ ಕೆಳಗಿಳಿಸಿದ್ದಕ್ಕೆ ನಾನು ದ್ರೋಹ ಬಗೆದಂತಾದೀತು.

ಹಿಂದೆ ಸ್ವಾತಂತ್ರ್ಯ ಚಳುವಳಿಗೆ ಭುಗುಲಿಕ್ಕಿದಾಗ ಮುಂದೆ ಸ್ವಾತಂತ್ರ್ಯ ಬಂದ ನಂತರ ಮಂತ್ರಿಯಾಗಬಹುದೆಂಬ ಉದ್ದೇಶ ನನ್ನದಾಗಿರಲಿಲ್ಲ. ಆಗ ಸ್ವಾತಂತ್ರ್ಯವನ್ನು ಪಡೆಯುವುದೇ ನಮ್ಮ ಮುಖ್ಯ ಗುರಿಯಾಗಿತ್ತು. ಯಾವುದೇ ರೀತಿಯ ಶಿಕ್ಷೆಯನ್ನು ಅನುಭವಿಸಲು ನಾವು ಆಗ ಸಿದ್ಧರಾಗಿಯೇ ಇದ್ದೆವು. ಜಾತಿಮತ ಭೇದವಿಲ್ಲದ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೆವು. ಇಂದು ನಾವು ಸ್ವತಂತ್ರರಾಗಿದ್ದೇವೆ. ಆದರೆ ಇಷ್ಟು ಬೇಗ ನಾವು ಸ್ವತಂತ್ರರಾಗಬಹುದೆಂಬ ಕಲ್ಪನೆಯೇ ನನಗಿರಲಿಲ್ಲ. ಮೈಸೂರು ರಾಜ್ಯದ ನೂತನ ಮಂತ್ರಿಮಂಡಲದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆಯ ಸ್ಟೇಟ್ ಸಚಿವರಾದ ಶ್ರೀ ಎಂ. ವಿಠಲದಾಸ ಶೆಟ್ಟರು ಅಳಿಕೆಯ ಲೋಕಸೇವಾವೃಂದದಲ್ಲಿ ಮಾತನಾಡುತ್ತಾ ಈ ರೀತಿಯಾಗಿ ಹೇಳಿದರು. ಅವರು ಮುಂದುವರಿಸುತ್ತಾ, 'ಪ್ರಜಾಪ್ರಭುತ್ವದ ಹಡಗೋಟಿಗೆ ಬಳಪಟ್ಟು ಮಂತ್ರಿಗಳು ಕಲಸ ನಿರ್ವಹಿಸಬೇಕೆಂದರು. ನನ್ನನ್ನು ಈ ಸ್ಥಾನಕ್ಕೆ ಬರುವಂತೆ ಮಾಡಿದ ನೀವೆ ನಿಮ್ಮ ಪೂರ್ಣ ಸಹಕಾರವನ್ನು ನನಗೀಯಬೇಕು. ಹಾಗಾದರೆ ಮಾತ್ರ ನನ್ನ ಕೆಲಸಗಳು ಸುಸೂತ್ರವಾಗಿ ನಡೆದೀತು" ಎಂಬುದಾಗಿ ಲೋಕಸೇವಾವೃಂದ ಹಾಗೂ ಅಳಿಕೆ ಪಂಚಾಯತುಗಳು ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾನಡಿದರು. ಮಾನ್ಯ ಸಚಿವರು ತಾ. ೧೨.೬ ಬುಧವಾರ ಲೋಕಸೇವಾವೃಂದಕ್ಕೆ ಆಗಮಿಸಿದಾಗ, ಲೋಕಸೇವಾ ಪ್ರೌಢಶಾಲೆಯ ವಿದ್ಯಾರ್ಥಿಗಳು ಅವರಿಗೆ ಗೌರವರ್ಪಣೆಯನ್ನು ನೀಡಿ ಸ್ವಾಗತಿಸಿದರು. ನಂತರ ಲೋಕಸೇವಾ ಪ್ರೌಢಶಾಲೆ ಸೇರಿದಂತೆ ಶಾಲಾ ಸಭಾಭವನದಲ್ಲಿ ನಡೆದ ಸಭೆಯ ಕಾರ್ಯಕ್ರಮದಲ್ಲಿ ಶ್ರೀ ಲೋಕಸೇವಾ ವೃಂದದ ಕೋಶಾಧಿಕಾರಿ ಶ್ರೀ ಮಾದಶೆಟ್ಟಿ ಈಶ್ವರ ಭಟ್ಟರು ಮಾನ್ಯ ಸಚಿವರಾಗೂ, ಬಂಟ್ವಾಳ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷರಾಗಿ ಮೈಸೂರು ರಾಜ್ಯದ ಸಭಾ ಸದಸ್ಯ ಶ್ರೀಯುತ ಲಿಂಗಾಯತಕ್ಕೆ ರೈಗಳಿಗೂ, ಇತರ ಅತಿಥಿಗಳಿಗೂ ಸ್ವಾಗತವನ್ನು ಬಯಸಿದರು. ಲೋಕಸೇವಾ ವೃಂದದ ಅಧ್ಯಕ್ಷ ಶ್ರೀ ನಾರಾಯಣ ಭಟ್ಟರು ಮಾನ್ಯ ಸಚಿವರಿಗೆ ಮಾನಪತ್ರ ಸಮರ್ಪಣೆ ಮಾಡಿದರು. ಅಳಿಕೆ ಪಂಚಾಯತಿನ ಉಪಾಧ್ಯಕ್ಷ ಶ್ರೀ ವಿ. ಶಂಕರನಾರಾಯಣ ಭಟ್ಟರು ಸಚಿವರಿಗೆ ಮಾನಪತ್ರ ಸಮರ್ಪಿಸಿದರು. ನಂತರ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಬಿ. ನಾರಾಯಣ ರಾಯರುಂದ ಸಂದೇಶವಾಚನ ನಡೆಯಿತು. ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಶ್ರೀಯುತ ಲಿಂಗಾಯತಕ್ಕೆ ರೈಗಳು ಮಾತನಾಡುತ್ತಾ "ಶ್ರೀ ವಿಠಲದಾಸ ಶೆಟ್ಟರು ಸ್ವತಃ ರೈತರು. ಅವರ ಕಷ್ಟಕಾರ್ಪಣ್ಯಗಳನ್ನು ಬಲ್ಲವರು. ಅವರಿಗೆ ಮಂತ್ರಿಯಾಗುವ ಅವಕಾಶಗಳಾಗಿ ಬಂದುದು ನಮ್ಮ ಭಾಗ್ಯ. ಅವರು ನಮ್ಮೆಲ್ಲರ ಕೇಳಿಕೆಗಳನ್ನು ವಿಧಾನ ಸಭೆಯಲ್ಲಿ ಮಂಡಿಸಿ, ಅ ಬಗ್ಗೆ ಮಾನ ಪೂರ್ವಕವಾಗಿ ದುಡಿಯುವರೆನ್ನುವುದರಲ್ಲಿ ಅನುಮಾನವಿಲ್ಲ" ಎಂದು ನುಡಿದರು. ಶ್ರೀಯುತ ಗಂಗಾಧರ ಭಟ್ಟರಿಂದ ವಂದನಾರ್ಪಣೆ ನಡೆಯಿತು.

ಶಾಲಾ ನೂತನ ಕಟ್ಟಡದ ಉದ್ಘಾಟನೆ

ಸುರತ್ಕಲ್—ಕೃಷ್ಣಪುರ, ತಾರೀಖು 15.6.63ರಂದು ಕೃಷ್ಣಪುರ ಸರಕಾರಿ ಪ್ರಾಥಮಿಕಶಾಲಾಕಟ್ಟಡದ ಉದ್ಘಾಟನೆಯನ್ನು ಶ್ರೀಯುತ ಎಂ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಡಾ|| ಕೆ. ಆರ್. ಶೆಟ್ಟರು ನೆರವೇರಿಸಿದರು.

ಶ್ರೀ ಎಸ್. ಆರ್. ಪೆಜತ್ತಾಯರ ಶಾಲೆಯಕಟ್ಟಡವನ್ನು ಸಕಾಲದಲ್ಲಿ ರಚಿಸಿಕೊಟ್ಟ ಶ್ರೀ ವಿಠಲ ಪ್ರಭು, ಶಾಲಾಭಿವೃದ್ಧಿ ಕಾರ್ಯದಲ್ಲಿ ನೆರವಾದ ಪಂಚಾಯತ್ ಅಧ್ಯಕ್ಷ ಶ್ರೀಯುತ ವಾಸುದೇವ ಭಟ್ಟ ಹಾಗೂ ಶ್ರೀ ಯಂ. ಇದಿನಬ್ಬ—ಇವರೆಲ್ಲರನ್ನೂ ಸ್ಮರಿಸಿ, ನೆರೆದವರಿಗೆ ಸ್ವಾಗತಬಯಸಿದರು. ಶ್ರೀಯುತ ಕೃಷ್ಣಹೆಬ್ಬಾರರು ವಂದನೆಯನ್ನು ಹೇಳಿದ ಬಳಿಕ ಶ್ರೀ ಡಾ|| ಕೆ. ಆರ್. ಶೆಟ್ಟರು ಮಾತನಾಡುತ್ತಾ ಈ ಹಳ್ಳಿಯಲ್ಲಿ ಇಂತಹ ಶಾಲೆಯನ್ನು ತೆರೆದುದು ಶ್ಲಾಘನೀಯ. ಹಳ್ಳಿಯವರು ಇಂತಹ ವಿಚಾರದಲ್ಲಿ ಮುಂದಾದಲ್ಲಿ ನಮ್ಮ ಹಳ್ಳಿಗಳ ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ-ಎಂದರು. ಅಧ್ಯಕ್ಷ ಶ್ರೀಯುತ ವಾಸುದೇವರಾಯ ಮಾತನಾಡುತ್ತಾ—"ನನಗೆ ಈ ಶಾಲೆಯ ಮಾತಾಪಿತೃವೇ ಒಂದು ರೀತಿಯ ಸ್ಫೂರ್ತಿಯನ್ನು ತಂದಿದೆ. ಶಾಲೆಗೆಯ ಸರಕಾರವು ಎಷ್ಟು ಎತ್ತ ಸ್ಥಳವನ್ನು ಬದಗಿಸಿದ್ದರೂ ಮುಖ್ಯವಾದ ವಿಷಯ, ಮುಂದುವರೆಗಳೆಲ್ಲೇ ಇನ್ನು ಅಭಿವೃದ್ಧಿಗೊಂಡ ಈ ಶಾಲೆಗೆ ಒಳ್ಳೆಯ ಭವಿಷ್ಯವಿದೆ; ಇದು ಬೇಗದಲ್ಲಿಯೆ ಸುಂದರ ಎಲಿಮೆಂಟರಿ ಶಾಲೆಯಾಗಿ ಅಭಿವೃದ್ಧಿಹೊಂದುವಂತಾಗಲಿ" ಎಂದು ಹೇಳಿ ಹರಸಿದರು. ವಂದನಾರ್ಪಣೆಯೊಡನೆ ಬಳಿಕ ಕಾರ್ಯಕ್ರಮವು ಮುಕ್ತಾಯವಾಯಿತು.

ಮತ ಬಲ್ಲವಗೆ ಯಾವದು ನ ಡಿಸಂ
ತ.ಸರ್ವಜ್ಞ

ಉಬ್ಬದ ಸುಡಿಯು ಹುಬ್ಬದ
ಭೂಜನವಲ್ಲ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕೃಷಿ ದೃಷ್ಟಿಗೆ ಅರ್ಹರು

ಪೆನ್‌ಶನ್ ಇಲ್ಲದ ಅಧ್ಯಾಪಕರು

೧೯೫೬ರಿಂದ ಸರಕಾರಿ, ಸ್ಥಳೀಯ ಸಂಸ್ಥೆ, ಖಾಸಗಿ ಶಾಲೆಗಳ ಅಧ್ಯಾಪಕರಿಗೆ ನಿವೃತ್ತಿ ವೇತನವನ್ನು ಗೊತ್ತುಪಡಿಸಿದ ಪ್ರಮಾಣದಲ್ಲಿ ಮದ್ರಾಸು ಸರಕಾರ ಕೊಡಮಾಡಿತ್ತು. ನಮ್ಮ ಜಿಲ್ಲೆಯು ರಾಜ್ಯಪುನರ್ಘಟನಾ ನಂತರ ಕರ್ನಾಟಕದಲ್ಲಿ ಸೇರಿದ ಬಳಿಕ ರಾಜ್ಯ ಸರಕಾರವು ಈ ಸೌಕರ್ಯವನ್ನು ಮುಂದುವರಿಸಿತು. ಅಧ್ಯಾಪಕರ ದಯನೀಯ ಪರಿಸ್ಥಿತಿಯಲ್ಲಿ ಈ ಸೌಲಭ್ಯವೊಂದು ಸಹಾನುಭೂತಿಯ ಸಂಕೇತ ಮಾತ್ರ.

ರಾಜ್ಯ ಪುನರ್ಘಟನಾ ನಂತರ ರಾಜ್ಯ ಸರಕಾರವು ಹಲವು ಬಾರಿ ತನ್ನ ನೌಕರರ ವೇತನವನ್ನು ತುಟ್ಟಿಭತ್ತೆಯನ್ನು ಪರಿಷ್ಕರಿಸಿದೆ. ಈ ಕಾರಣದಿಂದಾಗಿ ಈ ದಶಕದಲ್ಲಿ ನಿವೃತ್ತರಾದವರು ಸಾಮಾನ್ಯವಾಗಿ ತಮ್ಮ ಪರ್ಯಂತ ವೇತನದ ಪ್ರಮಾಣದಲ್ಲಿ ನಿವೃತ್ತಿ ವೇತನ ಪಡೆಯುತಿದ್ದಾರೆ. ಆದರೆ, ಅತ್ಯಲ್ಪ ವೇತನ ಮಟ್ಟದಲ್ಲೇ ದುಡಿದು ೧೯೫೬ಕ್ಕೆ ಮೊದಲೇ ನಿವೃತ್ತಿ ಹೊಂದಿದವರು ನಿವೃತ್ತಿವೇತನವನ್ನೂ ಪಡೆಯುತ್ತಿಲ್ಲ. ಇದು ಸಹಾನುಭೂತಿಯ ಪ್ರತೀಕವೆನ್ನುವಂತಿಲ್ಲ.

ಅಂದು ನಿವೃತ್ತಿ ವೇತನ ಯೋಜನೆಯು ಅಂತರ್ಗತರಾಗದವರ ಸಂಖ್ಯೆಯು ಕಡಿಮೆ; ಕೆಲವರಂತೂ ಈ ಸುದೀರ್ಘಾವಧಿಯಲ್ಲಿ ಶಾಶ್ವತ ಲೋಕ ಸಂಪಾದಿಸಿದ್ದಾರೆ. ಅವರಿಂದ ಬದುಕುಳಿದಿರುವ ಕೆಲವೇ ಜನ ನಿವೃತ್ತ ಅಧ್ಯಾಪಕರಿಗಾದರೂ ನಿವೃತ್ತಿ ವೇತನ ಕೊಡುವುದು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾದೀತು. ನಾಗರಿಕ ನಿರ್ಮಾಣದಲ್ಲಿಯೇ ಜನಾಂಗ ನಿರ್ಮಾಣದಲ್ಲಿಯೇ ತಮ್ಮ ಆಯುಷ್ಯವನ್ನು ಸವೆಸಿದ ಇವರ ಮೇಲೆ ಸಹಾನುಭೂತಿ ತೋರಿಸುವುದು ಅವಶ್ಯ.

ಈ ಸಹಾನುಭೂತಿಯು ಈಗ ಬದುಕಿರುವ ೧೯೫೬ಕ್ಕೆ ಮೊದಲೇ ನಿವೃತ್ತರಾದ ಅಧ್ಯಾಪಕರಿಗೆ ಕಾಮಧೇನುವಾಗುವುದಿಲ್ಲ. ಸರಕಾರಕ್ಕೂ ಬಾಸುರನ ಹೊಟ್ಟೆಯೆನಿಸುವುದಿಲ್ಲ. ಸರಕಾರಕ್ಕೂ ಕೆಲವೊಂದು ಧರ್ಮಪಾಲೆ. ಅಧ್ಯಾಪಕ ವರ್ಗವನ್ನು ಬಾಯಿ ಮಾತುಗಳಿಂದ ಹೊಗಳಿ ಆಕಾಶಕ್ಕೆ ಎತ್ತುವ ಮಂತ್ರಿಗಳು ತಮ್ಮ, ತಮ್ಮ ಸರಕಾರದ ಕರ್ತವ್ಯವೆಂಬ ಭಾವನೆಯಿಂದ ಈ ಸಹಾನುಭೂತಿ ತೋರಿಸಬೇಕು. ಇಲ್ಲವಾದರೆ ಸರಕಾರ ಧರ್ಮಚ್ಯುತವಾಗುತ್ತದೆ.

ಸತ್ಕಾರ ಕೂಟ

ಉಡುಪಿ ಸರಕಾರಿ ಆಸ್ಪತ್ರೆಯಲ್ಲಿ ಸರ್ಜನರಾಗಿದ್ದ ಡಾ| ಕೆ. ಮಹಾಲಿಂಗ ಹಾಗೂ ಮಂಗಳೂರಿಗೆ ವರ್ಗವಾಗಿರುವ ಲೋಕೋಪಯೋಗಿ ಇಲಾಖೆಯ ಶ್ರೀ ಕೆ. ಶಾಳಪ್ಪನವರ ಗೌರವಾರ್ಥ ತಾ. 15ರಂದು ಬನ್ನಂಜೆ ವೆಲ್‌ಫೇರ್ ಶಾಲಾ ಪಠಾರದಲ್ಲಿ ಶ್ರೀ ಎ. ರಾಮಚಂದ್ರ ಎಂ.ಎಲ್.ಎ.ರವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಲಾಗಿತ್ತು. ಅಧ್ಯಕ್ಷರು ಹಾಗೂ ಉಡುಪಿ ತಾಲೂಕುಬೋರ್ಡ್ ಮುಖ್ಯಾಧಿಕಾರಿ ಶ್ರೀ ಐ.ಎಸ್. ಶೆಟ್ಟಿ ಮತ್ತು ಶ್ರೀ ಯು. ರಾಮಚಂದ್ರರು ಸಮಯೋಚಿತವಾಗಿ ಮಾತನಾಡಿದರು. ಶ್ರೀ ಐ. ಬಾಬು ಧನವಾದ ಸಮರ್ಪಿಸಿದರು.

ಎಸ್.ಸಿ.ಸಿ. ಸಹಕಾರೀ ಬೇಂಕಿನ ಉಡುಪಿ ಶಾಖಾ ಉದ್ಘಾಟನೆ

ಉಡುಪಿ, ಜೂನ್ ೨೬—ದ. ಕ. ಜಿಲ್ಲಾ ಕೇಂದ್ರೀಯ ಸಹಕಾರೀ ಬೇಂಕಿನ ಉಡುಪಿ ಶಾಖೆಯು ಕಳೆದ ತಾ. ೨೬ನೇ ಬೆಳಿಗ್ಗೆ ಶ್ರೀ ರಾಮಕೃಷ್ಣ ಥಿಯೇಟರಿನ ಪಠಾರದಲ್ಲಿ ಉದ್ಘಾಟಿಸಲ್ಪಟ್ಟಿತು. ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಬಿ. ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಡಾ| ಟಿ.ಎಸ್.ಎ. ಪೈಯವರು ಈ ಬ್ಯಾಂಕಿನ ಶಾಖೆಯನ್ನು ಉದ್ಘಾಟಿಸುತ್ತಾ ಜಿಲ್ಲೆಯ ರೈತರಿಗೆ ಸಕಾಲಿಕ ನೆರವು ಮತ್ತು ಮಾರ್ಗದರ್ಶನ ದೊರೆತರೆ ಜಿಲ್ಲೆಯ ಉತ್ಪನ್ನವನ್ನು ದ್ವಿಗುಣಗೊಳಿಸಬಹುದೆಂದೂ, ಸಹಕಾರೀ ಸಂಸ್ಥೆಗಳು ಸೇವಾಬುದ್ಧಿಯಿಂದ ರೈತರಿಗೆ ಹೆಚ್ಚಿನ ಸೇವೆಯನ್ನು ಸಲ್ಲಿಸುವಂತಾಗಲೆಂದು ಹೇಳಿದರು. ಸಭೆಯಲ್ಲಿ ಶ್ರೀ ಕೆ. ತೇಜಪ್ಪ ಶೆಟ್ಟಿ, ಶ್ರೀ ಬಿಳಿರಾಯ ಮತ್ತು ಡಿಪ್ಟಿ ರಿಜಿಸ್ಟ್ರಾರರು ಭಾಷಣ ಮಾಡಿದರು. ಅಧ್ಯಕ್ಷ ಶ್ರೀ ಪ್ರಭಾಕರ ರಾಯರು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ತೆರೆಯುವ ವಿಚಾರವನ್ನೂ ಗ್ರಾಮೀಣ ಜನರು ಉಳಿತಾಯ ಮಾಡಬೇಕಾದ ಅವಶ್ಯಕತೆಯನ್ನೂ ವಿವರಿಸಿದರು. ಅರಂಭದಲ್ಲಿ ಶ್ರೀ ಎ. ಜಿ. ಅಲ್ಸೆಯವರು ಸ್ವಾಗತಿಸಿದರು. ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣರಾಯರು ಧನ್ಯವಾದಗಳನ್ನರ್ಪಿಸಿದರು.

ಕೃಷಿಕರ ಸಂಘದ ಮನವಿ

ಕಾರ್ಕಳ, ಮೈಸೂರು ರಾಜ್ಯದ ಆಹಾರ ಸಚಿವ ಶ್ರೀ ವಿಟ್ಟಲದಾಸ ಶೆಟ್ಟರು ತಾ. ೨೦.೬.೬೮ರಂದು ಕಾರ್ಕಳಕ್ಕೆ ಸಂದರ್ಶನ ನಿಮಿತ್ತಗಾಗಿ ದ. ಕ. ಜಿಲ್ಲಾ ಕೃಷಿಕರ ಸಂಘವು ಮೈಸೂರು ಸರಕಾರವು ಜಾರಿಗೊಳಿಸಿರುವ ಭತ್ತದ ಖರೀದಿ ಧಾರಣೆ ಮತ್ತು ಲೆವಿ ದರಗಳನ್ನು ಅಕ್ಷೇಪಿಸುವ ಮನವಿಯೊಂದನ್ನು ಅರ್ಪಿಸಿರುವರು.

ವಿಧಾನ ಪರಿಷತ್ತಿಗೆ ಜನಸಂಘದ ಆಯ್ಕೆ

ಮೈಸೂರು ನೈಋತ್ಯ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಕಳೆದ ತಾ. ೨೩ರಂದು ನಡೆದ ಚುನಾವಣೆಯ ಎಣಿಕೆಯು ತಾ. ೨೫ರಂದು ಬೆಳಿಗ್ಗೆ ೧೧ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ವರದರಾಜರವರ ಸಮಕ್ಷಮದಲ್ಲಿ ಆರಂಭವಾಗಿ ಸಂಜೆ ೫ ಗಂಟೆಗೆ ಫಲಿತಾಂಶ ಹೊರಬಿದ್ದಿತು. ಎಣಿಕೆಯ ಕೊನೆಯ ಸುತ್ತಿನಲ್ಲಿ ಜನಸಂಘದ ಅಭ್ಯರ್ಥಿಯಾದ ಶ್ರೀ ಎ. ಕೆ. ಸುಬ್ಬಯ್ಯನವರು ಚುನಾಯಿತರಾದರೆಂದು ಚುನಾವಣಾಧಿಕಾರಿಗಳು ಘೋಷಿಸಿದರು.

ಶ್ರೀ ಎ. ಕೆ. ಸುಬ್ಬಯ್ಯನವರಿಗೆ ೨೦೮೨ ಮತಗಳು ಬಂದವು. ಕಾಂಗ್ರೆಸ್ ಅಭ್ಯರ್ಥಿವಾರದ ಶ್ರೀಮತಿ ಬಳ್ಳೇವಿಯಾ ಅಲ್ಬುಕರ್ಕ್ ೨೦೨೩; ಎಂ. ಸತ್ಯನಾರಾಯಣ ರಾವ್ ೧೨೪೭; ಎ. ರಾಮಣ್ಣ ೪೬೪; ಎಸ್. ರಾಜಯ್ಯ ೮೩, ಬಿ. ವಿ. ರಮಣ ೭೩ ಮತಗಳು.

ಉದ್ಘಾಟನಾ ಸಮಾರಂಭ

ಬಂಟ್ವಾಳ, ಜೂನ್ ೩೦—ಬಂಟ್ವಾಳ ತಾಲೂಕಿನ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ 'ಪೌಷ್ಟಿಕಾಂಶ ಆಹಾರ ಯೋಜನೆ'ಯ ಉದ್ಘಾಟನೆಯು ಆಹಾರ ಸಚಿವ ಶ್ರೀ ವಿಟ್ಟಲದಾಸ ಶೆಟ್ಟರಿಂದ ಶ್ರೀಮತಿ ಕೆ. ಲೀಲಾವತಿ ಬೈ.ಎಂ.ಎಲ್.ಎ., ಇವರ ಅಧ್ಯಕ್ಷತೆಯಲ್ಲಿ ಸಭಾಭವನದಲ್ಲಿ ತಾ. ೧೯ರಂದು ಜರಿಗಿತು.

ಪರ್ಯಾ ಶ್ರೀ ಲಕ್ಷ್ಮೀನಾರಾಯಣ ಅಳ್ವರು ಸ್ವಾಗತಿಸಿದರು. ಮಾನ್ಯ ಸಚಿವರು ತಮ್ಮ ಕಾರ್ಯಗಳಲ್ಲಿ ಸಾರ್ವಜನಿಕರ ಸಹಕಾರ ಕೋರಿದರು. ಸಭಿಕರ ಪರವಾಗಿ ಶ್ರೀ ಇದ್ದಿನಬ್ಬ ಎಂ.ಎಲ್.ಎ., ಅವರು ಭಾಷಣ ಮಾಡಿದರು. ಶ್ರೀ ಎ. ಪರಮೇಶ್ವರಪ್ಪನವರು ಧನ್ಯವಾದ ಸಮರ್ಪಿಸಿದರು.

ವಂದನಾರ್ಪಣೆ

ಮೈಸೂರು ನೈಋತ್ಯ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಚುನಾವಣೆಗೆ ಸ್ಪರ್ಧಿಸಿದ್ದ ನನಗೆ ಮತಗಳನ್ನು ಇತ್ತ ನನ್ನ ಪರವಾಗಿ ಪ್ರಚಾರ ಕಾರ್ಯದಲ್ಲಿ ಮತ್ತಿತರ ವಿಧದಲ್ಲಿ ಸಹಾಯ ಮಾಡಿ ಸಹಕಾರ ನೀಡಿದ ಸಮಸ್ತರಿಗೂ ಅನಂತ ವಂದನೆಗಳನ್ನರ್ಪಿಸುತ್ತೇನೆ.

ಇದು ವಿದ್ಯಾವಂತ ಮತದಾರರ ಕ್ಷೇತ್ರ. ಈ ಕ್ಷೇತ್ರದ ಜನರ ವಿಶ್ವಾಸ ಗಳಿಸುವಷ್ಟು ಸೇವೆಯನ್ನು ನಾನು ನನ್ನ ೩೦ ವರ್ಷಗಳ ರಾಜಕೀಯ ಹಾಗೂ ಸಮಾಜ ಸೇವಾ ಕ್ಷೇತ್ರದಲ್ಲಿ ಮಾಡಿಲ್ಲವೆಂಬುದು ಇದೀಗ ಸ್ಪಷ್ಟವಾಗಿದೆ. ಅವರ ವಿಶ್ವಾಸ ಗಳಿಸುವ ಸೇವೆ ಹಾಗೂ ತ್ಯಾಗಕ್ಕೆ ನಾನು ಪ್ರಯತ್ನಿಸುವೆ.

ಈ ಚುನಾವಣೆಯಿಂದ ಒಂದು ಅಂಶ ಸ್ಪಷ್ಟವಾಗಿದೆ. ಅದು ವಿದ್ಯಾವಂತ ಜನರಲ್ಲಿ ಬಹುಮಂದಿ ಕೋಮುವಾದ ಸಂಕುಚಿತ ಮನೋಭಾವನೆಗೆ ಮಾರುಹೋಗಿರುವುದು. ಇದರ ಪರಿಣಾಮವನ್ನು ದೇಶದ ಪ್ರಗತಿಪರ ಜನಯೋಚಿಸಬೇಕಾಗಿದೆ.

ಚುನಾವಣೆ ಮುಗಿಯಿತು. ನನ್ನ ಅಭಿಮಾನಿಗಳನೇಕರು ಅವಿರತವಾಗಿ ದುಡಿದಿದ್ದಾರೆ. ಅವರುಗಳಿಗೆಲ್ಲರಿಗೂ ನಾನು ನನ್ನ ಅನಂತ ವಂದನೆಗಳನ್ನು ಸಲ್ಲಿಸಿ ಅವರು ಇದೇ ರೀತಿ ವಿಶ್ವಾಸ ಮುಂದುವರಿಸಿಕೊಂಡು ಹೋಗಬೇಕೆಂದು ಕೋರುತ್ತೇನೆ.

ಎ. ರಾಮಣ್ಣ.

ಮೈಸೂರು, ಸಂಪಾದಕ, 'ವಿಜಯ'

ಉದ್ಘಾಟನೆ

ಕಡಿಯಾಳಿ, ಜೂ. ೩೦—ಯು. ಕೆಮಲಾಬಾಯಿ ಹೈಸ್ಕೂಲಿನ ವ್ಯಸ್ತ ವರ್ಷದ ವಿಜ್ಞಾನ ಸಂಘದ ಉದ್ಘಾಟನೆಯು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಶ್ರೀ ಕೆ. ವಿ. ಕೃಷ್ಣಮೂರ್ತಿಯವರಿಂದ ನಡೆಯಿತು. ಸಂಘದ ಸಂಘಟಕ ಶ್ರೀ ಕೆ. ಮಹಾಲಿಂಗ ಭಟ್ಟರು ಸ್ವಾಗತಿಸಿದರು. ಶ್ರೀ ಎಂ. ವಿ. ಕಿಣಿಯವರು ಸಂಘದ ಉದ್ದೇಶಗಳಿಗೆ ಶುಭ ಕೋರಿದರು. ಪ್ರೊ| ಕೃಷ್ಣಮೂರ್ತಿಯವರು ಕೆಲವು ಸರಳ ಪ್ರಯೋಗಗಳನ್ನು ನಡೆಸಿ ತನ್ಮೂಲಕ ಈ ಉದ್ಘಾಟನೆಯನ್ನು ಮಾಡಿದರು. ಅಧ್ಯಕ್ಷತ್ವಾನಂತರ ಶಾಲಾ ವೈದ್ಯಾಧಿಕಾರಿ ಶ್ರೀ ಕೆ. ಕೆ. ಪೈಯವರು ಮಾತನಾಡುತ್ತ ವೈಜ್ಞಾನಿಕ ಅಶಕ್ತಿಯನ್ನು ಪ್ರಾಥಮಿಕ ಶಾಲಾ ಅಧ್ಯಯನದ ವೇಳೆ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕೆಂದೂ, ಮುಂದಿನ ಬೆಳೆಯಲು ಸಾಧ್ಯವೆಂದೂ ಸೂಚಿಸಿದರು. ಸಂಘದ ಅಧ್ಯಕ್ಷ ಕುಮಾರ ಜ್ಞಾನೇಶ ಗೋಪಾಲ ಶೆಣೈ ಅವರು ಧನ್ಯವಾದಸಮರ್ಪಿಸಿದರು.

ವಿದಾಯ ಸತ್ಕಾರ

ಉಡುಪಿಯ ಸರಕಾರೀ ಆಸ್ಪತ್ರೆಯಲ್ಲಿ ಸರ್ಜನರಾಗಿದ್ದ ಡಾ| ಮಹಾಲಿಂಗ ಅವರಿಗೆ ಕಾರವಾರಕ್ಕೆ ವರ್ಗವಾದ ಪ್ರಯುಕ್ತ ಅವರನ್ನು ಬೀಳ್ಕೊಳ್ಳಲು ಸ್ಥಳೀಯ ಕೊನ್ಸೊಲೊಟೆನ್ ಕ್ಲಬ್‌ನಲ್ಲಿ ತಾ. ೨೬-೬-೬೮ರಂದು ಭೋಜನ ಸತ್ಕಾರ ಕೂಟವು ಜರಿಗಿತು.

ಸ್ಥಳೀಯ ಮುನ್ಸೀಫ್ ಶ್ರೀ ಪಿ. ಕೆ. ಶೆಟ್ಟರು ಅತಿಥಿಗಳ ಗುಣಗಾನ ಮಾಡುತ್ತ ವಿಷಯಿಂದ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಜನತೆಯು ಅಪೇಕ್ಷಿಸುವುದು ಗಮನಿಸುವಂತೆ ತೋರುವುದಿಲ್ಲವೆಂದೂ ಹೇಳಿ ಅತಿಥಿಗಳಿಗೆ ಶುಭ ಕೋರಿದರು. ಎ.ಎಸ್.ಪಿ. ಶ್ರೀ ರಾಮಯ್ಯ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಲಕ್ಷ್ಮಣ ಶೇಟರು ಮಾತನಾಡಿದ ಬಳಿಕ ಅತಿಥಿ ಡಾ| ಮಹಾಲಿಂಗ ನವರು ಇಲ್ಲಿಯ ಆಸ್ಪತ್ರೆಯ ಉನ್ನತಿಗಾಗಿ ತಾನು ಕೈಲಾದ ಪ್ರಯತ್ನ ಮಾಡಿರುವುದಾಗಿ ಹೇಳಿ ತನಗಿತ್ತ ಸತ್ಕಾರಕ್ಕಾಗಿ ಕೃತಜ್ಞತೆಗಳನ್ನರ್ಪಿಸಿದರು.

ಮಧ್ವರಾಜ್ ದಂಪತಿಗಳಿಗೆ ಸತ್ಕಾರ

ಉಡುಪಿ, ವಿದೇಶ ಪರ್ಯಟನೆಕ್ಕೆ ತೆರಳುವ ಶ್ರೀಮತಿ ಮತ್ತು ಶ್ರೀ ಮಧ್ವರಾಜರನ್ನು ಸತ್ಕರಿಸಲು ತಾ. ೩೦-೬-೬೮ರಂದು ಕೊನ್ಸೊಲೊಟೆನ್ ಕ್ಲಬ್ಬಿನಲ್ಲಿ ಭೋಜನ ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು. ಭೋಜನಾನಂತರ ಮುಖ್ಯಭಾಷಣಕಾರ ಶ್ರೀ ಬಿ. ಕೆ. ಶೆಟ್ಟರು ಮಾತನಾಡುತ್ತಾ ಶ್ರೀಮಧ್ವರಾಜರು ಸಾಂಪ್ರದಾಯಿಸಿದ ಜನಸ್ತುತಿತೆ, ಅವರ ಕಾರ್ಯದಕ್ಷತೆ, ವ್ಯವಹಾರ ಕುಶಲತೆ, ಧರ್ಮಬುದ್ಧಿಗಳನ್ನು ಶ್ಲಾಘಿಸಿ, ಅವರ ಪ್ರಗತಿಗೆ ಅವರ ಧರ್ಮಪತ್ನಿಯ ಭಾಗ್ಯವೇ ಮೂಲವೆಂದೂ, ಅವರ ವಿದೇಶ ಪ್ರಯಾಣವು ಸುಗಮವಾಗಿರಲೆಂದೂ ಹಾರೈಸಿದರು. ಅಲ್ಲದೆ ಈ ಕ್ಲಬ್ಬಿನ ಅಸ್ತಿತ್ವ, ಅದಕ್ಕೆ ಶ್ರೀ ಮಧ್ವರಾಜರು ನೀಡುತ್ತಿರುವ ಪ್ರೋತ್ಸಾಹಗಳನ್ನೂ ವಿವರಿಸಿದರು. ಅನಂತರ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಲಕ್ಷ್ಮಣ್ ಶೇಟ್ಟ್, ಶ್ರೀ ಪಿ. ಶಿವಾಜಿ ಶೆಟ್ಟಿ, ಶ್ರೀ ಬಿ. ಶಾಳಪ್ಪ ಶೆಟ್ಟಿ ಇವರು ಭಾಷಣ ಮಾಡಿ ಶ್ರೀ ಮಧ್ವರಾಜರಲ್ಲಿಯ ಗುಣವಿಶೇಷತೆಗಳನ್ನು ಕೊಂಡಾಡಿ ಅವರಿಗೆ ಶುಭ ಪ್ರಯಾಣ ಬಯಸಿದರು. ಶ್ರೀ ಮಧ್ವರಾಜರು ಉತ್ತರಿಸುತ್ತಾ ಇಂತಹ ಕ್ಲಬ್ಬಿನ ಉಪಯೋಗವನ್ನೂ ಅದು ಬೆಳೆದು ಬರಬೇಕಾದ ಅವಶ್ಯಕತೆಯನ್ನೂ ವಿವರಿಸಿ ಅದಕ್ಕೆ ಸ್ವಂತ ಕಟ್ಟಡದ ಅಡಿಗಲ್ಲು ಹಾಕಿದರೆ ಆ ಕಟ್ಟಡವೆ ತಮ್ಮಲ್ಲರ ಸಹಕಾರದಿಂದ ಪೂರ್ತಿಯಾಗುವಂತೆ ತನ್ನ ಸಂಪೂರ್ಣ ಸಹಕಾರ ನೀಡುವ ಭರವಸೆಯನ್ನಿತ್ತರು. ಅಲ್ಲದೆ ತಾನು ದೊಡ್ಡ ಕುಟುಂಬದಲ್ಲಿ ಜನಿಸಿದ್ದರೂ ಮಂಗಳೂರಿನ್ನಲ್ಲಿ ಬಹಳ ಕಷ್ಟದಿಂದಲೇ ಜೀವನ ಅರಂಭಿಸಿರುವುದಾಗಿಯೂ, ಮಾತೃಶ್ರೀಯವರ ಸಹಾಯದಿಂದ ತಾನು ಸಣ್ಣ ರೂಪದಲ್ಲಿ ಆರಂಭಿಸಿದ ವ್ಯವಹಾರವು ಇಂದಿನ ಪ್ರಗತಿಗೆ ದೇವರ ದಯೆ ಮತ್ತು ತಮ್ಮಲ್ಲರ ಸಹಕಾರವೇ ಕಾರಣವೆಂದೂ ಹೇಳಿ ತಮಗಿತ್ತ ಸತ್ಕಾರಕ್ಕಾಗಿ ಧನ್ಯವಾದಗಳನ್ನರ್ಪಿಸಿದರು.

ಹೆಬ್ರಿ ಪಂಚಾಯತ್

ಹೆಬ್ರಿ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ತಾರೀಕು 26-6-68ರಂದು ಡಿಪ್ಟಿ ಡಿ.ಡಿ.ಎ. ಶ್ರೀ ಮಹಾನಾರಾಯಣಿ ಹೆಗ್ಡೆ ಇವರ ನೇತೃತ್ವದಲ್ಲಿ ಜರಗಿ ಶ್ರೀ ಬೇಳಂಜೆ ಪಿರಿಲ ಹೆಗ್ಡೆಯವರು ಅಧ್ಯಕ್ಷರಾಗಿಯೂ ಶ್ರೀ ಎಚ್. ಸುಬ್ಬಾಣಿ ಬಲ್ಲಾಳರು ಉಪಾಧ್ಯಕ್ಷರಾಗಿಯೂ ಆವಿರೋಧವಾಗಿ ಆರಿಸಲ್ಪಟ್ಟಿರುವರು.

ಭಾವಚಿತ್ರ ಅನಾವರಣ

ಕ್ರಾಸರಗೋಡು ನೇಕಾರರೆ ಸಹಕಾರ ಸಂಘದ ಸ್ಥಾಪಕ—ಅಧ್ಯಕ್ಷ ದಿವಾಂಗತ ಎಂ. ಉಮೇಶ ರಾಯರ ಮತ್ತು ಕಾರ್ಯದರ್ಶಿಯಾಗಿದ್ದ ದಿ|| ಸುಕೇರ್ತಿ ರೈಗಳ ಭಾವಚಿತ್ರಗಳನ್ನು ಅನಿಕ್ಷ್ಯಮವಾಗಿ ಶ್ರೀ ಕೆ.ಎಂ. ಭಂಡಾರಿ, ಎಂ.ಎಲ್.ಎ. ಹಾಗೂ ಶ್ರೀ ಎನ್.ಕೆ. ಜಾಲಪ್ಪ, ಎಂ.ಎಲ್.ಎ ಇವರು ಶ್ರೀ ಯು.ಪಿ. ಕೃಷ್ಣಶಾಲ್ಯಾಯ, ಎಂ ಎಲ್.ಎ.ರ ಅಧ್ಯಕ್ಷತೆಯಲ್ಲಿ ಅನಾವರಣಗೈದರು. ಸಂಘದ ಅಧ್ಯಕ್ಷ ಶ್ರೀ ಕೆ.ಪಿ. ಅನಂತರಾಯರು ಸ್ವಾಗತಿಸಿದರು.

ನರೆತ ಕೂದಲು

ಮಹಾ ಪರಿಶೋಧನೆಯ ಬಳಿಕ ವಿಶ್ವ ಭಾರತೀಯ ಗಿಡ ಮೂಲಿಕೆಗಳಿಂದ 'ಗ್ರೇ ಹೇರ್ಲೆಸ್' ಎಂಬ ಕೂದಲೆಣ್ಣೆಯು ಔಷಧ ಗುಣವುಳ್ಳದಾಗಿಯೂ ಪರಿಮಳಯುಕ್ತವಾಗಿಯೂ ಅಯುರ್ವೇದೀಯ ಎಣ್ಣೆಯು ತಯಾರಿಸಲ್ಪಟ್ಟಿದೆ. ಇದು ಕೂದಲು ನರೆಯುವುದನ್ನು ತಡೆಗಟ್ಟುವಂತೆ ಮತ್ತು ನರೆತ ಕೂದಲನ್ನು ಕಪ್ಪು ಬಣ್ಣಕ್ಕೆ ಪರಿವರ್ತನೆಯಾಗುವಂತೆ ವಿಶೇಷ ಸಹಕಾರಿಯಾಗಿದೆ. ನಾವು ಬಹು ಸಂಖ್ಯೆಯಲ್ಲಿ ಯೋಗ್ಯತಾಪತ್ರಗಳನ್ನು ಪಡೆದಿದ್ದೇವೆ. ನಿಮಗೆ ನಿಮ್ಮ ನರೆತ ಕೂದಲು ಕಪ್ಪಾಗಬೇಕೆಂದಿದ್ದರೆ ಕೂಡಲೇ ಪ್ರಯತ್ನಿಸಿರಿ. ಒಂದು ಸೀಸೆಯ ಬೆಲೆ ರೂ. 10.00. ಮೂರು ಸೀಸೆಗಳಿಗೆ ರೂ. 25.00.

ಪಿ. ಸಾ.— ಅದು ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ, ಮತ್ತು ಮೆದುಳನ್ನು ತಂಪಾಗಿರಿಸುತ್ತದೆ.

SHRI LAKHAN PHARMACY—90
P. O. KATARISARAI (GAYA)

ವಿಷ ಚಕ್ರ

(ಎರಡನೇ ಪುಟದಿಂದ)

ನಿಮ್ಮ ಜೇನು ಎಂದು ಭ್ರಮಿಸಿದ್ದೆ. ನಿಮ್ಮ ಸಾಜನ್ಯ, ಸರಳ ನಡೆವಳಿಕೆ, ಅನುಕಂಪ, ಆದರ್ಶಗಳೆಲ್ಲವೂ ನನ್ನ ಕಣ್ಣೆದುರಿನಲ್ಲಿ ಸಾಲಾಗಿ ನಿಂತಿವೆ. ನಿಮ್ಮನ್ನು ಅಗಲಲು ಆಸೆ ಬೇಡ ಎನ್ನುತ್ತದೆ. ಆದರೆ ಹೃದಯ ಅದಕ್ಕೆ ಒಪ್ಪುವುದಿಲ್ಲ. ನಾನೇನು ಮಾಡಲಿ ದೊರೆ...ನನ್ನನ್ನು ಕ್ಷಮಿಸಿಬಿಡಿ.

"ನನ್ನನ್ನು ಅಗಲಿದ ಕೊರಗಿನಲ್ಲಿ ನೀವು ಸುಖ-ಸಂತೋಷಗಳಿಗೆ ಮಂಗಳ ಹಾಡಬೇಡಿ. ನಾನಿರುವಲ್ಲಿಯೇ ನಿಮ್ಮನ್ನು ಕಂಡು ಆನಂದಿಸುತ್ತೇನೆ. ನಾನಿಲ್ಲದೆಂದು ನಿಮಗೆ ಬೇಸರವಾಗುತ್ತದೆ. ನಿನ್ನೊಡನೆ ಮಾತನಾಡಲಿಲ್ಲ, ದೂರವಾದಳು ಎಂದು ಕೋಪವೂ ಬರಬಹುದು. ನಾನೇನು ಮಾಡಲಿ ರಾಜ. ನನ್ನ ಕರ್ಮ ನನ್ನನ್ನು ಭೀಕರ ಕಂದಕಕ್ಕೆ ತಳ್ಳಿತು.

"ನಿಮ್ಮನ್ನು ಒಮ್ಮೆ ಕಂಡು ನಿಜ ಸಂಗತಿಯನ್ನು ತಿಳಿಸಿ ಕೊನೆಯುಸಿರು ಎಳೆಯಲು ಯೋಚಿಸಿದ್ದೆ...ಆದರೆ ನಿಮ್ಮನ್ನು ಕಂಡ ತರುವಾಯ ಅಭಿಮಾನದ ಸೆಳೆತದಲ್ಲಿ, ಶಾಶ್ವತ ಸಂತೆಯನ್ನು ಮರೆಮಾಚಿ ಬದುಕಿ...ನಿಮ್ಮ ನಿಷ್ಕಪಟ ಪ್ರೇಮವನ್ನು ವಂಚಿಸುತ್ತೇನೋ ಎಂದು ನೀವು ಬರುವ ಮೊದಲೇ ಕಣ್ಮರೆಯಾಗುತ್ತಿದ್ದೇನೆ.

"ನಾನು ನಿಮ್ಮೊಂದಿಗಿದ್ದಷ್ಟು ದಿನವೂ ನೀವು ಪ್ರೀತಿಯ ಅಮೃತವನ್ನು ಎರೆದು ನನ್ನನ್ನು ಉದ್ಧರಿಸಿದಿರಿ. ಅನೇಕ ಬಾರಿ ನಿಮ್ಮನ್ನು ಕಾಡಿ, ಬೇಡಿ, ಗಲಾಟೆಮಾಡಿ ನಿಮ್ಮ ಮನಸ್ಸಿಗೆ ನೋವನ್ನು ಉಂಟುಮಾಡಿದ್ದೇನೆ. ನನ್ನಿಂದ ತಪ್ಪುಗಳು ನಡೆದಿರಬಹುದು. ಬಹುಶಃ ಎನ್ನುವುದೇನು ನಡೆದಿವೆ. ಕೀಳ್ತ ನನ್ನ ತಪ್ಪುಗಳನ್ನು ಮರೆತು ಬಿಡಿ, ಮನ್ನಿಸಿಬಿಡಿ.

"ಅನ್ಯ ಮಾರ್ಗವಿಲ್ಲದೆ, ಅಕ್ಷಶಕ್ತಿಗೆ ಶರಣಾಗಿದ್ದೇನೆ. ಹಿಂದಿನದನ್ನೆಲ್ಲ ಸಂತೋಷದಿಂದ ಸ್ಮರಿಸಿದ್ದೇನೆ. ಮುಂದಿನ ವಿಷಯವೆಲ್ಲ ಭೀಕರ. ಕೇಳಿಬಿಡಿ, ಮರೆತು ಬಿಡಿ. ಆ ವಿಷಯವನ್ನು ನೆನಪು ಮಾಡಿಕೊಂಡರೆ ಕಣ್ಣಿಗೆ ಕತ್ತಲೆ ಕವಿಯುತ್ತದೆ. ಕಂಠ ಕಂಪಿಸುತ್ತದೆ, ಎದೆ ನಡುಗುತ್ತದೆ. ನಿಮ್ಮ ದೊಡ್ಡ ಗುಣ, ನನ್ನ ಸೌಂದರ್ಯ ನಮ್ಮ ಬಾಳು ಹಾಳಾಗಲು ಕಾರಣ ಎನಿಸುತ್ತದೆ ನನಗೆ.

"ನಿಮ್ಮ ಆದರ್ಶ ಗುಣಗಳು, ಅಂತಃಕರಣ, ಸದ್ಭಾವನೆಗಳು ನನ್ನನ್ನು ನಿಮ್ಮೆಡೆಗೆ ಸೆಳೆದಂತೆ, ನನ್ನ ಸೌಂದರ್ಯ ನಿಮ್ಮನ್ನು ಆಕರ್ಷಿಸಿತು...ಸಂಕೋಚವಿಲ್ಲದೆ ಹೇಳಿ ನಿಜ ತಾನೆ?...ನನ್ನ ಸೌಂದರ್ಯವೇ ನನಗೆ ಶತ್ರು ಆಗುತ್ತದೆ ಎಂದು ನಾನು ತಿಳಿದಿರಲಿಲ್ಲ; ನಿಮ್ಮದು ಸುಣ್ಣದ ತಿಳಿಯನ್ನು ಹಾಲು ಎಂದು ನಂಬುವ ಸ್ವಭಾವ. ನಿಮ್ಮ ಹಂಬಿಕೆಯ ಬಗ್ಗೆ ನಾವು ಹಲಬಾರಿ ಎಚ್ಚರಿಸಿದ್ದೆ.... ಯೋಚಿಸಿ

"ನಿಮ್ಮ ಸಂಸ್ಥೆಯ ಶಾಲ ದಾರ (ಆ ರ ಕ್ಷಪಿತ ಹೆಸರು ಹೇಳಲೂ ಭಯವಾಗುತ್ತದೆ) ನಿಮ್ಮ ಪ್ರಿಯ ಮಿತ್ರ, ಹಿತೈಷಿ ನಿಮ್ಮ ಬಾಳಿಗೆ ಬೆಂಕಿ ಇಟ್ಟ ರಾಜ... ಅವನ ಹೀನ ಕೃತ್ಯ ನೆನೆಸಿಕೊಂಡರೆ ರಕ್ತ ಕುದಿಯುತ್ತದೆ....ಏನು ಮಾಡಲಿ, ನಾನು ಅಬಲೆ....ಅವನ ಪಶು ನುಡಿಗಳನ್ನು ನಿಜವೆಂದು ನಂಬಿದಿರಿ.... ಅವನ ನೋಟದಲ್ಲಿ ಮಾತಿನಲ್ಲಿ ಆಸೆಯ ಹಿನ್ನೆಲೆ ಇದ್ದೇ ಇತ್ತು. ಅವನ ಕೆಣಕುವ ಕ್ರೂರ ನೋಟದಿಂದ ಅನೇಕ ಬಾರಿ ಬೆದರಿದ್ದೆ. ನಿಮಗೆ ಸಂಗತಿಯನ್ನು ತಿಳಿಸಿದೆ.. ನೀವು ಹೇಳಿದ ಉತ್ತರ ನೆನಪಿದೆಯೆ? ನಿನಗೆಲ್ಲೋ ಹುಚ್ಚು ಡಾರ್ಲಿಂಗ್"....ಅವನ ಸ್ವಭಾವ ಚೆನ್ನಾಗಿ ಗೊತ್ತು...ನಿನ್ನನ್ನು ಹೋಡಿದ ಮಾತ್ರಕ್ಕೆ ಅದು ಕೇಳು ಭಾವನೆಯ ದೃಷ್ಟಿ ಎಂದು ಹೇಗೆ ಹೇಳುತ್ತೀಯ? ನಿಜ ಹೇಳಬೇಕು ಎನ್ನುವುದಾದರೆ ನಿನ್ನದು ಅಪೂರ್ವ ಸೌಂದರ್ಯ ಅಷ್ಟೆ ನೋಡ .... ಅಷ್ಟಕ್ಕೆ ನಾವು ಕಟ್ಟ ಯೋಚನೆ ಮಾಡಬಾರದು ಎಂದು ಹೇಳಿದಿರಿ.

"ಎಷ್ಟು ಬಾರಿ ಎಷ್ಟು ವಿಧದಲ್ಲಿ ಹೇಳಿದರೂ ನಿಮ್ಮ ಮಾತೇ ನಿಮಗೆ, ಪಾನ ಹುಲಿಯ ಕೈಗೆ ಸಿಲುಕಿದ ಹರಿಣಿ ಎಂಬುದು ನನಗೆ ಮನವರಿಕೆ ಮಾಯಿತು. ನಿಮ್ಮ ವಿಶ್ವಾಸ ಘಾತುಕ ಮಿತ್ರ ತನ. ಮನೆ ದಾಸೆಯನ್ನು ಹಲ ಜಗೆಯಲ್ಲಿ ಪ್ರಕಟಿಸಿದ. ಸೂಚಿಸಿದ. ನಿಮ್ಮ ಆದರ್ಶದ ಮಂದಿ ಅವಕ್ಕೆಲ್ಲ ಬೆಲೆ ಎಲ್ಲಿ? ನನಗಾಗಿ ಅವನ ಬಳಿ ದಿನಗಳಿಂದ ಕಾಯುತ್ತಿದ್ದನಂತೆ. ಈ ಬಾರಿ ನೀವು ಬೆಂಬಾಯಿಗೆ ಹೋದಾಗ ಅವನ ಬಯಕೆ ಕಣ್ಣಾಯಿತು....

'ನೀವು ಬೊಂಬಾಯಿಗೆ ತೆರಳಿದ ನಂತರ ಪ್ರತಿನಿತ್ಯವೂ ಬಂದು ಯೋಕ್ಷೇಮ ವಿಚಾರಿಸಿ....ನಿಮ್ಮ ಸಹಾಯಕ್ಕೆ ನಾನಿದ್ದೇನೆ...ನೀವೇನು ಯೋಚಿಸಬೇಡಿ ಎಂದು ಹೇಳಿ ನಗತ್ತಲೇ ಹೋಗುತ್ತಿದ್ದ. ಒಂದುವಾರ ಕಳೆಯಿತು. ಅಂದು ಮಧ್ಯಾಹ್ನ ಊಟ ಮಾಡಿ ಕಾದಂಬರಿ ಓದ ತ್ತಾ ಮಲಗಿದ್ದೆ ಆ ದ್ರೋಹಿ ಹಾಜರಾದ. 'ದೇವಾಯಿ ತಲೆ ನೋವು ಎಂದು ಕಛೇರಿಯಲ್ಲಿ ದುಲಗಿದ್ದಾರೆ...ಇದೇ ಬೊಂಬಾಯಿಂದ ಬಂದನು. ಅವರಿಗೆ ತುಂಬ ಅಯಾಸವಾಗಿರುವಂತಿದೆ....ಅವರಿಗೆ ತುಂಬ ಬೇಸರವಾಗಿರುವಂತಿದೆ...ಸಿನಿಮಾಗೆ ಹೋಗಲು ಸೂಚಿಸಿದೆ....ಅವಳು ಇದ್ದಿದ್ದರೆ ಚೆನ್ನಾಗಿತ್ತು ಎಂದರು ...ಬರೆ ತರುತ್ತೇನೆ." ಎಂದು ಬಂದೆ ಎಂದು ಹೇಳಿದ. ಅವನ ನಟನೆ ಮಾತ ಗಳನ್ನು ನಂಬಿ ಅವನೊಂದಿಗೆ ಹೊರಟೆ.

ಕಾರು ಹೊಟೇಲೊಂದರ ಮುಂದೆ ನಿಂತಿತು. ಚಹ ಕುಡಿದು ಹೋಗೋಣ ಎಂದ. ನಾನು ಸುಮ್ಮನಿದ್ದೆ ಹೊಟೇಲಿನಿಂದ ಚಹ ಲೋಟ ಕಾರಿನ ಬಳಿಗೆ ಬಂತು. ತೆಗೆದುಕೊಂಡು ಸೇವಿಸಿದೆ. ಕೆಲ ನಿಮಿಷಗಳಲ್ಲಿ ತಲೆ ಸುತ್ತಿದಂತಾಯ್ತು. ಸೀಟಿನಲ್ಲಿ ಮಲಗಿದೆ.

"ನನಗೆ ಎಚ್ಚರವಾದಾಗ ಅಂದವಾಗಿ ಅಲಂಕರಿಸಲ್ಪಟ್ಟ ಮಂಚದ ಮೇಲೆ ಮಲಗಿದ್ದೆ. ಗೋಡೆಯ ತುಂಬ ನಗ್ನ ಯುವತಿಯರ ಚಿತ್ರಗಳು ತುಂಬಿದ್ದವು. ನಾಚಿಕೆಯಿಂದ ಕಣ್ಣು ಮುಚ್ಚಿ ಪಕ್ಕಕ್ಕೆ ಹೊರಳಿದೆ. ಆ ದ್ರೋಹಿ ಸಿಗರೇಟು ಸೇದುತ್ತಾ ಕುಳಿತಿದ್ದ. 'ನಾನು ಎಲ್ಲಿದ್ದೇನೆ.....ಇಲ್ಲಿಗೇಕೆ ಬಂದೆ... ನನ್ನನ್ನು ಬಿಟ್ಟುಬಿಡಿ. ಇದು ಮೋಸ.....ಎಂದೆ. ಅವನು ಸಿಗರೇಟಿನ ಹೊಗೆಯನ್ನು ಬಿಟ್ಟು "ನೀನು ಎಲ್ಲಿರಬೇಕೋ ಅಲ್ಲಿದ್ದೀಯ ಪ್ಯಾರಿ. ಇದು ನಿನ್ನ ಮನೆ. ನಾನು ದಾರ... ಎಂದು ತೊದಲಿದ. ಆ ವೇಳೆಗೆ ಅವನು ಕರ್ಪೂರ ಕಡಿದಿದ್ದ.

"ನಾನು ನಿಮ್ಮ ಗೆಳೆಯನ ಹೆಂಡತಿ.... ನಿಮ್ಮ ಶಂಗಿಸಮಾಡ. ನನ್ನನ್ನು ಬಿಟ್ಟುಬಿಡಿ. ಹೀಗೆ ಹೀನೆ ಮೋಸ ಮಾಡ ಬೇಡಿ, ಅ ಕೃತ್ಯಾಚಾರ ಮಾಡುವುದು ಸರಿಯಲ್ಲ" ಎಂದೆ. "ಇದಕ್ಕಾಗಿ ಎಷ್ಟು ಕಷ್ಟಪಟ್ಟಿದ್ದೇನೆ ಗೊತ್ತು ಪ್ಯಾರಿ...ಪ್ರಾಣ ಹೋದರೂ ಈ ಅವಕಾಶ ಕಳೆದುಕೊಳ್ಳುವುದಿಲ್ಲ....ಎಷ್ಟು ಬಾರಿ ತಿಳಿಸಿದರೂ ನೀನು ನನ್ನ ಮನಸ್ಸನ್ನು ಅರ್ಥ ಮಾಡಿಕೊಳ್ಳಲಿಲ್ಲ...ಇಂದು ನೀನು ನನ್ನವಳು...." ಎಂದ.

ನನ್ನ ಬೇಡಿಕೆ, ಕಣ್ಣೀರು, ಕೋಪ, ಬೆದರಿಕೆ ಯಾವುದಕ್ಕೂ ಅವನು ಮಣಿಯಲಿಲ್ಲ. ಬೇರಿದೆ, ಸಹಾಯಕ್ಕಾಗಿ ಅತ್ತೆ. ಅವನು ವಿಕಟವಾಗಿ ನಕ್ಕ ಕಟ್ಟಿಸಿಕೊಳ್ಳಲು ಪ್ರಯತ್ನಿಸಿದೆ. ಪ್ರಯೋಜನವಾಗಲಿಲ್ಲ. ಆ ರಾಕ್ಷಸ ತನ್ನ ಬಲವಾದ ಬಾಹುಗಳಿಂದ ಬಂಧಿಸಿದ ನನ್ನ ಪ್ರತಿಭಟನೆಗೆ ಅವನು ಅಂಜಲಿಲ್ಲ. ಬಹುದಿನಗಳ ತನ್ನ ಮನದಾಸೆಯನ್ನು ನೆರವೇರಿಸಿಕೊಂಡ ದೈತ್ಯ ನಗೆ ನಕ್ಕ. ಇನ್ನು ನಾನು ನಾಶವಾಯಿತ್ತ ಎಂದು ನಡಿದ ನನಗೆ ಅವನ ಮುಖವೀಕ್ಷಿಸಲು ಅಂಜಿಕೆಯಾಯಿತ. ಅಳುತ್ತಾ ಮನೆಗೆ ಬಂದೆ. ದಾರಿಯಲ್ಲಿಯೇ ಮಂದಿನ ವಿಷಯವನ್ನು ಮನದಲ್ಲಿ ತೀರ್ಮಾನಿಸಿದೆ.

"ಹೆಣ್ಣಿಗೆ ಶೀಲವಲ್ಲದೆ ಎಷ್ಟು ಸೌಂದರ್ಯ, ಸಿರಿ ಇದ್ದರೇನು? ಶೀಲವೇ ಅಪಾರ ನಿಧಿ... ಅದು ಕಳೆದು ಕೊಂಡರೆ ಉಳಿದುದೆಲ್ಲ ವ್ಯರ್ಥ. ಅಪವಿತ್ರವಾದ ದೇಹ ನಗಳನ್ನು ನಾನು ನಿಮಗೆ ಅರ್ಪಿಸಲು ಆಶಿಸುವುದಿಲ್ಲ...ದೊರೆ ಅದಕ್ಕಾಗಿಯೇ ಆತ್ಮಹತ್ಯೆಯಿಂದ ಬಿಡುಗಡೆ ಹೊಂದುತ್ತೇನೆ.

"ಇಂತಹ ವಿಶ್ವದ್ರೋಹಿಗಳ, ಪಶುಜನ ಪಾಕರು ಎಷ್ಟು ಜನವಿದ್ದಾರೋ? ಇಂತಹ ಘೋರದಿಂದ ಅದೆಷ್ಟು ಅಬಲೆಯರು ಬಲಿಯ ಕಸವಾಗಿದ್ದಾರೋ? ಈ ಪಾಪಿಗಳಿಗೆ ಯಾವ ನರಕದಲ್ಲಿ ಯಾವ ಶಿಕ್ಷೆಯಾದರೂ ದೊರೆಯಲಿ. ಈಲೋಕದಲ್ಲಿ ಅದೆಷ್ಟು ಜನ ಸ್ತ್ರೀಯರು ನರಕಯಾತನೆ ಅನುಭವಿಸುತ್ತಿದ್ದಾರೋ.... ಘೋರವೆನು ಅಗ್ನಿ ಜ್ವಾಲೆ ಎದೆಯನ್ನು ಸುಡುತ್ತಿದೆ. ಮಂಗಳೆನು ಬರೆಯಲಿ?

"ನಿಮ್ಮ ವಿಶ್ವ, ಹಿತೈಷಿ ನಿಮ್ಮ ಪತ್ನಿಯ ಶೀಲ ಭಂಗಮಾಡಿ ನಿಮ್ಮ ಬಾಳಿಗೆ ಬೆಂಕಿ ಇಟ್ಟ. ಅವನನ್ನು ಕ್ಷಮಿಸುವಿರಾ? ಅಥವಾ ಶಿಕ್ಷಿಸುವಿರಾ? ಅದು ನಿಮಗೆ ಬಿಟ್ಟ ವಿಷಯ. ಆ ಪಾಪಿಗೆ ತಕ್ಕ ಶಿಕ್ಷೆ ದೊರೆತರೆ ನನ್ನ ಆತ್ಮಕ್ಕೆ ಶಾಂತಿ. ನನ್ನಂತಹ ಅಭಾಗಿನಿಯರೂ ಆ ಪಾಪಿಗು ಬಂಧನದಿಂದ ಪಾರಾಗಬಹುದು.

'ಬರೆಯಲು ಕೈ ಓಡುತ್ತಿಲ್ಲ. ಅಳು ಒತ್ತರಿಸಿ ಬರುತ್ತಿದೆ. ಈ ಮನೆಯಲ್ಲಿ ಒಂದು ಕ್ಷಣ ಇರಲೂ ಹೃದಯ ಹಿಂಜರಿಯುತ್ತಿದೆ....ಯಾವುದೋ ಅಗೋಚರ ಶಕ್ತಿ ನನ್ನನ್ನು ಹೊರದೂಡುತ್ತಿದೆ. ನಾನು ಬಿಳಿಗೆ ನನ್ನನ್ನ ಮರೆತು ಬಿಡಿ....ನನ್ನ ಬಾಳ ನೋವಿನ ಕಥೆ ಸರ್ವರಿಗೂ ತಿಳಿದರೆ ಅದರಿಂದ ಉಪಕಾರವಾಗಬಹುದೆನೋ ನನ್ನನ್ನೇ ನಾನು ಉದ್ಧಾರ ಮಾಡಿಕೊಳ್ಳಲಾಗಲಿಲ್ಲ. ನನ್ನ ಶೀಲವನ್ನೇ ಉಳಿಸಿಕೊಳ್ಳಲಾಗಲಿಲ್ಲ....ಇನ್ನು ಸರ್ವರು. ಕರುಣೆ ಸಂತೆ..... ಹೋಗಲಿ ಬಿಡಿ ಎಲ್ಲಿಯ ಮಾತು.

'ವಿಶ್ವ ಇಚ್ಛಾಹಿ ಕಶ್ಚಾತ್ತಾಪದಿಂದ ದಗ್ಧನಾಗಿ ಕ್ಷಮೆಗಾಗಿ ಬೇಡಿದನೆಂದು ನೀವು ಅವನನ್ನು ಕ್ಷಮಿಸಬೇಡಿ. ನೀವು ಅವನನ್ನು ಕ್ಷಮಿಸಿದರೂ ಕ್ಷಮಿಸಬಹುದು... ಹೀಗಾದರೆ ನಾನು ನಿಮ್ಮನ್ನು ಕ್ಷಮಿಸುವುದಿಲ್ಲ.....ಇಂತಾ ಒದಿದ್ದ ಬಹಳವಾದ್ದು ನನ್ನ ಹೃದಯವನ್ನು ತೆರೆದಿಟ್ಟಿದ್ದೇನೆ.

"ನಿಮ್ಮೊಂದಿಗೆ ಸುಖವಾಗಿ ಬಾಳುವ ಭಾಗ್ಯ ನನ್ನದಾಗಲಿಲ್ಲ. ನಾನು ನಿರ್ಭಾಗ್ಯೆ. ನನ್ನ ಕ್ಷಮಿಸಿ. ಈ ಲೋಕದಲ್ಲಿ ಮತ್ತೆ ಪಾವಿಬ್ಬರೂ ಸಂಧಿಸಲಾರೆವು. ಆ ಲೋಕದಲ್ಲಿ ನಿಮಗಾಗಿ ಕಾಯುತ್ತಿರುತ್ತೇನೆ. ಇದೋ ಅಂತಿಮ ಭಕ್ತಿಪೂರ್ವಕ ನಮಸ್ಕಾರಗಳ.

ಇಂತು

ನಿಮ್ಮ ನಿರ್ಭಾಗ್ಯ ಪತ್ನಿ,
ಗಂಗಾ

ಂ ಂ ಂ

ವಿನಾಯಕ್ ಪತ್ರವನ್ನು ಓದಿ ನಿಟ್ಟುಸಿರು ಬಿಟ್ಟು "ದೇವಾಯ" ಎಂದರು. ದೇವಾಯ್ ಕುರ್ಚಿಯಲ್ಲಿ ಕುಳಿತು ಮೇಜಿನ ಮೇಲೆ ತಲೆಯಿಟ್ಟು ಮಲಗಿದ್ದ. ಅವನ ಕೈಬೆರಳುಗಳ ಮಧ್ಯೆ ಒಂದು ಚೀಟಿ ಇತ್ತು. ಎರಡು, ಮೂರು ಬಾರಿ ಮಾತನಾಡಿಸಿದರೂ ಪ್ರಯೋಜನವಾಗಲಿಲ್ಲ. ವಿನಾಯಕ್ ಗೆಳೆಯನ ಹೆಗಲ ಮೇಲೆ ಕೈ ಹಾಕಿ ಅಲುಗಿಸಿದರು. ದೇವಾಯ್ ದೇಹ ಅಲುಗಲಿಲ್ಲ. ವಿನಾಯಕ್ ಗಾಬರಿಯಿಂದ ಬೆರಳುಗಳ ಮಧ್ಯೆ ಇದ್ದ ಚೀಟಿಯನ್ನು ಹಿಡಿದು ಓದಿದರು. "ವಿಷ ಕುಡಿದು ಸತ್ತಿದ್ದೇನೆ ನನ್ನ ಮರಣಕ್ಕೆ ಬೇರೆ ಯಾರೂ ಕಾರಣರಲ್ಲ. ನನ್ನ ಬಾಳಿನಲ್ಲಿ ಉಳಿದಿದ್ದ ಮಾರ್ಗ ಇದೊಂದೇ—ದೇವಾಯ" ಎಂದಷ್ಟೇ ಬರೆದಿತ್ತು.

ವಿನಾಯಕ್ ಗಾಬರಿಪಡದಿರುವಂತೆ ನಿಂತೇ ಇದ್ದರು.

ದಯಮಾಡಿ
ನಿಮ್ಮ ಚಂದಾ ಹಣ
ಕಳುಹಿಸಿ ಕೊಡಿರಿ
ತನ್ನೊಲಕ 'ನವಯುಗ'ಕ್ಕೆ
ಸಹಕಾರ ನೀಡಿರಿ
ವಾರ್ಷಿಕ ಚಂದಾ ರೂ. ೧೦



NAVAYUGA 4-7-1968
Registered with the Registrar of News Papers for India under No. R. N. 3546/'57

REGD. No: B. G: 176
LICENCE No. 31
Licensed to Post without Prepayment

ನಿಸರ್ಗದಿಂದ ಪಾಠ

ಭಾರತದ ಅಪೂರ್ವ ದೃಶ್ಯ: ತ್ರಿವೇಣಿ ಸಂಗಮ

ಬರೆದವರು: ಶ್ರೀ ಶಿವಶಂಕರ.

ಭಾರತದಲ್ಲೂ ಭಾರತದಾಗಿರುವ, ಹೊರ ದೇಶಗಳಲ್ಲಿ ಹೊರಗಟ್ಟಲ್ಪಡುತ್ತಿರುವ ಭಾರತೀಯನ ಭವಿಷ್ಯ ಅಮವಾಸ್ಯೆಯೇ ಏಕು? ಇನ್ನು ಅವನಿಗೆ ದಕ್ಷಿಣಾಯನವೇ ಗತಿ ಏನು? ಅವನು ಇನ್ನು ಮುಂದೆ ಗೌರವಪೂರ್ಣ ಹುಣ್ಣಿಮೆಯ ಬೆಳದಿಂಗಳನ್ನು ಕಾಣಲಾರನೇನು? ಅವನ ಜೀವನದಲ್ಲಿ ಇನ್ನು ಮುಂದೆ ಉತ್ತರಾಯಣ ಬರಲಿಕ್ಕೇ ಇಲ್ಲವೇನು?

ಭಾರತ ಭಾರತೀಯರದಾಗಲೇ ಬೇಕು. ಇಲ್ಲಿ ಭಾರತೀಯ ಜೀವನ ಪದ್ಧತಿಯೇ ಇರಬೇಕು. ಅದರ ವಿರೋಧಿ ದುಃಶಕ್ತಿ ಇರಲು ಸಾಧ್ಯವೇ ಇಲ್ಲ. ಅದೇ ರೀತಿ ಹಿಂದೆ ಅನ್ಯಾನ್ಯ ರಾಷ್ಟ್ರಗಳವರು ಧಾರ್ಮಿಕ ಭಾರತೀಯರನ್ನು ಸ್ವಾಗತಿಸುತ್ತಿದ್ದಂತೆ ಇಂದೂ ಆಗಬೇಕು. ವಿಶ್ವದಲ್ಲಿ ಭಾರತೀಯ ಪರಂಪರೆ ಗೌರವದ ಸ್ಥಾನವನ್ನು ಪಡೆಯಲೇಬೇಕು. ಎತ್ತಿಚೆನೆಮ್ಮ ಪ್ರಧಾನಿಯವರು ಅಗ್ನೇಯ—ಏಷ್ಯಾದ ದೇಶಗಳಿಗೆ ಭೇಟಿ ಕೊಟ್ಟರು. ಅವರು ಮಲೇಷ್ಯಾಕ್ಕೆ ಹೋಗಿದ್ದಾಗ ಅಲ್ಲಿನ ಪ್ರಧಾನಿ ಶ್ರೀ ಟುಂಕು ಅಬ್ದುಲ್ ರಹಮಾನರು ಸ್ವಾಗತಿಸಿದರು. ಅವರಿಗೆ ಕೊಟ್ಟಿದ್ದ ಸತ್ಕಾರ ಸಮಾರಂಭದಲ್ಲಿ ಮಾತಾಡುತ್ತ "ನಾವು ಇಲ್ಲಿ ವಲೇಷ್ಯಾದಲ್ಲಿ, ಭಾರತದತ್ತ ನೇತೃತ್ವ ಹಾಗೂ ಮಾರ್ಗದರ್ಶನಕ್ಕಾಗಿ ನೋಡುತ್ತಿದ್ದೇವೆ"ಂದರು. ಅಂದರೆ ಭಾರತದ ಪ್ರಧಾನಿಯವರ ವೈಯಕ್ತಿಕ ನೇತೃತ್ವ ಅಥವಾ ಅವರ ಪಕ್ಷದ ಮತ್ತು ಸಮಾಜವಾದದ ಮಾರ್ಗದರ್ಶನಕ್ಕಾಗಿ ಅವರು ಕಾಯುತ್ತಿರುವದಲ್ಲ; ಭಾರತದ ಮಾರ್ಗದರ್ಶನದತ್ತ. ಇದೇ ರೀತಿ ಶ್ರೀಮತಿ ಇಂದಿರಾ ಗಾಂಧೀಜೀಯವರ ತಂದೆ, ದಿವಂಗತ ಪಂಡಿತ ಜವಾಹರಲಾಲ ನೆಹ್ರೂಜೀಯವರು ಪ್ರಧಾನಿಯಾಗಿದ್ದು ಅನ್ಯ ರಾಷ್ಟ್ರಗಳಿಗೆ ಭೇಟಿ ಕೊಡುತ್ತಿದ್ದಾಗ ಅಲ್ಲಿಯವರು ಹೇಳುತ್ತಿದ್ದರು. ಆಮೇರಿಕದಲ್ಲಿ ಭಾರತದ ನೇತೃತ್ವವನ್ನು ಸ್ವಾಗತಿಸುವವರ ಸಂಖ್ಯೆ ವರ್ಧಿಸುತ್ತಾ ಇದೆ ಭಾರತ ಭಾಷ್ಯರನಿಗೆ ವಿರೋಧಿ ರಾಹು ಹಿಡಿದಿರುವ ಗ್ರಹಣ ಕಾಲದಲ್ಲಿ ದೇಶ ವಿದೇಶಗಳಲ್ಲಿ ಕೆಲ ರಾಷ್ಟ್ರಗಳಾದರೂ ಮಾರ್ಗದರ್ಶನಕ್ಕೆ ಭಾರತದತ್ತ ಆಶಾ ದೃಷ್ಟಿ ಬೀರಲು ಅದೆಂತು ಸಾಧ್ಯ? ಸಹಜವಾಗಿ ಈ ಪ್ರಶ್ನೆ ಬರುತ್ತದೆ. ಪರ ರಾಷ್ಟ್ರಗಳು ಭಾರತವನ್ನು ಮುನ್ನರ್ ಗುರುವೆಂದು ಪರಿಗಣಿಸಬೇಕಾದಲ್ಲಿ, ಇಲ್ಲಿಯರಾಮತೀರ್ಥ, ವಿವೇಕಾನಂದ, ಶೈಲೇಂದ್ರರನ್ನು ಸ್ವಾಗತಿಸಬೇಕಾದಲ್ಲಿ ಭಾರತವು ಅದಕ್ಕೆ ತಕ್ಕ ರಾಷ್ಟ್ರವಾಗಲೇ ಬೇಕು —ಅಂದರೆ ಭಾರತೀಯ ಪ್ರಜ್ಞೆಯಿಂದ ಭಾರತೀಯರೆಲ್ಲರೂ ಸಂಘಟನಾ ಸೂತ್ರದಲ್ಲಿ ವೋಣಿಸಲ್ಪಡಬೇಕು. ಈ ಸಾಹಸಕ್ಕೆ ಅವರಿಗೆ ಸ್ಫೂರ್ತಿನೆರೆ ಯಾವದ? ಭಾರತೀಯರನ್ನು ಮುನರ್ ಒಂದುಗೂಡಿಸಲು ಸಾಧ್ಯವೇನು? ಸ್ಫೂರ್ತಿ ಸೆಲೆ ಯಾವದು, ಎಲ್ಲಿದೆಂಬುದನ್ನ ತಿಳಿದುಕೊಂಡಲ್ಲಿ, ಸಂಘಟನೆ ಸಾಧ್ಯವೆಂದೇ ಒಪ್ಪಿಕೊಳ್ಳಬೇಕಾಗುತ್ತದೆ.

ಬಿಕ್ಕಟ್ಟು! ಹೊಡೆದಾಟ! ಎಲ್ಲೆಲೂ ಕಂಡುಬರುತ್ತಿದೆ. ಈ ಅಂಧಕಾರದಲ್ಲಿ ಸಂಘಟನೆಯ ದಿವ್ಯ ಆಶಾಜ್ಯೋತಿ! ಅದುವೇ ಸಂಸಂಘಟಿತ ಭಾರತದ ಅಪೂರ್ವ ದೃಶ್ಯ ಪವಿತ್ರ ಪ್ರಯಾಗ ತೀರ್ಥಕ್ಷೇತ್ರದಲ್ಲಿ ಗಂಗೆ-ಯಮುನಾ-ಸರಸ್ವತಿ ಹಳ್ಳಗಳು ಸಂಗಮವಾಗುತ್ತವೆ. ಭಾರತೀಯರಿಗೆ ಸಂಘಟನೆಯ ಪಾಠ ಕಲಿಸಲಿಕ್ಕಾಗಿಯೇ ನಿರ್ಗ ಹೊಡಿರುವ ಆಟ ಇದು, ದೇವರು ಅನುಗ್ರಹಿಸಿರುವ ವರದಾನ. ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದಲ್ಲಿ ಸ್ವರ್ಗದಲ್ಲಿ ಸ್ನಾನ ಕಾದಿರಿಸಿದಂತೆಂದು ಕೆಲವರು ಗ.ಣಾಕಾರ ಹಾಕಿಕೊಳ್ಳುವದುಂಟು. ಅವರ ಪಾಪಗಳನ್ನೆಲ್ಲ ಕೂಡಿಸಿ, ಪುಣ್ಯಗಳನ್ನು ಕಳೆದು, ಸ್ವರ್ಗದ ಸ್ಥಿತಿಯನ್ನು ಶೇಖರಿಸಿಟ್ಟು ಉಳಿದು ಬಿಡುವವರುಂಟು. ಇವೆಲ್ಲಕ್ಕಿಂತಲೂ ವಿವೇಕಶಾಲಿಯು, ಯೋಚನಾಶಕ್ತಿಯುಳ್ಳವನು ತ್ರಿವೇಣಿ ಸಂಗಮದಿಂದ ಸಂಘಟನಾ ಪಾಠವನ್ನು ಕಲಿತುಕೊಳ್ಳುತ್ತಾನೆ. ಇದನ್ನು ಅಂಧಶ್ರದ್ಧೆಯೆಂದು ಜರೆದಾಡಿಕೊಳ್ಳುವವರಿದ್ದರೂ ಜನತಾ ಪ್ರವಾಹ ಅತ್ತ ಹರಿಯುತ್ತಿದೆ. ಅದನ್ನು ತಡೆಗಟ್ಟಲು ಆಕ್ರಮಣಕಾರಿ ಮಹಮ್ಮದೀಯರಿಗೂ, ಬ್ರಿಟಿಷರಿಗೂ, ಅನ್ಯರಿಗೂ ಸಾಧ್ಯವಾಗಿರುವದಿಲ್ಲ. ಅಡ್ಡಿ ಆತಂಕಗಳನ್ನೆಂಟುಮಾಡುವ ಬದಲು ಜನತೆಯೊಂದಿಗೆ ಒಂದಾಗಿ ಸಂಘಟನಾ ಕಾರ್ಯದಲ್ಲಿ ಭಾಗಿಗಳಾದಾಗ ಅವರ ಭಾಗ್ಯದ ಬಟ್ಟೆಲೂ ಪುಣ್ಯಾಜಲದಿಂದ ತುಂಬುತ್ತದೆ. ತ್ರಿವೇಣಿಗೆ ಯಾರನ್ನಾದರೂ ಆಮಂತ್ರಿಸುವವರು ಯಾರಾದರೂ ಇರುವರೇ? ಅಲ್ಲಿ ಕುಂಭವಿಗಿಂತ ಅಮೃತ ಬಿದ್ದಿರುವದನ್ನು ಕಂಡವರು ಯಾರಾದರೂ ಇರುವರೇ? ಅಲ್ಲಿ ಅಮೃತ ಇರಲಿ, ಇಲ್ಲದಿರಲಿ; ಅದೇ ರೀತಿ ಅಮೃತ ಬಿದ್ದಿರಲಿ, ಬೀಳದಿದ್ದಿರಲಿ ತ್ರಿವೇಣಿ ಸಂಗಮ ನಡೆಯುತ್ತದೆ. ಭಾರತೀಯರು ಒಂದಾಗಿ ಕೂಡುತ್ತಾರೆ. ಅಲ್ಲಿ ಭಾಷೆ, ರಾಜ್ಯ, ಮನ, ಜಾತಿ— ಅದೇನೂ ಅಡ್ಡಿ ಬರಲಾರದು. ಮಹಾ ಮಹಾ ಸ್ವಾಮಿಜೀಗಳೂ, ಮಠೀಯ ಮುಖಂಡರೂ, ರಾಜಾಧಿರಾಜರೂ, ಶ್ರೀಸಾಮಾನ್ಯನೂ ಒಂದೇ ಕ್ಷೇತ್ರದಲ್ಲಿ ಭಿನ್ನಭಾವವಿಲ್ಲದೆ ಒಂದಾಗಿ ಸ್ನಾನಮಾಡುತ್ತಾರೆ. ಇವರೆಲ್ಲರ ಸಂಘಟನೆ ಅಸಾಧ್ಯವೇನು? ತ್ರಿವೇಣಿ ಸಂಗಮಕ್ಕಾಗಿಯೇ ಅನ್ನುವಂತೆ ಭಗೀರಥನು ಗಂಗಾ ನದಿಯನ್ನು ತರಿಸಿದನು.

ಇಲ್ಲಿ ಮೂರು ನದಿಗಳು—ಅದರಲ್ಲೂ ಒಂದು ಅಂತರ್ಗಾಮಿನಿ-ಒಂದಾಗುವದಾದಲ್ಲಿತಮಿಳುನಾಡಿನ ಕುಂಭಕೋಣಮಿನಲ್ಲಿರುವಂತೆ ಇಷ್ಟಿತ ದಿನದಂದು ಪುಣ್ಯ ಭೂಮಿ ಭಾರತ ದೇಶದಲ್ಲಿರುವ ಪಾವನ ನದಿಗಳ (ಸಿಂಧೂ, ಗಂಗೆ, ಯಮುನೆ, ಸರಸ್ವತಿ, ಗೋದಾವರಿ, ನರ್ಮದೆ, ಕಾವೇರಿ, ವೈಗೆ ಇತ್ಯಾದಿ) ಪವಿತ್ರ ಜಲ ಬಂದು ತುಂಬುತ್ತದೆ. ಇದು ಕೂಡಾ ತೀರ್ಥ ರಾಜ ಪ್ರಯಾಗ ಕ್ಷೇತ್ರದಲ್ಲಿ ನಡೆದಂತೆ ಹದಿನೈದು ವರ್ಷಗಳಿಗೊಮ್ಮೆ ನಡೆಯುತ್ತದೆ. ಪ್ರಯಾಗದಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಪೂರ್ಣ ಕುಂಭಮೇಳ, ಆರು ವರ್ಷಗಳಿಗೊಮ್ಮೆ ಅರ್ಧ ಕುಂಭಮೇಳ ಹಾಗೂ ಪ್ರತೀ ವರ್ಷ ಜನವರಿಯಲ್ಲಿ ಮೇಳ ನಡೆಯುತ್ತದೆ. ಅಲ್ಲಿ ಪ್ರತೀ ವರ್ಷವೂ ದೇಶದ ನಾನಾ ಭಾಗಗಳಿಂದ ಲಕ್ಷೋಪಲಕ್ಷ ಭಾರತೀಯರು ಒಂದಾಗುತ್ತಾರೆ. ಅದೇ ರೀತಿ ದೇಶದ ದಕ್ಷಿಣಸೆಗಳಿಂದಲೂ ಭಾರತೀಯರು ಕುಂಭಕೋಣಮಿನಲ್ಲಿ ಬಂದು ಸೇರುತ್ತಾರೆ. ಅದ್ಯಾವ ದ್ರಾವಿಡ ಕಾನನದಿಂದಲೂ ಉತ್ತರ ನದಿಗಳ ನೀರು ಬರುವದನ್ನು ತಡೆಯಲು ಯಾರೂ 'ಅಂಧಶ್ರದ್ಧೆ'ಯನ್ನು ಅಳಿಸಿಬಿಡಲು ಸಾಧ್ಯವಾಗುವದಿಲ್ಲ. ಈ ಲೆಕ್ಕ ಇದು ದ್ರಾವಿಡ ನಾಡಿನ ಮುಂದೆಯೇ ನಡೆಯುತ್ತದೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
Ex. C. 86/1968 ಮಂಗಳೂರು ಸಿವಿಲ್ ಜಡ್ಜರ ಕೋರ್ಟು.
O.S. 350/1950

ಧರ್ಮರಾಜ ಬಲಿಸ ಸಜಾ—Dfts,
ಅರ್ಜೀದಾರ್ರು.

ಮತ್ತು

ಮುಸ್ಲಾವತಿ ಸಜಾ—Jds. ಎದ್ರಿರು ಕೋರ್ಟು ಯಕುಂ ಪ್ರಕಾರ ಸದ್ರಿ ಅಮ್ಲಜ್ಜಾರಿಯ 18ನೇ ಎದ್ರಿಳು, ಶ್ರೀಮತಿ—ಸುಶೀಲ್, ಚಂದ್ರಾವತಿ ಮಗಳು, ಕಾರ್ಕಳ ತಾಲ್ಲುಕಲ್ಲೂರು ಗ್ರಾಮ್ದು ಬಸ್ತಿ ಬಳಿಯಾಗುವದು.

ಯುವಳಿಗೆ ಈಮೂಲ್ಯ ತಿಳಿಯಪಡಿಸುವುದೇನೆಂದ್ರೆ—

ಉಡ್ರಿ ಸಿವಿಲ್ ಜಡ್ಜರ ಕೋರ್ಟು R.E. P. 17/62ನೇ ವ್ಯವಹರಣೆಯಲ್ಲಿ ಕೋರ್ಟ್ ಡಿಕ್ರೀಯಿನಲ್ಲಿರುವ ರೂ. 1000=00ನ್ನು ಮೇಲಿನ ಅಮ್ಲಜ್ಜಾರಿ ವ್ಯವಹರಣೆಯಲ್ಲಿ ತೆರಿಕೊಂಡು ಅದನ್ನು ಈ ಡಿಕ್ರಿ ಸಮಾಧಾನಕ್ಕೆ ಅರ್ಜೀದಾರರಿಗೆ ಕೊಡಿಸಬೇಕಾಗಿ ಅರ್ಜೀದಾರ್ರು ದಾಕ್ಲು ಮಾಡಿದ ಸದ್ರಿ ಅಮ್ಲಜ್ಜಾರಿಯು ಸದ್ರಿ 18ನೇ ಎದ್ರಿಳ ಅಕ್ಷೇಪದ ಬಗ್ಗೆ ತಾರೀಕು 19.7.1968ಕ್ಕೆ ಯಿಟ್ಟಿದ್ದ ಅಪ್ರಿಂದ ಆ ಕಾರಣ ಸದ್ರಿ 18ನೇ ಎದ್ರಿಳ ಅಕ್ಷೇಪ ಯಿದ್ರಿ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟ್ ಮುಂದ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅಮ್ಲಜ್ಜಾರಿಯು ಅವಳ ಗೈರುಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ.

H. K. Gopalkrishna Rao,
Vakil for Dfts.

ಕಾರ್ಕಳ, 24.6.1968.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಎ.ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹಪೈಕ್ಯ. ಹೆರಿಗೆ ವಿಧಾಣ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. 3-00 (ಪೋಸ್ಟು ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



1—7—1968

೨೦
ಪೈಸೆ

ಕಥಾ ಸ್ವಪಂಚ

ಬಾಯಾರಿಕೆಯಿಲ್ಲ

ಬರೆದವರು:
ಶ್ರೀ ಕೆ ಸಚ್ಚಿದಾನಂದ ಉಡುಪ

ಅವಳು ಬಹಳ ಕ್ಷೀಣ ವ್ಯಕ್ತಿ. ಆದರೂ ಈ ಕ್ಷೀಣ ದೇಹದಲ್ಲಿ ಒಂದು ತರಹದ ವಿಶೇಷತೆ ಎದ್ದು ಕಾಣುತ್ತಿದೆ ನನಗೆ.

ನಾವಿಬ್ಬರೂ ಒಂದೇ ಕಚೇರಿಯಲ್ಲಿ ಕೆಲಸ ಮಾಡ ವರು. ಕಾಗದದ ಹಾಳೆದು ಮೇಲೆ ಬರೆದಂತಹ ಅವಳ ಅಕ್ಷರ ದರ್ಶನ್ನು ಕಂಡಾಗ ಪೈ ಪುಲಕಿತವಾಗುತ್ತದೆ. ಒಂದು ಬಾರಿ ಕೇಳಿದೆ (ಬಿಟ್ಟಿ- "ನಾವು ಶಿಕ್ಷಣವನ್ನು ಎಷ್ಟರ ಮಟ್ಟಿಗೆ ಪ್ರಾಪ್ತಿಸಿದ್ದೀರಿ?"

'ಮೆಟ್ರಿಕನ ವರೆಗೆ'—ಕ್ಷದ ಧ್ವನಿಯಲ್ಲಿ ಉತ್ತರ.

"ಆದರೂ ನಿಮ್ಮ ಅಕ್ಷರಕ್ಕಷ್ಟು ಚೆನ್ನಾಗಿರಲು ಕಾರಣವೇನು?"—ಕಾನೆಂದೆ ಅವಳು ಬಿಟ್ಟನ್ನಲಿಲ್ಲ

ಮತ್ತೊಂದು ಬಾರಿ ಹೇಳಿಯೇ ಬಿಟ್ಟಿ —"ಮೆಟ್ರಿಕ್‌ನ ವರೆಗೆ ಕಲಿತ ವ್ಯಕ್ತಿಯ ಅಕ್ಷರ ಇಷ್ಟು ಮಂಡಗಾಗಿರಲು ಸಾಧ್ಯವೇ ಇಲ್ಲ"

"ಅದು ನಿಮ್ಮ ತಿಳುವಳಿಕೆ' ಅವಳೆಂದಳು.

"ಮತ್ತು ನಿಮ್ಮ?...."

"ನಿಮ್ಮಲ್ಲಿ ಹೇಳಲಿಚ್ಛಿಸುವುದಿಲ್ಲ"—ಅನ್ನುತ್ತಾ ಪುನಃ ತನ್ನ ಕಾರ್ಯದಲ್ಲಿ ನಿರತಳಾದಳು. ಆದರೂ ನಾನು ಶಾಂತಚಿತ್ತನಾಗಲಿಲ್ಲ.

"ತಾವು ಚಿತ್ರಕಲೆಯ ಮೇಲೆ ಅಭಿರುಚಿ ತೋರಿಸುವಿರೇ?"—ಮಗುದೊಮ್ಮೆ ಪ್ರಶ್ನಿಸಿದೆ.

"ನನಗೆ ಚಿತ್ರಕಾರಕ್ಕ ಮೇಲೆ ಪ್ರೀತಿ."

"ಹಾಂ! ಸರಿ. ತಮ್ಮ ಚಿತ್ರಕಲೆಗಳನ್ನು ನೋಡಬಹುದೇ?"

"ನೋಡುವುದಕ್ಕೆ ನಿಮ್ಮನ್ನಾರು ತಡೆದಿದ್ದಾರೆ?'

'ಹಾಳೆ ತರುವಿರೇ?"

'ನನ್ನ ಚಿತ್ರಕಲೆಯನ್ನು ಪ್ರದರ್ಶನ ಮಾಡಲಿಚ್ಛಿಸುವುದಿಲ್ಲ'

"ಹಾಗಾದರೆ ಚಿತ್ರ ಮಾಡುವುದೇ ತಕ್ಕೆ!"

"ನ ನಶ್ಯಾಂತಿಗಾಗಿ ಮಾತ್ರ"--ಅವಳ ಉತ್ತರ.

"ಮನಶ್ಯಾಂತಿಗಾಗಿ ಇದೊಂದೇ ದಾರಿಯೆ? ಬೇರೆ ದಾರಿ ಕಾಣುವುದಿಲ್ಲವೇ?'—ನಾನೆಂದಾಗ ಅವಳು ಮಾತೆತ್ತಲಿಲ್ಲ. ಮತ್ತೊಮ್ಮೆ ಮಾತು ಮುಂದುವರಿಸಿದೆ—"ತಮ್ಮ ಚಿತ್ರವೆಲ್ಲವೂ ಸುಟ್ಟಾಗಲ್ಲಿ ಪ್ರಕಟವಾಗುತ್ತವೋ?

"ಕಳಿಹಿಸಲಿಷ್ಟವಿಲ್ಲ."

'ಹಾಗಾದರೆ ಪ್ರದರ್ಶನಗಳಲ್ಲಿ ತಮ್ಮ ಚಿತ್ರ ನೋಡಬಹುದೇ?"

"ಮೊದಲೇ ಹೇಳಿದ್ದೆನಲ್ಲ, ಚಿತ್ರ ಪ್ರದರ್ಶನ ಮಾಡಲಿಷ್ಟವಿಲ್ಲವೆಂದು"—ಕೋಪದಲ್ಲಿ ನುಡಿದಳು.

"ತಮ್ಮ ಮನೆಗೆ ಬರಬಹುದೇ?"—ಕಾನೆಂದೆ.

"ಬರಲು ತಡೆದು ಹಿಡಿದವರಾರು?"

"ತಾವು ಹೂವ ಸಮಯಕ್ಕಲ್ಲಿರಬಹುದೆಂದು ತಿಳಿಸಬಹುದೇ?"—ನಾನು ಅದೇ ಧ್ವನಿಯಲ್ಲಿ ಕೇಳಿದೆ.

'ನನ್ನ ವೇಳೆ ನಿಮಗೆ ಅಷ್ಟು ಪ್ರೀತಿಯೇ?'

"ನಿಮಗೂ ಅಷ್ಟು ಪ್ರೀತಿಯೇ?'—ನಾನೆಂದೆ.

"ಅಲ್ಲ, ನಿಮಗೆ ನನ್ನ ಮನೆಗೆ ಬರುವುದರಲ್ಲಿ ಅಷ್ಟು ಉತ್ಸಾಹವೇನ ?"

"ತಮ್ಮ ಚಿತ್ರದ ಮೇಲಿನ ಪ್ರೀತಿಯಿಂದ."

"ನನ್ನ ಚಿತ್ರದ ಮೇಲೆ ಅಷ್ಟೂ ಪ್ರೀತಿಯೆ?"

"ನಾನೂ ಓರ್ವ ಲೇಖಕ. ಕೆಲವೊಮ್ಮೆ ಚಿತ್ರಗಳನ್ನು ಕಂಡು ಕೂಡಾ ಯಾವುದಾದರೂ ಕಥೆ ಬರೆಯಬಹುದು"

"ಏನು, ತಮ್ಮ ಜೀವನದಲ್ಲಿ ಲೇಖನಕ್ಕೆ 'ಥೀಮ್ಸ್' ಸಿಗ್ಯುವುದಿಲ್ಲವೇ?"

"ಒಂದೊಮ್ಮೆ ಸಣ್ಣ ವಸ್ತುವಿನಿಂದ ಯಾವುದಾದರೂ ಕಥೆ 'ಪ್ಲಾಟ್' ಸಿಕ್ಕಿದರೆ ಕೆಟ್ಟದೆ?"

ಅವಳು ಶಾಂತಳಾಗಿದ್ದಳು! ತುಸು ಸಮಯದ ನಂತರ "ನನ್ನ ಚಿತ್ರದಲ್ಲೇನು ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯವಿಲ್ಲವಲ್ಲಾ!" ಅಂದಳು

"ಹಾಗಾದರೆ ಆ ಚಿತ್ರವೇನು?" ಎಂದಾಗ ಅವಳು ಕೆಲಸ ಮಗ್ನಳಾದಳು. ಒಂದು ಕಾಗದದ ತುಂಡು ಏನನ್ನೂ ಹೇಳದೆ ಅವಳು ನನ್ನ ಕೈಗಿತ್ತಳು. ಅದರಲ್ಲಿ ಅವಳ ಮನೆಯ ವಿಳಾಸ ಸೂಚಿಸಿದ್ದಳು.

ರವಿವಾರ ಅವಳ ಮನೆಗೆ ನಡೆದೆ. ಒಬ್ಬಳೇ ಇದ್ದಳು- ಅವಳು ಕಾಫಿ ತಯಾರಿಸಿದಳು.

"ಮನೆಯಲ್ಲಿ ಯಾರು ಇದ್ದಾರೆ?" ಕಾನೆಂದೆ.

"ನಾನು ಮತ್ತು ನನ್ನ ಚಿತ್ರಗಳು."

'ಮತ್ತೇನಿಲ್ಲವೇ?"

ಗೋಡೆಯಲ್ಲೊಂದು ದೊಡ್ಡ ವ್ಯಕ್ತಿಯ ಫೋಟೋವೊಂದು ನೇತಾಡುತಿತ್ತು. ಫೋಟೋದ ಅಂಚಿನಲ್ಲೊಂದು ಅಗರಬತ್ತಿ ಉರಿಯುತ್ತಿತ್ತು. ನಾನು ಪುನಃ ವಿಚಾರಿಸಿದೆ "ಮತ್ತೇನಿಲ್ಲವೇ?"

"ಮತ್ತೆನಿಲ್ಲದರ ವಿಚಾರ ತಿಳಿದು ನಿಮಗೇನು ಲಾಭ?" ತುಸು ಸವಟಯದ ಅನಂತರ "ಹಾಂ. ಅದೆಲ್ಲಾ ವಿಚಾರ ಆಲ್ಲೇ ಇರಲಿ ನೀವ್ಯಾವ ಕೆಲಸಕ್ಕೆ ಒಂದಿದ್ದೀರಿ?"

"ಚಿತ್ರ ನೋಡುವುದಕ್ಕಾಗಿ'

ಅವಳು ಒಳ ನಡೆದು 'ಅಲ್ಬಮ್'ನ್ನು ತಂದಳು.

ನಾನು ಚಿತ್ರಗಳ ಪುಟಗಳನ್ನು ತಿರುವುತ್ತಾ ಕುಳಿತೆ. ಯಾವ ಚಿತ್ರಗಳೂ ಅಷ್ಟು ವಿಶೇಷವುಳ್ಳವುಗಳಲ್ಲ.

"ನಿಮ್ಮ ಚಿತ್ರವೇನು ಉಚ್ಚ ತರಗತಿಯದು ಅಲ್ಲ" ನಾನು ನುಡಿದೆ.

"ನಿಮ ಗಾರು ನಿಮ ಶಿಕ್ಷಕರು ಹೇಳಿದರು?' ಅವಳೆಂದಳು.

"ಕ್ಷಮಿಸಿರಿ."

ಪುನಃ ಪುಟಗಳನ್ನು ತಿರುವುತ್ತಾ ತೊಡಗಿದೆ. ಒಬ್ಬಳು ಅಬಲೆ ಕೂಗುತ್ತಿದ್ದಳು. ಮತ್ತೊಬ್ಬ ಪುರುಷ ನಿಂತು ನೋಡ ತ್ತಿದ್ದಾನೆ. ಪುರುಷನ ಕಂಣಾಡಲ್ಲಿ ನೀರಿಲ್ಲ. ಸ್ತ್ರೀಯ ಮೇಲೆ ಈ ಪುರುಷನಿಗೊಂದಿಷ್ಟೂ ಕರುಣೆಯಿಲ್ಲ. ನಾನು ಚಿತ್ರದ ಮೇಲೆ ದೆರಳಿಡುತ್ತಾ "ನೀವು ಚಿತ್ರಿಸಿದಂತೆ ಜಗತ್ತು ಇಷ್ಟು ಕೆಟ್ಟು ಹೋಗಿಲ್ಲವಲ್ಲಾ!' ಎಂದೆ.

"ಇಷ್ಟು ಒಳ್ಳೆದು ಆಗಿಲ್ಲವಲ್ಲಾ" ಅವಳೆಂದಳು.

ನಾನು ಸುಮ್ಮನಾದೆ.

ಇದೇ ರೀತಿ ಇನ್ನೂ ಅನೇಕ ಚಿತ್ರಗಳಿದ್ದುವು. ಸ್ತ್ರೀ ಕೂಗುತ್ತಿದ್ದಳು. ಪುರುಷ ನಗುತ್ತಿದ್ದ. ಮತ್ತು ಅನೇಕ ಚಿತ್ರಗಳು.....ಒಂದು ಚಿತ್ರದ ಹುಟ್ಟು ನನಗರಿಯಲೇ ಇಲ್ಲ. ಚಂದ್ರ ಕೂಗುತ್ತಿ

(ಹನ್ನೊಂದನೇ ಪುಟ ನೋಡಿರಿ)

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ
O.S. 23/68.

ಸಂಡಿಕೇಟ್ ಬೇಂಕ್ ಲಿಮಿಟೆಡ್, ಮಂಚಪಾಲ—ವಾದಿ

ಮತ್ತು

A. ಶೀನ ಭಂಗೇರ ಕೊಡಾ—ಪ್ರತಿವಾದಿರು ಇವರೊಳಗೆ

1 A ಶೀನಭಂಗೇರ್, ಸೋಮ ಮರಕಾಲರ ಮಗ ಮೋಟಿನ ವ್ಯಾಪಾರಿ 2. ಇಂದಿರಾಬಾಯಿ, 1 ನೇಯವರ ಹೆಂಡತಿ 3 A. ಕೇಶವ ಭಂಗೇರ, 1 ನೇಯವರ ಸಹೋದರ ಉಡ್ಪಿ ತಾಲ್ಲೂಕಿನವರೆಲ್ಲರೂ ವಾಸವರು. ಇವರಿಗೆ ಈ ಮೂಲಕ ತಿಳಿಸಿಕೊಡುವುದೇನೆಂದರೆ—

ಪ್ರತಿವಾದಿರಿಂದ ನಿಂದು ಕೊಡಬೇಕಿರುವ ತಾ 4 6 ರಂದಲ್ಲಿ ವಾದಿ ಬೇಂಕಿಗೆ ಕಿಮೋಂಡು ನೋಟು ಬರೆಕೊಟ್ಟು ಪಡೆದಲ್ಲ ಬೇಕು ಸಂಬ್ಯ ಬಾಕಿಸಿರುವ ಅಲ್ಲೇ ಬಾಕಿ ಸಲ್ಲಿಗಾಗಿ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾ, 28 7.68ಕ್ಕೆ ಒಂದು ನೋಟೀಸು ಒಗೆ ಇಟ್ಟಿರುತ್ತದೆ. ಆ ದಿನ್ನ ಪೂರ್ವಾಹ್ನ ಗಂಟೆ 11ಕ್ಕೆ ಸರಿಯಾಗಿ ಮೇಲ್ಕಂಡ ಕೋರ್ಟ್ ಮುಂದೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗಿಯೂ ಇದೆ

M. Damodar Kamath,
Advocate for Plaintiff.
Udipi, Dated 2-7-68.

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ

ಹೊಟೆಲ್ ಶಿವ ಪ್ರಸಾದ

ಕುಂದಾಪುರ ದೆ ಕೆ

ಫೋನ್: 77

ಶಿಷ್ಟ ಬ್ರಾಹ್ಮಣ ಕಲಿ-ಯೆಯಾದ ಭೋಜನ, ಸಕಲ ವಿಧದ ಕಂಡಿತಿಗಳು ಹಾಗೂ ಸಕಲ ಉಪಾಹಾರಕ್ಕೆ ಅಗ್ರ ಸ್ಥಾನ ಹೊಂದ ವಿಶಾಲವಾದ ಹೊಟೆಲ್:

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O S 236/67. R I.A. 413/67

ಕೆ. ವೆಂಕಟ್ರಮಣ ಹೊಳ್ಳ—ವಾದಿ.

ದೇವಣ್ಣ ಶ್ಯಾನುಭಾಗ ಪಾತಿಕೊಡಾ—ಪ್ರತಿವಾದಿರು.

ಪ್ರತಿವಾದಿರು 6. ರಮಣಿ ಬಾಯಿ, ವೆಂಕಟ್ರಾಯ ಪೈರ ಹೆಂಡತಿ, Udipi Hotel, Manchanhalli, Kolar District, P.O Manchanhalli.

7. ಜಂಸ್ಟಿಯನೆಕೃಷ್ಣಿ, ದೇವಣ್ಣ ಶ್ಯಾನುಭಾಗರ ಮಗಳು, ಉಡ್ಪಿ ತಾಲೂಕು ಕೋಟೆ. ತಟ್ಟು ಗ್ರಾಮ.

8. ಶಾರದಾಬಾಯಿ, ದೇವಣ್ಣ ಶ್ಯಾನುಭಾಗರ ಮಗಳು ವ ಪಾಂಡುರಂಗರಾಯರ ಹೆಂಡತಿ, Gajanana Bhavana, Udipi Hotel, Opp' Old Post Office, Kolar District, P O Chikkaballapura ಇವರಿಗೆ—

ವಾದಿಯು ಬಾಬ್ತು ಅಂಗಡಿಯಲ್ಲಿ ಪ್ರತಿವಾದೀರು ನಡೆಸಿದ ವ್ಯಾಪಾರ ಬಾಬ್ತು ಬಾಕಿಯಾದ ರೂ. 6498 22ಕ್ಕೆ ಮೇಲ್ಕಂಡ ದಾವೆಯನ್ನು ವಾದಿ ಮಾಡಿರುತ್ತಾನೆ. ಹೆಚ್ಚು ಪ್ರತಿವಾದಿರ ಹಕ್ಕಿನ ಸ್ಥಿರಾಸ್ತಿಯನ್ನು ಕೂಡಾ ಜಪ್ತು ಮಾಡಿರುತ್ತಾನೆ. ಆ ಕಾರಣ ನಿಮ್ಮದೇ ನಾದರೂ ಅಕ್ಷೇಪಣೆಯಿದ್ದಲ್ಲಿ ಮೇಲ್ಕಂಡ ಕೋರ್ಟ್‌ಮುಂದೆ ತಾ. 27.7.1968ಕ್ಕೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಉಪ್ರ ಶಿಕ್ಷಾ ಯೇಕಪಕ್ಷವಾಗಿ ತೀರ್ಪೂಕೊಡಲಾದೀತು ಎಂಬ ಸಂಗತಿ ಕೋರ್ಟ್ ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಸೋಣಾಗಿದೆ.

K. Raghunatha Shenoy,
Advocate for Plff.
ಕುಂದಾಪುರ, 29-6-68.

ಫೋನ್ : 526
ಸಂಪುಟ ೪೭
VOL 47
ಸಂಚಿಕೆ ೪೫
No. 45

ನವಯುಗ

ಉಡುಪಿ ೧೧—೭—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು
ಸಂಪಾದಕರು :
ಕೆ. ಹೊನ್ನಯ್ಯ ಶೆಟ್ಟಿ

ಸ್ವಪ್ರಯತ್ನದ ಪಾಠ

ರಶ್ಯ ಸಂದರ್ಶನ, ರಶಿಯನ್ ಪ್ರಧಾನಿ ಅಲೆಕ್ಸಿ ಕೊಸಿಗಿನ್ನರ ಪಾಕಿಸ್ತಾನ ದರ್ಶನಗಳ ಫಲ ಶ್ರುತಿಯೇನು ಎಂಬದರ ಬಗ್ಗೆ ಆಗಲೇ ಊಹಿಸಲಾಗಿತ್ತು. ರಶ್ಯಕ್ಕೆ ಪಾಕ್ ಮಿಲಿಟರಿ ನಿಯೋಗ ಭೇಟಿಕೊಡತ್ತಿದೆ ಈಗ. ಪಾಕಿಸ್ತಾನಕ್ಕೆ ಯಾವ ಒಗೆಯ ಮಿಲಿಟರಿ ಸಹಾಯ ಆಗತ್ತದೆ; ಅದನ್ನು ಎಷ್ಟರ ಮಟ್ಟಿಗೆ ಪೂರೈಸಲು ಸೋವಿಯತ್ ರಶ್ಯ ಸಿದ್ಧವಿದೆಯೆಂಬುದನ್ನೂ ಗೊತ್ತು ಮಾಡಬೇಕಷ್ಟೆ. ನೆರವಿನ ರೂಪದಲ್ಲಿ ಇದ್ದರೂ ಮೂರುವ ಮೂಲಕ ಪಾಕಿಸ್ತಾನವು ರಶ್ಯದಿಂದ ಶಸ್ತ್ರಾಸ್ತ್ರಗಳನ್ನು ಪಡೆಯುವುದು ಸಾಧ್ಯ—ಇದು ರಾಜ್ಯತೀಯದ ಪ್ರಬಲ ಮೂಲಗಳ ಅಭಿಪ್ರಾಯ. ಭಾರತದ ಪರಮ ಸ್ನೇಹಿತ ರಾಷ್ಟ್ರಗಳಲ್ಲಿ ರಶ್ಯವೊಂದೆಂಬುದು ಖಚಿತವಾದ. ಭಾರತದ ಕಾಶ್ಮೀರ ನೀತಿಯನ್ನು ಪ್ರಬಲವಾಗಿ ಬೆಂಬಲಿಸುತ್ತಿರುವುದು ಈ "ದೊಡ್ಡ ದೇಶ"ವೊಂದೇ. ಇದರ ನಿರಾಕೃತಿ ಸೂಚಕ ಮತದಿಂದಾಗಿಯೇ ಹಲವು ಬಾರಿ 'ಕಾಶ್ಮೀರದ ಸಮಸ್ಯೆ' ತಲೆ ತಗ್ಗಿಸಿದೆ—ಭದ್ರತಾ ಸಮಿತಿಯಲ್ಲಿ. ಭಾರತದ ಆಂತರಿಕ—ಬಾಹ್ಯ ಬೆಳವಣಿಗೆಯಲ್ಲಿ ಕಾಳಜಿಯಿಂದ ನಡೆದುಕೊಳ್ಳುತ್ತಿರುವ ರಶ್ಯನ್ ನಾಯಕರು ಈಗ ಪಾಕಿಸ್ತಾನದೊಡನೆಯೂ ಕೈಮಿಲಾಯಿಸ ಹೊರಟಿದ್ದಾರೆ ಎಂದರೆ ಇದರರ್ಥವೇನು ?

ಪಾಕಿಸ್ತಾನ ಇಷ್ಟ ತಾಳಿದ್ದೇ ದ್ವೇಷಮಯ ವಾತಾವರಣದಲ್ಲಿ. ಅದು ಬೆಳೆದುಬಂದದ್ದೂ, ಬೆಳೆಯುತ್ತಿರುವುದೂ ಅಂತಹುದೇ ಗಾಳಿಯಿಂದು. ಪಾಕಿಸ್ತಾನದ ಇಪ್ಪತ್ತು ವರ್ಷಗಳ ಇತಿಹಾಸದಲ್ಲಿ ಅದು ಸಾಧಿಸಿ ಉಳಿಸಿಕೊಂಡ ಆಸ್ತಿಯಂದರೆ, 'ಭಾರತ ವಿದ್ವೇಷ' ಮಾತ್ರ. ಮೊದಲಿಗೆ ಅಮೇರಿಕನ್ನರಿಗೆ ಪೇಶಾವರದಲ್ಲಿ ಸೈನಿಕ ರಾಣ್ಯ ರಚಿಸಲು ಅವಕಾಶ ಕೊಡಿ ಅದರ ವಿತ್ರತ್ವವನ್ನು ಗಳಿಸಿಕೊಂಡಿತು. ಅಷ್ಟೆಂದ ಹೆಚ್ಚಾರು ಜಗಿಯಲ್ಲಿ ಶಸ್ತ್ರಾಸ್ತ್ರಗಳನ್ನು ಪಡೆದು ಸೈನಿಕ ಬಲವನ್ನೇ ಹೆಚ್ಚಿಸಿಕೊಂಡಿತು. ಸಾಧ್ಯವಿದ್ದಲ್ಲೆಲ್ಲಾ ಶಸ್ತ್ರಾಸ್ತ್ರ ಪಡೆದು ಭಾರತ ವಿದ್ವೇಷ ಕೀರ್ತಿಯನ್ನೇ ಹಾಲೆರೆದು ಸಾಕಿತು. ಅಂದು ಭಾರತದ ಮೇಲೆ ಆಕ್ರಮಣವನ್ನೂ ಮಾಡಿ ಸೋತು ಹೋಯಿತು. ಮುಂದೆ ಅಮೆರಿಕೆಯಿಂದ ಶಸ್ತ್ರಾಸ್ತ್ರ ಮತ್ತೆ ಪಡೆಯುವಲ್ಲಿ ಅಂತಿಕವಾಗಿ ಶಕ್ತವಾಯಿತು. ಅದೇ ಸಿದ್ಧರೂ ಭಾರತವನ್ನು ಸ್ವತಂತ್ರವಾಗಿ ಆಕ್ರಮಿಸಬೇಕಾದರೆ ಬಲವಾದ ಸೈನಿಕ ಶಕ್ತಿ ಬೇಕು ಎಂಬುದನ್ನು ಮನವರಿಕೆ ಮಾಡಿಕೊಂಡ ಅಯ್ಯೂಬಖಾನರು ಎಲ್ಲೆಲ್ಲಿಂದಲೂ ಶಸ್ತ್ರಾಸ್ತ್ರ ಖರೀದಿಗೆ ಹೊರಟಿದ್ದಾರೆ. ಅಮೆರಿಕೆಯ ವಿಯತನಾಮ ಕದನದಿಂದ ಅಪಖ್ಯಾತಿಗೆ ಗುರಿಯಾದಂತೆ ರಶ್ಯದಉದಾರ ನೀತಿ ಜಗಜ್ಜಾಹಿರವಾಯ್ತು. ಕೆಂಪು ಚೀನಾದ ಪ್ರಬಲ ಶಕ್ತಿ ಅಭೇಶ್ಯಾಕ್ಕೊಂದು ಬೆದರಿಕೆ. ಭಾರತದ ಸರ್ವಾಂಗೀಣ ಪ್ರಗತಿ, ಅದರ ವೈಜ್ಞಾನಿಕ ಸಾಧನೆಗಳು, ದೇಶಕಟ್ಟುವಲ್ಲಿ ಜನತೆಯ ಶ್ರದ್ಧೆ—ದುಡಿಮೆಗಳಿಂದಾಗಿ ಇದು ಏಶ್ಯನ್ ನಾಯಕತ್ವದ ಪ್ರತಿಸ್ಪರ್ಧಿಯೆಂದರೂ ಸಲ್ಲುತ್ತದೆ. ಹಿಂದೂ ಮಹಾ ಸಾಗರದಿಂದ ಬ್ರಿಟನ್ನು ತನ್ನ ಸೇನೆಯನ್ನು ಹಿಂದೆಗೆದುಕೊಳ್ಳುತ್ತ—ಮುಂದಿನ ವರ್ಷದಲ್ಲಿ ವಿಯತನಾಮದಲ್ಲಿ ತಳವೂರಿದ್ದ ಅಮೆರಿಕೆಯೂ ಇನ್ನೇನು ಕಂಬಿಕೀಳಿಯೇ ಕೀಳ ಬೇಕಾಗುತ್ತದೆ. ಪೇಶಾವರದ ಸೈನಿಕ ನೆಲೆಯನ್ನೂ ತೆರವು ಮಾಡಬೇಕೆಂದು ಅಧ್ಯಕ್ಷ ಖಾನರು ಅಮೆರಿಕೆಗೆ ತಿಳಿಸಿದ್ದಾರೆ. ಹಾಗಾಗಿ ಬ್ರಿಟನ್ ಅಮೆರಿಕೆಗಳ ಪ್ರಭಾವ ದಕ್ಷಿಣ ಏಶ್ಯನ್ ದೇಶಗಳ ಮೇಲೆ ಕಡಿಮೆಯಾಗುವಾಗ ಕೆಂಪು ಚೀನಾ ತನ್ನ ಹೆಬ್ಬಾಹುಗಳಲ್ಲಿ ಅವನ್ನು ತಬ್ಬಿಕೊಳ್ಳಲು ಮುಂದಾಗುವಾಗ, ಸೈದ್ಧಾಂತಿಕ ಬಿನ್ನ ಮತವುಳ್ಳ ಸೋವಿಯತ್ ರಶ್ಯತನ್ನ ಮಾಯಾಜಾಲವನ್ನು ಹರಡಿಸಲು ಯತ್ನಿಸಿದರೆ ಆಶ್ಚರ್ಯವಿಲ್ಲ. ಏಕೆಂದರೆ, ರಶ್ಯ ಭಾರತದ ಮಿತ್ರರಾಷ್ಟ್ರ, ಕಂಟಿಕೋರ ಪಾಕಿಸ್ತಾನವನ್ನು ಸವಜಾಯಿಸಿ ಅದನ್ನು ಕೆಂಪು ಚೀನಾದ ಬಾಹುಬಂಧನದಿಂದ ಮುಕ್ತಗೊಳಿಸಿ ತನ್ನ ಮಡಿಲಲ್ಲಿ ಹಾಕಿಕೊಂಡರೆ, ಭಾರತ ಉಪಖಂಡದ ಮೇಲೆ, ತನ್ನೊಲಕ ಇತರ ದೇಶಗಳ ಮೇಲೆಯೂ, ತನ್ನ ಪ್ರಭಾವವಿರಿಸಿಕೊಂಡು ಕೆಂಪು ಚೀನಾವನ್ನು ಬದಿಗಿಟ್ಟಲು ಸಾಧ್ಯವಾಗುವುದು. ಭಾರತದಲ್ಲಿ ಒಮ್ಮಿಂದೊಮ್ಮೆಲೇ ನಾಯಕತ್ವವನ್ನು ಸ್ಥಾಪಿಸುವ ಶಕ್ತಿಯೂ ಸಧ್ಯ ಕಡಿಮೆ, ಜತೆಗೆ 'ಕಾಶ್ಮೀರ'ವೇ ಮೊದಲಾದ ಕ್ಲಿಷ್ಟ ಪ್ರಶ್ನೆಗಳನ್ನು ಮುಂದೂಡಿ ಅದರ ಮುಖ್ಯ ಮಸಿ ಬಳಿಯುವ ಯತ್ನವನ್ನೂ ಮಾಡುವ ದೇಶಗಳು ಕೆಲವಿವೆ, ಮೊತ್ತ ಮೊದಲನೆಯದೇ ಪಾಕಿಸ್ತಾನ

ಇದನ್ನೆಲ್ಲಾ ನೋಡುವಾಗ ಪುರಂದರ ದಾಸರ ಹಾಡಿನ ತುಣುಕೊಂದು ನೆನಪಾಗುತ್ತದೆ: 'ಯಾರು ಹಿತವರು ನಿನಗೆ ಈ ಮೂವತ್ತೊಳಗೆ? ನಾರಾಯೋ ಗಾಧರ ಜಿಯೋ? ಬಲುಧನದ ಸಿರಿಯೊ?' ಈ ಮೂವರಲ್ಲಿ ಯಾರೂ ನನ್ನ ಹಿತವರಲ್ಲವೆಂದು ಹೇಳಿ ಮುಂದೆ 'ಪುರಂದರ ವಿಠಲ ನೊಬ್ಬನೇ ಹಿತವಂದಿಸನೆಂದು ಹೇಳಿ

(ಹತ್ತನೇ ಪುಟ ನೋಡಿರಿ)

ಗೌರವದ ಬದುಕು

ಶ್ರೀ ಅನಂತ ಪೈಯವರ ಅನಂತಮುಖೀ ಸೇವೆ

ಜುಲಾಯಿ ೧೧. ಭಾರತೀಯ ಬ್ಯಾಂಕಿಂಗ್ ಉದ್ಯಮದಲ್ಲಿ ಸುವರ್ಣ ದಿನ. ದೇಶದ ಕೈಬೆರಳೆಣಿಕೆಯ ದೊಡ್ಡ ಜನತೆಯ ಬ್ಯಾಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕಿನ ಚೆಯರ್‌ಮ್ಯಾನ್—ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು ಬ್ಯಾಂಕಿಂಗ್ ಕ್ಷೇತ್ರವನ್ನು ಪ್ರವೇಶಿಸಿದ ಶುಭ ದಿನವದು

ಇಪ್ಪತ್ತೈದು ವರ್ಷಗಳಿಗೆ ಮೊದಲು ಡಿಪ್ಯುಟಿ ಮೆನೇಜರರಾಗಿ, ಕಡಿಮೆಸಂಖ್ಯೆಯ ತಾರುಣ್ಯದಲ್ಲಿ, ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇರಿಕೊಂಡ ಶ್ರೀ ಟಿ. ಅನಂತ ಪೈಯವರು ಈ ಅವಧಿಯಲ್ಲಿ ಸರ್ವತೋಮುಖ ಪ್ರಗತಿ—ಸಾಧನೆಗಳನ್ನಾಗಿ ಅಡಳಿತಿಸಿದ ಡಿರವರು ತನ್ನ ಕರ್ತವ್ಯವನ್ನು ಅರಿತುಕೊಂಡು, ಅದನ್ನು ಪಾಲಿಸುವಲ್ಲಿ ತತ್ಪರರಾದರು, ಯಶಗಳಿಸಿದರು. ಮಾನವನ ಜೀವಮಾನದಲ್ಲಿ ಕಾಲು ಶತಮಾನ ವರ್ಷ ಸಮಾನವಾದರೂ ಒಂದು ಸಂಸ್ಥೆಯ ಜೀವಮಾನದಲ್ಲಿದು ತೃಣಾರಮಾನವೇ. ಆದರೆ, ಶ್ರೀ ಪೈಯವರು ಈ ಅಲ್ಪಾವಧಿಯಲ್ಲೇ ಬ್ಯಾಂಕನ್ನು ಪರ್ವತ ಸಮಾನವಾಗಿ ತಲೆಯೆತ್ತಿ ನಿಲ್ಲುವಂತೆ ಬೆಳೆಸಿದ್ದಾರೆ. ಇದಕ್ಕಿಂತ ದೊಡ್ಡ ತ್ಯಾಗಪೂರ್ಣ ಸೇವೆಯೇನಿದೆ?

೧೯೪೭ರಲ್ಲಿ ೪೭ ಶಾಖೆಗಳು (ಹೆಚ್ಚಿನವು ಕರಾವಳಿ ಪ್ರದೇಶದಲ್ಲಿ) ಮತ್ತು ರೂ. ೧೫೫ ಕೋಟಿಗಳ ಸಾಧನ ಸಂಪತ್ತನ್ನು ಪಡೆದ ಸಿಂಡಿಕೇಟ್ ಬ್ಯಾಂಕ್ (ಸ್ಥಾಪನೆ. ೧೯೦೫) ಈಗ ೨೩೧ ಶಾಖೆಗಳನ್ನು ಮತ್ತು ರೂ. ೧೧೦ ಕೋಟಿ ಸಾಧನ ಸಂಪತ್ತನ್ನು ಹೊಂದಿ ತ್ರಿವಿಕ್ರಮಾವತಾರ ತೋರಿದೆ. ಚಿಕ್ಕ ಬ್ಯಾಂಕುಗಳನ್ನು ತನ್ನಲ್ಲಿ ವಿಲೀನಗೊಳಿಸಿ ಜನತೆಗೆ ಭದ್ರ ಬ್ಯಾಂಕಿಂಗ್ ಸೇವೆ ನೀಡುವಲ್ಲಿ, ರೈತಾಪಿ ಜನರಿಗೆ, ಚಿಕ್ಕ ಉದ್ದಿಮೆದಾರರಿಗೆ ಅರ್ಥಾದಿ ನೆರವು ಕೂಡುವಾಹುವಲ್ಲಿ, ಹಣ್ಣೇನು, ಪಟ್ಟ ಮಗವೂ 'ಇದು ನನ್ನ ಬ್ಯಾಂಕು' ಎಂದು ತೊಡಲ್ಪಡಿಯುವಂತೆ ಮಾಡುವಲ್ಲಿ ಶ್ರೀ ಟಿ. ಎ. ಪೈಯವರ ಇಂದ್ರಜಾಲದ ಹಸ್ತ ಹರಿದಾಡಿದೆ.

೧೯೪೭ರಲ್ಲಿ ಡಿಪ್ಯುಟಿ ಮೆನೇಜರರಾಗಿದ್ದ ಶ್ರೀ ಅನಂತ ಪೈಯವರು ಮರುವರ್ಷ ಜನರಲ್ ಮೆನೇಜರರಾದರು, ೧೯೬೨ರಿಂದ ಮೆನೇಜಿಂಗ್ ಡೈರೆಕ್ಟರರಾಗಿ ೧೯೬೭ರ ದಶಂಬರದಿಂದ ಚೆಯರ್‌ಮ್ಯಾನ್ ವತ್ತ ಮೆನೇಜಿಂಗ್ ಡೈರೆಕ್ಟರರಾಗಿದ್ದಾರೆ; ತನ್ನ ಪೂಜ್ಯ ತಂದೆ ದಿ| ಉಪೇಂದ್ರ ಅನಂತ ಪೈ ಮತ್ತು ಚಿಕ್ಕ ತಂದೆ ಪದ್ಮಶ್ರೀ ಡಾ. ಮಾಧವ ಅನಂತ ಪೈಯರಿಂದ ಸೌಜನ್ಯ, ಸ್ನೇಹಪರತೆ, ಕರ್ತವ್ಯ ಭಾವನೆ, ಮಾನವೀಯ-ಪಾರಿಜಾತ ದೃಢತೆ, ಸಾಧನಾ ಪ್ರವೃತ್ತಿ, ಪ್ರಯತ್ನ ಪ್ರಿಯತೆ, ಸೇವಾಬುದ್ಧಿ ಮತ್ತು ಯಶಗಳಿಕೆ ಮೊದಲಾದ ಉತ್ಕೃಷ್ಟ ಗುಣಗಳನ್ನು ಇವರು ಪಿತ್ರಾರ್ಜಿತವಾಗಿ ಸಂಪಾದಿಸಿದ್ದಾರೆಂದರೆ ಅತಿಶಯೋಕ್ತಿಯಾಗದು

೧೯೫೭ ಮತ್ತು ೧೯೬೪ರಲ್ಲಿ ಜಗತ್ಪರ್ಯಟನೆ ಮಾಡಿ ಪ್ರಮುಖ ದೇಶಗಳಲ್ಲಿನ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಧ್ಯಯನ ಮಾಡಿದರು. ಅವುಗಳಲ್ಲಿ ಪ್ರಯೋಜನವಾದುವನ್ನು ತನ್ನ ಬ್ಯಾಂಕಿನಲ್ಲಿ ಅನುಷ್ಠಾನಕ್ಕೆ ತರಲು ಆರಂಭಿಸಿದರು.

ಮನೆ ಕಟ್ಟುವ ಉಪಾಧಿಗಳನ್ನು ಪ್ರತಿ ಇಟ್ಟಿಗೆಯನ್ನೂ ಪ್ರೀತಿಸಿ ಗಾರೆಯಿಂದ ಜೋಡಿಸುತ್ತಾನೆ. ಶ್ರೀ ಪೈಯವರು ಪ್ರತಿ ನೌಕರನನ್ನೂ ಸಾಗರಿಕನನ್ನೂ ಗೌರವಿಸಿ ಆದರಿಸುತ್ತಾರೆ. ಮನೆ ಕಟ್ಟುವಲ್ಲಿ ಇಟ್ಟಿಗೆ ಗಾರೆಗಳಂತೆಯೇ ಬ್ಯಾಂಕಾ ಕಟ್ಟುವಲ್ಲಿ ನೌಕರ-ಶ್ರೀ ಸಾಮಾನ್ಯರೆಂಬ ಸತ್ಯ ಅವರಿಗೆ ಗೊತ್ತು. ಹೆಳ್ಳಿಗಳ ದೇಶವಾದ ಭಾರತದಲ್ಲಿ ಗ್ರಾಮೀಣ ಶಾಖೆಗಳನ್ನು ತೆರೆದು ಅವರಿಗೆ ಬ್ಯಾಂಕಿಂಗ್ ಸಂದೇಶ ಸೀಡುವಲ್ಲಿ ಶ್ರೀ ಪೈಯವರು ಮುಂಚಾದರು. ಇಂದು ೫ ಸಾವಿರಕ್ಕೆ ಕಡಿಮೆ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲೇ ಸಿಂಡಿಕೇಟನ ಸುಮಾರು ೫೦ ಶಾಖೆಗಳಿವೆ.

ಸಿಂಡಿಕೇಟ್ ಬ್ಯಾಂಕಿನ ಸಾರ್ವಾಧಿಯ ಚೆಯರ್‌ಮ್ಯಾನ್-ಮ್ಯಾನೇಜಿಂಗ್ ಡೈರೆಕ್ಟರರಾದರೂ ಹಲವಾರು ಸಂಘ-ಸಂಸ್ಥೆಗಳ ಸಂಪರ್ಕ ಹೊಂದಿದವರು. ಇವರು ೧೯೬೨ರಲ್ಲಿ ದೇಶದಲ್ಲಿ ಆಮದಾರ ಕಾರ್ಪೋರೇಶನ್ ಆರಂಭವಾದಾಗ ಮೊದಲೊಂದು ವರ್ಷ ಗೌರವ ಅಧ್ಯಕ್ಷರಾಗಿ ಅ

(ಹತ್ತನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಮರ್ಯಾದಾ ಪುರುಷೋತ್ತಮಿಯರು

"ಕೇಳಿದ್ದೇನೆ?"

'ಎಷ್ಟು?'

"ಮತ್ತೇನು? ಇನ್ನು ಹೆಂಗುಸರೂ ರಂಡಸರಂತೆ ಆರಿಥೋತಿ ಉಡಬೇಕು ಇಲ್ಲ, ಫಿಟ್ ಪ್ಯಾಂಟ್, ತುಂಡು ಲಂಗ ....'

"ಛೆ, ಏನಿದು ನಾಚಿಕೆ!'

'ಇದರಲ್ಲಿ ನಾಚಿಕೆಯೇನು ಬಂತೆ? ನೋಡಿ ಈಗ ಶೋಕಿ ಹೆಂಗಸರತ್ತ ಮೂರೂವರೆ ಮೀಟರಿನ ಸೀರೆ ಅರ್ಧ ಮೀಟರಿನ ಬ್ಲೌಸು....'

'ನಾಳು ಬಿಡೀಂದ್ರೆ....ಅದೆಲ್ಲಾ ಅವ್ರ ಬುದ್ಧಿ ಯನ್ನ ತೋರ್ಸ್ತೆ ಅಷ್ಟೆ...."

"ಅಂದ್ರೆ?'

'ಕಳೆಗೆಳದರೆ ಕಾಲಿಲ್ಲ, ಕಾಲಿಗೆಳದರೆ ತಲೆಗಿಲ್ಲ ಅಂತ....'

"ಓ, ಹಾಗೇನು? ಇರಬಹುದೂನ್ನ. ನೋಡು, ಇದೀಗ ಸೀರೆಗಳ ಬೆಲೆ ಆಕಾಶಕ್ಕೆ ನೆಗೆತ್ತದೆ..."

"ಇದ್ಯಾವ ಜ್ಯೋತಿಷ್ಯರ ಭವಿಷ್ಯ?'

"ಇದಕ್ಕೆಲ್ಲಾ ಜ್ಯೋತಿಷ್ಯರೇಕೆ? ಅನುಭವವೇ ಸಾಲದೇನು?"

"ಹೊಸ ಜ್ಯೋತಿಷಿಗಿಂತ ಹಳೇ 'ಜ್ಯೋತಿಷ್ಯ ಪ್ರಿಯ'ನೇ ಸಾಕೂನಿ...ಅದ್ರೂ ಕೂಡಿದಿರೋ ಸಂಗ್ತಿಯೇನೂಂತ...."

"ಮತ್ತೆನ್ನೇನು? ಈಗ ಸೀರೆಗಳೂ ಕಪ್ಪು ಮಾರುಕಟ್ಟೆಯ ದಾರಿ ಹಿಡಿದಿವೆಯಂತ?"

"ಅಂದ್ರೆ?"

"ಅಂದ್ರೆ, ಕಾನೂನು ವಿರೋಧವಾದ ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತವೆ... ಅದ್ರಿಂದ ದೇಶದಲ್ಲಿ ಅಭಾವ—ಚೀರು ಭಾವ. ಅದಕ್ಕಾಗಿ ಉಳಿತಾಯ—ಅರಿಥೋತಿ,ತುಂಡು ಲಂಗ, ಫಿಟ್ ಪ್ಯಾಂಟ್, ಕಾಲು ಮೀಟರಿನ ಬ್ಲೌಸ್...."

"ಛಿ....,ನಾಚಿಕೆಯಾಗುವುದಿಲ್ಲವೇನು? ಅಲ್ಲ, ನಿವು.ಗೆ—ನಮ್ಮಂಥವರಿಗೆ ಹೆಂಗುಸರನ್ನು ನಗ್ನಾವಸ್ಥೆಗೆಳೆದಷ್ಟು ಆತ್ಮತೃಪ್ತಿಯಂತ ತೋರುತ್ತೆ....ಯೂರ ಕ್ಯಾಲೆಂಡರನ್ನೇ ನೋಡಿ, ಯೂರ ಜಾಹೀರಾತನ್ನೇ ನೋಡಿ ಅದರಲ್ಲಿ ಬಳಸಿಕೊಳ್ಳುವುದು..."

"ನೋಡು, ಮೊನ್ನೆ ಎಲ್ಲೊ ಒಂದು ಸುದ್ದಿ ಓದಿದ ನೆನಪು. ಜಾಹೀರಾತುಗಳ ಹೆಸರಲ್ಲಿ ನಾರಿಯರ ನಾಚಿಕೆಯನ್ನು ಬೀದಿಗೆಳೆಯುವುದರ ವಿರುದ್ಧ ಮಹಿಳೆಯರು ಎದ್ದು ನಿಲ್ಲುತ್ತಾರಂತೆ...."

"ಯಾಕೆ ಎದ್ದು ನಿಲ್ಲಬೇಕು?"

"ಪ್ರತಿಭಟಿಸಲು..."

"ಅಯ್ಯೋ, ನೀವೆಲ್ಲಿದ್ದೀರಿ? ನಾವೇನೂ ಹಾಗೆ ಮಾಡಬೇಕಾಗಿಲ್ಲ...."

"ಮತ್ತೆ ಪೂರ್ತಾ ನನ್ನ...."

"ಯಾಕೆ ಹೆದರ್ತೀರಿ? ಒಬ್ಬವಲ್ಲ, ಸಾವಿರಾರು ದುಶ್ಶಾಸನ ಬಂದು ದ್ರೌಪದಿಯ ಸೀರೆಯ ಕೆದು ಕಳ್ಳಗೊಳಿಸಲು ಪ್ರಯತ್ನಿಸಿದರೂ ಪತಿವ್ರತಾ ಶಿರೋಮಣಿ ದ್ರೌಪದಿಯೇನಾದಳು?"

"ಹ್ಹಾಂ...."

"ಆ ದುಶ್ಶಾಸನನ ಕತೆಯೇನಾಯಿತು?"

"ಹ್ಹಾಂ....ಹಾಗೇ ಈಗಿನ ಕಲಾವಿದರು, ಕಲಾಪ್ರಿಯರು ಆಗ್ತಾರೇನು?"

"ಅವನ ಹಾಗೆ ಯಾಕೆ ಆಗ್ಬೇಕು? ಅವನಂತೆ ಭ್ರಷ್ಟರಾಗುತ್ತಾರೆ. ಅದಿರ್ಲಿ ಇವ್ರು ದೇಶದ ಸೀರೆಗಳೇಗ ಎಲ್ಲಿಗೆ ಹೋಗ್ತವೆ?"

"ಅದೇ ಅಂದೆನಲ್ಲಾ? ಕಪ್ಪು ಮಾರುಕಟ್ಟೆಗೇಂತ...."

"ಅದು ಸರಿ. ಎಲ್ಲಿಯ ಕಪ್ಪು ಮಾರುಕಟ್ಟೆ, ಯಾಕೆ ಅಲ್ಲಿ ಹೋಗುತ್ತೆ...."

"ನಮ್ಮ ಪೆರೆಯಲ್ಲಿ ರಾವಣನ ಶ್ರೀಲಂಕೆಯಿದೆ ನೋಡ...."

"ಅಯ್ಯೋ ಯಾಕೆ ಹಾಗೆ ಹೇಳ್ತೀರಾ?'

"ಹೇಳ್ಬಾರ್ದೇನು?"

"ಅಲ್ರಿ, 'ಕರಕಮಳ'ವನ್ನು ಮೃಗಾಲಯದ ಪ್ರಾಣಿಯನ್ನಾಗಿ ಪ್ರೇಕ್ಷಣೀಯಗೊಳಿಸಿದ ದೇಶವಲ್ಲವೇ ಅದು?"

"ತನ್ನ ತಪ್ಪು ಗೊತ್ತಾಗಿ 'ಕರಕಮಳ'ವನ್ನು ಹಿಂತೆಗೆದುಕೊಂಡಿದೆಯಾಗ...."

"ಇದೊಳ್ಳೇ ಬೇಷಾಯ್ತು. ಮೊದಲು ಬೂಟುಗಾಲಿನಿಂದ ಒದಿಯೋದು, ಸಾರಿ ಅನ್ನೋದು—ಫರಂಗಿ ಪದ್ಧತಿ...."

"ಕೊನೆಗೂ ಬುದ್ಧಿ ಬಂತಲ್ಲ..."

"ಇರ್ಲಿ, ಈಗ ಮತ್ತೊಂದು ಉಪದ್ವ್ಯಾಪವೇನು ಹೇಳಿ...."

"ಶ್ರೀ ಲಂಕೆಯು ಈಗ ರೇಶ್ಮೆ ಸೀರೆಯ ಆಯಾತವನ್ನು ನಿಷೇಧಿಸಿದೆ. ಅದುದರಿಂದಲೇ ರೇಶ್ಮೆ ಸೀರೆಯ ಜನಪ್ರಿಯತೆ ಹೆಚ್ಚಿದೆ. ಅದಕ್ಕಾಗಿ ನಮ್ಮ ದೇಶದಿಂದ ಅಲ್ಲಿ ಹೋಗುತ್ತದೆ...."

'ಸಾಧ್ಯಾನ್ನಿ. ಮದ್ರಾಸದಿಂದ ಸಿಲೋನಿಗೆ ಬಹಳ ಸುಲಭವಾಗಿ ಕಳ್ಳತನದಿಂದ ಸೀರೆ ಒಯ್ಯಬಹುದು."

"ಸರಿಯೇ. ಆದರೆ ಈ ಸೀರೆಗಳಿಗೆ ಗಿರಾಕಿ ಇರುವುದು ಕೊಲಂಬೋ ಪಟ್ಟಣದಲ್ಲಿ. ಜಾಫ್ನಾ ಭಯದಿಂದ ಕೊಲಂಬೋಗೆ ತರುವುದೇ ಪ್ರಯಾಸ...ಈ ಪ್ರಯಾಸದಿಂದಾಗಿಯೇ ಸೀರೆಯ ಬೆಲೆ ಇಷ್ಟಷ್ಟು, ಮುಷ್ಟಷ್ಟು...."

"ಅಲ್ರಿ, ಹೇಗೆ ತಂದ್ರಾರೆ?"

"ಅಯ್ಯೋ, ಮನವಿದ್ದಲ್ಲಿ ಮಹಾದೇವ. ಈಗ ನೋಡು, ಮಾವಿನಹಣ್ಣಿನ ಸೀಜನ್ನು. ಬುಟ್ಟಿಯಲ್ಲಿ ಸೀರೆ ಹಾಕಿ, ಮೇಲೆ ಮಾವಿನ ಹಣ್ಣು ಹೊದಿಸಿ, ರೈಲಿಗೆ ತಂದ್ಬಾರೆ. ಇಂತಹ ಬುಟ್ಟಿಗಳನ್ನು ಒಂದೇ ನಿಲ್ದಾಣದಲ್ಲಿ ರೈಲಿಗೆ ತುಂಬಿಸುವದಿಲ್ಲ ಬೇರೆಬೇರೆ ನಿಲ್ದಾಣಗಳಲ್ಲಿ ರೈಲಿಗೆ ಹೇರುತ್ತಾರೆ. ಕೊಲಂಬೋ ಮುಟ್ಟಿದ ಬಳಿಕ.....ಯಾರು ಹಿಡಿಯುತ್ತಾರೆ?"

"ಭಾರೀ ವಾಜಾ ಇದೆ ..."

"ಅದೇ ಅಂದನ್ನು, ನಮ್ಮ ದೇಶದ ಸೀರೆಗಳೆಲ್ಲಾ ಲಂಕೆಗೆ ಹೋದರೆ ನಮ್ಮ ಮರ್ಯಾದಾಪುರುಷೋತ್ತಮಿಯರು...."

"ಅಲ್ರಿ ಇದೆಂಥ ಶಬ್ದ?"

"ಯಾವುದೆ?"

"ಪುರುಷೋತ್ತಮಿ. ."

"ಪುರುಷ + ಉತ್ತಮಿ = ಪುರುಷೋತ್ತಮಿ—ಗುಣ ಸಂಧಿ. ಪುರುಷನ ದೆಸೆಯಿಂದಾಗಿ ಉತ್ತಮವೆನಿಸಿದವರು ಯಾರೋ ಅವಳು ವ್ಯಭಿಚಾರಣ ಬಹುವ್ರೀಹಿ ಸಮಾಸ...."

"ಸಾಕು ಬಿಡೀಂದ್ರೆ ಮ ದು ವೆ ಯಾಗೋವರ್ಗೂ ಪೋರ್‌ಟ್ಸೆಂಟ್ ಆಗಿದ್ದು ಆ ಮೇಲೆ ದಾರಿಗೆ ಬರುವ ಪುರುಷರ ಕಾರಣದಿಂದ ಉತ್ತಮರಾಗುವ ಹೆಂಡ್ತಿ ಇದ್ದಾರೇನು? ಅಧವಾ ಕ್ಷೀರಸಾಗರ ಭಟ್ಟನ ಮನೆಯಲ್ಲಿ...."

"ಏನೇಎಲ್ರೂ ನೀನಂದ ಹಾಗೆ ಬೀದಿ ಬಳವಣ್ಣರಾಗ್ತಾರೇನು?"

"ಇಲ್ಲಾನ್ನಿ. ಅದ್ರೂ ಬಸವಂತಾಗ್ತಾರೆ."

"ಇರ್ಲಿ...ಅದು...ಈಗ ಕೇಳು..."

"ಏನು?"

"ಫೀನು ಬಸವಾಂತಂದ ಕೂಡ್ಲೆ ನೆಪ ಪಾಯ್ತು. ಇದು ಬಿಳಿಯ ಅಸ್ಟ್ರೇಲಿಯಾದ ಸತ್ಯ ಕಥೆ ..."

"ಹ್ಹಾಂ...ಏನಂತೆ?"

"ಜೇನ್ಸ್ ಡನ್ನಾನ್ ಪ್ಯಾಟರ್‌ಸನ್ ಒಬ್ಬ ವ್ಯಕ್ತಿ. ಅವನ ಮೇಲೆ ಭಾರಹಣ ದುರುಪಯೋಗ ಮಾಡಿದ ಆರೋಪ. ತನ್ನಿಚ್ಛೆಯಂತೆ ತಪ್ಪಿಸಿಕೊಳ್ಳಲು ಒಂದೇ ಮಾರ್ಗ ದೇಶ ಬಿಟ್ಟು ಪರಾರಿಯಾಗುವುದು..."

"ಅಲ್ರಿ, ಅಲ್ಲಿಯೂ ಮುಟ್ಟಾಳರು ತುಂಬಿದ್ದಾರೇನು?"

"ಅಯ್ಯೋ, ಏನು ಹೇಳ್ತೀಯ? ನೀರಿದ್ದಲ್ಲಿ ಕೆಸರೂ ಇದ್ದೇ ಇದೆ...ತನ್ನ ಹೆಸರಿನಲ್ಲಿ ರಹದಾರಿ ಪಡೆಯಲಾರ. ಅದುದರಿಂದ ೨೨ ವರ್ಷಗಳ ಹಿಂದೆ ತನ್ನ ನಿಕಟ ಮಿತ್ರನಾಗಿದ್ದ ಜೇನ್ಸ್ ನಾರ್ಮನ್ ಬೀಚ್ ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡು ಅದರಂತೆ ಕಾರ್ಯ ಮುಂದುವರಿಸಿದ...."

"ಅವ ಎಲ್ಲಿದ್ದ?"

"ಯಾರಿಗೆ ಗೊತ್ತು?"

"ತಾನೇ ಬೀಚ್ ಎಂದು ತೋರಿಸಲು ಅವನ ಶೈಕ್ಷಣಿಕ ದಾಖಲೆ...ವಿವಾಹದ ದಾಖಲೆ ಮೊದಲಾದ.ವನ್ನೆಲ್ಲಾ ಸಂಗ್ರ

(ಬಂಭತ್ತನೇ ಪುಟ ನೋಡಿರಿ)

In the Court of the Munsif of Karkala

O. S. 691/1966.

Between

Shankara Shetty —Plaintiff.

Sundara Shedthi & others —Defendants.

To the Defendants.

22 Sheethu Shedthi, daughter of Korapalu alias Akkamma Shedthi.

24. Vasantha Shetty. 25. Indira Shedthi—Children of 22nd Defendant.

All residing at Vasundara Villa, Ajjarkad, Udipi Town.

Please take notice that the Plaintiff has filed the above suit for partition etc. and the same stands posted to 15 7.1968. You are hereby informed that you are at liberty to appear before the said Court at 11 A. M on that day and state your defence if any failing which the suit will be decided in your absence.

P. Ramachandra Rao,
Pleader for Plaintiff,

Karkala, Dated 30-6-'68.

ಋತು ಗಾನ

ವಸಂತ ಋತು:

ಜಲಧಿಯಿಂದ ಸರಸಿಂದ
ಧರೆಯ ಜಲಾಶ್ರಯಗಳಿಂದ
ನೀರಹಳಿಯ ಮೆಲ್ಲನೆಲ್ಲ
ಹೀರಿಕೊಳ್ಳುವೆ.

ತುಣುಕು ತುಣುಕು ಹಸಿಗಳನ್ನು
ಬಾನ ಬಟ್ಟೆಯಲ್ಲಿ ಇರಿಸಿ
ಮುಗಿಲ ರೂಪದಲ್ಲಿ ನಾನು
ಉಳಿಸಿಕೊಳ್ಳುವೆ.

ವರ್ಷ ಋತು:

ಧರೆಯ ಕಾಷ್ಠ ಏರಿದಾಗ
ನೀರಿಗಾಗಿ ಬಳಲಿದಾಗ
ಹೊಲಕೆ ಮಳೆಯ ರೂಪದಲ್ಲಿ
ನೀರನೆರೆಯುವೆ.

ಹಸುರು ತಳೆದ ಹೊಲಗಳೆಲ್ಲ
ಫಲವ ತಾಳಿದಾಗಲೆಲ್ಲ
ಬುವಿಯ ಜನರ ಹರುಷಕಂಡು
ಹಿಗ್ಗಿಕೊಳ್ಳುವೆ.

ವಸಂತ ಋತು— ವರ್ಷ ಋತು:
ಮಿಗಿಲಾಗಿ ಬಸಿರಿ ಉಳಿತಾಯಕ್ಕಾಗಿ
ಉಳಿತಾಯದ ಗುರಿ ಬಾಳ ಸುಖಕ್ಕಾಗಿ

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.
ಶಾಖೆಗಳು: 230 ಕ್ಕೂ ಮಿಕ್ಕಿ.
ಟಿ. ಎ. ಪೈ, ಚೆಯರ್‌ಮೇನ್

ಚಿತ್ರ ಕಲಾವಿದ ಶ್ರೀ ಪಿ. ಎಸ್. ಪುಣಿಂಚತ್ತಾಯ

ಬರೆದವರು: ಶ್ರೀ ವಿಜ್. ಎಂ. ನಾರಾಯಣ ಭಟ್

ಚಿತ್ರಕಲಾ ಸೃಷ್ಟಿಗಳನ್ನು ನೋಡಿ ಆನಂದಿಸಲು ಕಣ್ಣು ಮಕ್ಕಳಿಂದ ಹಣ್ಣು ಮುದುಕರ ಸಹಿತ ಎಲ್ಲರಿಗೂ ಅಶಕ್ತಿಯಿದೆ. ಆದರೆ, ಚಿತ್ರವನ್ನು ನೋಡಿದ ಬಳಿಕ ಚಿತ್ರಕಾರನ ಆಶಯದ ಹಿನ್ನೆಲೆಯ ಬಗ್ಗೆ "ತಲೆಬಿಸಿ" ಮಾಡಲು ಹೆಚ್ಚಿನವರಿಗೂ ಸಹನೆಯಿಲ್ಲವೆಂದು ನಾನು ಕೆಲವು "ಚಿತ್ರಕಲಾ ಪ್ರದರ್ಶನ"ಗಳನ್ನು ಕಂಡು ಹೊಂದಿದ ಅನುಭವವಾಗಿದೆ. ಕಣ್ಣಿದ್ದವರೆಲ್ಲರೂ ಚಿತ್ರಗಳನ್ನು ನೋಡಿ ಆನಂದಿಸುತ್ತಾರೆ. ಸಣ್ಣ ಮಕ್ಕಳು ಚಿತ್ರ ನೋಡುವುದಕ್ಕಾಗಿ ಎಷ್ಟು ಪುಸ್ತಕಗಳ ಪುಟ ಮಗುಚಿ, ಹರಿದುಹಾಕುವುದಿಲ್ಲ? ಓದಲು ಬಾರದ ಎಷ್ಟು ಮಂದಿ ಪತ್ರಿಕೆಗಳಲ್ಲಾದಲೀ ಕೆಲೆಂಡರುಗಳಲ್ಲಾಗಲೀ ಇರುವ ಬರುವ ಚಿತ್ರಗಳನ್ನು ಕಂಡು "ಪನರಂಜನೆಗೆ ತ್ರಮಿಸುತ್ತಿಲ್ಲ! ಅದರೂ ಎಲ್ಲರ ಅಭಿರುಚಿಯೂ ಏಕರೀತಿಯದಾಗಿರದು.

ಭಿನ್ನ ರುಚಿ

ಒಬ್ಬ ಚಿತ್ರ ಕಲಾವಿದನ ಕೃತಿಗಳಲ್ಲಿವೂ ಎಲ್ಲಾ ವರ್ಗಗಳ ಮೆಚ್ಚಿಗೆ ಪಡೆಯಬೇಕೆಂದಿಲ್ಲ. ಅದು ಸಾಧ್ಯವೂ ಇಲ್ಲ. ಕಲಾವಿದನು ಜೀವನದಲ್ಲಿ ಕಂಡ ಕಹಿ-ಸಿಹಿ ಅನುಭವದಳನ್ನೂ, ಪ್ರಕೃತಿ ಸೌಂದರ್ಯವನ್ನೂ, ಸಮಾಜದ ಕುಂದುಕೊರತೆಗಳನ್ನೂ ಕಲಾಸೃಷ್ಟಿಗಳು ಪ್ರತಿಬಿಂಬಿಸಿದರಾಯ್ತು! ಆಗ ಅದು ತನ್ನ ಕಲೆ. ಹೆಚ್ಚಿನವರಿಗೂ ಸುಲಭವಲ್ಲದೇ ಅರ್ಥವಾಗುವ ಮತ್ತು ಮನರಂಜನೆಯನ್ನೂ ಉಂಟುಮಾಡುವ ಚಿತ್ರಗಳಲ್ಲಿ ಮೆಚ್ಚುಗೆ. ಮತ್ತೆ ಕೆಲವರಿಗೆ ಪ್ರಣಯ ಲೀಲೆಯ ಚಿತ್ರಗಳೋ, ಸಿನೆಮಾ ತಾರೆಯರ ಚಿತ್ರಗಳೋ, ಮಹಾವ್ಯಕ್ತಿಗಳ ಅಥವಾ ಮಹಾತ್ಮರ ಚಿತ್ರಗಳೋ, ಪ್ರಕೃತಿ ಸೌಂದರ್ಯದ ರಮಣೀಯ ಚಿತ್ರಗಳೋ, ಧಾರ್ಮಿಕ, ಪೌರಾಣಿಕ, ಚಾರಿತ್ರಿಕ, ಅಕರ್ಷಕ ಬಣ್ಣಗಳ ಚಿತ್ರಗಳೋ, ಪ್ರಕೃತಿ ಭಂಗಿಗಳೋ ಇಷ್ಟವಾಗಿರಬಹುದು. ಬಣ್ಣಗಾರಿಕೆ ಚಿತ್ರಕಲೆಗೆ ಅಕರ್ಷಣೆ ಕೊಡುತ್ತದೆ.

ಕರುಣ ಕಲಾವಿದ

ಚಿತ್ರ ಕಲಾವಿದನು ಭಾವನಾತ್ಮಕ ಕತೆಗಳ ಮೂಲಕ ಜನ ಜಾಗೃತಿಯನ್ನುಂಟು ಮಾಡಬೇಕು. ವಿಶಿಷ್ಟ ನವ್ಯ ಕಲೆಗಳ

(ಎಂಟನೇ ಪುಟ ನೋಡಿರಿ)



SISTA S CB-39

ಕನರಾ ಬ್ಯಾಂಕ್
ಸಮೃದ್ಧ ಬೆಳೆಯ ಬೀಜಾರೋಪಣ ಮಾಡುತ್ತಿದೆ!

ಸಮೃದ್ಧ ಬೆಳೆಗಳಿಗೆ ಆಧುನಿಕ ಸಾಧನಗಳು ಅತ್ಯವಶ್ಯ ಆ ಸಾಧನಗಳೆಂದರೆ ಉತ್ತಮ ಬೀಜ, ರಾಸಾಯನಿಕ ಗೊಬ್ಬರ, ಪಂಪ್‌ಸೆಟ್, ಟ್ರಾಕ್ಟರ್, ಬೇಸಾಯದ ಇತರ ಸಾಮಗ್ರಿ, ಜಾನುವಾರು, ಇತ್ಯಾದಿ, ಇತ್ಯಾದಿ.

ನಮ್ಮ ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಸರ್ವವ್ಯಾಪೀ ಮಹತ್ವವನ್ನು ಮನಗಂಡು ಕೆನರಾ ಬ್ಯಾಂಕ್, ಸಮೃದ್ಧ ಬೆಳೆಯನ್ನು ಪಡೆಯ ಬಯಸಿದ ರೈತರ ನಾನಾ ಬಗೆಯ ಬೇಡಿಕೆಗಳಿಗಾಗಿ ಆರ್ಥಿಕ ನೆರವನ್ನು ನೀಡುವ ಯೋಜನೆಗಳನ್ನು ಕೈಗೊಂಡಿದೆ. ಹೀಗೆ, ಕೆನರಾ ಬ್ಯಾಂಕ್ ಸಮೃದ್ಧ ಬೆಳೆಯ ಆಶಾಂಕುರದ ಬೀಜವನ್ನು ಈಗಾಗಲೇ ಬಿತ್ತಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸ್ ಲೈಟ್‌ಹೌಸ್ ಹಿಲ್, ಮಂಗಳೂರು.
ಆಡಳಿತ ಆಫೀಸ್ 112 ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

141 ಕೋಟಿ ರೂ.ಗಳಿಗೆ ಮೀಕ್ಕಿದ ಸಂಪನ್ಮೂಲಗಳು—245ಕ್ಕೆ ಮಿಕ್ಕಿದ ಶಾಖೆಗಳು—ಜಗತ್ತಿನಾದ್ಯಂತ ಪ್ರತಿನಿಧಿಗಳು

ಶೇಖ ರಾಜ್ಯದ ಕನಸು

ಜನಾಬ್ ಹುಸೇನ್‌ರು ಪಾಕಿಸ್ತಾನಕ್ಕೆ ಹೊಸ ವಿದೇಶ ಮಂತ್ರಿಯಾಗಿದ್ದಾರೆ. ಇವರು ತಮ್ಮ ನೀತಿ ನಿರೂಪಣಾ ಪ್ರಥಮ ಭಾಷಣವನ್ನು ಪಾಕ್ ರಾಷ್ಟ್ರೀಯ ಎಸೆಂಬ್ಲಿಯಲ್ಲಿ ಮಾಡಿದರು. ಪಾಕಿಸ್ತಾನದ ಇದು ವರೆಗಿನ ವಿದೇಶ ಮಂತ್ರಿಗಳ ಭಾಷಣ—ಹೇಳಿಕೆಗಳ ಸಾಲಿನಲ್ಲೇ ಈ ನೀತಿ ನಿರೂಪಣೆಯು ದ್ದರೂ ಇದರದ್ದೇ ತೂಕವೊಂದು ಹೆಚ್ಚು. ಈ ವಿದೇಶ ಮಂತ್ರಿ ಶ್ರೀ ಅಸ್ಗರ್‌ಖಾನ್ ಹುಸೇನರು ಜಾತಿದತ್ತ ಪಾಕ್ ಪ್ರೈಕಮಿಶನರ್ ಆಗಿದ್ದುದರಿಂದಲೇ ಈ ಹೆಚ್ಚಿನ ಬಾರ.

ಜನಾಬ್ ಹುಸೇನರ ಭಾಷಣದ ಸಾರಾಂಶ: ಕಾಶ್ಮೀರದಲ್ಲಿನ ಕದನ ವಿರಾಮ ರೇಖೆಯನ್ನು ಅಂತರ್‌ರಾಷ್ಟ್ರೀಯ ಗಡಿಯೆಂದು ಒಪ್ಪುವುದು ಸಾಧ್ಯವಿಲ್ಲ. (ನಾವು ಒಪ್ಪುವುದಿಲ್ಲ). ಸಮಸ್ಯೆಗಳನ್ನು ಪರಿಹರಿಸುವಲ್ಲಿ ಭಾರತಕ್ಕೆ ಆಸ್ಥೆಯಿಲ್ಲ: ತಾನು ಹೈಕಮಿಶನರನಿದ್ದಾಗಲೇ ಅನುಭವಿಸಿದ್ದೇನೆ ಭಾರತ ಅಂತರಿಕ-ಬಾಹ್ಯಸಂಪನ್ಮೂಲಗಳನ್ನು ಸೈನಿಕ ಶಕ್ತಿ ಸಂವರ್ಧನೆಗಾಗಿಯೇ ವ್ಯಯಿಸುತ್ತಿದೆ. ತಾನು ಮೊತ್ತಧಾರತಜತೆಯಿವಾದಗಳನ್ನು ಮುಖ್ಯವಾಗಿ ಕಾಶ್ಮೀರ ವಿವಾದ ಮತ್ತು ಫರಕ್ಕ ಆಣೆಕಟ್ಟು ಸಮಸ್ಯೆಗಳು-ಪರಿಹರಿಸಲು ಆಧ್ಯತೆ ಕೊಡುತ್ತೇನೆ ಇತ್ಯಾದಿ.

ಮೇಲಿನ ಹೇಳಿಕೆಯ ಮುಖ್ಯ ಉದ್ದೇಶ ಭಾರತವನ್ನು ನಿಂದಿಸುವುದು ಮಾತ್ರ. ಭಾರತದ ಮೇಲೆ ವೃಥಾದೋಷಾರೋಪಣೆ, ಜಮ್ಮೂ ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ತಾನವು ಅನ್ಯಾಯವಾಗಿ ಆಕ್ರಮಿಸಿರುವಾಗ, ಮತ್ತೊಂದನ್ನು ಕೆಂಪು ಚೀನಕ್ಕೆ ಬಳುವಳಿ ನೀಡಿರುವಾಗ, ಕದನ ವಿರಾಮ ರೇಖೆಯನ್ನು ಅಂತಾರಾಷ್ಟ್ರೀಯ ಗಡಿಯೆಂದು ಭಾರತವೂ ಒಪ್ಪುವುದಿಲ್ಲ. ಸಮಸ್ಯಾ ಪರಿಹಾರದಲ್ಲಿ ಆಸ್ಥೆ ಇದೆ ಇಲ್ಲವೆಂಬುದಕ್ಕೆ ತಾಷ್ಕೆಂಟ್ ಘೋಷಣೆಯ ನೆನೆಗುದಿ ಸ್ಥಿತಿಯೇ ಉದಾಹರಣೆ ಬಾಹ್ಯ ಸಂಪನ್ಮೂಲಗಳಿಂದಲೂ ಸೈನಿಕ ಶಕ್ತಿ ಬೆಳೆಸಿಕೊಳ್ಳುತ್ತಿದೆಯೆಂಬ ಆರೋಪಕ್ಕೆಲ್ಲೂ ಹತ್ತಿರದ್ದಲ್ಲ. ಪಾಕಿಸ್ತಾನದ ಇದುವರೆಗಿನ ನಡೆದುಬಂದ ದಾರಿ ಮಾತ್ರ ಜನಾಬ್ ಹುಸೇನರ್ ಮಾತಿನಿಂದ ತಿಳಿದು ಬಂತು. ಈ ಬಗೆಯ ಹುಸೇನಾರೋಪ ಮಾಮೂಲು. ಇದನ್ನು ಯಾರೂ ಕಿವಿಗೆ ಹಾಕಿಕೊಳ್ಳುವುದಿಲ್ಲ, ಬಾಲ್ ಅಪಲಾಪದ ಹಳೆಯ ರಾಗವಿದು.

ಆದರೂ ಈ ರಾಗದಲ್ಲಿ ಹೊಸ ತಾಳದ ಹಲ್ಲೀ ಅವಾಜ್ (ತೆಳ್ಳಗಿನ ಸ್ವರ) ಕೇಳಿಬಂದಿತ್ತು ಮಹಾರಾಜ ರಣಜಿತ್ ಸಿಂಗರ ಸಮಾಧಿಯ ದರ್ಶನಕ್ಕೆಂದು ಪಾಕಿಸ್ತಾನಕ್ಕೆ ತೆರಳಿದ್ದಾಗಿನ್ನರನ್ನು ಪಾಕಿಸ್ತಾನಿ ಪೋಲೀಸರು ವಕ್ರದೃಷ್ಟಿಯಿಂದ ನೋಡುತ್ತಿದ್ದರೆಂದೂ ಅವರ ಪ್ರವಾಸವನ್ನು ರಾತ್ರಿ ವೇಳೆಯಲ್ಲೇ ನಡೆಯುವ ಏರ್ಪಾಡು ಸಂಬಂಧ ಪಟ್ಟವರು ಮಾಡಿದ್ದರೆಂದೂ ತಿಳಿಯುತ್ತದೆ. ಮೇಲಾಗಿ ಹಿಂದೂಗಳಿಗಿಂತ ಸಿಕ್ಖರೇ ಮುಸ್ಲಿಮರಿಗೆ ಸವಿೂಪದವರೆಂದೂ ಉಲ್ಲೇಖಿಸುವ ಕರಪತ್ರಗಳನ್ನೂ ಅವರಿಗೆ ಹಂಚಲಾಯಿತಂತೆ. ಭೇದೋಪಾಯ ಪಾಕಿಸ್ತಾನಿಗಳಿಗೇನೂ ಹೊಸತಲ್ಲ. ಕತ್ತರಾಜ ಕಾರಣಕ್ಕೆ ಪ್ರಸಿದ್ಧವಾದುದರಿಂದಲೇ ಅ ವೇರಿಕೆ-ಬೇಸಿ (ಮತ್ತೇಗ ರೂಢಿ) ಪರಸ್ಪರ ವಿರುದ್ಧ ಫೀತಿ—ನೆರವುಪಡೆಯುವಲ್ಲದು ಸರ್ವಥವಾಗಿದೆ.

ಈ ತಾಳದ ನಡುವೆ ಜನಾಬ್ ಶೇಕ್ ಅಬ್ದುಲ್ಲಾರುಬಂದ.ರಾಗಹಾಡಿದ್ದಾರೆ. ಜಮ್ಮೂ ಕಾಶ್ಮೀರದ ಆಡಳಿತವನ್ನು ವಿಶ್ವ ಸಂಸ್ಥೆಯು ಐದು ವರ್ಷಗಳ ಕಾಲ ವಹಿಸಬೇಕೆಂದೂ ಈ ನಡುವೆ ಜನಮತಗಣನೆ ನಡೆದು ಕಾಶ್ಮೀರಿಗಳು ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಬೇಕೆಂದು ಅವರ ಹೊಸ ಹಾಡಿನ ಹಳೆಯಸೆಲ್ಲು. ೧೯೪೭ ರಲ್ಲಿಯೇ ಭಾರತದೊಡನೆವಿಲೀನವಾಗಿ ಭಾರತದಅವಿಭಾಜ್ಯಅಂಗವಾಗಿರುವಕಾಶ್ಮೀರವನ್ನು ಯಾರಅಧೀನಕ್ಕೂಒಪ್ಪಿಸಿಕೊಡುವ ಮಾತಿಲ್ಲ; ಕಾಶ್ಮೀರದ ಒಂದಂಶ ಪಾಕ್‌ನ ವಶ, ಇನ್ನೊಂದಂಶ ಕೆಂಪುಚೀನಾದ ವಶದಲ್ಲಿದ್ದರೂ ಆ ಅಂಶಗಳ ಮೇಲಿನ ಸಾರ್ವಭೌಮಾಧಿಕಾರ ಭಾರತಕ್ಕೇ ಸೇರಿದ್ದು; 'ಕಾಶ್ಮೀರ ಪ್ರಶ್ನೆ ಮುಕ್ತಾಯವಾಗಿಲ್ಲ. ಪಾಕಿಸ್ತಾನವನ್ನು ಸೇರುವ ಹಕ್ಕನ್ನು ಕಾಶ್ಮೀರಿಗಳಿಗೆ ಕೊಡುವ ವರೆಗೆ ಅದು ಮುಗಿಯುವುದಿಲ್ಲ' ಎಂಬ ಹುಸೇನರ ಹೇಳಿಕೆ—ಮತ್ತು ಶೇಖ ಅಬ್ದುಲ್ಲಾರ ಹೇಳಿಕೆಗಳ ನಡುವೆ ತುಸು ಹೊಂದಿಕೆಯೇ ಇದೆ.

ಆದರೆ, ಕಾಶ್ಮೀರ ರಾಜ್ಯದಲ್ಲಿನ ಭಾರತೀಯರು ಈ 'ನಾಯಕರ' ಹೇಳಿಕೆಗಳನ್ನು ನಾಯಿಹುಲ್ಲು ಬೊಗಳಿಕೆಗಳೆಂದು ಕರೆದಿದ್ದಾರೆ. ಪಾಕ್ ಸರಕಾರವು ಕಾಶ್ಮೀರವನ್ನು ತಾನು ಕಬಳಿಸಬೇಕೆಂದೂ ಶೇಖ ಅಬ್ದುಲ್ಲಾರು ಅಲ್ಲಿ "ಶೇಖರಾಜ್ಯ" ಸ್ಥಾಪಿಸಬೇಕೆಂದೂ ಕನಸುಕಾಣುತ್ತಿದ್ದಾರೇನೋ ನಿಜ. ಆದರೆ, ಇದನ್ನು ಕಾಶ್ಮೀರಿಗಳು ಅರಿತುಕೊಳ್ಳದಷ್ಟು ಅವಿವೇಕಿಗಳಲ್ಲ. ಕುಟಿಲತೆ ಮತ್ತು ಅಂತರಾಷ್ಟ್ರೀಯ ಪಿತೂರಿಗಳನ್ನು ನಡೆಸಿ ರಾಜ್ಯದ—ಭಾರತದ ಶಾಂತಿ ಕೆಡಿಸುವ ಶೇಖರನ್ನೂ, ಇನ್ನೊಂದು ದೇಶದ ಅಂತರಿಕ ವ್ಯವಹಾರದಲ್ಲಿ ಕೈಹಾಕಿ ಬಯಸುವ ಪಾಕಿಸ್ತಾನವನ್ನೂ ಯಾರೂ ಎಂದಿಗೂ ಮನ್ನಿಸುವುದಿಲ್ಲ.

○ ○ ○

ಪಂಜಾಬ ರಾಜ್ಯದ ವಿಭಜನೆಯ ಬಳಿಕ ಅಸ್ಸಾಮದ ವಿಭಜನೆಗೂ ಒಂದು ಸ್ವರೂಪ ಹೆಚ್ಚಾಯಿತು. ವಿಶೇಷವತ್ತು ಗಾರೋ ಗುಡ್ಡಗಾಡು ಜನಾಂಗ ಅಸ್ಸಾಮದ ಉಳಿದ ಬಯಲು ಜನಾಂಗಕ್ಕಿಂತ ಭಾಷೆ-ಸಂಸ್ಕೃತಿಗಳಲ್ಲಿ ವಿಶಿಷ್ಟವಾದುದೆಂದೂ ಆದುದರಿಂದ ತಮಗೊಂದು ಪ್ರತ್ಯೇಕ ರಾಜ್ಯ ಬೇಕೆಂಬೂ ಈ ಗುಡ್ಡಗಾಡು ಜನ ನಾಯಕರು ಬಲವಾಗಿ ಕೇಳತೊಡಗಿದರು. ಅಂದರೆ, ಪಶ್ಚಿಮದಲ್ಲಿ ಗಿರಿರಾಜ್ಯ ಪಂಜಾಬನ್ನು ವಿಭಜಿಸಿದಂತೆ ಈಗ ಪೂರ್ವ ಗಡಿಯ ಅಸ್ಸಾಮನ್ನೂ ವಿಂಗಡಿಸ ಬೇಕಾಯ್ತು. ಕೇಂದ್ರ ಸರಕಾರ ಈ ತನ್ನ ಮೂಮೂಲು ವಿಳಂಬ ಫೀತಿಯನ್ನು ಅಭ್ಯಾಸಕ್ಕೆ ತಂದು ಇದನ್ನೇ ಮುಂದುವರಿಸ ಬಯಸಿದರೂ ಗುಡ್ಡಗಾಡು ಜನರು ಸುಮ್ಮನಿರಲಿಲ್ಲ.

ಹಾಗಾಗಿ, ಅಶೋಕ ಮೆಹತಾ ಸಮಿತಿಯ ಶಿಫಾರಸುಗಳು ಧೂಳೀ ಧೂಸರಿತವಾದುವು. ಅಸ್ಸಾಮದ ಮುಖ್ಯ ಮಂತ್ರಿ ಚಾಲಿಹಾರ ಗಂಟಾಘೋಷ ಬರಿಯ ಬೆದರಿಕೆಯು ಮಾತಾಯಿತು. ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಭಿಪ್ರಾಯ ತಿರಸ್ಕರಣೀಯವಾಯಿತು. ಪ್ರಧಾನಿ ಇಂದಿರಾ ಗಾಂಧಿ, ಉಪಪ್ರಧಾನಿ ಮೊರಾರ್ಜಿ ದೇಸಾಯಿ ಮತ್ತು ಗೃಹಮಂತ್ರಿ ಚವ್ಹಾಣರು ಗುಡ್ಡಗಾಡು ಜನತೆಯ ರಾಜಕೀಯ ಅಶೋತ್ತರಗಳನ್ನು ಪೂರೈಸಲು 'ಪ್ರಾಮಾಣಿಕ ಪ್ರಯತ್ನ' ನಡೆಸಲೇ ಬೇಕಾಯ್ತು. ಇನ್ನೀಗ ಇದೇ ತಿಂಗಳ ೨೨ರಂದು ಆರಂಭವಾಗಲಿರುವ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ವಿಧೇಯಕವನ್ನು ಮಂಡಿಸುವರೆಂಬ ಭರವಸೆಯಿಂದ ಗುಡ್ಡಗಾಡು ಜನರು ಅದುವರೆಗೆ ತಾಳ್ಮೆಯನ್ನು ವಹಿಸಲು ಒಂದು ಮೇಳೆ, ತಮ್ಮ ಆಶಯ ಮೀಡೇರದೆ ಹೋದರೆ, ಮುಂದೆ ನೇರಕ್ರಮ ಕೈಕೊಳ್ಳುವುದಾಗಿ ನಿರ್ಧರಿಸಿದರು.

ರಾಷ್ಟ್ರೀಯ ಭಾವೈಕ್ಯಕ್ಕೆ ಪ್ರಾಂತೀಯ ವಿಭಜನಾ ಫೀತಿಯೇ ಕಾರಣವೆಂದು ಕೆಲವು ರಾಜ್ಯಾಲಾರಣಿಗಳು ಅಭಿಪ್ರಾಯ ಪಡುವಾಗ ಈ ಗುಡ್ಡಗಾಡು ಜನರು ರಾಷ್ಟ್ರೀಯ ಭಾವೈಕ್ಯ ಸಂವರ್ಧನೆಗೆ ಗುಡ್ಡಗಾಡು ರಾಜ್ಯ ಸ್ಥಾಪನೆಯೇ ಏಕೈಕ ಮಾರ್ಗವೆಂದು ಹೇಳುತ್ತಾರೆ. ಯಾವುದು ಸರಿ; ಯಾವುದು ತಪ್ಪು?

○ ○ ○

ರಾಜ್ಯದ ಶಿಕ್ಷಣ ಇಲಾಖೆಗೆ ತಲೆ ಇದೆಯೆಂಬುದಕ್ಕೆ ಅದಕ್ಕೇಗ ತಲೆಶೂಲೆಯೆಂಬ ವಾತೋಪಾಯೊಂದು ಬಲವಾದ ಆಧಾರ. ಈ ತಲೆ ನೋವಿನ ಮುಖ್ಯ ಕಾರಣ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮೂರರಲ್ಲೆರಡು ಭಾಗದಷ್ಟು ಮಕ್ಕಳು ಅನುತ್ತೀರ್ಣರಾಗುವುದು—ಅದರಲ್ಲೂ ಒಂದೂವರೆ ವಿಷಯದ ಪ್ಯಾಸು ಅಂಕಗಳನ್ನು ಮುಕ್ಕಟೆಯೊಗಿ ಕೊಟ್ಟಾಗ ರಾಜ್ಯದ ಸುಮಾರು ೭೦೦ ಪ್ರೌಢ ಶಾಲೆಗಳ ಪೈಕಿ ೨೬೦ ಶಾಲೆಗಳಲ್ಲಿ ಐವರಿಗೊಬ್ಬನೂ ಪಾಸಾಗಲಿಲ್ಲ. ಬೆಂಗಳೂರು ವಗರ ಪಟ್ಟಿಕೆಯ ೧೫ ಹೈಸ್ಕೂಲುಗಳಲ್ಲಿ ಹತ್ತರಲ್ಲಿಪ್ಪತ್ತು ಮಾತ್ರ ಪಾಸು!

ಇದಕ್ಕೆ ಕಾರಣ? ಒಂದಲ್ಲ, ನೂರು. ಅಸಂತೃಪ್ತ ಅಧ್ಯಾಪಕರು, ಅಶಕ್ತ ಆಡಳಿತ ಮತ್ತು ಮಿತಿಮೀರಿದ ರಾಜ್ಯಕಾರಣ ತುಂಬಿದ ಸ್ಥಳೀಯ ಸಂಸ್ಥೆ; ಸರಕಾರಗಳು; ರಾಜಕಾರಣಿಗಳು ತಮ್ಮ ಹೊಣೆಗಾರಿಕೆ—ಕರ್ತವ್ಯವರಿಯದ ವಿದ್ಯಾರ್ಥಿಗಳು—ಮಕ್ಕಳನ್ನು ಅಂಕೆಯಲ್ಲಿಟ್ಟುಕೊಳ್ಳಲಾಗದ ಪಾಲಕರು, ದಿನದಿನಕ್ಕೂ ನಡೆಯುತ್ತಿರುವ ವಿವಿಧ ಪ್ರಯೋಗಗಳು .....ಇತ್ಯಾದಿ, ಇತ್ಯಾದಿ. ಇದನ್ನು ಯಾವ ಕಾನೊನಿನಿಂದಾಗಲೀ ಸೇವಾ ಫಲಿಯಮಗಳಿಂದಾಗಲೀ ಸುಧಾರಿಸುವುದು ಸಾಧ್ಯವಿಲ್ಲ. ಅಧಿಕಾರಿಗಳ ತಪ್ಪಿನಿಂದಾಗಲೀ ತ್ರೈಮಾಸಿಕ ವರದಿ ಪಡೆಯುವುದರಿಂದಾಗಲೀ ಅಧ್ಯಾಪಕರಿಗೆ ಮತ್ತೊಂದು ಬಾರಿ ಟ್ರೈನಿಂಗ್ ಕೊಡುವುದರಿಂದಾಗಲೀ ಪರಿಸ್ಥಿತಿ ಸುಧಾರಿಸುವುದೆಂದು ನಂಬಲಾಗುವುದಿಲ್ಲ. ಶಿಕ್ಷ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಇದು ನಮ್ಮ ದೇಶ

ಭಾರತದ ಅಪೂರ್ವ ದೃಶ್ಯ- ಕುಂಭಕೋಣಮಿನಲ್ಲಿ

ಬರೆದವರು: ಶ್ರೀ ಶಿವಶಂಕರ

ಬ್ರಹ್ಮನಿಗೆ ಒಮ್ಮೆ ಭ್ರಮೆ ಬಂತು— ಸೃಷ್ಟಿಕಾರ್ಯ ಸಂಪೂರ್ಣವಾಯಿತ; ಇನ್ನು ಜಲಪ್ರಳಯ ಬರುತ್ತದೆಂದು ಕಳವಳಗೊಂಡ ಬ್ರಹ್ಮನು ತಪಸ್ಸು ಮಾಡಿದನು. ಆಗ ಪರಮೇಶ್ವರನು ಪ್ರತ್ಯಕ್ಷನಾಗಿ ಅವನಿಗೆ ಸೃಷ್ಟಿ ಬೀಜವನ್ನು ಅನುಗ್ರಹಿಸಿದನು. ಅವನು ಅದನ್ನು ಮಣ್ಣು ಮತ್ತು ಅಮೃತದಿಂದ ಮಾಡಿರುವ ಕೊಡದೊಳಗಿಟ್ಟನು ಮತ್ತು ಜಲಪ್ರಳಯದ ಸಮಯ ಅದು ಪ್ರವಾಹಕ್ಕೆ ಬಲಿಯಾದಬಾರದೆಂದು ಕೊಡವನ್ನು ವೇರು ಪರ್ವತದ ಮೇಲೆ ಕೊಂಡೊಯ್ದಿಟ್ಟನು.

ನೆರೆ ಬಂತು ಕೊಡ ನೀರಿನ ಮೇಲೆ ತೇಲಲಾರಂಭಿಸಿತು. ಅದನ್ನು ಕಂಡ ಬ್ರಹ್ಮನು ಪುನಃ ಪರಮ ಶಿವನ ಸಹಾಯವನ್ನು ಯಾಚಿಸಿದನು. ಶಂಕರನು ಬೇಟೆಗಾರನ ವೇಷದಲ್ಲಿ ಅಲ್ಲಿ ಪ್ರತ್ಯಕ್ಷನಾದನು. ಅವನು ತೇಲುತ್ತಿರುವ ಕೊಡಕ್ಕೆ ಬಾಣದಿಂದ ಗುರಿಯಿಟ್ಟನು. ಕೊಡ ಒಡೆದು ಹೋಯಿತು. ಆಗ ಒಳಗಿದ್ದ ಅಮೃತ ಹೊರಪ್ರವಹಿಸಿತು. ಆದಿನಿಂದ ಆ ಸ್ಥಳಕ್ಕೆ ತಿರು (ಶ್ರೀ) ಕುಡಮಮಲೆ ಅಥವಾ ಶ್ರೀಕುಂಭಮುಖಿಯೆಂಬ ಹೆಸರು ಬಂದಿರುತ್ತದೆ. ಕೊಡದ ತುಂಡು ಹಾರಿ ಬಿದ್ದ ಸ್ಥಳಕ್ಕೆ ಕುಡುವಾಯಿಲ್ ಹೆಸರು ಬಂದಿರುತ್ತದೆ.

ಕೊಡ ಒಡೆದಾಗ ಹೊರಚೆಲ್ಲಲ್ಪಟ್ಟ ಅಮೃತ ಪ್ರವಹಿಸಲಾರಂಭಿಸಿತು. ಅದನ್ನು ಕಂಡ ಬ್ರಹ್ಮನು ಅಮೃತವನ್ನು ಹೊಯಿಗೆಯೊಂದಿಗೆ ಬೆರೆಸಿ ಒಂದು ಲಿಂಗವನ್ನು ನಿರ್ಮಿಸಿದನು. ಆ ಲಿಂಗಕ್ಕೆ ಆದಿಕುಂಭೇಶ್ವರರಂದು ಹೆಸರು. ಅನಂತರ ಅಲ್ಲಿ ದೇವಸ್ಥಾನ ಕಟ್ಟಲ್ಪಟ್ಟಿತು. ದೇಗುಲಕ್ಕೆ ಆದಿಕುಂಭೇಶ್ವರ ದೇವಸ್ಥಾನವೆಂದು ಹೆಸರಾಯಿತು.

ಆ ದೇವಾಲಯದ ಗೋಪುರವನ್ನು ಬಹಳ ದೂರದಿಂದಲೇ ಕಾಣಬಹುದು. ಒಳಗೆ ಕೆತ್ತನೆಯ ಕೆಲಸಗಳನ್ನು ಕಾಣಬಹುದು. ಒಂದೇ ಕಲ್ಲಿನಲ್ಲಿ ಹನ್ನೆರಡು ಪ್ರಹಗಳನ್ನು ಕೆತ್ತಲಾಗಿರುತ್ತದೆ. ಆದಿ ಕುಂಭೇಶ್ವರ ಪುರಾಣದ ದೃಶ್ಯಗಳನ್ನೂ ಅಲ್ಲಿ ಕಾಣಬಹುದು.

ಶೈವರಿಗೆ ಮಾತ್ರ ಕುಂಭಕೋಣಮ್ ತೀರ್ಥಕ್ಷೇತ್ರವಲ್ಲ. ವೈಷ್ಣವರಿಗೂ ಅದು ಪವಿತ್ರ ಕ್ಷೇತ್ರವಿದೆ. ಅಲ್ಲಿ ಸಾರಂಗಪಾಣಿಯ ದೇವಸ್ಥಾನವಿದೆ.

ವಿಷ್ಣುವು ಬ್ರಹ್ಮ ಹಾಗೂ ಶೈವನಿಗೆ ಕರ ಸ್ಥಾನ—ಮೂರ್ತಿಸಮೂಹದಲ್ಲಿ ವ್ಯಾಪಾರಿಕವಾಗಿ ದೊಡ್ಡದಾದರೆ ಮಾತ್ರ ಇದು ಸಾಧ್ಯವಾಗುವುದು. ಅರ್ಥಾತ್ ಮೂಗ ದಂಡದಿಂದಲೇ ಎಲ್ಲವನ್ನೂ ಆಳೆಯುವ ಇಂದಿನ ಯುಗದಲ್ಲಿ ಶಿಕ್ಷಣಕ್ಕಾಗಿ ಕೇಂದ್ರಾರಿ ಸಿಶೇಷನ್ ನಿರ್ದೇಶಿಸಿದ ವೇತನವನ್ನಾದರೂ ಸದ್ಯ ರಾಜ್ಯ ಸರಕಾರ ಕೊಡುವ ನಿರ್ಧಾರ ಮಾಡಬೇಕು.

—ಗೋ.

ಒಂದೊಂದು ರಥಗಳನ್ನು ಕೊಟ್ಟನು. ಅವು ವಂಶ ಪಾರಂಪರ್ಯವಾಗಿ ಬಂದುವು. ಅದರಲ್ಲಿ ಸೂರ್ಯನಿಗೆ ಕೊಟ್ಟಿದ್ದ ರಥವು ಪ್ರಭು ಶ್ರೀ ರಾಮಚಂದ್ರನಿಗೆ ಸಿಕ್ಕಿತು. ಹದಿನಾಲ್ಕು ವರ್ಷಗಳ ವನವಾಸದ ನಂತರ ಅಂದರೆ, ರಾವಣ ವಧೆಯ ನಂತರ ಮರ್ಯಾದಾ ಪುರುಷೋತ್ತಮ ಶ್ರೀರಾಮನು ಅಯೋಧ್ಯೆಗೆ ಹಿಂತಿರುಗುವಾಗ ಕಾವೇರಿ ತಟಾಕದಲ್ಲಿ ಆ ರಥವನ್ನು ವಿಭೀಷಣನ ಬಳಿ ನೋಡಿಕೊಳ್ಳಲು ಹೇಳಿ ತನ್ನ ದೈನಂದಿನ ವಿಧಿಗಳನ್ನು ತೀರಿಸಿಕೊಳ್ಳಲು ಹೋದನು. ಹಿಂತಿರುಗಿ ಬಂದ ಶ್ರೀ ರಾಮನು ರಥವನ್ನೋಡಿಕುತ್ತಾನೆ. ಅದು ಅಲುಗಾಡುವಂತಿಲ್ಲ. ಬೆದರಿದ ವಿಭೀಷಣನು ವಿಷ್ಣುವಿನ ತಪಸ್ಸು ಮಾಡುತ್ತಾನೆ. ಭಕ್ತವೃಂದವು ರಥ ಅಲ್ಲೇ ಇರಬೇಕೆಂದು ಪ್ರಾರ್ಥಿಸಿಕೊಂಡಿರುವುದರಿಂದ ರಥವು ಅಲ್ಲೇ ಇರುತ್ತದೆಂದು ವಿಷ್ಣುವು ತಿಳಿಸುತ್ತಾನೆ. ಸಾರಂಗಪಾಣಿಯ ದೇವಸ್ಥಾನದಲ್ಲಿ ಆ ರಥವನ್ನು ಕಾಣಬಹುದು.

ಕುಂಭಕೋಣಮಿನಲ್ಲಿರುವ ನಾಗೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಹೋಗದೆ ಬರಲು ಸಾಧ್ಯವಾಗುವಂತಿಲ್ಲ. ಈ ದೇವಾಲಯದಲ್ಲಿರುವ ಪೈಶಿಷ್ಟ್ಯ ಏಂದರೆ ಪ್ರತೀ ವರ್ಷ ಚೈತ್ರ ಮಾಸದಲ್ಲಿ ಮೂರು ದಿನಗಳು ಸೂರ್ಯ ಕಿರಣ ನೇರಾಗಿ ಲಿಂಗದ ಮೇಲೆ ಬೀಳುತ್ತದೆ. ಆಗ ಸೂರ್ಯಪೂಜೆ ಜರುಗುತ್ತದೆ. ಈ ದೇಗುಲದಲ್ಲಿ ನಟರಾಜನು ನರ್ತಿಸುತ್ತಿದ್ದಾನೆ, ಅದನ್ನು ಕಂಡು ತಾಮ್ರಾಕಾಟ್ಟಾಣದ ನರಭಕ್ತನ್ಯಾವನಾದರೂ ಇರಲು ಸಾಧ್ಯ ಇರುವದಿಲ್ಲ. ದೇವಿ ಶಿವಗಾಮಿಯು ಅದಕ್ಕೆ ಮೃದಂಗ ಬಾರಿಸುತ್ತಿದ್ದಾಳೆ. ಪೆಣ್ಣಾಗೋಪಾಲನೇ ಸ್ವತಃ ಕೊಳಲೂದುತ್ತಿರುವುದನ್ನು ಕಾಣಬಹುದು.

ಕುಂಭಕೋಣಮ್ ಕಾವೇರಿ ದಡದಲ್ಲಿದೆ. ಇದು ದೇವಸ್ಥಾನಗಳ ನಗರವಿದೆ. ಇಲ್ಲಿ ಚಕ್ರಪಾಣಿ, ಕಾಶಿ ವಿಶ್ವನಾಥ, ಗೌತಮೇಶ್ವರ, ಶ್ರೀರಾಮಚಂದ್ರ ....ದೇವಾದಿದೇವತೆಗಳ್ಳದೇವಸ್ಥಾನಗಳಿವೆ.

ಹನ್ನೆರಡು ವರ್ಷಗಳಿಗೊಮ್ಮೆ ದೇವಾದಿದೇವತೆಗಳೆಲ್ಲರೂ ಮಹಾಮಾಘ ಕೆರೆಯ ದಡದಲ್ಲಿ ಉಪಸ್ಥಿತರಾಗುತ್ತಾರೆ. ಗಂಗಾಲಿ ಭೆಟ್ಟುವರು ಹದಿನಾಲ್ಕರಂದು ಈ ಅಪೂರ್ವ ಸುಯೋಗ ಬಂದಿತ್ತು. ಕುಂಭಕೋಣಮಿನಲ್ಲಿರುವ ಎಲ್ಲಾ ದೇವಸ್ಥಾನಗಳ ದೇವರು ಆ ಕೆರೆಯ ದಂಡೆಗೆ ಬಂದರು. ಇದು ಬಹಳ ದೊಡ್ಡ ಕೆರೆ. ದಡದಲ್ಲಿ ಹದಿನಾರು ಕಂಭಗಳಿದ್ದು, ಹದಿನಾರು ಮಂಟಪಗಳೂ, ಗೋಪುರಗಳೂ ಇವೆ. ಅಯಾಯಾ ಮಂಟಪದಲ್ಲಿ ಅಯಾಯಾ ದೇವರು ಉಪಸ್ಥಿತರಾದರು. ಕೆರೆಯ ನೀರನ್ನು ಮುಂಚಿತವಾಗಿದೇ ಬತ್ತಿಸಿಬಿಟ್ಟು ಜೊಕ್ಕಟಗೊಳಿಸಿದಲಾಗಿತ್ತು. ಅಂದು ಪುಣ್ಯಭೂಮಿ ಭಾರತದಲ್ಲಿರುವ ಜನವನ ನದಿಗಳ ಪವಿತ್ರ ಜಲದಿಂದ ಕೆರೆ ತುಂಬಿತು. ಆದ ದೇವಾದಿದೇವತೆಗಳೆಲ್ಲರೂ ಸ್ನಾನ ಮಾಡಿದರು. ಮತ್ತೆ ಭಕ್ತವೃಂದವು ಸ್ನಾನ ಮಾಡಿತು.

ಈ ಭಾಗ್ಯ ಹನ್ನೆರಡು ವರ್ಷಗಳಿಗೊಮ್ಮೆ ದೊರೆಯುತ್ತದೆ. ಅಂದು ವಿಷ್ಣು, ಮಹೇಶ, ಸುಬ್ರಹ್ಮಣ್ಯ, ವಿನಾಯಕ— ಎಲ್ಲಾ ದೇವರೂ ಅಲ್ಲಿಗೆ ಬರುತ್ತಾರೆ. ಗಂಗಾ, ಯಮುನಾ—ಪವಿತ್ರ ನದಿಗಳ ಪುಣ್ಯಜಲ ಅಲ್ಲಿಗೆ ಬರುತ್ತವೆ. ದೇಶದ ದಶದಿಶೆಗಳಿಂದಲೂ ಭಕ್ತರ ಪ್ರವಾಹ ಹರಿದು ಬರುತ್ತದೆ. ಭಾಷೆ, ವೇಷ, ರಾಜ್ಯ, ಪಕ್ಷ ...ಅದ್ಯಾವ ಭೇಧ ಭಾವವೂ ಅವರಲ್ಲಿರುವದಿಲ್ಲ. ಅನೇಕ ಭಾರತ ಒಂದೇ, ಒಂದೇ ಎಂಬುದನ್ನದು ಸ್ಪಷ್ಟ ಪಡಿಸುತ್ತದೆ. ನಮ್ಮ ಬೂದು ಬ್ರಿಟಿಷರು ಇದನ್ನು ಅಂಧರ್ಪದ್ದೆ, ಅನಾಗರಿಕತೆ.....ಅದೇನೇ ನೋ ಆಡಬಹುದು. ಆದಕ್ಕೆ ಸರಿಯಾಗಿ ದ್ರಾವಿಡ ಕಳ್ಳಗಂ ಮತ್ತು ದ್ರಾವಿಡ ಮುನ್ನೇಟ್ರ ಕಳ್ಳಗಂ ಇಲ್ಲಿವೆ. ಅವೂ ಅವರೇಳನೆಗೆ ಅದಿಷ್ಟಿತೂ ಹಿಂದಕ್ಕೆ ಬೀಳುವದಿಲ್ಲ. ಆದರೆಲ್ಲೂ ಈ ಸಲ ಅಡಳಿತ ಅವರ ಕೈಯ್ಯಲ್ಲಿತ್ತು. ಆದರೆ, ಆಶ್ಚರ್ಯದ ಸಂಗತಿಯೆಂದರೆ ಈ ವರ್ಷ ಬಂದವರ ಸಂಖ್ಯೆ ಬಹಳ. ಇದೆಂತು ಸಾಧ್ಯವಾಯಿತು? ಅವರನ್ನು ಹೂರಾದರೂ ಆಮಂತ್ರಿಸಿರುವರೇ? ಅವರಿಗೆ ಪ್ರಯಾಣ ಖರ್ಚನ್ನು ಒದಗಿಸಿರುವರೇ? ತಂಗಲು ವಿಶಾಲವಾದ ಮಾಡಿದ್ದರೆ? ಊಟ ಹಾಕಿದ್ದರೇ? ಎಲ್ಲರೂ ಬರುವವರ ಜವಾಬ್ದಾರಿ, ಹಾಗಿರುವಾಗ, ಈ ಭಾರತೀಯರನ್ನು ಸಂಘಟಿಸಿದ ಸೂತ್ರದಲ್ಲಿ ಪೇಳಬೇಕಲು ಸಾಧ್ಯವಿಲ್ಲವೇನು?

(ಕುಂಭಕೋಣಮಿನ ಸಂಬಂಧಪಟ್ಟ ವಿಷಯಗಳನ್ನು ಸಂಚಿ ಸ್ವಂತಾರ್ಥದಲ್ಲಿ ಬಂದಿರುವ ಲೇಖನದಿಂದ ಅರಿಯಬೇಳ್ಳಲಾಗಿರುತ್ತದೆ.)

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

S.C. 341/67

ಕದ್ದಾಳಿಕ ಸಟ್ಟು— ವಾದಿ
ಮತ್ತು
ಕೃಷ್ಣಯ್ಯ ಆಚಾರಿ— ಪ್ರತಿವಾದಿ
ಇವರೊಳಗೆ

ಕೃಷ್ಣಯ್ಯ ಆಚಾರಿ—ಮಹಲಿಂಗ ಆಚಾರಿಯ ಮಗ, ಕುಂದಾಪುರ ತಾಲೂಕು-ಬೆಳ್ಳಗ್ರಾಮದವನು ವಾಸವಾಗಿರುವವನು.

ವಾದಿಗೆ ತಾರೀಕು 6.11.64ರಲ್ಲಿ ರೂಪಾಯಿ 200/-ಕ್ಕೆ ಬರೆಯಲ್ಪಟ್ಟ ದಿನಸೊಂದಾ ಪ್ರೋನೋಟನ್ನು ಪ್ರತಿವಾದಿ ಅಸಲುಬಡ್ಡಿ ಪೈಗೆರೆಗೆ ವಾದಿಯು ಪ್ರತಿವಾದಿಯರ ಮೇಲೆ ಮೇಲ್ಕಂಡ ದಾವೆ ದಾಖಲುಮಾಡಿದ್ದು ಆ ಕುಂಭ ಪ್ರತಿವಾದಿಗಳಾದರೂ ಅಶ್ಚಿಷ್ಟವಿರುವ ಸಂಗತಿಯನ್ನು ತಿ.7.64ಕ್ಕೆ ಹಾಜ್ರಾಗಿ ಜ್ಞಾಪಿಸಿಕೊಳ್ಳಲಿಕ್ಕೆ ಕಟ್ಟಿದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. Shivaji Shetty,
Advocate for the Plaintiff.

ಉಡುಪಿ, 25.6.68.

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

P. and S.C. 16/1968.

ಹದಿಬಾದಿ—ಸಯ್ಯದ್ ಉಸ್ಮಾನ್ ಸಾಹೇಬ ವಿಧವೆ—ಉಪ್ಪಿತಾಲೂಕು ಮುಲಾರು ಗ್ರಾಮ— ಅರ್ಜಿದಾರಳು

ಯಾ ಸಾಮಾನ್ಯ ಸಮಸ್ತ ಜನರಿಗೆ ತಿಳಿಸುವುದೇನೆಂದರೆ —

ಮೇಲ್ಕಂಡ ಅರ್ಜಿದಾರಳ ಗಂಡ ತಾರೀಕು 15.11.64ನೆಷ್ಟು ಮೃತಪಟ್ಟ ಸಯ್ಯದ್ ಉಸ್ಮಾನ್ ಸಾಹೇಬರಿಗೆ ಬರಕ್ಕೆ ಅರ್ಜಿಯಲ್ಲಿ ವಿವರ್ಣಿತ ವಿಧೋಚಿಯಿರುವ ಅಯುವೆಯ ಸಾಮಾನು ಮಾಡಿದರೆ ಅವನ ವಾರ್ಸುದಾರರು ಯಾ ಸಂಬಂಧಿಕರು ತನಗೆ ಸಕ್ಸೆಸರ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲುಮಾಡಿದ ಸದ್ರಿ ಅರ್ಜಿ ತಾ. 20.7.68ಕ್ಕೆ ಇತ್ಯರ್ಥಗಿಯದೆ. ಆ ಕುರಿತು ಅಕ್ಷೇಪಣೆಗಳಿಕ್ಕೆ ಕರೆಯಲ್ಪಟ್ಟ ಸದ್ರಿ ದಿನ ಮೇಲ್ಕಂಡ ಕೋರ್ಟ್ ಮುಂದೆ ಹಾಜ್ರಾಗಿ ಜ್ಞಾಪಿಸಬೇಕಾಗಿಕೊಳ್ಳತಕ್ಕದ್ದೆಂತ ಯಾ ಮೂಲಕ ಸಮಸ್ತ ಜನರಿಗೆ ತಿಳಿಸಲಾಗುವುದು.

N. V. Kamath,
Advocate for Petitioner.

ಉಡುಪಿ, 4.7.68.

ಸ್ವೀ ಪುರುಷರಲ್ಲರ ನಾಂಬಳಗ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)



ಶಕ್ತಿಹರ್ಷಕ್ಕೆ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಬಾಳಿನಿಯಾಕ ಆಯುರ್ವೇದಿಕ ಔಷಧಿ ಮತ್ತು ಚಿಕ್ಕ ಪ್ರೈಕೆಗಳು
ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಚಿತ್ರ ಕಲಾವಿದ ಪಿ. ಎಸ್. ಪುಣಿಂಚತ್ತಾಯ

(ಐದನೇ ಪುಟದಿಂದ)

ಹಿರಿಯ ಉದ್ದೇಶಗಳೆಲ್ಲವೂ ಹೀಗೆ. ಸ್ವತಂತ್ರ ಭಾವನೆಗಳು ಕುಂಚದ ಮೂಲಕ ಅಥವಾ ಲೇಖನಿಯ ಮೂಲಕ ಹೊರ ಹೊಮ್ಮಿ ಅವುಗಳು ಜನ ಸಾಮಾನ್ಯರ ಮೇಲೆ ಒಳ್ಳೆಯ ಪರಿಣಾಮ ಬೀರಲು ಸಾಧ್ಯವಾದರೆ ಆಗ ಮಾತ್ರವೇ ಕಲಾವಿದ ಕೃತಾರ್ಥನಾಗುವನೆನ್ನತ್ತಾರೆ ಉದಯೋನ್ಮುಖ ಚಿತ್ರಕಲಾವಿದ ಶ್ರೀ ಪುಂಡೂರು ಶಂಕರನಾರಾಯಣಮಣಿಂಚತ್ತಾಯರು. ಇವರ ಹೆಸರಿನ ಉದ್ದಕ್ಕಿಂತಲೂ ಎಷ್ಟೋ ವಾಲು ತಳವಾಗಿದೆ ಇವರ ಕಲೋಪಾಸನೆ ಮತ್ತವರ ಸಾಧನೆಗೆ.

ಶ್ರೀ ಪುಣಿಂಚತ್ತಾಯರು ಇತ್ತೀಚೆಗೆ ಮಂಗಳೂರಿನಲ್ಲಿ ಹಿಂದು "ಚಿತ್ರಕಲಾ ಪ್ರದರ್ಶನ"ವೇರ್ಪಡಿಸಿ ತನ್ನ ಕಲಾಪ್ರತಿಭೆಯನ್ನು ಕಲಾಂಕನನ್ನಾದರೂ ಮತ್ತಾಜನನು ತಿಳಿಯಲು ಅನುಕೂಲತೆ ಕಲ್ಪಿಸಿದ್ದರು.

ಪದ್ಮಶ್ರೀ ಡಾ। ಟಿ. ಎಂ. ಎ. ಪೈಗಳು ಉದ್ಘಾಟಿಸಿದ ಈ ಪ್ರದರ್ಶನವನ್ನು ಸಾವಿರಾರು ಮಂದಿ ವೀಕ್ಷಿಸಿ ಈ ತರುಣ ಕಲಾವಿದನ ಕಲಾಕೌಶಲತೆಯನ್ನು ಅನುಮೋದಿಸಿದರು. ಪುಣಿಂಚತ್ತಾಯರಿಗೆ ಉಜ್ವಲ ಭವಿಷ್ಯ ಕಾದಿದೆ ಎಂದು ಹಲವರೂ ಮನಸಂಡರು.

ಇನ್ನೂ ಎಳೆ ವಯಸ್ಸು

೧೯೮೨ರಲ್ಲಿ ಕಾಸರಗೋಡು ತಾಲೂಕಿನ ಪ್ರಸಿದ್ಧ ಪುಂಡೂರು ಮನೆತನದಲ್ಲಿ ಶ್ರೀ ರಾಧಾಕೃಷ್ಣ ಪುಣಿಂಚತ್ತಾಯರ ಪುತ್ರನಾಗಿ ಹುಟ್ಟಿದ ಇನ್ನೂ ೨೬ರ ಹೊಸ್ತಿಲಲ್ಲಿರುವ ಪಿ. ಎಸ್. ಪುಣಿಂಚತ್ತಾಯರಿಗೆ ಚಿಕ್ಕಂದಿನಲ್ಲೇ ಚಿತ್ರಕಲೆಯೆಂದರೆ ಬಹಳ ಪ್ರೀತಿ, ಅಭಿಮಾನ. ವಿದ್ಯಾರ್ಥಿಯಾಗಿ ಪಾಠ ಕಲಿಯಬೇಕಾದ ಅಥವಾ ಆಟಪಾಟಗಳಲ್ಲಿ ಆಸಕ್ತನಾಗಿರಬೇಕಾಗಿದ್ದ ಇವರ ಶ್ರದ್ಧೆ ಹೆಚ್ಚಾಗಿ ಹರಿಯುತ್ತಿದ್ದುದು ಚಿತ್ರ ಲೇಖನದ ಬಗ್ಗೆ. ಕಡ್ಡಿಯಿಂದ, ಬೆರಳಿನಿಂದ, ಉಗುರಿನಿಂದ, ಪೆನ್ಸಿಲ್‌ನಿಂದ, ಪೆನ್ನಿನಿಂದ--ಹಾಗೆ ಪ್ರಮೇಯ ಬ್ರಷ್‌ನಿಂದ ಚಿತ್ರಕಲಾಭಿರುಚಿ ಬೆಳೆಯುತ್ತಾ ಬಂತು. ತಾನು ಕಾಣುವ ವಿಶೇಷ ವ್ಯಕ್ತಿಗಳನ್ನೋ ದೃಶ್ಯಗಳನ್ನೋ ಕೂಡಲೇ ಚಿತ್ರಿಸಬೇಕು. ಆಗ ಮಾತ್ರವೇ ಸಮಾಧಾನ.

ವಿದ್ಯಾಭ್ಯಾಸ

ಕನ್ನಡ, ತುಳು, ಇಂಗ್ಲಿಷ್, ಹಿಂದಿ ಮತ್ತು ಮಲೆಯಾಳ ಭಾಷೆಗಳಲ್ಲಿ ಸ್ವಲಾಹಾರ ಸಾಮರ್ಥ್ಯವುಳ್ಳ ಪುಣಿಂಚತ್ತಾಯರು ಚಿತ್ರಕಲಾವಿದನಾಗಿ ರೂಪುಗೊಂಡುದು ಮೈಸೂರು ಮತ್ತು ಬೊಂಬಾಯಿಯಲ್ಲಿ.

ಹಲವು ಪಾರಿತೋಷಕಗಳು

ಮುಂಬಯಿಯಲ್ಲಿನ ನೂತನ ಕಲಾ ಮಂದಿರದಲ್ಲಿ ಪ್ರೊ। ದಂಡಾವತಿ ಮಠರ ವಿದ್ಯಾರ್ಥಿಯಾಗಿದ್ದಾಗಲೇ ೧೯೬೧-೬೫ರ ಮಧ್ಯೆ ಚಿತ್ರಕಲಾ ಪ್ರಾಥಮಿಕಯಲ್ಲಿ ಪುಣಿಂಚತ್ತಾಯರು ಪೂನಾದ ಫೆಡರೇಶನ್ ಆಫ್ ಆರ್ಟ್ ಇನ್‌ಸ್ಟಿಟ್ಯೂಶನ್ಸ್‌ನ ಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನೂ, ಅಂತಹದೇ ಕೊಲ್ಲಾಪುರದ ಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನೂ ಮೈಸೂರು ದಸರಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ (೧೯೬೩)ವನ್ನೂ ಪಡೆದರು.

ಕೆಲವು ಕೃತಿಗಳು

ಸಮುದ್ರ ತೀರ, ಅಂಬಿಗರ ಜೀವನ, ಸಹ್ಯಾದ್ರಿಯ ಬೆಡಗು, ಹಳೇಬೀಡು, ದಿನದ ಕೊನೆಯ ಘಗ್ಗು, ಹೆಸರು ನೀರು, ಜಾಪಾತಿಯ ಅಂಧಕಾರ, ಕೃಷಿಕನ ಜೀವನ--ಇತ್ಯಾದಿಯಾಗಿ ಭಾವನಾತ್ಮಕ ಕಲಾಕೃತಿಗಳು ಈಗಾಗಲೇ ಪುಣಿಂಚತ್ತಾಯರ ಕಲಾವೈಭವನ್ನು ಕಲಾಪ್ರೇಮಿಗಳಿಗೆ ಸಾರಿದುವು ಹೇಳಿದೆ.

ಆರ್ಟ್ ಸೊಸೈಟಿ ಆಫ್ ಇಂಡಿಯಾದ ಆಶ್ರಯದಲ್ಲೇರ್ಪಡಿಸಿದ್ದ ದೆಹಲಿಯ ಪ್ರದರ್ಶನ ಮತ್ತು ಮುಂಬಯಿ ಪ್ರದರ್ಶನಗಳಲ್ಲಿಯೂ ಪುಣಿಂಚತ್ತಾಯರ ಕಲಾಕೃತಿಗಳು ವಿಜಯ ದುಂದುಭಿಯನ್ನು ಮೊಳಗಿಸಿವೆ.

ಪ್ರಕೃತಿ ದೃಶ್ಯ ಪ್ರಿಯ

ಶ್ರೀ ಪುಣಿಂಚತ್ತಾಯರು ನಿಸರ್ಗ ಸೌಂದರ್ಯವನ್ನು ಪೋಡಿ ಭಾವಲೋಲುಪರಾಗುತ್ತಾರೆ. ಅದಲ್ಲೂ ಏನಾದರೊಂದು ನೈಸರ್ಗಿಕತೆಯ ಬಗ್ಗೆ "ಬೆಟ್ಟ-ಲೈನ್" ಅವರ ಮನಸ್ಸಿನಲ್ಲೇ ಅಂಟಿಕೊಳ್ಳುತ್ತಿರಬೇಕು. ಅಂತಹ ಸಂದರ್ಭಗಳಲ್ಲಿ ಅವರೊಂದಿಗೆ ಸಂಭಾಷಣೆ ಮಗ್ನರಾದವರು ಗ್ರಹಿಸಿಕೊಳ್ಳಬಹುದಾಗಿದೆ.

ವ್ಯಾಪಾರೋದ್ಯಮ ಬೇಕಾಗಿಲ್ಲ

"ಕಮರ್ಶಿಯಲ್ ಆರ್ಟ್"ನಲ್ಲಿ ಕಲಾವಿದನ ಸ್ವಂತ ಜಾಣ್ಮೆಗೆ ಅವಕಾಶ ಕಿಯಂತ್ರಿತವೆಂದು ಪುಣಿಂಚತ್ತಾಯರು ಅಭಿಮತ. ಅವರಿಗೆ ಲಲಿತ ಕಲೆಯೇ ಸರ್ವಸ್ವ. ಕಲ್ಪನೆಗೆ ಲಲಿತಕಲೆ ಹೆಚ್ಚು ಸ್ವಾತಂತ್ರ್ಯ ಸ್ಫೂರ್ತಿಗಳನ್ನು ನೀಡುತ್ತದೆ; ನನ್ನ ಚಿತ್ರಕಲೆಯು ಸ್ವಯಂ ಕಲ್ಪಿತ, ಸ್ವಯಂ ಪ್ರೇರಿತ, ಸ್ವತಂತ್ರ ವಿಧಾನವಾಗಿದ್ದು ಇಲ್ಲಿ ಅನುಕರಣೆಗೆ ಬೆಲೆಯಿಲ್ಲ; ಬಣ್ಣಗಾರಿಕೆ ಮತ್ತೊಂದು ಮೂಲ್ಯ; ಬಣ್ಣಗಾರಿಕೆಯು ಕುಶಲಪೂರಿತವಾದಾಗ ಒಂದೇ ಆವರಣದಲ್ಲಿ ಅನೇಕ ಭಾವಪೂರಿತ ಚಿತ್ರಗಳ ಮೂಲಕ ಜಾಣ್ಮೆ ಪ್ರದರ್ಶನ ಸಾಧ್ಯ; ವಿಶಿಷ್ಟ ಶೈಲಿಯಲ್ಲಿ ಶಬ್ದಗಳನ್ನು ಹೆಣೆದಾಗ ನವ್ಯ ಕಾವ್ಯವಾಗುವಂತೆಯೇ ಸ್ವಯಂ ಕಲ್ಪಿತ ವರ್ಣರಂಜಿತ ಚಿತ್ರಕಲೆಯೂ ಭಾವನಾತ್ಮಕ ಸೃಷ್ಟಿಯಾಗುತ್ತದೆನ್ನುತ್ತಾರೆ-- ಪುಣಿಂಚತ್ತಾಯರು.

ನನ್ನ ಯತ್ನ ವಿಫಲ

ಒಮ್ಮೆ ನಾನು ಈ ತರುಣ ಕಲಾವಿದನೊಂದಿಗೆ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ನಿರ್ದಿಷ್ಟ ಸಮಯದೊಳಗೆ ನಾವು ಮಂಗಳೂರಿನಿಂದ ಉಡುಪಿಗೆ ಹೋಗಿ ಮರಳಬೇಕಾಗಿತ್ತು. ಆದರೂ ಸಮಯದ ಪರಿವೆಯೇ ಇಲ್ಲದವರಂತೆ ಕರಾವಳಿ ದೃಶ್ಯಗಳಲ್ಲಿ ತಲ್ಲೀನರಾದ ಪುಣಿಂಚತ್ತಾಯರು ಅಲ್ಲಲ್ಲಿ ವಾಹನ ನಿಲ್ಲಿಸಿ ಅವಸರದ ಸೀದಾ ಪ್ರಯಾಣಕ್ಕೆ ಆತಂಕವೆಸಗುತ್ತಿದ್ದರು.

ಸಂಭಾಷಣಾ ವೇಳೆ ಯಾವುದೋ ವಿಚಾರವಾಗಿ ಬಸ್‌ಪ್ರಯಾಣದ ಗತ ವೈಭವಗಳ ಬಗ್ಗೆ ನಾನು ವಿವರಣೆ ನೀಡ ತ್ತಾ ನಾನು ಚಿಕ್ಕವನಾಗಿದ್ದಾಗ—ಸುಮಾರು ೩೬ ವರ್ಷಗಳ ಹಿಂದಿನ ಬಸ್‌ಪ್ರಯಾಣದ ಸಂಕಷ್ಟಗಳನ್ನು ತಿಳಿಸಿದೆ. ಅಂದು ಕೆಲವು ಬಸ್ಸುಗಳ ಮೂಡಿನ ಮೇಲೆ ಹಾರೆ, ಪಿಕ್ಕಾಸು, ಸೈಗೋಲು, ಹಲಗೆಗಳು, ಮರದ ತುಂಡುಗಳು, ಗಟ್ಟಿಯಾದ ಉದ್ದದ ಹುರಿ ಹಗ್ಗಗಳು ಇತ್ಯಾದಿ "ಪ್ರಥಮ ಚಿಕಿತ್ಸಾ" ಸಾಧನಗಳು ಅನಿವಾರ್ಯವಾಗಿದ್ದವೆಂದೂ ರಸ್ತೆಗಳಲ್ಲಿ ಮಳೆಗಾಲದಲ್ಲಿ ಅಲ್ಲಿಲ್ಲಿ ಒಸರು ಹುಟ್ಟಿದಲ್ಲಿ ಅಂದಿನ ಬಸ್ಸುಗಳಲ್ಲಿ ಹಿಂದೆ ಈಗಿನಂತೆ 'ಡಬ್ಬಲ್ ಟಯರು'ಗಳಿರದೆ 'ಸಿಂಗಲ್ ಟಯರ್' ಇದ್ದದ್ದರಿಂದಾಗಿ ಹಿಂಬದಿಯ ಚಕ್ರಗಳು ಕೆಸರಲ್ಲಿ ಹೂತು ಹೋಗುವ ಅಪಾಯದಿಂದ ಪಾರಾಗಲು ಬಸ್ ಚಾಲಕರು ಕೈಗೊಳ್ಳುತ್ತಿದ್ದ ಮುಂಜಾಗರೂಕತೆಯ ವಿಧಾನಗಳನ್ನು ನಾನು ವಿವರಿಸುತ್ತಿದ್ದಂತೆಯೇ ಪುಣಿಂಚತ್ತಾಯರು ಭಾವನಾಪರವಶರಾಗಿ ಏನನ್ನೋ ಗ್ರಹಿಸಿ ತನ್ನ ಜೇಬಿನಲ್ಲಿದ್ದ ಕಾಗದ ಪೊಂದರಲ್ಲಿ ಏನನ್ನೋ ಗೀರುತಿಸಿ ಇದೊಂದು ಚಿತ್ರಕಲಾ ವೈಶಿಷ್ಟ್ಯದ ವಿಚಾರವೆಂದರು.

ಒಮ್ಮೆ ನಾನು ಶ್ರೀ ಪುಣಿಂಚತ್ತಾಯರ ಮನೆಗೆ ಹೋಗಿದ್ದಾಗ "ಲಘು ಉಪಹಾರ" ಸತ್ಕಾರದೆಡೆಯಲ್ಲಿಯೇ ಅತಿ ಅಲ್ಪಾವಧಿ—ಕೆಲವೇ ನಿಮಿಷಗಳಲ್ಲಿ ನನ್ನ ಅರ್ಧರೂಪ (ಪೋರ್ಟ್ರೈಟ್)ವನ್ನವರು ಕೆನ್ವಾಸಿಗೆ ಪ್ರತಿಬಿಂಬಿಸಿಕೊಂಡರೆಂದು ನನಗೆ ಮತ್ತೆ ತಿಳಿಯಿತು.

ಈ ಬಗೆಯ ಕಲಾಕುಶಲತೆಯ ಬಗ್ಗೆ ನಾನೂ ಪ್ರಯತ್ನಿಸಬಾರದೇಕೆ? ಎಂದು ನನಗೆ ಆಗಾಗ ತೋರುತ್ತಿತ್ತು. ಚಿತ್ರದ ಹೆಸರನ್ನು ಮುಂದಾಗಿ ನಿರ್ಣಯಿಸಿ ಚಿತ್ರ ಬಿಡಿಸಬೇಕೆಂಬ ನನ್ನ ಹಲವು ಯತ್ನಗಳೂ ವಿಫಲವಾದವು. ನಾನು ಕುದುರೆಯೆಂದು ಬಿಡಿಸಿದ ಚಿತ್ರ ಕತ್ತೆಯದೂ ಗಿಳಿಯೆಂದು ಬರೆದುದು ಕೋಳಿಪುದೂ ಆದಾಗ ಹಳೆ ಕತೆಯೆಂದರೆ ನೆನಪಾಯಿತು.

ಒಮ್ಮೆ ಓರ್ವ ಕಲಾವಿದನು ಮಹಾಗಣಪತಿಯ ವಿಗ್ರಹವನ್ನು ಅಚ್ಚಮಣ್ಣಿನಿಂದ ತಯಾರಿಸುತ್ತಿದ್ದಾಗ ಸಂದರ್ಶಕನೋರ್ವನು "ಇದೇನು ಮಹಾ!" ಎಂದನಂತೆ. ಹಾಗಾದರೆ ಇಂತಹ ಶಿಲ್ಪಾಕೃತಿ ಸಾಧ್ಯವೆ? ಎಂಬ ಪ್ರಶ್ನೆ ಉದ್ಭವಿಸಿತು. ಗಣಪತಿಯೇ ಏನು? ಗಣಪತಿಯ ಅಕೃತಿಯನ್ನು ಮಾಡಲಿಲ್ಲೆನೆಂದು ಜಂಭ ಕೊಚ್ಚಿದನಂತೆ. ಗಣಪತಿಯ ತಂದೆ ಶಿವ. ಶಿವಲಿಂಗಾಕೃತಿಯನ್ನು ಅಚ್ಚಮಣ್ಣಿನಿಂದ ಮಾಡಲು ಆತ ಸಮರ್ಥ ಕಲಾವಿದನಾದಂತಾಯ್ತು.

ಹೀಗೆ ಫಿದಿಸ್ಟ್ ಭಾವನಾತ್ಮಕ ಕಲಾಸೃಷ್ಟಿಯಲ್ಲಿ ಮಾತ್ರವೇ ಕಲಾ ವೈಶಿಷ್ಟ್ಯವಡಗಿರುವುದು. ಓರ್ವ ಕುಶಲ ಕಲಾವಿದನಲ್ಲಿರಬೇಕಾದ ಹಲವು ಗುಣಗಳೂ ಪ್ರಾಥಮಿಕಯೂ ಅಡಕವಾಗಿರುವ ಶ್ರೀ ಪುಣಿಂಚತ್ತಾಯರಿಗೆ ಉಜ್ವಲ ಭವಿಷ್ಯವಿದೆ. ಹಾಗೆ ಭಗವಂತನು ಅನುಗ್ರಹಿಸಲಿ!

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
Phone— 5711, 5712, 5713 } 3 Lines. ಮಂಗಳೂರು-3.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಷನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ
ಹಾಗೂ ಎಲ್ಲಾ ತರದ ವಿಶಾಲವಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

ಗಾಜಿನ ವಿಮಾನ

ವಿಮಾನಯಾನವೂ ಅಗ್ಗವಾಗುತ್ತದೆ

ವಿಮಾನ ಪ್ರಯಾಣವು ಬಹಳ ಉಲ್ಲಾಸಕರ ಮತ್ತು ಅನುಕೂಲಕರ. ಅದರಲ್ಲಿ ತೀವ್ರ ಗತಿಯಲ್ಲಿ ಚಲಿಸಬಹುದು. ವಿಮಾನ ತಯಾರಿಕೆಯಲ್ಲಿಯೂ ಪ್ರಗತಿ ಕಂಡು ಬರುತ್ತಿದೆ. ಇನ್ನು ಮೇಲೆ ಫೈಬರ್ ಗ್ಲಾಸಿನಿಂದ ವಿಮಾನ ತಯಾರಾಗಲಿದೆ. ಇದರಿಂದ ವೆಚ್ಚ ಕಡಿಮೆ. ತಯಾರಿಕಾ ಅವಧಿ ಅಲ್ಪ. ಹೀಗಾಗಿ ಮೊರಾಟ ಬೆಲೆಯೂ ಕಡಿಮೆ.

ಅಂದವಾದ ಆಕಾರ, ಕಡಿಮೆ ಖರ್ಚು ಮತ್ತು ಶಾಸ್ತ್ರೀಯ ಅಭಿವೃದ್ಧಿ ಈ ಮೂರು ಅಂಶಗಳು ವಾಣಿಜ್ಯ ಪ್ರಯಾಣದ ಮೊದಲ ವಿಮಾನದಲ್ಲಿ ಸಮಾವೇಶಗೊಂಡಿವೆ. ಇದರ ಎಂಜಿನ್ ಮತ್ತು ಲ್ಯಾಂಡಿಂಗ್ ಗೇರ್‌ಗಳನ್ನು ಬಿಟ್ಟು ಉಳಿದ ಭಾಗವೆಲ್ಲಾ ಫೈಬರ್ ಗಾಜಿನಿಂದ ಮಾಡಲ್ಪಟ್ಟಿದೆ. ಇದನ್ನು ಹ್ಯಾನೋವರ್‌ನಲ್ಲಿ ಈ ವರ್ಷ ಘಡೆದ ಜರ್ಮನಿಯ ಏಳನೇ ಏವಿಯೇಷನ್ ಷೋನಲ್ಲಿ ಪ್ರದರ್ಶಿಸಿದರು. ಇದರಲ್ಲಿ ಒಂದು ಎಂಜಿನ್ ಇದ್ದು ನಾಲ್ವರು ಪ್ರಯಾಣಿಕರು ಕುಳಿತುಕೊಳ್ಳಬಹುದು ಇದರ ಅಗಲ-೧೧.೮೫ ಮೀ. ಉದ್ದ—೭.೬೫ ಮೀ. ೨೦೦ ಅಶ್ವಶಕ್ತಿ ಇಂಜಿನ್, ಇದರ ವೇಗ ಗಂಟೆಗೆ ೩೦೦ ಕಿ. ಮೀ. ಜರ್ಮನ್ ಸಂಸ್ಥೆ ಇದನ್ನು ತಯಾರಿಸಿದೆ.

ಅನುಕೂಲಗಳು:- ಬಹಳ ಹಗುರ, ಪ್ರಯಾಣದ ಖರ್ಚು ಕಡಿಮೆ, ತಯಾರಿಕೆಯ ಅವಧಿ ಕಡಿಮೆ. ಈ ಕಾರಣದಿಂದ ಮಾರುವ ಬೆಲೆಯೂ ಕಡಿಮೆ ಹೊಡಬಹುದೆಂದು ತಯಾರಿಕರು ಅಭಿಪ್ರಾಯಪಡುತ್ತಾರೆ. ಇದರ ತಯಾರಿಕೆಯ ಖರ್ಚು ೧೦೦,೦೦೦ ಡಿ. ಎಂ. (೨೫,೦೦೦ ಡಾಲರ್ಸ್). ಈಗ ತಯಾರಾಗುತ್ತಿರುವ ಇದೇ ಸೈಜಿನ ವಿಮಾನಗಳ ಬೆಲೆಗಿಂತ ಕಡಿಮೆಯಾಗಿದೆ.

ಜರ್ಮನ್ ಸಂಸ್ಥೆಯೊಂದರಿಂದ ತಯಾರಾದ ಕಡಿಮೆ ವೆಚ್ಚದ ಚಿಕ್ಕ ವಿಮಾನವೊಂದು ಸಹ ಹ್ಯಾನೋವರ್‌ನ ಏವಿಯೇಷನ್ ಷೋನಲ್ಲಿ ಸಾಕಷ್ಟು ಆಸಕ್ತಿಯನ್ನು ಕೆರಳಿಸಿತು. ಫ್ರೆಂಚ್ ಮತ್ತು ಇಂಗ್ಲಿಷ್ ಪ್ರದರ್ಶಕರಿಗೆ ವಿರುದ್ಧವಾಗಿ ಇದು ಮುಖ್ಯವಾಗಿ ಮಾರಾಟ ಪ್ರದರ್ಶನವೆಂದು ಕರೆಯಲ್ಪಟ್ಟಿತು. ಅದರಲ್ಲಿ ಕುಳಿತ ಇಬ್ಬರು ಹೊಸಬರು, ಕೆಲವು ವೇಳೆ ಕಾರ್ ಡ್ರೈವಿಂಗ್‌ಗಿಂತಲೂ ಹಾರುವುದೇ ಮಿತವ್ಯಯವಾಗುವುದೆಂದು ಅಭಿಪ್ರಾಯಪಟ್ಟರು. ಕೊಳ್ಳುವ ಬೆಲೆ ೩೬,೦೦೦ ಡಿ. ಎಂ. (೯,೨೫೫ ಡಾಲರ್ಸ್), ಪ್ರತಿ ಪ್ರಯಾಣಿಕರಿಗೆ ಒಂದು ಕಿ. ಮೀ. ಹಾರಲು ೧೨ ಫೆನ್ನಿಂಗ್ ಖರ್ಚಾಗುತ್ತದೆ.

ಈ ಚಿಕ್ಕ ಯಂತ್ರಗಳ ಘಂತರ ಫ್ರೆಂಚ್, ಬ್ರಿಟಿಷ್ ಮತ್ತು ಜರ್ಮನಿಯ ಸಂಯುಕ್ತ ಯೋಜನೆಯಿಂದ ತಯಾರಾದ ಸಿಂಬಸ್ ಎ-೩೦೦ ಆಕಾರದಲ್ಲಿ ಅದ್ಭುತವಾಗಿದ್ದಿತು. ಅದರಲ್ಲಿ ಯೂರೋಪಿಯನ್ ವಿಮಾನ ತಯಾರಿಕಾ ಸಂಸ್ಥೆಗಳು ಅಮೇರಿಕಾ ದೇಶದ ಸ್ಪರ್ಧೆಗಾರರನ್ನು ಸೋಲಿಸಲು ಯೋಚಿಸುತ್ತಿದೆ. ಈ ವಿಮಾನದಲ್ಲಿ ೨೦೦ - ೩೦೦ ಪ್ರಯಾಣಿಕರು ಹೋಗಬಲ್ಲರು.

ಈ ವರ್ಷದ ಪ್ರದರ್ಶನದಲ್ಲಿ ೪೦೦ ಸಂಸ್ಥೆಗಳು ಭಾಗವಹಿಸಿದರು. ಗ್ರೇಟ್ ಬ್ರಿಟನ್‌ನಿಂದ ೮೨ ಪ್ರದರ್ಶನಕಾರರೂ, ಅಮೇರಿಕಾದಿಂದ ೮೦ ಪ್ರದರ್ಶನಕಾರರೂ ಇದರಲ್ಲಿ ಭಾಗವಹಿಸಿದ್ದರು. ಪೋಲೆಂಡ್ ಮತ್ತು ಫ್ರಾನ್ಸ್‌ನಿಂದ ೫೫ ಪ್ರದರ್ಶನಕಾರರೂ ಮತ್ತು ಜಕೋಸ್ಲೋವೇಕಿಯಾಗಳು ಇದರಲ್ಲಿ ಭಾಗವಹಿಸಿದ್ದರೂ ಸೋವಿಯೆಟ್ ಯೂನಿಯನ್ ಭಾಗವಹಿಸಲಿಲ್ಲ. ಅದು ಮುಂದಿನ ವರ್ಷ ಭಾಗವಹಿಸುವುದೆಂದು ನಂಬಲರ್ಹವಾದ ವಲಯಗಳಿಂದ ತಿಳಿದು ಬಂದಿದೆ.

ಆರ್ಥಿಕ ಮಂತ್ರಿಯಾದ ಶಿಲ್ಲರ್‌ರವರು ಜರ್ಮನಿಯ ವಾಯುಯಾನ ಮತ್ತು ಗಗನಯಾತ್ರಾ ಸಂಸ್ಥೆಗಳಿಗೆ ಒಟ್ಟುಗೂಡಿ ಕೆಲಸ ಮಾಡಲು ಕರೆಕೊಟ್ಟರು. ಜರ್ಮನ್ ಸರ್ಕಾರವು ರಾಷ್ಟ್ರದ ಆರ್ಥಿಕ ಕ್ಷೇತ್ರದಲ್ಲಿ ಈ ಕೈಗಾರಿಕೆಯ ಅಭಿವೃದ್ಧಿಯ ಅವಶ್ಯಕತೆಯನ್ನು ಗುರುತಿಸಿದೆ ಮತ್ತು ವಾರ್ಷಿಕ ಸಹಾಯದ ಯೋಜನೆಗಳಲ್ಲಿ ಈ ಕೈಗಾರಿಕೆಗೆ ಹೆಚ್ಚು ಸಹಾಯ ನೀಡಿದೆ. ಇದು ೧೯೫೭ರಲ್ಲಿ ಗಮನಾರ್ಹವಾದ ಧನವನ್ನು ತಂದ ಒಂದೇ ಒಂದು ಶಾಖೆಯಾಗಿದೆ. ಇದರಲ್ಲಿ ೪೭೦೦೦ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ, ಮತ್ತು ೧.೫ ಬಿಲಿಯನ್ ಡಿ. ಎಂ. (೩೭೫ ಮಿಲಿಯನ್ ಡಾಲರ್ಸ್)ನಷ್ಟು ವ್ಯಾಪಾರವು ಈ ಉದ್ದಿಮೆಯಲ್ಲಿ ಆಗಿದೆ.

ಸೇತುವೆ ನಿರ್ಮಾಣ

ಅಧ್ಯಕ್ಷಳಿ-ಪಾಷಾಜಿ ರಸ್ತೆಯಲ್ಲಿ ಎಣ್ಣೆಕೆಗ್ಗಾಮದಲ್ಲಿ ಒಂದು ಸೇತುವೆ ನಿರ್ಮಾಣವನ್ನು ಬೇಗನೆ ಕೈಗೊಳ್ಳುವಂತೆ ಶ್ರೀ ಕುಚಕುಳ್ಳಾಯ, ಎಂ.ಎಲ್.ಎ., ಕೇರಳ ಸರ್ಕಾರವನ್ನು ವಿನಂತಿಸಿದ್ದಾರೆ. ಈ ಸೇತುವೆಗೆ ರೂ. ೪೦,೦೦೦ ವೆಚ್ಚ ತಗಲಬಹುದು.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ತಂಬರಾದಿಯಿಂದ 48ನೇ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವುದಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯವಾಡಿ ಆದಷ್ಟು ಶೀಘ್ರ ಮನಿಯಾರ್ಡರು ದ್ವಾರಾ, ಯೂ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,

ನವಯುಗ, ಉಡುಪಿ.

ಹೆಗ್ಗೆ ಸಂಚ್ಯಾತ್

ಹೆಗ್ಗೆ ಸಂಚ್ಯಾತ್ ಅಧ್ಯಕ್ಷರಾಗಿ ಪರ್ಕಳ ಜ್ಯೋತಿಷಿ ಗುರುರಾಜಾಚಾರ್ಯರೂ, ಉಪಾಧ್ಯಕ್ಷರಾಗಿ ಶ್ರೀ ರಾಮದಾಸ ಹೆಗ್ಡೆಯವರೂ ತಾ. 21.6.68ರಂದು ಅವಿರೋಧವಾಗಿ ಆಯ್ಕೆಮಾಡಲ್ಪಟ್ಟಿದ್ದಾರೆ. ಅದೇ ದಿನ ಅಹಾರಮಂತ್ರಿ ಶ್ರೀಯುತ ಕಿಲ್ಲೆದಾಸ ಶೆಟ್ಟರನ್ನು ಸಂಚ್ಯಾತ್ ಆಫೀಸಿಗೆ ಬರಮಾಡಿಕೊಂಡು ಹೂ ಮಾಲೆಹಾಕಿ ಸತ್ಕರಿಸಲಾಯಿತು.

ತಿದ್ದುಪಡಿ

ಕಳೆದ ಸಂಚಿಕೆಯ ನಾಲ್ಕನೇ ಪುಟದಲ್ಲಿ ಎಡ್ವೋಕೇಟ್ ಪಿ.ಎಸ್. ಕೃಷ್ಣಮೂರ್ತಿರಾಯರ ಹೆಸರಿನಲ್ಲಿ ಪ್ರಕಟವಾದ ಉಡುಪಿ ಮುನ್ಸಿಫ್ ಕೋರ್ಟಿನ Ex.C. No 38/1968ನೇ ನೋಟೀಸಿನ ವಾಯಿದೆಯು ತಾ. 7.6.68 ಎಂದು ಕೆಲವು ಪ್ರತಿಗಳಲ್ಲಿ ತಪ್ಪಾಗಿ ಪ್ರಿಂಟಾಗಿರುತ್ತದೆ. ಆ ವಾಯಿದೆಯನ್ನು ತಾ 7 ಕು 8.6.1968 ಆಂತ ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ. (ಸಂ.ನ)

ವಿದೇಶೀ ವಿದ್ಯಾರ್ಥಿಗಳು

ಮಣಿಪಾಲ, ಜು. ೧—ಪ್ರಸ್ತುತ ಸುಂದರಗೆ ಮೂವರು ಅಮೆರಿಕದ ವಿದ್ಯಾರ್ಥಿಗಳು ಇದ್ದರು ಕಸ್ತೂರಬಾ ಮೆಡಿಕಲ್ ಕಾಲೇಜಿಗೆ ಸೇರಿದ್ದಾರೆ.

ಮುಂದಿನ ವಾರ ಇನ್ನೂ ಒಬ್ಬ ಸೇರುವ ನಿರೀಕ್ಷೆ ಇದೆ. ಈ ಕಾಲೇಜಿನಲ್ಲಿ ಮಲೇಷಿಯಾ, ಸಿಲೋನ್, ಫೈಲ್ಯಾಂಡ್ ಕಾಗೂ ಪೂರ್ವ ಆಫ್ರಿಕಾದಿಂದ ಬಂದ ಸುಮಾರು ೫೦ ವಿದೇಶೀ ವಿದ್ಯಾರ್ಥಿಗಳಿದ್ದಾರೆ.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O.S. 34/68

B. ನರಸಿಂಹ ಭಟ್ಟ— ವಾದಿ

B. ನಾರಾಯಣ ಕೆಳ—ಬಾಮಂಣ ರೈಗಳ ಅಳಿಯ, ಬೆಳ್ಳಂಗಡಿ ತಾಲ್ಲೂ ನಾಪೊರು ಗ್ರಾಮದ ನಿವಾಸಿ— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಕೋರ್ಟುಸಮನ್ಸ್ ಜಾರಿ ಮಾಡಲಿಕಾಗಿಯೂ ಪ್ರತಿವಾದಿಯು ಹಾಜರಾಗಿ ಸಮಾಧಾನ ಹೇಳಬೇಕೆಂದು ಆಜ್ಞೆ ಮಾಡಿದ ಸದ್ರಿ ಪ್ರತಿವಾದಿಗೆ ಬರೆಕೊಟ್ಟ ನೋಟಿಸ ಪ್ರಕಾರ ಅಸ್ತಿ ಬಿಡಿ ಹಣಗಳ ಪೈಕಿ ಇನ್ನು ನಿಮ್ಮಿಂದ ಬರಬೇಕಾದ ಇದ್ದ ರೂ. 3617-00ನ್ನು ಕೇಳಿ ನಿಮ್ಮ ಮೇಲೆ ಮೊಕದ್ದಮೆ ಈ ನಾವಯನ್ನು ತಾ. 16.7.68ಕ್ಕೆ ಇಟ್ಟಿರುತ್ತದೆ. ಸದ್ರಿ ದಿನಕ್ಕೆ ಹಾಜರಾಗಿ ಉದಾಹರಿಸದಿದ್ದರೆ ನಿಮ್ಮನ್ನು ತಿಳ್ಳಾಮಾಡಿ ಯುಕ್ತಿಕಂತೆ ತೀರ್ಮಾನಕ್ಕೆ ಬರುವುದು.

Sd/- M. Sadashiva Rao,
Vakil for Plff.

Puttur, 2-7-68.

ಸ್ವಪ್ರಯತ್ನದ ಪಾಠ

(ಸೂರನೇ ಪುಟದಿಂದ)

ದ್ದಾರೆ ಅವರು. ಇದು ಭಾರತೀಯರಿಗೂ ಅನ್ವಯಿಸುವುದೆನ್ನಬಹುದು. ನಾವು ಯೋಜನೆಗಳ ಅವಧಿಯಲ್ಲಿ ವಿದೇಶೀ ನೆರವಿನಪ್ರವಾಹವನ್ನೆ ಇಲ್ಲಿ ಹರಿಸಿದ್ದೇವೆ; ಅ ನೆರವೆಂದು ವಿದೇಶ ನೀತಿಯನ್ನು ನಾವು ಅ ನ್ವರಿಸಿ ಒಪ್ಪಿಕೊಳ್ಳಲು ಸಿದ್ಧರಿಲ್ಲವೆಂಬ ದ ರಿಂದಲೇ ಅದರಿಂದ ನೆರವು ಮುಂದೆ ಹಿಂದಿನಂತೆ ಉದಾರವಾಗಿ ಸಿಗುವುದಿಲ್ಲ. ರಷ್ಯದ ಮನಸ್ಸು ಪಾಕಿಸ್ತಾನದತ್ತವೂ ಹ ರಿದಿದೆಯೆಂದಾಗ ಕಳಚುಘಟೆಯೊಯಿ ತು. ಉಳಿದ ಬೇರೆ ಬೇರೆ ರಾಷ್ಟ್ರಗಳ ನೆರವು ಅಗಣ್ಯವೇ ಸರಿ. ಹಾಗಾಗಿ ನಾವು ಆಂತರಿಕ ಸಂಪನ್ಮೂಲಗಳನ್ನು ಕಂಡು ಹಿಡಿದು ಅವರ ಬಲದಿಂದಲೇ ಸ್ವಪ್ರಯತ್ನದಿಂದಲೇ, ಮುಂದೆ ಬರಬೇಕೆಂಬುದು ಹಗಲಿನಷ್ಟು ಸ್ಪಷ್ಟ. ಇದನ್ನು ನಮ್ಮ ನಾಯಕರೂ ಕುಸು ಮನಗಂಡಿದ್ದಾರೆ. ವಿದೇಶೀ ನೆರವು ಸದಾ ಅನಿಶ್ಚಿತ ಮತ್ತು ಅನಪೇಕ್ಷಣೀಯ ಪ್ರಭಾವಶಾಲಿ. ಅನ್ಯದೇಶಗಳ ಪ್ರಭಾವದಿಂದ ನಾವು ಬದುಕಲಿಯು ಬೇಕು—ನಮ್ಮತನವನ್ನು ಉಳಿಸಿ ಬೆಳೆಸಬೇಕು—ಇದಕ್ಕಾಗಿ ಸ್ವಪ್ರಯತ್ನವೇ ತಾರಕೋಪಾಯ. ಅಹಾರದ ಬಟ್ಟಲನ್ನು ಹಿಡಿದು ಅನ್ಯದೇಶಗಳಿಗೆ ಭಿಕ್ಷೆಗೆ ಹೋದಾಗ ಅವು ಏನು ಮಾಡಿದುವು? ನೀಡುವ ತುತ್ತು ಹಿಟ್ಟಿಗಾಗಿ ತಾನು ಕಟ್ಟಲಿ ಕಾಯಿಸಿದುದ—ಅದು ಪರಿಗಿನ ಹೊಟ್ಟೆಯ ಕಳಮಳ! ಈ ನೋವಿನಿಂದ ಪಾರ ಕಲಿತ ನಾವು ಸ್ವಪ್ರಯತ್ನ—ದೈವ ಕೃಪೆಯಿಂದ ಅಹಾರ ಸ್ವಾವಲಂಬನೆಯತ್ತ ಸಾಗುತಿದ್ದೇವೆ. ಇದೇ ದಾರಿಯನ್ನು ಉಳಿದೆಲ್ಲ ರಂಗಗಳಲ್ಲೂ ಮೆಟ್ಟಬೇಕು ಅಂದರೇ ನಮಗೊಂದು ಬೆಲೆಯಿದೆ.

ಪರದೆಯ ಹಿಂದೇನು?

ತಾಯುಮೊಬ್ಬ ತನ್ನ ಪರಿವಾರದವರೆಲ್ಲರಿಗೂ ಔತಣ ಏರ್ಪಡಿಸಿ ಕೊನೆಗೆ ಹೇಳಿದ—ತನಗೆ ಏಕಾಂತವಾಸ ಅಸಹನೀಯವೆನಿಸಿದೆ. ತನ್ನ ಮನೆಗೆ ಕೆಲಸಕ್ಕೆ ಬರುವ ಗಲವಯಸ್ಸಿನ ಒಬ್ಬ ನಪುಂಸಕನು ಮೋಹಪಾಶದಲ್ಲಿ ಬಿದ್ದಿದ್ದೇನೆ; ವಿವಾಹಕ್ಕೆ ಅನುಮತಿ ನೀಡಿ." ಉಳಿದವರಾರೂ ಮಾತಾಡದಿದ್ದರೂ ಎಂಬತ್ತೈದನೆ ವಯಸ್ಸಿನ ಅವನ ಮೊಮ್ಮಗ ತನ್ನ-ಅಕ್ಕನ ಮೇಲಿನ ಪ್ರೇಮವನ್ನು ಅನಿವಾರ್ಯವಾಗಿ ಭೇಧಿಸಬೇಕಾಯಿತು. ಕೊನೆಗೆ ಅಜ್ಜಿಲ್ಲದ ಅ ಹುಡುಗನ ತಂದೆಯ ನಿರ್ಧಾರದಂತೆ ನಡೆಯುವ ತೀರ್ಮಾನವಾಯಿತಂತೆ—ಇದು ಸುದ್ದಿ; ಸತ್ಯ. ಈಗ ಹುಡುಗನ ಕಂದಿ ಯಾರಿಗೆ ಅನ್ನ ಮತ ನೀಡಬೇಕು? ತನ್ನ ತಂದೆಗೆನೆ? ಮಡದಿಗೆನೆ? ಹುಡುಗಿಯ ಒಲವು ಯಾರ ಮೇಲಿದೆಯೆಂದು ಎಲ್ಲರಿಗೂ ಗೊತ್ತು. ಅಜ್ಜನನ್ನು ಮದುವೆಯಾಗಿ ಮೊಮ್ಮಗನೆಡೆಗಿನ ಪ್ರೇಮ ವ್ಯವಹಾರವಿಟ್ಟುಕೊಳ್ಳುವ ಇರಾದೆಯೂ ಇರಬಹುದು. ಏಕೆಂದರೆ, 'ಅಜ್ಜನ ಆಸ್ತಿ" ಯನ್ನು ಕಬಳಿಸಲು ಇದೊಂದೇ ಉಪಾಯ. ಮೊಮ್ಮಗನೂ ಇದನ್ನು ವಿರೋಧಿಸಲಾರ. ತನ್ನಜ್ಜ ಶತಾಯುವೆಂಬುದನ್ನು ಅವನು

ಶ್ರೀ ಅನಂತ ಪೈಯವರ ಅನಂತೆಮುಖೀ ಸೇವೆ

(ಮೂರನೇ ಪುಟದಿಂದ)

ದಕ್ಕೆ ಭದ್ರ ಬುನಾದಿ ಹಾಕಿಕೊಟ್ಟ 'ಶಿಲ್ಪಿ' ಇವರು. ಶೈಕ್ಷಣಿಕ—ಸಾಮಾಜಿಕ, ಸಹಕಾರಿಯ ವಿವಿಧ ರಂಗದಲ್ಲೂ ಇವರ ಸೇವೆ ಚಿರಸ್ಮರಣೀಯ. ಆಗಾಗ, ಕನ್ನಡ—ಇಂಗ್ಲಿಷ್ ಭಾಷೆಗಳಲ್ಲಿ ಲೇಖನ ಬರೆಯುತ್ತಿರುವ ಶ್ರೀ ಪೈಯವರು ಉತ್ತಮ ವಾಕ್ಚಿತ್ರಗಳು, ವಾಗ್ಮಿಗಳು, ಓದುಗರೋಟಗಾರಿಕೆ ಸಾರ್ವಜನಿಕ ವಿಚಾರಗಳೇ ಇವರ ಹವ್ಯಾಸಗಳು. ೧೯೫೨ರಿಂದ ಐದು ವರ್ಷಗಳ ಕಾಲ ಮದ್ರಾಸು-ಮೈಸೂರು ಶಾಸನ ಸಭೆಯ ಸದಸ್ಯ (ಕಾಂಗ್ರೆಸ್)ರಾಗಿದ್ದ ಇವರು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಎ.ಐ.ಸಿ.ಸಿ. ಮತ್ತು ಎಂ. ಪಿ. ಸಿ. ಸಿ.ಯ ಸದಸ್ಯರೂ ಆಗಿದ್ದರು.

ಮದ್ರಾಸು ಶಾಸನ ಸಭೆಯ ಸದಸ್ಯರಾಗಿದ್ದಾಗ ಜಿಲ್ಲೆಯ ಮುಖ್ಯವಾಗಿ ತನ್ನ ಮತದಾರ ಕ್ಷೇತ್ರದ ಪ್ರಗತಿಗಾಗಿ ಅದ್ವಿತೀಯವಾಗಿ ದುಡಿದಿದ್ದಾರೆ. ಜನತಾ ಸಂಪರ್ಕವನ್ನಿಟ್ಟುಕೊಂಡು ಜನತೆಯ ಅಗುಹೋಗುಗಳನ್ನು ಪಾಲಿಸಿಕೊಂಡು, ಅವರ ಅನಿವಾರ್ಯತೆಗಳಿಗಾಗಿ ಅನಂತ ಶ್ರಮಿಸಿದ್ದಾರೆ. ಇವರ ನಿರ್ಮಿಸಿದ ದನ್ನು ಜನ ಈಗಲೂ ಸ್ಮರಿಸುತ್ತಿದೆ. ಇದು ಎಲ್ಲ ಜನತಾ ಪ್ರತಿನಿಧಿಗಳಿಗೆ ಅನುಕರಣೀಯ ಆದರ್ಶವಾಗಿದೆ.

ಶ್ರೀ ಅನಂತ ಪೈಯವರ ಹೆಸರು ಚಿಕ್ಕದ; ಆದರೆ ಅನ್ವರ್ಥವಾದುದು. ದೇಶದ ಜನತೆಯ ಮೇಲೆ ಅವರಿಗಿರುವ ಕಾಳಜಿ ಅನಂತ, ಜನ ಕಲ್ಯಾಣಕ್ಕಾಗಿ ಅವರು ಯೋಚಿಸುವುದೂ ಅನಂತ; ಅವರ ಸಾಧನೆಯೂ ಅನಂತ; ಸತ್ಪರಿಣಾಮಗಳಿಗೂ ಅಂತವಿಲ್ಲ.

ಮರೆತಾನೆ? ಅಜ್ಜನು ಖುಷಿಯಾಗಿ ಮೋಹ ಪಡುವಶನಾಗಿದ್ದಾನೆಯೇ, ಮೊಮ್ಮಗನ ಪ್ರೇಮ ವ್ಯವಹಾರವನ್ನು ಬಯಲಿಗೆಳೆಯಲೆಂದೇ ತನ್ನ ಕಥೆಯನ್ನು ಸೃಷ್ಟಿಸಿದನೆ, ಯಾರಿಗೆ ಗೊತ್ತು?

ಸಿಂಡಿಕೇಟ್ ಬ್ಯಾಂಕಕ್ಷು ಜನತೆಯ ಬ್ಯಾಂಕನ್ನಾಗಿ ರೂಪಿಸುತ್ತ, ಬಂದುದರಿಂದಲೇ 'ಸಾಮಾಜಿಕ ನಿಯಂತ್ರಣ'ದ ಸಂಕಲೆಗೆ ಇದು ಹೆದರುವುದಿಲ್ಲ. ಈ ಧೈರ್ಯ ತುಂಬಿದ ಮಹಾ ಶಿಲ್ಪಿಯೇ ಶ್ರೀ ಅನಂತ ಪೈ ಎನ್ನಲು ಯಾವ ಸಂಕೋಚವೂ ಇಲ್ಲ.

ಶ್ರೀ ಪೈಯವರು ಇನ್ನೂ ಬಹುಕಾಲ ಬ್ಯಾಂಕಿನ ಸೇವೆ ಮಾಡುತ್ತಿರಲಿ. ತಮ್ಮನ್ನೂ ಬ್ಯಾಂಕನ್ನೂ ದೇಶವನ್ನೂ ಗೌರವಕ್ಕೆ ಪರಮೋಚ್ಚ ಶಿಖರ ಮುಟ್ಟಿಸುವಲ್ಲಿಯೂ ಶ್ರೀ ಪೈ ಸಫಲರಾಗಲಿ.

ಅಕಾಡೆಮಿಯ ವಾರ್ಷಿಕ ಸಭೆ

ಮಣಿಪಾಲ, ಜುಲೈ ೧—ಅಕಾಡೆಮಿ ಆಫ್ ಜನರಲ್ ಎಜುಕೇಶನ್ ನಡೆಯಿಸುತ್ತಿರುವ ಆರು ಆರ್ಟ್ಸ್, ಸೈನ್ಸ್ ಹಾಗೂ ಕಾಮರ್ಸ್ ಕಾಲೇಜುಗಳ ಪೈಕಿ ಪ್ರತಿಯೊಂದನ್ನೂ ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿಗೆಳಿಸಲು ನಿರ್ಧರಿಸಲಾಗಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಡಾ| ಟಿ.ಎಂ ಎ. ಪೈಯವರು ನಿನ್ನೆ ಇಲ್ಲಿ ಹೇಳಿದರು. ಅಕಾಡೆಮಿಯ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ವರದಿಯನ್ನು ಓದುತ್ತಾ ಶೃಂಗೇರಿಯ ಜಗದ್ಗುರುಗಳ ಮಠದ ಭಾರತೀಸ್ವಾರಕ ಕಾಲೇಜಿನಲ್ಲಿ ನೈಯಕ್ತಿಕವಾಗಿ ಹೆಚ್ಚು ಸಹಾಯ ಬೇಕಾದವರಿಗೆ ಸಾಲಭ್ಯಗಳನ್ನು ಒದಗಿಸಲಾಗುವುದೆಂದರು.

ಇತರ ಕಾಲೇಜುಗಳನ್ನು ಅವುಗಳಲ್ಲಿರುವ ಸಾಲಭ್ಯಗಳಿಗನುಸಾರವಾಗಿ ವಿವಿಧ ವಿಷಯಗಳಲ್ಲಿ ಹಾಗೂ ರಂಗಗಳಲ್ಲಿ ಉತ್ತಮವಾದುದನ್ನಾಗಿ ಪ್ರಗತಿಗೊಳಿಸಲಾಗುವುದು.

ಉದ್ಘಾಟನೆ

ಮಣಿಪಾಲ, ಜುಲೈ೦. ಬೆಂಗಳೂರು ಡೆಂಟಲ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಡೆಂಟಲ್ ಸಯನ್ಸ್ ಸಂಸ್ಥೆಯ ವಿಜಿಟಿಂಗ್ ಪ್ರೊಫೆಸರರಾಗಿರುವ ಡಾ|| ಜೋಸೆಫ್ ಎಸ್ಲಿಯೂರಾರವರು ಇಲ್ಲಿಯ ಡೆಂಟಲ್ ಕಾಲೇಜಿನ ಆಫೀಸ್‌ಡಾಂಟಿಕ್ ಕ್ಲಿನಿಕ್ ಅನ್ನು ನಿನ್ನೆ ಉದ್ಘಾಟಿಸಿದರು.

ಪಶ್ಚಿಮ ಜರ್ಮನಿಯ ಫ್ರೈಬರ್ಗ್ ವಿಶ್ವವಿದ್ಯಾನಿಲಯದ ಡೆಂಟಲ್ ಕಾಲೇಜಿನ ಡೈರೆಕ್ಟರರಾದ ಡಾ|| ಎಸ್ಲಿಯೂರಾರವರು ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಹಲ್ಲುಗಳಿಗೆ ಸಂಬಂಧಿಸಿದ ಶಸ್ತ್ರ ಚಿಕಿತ್ಸೆಯ ಕುರಿತು ಭಾಷಣ ಮಾಡಿದರು. ಕಾಲೇಜಿನ ಡೈರೆಕ್ಟರ್ ಡಾ|| ಸುಂದರ್ ಜೆ. ವರಾಜನಿಯವರು ಮೊತನಾಡಿ ಗ್ರಾಮಾಂತರ ಪ್ರದೇಶದಲ್ಲಿರುವ ಈ ಹೊಸ ಸಂಸ್ಥೆಗೆ ಡಾ|| ಎಸ್ಲಿಯೂರಾರವರ ಭೇಟಿ ಬಹಳ ಉಪಯುಕ್ತವಾಗಿದೆ ಎಂದರು. ಇಲ್ಲಿಗೆ ಭೇಟಿಕೊಟ್ಟುದಕ್ಕಾಗಿ ಶ್ರೀ ಟಿ. ರಮೇಶ ಪೈಯವರು ಅವರಿಗೆ ಕೃತಜ್ಞತೆಗಳನ್ನರ್ಪಿಸಿದರು.

ಸಿಂಡಿಕೇಟ್‌ನ ಹೊಸ ಶಾಖೆಗಳು

ಸಿಂಡಿಕೇಟ್ ಬ್ಯಾಂಕಿನ ಏಳು ಹೊಸ ಶಾಖೆಗಳು 1968ನೇ ಜುಲೈ ತಿಂಗಳಲ್ಲಿ ಈ ಕೆಳಗಿನ ಸ್ಥಳ ಮತ್ತು ದಿನಗಳಲ್ಲಿ ತೆರೆಯಲ್ಪಡುವುವು.

ದ.ಕ. ಜಿಲ್ಲೆಯ ಗಂಜಿಮಠ–12.7.68, ಕೊಕ್ಕಡೆ–16.7.68, ಪಂಜೆ–19.7.68, ಯೇಣಗುಡ್ಡೆ–27.7.68; ಬಿಜಾಪುರ ಜಿಲ್ಲೆಯ ಸುಳೆಭಾವಿ–18.7.68; ಬೆಳಗಾಂ ಜಿಲ್ಲೆಯ ರೈಬಾಗ್–20.7.68; ಬೆಂಗಳೂರಿನ ಜೆ.ಸಿ. ರೋಡು–29.7.68

ಮೇಲಿನ ಶಾಖೆಗಳನ್ನು ತೆರೆಯಲುಬ್ರಾಮುಖ್ಯ ಮೈಲುಗಲ್ಲುಗಳಿವು—

ಭಾರತೀಯ ಬ್ಯಾಂಕುಗಳಲ್ಲಿ ಸಿಂಡಿಕೇಟ್ ಬ್ಯಾಂಕು, ಒಂದೇ ಜಿಲ್ಲೆಯಲ್ಲಿ 50ಕ್ಕೂ ಮಿಕ್ಕಿದ ಶಾಖೆಗಳಿರುವ ಪ್ರಥಮ ಬ್ಯಾಂಕ್ ಆಗಿದೆ ಬಿಜಾಪುರ ಜಿಲ್ಲೆಯಲ್ಲಿ ಸುಳೆಭಾವಿ ಶಾಖೆಯೊಂದಿಗೆ ಬ್ಯಾಂಕಿಗೆ 9, ಬೆಳಗಾಂ ಜಿಲ್ಲೆಯಲ್ಲಿ ರೈಬಾಗ್ ಶಾಖೆಯ ತೆರೆಯುವಿಕೆಯಿಂದ 8, ಬೆಂಗಳೂರು-ನಗರದಲ್ಲಿ ಜೆ.ಸಿ. ರೋಡ್ ಶಾಖೆಯ ಪ್ರಾರಂಭದಿಂದಾಗಿ 10 ಶಾಖೆಗಳಾದಂತಾಯ್ತು. ಸಿಂಡಿಕೇಟ್ ಬ್ಯಾಂಕಿಗೆ ಮೈಸೂರು ರಾಜ್ಯದಲ್ಲಿ ಒಟ್ಟು 182 ಶಾಖೆಗಳಾಗಿ ರಾಜ್ಯದ ಯಾವುದೇ ಬ್ಯಾಂಕಿಗೆ ಇಷ್ಟೊಂದು ವಿಶಾಲ ಶಾಖಾ ಸಮುದಾಯವಿರುವುದಿಲ್ಲ.

ಮಧ್ವರಾಜ ದಂಪತಿಗಳ ವಿದೇಶ ಪ್ರಯಾಣ

ಉಡುಪಿ—ಮಧ್ವೆಯ ಕೊರೊನೆಟ್ ಕ್ಯಾನಾಗ್ ಕಂಪೆನಿಯ ಮೂಲಕರೂ ಉಡುಪಿ ತಾಲೂಕು ಬೋರ್ಡ್ ಅಧ್ಯಕ್ಷರೂ, ಮೂಜಿ ಎಂ. ಎಲ್.ಎ.ಗಳೂ ಆಗಿರುವ ಶ್ರೀ ಎಂ. ಮಧ್ವರಾಜರು ತನ್ನ ಧರ್ಮಪತ್ನಿ ಶ್ರೀಮತಿ ಮನೋರಮಾರೊಂದಿಗೆ ಇದೇ ಜುಲೈ ತಾ. 26ರಂದು ಸುಮಾರು ಎರಡು ತಿಂಗಳ ವಿದೇಶ ಪ್ರಯಾಣ ಕೈಕೊಂಡಿರುವರು. ಇವರು ಬೆಂಗಳೂರಿಗಾಗಿ ನ್ಯೂಯಾರ್ಕಿಗೆ ಹೊರಟಿದ್ದು ಜುಲೈ 8 ರಂದು ಮುಂಬೈಯಿಂದ ರೋಮಿಗೆ ತೆರಳಲಿರುವರೆಂದು ನಂತರ ರೋಮ್, ಜೂರಿಚ್, ಫ್ರಾಂಕ್‌ಫರ್ಟ್, ಪ್ಯಾರಿಸ್, ಲಂಡನ್, ಟೋಕಿಯೋ, ಮನಿಲಾ, ಸಿಂಗಾಪುರ ಮೊದಲಾದ ನಗರಗಳನ್ನು ಸಂದರ್ಶಿಸಿಅಗಸ್ಟ್ 22ರಂದು ಕೊಲಂಬೋ ಮೂಲಕ ಮುಂಬಯಿಗೆ ಹಿಂದಿರುಗುವರೆಂದು ತಿಳಿದುಬಂದಿದೆ

ಕರ್ನಾಟಕ ರಾಜ್ಯ ಪೋಲೀಸ ಪಾಟೀಲರ ಸಂಘದ ಸಮ್ಮೇಳನ

ಹುಬ್ಬಳ್ಳಿ—ಕರ್ನಾಟಕ ರಾಜ್ಯದಲ್ಲಿಯ ಪೋಲೀಸರ ಮತ್ತು ಮುಖ್ಯಪಾಟೀಲ ಹುದ್ದೆಗಳ ರಕ್ಷಣೆಮಾಡುವುದಕ್ಕಾಗಿ ಮತ್ತು ಹೋರಾಟದ ಮೂಲಕ ನ್ಯಾಯವಾದ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯಪೊಲೀಸಪಾಟೀಲರ ಸಂಘಸ್ಥಾಪನೆಮಾಡಲಾಗಿದ್ದು ಸಂಘದಪ್ರಚಾರಕ್ಕಾಗಿಹುಬ್ಬಳ್ಳಿಯಿಂದತೀರ್ಥಹಳ್ಳಿಯೇಂದು ಪತ್ರಿಕಾಪ್ರಚಾರಮಾಡಲಾಗಿದ್ದ ಬರಲಿರುವ ಆಗಸ್ಟ್ ತಿಂಗಳತಲ್ಲಿಹುಬ್ಬಳ್ಳಿಯಲ್ಲಿ ಪೋಲೀಸ ಪಾಟೀಲರ ಸಮ್ಮೇಲನವನ್ನು ಜರಗಿಸುವ ಕುರಿತು ಸಂಘದ ಚಟುವಟಿಕೆಗಳು ನಡೆದಿದ್ದು ರಾಜ್ಯದಲ್ಲಿಯ ಎಲ್ಲ ಪೋಲೀಸ ಪಾಟೀಲರು ಸಂಘದ ಸದಸ್ಯರಾಗಿ ಪ್ರಥಮರು ಸಮ್ಮೇಲನಕ್ಕೆ ತನು,ಮನ, ಧನಗಳ ಮೂಲಕ ಸಹಕಾರಗಳನ್ನಿತ್ತು ಯಶಸ್ವಿಯನ್ನಾಗಿ ಮಾಡಬೇಕೆಂದು ರಾಜ್ಯಸಂಘಾಧ್ಯಕ್ಷರಾದ ಶ್ರೀ ಅಪ್ಪಾಸಾಹೇಬ ವಿ. ಪಾಟೀಲರು ಒಂದು ಪ್ರಕಟನೆಯ ಮೂಲಕ ಅರಿಕೆಮಾಡಿಕೊಂಡಿದ್ದಾರೆ. ಸಂಘದ ಪ್ರಧಾನ ಕಾರ್ಯಾಲಯ ಹುಬ್ಬಳ್ಳಿ ನಿವಾಸಕ್ಕೆ ಹೆಚ್ಚಿನ ಮಾಹಿತಿಗಾಗಿ ವಿಚಾರಿಸಬೇಕೆಂದು ಕೇಳಿದ್ದಾರೆ.

ಕಾಫೆರಗೊಡಸಲ್ಲಿ ಅಕ್ಕಿ ಬೆಲೆ ಇಳಿಮುಖ

ಕಳೆದ ವರ್ಷ ಈ ಸಮಯದಲ್ಲಿ ತಿರೋಗ್ರಾಮಿಗೆ ರೂ. 300ರಿಂದ 40 ವರೆಗೂ ಇದ್ದ ಅಕ್ಕಿ ಬೆಲೆ ಇಳಿಮುಖವಾಗಿದೆ. ಈಗ ರೂ. 220ರಂತೆ ಅಕ್ಕಿ ಸಿಗುತ್ತಿದೆ. ರೇಶನ್ ಪ್ರಮಾಣವೂ ಹೆಚ್ಚಿದೆ. ಆದರೆ ರೇಶನ್ ಅಕ್ಕಿ ಮತ್ತು ಗೋಧಿಯ ಬೆಲೆ ಹೆಚ್ಚಿದೆ.

ಅಗಸ್ಟ್ 15

ನವಯುಗ

ಸ್ವಾತಂತ್ರ್ಯ ವಿಶೇಷ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ವಿಚಾರಪರ ಲೇಖನ, ಕವನ, ವಿಡಂಬನೆ ಮೊದಲಾದುವುಗಳಿಂದ ಕೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲೂ ಬೊಂಬಾಯಿ, ಮದರಾಸು ಮೊದಲಾದ ಹೊರರಾಜ್ಯ ಹಾಗೂ ವಿದೇಶದಲ್ಲಿರುವ 'ನವಯುಗ'ವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ.

ಬಾಯೊರಿಕೆಯಿಲ್ಲ

(ಎರಡನೇ ಪುಟದಿಂದ)

ರುವ ಅವಸ್ಥೆಯಲ್ಲಿದ್ದ. ಅವನ ಬಲ-ಎಡ ಪಾರ್ಶ್ವಗಳಲ್ಲೆಲ್ಲಾ ರಾಶಿಪುಟ್ಟಿಗಳು ತಿರುಗುತ್ತಿದ್ದವು.

ಅಂತೂ ಪುಸ್ತಕದ ಪುಟಗಳು ಮುಗಿದೊಡನೆ ಕೆಳಗಿಟ್ಟೆ. ಮನೆಗೆ ಹೊರಡಲನುವಾದೆ. ಆಗ ಅವಳು "ದಯವಿಟ್ಟು ನಮ್ಮ-ಫಿಮ್ಮ ಈ ವಿಷಯವನ್ನು ಯಾರಲ್ಲೂ ತಿಳಿಸಬೇಡಿ" ಅಂದಳು.

ಮರುದಿನ ಆಫೀಸಿಗೆ ಹೋದೆ. ಫನಗೆ ಅವಳ ವಿಚಾರದ ಮೇಲೆ ಬಲು ಸಂತಸವಾಯಿತು. ಅವಳನ್ನು ಮೆಚ್ಚಿದೆ. ರಾತ್ರಿಯಿಡೀ ನಿದ್ದೆಯೇ ಬರಲಿಲ್ಲ. ಅವಳೂ ಆಫೀಸಿಗೆ ಬಂದಳು. ಕಳಿತಳು. ತುಸು ಸಮಯದ ನಂತರ "ಫನಗೆ ರಾತ್ರಿಯಿಡೀ ನಿದ್ರೆ ಹತ್ತಲಿಲ್ಲ."

"ಏಕೆ?" ಅವಳು ಕುತೂಹಲದಿಂದ ಕೇಳಿದಳು.

"ನಿಮ್ಮ ವಿಚಾರವಾಗಿ ಯೋಚಿಸುತ್ತಾ ಇದ್ದೆ."

"ಕಷ್ಟಿಂದ ನಿಮಗೇನು ತೊಂದರೆಯಾಯ್ತು?"

"ಇಲ್ಲಪ್ಪಾ, ಇಲ್ಲ."

"ಹಾಗಾದರೆ ನನ್ನ ವಿಚಾರದಲ್ಲಿ ನಿಮಗೇನು ಅಷ್ಟು ಯೋಚನೆ?'

"ನಿಮ್ಮಲ್ಲಿ ತುಸು ವಿಚಾರಿಸಬೇಕಾಗಿದೆ ನನಗೆ'.

"ಏನೂಂತ?"

ತುಸು ಬಳಿಕ ಒಂದು ಪತ್ರವನ್ನು ಬರೆದು ಅವಳ ಕೈಗಿತ್ತೆ. ಅವಳು ಓದಿದಳು. ಕೆಂಡದಂತೆ ಬಿಸಿಯೇರಿ ಕುಪಿತಳಾದಳು. ಪತ್ರವನ್ನು ಚೂರು ಚೂರು ಗೈದು ಬಿಸಾಡಿದಳು. ಅವಳ ಮನಸ್ಸು ಕೊಂದಂತೆ ನನಗನ್ನಿಸಿತು.

'ನಿಮಗೆ ನನ್ನ ಮಾತು ಅರ್ಥವಾಗಿಲ್ಲ ತಾನೇ?' ಸಮಾಧಾನದಿಂದ ಕೇಳಿದೆ.

'ನಿಮ್ಮ ಕಾರ್ಯ ಬಲು ಪಾಪ'

ನಾನು ಬೆಚ್ಚಿಬಿದ್ದೆ! 'ಪ್ರೀತಿಯಲ್ಲೇನು ಪಾಪ?"

'ನಾನು ವಿಧವೆ'

ಕನ್ನ ಮೇಲೆ ವಿದ್ಯುತ್ ಹರಿದಂತಾಯ್ತು. ಮತ್ತೂ ಹಿಡಿದ ಶಕ್ತಿಯಿಂದ 'ತಾನೇನು ಬಾಲ ವಿಧವೆಯೇ?' ಎಂದೆ.

ಅವಳ ಬಾಯಿಯಿಂದ ಮಾತು ಹೊರಡಲಿಲ್ಲ. ಮುಖದಲ್ಲಿ "ಹೌಂ' ಎನ್ನುವ ಭಾವ ಭಾಸಿಸಿದಂತಿತ್ತು.

"ಬಾಲ ವಿಧವೆಗೆ ಗೃಹಸ್ಥಿಕೆಯ ಬಾಯೊರಿಕೆಯಾಗುವುದಿಲ್ಲವೇ?"--ನಾನೆಂದೆ.

'ಬಾಯೊರಿಕೆಗಾಗಿ ಪಾಪ ಮಾಡಲೊಲ್ಲೆ.".

"ಅದರಲ್ಲೇನು ಪಾಪ?'

"ನಾನು ಪತಿಯಲ್ಲಿ 'ನೀವು ತೀರಿಹೋದ್ದಮೇಲೆ ನಾನು ಯಾರನ್ನೂ ಮದುವೆಯಾಗುವುದಿಲ್ಲ'ವೆಂದು ಮಾತು ಕೊಟ್ಟಿದ್ದೆ."

"ಎಷ್ಟು ವರ್ಷದ ವರೆಗೆ ಈ ಪಾಪದಿಂದ ದೂರ ಇದ್ದು ಬಾಯೊರಿಕೆಯನ್ನು ತಡೆಯುವಿರಿ?"

"ನಾನು ಬೂದಿಯಾಗಿ ಭೂಮಿ ಸೇರುವ ವರೆಗೆ."

"ಬೂದಿಯಾಗುವ ಮೊದಲೇನು ನೀವು ಯಾವ ಕೆಲಸ ಕೈಕೊಳ್ಳುವುದಿಲ್ಲವೇ?"

"ಮೂರು ಪಾಲಷ್ಟು ಫಿಮ್ಮನ್ನು ಮದುವೆಯಾಗಲಾರೆ ಖಂಡಿತ".

"ನಾನಷ್ಟು ಕೆಳದರ್ಜೆಯವನೇ?"

"ನಾನ್ಯಾವಾಗ ಅಂದೆ?"

"ನೀವು ಪಾಪದಿಂದ ಹೆದರುವಿರೇ"

"ಇಲ್ಲ. ನನ್ನಲ್ಲಿ ಪ್ರೀತಿ ಬಗ್ಗೆ ಬಾಯೊರಿಕೆಯಿಲ್ಲ."

ಅವಳ ಮುಖದಲ್ಲಿ ಅಲಂಕೃತವಾದ ಕಣ್ಣುಗಳ ನೀರು ಹರಿಯುತ್ತಿತ್ತು. ಇದು ಸ್ತ್ರೀಯ ಮನಸ್ಸಿನ ಕಣ್ಣೀರು. ಆಗಲೇ ಅವಳ ಚಿತ್ರಪಟ ನೆನಪು ನನ್ನ ಚಿತ್ರಪಟಲದ ಮೇಲೆ ಹಾದುಹೋಯಿತು.

ಅಗಸೆ ಬೀಜದ ಎಣ್ಣೆಯಿಂದ ತಳತಳಿಸುವ ಪೈಂಟ್

ಅಮೆರಿಕದ ಕೃಷಿ ಸಂಶೋಧನ ಇಲಾಖೆಯ ಮೂವರು ರಸಾಯನ ವಿಜ್ಞಾನಿಗಳು ಒಂದು ಪ್ರಾಯೋಗಿಕ ಬಾಹ್ಯ ಪೈಂಟನ್ನು ಸಿದ್ಧಗೊಳಿಸಿದ್ದಾರೆ. ಎಮಲ್ಷನ್ ಪೈಂಟಿನಂತೆ ಇದನ್ನು ಸುಲಭವಾಗಿ ಸ್ವಚ್ಛಗೊಳಿಸಬಹುದು. ಲೀನಕಾರಿ ದ್ರಾವಕದ ಪೈಂಟಿಗಿರುವಂತೆ ಇದಕ್ಕೂ ತಳತಳಿಸುವ ಮೆರುಗಿದೆ.

ಅಗಸೆ ಬೀಜದ ಎಣ್ಣೆ ಮತ್ತು ನೀರಿನ ಮಿಶ್ರದ್ರವದಿಂದ ತಯಾರಿಸಿರುವ ಈ ಪೈಂಟನ್ನು ಬ್ರಷ್ ಹಾಗೂ ರೋಲರ್‌ಗಳಿಂದ ತೊಳೆಸಬಹುದು.

ಪೈಂಟ್ ಪಿಗ್ಮೆಂಟಿನ ಪ್ರತಿಕಣದ ಸುತ್ತಲೂ ಅಗಸೆ ಬೀಜದ ಎಣ್ಣೆಯ ಸೂಕ್ಷ್ಮ ಪದರವಿರುವುದೇ ಪೈಂಟಿನ ಮೆರುಗಿಗೆ ಕಾರಣ ಎಂದು ರಸಾಯನ ವಿಜ್ಞಾನಿಗಳಲ್ಲೊಬ್ಬರಾದ ಡಾ| ಲ್ಯಾಂಬರ್ಟ್‌ನ್ ಎಚ್. ಪ್ರಿಸ್ಟಾ ವಿವರಿಸಿದ್ದಾರೆ.

'ಪೈಂಟನ್ನು ತೆಳು ಪದರವಾಗಿ ಹೆರಡಿದಾಗ, ನೀರು ಆವಿಯಾಯಿತ್ತದೆ. ಪಿಗ್ಮೆಂಟ್ ಕಣಗಳು ಮತ್ತು ಎಣ್ಣೆ ಜತೆಯಾಗಿ ಪ್ರವಹಿಸುವುದರಿಂದ, ಘಟ್ಟಿಪಾಪ, ತಳತಳಿಸುವ ಮೆರುಗು ಉಂಟಾಗುತ್ತದೆ. ಸಾಂಪ್ರದಾಯಿಕ ಎಮಲ್ಷನ್ ಪೈಂಟನ್ನು ತೆಳು ಪದರವಾಗಿ ಹರಡಿದಾಗ ನೀರು ಆವಿಯಾಗುತ್ತದೆ, ಪಿಗ್ಮೆಂಟ್ ಕಣಗಳು ಮತ್ತು ಎಣ್ಣೆ ಪ್ರತ್ಯೇಕವಾಗಿ ಹರಿಯುವುದಿಲ್ಲ. ಸೂಕ್ಷ್ಮವಾದ ದಿಬ್ಬಗಳು ಹಾಗೂ ಕಣಿವೆಗಳು ಉಂಟಾಗುತ್ತವೆ, ಒಪ್ಪುವ ಬೆಳಕನ್ನು ಪ್ರತಿಫಲಿಸಬ ಚದುರಿಸುತ್ತದೆ. ತತ್ಪರಿಣಾಮವಾಗಿ ಹೊಳಪಿರುವುದಿಲ್ಲ' ಎಂದರವರು.

ಪ್ರಾಯೋಗಿಕ ಪೈಂಟಿನ ಪಿಗ್ಮೆಂಟ್‌ಗಳು ನೇರವಾಗಿ ನೀರನ್ನು ಸ್ಪರ್ಶಿಸದಿರುವುದರಿಂದ, ಅವು ಹಬ್ಬಿಯಲ್ಲಿ ಪೈಂಟನ್ನು ದಪ್ಪಗೊಳಿಸುವಂಥ ಪ್ರತಿಕ್ರಿಯೆಯನ್ನು ಸಡೆಸುವುದಿಲ್ಲ ಎಂದರವರು.

ಪ್ರಾರ್ಥನೆ

ಎಲ್ಲಿ ಮನವಳುಕಿರದೊ, ಎಲ್ಲಿ
ತಲೆಬಾಗಿರದೊ,
ಎಲ್ಲಿ ತಿಳಿವಿಗೆ ತೊಡಕು ತೋರದಿಹುದಲ್ಲಿ
ಎಲ್ಲಿ ಮನೆಯೊಳ್ಳಟ್ಟು ಸಂಸಾರ
ನೆಲೆಗಟ್ಟು
ಧೂಳೊಡೆಯದಿಹುದೊ ತಾನಾನಾಡಿನಲ್ಲಿ
ಎಲ್ಲಿ ಸತ್ಯದಗಾಢ ನೆಲೆಯಿಂದ ಸವಿವಾತು
ಸಲ್ಲಿತ ಕಡೆಯಿಂದ ಮುಂಬರಿವುದಲ್ಲಿ
ಎಲ್ಲಿ ಸುವಿಚಾರ ಜಲದೊಸರು ಫರ್ವಲಿ
ಹಂದು
ಕಾಳ ರೂಢಿಯ ಮರಳೊಳಂಗಿ ಕೆಡೆದಲ್ಲಿ
ಎಲ್ಲಿ ನೀನೆಮ್ಮ ಚಿಂತನವನುದ್ಧಮಸುವಿ-
ಶಾಲತೆಯ ಪೂರ್ಣತೆಗೆ ಮುನ್ನಡೆಸುವಲ್ಲಿ
ಅಲ್ಲಿಯೂ ಬಂಧನ ರಹಿತ ಸುಖದ
ಸ್ವರ್ಗದಲಿ
ಬಾಲ್ಯೆ ಪಿತ ನಮ್ಮ ನಾಡನೆಚ್ಚರಲಿ.

—ರವೀಂದ್ರನಾಥ ಠಾಗೂರ್.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ.

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಬೆಲೆ: ರೂ. 2—00.

ಪುಸ್ತಕದ ಬೆಲೆಯೊಂದಿಗೆ 50 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಎಜುಕೇಶನ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA 11—7—1968
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಭಾರತವಿಲ್ಲದೆ; ಭಾರತೀಯರೆಲ್ಲಿ?

ರಾಷ್ಟ್ರೀಯ ಏಕಮತ್ತದ ಸಮಸ್ಯೆಗಳು

ಬರೆದವರು: ಡಾ। ಸಿ. ಬಿ. ಗಜೇಂದ್ರಗಡಕರ್

ಆದು ವರುಷಗಳ ಹಿಂದೆ ಜರುಗಿದ ರಾಷ್ಟ್ರೀಯ ಏಕತಾ ಮಂಡಳಿಯನ್ನು ಪ್ರಧಾನ ಮಂತ್ರಿಗಳು ಈಗ ಮತ್ತೊಮ್ಮೆ ಪುನರ್ ಘಟಿಸ ಬೇಕಾಗಿ ಬಂದ ವಿಷಯ ದುರದೃಷ್ಟಕರ. ರಾಷ್ಟ್ರೀಯ ಭಾವೈಕ್ಯವನ್ನು ಪುರಕ್ಷಿಸಬಗೆಗೆಳಿಸಿ, ದೇಶದಲ್ಲಿ ಇತ್ತೀಚಿನ ಕೆಲ ತಿಂಗಳಲ್ಲಿ ತಲೆ ಎತ್ತಿದ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಲು ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಏಕತಾ ಮಂಡಳಿಯ ಪುನಾರಚನೆಯ ಕೆಲಸ ಕೈಕೊಂಡಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಆಗಲೇ ಇಪ್ಪತ್ತು ವರ್ಷಗಳು ಸಂದಿವೆ. ಭಾರತದ ಸಂವಿಧಾನ ನಿರ್ದೇಶಿಸಿದ ಪ್ರಜಾಪ್ರಭುತ್ವ ಅಡಳಿತದ ಹದಿನೆಂಟು ವರುಷಗಳು ಉರುಳಿ ಹೋಗಿವೆ. ನಾಲ್ಕು ಸಾರ್ವತ್ರಿಕ ಚುನಾವಣೆಗಳು ಜರುಗಿವೆ. ನಮ್ಮ ದೇಶ ಪ್ರಜಾಸತ್ತಾತ್ಮಕ ಜೀವನ ರೀತಿಯ ರೀತಿಯನ್ನು ಆರಿಸಿಕೊಂಡಿರುವುದರಿಂದ ಯಾವ ಅಡೆತಡೆಯಿಲ್ಲದೆ, ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಬಹುದು ಎಂದು ನಾವು ಭಾವಿಸಿದ್ದೆವು. ಆದರೆ ದುರ್ದೈವದಿಂದ ನಮ್ಮ ಭಾವನೆ ಸುಳ್ಳಾಯಿತು. ಸಂಕುಚಿತತೆ, ಪ್ರಾಂತೀಯ ಪ್ರವೃತ್ತಿಗಳು, ಬೆಳೆಯಲು ಮಾಡುವ ಕೃತ್ಯಗಳು ರಾಷ್ಟ್ರೀಯ ಸಮಗ್ರತೆಯ ಕಲ್ಪನೆಗೇ ಸವಾಲನ್ನೆಸಗಿವೆ.

ಭಾರತೀಯರೆಲ್ಲಿದ್ದಾರೆ?

ಭಾರತ ಇಲ್ಲದೆ, ಆದರೆ ಭಾರತೀಯರೆಲ್ಲಿದ್ದಾರೆ ಎಂದು ಒಮ್ಮೆ ಪಂಡಿತ ನೆಹರೂ ಕೇಳಿದ್ದರು. ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಪ್ರಾದೇಶಿಕ ಭಾವನೆಯ ಉಬ್ಬರವನ್ನು ಕಂಡು ನೆಹರೂರವರು ಆ ರೀತಿ ಪ್ರಶ್ನೆ ಮಾಡಿದರು. ಭಾರತದಲ್ಲಿ ಪ್ರಾಂತೀಯ ಪ್ರಜ್ಞೆಯು ತಾನು ಮುಖ್ಯವಾಗಿ ಭಾರತೀಯ ಎಂಬ ಭಾವನೆಯನ್ನು ಅಲಕ್ಷಿಸಿಕೊಳ್ಳಲಾರದೆ ಹೋದರೆ, ತನ್ನ ಪ್ರಾಂತೀಯ ನಿಷ್ಠೆಯನ್ನು ಬಿಟ್ಟು ಕೊಡಬಿಡ್ದರೆ, ಭಾರತವು ಕೇವಲ ಭೌಗೋಳಿಕ ರೂಪದಲ್ಲಿ ಉಳಿಯುವುದೇ ಹೊರತು ರಾಜಕೀಯ ಸತ್ಯ ಸಂಗತಿಯಾಗಿ ಉಳಿಯದು ಎಂದು ನೆಹರೂರವರು ದೇಶಬಾಂಧವರಿಗೆಲ್ಲ ಎಚ್ಚರಿಕೆ ನೀಡಿದರು. ನೆಹರೂರವರು ಕೇಳಿದ ಪ್ರಶ್ನೆಯ ನೈಜ ಇನ್ನೂ ಕಟುವಾಗಿ ನಾವಿಂದು ಕೇಳಬಹುದು.

ಪ್ರಾದೇಶಿಕ ನಿಷ್ಠೆ

ಪ್ರಾದೇಶಿಕ ನಿಷ್ಠೆಯ ಬಗ್ಗೆ ಮಾತನಾಡುವಾಗ, ಅನೇಕ ಪ್ರದೇಶಗಳಿಂದ, ಧರ್ಮಗಳಿಂದ, ಭಾಷೆಗಳಿಂದ ಒಡಗೂಡಿದ ಭಾರತದಲ್ಲಿ ಪ್ರಾದೇಶಿಕ ನಿಷ್ಠೆ ಕಂಡು ಬರುವದು ಸ್ವಾಭಾವಿಕ ಎಂಬ ಮಾತನ್ನು ನಾವು ಒಪ್ಪಲೇ ಬೇಕು. ಧರ್ಮ ಮತ್ತು ಭಾಷೆಯ ನಿಷ್ಠೆಯಂತೆಯೇ ಪ್ರಾದೇಶಿಕ ನಿಷ್ಠೆಯೂ ಅಪರಿಹಾರ್ಯ ವಿಷಯವೇ. ಒಂದು ಕ್ರಮಬದ್ಧ ಮಿತಿಯಲ್ಲಿ, ಪ್ರಾದೇಶಿಕ ನಿಷ್ಠೆಯು ಆ ಪ್ರದೇಶಗಳ ಅಭಿವೃದ್ಧಿಗೆ ಸಹಾಯ ಮಾಡಬಲ್ಲುದು.

ಆದರೆ ಪ್ರಾದೇಶಿಕ ನಿಷ್ಠೆಗೆ ಅತಿ ಪ್ರಾಮುಖ್ಯ ದೊರೆತಾಗ ಅದು ದೇಶ ನಿಷ್ಠೆಯನ್ನೇ ಕಡೆಗಾಣಿಸುತ್ತದೆ. ಅದು ರಾಷ್ಟ್ರೀಯ ಸಮಗ್ರತೆಯನು ಗಂಡಾಂತರದಲ್ಲಿ ಸಿಲುಕುತ್ತದೆ. ವೈವಿಧ್ಯತೆಯಲ್ಲಿಯೇ ನಾವು ಏಕತೆಯನ್ನು ಆರಿಸಬೇಕು, ನಿಜ. ವಿವಿಧ ತತ್ವಗಳ ಮತ್ತು ವಿಚಾರಗಳ ನಡುವೆ ಅನಾದಿ ಕಾಲದಿಂದಲೂ ಭಾರತೀಯರು ಯೋಗ್ಯ ಸಮನ್ವಯವನ್ನು ಬೆಳಸಿಕೊಂಡು ಬಂದಿದ್ದಾರೆ. ಅದೇ ಬಗೆಯ ಸಾಮರಸ್ಯ ಜೀವನವನ್ನೂ ಸಮನ್ವಯವನ್ನೂ ಪ್ರಾದೇಶಿಕ ನಿಷ್ಠೆ ಮತ್ತು ರಾಷ್ಟ್ರೀಯ ನಿಷ್ಠೆಗಳೊಳಗೆ ಸಾಧಿಸಲು ಈಗ ಪ್ರಯತ್ನಿಸಬೇಕು. ಆದರೆ ಈ ಎರಡು ನಿಷ್ಠೆಗಳೊಳಗೆ ಸೆಣಸಾಟ ಬಂದಾಗ ದೇಶನಿಷ್ಠೆಯೇ ಗೆಲ್ಲಬೇಕು, ಎಂಬ ಮಾತನ್ನು ನಾವು ಸ್ಪಷ್ಟವಾಗಿ ಅರಿತಿರಬೇಕು.

ಈ ಬಗೆಯ ನಿಷ್ಠೆಗಳ ಸಮನ್ವಯವನ್ನು ಸಾಧಿಸುವ ಕಾರ್ಯ ಸುಗಮವಲ್ಲ. ರಾಜಕಾರಣಿಗಳು, ಶಿಕ್ಷಣವೇತ್ತರು, ಬುದ್ಧಿಜೀವಿಗಳು ಅದೇಕೆ ಭಾರತದ ಸಮಸ್ತ ನಾಗರಿಕರು ಇಂತಹ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಬೇಕು. ಭಾರತದ ಸಂವಿಧಾನದ ನಿರ್ದೇಶನಗಳು ಫೆಡರಲ್ ಮಾದರಿಯ ರಾಜ್ಯ ಘಟನೆಯನ್ನು ರೂಪಿಸಿದ್ದಾರೆ. ಆದರೆ ಗಂಡಾಂತರ ಪರಿಸ್ಥಿತಿಯಲ್ಲಿ ಬಹಳಷ್ಟು ಅಧಿಕಾರ ಕೇಂದ್ರ ಸರಕಾರದ ವಶಕ್ಕೆ ಬರುತ್ತದೆ. ಅರ್ಥಾತ್ ತುರ್ತುಪರಿಸ್ಥಿತಿಯಲ್ಲಿ ಭಾರತವು ಏಕ ಘಟಕ ರಾಜ್ಯ ಸ್ವರೂಪವನ್ನು ಹೊಂದುವದು. ನಾವು ಸಂವಿಧಾನವನ್ನು ಸ್ವೀಕರಿಸಿದವೇಳೆ ಹದಿನೇಳು ವರ್ಷಗಳ ವರೆಗೆ ಕಾಂಗ್ರೆಸ್ ಪಕ್ಷವು ದೇಶವನ್ನೆಲ್ಲ ಆಳಿತು. ದಿವಂಗತ ನೆಹರೂರವರ ವ್ಯಕ್ತಿತ್ವ ಪ್ರಭಾವದಿಂದ ಭಾರತಕ್ಕೆ ಏಕ ಘಟಕ ರಾಜ್ಯದ ಆಡಳಿತವೇ ಲಭ್ಯವಾಗಿತ್ತೆಂದು ಹೇಳಬಹುದು. ನೆಹರೂ ಯುಗದಲ್ಲಿ ಪ್ರಜಾಸತ್ತೆಯು ದೃಢವಾಗಿ ಬೇರು ಬಿಟ್ಟಿತು ಮತ್ತು ಕಾಫೂನು ಪ್ರಭುತ್ವದ ಆಡಳಿತದ ಅಸ್ತಿವಾರವನ್ನು ಹಾಕಲಾಯಿತು. ಜಾತ್ಯಾತೀತ ರಾಷ್ಟ್ರ ನಿರ್ಮಾಣವಾಯಿತು. ಸಾಮಾಜಿಕ ಸಮಾನತೆಗೆ ಬುನಾದಿಯನ್ನು ಹಾಕಲಾಯಿತು. ಆದರೆ ಆ ಕಾಲದಲ್ಲಿ ಫೆಡರಲ್ ರಾಜ್ಯ ಪದ್ಧತಿಯ ಸಂಪ್ರದಾಯಗಳು ಬೆಳೆಯಲಿಲ್ಲ. ನಾಲ್ಕನೇ ಸಾರ್ವತ್ರಿಕ ಚುನಾವಣೆಯ ನಂತರ ಬೇರೆ ಬೇರೆ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದುವು. ಆದುದರಿಂದ ಯೋಗ್ಯ ಫೆಡರಲ್ ಪದ್ಧತಿಯ ಸಂಪ್ರದಾಯಗಳನ್ನು ಅಭಿವೃದ್ಧಿಪಡಿಸುವ ಪ್ರಶ್ನೆ ಮಹತ್ವದ್ದೆನಿಸಿದೆ.

ಫೆಡರಲ್ ಸಂಪ್ರದಾಯಗಳು:

ರಾಷ್ಟ್ರ ಏಕತಾ ಸಮಸ್ಯೆ ಉತ್ಪನ್ನ ಫೆಡರಲ್ ಸಂಪ್ರದಾಯಗಳನ್ನು ಸೃಜಿಸು ಸಮಸ್ಯೆಯೇ ಆಗಿದೆ. ರಾಜ್ಯ ಸರಕಾರಗಳೊಡನೆ ವ್ಯವಹರಿಸುವಾಗ ಮತ್ತು ತನ್ನ ಸಾಮಾನ್ಯ ಧೋರಣೆಯನ್ನು ಅನುಷ್ಠಾನಕ್ಕೆ ತರುವಾಗ ಕೇಂದ್ರ ಸರಕಾರವು ನ್ಯಾಯ, ನಿಷ್ಪಕ್ಷಪಾತ, ಸಹಿಷ್ಣುತೆ ಮತ್ತು ತಾಳ್ಮೆಯಿಂದ ವರ್ತಿಸಬೇಕು ಮತ್ತು ತನ್ನ ಸಂವಿಧಾನಾತ್ಮಕ ಅಧಿಕಾರವನ್ನು ಚಲಾಯಿಸುವಾಗ ಬಿಗುವಿನಿಂದ ಇರಬೇಕು. ರಾಜ್ಯಸರಕಾರಗಳೂ ತಾವು ಭಾರತ ಗಣರಾಜ್ಯದ ಘಟಕಗಳೆಂಬುದನ್ನು ಮರೆಯಬಾರದು ಮತ್ತು ಇಡೀ ದೇಶದ ಪ್ರಗತಿಗೆ ಅನುಗುಣವಾಗುವಂತೆ ಪ್ರತಿಯೊಂದು ರಾಜ್ಯದ ಪ್ರಗತಿ ಇರಬೇಕು ಎಂಬುದನ್ನು ಧ್ಯಾನದಲ್ಲಿ ಇಟ್ಟುಕೊಳ್ಳಬೇಕು. ರಾಜ್ಯ ಸರಕಾರಗಳು ಮತ್ತು ಕೇಂದ್ರಸರಕಾರಗಳಲ್ಲಿ ಅನೈಕ್ಯ ತಿಳಿವಳಿಕೆ ಉಂಟಾದಾಗ ಅಗಾಗ ಕೆಲರಾಜ್ಯಗಳಲ್ಲಿ ಕಂಡುಬರುವ ನಿರಾಶಾಭಾವವಾಗಲೀ ಕೋಪದ ಪ್ರಸಂಗಗಳಾಗಲೀ ಬರುವದಿಲ್ಲ.

ರಾಷ್ಟ್ರ ನಿರ್ಮಾಣದ ಕಾಲದಲ್ಲಿ ಕಂಡುಬಂದ ಭಾರತೀಯತ್ವದ ಕಲ್ಪನೆ ಪೂರ್ಣ ರಾಷ್ಟ್ರೀಯತ್ವದ ಪ್ರಜ್ಞೆಯಿಂದ ರೂಪುಗೊಂಡಿರದೆ, ಹೆಚ್ಚಾಗಿ ಬ್ರಿಟಿಷರ ಮೇಲಿನ ಹಗೆತನದಿಂದ ಸ್ಫೂರ್ತಿಗೊಂಡಿತು. ಬ್ರಿಟಿಷರ ಆಳಿಕೆ ಕೊನೆಗೊಂಡನೇಲೆ, ಪ್ರಾಂತೀಯ ನಿಷ್ಠೆಗಳು ತಲೆಎತ್ತಿದವು. ಅದಕ್ಕೆಂದೇ ದಿವಂಗತ ನೆಹರೂರವರು ಸಂಕುಚಿತ, ಪ್ರಾಂತೀಯ, ಪ್ರಾದೇಶಿಕ ಭಾವನೆಗಳ ವಿರುದ್ಧ ಎಚ್ಚರಿಕೆ ನೀಡಿದರು.

ಅನೇಕ ರಾಜ್ಯ ಸರಕಾರಗಳು ಕೇಂದ್ರ ಸರಕಾರದೊಂದಿಗೆ ಮನಸ್ತಾಪ ಮಾಡಿಕೊಂಡಿವೆ. ಇದಕ್ಕೆ ಒಂದು ಕಾರಣವೇನೆಂದರೆ ಕೇಂದ್ರ ಸರಕಾರವು ರಾಜ್ಯ-ರಾಜ್ಯಗಳ, ಅಂತರ್‌ರಾಜ್ಯಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಳಂಬಸಹ ಅಥವಾ ಅಸಾಮರ್ಥ್ಯ ತೋರಿಸಿದೆ. ಅಂತರ್‌ರಾಜ್ಯ ಸಮಸ್ಯೆಗಳು ಕ್ಲಿಷ್ಟವಾಗಿವೆ ಎಂಬುದು ನಿಜ. ಅವುಗಳ ಪರಿಹಾರಕ್ಕೆ ಕಾಲ ಬೇಕು. ಆದರೆ ಕೇಂದ್ರ ಸರಕಾರ ಪರಿಹಾರ ಹುಡುಕಲು ಸುದೀರ್ಘ ಕಾಲ ತೆಗೆದುಕೊಂಡರೆ ಸಂಬಂಧಿಸಿದ ರಾಜ್ಯಗಳಲ್ಲಿನ ಜನರ ಮನದಲ್ಲಿ ತೀವ್ರ ಅಸಮಾಧಾನ ತಲೆದೋರುವದು. ಈ ಸಮಸ್ಯೆಗಳನ್ನು ರಾಜಕೀಯ ಮಟ್ಟದಲ್ಲಿ ಬಿಡಿಸಬೇಕು, ಅಥವಾ ಅಲ್ಲಿ ಸಾಧ್ಯವಾಗದೆ ಹೋದರೆ ನ್ಯಾಯ ಮಂಡಲಿಗಾದರೂ ಒಪ್ಪಿಸಬೇಕು. ಕಾಂಗ್ರೆಸ್ಸೇತರ ರಾಜ್ಯಗಳಲ್ಲಿ ಕೇಂದ್ರ ಸರಕಾರದ ಬಗ್ಗೆ ವಿರೋಧ ಭಾವನೆ ಕಂಡುಬರುತ್ತಿದೆ. ಆದರೆ ಅಂತಹ ಭಾವನೆ ನ್ಯಾಯ ಸಮ್ಮತವಾಗುವಂತಹ ಅವಕಾಶವನ್ನು ಕೇಂದ್ರಸರಕಾರ ಕೊಡಬಾರದು.

ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸುವ ಪ್ರಯತ್ನದಲ್ಲಿ ಪ್ರತಿಯೊಬ್ಬರೂ ತಮ್ಮ ಪಾಲಿನ ಪಾತ್ರವನ್ನು ಆಡಲೇ ಬೇಕು. ಯಾರು ಯಾವದೇ ಸ್ಥಾನದಲ್ಲಿ ಇರಲಿ, 'ನಾವು ಪ್ರಥಮತಃ ಭಾರತೀಯರು' ಎಂಬ ಭಾವನೆಯನ್ನು ಎಲ್ಲರೂ ತಳೆಯಬೇಕು. ಹಾಗೆ ಮಾಡುವದಿಂದ ಮಾತ್ರ ದೇಶದ ಐಕ್ಯವನ್ನು ಕಾಪಾಡಿಕೊಳ್ಳುವದು ಶಕ್ಯ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.ಎಸ್.

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಮ್. ಇವರು ಮುನ್ನುಡಿಯನ್ನು ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಚ್ಚಿನ ವಿಧಾನ ಸರಿಸ್ಕಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೋಸ್ಟೆಜ್ ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udupi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

-7-1968

೨೦
ಪೈಸೆ

ಪುಣ್ಯ ಜೀವಿ

ಬರೆದವರು:
ಶ್ರೀ ಎನ್. ಪದ್ಮನಾಭ ನಾಯಕ್, ಉಡುಪಿ

"ಅಯ್ಯೋ! ಎಂತಹ ಪರಿಸ್ಥಿತಿಗೆ ಸಿಲುಕಿದೆ!" ರೈಲ್ವೆ ಇಂಜಿನ್ ಡ್ರೈವರನ ಮನಸ್ಸು ಯಾವುದೋ ಒಂದು ವಿಚಾರಕ್ಕೆ ಬರಲು ಪ್ರಯತ್ನಿಸುತಿತ್ತು. ರೈಲು ಮಾತ್ರ ಯಾವ ಪರಿವೆಯೂ ಇಲ್ಲದೆ ಮೈದಾನವನ್ನು ಭೇದಿಸಿ ವೇಗವಾಗಿ ಚಲಿಸುತಿತ್ತು. ಆ ರೈಲು ಮರುದಿನ ಮುಂಜಾನೆ ಲಂಡನ್ ನಗರ ತಲುಪಬೇಕು.

ರೈಲಿನಲ್ಲಿ ಪ್ರಯಾಣಿಕರು ಎಂದಿಗಿಂತಲೂ ಜಾಸ್ತಿಯಾಗಿದ್ದರು. ತೋಕವಂಡ್ಯೆ ಮಹಾಸಾಮ್ರಾಜ್ಞಿ ವಿಕ್ಟೋರಿಯಾ ರಾಣಿಯವರೂ ಅವರ ಪರಿವಾರದವರೂ ಈ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.

ಮದ್ಯರಾತ್ರಿಯ ಕಾರಿರುಳು. ರೈಲು ಮುಂದಿನ ಸ್ಟೇಶನ್ ಲಂಡನ್ ನಗರದತ್ತ ಏಕಚಿತ್ತವಾಗಿ ಓಡುತ್ತಿತ್ತು. ಓಡಾಟಕ್ಕೆ ತೆರವಾಗಿದ್ದ ಹಸಿರು ದೀಪಗಳು ಎಲ್ಲೆಲ್ಲೂ ಸ್ವಾಗತಿಸುತ್ತಿದ್ದುವು. ರೈಲಿನಲ್ಲಿದ್ದವರೆಲ್ಲರೂ ನಿದ್ರಾಪರವಶರಾಗಿದ್ದರು. ಇಂಜಿನ್ ಡ್ರೈವರನಿಗೂ ನಿದ್ರೆಯ ಜೊಂಪು ಹಿಡಿಸುತ್ತಿತ್ತಾದರೂ ಅವನ ಕೈ, ಕಣ್ಣು, ಕಾಲು ತಮ್ಮ ಕಾರ್ಯದಲ್ಲಿ ಕರ್ತವ್ಯಭ್ರಷ್ಟವಾಗುತ್ತಿರಲಿಲ್ಲ.

ರೈಲು ಮುಂದೆ ಮುಂದೆ ಸಾಗುತ್ತಾ ದಟ್ಟವಾದ ಕಾಡನ್ನು ಹೊಕ್ಕಿತು. ಇಂಜಿನ್ ಡ್ರೈವರ್ ಒಮ್ಮೆಲೆ ಬೆಚ್ಚಿಬಿದ್ದ. ಅತನ ಕಣ್ಣುಗಳಿಗೆ ದೂರದಲ್ಲಿ ಯಾರೋ ನಿಂತು ಕೈ ಅಡ್ಡ ಮಾಡಿ ರೈಲು ನಿಲ್ಲಿಸುವಂತೆ ಸಂಜ್ಞೆ ಮಾಡುವುದು ತೋರಿತು. ವ್ಯಕ್ತಿ ಸ್ಪಷ್ಟವಾಗಿ ತೋರದಿದ್ದರೂ ಕರ್ತುಗಿತ್ತು. ರೈಲು ಓಡುತ್ತಿದ್ದಂತೆ ಆ ವ್ಯಕ್ತಿಯೂ ಓಡುತ್ತಿತ್ತು!

"ನಿಲ್ಲು! ನಿಲ್ಲು!!" ಎಂದು ಹೇಳಿದಂತೆ ಭಾಸವಾಯಿತು ಡ್ರೈವರನಿಗೆ.

"ನಿಲ್ಲಿಸಬೇಡ" ರೈಲಿನಲ್ಲಿ ಸಹಸ್ರಾರು ಪ್ರಯಾಣಿಕರು ನಿದ್ರಿಸುತ್ತಿದ್ದಾರೆ. ಮೇಲಾಗಿ ಲೋಕದೊಡತಿ ಮಹಾಸಾಮ್ರಾಜ್ಞಿ ವಿಕ್ಟೋರಿಯಾ ಮಹಾರಾಣಿಯವರೂ ಪ್ರಯಾಣಿಸುತ್ತಿದ್ದಾರೆ. ದುಷ್ಟರ ಕೈವಾಡ ಯಾವ ರೀತಿಯಲ್ಲಿ ಸಂಭವಿಸುತ್ತದೆ ಎಂದು ಹೇಳಬರುವುದಿಲ್ಲ. ಈ ದಟ್ಟಡವಿಯಲ್ಲಿ, ಕಾರಿರುಳಲ್ಲಿ ಕಳ್ಳಕಾಕರು, ಬೈರಿಗಳು, ರಾಣಿಯ ವೇಲಣ ದ್ವೇಷದಿಂದ ರೈಲು ನಿಲ್ಲಿಸಿ ದರೋಡೆ ಮಾಡಿ ರಾಣಿಯ ಹತ್ಯೆಗೈದಾರು! ಜಾಗ್ರತೆ! ನಿಲ್ಲಿಸಬೇಡ!!" ಎಂದಿತು ಆ ಡ್ರೈವರನ ಎಚ್ಚೆತ್ತ ಮನಸ್ಸು!

ಆದರೆ! ರೈಲಿನ ಆ ಹೆಡ್‌ಲ್ಯಾಟಿನ ಬೆಳಕಿನಲ್ಲಿ ಆ ವ್ಯಕ್ತಿ ಇನ್ನೂ "ನಿಲ್ಲು! ನಿಲ್ಲು!" ಎನ್ನುವಂತೆ ಭಾಸವಾಗುತ್ತಿದೆ ಮತ್ತು! ಏನು ಮಾಡಲಿ! ನಿಲ್ಲಿಸದೇ ಇದ್ದರೆ ಆ ವ್ಯಕ್ತಿ ಮುಂಜಾಗ್ರತೆ ಹೇಳಿದರೂ ನಿಲ್ಲಿಸದೆ ಮುಂದೊಡಗಬಹುದಾದ ಯಾವುದಾದರೂ ದುರ್ಘಟನೆಗೆ ನಾನು ಜೊತೆಗಾರನಾಗಬಹುದು. ತಪ್ಪರಿಣಾಮವಾಗಿ ರೈಲಿನಲ್ಲಿರುವ ಅಪಾರ ಜನ ಸ್ತೋಮ ಸಾವುನೋವಿಗೀಡಾಗಬಹುದು! ಹಾರ್ರ! ನನ್ನ ಮೆಚ್ಚಿನ ರಾಣಿಯೂ ಆಕೆಯ ಪರಿವಾರವೂ ಈ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ! ನಾನು ಖಂಡಿತವಾಗಿಯೂ ಮುಂದೊಡಗಬಹುದಾದ ದುರ್ಘಟನೆಗೆ ಎಡೆಕೊಡಲಾರೆನು. ಆದರೆ...! ಈ ಕಳ್ಳಕಾಕರು ನನಗೆ ಮೋಸ ಮಾಡಲು ಈ ಸಂಚು ಹೂಡಿರಬಹುದೆ? ರೈಲು ನಿಲ್ಲಿಸಿ, ನಮ್ಮ ರಾಣಿ, ನಮ್ಮ ಜನರನ್ನು ಒರೋಡೆ ಮಾಡಲು ಪ್ರೋತ್ಸಾಹಿಸುವುದೆ? ಎಂದೂ ಸಾಧ್ಯವಿಲ್ಲ!

"ಅಯ್ಯೋ! ಎಂತಹ ಪರಿಸ್ಥಿತಿಗೆ ಸಿಲುಕಿದೆ!" ರೈಲ್ವೆ ಇಂಜಿನ್ ಡ್ರೈವರ್ ಮನಸ್ಸಿನಲ್ಲಿ ಅಂದು ಕೊಂಡನು.

"ನಿಲ್ಲು! ನಿಲ್ಲು! ಎನ್ನುವ ವ್ಯಕ್ತಿ ಮಾತ್ರ ಒಂದೇ ಸವನೆ ಓಡುತಿತ್ತು! ರೈಲೂ ಓಡುತಿತ್ತು! ಆದರೆ ..! ಒಮ್ಮೆಲೆ ಓಡುತ್ತಿದ್ದ ವ್ಯಕ್ತಿ ಅದೃಶ್ಯವಾದುದು! ವಿಶಾಲವಾದ ಬಯಲು ಪ್ರದೇಶಕ್ಕೆ ರೈಲು ಬರುತಿತ್ತು! ಮೈಲುದ್ದಕ್ಕು ರೈಲಿನ ಹೆಡ್‌ಲ್ಯಾಟು ದಾರಿ ತೋರಿಸುತಿತ್ತು. ನೇರವಾದ ದಾರಿಯೊದುದರಿಂದ ಬಹು ದೂರದ ವರೆಗಿನ ಹಸಿರು ದೀಪಗಳು ಮಣಿಗಳಂತೆ ಹೊಳೆಯುತ್ತಿದ್ದುದು ಕಂಡು ಬರುತಿತ್ತು. ಓಡುತ್ತಿದ್ದ ವ್ಯಕ್ತಿ ಕಣ್ಮರೆಯಾಗಿತ್ತು!

ಡ್ರೈವರ್ ಹೆದರಿದ! 'ಭೂತ ಚೇಷ್ಟೆ ಅಲ್ಲ ತಾನೆ! ಅಥವಾ ಆ ವ್ಯಕ್ತಿ ರೈಲಿನಡಿಗೆ ಬಿದ್ದು ಸತ್ತಿರಬಹುದೆ? ಏನೇ ಆಗಲಿ, ಬಯಲು ಪ್ರದೇಶ. ದೂರದಲ್ಲಿ ಒಂದೆರಡು ಮನೆಗಳು ತಮ್ಮ ಮಿಣುಕು ದೀಪಗಳಿಂದ ಅಸ್ತಿತ್ವವನ್ನು ಸಾರುತ್ತಿವೆ. ಆ ವ್ಯಕ್ತಿ ಆ ಮನೆಗೆ ಸೇರಿರಲೂ ಬಹುದು. ಆದರೆ ಆತ ಹಿಲ್ಲಲು ಹೇಳಿದ್ದನಲ್ಲ! ನಿಲ್ಲಿಸಿಯೇ ಬಿಡುತ್ತೇನೆ" ಎನ್ನುತ್ತ ರೈಲ್ವೆ ಇಂಜಿನ್ ಡ್ರೈವರ್ ರೈಲನ್ನು ಒಮ್ಮೆಲೆ ನಿಲ್ಲಿಸಿದನು.

ರೈಲ್ವೆಗಾರ್ಡನಿಗೆ ಆಶ್ಚರ್ಯವಾಯಿತು. ಯಾವ ಪರಿಸ್ಥಿತಿಯಲ್ಲೂ ರೈಲು ನಿಲ್ಲಬಾರದ ಸ್ಥಳದಲ್ಲಿ ನಿಂತಿತೆ! ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೂ ಒಮ್ಮೆಲೆ ಎಚ್ಚರವಾಯಿತು. ಓಡುತ್ತಿದ್ದ ರೈಲು ನಿಂತಿತ್ತು! ಹೊರಗೆ ಇಣಿಕಿದರೆ ಕತ್ತಲು! ಯಾವ ಸ್ಟೇಶನ್ನೂ ಇಲ್ಲ!

ಏತಕ್ಕೆಂದು ರೈಲನ್ನು ನಿಲ್ಲಿಸಿದೆ? ರಾಣಿಯ ಪರಿವಾರದವರಿಗೂ ಅಶ್ಚರಿಯಾಗಿತ್ತು.

ಡ್ರೈವರ್ ಮಾತ್ರ ರೈಲನ್ನು ನಿಲ್ಲಿಸಿ ಕೆಳಗಿಳಿದ. ಹಿಂದೆಯೇ ಗಾರ್ಡನೂ ಇಳಿದು ಬಂದ. ಡ್ರೈವರ್ ಮುಂದೆ ಮುಂದೆ ಸಾಗುತ್ತಿದ್ದಂತೆ ಗಾರ್ಡನೂ ಹಿಂದೆ ಹಿಂದೆ ಹಿಂಬಾಲಿಸುತ್ತಿದ್ದನು!

ಇಬ್ಬರೂ ಅಲ್ಪತಿ ದೂರದಲ್ಲಿರುವ ರಾಜರಸ್ತೆಗೆ ಪಕ್ಕದಲ್ಲಿಯೇ ಹಾದುಹೋಗುವ ಲೆವೆಲ್ ಕ್ರಾಸಿಂಗ್ ಬಳಿ ಬಂದರು.

ಡ್ರೈವರ್ ತನ್ನ ಟಾರ್ಚನ್ನು ಹಾಕಿ ನೋಡಿದ! ನೋಡುವುದೇನು! ಯಾರೋ? ದುಷ್ಟರು ರೈಲ್ವೆ ಕಂಬಿಗಳನ್ನು ಕಿತ್ತು ಎಸೆದಿದ್ದರು! ಕಲವೇ ನಿಮಿಷಗಳು ರೈಲು ಮುಂದೆ ಹೋಗುತ್ತಿದ್ದರೆ ಭೀಕರ ಅಪಾಹುತವಾಗುತ್ತಿತ್ತು!

ಪರಮಾತ್ಮನೇ ಬಂದು "ರೈಲು ನಿಲ್ಲಿಸ" ಎಂದು ಹೇಳಿ ಅದೃಶ್ಯವಾದನು! ಎಂದುಕೊಂಡನು ಡ್ರೈವರ್! ಗಾರ್ಡನಿಗೆ ಇದಾವುದೂ ಅರ್ಥವಾಗಲಿಲ್ಲ.

ಇಷ್ಟರಲ್ಲಿ ಹಲವಾರು ಪ್ರಯಾಣಿಕರ ಡ್ರೈವರ್—ಗಾರ್ಡನನ್ನು ಹಿಂಬಾಲಿಸಿ ಬಂದಿದ್ದರು. ಅವರಿಗೂ ಸೋಜಿಗವೆನಿಸಿತು. "ದೇವರೇ ಕಾಪಾಡಿದ ದೇವತಾ ಮನುಷ್ಯಾತ!" ಎಂದು ಎಲ್ಲರೂ ಕೊಂಡಾಡಿದರು. ರಾಣಿಗೂ ಈ ವಿಚಾರ ಮುಟ್ಟಿತು. ರೈಲು ಮುಂದೆ ಹೋಗದಾಯಿತು. ಎಲ್ಲರೂ ಎಚ್ಚರವಾಗಿದ್ದು ರಾತ್ರಿಯನ್ನು ಬೆಳಗಿಸಿದರು.

o o o

ಲಂಡನ್ ನಗರದಲ್ಲಿ ಕಾಯುವಾಕ್ಕಾಗಿ ಸಮಯಕ್ಕೆ ಬರುವ ರೈಲು ಬಂದಿರಲಿಲ್ಲ. ಅದರಲ್ಲೂ ವಿಕ್ಟೋರಿಯಾ ಮಹಾರಾಣಿಯವರು ಪ್ರಯಾಣಿಸುತ್ತಿದ್ದ ರೈಲು ಬಂದಿಲ್ಲವೆಂದರೆ ಆಶ್ಚರ್ಯವೇ ಸರಿ!

ರೈಲ್ವೆ ಅಧಿಕಾರಿಗಳಿಗೆ ಭೀತಿಗೆ ಪ್ರಾರಂಭವಾಯಿತು. ಲಂಡನ್‌ನಿಂದ ವಿಶೇಷವಾದ ರೈಲೊಂದನ್ನು ಕಳುಹಿಸಲಾಯಿತು. ಮೈಲು ಅಂತರದಲ್ಲಿ ನಿಂತಿರುವ ರೈಲು ವಿಶೇಷ ರೈಲಿನಲ್ಲಿ ಆಗಮಿಸಿದ ಅಧಿಕಾರಿಗಳಿಗೆ ಗೋಚರಿಸಿತ! ಹೌದ! ಅದೇ ರೈಲು ಮಹಾ ರಾಣಿಯವರು ಪ್ರವಾಸ ಮಾಡುತ್ತಿದ್ದ ರೈಲು! ಏನಾಗಿದೆ? ಎಂಜಿನ್ ಕೆಟ್ಟು ಹೋಗಿರಬಹುದೆ? ಉತ್ಸುಕತೆಯಿಂದ ದೂರದರ್ಶಿಯೇ ರೈಲು ನಿಲ್ಲಿಸಿ ಅಧಿಕಾರಿಗಳು ಮಹಾರಾಣಿಯವರು--ಪ್ರಯಾಣ ಮಾಡುತ್ತಿದ್ದ ರೈಲಿನ ಒಳ ಬಂದರು. ಹತ್ತಿರ ಬರುತ್ತಲೇ ರೈಲ್ವೆ ಕಂಬಿಗಳನ್ನು ಕಿತ್ತೆಸೆದುದು ಗೋಚರಿಸಿತು. ಅಧಿಕಾರಿಗಳಿಗೆ ರೈಲು ಬಾರದಿರಲು ಕಾರಣ ತಿಳಿಯಿತು. ಆದರೆ...? ಕಂಬಿ ಕಿತ್ತ ವಿಚಾರ ಡ್ರೈವರನಿಗೆ ಯಾರು ಹೇಳಿದುದು? ಎಂಬಿದೇ ವಿಚಾರಗಳು ಅಧಿಕಾರಿಗಳ ಮನಸ್ಸಿನಲ್ಲಿ ಮೂಡಿದರೂ ಮಹಾರಾಣಿಯವರು ಸುರಕ್ಷಿತವಾಗಿದ್ದುದರಿಂದ ಅವರಿಗೆ ಸಮಾಧಾನವಾಗಿತ್ತು.

ಇಂಜಿನ್ ಡ್ರೈವರ್, ಗಾರ್ಡ್, ಪ್ರಯಾಣಿಕರು ಎಲ್ಲರೂ ತಮ್ಮ ತಮ್ಮ ಅನುಭವಗಳನ್ನು ಹೇಳಿದರು. ಎಲ್ಲರಿಗೂ ಅಶ್ಚರ್ಯ! ಕಂಬಿ ಕಿತ್ತವರಾರು? ರೈಲು ನಿಲ್ಲಿಸಲು ಹೇಳಿದ ವ್ಯಕ್ತಿ ಯಾರು? ಎಂಬ ಪ್ರಶ್ನೆಯೇ ಉತ್ತರ ದೊರಕದ ಪ್ರಶ್ನೆಯಾಗಿತ್ತು!

ಮಹಾ ರಾಣಿಯವರು ಮತ್ತು ಪರಿವಾರದವರನ್ನು ಸುರಕ್ಷಿತವಾಗಿ ಲಂಡನ್ ನಗರಕ್ಕೆ ಕಳುಹಿಸಲಾಯಿತು. ಉಳಿದ ಪ್ರಯಾಣಿಕರನ್ನು ಹಂತ ಹಂತವಾಗಿ ಸಾಗಿಸಲಾಯಿತು.

o o o

"ನಿನ್ನೆ ಅಪರ ರಾತ್ರಿಯಲ್ಲಿ ತನ್ನ ಪ್ರಾಣವನ್ನು ಲೆಕ್ಕಿಸದೆ ಓಡಿ ಓಡಿ ರೈಲನ್ನು ನಿಲ್ಲಿಸುವಂತೆ ಹೇಳಿದ ವ್ಯಕ್ತಿಯೊಂದಿಗೆ ವಿಕ್ಟೋರಿಯಾ ಮಹಾ ರಾಣಿಯವರು ಭೇಟಿಯಾಗಲು ಇಚ್ಛಿಸುತ್ತಿದ್ದಾರೆ. ಹಾಗೂ ಆ ವ್ಯಕ್ತಿಯನ್ನು ರಾಜ ಸನ್ಮಾನದಿಂದ ಬರಮಾಡಿಕೊಂಡು ಸತ್ಕರಿಸಲಾಗುವುದು."

ನಗರವಿಡೀ ಈ ವಿಚಾರ ಸಾರಲಾಯಿತು. ಒಂದೆರಡು ದಿನವೇಕೆ, ಹತ್ತು ದಿನಗಳುರುಳಿದರೂ ಬೇಕಾದ ವ್ಯಕ್ತಿ ಬರಲೇ ಇಲ್ಲ! ರಾಣಿಗೆ ಖೇದವಾಯಿತು! ನನ್ನೆಲ್ಲರ ಪ್ರಾಣ ರಕ್ಷಿಸಿದ ಆ ವ್ಯಕ್ತಿ ಜೀವಂತ

(ಸನ್ನಿಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವ ಪ್ರಸಾದ
ಕುಂದಾಪುರ, ದ. ಕ.
ಫೋನ್: 77
ತಿಳಿಳಿ ಚ್ಯಾಹ್ಣದ ರುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಸಾರ್ವಜನಿಕ ಉಪಾಹಾರಕ್ಕೆ ಆಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೬
No. 46

ನವಯುಗ

ಉಡುಪಿ ೧೮—೭—೧೯೭೮

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ರಸ್ತೆಗಳ ದುರವಸ್ಥೆ

ನಮ್ಮ ರಾಜ್ಯಸರಕಾರವು ಈಗ ತನ್ನ ವಶವಿರುವ ಅರೇಳು ಮುಖ್ಯ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡುವಂತೆ ಕೇಂದ್ರ ಸರಕಾರವನ್ನು ವಿನಂತಿಸಿಕೊಂಡಿದೆ. ಈ ವಿನಂತಿಯನ್ನು ಕೇಂದ್ರವು ಮನ್ನಣೆ ಮಾಡಿದರೆ, ಮುಂದಿನ ೧೦-೧೫ ವರ್ಷಗಳೊಳಗೆ ಈ ಹೆದ್ದಾರಿಗಳ ಪುನಾರಚನೆಗಾಗಿ ಸುಮಾರು ೩೦ ಕೋಟಿ ರೂಪಾಯಿಗಳ ವೆಚ್ಚವಾಗುವುದು. ಈಗ ರಚನೆಗೊಳ್ಳುತ್ತಿರುವ ಪಶ್ಚಿಮ ಕರಾವಳಿ ರಸ್ತೆಯ ಆರಂಭವಾಗಿ ದಶಕ ವಿರುತ್ತ ಬಂದರೂ ಅದರ ಕೆಲಸವಿನ್ನೂ ಅರ್ಧಂಬರ್ಧವಾಗಿಯೇ ಇದೆ. ಇದು "ಹೊಸ ದಾರಿ"ಯಾದುದರಿಂದ ಸ್ಥಳ ವಶೀಕರಣದಲ್ಲೂ ಪರಿಹಾರ ನೀಡುವಲ್ಲೂ ವಿಳಂಬ ಅಪಿವಾರ್ಯವೆನಿಸಿದೆಯೆನ್ನಬಹುದು. ಹೊಸತಾಗಿ ಸೂಚಿಸಲಾದ ಹೆದ್ದಾರಿಗಳಲ್ಲಿ ಸಮಸ್ಯೆ ಇಷ್ಟೊಂದು ಕ್ಲಿಷ್ಟವಾಗಿರುವುದಿಲ್ಲ. ಆದರೆ ಹಣದುಬ್ಬಗ-ಬೆಲೆಯೇರಿಕೆಯ ಅವಧಿಯಲ್ಲಿ ನಮ್ಮ ಯೋಜಿತ ವೆಚ್ಚವು ದುಪ್ಪಟ್ಟು - ನಪ್ಪಟ್ಟಾಗಿಯೇ ಯೋಜನೆ ಪೂರ್ಣಗೊಳ್ಳುವುದು ಮಾತ್ರ ಅನುಭವವೇದ್ಯ.

ರಾಜ್ಯ ಸರಕಾರದ ಸಾರ್ವಜನಿಕ ಕಾನುಗಾರಿ ಇಲಾಖೆಯು ತನ್ನ ವಶವಿರುವ ರಸ್ತೆಗಳನ್ನು ಹೇಗೆ ಇಟ್ಟುಕೊಂಡಿದೆ? ಇದಕ್ಕೆ ಮಳೆಗಾಲದ ಈ ದಿನಗಳಲ್ಲಿ ಒಮ್ಮೆ ಕರಾವಳಿ ಜಿಲ್ಲೆಗಳಲ್ಲಿ-ಮಲೆನಾಡು ಜಿಲ್ಲೆಗಳಲ್ಲಿ ಸಂಚಾರ ಮಾಡಿದರೆ ಸಾಕು; ತಿಳಿಯುತ್ತದೆ. ರಸ್ತೆಯ ಇಕ್ಕೆಲಗಳಲ್ಲೂ ಒಂದಲ್ಲ ಒಂದು ಉದ್ದೇಶಕ್ಕಾಗಿ 'ತೋಡು' ಆಗೆದಿದ್ದು ಅದನ್ನು ತಂಬುವಲ್ಲಿ 'ರಸ್ತೆ'ಯೆಂಬಂಶವನ್ನೇ ಸಂಬಂಧಿಸಿದವರು ಮರೆತಂತಿದೆ. ಘಡುರಸ್ತೆಯಲ್ಲೇ ಮೊಣಕಾಲು ಪ್ರಮಾಣದ ಹೊಂಡಗಳು ತುಂಬಿ ತುಳುಕಾಡುತ್ತಿವೆ. ವಾಹನಗಳು ಸಂಚರಿಸುವುದೇ ದುಸ್ತರ; ವಾಹನ ಸಂಚಾರದ ಬೇಳೆ ಪಾದಯಾತ್ರಿಗಳಿಗಂತೂ ತ್ರಿಶಂಕು. ಮಂಗಳೂರು—ಉಡುಪಿ ಮೊದಲಾದ ಮುಖ್ಯ ನಗರಗಳ ರಸ್ತೆಗೇ ಈ ದುರ್ಗತಿ ಬಂದಿರುವಾಗ, ಒಳನಾಡಿನ ರಸ್ತೆಗಳ ಪಾಡೇನು? ಒಳನಾಡಿನಲ್ಲಿ ಕೆಲವು 'ಹೈವೇ'ಗಳಿವೆ. ಕೆಲವು ತಾಲೂಕು ಬೋರ್ಡು ರಸ್ತೆಗಳಿವೆ. ಬೇಸಿಗೆಯಲ್ಲಿ ವಾಹನಗಳು ಚಾಲಕರ ಧೈರ್ಯೂವಲಂಬಿಯೊಗಿ ಸಂಚರಿಸಿ ಬಂದು ಮಳೆ ಬಿದ್ದೊಡನೆ ತಮ್ಮ ಸಂಚಾರ ಸ್ಥಗಿಸಿ ಬಿಡುವ ರಸ್ತೆಗಳೂ ಹಲವಿವೆ. ಪಾದಚಾರಿಗಳ ಪಾದ ಕೊರೆಯುವ ಮುರಕಲ್ಲಿನ ರಸ್ತೆಗಳೂ ಇವೆ. ಬೇಸಿಗೆಯಲ್ಲಿ ಒಳನಾಡಿನ ಸಾರ್ವಜನಿಕರಿಗೆ ಉಪಯೋಗದೊರಕಿದರೂ ಮಳೆಗಾಲದಲ್ಲಿ ಉಪ್ಪಯೋಜಕವಾಗುವ ಈ ರಸ್ತೆಗಳಲ್ಲಿ ಹೆಚ್ಚಿನವು ಇಂದಿಗೆ ಒಮ್ಮೆಯೂ ಜಲ್ಲಿ ಕಂಡಿರುವುದಿಲ್ಲ. ಕೆಲವೊಂದು ಒಂದೆರಡು ಜಾರಿಜಲ್ಲಿ ಕಂಡಿದ್ದರೂ ಹಾಗೆ ಕಾಣಿಸುವುದಿಲ್ಲ; ಇನ್ನು ಪಂಚಾಯತ್ ಬೋರ್ಡು ರಸ್ತೆಗಳ ಹಣೆಬರಹವನ್ನು ಮಳೆರಾಯುವೇ ಬರೆದಿದ್ದಾನೆ, ಬರೆಯುತ್ತಿದ್ದಾನೆ. ಬೇಸಗೆಯಲ್ಲಿ ಮಾರ್ಗವಾಗಿ ಮಳೆಗಾಲದಲ್ಲಿ ನದಿ ಹರಿಯುವ ಕೆಲವು ಮಾರ್ಗರಸ್ತೆಗಳು ಪಗರ ಸಭೆಯ ಆಡಳಿತದಲ್ಲೂ ಇವೆ. ಇಂತಹ ದ ಸ್ಥಿತಿಗೆ ಕಾರಣವೇನು ?

ಪ್ರತಿಯೊಂದು ಹಳ್ಳಿಗೂ ರಸ್ತೆಯ ಸೌಕರ್ಯವನ್ನು ಒದಗಿಸುವ ಸದುದ್ದೇಶದಿಂದ ನಮ್ಮ ಪಂಚವಾರ್ಷಿಕ ಯೋಜನಾವಳಿಯಲ್ಲಿ ಹೊಸ ರಸ್ತೆಗಳ ನಿರ್ಮಾಣವನ್ನು ಮಾಡಲಾಯಿತು. ಆದರೆ, ಅವನ್ನು ನೋಡಿಕೊಳ್ಳುವ ತಾಕತ್ತು ನಮಗೆ ಇಲ್ಲ. ಅಮೆರಿಕದ 'ಕೇರ್' ಸಂಸ್ಥೆ ರಾಜ್ಯದ ಶಾಲಾ ಮಕ್ಕಳಿಗೆ ಪುಷ್ಟಿಯಾಹ್ವದಉಪಾಹಾರಕ್ಕೆಂದು ಉಚಿತವಾಗಿ 'ವಸ್ತು"ಗಳನ್ನು ಪೂರೈಸಿದರೂ ನನಗೆ ಅದನ್ನು ಅಟ್ಟು ಉಣಬಡಿಸುವಷ್ಟು 'ಆರ್ಥಿಕ ಸ್ಥಿತಿ'ಯಿಲ್ಲ! ಹಲವಾರು ಯೋಜನೆಗಳ ಆರಂಭ ವೆಚ್ಚವನ್ನು ಕೇಂದ್ರ ಸರಕಾರವೇ ವಹಿಸಿದರೂ ಮುಂದಿನದನ್ನು ನಿಭಾಯಿಸಲು ರಾಜ್ಯ ಸರಕಾರ ಮೀನಮೇಷವೆಣಿಸುತ್ತದೆ. ಶಿಕ್ಷಣ ಪ್ರಸಾರಕ್ಕೆಂದು ಬಿರುಗಾಳಿಯ ವೇಗದಲ್ಲಿ ಶಾಲೆ-ಕಾಲೇಜುಗಳ ಆರಂಭವಾಯಿತು.- ಈಗ ಅವುಗಳ ಗುಣ ಮಟ್ಟವನ್ನು ಏರಿಸುವುದು ಅಗತ್ಯವೆಂಬ ಬುದ್ಧಿ ಸರಕಾರಕ್ಕೆ ಬಂದಿದೆ. ಗುಣಮಟ್ಟವನ್ನು ಏರಿಸುವುದು ಹೇಗೆ?—ಇದು ಯಕ್ಷ ಪ್ರಶ್ನೆ. ನಮ್ಮ ರಾಜ್ಯಸರಕಾರವು ಹೊಳ ರಸ್ತೆಗಳ ನಿರ್ಮಾಣ ಮಾಡಿ ವಿಶ್ರಮವನ್ನೇನೋ ಸಾಧಿಸಿದೆ. ಇದರ ಸಂಪೂರ್ಣಪ್ರಯೋಜನ ಹೊಂದಿದವರು ಸರಕಾರಿ ಕಾಡುಗಳಿಂದ ಮರಗಳ ಕಳ್ಳಸಾಗಾಣಿಕೆ ಮಾಡುವವರು. ಈಗ ಈ ಮಾರ್ಗಗಳಲ್ಲಿ ಜನತೆಗೆ ಉಪಯೋಗಿಯಾಗುವಂತೆ ರೂಪಿಸುವ ಅಗತ್ಯವಿದೆ. ಜಲ್ಲಿ ಕಾಣಸವುಗಳಿಗೆ ಜಲ್ಲಿ ಹಾಕಬೇಕು; ತಾರು ಕಾಣದವಕ್ಕೆ ತಾರು ಬಳಿಯಬೇಕು. ಮಾರ್ಗದ ಹೊಂಡಗಳನ್ನು ಮಣ್ಣಿನ್ನೇ ತುಳಲೋ ತಂಬಿ ಮುಚ್ಚಿದರೆ ಯಾವ ಪ್ರಯೋಜನವೂ ಇಲ್ಲ. ಚರಂಡಿಯ ಮಣ್ಣನ್ನೆತ್ತಿ ರಸ್ತೆಗೆ ಸುರುವಿದರೆ, ಒಂದು ಮಳೆ ಬಂದೊಡನೆಯೇ ಮತ್ತೆ ಚರಂಡಿ ತುಂಬುತ್ತದೆ. ಮಾರ್ಗದ ಕೆಲಸವನ್ನು ಹೆಚ್ಚಾಗಿ ಹೊಂದಿಕೊಂಡು ಮಾಡಬೇಕಲ್ಲದೆ, ತಲೆಗೆ ಬಿಡುವಾದಾಗ ಅಲ್ಲ. ಪಂಚಾಯತು-ತಾಲೂಕು ಬೋರ್ಡು, ನಗರ ಸಭೆಗಳು ಅಧಿಕ ಅಧಿಕಾರವನ್ನು ಬೇಡುವುದರಲ್ಲೇ ಮಗ್ನವಾದರೆ, ರಾಜ್ಯ ಸರಕಾರ ಕೇಂದ್ರವನ್ನು ಒತ್ತಾಯಿಸುವುದರಲ್ಲೇ ಮೈಮರೆತಂತಿದೆ. ಹೀಗಾಗದೆ ಅವು ತಂತಮ್ಮ ಕರ್ತವ್ಯಗಳೇನೆಂಬುದನ್ನರಿತು ಅವನ್ನು ಶಕ್ತಿಯುತವಾಗಿ ನಿರ್ವಹಿಸಲು ಪ್ರಯತ್ನ ಪಡೆದರೆ ದೊತ್ತ ಜನತೆಯ ಸಹಾನುಭೂತಿ ದೊರಕೀತು. ಇದರಲ್ಲೂ ರಾಜಕಾರಣದ ಹಗರಣ ಮಾಡಿದರೆ, ರಾಜ್ಯಕೇಂದ್ರಕ್ಕೆ ಸೋಂಕು ಬಡಿಯುವುದು ಕಂಡಿತ.

ಏನನ್ನೋಣವಿದಕ್ಕೆ?

ಈ ವಾರಿಯ ಗ್ರಾಮ ಪಂಚಾಯತಿಯ ಚುನಾವಣೆಗಳ ನಂತರ, ಅವುಗಳ ಅಧ್ಯಕ್ಷರ ಆಯ್ಕೆ ನಡೆಯುವಲ್ಲಿ ಕೆಲವೆಡೆ ಸ್ವಾರಸ್ಯವಿದೆ. ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತಿರುವ ಸಮಾಚಾರಗಳ ಅವಲೋಕನ ಮಾಡಿದಾಗ ಗಂಡಸಿದ ಮಗ, ಅಣ್ಣನಿಂದ ತಮ್ಮ ಅಧ್ಯಕ್ಷ ಪದವನ್ನು ವಹಿಸಿಕೊಂಡಂತೆ ತಿಳಿಯುತ್ತದೆ ಬಂದವಾಕಶಾಹಿಗಳು ಇದನ್ನು ಉತ್ತರಾಧಿಕಾರ ವಿಧಾನ ಪಾಲನೆಯೆಂದರೆ, ಕ್ರಾಂತಿವಾದಿಗಳು ಇದು 'ಕ್ರಾಂತಿ ಭಾವನೆಯ ಪ್ರಗತಿಯ ಪ್ರತೀಕವೆನ್ನಬಹುದು. ಸಾಮ್ಯ ಪ್ರಜಾಪ್ರಭುತ್ವವಾದಿಗಳು ಪ್ರಜೆಗಳ ಅಭ್ಯುದಯೆಂದು ಇದನ್ನು ಅವಜ್ಞೆಯಿಂದಲೇ ನೋಡಬಹುದು. ಉದಾರಿ ಪ್ರಜಾತಂತ್ರಿಗಳು, ಹೊಸ ರಕ್ತಕ್ಕೊಂದು ಹೊಸ ಅವಕಾಶ ಕೊಡುವ ಅಭ್ಯಾಸವೆಂದಿದನ್ನು ಕರೆಯಬಹುದು. ಜನಸಾಮಾನ್ಯರೇನು ಹೇಳುತ್ತಾರೆ? ಭಾರತದ ಪ್ರಧಾನಿ ಪದವನ್ನು ತಂದೆ ಜವಾಹರಲಾಲರಿಂದ ಮಗಳು ಇಂದಿರಾ ಗಾಂಧಿ ನೇರವಾಗಿ ಸ್ವೀಕರಿಸುವ ದಾಷ್ಟ್ಯ ತೋರಲಿಲ್ಲ; ಅಷ್ಟಾದರೂ ಸೌಜನ್ಯ ಬೇಡವೆ? ಎಂದು ಪ್ರಶ್ನಿಸಿದರೆ, ಉತ್ತರ.... ಇದು ಪ್ರಜಾಸತ್ತೆ. ಪ್ರಜೆಗಳ ಗಾಗಿ ಪ್ರಜೆಗಳಿಂದಲೇ ಚುನಾಯಿಸಲಾದವರಿಂದ ನಡೆಯುವ ಆಡಳಿತ. ಮಾವ-ಮಗ, ಗಂಡ-ಹೆಂಡತಿ, ಅಣ್ಣ-ತಮ್ಮ ಎಲ್ಲರೂ ಪ್ರಜೆಗಳೇ ಅಂದೇ.

ಚಂದಾದಾರರಲ್ಲಿ ವಿನಂತಿ

ಇದೇ ಆಗಸ್ಟ್ ತಿಂಗಳಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ತಂಬರಾದಿಯಿಂದ 48ನೆ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಯಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯವಾಡಿ ಆದಷ್ಟು ಶೀಘ್ರ ಮನಿಯಾರ್ಡರ್ ಮೂಲಕ ಕಳುಹಿಸಿ ಸಹಕರಿಸುವಂತೆ ವಿನಂತಿಸುತ್ತೇವೆ

ಪಿ.ಸೇಜರ್,
ನವಯುಗ, ಉಡುಪಿ

ಜನಪ್ರಿಯವಾಗುತ್ತಿರುವ ಮಂಗಳೂರಿನ ಜನತಾ ಬಜಾರ್

ನಾಗುಕತೆಯು ಬೆಳೆಯುತ್ತ ಬಂದಂತೆ ನಗರವಾಸಿಗಳ ಸಮಸ್ಯೆಯೂ ಹೆಚ್ಚುತ್ತ ಹೋಗುತ್ತದೆ. ನಿತ್ಯೋಪಯೋಗಿವಸ್ತು—ಒಡವೆಗಳನ್ನು ಕೂಡ ಹಾಕಿ ಪುದೂ ಅವರಿಗೊಂದು ಸಮಸ್ಯೆ. ಇದಕ್ಕೆಂದೇ ದೊಡ್ಡ ದೊಡ್ಡ ನಗರಗಳಲ್ಲಿ 'ಜನತಾ ಬಜಾರು'ಗಳು ನಿರ್ಮಾಣಗೊಂಡಿವೆ. ಮಂಗಳೂರಿನ ಜನತಾ ಬಜಾರು ಅತ್ಯಂತ ಜನಪ್ರಿಯವಾದುದೆಂದು ಹೆಸರಾಗಿದೆ.

ತುಸು ತಡವಾಗಿಯಾದರೂ ದಕ್ಷಿಣ ಕನ್ನಡದ ರಾಜಧಾನಿ ಮಂಗಳೂರಲ್ಲಿ ಜನತಾ ಬಜಾರು ಆರಂಭವಾಯಿತು. ಇಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಬೇಕಾಗಬಹುದಾದ ಸರ್ವ ಪ್ರಕಾರದ ನಿತ್ಯೋಪಯೋಗಿ ವಸ್ತುಗಳು ಸುಲಭ ಬೆಲೆಗೆ ದೊರೆಯುತ್ತವೆ. ಜನತಾ ಬಜಾರಿಗೆ ಬಂದು ಬಿಟ್ಟರೆ, ಮತ್ತಾವ ಅಂಗಡಿಯನ್ನೂ ಹುಡುಕಿಕೊಂಡು ಹೋಗಬೇಕಾಗಿಲ್ಲ. ಎಂತಲೇ ಮಂಗಳೂರಿನ ಜನತಾ ಬಜಾರು ಅತ್ಯಂತ ಜನಪ್ರಿಯವಾಗುತ್ತಿದೆ.

ಅದಾರಧಾನ್ಯಗಳು, ಸಂಬಾರ ಜಿನಸುಗಳು, ಯೂನಿಫಾರ್ಮ್ ವಿಧದ ನಿಲ್ ಮತ್ತು ನಾಗ್ಗದ ಸೀರೆ—ಒಟ್ಟಿಬರೆಯಲು ವಾತ್ರೆ ಪಾತ್ರೆಗಳು, ಇಲೆಕ್ಟ್ರಿಕ್ ಸಾಮಾನುಗಳು ಇಷ್ಟೆ ದೊರೆಯುವುವು ಎಲ್ಲಿಯೂ ದೊರೆಯುವುವು.

ಮಂಗಳೂರಿನ ಜನತಾ ಬಜಾರಿನ ನೇತಾರರು ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಲಿ ಇವರು ಮಂಗಳೂರಿನಲ್ಲಿನ ತಮ್ಮ "ಸಹಕಾರಿ ಮಹಲ್"ನ ಅತಿ ವಿಶಾಲ ಮಳಿಗೆಯಲ್ಲಿ ಜನತಾ ಬಜಾರನ್ನು ತೆರೆದಿದ್ದಾರೆ. ನಡೆಸಿಕೊಂಡು ಬರುತಿದ್ದಾರೆ ಅತ್ಯಂತ ಜನಪ್ರಿಯತೆಯನ್ನೂ ಗಳಿಸುತ್ತಿದ್ದಾರೆ. ಸಹಕಾರಿ ರಂಗದ ಉಜ್ವಲ ನಕ್ಷತ್ರವಾದ ಶ್ರೀ ಎಸ್. ಕರ್ಸ್ಪಯ್ಯನವರು ಸ್ಥೋಸ್ಥಿನ ಅಧ್ಯಕ್ಷರಾಗಿ ಇವಕ್ಕಾಗಿ ತಂಬಾ ಹೋರಾಡಿದವರು. ಹೋರಾಡುತ್ತಿರುವವರು. ಇವರ ಪಾರ್ಶ್ವದರ್ಶನದಲ್ಲಿ ಜನತಾ ಬಜಾರು ಸರ್ವಜನರ ಮಾನ್ಯಕಟ್ಟೆಯಾಗಿ ಬೆಳೆದು ಬರುವುದರಲ್ಲಿ ಸಂದೇಹವಿಲ್ಲ.

ಮುಖಚಿತ್ರ

ಪೇಂತ್ರಜಿ ಸುಭಾಷ್ಚಂದ್ರ ಬೋಸರು

(ವಿವರಕ್ಕೆ ಅರನೇ ಪುಟದ ಲೇಖನ ನೋಡಿರಿ)

ಗೇಹ ರಾಜ್ಯದಲ್ಲಿ

ಒಬ್ಬ ಪೂಜ್ಯ, ಇನ್ನೊಬ್ಬ ಪರಮಪೂಜ್ಯ

"ಅಲ್ರಿ, ನೋಡಿ, ಆ ಮಧ್ಯಪ್ರದೇಶದ ಮುಖ್ಯಮಂತ್ರಿ ತಮ್ಮ ಹುದ್ದೆಯನ್ನು ಬಿಟ್ಟೇನೆ ಬಿಟ್ಟೇನೆ ಅಂತ ಸುಮ್ಮನೆ ಹೆದ್ರಿಸಿದ್ದಾಂತ ತೋರುತ್ತೆ...."

"ಯಾಕೆ ಹಾಗಂತೀಯಾ?"

"ಅಲ್ಲ, ಆರೋಗ್ಯದ ನಿಮಿತ್ತಾಂತ ಕಾರಣ ಮುಂದೆ ಮಾಡಿ, ಬಹಳಷ್ಟು ವತ್ತಾಯಿಸಿದರೂ, ತಮ್ಮದು ಅಚಲ ನಿರ್ಧಾರ ಅಂತ ಹೇಳುತ್ತೇ ಕೊನೆಗೂ ರಾಜೀನಾಮೆ ಕೊಡಬೇಕು ನಿರ್ಧರಿಸಿದರಂತೆ ನೋಡಿ."

'ನಮ್ಮ ಮಧ್ಯಪ್ರದೇಶದಲ್ಲಿ ಇಣುಕು ಜಾಕುತಿದ್ದ 'ರಾಷ್ಟ್ರಪತಿ ಆಳಿಕೆ' ಕೆಲ ದಿನ ಹಿಂದೆ ಸರಿದಂತಾಯ್ತು...."

'ಅದ್ಯಾಕೆ ಕೆಲದಿನಾಂತ ಹೇಳ್ತೀರಿ?"

"ಮತ್ತೆನ್ರೀನು? ಉತ್ತರದಲ್ಲಿ ಚರಣ ಸಿಂಹರು ಮಾಡಿದ್ದನ್ನೇ ನಮ್ಮದಲ್ಲಿ ಗೋವಿಂದ ಸಿಂಹರು ಮಾಡಿದರು. ಮತ್ತೆ ಹೀಗೆ ಮಾಡದೆ ಹೋಗುತಿದ್ದರೆ, ಬಿಹಾರದ ಪುನರಾವೃತ್ತಿಯೇ ಆಗುತಿತ್ತು. ಅದಕ್ಕಾಗಿ ಗೋವಿಂದರು ಗೋವಿಂದಾ ಎನ್ನಲಿಲ್ಲ ಸಡ್ಕೆ...."

'ಅದು ಸರೀನ್ರಿ. ನೋಡಿ, ಈಗಾಗಲೇ ಒಂದು ಪಕ್ಷದ ಸರಕಾರವಾದರೆ, ವಿಶಾಲ ಕಳಹದಿಯ ಮೇಲೆ ಮಂತ್ರಿ ಮಂಡಳ ರಚನೆ, ಬಹು ಪಕ್ಷೀಯವಾದರೆ ಬಹು ಸಂಖ್ಯಾಕ ಮಂತ್ರಿ ಮಂಡಳ—ಹೀಗೆ ಎಲ್ಲಿ ನೋಡಿದ್ರೂ ದೊಡ್ಡ ಗಾತ್ರದ ಸಂಪುಟಗಳೇ ಇವೆಯಲ್ಲಾ! ಆದರೆ, ಆಡಳಿತ ಸುಧಾರಣಾ ಮಂಡಳಿಯ ಅಧ್ಯಯನ ಮಂಡಳವು ಇದು ದಕ್ಷತೆಗೆ ಧಕ್ಕೆ ತರುತ್ತದೆ; ದುರಾಡಳಿತಕ್ಕೆ ಒತ್ತಾಸೆ ಕೊಡುತ್ತದೆ ಅಂತ ಅಭಿಪ್ರಾಯಕ್ಕೆ ಬಂದಿದೆಯಂತೆ...."

"ಇದರಲ್ಲಿ ಹೊಸತೇನಿದೆ? ಹತ್ತು ಸಮಗಾರರು ಸೇರಿ ಚರ್ಮದ ಹದ ಕೆಡಿಸಿದರು ಅಂತ ಹಿಂದೆಯೇ ಹೇಳಿದ್ದಾರೆ ನೋಡು..."

"ಹ್ಞಾಂ, ಅದ್ರೆ, ಈ ಮಂಡಳಿ ನೇಮಕ ಮಾಡುವಾಗ ಒಂದು ತಪ್ಪು ಮಾಡಿತ್ತು ಕೇಂದ್ರ ಸರಕಾರ..."

"ಏನದು?"

"ನೋಡಿ, ಮುರಾರ್ಜಿ ಭಾಯಿ ಮತ್ತು ಕೆಂಗಲ್ಲರನ್ನು ಮಂತ್ರಿ ಮಾಡದೆ ಅವರನ್ನು ಅವರಷ್ಟಕ್ಕೇ ದೂರವಿರುವಂತೆ ಮಾಡಲು ಈ ಮಂಡಳಿ ಅಯ್ತಾನ್ರಿ."

"ಹ್ಞಾಂ....ಒಂದು ರೀತಿಯಿಂದ ಸರಿ.'

"ಈ ಮಂಡಳಿಯಲ್ಲಿ ಕೆಲವು ಮಂತ್ರಿಗಳನ್ನೂ ಸೇರಿಸಿ ಬಿಡುತಿದ್ದರೆ, ಮಂಡಳಿಯ ವರದಿಯೇ ಬೇರೆಯಾಗುತಿತ್ತು."

"ಏ, ಭಾರೀ ಬುದ್ಧಿವಂತೆ ಕಣೇ ನೀನು. ಇಂದಿರಾ ಗಾಂಧಿ ಪ್ರಧಾನಿಯಾದದ್ದೇ ಆದದ್ದು, ದೇಶದ ಮಹಿಳಾ ಮಣಿಯರ ಮೆದುಳು ಭಾರೀ ಫಾರೀ ದೂರಕ್ಕೆ ಹರಿಯ ತೊಡಗಿತು. ಇಲ್ವಾದ್ರೆ, ನೀನೂ ಇಷ್ಟು ದೊಡ್ಡ ರಾಜತಂತ್ರಿ ಆಗುರೆಯೂ ಗಬೇಕಾದ್ರೆ...."

ನಾಕು ಬಿಡೀಂದ್ರೆ...ನಿಮಗಂತೂ ನನ್ನ ಮೇಲೆ ಕಣ್ಣು...."

"ಅಯ್ಯೋ, ಯಾರ ಮೇಲೆ ಯಾರು ಯಾಕೆ ಕಣ್ಣು ಹಾಕ್ತಾರೆಯೆ? ಅದೂ ಸುಮ್ಮಸುಮ್ಮನೆ! ಹೂವಿನಲ್ಲಿ ಪರಾಗವಿದ್ರೆ ತಾನೇ ದುಂಬಿ ಸುಳಿಯೋದು?'

'ಹೌದು, ಹೌದು....ದುಂಬಿಯೇನೋ ಬೀದಿ ಕಾಮಣ್ಣನಿರಬಹುದು; ಆದ್ರೆ ಮನುಷ್ಯತ್ವ ದುಂಬಿತನಕ್ಕಿಂತ ಬೇರೆ ತಾನೆ? ಅದನ್ನು ಮೀರಿನಿಂತ್ರೆ ದುರುದುಂಬಿಯೂ ಬೆಡಿಕಂಬ ಕಟ್ಟಬೇಕಾದೀತು...."

'ಹ್ಞಾಂ...ನಂಗೇನಪ್ಪಾ, ನಿನ್ನನ್ನೆ ನಾನಲ್ಲದೆ ನನ್ನನ್ನ ನೀನಲ್ಲದೆ ಮತ್ಯಾರು ನೋಡೋಕೆ ತಯಾರಿದ್ದಾರೆ?"

"ಅದೇ ನೋಡಿ, ಎಲ್ಲರೂ ದೂರಿಗೆ ಬೇರೆಯವ್ರನ್ನೇ ದೊಟ್ಟು ಮಾಡೋದು".

"ಏನು?"

"ಏನೂ ಇಲ್ಲ. ನೋಡಿ, ಅನ್ಯಾಯ ರಾಜ್ಯ ಇವೆಯಲ್ಲಾ—ಇದನ್ನು ಒಡೆಯುವಷಲಿಯದೆ ನೋಡಿ...."

"ಹ್ಞಾಂ, ಗುಡ್ಡಗಾಡು ಪ್ರದೇಶಕ್ಕೆ ಪ್ರತ್ಯೇಕ ರಾಜ್ಯ ನಿರ್ಮಾಣ...."

"ಹೌದು...ಇದನ್ನು ಜನಸಂಘ ವಿರೋಧಿಸುತ್ತೆ. ಈ ಬಗೆಯ ಬೇಡಿಕೆಗೆ ಕೇಂದ್ರ ಸರಕಾರವೇ ಕಾರಣವೆಂದು ದೂರುತ್ತೆ...."

"ಅಲ್ಲವೇ ಮತ್ತೆ? ರಾಜ್ಯ ಕೊಡೋದು ಕೇಂದ್ರ ತಾನೆ?"

"ಹ್ಞೂಂ...."

'ಜನ ಬಂದಾಗಿ ಕೇಳೋವಾಗ ಕೊಡೋದಿಲ್ಲಾಂತಂದ್ರೆ ಡೆಮೊಕ್ರಸಿ ಎಲ್ಲಿರುಳಿಯತೆ?'

'ಇದೊಳ್ಳೆ ಕಥೆಯೂಯ್ತು....'

"ಏನು?"

"ಜನ ಕೇಳ್ತಾರೆ, ನೀವು ಕೊಡ್ತೀರಿ. ನೋಡೋಣ, ಜನ ಹೇಳದ ಹಾಗೆ ನೀ ವೆಲ್ಲಿ ಕೇಳಿದ್ದೀರಿ?'

"ಅಯ್ಯೋ, ಅದನ್ನೂ ಹೇಳಬೇಕೆ? ಇಲ್ಲಿ, ಎಲ್ಲಿ ಕೇಳಲಿಲ್ಲ ಹೇಳು...."

"ಫೋಡಿ, ಹಿಂದಿನ ಕಾಲದ್ದು ಬಿಡಿ, ಮೊನ್ನೆ ಮೊನ್ನೆ ನೋಡಿ, ಕಚ್ಚರಣ ನಿರ್ಣಯ ಒಪ್ಪಬಾರದು ಅಂದಿತು, ಕೇಳಲಿಲ್ಲ, ಅಂಚೆದರ ಏರಿಸಬೇಡಿ ಅಂತ ಕೂಗಿತು, ನಿಮ್ಮ ಕಿವಿ ಕೆಬ್ಬಾಯ್ತು...."

"ಅಲ್ರೀ, ಕಚ್ಚರಣ ತೀರ್ಪನ್ನು ಒಪ್ಪಬೇಕು ಅಂದೋರೇ ಹೆಚ್ಚು ಮಂದಿ. ಅಂಚೆ ದರ ಹೆಚ್ಚಿಸೋಕೆ ಬಹುಮತ ದೊರೆಯುತ್ತಲ್ಲಾ..."

"ಅದೇ ಈಗ ಹೇಳಿದ್ದು. ನಿಮ್ಮ ಪ್ರಜಾಪ್ರಭುತ್ವದ ಒರೆಗಲ್ಲು ಬಹುಮತ. ನಿಮ್ಮ ಒರೆಗಲ್ಲು ತೋರಿಸೋದೇ ಹೆದಿನಾಲ್ಕು ಕ್ಯಾರೆಟು...."

"ಅಗ್ರಿ, ಸದ್ಯ ಅಷ್ಟಾದ್ರೂ ಇದೆಯಲ್ಲ. ಬೆಗಡೆ ಪ್ಲಾಸ್ಟಿಕ್ ಮಣಿ ಬರೆಯೋ ಅಗತ್ಯವಿಲ್ಲ ನೋಡು..."

"ನೋಡಿ, ಅನ್ಯಾಯದ ಜನ ಹೇಳುವಂತೆ ಕೇಳಿದರೆ, ಸದ್ಯ ಒಂದು ರಾಜ್ಯ ಏಳು ರಾಜ್ಯ ಆಗಬೇಕಾಗುತ್ತಂತೆ. ಈ ಏಳರಲ್ಲಿ ಕ್ರಿಶ್ಚನ್ ಬಹುಸಂಖ್ಯಾತರದ್ದು, ಮುಸ್ಲಿಂ ಬಹುಸಂಖ್ಯಾತರದ್ದು— ಹೀಗೆಲ್ಲಾ ಆದ್ರೆ ಮತ್ತೆ ಅರಬ-ಇಸ್ರೇಲ್ ಘರ್ಷಣೆಯ ಮಾದರಿಯಲ್ಲೇ, ಜಾತೀಯ ಗಲಭೆಗಳಿಗೆ ಇದೊಂದು ಸಾಧನ; ವಾಕಿಸ್ತಾನಕ್ಕೆ ಚಾನ್ಸು."

'ಇದು ಒಂದು ಪಕ್ಷದ ವಾದ...."

'ಇರಬಹುದು, ಮತ್ತೆ ನಿಮ್ಮ ರಾಜ್ಯ ಪಾಲ ನೆಸರು ಈ ಸಂದರ್ಭದಲ್ಲಿ ಬೇಗ ಏನೇ ರಾಜಕೀಯ ನಿರ್ಣಯ ಕೈಕೊಳ್ಳಬೇಕೆಂದೂ ಇಲ್ಲವಂತೆ, ಇದೊಂದು ಕ್ಲಿಷ್ಟಕರ ಸಮಸ್ಯೆಯೇ ಆಗುವುದೆಂದೂ ಹೇಳಿದ್ದಾರಂತೆ..."

'ಸರೀಪ್ಪು. ಯಾವುದೇ ಒಂದು ಪ್ರಶ್ನೆಯನ್ನು ಬಹುಕಾಲ ನನಗೆ ದಿಯಲ್ಲಿಡಬಾರದೆಂಬುದಕ್ಕೆ "ಕಾಶ್ಮೀರ"ವೇ ಒಂದು ಉದಾಹರಣೆ...."

'ಮತ್ತೆ ನಮ್ಮ ಕರ್ನಾಟಕ—ಮಹಾರಾಷ್ಟ್ರಗಳ ಸೀಮಾ ವಿವಾದವೆಂಥದು?"

"ಹೊಸ ಮುಖ್ಯ ಮಂತ್ರಿ ಪಾಟೀಲರು ಮಹಾಜನ ಆಯೋಗದ ವರದಿಯನ್ನು ಅವಾಡೇಂದು ವ್ಯವಹಾರಕ್ಕೆ ತರುವಂತೆಯೇ ಅನ್ನುತಿದ್ದಾರೆ. ಆದರೆ ಹಳೆಯ ಜಾಯಕರು ಅದು ಸಾಧ್ಯವಿಲ್ಲ ಅಂದಿದ್ದಾರೆ ..."

"ಅಂದರೆ, ಪ್ರಶ್ನೆಗೆ ಉತ್ತರವಿಲ್ಲ...'

'ಹಾಗಲ್ಲ, ಪ್ರಶ್ನೆ ಪತ್ರಿಕೆ ಕಠಿಣ...."

'ಇನ್ನೇನು? ಪರೀಕ್ಷಾ ಭವನದಿಂದ ಹೊರ ಬರುವುದಕ್ಕಿದೆಯೇನು?'

'ಛಿ! ಬೊಕ್ಕಸಪಡಿಸಿದಷ್ಟು ಸಮಯ ಒಳಗೆ ಕೂತು ಸಿದ್ದೆಮಾಡಲಾರದಷ್ಟು ಅಯೋಗ್ಯರೇನು!"

"ಅಲ್ರಿ. ಈ ಮಂತ್ರಿಗಳೆಲ್ಲಾ ಅದಕ್ಕೇ ಲಾಯಕ್ಕು..."

"ನೀ ದ್ರಾಕ್ಷೆ ಹುಳಿ ಅಂತ ಹೇಳಿಕಂತೆ...."

"ಛೆನಗಲ್ಲ, ನನ್ನ ಶತ್ರುವಿಗೂ ಮಂತ್ರಿ ಪದವಿ ಬೇಡಾಪ್ಪಿ...."

"ನೀನು ಬೇಕು ಅಂದ್ರೆ ಕೊಡೋರು ಯಾರು? ಅದೂ ಇನ್ನು ದೊಡ್ಡ ಮಂತ್ರಿಮಂಡಳ ರಚಿಸಬಾರದೂಂತ ಅಂದ್ರಿಟ್ಟು ಮಂತ್ರಿಮಂಡಳಕ್ಕೂ ಮಿತಶಂತಾನ ಯೋಜನೆ ಅನ್ವಯಿಸಿದರೆ...."

'ಅಲ್ರಿ, ಮಿತ ಸಂತಾನ ಯೋಜನೆಗೆ ಒಳಪಡಿಸಿದರೆ ತೊಂದ್ರೆಯಿಲ್ಲ. ಅದರ ಬೆಲೆ ಹೆಚ್ಚಪ್ಪಿ. ಅದರ ಬದಲು ಸಂತಾನ ಶಕ್ತಿ ಶಮನ ಶಸ್ತ್ರ ಚಿಕಿತ್ಸೆಗೊಳಪಡಿಸಿದರೆ...."

'ಛೆ...ಛೆ.. ಅದೆಂದಿಗೂ ಸಾಧ್ಯವಿಲ್ಲ. ಆಗ ಜನ ಬಲವಾಗಿ ವಿರೋಧಿಸುವುದು."

"ಜನದ ವಿರೋಧವನ್ನು ಯಾರು ಕ್ಯಾರ್ ಮಾಡ್ತಾರೆ? ತಮಗೆ ಬೇಕಾದ್ದೇ ತಾವು ಮಾಡ್ತಿದಾರೆ...."

'ಜನವ ತ ತಿಳಿದು ಮತ್ತೆ ತಮ್ಮ ನೀತಿ ರೂಪಿಸ್ತಾರೆ...."

'ಎಂಥ ರೂಪವೋ....ಅಧಿಕಾರ ಲಾಲಸೆಯಿಂದ ಮಾಡಬೇಕಾದ ವಿನಾಯಕ ಹನುಮಂತಪ್ಪಾಗ್ತಾನೆ...'

"ನೋಡು, ನಾವು ಭಾರತೀಯರು. ನಮಗೆ ವಿನಾಯಕನು ಪೂಜ್ಯ, ಹನುಮಂತ ಪರಮ ಪೂಜ್ಯ, ಒಬ್ಬ ವಿಘ್ನನಾಶಕನಾದ್ರೆ ಇನ್ನೊಬ್ಬ ಮುಖ್ಯ ಪ್ರಾಣ ..."

"ಅದೇ ನೋಡಿ....ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ ಅನ್ನೋ ನೀತಿಯಿಂದ್ಲೇ ನಾವು ಕೆಟ್ಟು ಹೋಗಿರೋದು...."

"ನಾವೇನು ಕೆಟ್ಟಿದ್ದೇವೆ?"

"ಇಲ್ಲಿ....ನೋಡಿ..."

"ಓ...ಅದ್ರಲ್ಲೇನು ಕೇಡೊಂತ..."

"ನಿಮಗೇನು?...."

"ಏನೂ ಇಲ್ಲೆ!"

"...ಎಲ್ಲಾ ನಿಮಗೇನೇ...."

"ಹ್ಞಾಂ...ನಾಲ್ಕು ಮಳೆಗಾಲ ಬಾಟೋದ್ರಲ್ಲಿ...."

(ಒಂಭತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 18/1968.

ದಾಸಪ್ಪ ನಾರಾಯಣ ಪೈ — ವಾದಿ
ಜನಾಬ್ ಶೇಕ್ ಯಸೂಬ್ ಸಾಹೇಬ ಕೂಡಾ— ಪ್ರತಿವಾದಿರು

ನೇ ಪ್ರತಿವಾದಿ—ಶಾರದಾ ಬಾಯಿ, ಜಮಾಧಾನ ನಾಯಕರ ಹೆಂಡತಿ, C/o Minerva Mill, Bangalore-1 ಇವರಿಗೆ—

ವಾದಿಯು ಗಂಗೊಳ್ಳಿ ಗ್ರಾಮದ ಸರ್ವೆ ನಂಬ್ರ 116-9ರಲ್ಲಿರುವುದು 9 ಸೆಂಟ್ಸ್ ಸ್ಥಳದ ಬಾಬ್ತು ವಸೂಲಿ ರೂ.36.00ರಂತೆ ಬರತಕ್ಕ ಗೇಣಿಬಾಕಿಗೂ ಸ್ವಾಧೀನತೆಕೇಳಿ ವಾದಿಯುದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಖು 27-7-68ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಿಳಿಗೆ ಯಾಗುವುದರಿಂದ ಆ ಕಾರಣ ನಿಮ್ಮ ದೇವಾಜ್ಞ ಆಕ್ಷೇಪವಿದ್ದಲ್ಲಿ ಸದ್ರಿ ದಿನ ಹಗಲು 11ಗಂಟೆಗೆ ಹಾಜರು ಆಗಿ ಜಾಬ್ತಾ ಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ನಿಮ್ಮ ಉಜ್ರ ಶಿವ್ಯಾಯೇಕಪಕ್ಷವಾಗಿ ತೀರ್ಪೂಕಾಸಲಾದೀತು ಎಂಬ ಸಂಗತಿ ಕೋರ್ಟು ಹುಕುಂ ನೋರೆಗೆ ಈ ಮೂಲಕ ತಿಳಿಸೋಣಾಗಿಯದೆ.

K. Raghunath Shenoy,
Advocate for Plff.

Coondapoor. 2-7-68.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ಎಲ್ಲ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆ ಯಿದೆ ಜೊತೆಗೂ ಎಲ್ಲಾ ಸರದ ವಿವಾಹಿಡಿ.

HOTEL SATKAR

Boarding & Lodging

Near Corporation Office, 9, Mission Road

Bangalore-2

ಕಣ್ಣುಳ್ಳವರು ಕಾಣಬಹುದಾದ ಒಗ್ಗಟ್ಟಿನ ಒರತೆ

ಬರೆದವರು. ಶ್ರೀ ಶಿವಶಂಕರ

ಕನ್ಯಾಕುಮಾರಿ, ಕುಂಭಕೋಣಂ, ಉಡುಪಿ, ಕುಂಭಮೇಳ, ಹರಿದ್ವಾರ, ತಿರುಪತಿ, ಪುಷ್ಕರಣಿ, ಕಾಶಿ...ದೇಶದ ದಶದಿಶೆಗಳಲ್ಲೂ ಇವೆ. ಈ ದೇಶದ ರಾಷ್ಟ್ರೀಯರಿಗೆ ಪುಣ್ಯ ಕ್ಷೇತ್ರಗಳು, ಪವಿತ್ರ ಕ್ಷೇತ್ರಗಳು, ತೀರ್ಥಸ್ಥಾನಗಳು. ಲಕ್ಷೋಪಲಕ್ಷ ಪ್ರಜೆಗಳಲ್ಲಿ ಒಂದಾಗಿ ಸೇರಿ ತ್ರಿವೇಣಿ ಸ್ನಾನ ಮಾಡುತ್ತಾರೆ, ಪೂಜೆ ಮಾಡುತ್ತಾರೆ. ಅಲ್ಲಿ ಭಾಷಾ ಬಡಿದಾಟ, ಪ್ರಾಂತೀಯ ಪರಿದಾಟ, ರಾಜಕೀಯ ರಾದ್ಧಾಂತ, ಮತೀಯ ಮಾರಾಮಾರಿ ಜಾತಿ ಜಂಝಾಡ...ಇತ್ಯಾದಿವಕ್ಕೂ ಆಸ್ಪದ ಇರುವದಿಲ್ಲ ಇತ್ಯಾದಿವೂ ಅವಕಾಶ ಅಡ್ಡಿ ಪಡಿಸಲಾರದು. ಅವನು ಈ ದೇಶದ ರಾಷ್ಟ್ರೀಯನೆಂದರೆ ಸರಿ. ಅವನಿಗೆ ಅಮಮತಿ ಇದ್ದೇ ಇದೆ. ಇವು ದೊಡ್ಡ ಪ್ರಮಾಣದಲ್ಲಿ ನಡೆಯುವಂತಹವು. ಅಷ್ಟೇಕೆ? — ಕುಟುಂಬದೊಳಗೆನೇ ಒಗ್ಗಟ್ಟಿನ ಒರತೆಯಿರುವುದು ಕಾಣಬಹುದು. ಹುಟ್ಟು-ಸಾವು, ಮದುವೆ. ಹಬ್ಬಹರಿದಿನ. ಇವು ಏನನ್ನು ಸೂಚಿಸುತ್ತವೆ? ಇವು ಇರುವದು ಸಮಾಜ ಸಂಘಟನೆಗೆ ಅಲ್ಲವೇನ? ಅದೇ ರೀತಿ ಹರಿಕಥೆ, ಭಜನೆ, ನೇಮ, ಉತ್ಸವ, ಪೂಜೆ ಮುಂತಾದುವುಗಳಿವೆ. ಭಾರತೀಯ ಸಮಾಜವನ್ನು ಸಂಘಟನೆಯ ದಾರದಲ್ಲಿ ಪೋಣಿಸಲಿಕ್ಕಾಗಿಯೇ ಹಿಂದಿನವರು ಈ ರೀತಿ ವ್ಯವಸ್ಥೆಗಳನ್ನು ಮಾಡಿರುವರು. ಅಲ್ಲದೆ ಅದು ಚೆನ್ನಾಗಿ ಜ್ಞಾಪಕದಲ್ಲಿಡಬೇಕೆಂಬುದಕ್ಕಾಗಿಯೇ ಕಲಿಯುಗದಲ್ಲಿ ಸಂಘನೇ ಶಕ್ತಿಯೆಂದು ಪೂರ್ವಜರು ತಿಳಿಸಿರುವರು. ಒಂದು ಸಮಾಜದ ನಾವು ಒಟ್ಟಿಗೆ ಊಟ ಮಾಡೋಣ ಮುಂತಾದ ಶ್ಲೋಕಗಳ ಮೂಲಕವೂ ನಮಗದನ್ನವರು ಸ್ಪಷ್ಟಪಡಿಸಿರುವರು.

ಇವು ಜಾತೀಯ, ಮತೀಯ, ಧಾರ್ಮಿಕ ಸಂಗತಿಗಳು. ಇವನ್ನು ರಾಜಕೀಯಕ್ಕೆ ಎಳೆದು ತರಬಾರದೆಂದು ಕೆಲ ರಾಜಕೀಯ ಧುರೀಣರು ಹೇಳುವದುಂಟು. ಇವು ಕ್ರಿ. ಪೂ. ಇಪ್ಪತ್ತನೇ ಶತಮಾನದ ವಿಷಯಗಳೆಂದೂ ಕ್ರಿ. ಶ ಇಪ್ಪತ್ತನೇ ಶತಮಾನಕ್ಕದು ಪ್ರಯೋಜನವಿಲ್ಲವೆಂದು ಕೆಲ ಪ್ರಗತಿವಾದಿಗಳು ರಾಗ ಎಳೆಯುವದುಂಟು. ರಾಜಕೀಯ ಅರಸಿನ ರೋಗ (ರಾಜಮಾರಿ) ಆಗಿರುವವನಿಗೆ ಎಲ್ಲವೂ ಒಂದೇ ಎಂದು ಕಂಡು ಬರುತ್ತದೆ. ಏನೇ ಇರಲಿ — ಕಣ್ಣುಳ್ಳವರು ಇಲ್ಲಿ ಒಗ್ಗಟ್ಟಿನ ಒರತೆಯನ್ನೇ ಕಾಣಬಹುದು. ಕ್ರಿ. ಪೂ. ಇಪ್ಪತ್ತನೇ ಶತಮಾನದ ಈ ಒಗ್ಗಟ್ಟಿನ ಒರತೆ ಇಂದೂ ನಮ್ಮ ತೃಷೆಯನ್ನು ತೀರಿಸಬಲ್ಲದು. ಆದರೆಲ್ಲಿಂದೂ ಆ ಶಕ್ತಿ ಇದೆ. ಆದರೆ, ಕೈಯಲ್ಲಿ ಉತ್ತಮ ಬೆಣ್ಣೆಯನ್ನಿಟ್ಟುಕೊಂಡು ತುಪ್ಪಕ್ಕಾಗಿ ಊರೆಲ್ಲಾ ಸುತ್ತಾಡುವದು ನಮಗೀಗ ಅಭ್ಯಾಸವಾಗಿ ಬಿಟ್ಟಿದೆ.

ಮತಾಂಧ ಪಾಕಿಸ್ತಾನ ಯಾಗೂ ಕಮ್ಯೂನಿಸ್ಟ್ ಚೈನಾ ನಮ್ಮ ಮೇಲೆ ಆಕ್ರಮಣ ಪಡಿಸಿದಾಗ ಇಲ್ಲಿ ಒಗ್ಗಟ್ಟಿನ ಮಹಾ ಪ್ರವಾಹ ಹರಿಯುತ್ತೆಂದು ಹಾಡುವವರು ಕೆಲವರಿದ್ದಾರೆ. ಒಂದು ಸ್ಥಿತಿಯಲ್ಲಿ ಇದು ಸರಿ. ಪಾಕಿಸ್ತಾನ ನಿರ್ಮಾಣಕ್ಕೆ ಕಾರಣರಾಗಿದ್ದವರು, ಸದಾ ಪಾಕಿಸ್ತಾನದ ಕನಸು ಕಾಣುತ್ತಿರುವವರು, ಚೈನಾವನ್ನು ಕಮ್ಯೂನಿಸ್ಟರ ಕುಡುಗೋಲು ಕತ್ತಿಗೆ ತಳ್ಳಿಬಿಟ್ಟವರು ಹಾಗೂ ಮಾನವನನ್ನು ಮಹಾಪೇತಾಮೆಂದು ಗೌರವಿಸುತ್ತಿರುವವರು ಆಕ್ರಮಣದ ಸಮಯ ಒಗ್ಗಟ್ಟಿನ ಪ್ರವಾಹದಲ್ಲಿ ಸೇರಿಕೊಳ್ಳುವದುಂಟೇನು? ಅವರಿಗದು ಹಬ್ಬದ ದಿನಗಳಿವೆ. ಅವರ ಸಂತೋಷಕ್ಕೆ ಅಗ ಎಲ್ಲೆಯೇ ಇರಲಿಲ್ಲ. ಇದು ಒಂದು ಮಾಯೆ ಇನ್ನೊಂದು ಬದಿಯಲ್ಲಿ? ಒಗ್ಗಟ್ಟಿನ ಅನುಭವ ಕಂಡುಬಂದಿರುತ್ತದೆ. ಪ್ರತ್ಯೇಕ ದ್ರಾವಿಡ ಅಥವಾ ತಮಿಳುನಾಡನ್ನು ಕೇಳುತ್ತಿದ್ದ ದ್ರಾವಿಡ ಮುನ್ನೇತ್ರ ಕಳಗಮಿನವರು ದ್ರಾವಿಡ ಸಿಸ್ಟ್ರೀಲೇಂಡನ್ನು ಕೇಳುತ್ತಿದ್ದ ಅಖಾಲಿದಳದವರು ತಮ್ಮ ನಿಲುವನ್ನು ಬದಲಾಯಿಸಿಕೊಂಡಿರುವೆವೆಂದು ಅಂದು ಹೇಳಿರುವರು. ಅವರ ಮನಸ್ಸು ನಿಜವಾಗಿಯೂ ಬದಲಾಗಿಲ್ಲವಾದರೂ ತೋರಿಕೆಯ ಮಟ್ಟಿಗಾದರೂ ಅವರು ಬದಲಾಗಿರುವರು. ಅಲ್ಲದೆ, ಅಂದಿನಿಂದ ಅವರು ಭಾರತವನ್ನು ತಮ್ಮ ದೇಶವೆಂದು ಕರೆಯುವಲಾರಂಭಿಸಿರುವರು.

ಹಾಗಾದರೆ, ಸಾಂಸ್ಕೃತಿಕ ವಿಷಯಗಳಂತಲೂ ಆಕ್ರಮಣವು ಸಮಸ್ಯೆಯ ಸಂಘಟನೆಯ ಸೂತ್ರದಲ್ಲಿ ಬಂದಿರುತ್ತದೆನು? ಅದಕ್ಕೆ ಉತ್ತರ ಸದಾ ಸಿದ್ಧವಿದೆ. ಆಕ್ರಮಣ ನಮಗೇನೂ ಹೊಸತಿರುವದಿಲ್ಲ ಹಾಗೆ ನೋಡಿದರೆ, ನಮ್ಮ ದೇಶದ ಮೇಲೆ ಆಗಿರುವ ನಮ್ಮ ಆಕ್ರಮಣ ಇನ್ನಾವ ದೇಶದ ಮೇಲೂ ಆಗಿಲ್ಲ. ಅಲೆಕ್ಸಾಂಡರನು ಗೆಲ್ಲತ್ತ ಸಮುದ್ರದ ಅಲೆಯಂತೆ ಬಂದ ಇಲ್ಲಿ ಅವನಿಗೆ ಸೋಲಿನ ಅನುಭವವಾಯಿತು. ಮಹಮ್ಮದೀಯರು, ಕ್ರಿಸ್ತೀಯರು ಆಕ್ರಮಣ ನಮಗೇನೂ ಹೊಸತಲ್ಲ. ಅಲೆಕ್ಸಾಂಡರ ಆಕ್ರಮಣ, ಕಾಸಿಂನ ಆಕ್ರಮಣ, ಮಹಮ್ಮದರ ಆಕ್ರಮಣ ಇವೆಲ್ಲಕ್ಕೂ ಇಲ್ಲಿಯ ಜನರೇ ಕಾರಣ ಆಕ್ರಮಣದ ಸಮಯದಲ್ಲಿ ಒಂದಾಗುವದಿರಲಿ, ಹೊಗಿದ್ದವರನ್ನು ಆಹ್ವಾನಿಸಿ ಕರೆತಂದಿರುವ ಮಹಾನುಭಾವರೂ ನಮ್ಮ ದೇಶದಲ್ಲಿದೆ ಹೊರತು ಬೇರೆ ಯಾವ ದೇಶದಲ್ಲಿಯೂ ಕಾಣಸಿಗುವದಿಲ್ಲ. ಆಕ್ರಮಣದ ಸಮಯ ಉಂಟಾದ ಒಗ್ಗಟ್ಟು ಕೇವಲ ಪ್ರಜೆಕ ಬ್ರಿಟಿಷರ, ಮಂತರ ಪ್ರಾಚ್ಯರೋಗದ ಪೈಶಾಚಿಕ ದಮನ ಕಳೆಕೆ ಸಡಿಯುತ್ತಿದ್ದಾಗ ಭಾರತೀಯರು ಪರಸ್ಪರ ಭೇದಭಾವನ್ನು ಬದಿಗೊತ್ತಿ ಇಂಡಿಯನ್ ನೇಶನಲ್ ಆಫ್ ಕ್ರಿಸ್ತಿಯ ಧ್ವಜದಡಿ ಒಂದಾದರು. ಸ್ವಾತಂತ್ರ್ಯ ಸಿಕ್ಕಿ ಮೂವತ್ತು ಅಧಿಕಾರಕ್ಕೆ ಬಂದಾಗ ಕ್ರೈಸ್ತ ಕಳಚಿ ಹಾಕಿಕೊಳ್ಳಲಿಲ್ಲವೇನು? ಚೈನೀ ಪಾಕ್ ಆಕ್ರಮಣದ ಸಮಯ ಒಗ್ಗಟ್ಟು ಬಂದುಬಿಟ್ಟಿದೆಯೆಂದು ನೇತಾರಗಳು ನುಡಿದರು! ಪಾಕ್ ಸೈನಿ ಚೈನಿ ಫೌಜಗಳ ವಿಷಯ ಬಿಟ್ಟರೂ, ಉಳಿದೆಲ್ಲ ಭಾರತೀಯರು ಅಗ ಒಂದಾಗಿ ಬಿಟ್ಟರೇನು? ಅನ್ನಾಮಿನ್ನ ನಡೆದ ದೇನು? ನೇಫಾದಲ್ಲಿ ನಡೆದುದೇನು? ಸರಿ, ಈಗ ಅವರೂ ಭಾರತೀಯರು ಒಂದಾಗಿದ್ದಾರೇನ? ಭಾರತ ಒಂದು ದೇಶ, ನಾವೆಲ್ಲರೂ ಭಾರತೀಯರೆನ್ನಲು ಇಲ್ಲಿಯ ಜನರು — ಈ ದೇಶದ ನೀರು ಕುಡಿದು, ಅನ್ನ ತಿಂದು ಗಾಳಿ ಸೇವಿಸುತ್ತಿರುವ ಜನರು—ಸಿದ್ಧವಾಗಿದ್ದಾರೇನ?

ಆಕ್ರಮಣ ಘಟನೆಯಲ್ಲಿ ಮೈತ್ರಿಯು ಹುಟ್ಟಿಳಿತ್ತದೆಂದು ಭ್ರಾಂತಿಯಿಂದ ಬಾಯಿ ತೆರೆದಿದ್ದವರ ಮನಸ್ಸಾಗಾಮವಾಗಿ ಇಂದು ಬಿಕ್ಕಟ್ಟಿನ ರೋಗ ಬಡತ್ತಿರುತ್ತದೆ. ಕೆಲಜನರಿಗೆ ಕೋಪ ಬರುತ್ತದೆಂಬ ಭ್ರಮೆ ಗೊಳಗಾಗಿ ಪವಮಾನ್ಯ ನಿರ್ಮಾಣದ ದಾರಿಯಾಗನ್ನು ಕಾಣುವದರಿಂದಲೂ ಪ್ರಯೋಜನವಿಲ್ಲ. ಬೇಕಾದರೆ ಉಳಿದ ಜಗತ್ತೇ ಜನ್ಮನೆದ್ದು ಬರಲಿ—ಭಾರತವನ್ನು ಬಡಿದ ಮಟ್ಟಿನೆಂದು. ಭಾರತೀಯರು ಭಯಪಡಬೇಕಾಗಿರುವದಿಲ್ಲ. ಹಿಮಾಲಯದ ತುದಿಯಲ್ಲಿ ಶಿವನೂ, ಕಡಲ ತಡಿಯಲ್ಲಿ ಪಾರ್ವತಿಯೂ ಒಟ್ಟಿರೆದು ನಮಗೆ ಹೇಳುತ್ತಿದ್ದಾರೆ, ಈ ದೇಶದ ಯದಲ್ಲಾದರೂ ನಡೆದುದೇನು? ಪಾಕಿಸ್ತಾನಿ ಪ್ರಿಯರೂ, ಚೈನಿ ಫೇಲಾಗಳೂ ಭಾರತಕ್ಕೆ ವಿರುದ್ಧವಾಗಿ ವರ್ತಿಸಿಲ್ಲವೇನು? ಪಾಕಿಸ್ತಾನಕ್ಕೆ ಸೋಲಾದಾಗ ಕಣ್ಣೀರಿಟ್ಟವರಿಲ್ಲ ಇಲ್ಲವೇನು? ಪಾಕಿಸ್ತಾನ ಗೆದ್ದಿತೆಂದಾಗ ಮಿಠಾಯಿ ಹಂಚಿದವರು ಇಲ್ಲ ಇಲ್ಲವೇನ? ಪಾಕಿಸ್ತಾನಕ್ಕೆ ಸಹಾಯ ಮಾಡಲು ಅವರು ಪ್ರಯತ್ನ ನಡೆಸಿಲ್ಲವೇನು? ಚೈನಾದ ವಿಷಯದಲ್ಲೂ ಹಾಗೆನೇ! ಚೈನಾ ಆಕ್ರಮಣ ನಡೆಸಿದಾಗ ಅದು ಆಕ್ರಮಣ ನಡೆಸುವುದಿಲ್ಲ, ಭಾರತನೇ ಆಕ್ರಮಣ ಪಡಿಸಿದೆಯೆಂದು ಪ್ರಚಾರ ಮಾಡಿರುವವರು ಇಂದೂ ಇಲ್ಲ ಇಲ್ಲವೇನು? ಬಂಡವಾಳಶಾಹಿಗಳ ಬಂಧನದಿಂದ ಭಾರತೀಯರನ್ನು ಬಿಡಿಸಿ ತಾವುಗೊಳಿಸಲು ಮಾನವ ಮಹಾಕೇಸರಿ ಬರುತ್ತಿರುವುದಾಗಿ ಪ್ರಚಾರ ನಡೆಸಿ, ಮಾನವ ಚಿತ್ರಗಳನ್ನು ಹಂಚಿದವರು ಇಲ್ಲ ಇಲ್ಲವೇನು? ಇದರಿಂದ ಸ್ಪಷ್ಟವಾಗುವ ವಿಷಯವೆಂದರೆ ಸ್ವಾರ್ಥದೆದುರು ಧಾರ್ಮಿಕ ಮನೋಭಾವನೆ ಕೂಡಾ ಮಣ್ಣಾ ಮಂಕ ಬೇಕಾಗುತ್ತದೆ. ಜಯಚಂದರಂಗಳ ಸ್ವಾರ್ಥದ ಪರಿಣಾಮವಾಗಿ ತಾನೇ ತಾನಿಂದೂ ಒಂದಲ್ಲ ಇನ್ನೊಂದು ರೀತಿಯ ದಾಸ್ಯತೆಯ ರೋಗದಲ್ಲಿ ನರಳುತ್ತಿರುವುದು?

ಆಕ್ರಮಣದ ಸಮಯ ಉಂಟಾದ ಒಗ್ಗಟ್ಟು ಕೇವಲ ಪ್ರಜೆಕ ಬ್ರಿಟಿಷರ, ಮಂತರ ಪ್ರಾಚ್ಯರೋಗದ ಪೈಶಾಚಿಕ ದಮನ ಕಳೆಕೆ ಸಡಿಯುತ್ತಿದ್ದಾಗ ಭಾರತೀಯರು ಪರಸ್ಪರ ಭೇದಭಾವನ್ನು ಬದಿಗೊತ್ತಿ ಇಂಡಿಯನ್ ನೇಶನಲ್ ಆಫ್ ಕ್ರಿಸ್ತಿಯ ಧ್ವಜದಡಿ ಒಂದಾದರು. ಸ್ವಾತಂತ್ರ್ಯ ಸಿಕ್ಕಿ ಮೂವತ್ತು ಅಧಿಕಾರಕ್ಕೆ ಬಂದಾಗ ಕ್ರೈಸ್ತ ಕಳಚಿ ಹಾಕಿಕೊಳ್ಳಲಿಲ್ಲವೇನು? ಚೈನೀ ಪಾಕ್ ಆಕ್ರಮಣದ ಸಮಯ ಒಗ್ಗಟ್ಟು ಬಂದುಬಿಟ್ಟಿದೆಯೆಂದು ನೇತಾರಗಳು ನುಡಿದರು! ಪಾಕ್ ಸೈನಿ ಚೈನಿ ಫೇಲಾಗಳ ವಿಷಯ ಬಿಟ್ಟರೂ, ಉಳಿದೆಲ್ಲ ಭಾರತೀಯರು ಅಗ ಒಂದಾಗಿ ಬಿಟ್ಟರೇನು? ಅನ್ನಾಮಿನ್ನ ನಡೆದ ದೇನು? ನೇಫಾದಲ್ಲಿ ನಡೆದುದೇನು? ಸರಿ, ಈಗ ಅವರೂ ಭಾರತೀಯರು ಒಂದಾಗಿದ್ದಾರೇನ? ಭಾರತ ಒಂದು ದೇಶ, ನಾವೆಲ್ಲರೂ ಭಾರತೀಯರೆನ್ನಲು ಇಲ್ಲಿಯ ಜನರು — ಈ ದೇಶದ ನೀರು ಕುಡಿದು, ಅನ್ನ ತಿಂದು ಗಾಳಿ ಸೇವಿಸುತ್ತಿರುವ ಜನರು—ಸಿದ್ಧವಾಗಿದ್ದಾರೇನ?

ಆಕ್ರಮಣ ಘಟನೆಯಲ್ಲಿ ಮೈತ್ರಿಯು ಹುಟ್ಟಿಳಿತ್ತದೆಂದು ಭ್ರಾಂತಿಯಿಂದ ಬಾಯಿ ತೆರೆದಿದ್ದವರ ಮನಸ್ಸಾಗಾಮವಾಗಿ ಇಂದು ಬಿಕ್ಕಟ್ಟಿನ ರೋಗ ಬಡತ್ತಿರುತ್ತದೆ. ಕೆಲಜನರಿಗೆ ಕೋಪ ಬರುತ್ತದೆಂಬ ಭ್ರಮೆ ಗೊಳಗಾಗಿ ಪವಮಾನ್ಯ ನಿರ್ಮಾಣದ ದಾರಿಯಾಗನ್ನು ಕಾಣುವದರಿಂದಲೂ ಪ್ರಯೋಜನವಿಲ್ಲ. ಬೇಕಾದರೆ ಉಳಿದ ಜಗತ್ತೇ ಜನ್ಮನೆದ್ದು ಬರಲಿ—ಭಾರತವನ್ನು ಬಡಿದ ಮಟ್ಟಿನೆಂದು. ಭಾರತೀಯರು ಭಯಪಡಬೇಕಾಗಿರುವದಿಲ್ಲ. ಹಿಮಾಲಯದ ತುದಿಯಲ್ಲಿ ಶಿವನೂ, ಕಡಲ ತಡಿಯಲ್ಲಿ ಪಾರ್ವತಿಯೂ ಒಟ್ಟಿರೆದು ನಮಗೆ ಹೇಳುತ್ತಿದ್ದಾರೆ, ಈ ದೇಶದ

[ಎಂಟನೇ ಪುಟ ನೋಡಿರಿ]

ಉಳಿತಾಯದ ಅಣೆಕಟ್ಟು

ಹರಿಯುವ ನೀರು ತೊರೆಯಾಗಿ, ಹೊಳೆಯಾಗಿ ದಾರಿಯಂಟು ಸಾಗುವಾಗ ಅಲ್ಲಲ್ಲಿ ಕವಲೆಡೆದು ಬಂಜರು ನೆಲ, ಮರಳುಭೂಮಿ ಶಿಲಾಮಯ ಪ್ರದೇಶಗಳಲ್ಲಿ ಹರಿದು ನೀರಿನ ಅಪವ್ಯಯವಾಗುತ್ತದೆ. ನೀರಿನ ಅನಾವ್ಯಯವನ್ನು ತಡೆಹಿಡಿಯಲು ಅಣೆಕಟ್ಟನ್ನು ಹಾಕಿ, ನೀರನ್ನು ಶೇಖರಿಸಿ, ಅವಶ್ಯಕ ಸಂದರ್ಭದಲ್ಲಿ ವ್ಯವಸಾಯ ಶಕ್ತಿಸ್ನಿಹಿತ ಉಪಯುಕ್ತಕರ ಉದ್ದೇಶಕ್ಕಾಗಿ ನೀರು ದೊರೆಯುವಂತೆ ಮಾಡುತ್ತಾರೆ.

ನಿಮ್ಮ ಆದಾಯವು ಸಾಮಾನ್ಯವಾಗಿ ಒಂದೇ ದಾರಿಯಿಂದ ಹರಿದು ಬರುತ್ತದೆ. ಆದನ್ನು ವೆಚ್ಚಮಾಡಲು ಇರುವ ದಾರಿಗಳು ನೂರು. ಹಣದ ಅನಾವ್ಯಯವನ್ನು ತಡೆಹಿಡಿದು, ಅದನ್ನು ಉಪಯುಕ್ತ ಮಾರ್ಗದಲ್ಲಿ ಬಳಸಲು ಹೊಳೆಗೆ ಅಣೆಕಟ್ಟನ್ನು ಹಾಕಿದಂತೆ ನಿಮ್ಮ ಖರ್ಚಿನ ದಾರಿಗೆ ಒಂದು ಕಟ್ಟನ್ನು ಹಾಕಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನೀವು ತೆರೆದ ಉಳಿತಾಯ ಖಾತೆಯೇ ನಿಮ್ಮ ವ್ಯಯದ ದಾರಿಗೆ ಹಾಕಿದ ಅಣೆಕಟ್ಟು. ಹಣ ನಿಮ್ಮ ಖಾತೆಯಲ್ಲಿ ಜಮೆಯಾಗಿ, ಕ್ರಮೇಣ ಅದು ಬೆಳೆದು, ಅವಶ್ಯಕ ಬಿದ್ದಾಗ ಉಪಯುಕ್ತವಾಗುವದಲ್ಲಿ ಅದನ್ನು ಬಳಸಬಹುದು.

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು.	ಶಾಖೆಗಳು.	ಟಿ. ಎ. ಪೈ,
ರೂ. 100 ಕೋಟಿಗೂ ಮೀಕ್ಕಿ.	330ಕ್ಕೂ ಮೀಕ್ಕಿ	ಚೆಯರ್‌ಮೇನ್

ಜಿಜ್ಞಾಸೆ

ನೇತಾಜಿ ಸುಭಾಶ್ಚಂದ್ರ ಬೋಸರು ಬದುಕಿದ್ದಾರೆ?

ಲೇಖಕರು: ಶ್ರೀ ಪಂಡಿತ್‌ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ಭಾರತ ದೇಶದ ಸ್ವಾತಂತ್ರ್ಯ ಸಮರವು ಎಷ್ಟು ರಭಸದಿಂದ ನಡೆದಿತ್ತೋ ಅದರ ಹಿನ್ನೆಲೆಯ ಅದೆಷ್ಟೋ ವಾಸ್ತವಿಕ ಅಂಶವು ಇನ್ನೂ ಬೆಳಕಿಗೆ ಬಾರದೆ ಉಳಿದಿದೆ. ಅವೆಲ್ಲವುಗಳನ್ನು ಆದಷ್ಟು ಬೇಗ ಕ್ರೋಢೀಕರಿಸದಿದ್ದರೆ ಭಾವೀ ಇತಿಹಾಸದಲ್ಲಿ ಅಂಕಿತವಾಗತಕ್ಕ ಸಹಸ್ರಾರು ಮಹತ್ವಪೂರ್ಣ ವಾಸ್ತವಲೆಗಳು ಅದೃಶ್ಯವಾಗುವವು.

ಸ್ವಾತಂತ್ರ್ಯ ಸಮರದ ಕಾಲದಲ್ಲಿದ್ದವರಲ್ಲಿ ಅನೇಕರು ಇಂದಿಗೂ ಜೀವಂತ ಇದ್ದಾರೆ, ಆದರೆ ಅವರೆಲ್ಲರೂ ಬಹಳ ವೃದ್ಧಾಪ್ಯಕ್ಕೊಳಗಾಗಿದ್ದಾರೆ. ಭಾರತೀಯ ಸ್ವಾತಂತ್ರ್ಯ ಯುದ್ಧದಲ್ಲಿ, ಬರ್ಮ, ಸಿಂಗಾಪುರ, ಸಯಾಮ ಮತ್ತು ಮಲಯಾ ಈ ದೇಶಗಳನ್ನು ನೆಲೆಸಿದ್ದ ಭಾರತೀಯರು ತಮ್ಮ ಮನಧನವನ್ನರ್ಪಿಸುವುದರಲ್ಲಿ ಅದಮ್ಯ ಉತ್ಸಾಹದಿಂದ ಸೆರೆವಾಗಿರುವುದಾರೆ. ಭಾರತೀಯರ ಕಣ್ಣಡೆ ನೇತಾಜಿ ಸುಭಾಶ್ಚಂದ್ರ ಬೋಸರು ಇಂದಿಗೆ ನಮ್ಮ ಮುಂದಿಲ್ಲ; ಅವರ ಅಗಲುವಿಕೆಯು ಈ ತನಕ ಬಿಡಿಸಲಾರದ ಸವಾಲಾಗಿ ಉಳಿದಿದೆ. ಮಹಾತ್ಮಾ ಗಾಂಧಿಯವರ ಕೊಲೆ ಮೊಕದ್ದಮೆ ನ್ಯಾಯಾಲಯದಲ್ಲಿ ವಿಚಾರಣೆಗೊಳಪಟ್ಟುಕೊಲೆಯಾತಕರೆಗೆ ಮರಣ ದಂಡನೆಯೂ, ಅತನ ಸಹೋದ್ಯೋಗಿಗಳಿಗೆ ಯಥಾಯೋಗ್ಯ ಶಿಕ್ಷೆಯೂ ವಿಧಿಸಲ್ಪಟ್ಟು ಆ ಪ್ರಕರಣ ಸಂಪೂರ್ಣ ಕೊನೆಗೊಂಡರೂ ಕೂಡ ಆ ಕೊಲೆ ಪ್ರಕರಣವನ್ನು ಪುನಃ ವಿಚಾರಣೆ ಗೈಯಲು ಭಾರತ ಸರಕಾರ ಸಿದ್ಧವಾಯಿತ್ತಿದೆ! ಆದರೆ? ನೇತಾಜಿಯವರ ಮರಣದ ಅನಿಶ್ಚಿತ ಪ್ರಕರಣವನ್ನು ಕ್ರಮಬದ್ಧವಾಗಿ ಸಂಶೋಧನೆ ಮಾಡಿ ಸತ್ಯ ಸ್ಥಿತಿಯನ್ನು ರಾಷ್ಟ್ರದ ಮುಂದಿಡಲು ಸರಕಾರ ಶಿಲ್ಕಕ್ಷ್ಯದಿಂದಿರುವುದು ಆಶ್ಚರ್ಯಕರವಲ್ಲವೇ?

ಭಾರತದ ಸ್ವಾತಂತ್ರ್ಯಯುದ್ಧ ಬಹು ಕಾಲದಿಂದ ಬಿದ್ದು, ಎದ್ದು, ಕುಂಟುತ್ತಾ ಎಡೆಬಿಡದೆ ಸಾಗುತ್ತಿದ್ದರೂ ನೇತಾಜಿ ಸುಭಾಶ್ಚಂದ್ರ ಬೋಸರ ಧೀರೋದಾತ್ತ ನೇತೃತ್ವ ದೊರೆತಾಗಲೇ ಈ ಅಂದೋಲನ ಅತಿ ರಭಸದಿಂದ ಮುಂದೆ ಧಾವಿಸಿತು. ನೇತಾಜಿಯವರ ಆಹ್ವಾನಕ್ಕೆ ಓಗೊಟ್ಟು ಭಾರತೀಯ ಮಹಿಳೆಯರೂ ದೇಶದ ಒಳಗೂ ಹೊರಗೂ ಸಮರಾಂಗಣಕ್ಕಳಿದರು. ಭಾರತದಿಂದ ಬ್ರಿಟಿಷರನ್ನು ಹೊಡೆದೋಡಿಸಲು ಕಾಲಕಾಲದಲ್ಲಿ ಸಶಸ್ತ್ರ ಕ್ರಾಂತಿ ಮೂಲಕ ಹೋರಾಡಿ ಸರಕಾರದಿಂದ ದಕ್ಷಿಣಾರು ನಾಡಲ್ಪಟ್ಟ ಅಸಂಖ್ಯಾತ ಭಾರತ ವೀರರು ವಿದೇಶದ ನಾನಾ ಪ್ರಾಂತ್ಯದಲ್ಲಿ ನೆಲೆಸಿದ್ದವರಲ್ಲಿ ಕೂಡ ತವ್ಯ ಸ್ವಾತಂತ್ರ್ಯಕಾಂಕ್ಷೆಯು ನೇತಾಜಿಯವರ ನೇತೃತ್ವದಿಂದ ನೆರವೇರುವುದೆಂಬ ಪೂರ್ಣ ವಿಶ್ವಾಸವುಂಟಾಯಿತು. "ಆಜಾದ್ ಹಿಂದ್ ಸೇನೆ"ಯ ರಚನೆದ ಮುನ್ನಡೆಯು ಭಾರತದ ಸ್ವಾತಂತ್ರ್ಯದ ಹೆಬ್ಬಾಗಿಲಿಗೆ ಅತಿ ಸಮೀಪವರ್ತಿಯಾಗಿತ್ತು. ಪರಂತು 'ಹಿರೋಶಿಮಾ', 'ನಾಗಸಾಕಿ' ಮೇಲೆ ಬಿದ್ದ 'ಏಟಂಬಾಂಬು' ಜಪಾನರ ಬಾಹುಬಲವನ್ನು ಮುರಿದು ಬಿಟ್ಟಿತು! ಆ ಮಹಾ ದುರಂತದಿಂದಾಗಿ ಆಜಾದ್ ಹಿಂದ್ ಸೇನೆಗೆ ತನ್ನ ಮುಂದಿನ ಪಥವನ್ನು ಅಭಿವಾರ್ಯವಾಗಿ ಬದಲಾಯಿಸಬೇಕಾಯಿತು. ನೇತಾಜಿಯವರನ್ನು ಟೋಕಿಯೋಗೆ ಕರಕೊಂಡು ಅಂದು ಹೊರಟ ವಿಮಾನವು "ಫಾರ್ಮೋಸಾ"ದಲ್ಲಿ ಅಪಘಾತಕ್ಕೀಡಾಯಿತೆಂದು ಜಪಾನರು ಅಭಿಸ್ರಾಯಪಡುತ್ತಾರೆ. ಆದರೆ ಈ ಕುರಿತು ಭಿನ್ನಭಿನ್ನ ಅಭಿಪ್ರಾಯಗಳು ಇಂದಿಗೂ ಪ್ರಚಲಿತವಾಗಿವೆ. ವಿಮಾನವು ಸಿಂಗಾಪುರದಿಂದ ಹೊರಟು 'ಫಾರ್ಮೋಸಾ'ದ ಮೂಲಕ 'ಟೋಕಿಯೋ'ಗೆ ಹೋಗುತಿತ್ತೆಂದು ಕೆಲವರ ಅಂಬೋಣ; ಸಂಗೂನ್‌ನಿಂದ ಟೋಕಿಯೋಗೆ ಹೋಗುವಾಗ ಫಾರ್ಮೋಸಾದಲ್ಲಿ ಈ ದುರ್ಘಟನೆ ನಡೆಯಿತೆಂದು ಇನ್ನೊಂದು ಸಂಗಡದವರ ಅಭಿಪ್ರಾಯ. ಆದರೆ ಬೇಂಕಾಕ್‌ನಲ್ಲಿ "ಥಾಯ್-ಭಾರತ್" ಲಾಜನ ಪ್ರಧಾನ ಕಾರ್ಯದರ್ಶಿ ಪಂಡಿತ್ ರಘುನಾಥ ಶರ್ಮರಿಂದ ಈ ಕುರಿತಾಗಿ ಹೆಚ್ಚಿನ ದಾಖಲೆಗಳು ಯಾವುದೂ ದೊರಕಿರುವುದಿಲ್ಲ!

ಬೇಂಕಾಕ್‌ನಿಂದ ವಿಮಾನ ಫಾರ್ಮೋಸಾದ ಮೂಲಕ ಟೋಕಿಯೋಗೆ ಹೋಗುತ್ತಿತ್ತು; ವಿಮಾನನಿಲ್ದಾಣದಲ್ಲಿ ಶ್ರೀ ಶರ್ಮಾಜಿ ಜೊತೆಯಲ್ಲಿ ನೂರಾರು ಮಂದಿ ಭಾರತೀಯರು ನೇತಾಜಿಯವರನ್ನು ಬೀಳ್ಕೊಡುವುದಕ್ಕಾಗಿ ನೆರೆದಿದ್ದರು. ವಿಮಾನ ನಿಲ್ದಾಣದಲ್ಲಿದ್ದ "ಥಾಯ್-ಭಾರತ್" ಲಾಜ್‌ನ ಸಂದರ್ಶಕರ ಪುಸ್ತಕದಲ್ಲಿ ಸಹ ನೇತಾಜಿಯವರು ತನ್ನ ಪೆನ್ಸಿಲಿನಿಂದಲೇ ಕೆಲವು ವಾಕ್ಯಗಳನ್ನು ಬರೆದು ಹಸ್ತಾಕ್ಷರ ಮಾಡಿರುತ್ತಾರೆ. ಆ ಪುಸ್ತಕ ಈ ವರೆಗೂ ಆ ಲಾಜ್‌ನವರ ವಶ ಸುರಕ್ಷಿತವಾಗಿದೆ. ಈ ವಿಮಾನವೇ ಫಾರ್ಮೋಸಾದ ಪ್ರಮುಖ ನಗರ ಥೈಪೈಯೆಯ (ಥಾಯ್‌ಪೈ) ಯ ಒಂದು ಪರ್ವತ ದಿಣ್ಣೆಗೆ ಅಪ್ಪಳಿಸಿ ಬಿದ್ದುಹೋಯಿತು ಎಂದು ಜಪಾನರ ವರದಿಯಲ್ಲಿ ಕಂಡುಬರುತ್ತದೆ.

ಆ ಸ್ಥಳದಲ್ಲಿ ಇತ್ತೀಚೆಗೆ ಥಾಯ್‌ವಾನ್ ಸರಕಾರ ಒಂದು ಭವ್ಯವಾದ ಪ್ರವಾಸಿಹೋಟೆಲನ್ನು ಕಟ್ಟಿಸಿರುತ್ತದೆ. ಇದರ ಸುತ್ತಮುತ್ತಲಿರುವ ಜನರಲ್ಲಿ ವಿಮಾನ ದುರ್ಘಟನೆಯ ಕುರಿತು ವಿಚಾರಿಸಿದಾಗ ಒಬ್ಬನೂ ಅದನ್ನು ಸಮರ್ಥಿಸಲಿಲ್ಲ. ಈ ಕುರಿತು ಥಾಯ್‌ವಾನ್ ಸರಕಾರ ಸಹ ನಿಶ್ಚಿತ ಅಭಿಪ್ರಾಯವನ್ನೀಯಲಿಲ್ಲ. "ನೇತಾಜಿಯವರ ವಿಮಾನ ಅಪಘಾತದ ಶೋಧನೆಗಾಗಿ ಭಾರತ ಸರಕಾರ ನೇಮಿಸಿದ 'ಸಂಶೋಧನ ಸಮಿತಿ'ಯು ಅಪಘಾತ ನಡೆದ ಸ್ಥಳಕ್ಕೆ ಏತಕ್ಕೆ ಬರಲಿಲ್ಲ?" ಎಂಬುದಾಗಿ ಥಾಯ್‌ವಾನ್ ಅಧಿಕಾರಿಗಳು ಆಶ್ಚರ್ಯವ್ಯಕ್ತಪಡಿಸಿದರು. ಜಪಾನರು ಸಹ ಶೋಧಕ ತಂಡವನ್ನು ಆ ಸ್ಥಳಕ್ಕೆ ಈ ವರೆಗೆ ಕಳುಹಿಸಲಿಲ್ಲ.

ಆದರೆ ಈ ರಹಸ್ಯ ದುರ್ಘಟನೆಯ ಅಂತರಾಳವನ್ನು ಸಂಪೂರ್ಣವಾಗಿ ನೋಡಲು ಇದೇ ಸುದ್ದಿದ ನೆಲೆಲಿ ಸಂಭವಿಸಿರುವ ಇನ್ನೊಂದು ವಿಮಾನ ಅಪಘಾತದ ವಿಷಯವನ್ನು ವಿಸ್ತಾರವಾಗಿ ಅರಿತುಕೊಳ್ಳುವುದು ಅವಶ್ಯಕ. ನೇತಾಜಿಯವರು ಕಣ್ಮರೆಯಾದುವ ಎರಡು ವರ್ಷಕ್ಕೆ ಮೊದಲು ಅದೇ ಸುದ್ದಿದಲ್ಲಿ ಅಪಘಾತ ಸಂಭವಿಸಿರುವ ವಿಮಾನದಲ್ಲಿ ನೇತಾಜಿಯವರ ಅಪಯಾಯಗಳಲ್ಲಿ ಪ್ರಮುಖರು ನಾಲ್ಕು ಮಂದಿ ಮಾತ್ರ ಟೋಕಿಯೋಗೆ ಹೋಗುತಿದ್ದರು. ವಿಶ್ವಕವಿ ರವೀಂದ್ರನಾಥ ಠಾಕೂರರು ೧೯೩೭ರಲ್ಲಿ ಸಯಾಮಿನ ಮಹಾರಾಜ "ಪ್ರಜಾಧಿಪ"ರ ವಿನಂತಿ ಮೇರೆಗೆ, ಸಯಾಮ್ ಮತ್ತು ಭಾರತ ದೇಶಗಳೊಳಗೆ ಪರಸ್ಪರ ಬಾಂಧವ್ಯ ವೃದ್ಧಿಮಾಡಿ ಕೊಳ್ಳುವ ಸಲುವಾಗಿ "ಪ್ರಫುಲ್ಲ ಕುಮಾರ್ ಸೇಖ್" ಎಂಬವರನ್ನು ಕಲ್ಕತ್ತೆಯಿಂದ ಸಯಾಮಿಗೆ ಕಳಹಿಸಿಕೊಟ್ಟಿದ್ದರು. ಇವರು ಅಲ್ಲಿ "ಥಾಯ್" ಭಾಷೆಯಲ್ಲಿ ಪ್ರವೀಣರಾಗಿ ಸಮಗ್ರ ಜನತೆಯ ಅಚ್ಚು ಮೆಚ್ಚಿನ ಮುಖಂಡರಾದರು ರಾಜಕೀಯ-ಧಾರ್ಮಿಕ-ಸಾಂಸ್ಕೃತಿಕ ಮೊದಲಾದ ಎಲ್ಲಾ ಕ್ಷೇತ್ರಗಳಲ್ಲಿ ದುಡಿದು ಅಲ್ಲಿ ಭಾರತದ ಸಾಂಸ್ಕೃತಿಕ ಗೌರವವನ್ನು ಸರ್ವತ್ರ ಪ್ರಜ್ವರಗೊಳಿಸಿದರು. ತನ್ನ ಜೀವಮಾನ ಎಲ್ಲಾ ಜನತಾ ಸೇವೆಗಾಗಿಯೇ ವಿನಿಯೋಗಿಸಲು ಇವರು ಕೊನೆಗೆ ಸನ್ಯಾಸ ಸ್ವೀಕರಿಸಿ "ಸ್ವಾಮಿ ಸತ್ಯಾನಂದ ಪುರಿ' ಎಂಬ ಹೆಸರು ಪಡೆದರು. ಅಲ್ಲಿದು ಮೂಲ ಧಾರ್ಮಿ-ರಾಜ ಪರಿವಾರದಲ್ಲಿ ಇವರ ಪ್ರಭಾವ ವಿಶೇಷವಾಗಿತ್ತು. ಸ್ವಾಮಿ ಸತ್ಯಾನಂದರು ಅಲ್ಲಿ "ನಮಸ್ತೆ" ಶಬ್ದಕ್ಕೆ ಬದಲಾಗಿ 'ಸ್ವಸ್ತಿ" ಎಂಬ ಪದವನ್ನು ಅಭಿವಾದನಕ್ಕೆ ರೂಢಿಗುಳ್ಳಿ ತಂದರು.

ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಸೈನ್ಯ ಬೇಂಕಾಕ್‌ಗೆ ಬಂತು. ಆಗ ಅದರ ಕಮಾಂಡರ್ ಅಲ್ಲಿದ್ದ ಭಾರತೀಯರ ಪ್ರಮುಖರನ್ನು ಕರೆಸಿ "ಭಾರತೀಯರ ಸಮಸ್ಯೆ ಕುರಿತು ಜಪಾನ್ ಸರಕಾರಕ್ಕೆ ಅಗತ್ಯ ಬಿದ್ದಾಗಲೆಲ್ಲಾ ತಿಳಿಯುವ ಸಲುವಾಗಿ ಒಬ್ಬ ಪ್ರತಿನಿಧಿಯನ್ನು ನಿಯುಕ್ತಗೊಳಿಸಿರಿ" ಎಂದು ಹೇಳಿದಾಗ ಅಲ್ಲಿದ್ದವರೆಲ್ಲರೂ "ಶ್ರೀ ಸ್ವಾಮಿ ಸತ್ಯಾನಂದ"ರನ್ನೇ ಆಯ್ಕೆಯಾಯಿಸಿದರು. ಆ ಸಂದರ್ಭದಲ್ಲಿ ನೇತಾಜಿ ಸುಭಾಶ್ಚಂದ್ರ ಬೋಸರು ಜರ್ಮನಿಯಲ್ಲಿ ಹಿಟ್ಲರನ ಸಂಪರ್ಕದಲ್ಲಿದ್ದರು, ಬೇಂಕಾಕ್‌ನಲ್ಲಿದ್ದ ಜರ್ಮನ್ ದೂತಾವಾಸದ 'ಮ್ಯೂಲರ್' ಎಂಬ ಅಧಿಕಾರಿಯ ಮಧ್ಯಸ್ಥಿಕೆ ಮೂಲಕ ಸ್ವಾಮಿ ಸತ್ಯಾನಂದ ಮತ್ತು ನೇತಾಜಿಯವರೊಳಗೆ ಮಹತ್ವದ ಪತ್ರವ್ಯವಹಾರಗಳು ಎಡೆಬಿಡದೆ ನಡೆಯುತಿದ್ದವು. ಸ್ವಾಮಿ ಸತ್ಯಾನಂದಜಿ ಮತ್ತು ನೇತಾಜಿ ಒಬ್ಬರಿಗೊಬ್ಬರು ಬಹಳ ದೂರವಿದ್ದರೂ ಪ್ರಬಲವಾದ ಒಂದು ಮಹಾ ಆಂದೋಲನಕ್ಕೆ ಭದ್ರವಾದ ಅಸ್ತಿವಾರ ಸಿದ್ಧಗೊಳಿಸುವುದರಲ್ಲಿ ನಿರತರಾಗಿದ್ದರು.

ಅತ್ತ ಬ್ರಿಟಿಷ್ ಸೇನೆಯಲ್ಲಿದ್ದ ಭಾರತೀಯ ಸೈನಿಕರು ಬ್ರಿಟಿಷರಿಗೆ ಎದುರು ಧಿಂತು "ಆಜಾದ್ ಹಿಂದ್ ಸೇನೆ"ಯನ್ನು ಸ್ಥಾಪಿಸಿದರು. ಸೇನಾಧಿಪತಿ ಪ್ರತ್ಯೆ ಮುಂದಿತ್ತು ಸಮಗ್ರ ಸೇನೆಗೆ ಮಹಾ ಸಮರ್ಥ ಸೇನಾಧಿಪತಿಯನ್ನು ಪಡೆಯುವ ಸಲುವಾಗಿಯೇ ೧೯೪೭ರಲ್ಲಿ ಟೋಕಿಯೋದಲ್ಲಿ "ಸಮಗ್ರ ಆಸ್ಯಾ ಖಂಡದ ಪ್ರಥಮ ಮಹಾ ಪಂಚತ್ತು" ಜರಗಿತು. ಜಪಾನಿನಿಂದ ಶ್ರೀ ದೇವನಾಥದಾಸರು ಬೇಂಕಾಕ್‌ಗೆಬಂದರು; ಇವರ ನೇತೃತ್ವದಲ್ಲಿ "ಇಂಡಿಯನ್ ನೇಷನಲ್ ಕೌನ್ಸಿಲ್" ಸ್ಥಾಪನೆಯಾಯಿತು. ಸ್ವಾಮಿ ಸತ್ಯಾನಂದರೇ ಇದರ ಪ್ರಧಾನ ಕಾರ್ಯದರ್ಶಿಗಳಾದರು. ಟೋಕಿಯೋದಲ್ಲಿ ಜರಗಿದ ಇತಿಹಾಸ ಪ್ರಸಿದ್ಧ ಕಾನ್ಫರೆನ್ಸಿನಲ್ಲಿ ಸಮ್ಮಿಳಿತರಾಗುವ ಮೊದಲು ಸಿಂಗಾಪುರದಲ್ಲಿ ನಾಲ್ಕು ಮಂದಿ ಪ್ರಮುಖ ಭಾರತೀಯರ ಸಮಾಲೋಚನಾ ಸಭೆಯೊಂದು ಜರಗಿತು.

ಇದರಲ್ಲಿ ಸ್ವಾಮಿ ಸತ್ಯಾನಂದ, ಮಲಯಾದಲ್ಲಿನ ಶ್ರೀ ನೀಲಕಂಠ ನಾಯರ್, ಸಿಂಗಾಪುರದ ಗ್ಯಾನಿ ಪ್ರೀತಮ್ ಸಿಂಗ್ ಮತ್ತು ಭಾರತೀಯ ಸೇನೆಯ ಕೇಪ್ಟನ್ ಅಕ್ಬರ್ ಖಾನ್ ಇವರುಗಳು ಪ್ರತಿನಿಧಿಗಳಾಗಿ ಭಾಗವಹಿಸಿದರು. ಇವರು ಸೇರಿ ಟೋಕಿಯೋದಲ್ಲಿ ಸ್ವಾತಂತ್ರ್ಯ ಪ್ರೇಮಿ ಭಾರತೀಯ ಸೇನೆಯ ಪ್ರಧಾನ ನೇತೃತ್ವವನ್ನು ವಹಿಸುವಂತೆ ನೇತಾಜಿಯವರನ್ನೇ ಒತ್ತಾಯಪೂರ್ವಕ ಕೇಳಿಕೊಳ್ಳಬೇಕು

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು 3.

Phone— 5711
5712 } 3 Lines.
5713

ಎಂಬುದಾಗಿ ಮೊದಲೇ ಘೋಷಿಸಿ ಕೊಂಡರು. ಆದರೆ ಇದು ಜಪಾನರಿಗೆ ಸರಿಯೋಗಲಿಲ್ಲ; ಜಪಾನ್ ಸರಕಾರ ಸುಪ್ರಸಿದ್ಧ ಕ್ರಾಂತಿಕಾರಿ ಶ್ರೀ ರಾಸ್ಬಿಹಾರಿ ಬೋಸರವರನ್ನೇ ಆ ಪದಕ್ಕೇರಿಸ ಬಯಸಿತ್ತು. ರಾಸ್ಬಿಹಾರಿ ಬೋಸ್ ಮತ್ತು ಸುಭಾಷ್ಚಂದ್ರ ಬೋಸ್‌ರೊಳಗೆ ಒಂದು ಮತಭೇದ ವಿದ್ದುದು ಸೈನಿಕರಿಗೆ ತಿಳಿದು ಬಂತು; ಬ್ರಿಟಿಷರನ್ನು ಭಾರತದಿಂದ ತೊಲಗಿಸುವ ಸಂಗ್ರಾಮದಲ್ಲಿ ಭಾರತೀಯರ ಶಕ್ತಿ-ಸಾಮರ್ಥ್ಯ-ಸಾಧನಗಳನ್ನೇ ಉಪಯೋಗಿಸಿ ಕೊಳ್ಳಬೇಕೆಂಬುದು ನೇತಾಜಿಯವರ ನಿಷ್ಠೆಯಾಗಿತ್ತು; ಈ ಕಾರ್ಯದಲ್ಲಿ ಅಗತ್ಯ ಬಿದ್ದರೆ ಜಪಾನ್ ಸರಕಾರದ ಸಹಾಯವನ್ನು ಪಡೆಯಬೇಕು ಎಂಬುದು ರಾಸ್ಬಿಹಾರಿ ಬೋಸರ ಅಭಿಪ್ರಾಯವಿತ್ತು. ಮೇಲೆ ಹೇಳಿದ ನಾಲ್ಕೈದು ಮಂದಿ (ಹೋಕೆಯೋ ಸರಿಷತ್ತಿನಲ್ಲಿ ಭಾಗವಹಿಸಲಿಕ್ಕೆ) ಸಿಂಗಾಪುರದಿಂದ ಸೈಗಾನಿನ ಮೂಲಕ ವಿಮಾನದಲ್ಲಿ ಹೊರಟರು. ಇವರು ಹೊರಟ ಕೆಲವೇ ಘಂಟೆಗಳ ನಂತರ ಫಾರ್ಮೋಸಾದ ಥೈಪೈಯೆಯ್ ನಗರದ ಬಳಿ ಪರ್ವತಗಳ ಮಧ್ಯೆ ಒಂದು ವಿಮಾನ ಅಪಘಾತಕ್ಕೀಡಾಗಿ ಅದರಲ್ಲಿದ್ದ ನಾಲ್ಕು ಮಂದಿ ಮತ್ತು ಸ್ವಾಮಿ ಸತ್ಯಾನಂದರು ಸಹ ಮೃತಪಟ್ಟರು ಎಂಬ ಸಮಾಚಾರ ಪಲ್ಲಿಸಿತು. ಈ ಅಪಘಾತದಲ್ಲಿ ಶ್ರೀ ಸತ್ಯಾನಂದ ಪುರಿಯವರು ಮೃತರಾದ ಸಮಾಚಾರ ತಿಳಿದ ಕೂಡಲೇ ಥಾಯ್ಲೇಂಡಿನ ಆಗಿನ ಪ್ರಧಾನ "ಶ್ರೀ ವಿಪುಲ್ ಸಂಗ್ರಾಮರು ಬಹಳ ದುಃಖಿತರಾಗಿ" ಮಹಾತ್ಮಾ ಬುದ್ಧನ ನಂತರ ಥಾಯ್ಲೆಂಡಿಗೆ ಇವರು ಭಾರತದಿಂದ ದಾನ ಸ್ವರೂಪದಲ್ಲಿದೊರಕಿದ್ದರ; ಇಂದಿಗೆ ನಮ್ಮಿಂದ ಕಿತ್ತುಕೊಳ್ಳಲ್ಪಟ್ಟರು ಎಂಬುದಾಗಿ ಪ್ರಕಟನೆ ಹೊರಡಿಸಿದರು.

೧೯೪೮ರ ಈ ವಿಮಾನ ಅಪಘಾತದ ನಂತರ ರಾಸ್ಬಿಹಾರಿಬೋಸರು ಬೇಂಕಾಕ್‌ಗೆ ತೆರಳಿದರು. ಅಲ್ಲಿ ಅವರ ಅಧ್ಯಕ್ಷತೆಯಲ್ಲಿ ಒಂದು ಮಹಾಸಭೆ ಜರಗಿತ. ಸ್ವಾಮಿಜಿಯವರ ಪ್ರಭಾವಕ್ಕೊಳಗಾಗಿದ್ದ ಅಧಿಕಾಂಶ ಭಾರತೀಯರು ರಾಸ್ಬಿಹಾರಿ ಬೋಸರನ್ನು ಸಮರ್ಥಿಸಲಿಲ್ಲ. ರಾಸ್ಬಿಹಾರಿ ಬೋಸರು ಕೇಪ್ಟನ್ ಮೋಹನ್ ಸಿಂಗ್‌ರನ್ನು ಆಜಾದ್ ಹಿಂದ್ ಸೇನೆಯ ಜನರಲ್ ಮತ್ತು ಸುಪ್ರೀಮ್ ಕಮಾಂಡರನ್ನಾಗಿ ನೇಮಿಸಿದ್ದರಿಂದ ಸ್ವಾತಂತ್ರ್ಯ ಪ್ರೇಮಿಗಳಾಗಿದ್ದ ಸಮಸ್ತ ಸೇನೆಯೊಳಗೆ ಅಸಮಾಧಾನ ಹರಡಿಕೊಂಡಿತು. ೧೯೪೫ರಲ್ಲಿ ಅನಿವಾರ್ಯವಾಗಿ ಜಪಾನರು, ನೇತಾಜಿಯವರೇ ಸೇನೆಯ ಪರಿಪೂರ್ಣ ಅಧಿಕಾರವನ್ನು ವಹಿಸಿಕೊಳ್ಳುವಂತೆ ಅವರಿಗೆ ಆಮಂತ್ರಣ ಕೊಡಬೇಕಾಯಿತು. ಸುಭಾಷ್ ಬಾಬುಗಳು ಟೋಕಿಯೋಗೆ ಹೋಗಿ ಅಲ್ಲಿ ಎಲ್ಲಾ ವಾತಾವರಣವನ್ನು ಅಧ್ಯಯನ ಮಾಡಿಕೊಂಡು ಅಲ್ಲಿಂದ ತತ್ಕಾಲಕ್ಕೆ ಸಿಂಗಾಪುರ ಮತ್ತು ಬೇಂಕಾಕ್ ಮೂಲಕ ರಂಗೂನಿಗೆ ತೆರಳಿದರು.

ನೇತಾಜಿಯವರ ನೇತೃತ್ವ ದೊರಕಿದುದರಿಂದ ಭಾರತೀಯರಲ್ಲಿ ಅಪಾರ ಉತ್ಸಾಹ ಉಂಟಾಯಿತು. ಇಲ್ಲಿಯೇ ನೇತಾಜಿಯವರು ಭಾರತ ಮಹಿಳೆಯರ ಸೇನಾ ವಿಭಾಗವೊಂದನ್ನು ಸ್ಥಾಪಿಸುವ ಪ್ರಸ್ತಾಪ ಮಾಡಿದ್ದರು. "ಈ ಯುದ್ಧದಲ್ಲಿ ನಮಗೆ ಸಂಪೂರ್ಣ ಬೆಂಬಲ ಕೊಡುವವರೆಲ್ಲರಿಗೆ ನಾವು ಅತ್ಯಂತ ಆಭಾರಿಯಾಗಿರುವೆವು; ಆದರೆ ಸೇನೆಯ ವರಿಷ್ಠ ಅಧಿಕಾರಿಯೇ ಇರಲಿ, ಅಥವಾ ಯಾರಿಂದಲೇ ಆಗಲಿ ಭಾರತೀಯ ಮಹಿಳೆಯರಿಗೆ ಒಂದಿಷ್ಟು ಅಸಮಾನ, ಅಗೌರವ ಉಂಟಾದರೆ ಅಂತಹ ವ್ಯಕ್ತಿಯನ್ನು ಮುಂಡಿಕ್ಕಿ ಕೊಲ್ಲಲು ನನ್ನ ಸೈನಿಕರಿಗೆ ಕೂಡಲೇ ಆಜ್ಞಾಪಿಸುವೆನು! ಭಾರತೀಯ ಸೇನೆಯ ಯಾವನಾದರೊಬ್ಬ ಸೈನಿಕನು ಕರ್ತವ್ಯ ಬಾಹಿರನಾದರೆ ಅವನನ್ನು ನನ್ನ ಕೈಯಿಂದಲೇ ಗುಂಡಿಗೀಡುಮಾಡುವೆನು" ಎಂಬುದಾಗಿ ಗಂಭೀರವದನರಾಗಿ ಘೋಷಣೆಮಾಡಿದರು. ಸಹಸ್ರಾರು ಭಾರತೀಯ ಯುವತಿಯರು "ಝಾನ್ಸಿ ರಾಣಿ ಬ್ರಿಗೇಡ್" ನಲ್ಲಿ ಸೈನಿಕರಾಗಿ ಸೇರಿದರು.

ಆಝಾದ್ ಹಿಂದ್ ಸೇನೆ ಭಾರತದ ಗಡಿನಾಡಿನ ಪ್ರದೇಶಗಳಲ್ಲಿ ಪ್ರಬಲವಾದ ಆಕ್ರಮಣ ನಡೆಸಲು ಸಮರ್ಥವಾಯಿತು! ಆದರೆ ಹಿರೋಶಿಮಾದಲ್ಲಿ ಅಣುಬಾಂಬು ಬೀಳುತ್ತಲೇ ಜಪಾನರು ಶರಣು ಬಂದ ಕಾರಣ ಯುದ್ಧಕೀರ್ತಿಗನುಸರಿಸಿ ಆಝಾದ್ ಹಿಂದ್ ಸೇನೆ ಸಹ ತನ್ನ ಮಾರ್ಗವನ್ನು ಬದಲಿಸಬೇಕಾಯಿತು. ಆಝಾದ್ ಹಿಂದ್ ಸೇನೆ ತನ್ನ ಉದ್ದೇಶದ ಪೂರ್ತಿಗಾಗಿ ಜನತೆಯಿಂದ ಅಭರಣ, ಚಿನ್ನದ ಗಟ್ಟಿಗಳ, ವಜ್ರ, ಮಾಣಿಕ್ಯ, ರತ್ನ, ವೈಢೂರ್ಯಗಳು ಮಾತ್ರವಲ್ಲ, ಹಗದು ರೂಪಾಯಿ ಮೊದಲಾದ ರೂಪಗಳಲ್ಲಿ ಅಪಾರ ನಿಧಿಯನ್ನು ಸಂಗ್ರಹಿಸಿತ್ತು. ಈ ನಿಧಿಯನ್ನು ನೇತಾಜಿಯವರು ರಂಗೂನಿನ ಬೇಂಕುಗಳಲ್ಲಿ ಸುರಕ್ಷಿತವಾಗಿರಿಸಿದ್ದರು. ಆದರೆ ಆಝಾದ್ ಹಿಂದ್ ಸೇನೆ ಯುದ್ಧಕೀರ್ತಿಗನುಸರಿಸಿ ಹಿಂದೆ ಸರಿಯುವ ಪ್ರಸಂಗವೊದಗಿದಾಗ ಈ ನಿಧಿಯನ್ನು ಸಹ ಸೇನೆಯ ಬಲವಾದ ಕಾವಲಿನಲ್ಲಿ ಬೇಂಕಾಕ್‌ಗೆ ತರಲಾಯಿತು. ನೇತಾಜಿಯವರು ತನ್ನ ಭಾವೀ ಸಿದ್ಧತೆಗಾಗಿ ಬೇಂಕಾಕ್‌ನಿಂದ ಫಾರ್ಮೋಸಕ್ಕೆ ಹೋಗಲು ಕೊರಟಾಗ ಅವರ ಕಣ್ಣುಗಳಲ್ಲಿ ನೀರು ತುಂಬಿಹರಿಯಿತು. ಗದ್ಗದಿತ ಕಂಠದಿಂದ ಅವರು "ಯುದ್ಧದಲ್ಲಿ ಕೆಲವು ಸಲ ಮುಂದಿನ ಸಿದ್ಧತೆಗೋಸ್ಕರ ಹಿಂದಕ್ಕೂ ಸರಿಯಬೇಕಾಗುತ್ತದೆ. ಇದರಿಂದಾಗಿ ನಾವು ಯಾರೂ ಧೃಂಸೆ ಪಡಬೇಕಾಗಿಲ್ಲ. ಈಗ ಪ್ರಜ್ವಲಿತವಾಗಿರುವ ಸ್ವಾತಂತ್ರ್ಯ ಸಮರದ ಮಹಾಜ್ವಾಲೆ ಎಂದೆಂದಿಗೂ ನಂದಿ ಹೋಗಲಾರದು. ಭಾರತ ದೇಶವನ್ನು ಇನ್ನು ಹೆಚ್ಚು ಕಾಲ ಯಾವ ಶಕ್ತಿಯೂ ಪರಾಧೀನತೆಯಲ್ಲಿಡಲಾರದು" ಎಂದ ತನ್ನ ಸೈನಿಕರಿಗೆ ಹೇಳಿ ಹೊರಟರು. ಹೋದರು ಈ ಅಗಲುವಿಕೆಯೇ ಕೊನೆಯದಾಗಿ ಸಂಭವಿಸಬಹುದೆಂದು ಅಲ್ಲಿ ಯಾರೂ ಭಾವಿಸಿರಲಿಲ್ಲ. ಇಂದಿನ ಥಾಯ್ಲೆಂಡ್, ಮಲಯಾ, ಸಿಂಗಾಪುರ ಮತ್ತು ಜಪಾನ್‌ದಲ್ಲಿರುವ ಭಾರತೀಯರಲ್ಲಿ "ನಮ್ಮ ನೆಚ್ಚಿನ ನೇತಾಜಿ ನೇತಾಜಿಯವರು ಬಲು ಬೇಗನೆ ಹಿಂದಿರುಗುವರು" ಎಂಬ ವಿಶ್ವಾಸ ಬಲವಾಗಿ ಅಂಟಿಕೊಂಡಿದೆ.

ಬೇಂಕಾಕ್ ವಿಮಾನ ನಿಲ್ದಾಣದಿಂದ ನೇತಾಜಿಯವರ ವಿಮಾನ ಹೊರಟ ಕೆಲವೇ ಘಂಟೆಗಳ ನಂತರ ಫಾರ್ಮೋಸಾದ ರಾಜಧಾನಿ "ಥಾಯ್ಪೈಯ್" ಬಳಿ ಪರ್ವತಕ್ಕೆ ಅಪ್ಪಳಿಸಿ ಅಪಘಾತಕ್ಕೀಡಾಯಿತೆಂಬುದಾಗಿ ಜಪಾನರು ಅಭಿಪ್ರಾಯ ವ್ಯಕ್ತಪಡಿಸಿದರು. ಯಾವ ಪರ್ವತದಲ್ಲಿ ಈ ವಿಮಾನ ಬಿತ್ತೆಂದು ಪೇಳಲಾಗುತ್ತದೆಯೋ ಅಲ್ಲಿ ನೊಡಲು ಒಂದು ಘನ ಮಂದಿರವಿತ್ತು. ಈಗ ಅದರ ಚಿಹ್ನೆಯೂ ಕಾಣುವುದಿಲ್ಲ. ಆ ಸ್ಥಳದಲ್ಲಿ ಟೈಫೂನ್ ಆಟದ ಬಗ್ಗೆ ಗ್ರೌಂಡ್ ಹೊಟೇಲು ಒಂದು ಮಿಂಚಿನ ಪೆಟ್ಟಾಗಿ ಸುತ್ತಲೂ ಕಂಪೌಂಡು ಕಿವಿಗಂಡಿದೆ. ಜಪಾನರು ಕೊಟ್ಟ ವಿವರಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸಂಶೋಧನೆ ಮಾಡಿದ ಮೇಲೆಯೆ ಸತ್ಯಸ್ಥಿತಿ ಬೆಳಕಿಗೆ ಬರುವುದು. ಟೈಫೂನ್ ಆಟದ ಈ ವೈದಾಧವೇ ವಿಮಾನ ದುರ್ಘಟನೆಯ ಸ್ಥಳವೆಂಬುದು ಆಗಿದ್ದವಾಗುವುದು.

ಭಾರತದ ಹಳೆಯ ವಿಶ್ವಾಸಾರ್ಹವಾಗಿರುವ ಫಾರ್ಮೋಸಾ ಸರಕಾರ ಮತ್ತು ಅದರ ಗಣ್ಯರಾದ ಜನರಲ್ ಚಿಯಾಂಗ್ ಕೈಷೇಕ್ ಅವರು ಸ್ವತಃ ಈ ಘಟನೆಯ ಅಂತರಾಳವನ್ನು ಕಂಡುಹಿಡಿಯಲು ಬಹಳ ಉತ್ಸಾಹಗೊಂಡಿದ್ದಾರೆ. ಆದರೆ ಈ ಕುರಿತು ಭಾರತ ಸರಕಾರ ತಾಳಿರುವ ಅಲಕ್ಷ್ಯ ಮನೋವೃತ್ತಿಯ ವಿಚಿತ್ರ ನೀತಿಯೇ ಅವರಿಗೆ ಅರ್ಥವಾಗುವುದಿಲ್ಲ. ಭಾರತ ಸರಕಾರ ಈ ತಕ್ಷಣವೂ ಆ ಸ್ಥಳಕ್ಕೆ ಹೋಗಿ ಪ್ರತ್ಯಕ್ಷವಾಗಿ ಪರಿಶೀಲಿಸಿ ಈ ಸಮಸ್ಯೆಯ ಫಲಿತಾಂಶವನ್ನು ಕೋಧನೆ ಮಾಡುವುದಿಲ್ಲ? ಎಂದು ಆಶ್ಚರ್ಯಪಡ ತ್ತಾರೆ.

(ಲೋಕಸಭಾ ಸದಸ್ಯ ಶ್ರೀ ಪಂಡಿತ್ ಪ್ರಕಾಶವೀರ ಶಾಸ್ತ್ರಿಯವರ ಪ್ರತ್ಯಕ್ಷ ಪರಿಶೀಲನೆಯ ಒಂದು ವರದಿಯಿಂದ).

ಎಲೆ ಮರೆಯ ನೊಗ್ಗೆ!

ನಳಿ ನಳಿಸಿ
ಸೌರಭವ ಸೂಸಿ
ಹೊರಗೆ ಬಾ ಅರಳಿ
ಎಲ್ಲ ಅವಿತು ಕುಳಿತಿರುವೆ
ಎಲೆ, ಎಲೆ ಮರೆಯ ನೊಗ್ಗೆ!
ತಂಬ ಬಗ್ಗೆ!!

ಸಿವಾಸನೆ ಬೀರು
ಸಿನ್ನ ಮಲ್ಲಿಗೆ ಹೋರು
ಭ್ರಮರ ಬಂದು; ನಿನ್ನ ಬಂಡಿಹೀರಿ
ಹಾರಿ ಹೋಗಲಿ ಬಾಳಲಿ
ಜಗಕುಪಕಾರವಾಗಲಿ.

ನೀನು ಅರಳಿ ಮಾಡುವಾ ಶಿಷ್ಟಿಯುಸೇರು
ಚಲುವೆಯರ ಮಂಡಿಯುನಪ್ಪು
ಹಿರಿ ಜನರ ಕೈಸೆರಳಲಿ ನೀ ಮೆರೆ
ಎಲೆ, ಎಲೆ ಮರೆಯ ನೊಗ್ಗೆ!
ಎಲ್ಲೆಲ್ಲು ನಿನ್ನ ಲಗ್ಗೆ!!

ನೀ ಜಗಕುಪಕಾರಿ
ದೀನತೆಯ ತೆರಿ
ಮಂಜಾನೆ ಅರಳಿ ಸಂಜೆ ಅಳಿಯ ವೆ
ಅಲ್ಪಾಯುಷ್ಯ ನೀ ಮಾಡುವ ಉಪಕಾರ
ನಾ ಮಾಡಬೆನೇ?
ಬಾ ಹೊರಗೆ
ಪ್ರತಿದಿನ ಸ್ವಾಗತಿಸುವೆವು ನಿನ್ನ
ಎಲೆ, ಎಲೆ ಮರೆಯ ನೊಗ್ಗೆ!
ಬಂದು ತೋರು ಸಗ್ಗೆ!!

— ಮಲ್ಲಾಪುರ ರಾಮಗಿರಿ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಶ್ರೀ ನಳಕದಾಸ ರಚಿತ ತತ್ವ
ಹರಿಭಕ್ತಿಸಾರ
ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ
ಬೆಲೆ: 0-19 ಪೈಸೆ.
ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಚಾರುಚಯೆನ

ರುದ್ರನ ಮೂರನೆಯ ಕಣ್ಣು

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು—ಅದರಲ್ಲಿ ಪ್ರಜಾಜನರು ತೋರಿಸಿದ ಅಭಿರುಚಿ ದೇಶದ ಬಹು ರಾಜ್ಯಗಳಲ್ಲಿ ರಾಜ್ಯತೀಯ ಅಸ್ಥಿರತೆಗೆ ಸಂತಾಂಗ ದಾಕಿಯಿತ್ತು. ಕಾಂಗ್ರೆಸ್ಸು ಅಧಿಕ ಸಂಖ್ಯಾ ಬಲವಿರುವ ರಾಜಕೀಯ ಪಕ್ಷವಾಗಿದ್ದರೂ ನಿಚ್ಚಳ ಬಹುಮತ ಪಡೆಯಲಿಲ್ಲವಾದರೂ ಅದುನೇ ಕೆಲವರ ಸಹಕಾರದಿಂದ ಹಲವು ರಾಜ್ಯಗಳಲ್ಲಿ ಸರ್ಕಾರ ರಚಿಸಬಹುದಿತ್ತು. ರಾಜ್ಯದ ಕಾಂಗ್ರೆಸ್ ಶಾಸಕರಿಗೆ ಈ ಬಗ್ಗೆ ಮೂಗಿನ ತುದಿಯಲ್ಲಿ ಅಸೆಯೂ ಇತ್ತು. ಆದರೆ, ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಯು. ಎನ್. ಧೆಬರ್ರರವರು, ತತ್ವಸಿದ್ಧ ಮುಂಬಾಯಿಯವರು. ಕನ್ನ ಸ್ವಾಭಿಮಾನವನ್ನೇ ಭದ್ರಪಡಿಸುವುದಕ್ಕೆ ಹೆಣಗುತ್ತಿದ್ದ ಇಂದಿರಾ ಗಾಂಧಿಯವರು ಪ್ರಜಾತಂತ್ರದ ಆದರ್ಶವನ್ನು ಮುಂದೊಡ್ಡಿ ರಾಜ್ಯ ಕಾಂಗ್ರೆಸ್‌ನ ಆಕೆಗಣ್ಣುಗಳಿದೆ ಮಣಿಸಿನ ಪಂಡಿಯೆರಚಿದರು. ಕಾಂಗ್ರೆಸ್ಸೇತರ ಪಕ್ಷಗಳಿಗೂ ಕಾಂಗ್ರೆಸಿನ ಕೈಯಿಂದ ಅಧಿಕಾರ ಕಿತ್ತುಕೊಳ್ಳುವ ಹೆಬ್ಬಯಕೆ ಬಹುಕಾಲದಿಂದಿದ್ದುದರಿಂದ, ಕಾಂಗ್ರೆಸ್ ವರಿಷ್ಠರ ಈ ನೀತಿಯಿಂದ ಅವುಗಳಿಗೆ ಹೊಸ ಹುರುಪು ಹುಟ್ಟಿತು. ಕಾಂಗ್ರೆಸ್ ಪಕ್ಷವನ್ನು ಭೇದಿಸಿ ಅದನ್ನು ನಿರ್ಜೀವಗೊಳಿಸಲು ಇವು ಬಯಸಿದುವು. ಅಶೆ-ಅಮಿಷಗಳನ್ನು ಮುಂದಿಟ್ಟವು. ಸಂಯುಕ್ತರಂಗಗಳ ರಚನೆಯಾದುವು. ಕಾರಿ, ಕೋಳಿ, ದಾವು, ಮುಂಡುಸಿ, ದನ, ಹುಲಿಯೆಲ್ಲವೂ ಒಂದಾಗಿ ಕೂಡಿ ಬಾಳುವೆ ನಡೆಸತೊಡಗಿದುವು. ಅಧಿಕಾರಕ್ಕಾಗಿಯೇ ಕಾಂಗ್ರೆಸ್ ಸೇರಿದ್ದ ಕೆಲವು ಸ್ವಾರ್ಥಿ ಜನರು "ಪಕ್ಷಾಂತರ"ದ ಕೋಗಕ್ಕೆ ಬಲಿಯಾಗಿ "ಅಧಿಕಾರ"ದ ಇಂಜೆಕ್ಷನ್ ತೆಗೆದುಕೊಂಡು ಸುಖವುಂಡರು.

ಆದರೆ, ಈ ಸಂಯುಕ್ತ ರಂಗಗಳು ಸರಿಯಾಗಿ ಬದುಕುವುದಿಲ್ಲ. ಹರಿಯಾಣ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶಗಳ ಸಾಲಿಗಳಲ್ಲಿ ಬಿಹಾರವೂ ನಿಂತಿತು; ಮಧ್ಯಪ್ರದೇಶದ 'ರಾಜ ಮಾತೆ'ಯ ಸೀರೆ ಹರಿಯಿತು. ಅದನ್ನು ತೇಪೆ ಹಾಕಿದಷ್ಟೂ ಅದು ಹರಿಯುತ್ತಲೇ ಬರುತ್ತಿದೆ. ಗೋವಿಂದ ನಾರಾಯಣ ಸಿಂಗರಿಗೆ ಎರಡು ವಾರಗಳ ರಜೆಕೊಟ್ಟು ಕಳಿಸಿದ್ದೇನೋ ಆಯಿತು. ಆದರೆ, ಹರಿದ ಚಿಂದಿ ಮತ್ತೊಂದಾಗುವುದು ಬೂದಿಯೊಡಾಗ ಮಾತ್ರ ತಾನೆ?

'ಪಕ್ಷಾಂತರ' ರೋಗ ಪೀಡಿತರು ಸ್ವಯಂಪ್ರಭುಗಳು. ಯಾವ ಕಾಲಕ್ಕೂ ಯಾವುದೇ ವೇಷ ಹಾಕಲು ಸಮರ್ಥರು. 'ದುರ್ಜನಂ ಪ್ರಥಮಂ ವಂದೇ' ಎಂಬಂತೆ ಈ ರೋಗಿಗಳಿಗೇನೇ ಎರಡೂ ಕಡೆಯ ಮೊದಲ ಸ್ವಾಗತ-ಅಭಿವಾದನ. ಇದರಿಂದ ಅನೇಕರು ಮಂತ್ರಿಯಾದರು. ಅನೇಕರು ಹಣಗಳಿಸಿದರು. ಎರಡೂ ಬೇಡವಾದವರು ಸರಕಾರದ ಸೂತ್ರದಾರನ್ನು ಹೆದರಿಸಿ ಬೆದರಿಸಿ ಬಿಸಾಕಿ ಹೆಚ್ಚಿನ ಸಮಸ್ಯಾರಗಳನ್ನು ಪಡೆದೇ ಕೃಪ್ತರಾದರು.

ಪಕ್ಷಾಂತರ ವ್ಯಾಧಿಯು ದೇಶದ ರಾಜ್ಯಕೀಯ ಸ್ಥಿರತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬುದಕ್ಕೆ ಉತ್ತರ ಭಾರತದ ಕಳೆದಾರು ತಿಂಗಳುಗಳ ರಾಜಕೀಯ ಬಣ್ಣವೇ ಉದಾಹರಣೆ. ಅದರಿಂದ ದೇಶದ ಪ್ರಗತಿಯು ಕುಂಠಿತವಾಗುವುದು. ರಾಜ್ಯಕೀಯ ಅಸ್ಥಿರತೆಯು ಪ್ರಗತಿ ಭಾದಕ—ನಿಶ್ಚಿತ ನೀತಿಯ ಕಾರ್ಯಾಚರಣೆಗೆ ವಿಘ್ನಕಾರಿ. ಆದುದರಿಂದ ಮುಂದೆ ಪಕ್ಷಾಂತರ ರೋಗವನ್ನು ತಡೆಗಟ್ಟಲು ರಾಷ್ಟ್ರೀಯ ಕಾರ್ಯಕ್ರಮ ಕೈಕೊಳ್ಳುವುದು ಅಗತ್ಯವೆಂದು ಹಲವರ ಅಭಿಪ್ರಾಯ. ರಾಜ್ಯಕೀಯಪಕ್ಷಗಳಮೇಲೆ, ವ್ಯಕ್ತಿಯಮೇಲೆ ನಿರ್ದಿಷ್ಟ ನಿಯಮಗಳನ್ನು ಜ್ಯಾರಿಗೊಳಿಸಲು ಅವಶ್ಯ ಕಂಡರೆ, ಸಂವಿಧಾನಕ್ಕೆ ತಿದ್ದುಪಡಿ ಮಾಡಲೂ ಮುಂದಾಗಬೇಕಾದೀತು. ಇತ್ತೀಚೆಗೆ ಸೇರಿದ ನ್ಯಾಯವಿದರ ಸಮಿತಿಯೊಂದು ಈ ಬಗ್ಗೆ ಕೆಲವು ಶಿಫಾರಸುಗಳನ್ನು ಮಾಡಿದೆ. ಪಕ್ಷಾಂತರ ಹೊಂದಿದ ಶಾಸಕನು ತನ್ನ ಸದಸ್ಯತನವನ್ನು ಕಳೆದುಕೊಳ್ಳಬೇಕು ಎಂಬುದು ಎಲ್ಲರ ಅಭಿಪ್ರಾಯ. ಆತನು ಮೊದಲು ಆಯ್ಕೆಯಾದ ಕ್ಷೇತ್ರದಲ್ಲಿ ಮರುಚುನಾವಣೆ ನಡೆಯಬೇಕು. ಅವರೆ, ಪಕ್ಷಾಂತರಗೊಂಡ ಸದಸ್ಯನು (ಮಾಜಿ) ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿ ನೀಡಬೇಕು—ಬೇಡ ಎಂಬುದರಲ್ಲಿ ಭಿನ್ನಮತ. ದೇಶದ ನೀತಿಯೇ ದಿನೇದಿನೇ ಬದಲಾಗುತ್ತಿರುವಾಗ, ಪಕ್ಷಾಂತರಿತ ವ್ಯಕ್ತಿಯಿಂದ ಶಾಸಕನಾಗುವ ಅಧಿಕಾರ ಕಿತ್ತುಕೊಳ್ಳುವುದು ನ್ಯಾಯವಲ್ಲವೆಂಬುದು ಸರ್ವಸಾಮಾನ್ಯ ಅಭಿಮತ. ಆದರೂ ಜನತೆಗೇನು ಲಾಭ? ಮರುಚುನಾವಣೆಗಳ ವೆಚ್ಚವನ್ನು ಹೊರುವುದಷ್ಟೆಯೇ ಅಥವಾ ರೋಗಕ್ಕೊಂದು ಒಡ್ಡು ಸಿದ್ದೀತೆ?

ಂ ಂ ಂ

ಒಂದು ಸೇತುವೆ—ಅದರ ಆರಂಭ ಅಂತ್ಯಗಳಲ್ಲಿ ಎಲ್ಲರಿಗೂ ಕಾಣುವಂತೆ ಫಲಕ. ಫಲಕದಲ್ಲಿ ಸೂಚನೆ: "ವಾಹನ ಸಂಚಾರ ಪ್ರತಿಬಂಧಿಸಲಾಗಿದೆ". ಕಾರಣ ಅದು ಶಿಥಿಲ ಸೇತುವೆ. ಇದೇ ತರಹದ ಶಿಥಿಲ ಸೇತುವೆ—ಮೋರಿಗಳು ನೂರಾರು. ಕೆಲವು ಐದು ಮೈಲಿ—೧೦ ಮೈಲಿ ವೇಗದಲ್ಲಿ ವಾಹನಗಳನ್ನು ಓಡಿಗೊಡುತ್ತವೆ; ಆದರೆ ಅವುಗಳ ಮೇಲೆ ೫೦ ಮೈಲಿಗಳ ವೇಗದಲ್ಲಿ ವಾಹನಗಳು ಓಡಿದಾಗ ಫಲಕವೋದಿದ ಹೊಸ ಪ್ರಯಾಣಿಕನ ಎದೆಯಲ್ಲಿ ಮಾತ್ರ ಎಂಟೊನ ಕೆಯ ಬಡಿತ ಕೇಳಬೇಕು.

ಕಲ್ಲಿಕೋಟೆ ನಗರದ ಕರೆಪರಂಬ ಬಡಾವಣೆಯ ಸಮೀಪ ಅತಿ ಪ್ರಧಾನವಾದ ಒಂದು ರಸ್ತೆ. ಇದರಲ್ಲಿ ವಾಹನ ಸಂಚಾರವೂ ಅತಿ ಹೆಚ್ಚು. ಈ ಮುಖ್ಯ ರಸ್ತೆಗೊಂದು ಕೂಡುರಸ್ತೆ. ಅದು ಕಾಲುವೆಯ ಮೇಲೆ ಹಾದುಹೋಗುತ್ತದೆ. ಈ ಕಾಲುವೆಗೊಂದು ಸೇತುವೆ. ಇದರಲ್ಲಿ "ಶಿಥಿಲ ಸೇತುವೆ; ವಾಹನ ಸಂಚಾರ ಪ್ರತಿಬಂಧಿತವಾಗಿದೆ" ಎಂದು ಓದಬರುವವರಿಗೆ ಎಚ್ಚರಿಕೆಯ ಸೂಚನೆ.

ಈ ಸೂಚನಾ ಫಲಕ ಅಲ್ಲಿ ನಾಟಿ ಇಪ್ಪತ್ತೈದು ವರ್ಷಗಳಾದುವು. ಸೇತುವೆಗಿಂತಲೂ ಈ ಸೂಚನಾ ಫಲಕ, ಅದರ ಮೇಲಿನ ಬರಹ, ಕೂಡು ರಸ್ತೆ ಶಿಥಿಲವಾಗಿವೆ. ಆದರೂ ಹೊಸ ಸೇತುವೆಯನ್ನು ಬಂದಿಲ್ಲ—ಕಾರ್ಯದ ಪ್ರಸ್ತಾಪವೇ ಇಲ್ಲ. ಏಕೆ ಎನ್ನುತ್ತೀರಾ? ಇಪ್ಪತ್ತೈದು ವರ್ಷಗಳಿಗೆ ಹಿಂದೆಯೇ ಸೇತುವೆ ಶಿಥಿಲವಾದ ಬಗ್ಗೆ ಸೂಚನಾ ಫಲಕ ನಾಟಿದ್ದರೂ 'ಅತಿ ಭಾರ ಹೊತ್ತ' ವಾಹನಗಳು ಅಂದಿನಿಂದ ಇಂದಿನ ವರೆಗೂ ಸೇತುವೆಯ ಮೇಲೆ ನಿರಾತಂಕವಾಗಿ ಓಡಾಡುತ್ತಿವೆ. ಯಾವ ಅಧಿಕಾರಿಯೂ ಅದನ್ನು ತಡೆಯಲಿಲ್ಲ; ಸೇತುವೆಯೂ ತಡೆಯಲಾರೆನೆಂದು ಹೇಳಲಿಲ್ಲ.

ಅಲ್ಲಿನ ನಿವಾಸಿಗಳು "ಈಗಿನ ಸಂಪ್ರದಾಯ'ದಂತೆ ಆ ಸೂಚನಾ ಫಲಕದ ಬೆಳ್ಳಿ ಹೆಬ್ಬಾವನ್ನು ಆಚರಿಸಿದರು. ಸುಂದರವಾದ ಹಾರಗಳಿಂದ ಅಲಂಕಾರವಾಗಿ ಅದನ್ನು ಅಲಂಕರಿಸಿ, ಕಳಶರುತೋರಣಗಳಿಂದ ವರಾರವನ್ನು ಶೃಂಗರಿಸಿದರು. ಈ ಸೂಚನಾ ಫಲಕವೂ ಶಾಶ್ವತತವನ್ನು ಕಾಣುವಂತಾಗಲೆಂದು ಹರಸಿದೆರೆ ಇದು ನಮ್ಮ ಭಾರತ!

ಂ ಂ ಂ

ಒಂದಾಗಿದ್ದ ಕಮ್ಯುನಿಸ್ಟ್ ಪಕ್ಷ ಎರಡಾಯಿತು. ಇದೀಗ ಮೂರಾಗುವ ಕಾಲ ಪರಿಪಕ್ವವಾಗಿದೆ. ಎಡ—ಬಲಗಳೆರಡನ್ನೂ ಮೆಟ್ಟಿ ನಿಲ್ಲುವ ಇದು ರುದ್ರನ ಮೂರನೆಯ ಕಣ್ಣಿನಂತೆ ಎಲ್ಲರನ್ನೂ ಎಲ್ಲವನ್ನೂ ಉರಿದು ಬಿಡುವುದಕ್ಕೂ ತಯಾರಾದಂತಿದೆ. "ಸಚಿವರಾಗಿ ಕಾಳತು ಗೋಪಾಲ ಸೇನೆಗಳನ್ನು ರಚಿಸುವುದರಿಂದ ಕ್ರಾಂತಿಯಾಗುವುದಿಲ್ಲ. ನಮಗೆ ಹೆದರಿರುವ ನಂಬೂದರಿಪಾದರು ಎಲ್ಲೆಲ್ಲಿಯೂ (ಸ್ವ) ರಕ್ಷಣಾ ಸಮಿತಿಗಳನ್ನು ರಚಿಸುತಿದ್ದಾರೆ. ದೇಶದ ವಿಮೋಚನೆಗೆ ಕ್ರಾಂತಿಯು ಹಾರ್ದಪೊಂದೇ ದಾರಿ. ಪಾರ್ಲಿಮೆಂಟರಿ ವಿಧಾನವಾದಲಿ ಗಾಂಧಿವಾದಗಳೇ ನಿಷ್ಪ್ರಯೋಜಕ"ವೆಂದು ಇವರು ಘಂಟಾಘೋಷವಾಗಿ ಹೇಳುತ್ತಾರೆ. "ದೇಶದ ವಿಮೋಚನೆ" ಎಂಬುದಕ್ಕೆ ತಮ್ಮದೇ ಆದ ಪರಿಭಾಷೆ ಈ ತೀವ್ರವಾದಿ ಕಮ್ಯುನಿಸ್ಟರದ್ದು. ಇವರಿಗೆ ಚೀನೀ ರೀತಿಯಲ್ಲಿ ನೆಕ್ಸಲ್‌ಬಾರಿ ಮಾದರಿಯಲ್ಲಿ ಕ್ರಾಂತಿಯ ಮೇಲೆ ಮಾತ್ರ ವಿಶ್ವಾಸ. ಮಾವನ ಸಾಹಿತ್ಯವೊಂದು ಮಾತ್ರ ಉತ್ತಮ ಸಾಹಿತ್ಯ. ಇವನ್ನು ಮುಕ್ತತ್ವಾಗಿ ಚೀನೀ ರಾಯಭಾರಿ ಕಚೇರಿಯಿಂದ ಪಡೆದುಕೊಳ್ಳುವ ಸಲಹೆಯನ್ನೂ ಅವರು ನೀಡುತ್ತಾರೆ.

ನಾವು ಯೋಚಿಸಬೇಕಾದುದು ಎರಡಾದ ಪಕ್ಷ ಮೂರಾದುದನ್ನಲ್ಲ, ಎಡ—ಬಲಗಳನ್ನೂ ಮೀರಿನಿಂತ ಈ ಮೂರನೆಯ ಪಕ್ಷದ ನೀತಿಯನ್ನು ಉಗ್ರ ಕ್ರಾಂತಿಯ ಶಿಳ್ಳೆನ್ನೇ ಜನತೆಗೆ ಕುಡಿಸಿ ದೇಶವನ್ನು "ಜನತಾ ಜನಾರ್ಧನ"ನಿಂದ ವಿಮೋಚನೆಗೊಳಿಸಿ, ಮಾವನಿಗೆ ಮಾರ್ಗಲು ಉದ್ದೇಶಿಸಿದ ಭಯಾನಕ ನೀತಿಯನ್ನು ಭಾರತದ ಸಂಸ್ಕೃತಿಗೆ ಕಮ್ಯುನಿಜಂ ತತ್ವವೇ ಒಗ್ಗದಿರುವಾಗ, ಈ ಮೂರನೆಯ ಪಕ್ಷವನ್ನೂ ಬೆಳೆಯಗೊಟ್ಟರೆ, ದೇಶವೇ ಮೂರಾಬಟ್ಟೆಯಾಗುವುದು. ಆದುದರಿಂದ ನಾವು, ಈಗಿಂದೀಗಲೇ ಜಾಗೃತರಾಗುವುದು ಅಗತ್ಯ. ರಾಷ್ಟ್ರ ವಿರೋಧಿ ವಿಚಾರಗಳನ್ನು ಹತ್ತಿಕ್ಕಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಇನ್ನಷ್ಟು ಅಗತ್ಯ.

—ಗೋ.

ಸ್ತ್ರೀ ಪುರುಷರಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಪಾಕರಿಯಾಗಿ ಆಯುರ್ವೇದ ಔಷಧಿ ಮತ್ತು ಪಥ್ಯ ಕೈಪಿಡಿಯೂ
ಪಲಹೆಗಳಿಗೆ, ಇಷ್ಟರಿದೆ ಇರಿಯಿರಿ

SHANKAR PHARMACY
BHADRAVATI (MYSORE)

ಕಣ್ಣುಳ್ಳವರು ಕಾಣಬಹುದಾದ
ಒಗ್ಗಟ್ಟಿನ ಒರತೆ
[ಐದನೇ ಪುಟದಿಂದ]

ಜನರು, ಪ್ರಜೆಗಳು ಒಂದಾಗಿರಬೇಕೆಂದು. ಸ್ವಾಮಿ ವಿವೇಕಾನಂದರು ಧಾರ್ಮಿಕ ವಿಶ್ವವಿದ್ಯಾಲಯಗಳು ಮತ್ತೆ ಪ್ರೋತ್ಸಾಹಿಸಿರುವ ಮಹಾಶಯವೆ ನಮಗೂ ಸ್ಫೂರ್ತಿಯಾಗಿರಲಿ. ಈ ಒಗ್ಗಟ್ಟಿನ ಒರತೆಯನ್ನು ಕಣ್ಣುಳ್ಳವರು ಕಾಣಬಹುದು. ಭಾರತದ ಕಣಕಣವೂ ಒಗ್ಗಟ್ಟಿನ ಅವಶ್ಯಕತೆಯ ಕೂಗು ಕಥೆ ಹೇಳುತ್ತದೆ, ಒಗ್ಗಟ್ಟಿನ ಉಪಾಯವನ್ನು ಸೂಚಿಸುತ್ತಿದೆ.

READ & ADVERTISE IN NAVAYUGA WEEKLY

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. (ಸಂ. ನ.)

ಆದಿತ್ಯಪುರಾಣ (ಶಿವಕಥಾಮೃತ)
"ಕವಿರಾಜ ಕಂಠೀರವ" ವಿರಚಿತ
ಸಂಪುಟ: ೧.
ಸಂಪಾದಕರು: ಶ್ರೀ ಕೆ. ವೆಂಕಟರಾಮಾಚಾರ್ಯ.
ಪ್ರಕಾಶಕರು: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ಲು (ದ.ಕ.)
ಪುಟಗಳು: ೧೨೮. ಬೆಲೆ. ರೂ. ೨-೫೦

ಸುಮಾರು ಹದಿನಾಲನೆಯ ಶತಮಾನದ ಷಟ್ಪದಿ ಸಾಹಿತ್ಯ ಕೃತಿಗಳಲ್ಲಿ ಆದಿತ್ಯ ಪುರಾಣವೊಂದು. ಇದನ್ನು ಬರೆದವನು ಯಾರೆಂದು ತಿಳಿದು ಬಂದಿಲ್ಲವಾದರೂ "ರಾಮಚಂದ್ರ ಗುರು ಶಿಷ್ಯ"ನೆಂದು ತನ್ನನ್ನು ಕರೆದುಕೊಂಡಿರುವುದರಿಂದ ಶ್ರೀ ಶೃಂಗೇರಿ ಮಠದ ಶ್ರೀರಾಮಚಂದ್ರ ಗುರುಗಳ ಶಿಷ್ಯನೆಂದ ಊಹಿಸಬಹುದು. ಸಂಪಾದಕರಿಗೆ ಲಭ್ಯವಾದ ಒಂದು ಮಾತೃಕೆಯ ಕೊನೆಯಲ್ಲಿ 'ಕವಿರಾಜ ಕಂಠೀರವ'ಹೆಂಬ ಬಿರುದೂ ಇದೆ. ಈತನ ನಿಜವಾದ ಹೆಸರೇನು, ಅನ್ಯ ಕೃತಿಗಳೇನಾದರೂ ಇವೆಯೆ, ಇವನ ಜೀವನವೃತ್ತವಾವುದ — ಎಲ್ಲವೂ ಕಾಲಗರ್ಭದಲ್ಲಿ ಅಡಗಿವೆ-ಶಂಶೋಧನೆಗೆ ವಸ್ತುವಾಗಿದೆ. ಶಿವಮೊಗ್ಗ, ಚಿಕ್ಕಮಗಳೂರು, ಮಂಡಳೂರು ಭಾಗದಲ್ಲಿ ಈತನ ಕೃತಿಯ ಹಸ್ತಪ್ರತಿಗಳು ಲಭ್ಯವಾದುದರಿಂದ ಈ ಭಾಗದವನೇ ಇರಬೇಕೆಂದೂ ಶಿವತತ್ವ ಪ್ರತಿಪಾದನೆ ಮಾಡಿದ್ದರಿಂದ ಶೈವ ಸಂಪ್ರದಾಯದವನಿರಬೇಕೆಂದೂ ಹೇಳಬಹುದಷ್ಟೇ.

ಬ್ರಹ್ಮಪುರಾಣದ ಉಪ ಪುರಾಣವಾದ ಸಾರ ಪುರಾಣ ಮತ್ತಿತರ ಪುರಾಣಗಳಲ್ಲಿನ ಶಿವಕಥಾಮೃತವನ್ನು ಇಲ್ಲಿ ಕವಿ ಸಂಗ್ರಹಿಸಿದ್ದಾನೆ. ಈ ಕಥಾಮೃತವು ಅಲ ಸಂಧಿಗಳ ತನಕ ಹರಡಿದ್ದು ಅವುಗಳಲ್ಲಿ ಮೊದಲ ಸಂಪುಟದಲ್ಲಿ ಆರಂಭದ ಹದಿನೈದು ಸಂಧಿಗಳು ಮಾತ್ರ ಪ್ರಕಟವಾಗಿವೆ. ಮುಂದಿನ ಸಂಪುಟಗಳು ಆರ್ಥಿಕ ಸ್ಥಿತಿ ಸುಧಾರಿಸಿದಂತೆ ಪ್ರಕಟವಾಗುವ ನಿರೀಕ್ಷೆಯಿದೆ. ಶಿವಕಥಾಮೃತವನ್ನು ಸೂತ ಪುರಾಣಿಕರು ವಾಸಿಷ್ಠಣಕ್ಕೆ ಹೇಳಿದಂತೆ ಇಲ್ಲಿ ಆರಂಭಿಸಲಾಗಿದೆ. ಇದರಲ್ಲಿ ಶಿವನ ಸರ್ವೋತ್ತಮತೆ, ಜಗತ್ತಿನ ಉತ್ಪತ್ತಿ, ಕಲಿಯುಗದ ಭ್ರಷ್ಟಾಚಾರ, ಇದರಿಂದ ಬಿಡುಗಡೆ ಮುಂತಾದ ತಾತ್ವಿಕ ವಿವೇಚನೆಯಿದೆ 'ಶಿವಕಥೆ ಸುನಾದಿತ್ಯ ಪಾರಾಣವನು ಮನುಷ್ಯರಿಗೆ ಪೇಳ್ದ ಸಾಕ್ಷಾತ್ಪುಣ್ಯವನ ಭಾಂಧವ ಭಾಸ.'(೧-೨೮) ಎಂದಿರುವುದರಿಂದಲೂ ಸೂರ್ಯನು ಮನುಷ್ಯರಿಗೆ ಈ ಶಿವ ಕಥಾ ನಿರೂಪಣೆ ಮಾಡಿದ್ದರಿಂದ ಇದಕ್ಕೆ 'ಆದಿತ್ಯ ಪುರಾಣ'ವೆಂದು ಹೆಸರು ಬಂದಿದೆಯೆನ್ನಬಹುದು. ಈತನ ಕೃತಿ ಭಾವಿನಿ'ಆರು ಕಾಲುಗಳಿಂದ ನಡೆದಳು (ಷಟ್ಪದಿ), ಮೂರು ಹೆಜ್ಜೆಗಳಿಂದ ರಂಜಿಸುವಳು (ರೀತಿ)."ಯೋಗಿಗಳಿಗಿರು ಮುಕುತಿ ಲಕ್ಷ್ಮಿ ಯೋಗ ಭಕ್ತರಿಗಮಲಸಕವಿಯು ಭೋಗ ಕವಿಗಳಿಗೆ ನಾಕ ಸುಖವನುರಾಗ ಸಿದ್ಧಿಯನು ಈಗಳೈಹಿಕ ಭಾಗ್ಯ ಸಖದುದ್ಯೋಗ, ನೊಂದಂಗಗಳಿಗೆ ದುಃಖತ್ಯಾಗ" (೧-೪೪)

ಕವಿಯು ತನ್ನ ಸರಳ ಸುಂದರ ಶೈಲಿಯಲ್ಲಿ ಜಡವೆನಿಸಿದ ತಾತ್ವಿಕ ವಿವೇಚನೆ ಮಾಡುತ್ತಾ ಅದರಲ್ಲಿ ಸ್ವಾರಸ್ಯ ಹೆಚ್ಚಿಸುವಲ್ಲಿ ಶಕ್ತನಾಗಿದ್ದಾನೆ. ಸೂರ್ಯನತ್ಯುಷ್ಣ ಪ್ರಮಾಣವನ್ನು ನೋಡಬಹುದು — 'ವಿಧಿಯ ಮಾಯದಿ ಮಂಗಿ ಮಂಗನಿ ಜನಿಸಿದವನು, ತನ್ನನಿಯಿಂದ ಕಶ್ಯಪನುದಿಸಿದನು, ಕಶ್ಯಪಗದಿತಿಯೊಳಗೊಗೆದನೀ..... ಆದಿತ್ಯ' (೨-೧೮)

'ಪದವಿ'ಯ ಬಗ್ಗೆ ಕವಿಯ ಅಭಿಪ್ರಾಯ:

ಪದವಿಯೆಂಬುದು ತಾರತಮ್ಯವ| ಹೊದರುಮತ್ತದಂದಲವಾವ| ರಧಿಕ ನವರಾಯುಷ್ಯಭೋಗದಳಧಿಕದಿಂದಧಿಕ|| ಪದವಿತಾನೊಂದಕ್ಕೆ ಮತ್ತೊಂ|ದಧಿಕ ವದರಲಿ ಕಾಂಕ್ಷೆಯಲಿ ಕುದಿ|ಕುದಿದು ಕೊಗ್ಗುದಿಗೊಂಬರಯ್ಯೋ|ಪದವಿ ಬೇಡೆಂದು|| (೨-೭೪)

'ಶಕ್ತರಿವಡೆ ತಾನೆ ಸಾಧನ|ವಿನ್ನು ಬೇರೊಂದಿಲ್ಲ ತಾನೆ|ಪೂರ್ಣತೇಜಃ ಪುಂಜವಿಂತಂತೆಂಬ ಕುರುಹಿಲ್ಲ|| ತನ್ನ ತಾನೇ ಬೆಳಗಿ ತನ್ನೊಳುತನ್ನ ತಾನೇ ಥಳಥಳಿಸಿ ಹೊಳೆ.ವುನ್ನತ ಜ್ಯೋತಿರ್ಮಯರೂಪವದು....' ಆತ್ಮಜ್ಞಾನ ಸಂಬಂಧಿ ತತ್ವದ ಈ ಸರಳ ನಿರೂಪಣೆ ಮನೋಜ್ಞವಿದೆ. (೩-೩)

ಪಿಂಡಸಂಸ್ಕಾರ ಮಾಡುವರಂಗೇಕೆ ಬೇಕು?

'ಪಿಂಡ ಸಂಸ್ಕಾರಂಗಳಿಲ್ಲದೆ|ಚಂಡಿಕಾಪತಿ ಭಕ್ತಿ ಹುಟ್ಟದು.|ಪುಂಡರೀಕಾಂಬಕನ ಮರೆವರು ಪಿತೃಗಳಿಲ್ಲರನು|ಕುಂಡದಲಿ ಕೆಡಹುವರು ಪಾತಕ|ತಂಡವನು ವಿರಚಿಸುವರದರಿಂ|ಪಿಂಡ ಸಂಸ್ಕೃತಿಬೇಕು...' (೮-೪೧)

'ಜಾತಿ'ಯ ಬಗ್ಗೆ ಕವಿಯ ಅಂಬೋಣ:

ಜಾತಿ ಶಾಲ್ಮಲಿಯೊಳಾದ ಸಂಕರ|ಜಾತಿ ಸಹ ನೂರೊಂದು ಶೂದ್ರ|ಜಾತಿಯೊಳಗಡಗುವುದು ಭೂಸುರ ಶೂದ್ರರೆಂಬೆರಡು|| ಜಾತಿವುಳಿವುದು ಮತ್ತೆ ಮತ್ಸ್ಯದ|ಜಾತಿಯೊಂದೇಯೆನಿಸಿ ಪುರುಷ|ಜಾತಿ ಸ್ತ್ರೀಜಾತಿ ಜಾತಿಯೆಂಬೆರಡುಳಿವು ದಂತ್ಯದಲಿ.(೯-೪೪)

ಕಲಿಯ ಮಹಿಮೆ ನೋಡಿರಿ: —

'ಹುಟ್ಟಬಾರದು ಕಲಿದಿನದೊಳು, ಹುಟ್ಟದರೆ ಕೈ ಬಾಯಿ ಕಚ್ಚೆಯ ಕಟ್ಟುವುದು ವೇಣಲ್ಲದಿರ್ದಡೆ ಘೋರ ರೌರವದ||

ಹುಟ್ಟಿದನು ತಂಬುರರಿ ಕಲಿನೃಪ|ಹುಟ್ಟದನು ಪಾಪಗಳ ಮಾಡಿಸಿ ಕಟ್ಟಿ ಕೆಡಹುವನದಕೆ....'(೧೦-೨೫) ಆದರೆ, ಕಡೆಯಲ್ಲಿ ಮಾತ್ರ 'ಕಲಿಕಾಲಾಂತರದ ಸುಳುಹಿಲ್ಲ.'(೧೧-೧೬)

ಹರಿಹರರು ಭಕ್ತರ ಸೂನು — ಕಿಂಕರರಾಗುತ್ತಿರಲ್ಲದೆ ಧಿಜವಾಗಿ 'ವಿಷ್ಣ ಮಹನೇ ವಿಷ್ಣು ಕೂರ್ಮನ|ಸೂನುವೇ ಶೂಕರನ ಸುಹನೇ|ತಾನು ಪ್ರಾಗದೇ ತಿರ.ಕನೇ ಮಾತೃವಿನ ಭಾತಕನೇ||ಮೀನ ಮತ್ಸ್ಯನೆ ಗೊಲ್ಲರಣಾಗನೆ|ಜೈನನೇ ರಾಮತನೆ?...' (೧೩-೩೦)

ಶಿವನ ಸಾರ್ವಭೌಮತೆಯ ಪ್ರತಿಪಾದನೆಗಾಗಿ ಅಲ್ಲಲ್ಲಿ ಶಿವನ ಪರಮೋಚ್ಚತೆಯನ್ನು ಸೂಚಿಸುವ ಪೌರಾಣಿಕ ಕಥೆಗಳೂ ಬರುತ್ತವೆ. ದಾಕ್ಷಾಯಿಣಿಯ ಅಂತರ್ಧಾನ ಇವುಗಳಲ್ಲಿ ಒಂದು. ಕವಿಯು ಆರಂಭದಲ್ಲಿ 'ಶುದ್ಧ ಷಟ್ಪದಿ ಹಾಡು. ಗಟ್ಟಿಂಗಳಿಗೆ ಶಬ್ದಮಣಿ ಮೊದಲಾದ ಶಾಸ್ತ್ರದ ಹೊದ್ದಿಕೆ ಬೇಡ'(೧-೩೬)ವೆಂದು ಘೋಷಿಸಿದ್ದಾನೆ ಆದರೂ ಭಾಷೆ, ಶೈಲಿಗಳಲ್ಲಿ ತನ್ನದೇ ಆದ ಸರಳತೆ ಉಳಿಸಿಕೊಂಡಿದ್ದಾನೆ. ಜಟಿಲವಾದ ತತ್ವವನ್ನು ಸರಳಗನ್ನಡದಲ್ಲಿ ನಿರೂಪಿಸಿದ ಕವಿಯು ಯಶಸ್ವಿಕವಿಯೆಂಬುದು ನಿಸ್ಸಂದೇಹ. ಈ ಕೃತಿಯನ್ನು ಸಂಪಾದಿಸಿ,ಕಷ್ಟಲೆಯಿಂದ ಬೆಳಕಿಗೆ ತಂದ ಶ್ರೀ ಕೆ. ವೆಂಕಟರಾಮಾಚಾರ್ಯರ ಏಕಾಂಗ ವೀರತನವನ್ನು ಕೊಂಡಾಡಲೇಬೇಕು. ಸಾಮಾನ್ಯವಾಗಿ ಹಳೆಯ ಗ್ರಂಥಗಳ ಅಚ್ಚಿನ ಪ್ರತಿಗಳಲ್ಲಿ ಕಂಡ ಬರುವ ಪಾಠಾಂತರಗಳ ಹಾವಳಿ ಇಲ್ಲಿಲ್ಲವಿರುವುದು ಸಂಪಾದಕರು ಶುದ್ಧ ಪಾಠಾಂತರವೊದಗಿಸಲು ಶ್ರಮಿಸಿದ್ದಾರೆಂಬುದಕ್ಕೆ ನಿದರ್ಶನ.

—ಗೋರಾ.

ಹೊಸ ಪ್ರಕಟಣೆಗಳು

೧. ಬೆಳಕು ಹರಿಯಿತು.
೨. ಎದೆಯ ದನಿ

ಮೇಲಿನೆರಡೂ ಕಾದಂಬರಿಗಳ ಲೇಖಕರು: ಶ್ರೀ ಹೆಚ್. ಸುಬ್ರಾಯ ಭಟ್ಟ.
ಪ್ರಕಾಶಕರು: ವಿವೇಕ ಸಾಹಿತ್ಯಮಾಲೆ, ಮಂಗಳೂರು—3.

೩. The M.G.M. College Magazine.
Editor in chief: Prof. K S. Haridas Bhat, M.A.

ಒಬ್ಬ ಪೂಜ್ಯ, ಇನ್ನೊಬ್ಬ ಪರಮ ಪೂಜ್ಯ

(ನಾಲ್ಕನೇ ಪುಟದಿಂದ)

"ಹೌದು....ಇದುವರೆಗೆ ಮಳೆಗಾಲ ಬರ್ಲೇ ಇಲ್ಲಾಂತ ತೋರುತ್ತೆ..."

"ಹಾಗಲ್ಲ, ಭವಿಷ್ಯದ ಆಸೆಯಿಂದ್ಲೇ ವರ್ತಮಾನದ ದುಃಖ ಮರೆಯ ಬೇಕು. ನಮ್ಮಂಥ ಬಡವರ ಜೀವದುಸಿರೇ ಅದು...."

"ಹ್ಞೂಂ...ಅತ್ತೆ ಹೂವಾಗದೆ ಕೋದರೆ ಸಾಕು..."

"ಕಾಲ ಬರುತ್ತೆ ಕಣೆ, ಕಾಲ ಬರುತ್ತೆ. ನಾವೂ ಒಳ್ಳೆಯವರಾಗೋ ಕಾಲ ಕಂತಿತಕ್ಕೂ ಬಂದೇ ಬರುತ್ತೆ...."

"ಹ್ಞೂಂ....."

-ಗೋರಾ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CL-4.17-4/65-66 dated 26—4—1966.

In the Court of the Civil Judge, Udipi.

O. S. 33/1962, R. E P. 49/1966.

Krishna Adiga —Petitioner.
and
Rama Shasthri (Deceased) and others —Respondents

To
Respondents 4 and 6 to 9.
4. Venkatramana Shasthri,
6. Sharadamma. 7. Akkayamma
8. Gaijamma. —Children of Rama Shasthri.
9. Puttamma —Widow of Rama Shasthri.

Respondents:—Nos 4. 8 and 9 reside in Bedrudi of Molahalli village. No. 6 resides in Kattekan of Yadadi Muthyadi village, No 7 resides in Konchady of Albadi village. all of Coondapur Taluk.

Please take notice that the above execution petition is posted to 3-8-1968 for settling the terms of sale proclamation. You are hereby called upon to appear before Court on the said date and file your objections if any, failing which, please note, that the Court will proceed exparte in the matter.

(By order of the Court.)

Y. D. Hegde, B A., B. L,
Advocate for Petitioner.
Udipi, 11-7-1968.

ವಿಷ್ಣುಗುಪ್ತ
ಅತ್ಯುತ್ತಮ ಬೀಡಿಗಳು

ರೈತರಿಗೆ ಗೊಬ್ಬರ

ಕೃಷಿಕ ರಂಗದಲ್ಲಿ ಅಧ್ವಿತೀಯ ಸಾಧನೆ ಮಾಡುವ ಪ್ರೋತ್ಸಾಹಿಸಲು ಸರಕಾರ ರೈತರಿಗೆ ಕೃತಕ ಗೊಬ್ಬರಗಳನ್ನು ಕೊಡಿಸುವಾಡಿದೆ. ಇದು ಸ್ತುತ್ಯರ್ಹ. ಆದರೆ, ಈ ಗೊಬ್ಬರವನ್ನು ರೈತ ನೇರವಾಗಿ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವಂತಿಲ್ಲ. ಸಹಕಾರಿ ಸಂಘಗಳಿಂದ ಇವನ್ನು ಪಡೆದುಕೊಳ್ಳಬೇಕು. ಆದರೆ, ಇಂತಹ ಸಂಘಗಳಲ್ಲಿ ರೈತರಿಗೆ ಕೂಡಲೇ ಗೊಬ್ಬರ ಸಿಗುವುದಿಲ್ಲ. ರಖಂ ಸಹಕಾರಿ ಸಂಘಗಳಿಗೆ ಹೋದರೆ ರಿಟೈಲ್ ಸ್ಟೋರ್ಸ್ ತೋರಿಸುತ್ತಾರೆ. ರಿಟೈಲ್ ಸ್ಟೋರಿಗೆ ಹೋದರೆ ಗ್ರಾಮ ಸೇವಕರ ಭೇಟಿ, ಅವರ ಶಿಫಾರಸು ಬೇಕೆನ್ನುತ್ತಾರೆ. ಹೀಗೆ ರೈತ ಖರ್ಗೆಯಿಂದಲೇ ಮರಳಬೇಕು.

ಗೊಬ್ಬರವನ್ನು ರೈತನಲ್ಲದೆ ಮತ್ತಾರು ಕೊಳ್ಳುತ್ತಾರೆ? ಇಷ್ಟಿದ್ದೂ ಏನಾದರೂ ಕಾಳ ಮಾರುಕಟ್ಟೆಗೆ ಅವಕಾಶವಿರಬಹುದೆಂಬ ಹೆದರಿಕೆಯೋ ಏನೋ ಸರಕಾರ ಕೈ. ಆದರೆ, ಇದಕ್ಕೆಲ್ಲಾ ಕಾಯಂತ್ರಣ ಹೆಚ್ಚಿರುವುದೇ ಕಾರಣವಲ್ಲದೆ ಬೇರೆಯಲ್ಲ. ಸರಕಾರ ಕೃತಕ ಗೊಬ್ಬರಗಳನ್ನು ಮುಕ್ತವಾಗಿ ಕಟ್ಟೆಗೇನೇ ಬಿಡ.ಗಡೆ ಮಾಡಿದಲ್ಲಿ ಹಳ್ಳಿ ಹಳ್ಳಿಯಲ್ಲೂ ಇದು ದೊರೆಯುವ ಸೌಲಭ್ಯ ದೊರೆಯುವುದು. ರೈತರು ಘೇರವಾಗಿ ಕೊಂಡು ಅದನ್ನು ಬಳಸಿ ಹೆಚ್ಚು ಫಲವು ತೆಗೆಯಲು ಅನುಕೂಲವಾಗುವುದು; ಭ್ರಷ್ಟಾಚಾರವೂ ತುಸು ಕಡಿಮೆಯಾಗುವುದು ಎಂದೊಬ್ಬ ರೈತರು ತಿಳಿಸುತ್ತಾರೆ.

ಆಲ ವರ್ಷಗಳ ಹಿಂದೆಯೇ ರಾಜಾಜಿ ನುಡಿದ ಭವಿಷ್ಯ

(ಮಹಾತ್ಮಾಜಿಯವರ ಖಲಗೈಯಂತಿದ್ದ ಹಾಗೂ ದೇಶಭಕ್ತರ ಸಾಲಿನಲ್ಲಿ ಪ್ರಥಮ ಸ್ಥಾನದಲ್ಲಿದ್ದ 'ಭಾರತರತ್ನ' ಶ್ರೀ ರಾಜಗೋಪಾಲಾಚಾರ್ಯರು ತಮ್ಮ 'ಜೈಲು ಜೀವನ' ಎಂಬ ೧೯೨೦ರಲ್ಲಿ ಪ್ರಕಟಿಸಿದ ಪುಸ್ತಕದಲ್ಲಿ ಬರೆದಿರುವ ಈ ಕೆಳಗಿನ ಭವಿಷ್ಯವಾಣಿಯು ಸತ್ಯವಾಗಿದೆ.)

"ಸ್ವರಾಜ್ಯ ಸಿಕ್ಕಿದ ಕೂಡಲೇ, ಅಥವಾ ಬಹುಕಾಲದ ವರೆಗೆ ಒಳ್ಳೆಯ ಆಡಳಿತವಾಗಲೀ ಸುಖಜೀವನವಾಗಲೀ ಸಿಕ್ಕಿ ಬಿಡುತ್ತದೆಂದು ಭಾವಿಂದಿಗೂ ತಿಳಿಯಬಾರದು. ನಮಗೆ ಸ್ವರಾಜ್ಯ ಸಿಕ್ಕುತ್ತಲೇ ಅವರೆಟ್ಟಿಗೇ ಭ್ರಷ್ಟಾಚಾರಗಳು, ಅಧಿಕಾರಲಾಲಸೆ, ಧನ ಮದದ ಬಲಾತ್ಕಾರ, ಅನ್ಯಾಯಗಳು ಮತ್ತು ಚುನಾವಣೆಯ ಕುತಂತ್ರಗಳು ಹೆಚ್ಚು, ಜನಜೀವನವು ನರಕ ಜೀವನವಾಗಿ ಪರಿಣಮಿಸುವುದು. ಜನರು ಪರಾಜಿತತ್ವದ ದೃಷ್ಟಿಯಿಂದ, ಸ್ವರಾಜ್ಯ ಸಿಗುವ ಮೊದಲಿದ್ದ ಪ್ರಾಮಾಣಿಕ ಮತ್ತು ದಕ್ಷ ಆಡಳಿತದ ಸುಖಸಮಾಧಾನದ ಹಾಗೂ ಅನ್ಯಾಯವಿಲ್ಲದ ಶಾಂತ ಜೀವನವು ಹೋಯಿತಲ್ಲಾ ಎಂದು ಪರಿತಪಿಸುವಂತಾದೀತು. ಆದ್ದರಿಂದ, ಸ್ವರಾಜ್ಯ ಲಾಭದ ಒಂದೇ ಲಾಭವೆಂದರೆ, ಗುಲಾಮಗಿರಿಯ ಕಳಂಕ ತಪ್ಪಿತಲ್ಲಾ ಎಂಬುದು. ಸಾರ್ವತ್ರಿಕ ಜ್ಞಾನಪ್ರಸಾರದಿಂದ, ಒಳ್ಳೆಯ ನಡತೆ, ದೇವರ ಭಯ, ಮತ್ತು ಜನಪ್ರೇಮವು ನಾಗರಿಕರಲ್ಲಿ ಚಿಗುರಿದಿಂದಿಂದಲೇ ಬೆಳೆಸಲ್ಪಡುವಂತಾಗಬೇಕು. ಹಿಗಾದರೇನೇ ಸ್ವರಾಜ್ಯವು ಸುಖಕರವಾಗುವುದು; ಇಲ್ಲವಾದರೆ, ಸ್ವರಾಜವು ಅನ್ಯಾಯ ಮತ್ತು ಧನವಂತರ ದಬ್ಬಾಳಿಕೆಯಾಗುವುದು."

ಬಂಟ್ವಾಳದಲ್ಲಿ ಕಾಲೇಜಿನ ಉದ್ಘಾಟನೆ

ಬಂಟ್ವಾಳ, ಶ್ರೀ ವೆಂಕಟ್ರಮಣ ಸ್ವಾಮಿ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ತಿರುಮಲ ವೆಂಕಟ್ರಮಣ ಕಾಲೇಜ್ ಎಂಬ ಹೊಸಕಾಲೇಜು ಜುಲೈ 1 ನೇ ಬೆಳಿಗೆ ಉದ್ಘಾಟಿಸಲ್ಪಟ್ಟಿತು. ಮೊದಲಾಗಿ ಪುರೋಹಿತ ಶ್ರೀ ಬಿ. ರಮಾನಾಥ ಭಟ್ ಮತ್ತು ವೇದಮೂರ್ತಿ ಶ್ರೀ ಬಿ. ರಾಮಾಚಾರ್ಯರು ಮಂಗಳಾಚರಣೆ ನೆರವೇರಿಸಿದರು. ಕಾಲೇಜಿನ ಕರ್ತೃಸ್ವಾಮಿಯಾದ ಶ್ರೀ ಬಿ. ವೆಂಕಟೇಶ್ ಸರಸಿಂಹ ಬಾಳಿಗರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕಾಲೇಜಿಗಾಗಿ ಅವಿಶ್ರಾಂತ ದುಡಿದಿದ್ದ ಸ್ವೀಕಾರ್ ಶ್ರೀ ಬಿ. ವೈಕುಂಠ ಬಾಳಿಗರ ಸ್ಮರಣಾರ್ಥಕ್ಕಾಗಿ ಸಂತಾಪ ವ್ಯಕ್ತಪಡಿಸಲಾಯಿತು. ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಕೆ. ಮಾಧವ ಶೆಣೈಯವರು ಸಂಘದ ಸಾಧನೆಯನ್ನು ಪ್ರಶಂಸಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಯು. ದೇವದಾಸ ನಾಯ್ಕರು ಊರವರ ಸಹಕಾರಕ್ಕಾಗಿ ಅವರನ್ನು ಅಭಿನಂದಿಸಿದರು. ಕೊನೆಯಲ್ಲಿ ಶ್ರೀ ಎನ್. ಕೇಶವ ಕುಡ್ವರು ಧನ್ಯವಾದವನ್ನರ್ಪಿಸಿದರು.

ಶಿರ್ವ ಪಂಚಾಯತ್ ಸದಸ್ಯರಿಂದ ಅಧಿಕಾರ ಸ್ವೀಕಾರ

ಶಿರ್ವ—ಜುಲೈ 1ರಲ್ಲಿ ಶಿರ್ವ ಹೊಸ ಪಂಚಾಯತಿನ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಸದಸ್ಯರು ಉಡುಪಿ ತಾಲೂಕು ಬೋರ್ಡ್ ಉಪಾಧ್ಯಕ್ಷರಾದ ಡಾ| ಯು. ಕೆ. ಆಚಾರ್ಯರವರ ಅಧ್ಯಕ್ಷತೆಯಲ್ಲಿ ಪ್ರತಿಜ್ಞಾವಿಧಿಗೈದರು. ಮೈಸೂರು ವಿಧಾನ ಸಭೆಯ ಸ್ಪೀಕರ್‌ರಾದಿವಂಗತ ಶ್ರೀ ಬಿ. ವೈಕುಂಠ ಬಾಳಿಗರ ಆತ್ಮ ಶಾಂತಿಗಾಗಿ ಮೌನ ಪ್ರಾರ್ಥನೆಯನ್ನು ಗೈಯಲಾಯ್ತು. ಅಧ್ಯಕ್ಷ ಶ್ರೀ ಪಿ. ಸೀತಾರಾಮಯ್ಯಂ. ಸೆಟ್ಟಿರು "ಸದಸ್ಯರುಎಲ್ಲಾ ಭೇದಭಾವಗಳನ್ನು ಮರೆತು ಶಿರ್ವಪಂಚಾಯತ್ ಕ್ಷೇತ್ರದ ಅಭಿವೃದ್ಧಿಗಾಗಿ ತನುಮನಗಳಿಂದ ಬಗ್ಗುಟ್ಟಿನಲ್ಲಿ ದುಡಿಯಬೇಕು." ಎಂದು ಕರೆಕೊಟ್ಟರು. ಪಂಚಾಯತ್ ಶಿಬಂಧಿಯ ಸಹಕಾರವನ್ನು ಕೋರಿದರು. ಸದಸ್ಯ ಶ್ರೀ ಶ್ಯಾಮನಾಯ್ಕರು ತನ್ನೆಲ್ಲಾ ಸಹಕಾರವನ್ನು ಹೊಸ ಅಧ್ಯಕ್ಷರಿಗೆಕೊಡುವ ಭರವಸೆಯನ್ನಿತ್ತರು. ಡಾ| ಯು. ಕೆ. ಆಚಾರ್ಯರವರು ತನ್ನ ಸಂಪೂರ್ಣ ಸಹಕಾರದ ಭರವಸೆಯನ್ನಿತ್ತರು. ಕೆಲವು ಗೊತ್ತುವಳಿಗಳನ್ನು ಸ್ವೀಕರಿಸಿದ ನಂತರ ಪ್ರಥಮ ಪಂಚಾಯತ್ ಸಭೆಯು ಮುಕ್ತಾಯವಾಯ್ತು.

ನೂತನ ಸದಸ್ಯರಿಗೆ ಮತ್ತು ನಾಗರಿಕರಿಗೆ ಸತ್ಕಾರಕೂಟ

ಶಿರ್ವ— ಜುಲೈ 7, ಶಿರ್ವ ಪಂಚಾಯತಿನ ನೂತನ ಅಧ್ಯಕ್ಷರಾದ ಶ್ರೀ ಪಿ. ಸೀತಾರಾಮಯ್ಯಂ. ಸೆಟ್ಟಿಯವರು ಪಂಚಾಯತಿಗೆ ಹೊಸತಾಗಿ ಆರಿಸಲ್ಪಟ್ಟ ಸದಸ್ಯರುಗಳ ಹಾಗೂ ಊರ ಪ್ರಮುಖ ನಾಗರಿಕರ ಗೌರವಾರ್ಥ ಪಂಚಾಯತ್ ಆಫೀಸಿನ ಸಭಾಸದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಗೌನ್ಸಾಲಿಸರ್‌ರವರ ಅಧ್ಯಕ್ಷತೆಯಲ್ಲಿ ಸಾಂದರ್ಭಿಕ ಭಾಷಣ ಮಾಡಿದ್ದರು. ಊರ ಪ್ರಮುಖರಲ್ಲಿ ಡಾ| ಯು. ಕೆ. ಆಚಾರ್ಯ, ಶ್ರೀ ಬಿ. ಜಯರಾಮ ಸೆಟ್ಟಿ, ಶ್ರೀ ಯಲ್. ಮೆಂಡೋನ್ಸ್, ಡಾ| ವೆಂಕಟೇಶ್ಯ, ಯು. ಸಾಂಜೀವ ಸೆಟ್ಟಿ ಮೊದಲಾದವರು ಈ ವಿನೂತನ ಪದ್ಧತಿಯನ್ನು ಪ್ರಾರಂಭಿಸಿದ ತರುಣ ಉತ್ಸಾಹೀ ಅಧ್ಯಕ್ಷ ಶ್ರೀ ಪಿ. ಸೀತಾರಾಮ ಯಂ. ಸೆಟ್ಟಿಯವರನ್ನು ಅಭಿನಂದಿಸಿ ತಮ್ಮ ಎಲ್ಲಾ ರೀತಿಯ ಸಹಕಾರ ಕೊಡುವ ಭರವಸೆಯನ್ನಿತ್ತರು.

ಅತಿಥಿಯಾಗಿಆಗಮಿಸಿದ ಶಿರ್ವಾದಿಶ್ರೀ ಪಿಲಿಯಂ ಪಿಂಟೋರವರುಹೊಸಅಧ್ಯಕ್ಷರಿಗೆಸೇವಾಕಾಂಕ್ಷೆ ಮತ್ತು ಶುಭಾರ್ಥನೆಯನ್ನು ಕೊಂಡಾಡಿ ಶಿರ್ವ ಪಂಚಾಯತ್ ಆದರ್ಶ ಶಿಫ್ರದಲ್ಲಿಯೇ ಟೌನ್ ಪಂಚಾಯತ್‌ಆಗಬೇಕೆಂದು ಹಾರೈಸಿದರು. ಶ್ರೀ ಸೀತಾರಾಮ ಯಂ. ಸೆಟ್ಟಿಯವರು ಮೊತನಾಡುತ್ತಾ ತನಗೆ ತುಂಬಾ ಹೃದಯದ ಸಹಕಾರವನ್ನಿತ್ತ ನಾಗರಿಕರಿಗೆ ಕೃತಜ್ಞತೆಯನ್ನು ಸಮರ್ಪಿಸಿದರು.

ಶ್ರೀ ಎ. ಪಾ. ಯಜ್. ಗೌನ್ಸಲ್ಲಿಸರ್‌ರವರು ಹೊಸ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಆಶೀರ್ವದಿಸಿದರು. ಉಪಾಧ್ಯಕ್ಷ ಶ್ರೀ ಜೋಸೆಫ್ ಬರ್ಬೋಟರಿಂದ ಧನ್ಯವಾದ ಸಮರ್ಪಣೆಯಾದ ಬಳಿಕ ಲಘು ಉಪಾಹಾರವಾಯ್ತು.

ಶ್ರೀ ಎ. ಡಾವೆರೋದರ ಪೈಯವರನ್ನು ಸನ್ಮಾನಿಸಲು ಸ್ವಾಗತ ಸಮಿತಿ

ಬೆಂಗಳೂರು, ಕೆನರಾ ಬ್ಯಾಂಕ್ ಲಿಮಿಟೆಡ್‌ನ ಉಪಾಧ್ಯಕ್ಷರಾದ ಶ್ರೀ ಎ. ಡಾವೋದರ ಪೈ ಅವರು ವಿಶ್ವ ಪರ್ಯಟನದಿಂದ ಹಿಂತಿರುಗಿ ಬಂದಾಗ ಅವರನ್ನು ಸ್ವಾಗತಿಸಿ ಗೌರವಿಸಲು ಒಂದು ಪ್ರಭಾವಶಾಲೀ ಸ್ವಾಗತ ಸಮಿತಿಯು ರಚಿಸಲ್ಪಟ್ಟಿದೆ. ಶ್ರೀ ಎ. ಡಾವೋದರ ಪೈಯವರು, ಇದೇ ಜುಲೈ ತಾ. 28ರಂದು ಬೆಂಗಳೂರಿಗೆ ಹಿಂದಿರುಗಲಿದ್ದಾರೆ.

ತಾ. 31—7—68ನೇ ಬುಧವಾರ ಬೆಂಗಳೂರಲ್ಲಿ ಸ್ವಾಗತ ಸಮಾರಂಭ ಜರಗಿಸಲ್ಪಡುವುದು. ಮಾನ್ಯ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಈ ಸಮಾರಂಭದ ಅಧ್ಯಕ್ಷತೆ ವಹಿಸಲಿರುವರು. ಈ ಸಮಿತಿಯ ಕಾರ್ಯವಾಹಕರು:— ಅಧ್ಯಕ್ಷರು— ಶ್ರೀ ಪುರುಷೋತ್ತಮ ಸಿಂಘ್ ಎಲ್. ಬಜಾಜ್, ಉಪಾಧ್ಯಕ್ಷರು—ಶ್ರೀ ಎನ್. ಕೃಷ್ಣನ್, ಪಿ. ಜಾಂಜಿ — ಶ್ರೀ ಪ್ರೇಮಚಂದ್ ಡಾವಿಡೋಸ್ ಮತ್ತು ಕಾರ್ಯದರ್ಶಿ— ಶ್ರೀ ಕೆ. ಎಲ್. ನಾರಾಯಣದಾಸ.

ಕವಿ ಕುಮಿತೆ

ಬೇಲೂರ ಬಾರ, ಮಜ್ಜನದ ಮುಗಿಸಿದಮೇಲೆ
ತುರುಬು ಗಂಟಿಕ್ಕಿ ಸೀರೆಯನುಡುತಲಿಹಳು,
ಕವಿಯೊಂದು ಕಚ್ಚಿಸೀರೆಯನ.ಸೆಳೆಯಲ್ಲಿಹಳ.
ಕೋಪದಿಂ ಹೊಡೆಯೆ ಬಲಗೈಯ ನೆತ್ತಿಹಳು,
ತನ್ನಹೊಡೆಯಲ್ಕೈಯ ತಿರುವ ಕೋಮಲೆಯ
ಕಂಡು ಕವಿಯುಣಕಿಸುತಲಿಹುದು ಪಲ್ಕಿರಿದು,
'ಕವಿಗೆ ಚೆಸಲತ ಸಹಜ'ವೆಂಬ
ನುಡಿಗಿದು ಸಾಕ್ಷಿ
ಪೋರುತಿದೆ ಕವಿಯ ಪಲ್ಲುಗಳು ಕಿರಿಕಿರಿದು
ಪಲ್ಗಿರಿಯುಣಕಿಸುವ ಕವಿಯ ಚೇಷ್ಟೆಯ
ನೋಡಿ
ನಗೆಯುಕ್ಕಿ ಶೋಭಿಸಿದ ಗುಳಿಬಿದ್ದ ಕೆನ್ನೆ
ವಾನರನು ತನ್ನನವಮಾನಿಪುದನರಿತಾಗ
ಮಾಡಿಹುದು ಮುಖದಿ ರೋಷಾರುಣದ ಚಿಹ್ನೆ!
ಮರ್ಕಟದ ಚೇಷ್ಟೆಯಂ ಮುಳಿದು ನಿಂತಿಹಬಾಲೆ
ಮೊಗ್ಗುರ್ಮ ಮಂಜೂಷೆ ಮೋಹನಾಕೃತಿಯೆ!
ರೋಷ-ಹಾಸಗಳ ರಮಣೀಯ ಸಂಗಮದಿಂದ
ರಾಜ್ರ ಹಾಸ್ಯಗಳನಭಿನಯಿಸುತಿಹ ಸತಿಯೆ!
ಮೊಗಚಂದಿರನ ನೋಡಿ ತಾವರೆಯುಲರಂ
ಮುಡುಕಿ
ಮೊಗ್ಗೆಯೊಂದಂತೆನಿಸ ಚಾರುಳಾಚಲಲ
ಸೀರೆಸೆರಗೋಸರಿಸಿ ಪೇರುರದಿ ಗೋಚರಿಸ
ಮನವು ವಿಚಲಿತ ಮಾಗದಿರದು ಕವಿಶಾಪ್ಪ.
ಶಿರಿಯೆಸ್ಸಿವಿದು ಶಿಲ್ಪಕರೆಯು
ಬಲೆಯಿದ್ದುನೋಡು
ಕಲ್ಪಾಂತರಕು ಕೆಡದಿರುವ ಅಮರಕೃತಿಯು.
ಕರೆಯೆ ಸರಸ್ವತ್ವೆನಲೀ ಕಲಾಕೃತಿಯಳ್ಗ.
ಪಣಿಯೆ ಕಂಡಾರಾಧಿಸುವ ನರನೆ ಕೃತಿಯು!

—ಕಾವ್ಯಾರಾಧಕ

ಪ್ರಕಟಣೆ

ಕುಂದಾಪುರ ತಾಲೂಕು ತೆಕ್ಕಟ್ಟೆ ಗ್ರಾಮದ ಮಾಲಾಡಿ ವೆಂಕಪ್ಪ ಸೆಟ್ಟಿ ಮಗಳ ಪ್ರಾಣಬಲ ಸೆಟ್ಟಿಯು ಸರ್ವಜನಕರಿಗೆ ಈ ಮೂಲಕ ತಿಳಿಸುವುದೇನೆಂದರೆ—

ನನ್ನತಾಯಿ ಮಾಲಾಡಿ ವೆಂಕಪ್ಪ ಸೆಟ್ಟಿ ಹೆಂಡತಿವಿಧವೆ ಮಂಜಮ್ಮ ಸೆಟ್ಟಿ ಎಂಬವಳು ಈಗ ಸುಮಾರು ಎಪ್ಪತ್ತು ವರ್ಷ ಪ್ರಾಯದವಳಾಗಿದ್ದಾಳೆ. ಹತ್ತು ವರ್ಷಗಳ ಹಿಂದೆ ಕಣ್ಣು ಪರೀಕ್ಷೆಯನು ಮಾಡಿಸಿದ ಲಾಗಾಯ್ತಿನಿಂದಲೂ ತನ್ನ ಬುದ್ಧಿ ಸ್ವಾಸ್ಥ್ಯವನ್ನು ಕಳೆದುಕೊಂಡಿರುತ್ತಾಳೆ. ಅವಳಿಗೆ ನಾನು ಮತ್ತು ನರಸಮ್ಮ ಸೆಟ್ಟಿ ಎಂಬ ಇಬ್ಬರು ಮಕ್ಕಳಿದ್ದು ನಾವಿಬ್ಬರೂ ಆಕೆಯ ಮುಖ್ಯ ವಾರಿಸುದಾರರಾಗಿರುತ್ತೇವೆ. ಸದ್ರಿಯವಳಿಗೆ ತೆಕ್ಕಟ್ಟೆ, ಉಳ್ತೂರು ಮತ್ತು ಪಕ್ಕಾಡಿ ಗ್ರಾಮಗಳಲ್ಲಿ ಸುಮಾರು ಎಪ್ಪತ್ತು ಸುಮಾರು ಅಕ್ಕಿಹುಟ್ಟುವಳಿಬರುವ ಸ್ಥಿರಾಸ್ತಿಇರುತ್ತದೆ. ಸದ್ರಿಯವಳ ಅನಾಯಕ ಸ್ಥಿತಿಯ ಪ್ರಯೋಜನಪಡೆದು, ಅವಳನ್ನು ಪುಸಲಾಯಿಸಿ, ಅಥವಾ ದುರ್ಭೋಧನೆಗೊಳಿಸಿ ಅವಳಿಂದ ಬೇರೆ ಯಾರಾದರೂ, ಏನಾದರೂ ಕಾರ್ಯದಾಗೈರೆಗಳನ್ನು ನನ್ನ ಇಬ್ಬರ ಒಪ್ಪಿಗೆ ವಿನಹ ಮಾಡಿಸಿಕೊಂಡಲ್ಲಿ ಸದ್ರಿ ಕಾರ್ಯದಾಗೈರಗಳು ನನಗೆ ಭಾದಿಸತಕ್ಕದ್ದಲ್ಲ ಅಂತಹರು ಕಾರ್ಯಗಳುಸಿಂಧುವಾಗತಕ್ಕದ್ದಲ್ಲಎಂಬುಸಾಗ್ರಿಯನ್ನು ಈಮೂಲಕ ಜ್ಞಾಪಿಸಲಾಗಿದೆ.

T. Mahabala Shetty
10-7-1968.

Hindu Higher Elementary School
Kemmannu (S. K.)

Applications are invited from Secondary Grade Trained teachers to serve in leave vacancies likely to occur during the year 1968-69. Selected candidates must be prepared to report for duty forthwith.

P. K. Venkata Rao.
Manager
Hindu Higher Elementary School
Kemmannu S. K.

Navayuga Dated 18—7—68

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ವಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳುಂಟು

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಅದೃಷ್ಟ ಪರೀಕ್ಷೆ

ವರಬೇಕು, ವಧುಬೇಕು

ಪೃಷ್ಠ ಸಮಾರಂಭ, ಮೂಲೆ ಆಂಗಡಿ, ಫಲಹಾರ ಮಂದಿರ ಅಥವಾ ಬೀಸಗೆಯ ಸಮುದ್ರ ದಂಡೆಗಳನ್ನು ಜೀವನ ಸಂಗಾತಿಗಳನ್ನೊದಗಿಸುವ ಸ್ಥಾನಗಳೆಂದು ಹೇಳಬಹುದು. ಈ ಪದ್ಧತಿಗಳನ್ನು ಇನ್ನೂ ಬಿಡಲು ಸಾಧ್ಯವಾಗಿಲ್ಲ. ಆದರೂ ವಿವಾಹದ ಘೋಷಣೆಗಳು, ಸಂಗಾತಿಯ ಭೇಟಿ ಇನ್ನೂ ಒಂದು ಸ್ಥಾನವನ್ನು ಪಡೆಯಬೇಕಾಗಿದೆ. ಪ್ರಪಂಚದ ಎಲ್ಲ ಕಡೆಯಿಂದ ಲಕ್ಷಗಟ್ಟಲೆ ಪುರುಷರು ಮತ್ತು ಮಹಿಳೆಯರು ಈಗ ಸಾಮಾನ್ಯವಾದ ಪದ್ಧತಿಯಿಂದ ತಮ್ಮ ಅದೃಷ್ಟ ಪರೀಕ್ಷೆ ಮಾಡಲು ಪ್ರಯತ್ನಿಸುತ್ತಾರೆ. ಒಂದು ದಿಕ್ಕಿನ ಈ ಪದ್ಧತಿಯು ಸಮಾಜಕ್ಕೂ ಮತ್ತು ನ್ಯಾಯಕ್ಕೂ ಬಾಹಿರವಾಗಿದ್ದಿತೆಂದು ಕಲಿಸುವುದು ನಮಗೂ ಕಷ್ಟವೆನಿಸುತ್ತದೆ. ವಿವಾಹದ ಮೊಟ್ಟವೆಸದಲ ಜಾಹಿರಾತು ಈಗ ೧೫೦ ವರ್ಷಗಳ ಹಿಂದೆ "ನಾರ್ಸ್ ಪಾರ್ಟಸನ್ ಕರೆಸ್ಪಾಂಡೆಂಸ್"ವಲ್ಲಿ ಪ್ರಕಟವಾಯಿತ; ಮತ್ತು ದೊಡ್ಡ ಗಲಾಟೆಗೆ ಕಾರಣವಾಯಿತು.

ಆ ಕಾಲದಲ್ಲಿ ಒಬ್ಬ ಧೈರ್ಯಶಾಲಿಯಾದ ವ್ಯಾಪಾರಿಯು ಸಮಾಚಾರ ಪತ್ರಿಕೆಯ ಒಂದು ಕಾಲಮ್ ಪೂರ್ತಿ ತನಗೆ ಬೇಕಾಗಿದ್ದ "ಪ್ರೀತಿಯ ಮತ್ತು ಗೌರವಯುಕ್ತವಾದ ಹೆಣ್ಣಿ"ಗಾಗಿ ಬರೆದು ಕೊಡಲು ವಿನಂತಿಸಿದ್ದ. ಇದರ ಜೊತೆಗೆ ಅವನು ತನ್ನ ಒಳ್ಳೆಯ ಗುಣಗಳ ವಿವರಣೆ ಕೊಡಲು ಮರೆತಿರಲಿಲ್ಲ. ಪ್ರತಿ ಪತ್ರಿಕೆಯಲ್ಲಿಯೂ ಮದುವೆಯ ಕೇಳಿಕೆಗಳು ಬರತೊಡಗಿದ ನಂತರ ಜನರು ತಾವು ತಿದ್ದಿಕೊಳ್ಳಬೇಕೆಂಬುದನ್ನು ತಿಳಿದುಕೊಂಡರು. ೧೯೫೬ರಲ್ಲಿ ಈ ತರಹದ ಜಾಹೀರಾತುಗಳು ಮದುವೆಯ ನಿಯಮದಲಿಗೆ ಕೇಡುಂಟುಮಾಡುತ್ತವೆಂಬ ಕಾರಣದಿಂದ ನಿಷೇಧಿಸಲ್ಪಟ್ಟಿದ್ದವು. ಕೆಲವು ವರ್ಷದ ನಂತರ ಇದನ್ನು ಹಿಂತೆಗೆದುಕೊಳ್ಳಲಾಯಿತು.

ಅಲ್ಲಿಂದೀಚೆಗೆ "ದುಂದು ವೆಚ್ಚವಾಡದ ಹೆಂಡತಿ" "ಕಣ್ಣಿನ ಗೊಂಬೆ"

ಪುಣ್ಯ ಜೀವಿ

(ಎರಡನೇ ಪುಟದಿಂದ)

ಇರುವುದೊ ಇಲ್ಲವೊ ಎಂದು ಸಂಶಯವೂ ಆಗ ತೊಡಗಿತು. ಸಂಶಯ ಸುಳ್ಳಾಗಿರಲಿಲ್ಲ. ಘೂರಕ್ಕೆ ಘೂರು ಪಾಲು ಸತ್ಯವಾಗಿತ್ತು!

ಂ ಂ ಂ

ಮಹಾರಾಣಿಯವರು ಪ್ರವಾಸ ಮಾಡಿದ ರೈಲು ಶಿಡ್ಡಿಪಳ್ಳಿಯೇ ಇದ್ದಿತ್ತು. ಅದರ ಹೆಡ್‌ಲ್ಯಾಟನ ಮೇಲೆ ಒಂದು ವಿಚಿತ್ರ ಪ್ರಾಣಿ ಅಂಟಿಕೊಂಡಿತ್ತು! ಅದು ಇಂಚು ಉದ್ದ ಮೂರು ಇಂಚು ಅಗಲದ ಅದಾವ ಪ್ರಾಣಿಯೆಂದು ತಿಳಿಯುತ್ತಿರಲಿಲ್ಲ. ಅದಕ್ಕೆ ಎರಡು ಬದಿಯಲ್ಲಿ ರೆಕ್ಕೆ ಇರುವುದರಿಂದ ಅದೊಂದು ರೀತಿಯ ಪಕ್ಷಿಯೆಂದೆನಬಹುದಿತ್ತು. ಅದು ಸತ್ತಿತ್ತು.

ರೈಲು ತೊಳೆಯುವ ಆ ಕೀಳು ದರ್ಜೆಯ ನೌಕರನಿಗೆ ಏನು ತೋಚಿತೊ! ಆ ಕೂಡಲೇ ರೈಲ್ವೆ ಅಧಿಕಾರಿಗಳ ಬಳಿಗೆ ಹೋಗಿ ಹುಳದ ವೃತ್ತಾಂತ ತಿಳಿಸಿದ. ಅವರು ಮೊದಮೊದಲು ಸತ್ತ ಹುಳ ನೋಡುವುದು ಏಕೆ ಎಂದು ತಾತ್ಸಾರ ಮಾಡಿದರೂ ಕೊನೆಗೊಮ್ಮೆ ನೋಡಿಯೇ ಬಿಡೋಣ ಎಂದು ಬಂದು ನೋಡಿದರು.

ಂ ಂ ಂ

ಮಧ್ಯರಾತ್ರಿ ಸುತ್ತಮುತ್ತಲಿನ ಎಲಾ ದೀಪಗಳನ್ನು ಆರಿಸಲಾಗಿತ್ತು. ಮಹಾರಾಣಿಯವರು ಪ್ರಯಾಣಿಸಿದ್ದ ಆ ರೈಲಿನ ಹೆಡ್‌ಲ್ಯಾಟು ಬೆಳಗಿಸಲಾಯಿತು. ಅದರ ನೇರವಾದ ಬೆಳಕು ಮುಂದೆ ನಿಂತಿದ್ದ ಇನ್ನೊಂದು ರೈಲಿಗೆ ಬೀಳತ್ತಿತ್ತು! ಏನು ಅಶ್ಚರ್ಯ! ಅಲ್ಲೊಂದು ಕಪ್ಪಗಿನ ವ್ಯಕ್ತಿ ಕೈಚಾಚಿ ನಿಂತಂತೆ ಕಂಡುಬರುತ್ತಿತ್ತು.

ಅಧಿಕಾರಿಗಳ ಭಾವನೆ ಸತ್ಯವಾಗಿತ್ತು. ಪ್ರಯೋಗ ಫಲಿಸಿತ್ತು! ಮಹಾರಾಣಿಯವರಿಗೆ ಈ ವಿಚಾರವನ್ನು ತಿಳಿಸಲಾಯಿತು.

ರೈಲ್ವೆ ಇಂಜಿನ್ ಡ್ರೈವರ್ ಈ ಹುಳ ಕಂಡು ಆಶ್ಚರ್ಯಪಟ್ಟನು! ಮಹಾರಾಣಿಯವರಾಣ, ಸಹಸ್ರಾರು ಜನರನ್ನಾಣಕ್ಷಿ ಮಾಡಿದ ಈ ಹುಳ "ಪುಣ್ಯಜೀವಿಯೇ" ಸರಿ! ಎಂದುಕೊಂಡರು ಬುದ್ಧಿವಂತರು.!

ಮಹಾರಾಣಿಯವರು ತಮ್ಮ ಘೋಷಣೆಯಂತೆ ಈ 'ಪುಣ್ಯಜೀವಿ'ಯನ್ನು ರಾಜ ಸನ್ಮಾನದಲ್ಲಿ ಬರಮಾಡಿಕೊಂಡು "ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ"ನಲ್ಲಿ ಶಾಶ್ವತವಾಗಿ ಅತಿಥಿಯಾಗಿರುವಂತೆ ಇರಿಸಿಕೊಂಡರು.

ಇಂದಿಗೂ ಆ ಮ್ಯೂಸಿಯಂನಲ್ಲಿ ಈ "ಪುಣ್ಯಜೀವಿ"ಯನ್ನು ನಾವು ಕಾಣಬಹುದು. ಅದರ ಪಕ್ಕದಲ್ಲಿಯೇ ಬರೆದ ಈ ಕತೆಯ ವಿವರವನ್ನೂ ಕಾಣಬಹುದು.

(ಆಧಾರ)

ದಾನ ಮತ್ತು ತ್ಯಾಗಗಳಲ್ಲಿಯ ವ್ಯತ್ಯಾಸ

ಇಂದಿನ ಕಾಲದಲ್ಲಿ ಜನರಿಗೆ ದಾನದ ಮಾತು ಹಿಡಿಸುತ್ತದೆ. ತ್ಯಾಗದ ಮಾತು ಹಿಡಿಸುವದೇ ಇಲ್ಲ. ಆದರೆ ಇದು ಎನ್ನಲ್ಲಿಯ ದೌರ್ಬಲ್ಯ; ಆದ್ದರಿಂದಲೇ ಶಾಸ್ತ್ರಕಾರರು ಸಹ ಕಲಿಯುಗದಲ್ಲಿ ದಾನದ ಮಹಿಮೆಯನ್ನೇ ಹೊಗಳಿದ್ದಾರೆ. ಕಲಿಯುಗವೆಂದರೆಯೇ ಮನಸ್ಸಿನ ದೌರ್ಬಲ್ಯ. ದುರ್ಬಲ ಮನಸ್ಸಿಗೆ ದ್ರವ್ಯದ ಮೋಹವನ್ನು ಸಂಪೂರ್ಣ ಬಿಡುವದಾಗುವದಿಲ್ಲ! ಆದ್ದರಿಂದ ಹೆಚ್ಚೆಂದರೆ ದಾನದ ವರೆಗೆ ಹಾರಬರುತ್ತದೆ! ತ್ಯಾಗದ ಮಟ್ಟಕ್ಕೆ ಅದು ಹಾರಲಾರದು. ಲೋಭಿ ಮನಸ್ಸಿಗೆ ತ್ಯಾಗವೆಂದೊಡನೆ ಕಸಿವಿಸಿ ಎನಿಸುತ್ತದೆ. ಆದ್ದರಿಂದಲೇ ಶಾಸ್ತ್ರಕಾರರು ಜನರ ಮುಂದೆ ದಾನದ ಮಹಿಮೆಯನ್ನು ಬಣ್ಣಿಸಿದ್ದಾರೆ.

ತ್ಯಾಗವು ಬಾಡಕ್ಕೇ ಕೊಡಲಿ ಏಟು ಹಾಕುತ್ತದೆ. ದಾನವಾದರೋ ಮೇಲಿನ ಎಲೆಗಳನ್ನಷ್ಟೇ ಕೊಯ್ಯುತ್ತದೆ. ತ್ಯಾಗವು ಹೊಟ್ಟೆಯಲ್ಲಿ ತೆಗೆದುಕೊಳ್ಳುವ ಔಷಧವಾಗಿದೆ. ದಾನವಾದರೋ ಹಣೆಗೆ ಬಳಿಯುವ ಶಂಠಿಯಾಗಿದೆ. ತ್ಯಾಗದಲ್ಲಿ ಅನ್ಯಾಯದ ಬಗ್ಗೆ ತಿರಸ್ಕಾರವಿರುತ್ತದೆ! ದಾನದಲ್ಲಿ ಕೀರ್ತಿ ಪಡೆಯುವ ಲೋಭವಿರುತ್ತದೆ. ತ್ಯಾಗದಿಂದ ಪಾಪದ ಅಳಲೇ ಹರಿಯುತ್ತದೆ! ದಾನದಿಂದ ಪಾಪದ ಬಡ್ಡಿಯು ಮಾತ್ರ ತೀರುತ್ತದೆ! ತ್ಯಾಗದಲ್ಲಿ ದಯೆ ಇದೆ. ದಾನದಲ್ಲಿ ಮಮತೆ ಇದೆ. ತ್ಯಾಗದಾನಗಳೆರಡೂ ಧರ್ಮಗಳೇ. ತ್ಯಾಗವಾದರೋ ಧರ್ಮ ಶಿರೋಮಣಿಯಾಗಿದೆ! ದಾನವಾದರೋ ಧರ್ಮದ ಕಾಲ ಕಡಗವಾಗಿದೆ.

—ವಿನೋಬಾ.

॥ ಸಿರಿಗನ್ನಡಂಗೆಲ್ಗೆ ॥

ಕನ್ನಡದ ಕಾವೇರಿ ತೀರ್ಥ ವಿತರಣೆಗೆ!
ಅಣ್ಣಾ ವಾಸ್ತಿಗಳ ಕೈಕೋಡುತ್ತಿದ್ದರಣಗೆ!
ಇನ್ನಾದರೂ ನಮ್ಮ ನುಡಿಯೊಡತಿ ಬಾಳ್ಗೆ!
ನುಡಿಯುಡಿಯುನ,ಡಿವ'ಸಿರಿಗನ್ನಡಂಗೆಲ್ಗೆ!!

—'ಕಶ್ಚಿತ್'

ನವಯು�ಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಆಗಸ್ಟ್ 15

ನವಯುಗ
ಸ್ವಾತಂತ್ರ್ಯ ವಿಶೇಷ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ವಿಚಾರಪರ ಲೇಖನ, ಕವನ, ವಿಡಂಬನೆ ಮೊದಲಾದುವುಗಳಿಂದ ಕೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲೂ ಬೊಂಬಾಯಿ, ಮದರಾಸು ಮೊದಲಾದ ಹೊರರಾಜ್ಯ ಹಾಗೂ ವಿದೇಶದಲ್ಲೂ ಪ್ರಚಾರದಲ್ಲಿರುವ 'ನವಯುಗ'ವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ದಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.,

'Ably written- Quite up-to-date valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್., ಇವರು ಮುದ್ರಾಂಕಿಸಿದ್ದಾರೆ.

ಮಕ್ಕಳು, ಹೆಂಗಸರು, ಸರ್ಕಾರಿಯವರು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳನ್ನೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟ ಗೃಹವೈದ್ಯ, ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಟ್ರೆ ಪಿರ್ಜು ಸೇರಿ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

NAVAYUGA 18—7—1960
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No: 31
Licensed to Post without Prepayment

ಆರ್ಥಿಕ ಸಮೀಕ್ಷೆ

ಏರುತ್ತಿರುವ ಬೆಲೆಮಟ್ಟ

ಜನ ಜೀವನವು ಕಷ್ಟದಲ್ಲಿ ತೊಳಲಾಡುತ್ತಿದೆ

ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಜೀವನಾವಶ್ಯಕ ವಸ್ತುಗಳ ಬೆಲೆ ಏರಿದೆ; ನಮ್ಮ ದೇಶವೂ ಏರುತ್ತಿದೆ. ಆದರೆ ಪ್ರಗತಿಶೀಲ ರಷ್ಟ ಆಡಳಿತವಿರುವ ರಾಷ್ಟ್ರಗಳು ಬೇರೆ ವಸ್ತುಗಳ ಬೆಲೆ ಏರಿದರೂ ಜೀವನಾವಶ್ಯಕ ವಸ್ತುಗಳ ಬೆಲೆ ಏರದಂತೆ ಎಚ್ಚರವಹಿಸಿವೆ. ಉದಾಹರಣೆಗೆ ಕಳೆದ ಹತ್ತು ವರ್ಷಗಳಲ್ಲಿ ಯುರೋಪಿನ ರಾಷ್ಟ್ರಗಳಲ್ಲಿ ಹಾಗೂ ಜಪಾನಿನಲ್ಲಿ ಬೆಲೆ ಮಟ್ಟ ಶೇಕಡ ೧೧ ರಷ್ಟು ಮಾತ್ರ ಏರಿದೆ. ಆದರೆ ಭಾರತದಲ್ಲಿ ಇದು ಶೇಕಡ ೮೦ ರಷ್ಟು ಏರಿದೆ. ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಬೆಲೆ ಮಟ್ಟ ಶೇಕಡ ೨೮ ರಷ್ಟು ಏರಿದೆ.

೧೯೫೫-೫೬ರ ಬೆಲೆಯನ್ನು ೧೦೦ ಎಂದು ಇಟ್ಟುಕೊಂಡರೆ ಭಾರತದಲ್ಲಿ ರಬಿ ಬೆಲೆಗಳು ೧೯೬೭ಕ್ಕೆ ಶೇಕಡ ೨೨೪ ರಷ್ಟು ಏರಿದವು. ಆಹಾರ ಧಾನ್ಯಗಳ ಇಂಡೆಕ್ಸ್ ನಂಬರು ೨೯೫ಕ್ಕೆ ಏರಿತು. ೧೯೬೭-೬೮ ರ ನಂತರ ಬೆಲೆ ಮಟ್ಟವು ಗಾಬರಿ ಹುಟ್ಟಿಸುವಂತೆ ಏರುತ್ತಿದೆ. ಪ್ರತಿವರ್ಷ ಶೇಕಡ ೧೫-೨೦ ರಂತೆ ಬೆಲೆ ಏರುತ್ತಿದೆ.

ರಿಸರ್ವ್ ಬ್ಯಾಂಕಿನವರು ಪ್ರಕಟಿಸಿರುವ ೧೯೬೬-೬೭ರ ಕರೆನ್ಸಿಯ ವೇಲಿನ ವರದಿಯು ಹೀಗೆ ಶೇಕಡ ೧೯೫-೬೬ರ ಶೇಕಡ ೧೪.೧ ರಷ್ಟು ಆಹಾರ ಧಾನ್ಯ ಬೆಲೆ ಏರಿಕೆಯ ವೇಲೆ ೧೯೬೬-೬೭ರಲ್ಲಿ ಶೇಕಡ ೨೪.೧ ರಷ್ಟು ಬೆಲೆ ಏರಿದೆ. ಈ ಹದ್ದುಬಸ್ತಿಲ್ಲದ ಬೆಲೆ ಏರಿಕೆ ಜನ ಜೀವನವನ್ನು ಕಷ್ಟಕ್ಕೆ ಈಡುಮಾಡಿರುವುದಲ್ಲದೆ ಆರ್ಥಿಕ ಸಮತೋಲನವನ್ನು ತಪ್ಪಿಸಿ ಜನತೆಗೂ, ರಾಷ್ಟ್ರಕ್ಕೂ ಗಂಡಾಂತರ ತಂದಿದೆ.

ಆರ್ಥಿಕ ತಜ್ಞರೆನಿಸಿದ ಅಮೇರಿಕಾದ ಪ್ರೊ. ಸಿಡ್ನಿ ಪೀಸ್‌ಟ್ರಾಬರವರ ಅಭಿಮತದಂತೆ ವಸ್ತುಗಳ ಬೆಲೆಯು ವರ್ಷದಲ್ಲಿ ಶೇ ೩ಕ್ಕಿಂತಾ ಮೀರಿ ಹೆಚ್ಚುವುದು ಆ ರಾಷ್ಟ್ರದ ಆಡಳಿತ ಸಮರ್ಥತೆಯನ್ನು, ಆ ಸರಕಾರದ ಬೆಲೆ ಸ್ಥಿತಿಯ ಸ್ಥಿಪ್ಪಲತೆಯನ್ನು ತೋರಿಸುತ್ತದೆ. ಭಾರತ ಸರಕಾರವು ಬೆಲೆ ಹೆಚ್ಚದಂತೆ ತಡೆಹಿಡಿಯಲು ಪರ ದೇಶಗಳಿಂದ ಆಮದು ಮಾಡುವ ಆಹಾರ ಪದಾರ್ಥಗಳ ಮಿತಿಯನ್ನು ೪.೫ ಮಿಲಿಯನ್ ಟನ್ನುಗಳಿಂದ ೧೯೬೮ ರ ೬.೪ ಮಿಲಿಯನ್ ಟನ್ನುಗಳಿಗೆ ಏರಿಸಿದರೂ ೧೯೬೮-೬೯ ರ ವರ್ಷದ ಪ್ರಥಮ ಅರ್ಧವರ್ಷದಲ್ಲಿ ೩.೫ ಮಿಲಿಯನ್ ಟನ್ನು ತರಿಸಿದ್ದರೂ ಪ್ರಯೋಜನವಾಗಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ವಿದೇಶಗಳಿಂದ ತರಿಸುವ ಆಹಾರ ಧಾನ್ಯಗಳ ಪ್ರಮಾಣ ೧೨ ಮಿಲಿಯನ್ ಟನ್ನುಗಳನ್ನು ತಲುಪಿದೆಯೆಂದು ಹೇಳಲ್ಪಟ್ಟಿದ್ದರೂ, ಬೆಲೆ ಏರಿಕೆ ಮೇಲ್ಮೊಗವಾಗಿಯೇ ಸಾಗುತ್ತಿದೆ.

ಬೆಲೆ ಹೀಗೆ ಏರಲು ಹಲವು ಕಾರಣಗಳಿವೆಯಾದರೂ ಭಾರತ ಸರಕಾರವು ಸಿಕ್ಕಾಬಟ್ಟೆ ಕರೆನ್ಸಿ ಅಚ್ಚು ಹಾಕಿಸಿ ಹಣದ ಬ್ಬರವನ್ನು ಮಾಡಿದ್ದು ಅರ್ಥಾತ್ 'ಡೆಫಿಸಿಟ್ ಫಿನಾನ್ಸಿಂಗ್' ಅನುಸರಿಸಿದುದು ಮುಖ್ಯ ಕಾರಣ. ಇದರ ಜೊತೆಗೆ ಅವೈಜ್ಞಾನಿಕವಾದ ಪಿ.ಎಲ್. ೪೮೦ ವಿಧಿಯಿಂದ ಆಗಾಗ್ಗೆ ಹಣ ಬಿಡುಗಡೆ ಮಾಡಿದುದು ಹಣದ ಚಲಾವಣೆ ಹೆಚ್ಚಿಸಿ ವಸ್ತುಗಳ ಬೆಲೆ ಮಟ್ಟವನ್ನು ಮೇಲೇರಿಸುತ್ತಿದೆ. ೧೯೬೦-೬೧ರಲ್ಲಿದ್ದ ೨೮೯ ಕೋಟಿ ರೂಪಾಯಿಗಳ ನೋಟಿನ ಚಲಾವಣೆಯು ೧೯೬೬ರ ಫೆಬ್ರುವರಿಯಲ್ಲಿ ೪೮೧ ಕೋಟಿಗೆ ಏರಿತು. ೧೯೪೮-೪೯ರಲ್ಲಿದ್ದ ರಾಷ್ಟ್ರೀಯ ವರಮಾನವು ೮೦೦ ಕೋಟಿಯಿಂದ ಮೂರನೇ ಯೋಜನಾಂತ್ಯದಲ್ಲಿ ೧೫,೦೦೦ ಕೋಟಿಗೆ ಏರಿತು. ಇದರ ಜೊತೆಗೆ ಪಿ.ಎಲ್. ೪೮೦ ವಿಧಿ ಹಾಗೂ ಪೋಕಾ ಬಡ್ಜೆಟ್ ಹೆಸರಿನಲ್ಲಿ ಅನುಕ್ರಮವಾಗಿ ಪ್ರಥಮ ದ್ವಿತೀಯ ಮತ್ತು ತೃತೀಯ ಯೋಜನಾವಧಿಗಳಲ್ಲಿ ೨೯೬.೨ ಕೋಟಿ, ೧೩೮.೫ ಕೋಟಿ ೧೩೨೦.೨ ಕೋಟಿ ರೂಪಾಯಿಗಳು ತುಂಬಲ್ಪಟ್ಟವು. ಇದಕ್ಕೆ ಸರಿಸಮಾನವಾದ ಉತ್ಪಾದನೆ ಇಲ್ಲದೆ, ಹಣದ ಚಲಾವಣೆ ಹೆಚ್ಚಿದ ಕಾರಣ ಸ್ವಾಭಾವಿಕವಾಗಿ ವಸ್ತುಗಳ ಬೆಲೆ ಏರಿಕೆವಾಯಿತು. ಇದರ ಜೊತೆಗೆ ಭಾರತೀಯ ರೂಪಾಯಿಯ ಬಾಹ್ಯ ವಿಚ್ಛೇದನವು ಪರಿಸ್ಥಿತಿಯನ್ನು ಉಲ್ಬಣಗೊಳಿಸಿತು.

ಪರಿಣಾಮವಾಗಿ ಇಂದು ನಮ್ಮ ದೇಶವು ಜಗತ್ತಿನ ರಾಷ್ಟ್ರಗಳಲ್ಲಿ ಹೆಚ್ಚು ಕಂದಾಯ ತೆರುವ ರಾಷ್ಟ್ರವಾಗಿದೆ. ಸಾಮಾನ್ಯ ಜನತೆಯು ಉಪಯೋಗಿಸುವ ದೈನಂದಿನ ವಸ್ತುಗಳಾದ ಸೀಮೆಎಣ್ಣೆ, ಬೆಂಕಿಪೊಟ್ಟಣವನ್ನು ತರ ಜೀವನಾವಶ್ಯಕವಸ್ತುಗಳ ಬೆಲೆಯಲ್ಲಿ ಶೇಕಡ ೩೫ರಿಂದ ೬೦ ರಷ್ಟು ಸರಕಾರ ವಿಧಿಸಿದ ಕಂದಾಯವೇ ಆಗಿದೆ. ಕೇಂದ್ರ ಸರಕಾರದ ಎಕ್ಸೈಸ್ ತೆರಿಗೆಯು ಎರಡನೆಯ ಯೋಜನೆಯ ಹೊತ್ತಿಗೆ ಶೇಕಡ ೯೦೦ರಂತೆ ಏರಿದ್ದರೆ ಅದರ ನಂತರ ಏರಿದ ಮೊತ್ತದ ಮೇಲೆ ೧೯೬೬ ಹೊತ್ತಿಗೆ ಶೇಕಡ ೧,೧೦೦ ರಷ್ಟು ಏರಿದೆ. ಈ ರೀತಿ ಕಂದಾಯದ ಹೆಸರಿನಲ್ಲಿ ಒಂದು ಸುಲಿಗೆ ಜಗತ್ತಿನ ಯಾವ ರಾಷ್ಟ್ರದಲ್ಲಿ ಎಂದೂ ನಡೆದಿಲ್ಲ. ಭಾರತದ ಆರ್ಥಿಕಸ್ಥಿತಿ ತಲೆಕೆಳಗಾಗಿದೆ. ಸಾರ್ವಜನಿಕ ಸಾಲ ವಿಪರೀತವಾಗಿದೆ. ಹೊರ ರಾಷ್ಟ್ರಗಳಿಂದ ಭಾರತ ಪಡೆದಷ್ಟು ಸಾಲ ಬೇರೆಯಾವ ರಾಷ್ಟ್ರವೂ ಪಡೆದಿಲ್ಲ. ಈ ಸಾಲಗಳ ಬಡ್ಡಿಗಾಗಿಯೇ ಸರಕಾರದ ಆದಾಯದ ಬಹುಅಂಶ ಕರಗಿಹೋಗುತ್ತಿದೆ. ಭಾರತವು ಬದುಕಲು ಆಕರ್ಷಕ ಸ್ಥಳವಾಗಿ ಉಳಿದಿಲ್ಲವೆಂದು ವಿಷಾದದಿಂದ ಹೇಳಬೇಕಿದೆ.

(ಕೊಡಗು) (ಸಾಧಾರ)

ದಯಮಾಡಿ
ನಿಮ್ಮ ಚಂದಾ ಹಣ
ಕಳುಹಿಸಿ ಕೊಡಿರಿ
ತನ್ಮೂಲಕ 'ನವಯುಗ'ಕ್ಕೆ
ಸಹಕಾರ ನೀಡಿರಿ
ವಾರ್ಷಿಕ ಚಂದಾ ರೂ. ೧೦

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯ ಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ.

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಬೆಲೆ: ರೂ. 2—00,

ಪುಸ್ತಕದ ಬೆಲೆಯೊಂದಿಗೆ 50 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಷ್ಠಿತ ಪುಸ್ತಕ ಅಂಗಡಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

Edited, Printed & Published by M. H. Shetty at the Navayuga Press, Udipi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

25—7—1968

೨೦
ಪೈಸೆ

ತ್ಯಾಗವೇ ಪರಮ ಪುಣ್ಯ

ಬರೆದವರು: ಶ್ರೀ ನವಗಿರಿನಂದ.

ಅಯೋಧ್ಯಾ ನಗರವನ್ನು ಆಳಿಕೊಂಡಿದ್ದ ಸುದೀಪನೆಂಬ ಮಹಾರಾಜನಿಗೆ ನೂರು ಮಂದಿ ಹೆಂಡತಿಯರಿದ್ದರು. ಆದರೆ ನೂರು ಮಂದಿ ಹೆಂಡತಿಯರೂ ಸಂತಾನವತಿಯರಾಗಿರಲಿಲ್ಲ. ಆದುದರಿಂದ ರಾಜನು ಕುಲಗುರುಗಳಾದ ವಸಿಷ್ಠರ ಸಲಹೆಯನ್ನು ಕೇಳಿಕೊಂಡು ಪುತ್ರಾರ್ಥಿಯಾಗಿ ಪುತ್ರಕಾಮೇಷ್ಟಿ ಯಾಗವನ್ನು ಮಾಡಿದನು. ಅನಂತರ ಪಟ್ಟದ ರಾಣಿಯಾದ ಸುಬಲಾದೇವಿ ಒಬ್ಬ ಪುತ್ರನನ್ನು ಪಡೆದಳು.

ಹೀಗೆ ಹುಟ್ಟಿದ ಆ ಮಗನಿಗೆ ರಾಜನು "ಜಂತುದೇವ" ಎಂದು ನಾಮಕರಣ ಮಾಡಿದನು. ಅವನು ಸರ್ವ ಗುಣ ಸಂಪನ್ನನಾಗಿ ಬೆಳೆಯುತ್ತಿರುವಾಗ, ಉಳಿದ ತೊಂಬತ್ತೊಂಬತ್ತು ಮಂದಿ ರಾಣಿಯರೂ ದುಃಖದಿಂದ ಕೊರಗಿಕೊಂಡೇ ಇದ್ದರು. ತಾವೆಲ್ಲರೂ ಪುತ್ರವತಿಯರಾಗುವ ಹಾಗೆ ಏನಾದರೂ ಮಾಡಬೇಕೆಂದು ರಾಜನನ್ನು ಪೀಡಿಸಲಿಕ್ಕೂ ತೊಡಗಿದರು.

ರಾಜನು ಮತ್ತೆ ವಸಿಷ್ಠರೊಡನೆ ಆಲೋಚನೆ ಕೇಳಿದನು. "ಇನ್ನು ಮೇಲೆ ಪುತ್ರ ವಾಂಛೆಯ ಚಿಂತೆಯನ್ನು ಬಿಟ್ಟು ಬಿಡಬೇಕು. ವಂಶೋದ್ಧಾರಕನಾದ ಪುತ್ರನಿರುವಾಗ ಮತ್ತೆ ಪುತ್ರಕಾಮೇಷ್ಟಿ ಯಾಗ ಮಾಡುವುದೂ ಸರಿಯಲ್ಲ. ಅರ್ಥವೂ ಇಲ್ಲ. ರಾಣಿಯರೆಲ್ಲಾ ಸಮಾಧಾನವಾಗಿರಲಿ" ಎಂದರು ವಸಿಷ್ಠರು.

ರಾಣಿಯರಿಗೆ ಸಮಾಧಾನವಾಗಲಿಲ್ಲ. ವಸಿಷ್ಠರು ಪಕ್ಷಪಾತಬುದ್ಧಿಯವರೆಂದು ಹಳಿದು ಕೂಂಡರು. ವಸಿಷ್ಠರಂತೆಯೇ ಪ್ರಭಾವಶಾಲಿಯಾದ ನಾಮಕ ಮಹರ್ಷಿಯನ್ನು ಕರೆದು ಆಲೋಚನೆ ಕೇಳುವಂತೆ ರಾಜನಿಗೆ ಒತ್ತಾಯ ಮಾಡಿದರು.

ಒಬ್ಬರಿಗಿಂತೊಬ್ಬರು ಸುಂದರಿಯರಾಗಿದ್ದ ರಾಣಿಯರ ಒತ್ತಾಯದಿಂದ ಸುದೀಪ ರಾಜನು ಮತ್ತಗಾಗಿ, ನಾಮಕಾಶ್ರಮಕ್ಕೆ ಹೋಗಿ, ತನ್ನ ಸಮಸ್ಯೆಯನ್ನು ಅವರ ಮುಂದೆ ಬಿಚ್ಚಿದನು. ಎಲ್ಲ ರಾಣಿಯರೂ ಪುತ್ರವತಿಯಾಂತಾಗುವ ಹಾಗೆ ಮಾಡಬೇಕೆಂದು ಕೇಳಿಕೊಂಡನು.

ನಾಮಕರು ಬಹಳ ಯೋಚನೆ ಮಾಡಿ, "ರಾಜಾ, ನಿನಗೆ ಒಬ್ಬ ಪುತ್ರನೆಂಬುದೇ ವಿಧಿಯ ನಿಯಮ. ಈ ಒಬ್ಬ ಪುತ್ರನೇ ನೂರು ಅಂಶಗಳಾಗಿ ಹುಟ್ಟುವ ಹಾಗೆ ಶಾಸ್ತ್ರೀಕ ಪುತ್ರಕಾಮೇಷ್ಟಿ ಯಾಗ ಮಾಡುವುದಂ ಹೊರತು ಬೇರೆ ದಾರಿ ಇಲ್ಲ. ಇದಕ್ಕೆ ಮುಖ್ಯವಾಗಿ ನಿನ್ನ ಮಗನು ಸ್ವಸಂತೋಷದಿಂದ ಒಪ್ಪಿಕೊಳ್ಳಬೇಕು. ಇದು ನರಮೇಧದಂತಹ ತ್ಯಾಜ್ಯ ಯಜ್ಞವಾದುದರಿಂದ ಇದನ್ನು ಮಾಡಿಸಿದವನಿಗೆ ಘೋರ ಪೀಡೆಗಳು ಅಂಟಿಕೊಳ್ಳುತ್ತವೆ. ಇದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಸಮರ್ಥನಾದವನೇ ಅಧ್ವರ್ಯುವಾಗಿ ಮಾಡಬೇಕು. ಆದುದರಿಂದ ಈ ಆಲೋಚನೆ ಬೇಡ" ಎಂದು ತಿಳಿ ಹೇಳಿದರು.

ನಾಮಕರು ಅಧ್ವರ್ಯುತೆ ವಹಿಸಿಕೊಳ್ಳುವ ಸಮರ್ಥರೇನೋ ನಿಜ. ಅವರನ್ನು ಒಪ್ಪಿಸಲೂ ಬಹುದು. ಆದರೆ ಜಂತುದೇವನು ಇದಕ್ಕೆ ಸ್ವಬುದ್ಧಿಯಿಂದ ಒಪ್ಪಿಕೊಳ್ಳುವ ಮಾತೆಂಟು?

ಎಲ್ಲಾ ರಾಣಿಯರನ್ನು ಒತ್ತಾಯಪಡಿಸಲಾರದೆ ಹೋದೆನಲ್ಲಾ—ಎಂದು ರಾಜನು ತುಂಬ ಚಿಂತೆಯಲ್ಲಿ ಇಳಿದು ಹೋದನು. ಅವನ ಮುಖವು ಕಳಾಹೀನವಾಗಿ ಹೋಯಿತು.

ತಂದೆ ಎಂದಿನಂತಿಲ್ಲದೆ, ಚಿಂತೆಯಲ್ಲಿರುವುದನ್ನು ಜಂತುದೇವನೂ ನೋಡಿದನು. ಪಿತೃಭಕ್ತನಾದ ಅವನು ತಂದೆಯನ್ನು ಮಾತಾಡಿಸಿ, ಕಾರಣವೇನೆಂದು ಕೇಳಿದನು ಆದರೆ ಮಗನಿಗೆ ಅದನ್ನು ಹೇಳಲು ತಂದೆಯಿಂದಾಗಲಿಲ್ಲ. ತಾಯಿಯರಿಗಾದರೂ ಗೊತ್ತಿರಬಹುದೆಂದು ಅವನು ಒತ್ತಾಯಿಸಿ ಕೇಳಿದಾಗ, ಅವರು ಅವನಿಗೆ ಮಹಾರಾಜನ ದುಃಖದ ಕಾರಣವನ್ನು ತಿಳಿಯಪಡಿಸಿದರು.

"ಅಷ್ಟೇ ತಾನೇ ಅಪ್ಪಾ, ಅದಕ್ಕೇಕೆ ಇಷ್ಟು ದೊಡ್ಡ ಚಿಂತೆ? ನಾನು ನೂರು ಅಂಶಗಳಾಗಿ ಮೂರುವಂದಿ ತಾಯಿಯರ ಹೊಟ್ಟೆಯಲ್ಲಿ ಹುಟ್ಟಿ ನೂರುಮಂದಿ ತಾಯಿಯರನ್ನೂ ಸಂತೋಷಗೊಳಿಸುವ ಮಗನಾಗುವುದಕ್ಕಿಂತಲೂ ಮಹಾಭಾಗ್ಯ ಬೇರೇನಿದೆ? ಯಜ್ಞಕ್ಕೆ ಏರ್ಪಾಡು ಮಾಡಿಸಿ ಬಿಡಿ" ಎಂದು ತಂದೆಗೆ ಸಮಾಧಾನ ಹೇಳಿ ಒಪ್ಪಿಸಿಬಿಟ್ಟನು.

ಅನಂತರ ನಾಮಕ ಋಷಿಗಳ ಅಧ್ವರ್ಯುತೆಯಲ್ಲಿ ಶತ್ರೈಕಪುತ್ರಕಾಮೇಷ್ಟಿ ಯಾಗವು ಸಾಂಗೋಪಾಂಗವಾಗಿ ನೆರವೇರಿತು. ಹೋಮಧೂಮವನ್ನು ಆಘ್ರಾಣಿಸಿ ಪ್ರಸಾದ ಸ್ವೀಕಾರಮಾಡಿದ ನೂರುಮಂದಿ ರಾಣಿಯರೂ ಗರ್ಭವತಿಯರಾಗಿ ನವಮಾಳಗಳು ತುಂಬಿದವೇಳೆ, ಒಬ್ಬೊಬ್ಬ ಪುತ್ರನನ್ನು ಪಡೆದರು.

ಹೀಗೆ ಹುಟ್ಟಿದ ನೂರುಮಂದಿ ಕುಮಾರರೂ ತಾಯಂದಿರ ರೂಪಾಕಾರಗಳಿಗೆ ತಕ್ಕ ಹಾಗೆ ಬೇರೆ ಬೇರೆಯಾಗಿ ಕಾಣಿಸಿದರೂ ಒಬ್ಬರ ಮೇಲೊಬ್ಬರು ಅನ್ಯೋನ್ಯ ಸ್ನೇಹದಿಂದಲೇ ಬೆಳೆದುಕೊಂಡಿದ್ದರು. ಪಟ್ಟದ ರಾಣಿ ಸುಬಲಾ ದೇವಿಯ ಹೊಟ್ಟೆಯಲ್ಲಿ ಹುಟ್ಟಿದವನು ಜಂತುದೇವನೆಂಬ ಹೆಸರಿನಲ್ಲಿಯೇ ಬೆಳೆಯುತ್ತಿದ್ದನು. ರಾಣಿಯರಿಗೆಲ್ಲ ತೃಪ್ತಿಯೆಯ್ತು.

ಆದರೆ ಆ ಕಾಲದಲ್ಲಿ ನಿಷೇಧಿಸಲ್ಪಟ್ಟ ಯಜ್ಞ ಮಾಡಿಸಿದ ನಾಮಕರು ಮಾತ್ರ ಮಹಾ ಪೀಡೆಗೆ ಗುರಿಯಾದರು. ದೋಷ ಪರಿಹಾರಾರ್ಥವಾಗಿ ಅವರು ಧ್ಯಾನ, ಹೋಮ, ತಪಸ್ಸುಗಳನ್ನು ಮಾಡುತ್ತಿದ್ದರೂ, ಕೆಲವು ವಾರಗಳಲ್ಲಿ ಅವರ ರೂಪವೇ ಬದಲಾಗಿ ಹೋಯಿತು. ವಿಕಾರವಾಗಿ ಹೋಯಿತು. ಅವರು ಸಂಪಾದಿಸಿಕೊಂಡಿದ್ದ ತಪಃಶಕ್ತಿಯೆಲ್ಲವೂ ಭಸ್ಮವಾಗಿ ಹೋಯಿತು. ವಿಕೃತವಾದ ದೋಷ ಮೂರ್ತಿಗಳು ಅವತಿಸ್ಸು ಸುತ್ರಿಕೊಂಡು "ಇಂತಹ ದುರ್ಯಜ್ಞ ಮಾಡಿಸಿದ ನಿನಗೆ ಭೂಮಿಯಲ್ಲೇ ನರಕವಾಸ ಬೇಕು. ನಿನಗೆ ಇನ್ನೂ ಭೂಮಿಯಲ್ಲಿ ಬದುಕಬೇಕಾದ ಆಯುಸ್ಸಿದೆ" ಎಂದು ಅವರನ್ನು ನರಕಬಾಧೆಗೆ ಗುರಿಪಡಿಸಿದುವು.

ನಾಮಕ ಋಷಿ ಆ ದೋಷದಿಂದ ಉಂಟಾಯ ಬಾಧೆಯನ್ನು ತಾಳಲಾರದೆ ರಾಜನ ಹತ್ತಿರ ಬಂದು ಆರ್ತಸ್ವರದಿಂದ, 'ರಾಜಾ, ಈ ನರಕ ಬಾಧೆಯಿಂದ ನೀನೇ ನನ್ನನ್ನು ಕಾಪಾಡಬೇಕು, ನಾನು ಸಹಿಸಲಾರೆ, ನಿನ್ನ ಒತ್ತಾಯಕ್ಕೂ ಲೋಭಕ್ಕೂ ಗುರಿಯಾಗಿ ಈ ಕಷ್ಟ ತಂದುಕೊಂಡೆನಲ್ಲಾ!' ಎಂದು ಗೋಳಾಡಿದನು;

ಸುದೀಪನಿಗೆ ಒಂದೂ ತೋರಲಿಲ್ಲ. ತೋರಿಸುವವರಾರೂ ಕಾಣಲಿಲ್ಲ, ವಶಿಷ್ಠರೇ ಗತಿಯೆಂದು ನೆನೆದಂಬ್ಕಿ ವಶಿಷ್ಠಾಶ್ರಮಕ್ಕೆ ಓಡಿಹೋಗಿ, ಎಲ್ಲಾ ವಿವರಗಳನ್ನೂ ಅವರ ಮುಂದೆ ಅರಿಕೆ ಮಾಡಿಕೊಂಡು—"ನಾಮಕ ಋಷಿಗಳ ಸಂಕಟವನ್ನು ನೋಡಲಾರೆ, ನನಗಾಗಿಯೇ ಅವರು ಅಂತಹ ಯಜ್ಞವನ್ನು ಮಾಡಿಸಿದರು. ಅವರ ಬಾಧೆಗಳು ಪರಿಹಾರವಾಗುವ ಮಾರ್ಗವನ್ನು ನೀನೇ ತೋರಿಸಬೇಕು. ಶರಣು, ಶರಣು" ಎಂದು ಬೇಡಿಕೊಂಡನು.

"ಹೌದು, ಇಹಲೋಕದ ಸುಖಕ್ಕಾಗಿ ಮಾಡತಕ್ಕ ಕೆಲವು ಅಸಂಗತವಾದ ಯಜ್ಞಗಳಿಗೆ ಪ್ರಾಯಶ್ಚಿತ್ತವಿರುವುದೇನೋ ನಿಜ. ಆದರೆ ನಿಷೇಧಿಸಲ್ಪಟ್ಟ ನರ ಮೇಧದಂತಹ ಯಜ್ಞಗಳಿಗೆ ಪ್ರಾಯಶ್ಚಿತ್ತವಿಲ್ಲವೆಂಬ ಸೂಕ್ಷ್ಮವನ್ನು ನಾಮಕ ಋಷಿ ಗ್ರಹಿಸದೆ ಹೋದನು. ತಪ್ಪು ಮಾಡಿದವನು ಅದರ ಫಲವನ್ನು ಅನುಭವಿಸಲೇ ಬೇಕು. ತಿಳಿದವನೇ ತಪ್ಪು ಮಾಡಿದರೆ ಕ್ಷಮೆಯೇ ಇಲ್ಲ" ಎಂದರು ವಸಿಷ್ಠರು.

"ಅವರು ಇಂತಹ ತಪ್ಪನ್ನು ಮಾಡಲು ಕಾರಣನಾದವನು ನಾನೇ. ನನ್ನ ಒತ್ತಾಯದಿಂದಲೇ ಅವರು ಮನಸ್ಸು ಕಠಿಣ ಮಾಡಿಸಿದರು. ಈಗ ಅವರನ್ನು ರಕ್ಷಿಸಬೇಕಾದುದು ನನ್ನ ರಾಜಧರ್ಮವೂ ಆಗಿದೆ. ಅದಕ್ಕಾಗಿ ನಾನು ಜೀವವನ್ನೇ ಕೊಡಬೇಕಾದರೂ ಸಿದ್ಧನಾಗಿದ್ದೇನೆ. ದಯವಿಟ್ಟು ನನ್ನ ಈ ಬಾಧೆಗೆ ನಿವೃತ್ತಿ ತೋರಿಸಲೇ ಬೇಕು" ಎಂದು ರಾಜನು ತುಂಬ ಆರ್ತನಾಗಿ ಬೇಡಿಕೊಂಡನು.

"ರಾಜಾ, ನೀನು ನಿನ್ನ ಪೂರ್ವ ಸುಕೃತಗಳೆಲ್ಲವನ್ನೂ ಧಾರೆ ಕೊಡಬೇಕಾದರೆ,

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿಷ್ಟ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಶಾಕಾಹಾರಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ
O.S. 217/1967

ರಜ್ರಮ್ಮ ಸಿದ್ದಿ — ವಾದಿ
ಮತ್ತು
ತುಂಗಮ್ಮ ಸಿದ್ದಿ ಕೊಡಾ — ಪ್ರತಿವಾದಿರು
ಇವರೊಳಗೆ

ಪ್ರತಿವಾದಿಃ—

೨. ಜಲಜಾಕ್ಷಿ ಸಿದ್ದಿ-ತುಂಗಮ್ಮ ಸಿದ್ದಿರ ಮಗಳು, ಉಡುಪಿ ತಾಲೂಕು, ಹಾರಾಡಿ ಗ್ರಾಮದಲ್ಲಿ ವಾಸವಾಗಿರುವಳು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ವಾದಿಗೆ ತಾ. 21-1-1963ರಲ್ಲಿ ರೂಪಾಯಿ 4,000.00ಕ್ಕೆ ಬರೆಕೊಟ್ಟ ಈಡು ಒಪ್ಪಂದದ ಅಸಲು, ಬಡ್ಡಿ ವಗೈರೆಗೆ ವಾದಿಯು ಪ್ರತಿವಾದಿರಮೇಲೆ ಮೇಲ್ಕಂಡ ದಾವೆ ದಾಖಲು ಮಾಡಿದ್ದು ಆ ಕುರಿತು ಪ್ರತಿವಾದಿಗೇನಾದರೂ ಆಕ್ಷೇಪಣೆಯಿರುವ ಸಂಗ್ತಿಯಲ್ಲಿ ಅದನ್ನು ತಾ. 14-8-1968ಕ್ಕೆ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಸಿ. ಶಿವಾಜಿ ಸಟ್ಟಿ, B.A.LL.B.
ವಾದಿ ಕಡೆ ವಕೀಲರು.

ಉಡುಪಿ, 14-7-68.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೭
No. 47

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೨೫—೭—೧೯೬೮

ಯಾರು ನೇರ, ಯಾರು ಓರೆ?

ರಾಷ್ಟ್ರಪತಿ ಡಾ| ಜಾಕೀರ ಹುಸೇನರು ಶವ್ವು ಹೆತ್ತು ದಿನಗಳ ಸೋವಿಯೆತ್ ರಷ್ಯಾದ ಸಂದರ್ಶನವನ್ನು ಮುಕ್ತಾಯಗೊಳಿಸಿ ಮರಳಿದರು. ಈ ಸಂದರ್ಶನವು ಸಂಪೂರ್ಣವಾಗಿ ಸೌಹಾರ್ದಮಯ, ಹಾಗಾಗಿ ಫಲಪ್ರದವೂ ಉಲ್ಲಾಸಿಕವಾಗಿಯೇ ಇತ್ತು. ಭಾರತದೊಡನೆ ನಿಕಟ ಬಾಂಧವ್ಯವನ್ನು ಇದುವರೆಗೂ ಇಟ್ಟುಕೊಂಡಿರುವ ಸೋವಿಯೆತ್ ನಾಡಿನ ನಾಯಕರು ಇತ್ತೀಚೆಗೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕೊಡಲು ಮುಂದಾಗಿರುವ ಈ ಸಮಯದಲ್ಲಿ ಡಾ| ಹುಸೇನರ ಸಂದರ್ಶನಕ್ಕೆ ತನ್ನದೇ ಆದ ಮಹತ್ವ ಬಂದಿತ್ತು. ಆದರೆ, ಉಭಯ ನಾಯಕರ ಜಂಟಿ ಹೇಳಿಕೆಯಲ್ಲಿ ಪಾಕಿಗೆ ಶಸ್ತ್ರಾಸ್ತ್ರ ನೀಡಿಕೆಯ ಉಲ್ಲೇಖವೇ ಇಲ್ಲವೆಂದು ತಿಳಿದು ಬಂದಿದೆ. ಹೇಳಿಕೆ ಹೊರಡಿಸುವವರಿಗೆ ಸಮ್ಮತವಾಗಿರುವ ಸಂಗತಿಗಳನ್ನಷ್ಟೇ ಜಂಟಿ ಹೇಳಿಕೆಯಲ್ಲಿ ಉಲ್ಲೇಖಿಸುವುದು ಸಂಪ್ರದಾಯವೆಂಬುದನ್ನು ಗಮನಿಸುವುದಾದರೆ, ಈ ಪ್ರಕರಣದಲ್ಲಿ ಭಿನ್ನಮತವಿದ್ದರೂ ಇರಬಹುದು. ದಕ್ಷಿಣ—ಆಗ್ನೇಯ ಏಶ್ಯಾದ ಭದ್ರತೆಗೆ ಸಂಬಂಧಿಸಿದ ಈ ಮಹತ್ವಪೂರ್ಣ ಪ್ರಶ್ನೆಯನ್ನು ಉಭಯ ನಾಯಕರೂ ಚರ್ಚಿಸಲಿಲ್ಲವೆಂದು ಹೇಳಿದರೆ, ನಂಬುವುದಕ್ಕೆ ಕಷ್ಟವಾಗುವುದು.

ರಶ್ಯವು ಪಾಕಿಸ್ತಾನವನ್ನು ಅಮೆರಿಕೆಯಾಗೂ ಕೆಂಪು ಚೀನಾಗಳ ಮುಷ್ಟಿಯಿಂದ ಬಿಡಿಸಲು ಶಸ್ತ್ರಾಸ್ತ್ರ ನೀಡುವ ನಾಟಕ ಅಭಿನಯಿಸಿರಲೂ ಸಾಕು. ಏಕೆಂದರೆ, ಪಾಕ್—ಚೀನಾಗಳ ಸ್ನೇಹದಿಂದ ರಶ್ಯದ ಸ್ಥಾನಮಾನಗಳಿಗೆ ತುಸು ಧಕ್ಕೆ ತಟ್ಟಿದೆ. ಆದೇನಿದ್ದರೂ ರಶ್ಯದ ಭಾರತ ಪ್ರೇಮ ಹಿಂದಿನಂತೆಯೇ ಇದೆಯೆಂದು ಎರಡೂ ಕಡೆಯವರೂ ಹೇಳುತ್ತಾರೆ. ಪ್ರಧಾನಿ ಇಂದಿರಾ ಗಾಂಧಿಯವರ ಹೇಳಿಕೆಯಂತೆ ಭಾರತ—ಪಾಕ್‌ಗಳ ನಡುವಣ ಮಹಾ ಪ್ರಶ್ನೆ 'ಕಾಶ್ಮೀರ ಸಮಸ್ಯೆ'ಯು ದ್ವಿಪಕ್ಷೀಯವಾಗಿಯೇ ಇತ್ಯರ್ಥವಾಗಬೇಕು ಎಂಬ ಸೋವಿಯೆತ್ ನೀತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂಬ ಬಗ್ಗೆ ಭರವಸೆ ಬಂದಿದೆ. ಭಾರತ—ಚೀನಾಗಳ ನಡುವೆ ಇರುವ ವಿವಾದದ ದುರುಪಯೋಗವನ್ನು ರಶ್ಯವೆಂದಿಗೂ ಮಾಡಿಕೊಳ್ಳುವುದಿಲ್ಲ. ಇತರ ದೇಶಗಳೂ ಮಾಡಬಾರದೆಂದು ವಿಶ್ವಾಸ. ಏಕೆಂದರೆ, ಕೆಂಪು ಚೀನ ಇಡಿಯ ಏಶ್ಯಾಖಂಡದ ಸಾಮಾನ್ಯ ಶತ್ರು ದೇಶ. ಆದುದರಿಂದ ಪಾಕಿಸ್ತಾನಕ್ಕೆ ಸೋವಿಯೆತ್ತು ಶಸ್ತ್ರಾಸ್ತ್ರಗಳ ನೆರವು ನೀಡಿದ್ದರ ಬಗ್ಗೆ ಆತಂಕದ ನಿಲುವೇ ತಾಳುವುದು ಸರಿಯಲ್ಲ. ಪ್ರಧಾನಿಯವರ ಈ ರೀತಿಯ ಹೇಳಿಕೆಗಳು ಬರುವುದಕ್ಕೆ ಮೊದಲು ದೇಶದಲ್ಲಿ ತುಂಬಾದ-ವಿವಾದವೆದ್ದಿದೆ. ಕೆಲವು ರಾಜಕೀಯ ಪಕ್ಷಗಳೂ ರಶ್ಯದ ಈ ಹೊಸ ನಿಲುವೆಯಿಂದ ಕುಪಿತರಾಗಿದ್ದಾರೆ. ಭಾರತಕ್ಕೆ ಬಗೆದ ದ್ರೋಹವೆಂದಿದನ್ನು ಕರೆದವರೂ ಜರೆದವರೂ ಇದ್ದಾರೆ.

ಈ ನಡುವೆ ಇನ್ನೊಂದು ಸಭೆ—ಮಾತುಕತೆ—ಇದೇ ವಾರ ನವದೆಹಲಿಯಲ್ಲಿ ನಡೆಯಲಿದೆ. ಇದು ನಡೆಯುವುದು ಭಾರತ—ಅಮೆರಿಕೆಗಳ ಅಧಿಕಾರಿಗಳ ನಡುವೆ. ಮುಖ್ಯ ವಿಷಯ ರಕ್ಷಣಾ ಸಮಸ್ಯೆಗಳು. ಮಾತುಕತೆಗಳಿಗೆಂದು ಆಯ್ಕೆಯಾಗಿರುವ ಅಮೆರಿಕನ್ ಧಿಯೋಗದಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿ ಮತ್ತು ರಕ್ಷಣಾ ಇಲಾಖೆಯ ಅಧಿಕಾರಿಗಳಿದ್ದಾರೆ. ಸ್ಟೇಟ್ ಶಾಖೆಯ ಉಪಕಾರ್ಯದರ್ಶಿ ಶ್ರೀ ಫಿಕೊಲಸ್ ಕಾಡೆಸ್ ಬಾಕ್ ಅವರು ಈ ನಿಯೋಗದ ನಾಯಕರಾಗಿದ್ದಾರೆ. ರಕ್ಷಣಾ ಶಾಖೆಯ ಅಂತಾರಾಷ್ಟ್ರೀಯ ಭದ್ರತಾ ವ್ಯವಹಾರಗಳ ನೀತಿ ನಿರೂಪಣಾ ಶಾಖೆಯ ಮುಖ್ಯಸ್ಥ ಶ್ರೀ ಮಾರ್ಟಿನ್ ಹಾಲ್ಬೋರಿನ್ ಅವರೂ ಈ ನಿಯೋಗದಲ್ಲಿದ್ದಾರೆ. ಈ ನಿಯೋಗದ ಚರ್ಚಾ ವಿಷಯದ ವೇದಿಕೆ ಅತ್ಯಂತ ವಿಶಾಲವಿದ್ದರೂ ನಿಯೋಗದ ಸ್ವರೂಪ ಕಾಣುವಾಗ ರಕ್ಷಣಾ ಸಂಬಂಧಿ ವಿಚಾರ ವಿನಿಮಯವೇ ಪ್ರಮುಖ ಸ್ಥಾನ ಗಳಿಸುವುದೆಂದು ಹೇಳಬಹುದು. ಅಮೆರಿಕೆಯು ಪಾಕಿಸ್ತಾನದ ಬಾಲ ಹಿಡಿದು ಆಡಿಸುತಿದ್ದರೂ ಪೇಶಾವರದಲ್ಲಿರುವ ಸೈನಿಕ ನೆಲೆಯನ್ನು ಕಿತ್ತು ಹಾಕಬೇಕೆಂದು ಅಧ್ಯಕ್ಷ ಅಯ್ಯೂಬ ಖಾನರು ಆಜ್ಞಾಪಿಸಿದ್ದಾರೆ. ಕೆಂಪು ಚೀನಾದಿಂದ ನಾನಾ ಪ್ರಕಾರವಾಗಿ ಸೈನಿಕ ನೆರವು ತುಂಬಿಕೊಳ್ಳುತಿದ್ದ ಪಾಕಿಸ್ತಾನ ಅಮೆರಿಕೆಯಿಂದ ಮಾತ್ರವಲ್ಲ ಈಗ ರಶ್ಯದಿಂದಲೂ ನೆರವು ಪಡೆಯುವಲ್ಲಿ ಅಂಶಿಕವಾಗಿ ಸಫಲವಾಗಿದೆ. ಈ ಸಿಟ್ಟಿನಲ್ಲಿ ಅಮೆರಿಕೆಯ ನೀತಿ ತುಸುವಾದರೂ ಬದಲಾವಣೆಯಾದರೆ ಆಶ್ಚರ್ಯಪಡಬೇಕಾಗಿಲ್ಲ. ವಿಯತ್ನಾಮ ಸಮರದಿಂದಾಗಿ ತನ್ನ ಹೆಸರನ್ನು ದೇಶದೊಳಗೂ ಹೊರಗೂ ಸಂಪೂರ್ಣ ಕೆಡಿಸಿಕೊಂಡ ಅಧ್ಯಕ್ಷ ಜಾನ್ಸನ್‌ರು ಮುಂದಿನ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವುದಿಲ್ಲವಾದರೂ ತನ್ನ ಘನತೆಯನ್ನುಳಿಸಲು ಹೆಣಗುತಿದ್ದಾರೆ. ಕೆಂಪು ಚೀನಾಕ್ಕೆ ವಿಶ್ವ ಸಂಸ್ಥೆಯಲ್ಲಿ ಪ್ರವೇಶ ನೀಡಲು ಕಾಲ ಪಕ್ವವಾಗಿಲ್ಲವೆಂದು ಹೇಳುತ್ತ ಬಂದ ಅಮೆರಿಕನ್ ನೀತಿಯೂ ಬದಲಾವಣೆ ಹೊಂದುತ್ತಿದೆಯೆಂದು ಗೊತ್ತಾಗಿದೆ. ಹಾಗಾಗಿ ಪಾಕಿಸ್ತಾನಕ್ಕೆ ಬೇರೆ ಬೇರೆ ರೂಪದಲ್ಲಿ ಶಸ್ತ್ರಾಸ್ತ್ರ ನೀಡುವ ಅಮೆರಿಕನ್ ನೀತಿಯಲ್ಲೂ ಬದಲಾವಣೆಯಾದರೆ ಆಶ್ಚರ್ಯವಿಲ್ಲ. ವಿಂಹಲೆಲೆಯನ್ನು ಕಂಡಲ್ಲಿ ಬೆಗಿಯುವ ಪಾಕ್ ವಿದೇಶನೀತಿ ಅಮೆರಿಕೆಗೇನೂ ಹೊಸತಲ್ಲ. ಆದುದರಿಂದಲೇ ಈ ಅಮೆರಿಕೆ—ಭಾರತ ಅಧಿಕಾರಿಗಳ ಸಭೆಯು ರಾಜ್ಯಕೀಯ ದೃಷ್ಟಿಯಿಂದ ಅತ್ಯಂತ ಜಾಗತಿಕ ಮಹತ್ವ ಪಡೆಯಿದೆಯೆನ್ನಬೇಕು. ಭಾರತ ಉಪಖಂಡವು ಶಾಂತಿಯಿಂದಿರಬೇಕೆಂದು ಬಯಸುವ 'ಮಿತ್ರ ರಾಷ್ಟ್ರ'ಗಳು ತಿಪ್ಪರಲಾಗ ಹಾಕುತ್ತಿರುವ ಪಾಕಿಸ್ತಾನೀ ವಿದೇಶೀ ನೀತಿಯನ್ನು ತುಸ್ತು ತಿಳಿದುಕೊಳ್ಳದೆ ಹೋದರೆ, ಯಾರು ನೇರ ಯಾರು ಓರೆಯೆಂಬುದು ಸ್ವಯಂ ಸ್ಪರಿಸುವುದು.

ಕರಾವಳಿಯ ಕರೆ

ಕರ್ನಾಟಕದ ಮಲೆನಾಡು ಮತ್ತು ಕರಾವಳಿಗಳಲ್ಲಿ ಕಳೆದ ಮೂರು ವಾರಗಳಿಂದಲೂ ನಿರಾತಂಕವಾಗಿ ಮಳೆ ಸುರಿದು, ಪರಿಣಾಮವಾಗಿ ಪ್ರವಾಹ ಬೇರೆ ದೊಡ್ಡ ಪ್ರಮಾಣದಲ್ಲಿ ವಿತ್ತಜೀವಿತಗಳಿಗೆ ಹಾನಿ ಸಂಭವಿಸಿದುದು ಎಲ್ಲರಿಗೂ ಗೊತ್ತು. ಹೊಳೆ ಹಳ್ಳದ ಗುಡಿಸಲುಗಳು, ಜಾನುವಾರು, ಕೆಲವೆಡೆ ಜನರೂ ಕೊಚ್ಚಿಹೋಗಿದರೆ, ಒಳನಾಡಿನಲ್ಲಿನ ಹಲವಾರು ಗುಡಿಸಲುಗಳು ನೆಲಸಮವಾಗಿವೆ, ಮಡ್ಡಗಳು ಕುಸಿದಿವೆ; ಮೋರಿಗಳು ಮುರಿದಿವೆ; ಸೇತುವೆಗಳು ಸೆಳೆದು ಹೋಗಿವೆ. ಸಾರಿಗೆ ಸಂಪರ್ಕಗಳು ಸ್ಥಗಿತಗೊಂಡ ದಿನಗಳೂ ಇವೆ. ಪೈರು ನಾಟಿದ ಹೊಲ ಗದ್ದೆಗಳು ಕೆನ್ನೀರಿನಡಿ ಮುಳುಗಿ ಆವು ಒಕಳಿ ನೀರಿನ ಸಮುದ್ರಗಳಾಗಿವೆ. ತೆಂಗು-ಕಂಗುಗಳ ತೋಟಗಳಿಗೆ ಕ್ರಿಮಿಗಳು ತಗುಲಿ ರೋಗಗ್ರಸ್ತ ಮನೆಯಾಗಿವೆ. ಪಣಂಬೂರು ಬಂದರು ಯೋಜನೆಗೂ ಧಕ್ಕೆ ತಟ್ಟಿದೆ. ಅನಾವೃಷ್ಟಿಯ ಪರಿಣಾಮದಿಂದ ರಾಜ್ಯದ ಒಂದು ಭಾಗದ ಜನತೆ ತತ್ತರಿಸುತ್ತಿರುವಾಗ ಇನ್ನೊಂದು ವಿಭಾಗದ ಜನತೆ ಜಲಪ್ರಳಯದಿಂದ ಅತಿವೇಲಾಗಿದೆ. ಸದ್ಯ ಅವಶ್ಯಕ ಪರಿಹಾರ ಕಾರ್ಯವು ಆರಂಭವಾದರೂ ಈ 'ಜಲಪ್ರಳಯ'ದ ಭೀಕರ ಪರಿಣಾಮವು ಮುಂದೆ ಬಹು ಕಾಲದ ತನಕವೂ ಇರುವುದು ಕಂಡಿತ. ಅನುಭವಿಗಳ ಹೇಳಿಕೆಯಂತೆ ಉಗಿನದು ನಲುವತ್ತೈದು ವರ್ಷಗಳ ಹಿಂದಿನದನ್ನು ವಿವರಿಸುತ್ತದೆ. ಪ್ರವಾಹ ಪೀಡಿತರ ಬಗ್ಗೆ ಅನುಕಂಪ ಮಾತ್ರ ತೋರಿಸಿದರೆ ಸಾಲದು. ಪ ನೆನೂರುಜನರನ್ನು ಕಳೆದುಕೊಂಡು ನೈತಿಕರಾದ ಹಳ್ಳಿಗರು ತಮ್ಮ ದೈನಿಕ ಜೀವನವನ್ನು ಪುನರಾರಂಭಿಸಲು ಶಕ್ತ ಸಾಧನ ಸಂಪತ್ತುಗಳನ್ನೂ ಕೂಡಿಸಿ ಕೊಡುವುದು ಕ್ಷೇಮ. ದಕ್ಷಿಣ ಕನ್ನಡ ಜಿಲ್ಲೆಯ ಜನಪ್ರತಿನಿಧಿಗಳೂ ಇತರ ಅಧಿಕಾರಿಗಳೂ ಜನತೆಯ ಸಂಪೂರ್ಣ ಸಹಕಾರದಿಂದ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾರೆ. ನೊಂದವರಿಗೆ ತಮ್ಮನ್ನೂ ಮಾತಾಡಿಸುವವರಿದ್ದಾರೆಂಬುದರಿಂದ ಒಂದು ಬಗೆಯ ಸ್ಫೂರ್ತಿ ಮೂಡುವುದು. ರಾಜ್ಯ ಸರಕಾರವು ಈ ಸಂಬಂಧದಲ್ಲಿ ತೀವ್ರ ಅಕ್ಷಪಾತಿ ಸರ್ವ ವಿಧದ ನೆರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

> **ವಚನ ಸುಧೆ**
>
> ದ್ರಾವಿಣೋ ಕಂಚಿಕಾ ತೀಕ್ಷ್ಣಾ
> ಶರೀರ ಪರಿತೋಷಿಣಾ ||
> ಯಚ್ಚಾಧನಃ ಕಾಮಯತೇ
> ಯಚ್ಚ ಕುರ್ವನ್ತಿ ಸೇವಕಾಃ||
>
> ಬಡವನಾಗಿದ್ದೂ ಬೆಲೆಬಾಳುವ ಒಡವೆಗಳ ಮೇಲೆ ಆಶೆ ಪಡುವವನು ಮತ್ತು ಅಸಮರ್ಥನಾಗಿದ್ದೂ ಕೋಪಗೊಳ್ಳುವನು ತನ್ನ ಶರೀರವನ್ನೆಣಿಗಿಸುವವ ಮತ್ತು ಸೇವಕನು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P & S. C. No. 19/68.

Mrs ಜೀವಲತಾ ಎ. ಶೆಟ್ಟಿ—ಇವರ ಜನರಲ್ ಮೇಜಂಟ್ ಶ್ರೀ ಬಿ. ಶಿವರಾಮ ಶೆಟ್ಟಿ —ಅರ್ಜಿದಾರರು.

ಈ ಮೂಲ್ಯ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ—

ಉಡುಪಿ ಕಾಲ್ಕಾಂಡಿ ಗ್ರಾಮದ ವೋಸಕ್ತ ಸರ್ವೆಗಾರರು ಈಗ ಮರಣಪಟ್ಟಿರುವುದರಿಂದ—ಅವರ ಜೀವಿತ ಕಾಲದಲ್ಲಿ ಗವರ್ನಮೆಂಟಿನವರು ಎಕ್ಸಾಯರ್ ಮಾಡಿದ ಅರ್ಜಿದಾರರ ಕುಟುಂಬಾಧೀನದ ಆಸ್ತಿಗೆ ಸಿಗತಕ್ಕ compensation ಅನ್ನೇಕು ಅರ್ಜಿದಾರರು ಹೊಂದಲು ಹಕ್ಕುದಾರರಾಗಿದ್ದು ಆ ಕುರಿತು ವಾರೀಸು ಸರ್ಟಿಫಿಕೇಟು ತನಗೆ ಕೊಡಿಸಬೇಕಾಗಿ ಅರ್ಜಿದಾರರು ಮೇಲಿನ ಅರ್ಜಿದಾಖಲು ಮಾಡಿರುವುದರಿಂದ ಸದ್ರಿ ಅರ್ಜಿಯಲ್ಲಿ ಉದ್ದೇಶಿಸುವುದಿದ್ದರೆ ತಾರೀಖು 14-8-68ಕ್ಕೆ ಈ ಕೋರ್ಟಿನ ಮುಂದೆ ಹಗಲು ಗಂಟೆ 11ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲ್ಯ ಸರ್ವರಿಗೂ ತಿಳಿಸಲಾಗಿದೆ.

(By order of the Court)

Y. C S HEGDE,
Advocate for Petnr.

Udipi. 19-7-68.

ನರಸಣ್ಣನ ಸರಸ

"ಎಚ್ಚರಿಕೆ ಕೊಡೋ ಸಮಯ ಬಂದು ಸೋದ್ರೆ ಎಚ್ಚರವಾಗೋ ಸಮಯವಿನ್ನೂ ಬಂದಿಲ್ಲಾಂತ ಕೋರುತ್ತೆ..."

ಗೇಹರಾಜ್ಯದಲ್ಲಿ

ಇಂಥವ್ರೂ ಒಬ್ಬಿಬ್ರು ಇರ್ತಾರೆ

"ಕೇಳಿದ್ದೇನೆ?"

"ಏನು?"

"ನೀತ್ಸೆನೇನು? ಹೀಗೂ ಉಂಟೇ ಅಂತ..."

"ಹೇಗೆ?"

"ಅಲ್ವೆ, ಒಂದು ಸೀಟು ಕೊಡಿ ಅಂತ ಅವ್ರನ್ನು, ಅವರ ಅಮ್ಮಾವ್ರನ್ನು, ಅವ್ರ ಚಪ್ರಾಸಿಯನ್ನು ಸಕಾಣಿಕೆಯಾಗಿ ನೂರಾರು ಸಾರಿ ಭೆಟ್ಟಿಯಾದ್ರೂ ದೊರೆಯದ ವರನಾನ ಈ ವರ್ಷ ಹೇಗೆ ನೋಡು...."

"ಎಂಥದ್ರಿ ಇದು ಅವಾಸೆ...."

"ಅವಾಸೇನೂ ಅಲ್ಲ, ಹುಣ್ಣಿಮೆಯೂ ಅಲ್ಲ. ಇದು ಇರೋ ಸಂಗ್ತಿ...."

"ಸರಿಯಪ್ಪ, ಹೀಗೆಲ್ಲಾ ಒಗಟು ನುಡಿದ್ರೆ ನಮ್ಮಂಥೋರಿಗೇನರ್ಥಾಗುತ್ತೆ? ತುಸು ವಿವರಿಸಿ ಸಾವಧಾನವಾಗಿ ಹೇಳಿದ್ರೆ ...'

"ನೋಡು, ಫಾನು ಅನ್ನುತ್ತಿರೋದು ಎಂಜಿನಿಯರಿಂಗ್ ಕಾಲೇಜುಗಳ ಕಥೆ. ಹಿಂದಿನ ವರ್ಷಗಳಲ್ಲಿ ಪ್ರವೇಶಾರ್ಥಿಗಳ ಸಂತೆಯೇ ಸೇರುತಿತ್ತು. ಯಾರು ಯೋಗ್ಯರೆಂದು ಗೊತ್ತುನಾಡುವುದೇ ಆಯ್ಕೆ ಸಮಿತಿಗೆ ತಲೆ ಹೋಗ್ತಾ. ಇದರಿಂದಾಗಿ ಯಾರ್ಯಾರಿಗೋ ಪ್ರವೇಶ ನೀಡುತಿತ್ತು ಅದು. ಮುಂದೆ ರಿಟ್ಟುಗಳ ಸುರಿಮಳೆಯಾ ಮೂಲು."

"ಅದು ಹಳೆ ಕಥೆಯಾಯ್ತು. ಈ ವರ್ಷ ಏನಾಯ್ತು?'

"ಅಗೋದೇನು? ಅರ್ಜಿ ಗುಜರಾಯಿಸಿದವರಿಗೆಲ್ಲಾ ಸೀಟು ಕೊಡಬೇಕಾಯಿತು ಮಾತ್ರವಲ್ಲ, ಇನ್ನೂ ಖಾಲಿಯಿದೆಯಂತೆ...."

"ಹ್ಹಾಂ...ಏನಂತೀರಿ?"

"ಅಹ್ಹೋದೇನೇ? ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳಲ್ಲೇ ಸುಮಾರು ಅರುವತ್ತು ಸೀಟುಗಳಿಗೆ ಮತ್ತೆ ಅರ್ಜಿಕರೆದಿದ್ದಾರೆ...."

"ಹೀಗೂ ಉಂಟೆ?"

"ಪ್ರತ್ಯಕ್ಷಕ್ಕೆ ಪ್ರಮಾಣವೇಕೆ? ಇದೋ ಇಲ್ಲಿ ನೋಡು...."

"ಓ, ಭಾರೀ ತಮಾಷೆಯಾಗಿದೆ. ಅಂದ್ರೆ ಇಂಜಿನಿಯರ್‌ಗಳಿಗೆ ಭಾಗ್ಯಿಲ್ಲ ಅಂತ ಖಾತ್ರಿಯಾಯ್ತು. ಹ್ಹಾಂ....ಇನ್ನು ಹುಡುಗಿಯರಿಗೂ ಬೇಡನೇ ಮದುವೆಯಾಗೋಕೆಲ್ಲಿ..."

"ಯಾಕೆ?"

'ಎಲ್ರೂ ಡಾಕ್ಟ್ರು, ಇಂಜಿನಿಯರ್ ಬೇಕೂಂತ ಕಾದು ಕುಂತಿರ್ತಾರೆ. ಒಂದು ಸಂಗಡವನ್ನು ಕಡಿಮೆಯಾಡ್ರೆ...."

'ಹ್ಹಾ, ಮದುವೆಯಾಗೋದಾದ್ರೆ ಇಂಜಿನಿಯರೋ ಡಾಕ್ಟರೋ ಬೇಕು. ಇಲ್ಲವಾದರೆ...."

"ಸಾಕು ಬಿಡೀಂದ್ರೆ....ಯಾರೋ ಒಬ್ಬಿಬ್ರನ್ನ ಕಂಡ ..."

"ಅಯ್ಯೋ, ಏನಂತೀಯಾ? ಮೊನ್ನೆ ನೋಡು, ರಾಜಧಾನಿಯಲ್ಲಿ ೧೦೮ ಹುಡುಗಿಯರನ್ನು ಸೆರೆಹಿಡಿದ್ರಂತೆ...."

'ಅಲ್ರಿ, ಅವ್ರದ್ದೇನು ತಪ್ಪು? ಸಬಲರು ಸಿದ್ಧರಾಗುವಾಗ, ಅಬಲೆಯರು..."

"ಹ್ಹಾಂ....ಅದೇ ಅಂದದ್ದು ನೋಡು. ಇನ್ನು ಈ ಪ್ರಶ್ನೆ ಮತ್ತಷ್ಟು ಜಟಿಲವಾಗ್ತಾನೇ ಇದೆ. ಪರಿಹಾರಕಾರಿಯಾಗಿ ತಡೆಗಟ್ಟುವುದೂ ಸಾಧ್ಯವಿಲ್ಲ...."

"ಹ್ಹಾಂ..."

"ಭೀರಿದ್ದಲ್ಲಿ ಕೆಸರು..."

"ಹ್ಹಾ....ಅಲ್ರಿ, ನೋಡಿ, ಗೋವೆಯಲ್ಲಿ ಇದ್ದ ಸೇತುವೆಯೊಂದು ಮಂಗಮಾಯವಾಯ್ತಂತೆ!"

"ಏನಾಯ್ತು? ದೇವ್ರು ಕುಪಿತನಾಗಿ ಮಾಯ ಮಾಡಿರಬಹುದು, ಅಥವಾ ನೋಡುವವರಿಗೆ ಕಾಣದೆಹೋಗಿರಬಹುದು. ಇಲ್ಲವಾದರೆ ಭೂತಾಯಿ ನುಂಗಿ ಬಿಟ್ಟಿರಲೂ ಬಹುದು...."

"ಹೇಳಿ, ನೆರೆಯಲ್ಲಿ ಕೊಚ್ಚಿ ಹೋಗಿರಲೂ ಬಹುದು...."

"ಯಾಕಾಗ ಬಾರದು?"

"ನೋಡಿ. ಆಶ್ಚರ್ಯವೂ ಸಾಧ್ಯವಿಲ್ಲ."

"ಮತ್ತೆ?"

"ಪೋಂಡ ಗ್ರಾಮದ ಸಿಮುಲಾನ್‌ನಲ್ಲಿ ಸೇತುವೆಯ ನೀಲನಕ್ಷೆ ಅಂಗೀಕರಿಸಲಾಯ್ತು. ಅಂದಾಜುವೆಚ್ಚವನ್ನು ಮಂಜೂರು ಮಾಡಲಾಯಿತು. ಸೇತುವೆಯ ರಚನಾ ಕಾರ್ಯ ಪರಿಶೀಲನೆಯ ವರದಿ ಸರಕಾರಕ್ಕೆ ಬರುತಿತ್ತು. ಕೊನೆದೊನ್ನೆ ಸೇತುವೆ ಸಂಚಾರಕ್ಕಾಗಿ ತೆರೆದ ವರದಿಯೂ ಕೈ ಸೇರಿತಂತೆ. ಆದರೆ, ಈಗ ಅಲ್ಲಿ ಸೇತುವೆಯೂ ಇಲ್ಲ, ಸೇತುವೆಯಿದ್ದ ಜಾಗ್ಗೆ ಕುರುಹುಗಳೂ ಇಲ್ಲ..."

"ಭಾರೀ ತಮಾಷೆಯಿದು..."

"ನೋಡಿ, ಪ್ರಜಾಪ್ರಭುತ್ವ ಅಂದರೆ, ಇದೇ..."

"ಏನು?"

"ಪ್ರಜೆಗಳ ಹಣವನ್ನು ಪ್ರಜೆಗಳೇ ಮುಳುಂ ಮಾಡುವುದು.!"

"ಹ್ಹಾಂ....ನೋಡು, ಕಂಪೋಸ್ಟು ಗೊಬ್ಬರ ಮಾಡಿಸೋ ಅಧಿಕಾರಿ ಕಳಿಸಿದ ವರದಿಯನ್ನು ಪರ್ಯಾಲೋಚಿಸಿದರೆ ಹಳ್ಳಿಯಲ್ಲಿ ಮನೆ-ಹೊಲ ಇಲ್ಲ, ಎಲ್ಲೆಲ್ಲಿಯೂ ಕಂಪೋಸ್ಟು ಪಿಟ್ಟುಗಳೇ..."

"ಹ್ಹಾಂ, ನಿಮ್ಮ ಸರಕಾರಕ್ಕೆ ಬೇಕಾಗಿರೋದೂ ಅದೇ....ಅಷ್ಟು ನದಿಗಳಿಗೆ ಅಡ್ಡ ಸೇತುವೆ ಕಟ್ಟಲಾಯಿತು. ಅಷ್ಟು ಕೋಟಿ ರೂಪಾಯಿ ಖರ್ಚು ಮಾಡಲಾಯಿತು. ಅಷ್ಟು ಬಾವಿ ತೋಡಿಸಲಾಯಿತು, ಇದಕ್ಕೆಷ್ಟು ಸಾವಿರ ವೆಚ್ಚ ಮಾಡಲಾಯಿತು...."

"ಕರ್ಚು ಮಾಡದೆ ಇದ್ರೆ ಕೆಲಸ ಆಗುತ್ತೆ?"

"ಇಲ್ಲಿ ಹಾಗಲ್ಲ ನೋಡಿ, ಕೆಲಸವಿಲ್ಲದೆಯೇ ಕರ್ಚಾಗುತ್ತೆ...."

"ಎಲ್ಲಿಯೋ ಒಂದೆರಡು ಕಡೆ ಈ ರೀತಿ ಆಗಾಯ್ತೂಂತ...."

"ಹ್ಹಾಂ....ಅಲ್ರಿ, ಎಂಥ ಮಳೆ! ಇಷ್ಟು ಮಳೆ-ನೆರೆ ಹತ್ತಾರು ವರ್ಷಗಳಿಂದ ಬಂದಿಲ್ಲ...."

"....ನೋಡು, ಗುಡ್ಡ ಜರಿದು ರಸ್ತೆ ಮೇಲೆ ಕುಳಿತಿತು. ಸೇತುವೆ ಕೊಚ್ಚಿಕೊಂಡು ಹೋಯಿತು...ಬೈರು ಕೊಳೆತು ಹೋಯಿತು. ವಿತ್ತ ಜೀವಿತಗಳಿಗೆ ಅಪಾರ ನಷ್ಟ..."

'ಹ್ಹಾಸ್ಸಿ, ಆದ್ರೆ ಮಳೆ ಬಾರದೆ ಇದ್ರೆ...'

"ಬರಗಾಲ...."

"ಬಂದ್ರೂ ಹಾಗೇನೇ ಆಗುವಂತಾಯ್ತಲ್ಲ..."

"ಅಲ್ವೆ, ನೋಡು, ನಮ್ಮ ದಾಸಾಚಾರ್ರು ಹೇಳ್ತಿದ್ರು ಹೋದ್ವರ್ಷ...."

'ಯೂವ? ಓ, ಅವ್ರು...ಕ್ರಾಂತಿಯಾ ಅನುಯಾಯಿಗಳು...'

'ಹ್ಹಾ...'

'ಏನಂತೆ?'

"ಇದ್ದ ಮರಗಿಡಗಳನ್ನೆಲ್ಲಾ ಕಡಿದಾಯ್ತು. ಮಳೆ ಬರಬೇಕೆಂದರೆ ಹೇಗೆ? ಇನ್ನು ವರ್ಷಕಳೆದಂತೆ ಮಳೆ ಕಡಿಮೆ ದೂಗುತ್ತೆ. ಕಡಿಯಲು ಭೀರು ದೊರೆಯದೆ ದೇಶದಲ್ಲಿ ಹಾಹಾಕಾರವೇಳುತ್ತೆ..."

"ಹಸ್ಟಹ್ಹ...ಈ ವರ್ಷ ಇಂದ್ರಲೋಕದ ನಂದನವನ ಇಳಿದು ಬಂತು....ಮಳೆ ಕೊಡೋಕೆ...'

"ಹಾಗೇ ಅನ್ನಬೇಕು..."

"ಹ್ಹಾ, ಇವ್ರಂಥವ್ರೂ ಒಬ್ಬಿಬ್ರು ಇರ್ತಾರೇನ್ರಿ...ಎಲ್ಲಾದ್ರೂ...."

"ಏನ್? ಅಕಳಿಕೆ?"

"ಯಾರೋ ಕರೀತಿದ್ದಾರೇಂತ"

"ಈ ಹೊತ್ತಲ್ಲಿ ಕರೆಯೋ ಪುಣ್ಯಾತ್ಮರಾದ್ರೂ ಯಾರೊಂತ...."

"....."

"ಓ...ಸರಿ. ಅಷ್ಟೇ ತಾನೆ?"

'...ಹೌದು, ಅಷ್ಟೇ. ನಿಮಗೆಲ್ಲಾ ಭಾರೀ ತಮಾಷೆ...'

'ಮತ್ತೆ ಮಾಡೋದಾದ್ರೂ ಏನು? ಬಡುಕರುವಷ್ಟು ದಿನ ಇದ್ದುದರಲ್ಲೇ ಸುಖವಾಗಿ ನಗು ನಗ್ತಾ ಇರೋದು...'

"....."

"ಏಕಮ್ಮಾ, ಹೀರೆ? ನೋಡಿರೋ, ಇಂಥವ್ರೂ ಎಲ್ಲೋ ಒಬ್ಬಿಬ್ರು ಇರ್ತಾರೆ..."

"ಹ್ಹಾಂ..."

— ಗೋರಾ.

ಮೈಸೂರು ರಾಜ್ಯ

ಗಾಂಧೀ ಸ್ಮಾರಕ ನಿಧಿ

ಕರ್ನಾಟಕ ವಿಧಾಯಕ ಕಾರ್ಯಕರ್ತರ ಸಮ್ಮೇಲನ

ವಿಧಾಯಕ ಸಂಘ ಸಂಸ್ಥೆ ಹಾಗೂ ಕಾರ್ಯಕರ್ತರಲ್ಲಿ ವಿನಂತಿ

ಕಳೆದ ವರ್ಷ ಜುಲೈದಲ್ಲಿ ಶ್ರೀ ಯು. ಎನ್. ದೇಶಪಾಂಡೆ ಹಿರಿತನದಲ್ಲಿ ಅಖಿಲ ಕರ್ನಾಟಕ ವಿಧಾಯಕ ಕಾರ್ಯಕರ್ತರ ಸಮ್ಮೇಲನ ಬೆಂಗಳೂರಿನಲ್ಲಿ ನಡೆದು ಗಾಂಧೀ ಶತಮಾನೋತ್ಸವದ ಅಂಗವಾಗಿ ವಿಧಾಯಕ ಕಾರ್ಯಕರ್ತರುಗಳು ಯಾವ ಯಾವ ಕಾರ್ಯಕ್ರಮ ಕೈಕೊಳ್ಳಬೇಕು ಎಂಬ ಬಗ್ಗೆ ಚರ್ಚೆಯಾಗಿ ಕೆಲವೊಂದು ಕಾರ್ಯಕ್ರಮಗಳಷ್ಟು ಗೊತ್ತುಪಡಿಸಲಾಗಿತ್ತು. ಈಗ ನಾವೆಲ್ಲರೂ ಮತ್ತೆ ಸೇರಿ ನಾವು ಗೊತ್ತುಪಡಿಸಿದ ಕಾರ್ಯಕ್ರಮಗಳನ್ನು ಎಷ್ಟು ಎಷ್ಟು ಮಾಡಿ ಮುಗಿಸಿದ್ದೇವೆ, ಇನ್ನೂ ಎಷ್ಟು ಮಾಡತಕ್ಕವಾವೆ, ಹೊಸ ಕಾರ್ಯಕ್ರಮ ಯಾವ ಯಾವವನ್ನು ತೆಗೆದುಕೊಳ್ಳಬೇಕು ಎಂಬುದನ್ನು ವಿಚಾರಿಸುವ ಕರ್ತವ್ಯಕ್ಕಾಗಿ ಆಗಸ್ಟ 3 ಮತ್ತು 4ನೇ ತಾರೀಕಿನ ದಿನ ಹುಬ್ಬಳ್ಳಿ (ಧಾರವಾಡ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸೊಸೈಟಿ, ಬೆಂಗೇರಿ)ಯಲ್ಲಿ ಅಖಿಲ ಕರ್ನಾಟಕ ವಿಧಾಯಕ ಕಾರ್ಯಕರ್ತರ ಸಮ್ಮೇಲನ ಕರೆಯಲಾಗಿದೆ. ಆದಕ್ಕೆ ನೀವು ಬಂದು ಚರ್ಚೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಗೊತ್ತು ಪಡಿಸಬೇಕೆಂದು ಇನ್ನೂಡಿ ಹುಮ್ಮಸ್ಸಿಂದ ಕಾರ್ಯಪ್ರವೃತ್ತರಾಗಿ ಗಾಂಧೀ ಶತಮಾನೋತ್ಸವವನ್ನು ಯಶಸ್ವಿಯಾಗಿ ಮಾಡಬೇಕಾಗಿ ಪ್ರಾರ್ಥನೆ.

ಕೇಂದ್ರ ಆಹಾರ ಹಾಗೂ ಒಕ್ಕಲುತನ ಸಚಿವರಾದ ಶ್ರೀ ಜಗಜೀವನರಾಮರು ಈ ಸಮ್ಮೇಲನ ಉದ್ಘಾಟಿಸಲು ದಯವಾಡಿ ಒಪ್ಪಿದ್ದಾರೆ. ಅಖಿಲ ಭಾರತ ಗಾಂಧೀ ಸ್ಮಾರಕ ನಿಧಿಯ ಚೇರ್‌ಮನ್‌ರಾದ ಶ್ರೀ ಆರ್. ಆರ್. ದಿವಾಕರರು ಈ ಸಮ್ಮೇಲನದಲ್ಲಿ ಉಪಸ್ಥಿತರಿರುವರು.

ಕಳೆದ ವರ್ಷ ಸಮ್ಮೇಲನದಲ್ಲಿ ಗೊತ್ತುಪಡಿಸಿದ ಕಾರ್ಯಕ್ರಮಗಳಲ್ಲಿ ತಾವು ಇದುವರೆಗೆ ಮಾಡಿದ ಕಾರ್ಯಕ್ರಮದ ವರದಿಯನ್ನು ಗಾಂಧೀ ಸ್ಮಾರಕ ನಿಧಿ ಕಚೇರಿಗೆ ಕಳಿಸಿದ್ದಾರೆ. ಆದರೆ ಎಲ್ಲಾಂದಲೂ ವರದಿ ಇಲ್ಲಿಗೆ ಬಂದಿಲ್ಲ. ಕಾರಣ ಎಲ್ಲರೂ ತಾವು ಒಂದು ವರ್ಷದ ಕಾಲದಲ್ಲಿ ಮಾಡಿದ ಕಾರ್ಯದ ವರದಿಯನ್ನು ಕಾರ್ಯದರ್ಶಿ, ಗಾಂಧೀ ಸ್ಮಾರಕ ನಿಧಿ, ಕುಮಾರಾ ಪಾರ್ಕ (ಪೂರ್ವ), ಬೆಂಗಳೂರು,1 ಇಲ್ಲಿಗೆ ಕೊಟ್ಟು ಕಳಿಸಿದರೆ ಅವನ್ನೆಲ್ಲ ಕ್ರೋಢೀಕರಿಸಿ ಒಂ

(ಒಂಭತ್ತನೇ ಪುಟ ನೋಡಿರಿ)

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ ಹಾಗೂ ಎಲ್ಲಾ ತರದ ವಿಚಾರಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

ಹಿಂಸ್ರ ಜಂತುಗಳ ನಡುವೆ

ಟ್ರೀ ಟಾಪ್ ಹೋಟೇಲ್

ಬರೆದವರು — ಶ್ರೀ ಬಿ. ನರಸಿಂಗ ರಾವ್.

ಪೌರಾಣಿಕ ಕಾಲಗಳಲ್ಲಿ ಯಾತ್ರಿಕರಿಗೆ ದಾರಿಯಲ್ಲಿ ಆಯಾಸ ಪರಿಹಾರಕ್ಕಾಗಿ, ಉಪಹಾರಕ್ಕಾಗಿ ಛತ್ರಗಳೂ, ಭೋಜನ ಶಾಲೆಗಳೂ, ಇದ್ದವು. ಮತ್ತೆ ಆಧುನಿಕ ಕಾಲದಲ್ಲಿ ಅವುಗಳೇ ಹೋಟೇಲುಗಳಾದವು. ಒಂದು ಹೋಟೇಲಿನಲ್ಲಿ ಸಾಮಾನ್ಯವಾಗಿ ಏನೆಲ್ಲಾ ಏರ್ಪಾಡು ಇದ್ದೀತು? ಪೃಥವೂ, ಪ್ರಧಾನವೂ ಆಗಿ ಉಪಾಹಾರ ಸೌಕರ್ಯ ಉಳಿಕೊಳ್ಳಲು ಬೇಕಿದ್ದವರಿಗೆ ಶಯನಗೃಹ, ಸ್ನಾನಗೃಹ ಇತ್ಯಾದಿ ಆಡಂಬರ ಪ್ರಿಯರಿಗೆ ಇವಿಷ್ಟೆ ಸಾಕೆ? ಸಾಲದು. ಅವರಿಗೆ ಇತರ ಸೌಕರ್ಯ, ಭೋಗವಿಲಾಸಗಳೂ ಬೇಕು. ಅದಕ್ಕಾಗಿಯೇ ಗಾಳಿ ನಿಯಂತ್ರಿತ ಕೋಣೆಗಳು, ಟೆಲಿವಿಶನ್ ಸೆಟ್ಟುಗಳೂ, ಸಿನೆಮಾ ಚಿತ್ರಗಳನ್ನೊಳಗೊಂಡ ಹೋಟೇಲುಗಳೂ ಅಲ್ಲಿವೆ. ಸುಂದರ ಕಾಡು ವೃಕ್ಷಗಳೂ ಅಲ್ಲಿ ಬೆಳೆಯುತ್ತವೆ, ಟೆರೆಸ್ ಗಾರ್ಡನ್ ಇದೆ, ಈಜುಕೊಳವೂ ಇದೆ. ಆದರೂ ತನ್ನ ಹೋಟೇಲು ಅತ್ಯಂತ ಆಧುನಿಕವೆಂದು ಯಾವ ಹೋಟೇಲು ಮಾಲೀಕನೂ ಧೈರ್ಯದಿಂದ ಹೇಳಲಾರ. ಎಷ್ಟೆಂದು ಸುಖಸೌಕರ್ಯಗಳನ್ನು ಸಜ್ಜೀಕರಿಸಿದರೂ ಇನ್ನೂ ಸಾಲದೆನ್ನುವವರೂ ಇದ್ದೇ ಇದ್ದಾರೆ.

ಇತ್ತೀಚೆಗೆ ಆಫ್ರಿಕಾದ ಸ್ವಾತಂತ್ರ್ಯ ಗೊಂಡ ಪೂರ್ವ ಕೆನ್ಯಾ ದೇಶದಲ್ಲಿ ಆಧುನಿಕ ರೀತಿಯಲ್ಲಿ ಸಜ್ಜೀಕರಿಸಲ್ಪಟ್ಟ ಹೋಟೇಲೊಂದರ ಮುಂದೆ ಸಂದರ್ಶಕರ ಪ್ರದ್ಧಿಯನ್ನಾಕರ್ಷಿಸುವ ಒಂದು ದೊಡ್ಡ ಜಾಹೀರಾತು ಇದೆ.

"ಇಲ್ಲಿಂದ ಏನು ಬೇಕೋ ಅದು, ಯಾವಾಗ ಬೇಕೋ ಆಗ, ಯಾರಿಗೆ ಬೇಕೋ ಅವರಿಗೆ ಲಭಿಸುತ್ತದೆ-ಫಿಸ್ಸಂಶಯವಾಗಿ."

ಹೆಚ್. ಹೆಚ್. ಎಡ್ಮನ್ ಎಂಬ ಐರೋಪ್ಯನು ಈ ಹೋಟೇಲಿನ ಮಾಲಿಕ. ಆ ಹೋಟೇಲಿನ ಕಟ್ಟಿ-ಕಟ್ಟಿಗೆಗಳು ಕೌತುಕಮಯವೇ ಇವೆ —

"ಹೋಕರಿ ಮಕ್ಕಳಿಂದ ಹೋಟೇಲಿಗೆ ಏನಾದರೂ ನಷ್ಟ ಸಂಭವಿಸಿದರೆ ಅದನ್ನು ವಸೂಲಿ ಮಾಡಲಾದೀತು'

"ಉಳಕ್ಕೊಳ್ಳಲು ಬಂದವರು ಸ್ನಾನ ಮಾಡಿ ಬಂದಾಗ ಆಹಾರ—20 ಶಿಲ್ಲಿಂಗ್ಸ್"

"ಸ್ನಾನ ಮಾಡದೆ ಬಂದರೆ ಆಹಾರ—25 ಶಿಲ್ಲಿಂಗ್ಸ್'

(ಉಳಕೊಳ್ಳಲು ಬಂದವರ ಶರೀರವು ಅಶುದ್ಧವಾಗಿದ್ದು, ಶಯ್ಯೋಪಕರಣಗಳು ಕೊಳಕಾಗುವುದರಿಂದಲೇ ಈ 5 ಶಿಲ್ಲಿಂಗ್ಸ್‌ನ ಹೆಚ್ಚಳ!)

ಈ ಹೋಟೇಲಿನಲ್ಲಿ ಐರಿಶ್‌ಸೆರ್ ಬ್ರೂಕ್ ಎಂಬ ಕಕಾರಿಯು ಪ್ರಧಾನ ಪರಿಚಾರಕನಾಗಿ ದುಡಿಯುತಿದ್ದ. ಆತ ಉತ್ಸಾಹಿಯೂ, ಕಾರ್ಯಕುಶಲನೂ ಆಗಿದ್ದ. ಮತ್ತೆ ಆತ ಅಲ್ಲಿ ರಾಜಿಯಿತ್ತು ಸ್ವತಃ ಎರಡು ಹೋಟೇಲುಗಳನ್ನು ತೆರೆದ. ಆತನು ತೆರೆದ ಹೋಟೇಲುಗಳೆಲ್ಲೆಂದಂತೂ, ಅದರ ವಿಶೇಷ ವೈಶಿಷ್ಟ್ಯ ಹಾಗಿ ವಿಶಾಲ ಸಿದ್ಧವಾಯಿತು. ಇದೊಂದು ಪರೀಕ್ಷೆಯೇ ಆಗಿತ್ತು ಸೆರ್‌ಬ್ರೂಕನ ಖಾಲಿಗೆ. ವ್ಯಾಪಾರವೂ ಜೆನ್ನಾಗಿಯೇ ಆಯಿತು. ಗಿರಾಕಿಗಳೂ ಬಹಳ ತೃಪ್ತರಾದರು.

ಆದರೆ ಈ ಹೋಟೇಲಿನ ಪ್ರತ್ಯೇಕತೆಯೇನು? ವನ್ಯ ಮೃಗಗಳ, ಕ್ರೂರ ಜಂತುಗಳ ವಾಸ ಸ್ಥಳವಾದ, ವೃಕ್ಷ ನಿಬಿಡವಾದ, ಕತ್ತಲು ಕವಿದ ಕೆನ್ಯಾದಲ್ಲಿ ಒಂದು ಕಾಡಿನ ಮಧ್ಯೆ ಈ ಹೋಟೇಲು ಇದೆ. ಭೂಮಿಯಿಂದ ನಾಲ್ವತ್ತು ಅಡಿ ಎತ್ತರದಲ್ಲಿ, ಅಡಿಪಾಯವನ್ನು ಮರಗಳ ದಿಮ್ಮಿಯಿಂದ ಕಟ್ಟಿ, ಅದರ ಮೇಲೆ ವಾಕರ್ ಈ ಹೋಟೇಲು ಸ್ಥಾಪಿಸಿದ್ದಾನೆ.

ಕ್ರೂರ ವನ್ಯಮೃಗಗಳ ನಡುವೆ ಮನುಷ್ಯರಿಗೆ ವಾಸಿಸಲು ಒಂದು ಹೋಟೇಲು! ನಂಬಲು ಅಸಾಧ್ಯವೆನಿಸುತ್ತದೆ. ಕಠಿಣವೂ, ಸಾಹಸಿಕವೂ ಆದ ಈ ಪ್ರಯೋಗವು ಸಫಲವಾಗಲು ವಾಕರ್ ಸ್ವಪ್ರಮವು ವಿಪರೀತವೇ ಆಗತ್ತೆನ್ನಬೇಕು. ಒಂದ್ಮೊಮ್ಮೆ ಕಾಳ್ಗಿಚ್ಚಿಗೆ ಆಹುತಿಯಾಗಿ ಈ ಹೋಟೇಲು ಪೂರ್ತಿ ಸುಟ್ಟು ಬೂದಿಯಾಗಿತ್ತು. ಆದರೆ ಹಿಂಜರಿಯದೆ ವಾಕರ್ ಹಣವನ್ನು ಕೂಡಿಸಿ ಅದನ್ನು ಮತ್ತೆ ಸ್ಥಾಪಿಸಿದ.

ಈ ಹೋಟೇಲಿನ ಹೆಸರು ಟ್ರೀ ಟಾಪ್ ಹೋಟೇಲ್(ವೃಕ್ಷಶಿಖರ ಹೋಟೇಲು) ಅನ್ವರ್ಥನಾಮವೇ ಇದೆ. ಒಂದೇ ಸಮಯದಲ್ಲಿ ಹದಿನಾಲ್ಕು ಸಂದರ್ಶಕರಿಗೆ ಇಲ್ಲಿ ವಸತಿ ಸೌಕರ್ಯವಿದೆ. ಅಲ್ಲದೆ ಯಾವ ತರ್ಗ ಆಧುನಿಕ ಹೋಟೇಲಿನಲ್ಲಿರುವಷ್ಟು ಸೌಕರ್ಯಗಳೂ ಇಲ್ಲಿವೆ. ಆತನ ಮತ್ತೊಂದು ಹೋಟೇಲು 'ಸೈಯರಿ'ಯೆಂಬಲ್ಲಿದೆ. ಇವೆರಡೂ ಜನಪ್ರಿಯವಾಗಿವೆ.

ಟ್ರೀಟಾಪ್ ಹೋಟೇಲಿನ ವೈಶಿಷ್ಟ್ಯಗಳು ಇವೇ:

ವನದ ಭೀತಿಜನಕವೂ, ಅದೇ ಸಮಯದಲ್ಲಿ, ಸುಂದರವೂ ಆದ ಪ್ರಕೃತಿ ದೃಶ್ಯಗಳನ್ನು ಸವಿಯಬಹುದು ಕಾಣಬಹುದು. ಅಪತ್ತಿಲ್ಲದೆ, ಮೃಗಯಾ ವಿನೋದಕ್ಕಾಗಿರುವಂತೆ ಇದರ ಏರ್ಪಾಡಾಗಿದೆ. ಶಿಕಾರಿಗಳಿಗೆ ಇಲ್ಲಿಂದ ಬೇಟೆಯಾಡಲು ಉತ್ತಮ ಸೌಕರ್ಯವಿದೆ.

ಬೇಟೆಯಾಡಿ ಬರುವವರಿಗೆ ವಿಶ್ರಾಂತಿ ಕೇಂದ್ರವೂ ಇದಾಗಿದೆ.

ಇತರರು ಬೇಟೆಯಾಡುವುದರ ಸೊಬಗನ್ನೂ, ಸಾಹಸವನ್ನೂ ನೋಡಿ ಅನುಭವಿಸಲು ಇಲ್ಲಿ ಅವಕಾಶವಿದೆ.

೧೯೫೨ರಲ್ಲಿ ಬ್ರಿಟನ್ನಿನ ಎಲಿಜಬೆತ್ ರಾಜಕುಮಾರಿ (ಈಗ ಎಲಿಜಬೆತ್ ರಾಣಿ) ಕೆನ್ಯಾ ಸಂದರ್ಶಿಸಿದ ವೇಳೆಯಲ್ಲಿ ಇಲ್ಲಿಗೆ ಭೆಟ್ಟಿ ನೀಡಿದ್ದಳು. ಕಾಡಿನ ಗರ್ಭದಲ್ಲಿ ಹುದುಗಿರುವ ಈ ಹೋಟೇಲಿನ ತಳಗಡೆ ಸಿಂಹ, ಆನೆ, ಬಿಡ್ಡಮೃಗಗಳೇ ಮೊದಲಾದ ಕಾಡುಪ್ರಾಣಿಗಳು ನಿರ್ಭೀತಿಯಿಂದ ಸಂಚರಿಸುತ್ತವೆ. ಇಲ್ಲಿದ್ದುಕೊಂಡು ಎಲಿಜಬೆತ್, ಡ್ಯೂಕ್ ಆಫ್ ಎಡಿನ್‌ಬರೋರೊಂದಿಗೆ ವನ್ಯ ಮೃಗಗಳನ್ನು ಅವುಗಳ 'ನೈಜ ವರ್ಣ'ದಲ್ಲೇ ಕಂಡು ಆನಂದಿಸಿದಳು.

ಒನ್ಮೆ ಅಮೇರಿಕಾದ ಧನಿಕ ವ್ಯಕ್ತಿಯ ಪ್ರಮುಖನೋರ್ವನು ಟ್ರೀಟಾಪ್ ಹೋಟೇಲಿಗೆ ಬೆಟ್ಟಿ ನೀಡಿದ್ದ. ಆತ ವಿಶೇಷವಾಗಿ ನೀರಾಪೆಯನ್ನು ನೋಡುವ ಇಚ್ಛೆಯಿಂದ ಬಂದಿದ್ದ. ಹಾಗೆ ಆತ ವಾಕರ್‌ನೊಂದಿಗೆ ಕಾದಿದ್ದಾಗಲೇ ಫಕ್ಕನೆ ದೂರದಲ್ಲಿ ನೀರಾನೆಯೊಂದು ಗೋಚರಿಸಿತು. ಆತ ದೂರ ದರ್ಶಕದಿಂದ ಅದರ ಹಾವ ಭಾವಗಳನ್ನು, ಸೌಂದರ್ಯವನ್ನು ಆಸ್ವಾದಿಸಿ ತೃಪ್ತಿಗೊಂಡು ವಾಕರ್‌ಗೆ ಸಾಕಷ್ಟು ಹಣವನ್ನು ಕೊಟ್ಟ. ಈ ರೀತಿ ಹೋಟೇಲಿಗೆ ಆಗಮಿಸುವವರು ತಮ್ಮ ಇಚ್ಛೆ ಪೂರ್ತಿಯಾಗಿಯೇ ಅಲ್ಲಿಂದ ಕಾಲ್ಕಿಳುವರು.

ಈ ಹೋಟೇಲಿಗೆ ಮಧುಚಂದ್ರಕ್ಕಾಗಿ ಬರುವ ದಂಪತಿಗಳೂ ಕಡಿಮೆಯಿಲ್ಲ. ಅದೊಂದು ದಿನ ಈರ್ವರು ಪತಿ-ಪತ್ನಿಯರು ಮಧುಚಂದ್ರಕ್ಕಾಗಿ ಅಲ್ಲಿಗಾಗಮಿಸಿದ್ದರು. ಅವಳಿಗೆ ವನ್ಯ ಮೃಗಗಳ ಸೌಂದರ್ಯವನ್ನಾಸ್ವಾದಿಸುತ್ತಾ ವಿಚಿತ್ರ ಬಯಕೆಯೊಂದುಂಟಾಯಿತು. ಅವಳು ಆತನೊಡನೆಂದಳು—"ಒಂದು ಕಾಡಾನೆಯ ಬೆನ್ನಮೇಲೆ ನನ್ನ ಕೈಯಿಂದ ನನ್ನ ಹೆಸರು ಬರೆಯ ಬೇಕೆಂದು ಆಸೆ ನನಗೆ"

ಆತ ವಾಕರ್‌ನಲ್ಲಿ ಇದನ್ನು ಅರುಹಿದ. ಗಿರಾಕಿಗಳ ತೃಪ್ತಿಯೇ ತನ್ನ ಧ್ಯೇಯವಾಗಿದ್ದ ವಾಕರ್ ಅದಕ್ಕೆ ಒಪ್ಪಿ ಏರ್ಪಾಡುಗೈಯುವುದಾಗಿ ಮಾತಿತ್ತ.

ಆ ರಾತ್ರಿ ತರುಣಿಯನ್ನು ಹೋಟೇಲಿನ ಏಣಿಯಲ್ಲಿ ತಲೆಕೆಳಗಾಗಿ ಇಳಿಸಿ, ಅವಳ ಕಾಲುಗಳನ್ನು ಇಬ್ಬರು ಬಲವಾಗಿ ಹಿಡಿದು ಹಿಂತರು. ಮತ್ತೆ ಅವಳ ಕೈಗೆ ಹೋಕೆನ ಕಾಡಿನ್ನು ತುರುಗಿ ಕಟ್ಟಿದ ಬಿಲ್ಲಿಯಾರ್ಡ್ ಆಟದ ಬೆತ್ತವನ್ನು ಕೊಟ್ಟರು. ಅಳಕ್ಕಾತ್ತಾ ಆನೆಯೊಂದು ಅತ್ತ ಸುಳಿದರೂ, ಮನುಷ್ಯರ ವಾಸನೆ ಹೂಗಿಗೆ ಬಡಿದು ದೂರ ಸರಿಯಿತ. ಅವಳಿಗೆ ನಿರಾಸೆಯಾಯಿತು. ಮತ್ತೆ ಅವಳ ದೇಹಕ್ಕೆ ಹಗ್ಗ ಬಿಗಿದು ತಲೆಯನ್ನು ಕೆಳಗಿಳಿಸಲಾಯಿತ. ಅವಳು ಧೈರ್ಯದಿಂದ ಆ ಆನೆಯ ನ್ನ ಸಮೀಪಿಸಿ ಹೆಸರನ್ನು ಅದರ ಮೇಲೆ ಬರೆದೇ ಬಿಟ್ಟಳು. ದೈವವಶಾತ್ ಯಾವುದೇ ಹಾನಿ ಸಂಭವಿಸದೆ ಅವಳು ಹಿಂದಿರುಗಿದಳು.

ಶ್ರಾವಣದ ಜಾಜಿಮಲ್ಲಿಗೆ

ಶ್ರಾವಣದ ಜಾಜಿಮಲ್ಲಿಗೆಯು ಬಿಡಿ ಬಿಡಿಯಾಗಿ ಇರಿಸಿದಾಗ ಕಣ್ಣಿಗೆ ಆಕರ್ಷಕವಲ್ಲ. ದಾರದಲ್ಲಿ ಒಂದೊಂದಾಗಿ ಪೋಣಿಸಿ ಸರ ಮಾಡಿ ಹೆಣೆದಾಗ ಮಲ್ಲಿಗೆಯ ರೂಪು ಮತ್ತು ವರ್ಣ ಓರಣವಾಗಿ ಕಾಣುತ್ತದೆ. ಮಲ್ಲಿಗೆಯನ್ನು ಹೆಣೆದ ದಾರವೇ ಅದರ ನಿಜ ಸೌಂದರ್ಯವನ್ನು ಹೊರಗೆಡಹುತ್ತದೆ.

ದುಡಿಮೆಯಿಂದ ಬೆಗುದ ಗಳಿಮೆಯೂ ಅಷ್ಟೇ. ಗಳಿಸಿದ ನಾಣ್ಯಗಳನ್ನು ಬಿಡಿ ಬಿಡಿಯಾಗಿ ರಾಶಿಯುರಿಸಿದಾಗ ಅದರ ಉಪಯುಕ್ತತೆ ನಮಗೆ ಅರಿವಾಗದು. ಉಳಿತಾಯದ ಸೂತ್ರದಿಂದ ನಾಣ್ಯಗಳನ್ನು ಒಂದೊಂದಾಗಿ ಹೆಣೆದಾಗಲೇ ಸಂಪತ್ತಿನ ನಿಜಸೊಬಗು ಅನುಭವಕ್ಕೆ ಬರುತ್ತದೆ.

....ಉಳಿತಾಯವೇ ಸಂಪತ್ತನ್ನು ರೂಪಿಸುವ ಸೂತ್ರ...

ಉಳಿತಾಯ ಮಾಡಲು ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಅನುಕೂಲತೆಗೆ ಹೊಂದಿಕೊಳ್ಳುವ ಹಲವು ಯೋಜನೆಗಳಿವೆ. ಸ್ಟ್ಯಾಂಡರ್ಡ್ ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್, ಫಿಕ್ಸೆಡ್ ಡಿಪಾಸಿಟ್.... ಇವೇ ಮೊದಲಾದ ಯಾವುದಾದರೊಂದು ಖಾತೆಯನ್ನು ತೆರೆದು ಉಳಿತಾಯಮಾಡಿರಿ. ಮತ್ತೆ ನಿಮ್ಮ ಬದುಕು ಶ್ರಾವಣದ ಮಲ್ಲಿಗೆಯ ಸೌರಭದಂತೆ ಉಲ್ಲಾಸಕರವೆನಿಸುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ. ಶಾಖೆಗಳು: 230ಕ್ಕೂ ಮಿಕ್ಕಿ. ಟಿ. ಎ. ಸ್ವೈ ಚೆಯರ್‌ಮೇನ್

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S.C. 5/68.

ಧರ್ಮರಾಜ ಪಟ್ಟೆ — ವಾದಿ
ಮತ್ತು
ಪದ್ಮು ಅಪ್ಪು ಪಿಂಟೋ — ಪ್ರತಿವಾದಿ

ಬೆಳ್ತಂಗಡಿ ತಾಲ್ಲೂ ಕಾಶಿಪಟ್ಣ ಗ್ರಾಮದ ಮಂಜಂತಕಲ್ಲು ಎಂಬಲ್ಲಿರುವ ಗುಸ್ತಿನ್ ಪಿಂಟೋರವರ ಮಗ ಪದ್ಮು ಅಪ್ಪು ಪಿಂಟೋರವರಿಗೆ —

ಮೇಲಿನ ವಾದಿಯಲ್ಲಿ ವಾದಿಯಿಂದ ರೂ. 277-00ನ್ನು ದಿಪ್ರೊ ನೋಟಿನ ಮೂಲಕ ಕಡಿದಿರುತ್ತೀರಿ. ಆದರೆ ನೀವು ಹಣ ಕೊಡದೆ ಇದ್ದುದರಿಂದ ನಿಮ್ಮ ಮೇಲಿನವಾದವನ್ನು ತಾರೀಖು 8-8-1968ಕ್ಕೆ ನಿಮ್ಮ ವಾಸ್ತವ್ಯ ಬಗ್ಗೆ ಇಟ್ಟಿರುತ್ತದೆ. ಆ ದಿನ ನೀವು ಕೋರ್ಟು ಮುಂದೆ ಬೆಳಗ್ಗೆ 11 ಗಂಟೆಗೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರ್ಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಕಿವ್ವಾ ಮಾಡಿ ವ್ಯಾಜ್ಯವನ್ನು ಮುಂದುವರಿಸಲಾದೀತು. ತಿಳಿದಿರಲಿ.

[ಕೋರ್ಟಿನ ಹುಕುಂ ಪ್ರಕಾರ]

Nemiraja Shetty,
Advocate, Belthangady.

ಬೆಳ್ತಂಗಡಿ, 15.7.1968.

ಅಧ್ಯಯನ

ಕಾಪಿನ ಇತಿಹಾಸ-೧

ಲೇಖಕರು
ಪ್ರಿನ್ಸಿಪಾಲ್ ಶ್ರೀ ಸಿ. ಗುರುರಾಜ ಭಟ್ಟ.

'ಕಾಪು' ಉಡುಪಿ ತಾಲೂಕಿಗೆ ಸೇರಿದ ಪ್ರದೇಶವಾಗಿದೆ. ಪ್ರಾಯಃ ರಕ್ಷಣೆಗೆ ಸಂಬಂಧಿಸಿ ಹೆಸರಾಗಿದ್ದಿರಬೇಕು. ಯಾವುದರ ರಕ್ಷಣೆ ಎಂಬುದು ತಿಳಿದು ಬರುವುದಿಲ್ಲ. ಸಮುದ್ರ ದಂಡೆಯಲ್ಲೇ ಈ ಪ್ರದೇಶವಿರುವುದರಿಂದಲೂ ಉದ್ಯಾವರದಲ್ಲಿ ಆಳಕೊಂಡಿದ್ದ ಆಳುಪರ ರಾಜಧಾನಿಗೆ ಸಂಬಂಧಿಸಿದ ಒಂದು ರಕ್ಷಣೆ ಈ ಪ್ರದೇಶವಾಗಿರಬಹುದೆಂದೂ ಊಹಿಸಬಹುದು. ಅಥವಾ ನಾಗಾರಾಧನೆಯಿಂದ ಬಂದ ಹೆಸರಿರಲೂ ಬಹುದು. ಒಮ್ಮೊಮ್ಮೆ 'ಕಾಪು' 'ಕಾವು' ಪದಗಳು ಪರ್ಯಾಯ ಪದಗಳಾಗಿ ಬಳಕೆಯಲ್ಲಿ ಇದ್ದಂತೆ ತಿಳಿದು ಬರುತ್ತದೆ. ದಾಖಲೆಯನ್ನಾಧರಿಸಿ ಹೇಳುವುದಾದರೆ 'ಕಾಪು' ಎಂಬೀ ಹೆಸರು ಕ್ರಿ. ಶ. 7—8ನೇ ಶತಕಗಳಷ್ಟಾದರೂ ಪ್ರಾಚೀನ. ಉದ್ಯಾವರದಲ್ಲಿ ದೊರಕಿದ ಒಂದುಕಲ್ಬರಹವು ಕ್ರಿ.ಶ. 8ನೇ ಶತಕಕ್ಕೆ ಅನ್ವಯಿಸುವಂತಿದ್ದು 'ಕಾಪು'ವಿನ ಉಲ್ಲೇಖವನ್ನು ಮಾಡುತ್ತದೆ. ಈ ಶಾಸನದಲ್ಲಿ ತೇದಿ ಇಲ್ಲವಾದರೂ ಲಿಪಿಯನ್ನಾಧರಿಸಿ ಇದನ್ನು ಕ್ರಿ. ಶ. 8ನೇ ಶತಮಾನಕ್ಕೆ ಅನ್ವಯಿಸಿದ್ದಾರೆ. "ಕುಂದಣಿಗೆ ಪೋಳೆನುಂ ಅಂಬರುಂ ಮಾಗುಡರುಂ ನಾಕ್ಕಿಯೂರುಂ ಕಾಪುಮಾಗಿ ಸಿವಾಳ (ಯಿ?) ನಾಸಿರ್ಬ್ಬರುಂ ಚೊಕಪಾಳಿಯು ಖಂಟ್ಟರು ಮಲಿಯು ಸಮ್ಬುಸಲ್ಲಿ ದೇವರ್ಗಿ" ಕಾಪು ಮತ್ತು ಅದರ ಸೆರೆಹೊರೆ ಪ್ರದೇಶಗಳು ಬಹಳ ಹಳೆಗಾಲದಿಂದಲೂ ಜನ ವಸತಿಯಿಂದ ಕೂಡಿದ್ದು ಸಾಂಸ್ಕೃತಿಕವಾಗಿ ವೈಶಿಷ್ಟ್ಯವುಳ್ಳದ್ದಾಗಿರಬೇಕು. ಮಜೂರು ಮತ್ತು ಕರಂದಾಡಿಗಳಲ್ಲಿರುವ ಜನಾರ್ದನ ಮೂರ್ತಿಗಳನ್ನು ಪರಿಶೀಲಿಸಿದರೆ ಅವು ಕ್ರಿ. ಶ. 10—11ನೇ ಶತಕಗಳಿಗೆ ಅನ್ವಯಿಸುವುವೆನ್ನಬಹುದು. ಅಂತೆಯೇ ಮೂಳೂರಿನಲ್ಲಿರುವ ಬುದ್ಧ ವಿಗ್ರಹವು ಕ್ರಿ. ಶ. 10ನೇ ಶತಕದಷ್ಟಾದರೂ ಪ್ರಾಚೀನವಾಗಿರಬೇಕು.

ಮಧ್ಯಕಾಲದಲ್ಲಿ 'ಕಾಪು' ಒಂದು ರಾಜ್ಯವಾಗಿತ್ತೆಂದು ಶಾಸನದಿಂದ ತಿಳಿಯುತ್ತದೆ. ಈ ರಾಜ್ಯದ ಅರಸುತನವೂ ಮದ್ದ (ಮದ್ದ) ಹೆಗ್ಗಡೆ ಎಂಬ ಜೈನ ಮನೆತನಕ್ಕೆ ಸೇರಿದ ಮುಖಂಡನ ಕೈಕೆಳಗಿತ್ತು. ಎಂದಿನಿಂದ ಈ ಮನೆತನಕ್ಕೆ ಅಧಿಕಾರ ಬಂತೆನ್ನುವುದು ತುಲಭವಲ್ಲ.

ಕಾಪಿಗೆ ಸಂಬಂಧಿಸಿದ ಮೊದಲ ಶಿಲಾಶಾಸನವು ಕ್ರಿ. ಶ. ೧೩೨೫ರ ಶಾಸನವಾಗಿದ್ದೆಇದು ಆಳುಪ ಅರಸನಾದ ಸೋಯಿ ದೇವಾಳುಪೇಂದ್ರ ದೇವರಸನ ಇಂಬದ ಶಾಸನ. ಈ ಶಾಸನದಲ್ಲಿ ಕಾಪು ಮದ್ದ ಹೆಗ್ಗಡೆಯ ಉಲ್ಲೇಖವಿಲ್ಲ. ಈ ಶಾಸನದ ಒಂದು ಭಾಗ ಈ ಕೆಳಗಿನಂತಿದೆ.

ಸ್ವಸ್ತಿ ಶ್ರೀಮತ್ ಪಾಂಡ್ಯ ಚಕ್ರವರ್ತಿ ಅರರಾಯ ಬಳವಸಂಖರ ಶ್ರೀಮತ್ ಸೋಇದೇವಾಳುಪೇಂದ ದೇವರಸರ ವಿಜಯ ರಾಜ್ಯವಂತ್ರರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕ ತಾರಾಂಬರಂ ಸಲ ಕ್ಷಿರೆ ಶ್ರೀ ಶಕವರ್ಷ ೧೨೪೭ ರಕ್ತಾಕ್ಷಿ ಸಂವ್ವತ್ಸರ ಕಂನ್ಯಾ..... ....ಕನ್ಯಾ ಬಾರಹ ಕನ್ಯಾಪುರದಲ್ಲಿ ಸ್ವರ್ನ, ಸಿಂಹಾಸನಾರೂಢಾಗಿ ಪೊಡ್ಡೋಲಗಂಗೊಟ್ಟಿರಲು—

ಶ್ರೀಮನು ಮಹಾಪ್ರಧಾನಂ ಸಿಂಗಣ ಸಾಹಣಿಯುಗಡು ಕೋಲಬಳ್ಳಿ ಬಾಹತ್ತರ ನಿಯೋಗಿಗಳ ನಿರೂಪದಿಂ ಕಾಪಿಫ ವಾಲಿಗರ ಕೆರೆಇಂದ ಹೋದಡುವ ಮಲಾವರ ಗಡಿ ಇಂ ಬಡಗಣಾ ಕಂಡು — ಗಡಲ್ಲಿ ಮೂವತ್ತರ ಕುಳಾದಲ್ಕೆ ಮು ಳಂ ಗೆ ಗೇಣಿನೂ ೧ ಅಂಗಣದ ಮು ೨೦ ನೂ ಕೂಡಿ.....

ಈ ಶಾಸನದಿಂದ ಕೆಲವು ತೀರ್ಮಾನಗಳನ್ನು ಮಾಡಬಹುದು.

(1) ಕಾಪು ಬಾರಕೂರಿನಲ್ಲಿ (ಬಾರಹ ಕನ್ಯಾಪುರ) ಆಳುತ್ತಿದ್ದ ಸೋಯಿ ದೇವಾಳುಪನ ಸರ್ವಾಧಿಪತ್ಯಕ್ಕೆ ಸೇರಿತ್ತು.

(2) 'ಶ್ರೀ ಮಹಾಪ್ರಧಾನಂ ಸಿಂಗಣಾ ಸಾಹಣಿಯೆರಡು ಕೋಲಬಳಿ ಬಾಹತ್ತರ ನಿಯೋಗಿಗಳ ನಿರೂಪದಿಂದ" ಭೂದಾನ ಮಾಡಿದುದರಿಂದ ಕ್ರಿ. ಶ. 1325ರಲ್ಲಿ ಕಾಪು ಒಂದು ಸ್ವತಂತ್ರ ಮುಂಡು ರಾಜ್ಯವಾಗಿತ್ತೆನ್ನಲು ಸಾಕಷ್ಟು ಆಧಾರ ಸಾಲದು;

(3) ಕ್ರಿ. ಶ. 1325ಕ್ಕೆ "ಕಾಪು" ಜನಾರ್ದನ ದೇವಳವಿದ್ದಿರಬೇಕು. ವಾಲಿಗರೆಂದರೆ ಬೇಗುಲದ ವಾಲಗವನ್ನು ಮಾಡುವವರೆಂದು ತಿಳಿಯಬಹುದು. "ಅಂಗಣದ ಮೂ ೨೦" ಎಂಬುದರಿಂದ ದೇವಸ್ಥಾನದ ಅಂಗಣವೆಂದೇ ತಿಳಿಯಬೇಕು.

(4) 'ಮಲವರು' ಎಂಬ ವರ್ಗ ಕಾಪಿನಲ್ಲಿ ವಾಸಿಸುತಿದ್ದಂತೆ ತಿಳಿಯುತ್ತದೆ. ಈ ವರ್ಗದಿಂದಲೇ 'ಮಲ್ಲಾರು' ಎಂಬ ಸ್ಥಳನಾಮವು ರೂಢಿಗೆ ಬಂದಿರಬೇಕು.

(5) 'ಮೂಡೆ' ಮತ್ತು 'ಮುಡಿ' ಎಂಬಿವುಗಳು ಸಮಾನಾರ್ಥದ ಅಳತೆಗಳಾಗಿವೆ. ಈ ಅಳತೆಯಲ್ಲಿ 30 ಬಳ್ಳಿ (ಹಾನೆ) ಮತ್ತು 50 ಬಳ್ಳಿ (ಹಾನೆ)ಗಳನ್ನೊಳಗೊಂಡ ಎರಡು ವಿಧಗಳಿದ್ದುವು.

ಎರಡನೇ ಶಾಸನವು ಈ ಕೆಳಗಿನಂತಿದೆ.

ಶ್ರೀ ಗಣಾಧಿಪತಯೇ ನಮಃ ಶ್ರೀ ಶರ ಸ್ವತ್ಯೈನಮಃ ಸಿದ್ಧಿರಸ್ತು ॥ ವಿಕಾರಿ ಸಂವತ್ಸರದ ಮೇಷಮಾಸ ೧೮ನೆ ದ್ವಾದಶಿಯಲು ಶ್ರೀಮತು ಗಣಪಣ ಸಾವಂತರಾದ ಮದ್ದ ಹೆಗ್ಗಡೆಯರು ಸುಖರಾಜ್ಯವಾಳುವ ಕಾಲದಲು.

ಈ ಶಾಸನದಲ್ಲಿ ತೇದಿಯಿಲ್ಲವಾದರೂ ಇದು ಕ್ರಿ. ಶ. 1480ರ ದಾಖಲೆ ಎನ್ನಬಹುದು. ಈ ದಾಖಲೆ ಪ್ರಕಾರ ಗಣಪಣ್ಣ ಸಾವಂತ ಮದ್ದ ಹೆಗ್ಗಡೆಯು ಸರ್ವ ಸ್ವತಂತ್ರನಾಗಿ ಆಳುತಿದ್ದಂತೆ ಕಂಡುಬರುತ್ತದೆ. ಈ ಸಮಯದಲ್ಲಿ ಆಳುಪರ ಸಜನವಾಗಿ ವಿಜಯನಗರದ ಅಧಿಪತ್ಯವು ತುಳುನಾಡಿನಲ್ಲಿ ಸಾರ್ವತ್ರಿಕವಾಗಿ ಸ್ಥಾಪಿತವಾಗಿತ್ತು. ಕಾಪು ಬಾರಕೂರು ರಾಜ್ಯಕ್ಕೆ ಸೇರಿದ್ದ ದಾಖಲೆ ದೊರಕುತ್ತದೆ. ಆದರೂ ಚಿಕ್ಕ ಚಿಕ್ಕ ಪಾಳೆಯಗಾರರು ತಮ್ಮದೆ ಆದ ಅಧಿಕಾರವನ್ನು ತಮ್ಮ ರಾಜ್ಯದ ಸೀಮೆಯೊಳಗೆ ಸ್ಥಾಪಿಸಿದಂತೆ ಭಾಸವಾಗುತ್ತಿದೆ. ಇದಕ್ಕೆ ವಿಜಯನಗರದ ಗವರ್ನರರ ಸಮ್ಮತಿಯೇ ಕಾರಣವೆನ್ನಬಹುದು.

ಗಣಪಣ್ಣ ಸಾವಂತರ ಉತ್ತರಾಧಿಕಾರಿಯಾಗಿ ತಿರುಮಲ ಅರಸ ಮದ್ದ ಹೆಗ್ಗಡೆಯು ಸಿಂಹಾಸನವನ್ನೇರಿದಂತೆ ತಿಳಿದು ಬರುತ್ತದೆ. ಕಾಪು ಶ್ರೀ ಜನಾರ್ದನ ದೇವಾಲಯದಲ್ಲಿ ದೊರಕಿದ ಶಾಸನವು ಈಕೆಳಗಿನಂತಿದೆ: ನಮಸ್ತುಂಗ ಶಿರಶ್ಚುಂಬಿ ಚಂದ್ರ, ಚಾಮರಾಚಾಳದೇ। ತ್ರಯಿಲೋಕ್ಯಾಲೋಕ್ಯನಕರಾರಂಭ ಮೂಲಸ್ತಂಭಾಯಶಂಭವೇ। ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೪೨೧ ನೆಂದು ಯೆರಡನೆಯ ವರ್ಷವೂನ ಸಿದ್ಧಾರ್ಥಿ ಸಂವತ್ಸರದ ಧನುರ್ಮಾಸ ೨೯ನೆಯ ಶುಕ್ರವಾರದಲೂ ಶ್ರೀಮತು ಶಂಕರದೊಡೆಯರಾದ ಪುಂಡ ಹೆಗ್ಗಡೆಯರು ಬಂದು ಆಶ್ರಯಿಸಿದದರೂ ನಮೋಳೇಕಸ್ಥಾಗಿ ತಿರುಮಲೆ ಅರಸರಾದ ಮದ ಹೆಗಡೆಯರಿಗೂ ಆಸಿರಿ— ಸಿದವರಿಗೂ ಬರಸಿ ಬಿಟ್ಟ ಶಿಲಾಶಾಸನದ ಕ್ರಮವೆಂತೆಂದರೆ ಭೂಮಿ—

ಯನಾಗ ನಿಮ್ಮ ಬೀಡಿನ
ಮುಂದೆ ಹೊಯಿದಾಡೆ ಹ—
ಸಿಕೊಂಬೆ ತೀರದಿದರೆ ಸಾ ವ—
ಕೊಲ್ಲಳ ಕೂಡ ಅರಿಯಿಸಿ—
ದವರ ಕೂಡೆ ಬುದಿ ಬರಸಿರಿ
ಬಳಯ ಹೇಳಿ ನೋಡಿ ನೆಟ್ಟೆದ-
ನೆಂದು ಬಳಲು ಬಾರಿಸಿ ಹಾ-
ಕೆ ಕೊಟ್ಟ ವೀರಗಲ್ಲು ॥

ಈ ಶಾಸನದಲ್ಲಿ ತೇದಿಯಿಲ್ಲದಿದ್ದರೂ ಇದು ಕ್ರಿ. ಶ. 1503 ಕ್ಕೆ ಅನ್ವಯಿಸುತ್ತದೆ. ಈ ಶಾಸನದ ಒಕ್ಕಣೆಯು ಕ್ಲಿಷ್ಟವಾಗಿದೆ. ಕಾರಕಳದ ಬಯಿರರಸರ ಸೇನೆಯು ಕಾಪು ಬೀಡಿನ ಮುಂದೆ ಯುದ್ಧ ಮಾಡಿದಂತೆಯೂ ಬಂಡಾರಿ ಎಂಬಾತನು ತಿರುಮಲಅರಸರ ಪರವಾಗಿ ಕಾದಾಡಿ ವೀರ ಸ್ವರ್ಗವನ್ನೈದಿದನೆಂದು ಬಲ್ಲಾಳನು ಈ ವಿಷಯ ಜನತೆಗೆ ಸಾರಿ ವೀರಗಲ್ಲನು ಹಾಕಿಸಿದನೆಂದೂ ಇದರ ಅಭಿಪ್ರಾಯವಾಗುತ್ತದೆ. ಈ ಶಾಸನದಲ್ಲಿ "ಗಹಂಮಳ" ಎಂಬ ಒಳಿಯ ಹೆಸರೂ, ಅರಸನ ಅರಮನೆಯೂದ ಬೀಡಿನ ಹೆಸರೂ ಬಲ್ಲಾಳನೆಂಬ ಅರಸನ ಸೇವಕನ ಹೆಸರೂ ತಂಗಬರುತ್ತವೆ.

(ಮುಂದುವರಿಯುವುದು)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮುಂಬೈ ಕನ್ನಡ ಸಾಹಿತ್ಯ ಕೂಟ

ಮುಂಬೈ ಕನ್ನಡ ಸಾಹಿತ್ಯ ಕೂಟದ ಸಭೆಯು ಜುಲೈ ೧೧ರಂದು ಶನಿವಾರ ಮುಂಬೈ ಕನ್ನಡ ಸಂಘದ ಕಚೇರಿಯಲ್ಲಿ ಜರಗಿತು. ಆರಂಭದಲ್ಲಿ ಕನ್ನಡದ ನಾಮಾಂಕಿತ ವಿದ್ವಾಂಸರೂ, ಲೇಖಕರೂ ಆಗಿದ್ದು ಇತ್ತೀಚೆಗೆ ನಿಧನರಾದ ಶ್ರೀಮಾನ್ ಎ. ಆರ್. ಕೃಷ್ಣ ಶಾಸ್ತ್ರಿಗಳು ಮತ್ತು ಕಡಂಗೋಡ್ಲು ಶಂಕರ ಭಟ್ಟರ ಆತ್ಮಕ್ಕೆ ಶಾಂತಿಯನ್ನು ಕೋರಿ ಮೌನಪ್ರಾರ್ಥನೆ ಸೈಯಲಾಯ್ತು.

ಆ ಬಳಿಕ ಗುಜರಾತೀ ಸಾಹಿತ್ಯದ ಖ್ಯಾತನಾಮರುಗಳ ಅತಿವಾಸ್ತವತಾವಾದ [SUR-REALIST] ಕವಿ, ವಿಮರ್ಶಕ ಪ್ರಾ। ಸಿತಾಂಶುಯ್ಯಶಚಂದ್ರ ಅವರು ಗುಜರಾತೀ ಸಾಹಿತ್ಯದ ಆರಂಭ ಬೆಳವಣಿಗೆ ಮತ್ತು ಇಂದು ಬೆಳೆಯುತ್ತಿರುವ ತರುಣ ಕವಿಗಳ ಕೃತಿಯ ಪ್ರಕೃತಿಯೆಂಗಳ ಬಗೆಗೆ ವಿಮರ್ಶಾತ್ಮಕ ಭಾಷಣಮಾಡಿದರು. ಅನಂತರ ಅವರು ತನ್ನ ಎರಡು ಗುಜರಾತೀಕವನಗಳನ್ನು ಸಭೆಯಲ್ಲಿ ಓದಿದರು.

ಅನ್ಯ ಭಾಷಾ ಸಾಹಿತ್ಯದ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಸಾಹಿತ್ಯ ಕೂಟವು ಏರ್ಪಡಿಸಿದ್ದ ಈ ಕಾರ್ಯಕ್ರಮವು ತುಂಬ ಆಕರ್ಷಕವಾಗಿತ್ತು. ಪ್ರಾ। ಚಿದಂಬರ ದೀಕ್ಷಿತ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಮುಂಬೈಯ ಕನ್ನಡದ ಬಹುತೇಕ ಲೇಖಕರು ಭಾಗವಹಿಸಿದ್ದರು.

ಚಾರು ಚಯನ

ಅವಸರವಾದ ಮತ್ತು ವಿಳಂಬವಾದ

ಕರ್ನಾಟಕದ ಮುಖ್ಯ ಮಂತ್ರಿ ಮಾನ್ಯ ವೀರೇಂದ್ರ ಪಾಟೀಲರು ಸರಕಾರಿ ಅಧಿಕಾರಿಗಳಿಗೆ ತೀವ್ರವಾದ ಎಚ್ಚರಿಕೆಯನ್ನು ನೀಡಿದ್ದಾರೆ. ಅಧಿಕಾರಿಗಳು ಒಳ್ಳೆಯ ಸೇವೆಯನ್ನು ಸಲ್ಲಿಸಬೇಕು—ಇದು ಅವರ, ಜನತೆಯ ಎಲ್ಲರ ಆಶಯ. ಆದರೆ, ಪಾಟೀಲರು ಇನ್ನು ಮುಂದೆ ಅಧಿಕಾರಿಗಳ ಭಡ್ತಿಗೆ ಸೀನಿಯಾರಿಟಿಯೊಂದೇ ಆಧಾರವಲ್ಲ, ಅಧಿಕಾರಿಗಳ ಪ್ರತಿಭೆ ಮತ್ತು ನಿಷ್ಠೆಗಳನ್ನೇ ಆಧಾರವಾಗಿ ತೆಗೆದುಕೊಳ್ಳಲಾಗುವುದು; ಅದಕ್ಷ ಅಧಿಕಾರಿಗಳನ್ನು ಕಡ್ಡಾಯವಾಗಿ ನಿವೃತ್ತಿ ಮಾಡಲಾಗುವುದು ಎಂದು ಸೂಚಿಸಿದ್ದಾರೆ. ಇದನ್ನು ಜನ ಸ್ವಾಗತಿಸುತ್ತದೆ.

ಅಧಿಕಾರಿಗಳು ಸರಕಾರದ ಕಾರ್ಯದಲ್ಲಿ ನಿಷ್ಠೆ, ಪ್ರತಿಭೆ ಮತ್ತು ಪ್ರಾಮಾಣಿಕತೆಗಳಿಂದ ದುಡಿಯುಬೇಕೆಂಬ ಕರೆ ಇಂದು, ನಿನ್ನೆಯದಲ್ಲ. ಸರ್ವೇ ಸಾಮಾನ್ಯವಾಗಿ ಪ್ರತಿಯೊಬ್ಬ ಮುಖ್ಯಮಂತ್ರಿ ಯಾ ಪ್ರಧಾನ ಮಂತ್ರಿ ಅಧಿಕಾರ ಸ್ವೀಕರಿಸಿದೊಡನೆಯೇ ಹೀಗೆ ಹೇಳಿಕೊಳ್ಳುವುದು ಸಂಪ್ರದಾಯ—ಆದರೆಕ್ಕೆ ಉತ್ತರ ರೂಪವಾಗಿ ತಮ್ಮ ಸಂಪೂರ್ಣ ಸಹಕಾರದ ಆಶ್ವಾಸನೆ ನೀಡುವುದೂ ಅಷ್ಟೇ ಸತ್‌ಸಂಪ್ರದಾಯ. ಆದರೆ, ಹೇಗಿದ್ದರೂ ದಿನೇ ದಿನೇ ಆಡಳಿತೆಯಲ್ಲಿ ಶಿಥಿಲತೆ, ಅದಕ್ಷತೆ, ಪಕ್ಷಪಾತ, ಅನ್ಯಾಯ, ಲಂಚರುಬಾಹುಕ್ಕು ಮೊದಲಾದ ಅಮಿಷಗಳ ವಿಷಬೀಜ ಬೆಳೆಯುತ್ತಲೇ ಹೋಗುತ್ತಿದೆ. ಇದೇಕೆ ಹೀಗೆ?

ಇದಕ್ಕೆ ಉತ್ತರವೊಂದೇ. ಮಂತ್ರಿಮಂಡಳ ಮತ್ತು ಸರಕಾರದ ಕಾರ್ಯಾಂಗ ಹೆಣಂದಿಕೊಂಡು ಮುಂದುವರಿಯುವುದಿಲ್ಲ. ಹಾಲು—ನೀರಿನಂತಿರಬೇಕಾದ ಈ ಎರಡು ಘಟಕಗಳು ಎಣ್ಣೆ ಸೀಗೆಯಾಗಿಯೇ ಇರುತ್ತವೆ. ಇತ್ತೀಚೆಗೆ ಉಡುಪಿ ನಗರ ಸಭೆಯ ಅಧ್ಯಕ್ಷರ ಮೇಲೆ ಬಂದ ಅವಿಶ್ವಾಸ ಗೊತ್ತುವಳಿಯು ಚರ್ಚೆಗೆ ಬಂದಾಗ, ಎಲ್ಲಾ ಅನಾಹುತಗಳಿಗೂ ನಗರ ಸಭೆಯ ಚೀಫ್ ಆಫೀಸರೇ ಹೊಣೆಯೆಂಬ ಲಂಚ ಬಳಕೆಗೆ ಬಂತು.

ಇಂದು ರಾಜ್ಯದಲ್ಲಿ ಆಧವಾ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ಸು ಶಾಸಕ ಪಕ್ಷವಾಗಿರಬಹುದು, ಅಥವಾ ಮತ್ತಾವುದೇ ಒಂದು ಪಕ್ಷದ ಮನೋಭಾವದ ಬಹುಮತವಿರಬಹುದು. ಆದರೆ, ಜನಸೇವೆಯ ಕಾರ್ಯದಲ್ಲಿ ನಿಧಾನ-ವಿಳಂಬ ನೀತಿ ಎಲ್ಲೆಡೆಯೂ ಅನುಭವವೇದ್ಯವೇ. ಇದಕ್ಕೆ ಇರುವ ವಿಷಮೇವ ಕಾರಣ ಆಡಳಿತಾಧಿಕಾರಿಗಳು ಎಂಬುದು ಎಲ್ಲರಿಗೂ ಎದ್ದು ತೋರುವ ಸತ್ಯ.

ಪ್ರಜಾಪ್ರತಿನಿಧಿಗಳು ಲಂಗುಲಗಾಮಿಲ್ಲದ ಕುದುರೆಯಂತೆ; ಅವರು ಶೀಘ್ರಸೇವಿಗಳು, ರಾತ್ರಿ ಬೆಳಗಾಗುವುದರೊಳಗೇನೇ ನರಕ ಸ್ವರ್ಗವಾಗಬೇಕೆಂದು ಬಯಸುವವರು. ಆದರೆ, ಅವರ ಈ ಬಗೆಯ ಆಶಯವನ್ನು ಅಧಿಕಾರಿಗಳು ಕಾರ್ಯರೂಪಕ್ಕೆ ಹೇಗೆ ತರಬಲ್ಲರು? ರಾಜಕಾರಣಿಗಳ ನಿರ್ಧಾರವು ಜನ ಕಲ್ಯಾಣವೊಂದನ್ನೇ ಅವಲಂಬಿಸಿಕೊಂಡಿರುವುದಿಲ್ಲ; ಇವರ ಹಿಂದೆ ರಾಜಕೀಯ ಉದ್ದೇಶವೂ ಇಣಿಕೆ ನೋಡುವುದು ತಪ್ಪಲ್ಲ. ಆದರೆ, ಸರಕಾರಿ ಅಧಿಕಾರಿಗಳ ದಾರಿ ಎರಡು ಬೇಲಿಯ ನಡುವಿನದು. ಇತ್ತ-ಮತ್ತಿಗೊಳಪಟ್ಟದ್ದು. ಹಾಗಾಗಿ ಅವಸರ ನೀತಿ ಅವರಿಗಾಗದು; ಅವರದು ವಿಳಂಬ ನೀತಿ.

ಮಂತ್ರಿಗಳ ಅವಸರ ನೀತಿ ಮತ್ತು ಕಾರ್ಯಾಂಗದ ವಿಳಂಬ ನೀತಿಗಳ ದುರುಪಯೋಗ ಪಡೆದುಕೊಳ್ಳುವ ದ್ರೋಹಿಗಳು, ಈ ದ್ರೋಹಿಗಳಿಗೆ ಒತ್ತಾಸೆ ನೀಡುವ ಸಮಾಜಕಂಟಕ ಪ್ರಜಾಪ್ರತಿನಿಧಿಗಳು, ಅಧಿಕಾರಿಗಳು ಇಲ್ಲವೆಂದಿಲ್ಲ. ಇದರಿಂದಾಗಿಯೇ ಆಡಳಿತೆಯಲ್ಲಿ ಶಿಥಿಲತೆ, ಅದಕ್ಷತೆಗಳು ತಾಂಡವವಾಡುತ್ತಿವೆ. ನಿಜವಾದ ಪ್ರಾಮಾಣಿಕ-ನಿಷ್ಠೆ—ಸಮರ್ಥರನ್ನು ತಿರಸ್ಕಾರ ದೃಷ್ಟಿಯಿಂದ ನೋಡುವವರೇ ಹೆಚ್ಚು. ಅಂದರೆ ಇಂದಿನ ಅಧೋಗತಿಗೆ ಕಾರಣ—ಅವಸರವಾದ-ವಿಳಂಬವಾದಗಳ ಸಂಘರ್ಷ. ಇದನ್ನೇ ಎಲ್ಲೆಡೆಯಲ್ಲೂ ನಾವು ಕಾಣುತ್ತಿದ್ದೇವೆ.

ಮುಖ್ಯಮಂತ್ರಿ ವೀರೇಂದ್ರ ಪಾಟೀಲರೂ ಇದನ್ನು ಅರಿತುಕೊಂಡಿದ್ದಾರೆ. ಸಂಘರ್ಷದಿಂದ, ಪರಸ್ಪರ ದೋಷಾರೋಪಣೆಯಿಂದ ಕಾರ್ಯ ಸಾಧನೆಯಾಗದು. ಕಾರ್ಯ ಸಿದ್ಧಿಸಬೇಕಾದರೆ, ಹೊಂದಾಣಿಕೆ ಅತ್ಯಗತ್ಯ. ನ್ಯಾಯವನ್ನು ಎತ್ತಿ ಹಿಡಿದು ಕಾರ್ಯಸ್ಪೃಷ್ಟರಾಗುವುದೂ ಅಷ್ಟೇ ಅವಶ್ಯಕ. ಜನತಾ ಪ್ರತಿನಿಧಿಗಳೂ ಸರಕಾರಿ ಅಧಿಕಾರಿಗಳೂ ಇಂತಹ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಒಂದಾಗಿ ಬಂದಾಗ, ಜನತೆಯೂ ಸಂಪೂರ್ಣ ಸಹಕಾರ ನೀಡಲೇಬೇಕು. ನಮ್ಮ ಜನ ಏನು ಬಯಸುತ್ತದೆ?

ಂ ಂ ಂ

ಅನಾವೃಷ್ಟಿಯ ಹಾವಳಿಯಿಂದ ಬರಗಾಲಕ್ಕೀಡಾದ ಭಾರತದಲ್ಲಿ ಈ ವರ್ಷ ಸರ್ವ ಸಾಮಾನ್ಯವಾಗಿ ಅತಿವೃಷ್ಟಿ. ಎಲ್ಲಿ ನೋಡಿದರಲ್ಲಿ ಮಳೆಯದೇ ಮುಗಿಯದ ಕಥೆ. ಅವಾಸ ಪ್ರಾಣ ಹಾನಿ; ಹೊಲಗಳ ಮುಳುಗಡೆ- ಸಾಕಿಗೆ ಸಂಪರ್ಕಕ್ಕೆ ತಡೆ ವಿದ್ಯುತ್ ಸರಬರಾಯಿಗೆ ವಿಘ್ನ ಇತ್ಯಾದಿ ಇತ್ಯಾದಿ. ದೇವರು ಇದ್ದಾನೆ, ಆತನು ಎಲ್ಲವನ್ನೂ ಕೊಡುತ್ತಾನೆ ಎಂದು ನಂಬುವುದಾದರೆ, ಈ ವರ್ಷದ ಮಳೆಯೊಡನೆ ಅತಿ ಹಂದಿನ ಬಾಕಿಯೆಲ್ಲವನ್ನೂ ಬಡ್ಡಿ ಸಹಿತ ಕೊಟ್ಟಿದ್ದಾನೆ. ಲೆಕ್ಕಾಚಾರ ಚುಕ್ತಾ ಮಾಡಿದ್ದಾನೆ. ಮಳೆ-ಬೆಳೆಗಳು ಕಾಲಕಾಲಕ್ಕೆ ಸರಿಯಾಗಿ ಕೈ ಸೇರುತ್ತಿದ್ದರೂ ರಾಜ್ಯ ಸರಕಾರಕ್ಕೆ ೨೭ ಕೋಟಿ ರೂಪಾಯಿಗಳ ಕಂದಾಯ ಬರುವುದು ಬಾಕಿಯಿದೆಯೆಂದು ಸುದ್ದಿ. ಇದಲ್ಲದೆ ಇನ್ನಿತರ ಕೇಂದ್ರ-ರಾಜ್ಯ ಸರಕಾರಗಳಿಗೆ ವಸೂಲಾಗಬೇಕಾದ ತೆರಿಗೆ ಹಣ ಅದೆಷ್ಟು ಕೋಟಿಗಳೊ! ದೇವರೇ ಲೆಕ್ಕ ಚುಕ್ತಾ ಮಾಡಿತೋರಿಸುತ್ತಿರುವಾಗ ಜನ ಏಕೆ ಕಂದಾಯ ತೆರಿಗೆ ಬಾಕಿಯಿಡಬೇಕು?

ಂ ಂ ಂ

ಪಾಕ್ ಎಸೆಂಬ್ಲಿಯಲ್ಲಿ ಒಂದು ವಿನೋದ. ಇದರಿಂದ ಪಾಕ್ ರಾಜಕಾರಣದಲ್ಲಿ ಎಷ್ಟು ಹೆಗರಣವಿದೆಯೆಂಬುದು ಗೊತ್ತಾಗುವುದು. ಇತ್ತೀಚೆಗೆ ಪಾಕಿಸ್ತಾನವು ನೋವಿಯತ್ ಲ್ಯಾಂಡಿನಿಂದ ಶಸ್ತ್ರಾಸ್ತ್ರಗಳ ನೆರವು ಅಲ್ಪ ಪ್ರಮಾಣದಲ್ಲಾದರೂ ಪಡೆಯುವಲ್ಲಿ ಸಮರ್ಥವಾಯಿತು. ಕಾಶ್ಮೀರವನ್ನು ರಕ್ಷಿಸಲು ತಾನು ಸದಾ ಸನ್ನದ್ಧವೆಂದು ಸಾರಿತು. ಆದರೆ, ಇಲ್ಲಿನ ವಿರೋಧಾಭಾಸವನ್ನು ಎಸೆಂಬ್ಲಿ ಸದಸ್ಯರೊಬ್ಬರು ಹೊರಗೆಡಹಿದರು.

ಕಾಶ್ಮೀರದ ಸಮಸ್ಯೆಯಿದೆಯೆಂದೂ ಅದರ ಪರಿಹಾರವು ಅಲ್ಲಿನ ಜನಮತಗಣನೆಯಿಂದ ಸಾಧ್ಯವೆಂದೂ ಪಾಕಿಸ್ತಾನ ಹಿಂದಿನಿಂದಲೂ ಹೇಳುತ್ತ ಬಂದಿದೆ. ಇಪ್ಪತ್ತು ವರ್ಷಗಳಷ್ಟು ಹಿಂದೆಯೂ ಅದರ ವಾದ ಏದೇ. ಭಾರತದ ಒಪ್ಪಿಗೆಯಿಂದ ಭದ್ರತಾ ಮಂಡಳಿ ಸ್ವೀಕರಿಸಿದ ಗೊತ್ತುವಳಿಯಂತೆ ಮೊದಲು ಪಾಕಿಸ್ತಾನವು ಕಾಶ್ಮೀರದ ಮೇಲಿನ ಆಕ್ರಮಣವನ್ನು ಹಿಂದೆಗೆದುಕೊಳ್ಳಬೇಕು. ಮತ್ತೆ ಜನಮತಗಣನೆ ನಡೆಯಬೇಕು. ಮೊದಲನೆಯದು ನಡೆಯಲಿಲ್ಲ; ಎರಡನೆಯದಕ್ಕೆ ಅವಕಾಶ ದೊರೆಯಲಿಲ್ಲ—ಹೊತ್ತುಗಳೆ ಕಳೆದ ಬುಟ್ಟಿಗೆ ಹೋಯ್ತು. ಆ ವಂಶದ ಕಾಶ್ಮೀರಿಗಳು ವಯಸ್ಕ ಮತದಾನ ಪದ್ಧತಿಯಿಂದ ತಮ್ಮ ಆಡಳಿತವನ್ನು ಪ್ರಜಾಪ್ರಭುತ್ವ ನೀತಿಪರವಾಗಿ, ಧಾರಣದ ಅವಿಭಾಜ್ಯ ಅಂಗವಾಗಿ ನಡೆಸಿಕೊಂಡು ಬಂದಿದ್ದಾರೆ.

ಆದರೆ, ಪಾಕಿಸ್ತಾನದ ಪ್ರಜೆಗೆ ಸ್ವಯಂ ಮತ ಚಲಾಯಿಸುವ ಅಧಿಕಾರವಿಲ್ಲ. ಪಾಕ್ ಎಸೆಂಬ್ಲಿ ಸದಸ್ಯರನ್ನು ಪಾಕಿಸ್ತಾನಿಗಳಿಗೆ ಸ್ವಯಂ ನಿರ್ಣಯಾಧಿಕಾರವನ್ನು ನೀಡಿರುವುದಿಲ್ಲ. ಅಧ್ಯಕ್ಷ ಅಯ್ಯೂಬ್‌ಖಾನರು ಸರ್ವಾಧಿಕಾರಿಯೇ. ಹಾಗಿರುವಾಗ, ಕಾಶ್ಮೀರಿಗಳಿಗೆ ಸ್ವಯಂ ನಿರ್ಣಯಾಧಿಕಾರ ಬೇಕು ಎಂದು ಬೊಬ್ಬಿಡುವ ಪಾಕ್‌ನದು ಬಾಯಿ ತೆರು ಬೊಬ್ಬೆ; ಅ ಧರ್ಮಹೀನವಾದುದು- ಇದು ಅವರ ಅ ಕ್ರೋಶ. ತಮಗೂ ಸ್ವಯಂ ನಿರ್ಣಯಾಧಿಕಾರ ಬೇಕೆನುವುದನ್ನು ಪರೋಕ್ಷವಾಗಿ ವಾದಿಸಿದರು ಈ ವಿರೋಧಿ ಪಕ್ಷೀಯರು.

ಈ ಸಮಸ್ಯೆಯನ್ನು ಇತ್ಯರ್ಥ ಮಾಡಲು ರಕ್ಷಣಾ ಶಾಖೆಯ ಪಾರ್ಲಿಮೆಂಟರಿ ಕಾರ್ಯದರ್ಶಿ ಎದ್ದು ಕೃಯಾಲೋಪವನ್ನೆತ್ತಿದನು. ಕಾಶ್ಮೀರದ ಸ್ವಯಂ ನಿರ್ಣಯಾಧಿಕಾರದ ಪ್ರಶ್ನೆ ಕಾಶ್ಮೀರಕ್ಕೆ ಮಾತ್ರ ಸಂಬಂಧಿಸಿದ್ದು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಾಜಕಾರಣದಲ್ಲಿ ಸಾಮ್ಯ ತರುವುದು ಎಂಬುದು ಸ್ವೀಕರರ ರೂಲಿಂಗು.

ಕಾಶ್ಮೀರ ತಮ್ಮದಲ್ಲವೆಂಬುದನ್ನಂತೂ ಇದರಿಂದ ಒಪ್ಪಿಕೊಂಡಂತಾಯ್ತು. ಆಡುವುದೊಂದು, ಮಾಡುವುದು ಬೇರೊಂದು—ಈ ನೀತಿ ಪಾಕಿಸ್ತಾನದ ರಕ್ತಗತ ಗುಣವೆಂಬುದು ಮತ್ತೆಮ್ಮೆ ಸುಸ್ಪಷ್ಟವಾಯಿತು.

ಗೋ.

ಪ್ರೀತಿ

ಪ್ರೀತಿಯೆಂಬುದು ನೋಡು ಜೆಲುವಗೆ ಲಾಬಿ
ಅತಿ ಮಧುರ ಕೋಮಲ ಗೊತ್ತೇನು ನಾಂಬಿ?
ಮನಮುಳವ ಹುರಿ ದೂರದಿ ನೋಡೆ ಚಂದ
ಹಿಡಿದು ಹಿಚಕಿದರೆ ಇನ್ನೆಲ್ಲಿ ಆನಂದ? ॥ ೧ ॥

ರಾಜ ದರ್ಬಾರು

ವಜ್ರರಾಜ ಸಾಗು ಬಿಡು ಹೆಳೆಯ ಜರಿ ಕೋಟು
ನಿನಗೆ ಸಾಲದೆ ನಮ್ಮ ಮೇಂಟು
ಸಿರ ರೇಟು ॥
ಅಕ್ಕಿ ಸಕ್ಕರೆಗೆಲ್ಲ ರೇಶನ್ನು ಕಾರ್ಡು
ತುಕ್ಕು ಬಡಿಯಿತು ನಿನ್ನ ಬಿಂದಿಗೆ ಬೋರ್ಡು ॥ ೨ ॥

—'ದೇವಕನಂದ' ಮಿರ್ಜಾನ್ಕ
ಉ. ಕ.



ಚಾರ್ವಾಕ ದರ್ಶನ

ಬರೆದವರು : ಶ್ರೀ ಎಂ. ವಿ. ಚಕ್ರವರ್ತಿ.

ಸುಖ ಪ್ರವೃತ್ತಿ ದುಃಖ ನಿವೃತ್ತಿ ಜಡ ತತ್ವ ನಿಸರ್ಗನಿಯಮ. ಆದರಲ್ಲೂ ದುಃಖ ನಿವೃತ್ತಿಯ ಬಯಕೆಯೇ ಪ್ರಬಲ. ಅದು ಕಾರಣ ಜೀವನ ಸಾಮಾನ್ಯ ದುಃಖ ನಿವೃತ್ತಿಗಳಿಗೆ ಪ್ರಯತ್ನಿಸುತ್ತದೆ ಎಂಬುದು ನಿಜ. ಇದರ ಪ್ರತಿಪಾದನೆಗಾಗಿಯೇ ಅನೇಕ ದರ್ಶನಗಳು ಅವತರಿಸಿವೆ.

ದರ್ಶನ ಎಂದರೆ ದೃಷ್ಟಿ ಎಂದರ್ಥ. ತತ್ವ ವಿಚಾರವೇ ದೃಷ್ಟಿ, ತತ್ವ ಎಂಬುದು ಉಲ್ಲೇಖಿತವಾದ ವಸ್ತು. ಅಗ್ನಿ, ಉಷ್ಣ, ಜಲ ಶೀತ ಮುಂತಾದವು ಅದರ ಉದಾಹರಣೆ. ವಸ್ತು ಸ್ವಭಾವ ವಿಚಾರವೇ ತತ್ವ ದರ್ಶನವೆಂದರೆ ಸರಿ. ಆ ವಸ್ತುಗಳು ಹಲವು ಪ್ರಮಾಣಗಳಿಂದ ಸಿದ್ಧವಾಗ ತಕ್ಕವು. ಕೆಲವು ಪ್ರತ್ಯಕ್ಷ ಪ್ರಮಾಣ ಸಿದ್ಧವಾದರೆ ಮತ್ತೆ ಹಲವು ಪರೋಕ್ಷ ಪ್ರಮಾಣ ಸಿದ್ಧವಾದವು. ಆತ್ಮ, ಪರಮಾತ್ಮ, ಪುಣ್ಯ ಪಾಪ, ಮುಂತಾದವು ಪರೋಕ್ಷ ಪ್ರಮಾಣಕ್ಕೆ ಉದಾಹರಣೆಗಳು. ಪ್ರತ್ಯಕ್ಷ ಪರೋಕ್ಷವಾದ ಸಕಲ ವಸ್ತುಗಳ ವಿಚಾರವೇ ತತ್ವ ದರ್ಶನ. ಈ ದರ್ಶನಗಳಿಗೆ ಮಾನವ ಸಹಜವಾದ ಬುದ್ಧಿ ಶಕ್ತಿ, ಉಹಾಪೋಹ ಶಕ್ತಿಗಳೇ ಕಾರಣ. ಮನುಷ್ಯ ಸಹಜವಾದ ರಾಗದ್ವೇಷ ಮೋಹ ವಿರಾಗವೇ ತತ್ವ ಬುಭುತ್ಸುಗಳ ಚರಮಧ್ಯೇಯ, ಈ ಮೂರು ಗುಣಗಳೇ ಮಾನವನಿಗೆ ಮಾರಕ. ಇವನ್ನು ಸಂಪೂರ್ಣವಾಗಿ ತ್ಯಜಿಸುವುದು, ಅಗದ ಮಾತು. ಯಥೋಚಿತವಾಗಿ ಆ ಗುಣಗಳ ಪ್ರಾಬಲ್ಯವನ್ನು ತಗ್ಗಿಸಲು ಪ್ರಯತ್ನಿಸುವುದೇ ಸರಿಯಾದ ದಾರಿ, ಇದೇ ಶಾಂತಿ. ಈ ಶಾಂತಿಯನ್ನು ಉದ್ದೇಶಿಸಿ ಬೇರೆ ಬೇರೆ ಕಾರಣಗಳಿಗೆ ಯಥೋಚಿತವಾಗಿ ಪ್ರಾಧಾನ್ಯ ಕೊಡಿ ಹಲವಾರು ಅತಿವಾದಗಳು ಹುಟ್ಟಿವೆ. ಆದರೂ ಶಾಂತಿಯೇ ಸಕಲ ದರ್ಶನಗಳ ಮುಖ್ಯೋದ್ದೇಶ.

ಶರ್ವಾರ್ಥಂ ಸರ್ವಶಾಸ್ತ್ರಾಣಿ
ವಿಹಿತಾನಿಮಹರ್ಷಿಭಿಃ
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ
ಶಾಂತಂ ಮನಸ್ಸದಾ ॥

ಎಂದು ಮಹಾಭಾರತ, ಲಂಕಾವತಾರಗಳಲ್ಲಿ ಪ್ರತಿಪಾದಿತವಾಗಿದೆ.

ಇಂತಹ ಶಾಂತಿಯನ್ನು ವಿಚಾರಿಸುವ ಶಾಸ್ತ್ರಗಳೇ ದರ್ಶನಗಳು. ಲೋಕದಲ್ಲಿ ಸುಖಾನುಭವವು ಎರಡು ವಿಧ ಉಂಟು. ಒಂದು ಇಂದ್ರಿಯ ಗೋಚರವಾದುದು, ಇಂದ್ರಿಯಗಳ ಮುಖಾಂತರ ಜನಿಸುವ ಸುಖವೆಂಬುದು, ಅದರ ತಾತ್ಪರ್ಯ, ಇಂದ್ರಿಯ ಗೋಚರವಾದ ಸುಖವೇ ಶಾಂತಿ, ಶಮೆ, ದಮೆ ಎನಿಸಿಕೊಳ್ಳುತ್ತದೆ. ಹೀಗೆ ಶಾಂತಿ ದರ್ಶನೋದಯ ಕಾರಣವನ್ನು ತಮ್ಮ ತಮ್ಮ ಸಂಪ್ರದಾಯಕ್ಕೆ ಅನುಗುಣವಾಗಿ ಸಕಲ ದಾರ್ಶನಿಕರೂ ಪ್ರತಿಪಾದಿಸಿದ್ದಾರೆ. ಚಾರ್ವಾಕ ದರ್ಶನವೂ ಅದರಲ್ಲೊಂದು. ಇದು ಸರ್ವದರ್ಶನಗಳ ಪ್ರತಿಕೃತಿ, ಉಪನಿಷತ್ತು, ಮಹಾಭಾರತ, ರಾಮಾಯಣ, ವಿಷ್ಣುಪುರಾಣ, ಮುಂತಾದುವುಗಳಲ್ಲಿ ಇದರ ಖಂಡನೆ ಕಾಣಬರುತ್ತದೆ. ಮಹಾಭಾರತದ ಕರ್ಣಾಶ್ರಮದ ವರ್ಣನೆಯಲ್ಲಿ, ಲೋಕಾಯತ ವಿದ್ವಾಂಸರ ಪ್ರಸ್ತಾಪ ಬರುತ್ತದೆ. ಈ ದರ್ಶನದಲ್ಲಿ ಪ್ರತ್ಯಕ್ಷ ಒಂದೇ ಪ್ರಮಾಣ. ಅನುಮಾನೋಪಮಾನಾದಿ ಇತರ ಪ್ರಮಾಣಗಳಿಗೆ ಬೆಲೆ ಇಲ್ಲ. ಚಕ್ಷುರಾದಿ ಇಂದ್ರಿಯಗಳಿಂದ ಗೃಹ್ಯಮಾಣವಾದ ಅರ್ಥವೇ ಸತ್ಯ. ಅಪ್ರತ್ಯಕ್ಷ ಸ್ಥಲಗಳಲ್ಲೂ ಶಬ್ದೇಂದ್ರಿಯ ಗೋಚರವಾದ ಕಾರಣ, ಶಬ್ದವೇ ಸತ್ಯ. ಅನುಮಾನ ಸ್ಥಲಗಳಲ್ಲಿ ಅನುಮಾನಗಳ ಅನಂತ್ಯದಿಂದಲೇ ಅದರ ನಿವಾರಣೆ ಅದಂತಾಯಿತು. ಪ್ರತಿ ಸ್ಥಲಗಳಲ್ಲೂ ಭಿನ್ನ ಭಿನ್ನವಾಗಿ ಅನುಮಾನ ಮಾಡುತ್ತಾ ಹೋದರೆ, ಅನುಮಾನಗಳಿಗೆ ಕೊನೆ ಎಲ್ಲಿ? ದೇಹಾತಿರಿಕ್ತವಾದ ಆತ್ಮವೂ ಇಲ್ಲ, ಜನ್ಮ ಜನ್ಮಾಂತರಗಳಿಲ್ಲ, ಪುಣ್ಯ ಪಾಪಗಳಿಲ್ಲ, ಪರಲೋಕ, ಪರಮೇಶ್ವರರು ಮೊದಲೇ ಇಲ್ಲ—ಎಂದೇ ಇದು ನಾಸ್ತಿಕ ದರ್ಶನ.

ಇದರ ಪ್ರವರ್ತಕರು ಬೃಹಸ್ಪತಿಗಳು. ಚಾರ್ವಾಕನೆಂಬ ಅನ್ವರ್ಥನಾಮದ ವ್ಯಕ್ತಿಯೇ ಈ ದರ್ಶನದ ಮೂಲ ಪುರುಷ. ಕಿವಿಗೆ ಇಂಪಾದ ಮಾತನ್ನು ನುಡಿಯುವುದರಿಂದಲೇ, ಅವನು ಚಾರ್ವಾಕ. ಈ ದರ್ಶನವನ್ನು ಹೀಗೆ ಸಂಗ್ರಹಿಸಬಹುದು:—

"ಮೃತ್ಯುವಿಗೆ ವಶವಾಗದ ವಸ್ತುವಿಲ್ಲ. ಯೌವನಜ್ಞೇವವೂ ಸುಖವಾಗಿ ಬಾಳಬೇಕು. ಬೆಂದು ಬೂದಿಯಾದ ದೇಹಕ್ಕೆ ಪುನರ್ಜನ್ಮವಲ್ಲಿಯದು? ಆ ಕಾರಣ, ಋಣವಾದರೂ ಮಾಡಿ ಘೃತವನ್ನು ಕುಡಿಯಬೇಕು. ಅರ್ಥಕಾಮಗಳೇ ಪುರುಷಾರ್ಥಗಳು, ಇವೆರಡೇ ಜಗತ್ತನ್ನು ನಿಯಂತ್ರಿಸಿವೆ. ಎಂದೇ ಜಗತ್ತಿನ ಸಕಲ ಜಂತು ಜಂತವೂ ಚಾರ್ವಾಕ ಮತಾನುಯಾಯಿ. ಅದು ಕಾರಣವೇ ಈ ದರ್ಶನ ಲೋಕಾಯ ದರ್ಶನ. ಲೋಕದಲ್ಲಿ ವಿಸ್ತಾರವಾಗಿ ಹರಡಿರುವುದು ಎಂದೇ ಅದರರ್ಥ. ಪೃಥ್ವಿ, ಜಲ, ತೇಜಸ್ಸು, ವಾಯು ಇವು ನಾಲ್ಕೇ ತತ್ವಗಳು. ಇವುಗಳ ಸಂಕಾಮದಿಂದಲೇ ಪ್ರಪಂಚದ ಉತ್ಪತ್ತಿ. ಈ ಭೂತಗಳ ಸಂಯೋಗ ವಿಶೇಷದಿಂದ ಬುದ್ಧಿ, ಜ್ಞಾನಗಳೆಂಬ ಚೈತನ್ಯಶಕ್ತಿ ಜನಿಸುತ್ತದೆ. ಸಂಯೋಗ ವಿನಾಶವಾದರೆ, ಅವೂ ನಷ್ಟವಾಗುತ್ತವೆ. ತಾಂಬೂಲ ರಸದಲ್ಲಿ ರಕ್ತಿಮೆ, ಮದದ ಚಕ್ಕೆಯಲ್ಲಿ ಮದಶಕ್ತಿ, ಇನೆಲ್ಲಾ ಭೌತವಾದವು, ಅಂತೆಯೇ ಚೈತನ್ಯಶಕ್ತಿಯು ಗತಿಯೂ. ಅದು ಬೇರೆ ವಸ್ತುವಲ್ಲ. ಈ ಭೂತಶಕ್ತಿಯೇ ಆತ್ಮ, ಮನಸ್ಸು. ಸುಖ, ದುಃಖ, ಇಚ್ಛೆ, ರಾಮಕ್ರೋಧಾದಿ ರೂಪಗಳನ್ನು ಪಡೆಯುತ್ತದೆ. ಈ ಚತುರ್ಭೂತಗಳ ಪರಸ್ಪರ ವಿಯೋಗಗಳೇ ಮರಣ. ಅದೇ ಮೋಕ್ಷ. ಆ ಕಾರಣ ಭೂತಗಳ ಬಲ ಪರಿಣಾಮವೇ ಜ್ಞಾನ ಎಂದಂತಾಯಿತು. ಎಂದೇ ಇದು 'ಭೂತಸ್ವಂದಥಿವಾದ'.

ಚೈತನ್ಯ ವಿಶಿಷ್ಟವಾದ ದೇಹವೇ ಆತ್ಮ. ದೇಹಾತಿರಿಕ್ತವಾದ ಆತ್ಮವಿದೆ ಎಂಬುದರಲ್ಲಿ ಪ್ರಮಾಣವಿಲ್ಲ. ಅಂಗನಾಲಿಂಗನದಿಂದ ಜನಿಸುವ ಸುಖವೇ ಪುರುಷಾರ್ಥ. ಒಂದೊಂದು ವೇಳೆ ಅದರಿಂದಲೂ ದುಃಖ ಉಂಟಾಗುವುದು ನಿಜ. ಆ ದುಃಖ ನಿವೃತ್ತಿಯೇ ಸುಖವಾದುದರಿಂದ ಪುರುಷಾರ್ಥತ್ವಕ್ಕೇನೂ ಕುಂದಿಲ್ಲ. ಬೆಕ್ಕು ಮೀನನ್ನು ಹಿಡಿಯುತ್ತಾನೆ. ಮೀನಿನ ಚರ್ಮ, ಮುಳ್ಳು, ಅದಕ್ಕಿಗೆ ಆಹಾರವಲ್ಲ. ಅಂದಮೊತ್ತಕ್ಕೆ ಮತ್ಸ್ಯ ಗ್ರಹಣವನ್ನೇ ಆತ ಬಿಡಲಾರ. ಹಿಡಿದ ಮೀನಲ್ಲಿ ತನಗೆ ಬೇಕಾದುದನ್ನು ಉಳಿಸಿಕೊಂಡು ಉಳಿದುದನ್ನು ಬಿಸಾಡುತ್ತಾನೆ. 'ನಹಿ ಭಿಕ್ಷುರಾಸ್ಸಂತೀತಿ ಸ್ಥಲ್ಯಾಂ ನಾಧಿ ಶ್ರಿಯಂತೇ ನಹಿತಿ ಮೃಗಾಸ್ಸಯೇತಿ ಶಾಲಯೋ ನೋಭ್ಯಶೇ ಯಾರೂ ಭಿಕ್ಷುಕರು ಭೀತಿಯಿಂದ ಒಲೆ ಹಚ್ಚುವುದನ್ನು ಕಿಲ್ಲಿಸುವುದಿಲ್ಲ. ಪ್ರಾಣಿ ಭೀತಿಯಿಂದ ಕೃಷಿ ವ್ಯವಸಾಯವನ್ನು ಬಿಡುವುದೂ ಇಲ್ಲ. ಅಂತೆಯೇ ದುಃಖ ಭೀತಿಯಿಂದ ಸುಖವನ್ನು ಪರಿತ್ಯಜಿಸುವುದೂ ಇಲ್ಲ. ಹಾಗಾದರೆ ಯಜ್ಞಯಾಗಾದಿಗಳಲ್ಲಿ ಬಲು ಮಂದಿ ಪ್ರವರ್ತಿಸಬೇಕೇ? ಎನ್ನಬಹುದು. ವೈದಿಕ ಮನ್ಯರಾದ ಭೂಸುರರ ಕೃಷ್ಟಿ ಅದು. ಅವರವರಲ್ಲೇ ಒಮ್ಮತವಿಲ್ಲ, ಕರ್ಮ ಪ್ರತಿಪಾದಕರಿಗೆ ಜ್ಞಾನದ ಗೊಡವೆ ಬೇಡ; ಜ್ಞಾನ ಪ್ರತಿಪಾದಕರಿಗೆ ಕರ್ಮದಲ್ಲಿ ನಂಬಿಕೆಯೇ ಇಲ್ಲ. ಹೀಗೆ ಅವು ಪರಸ್ಪರ ವ್ಯಾಘಾತ—ದೋಷ—ದೂಷಿತವಾದವು. ಅದರಿಂದಾಗಿಯೇ ನಾಣ್ಯುಡಿ ಉಂಟು. "ಅಗ್ನಿಹೋತ್ರಂತ್ರಯೋವೇದಾಃ ತ್ರಿದಂಡಂಭಸ್ಮ ಗುಂಠನಂ। ಬುದ್ಧಿ ಪೌರುಷ ಹೀನಾನಾಂ" ಜೀವಿಕೇತಿ ಬೃಹಸ್ಪತಿಃ ॥ ಅಗ್ನಿಹೋತ್ರ, ಮೂರು ವೇದಗಳೂ ತ್ರಿದಂಡ ಭಸ್ಮ ಧಾರಣ, ಇನೆಲ್ಲಾ ಬುದ್ಧಿ ಪೌರುಷವಿಲ್ಲದ ಹೇಡಿಗಳು ಉದರಭರಣಕ್ಕೆ ತೊಟ್ಟ ವೇಷಗಳು, ನಾನು ಸ್ಥೂಲ; ನಾನು ಕೃಶ ಎಂಬಲ್ಲಿ ನಾನು ಎಂಬುದು ದೇಹವನ್ನು ತೋರಿಸುತ್ತದೆ. ಇಲ್ಲದಿದ್ದರೆ ನಾನು—ಸ್ಥೂಲ—ಕೃಶ ಎಂಬಲ್ಲಿ ಸಾಮಾನ್ಯಾಧಿಕರಣ್ಯ ಬರುವದು ಅಸಾಧ್ಯ. ಜ್ಯೋತಿಷ್ಟೋಮಾದಿ ಯಾಗಗಳಲ್ಲಿ ಕೊಂದ ಮೇಷ ಸ್ವರ್ಗ ನೇರುವುದಾದರೆ, ತಂದೆಯನ್ನೇ ಕಡಿದು ಬೇಗ ಸ್ವರ್ಗ ಸೇರಿಸಬಹುದಿತ್ತು. ಆ ಕಾರಣ ಪ್ರತ್ಯಕ್ಷ ಒಂದೇ ಪ್ರಮಾಣ. ಉಳಿದುದು ಬುದ್ಧಿಜೀವಿಗಳು ಜೀವಿಕೆಗಾಗಿ ಹಾಕಿದ ಮೋಡಿ, ಎಂಬುದು "ಚಾರ್ವಾಕ ದರ್ಶನದ ಸಿದ್ಧಾಂತ."

ಈ ದರ್ಶನ ಪ್ರಾಚೀನತಮವಾದುದು. ಪ್ರಾಚೀನ ಮೀಮಾಂಸಕರಾದ ಶಬರ ಸ್ವಾಮಿ ಪ್ರಭಾಕರರೂ ಈ ದರ್ಶನದಿಂದ ಹೊರತಲ್ಲ, ಜೀವಾತ್ಮ ಜನ್ಮಾಂತರಗಳನ್ನು ಅಂಗೀಕರಿಸಿದ್ದರೂ ಅವರ ಮತದಲ್ಲಿ ದೇವರಿಲ್ಲ; ಸ. ಖದುಃಖಾನುಭವಗಳು ಇಹಲೋಕದಲ್ಲೇ. ಹಾಗಾದರೆ ಈ ದರ್ಶನದ ಉದ್ದೇಶವೇನು? ಎಂಬ ಪ್ರಶ್ನೆ ಏಳುವುದು ಸಹಜ. ಶಾಂತಿಯೇ ಚಾರ್ವಾಕ ದರ್ಶನದ ಪರಮ ಧ್ಯೇಯ. ಎಲ್ಲ ದಾರ್ಶನಿಕರೂ ಈ ದರ್ಶನವನ್ನು ಖಂಡಿಸಿದ್ದಾರೆಂಬುದು ನಿಜ. ಅಷ್ಟರಿಂದ ದರ್ಶನದ ಗುಣಾಂಶವನ್ನು ಮರೆಸುವುದು ಸಾಧ್ಯವಿಲ್ಲ. ನಶ್ವರನಾದ ದೇಹಕ್ಕಿಂತ ಶಾಶ್ವತವಾದ ಆತ್ಮವನ್ನು ಈ ಮತ ಒಪ್ಪುವುದಿಲ್ಲ. ಆ ಕಾರಣ, ಸಕಲ ಅನರ್ಥಕ್ಕೂ ಕಾರಣವಾದ 'ಅಹಂತೆ'ಯನ್ನೇ ನಿರಾಕರಿಸಿದಂತಾಯಿತು. ಶಾಶ್ವತವಾದ ಅಹಂಕಾರವಿದ್ದಲ್ಲಿ ವೈರಾಗ್ಯ ಶಾಂತಿಗಳಿಗೆ ಎಡೆ ಎಲ್ಲಿ ಬರಬೇಕು? ಈ ದರ್ಶನದಲ್ಲಿ ಸಾಕಷ್ಟು ದೂಷಣೆಗಳಿರಲಿ, ಪರರಲ್ಲಿರುವ ರಾಗದ್ವೇಷಗಳನ್ನು ಅದರಿಸಿದರೆ ಇದಕ್ಕಿಂತಲೂ ಸಫಲವಾದದರ್ಶನೋದ್ದೇಶವಿರಲಾರದು. ಆ ಕಾರಣ ಚಾರ್ವಾಕ ದರ್ಶನ ವಿಜ್ಞಾನವು ಸಕಲ ದರ್ಶನ ವಿಜ್ಞಾನಕ್ಕೂ ಭೂಮಿಕೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

(ಆಕಾಶವಾಣಿಯ ಕೃಪೆಯಿಂದ.)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
86 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಳಲ್ಲಿ
ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
Phone— 5711, 5712, 5713 } 3 Lines.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ತಂಬರಾದಿಯಿಂದ 48ನೆ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ, ಯೂನಿಯನ್ ಕೇಂಟೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿ ಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ

ಶತಾಯುಷಿ ಭಕ್ತೆ ಶ್ರೀಮತಿ ಗಂಗಾಬಾಯಿಯವರು ಸ್ವರ್ಗಸ್ಥರಾದರು

ಉಡುಪಿಯ ಸಮೀಪದಲ್ಲಿರುವ ಕುತ್ತೆತ್ತೂರಿನಲ್ಲಿ ಅವತರಿಸಿದ ಭಕ್ತ ಶ್ರೀ ಗೋವಿಂದ ದಾಸರ ಧರ್ಮಪತ್ನಿ ಶತಾಯುಷಿ, ಶ್ರೀಮತಿ ಗಂಗಾಬಾಯಿಯವರು ಬಾಲ್ಯದಲ್ಲಿ ಮಾಡಿದ ಹರಿಸೇವೆ ಸೇವಾಬಲದಿಂದಲೂ ನಿರಂತರ ಪತಿ ಸೇವಾಬಲದಿಂದಲೂ ಉತ್ತಮ ಮಕ್ಕಳನ್ನು ಪಡೆದು ಆ ಉತ್ತಮ ಮಕ್ಕಳಿಂದ ಅನಿತರ ಸಾಧಾರಣವಾದ ಅನೇಕ ಧರ್ಮ ಕಾರ್ಯಗಳನ್ನು ಮಾಡಿಸಿದರು. ಶತಾಯು ಉಡುಪಿ ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥರ ಶತಮಾನೋತ್ಸವ, ತನ್ನ ಪತಿಯ ತೃಪ್ತ್ಯರ್ಥವಾಗಿ ಸಹಸ್ರ ಬ್ರಾಹ್ಮಣಾರಾಧನೆ, ತನ್ನ ಸಹಸ್ರ ಚಂದ್ರದರ್ಶನ ಶಾಂತಿ, ಉಡುಪಿ ಶ್ರೀ ಕೃಷ್ಣನಿಗೆ ಸಪ್ತರಾತ್ರೋತ್ಸವ ಮುಂತಾದ ಮಹಾ ಧರ್ಮ ಕಾರ್ಯಗಳಿಂದ ತಮ್ಮ ಮಕ್ಕಳಿಂದ ಉಡುಪಿಯಲ್ಲಿ ಮಾಡಿಸಿದರು.

ಮದ್ರಾಸಿನಲ್ಲಿ ಧರ್ಮಪ್ರಕಾಶವೆಂಬ ಧರ್ಮ ಸಂಸ್ಥೆಯನ್ನು ತಮ್ಮ ಹೆಸರಿನಿಂದ ತಮ್ಮ ಮಕ್ಕಳ ಮೂಲಕವಾಗಿ ೧೯೬೦ ರಲ್ಲಿ ಸ್ಥಾಪಿಸಿದರು. ಅದೇ ವರ್ಷದಲ್ಲಿ ಆ ಪವಿತ್ರ ಸ್ಥಳದಲ್ಲಿ ಯತಿಗಳ ನೇತೃತ್ವದಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲದ ಆನೇ ಅಧಿವೇಶನ, ೧೯೬೩ ರಿಂದ ಆರಂಭಿಸಿ ಉಡುಪಿ ಪೇಜಾವರ ಶ್ರೀಗಳವರು ಡಾ| ಕೆ. ಎಂ. ಮುನ್ಶಿ ಮುಂತಾದವರ ಅಧ್ಯಕ್ಷತೆಯಲ್ಲಿ ಆಗಾಗ್ಗೆ ನೂರಾರು ಬಡ ಬ್ರಾಹ್ಮಣ ಬಾಲಕರಿಗೆ ಅತ್ಯುತ್ತಮ ರೀತಿಯಿಂದ ಧರ್ಮೋಪದೇಶ, ಉಪನಯನರಾದ ಬಾಲಕರಿಗೆ ಒಂದೆರಡು ತಿಂಗಳಿನ ವರೆಗೆ ಆಹಾರ ವಸತಿ ಸೌಕರ್ಯದೊಡನೆ ನಿತ್ಯ ನೈಮಿತ್ತಿಕ ಕಾರ್ಯಗಳ ಶಿಕ್ಷಣ. ೧೯೬೫ರಲ್ಲಿ ಮದ್ರಾಸ್ ಮಾಧ್ವ ಸಂಘದ ರಜತೋತ್ಸವ ದೊಡನೆ ಶ್ರೀ ಭಂಡಾರಕೇರಿ ಶ್ರೀಗಳವರ ಶ್ರೀಸುಧಾಮ್ಯಾಧ್ವರಾದ್ಧಾಂತ ಸಂವರ್ಧಿನೀ ಸಭೆಯ ೨೨ನೆಯ ಅಧಿವೇಶನ, ೧೯೬೬ ರಲ್ಲಿ ತಮ್ಮ ಶತಮಾನೋತ್ಸವ ಮುಂತಾದ ಮಹಾಕಾರ್ಯಗಳನ್ನು ತಮ್ಮ ಸುಪುತ್ರರ ಮೂಲಕವಾಗಿ ಅಸದೃಶವಾಗಿ ಪಡೆಯಿಸಿದ ಪುಣ್ಯಜೀವಿಗಳು.

೧೦೨ ವಯಸ್ಸಿನವರಾದರೂ ಶ್ರದ್ಧೆಯ ದೋಗದಿಂದ ತನುಗಿಂತಲೂ ದುರ್ಬಲರಾದ ತಮ್ಮ ಸುಪುತ್ರ ಶ್ರೀ ಸೀತಾರಾಮರಾಯರಶ್ಟೂ ಎಲ್ಲಾ ಮಕ್ಕಳನ್ನೂ ಕುಟುಂಬದವರನ್ನೂ ಕರೆದು ಕೊಂಡು ಬದರೀ ಯಾತ್ರೆಯನ್ನು ದೃಢ ಚಿತ್ತದಿಂದ ೧೨ ದಿನಗಳಲ್ಲಿ ಪೂರೈಸಿದ ವೀರಮಾತೆಯು ಇವರು.

ತಮ್ಮ ಸೊಸೆಯಾದರಾದ ಭಕ್ತ ಶ್ರೀ ಸೀತಾರಾಮರಾಯರು ತಾನು ನಿರೀಕ್ಷಿಸುತ್ತಿದ್ದ ಉತ್ತರಾಯಣಕ್ಕಿಂದ ದಿನದಲ್ಲಿಯೇ ತನ್ನನ್ನು ಹರಿಚರಣದಲ್ಲಿ ಸಮರ್ಪಿಸಿದರು. ಅದರಂತೆ ಈ ಧರ್ಮಾಧುರಂಧರೆಯೂ ಅದೇ ಉತ್ತರಾಯಣವು ಮುಗಿಯುವುದರೊಳಗೆ ತಮ್ಮ ಪರಿಶುದ್ಧ ಜೀವನದಿಂದ ಪವಿತ್ರವಾದ ಕುತ್ತೆತ್ತೂರಿನಲ್ಲಿರುವ ತಮ್ಮ ಪತಿಯ ಗೋವಿಂದ ಭವನದಲ್ಲಿಯೇ ತನ್ನನ್ನು ಹರಿಚರಣದಲ್ಲಿ ಸಮರ್ಪಿಸಬೇಕೆಂದು ತೀರ್ಮಾನಿಸಿದರು.

ಅದಕ್ಕಾಗಿ ಸುಮಾರು ೨೦ ವರ್ಷಗಳ ವರೆಗೆ ತಾವು ವಾಸಿಸುತ್ತಿದ್ದ ಮದ್ರಾಸಿನ ಮನೆಯಿಂದ ಗೋವಿಂದ ಭವನಕ್ಕೆ ಮಕ್ಕಳೊಡನೆ ಕೆರಳಿದ ೨ ತಿಂಗಳ ದಣಿದ್ದ ಜೀವನವನ್ನು ನಡೆಯಿಸಿ ೧೨-೭-೬೮ ಶುಕ್ರವಾರ ಬೆಳಗ್ಗೆ ೧೧-೩೦ ಘಂಟೆಯಲ್ಲಿ ಹರಿಚರಣವನ್ನು ಸ್ಮರಿಸುತ್ತಾ ತಮ್ಮಿಂದ ವೃದ್ಧಿಗೊಳಿಸಲ್ಪಟ್ಟ ಧರ್ಮ ಮಾರ್ಗವನ್ನು ತಮ್ಮ ಪುತ್ರಪೌತ್ರಾದಿಪಳೂ ಸರ್ವಜನರೂ ಅನುಸರಿಸಿ ಶ್ರೀಹರಿಯ ಕರುಣೆಗೆ ಪಾತ್ರರಾಗಲೆಂದು ಹರಸುತ್ತಾ ಹರಿಚರಣವನ್ನು ಸೇರಿದರು.

ಈ ಭಕ್ತಜನ ಮಾತೆಯು ನಮಗೆಲ್ಲರಿಗೂ ಅವರ ವಿರಹ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಟ್ಟು ಅವರ ಆದರ್ಶ ಜೀವನವನ್ನು ಗುರಿಯಾಗಿಟ್ಟುಕೊಳ್ಳುವಂತೆ ಅನುಗ್ರಹಿಸಲೆಂದು ಶ್ರೀ ಹರಿಗುರುಗಳಲ್ಲಿ ಪ್ರಾರ್ಥಿಸುತ್ತೇವೆ.

(ನಾಲ್ಕನೇ ಪುಟದಿಂದ)

ದು ವರದಿಯನ್ನು ತಪೂರಿಸಲು ಅಘಕೂಲವಾಗುವದು. ಆದ್ದರಿಂದ ಪ್ರತಿಯೊಂದು ಸಂಘ ಸಂಸ್ಥೆಗಳು ಹಾಗೂ ಕಾರ್ಯಕರ್ತರುಗಳು ತಮ್ಮ ತಮ್ಮ ವರದಿಯನ್ನು ಗಾಂಧೀ ಸ್ಮಾರಕ ನಿಧಿಗೆ ಕೂಡಲೇ ಕಳಿಸಬೇಕಾಗಿ ಪ್ರಾರ್ಥನೆ. ಇದರಿಂದಿಗೆ ಇಟ್ಟ ಫಾರ್ಮಿನಲ್ಲಿ ಕೀಲು ಮಾಡಿದ ಕಾರ್ಯವನ್ನು ಕೂಡಲೇ ಕೊಟ್ಟು ಕಳಿಸಬೇಕಾಗಿ ವಿನಂತಿ.

ವಿ. ಸೂ: ನಿಮ್ಮ ಬರವನ್ನು, ಕಾರ್ಯದರ್ಶಿ, ಗಾಂಧೀ ಸ್ಮಾರಕ ನಿಧಿ, ಕುಮಾರಾ ಪಾರ್ಕ, (ಪೂರ್ವ) ಬೆಂಗಳೂರು-1 ಇವರಿಗೂ ಮತ್ತು ಕಾರ್ಯದರ್ಶಿ, ಕರ್ನಾಟಕ ಖಾದಿ ಗ್ರಾಮೋದ್ಯೋಗಫೆಡರೇಶನ್ ಬೆಂಗೇರಿ, ಹುಬ್ಬಳ್ಳಿ ಇವರಿಗೂ ತಿಳಿಸಬೇಕಾಗಿ ಬಿನ್ನಹ.

ರಾಮಚಂದ್ರ ವಡನಿ,
ಕಾರ್ಯದರ್ಶಿ.

ವಿಶೇಷ ಸೂಚನೆ—ಮಳೆಗಾಲವಿರುವದರಿಂದ ಹುಳ್ಳಿ ಚಳಿ ಹೆಚ್ಚು. ಆದ್ದರಿಂದ ಕಾರ್ಯಕರ್ತರು ತಮ್ಮ ಸಂಗಡ ಒಂದು ಕೊಡೆ ಹಾಗೂ ಸಾಕಷ್ಟು ಹೊದಿಕೆಗಳನ್ನು ತಮ್ಮ ಸಂಗಡ ತೆಗೆದುಕೊಂಡು ಬರಬೇಕಾಗಿ ಪ್ರಾರ್ಥನೆ.

ಬಾರಾಬತಿ ಕ್ಯಾಫೆಲ್ ವಿಜೇತರಿಗೆ ಬಹುಮಾನ ವಿತರಣೆ

ಬೆಂಗಳೂರು, ಜುಲೈ. ೧೪—ಎಪ್ರಿಲ್ ತಿಂಗಳಲ್ಲಿ ನಡೆದ ಬಾರಾಬತಿ ಕ್ಯಾಫೆಲ್ ಸಮಿತಿಯ "ಡ್ರಾ"ನಲ್ಲಿ ಪ್ರಥಮ ಬಹುಮಾನದ ವಿಜೇತರಾದ ಸಂಜನಗೂಡಿನ ಶ್ರೀ ಶಂಕರ್ ಅವರು ಇಂದಿಲ್ಲಿ ಸಾಯಂಕಾಲ ರಾಜ್ಯಪಾಲ ಶ್ರೀ ಜಿ. ಎಸ್. ಪಾರಕ್ ಅವರ ಹಸ್ತದಿಂದ 'ಹೊಸ ಪರುಷದ ಕಾಣಿಕೆ'ಯಾಗಿ ಒಂದು ಲಕ್ಷ ರೂಪಾಯಿಗಳನ್ನು ಪಡೆದರು.

ಶ್ರೀ ಶಂಕರ್ ಅವರು ಬಾರಾಬತಿಯ ಪ್ರಥಮ ಬಹುಮಾನ ಪಡೆದಿರುವ ಮೈಸೂರಿನವರಲ್ಲಿ ಎರಡನೆಯವರಾಗಿದ್ದಾರೆ.

ಸಂಗ್ರಹಕರಾದ ಶ್ರೀ ಎಸ್. ಎ. ಚೋಕ್ಸಿ ಅವರು ಹತ್ತು ಸಾವಿರ ರೂಪಾಯಿಗಳ ಬಹುಮಾನ ಪಡೆದರು.

ಆರ್ಸಕಾ 'ಜೋನಸ್' ಆಗಿ ತಾವು ಪಡೆದಿದ್ದ ಬಹುಮಾನದ ಹಣವನ್ನು ರಾಜ್ಯದ ಪ್ರಮುಖ ವಿತರಕರಾದ ಶ್ರೀ ಶಿವರಾಮ ಹೊಳ್ಳ ಅವರು ರಾಷ್ಟ್ರೀಯ ಸಂರಕ್ಷಣಾ ನಿಧಿಗೆ ಅರ್ಪಿಸಿದರು.

ಸಮಿತಿಯ ಗೌರವ ಕಾರ್ಯದರ್ಶಿ ಶ್ರೀ ಬೈರಾಬ್ ಚಂದ್ರ ಮಹಂತಿ ಅವರು ರಾಜ್ಯದ ಶಾಖೆಯ ಪರವಾಗಿ ರಾಷ್ಟ್ರೀಯ ಸಂರಕ್ಷಣಾ ನಿಧಿಗೆ ೬೦೦೦ ರೂ.ಗಳ ಚೆಕ್ಕೊಂದನ್ನು ರಾಜ್ಯಪಾಲರಿಗೆ ನೀಡಿದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ರಾಜ್ಯಪಾಲರು ಬಹುಮಾನ ವಿತರಣೆ ಮಾಡಿ ಸುದ್ದಿಯಿಯಾದ ಮೈಸೂರು ರಾಜ್ಯವು ಪ್ರಥಮ ಬಹುಮಾನವನ್ನು ಎರಡನೆಯ ಸಲ ಪಡೆಯುತ್ತಿರುವುದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು.

'ನಿಮಗೆ ಬಂದ ಈ ಹಣವನ್ನು ಸದುಪಯೋಗಪಡಿಸಿಕೊಳ್ಳಿ. ಅದರಲ್ಲಿ ಕೆಲವು ಭಾಗವನ್ನಾದರೂ ಧರ್ಮಾರ್ಥ ಕಾರ್ಯಗಳಿಗೆ ವಿನಿಯೋಗಿಸಿ' ಎಂದು ಅವರು ಬಹುಮಾನಕರಿಗೆ ಕರೆ ನೀಡಿದರು.

ಪ್ರಾರಂಭದಲ್ಲಿ ಸ್ವಾಗತಬಯಸಿದ ಶ್ರೀ ಮಹಂತಿ ಅವರು ಕಳೆದ ವರ್ಷದಲ್ಲಿ ಶಟ್ಟಲಾಗುತ್ತಿರುವ ಬಾರಾಬತಿ ಕ್ರೀಡಾಂಗಣ ಹಾಗೂ ಇತರ ಕ್ರೀಡಾ ಚಟುವಟಿಕೆಗಳಿಗೂ ಮತ್ತು ಭಾರತೀಯ ರೆಡ್‌ಕ್ರಾಸ್ ಸಂಘದ ಒಂದಾದ ಬಾಲಿಗೂ ಇದರ ಲಾಭ ಕೂಗಿರುತ್ತದೆ ಎಂದು ತಿಳಿಸಿದರು.

ರಾಷ್ಟ್ರೀಯ ಸಂರಕ್ಷಣಾ ನಿಧಿಗೆ ಸಮಿತಿಯು ಈ ವರೆಗೆ ಎರಡು ಲಕ್ಷ ಮೂವತ್ತು ಸಾಲ್ಕು ಸಾವಿರ ರೂ. ಗಳನ್ನು ವಂತಿಗೆಯಾಗಿ ನೀಡಿದೆ ಎಂದು ಹೇಳಿದ ಅವರು ಅದು ಮಾನವೀಯ ಚಟುವಟಿಕೆಗಳಿಗಾಗಿ ನೀಡಿದ ಕಾಣಿಕೆಗಳನ್ನು ವಿವರಿಸಿದರು.

ಬಾಂಬೆ ಯಾನೆ ನಾಡವರ ಸಂಘ ಮುಂಬಯಿ

ಮೇಲಿನ ಸಂಘದ ವಾರ್ಷಿಕ ಮಹಾಸಭೆ ಮತ್ತು ಸ್ನೇಹಕೂಟ ಸಮಾರಂಭವು ಶನಿವಾರ 7.7.1968ರಂದು ಕಾಮಾಟಿಪುರದಲ್ಲಿ ಸಂಘದ ಅಧ್ಯಕ್ಷ ಡಾ| ಯು. ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಮೇಲಿನ ವರ್ಷದ ಆಡಳಿತ ಸಮಿತಿಗೆ ಈ ಕೆಳಗಿನ ಮಹಾಶಯರು ಆರಿಸಲ್ಪಟ್ಟರು.

ಅಧ್ಯಕ್ಷರು—ಡಾ| ಪಿ. ಜಗನ್ನಾಥ ಶೆಟ್ಟಿ, ಉಪಾಧ್ಯಕ್ಷರುಗಳು— ಶ್ರೀ ಪಿ. ಡಿ. ಶೆಟ್ಟಿ, ಗೌ| ಪ್ರಧಾನ ಕಾರ್ಯದರ್ಶಿ—ಶ್ರೀ ಮಾಲ್ಕಿ ಗಂಗಯ್ಯ ಶೆಟ್ಟಿ, ಉಪಕಾರ್ಯದರ್ಶಿ— ಶ್ರೀ ಯಸ್. ಕೆ. ಯೆನ್. ಶೆಟ್ಟಿ, ಗೌ| ಕೋಶಾಧಿಕಾರಿ—ಶ್ರೀ ಪೈ. ರಘು ಶೆಟ್ಟಿ, ಉಪ ಕೋಶಾಧಿಕಾರಿ—ಶ್ರೀ ವೈ. ಮುದ್ದು ಶೆಟ್ಟಿ, ಶಾಲಾ ಚೆಯರ್‌ಮೆನ್ ಶ್ರೀ ಕೆ. ಕೃಷ್ಣದಾಸ ಶೆಟ್ಟಿ, ಶಾಲಾ ಕಾರ್ಯದರ್ಶಿ—ಶ್ರೀ ಪಿ. ಪಂಕರ ಶಕ್ಕಳ, ಶಾಲಾ ಕೋಶಾಧಿಕಾರಿ— ಶ್ರೀ ಪಿ. ಕೆ. ಸಿ. ಶೆಟ್ಟಿ. ಸಭೆಗಳಲ್ಲಿ ಕೂಡ ಸಂಜೀವ ಶೆಟ್ಟಿ ಎ. ಬಿ. ಶೆಟ್ಟಿ, ಡಾ| ಪಿ. ಜಗನ್ನಾಥ ಶೆಟ್ಟಿ, ರಾಮಣ್ಣ ಶೆಟ್ಟಿ, ಕಳಿಯಾರು ಶ್ಯಾಮ ಶೆಟ್ಟಿ ಮತ್ತು ಶೆ ದಾಲು ಶೆಟ್ಟಿ ಸಮಯೋಚಿತವಾಗಿ ಭಾಷಣಮಿತ್ರರು. ಅಧ್ಯಕ್ಷರ ಭಾಷಣವಾದ ಮೇಲೆ ಗೌ| ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಯನ್. ಗೋಪಾಲ ಶೆಟ್ಟಿ ಧನ್ಯವಾದವನ್ನು ಅರ್ಪಿಸಿದರು. ಉಪಾಹಾರವಾದ ಮೇಲೆ ವಿವಿಧ ವಿನೋದಾವಳಿಗಳಿಂದ ಅಂದಿನ ಕಾರ್ಯಕ್ರಮವು ಮುಕ್ತಾಯವಾಯ್ತು.

ಕೈಗಾರಿಕಾ ಪ್ರಗತಿ ಪರಿಶೀಲನಾ ಸಮಿತಿ

ಮಣಿಪಾಲ, ಜುಲೈ ೧೦—ಕೈಮಗ್ಗ, ಸಣ್ಣಕೈಗಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗಗಳು, ಕೃಷಿ ಕೈಗಾರಿಕೆ, ಹಾಗೂ ಹೆಂಗಸರಿನ ಕೈಗಾರಿಕೆಗಳು ಕ್ರತೀಯ ಪಂಚವರ್ಷಿಕ ಯೋಜನೆಯ ಅವಧಿಯಲ್ಲಿ ಮಾಡಿದ ಪ್ರಗತಿಯನ್ನು ಪರಿಶೀಲಿಸಿ ಚತುರ್ಥ ಪಂಚವರ್ಷಿಕ ಯೋಜನೆಯಲ್ಲಿ ಈ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಕೇಂದ್ರ ಸರಕಾರದ ಯೋಜನಾ ಮಂಡಳಿಗೆ ಸಲಹೆಮಾಡುವುದಕ್ಕಾಗಿ ಯೋಜನಾ ಮಂಡಳಿಯು ಮಂಡಳಿಯ ಸದಸ್ಯ ಶ್ರೀ ಎಲ್. ವೆಂಕಟರಾಮನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಇದ್ದಿಯ ಶ್ರೀ ಟಿ. ರಮೇಶ ಯು. ವೈಯವರನ್ನು ಈ ಸಮಿತಿಯ ಸದಸ್ಯರನ್ನಾಗಿ ಸೇರಿಸಲಾಗಿದೆ.

ಡೆಂಟಲ್ ಸಮ್ಮೇಳನ

ಮಣಿಪಾಲ, ಜುಲೈ ೧೪—ಇಂಡಿಯನ್ ಅಸೋಸಿಯೇಶನ್‌ನ ದಕ್ಷಿಣ ಕನ್ನಡ ಹಾಗೂ ಮಣಿಪಾಲ ಶಾಖೆಗಳ ಆಶ್ರಯದಲ್ಲಿ ಆಗಸ್ಟ್ ೧೭ ಮತ್ತು ೧೮ರಂದು ಮಂಗಳೂರಿನಲ್ಲಿ ಡೆಂಟಲ್ ಸಮ್ಮೇಳನ ನಡೆಯಲಿದೆ.

ಈ ಸಮ್ಮೇಳನದ ಅಂಗವಾಗಿ ವೈಜ್ಞಾನಿಕ ಅಧಿವೇಶನವನ್ನೂ, ಇಲ್ಲಿಯದ ಪ್ರಾಥಮಿಕ ಗ್ರಾಮೀಣ ಡೆಂಟಲ್ ಕಾಲೇಜು ಸೇರಿ ದಕ್ಷಿಣ ಕನ್ನಡದ ಪ್ರವಾಸವನ್ನೂ ಏರ್ಪಡಿಸಲಾಗಿದೆ. ಐ. ಡಿ. ಎ. ಯ ದಕ್ಷಿಣ ಕನ್ನಡ ಶಾಖೆಯ ಅಧ್ಯಕ್ಷರಾದ ಡಾ| ಜಿ. ಎಲ್. ಸಾಲ್ಡಾನ್ಹಾರವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಡಾ. ಯು. ಎಸ್. ಮೋಹನದಾಸ ನಾಯಕ್‌ರವರು ಸಂಘಟನಾ ಕಾರ್ಯದರ್ಶಿಯಾಗಿದ್ದಾರೆ.

ಬಡಿಯುಡ್ಕೆಗೆ ಆಸ್ಪತ್ರೆ

ಬೇಕೆಂದು ಪಂಚಾಯತ್ ಅಧ್ಯಕ್ಷ ಶ್ರೀ ಕೆ. ಕೆ. ರೈಗಳು ಬೆಲ್ಲಾ ಮೆಡಿಕಲ್ ಆಫೀಸರ್‌ಗೆ ಸಮರ್ಪಿಸಿದ ಮನವಿಯೊಂದರಲ್ಲಿ ವಿನಂತಿಸಿದ್ದಾರೆ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಪ್ರಗ್ನೆ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಿಯಾಯಿತಿ ಪ್ರತಿಗಳಿಗೆ ವಿಶೇಷ ಸವಲತ್ತುಗಳುಂಟು.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಸಂಪಾದಕರಿಗೆ ಪತ್ರ

ಹೊಸಬೆಟ್ಟಿನಲ್ಲಿ ನೆರೆಯ ಹಾವಳಿ

ಪಣಂಬೂರು ಬಂದರದ ಸಂಕ ಹಾಗೂ ಪಡುಕೆನಾರೆಗೆ ಸಾಗುವ ನಾಲ್ಕೈದು ಒಳ ರಸ್ತೆಗಳ ಅವ್ಯವಸ್ಥೆಯಿಂದಾಗಿ, ಹೊಸ ಬೆಟ್ಟು, ಕುಳಾಯಿ, ಬೈಕಂಪಾಡಿ ಮತ್ತು ಪಣಂಬೂರು ಗ್ರಾಮಗಳ ತುಂಬಾ ಬೆಳೆಗಳ ನಷ್ಟವಾಗಿರುವುದು ವಿಷಾದವೂ, ವಿಚಿತ್ರವೂ ಆಗಿದೆ. ಕಳೆದ ವರುಷ ಜುಲೈ ತಿಂಗಳಲ್ಲಿ ಈ ಬಗೆಯ ತೊಂದರೆಗಳಾಗುತ್ತವೆಯೆಂದು ಬಂದರ ಯೋಜನೆಯ ಅಧಿಕಾರಿಗಳು, ಹಾಗೂ ಜಿಲ್ಲಾಧಿಕಾರಿಗಳು ಲೋಕೋಪಕಾರಿ ಸಂಸ್ಥೆಯ ಅಧಿಕಾರಿಗಳಿಗೆ ಈ ಗ್ರಾಮಸ್ಥರ ಪರವಾಗಿ ಶ್ರೀ ಹೊಸಬಟ್ಟು ಮರಿಯ ಶ್ರೀನಿವಾಸರಾಯರು ಮೊದಲಾದವರು ದೂರಿತ್ತರು. ಆಗ ತತ್ಕಾಲಕ್ಕೆ ಒಸ್ಸೆ ಅಧಿಕಾರಿಗಳು ಬಂದು ನೋಡಿದಂತೆ ಮಾಡಿ ಮರಳಿದರು. ಆದರೆ ಈ ವರ್ಷ ಎಲ್ಲೆಡೆ ಭಾರಿ ಮಳೆ ಸುರಿಯುತ್ತಿದೆ. 1923—24ರಲ್ಲಿ ಈ ಜಿಲ್ಲೆಗೆ ಬಂದ ವಿಚಿತ್ರ ತುಫಾನಿಗಿಂತ ಈ ಬಾರಿ ಒಂದು ಅಡಿ ಕಡಿಮೆಯಾಗುವಷ್ಟು ಭೋರಿ ಒದಗಿದೆ. ಕೆಲವಾರು ತಿಂಗಳಿಂದಲೂ ಈ ಬಗ್ಗೆ ಕ್ರಮದಂತೆ ಮೇಲಧಿಕಾರಿಗಳಿಗೆ ಊರವರು ದೂರು ಬರೆಯುತ್ತಿದ್ದರೂ, ಅದೇಕೋ ಸುವ್ಯವಸ್ಥೆಯಾಗಿಲ್ಲ. ಈ ತಿಂಗಳಲ್ಲಿ ಆಕಸ್ಮಿಕವಾಗಿ ಒದಗಿದ ಪ್ರವಾಹದಿಂದ ಬಹಳ ಕಳವಳ ಹಾಗೂ ಭಯಗೊಂಡ ಸದ್ರಿ ಗ್ರಾಮದಲ್ಲಿ ರೈತರಲ್ಲಿ ಕೆಲವರು ಪುನಃ ರಜಿಸ್ಟ್ರಿಸಿದ ಪತ್ರವನ್ನು ಅಧಿಕಾರಿಗಳಿಗೆ ಬರೆದರು. ಅದಕ್ಕಾಗಿ ಪಡುಕೆನಾರೆಗೆ ಸಾಗುವ ನಾಲ್ಕೈದು ಒಳಬೀದಿಗಳ ಪೈಕಿ ಚಿತ್ರಾಪುರದ ಮತ್ತು ಬೈಕಂಪಾಡಿಯ ಒಳಕಸ್ತೆಗಳಲ್ಲಿ ಹತ್ತು ಹದಿನೈದು ಅಡಿ ಕಡಿ ತೆಗೆಸಿದ್ದರು. ಆದರೆ ಬೈಕಂಪಾಡಿಯಲ್ಲಿ ಬಂದರ ಯೋಜನೆಯವರ ಪರವಾಗಿ ಕಟ್ಟಿಸಿದ ಸಂಕ ಕಾಲುವೆಗಳಿಂದಾಗಿ ಮೂರು ಬೈಲುಗಳ ನೀರೊಡ್ಡು ಪಡುಬೈಲಿಗೆ ಅಕ್ರಮಿಸಿದೆ. ಒಂದೆರಡು ಬಾರಿ ಚಿಕ್ಕ ತರದ ಅಡೆಗಳನ್ನು ಮಾಡಿಸಿದರೂ ನಿಷ್ಫಲವಾಗಿತ್ತು. ಆ ಕಟ್ಟು ಹಾಕಿದ್ದು ಬೇಕಾದುದಕ್ಕಿಂತ ತೀರಾ ಕಡಿಮೆ ಹಾಗೂ ದುರ್ಬಲವಾಗಿತ್ತು. ಈ ನೋರೆಗೆ ಕೇವಲ ಡೊಂಬರಾಟದಂತೆ ಈ ಊರೆವರನ್ನು ಸರಕಾರಿ ಅಧಿಕಾರಿಗಳು ಮುಸಲಾಯಿಸುತ್ತಿರುವುದು ತೀರಾ ಖಂಡನೀಯವಾಗಿದೆ. ಇದರಿಂದಾಗಿ ಒದಗುವ ಜನಹಾನಿ ಮತ್ತು ಬೆಳೆಹಾನಿಗಳು ಹಾಗೂ ಮುಂದೊದಗುವ ಕಷ್ಟನುಗಳನ್ನು ಆದಷ್ಟು ತೀವ್ರವಾಗಿ ಪರಿಶೀಲಿಸಿ, ತಕ್ಕ ಸುವ್ಯವಸ್ಥೆ ಮಾಡಿಸಿ ನ್ಯಾಯ ಕಾಪಾಡಬೇಕಾಗಿ ಸಂಬಂಧಪಟ್ಟವರನ್ನು ವಿನಂತಿಸುತ್ತೇವೆ.

'ನೊಂದವರು
ಹೊಸಬೆಟ್ಟು, ಸುರತಕಲ್ಲು.

READ &
ADVERTISE IN
NAVAYUGA WEEKLY

ಎಲ್ಲಿ ಏನೇನು?

ಶ್ರೀ ಟಿ. ಎ. ಪೈಗಳ 25 ವರ್ಷಗಳ ಸೇವೆಯ ಶ್ಲಾಘನೆ

ಉಡುಪಿಯ 'ನವಯುಗ' ಪತ್ರಿಕೆಯ ಸಂಪಾದಕ ಶ್ರೀ ಕೆ. ಹೊನ್ನಯ್ಯ ಶೆಟ್ಟರು, ಸಿಂಡಿಕೇಟ್ ಬ್ಯಾಂಕಿನಲ್ಲಿ 25 ವರ್ಷಗಳ ಸೇವೆ ಸಲ್ಲಿಸಿದ ಶ್ರೀ ಟಿ. ಎ. ಪೈಗಳವರಿಗೆ ಸತ್ಕಾರ ಕೂಟವೊಂದನ್ನು ಸ್ಥಳೀಯ ಮುನ್ಸಿಫರಾದ ಶ್ರೀ ವಿ. ಕೃಷ್ಣಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಇದೇ ತಾ. 16ರಂದು ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಏರ್ಪಡಿಸಿತ್ತು.

ಆರಂಭದಲ್ಲಿ ಶ್ರೀ ಕೆ. ಹೊನ್ನಯ್ಯ ಶೆಟ್ಟರು ಸ್ವಾಗತಿಸುತ್ತಾ, ಡಾ| ಮಾಧವ ಪೈಗಳೂ ಶ್ರೀ ಟಿ. ಎ. ಪೈಗಳೂ ತನಗೆ ನೀಡಿದ ಸಹಕಾರವನ್ನು ಸ್ಮರಿಸಿದರು. ಶ್ರೀ ಟಿ. ಎ. ಪೈಗಳು ಸಿಂಡಿಕೇಟ್ ಬ್ಯಾಂಕಿನ ಮೂಲಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸೇವೆಯಿಂದ ಉಡುಪಿ ಹಾಗೂ ಅಲ್ಲಿಯ ಜನ ಅಭಿವೃದ್ಧಿ ಹೊಂದಿದೆ ಎಂದು ನುಡಿದರು.

ಅನಂತರ ಮಾತಾಡಿದ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಉಡುಪಿಯಂತಹದ ಸಣ್ಣ ಊರಿನಲ್ಲಿ ಜನ್ಮತಾಳಿ ದೇಶದಲ್ಲಿಯೇ ವ್ಯಾಪಕವಾಗಿ ಒಳ್ಳೆಯ ಹೆಸರನ್ನು ಸಂಪಾದಿಸಿರುವ ಈ ಬ್ಯಾಂಕಿನ ಮುನ್ನಡೆಗೆ ಶ್ರೀ ಪೈಗಳವರೇ ಕಾರಣವೆಂದರು. ಶ್ರೀ ಟಿ. ಎ. ಪೈಗಳು ತನ್ನ ಉತ್ತರದಲ್ಲಿ ತಾನು ಹಲವರ ಸಮಸ್ಯೆಗಳಿಗೆ ನೆರವಾಗಿರಬಹುದು. ವ್ಯವಹಾರದ ಮೂಲಕ ತಾನು ಯಾರನ್ನೂ ಸ್ನೇಹಿಸನನ್ನಾಗಿಗಳಿಸಲು ಯತ್ನಿಸಿಲ್ಲ. ಸರಕಾರವನ್ನು ಅವಲಂಬಿಸದೆ ಸಂಘಟಿತ ಪ್ರಯತ್ನದಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಉಳಿಯುತ್ತ ಸೇವೆ ಸಲ್ಲಿಸಬಹುದೆಂಬುದನ್ನು ಉಡುಪಿ ತೋರಿಸಿಕೊಟ್ಟಿದೆ ಎಂದರು. ಅಲ್ಲದೆ ರಾಷ್ಟ್ರಾಭಿವೃದ್ಧಿ ಕೃಷಿ ಕ್ಷೇತ್ರಗಳಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುವ ಮುಖಂಡತ್ವವು ಹೆಚ್ಚು ಮಾತನಾಡಿ ಕಮ್ಮಿ ಕೆಲಸ ಮಾಡುವ ಮುಖಂಡತ್ವಕ್ಕಿಂತ ಮುಖ್ಯವಾದುದು ಎಂದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ವಿ. ಕೃಷ್ಣಪ್ಪ ಶೆಟ್ಟರು ಪೈ ಬಂಧುಗಳು ಉಡುಪಿ ಹಾಗೂ ಮಣಿಪಾಲದ ಅಭಿವೃದ್ಧಿಗೆ ಸಲ್ಲಿಸಿರುವ ಸೇವೆಗೆ ಉಡುಪಿಯ ಜನತೆ ಸದಾ ಕೃತಜ್ಞವಾಗಿರಬೇಕು ಎಂದರು. ಅಲ್ಲದೆ ಶ್ರೀ ಟಿ. ಎ. ಪೈಗಳು ಉತ್ತಮ ಯೋಚನೆ-ದಕ್ಷ ಆಡಳಿತಗಾರ ಮತ್ತವಲ್ಲದೆ ಶ್ರೇಷ್ಠ ಸಾಮಾಜಿಕ ಕಾರ್ಯಕರ್ತನೆಂದೂ ಹೇಳಿದರು.

ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಬೆಳ್ತಂಗಡಿ ಕ್ಷೇತ್ರದ ಕಾಂಗ್ರೆಸ್ ಉಮೇದ್ವಾರಿಯಾಗಲಿ

ಬೆಳ್ತಂಗಡಿ ಮತದಾರ ಕ್ಷೇತ್ರದ ಉಸಚುನಾವಣೆಗೆ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರನ್ನೇ ಕಾಂಗ್ರೆಸು ತನ್ನ ಉಮೇದ್ವಾರಿಯಾಗಿ ನಿಲ್ಲಿಸಬೇಕೆಂದು ಇತ್ತೀಚೆಗೆ ಬೆಳ್ತಂಗಡಿಯಲ್ಲಿ ನಡೆದ ಕಾಂಗ್ರೆಸು ಕಾರ್ಯಕರ್ತರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತೆಂದು ತಿಳಿದುಬರುತ್ತದೆ.

ಈ ಸಭೆಯಲ್ಲಿ ಕಾಂಗ್ರೆಸಿನ ಬಗ್ಗೆ ಜನರ ಸಂಘಟನೆ ಬೆಳೆಸುವ ಕ್ರಮ, ವಿಧಾನಗಳ ಬಗ್ಗೆಯೂ ವಿಚಾರ ವಿನಿಮಯ ನಡೆಯಿತು. ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರಿಗೆ ಇಡೀ ರಾಜ್ಯದಲ್ಲೇ ಹಿರಿಯಾದ ಸ್ಥಾನವಿದೆ. ಅವರು ಜನ ಸಾಮಾನ್ಯರ ಆತ್ಮೀಯರೂ ಆಗಿದ್ದಾರೆ. ಯಾತಾರ್ಥವಾದ ವಿಚಾರಸರಣಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ತನ್ನಿಂದಾದ ಸಹಾಯ ಸಲ್ಲಿಸಬಲ್ಲರೆಂಬ ಆತ್ಮವಿಶ್ವಾಸ ಕಾಂಗ್ರೆಸ್ಸಿಗರಿಗಿರುವುದರಿಂದಲೇ ಅವರನ್ನು ಸರ್ವಾನುಮತದಿಂದ ಉಮೇದ್ವಾರಿಗಳಾಗಿ ಆರಿಸಲಾಗಿದೆ.

ಸ್ವೀಕರ್ ಶ್ರೀ ಬಿ. ವಿ. ಬಾಳಿಗರ ನಿಧನದಿಂದ ಈ ಕ್ಷೇತ್ರದ ಪ್ರತಿನಿಧಿ ಸ್ಥಾನ ತೆರವಾಗಿರುತ್ತದೆ.

ಉತ್ತಮ ಸ್ಥಿತಿ ಬಂದಾಗ ಜನಸೇವೆ ಮಾಡಲಿ ಮರೆಯ ಬಾರದು

ಸನ್ಮಾನ ಸಮಾರಂಭದಲ್ಲಿ ಟಿ. ಎ. ಪೈ

ಸಿಂಡಿಕೇಟ್ ಬ್ಯಾಂಕಿನಲ್ಲಿ 25 ವರ್ಷಗಳ ಸೇವೆ ಸಲ್ಲಿಸಿದ ಶ್ರೀ ಟಿ. ಎ. ಪೈಗಳವರನ್ನು ಸನ್ಮಾನಿಸಲು ಉಡುಪಿಯ ಸಿಂಡಿಕೇಟ್ ರಿಕ್ರಿಯೇಶನ್ ಕ್ಲಬ್‌ನವರು ಸಭೆಯೊಂದನ್ನು ಏರ್ಪಡಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈಯವರು ವಹಿಸಿದ್ದರು.

ಆರಂಭದಲ್ಲಿ ಶ್ರೀಗಳಾದ ಎಚ್. ಎನ್. ಪೈ ಮತ್ತು ಗಾನೇಟ್ ರೆಗೋ ಸ್ವಾಗತ ಭಾಷಣ ಮಾಡಿದರು. ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಯು. ದಾಮೋದರ ಇವರು ವರದಿ ವಾಚನಗೈದರು. ಅನಂತರ ಶ್ರೀಗಳಾದ ಎಚ್. ಎನ್. ರಾವ್, ಮನಮೋಹನ ಶೆಣೈ, ವಿಂಕ ಟ್ರಾವ್, ಕೆ. ಆರ್. ಪ್ರಸಾದ್, ಕೆ. ಜಿ. ಶಾಮಿತ್, ಎಂ. ವಿ. ಪಿಲಿಯಾರ್ ಇವರು ಮಾತನಾಡಿ ಶ್ರೀ ಪೈಗಳ ಗುಣಗಾನಗೈದರು.

ಶ್ರೀ ಟಿ. ಎ. ಪೈಯವರು ಮಾತನಾಡುತ್ತಾ ಇಂದು ಸಿಂಡಿಕೇಟ್ ಬ್ಯಾಂಕು ದೇಶದ ಇತರ ಬ್ಯಾಂಕುಗಳಿಗೆ ಆದರ್ಶಪ್ರಾಯವಾಗಿರುವುದು ಸಂತೋಷದ ಸಂಗತಿಯೆಂದರು. ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಪ್ರಾಮಾಣಿಕ ದುಡಿತದ ಫಲವಾಗಿ ಸಂಸ್ಥೆಗಳು ಯಾವ ರೀತಿ ಪ್ರಗತಿಹೊಂದುತ್ತವೆ ಎನ್ನುವುದಕ್ಕೆ ಸಿಂಡಿಕೇಟ್ ಬ್ಯಾಂಕ್ ಒಂದು ನಿದರ್ಶನವಾಗಿದೆಯೆಂದು ಅವರು ನುಡಿದರು. ಬಡ ಜನರನ್ನು ಉದ್ಧರಿಸುವುದೇ ಬ್ಯಾಂಕಿನ ಗುರಿ. ಇದನ್ನು ಸಾಧಿಸುವ ದೃಷ್ಟಿಯಿಂದ ನಾವು ದುಡಿಯಬೇಕು. ಉತ್ತಮ ಸ್ಥಿತಿ ಬಂದಾಗ ಜನಸೇವೆ ಮಾಡುವುದನ್ನು ಮರೆಯ ಬಾರದು ಎಂದು ಅವರು ಹೇಳಿದರು. ದೇವರ ದಯೆ ಹಾಗೂ ಜನರ ಸಹಕಾರದಿಂದ ನಾನು ಸಿಂಡಿಕೇಟ್ ಬ್ಯಾಂಕಿನಲ್ಲಿ ಹಾಗೂ ಇತರ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚು ಸೇವೆ ಸಲ್ಲಿಸುವಂತಾಗಲಿ ಎಂದು ಬಯಸಿದರು.

ಅಧ್ಯಕ್ಷಸ್ಥಾನದಿಂದ ಶ್ರೀ ಕೆ. ಕೆ. ಪೈಗಳು ಸಾತ್ವಿಕ ಸಾಹಸ ಶಾಸ್ತ್ರ ವಿವಿಧ ಸಂದರ್ಭಗಳಲ್ಲಿ ಆಸಕ್ತಿ ಹುಟ್ಟಿಸುವಂತೆ ರಿಕ್ರಿಯೇಶನ್ ಕ್ಲಬ್ ಕಾರ್ಯ ನಿರ್ವಹಿಸಿದೆಯೆಂದು ನುಡಿದರು. ಸಿಂಡಿಕೇಟ್ ಬ್ಯಾಂಕಿನ ಪ್ರಗತಿಗೆ ಡಾ| ಮಾಧವ ಪೈ, ಶ್ರೀ ಟಿ. ಎ. ಪೈ ಮುಂತಾದವರೇ ಕಾರಣರೆಂದರು.

ಜರ್ಮನ್ ಮತ್ತು ಕನ್ನಡ ಡಿಪ್ಲೊಮಾ ತರಗತಿಗಳ ಉದ್ಘಾಟನೆ

ಉಡುಪಿ ಎಂ. ಜಿ. ಎಂ. ಕಾಲೇಜಿನಲ್ಲಿ ಜರ್ಮನ್ ಮತ್ತು ಕನ್ನಡ ಡಿಪ್ಲೊಮಾ ತರಗತಿಗಳ ಉದ್ಘಾಟನಾ ಸಮಾರಂಭವು ತಾ. 16 ರಂದು ಶ್ರೀ ಟಿ. ಎ. ಪೈಗಳವರಿಂದ ನೆರವೇರಿಸಲ್ಪಟ್ಟಿತು.

ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಮೈಸೂರು ವಿಶ್ವ ವಿದ್ಯಾಲಯದಿಂದ ಅಂಗೀಕರಿಸಲ್ಪಟ್ಟ ಈ ಡಿಪ್ಲೊಮಾ ತರಗತಿಗೆ ಹೆಚ್ಚಿನ ವಿದ್ಯಾರ್ಥಿಗಳು ಮುಂದೆ ಬಂದಿರುವುದಾಗಿ ಇದು ವಿರೋಪಾಧ್ಯಾಯ ತರಗತಿಯಾಗಿರುವುದರಿಂದ ಒಂದು ವಿಶಿಷ್ಟತೆಗೆ ದುಡಿಯಲ್ಪಟ್ಟಿದೆಯೆಂದರು.

ಜರ್ಮನ್ ಭಾಷಾ ತರಗತಿಯ ಅಧ್ಯಾಪಕರಾದ ಡಾ| ಗುಂಡೂರಾವ್, ಕನ್ನಡ ಭಾಷಾ ತರಗತಿಯ ಶಿಕ್ಷಕರಾದ ಪ್ರೊ| ಎಸ್. ಕೆ. ಶ್ರೀಪತಿ ಆಚಾರ್ಯರು ಸಂದರ್ಭೋಚಿತ ಭಾಷಣ ಮಾಡಿದರು.

ಶ್ರೀ ಪೈಗಳು ತನ್ನ ಉದ್ಘಾಟನಾ ಭಾಷಣದಲ್ಲಿ ಹೆಚ್ಚು ಭಾಷೆಗಳನ್ನರಿಯುವನು ಜಗತ್ತನ್ನು ಹೆಚ್ಚು ಹೆಚ್ಚಾಗಿ ಅರಿತುಕೊಳ್ಳಲು ಸಮರ್ಥನಾಗುತ್ತಾನೆಂದು ಹೇಳಿದರು.

ಶ್ರೀ ಟಿ. ಎ. ಪೈಗಳಿಗೆ:

ವಾಣಿಜ್ಯ ಶಾಸ್ತ್ರದಲಿ ಪಡೆದು ಪದವಿಯ ನೀನು,
ಸ್ವೀಕರಿಸಿ ಸಿಂಡಿಕೇಟಿನ ಹುದ್ದೆಯೊಂದು-
ಕಳೆದುವಿಪ್ಪತ್ತೈದು ವರ್ಷಗಳು ಈ ದಿನವು,
ಬ್ಯಾಂಕಿನಧ್ಯಕ್ಷ ಪದವಿಯಲಿರುವಿರಿಂದು!
ನೀವು ಮಾಡುತಿಹುದು ವರಲಕ್ಷ್ಮಿ ಪೂಜೆ,
ವಿದ್ಯಾರ್ಥಿ ದೇವತೆಯ ಆಂಧಸೆ!
ಕಳೆದೆರಡುವರೆ ದಶಕದಲಿ ದೇಶದುನ್ನತಿಗೆ
ಶ್ರಮಿಸಿದಿರಿ ಹಲವು ಕಾರ್ಯಕ್ಷೇತ್ರಗಳಲಿ!
ಸಿಂಡಿಕೇಟಿನಲ್ಲೊಂದು ಖ್ಯಾತಿಯನು
ತೆರೆಯಲಿಕೆ
ಯೋವನನ ಬಹು ಚಿಕ್ಕವನು
ಅಲ್ಲವೆಂದು—
ಸಿಂಡಿಕೇಟಿನದೊಂದು ಶಾಖೆಯನು
ತೆರೆಯಲಿಕೆ
ಬೊವ ಹಳ್ಳಿಯಿಂ ಕಣ್ಣಿದ್ದವೆಂದು—
ನೀವು ಘೋಷಿಸಿ ಬ್ಯಾಂಕನುನ್ನತಿಗೆ
ತಂದಿರಿರಿ,
ಇನ್ನು ಅಗಲಿಕೆಹುದು ನಿಮ್ಮಿಂದ
ಖಚಿತ!
ಕೃಷಿಕರಿಗೆ ನೀಡಿ ಬ್ಯಾಂಕಿನ ಸಂಬದ
ಸದಾಯ
ಆಜಾರದುತ್ಪನ್ನವಾಗಲಿದೆ ವಿಪುಲ!
ವಿದ್ಯಾರ್ಜನೆಗೆ ನೀಡಿ ವಿದ್ಯಾರ್ಥಿಗಳಿಗಿಂದು
ಬ್ಯಾಂಕಿನನೆ-ಕೂಲತೆಯ ಸಾಲಗಳನು,
ನೀವು ಯುವ ಜನರನ್ನು ಭವ್ಯ
ನಾಗರಿಕತೆಗೆ
ಕೊಂಡೊಯ್ಯುತಿರುವಂತೆ ಬೇರೆ
ಯಾರಿನ್ನು?
ನಿಮ್ಮ ಆಜ್ಞಾಪಾಲನೆಗೆ ಸಿದ್ಧವಾಗಿಹುದು
ನಾಲ್ಕು ಸಾವಿರ ಮಂದಿ ನೌಕರರ ಬಳಗ!
ಬಾಂಧವರೊ ಗೆಳೆಯರೋ ಎಂಬ
ರೀತಿಯಲವರ
ನೀವು ಕಾಣುತ್ತಿರುವುದೇ ಸೋಜಿಗ!

—ಕೆ. ವೆಂಕಟರಾವ್.

ಅಗಸ್ಟ್ 15

ನವಯುಗ
ಸ್ವಾತಂತ್ರ್ಯ ವಿಶೇಷ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ವಿಚಾರಪರ ಲೇಖನ, ಕವಿತೆ, ವಿಡಂಬನೆ ನೊದಲಾದುವುಗಳಿಂದ ಕೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲಿ ಬೊಂಬಾಯಿ, ಮದರಾಸು ಮೊದಲಾದ ಹೊರರಾಜ್ಯ ಹಾಗೂ ವಿದೇಶದಲ್ಲಿ ಪ್ರಚಾರದಲ್ಲಿರುವ 'ನವಯುಗ'ವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ.

ಆಧ್ಯಾತ್ಮ ಚಿಂತನ

ಜ್ಯೋತಿಯೆಂಬುದೇ ಆತ್ಮ

ಬರೆದವರು:
ಶ್ರೀ ಕೆ. ಸಚ್ಚಿದಾನಂದ ಉಡುಪ

ಯಾಜ್ಞವಲ್ಕ್ಯರು ಶ್ರೇಷ್ಠರಲ್ಲಿ ಅತ್ಯಂತ ಹಿರಿಯರಾದ ವಿದ್ವಾಂಸರು. ಉತ್ತಮ ವಾಕ್ಪಟು; ಅತ್ಯುಚ್ಚ ಋಷಿ. ಆಧ್ಯಾತ್ಮಿಕ ಜ್ಞಾನದಲ್ಲಿ ಹೆಚ್ಚಿನ ಜ್ಞಾನ ಪ್ರಾಪ್ತಿಸಿದವರಾದ ಮೈತ್ರೇಯಿ ಇವರ ಪತ್ನಿ. ಯಾಜ್ಞವಲ್ಕ್ಯರು ಉಗ್ರಸ್ವಭಾವದವರು. ಆದರೆ ಮೈತ್ರೇಯಿ ಕೋಮಲ ಪ್ರವೃತ್ತಿ ಗುಣ ಉಳ್ಳವರು.

ಯಾಜ್ಞವಲ್ಕ್ಯರು ಸಂನ್ಯಾಸವನ್ನು ಕೈಗೊಳ್ಳಲು ತೀರ್ಮಾನಿಸಿ, ತನ್ನ ಸಂಪತ್ತಿನ ವಿಭಜನೆಯ ಕಾಲಸಲ್ಲಿ ಪತ್ನಿ ಬಂದು ಆಧ್ಯಾತ್ಮಿಕ ಜ್ಞಾನದ ಅರಿವನ್ನು ಬೇಡುವಳು. ಆಗ ಯಾಜ್ಞವಲ್ಕ್ಯರು ತನ್ನ ಪತ್ನಿಯಲ್ಲಿ "ಪತಿ, ಪತ್ನಿ, ಸಂತಾನ, ಸಂಪತ್ತೆಲ್ಲವೂ ಆತ್ಮದ ಅನೇಕ ವಿಧದ ರೂಪಗಳು. ಈ ಆತ್ಮದ ನಿರೀಕ್ಷಣೆ, ಅಧ್ಯಯನವನ್ನು ಅಭ್ಯಸಿಸಿದಾಗಲೇ ಸರ್ವಸ್ವ ಜಗತ್ತಿನ ಜ್ಞಾನ ಪ್ರಾಪ್ತವಾಗುವುದು" ಎನ್ನುವರು.

ಆತ್ಮದ ಸ್ವರೂಪವನ್ನು ವಿವರಿಸುತ್ತಾ ಯಾಜ್ಞವಲ್ಕ್ಯರು ಮೈತ್ರೇಯಿಯಲ್ಲಿ "ಹೂವೇತಿ ಸರ್ವಸ್ತ ವಿಚಾರವು ಮನದಲ್ಲಿ ಒಡಗೂಡುತ್ತದೋ ತದಂತೆಯಲ್ಲಿ ಸಂಸಾರದ ಪ್ರತಿಯೊಂದು ವಿಚಾರವು ಆತ್ಮದಲ್ಲಿ ಕೇಂದ್ರೀಕೃತವಾಗುತ್ತದೆ. ಈ ಕಾರಣ ಮಾತ್ರದಿಂದಲೇ ಆತ್ಮ ಪ್ರಾಪ್ತಿಯೇ ಮಾನವ ಪ್ರಯತ್ನದ ಶ್ರೇಷ್ಠ ಸಾಧ್ಯತೆ" ಎನ್ನುವರು.

ಇವರು ವಿದೇಹದಲ್ಲಿವಾಸಿಸುವಂಗಿದ್ದರು. ಯಾಜ್ಞವಲ್ಕ್ಯರೊಂದಿಗೆ ಜನಕ ಮಹಾರಾಜರಿಗೆ ಸಂಭಾಷಣೆ ಮುಂದುವರಿಯಿತು. ಬೃಹದಾರಣ್ಯಕ ಉಪನಿಷತ್ತಿನಲ್ಲಿನ ಚತುರ್ಥ ಅಧ್ಯಾಯದಲ್ಲಿ ಜನಕ ಮಹಾರಾಜರಾಗೂ ಯಾಜ್ಞವಲ್ಕ್ಯರ ಸಂಭಾಷಣೆ ಅತ್ಯಂತ ರೋಮಾಂಚಕಾರಿಯಾದುದು. ಇದರಲ್ಲಿ ಮೃತ್ಯುವಿನ ವರ್ಣನೆಯನ್ನು "ರಾಜ ಮಹಾರಾಜ ಮೃತ್ಯುವಿನ ಸಮಯದಲ್ಲಿ 'ಪ್ರಜ್ಞಾತ್ಮ'ನೆಂಬುದು ಅವನ ದೇಹಾತ್ಮದಲ್ಲಿ ಆರೂಢವಾಗುತ್ತದೆ. ಈ ಸಮಯ ಕಣ್ಣುಗಳಿಂದ ಪ್ರಾಣ ರೂಪೀ ಪುರುಷ ಸರ್ವಪ್ರಥಮವಾಗಿ ಹೊರಬರುತ್ತಾನೆ. ಹೃದಯಾಯೆಂಬುದು ಪ್ರಕಾಶಿತವಾಗಿ ಈ ಪ್ರಕಾಶದ ಸಹಾಯದಿಂದ, ನೇತ್ರ, ಮಸ್ತಕ ಯಾ ಇನ್ನಿತರಯಾವುದೇ ಇಂದ್ರಿಯ ಮುಖಾಂತರ ಆತ್ಮವೆಂಬುದು ಕಾಣಿಸುತ್ತದೆ. ಈ ಕಾಲದಲ್ಲಿ ಮನುಷ್ಯನಲ್ಲಿ ಬರೇ ಕರ್ಮ ಮಾತ್ರ ಇರುತ್ತದೆ. ಇದು ಆತ್ಮದ ಮುಂದಿನ ಜನ್ಮದ ಮಾರ್ಗದರ್ಶಕವಾಗುತ್ತದೆ" ಎಂದು ವಿವರಿಸುತ್ತಾರೆ.

ಜನಕ ಮಹಾರಾಜರು ಯಾಜ್ಞವಲ್ಕ್ಯರಲ್ಲಿ "ಕಿಂ ಜ್ಯೋತಿರಯಂ ಪುರುಷಃ?" "ಪುರುಷನಲ್ಲಿರುವ ಜ್ಯೋತಿ ಯಾವುದು?" ಎಂದು ಕೇಳಿದಾಗ ಯಾಜ್ಞವಲ್ಕ್ಯರು "ಆದಿತ್ಯಜ್ಯೋತಿ" ಸೂರ್ಯಾಸ್ತ, "ರಾಜಾಸುನ ಸೂರ್ಯನೇ ಜ್ಯೋತಿ" ಎಂದು ವಿವರಿಸುವರು. "ಅದರೆ ಸದಾ ಇರುವುದಿಲ್ಲ. ಸೂರ್ಯನ ಅಸ್ತವಾಗ ಮೇಲೆ ಮತ್ತೆಲ್ಲಿಯ ಜ್ಯೋತಿ? ಆಗ ಚಂದ್ರನು ಜ್ಯೋತಿಯ ಕಾರ್ಯವೆಸಗುತ್ತಾನೆ. ಒಂದೊಮ್ಮೆ ಸೂರ್ಯನೂ ಇಲ್ಲದಾಗ, ಚಂದ್ರನೂ ಇಲ್ಲದಾಗ ಜ್ಯೋತಿ ಯಾವುದು? ಆಗ ಅಗ್ನಿಯು ಜ್ಯೋತಿಯ ಕೆಲಸ ಮಾಡುತ್ತದೆ. ಒಂದೊಮ್ಮೆ ಅಗ್ನಿಯೂ ನಂದಿ ಹೋದರೆ? ಆಗ ವಾಣಿಯೇ ಜ್ಯೋತಿಯ ಕಾರ್ಯ ಮಾಡುತ್ತದೆ ಒಂದೊಮ್ಮೆ ಗುರುವಿನ ವಾಣಿಯು ಅಲಂಬನವಿಲ್ಲದಿದ್ದಲ್ಲಿ? ಆಗ ಆತ್ಮವೇ ಜ್ಯೋತಿ." ಎಂದು ಆತ್ಮವನ್ನು ವಿವರಿಸುವರು.

ಒಟ್ಟಿನಲ್ಲಿ ಋಷಿಯಾದ ಯಾಜ್ಞವಲ್ಕ್ಯರು "ಜ್ಯೋತಿಯೆಂಬುದೇ ಆತ್ಮ" ಎನ್ನುವರು. ಆದರೆ ಪ್ರಾರಂಭದಿಂದಲೇ ಆತ್ಮದ ಹೆಸರೆತ್ತುವುದಿಲ್ಲ. ಜ್ಯೋತಿಯೆಂಬ ಮೂಳೆಗೆಗೆ ಒಂದೊಂದೇ ಮೆಟ್ಟಲನ್ನು ಏರುತ್ತಾ ಕೊನೆಯ ಮೆಟ್ಟಲಾದ ಆತ್ಮವನ್ನು ತಲುಪುವರು.

ಸೂರ್ಯ, ಚಂದ್ರ, ಅಗ್ನಿ ಇವು ಸ್ಥೂಲಗಳಾದರೆ 'ವಾಣಿ'ಯೆಂಬುದು ಸೂಕ್ಷ್ಮ. ಅಂತೆಯೇ ಆತ್ಮದ ವರೆಗೆ ತಲುಪಿ ಉಪನಿಷತ್ಕಾರರು ಮತ್ತೊಮ್ಮೆ "ಆತ್ಮವೆಂದರೇನು? ಆತ್ಮವು ಯಾವ ವಸ್ತು? ಅದು ಹೇಗಿದೆ" ಎಂದು ಆತ್ಮದ ಸ್ಥೂಲ ಪರಿಚಯ ವಿನಿಮಯಕ್ಕಾಗಿ ಪ್ರಾರಂಭಿಸುತ್ತಾರೆ.

ತ್ಯಾಗವೇ ಪರಮ ಪ್ರಾಪ್ತಿ

(ಎರಡನೇ ಪುಟದಿಂದ)

ಅವನು ದೋಷ ಮುಕ್ತನಾಗಿ ಅವು ನಿನ್ನನ್ನು ಪೀಡಿಸುತ್ತವೆ. ಇದರ ಹೊರತು ಬೇರೆ ದಾರಿಯೇ ಇಲ್ಲ" ಎಂದರು ವಸಿಷ್ಠರು.

ಸುದೀಪರಾಜನು ಹಾಗೆ ಮಾಡುವುದನ್ನೇ ನಿರ್ಧರಿಸಿ ಕೊಂಡನು. ಮಂತ್ರಿಗಳಿಗೆ ಮುಂದಿನ ರಾಜ ಕಾರ್ಯಗಳನ್ನೆಲ್ಲ ಒಪ್ಪಿಸಿ, ತಕ್ಕ ವ್ಯವಸ್ಥೆಗೊಳಿಸಿ, ತಾನು ಅದುವರೆಗೆ ಅರ್ಜಿಸಿದ ಸಕಲ ಪುಣ್ಯ ಫಲಗಳನ್ನೂ ನಾಮಕ ಋಷಿಯ ದೋಷ ನಿವೃತ್ತಿಗಾಗಿ ಧಾರೆಯೆರೆದು ಸಮರ್ಪಿಸಿ ಬಿಟ್ಟನು.

ಅಂದಿನಿಂದ ರಾಜನ ರೂಪವು ವಿಕಾರವಾಗುತ್ತಾ ಹೋಯಿತು. ಪಾಪದ ಬಾಧೆಗಳನ್ನು ಅನುಭವಿಸಲಿಕ್ಕಾಗಿ ತಯಾರಿಕ್ಕಿಟ್ಟ ಕೋಣೆಯೊಳಗೆ ಪ್ರವೇಶಿಸಿ ಮುಚ್ಚಿಟ್ಟನು. ಆ ಕೋಣೆಯಲ್ಲಿ ದೀಪಗಳು ಉರಿಯುತ್ತಿರಲಿಲ್ಲ, ಕತ್ತಲೆ; ಸುವಾಸನೆಗಳು ನಿಲ್ಲುತ್ತಿರಲಿಲ್ಲ, ದರ್ಗಂಧ, ದೋಷಗಳ ಪ್ರಭಾವದಿಂದ ಅದು ಭೂಲೋಕದಲ್ಲೇ ನರಕ ಕೂಪವಾಗಿತ್ತು.

ಇದರಿಂದ ನಾಮಕ ಋಷಿ ಪಾಪದೋಷಗಳಿಂದ ಪೂರ್ಣ ವಿಮುಕ್ತನಾಗಿ, ರಾಜನ ಶ್ರೇಯಸ್ಸನ್ನು ಕೋರಿಕೊಂಡು ತಪಸ್ಸು ಮಾಡ ತೊಡಗಿದನು.

ಸುದೀಪರಾಜನು ಹದಿನಾರು ವರುಷಗಳ ವರೆಗೆ ನರಕಯಾತನೆಯನ್ನು ಅನುಭವಿಸಿದನು. ಆಗ ಯುಕ್ತ ವಯಸ್ಸಿಗೆ ಬಂದಿದ್ದ ಜಂತುದೇವನು ಕಟ್ಟಾಭಿಷಿಕ್ತನಾದನು. ಈ ಶುಭ ವಾರ್ತೆಯನ್ನು ಕೇಳಿದ ಸ್ವಲ್ಪ ಕಾಲದ ಮೇಲೆ ಸುದೀಪರಾಜನು ಅನುಭವಿಸುತ್ತಿದ್ದ ನರಕ ಬಾಧೆಗಳಿಗೂ ವಿಮೋಚನೆಯಾಗಿ ಹೋದುವು. ಅವನು ಮಾಡಿದ ಸರ್ವ ಸುಖಗಳ ತ್ಯಾಗವೇ ದೊಡ್ಡ ಪುಣ್ಯವಾಗಿತ್ತು. ಅಂತೆಯೇ ದೇವ ವಿಮಾನವು ಬಂದು ದಿವ್ಯ ದೇವತೆಗಳು ಅವನನ್ನು ಸ್ವರ್ಗ ಲೋಕಕ್ಕೆ ಕರೆದುಕೊಂಡು ಹೋದರು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their lerter-No. CL-4.17-4/65-66 dated 26-4-1966.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ.

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಬೆಲೆ. ರೂ. 2—00,

ಪುಸ್ತಕದ ಬೆಲೆಯೊಂದಿಗೆ 50 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.



NAVAYUGA 25—7—1968
Registered with the Registrar
of News Papers for India
under No. R. N. 3546/'57

REGD. No. B. G: 176
LICENCE No. 31
Licensed to Post without Prepayment

ಐಕ್ಯಭಾರತ

ಸಮಾಜ ಸಂಘಟನೆ

ಬರೆದವರು
ಶ್ರೀ ಶಿವಶಂಕರ

ಕುಂಭಮೇಳದಲ್ಲಾಗಲೀ—ಕುಂಭಕೋಣಮಿನಲ್ಲಾಗಲೀ, ಕೈಲಾಸದಲ್ಲಾಗಲೀ—ಕಣ್ವಾಶ್ರಮದಲ್ಲಾಗಲೀ, ಕಾಶಿಯಲ್ಲಾಗಲೀ—ಕಾಂಚಿಯಲ್ಲಾಗಲೀ, ಕಾಶ್ಮೀರದಲ್ಲಾಗಲೀ — ಕಾಲಡಿಯಲ್ಲಾಗಲೀ ಕೋಟ್ಯಾನುಕೋಟಿ ಭಾರತೀಯರು ಒಂದಾಗುತ್ತಾರೆ. ಉಡುಪಿಯಲ್ಲೂ ಈ ಅಪೂರ್ವ ದೃಶ್ಯವನ್ನು ಕಾಣಬಹುದು. ಅದರಲ್ಲೂ ಪರ್ಯಾಯದ ಸಮಯ ಹಿಂದುಗಳು ಧಾರೀ ಸಂಖ್ಯೆಯಲ್ಲಿ ಬರುತ್ತಾರೆ. ಈ ರೀತಿ ಭಿನ್ನಭಾವಗಳನ್ನು ಮರೆತು ಹಿಂದುಗಳೆಲ್ಲರೂ ಒಂದಾಗುವರಾದಲ್ಲಿ ಸಂಘಟನೆಯ ಅವಶ್ಯಕತೆ ಏನ ?

"ಭಾರತದಲ್ಲಿ ಮೂರು ಜನ ಒಟ್ಟುಗೂಡಿ ಬಂದಲ್ಲಿ, ಏನು ನಿಮಿಷ ಸಹಿ ಅವರ ಹೊಂದಾಣಿಕೆ ಉಳಿಯುವುದು ಕಷ್ಟ. ಪ್ರತಿಯೊಬ್ಬರೂ ಅಧಿಕಾರಕ್ಕಾಗಿ ಕಿಚ್ಚಾಡಿ ಇಡಿ ಸಂಘಟಣೆ ಮಣ್ಣಾಗುತ್ತದೆ. ದೇವಾ! ಅಸೂಯೆ ಬಿಟ್ಟು ಕೆಲಸ ಮಾಡುವದನ್ನು ನಾವು ಕಲಿಯುವುದು ಎಂದಿಗೆಂದು ಕೇಳುತ್ತಾರೆ ಸ್ವಾಮಿ ವಿವೇಕಾನಂದರು.

ಇಂದು ನಡೆಯುತ್ತಿರುವದೂ ಅದೇ! ಹಿಂದೆ ಘಟಿಸಿದ್ದೂ ಅದೇ, ಅವರಂಗಜೇಬನನ್ನು ಛತ್ರಪತಿ ಶಿವಾಜಿ, ಗುರುಗೋವಿಂದ ಸಿಂಘ, ಬಂದಾ ಬೈರಾಗಿ, ಛತ್ರಸಾಲ ಮುಂತಾದ ವೀರರು ಎದುರಿಸಿದರು. ಇವರೆಲ್ಲರೂ ಒಂದಾಗಿ ಹೋರಾಡುತ್ತಿದ್ದಲ್ಲಿ? ಹಿಂದೂ ರಾಜರುಗಳು ಒಂದಾಗಿ ಹೋರಾಡುತ್ತಿದ್ದಲ್ಲಿ ಅಲೆಕ್ಜಾಂಡರ್ ಅದೆಂತು ಇಲ್ಲಿಗೆ ಬರುತ್ತಿದ್ದ?—ಕಾಸಿಂ ಅದೆಂತು ಕಾಲಿಡುತ್ತಿದ್ದ? ಐಕ್ಯತೆ ಇಲ್ಲದರ ಪರಿಣಾಮವೇ ದಾಸ್ಯತೆ ಇದನ್ನು ಸ್ಪಷ್ಟವಾಗಿ ತಿಳಿದುಕೊಂಡವರಲ್ಲಿ ಶಿವಾಜಿ ರಾಮದಾಸ, ವಿದ್ಯಾರಣ್ಯರ ಹೆಸರುಗಳನ್ನು ಮರೆತು ಬಿಡಲು ಸಾಧ್ಯವೇ ಇಲ್ಲ. ಇವರು ಸಮಾಜ ಸಂಘಟನೆಗೆ ಮುಂದಾದರು. ಇವರಿಗೆ ಸಂಘಟನೆಯಿಂದ ಸಾಮ್ರಾಜ್ಯ ಕಟ್ಟಲು ಸಾಧ್ಯವಾಯಿತು.

"...ರಾಷ್ಟ್ರದಲ್ಲಿ, ಪರಸ್ಪರ ಎಷ್ಟೇ ಮತ ಭಿನ್ನತೆಗಳಿದ್ದಾಗ್ಯೂ ಅವರ ಪ್ರೇಮ ಬಂಧನದಿಂದ ಒಂದಾದ ಜನರ ತಂಡವನ್ನು ನಿರ್ಮಿಸುವದು ಎಂತಹ ಭವ್ಯ ಉದಾತ್ತ ಕಾರ್ಯ! ಈ ತಂಡವು ಬೆಳೆಯಬೇಕು. ಚರಂತನ ಉಚ್ಛ್ವಾಸ ಹಾಗೂ ಮನ್ನಡೆಯಿಂದ ಕೂಡಿದ ಈ ಹೃದಯ ಪೈಶಾಲ್ಯದ ಸುಂದರ ಭಾವನೆಗಳು ಇಡೀ ಭಾರತವನ್ನು ವ್ಯಾಪಿಸಬೇಕು. ಗುಲಾಮಿ ರಾಷ್ಟ್ರದ ವಾಸನೆಯೊಳಗಿ ಬಂದಿರುವ ಘೋರ ಅಜ್ಞಾನ, ಅಸೂಯೆ, ಜಾತೀಯತೆ ಮತ್ತು ಮೂಢನಂಬಿಕೆಗಳನ್ನು ಲೆಕ್ಕಿಸದೆ ಸಮಾಜದ ರೋಮ ರೋಮದಲ್ಲಿಯೂ ಅದು ವಿಜಿದು, ಸನಾತನ ರಾಷ್ಟ್ರವನ್ನು ಹುಲಿಕಿತಗೊಳಿಸಬೇಕೆನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಭಾರತದಲ್ಲಿ ಮತಗಳಿದೆ ಬರಗಾಲ ಬಂದಿರುವದಿಲ್ಲ. ಅವು ಒಂದಕ್ಕೊಂದು ವಿರೋಧಿ ಮತಗಳಾಗಬೇಕೆಂದೇನಿಲ್ಲ. ದ್ವೈತ ಸಾಕ್ಷಾತ್ಕಾರ ಹಾಗೂ ಭಾರತ ಮಾತೆಯ ಮೇಲಿನ ವಾತ್ಸಲ್ಯಕ್ಕಾಗಿ ಅವುಗಳ ನಡುವೆ ಪೈಪೋಟಿ—ಸಂದ್ಯಾಟ ಬರಬಹುದೇ ವಿನಃ ಹಗೆತನವಲ್ಲ. ಹಗೆತನಕ್ಕೆ ಕಾರಣವಾದರೋ ಆ ಮತಗಳಲ್ಲಿರುವ ನಿರ್ಬಲತೆಯೇ ಇವೆ. ಭಾರತವೂ ಬವಣೆ ಪಡುತ್ತಿರುವದು ಅದರಿಂದಲೇ. ಇಲ್ಲಿಷ್ಟೆಲ್ಲಾ ಮತಗಳೂ, ಜನರೂ ಇದ್ದರೂ ನಮ್ಮ ಅಧಃಪತನಕ್ಕೆ ಕಾರಣವು ನಮ್ಮ ನಿರ್ಬಲತೆ ಇದೆ. ಒಂದು ತುಂಡು ಸಾದಾ ಕಬ್ಬಿಣವು ಇನ್ನೊಂದ ತುಂಡು ಸಾದಾ ಕಬ್ಬಿಣವನ್ನು ಆಕರ್ಷಿಸ ವುದಿಲ್ಲ. ಆದರೆ ಕಾಂತವು ಹಾಗಲ್ಲ. ಅದು ಕಬ್ಬಿಣವನ್ನು ಆಕರ್ಷಿಸಿಕೊಳ್ಳುತ್ತದೆ, ಅಷ್ಟೇ ಅಲ್ಲ, ಅದನ್ನ ಕಾಂತವನ್ನಾಗಿ ಮಾರ್ಪಡಿಸಬಲ್ಲದು. ಕಬ್ಬಿಣ ತುಂಡಿಗೆ ಆ ಆಕರ್ಷಣೆಯ ಶಕ್ತಿ ಎಲ್ಲಿಂದ ಬಂತು? ಇದು ಕೇವಲ ಕಬ್ಬಿಣದ ತುಂಡಾಗಿದ್ದಾಗ ಅದರಲ್ಲಿದ್ದ ಕಣಗಳು ಯದ್ವಾತದ್ವಾ ಇದ್ದವು. ಕಾಂತವು ಅದನ್ನು ಆಕರ್ಷಿಸಿ ಐಕ್ಯತೆಯ ಸ್ಪರ್ಶವನ್ನು ಕೊಟ್ಟಿತು, ಭಾರತವೂ ಹಿಂದೆ ಅಖಿಲ ವಿಶ್ವವನ್ನು ಆಕರ್ಷಿಸಿಕೊಂಡು ಗುರುವಿನ ಸ್ಥಾನದಲ್ಲಿತ್ತು. ಆದರೆ ಇಂದು? ಭಾರತದಲ್ಲಿರುವ ಭಾರತೀಯರು ಕಣಗಳು ಕಂಡಾಬಟ್ಟೆ ಚದರಿ ಹೋಗಿವೆ. ಅವು ಒಂದಾಗಿ ಭಾರತೀಯತ್ವವನ್ನು ಹೊಂದಿದಲ್ಲಿ ಭಾರತವು ಪುನಃ ಜಗದ್ವಂದ್ಯ ಮಹಾನ್ ಗುರುವಾಗುವದರಲ್ಲಿ ಸಂದೇಹವೇ ಇಲ್ಲ. ಇಂದು ಬೇಕಾಗಿರುವುದಾದರೂ ಏನು? ಅದನ್ನು ಸ್ವಾಮಿ ವಿವೇಕಾನಂದರ ವಿವೇಕವಾಣಿಯಿಂದಲೇ ತಿಳಿದುಕೊಳ್ಳಬೇಕು:

'ನಮ್ಮ ಬೇಕಿಕ್ಕೆಂದು' ಬೇಕಾಗಿರುವುದಾದರೂ ಏನು? ಕಬ್ಬಿಣದ ಮೊಂಸುಂಡಗಳು, ಉಕ್ಕಿನ ನರಗಳು, ಅದ್ಭುತವಾದ ರಿಂದಲೂ ಅಡ್ಡಿಪಡಿಸಲಾರದ ಮನೋಶಕ್ತಿ ಇಂದು ಬೇಕಾಗಿದೆ..... ಕಣ್ಣೀರಲ್ಲ ಬೇಕಾಗಿರುವುದು, ಅದಾಗಲೇ ಬಹಳಷ್ಟು ಅತ್ತಿದ್ದೇವೆ. ಅದು ಸಾಕು. ನಿಮ್ಮ ಕಾಲಿನ ಮೇಲೆಯೇ ನೀವಿಂದು ಎದ್ದು ನಿಲ್ಲಬೇಕು.....ಮನುಷ್ಯರು;.....ಮನುಷ್ಯರು ಬೇಕಾಗಿರುವುದೇನೆ. ಉಳಿದೆಲ್ಲವೂ ಅವರನ್ನು ಅನುಸರಿಸಿಕೊಂಡು ಬರುತ್ತವೆ....ಬಲಶಾಲಿ, ಶಕ್ತಿವಂತ, ನಂಬಿಕೆಷ್ಟ, ಪ್ರೇಮಪೂರಿತ ತರುಣರು ಬೇಕು. ಇಂತಹ ನೂರು ಜನ ಇದ್ದರೂ ಸಾಕು. ಭಾರತದಲ್ಲೇ ಏಕೆ, ಸ್ವರ್ಗದಲ್ಲೇ ಕ್ರಾಂತಿಯುಂಟಾಗುತ್ತದೆ ...(ಇದಕ್ಕೆ) ..ಸಂಘಟನೆ ಬೇಕು. ಸಂಘವೇ ಶಕ್ತಿ ಇದೆ. ಅದರ ಹೆಸರೇ ಹಿಂದೂ ಧರ್ಮ ಎಂದೆಯುತ್ತಲ್ಲದಿಗೆಗೊಂಡಿದೆ .... ತ್ಯಾಗ, ಬಲಿದಾನ ಅತ್ಯಾವಶ್ಯಕ. ಕೊನೆಯ ಪಕ್ಷ ನಾವಿರುವರು ಬಲಿದಾನವಾದರೂ ಬೇಕು—ಚೆನ್ನಾಗಿ ಗಮನದಲ್ಲಿಟ್ಟುಕೊಳ್ಳಿ —ಬೇಕಾಗಿರುವದು ಜನರು, ಪಶುಗಳಲ್ಲ ....ಭಾರತದ ಉತ್ಥಾನವಾದೀತು. ಸಂಶಯವಿಲ್ಲ. ಆದರೆ ಅದು ಜಡ ಸಾಮರ್ಥ್ಯದಿಂದಲ್ಲ, ಆತ್ಮದ ಸಾಮರ್ಥ್ಯದಿಂದ; ವಿಧ್ವಂಸದ ಧ್ವಜದಡಿಯಲ್ಲಲ್ಲ, ಶಾಂತಿ ಪ್ರೇಮಗಳ ಧ್ವಜದಡಿಯಲ್ಲಿ, ಸನ್ಯಾಸಿಯ ಕಾವಿಯ ಧ್ವಜದಡಿಯಲ್ಲಿ.....ಏಳಿ, ಎಚ್ಚೆತ್ತೆದ್ದೇಳಿರಿ ಮತ್ತು ಮರಿ ಮುಟ್ಟುವ ತನಕವೂ ನಿಲ್ಲದಿರಿ....."

ಭಾರತದ ಇಂದಿನ ಭೀಕರ ದಾರುಣ ಚಿತ್ರಕ್ಕೆ ಭಾರತೀಯರಲ್ಲಿರುವ ಬಿಕ್ಕಟ್ಟೇ ಕಾರಣವೆಂಬುದಕ್ಕೆ ಇದಕ್ಕಿಂತ ಉತ್ತಮ ಕನ್ನಡಿ ಇನ್ನಾವದಿದೆ? ಬ್ರಿಟಿಷರ ಆಶ್ರಮುಖದ ಅಂತ್ಯವಾಗಿ ಇಪ್ಪತ್ತು ವರ್ಷಗಳು ಸಂದರೂ ಇಲ್ಲಿರುವ ಭಾರತೀಯರು ಒಪ್ಪೊತ್ತಾದರೂ ಏಕ ಮನಸ್ಸಿನಿಂದ ಭಾರತ ಮಾತೆಯ ಕುರಿತು ಚಿಂತಿಸುವದು, ಯೋಚಿಸುವದೆಂದಿಲ್ಲ. ಅದರ ಪರಿಣಾಮವಾಗಿ ದಿನಗಳೆದಂತೆ ಅರಾಷ್ಟ್ರೀಯತೆ ಅದಿನಿತೂ ಅಡೆತಡೆ ಇಲ್ಲದೆ ಹಬ್ಬುತ್ತಿದೆ. ಈ ಸಾಂಕ್ರಾಮಿಕ ರೋಗಕ್ಕೆ ಬಲಿಯಾದವರು ಬಹಳ ಮಂದಿ. ಅದನ್ನು ಕಂಡು ಫಗುವ ರಾಷ್ಟ್ರಗಳು ಕೆಲವು. ಆ ರಾಷ್ಟ್ರಗಳಾದರೋ ಈ ದೇಶವನ್ನು ಕಬಳಿಸಲು ಮಾಟಿಯ, ಆರ್ಥಿಕ, ರಾಜಕೀಯ, ...ಹೀಗೆ ರಂಗುರಂಗಿನ ಮುಖಗಳೆಂದ ಮುಂದೆ ಬರುತ್ತಿವೆ; ಆಕ್ರಮಣ ನಡೆಸುತ್ತಿವೆ. ಚೀನಾ-ಪಾಕಿಸ್ತಾನ ಪ್ರತ್ಯಕ್ಷವಾಗಿ ಆಕ್ರಮಣ ನಡೆಸಿತ್ತಿವೆಯೆಂದಲ್ಲಿ, ಅಮೆರಿಕ, ಬ್ರಿಟನ್, ಸ್ಪೇನ್, ಅರಬ ರಾಷ್ಟ್ರಗಳು ಪರೋಕ್ಷವಾಗಿ ಆಕ್ರಮಣ ನಡೆಸುತ್ತಿವೆ—ಮಿತ್ರತ್ವದ ಹೆಸರಿಂದ.

In the Court of the Munsif
of Udipi.

P. & S C 18/68.

In the matter of debts due to the estate of the deceased Shridhar Seethamma

M. Balakrishna Rao, s/o M. Vishnumurthayya, Mattu village... Petitioner.

To all persons concerned.—

The applicant has applied for issue of a succession certificate in his name enabling him to collect the debts detailed in Schedule A of the Petition. Those who have any objection can appear before the Court on 13—8—68 at 11 A. M., failing which the above application will be disposed off in their absence.

By order of Court.

(Sd) **V G Kedlaya.**
B. A., LL. B.
Advocate for Petitioner.

Udipi. D/- 16-7-68.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅಪ್ಪುಹಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.ಎಸ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಡಸರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಷದಿಸಲ್ಪಟ್ಟ ಗೃಹಸ್ಥೆಯ ಹಿರಿದೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೧೧ (ಪೋಸ್ಟೇಜ್ ಹೇತೆ)

— ಶ್ರೀ ಕಾಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

Edited, Printed & Published by K. U. Shetty at the Navayuga Press, Udipi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

1—8—1968

೨೦
ಪೈಸೆ

ಅಧ್ಯಯನ

ಕಾಪಿನ ಇತಿಹಾಸ - ೨

ಲೇಖಕರು

ಪ್ರಿನ್ಸಿಪಾಲ್ ಶ್ರೀ ಸಿ. ಗುರುರಾಜ ಭಟ್ಟ.

ನನಗೆ ಇತ್ತೀಚೆಗೆ ದೊರಕಿದ ಒಂದು ತಾಮ್ರಶಾಸನದ ಒಕ್ಕಣೆಯು ಈ ಕೆಳಗಿನಂತಿದೆ. ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1479ನೆಯ ಸಂದ ನಳಸಂವತ್ಸರದ ಕಾರ್ತಿಕ ಶುದ್ಧ ೧ ಅಶ್ವಿನ್ಯವಾರದಲೂ ಶ್ರೀಮನ್ನಮಹಾರಾಜಾಧಿರಾಜ ಪರಮೇಶ್ವರ ಸತ್ಯರತ್ನಾಕರ ಶರಣಾಗತ ವಜ್ರಪಂಜರ ಚತುಸಮುದ್ರಾಧೀಶ್ವರ ಕಲಿಯುಗ ಚಕ್ರವರ್ತಿ ಶ್ರೀ ವಿರಪ್ರತಾಪ ಸದಾಶಿವರಾಯ ರಾಜಾಚಂದ್ರ ದಕ್ಷಿಣಭಾಗ ಭಾಗ್ಯದೇವತಾ ಸಕ್ಷಿಭರುಮಪ್ಪ ರಾಮರಾಜಯ್ಯನವ ಪ್ರತಿಪಾಲಿಸುತಿರ್ದ ಕಾಲದಲೂ ಬಾರಕೂರು ಮಂಗಲೂರಲು ಸದಾಶಿವನಾಯ್ಕರು ರಾಜ್ಯಂಗೈಯುತಿರ್ದ್ದ ಕಾಲದಲು ತುಳುವ ದೆಶರಾಮಿಫಿ ಮುಖಕನುಲ ತಿಲಕಾಯಮಾನನಾಗಿ ಸಿದ್ದ ಅಸಿದ್ದ ಕಾಪಿಸಿಂಹಾಸನೊದಯಾ ಚಲಾಲಂಕರಣತರುಣ ವರಣ ಪ್ರಕಾಶರಂ ಅನನ್ಯ ರಾಜನ್ಯಸಾಧೂಪಣ ನಾಮ್ನ ರತ್ನಾಭರಣ ಗಣ ಕಿರಣಾದ್ಯತಿತ ಭರತಾದಿ ಸಕಲ ಪುರಾಣ ಪುರುಷರುಮಪ್ಪ ತಿರುಮಲರಸರಾದ ಮದ್ದ ಹೆಗ್ಗಡೆಯರು ಅವರ ನಾಳೆನವರು ಗಣಪಣ ಸಾಮಂತರು ಕಾಪಿನ ರಾಜ್ಯವನು ಪ್ರತಿಪಾಲಿಸುತಿರ್ದ ಕಾಲದಲ್ಲೂ ಸ್ವಸ್ತಿಶ್ರೀಮದ್ರಾಜರಾಯ ಗುರುಮಂಡಲಾಚಾರ್ಯ ಮಹಾವಾದ ವಾದೀಶ್ವರ ರಾಯುವಾದ ಪಿತಾಮಹ ಸಕಲ ವಿದ್ವಜ್ಜನ ಚಕ್ರವರ್ತಿಗಳುಂ ಇತ್ಯಾದ್ಯನೇಕ ಬಿರುದಾವಳಿ ವಿರಾಜಮಾನರು ಕಾಣಾಗ್ರ ಗಣಾಗ್ರ ಗಣ್ಯರುಗಳು ವಪ್ಪ ಶ್ರೀ ಮದಭಿನವ ದೇವ ಕೀರ್ತಿ ದೆವರುಗಳ ಶಿಷ್ಯರು ದೇವಚಂದ್ರ, ದೇವರುಗಳು ತಮ್ಮ ಗುರು ಮಾಘಿಚಂದ್ರ ದೇವರುಗಳಿಗೆ ಸ್ವರ್ಗ್ಗಾಪವರ್ಗ್ಗಕ್ಕೆ ಕಾರಣವಾಗಿ ಕಾಪಿನಲು ಧರ್ಮ್ಮವನು ಮಾಡಬೇಕೆಂಬ ಚಿತ್ತದಿಂದ ತಿರುಮಲರಸರಾದ ಮದ್ದ ಹೆಗ್ಗಡೆಯರು ಕೂಡೆಯೂ ಅವರ ನಾಳೆನವರು ಗಣಪಣ ಸಾಮಂತರ ಕೂಡೆಯೂ ಕಾಪಿನರ ಹಲರ ಸಹಾಯದಿಂದ ಧರ್ಮಕ್ಕೆ ಒಂದು ಕ್ಷೇತ್ರವನ್ನು ಕೊಡಬೇಕು ಎಂದು ಚಿತ್ತೈಸಲಾಗಿ ಅವರುಗಳು ಧರ್ಮ್ಮ ಪರಿಣಾಮ ಸ್ವರೂಪವನ ಉಳ್ಳವರಿಂದ ಕಾರಣ ಪರಮ ಭಕ್ತಿಯಿಂದ ತಮ್ಮ ಸೀಮೆಯಲು ಮಲ್ಲಾರೆಂಬ ತಿಮರೊಳಗೆ ಪಡುವಣ ದಿಕ್ಕಿನಲು ಕಳಂಜಪತ್ತನ ಬಾಳ್ಕೆಯಲು ಅಗಳಿಂದಪೂಳಗೆ ಬೆಟ್ಟನಗದ್ದೆ ೧ಕ್ಕಂ ಬಿಜಬಳ ಮೂವತ್ತರ ಲೆಕ್ಕದ ಬತ್ತ ಮೂಡೆ ೨ ಮತ್ತಂ ಅದಳಿಂದಂ ಹೊರಗೆ ಪಾಪಿ ನಡಿಯೆಂಬ ಗದ್ದೆ ೧ಕ್ಕಂ ಬಿಜಬಳ ಮೂವತ್ತರ ಲೆಕ್ಕದ ಮೂಡೆ ೪ ಗದ್ದೆ ಮೂರಕ್ಕಂ ಬಿಜಮೂಡೆ ೧೦ ಇ ಭೂಮಿಗಳಿಗೆ ಉಳಳೆರೆಮುರಿ ಮನೆ ಬಾವಿ ಹಲಸುಮಾಉ ಪುಂಜ ಕಿಕ್ಕೆಲುಕರ್ಂಡ್ಡೆಗಡಿರುಜಲ ಪಾಶಾಣ ಸಹಿಯೆಂಕೊಟ್ಟೆಯಾಸಿಕೊಂಡ .....ದೊಡ್ಡವರಹಗ ೮೦ ಅಕ್ಷರದಲು ಯೆಂಭತ್ತು ವರಹ ಯಿ ಹೊನ್ನಿಗೆ ಯೆರಡು ಬೆಳೆಯಲು ಸಹ ವರ್ಷ ೧ಕ್ಕೆ ಬಹಅಕ್ಕಿ ಅಂಗಡಿಯ ಹಾರಿಗೆಯ ಬಳ್ಳ ಅಇವತ್ತರ ಲೆಕ್ಕದ ಅಕ್ಕಿ ಮೂಡೆ ೨೪ ಈ ಅಕ್ಕಿಗೆ ನಡವ ಧರ್ಮ್ಮದ ವಿವರ ಕಾಪಿನ ಬಸ್ತಿಯ ನೆಯಲು ಧರ್ಮ್ಮತೀರ್ತ್ಥಕರ ಸನ್ನಿಧಿಯಲು ಮಧ್ಯಹ್ನ ಕಾಲದಲು ನಿತ್ಯದಲು ದಿನವೊಂದಕ್ಕೆವೊಂದು ಬಳ್ಳ ಅಕ್ಕಿಯು ನೈವಿದ್ಯಕ್ಕು ಮುನಿಚಂದ ದೆವರುಗಳ ಹೊಸತಿನಲು ನಡ ಹಾಲದಾರಿಗು ಸಹ ಅಕ್ಕಿ ಮೂಡೆ ೧೦ ತಿಂಗಳು ತಿಂಗಳು ತಪ್ಪದೆ ತಿಂಗಳಲ್ಲಿ ೧೭ ಹೋದಾದ ನಡವ ವಾರ ೧ ಮತ್ತಂ ಇಪ್ಪತ್ತು ಅಇದು ೨೫. ಹೋಹಾಗ ನಡವ ವಾರ ೧ ಅಂತು ತಿಂಗಳಲ್ಲಿ ಎರಡು ವಾರ ಸಮದಾಯ ನಡವುದಕ್ಕೆ ಅಕ್ಕಿ ಮೂಡೆವೂ ೨ ಈ ವಾರಂಗಳಲ್ಲಿ ಮಂಗಲ ತ್ರಯೊದಶಿ ಮಹಾ ಅಮಂಗಲ ತ್ರಯೊದಶಿ ನಡೆವರು ವಿಶೇಷವಾಗಿ ಯಿರಿಸಿದ ಅಕ್ಕಿ ಮೂಡೆ ೨ ಅಂತು ಅಕ್ಕಿ ಮೂಡೆ ೨೪ಯು ಧರ್ಮದ ಸ್ಥಳದಲ್ಲಿ ಬಲ್ಲಾಳರಿಗೆ ಅನಾಯ ಸನಾಯ ಸಲ್ಲದು. ಇಲ್ಲಿ ಆ ಸ್ಥಳದಲು ಇದ್ದ ಒಕ್ಕಲಿಗೆ ಬಟ್ಟೆ ಬಿಡಾರ ಸಲ್ಲದು, ಕಾಣಿಕೆದೆಸಿ ಅಪ್ಪಣವಿದದಲ್ಲಿಯಿತ್ತು ಸಲ್ಲದುಯೆಂದು ಸರ್ವಮಾನ್ಯವಾಗಿ ತಿರುಮಲರಸರಾದ ಮದ್ದ ಹೆಗ್ಗಡೆಯರು ಅವರ ನಾಳೆನವರು ಗಣಪಣ ಸಾಮಂತರು ಸಹ ತಮ್ಮ ಧರ್ಮ ಪರಿಣಾಮ ನಿಮಿತ್ತವಾಗಿ ತಮ್ಮ ಸ್ವರೂಪಿಯಂದ ಗುರುಭಕ್ತಿಯಿಂದ ಒಡಂಬಡ್ಡು ಬರಸಿಕೊಟ್ಟ ತಾಂಬ್ರ ಶಾಸನಯಿಂತಪ್ಪು ದಕ್ಕೆ, ಸಾಮ್ರಗಳು ಅತಿಕಾರಿ ಕಾಂತ ಸೆಟ್ಟಿ ಚಟ ಬಿಕ್ಕ ಸೆಟ್ಟಿ ಸಾಮಣಿ ಸಂಕರ ಸೆಟ್ಟಿ ರಾಜ ಸೆಟ್ಟಿ ಬಗ್ಗೆಡ್ಡಿಯ ಅಳಯ ಕೆಸಣ ಮೂಳೂರ ಬೆಳಾಲೆ ಬಿಗುವಾಳ ದುಗ್ಗ ಬಂಡಾರಿ ಬರಸಾವಣಿ ಯಿಂತಿವರ ಉಭಯೊಪ್ಪದಿಂ ಮಂಗಲೂರ ಸಂಕ ಇಸಿನ ಬೊವನ ಬರಹ ಇಂತಿ ಧರ್ಮ ಶಾಸನಕ್ಕೆ ಮಂಗಲ ಮಹಾ ಶ್ರಿ ಶ್ರೀ ಶ್ರಿ ... .ಯಿ ಧರ್ಮಶಾಸನಕೆ ಅವಣಾಪೊಟ್ಟ ಜೈನನಾದವ ತಪ್ಪಿದರೆ ಬೆಳುಗುಳದ ಗುಮ್ಮಟನಾಥ ಕೊಪಣದ ಚಂದ್ರನಾಥ ಉಜ್ಜಂತನಾಥ ನೆವಿ.ಶ್ವರ ಮೊದಲಾದ ಜನಲಿಂಬಗಳನೊಡದ ಪಾಪಕೆ ಹೊಹರು। ಶೈವನಾದರೆ ಪರ್ವತ ಗೊಕರ್ಣ ಮೊದಲಾದವರಲ್ಲಿ ಕೊಟಿ ಲಿಂಗವನೊಡದ ಪಾಪಕ್ಕೆ ಹೊಹರು. ವೈಷ್ಣವನಾದರೆ ತಿರುಮಲೆ ಮೊದಲಾದವರಲ್ಲಿ ಕೊಟಿ ವಿಷ್ಣು ಮೂರ್ತಿಯನೊಡದ ಪಾಪಕ್ಕೆ ಹೊಹರು.

ಮೇಲಿತ್ತ ತಾಮ್ರಶಾಸನದಿಂದ ವಿಷದವಾಗುವ ವಿಷಯಗಳು ಈ ಕೆಳಗಿನಂತಿವೆ.

(1) ಕ್ರಿ. ಶ. 1557ಕ್ಕೆ ಮಂಗಲೂರು ಬಾರಕೂರು ರಾಜ್ಯಗಳು ಎಂದರೆ ತುಳುವವು ಕೆಳದಿಯ ಸದಾಶಿವ ನಾಯಕರ ಅಂಕೆಯೊಳಗಿತ್ತು. ವಿಜಯ ನಗರದ ಅಧಿಕಾರವು ಹೆಸರಿಗೆ ಮಾತ್ರವಾಗಿತ್ತು.

(2) ತುಳುದೇಶದಲ್ಲಿ ಕಾಪು ಸಿಂಹಾಸನವು ತಿಲಕಾಯಮಾನನಾಗಿತ್ತೆಂಬುದರಿಂದಲೂ ಆ ಸಿಂಹಾಸನಾಧಿಪನಾದ ತಿರುಮಲರಸನು ದೀರ್ಘವಾದ ಬಿರುದಾಕಿತನಾಗಿದ್ದನೆಂಬುದರಿಂದಲೂ ಈ ಸಮಯದಲ್ಲಿ ತುಂಡರಸರ ಹಾಗೂ ಪಾಳೆಯಗಾರರ ಅಧಿಕಾರ ಬಲವಾಗಿತ್ತೆಂದೂ ತಿಳಿದುಬರುತ್ತದೆ.

(3) ಕಾಪು ಸೀಮೆಯು ಅರಸರಾದ ತಿರುಮಲರಸನ ಅಧಿಕಾರದ ಅವಧಿಯು ಕ್ರಿ. ಶ. 1500ರಿಂದ ಕ್ರಿ. ಶ 1557ರ ವರೆಗಾದರೂ ಇದ್ದಿತೆಂದು ಈ ಶಾಸನದಿಂದ ತಿಳಿದುಬರುತ್ತದೆ.

(4) ಕಾಪಿನ ಅರಸು ಮನೆತನದಲ್ಲಿ ಮದ್ದ (ಮರ್ದ) ಹೆಗ್ಗಡೆ ಎಂಬುದು ಪಟ್ಟದ ಹೆಸರಾಗಿದ್ದು ಅಂಕಿತ ನಾಮವು ಗಣಪಣ್ಣ ಸಾವಂತ ಮತ್ತು ತಿರುಮಲರಸ ಎಂಬುದಾಗಿ ಪರ್ಯಾಯವಾಗಿ ಬರುವುದು ತಿಳಿಯುತ್ತದೆ.

(5) ಕಾಪು ಒಂದು ಪೇಟೆಯಾಗಿತ್ತೆಂದೂ ಈ ಪೇಟೆಯು ಅಡಳಿತದ 'ಹಲರ' (ನರರ ಮಂಡಳಿ?) ಕೈಕೆಳಗಿತ್ತೆಂದೂ ತಿಳಿದುಬರುತ್ತದೆ.

(6) ಕ್ರಿ ಶ. 1325ರಲ್ಲಿ 'ಮಲಾವರ' ಎಂಬ ಊರ ಹೆಸರು ಕ್ರಿ. ಶ. 1557ಕ್ಕೆ 'ಮಲ್ಲಾ'ರೆಂದು ಪರಿವರ್ತನೆಯಾಯಿತು.

(7) ಧಾನ್ಯದಳತೆಯಲ್ಲಿ ಬಳ್ಳ 30ರ ಮುಡಿಯೂ ಬಳ್ಳ 50ರ ಮುಡಿಯೂ ಬಳಕೆಯಲ್ಲಿತ್ತೆಂದು ತಿಳಿದು ಬರುತ್ತದೆ.

(8) ನಾಣ್ಯದಲ್ಲಿ ದೊಡ್ಡ ವರಹ ಮತ್ತು ವರಹಗಳು ಬಳಕೆಯಲ್ಲಿದ್ದುವು.

(9) ತೆರಿಗೆಗಳಲ್ಲಿ— ಅನಾಯ, ಸನಾಯ, ಬಿಟ್ಟಿ, ಬಿಡಾರ, ಕಾಣಿಕೆ, ದೆಸಿ, ಅಪ್ಪಣೆ, ಯೆತ್ತು ಇತ್ಯಾದಿಯಾಗಿ ನಾನಾ ತೆರವಾದುವುಗಳಿದ್ದುವೆಂದೂ ಇವುಗಳಲ್ಲಿ ಕೆಲವಕ್ಕೆ ಕೆಲವು ಸಂದರ್ಭಗಳಲ್ಲಿ ವಿನಾಯತಿ ಇತ್ತೆಂದೂ ತಿಳಿದು ಬರುತ್ತದೆ.

(10) ಬಲ್ಲಾಳೆಂಬ ಅಧಿಕಾರ ವರ್ಗ ಅರಸನ ಕೈಕೆಳಗಿತ್ತು.

(11) ಕಾಪಿನ ಬಸ್ತಿಯು ಧರ್ಮನಾಥ ತೀರ್ಥಂಕರನಿಗೆ ನಿಮಿತ್ತವಾಗಿತ್ತು.

12) ಬಸ್ತಿಯಲ್ಲಿ ನಿತ್ಯ ನೈವೇದ್ಯ ಕ್ಷೀರಾಭಿಷೇಕ, ಹೆಸತು, ತ್ರಯೋದಶಿ ಇತ್ಯಾದಿ ಪರ್ವದಿನಗಳಲ್ಲಿ ವಿಶೇಷ ಸಮಾರಂಭಗಳಿದ್ದುವು.

13) ಜೈನ, ವೈಷ್ಣವ ಮತ್ತು ಶೈವ ಪಂಥದವರು ಈ ಪ್ರದೇಶದಲ್ಲಿ ಬಾಳಿ ಕೊಂಡಿದ್ದರು.

14) ಅತಿಕಾರಿ, ಸಾಮಣಿ, ಸೆಟ್ಟಿ, ಬಂಡಾರಿ, ಬೊವ ಇತ್ಯಾದಿ ಶಾಸನಾಮಗಳು ಬಳಕೆಯಲ್ಲಿದ್ದುವು.

ಈ ದಾಖಲೆಯು ಅನಂತರದ ಅಧಿಕೃತ ಶಾಸನವಾಗಲೀ ಬರಹವಾಗಲೀ ಇಷ್ಟರ ತನಕ ದೊರೆಯಲಿಲ್ಲ.

ಕಾಪು ರಾಜ್ಯದ ಅಧಿದೈವತವು ಶ್ರೀ ಜನಾರ್ದನ ಸ್ವಾಮಿ. ಶ್ರೀ ಜನಾರ್ದನ ಸ್ವಾಮಿಯ ದೇವಾಲಯದ ವಾಸ್ತುಶಿಲ್ಪವನ್ನು ಪರಿಶೀಲಿಸಿದಾಗ ಅದರಲ್ಲಿ ಅನೇಕ ಭಾಗಗಳು ಈಗ ಜೀರ್ಣೋದ್ಧಾರವಾಗಿದ್ದರೂ ಈಗ ಕಂಡು ಬರುವ ಅವಶೇಷಗಳಿಂದ ದೇವಾಲಯದ ಪ್ರಾಚೀನತೆಯನ್ನು ಕ್ರಿ. ಶ. 12—13ನೇ ಶತಕಕ್ಕಾದರೂ ಕೊಂಡೊಯ್ಯಬಹುದು. ಶ್ರೀ ಜನಾರ್ದನ ಸ್ವಾಮಿಯ ವಿಗ್ರಹವು ಸುಮಾರು 2' 3" ಎತ್ತರವಿದ್ದು ಬಹಳ ಸುಂದರ ಮೂರ್ತಿಯಾಗಿದೆ. ಚಕ್ರ, ಶಂಖ,

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವ ಪ್ರಸಾದ

ಕುಂದಾಪುರ ಫೋನ್ 77

ತಿಳಿಸಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಸಾಂಪ್ರದಾಯಿಕ ಉಪಾಹಾರಕ್ಕೆ ಅನ್ನ ಸ್ಥಾನ ಹೆಸರಿನ ವಿಶಿಷ್ಟ ಹೊಟೆಲ್.

ಪುಟಗಳು : ೨೮೦
ಸಂಪುಟ ೪೭
VOL. 47
ಸಂಚಿಕೆ ೪೮
No. 48

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೧—೮—೧೯೬೮

ಸಚಿವ ಸಂತಾನ ಮಿತಿ

ಎಸ್. ಎಸ್. ಪಿ.ಯ ಶ್ರೀ ಮಧುಲಿಮಯೆಯವರು ಸಂವಿಧಾನಕ್ಕೊಂದು ತಿದ್ದುಪಡಿಯನ್ನು ಮಾಡುವ ಮಸೂದೆಯೊಂದನ್ನು ತಂದರು—ಲೋಕಸಭೆಯಲ್ಲಿ. ಇದರ ಮುಖ್ಯ ಉದ್ದೇಶ ರಾಜ್ಯ ಮತ್ತು ಕೇಂದ್ರಗಳಲ್ಲಿ ಪ್ರತಿ ಹನ್ನೆರಡು ಮಂದಿ ಶಾಸಕರಿಗೊಬ್ಬನಿಗಿಂತ ಹೆಚ್ಚು ಮಂತ್ರಿಯಿರಬಾರದು ಎಂದು ವಿಧಿಸುವುದು. ಹೀಗೆ ಮಿತಿ ಹೇರುವುದರಿಂದ ಪಕ್ಷಾಂತರ ಪಿಡುಗು ಕಡಮೆಯಾಗುವುದು ಎಂಬುದು ಹೆಚ್ಚಿನವರ ವಿಶ್ವಾಸ. ಶ್ರೀ ಮಧುಲಿಮಯೆಯವರು ಮುಂದೆ ತಂದ ಮಸೂದೆಯನ್ನು ಅವರೇ ಹಿಂದೆಗೆದುಕೊಂಡರು. ಕಾರಣ, ಕೇಂದ್ರ ನ್ಯಾಯಾಂಗ ಮಂತ್ರಿ ಶ್ರೀ ಗೋವಿಂದ ಮೆನನ್ನರು ಇಂಥದೇ ಒಂದು ಮಸೂದೆಯನ್ನು ಸರಕಾರದ ತರಲಿದೆಯೆಂದು ಪೂರ್ಣ ಭರವಸೆಯನ್ನು ಕೊಟ್ಟದ್ದು.

ಪಾರ್ಲಿಮೆಂಟಿನ ಈಗಿನ ಅಥವಾ ಮುಂದಿನ ಅಧಿವೇಶನದಲ್ಲಾದರೂ ಸಚಿವ ಸಂಪುಟಕ್ಕೊಂದು ಮಿತಿ ಹೇರುವಂತೆ ಸಂವಿಧಾನ ತಿದ್ದುಪಡಿ ಮಸೂದೆಯು ಬರುವುದು ಖಂಡಿತ. ಇದು ಸ್ವೀಕಾರವೂ ಆಗುತ್ತದೆ— ಸಂವಿಧಾನ ತಿದ್ದುಪಡಿಗೆ ಅವಶ್ಯಬಹುಮತ ಗಳಿಸುತ್ತದೆ. ರಾಜ್ಯ ಮತ್ತು ಕೇಂದ್ರಗಳಲ್ಲಿಯ ಮಂತ್ರಿ ಮಂಡಳಗಳಲ್ಲಿ ಹೆಚ್ಚಿನವು ಸೊಟಕಾಗುವುದೂ ಆಗ ಅನಿವಾರ್ಯ. ಹೀಗೆ ಮಿತಗೊಳಿಸಿದ ಮಂತ್ರಿ ಮಂಡಲಗಳು ಹೇಗೆ ಕಾರ್ಯ ನಿರ್ವಹಿಸಿಯಾವು? ಇದರಿಂದ ಯೋಜಿತ ಉದ್ದೇಶಗಳು ನಿಜಕ್ಕೂ ಫಲಿಸಿಯಾವೆ? ಎಂಬ ಪ್ರಶ್ನೆ ಮುಂದೆ ಬರುತ್ತದೆ. ಸಾಮಾನ್ಯವಾಗಿ ಶಾಲ್ಕಳಿಯ ಸಾರ್ವತ್ರಿಕ ಚುನಾವಣಾನಂತರ ನಡೆದ ರಾಜಕೀಯ ದೊಂಬರಾಟಕ್ಕೆ ಪಕ್ಷಾಂತರ ಪಿಡುಗು ಪ್ರಮುಖ ಕಾರಣ. ದೇಹದ ಅಂಗ ಬದಲಾಯಿಸುವುದಕ್ಕೂ ಹಿಂದೆ ಮುಂದೆ ನೋಡುವವರು ಪಕ್ಷಬದಲಾಯಿಸಲು ತಾವಾಗಿಯೇ ಮುಂದೆ ಬಂದರು—ಹಳೆಯ ಹೆಂಡತಿಯಲ್ಲಿ ಜಿಗುಪ್ಸೆ ಬರಲು ಕಾರಣವೆಂದರೆ, ಹೊಸ ಹೆಂಡತಿಯ ಕೈಹಿಡಿದು ಸ್ವರ್ಗಸುಖ ಭೋಗಿಸಬಹುದು ಎಂಬ ಹೆಬ್ಬಯಕೆ. ನಡೆದದ್ದೂ ಅದೇ. ಕಾಂಗ್ರೆಸ್ ಪಕ್ಷವನ್ನೂ ತೃಣಿಸಿ ಬಂದವರಿಗೆಲ್ಲಾ ಮಂತ್ರಿಮಂಡಳದಲ್ಲಿ ಪ್ರಮುಖ ಸ್ಥಾನ ನೀಡಿದ ಉದಾಹರಣೆಗಳು ಹಲವಾರು. ಅಂದರೆ; ಶಾಸಕರಿಗೆ ಮಂತ್ರಿ ಪದವಿಯೆಂದರೆ, ಎಮ್ಮೆಗೆ ಹಿಂಡಿ ಇದ್ದ ಹಾಗೆ, ಬೆಕ್ಕಿಗೆ ಹಾಲಿದ್ದ ಹಾಗೆ— ಒಂದು ಪ್ರಭಾವಶಾಲೀ ಆಮಿಷ. ಹಾಗಾಗಿ ಸಚಿವ ಸಂಪುಟಕ್ಕೊಂದು ಇತಿಮಿತಿಯನ್ನು ಹೊರಿಸಿದರೆ, ಆಗ ನೀಡಬಹುದಾದ ಆಮಿಷದ ಪ್ರಮಾಣ ಕಡಮೆಯಾಗುವುದು. ಏತಕ್ಕಾರಣವಾಗಿ ಆಮಿಷ ಬಲದಿಂದ ಪಕ್ಷಾಂತರ ರೋಗ ಹರಡದೆಂದು ವಿಶ್ವಾಸ ಕೆಲವರದು. ಪಕ್ಷಾಂತರ ರೋಗ ಪರಿಶೀಲನಾ ಸಮಿತಿಯೂ ಇದೇ ರೀತಿ ಅಭಿಪ್ರಾಯ ಪಟ್ಟಿದೆ. 'ನವಯುಗ'ವು ವಿಶಾಲ ತಳಹದಿಯ, ವಿಸ್ತೃತ ಸಚಿವ ಸಂಪುಟಗಳನ್ನು ಹಿಂದಿನಿಂದಲೂ ವಿರೋಧಿಸುತ್ತಲೇ ಬಂದಿದೆ. ಈ ವಿರೋಧದ ಅರ್ಥ ಈಗಲಾದರೂ ಕೇಂದ್ರ ಸರಕಾರಕ್ಕಾದುದು ಸೌಭಾಗ್ಯ. ಬಾಯಿ ಮಿತಿ ಹೇರುವುದಷ್ಟರಿಂದಲೇ ಪಕ್ಷಾಂತರದ ರೋಗವಪ್ಪುವುದೆಂದು ನಂಬಬಾರದು; ಇದೊಂದು ಸಾಧನ ಮಾತ್ರ. ರಾಜಕೀಯ ಸ್ಥಿರತೆ ಮೂಡಬೇಕಾದರೆ, ರಾಜಕೀಯ ಪಕ್ಷಗಳು ವಿವಿಧ ಪಕ್ಷಗಳ ಮೇಲೆ ವ್ಯಕ್ತಿಗತ ದೋಷವನ್ನು ಹೊರಿಸಬಾರದು; ಸೈದ್ಧಾಂತಿಕ ಭೇಧಗಳನ್ನೇ ಮುಖ್ಯವಾಗಿ ಪರಿಗಣನೆಗೆ ತೆಗೆದುಕೊಂಡು ಚುನಾವಣೆಗಳಲ್ಲಿ ಹೋರಾಡಬೇಕು; ಸರಕಾರ ರಚಿಸುವಲ್ಲಿ ಒಂದಾಗಬೇಕು. ಈ ಬಗೆಯ ಶಿಸ್ತು ಪಕ್ಷಾಂತರ ರೋಗಕ್ಕೆ ಮಾತ್ರ ಔಷಧಿಯಲ್ಲ, ಪಕ್ಷೀಯ ಆರೋಗ್ಯಕ್ಕೂ ರಾಜಕೀಯ ಆರೋಗ್ಯವರ್ಧನೆಗೂ ದಿವ್ಯಲೇಹ.

ಪಕ್ಷಾಂತರದ ಪಿಡುಗಿನ್ನೂ ಹದಿನೆಂಟು ತಿಂಗಳ ಕೂಸು. ಈ ಅಲ್ಪಾವಧಿಯಲ್ಲೇಆದು ಬ್ರಹ್ಮರಾಕ್ಷಸನಾಗಿ ಬೆಳೆದದ್ದು ಗೊತ್ತು. ಆದರೆ, ಈ ರೋಗ ಸೋಕದಿರುವಲ್ಲಿ ನಡೆದುದೇನು? ಉದಾಹರಣೆಗೆ ದೂರ ಬೇಡ, ಕರ್ನಾಟಕವನ್ನೇ ತೆಗೆದುಕೊಳ್ಳಬಹುದು. ಮೂಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ತಮ್ಮ ಸದಸ್ಯರ ಸಚಿವ ಸಂಪುಟವನ್ನು ವಿಸ್ತರಿಸಿ ಇದು ವಿಶಾಲ ತಳಹದಿಯದು ಅಂದರು. ಅವರ ಉತ್ತರಾಧಿಕಾರಿ ಶ್ರೀ ವೀರೇಂದ್ರ ಪಾಟೀಲರು ಮತ್ತೂ ಮೂರು ಮಂತ್ರಿಗಳನ್ನು ಸೇರಿಸಿ ಇವನ್ನೂ ಒಂದೆರಡು ಜನ ಬರಲಿದ್ದಾರೆ ಎಂದು ಹೇಳಿದರು— ಇದು ಅತಿ ವಿಶಾಲ ತಳಹದಿಯ ಸಂಪುಟವಾಗುತ್ತದೆ. ಇದೇ ಮೂದರಿ ಉಳಿದ ಕೆಲವು ರಾಜ್ಯಗಳಲ್ಲೂ ಇದೆ. ಯಾಕೆ ಹೀಗೆ? ರಾಜಕಾರಣಿಗಳ ಉತ್ತರವೊಂದೇ—ಪಕ್ಷದೊಳಗಿನ "ಭಿನ್ನ ಭಿನ್ನ ಮತ"ಗಳಿಗೂ ಪ್ರಾತಿನಿಧ್ಯ ನೀಡಬೇಕೆಂಬ ಆದರ್ಶ. ಮುಂದೆ ಸಚಿವರ ಸಂಖ್ಯೆಗೆ ಮಿತಿ ಹೇರಿದರೆ, ಕರ್ನಾಟಕದಂತಹ ರಾಜ್ಯದಿಂದ ಹಲವಾರು ಮಂತ್ರಿಗಳು ಹೊರಹೋಗಬೇಕಾದೀತು. ಶಾಸಕರ ಸಂಖ್ಯೆಯನ್ನು ಪರಿಗಣಿಸುವಾಗ, ಎರಡೂ ಸಭೆಗಳ ಸದಸ್ಯ ಸಂಖ್ಯೆಯನ್ನು ಲೆಕ್ಕ ಹಾಕಿದರೆ ಹೆಚ್ಚಿನ ಹಾಳಿ ತಟ್ಟಲಾರದು.— ಪಕ್ಷಾಂತರ ಪಿಡುಗು, ಮಂತ್ರಿಯಾಗಬೇಕೆಂಬ ಹಂಬಲಗಳಿಗೆ "ಮಂತ್ರಿ ಪದವಿ"ಯ ಆಕರ್ಷಣೆಗಳನ್ನು ಕಡಮೆ ಮಾಡಿದರೆ ಬೆಲೆ ಬರಲಾರದು. ಇದಕ್ಕಾಗಿ ಮಂತ್ರಿಗಳಿಗೂ ವೃತ್ತಿಪರ ಸಂಹಿತೆಯೊಂದು ಖಚಿತವಾಗುವುದೂ ಅಗತ್ಯವೆನಿಸುತ್ತದೆ. ಇದನ್ನೂ ಕೇಂದ್ರ ಸರಕಾರ ತಂದರೆ, ಜನಸೇವೆ ಅವರಿಂದ ಸರಿಯಾಗಿ ನಡೆಯಬಹುದು.

ದೃಢ ವ್ಯಕ್ತಿತ್ವದ ಶ್ರೀ ಕೆ. ಕೆ. ಪೈ

ಶ್ರೀ ಕೆ. ಕೆ. ಪೈ ಅಂದರೆ, ಶಿಸ್ತು ಮತ್ತು ಶ್ರಮ ಬದ್ಧತೆಗೆ ಇನ್ನೊಂದು ಹೆಸರು. ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನ ಛೇರ್ಮನ್ ಆಫೀಸರರಾದ ಇವರು ಬ್ಯಾಂಕಿನಲ್ಲಿ ಇಪ್ಪತ್ತೈದು ವರ್ಷಗಳ ಕಾಲ ತಮ್ಮ ಸೇವೆಯನ್ನು ಸಮರ್ಥ ಹಾಗೂ ಸುಯೋಗ್ಯ ರೀತಿಯಲ್ಲೇ ಸಲ್ಲಿಸಿದರು. ಬೇಂಕಿನ ಛೇಯರ್ ಮತ್ತು ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರೂ ಶ್ರೀ ಕೆ. ಕೆ. ಪೈಯವರೂ ಸುಮಾರಾಗಿ ಒಂದೇ ವರ್ಷ, ಒಂದೇ ತಿಂಗಳಲ್ಲಿ ಬೇಂಕಿನ ಸೇವೆಯಲ್ಲಿ ಸೇರಿಕೊಂಡವರು. ಇವರಿಬ್ಬರೂ ಒಂದೇ ಗಾಡಿಗೆ ಕಟ್ಟಿದ ಹೋರಿಗಳಂತೆ ತಮ್ಮ ವೈಯಕ್ತಿಕ ಶ್ರಮವನ್ನು ಪರಿಗಣಿಸದೆ ನಿಸ್ಪೃಹ ಮತ್ತು ಚಿತ್ತಶುದ್ಧಿಯ ಸೇವೆ ಸಲ್ಲಿಸಿದುದರಿಂದಲೇ ಬ್ಯಾಂಕ್ ಇಂದು ದೇಶದ ಪ್ರಮುಖ ವಾಣಿಜ್ಯ ಬ್ಯಾಂಕಗಳಲ್ಲಿ ಒಂದೆಂಬುವುದು ಸಾಧ್ಯವಾಯ್ತು. ಹಿರಿಯ ದೂರದರ್ಶಿ ಪದ್ಮಶ್ರೀ ಡಾ| ಟಿ. ಮಾಧವ ಪೈಯವರ ಗೂಢ್ಯ ಮಾರ್ಗದರ್ಶನವೂ ಉತ್ಸಾಹವೂ ಇವರಿಗೆ ಪ್ರೇರಕ ಸ್ಫೂರ್ತಿ ಶಕ್ತಿಯಾಯಿತು. ಶ್ರೀ ಕೆ. ಕೆ. ಪೈಯವರು ೧೯೪೪ರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇರಿಕೊಂಡರು. ಆರಂಭದಲ್ಲಿ ಬೊಂಬಾಯಿ ಶಾಖೆಯಲ್ಲಿ ವಿವಿಧ ಹುದ್ದೆಯಲ್ಲಿದ್ದು ತಮ್ಮ ಕರ್ತವ್ಯನಿಷ್ಠೆ ಮತ್ತು ಪ್ರಾಮಾಣಿಕ ಸೇವೆಯಿಂದಾಗಿ ಕೆಲವೇ ವರ್ಷಗಳಲ್ಲಿ ಬ್ಯಾಂಕಿನ ಮುಖ್ಯಾಧಿಕಾರಿಗಳ ಸಾಲಿನಲ್ಲಿ ಸೇರಿಕೊಂಡರು. ಪ್ರಧಾನ ಕಾರ್ಯಾಲಯ ದಲ್ಲಿಯೂ ನಾನಾ ಹುದ್ದೆಗಳಿಗೇರಿ, ೧೯೬೫ರಿಂದ ಛೇರ್ಮನ್ ಆಫೀಸರರಾದರು. ಈ ಮಧ್ಯೆ ೧೯೫೯ರಿಂದ ೫೪ರವರೆಗೆ ದಿ ಸದರ್ನ್ ಇಂಡಿಯಾ ಅವೆರ್ಸ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ ಪದವಿಯನ್ನು ಇವರು ಸ್ವೀಕರಿಸುವ ಅವಕಾಶ ದೊರಕಿತ್ತು. ೧೯೫೪ರಲ್ಲಿ ಅದು ಸಿಂಡಿಕೇಟಿನಲ್ಲಿ ವಿಲೀನವಾಯಿತು. ಇಂದು ಸುಮಾರು ೨೪೦೦ ಶಾಖೆಗಳಿರುವ ಬೃಹತ್ ಬ್ಯಾಂಕು ನಿರಾತಂಕವಾಗಿ ಸುಸೂತ್ರವಾಗಿ ವ್ಯವಹಾರ ನಿರ್ವಹಿಸುತ್ತ ದಿನೇ ದಿನೇ ಅತ್ಯಧಿಕ ಜನಸಾಧಾರಣೆ ಗಳಿಸುತ್ತಿರುವುದಕ್ಕೆ ಶ್ರೀ ಕೆ.ಕೆ. ಪೈಯವರ ಅದ್ಭುತ ಆಡಳಿತ ಶಕ್ತಿಯೂ ಒಂದು ಕಾರಣ. ಆಡಳಿತೆಯಲ್ಲಿ ಕಟ್ಟುನಿಟ್ಟುಗಳು ಬೇಕು; ಅವನ್ನು ಕೂಲಂಕಷವಾಗಿ ಅನುಸರಿಸಲೂ ಬೇಕು; ಆಡಳಿತ ಪರಿಶುದ್ಧತೆಗೂ ನಿಷ್ಕಳಂಕ ವ್ಯವಹಾರಕ್ಕೂ ಇದು ಅತ್ಯಗತ್ಯ. ಶ್ರೀ ಕೆ. ಕೆ. ಪೈಯವರದು ಇದರಲ್ಲಿ ಸಿದ್ಧಹಸ್ತ. ವಿದೇಶ ಸಂಚಾರ ಮಾಡಿಕೊಂಡು, ಅಲ್ಲಿನ ಬ್ಯಾಂಕಿಂಗ್ ಕ್ರಮವನ್ನೂ ಅಧ್ಯಯನ ಮಾಡಿದುದಂದ ಶ್ರೀ ಕೆ. ಕೆ. ಪೈಯವರು ನಿಷ್ಠುರವಾದಿಯೆನಿಸಿಕೊಂಡರೆ ಅಶ್ಚರ್ಯವಿಲ್ಲ. ಅವರ ವ್ಯವಹಾರವೂ ಅಂತಹುದೇ. ಬ್ಯಾಂಕಿಂಗ್ ವ್ಯವಹಾರದಲ್ಲಿ ವಿಪರೀತ ದಾಕ್ಷಿಣ್ಯ ಪ್ರವೃತ್ತಿ ಸಲ್ಲದು—ಇದರಿಂದ ಆಡಳಿತೆ-ವ್ಯವಹಾರ ಕೆಟ್ಟು ಹೋಗುತ್ತದೆ. ಬ್ಯಾಂಕಿಂಗ್‌ನಂತೆಯೇ ಶ್ರೀಯುತರದು ರಾಜಕೀಯ ರಂಗದಲ್ಲೂ ನಿಷ್ಠುರವಾದ. ಉಡುಪಿ ಪುರಸಭೆಯ ಸದಸ್ಯರಾಗಿ, ಅಧ್ಯಕ್ಷರಾಗಿ ಸಮಾಜ ಸೇವೆ ಸಲ್ಲಿಸಿದ ಇವರು ಮಣಿಪಾಲದ ಎಕೆಡೆಮಿಯ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಉಡುಪಿಯ ಯು. ಕಮಲಾಬಾಯಿ ಹೈಸ್ಕೂಲುಗಳ ವ್ಯವಸ್ಥಾಪಕರಾಗಿರುವ ಇವರು ಹಲವಾರು ಸಾಮಾಜಿಕ, ಸಾಹಕಾರಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಸಕ್ರಿಯ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಕೆ. ಕೆ. ಪೈಯವರದು ಸರ್ದಾರ ಪಟೇಲರಂತೆ ದೃಢ ವ್ಯಕ್ತಿತ್ವ. ತಮ್ಮ ವ್ಯಕ್ತಿತ್ವದ ಚರಿತ್ರದ ಬಲದಿಂದ ಅವರು ಬಹುಕಾಲ ನಾಡಿನ ಸೇವೆ ಮಾಡುತ್ತಿರಲೆಂದು ಈ ಸಂದರ್ಭದಲ್ಲಿ ಹಾರೈಸುತ್ತೇವೆ.

ವಚನ ಸುಧೆ

ಅನಾಶ್ರಿತಃ ಕರ್ಮಫಲಂ
ಕಾರ್ಯಂ ಕರ್ಮಕರೋತಿಯಃ
ಸ ಸಂನ್ಯಾಸೀ ಚ ಯೋಗೀ ಚ
ನ ನಿರಗ್ನಿರ್ನ ಚಾಕ್ರಿಯಃ

ಕರ್ಮಫಲವನ್ನು ಆಶ್ರಯಿಸದೆ ತನ್ನ ಕರ್ತವ್ಯಕರ್ಮವನ್ನು ಮಾಡುವವನೇ ಸನ್ಯಾಸಿಯು; ಯೋಗಿಯು.

ಮುಖಚಿತ್ರ

ಉಡುಪಿಯ ಪಶ್ಚಿಮಕ್ಕೆ ಸುಮಾರು ಒಂಭತ್ತರವರೆ ಮೈಲು ದೂರದಲ್ಲಿರುವ ಅಂಬಲಪಾಡಿಯ
ಶ್ರೀ ಮಹಾಕಾಳಿ

ನರಸಣ್ಣನ ನರಸ

'ನೂರು ರೂಪಾಯಿವರೆಗಿನ ಬೆಲೆಬಾಳುವ ನಾಣ್ಯಗಳು ಚಲಾವಣೆಗೆ ಬರುತ್ತವಂತೆ—ಮೋಟು ನೋಟಿನ ಹಾವಳಿ ಒಮ್ಮೆಗೆ ನಿಂತೀತು....'

ಗೇಹರಾಜ್ಯದಲ್ಲಿ

ಕಿವಿಕಿವುಡಾದ್ರೂ ದೃಷ್ಟಿ ಮಂದವಲ್ಲ

"ಅಲ್ರಿ, ಹೀಗೆಲ್ಲಾ ನಡೆದ್ರೆ ದಾರಿಯಲ್ಲಿ ನಡೆಯೋದು ಹೇಗೇಂತ..."

"ಮತ್ತೇನು, ಪಡೇದೇನೇ ದಾರಿ ಸಾಗಬೇಕಾಂತೀಯ?'

"ಹಾಂಗಲ್ರಿ, ನೋಡಿ, ದಾರಿಯಲ್ಲಿ ನಡೆಯುತ್ತಿರುವಾಗ ದರೋಡೆ ನಡೆಯೋದು ಬೆಚ್ಚಗಾಗ್ತಾ ಇದೆ. ಹೀಂಗಿರುವಾಗ ಯಾವ ಧೈರ್ಯದಿಂದ ದಾರೀ ಪಡೀ ಬೋದೂಂತ....'

"ಹ್ಞಾನ್ನು; ಅಂದ್ರೆ, ಇಷ್ಟು ಮುಂದೆ ಎಲ್ರೂನೂ ಮನೆಯೊಳ್ಗೇ ಇರ್ಬೇಕು ಹೊರಗೆ ತಿರುಗಾಟಕ್ಕೆ ಹೋಗ್ಬಾರ್ದ....'

"ಹಿಂದೆ ದಾರಿ ನಡಿಯುತಿದ್ದವರನ್ನು ದರೋಡೆ ಮಾಡ್ತಿದ್ರಂತೆ..."

"ಅದೆಲ್ಲಾ ಪುರಾಣ-ಇತಿಹಾಸಗಳ ಕಾಲದಲ್ಲಿ, ಮತ್ತೆ ಸಮುದ್ರಕಳ್ಳರೂ ಹುಟ್ಟಿಕೊಂಡರು. ಈಗ ಕಾರು ತಡೆದು ದರೋಡೆ. ರೈಲಿನಲ್ಲಿ ದರೋಡೆ ಆರಂಭ ಆಗಿದೆ. ಮುಂದೆ, ವಿಮಾನದಲ್ಲೂ ದರೋಡೆಗೆ ಗುರಿಯಾದರೆ ಆಶ್ಚರ್ಯವಿಲ್ಲ."

"ಅಲ್ರಿ, ಜನ ಹೀಗೆಲ್ಲಾ ಯಾಕೆ ಅನ್ಯಾಯ ಮಾಡ್ತಾ ಇದೇಂತ?"

"ಏನು ಅನ್ಯಾಯ, ಬಂತೇ ಇದ್ರಲ್ಲಿ?"

"ಮತ್ತೆನ್ನೆಂಥದು? ಪರರೊಡವೆಯನ್ನು ಅಪಹರಿಸುವುದು ಅನ್ಯಾಯವಲ್ಲವೇ?"

"ಅಲ್ವೆ, ಮತಿಗೆ ಹೇಳ್ತೇನೆ, ಈ ಪ್ರಪಂಚದಲ್ಲಿ ಸ್ವಕೀಯ ಎಂಬುದು ಯಾವುದಿದೆ?"

'ನಮ್ಮದೂಂತ ಏನಿದೆ ಅದೆಲ್ಲಾ ಸ್ವಕೀಯ ತಾನೆ?"

"ಅದೇ ಅನ್ನೋದು ನಾನು, ನಮ್ಮದೂಂತ ಏನಾವುದು ಇದೆ?"

"ನೋಡಿ, ಈ ಪುಸ್ತಕ, ಈ ಪೆನ್ನು, ಈ ಮೇಜ, ಈ...."

'ಸರಿ, ಸರಿ, ಇಲ್ಲೇ ನೀನು ಸಿಕ್ಕಿ ಬಿದ್ದಿರೋದು...."

"ಯಾಕೆ? ಇವೆಲ್ಲಾ ನಮ್ಮದೇ ತಾನೆ?'

'ಕೋಡು, ಯಾರೋ ಅಂದಿದ್ದಾರಿ— ಎಲ್ಲಿಂದ ನೀನು ಬಂದೆ? ಅಲ್ಲಿಂದ ಏನು ತಂದೆ?"

"ಅಂದ್ರೆ ..."

"ಅಂದ್ರೆ ಮತ್ತೇನು? ನಾವೆಲ್ಲಾ ಪೂರು ದಿಕ್ಕಗಳ ಸಂತೆ ಮುಗಿಸ ಬಂದವರು. ಹೆಕ್ಕಿ ಅಂಗಳದಲ್ಲಿ ಬರುತ್ತದೆ; ಆ ಕ್ಷಣ ದಾರಿ ಹೋಗುತ್ತೆ; ನಿತ್ಯ ಆತ್ಮ ಮಾತ್ರ, ದೇಹವಲ್ಲ..."

"ಇದೆಲ್ಲಾ ಭಾರೀ ವೇದಾಂತವಾಯ್ತು...."

"ಹೌದು, ನಮಗೆ ಅಪ್ರಿಯವಾದದ್ದೆಲ್ಲಾ ವೇದಾಂತವೆನಿಸುತ್ತದೆ...."

"ಅಲ್ರಿ, ಪರಾಪಹರಣ, ಪರಪೀಡೆ ಎಲ್ಲಾ ಪಾಪ. ಹಾಗಿರುವಾಗ, ಕಳ್ಳತನ ದರೋಡೆ, ಕೊಲೆ...."

"ನೋಡು, ಒಂದು ಕಾಲದಲ್ಲಿ ಸಮುದ್ರಯಾನ ಮಾಡುವುದೂ ನಿಷಿದ್ಧವಿತ್ತು. ಆದರೆ ಇಂದು?"

"ಅಲ್ರಿ, ಸಮುದ್ರಯಾನದಿಂದ ಯಾರಿಗೆ ಕೊಂದ್ರೆಯಾಗುತ್ತೆ?'

"ಆಗೋದು ಯಾರಿಗೆ? ಪ್ರಯಾಣಿಕರಿಗೇನೇ ಅನ್ನು ಕೆಲವೊಮ್ಮೆ...',

'ಮತ್ತೆ ಆದರಿಂದ ಹಾನಿಯೇನು?'

ಹಾಗೇನೇ ಲೂಟಿ ಮಾಡಿದ್ರೆ ಹಾನಿಯೇನು?"

"ಒಳ್ಳೇದು ಹೇಳ್ತೀರಿ. ಇವತ್ತು ಅವ್ರ ಕಾರು ದರೋಡೆಗೆ ಗುರಿಯಾಯ್ತು, ನಾಳೆ ನಾವೂ..."

"ನೋಡಮ್ಮ, ಈ ವರ್ಷ ಅದೆಷ್ಟು ರೇಲ್ವೆ ಅಪಘಾತಗಳು ಪಡೆದುವು? ಹಾಗೆಂತ ರೈಲಿನಲ್ಲಿ ಪ್ರಯಾಣ ಮಾಡುವುದನ್ನೆ ನಿಲ್ಲಿಸಿದರೆ?"

"ನೋಡಿ, ಫೀವು ರೈಲು, ಮೋಟಾರು, ವಿಮಾನ, ಹಡಗಗಳ ದುರಂತ-ಅಪಘಾತಗಳನ್ನು ಇದಕ್ಕೆ ಹೋಲಿಸ್ಬೇಡಿ."

"ಯಾಕೆ?'

"ಯಾಕೆಂದ್ರೆ, ಅವೆಲ್ಲಾ ಜಡಗಳು— ಮಾನವ ಪ್ರಜ್ಞಾ ಬುದ್ಧಿಶಕ್ತಿಯ ಬಲದಿಂದ ಅವುಗಳಲ್ಲಿ ಚೈತನ್ಯ ತುಂಬುತ್ತಾನಷ್ಟೆ..."

"ಅದನ್ನೇ ವೇದಾಂತ ಸಾರಿರೋದು. ಈ ಶರೀರವೆನ್ನುವುದು ಕಟ್ಟಿನ ಗೊಂಬೆ; ಅದರಲ್ಲಿ ದೇವ್ರು ಪ್ರಾಣಶಕ್ತಿಯನ್ನು ಪ್ರತಿಷ್ಠೆ ಮಾಡ್ತಾನೆ. ಈ ಪ್ರಾಣಶಕ್ತಿ ಹೊರಟು ಹೋದ ಮೇಲೆ ಮತ್ತೆ ಶರೀರ ಜಡವಾಗುತ್ತೆ...'

"ಅಂದ್ರೆ, ಮಾನವನೂ ಒಂದು ಯಂತ್ರ ಅಂತ ತಾನೇ ಫೀವನ್ನುವುದು?"

"ಹ್ಞೂಂ....ಹಾಗೇಂತನ್ನು...'

'ಸರಿ, ಸಿಕ್ಕಿ ಬಿದ್ರಿ..."

'ಯಾಕೆ?'

"ನೋಡಿ, ಒಂದು ಸರಳ ಪ್ರಶ್ನೆ."

"ಹ್ಞೂಂ...."

"ಮಾನವನ ದೇಹದ ಭಾಗಗಳು ಸವೆದು ಹೋದ್ರೆ ಮತ್ತೆ ತಾವಾಗಿಯೇ ಪುನಾರಚಿತವಾಗುತ್ತವೆ. ಯಂತ್ರದವು ಅಗೋಲ್ಲ..."

'ಓ, ಸಾಯನ್ಸು ಅಧ್ಯಾಪಕರು ಸರಿಯಾಗೇ ಕಲ್ಸಿದ್ದಾರೆ..."

"ಯಾಕೆ ಅವ್ರನ್ನ ಇಲ್ಲಿ ಎತ್ತಂದ್ರಿ?"

'ಅಲ್ವೆ, ಆಹಾರದಲ್ಲಿ ಶಕ್ತಿದಾಯಕ ಮತ್ತು ಪುಷ್ಟಿದಾಯಕ ಅಂತ ಎರಡು ವಿಧವಿದೇಂತ ಕಲಿಸಲಿಲ್ವೆ?"

'ಹ್ಞೂಂ, ಇರಬಹುದೂನ್ನಿ..."

"ಮಾನವನಿಗೆ ದೇವ್ರು ಇಬ್ಬಗೆಯ ಆಹಾರವನ್ನೂ ತೋರಿಸಿಕೊಟ್ಟಿದ್ದಾನೆ. ಆದ್ರಿಂದ ಆತನ ಶರೀರದಲ್ಲಿ ಶಕ್ತಿಯೂ ಹುಟ್ಟುತ್ತದೆ; ಪುಷ್ಟಿಯೂ ಆಗುತ್ತದೆ.... ಆದರೆ..."

"ಏನು?"

"ನೀನನ್ನುವ ಮೋಟಾರು ವಿಮಾನಗಳಿಗೆ ಮಾನವ ಪುಷ್ಟಿದಾಯಕ ಆಹಾರವನ್ನು ಕೊಡೋದಿಲ್ಲ. ಬರೀ ಶಕ್ತಿದಾಯಕ ಆಹಾರವನ್ನು ತುಂಬಿಸ್ತಾನೆ; ಅವು ಓಡುತ್ತವೆ ಮಾತ್ರ..."

"ಸರಿಯಾಯ್ತು ಬಿಡಿ...ಅಂತೂ ವಿಜ್ಞಾನಿಗಳಿಗೇನೇ ಸವಾಲು ಹಾಕ್ಬಿಟ್ಟಿದ್ದೀರಿ. ಇನ್ನು ಇದೂ ಒಂದು ಸಂಶೋಧನೆ ಅಗ್ಬಿಟ್ರೆ...."

"ಮತ್ತೆ..."

"ಮತ್ತೇನಿಲ್ಲ. ನೋಡಿ, ಈಗಿನ ಜನರಲ್ಲಿ ಸುಲಿಗೆ ಮಾಡಿ ಹೊಟ್ಟೆ ಹೊರೆಯುವ ಪ್ರವೃತ್ತಿ ಬೆಳೆಯುತ್ತಾ ಬರುತ್ತಿದೆ. ಇದಕ್ಕೆ ಮುಖ್ಯ ಕಾರಣ ನಿರುದ್ಯೋಗ. ಏನಾಂತೀರಿ ಇದಕ್ಕೆ'

'ಹ್ಞೂಂ.... ಒಂದು ದೃಷ್ಟಿಯಿಂದ ಸರೀನ್ನು. ಪುರುಷರುಲಿ, ಸ್ತ್ರೀಯರುಲಿ, ಅನೈತಿಕ ವ್ಯವಹಾರಗಳಿಂದ ಆಕರ್ಷಿತರಾಗುವಷ್ಟು ಶೀಘ್ರವಾಗಿ ಮತ್ತೊಂದರಿಂದಲೂ ಆಕರ್ಷಿತರಾಗುವುದಿಲ್ಲ. ವ್ಯಭಿಚಾರ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಕಳ್ಳತನ—ಎಲ್ಲವುಗಳ ಹಿಂದೆಯೂ ಅಡಗಿರುವ ಸತ್ಯ ಕಥೆ ಇದೇ. ನಿರುದ್ಯೋಗ ಯತೆ. ಒಮ್ಮೆ ಅನೈತಿಕ ವ್ಯವಹಾರಕ್ಕೆ ಇಳಿಯುವಂತೆ ಮಾಡಿದರೆ, ಮುಂದದ ರಸ್ತೆಗಳವಾದರೆ ವಿಸ್ಮಯವೇನು ಬಂತು?"

"ಅದು ಸರಿ, ಆದರೆ, ಇದನ್ನ ತಡೆಪಟ್ಟುವುದು?'

"ಪರಬ್ರಹ್ಮನಿಂದಲೂ ಸಾಧ್ಯವಿಲ್ಲ. ಹಾಗಿರುವಾಗ ಈ ಪೇಲೀಸರಿಂದೇನಾದೀತು?'

"ಅಂದ್ರೆ, ಇದನ್ನು ಪರಿಣಾಮಕಾರಿಯಾಗಿ ತಡೆಯೆ ಮಾಡೋದೂ ಸಾಧ್ಯವಿಲ್ಲವೆ?"

"ನೋಡ', ಹಿಂದೆ ದಿಲ್ಲಿಯಲ್ಲಿ ಗುಲ್ಜಾರೀಲಾಲ ನಂದಾರು ಗೃಹ ಮಂತ್ರಿಯಾಗಿದ್ದಾಗ ಭ್ರಷ್ಟಾಚಾರವನ್ನ ಪರಿಣಾಮಕಾರಿಯಾಗಿ ನಿಲ್ಲಿಸದೆ ಹೋದರೆ ತಾನು ರಾಜೀನಾಮೆ ಕೀಡುವುದಾಗಿ ಅಂದ್ರು. ಆ ಎರಡು ವರ್ಷದ ನಂತರ ಅವ್ರು ಹೆಚ್ಚು ಕಾಲ ಮಂತ್ರಿಯಾಗಿರಲಿಲ್ಲನ್ನಿ.'

'ಅದು ಸರಿ..."

'ಈಗ ನೋಡು. ಅನೈತಿಕತೆಗೂ ಒಂದು ಅಲಿಖಿತ ಸಹಿತೆ ಸಿದ್ಧವಾಗಿದೆ. ಅದರಂತೆಯೇ ಎಲ್ಲ ಅನೈತಿಕ ವ್ಯವಹಾರಗಳು ನಡೆಯುತ್ತಿವೆ...."

'ಅಲ್ರಿ, ಈಗೀಗ ಇವು ಹೆಚ್ಚತ್ತಾ ಪರಾಕಾಷ್ಠೆಯನ್ನು ಮುಟ್ಟಿದಂತಿವೆ..."

"ಇಲ್ಲ....ಈಗಿನ್ನೂ ಭರತ ಆರಂಭವಾಗಿದೆ ಮಾತ್ರ...ನೋಡು ಹಿಂದೆ ಇದ್ದವರು ಇಲ್ಲದವರಿಗೆ ಕೊಡುತ್ತಿದ್ದರು, ತಮ್ಮ ಸಂಪತ್ತಿನ ಉಪಯೋಗ ಮಾಡುತಿದ್ದರು. ಹಾಗಾಗಿ ಇಲ್ಲದವ್ರ ದಿನವೂ ಸಂತೋಷದಿಂದಲೇ ಹೋಗುತ್ತಿತ್ತು. ಇಂದು ?"

"ಇಂದು? ಏನು ಹೇಳೋದು? ಎಷ್ಟ ಪೊರೆಯಿಟ್ಟರೂ ಕೇಳಿಸೋದೇ ಇಲ್ಲ."

"ಹೌದು. ನಿವೇದನೆಗೆ ಕಿವಿ ಕೊಡದವ್ರು ಕತ್ತಿಯ ಮುಂದೆ ಹೇಗೆ ಬಗ್ಗುತ್ತಾರೆ ನೋಡ.? ಅವ್ರಿಗೆ ಕಿವಿ ಕಿವುಡಾದ್ರು ದೃಷ್ಟಿ ಮಂದವಲ್ಲ'

"ಸರಿ ಮಾಯ್ತು ಬಿಡಿ. ನೀವೂ ಅನ್ಯಾಯವನ್ನ ಎತ್ತಿ ಕಟ್ಟಿದೀರಿ..."

'ಹಾಗಲ್ರೆ, ಸಾಮಾನ್ಯವಾಗಿ ಮಾಡೋಕೆ ಕೆಲ್ಸ ಇಲ್ಲದಿದ್ದ ದುರ್ಬಲಾತ್ಮವಂತರೀಗ ಇಂತಹ ಕೆಲಸಕ್ಕೆ ಇಳಿದಿದ್ದಾರೆ. ಜನತೆಯೇ ಇವರತ್ತ ಕಠೋರವಾಗಿ ವರ್ತಿಸಿದ್ರೆ ಸಮಾಜ ತನ್ನ ಸಂಪತ್ತಿನ ಸದುಪಯೋಗ ಮಾಡಿ ಸ್ವಾರ್ಥವಶದಿಂದ ಅದನ್ನು ಕೂಡಿಡುವುದಕ್ಕೆ ಹೆಚ್ಚಿನ ಗಮನ ಕೊಡ್ತಿದ್ದರಿಂದ...."

'ಸರಿಯಾಯ್ತು...ಅದಕ್ಕೆ'

"ಅಲ್ವೆ, ನನ್ನ ನಿನ್ನ ಸುಲಿಯೋಕೆ ಯಾರಿದ್ರೂ ಬರ್ತಾರೇನು? ಇದ್ದವನ್ನೇ ಸುಲಿಯೋದು. ಉಳ್ಳವ್ರಿಗೆ ದಾನಧರ್ಮವ ಮಾಡದವನೊಡವೆಯು ಕಳ್ಳರಿಗೆ...."

"ಹ್ಞೂಂ.... ಅದು ಸರೀನ್ನಿ. ಆದರೆ, ಇದೆಷ್ಟು ದಿನ ನಡೆಯುತ್ತೇಂತ?"

"ಎಷ್ಟು ದಿನ ಅಂದ್ರೆ ಏನು? ಹಿಂದಿನ

(ಬಂಭತ್ತನೇ ಪುಟ ನೋಡಿರಿ)

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ಟು ತಿಂಗಳಾಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ತಂಬರಾದಿಯಿಂದ 48ನೆ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯವಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ, ಯೂ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆವಿನಂತಿಸುತ್ತೇವೆ

ಮೆನೇಜರ್,
ನವಯುಗ, ಉಡುಪಿ

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.



S.R. BEEDI
WORKS,
UDIPI, S.K.

ಸಮಾಧಾನದ ಬಿಸಿಯುಸಿರು

ಪ್ರಧಾನಿ ಇಂದಿರಾ ಗಾಂಧಿಯವರು ಈ ಬಾರಿ ಸಂಸತ್ ಅಧಿವೇಶನ ಆರಂಭವಾದಾಗಲೇ ಖಂಡನಾ ನಿರ್ಣಯವೊಂದನ್ನು ಎದುರಿಸಬೇಕಾಯಿತು. ಈ ಕಠಿಣ ಪರಿಸ್ಥಿತಿಯನ್ನು ತಂದೊಡ್ಡಿದವರು ಮಿಶ ರಶ್ಯನ್ ನಾಯಕರು. ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡಲು ಸೋವಿಯತ್ ಸಿದ್ಧವಾಗಿರುವುದರಿಂದ, ಭಾರತಕ್ಕೆ ಅನ್ಯಾಯವಾಗಿದೆ, ಮಿತ್ರ ದ್ರೋಹವೆಸಗಿದೆ; ತಾಷ್ಕೆಂಟ್ ಒಡಂಬಡಿಕೆಗೆ ಭಂಗಬಂದಿದೆ, ಪಾಕ್—ಭಾರತ ಸಂಬಂಧ ಮತ್ತಷ್ಟು ಕಹಿಯಾಗಿದೆ ಎಂದು ಮುಂತಾದ ಕಾರಣಗಳಿಂದ ಕೇಂದ್ರದ ವಿದೇಶ ನೀತಿ ಸಂಪೂರ್ಣ ವಿಫಲವಾಗಿದೆ—ಇದು ವಿರೋಧ ಪಕ್ಷೀಯರ ವಾದ. ರಶ್ಯವನ್ನು ಪ್ರತ್ಯಕ್ಷ ಶಬ್ದಗಳಿಂದ ಖಂಡಿಸಲು ಭಾರತ ಸರಕಾರ ಸಿದ್ಧವಿಲ್ಲ. ತನ್ನ ತೀವ್ರ ಕಳವಳವನ್ನು ನವ್ರವಾಗಿ ನಿವೇದಿಸಲು ಅದು ಸಿದ್ಧ. ಆದರೆ, ಸರಕಾರೀ ಪಕ್ಷವು ವಿರೋಧೀ ಪಕ್ಷಗಳ ನಡುವೆ ಸಾಮರಸ್ಯ ಬರಲಿಲ್ಲ. ಖಂಡನಾ ನಿರ್ಣಯ ಚರ್ಚೆಗೆ ಬಂತು; ೨೦೭-೬೧ ಮತಗಳಿಂದ ತಿರಸ್ಕೃತವಾಯಿತು.

ಖಂಡನಾ ನಿರ್ಣಯವೇನೋ ಬಿದ್ದುಹೋಯಿತು. ಅಂದ ಮಾತ್ರಕ್ಕೆ ಸರಕಾರದ ಮುಂದಿನ ಕಂಟಕ ದೂರವಾಯ್ತೆಂದೇನಿಲ್ಲ. ಭಾರತೀಯ ಜನತೆಯ ಮೇಲೆ ರಶ್ಯ ತಳೆದ ಹೊಸ ನೀತಿಯು ದುಃಖವನ್ನೂ ಕ್ರೋಧವನ್ನೂ ಏಕಕಾಲದಲ್ಲಿ ಉಂಟು ಮಾಡಿದೆ. ಪ್ರಧಾನಿಗಳಿಗೂ ಇದು ತಿಳಿಯದಿಲ್ಲ. ರಶ್ಯ ತಮಗಾವುದೇ ಬಗೆಯ ಭರವಸೆಗಳನ್ನು ನೀಡಿದರೂ ಅದರಿಂದ ಪ್ರಯೋಜನವಿಲ್ಲವೆಂಬುದನ್ನೂ ಅವರು ಅರಿತಿದ್ದಾರೆ. ಆದುದರಿಂದ ಗದರಿಸಿದ ರಶ್ಯದ ಮನವೊಲಿಸುವ ಅನ್ಯ ವಿಧಾನಗಳನ್ನೇ ಅವರು ಮುಂದುವರಿಸಲಿಚ್ಛಿಸುತ್ತಾರೆ. ಸೋವಿಯತ್ ಭಾರತದ ಮಿತ್ರತ್ವವನ್ನು ಉಳಿಸಿಕೊಳ್ಳಲು ಬಯಸುತ್ತದೆಯೆಂದ ಮೇಲೆ ಮಿತ್ರನಿಗಾಗಿ ತುಸು ತ್ಯಾಗಕ್ಕೂ ಸಿದ್ಧವಾಗದಿರದು. ಇದು ಭಾರತಕ್ಕೂ ಅನ್ವಯಿಸಬೇಕಲ್ಲವೆ?

ಂ ಂ ಂ

ಫೀಲ್ಡ್ ಮಾರ್ಶಲ್ ಅಯ್ಯೂಬ ಖಾನರು ರಶ್ಯವನ್ನು ಒಲಿಸಿ ಅದರಿಂದ ಕೆಲವು ಬಗೆಯ ಶಸ್ತ್ರಾಸ್ತ್ರವನ್ನು ಪಡೆಯುವಲ್ಲಿ ಸಮರ್ಥರಾದರು. ಇದೀಗ ಬ್ರಿಟನ್ನದತ್ತ ಅವರ ಗಮನ ಹರಿದಿದೆ. ತನ್ನ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯಲೆಂದು ಲಂಡನ್ನಿಗೆ ಗಮಿಸಿದ ಅಯ್ಯೂಬರು ತನ್ನ ದೇಶದ ನೌಕಾಬಲಕ್ಕೂ ಆರೋಗ್ಯ ಸರಿಯಿಲ್ಲವೆಂದು ಲಂಡನ್ನದಲ್ಲಿ ಸೂಕ್ತ ಚಿಕಿತ್ಸೆ ಮಾಡಿಸುವ ಆತುರದಲ್ಲಿದ್ದಾರೆ. ಅವರು ಪ್ರಧಾನಿ ಹೆರಾಲ್ಡ್ ವಿಲ್ಸನ್ನರೊಡನೆ ಈ ಸಂಬಂಧದಲ್ಲಿ ಮಾತನಾಡಿದರು. ಮಾತುಕತೆಯು ಈಗಲೇ ಯಶಸ್ವಿಯಾಗುವುದೆಂದು ಹೇಳಲಾಗದಾದರೂ ಮುಂದಿನ ಮಾತುಕತೆಗಳಿಗೆ ಇದು ನಾಂದಿಯಾಗಬಹುದು.

ಅಮೆರಿಕೆ-ಫ್ರಾನ್ಸು-ರಶ್ಯಗಳಿಂದ ಈಗಾಗಲೇ ಶಸ್ತ್ರಾಸ್ತ್ರ ಪಡೆಯುವಲ್ಲಿ ಯಶಗಳಿಸಿದ ಪಾಕಿಸ್ತಾನ ಬ್ರಿಟನ್ನಿನಿಂದಲೂ ಸೈನಿಕೋಪಕರಣಗಳನ್ನು ಪಡೆದರೆ ಆಶ್ಚರ್ಯವಿಲ್ಲ. ಕೆಂಪು ಚೀನಾದಿಂದ ಈಗಾಗಲೇ ತಂತಿ ದಾಸ್ತಾನು ಮಾಡಿದ್ದಾಗಳು ಅವೆಷ್ಟೋ! ಇಂತಹ ಪಾಕಿಸ್ತಾನವು ಈಗ ನಡೆಸುತ್ತಿರುವುದು ಸಮರ ಸಿದ್ಧತೆಯೆಂಬುದು ಸ್ವಯಂವೇದ್ಯ. ಗಡಿಭಾಗದಲ್ಲಿ ತನಗುಂಟಾದ ಪರಾಜಯದೊಷಂತರ ಅದರ ಕಲಂಕವನ್ನು ತೊಳೆಯುವ ಪ್ರಯತ್ನ ಅಯ್ಯೂಬರದು. ಆದರೆ, ಭಾರತೀಯರು ಹೇಡಿಗಳಲ್ಲ; ಸ್ವದೇಶ ರಕ್ಷಣಾ ಕಾರ್ಯದಲ್ಲಿ ಅವರು ದುರಂಧರರು—ತಮ್ಮ ಸೈನಿಕ ಶಕ್ತಿಯನ್ನೂ ಬೆಳೆಸಿ ತಮ್ಮ ಕಾಲಮೇಲೆತಾವೇ ನಿಲ್ಲಲು ಅವರೆಂದೋ ಸಂಕಲ್ಪಿಸಿ ಕಾರ್ಯತತ್ಪರರಾಗಿದ್ದಾರೆ.

ಂ ಂ ಂ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಪೂರ್ವವಾಗಿ ಸುಂದ ಸುರಿಮಳೆಯು, ಬಂದ ಪ್ರವಾಹದ ಅನಾಹುತದ ಸಾಮಾನ್ಯ ವಿವರಗಳು ಈಗ ದೊರೆಯ ಹತ್ತಿವೆ. ಈ ಬಾರಿಯ ನೆರೆ ಜಿಲ್ಲೆಯ ದಕ್ಷಿಣ ಭಾಗಕ್ಕಿಂತ ಉತ್ತರ ಭಾಗದಲ್ಲೇ ಮಟ್ಟಿ ನಿಂತಿತ್ತು. ರಸ್ತೆಗಳ ಜರಿತ, ಪ್ರವಾಹದ ಭರಿತ, ಸಮುದ್ರದ ಕೊರೆತ ಮೊದಲಾದ ಪ್ರಕೃತಿ ವಿಕೋಪದಿಂದ ಇಡಿಯ ದಕ್ಷಿಣ ಕನ್ನಡದ ಜನ ತತ್ತರಿಸಿತು. ಘಾಟ ಮಾರ್ಗಗಳು ಸಂಚಾರಕ್ಕೆ ಅಯೋಗ್ಯವಾದುದರಿಂದ ಬೊಂಬಾಯಿಯೊಡನಿರುವ ಪೇರ ಸಂಪರ್ಕವೂ ತಪ್ಪಿಹೋಯ್ತು. ಜಿಲ್ಲೆಯ ಕೇಂದ್ರ ಮಂಗಳೂರಿನೊಡನೆಯೂ ಕೂಡ ಹಳ ನಗರಗಳೊಡನೆಯೂ ಒಂದು ದಿನ ಸಂಪರ್ಕವಿರಲಿಲ್ಲ.

ಸುಮಾರು ಹತ್ತು ದಿನಗಳ ಕಾಲ ಕಲೆದೋರಿದ ಈ ಪ್ರಕೃತಿಯ ಪ್ರಕೋಪದಿಂದ ಎಂಟು ಮನುಷ್ಯ ಜೀವಗಳಿಗೂ ೪೦ ಜಾನುವಾರುಗಳಿಗೂ ಪ್ರಾಣಾಪಾಯ ಸಂಭವಿಸಿದ ಅಧಿಕೃತ ವರದಿಗಳು ಬಂದಿವೆ. ಈ ಸಂಖ್ಯೆ ಇನ್ನೂ ತುಸು ಹೆಚ್ಚಾಗಲೂ ಬಹುದು. ಕುಂದಾಪುರ ಮತ್ತು ಉಡುಪಿ ತಾಲೂಕುಗಳಲ್ಲಿ ಪ್ರವಾಹದ ಪೀಡೆ ಮಿತಿ ಮೀರಿದೆ; ಮರವಂತೆಯಲ್ಲಿ ಸಮುದ್ರ ಕೊರೆತದಿಂದ ಭಯ—ಸಮುದ್ರಗಳು ಒಂದಾಗುವ ಸಾಧ್ಯತೆಯೂ ಇದೆ. ಬೇರೆ ಬೇರೆಡೆ ಒಟ್ಟು ೫೭೦೦ ಎಕ್ರೆ ಭತ್ತದ ಪೈರು ಹೊತ್ತ ಗದ್ದೆಗಳು ಪ್ರವಾಹದ ಭೀಕರತೆಗೆ ಮುಳುಗಿವೆ; ಇದರಲ್ಲಿ ಸುಮಾರು ಎರಡು ಸಾವಿರ ಎಕ್ರೆಗಳ ಪೈರು ಸಂಪೂರ್ಣ ಕೊಚ್ಚಿಹೋಗಿದೆ. ಪಣಂಬೂರು ಬಂದರ ಯೋಜನೆಗೆ ಅಪಾರ ನಷ್ಟ—ಹಾನಿ ಸಂಭವಿಸಿದೆ.

ಜಿಲ್ಲಾಧಿಕಾರಿ ಶ್ರೀ ನಾಗೇಗೌಡರು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಂಚರಿಸಿ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಸರಕಾರಕ್ಕೆ ವರದಿ ಮಾಡಿದ್ದಾರೆ. ಪರಿಹಾರ ಕಾರ್ಯವನ್ನು ಆರಂಭಿಸಿ, ಸರಕಾರದಿಂದ ಇನ್ನೂ ಹೆಚ್ಚಿನ ಸಹಾಯವನ್ನು ಬಯಸಿದ್ದಾರೆ. ರಾಜ್ಯ ಸರಕಾರವು ಎರಡು ಲಕ್ಷ ರೂಪಾಯಿಗಳನ್ನೂ ೧,೦೦೦ ಕ್ವಿಂಟಲ್ ಅಕ್ಕಿ ೫,೪೦೦ ಕ್ವಿಂಟಾಲ್ ವಿಲೋಕಗಳನ್ನು ಒದಗಿಸಿದೆ. ಅವಶ್ಯ ವಿದ್ದಲ್ಲಿ ಇನ್ನೂ ಹೆಚ್ಚಿನ ಸಹಾಯವೊದಗಿಸಲು ಸರಕಾರ ಸಿದ್ಧವಿದೆ. ಪೀಡಿತರ ಪುನರ್ವಸತಿ ಕಾರ್ಯದಲ್ಲಿ ಸರಕಾರಿ ಅಧಿಕಾರಿಗಳೊಡನೆ ಸ್ವಯಂಸೇವಕರೂ ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗಿದ್ದಾರೆ.

ಬಹುಕಾಲದಿಂದ ತೋರದೆ ಇದ್ದ ಈ ಪ್ರಕೃತಿಯ ಕೋಪವೀಗ ಶಾಂತವಾಗುತ್ತ ಬರುತ್ತಿದೆ—ಒಮ್ಮೆಗೆ ಜನ ಸಮಾಧಾನದ ಬಿಸಿ ಉಸಿರು ಬಿಡುವಂತಾಗಿದೆ. ಮೂರು ವಾರಗಳ ಘೋರತರ ಜಡಿಮಳೆಯಿಂದ ನೊಂದ ಜನರಲ್ಲಿ ಹೊಸ ಉತ್ಸಾಹ ಮೂಡತೊಡಗಿದೆ.

ಪುತ್ತೂರಿನ ಲ್ಯಾಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

Rent Petition 52/67

ರಾಮಕೃಷ್ಣ ಭಟ್ ... ಅರ್ಜಿದಾರ

ಮತ್ತು

ಉಗ್ಗಪ್ಪ ರೈ ಕೂಡಾ— ಎದ್ರಿರು

೩ನೇ ಎದ್ರಿ ಹುಕ್ರಪ್ಪ ರೈಗಳಿಗೆ ತ್ಯಾಂಪಣ್ಣರೈಗಳಮಗ, C/o ಬೇಂಕು ಸುಲೇಮಾನ್ ಬಸ್ಟಿಯ ತೋಟ, ಉಪ್ಪಳ ಎಂಬಲ್ಲಿ—

ನಿಮ್ಮಿಂದ ಅರ್ಜಿದಾರರಿಗೆ 1966-66ನೇ ವರ್ಷದ ಬಾಬ್ತು ಬರಬೇಕಾದ ಗೇಣಿ ವಸೂಲು ಮಾಡುವರೆ ಮೈಸೂರು ಭೂಮಸೂದೆಯ ಕಾನೂನು ಮೇರೆಗೆ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಮಾಡಿರುತ್ತಿದ್ದುದು ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳಿದ್ದಲ್ಲಿ ತಿಳಿಸುವರೆ ತಾ. 8—8—68ಕ್ಕೆ ವ್ಯಾಜ್ಯ ಇರುತ್ತದೆ. ಆದ್ದರಿಂದ ನೀವು ಆ ದಿವಸ ಬೆಳಗ್ಗೆ 11ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾತಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ತಿರ್ಪಾಯಾಗಿ ಮಾಡಿ ಅರ್ಜಿಯನ್ನು ತೀರ್ಮಾನಿಸಲಾದೀತು ಎಂತ ಈ ಮೂಲಕ ನಿಮಗೆ ತಿಳಿಯ ಪಡಿಸಲಾಗಿದೆ.

(By order of the Tribunal)

Sd/ K. T. Bhat

Advocate for Plff.

Puttur, 11-7-68

ನಿಮ್ಮ ಹೊಲದಲ್ಲಿ ನಮ್ಮ ಕೃಷಿತಜ್ಞರು

ಹೊಲದ ಉತ್ಪನ್ನ ಹೆಚ್ಚಿಸಲು, ಸಿಂಡಿಕೇಟ್ ಬ್ಯಾಂಕು ತನ್ನ ಕೃಷಿಕ ಗ್ರಾಹಕರಿಗೆ ಎಲ್ಲಾ ಕೆರವ ಸೌಲಭ್ಯ ಮತ್ತು ನೆರವನ್ನು ನೀಡುತ್ತದೆ. ಆರ್ಥಿಕ ನೆರವಿನ ಜತೆಗೆ ಬ್ಯಾಂಕಿನ ಹೊಲದ ಪ್ರತಿನಿಧಿಗಳ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ಕೃಷಿಕ ಗ್ರಾಹಕರ ಪಾಲಿಗೆ ಸದಾ ಲಭ್ಯ.

ಬ್ಯಾಂಕಿನ ಹೊಲದ ಪ್ರತಿನಿಧಿಗಳು ಕೃಷಿರಂಗದಲ್ಲಿ ತಜ್ಞರಾಗಿದ್ದು ಅವರು ಬ್ಯಾಂಕಿನ ಕೃಷಿಕ ಗ್ರಾಹಕರ ಹೊಲಗಳನ್ನು ಆಗಾಗ್ಗೆ ಸಂದರ್ಶಿಸಿ, ಅವರ ಅವಶ್ಯಕತೆಗಳನ್ನು ಅರಿತು, ಅವರಿಗೆ ಇದಿರಾಗುವ ಕೃಷಿ ವಿಷಯಕ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅವರಿಗೆ ಸೂಕ್ತ ಸಲಹೆಯನ್ನೂ ಯೋಗ್ಯ ಮಾರ್ಗದರ್ಶನವನ್ನೂ ನೀಡುತ್ತಾರೆ.

ಸಿಂಡಿಕೇಟಿನ ಕೃಷಿತಜ್ಞ ಪ್ರತಿನಿಧಿಗಳ ಪಾಲಿಗೆ
ಬ್ಯಾಂಕಿನ ಗ್ರಾಹಕರ ಹೊಲವೇ
ಕಾರ್ಯಾಲಯವಾಗಿದೆ.

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು:	ಶಾಖೆಗಳು:	ಟಿ. ಎ. ಪೈ,
ರೂ. 100 ಕೋಟಿಗೂ ಮಿಕ್ಕಿ.	230ಕ್ಕೂ ಮಿಕ್ಕಿ.	ಚೆಯರ್‌ಮೇನ್

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 73/1968

ಎ. ಲಕ್ಷ್ಮೀನಾರಾಯಣ ರಾವ್ ... ವಾದಿ

ಮತ್ತು

ಪಿ. ರಾಘವೇಂದ್ರ ತಂತ್ರಿ— ಪ್ರತಿವಾದಿ

ಉತ್ತರ ಕನ್ನಡ ಜಿಲ್ಲಾ ಕಿರಿಯ ಮೊನ್ಸಿಫ್ ಭವನದಲ್ಲಿರುವ ಪಂಡಾರಿ ರಾಮ ತಂತ್ರಿಯ ಮಗ, ನಿವೃತ್ತ ಮಾಡಿಗಾರ ಪಿ. ರಾಘವೇಂದ್ರ ತಂತ್ರಿ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:

ಪ್ಲೆಂಟು ನಿವೃತ್ತಿ ಕೇಳಿ ವಾದಿಯು ಮಾಡಿದ ಮೇಲಿನ ವ್ಯಾಜ್ಯ ನಿಮ್ಮ ಹಾಜರಾತಿ ಬಗ್ಗೆ ತಾರೀಖು. 16-8-1968ಕ್ಕೆ ಇಟ್ಟಿದೆ. ಆ ಕಾರಣ ನಿಮ್ಮ ಆಕ್ಷೇಪಣೆಗಳಿದ್ದರೆ ಮೇಲಿನ ದಿವಸ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಞಾಪಿಸಲು ಮಾಡತಕ್ಕದ್ದು.

(ಕೋರ್ಟು ಹುಕುಂ ಸ್ವಕಾರ)

P. N. Krishnamoorthy Rao

Advocate for Petitioner

Udipi, 24—7—1968



ವಿಚಾರವರ್ಷ

ಜೈನ ದರ್ಶನ

ಲೇಖಕರು: ಶ್ರೀ ಭುವನಹಳ್ಳಿ ಡಿ. ಪದ್ಮನಾಭ ಶರ್ಮ

ಭಾರತೀಯ ಪರಂಪರೆಯಲ್ಲಿ ಮುಖ್ಯವಾಗಿ ಎರಡು ಸಂಸ್ಕೃತಿಗಳನ್ನು ಕಾಣಬಹುದು. ಒಂದು ವೈದಿಕ ಸಂಸ್ಕೃತಿ. ಮತ್ತೊಂದು ಶ್ರಮಣ ಸಂಸ್ಕೃತಿ, ವೈದಿಕ ಸಂಸ್ಕೃತಿಯು ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಇವೇ ಮೊದಲಾಗಿ ವಿಭಕ್ತವಾಗಿದ್ದರೆ, ಶ್ರಮಣ ಸಂಸ್ಕೃತಿಯು ಜೈನ ಮತ್ತು ಬೌದ್ಧ ಎಂದುದಾಗಿ ಎರಡು ಬಗೆಯಾಗಿದೆ. ಈ ಸಂಸ್ಕೃತಿಗಳ ಸ್ವರೂಪವನ್ನು ಸಮಗ್ರವಾಗಿ ತಿಳಿಸುವ ಆಧ್ಯಾತ್ಮಿಕ ತತ್ವಜ್ಞಾನವೇ ದರ್ಶನವೆನಿಸುವುದು.

ದೇವಶಾಸ್ತ್ರ ಗುರೂಣಾಂಃ, ಯತ್ರ
ನಿಶ್ಚಯಃಂ ಭವೇತ್ ।
ಅಥವಾ ತತ್ವ ಶ್ರದ್ಧಾನಂ, ತದ್ಧಿ
ದರ್ಶನ ಮುಚ್ಯತೇ ||

ಎಂಬಂತೆ ದೇವ, ಶಾಸ್ತ್ರ ಮತ್ತು ಗುರುಗಳ ಶುದ್ಧವಾದ ಸ್ವರೂಪವನ್ನು ನಿಶ್ಚಯ ಜ್ಞಾನದಿಂದ ನಂಬುವುದೇ ದರ್ಶನವೆನಿಸುವುದು. ಅಧ್ಯಾತ್ಮ ಮೂಲವಾದ ಈ ದರ್ಶನದ ಪ್ರತಿಪಾದನೆ, ಭಾರತೀಯ ಪರಂಪರೆಯ ಒಂದು ವೈಶಿಷ್ಟ್ಯ. ಭಾರತೀಯರಲ್ಲಿ ಈ ದರ್ಶನ ಭಾವವು ಪ್ರಾಚೀನ ಕಾಲದಿಂದಲೂ ರಕ್ತಗತವಾಗಿ ಬಂದು, ದೊಡ್ಡ ದೊಡ್ಡ ದರ್ಶನ ಶಾಸ್ತ್ರ ಗ್ರಂಥಗಳು ಹುಟ್ಟಲು ಅವಕಾಶವಾಗಿದೆ. ಈ ಬಗೆಯ ಪ್ರಾಚೀನ ದರ್ಶನಗಳಲ್ಲಿ ಜೈನದರ್ಶನವೂ ಒಂದು.

ಸಾವಿರಾರು ವರ್ಷಗಳಿಂದ ಜಗತ್ತಿಗೆ ಆಧ್ಯಾತ್ಮಿಕ ಸಂಪತ್ತನ್ನು ಎರೆದು, ಧಾರ್ಮಿಕ ಹೃದಯಗಳನ್ನು ತಣಿಸುತ್ತಾ ಬಂದಿರುವ ಜೈನದರ್ಶನದ ವಿಚಾರವನ್ನು ಕೆಲವೇ ಪುಟಗಳಲ್ಲಿ ಹೇಳಿ ಮುಗಿಸುವುದು ಅಸಾಧ್ಯ. ಇದರ ಪ್ರತಿಪಾದಕ ಆಚಾರ್ಯರಾದ ಭೂತ ಬಲಿ, ಪುಷ್ಪದಂತಾಚಾರ್ಯ ಪೂಜ್ಯಪಾದರು, ಸಮಂತಭದ್ರರು, ಭಗವಜ್ಜಿನ ಸೇನಾಚಾರ್ಯರು ಮೊದಲಾದವರ ಕೃತಿಗಳಾದ ಷಟ್ಖಂಡಾಗಮ, ಇಷ್ಟೋಪದೇಶ, ರತ್ನಕರಂಡಕ, ಶ್ರಾವಕಾಚಾರ, ತ್ರಿಷಷ್ಟಿ ಶಲಾಕಾ ಪುರುಷ ಚರಿತೆ ಮೊದಲಾದ ಗ್ರಂಥಗಳ ಅಧ್ಯಯನದಿಂದ ತಿಳಿಯಬಹುದು.

ಜೈನದರ್ಶನಕ್ಕೆ ಅಡಿಗಲ್ಲು ಅಹಿಂಸೆ. ಉಳಿದ ಎಲ್ಲಾ ತತ್ವಗಳೂ ಈ ಅಹಿಂಸೆಗೆ ಪೋಷಕವಾಗಿ ಬರುತ್ತವೆ. ಇಲ್ಲಿನ ಅಹಿಂಸೆ ಸೂಕ್ಷ್ಮಾತಿ ಸೂಕ್ಷ್ಮವಾದ ಕ್ರಿಮಿಕೀಟಗಳನ್ನು ಸಹ ಹಿಂಸಿಸಬಾರದು ಎನ್ನುವಷ್ಟು ದೂರ ಸಾಗಿದೆ. ಮನುಷ್ಯನಿಂದ ಹಿಡಿದು ಸಕಲ ಜೀವ ರಾಶಿಗಳಲ್ಲಿರುವ ಆತ್ಮನ ಸ್ವರೂಪ ಒಂದೇ ತೆರನಾದುದು. ಕರ್ಮಗಳಿಗೆ ಅನುಸಾರ ಬೇರೆ ಬೇರೆ ಯೋನಿಗಳಲ್ಲಿ ಶರೀರವು ಲಭ್ಯವಾಗಿದೆ. ಆದುದರಿಂದ ಯಾವುದೇ ಜೀವಿಯನ್ನು ಕೊಂದರೂ ಬರುವ ಪಾಪಕರ್ಮದಲ್ಲಿ ವ್ಯತ್ಯಾಸವಿರುವುದಿಲ್ಲ. ಈ ಕಾರಣದಿಂದಲೇ ಯಾವ ಪ್ರಾಣಿಯನ್ನೂ ಹಿಂಸಿಸಬಾರದು.

ಈ ಅಹಿಂಸಾ ದರ್ಶನವನ್ನು ಮೊತ್ತ ಮೊದಲು ಪ್ರತಿಪಾದಿಸಿದವರು ಯಾರು? "ಜಿನ", "ಜಿನ" ಎಂದರೆ "ಜಯತೀತಿ ಜಿನಃ" ಎಂಬಂತೆ ಗೆದ್ದವನು ಎಂದರ್ಥ. ಏನನ್ನು ಗೆದ್ದವನು?

ಜಿತಮದಹರ್ಷ ದ್ವೇಷಾ, ಜಿತಮೋ
ಹ ಪರೀಷ್ಹಕ ಜಿತ ಕಷಾಯಾಃ|
ಜಿತ ಜನ್ಮಮರಣ, ರೋಗಾಜಿತ,
ಮಾಸ್ಸರ್ಯಾ ಜಯಂತು ಜಿನಾಃ||

ಮದ, ಹರ್ಷ, ದ್ವೇಷ, ಮೋಹ, ರಾಗ ಮೊದಲಾದ ಮಾನವ ಸಹಜವಾದ ಎಲ್ಲಾ ಭಾವಗಳನ್ನೂ ಗೆದ್ದು, ಅಮರನಾದವನೇ "ಜಿನಃ". ಅದರಿಂದ ಪ್ರತಿಪಾದಿತವಾದುದೇ ಜೈನದರ್ಶನ. ಜ್ಞಾನಮಯವಾದ ಈ ದರ್ಶನ ಆತ್ಮಾನುಷ್ಠಾನರೂಪಕ್ಕೆ ತಿರುಗಿದಾಗ ಧರ್ಮವಾಗುತ್ತದೆ. ಆಗ ಜೈನ ದರ್ಶನ ಜೈನಧರ್ಮವೆನಿಸುತ್ತದೆ. ಅಹಿಂಸಾಜ್ಯೋತಿಯಿಂದ ಹೊರ ಹೊಮ್ಮುವ ಕಿರಣಗಳೂ ಅಹಿಂಸಾಮಯವೇ ಆಗಿರುವುದು ಸ್ವಾಭಾವಿಕವೇ.

ಜೈನದರ್ಶನವು ಪ್ರಧಾನವಾಗಿ ಎರಡು ಬಗೆಯಾಗುತ್ತದೆ. ಒಂದು ತತ್ವಾತ್ಮಕ. ಮತ್ತೊಂದು ವ್ರತಾತ್ಮಕ. ತತ್ವಾತ್ಮಕದಲ್ಲಿ ರತ್ನತ್ರಯವೇ ಮುಖ್ಯವಾದುದು. 'ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗಃ' ಎಂಬಂತೆ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ಚಾರಿತ್ರ ಇವೇ ರತ್ನತ್ರಯ. ಇದರಲ್ಲಿ ದರ್ಶನ, ಜ್ಞಾನ ಚಾರಿತ್ರ—ಎಂಬ ಮೂರು ಶಬ್ದಗಳಿವೆ. ಇವು 'ಸಮ್ಯಕ್' ವಿಶೇಷಣದಿಂದ ಕೂಡಿ ಜೈನದರ್ಶನದ ಪಾರಿಭಾಷಿಕ ಶಬ್ದಗಳಾಗಿ ಪರಿಣಮಿಸಿವೆ.

ಯಾವ ಸಂದೇಹವೂ ಇಲ್ಲದೆ ಅಪ್ತರ ವಚನವನ್ನು ನಂಬುವುದೇ ಸಮ್ಯಗ್ದರ್ಶನ. ನಂಬಿಕೆಯ ಮೇಲೆ ಶುದ್ಧ ವ್ಯವಹಾರ ಸಾಧ್ಯ. ಆದ್ದರಿಂದ ಗುರುಗಳೂ, ಹಿತಚಿಂತಕರೂ, ಹೇಳುವ ಮಾತಿನಲ್ಲಿ ಮೊದಲು ನಂಬಿಕೆಯಿರಬೇಕು. ಇದು ಸಮ್ಯಗ್ದರ್ಶನದ ಉದ್ದೇಶ.

ಎರಡನೆಯದು ಸಮ್ಯಕ್‌ಜ್ಞಾನ. ಆಪ್ತರು ಹೇಳಿದ ವಿಚಾರವನ್ನು ನಿರ್ದಿಷ್ಟವಾಗಿ ಹಾಗೂ ಸುಸ್ಪಷ್ಟವಾಗಿ ತಿಳಿಯುವುದು. ವಿಚಾರವನ್ನು ಸ್ಪಷ್ಟವಾಗಿ ತಿಳಿಯುವುದರಿಂದ ಅನಾವಶ್ಯಕವಾದ ಸಂಶಯಕ್ಕೆ ಆಸ್ಪದವಿರುವುದಿಲ್ಲ. ಇದೇ ಸಮ್ಯಕ್‌ಜ್ಞಾನದ ಉದ್ದೇಶ.

ಮೂರನೆಯದು ಸಮ್ಯಕ್ಚಾರಿತ್ರ. ತಿಳಿದ ವಿಚಾರವನ್ನು ಅನುಷ್ಠಾನಕ್ಕೆ ತರದೆ ಕೇವಲ ಸಾರ್ಥಕತೆಯೇನು? ಆದ್ದರಿಂದ ಹಿತಚಿಂತಕರು ತಿಳಿಸಿದ ಒಳ್ಳೆಯ ನಡೆವಳಿಕೆಗಳನ್ನು ಜೀವನದಲ್ಲಿ ಆಚರಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಬೇಕು. ಆಗ ನಂಬಿಕೆ ಮತ್ತು ತಿಳುವಳಿಕೆಗಳ ಫಲ ಪರಿಪೂರ್ಣವಾಗುತ್ತದೆ. ಆಚರಣೆಯಿಲ್ಲದ ನಂಬಿಕೆ ಮತ್ತು ತಿಳುವಳಿಕೆಗಳಾಗಲೀ, ತಿಳುವಳಿಕೆಯಿಲ್ಲದ ನಂಬಿಕೆ ಮತ್ತು ಆಚರಣೆಗಳಾಗಲೀ, ನಂಬಿಕೆಯಿಲ್ಲದ ತಿಳುವಳಿಕೆ ಮತ್ತು ಆಚರಣೆಗಳಾಗಲೀ ಪರಿಪೂರ್ಣವಲ್ಲ. ಸಾರ್ಥಕತೆಯಿಲ್ಲ. ಹೀಗೆ ನಂಬಿಕೆಯ ಮೂಲವಾದ ಸಮ್ಯಗ್ದರ್ಶನ, ತಿಳುವಳಿಕೆ ಮೂಲವಾದ ಸಮ್ಯಕ್‌ಜ್ಞಾನ, ಮತ್ತು ಆಚರಣೆಯ ಮೂಲವಾದ ಸಮ್ಯಕ್ಚಾರಿತ್ರ—ಇವುಅವಿನಾಭಾವೀ ಸಂಬಂಧವುಳ್ಳವು.

ವ್ರತಗಳು ಜೈನದರ್ಶನದ ಮತ್ತೊಂದು ಮುಖ. ದೃಢ ಸಂಕಲ್ಪದಿಂದ ನಿಯಮಗಳನ್ನು ಆಚರಿಸುವುದೇ ವ್ರತಗಳ ಅರ್ಥ. "ಹಿಂಸಾನೃತಸ್ತೇಯಾಬ್ರಹ್ಮ ಪರಿಗ್ರಹೇ ಭ್ಯೋವಿರತಿರ್ವ್ರತಂ" ಎಂಬಂತೆ ಹಿಂಸೆ, ಅಸತ್ಯ, ಸ್ತೇಯ, ಅಬ್ರಹ್ಮ, ಪರಿಗ್ರಹ—ಇವು ಪಂಚ ಮಹಾಪಾತಕಗಳು. ಇವುಗಳನ್ನು ದೂರಮಾಡಲು, ಅಚೌರ್ಯ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ—ಇವು ಪಂಚವ್ರತಗಳು. ಇವುಗಳನ್ನೂ ರತ್ನತ್ರಯದ ಹಿನ್ನೆಲೆಯಿಂದಲೇ ಆಚರಿಸಬೇಕು. ಇವುಗಳ ಆಚರಣೆಯಲ್ಲಾ ಅಹಿಂಸೆಯೇ ಆಧಾರ. ಸತ್ಯ, ಅಸ್ತೇಯ; ಬ್ರಹ್ಮಚರ್ಯ, ಪರಿಗ್ರಹ— ಈ ವ್ರತಗಳು ಸಹ ಅಹಿಂಸೆಯ ಪುಷ್ಟಿಗಾಗಿಯೇ ಇವೆ.

ಎಲ್ಲಾ ಜೀವಿಗಳೂ ಸುಖವನ್ನು ಪ್ರೀತಿಸುತ್ತವೆ. ದುಃಖವನ್ನು ದ್ವೇಷಿಸುತ್ತವೆ. ಆದುದರಿಂದ ಯಾವ ಜೀವಿಯನ್ನೂ ಹಿಂಸಿಸದಿರುವುದೇ ಅಹಿಂಸೆ. ಸುಳ್ಳುಹೇಳದಿರುವುದು, ದ್ರೋಹಮಾಡದಿರುವುದು, ವಂಚನೆಯಿಲ್ಲದ ವ್ಯವಹಾರ—ಇವೆಲ್ಲಾ ಸತ್ಯವ್ರತದ ಉದ್ದೇಶ. ಕಳ್ಳತನ ಮಾಡದಿರುವುದು, ಬಲವಂತದಿಂದ ಅನ್ಯರ ವಸ್ತುಗಳನ್ನು ವಶಪಡಿಸಿಕೊಳ್ಳದಿರುವುದು—ಇವು ಅಸ್ತೇಯದ ಉದ್ದೇಶ. ಇದರ ಮತ್ತೊಂದು ಹೆಸರು ಅಚೌರ್ಯ.

ಪುರುಷರು ಸ್ತ್ರೀಯರ ವಿಚಾರದಲ್ಲೂ ಸ್ತ್ರೀಯರು ಪುರುಷರ ವಿಚಾರದಲ್ಲೂ ಸದ್ಭಾವನೆಯಿಂದಿರುವುದು ಬ್ರಹ್ಮಚರ್ಯ. ಏಕಪತ್ನೀವ್ರತವು ಈ ಬ್ರಹ್ಮಚರ್ಯಯ ಅಂಗ. ಅದನ್ನು ಜೈನ ಭಾಷೆಯಲ್ಲಿ "ಸ್ವದಾರಸಂತೋಷೀ ವ್ರತ" ಎನ್ನುತ್ತಾರೆ. ಮಿತಿಯಿಂದ ಮತ್ತು ಅನೀತಿಯ ಕಾಮವಿಕಾರಗಳನ್ನು ನಿಗ್ರಹಿಸುವುದೇ ಈ ವ್ರತದ ಉದ್ದೇಶ.

ಐದನೆಯದು ಅಪರಿಗ್ರಹ. ಪ್ರತಿ ವ್ಯಕ್ತಿಯೂ ತನ್ನ ಜೀವನಕ್ಕೆ ಅಗತ್ಯವಾದಷ್ಟನ್ನು ಮಾತ್ರವೇ ಇಟ್ಟುಕೊಳ್ಳಬೇಕು. ಸಂಗ್ರಹ ಬುದ್ಧಿಯನ್ನು ಬಿಡುವುದೇ ಇದರ ಉದ್ದೇಶ. ಲಾಭದ ದುರಾಶೆಯಿಂದ ಮಿತಿಮೀರಿ ಸಂಗ್ರಹ ಮಾಡಿದರೆ, ಅವಶ್ಯ ವಸ್ತುಗಳ ಅಭಾವದಿಂದ ದೇಶದಲ್ಲಿ ಕ್ಷೋಭೆಯಾಗುವುದನ್ನು ತಪ್ಪಿಸುವುದರಿಂದ "ಅ

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಟ್ಟಿನ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಷನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore-2

ಪಾಂಚಾಂ ವ್ರತವು ಬಹುಮುಖ್ಯಸಾಧನ ಯಾಗಿದೆ.

ಈ ಐದು ವ್ರತಗಳೂ ಮನುಷ್ಯರು ಪೂರ್ಣ ರೂಪದಲ್ಲಿ ಆಚರಿಸುವಾಗ ಮಹಾವ್ರತಗಳಾಗುತ್ತವೆ. ಗೃಹಸ್ಥರು ಅಂಶಿಕ ರೂಪದಲ್ಲಿ ಆಚರಿಸುವಾಗ ಅಣುವ್ರತಗಳಾಗುತ್ತವೆ. ಅಣುವ್ರತಿಗಳು ಸಾಂಸಾರಿಕ ಪರಿಸ್ಥಿತಿಗಳಿಂದ ಅನೇಕ ವೇಳೆ ಧರ್ಮಕ್ಕೆ ವಿರೋಧವಾದ ಕೆಲಸವನ್ನು ಮಾಡುವುದು ಅನಿವಾರ್ಯವಾಗುತ್ತದೆ. ಆದುದರಿಂದ ಪ್ರತಿ ಗೃಹಸ್ಥನೂ ಆತ್ಮಧ್ಯಾನವನ್ನು ಮಾಡಿ, ದೇವರ ಪೂಜೆ ಮೊದಲಾದುವನ್ನು ಮಾಡಿ, ಪಶ್ಚಾತ್ತಾಪಪಟ್ಟು ಕ್ಷಮೆ ಕೇಳುವುದು—

ಲಜ್ಜಾನ ಜ್ಞಾನಕೋ ವಾಪಿ, ಯ-
ತ್ಕರ್ಮ ಚಾತಂ ಮಯಾ ।
ತತ್ಸರ್ವ ಪೂರ್ಣಮೇವಾಸ್ತು,
ಜಿನೇಂದ್ರತ್ವಪ್ರಸಾದತಃ ॥

ತಿಳಿದೋ, ತಿಳಿಯದೆಯೋ ನನ್ನಿಂದ ಆಗಿರುವ ತಪ್ಪುಗಳು, ನನ್ನ ದಯೆಯಿಂದ ಕ್ಷಮಿಸಲ್ಪಡಲಿ, ಎಂದು ಜಿನಭಗವಾನರನ್ನು ಕ್ಷಮೆ ಯಾಚಿಸುವುದು. ಕ್ಷಮಾಯಾಚನೆ ಜೈನದರ್ಶನದಲ್ಲಿನ ಬಹು ಮುಖ್ಯವಾದ ಆಚರಣೆ. ಕ್ಷಮೆಯಿಂದ ದ್ವೇಷವು ಬಲಿಯಲು ಅವಕಾಶವಿಲ್ಲ. ಇದನ್ನು ಶ್ವೇತಾಂಬರ ಜೈನ "ಸಂವತ್ಸರಣಪರ್ವ"ವನ್ನು ಆಚರಿಸುವಾಗಲೂ, ದಿಗಂಬರ ಜೈನರು "ದಶಲಕ್ಷಣ ಧರ್ಮಪರ್ವ"ವನ್ನು ಆಚರಿಸುವಾಗಲೂ, ಕೊನೆಯದಿನ "ಖಮತ ಖಾಮಣಾ" ಎಂಬ ಪಾರಿಭಾಷಿಕ ಶಬ್ದದಿಂದ ಆಚರಿಸುತ್ತಾರೆ. ಪ್ರತಿದಿನ ಸಕಲ ಜೀವರಾಶಿಗಳನ್ನೂ "ಕ್ಷಮೆ," ಕೇಳಬೇಕು ಎಂಬುದೇ ಅದರ ಉದ್ದೇಶ. ಇದನ್ನು ಪ್ರತಿವಾದಿಸತಕ್ಕ ಜೈನ ದರ್ಶನದ ಒಂದು ಶ್ಲೋಕ ಇದು:—

ಖಾಮೇಮಿ ಸರ್ವಜೀವಾನ್, ಸರ್ವೇ
ಜೀವಾ ಸರ್ವಜೀವಾ ಖಮಂತುಮೇ।
ಮಿತ್ತೀಮೇ ಸರ್ವಭೂತೇಷು ವೇರಂ
ನ ಮಜ್ಝಂಣಕೇಣ ಇ ॥

"ನಾನು ಎಲ್ಲ ಜೀವಿಗಳನ್ನೂ ಕ್ಷಮೆಕೇಳುತ್ತೇನೆ. ಎಲ್ಲ ಜೀವಿಗಳೂ ಕೃಪೆಯಿಂದ ಕ್ಷಮಿಸಲಿ. ಎಲ್ಲ ಜೀವಿಗಳ ವಿಚಾರದಲ್ಲಿ ಎನ್ನಲ್ಲಿ ಪ್ರೀತಿಯಿದೆ. ನಾನು ಯಾರನ್ನೂ ಶತ್ರುವೆಂದು ಬಗೆಯುವುದಿಲ್ಲ." ಸಶ್ಚಾತ್ತಾಪಪಟ್ಟು ಕ್ಷಮೆ ಕೇಳುವುದು ಪ್ರಾಯಶ್ಚಿತ್ತದ ಒಂದು ಪದ್ಧತಿ. ಇದನ್ನು ಜೈನ ಪರಿಭಾಷೆಯಲ್ಲಿ 'ಪ್ರತಿಕ್ರಮಣ' ಎಂದು ಹೇಳುತ್ತಾರೆ. ಇದೇ ರೀತಿ ಪ್ರತಿಲೇಖನ, ಈರ್ಯಾಪಥ ಶುದ್ಧಿ ದಿಗ್ವ್ರತ ಮೊದಲಾದ ಹಲವಾರು ಆಚರಣೆಗಳು ಜೈನದರ್ಶನದ ಮಹೋನ್ನತ ತತ್ವಗಳಾಗಿವೆ. ಆತ್ಮಶುದ್ಧಿಗೆ ಸಾಧನವಾಗಿವೆ. ಅನೇಕಾಂತ ದೃಷ್ಟಿಯಿಂದ ನೋಡುವ ಸಪ್ತರಂಗಿ ಪೂರ್ವಕವಾದ ಸ್ಯಾದ್ವಾದ ಸಹಿ ಜೈನದರ್ಶನದ ಅಪೂರ್ವ ವೈಶಿಷ್ಟ್ಯ.

ಕೊನೆಯದಾಗಿ ಜೈನದರ್ಶನದ ತಿರುಳು ಎನ್ನಬಹುದಾದ ಅಮೃತ ಗತ್ಯಾಚಾರ್ಯರ ಸಾಮೂಹಿಕ ಪ್ರಾರ್ಥನೆಯಲ್ಲಿನ ಈ ಶ್ಲೋಕದೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ.

ಸರ್ವೇಷು ಮೈತ್ರೀಂ ಗುಣಿಷು
ಪ್ರಮೋದಂ ।
ಕ್ಲಿಷ್ಟೇಷು ಜೀವೇಷು ಕೃಪಾ-
ಪರತ್ವಂ ॥

ಮಾಧ್ಯಸ್ಥಭಾವಂ ವಿಪರೀತ ವೃತ್ತೌ ।
ಸದಾ ಮಮಾತ್ಮಾ ವಿದಧಾತು ದೇವ ॥

ಸಮಸ್ತಪ್ರಾಣಿಗಳಲ್ಲಿ ಪ್ರೀತಿಯನ್ನೂ, ಸಜ್ಜನರ ಸದ್ಗುಣಗಳಲ್ಲಿ ಸಂತೋಷವನ್ನೂ, ಕಷ್ಟದಲ್ಲಿರುವ ಜೀವಿಗಳಲ್ಲಿ ದಯೆಯನ್ನೂ, ದುರ್ಜನರಲ್ಲಿ ಸ್ನೇಹವನ್ನೂ, ದ್ವೇಷವೂ ಇಲ್ಲದ ಮಾಧ್ಯಸ್ಥಭಾವವನ್ನೂ ಇಡುವ ಬುದ್ಧಿಯನ್ನು ಭಗವಾನ್ ಜಿನೇಂದ್ರರು ನಿರಂತರ ನನಗೆ ದಯಪಾಲಿಸಲಿ.

(ಆಕಾಶವಾಣಿಯ ಕೃಪೆಯಿಂದ)

ಮನುಷ್ಯ ಸಂಪರ್ಕ

ಮಿತ್ರತ್ವದ ಮೂಲ-ವಿಚಾರ ಸಾಮ್ಯ

ಬರೆದವರು: ಶ್ರೀ ಬಿ. ನರಸಿಂಗರಾವ್

ಮಾನವನು ಸಮಾಜ ಜೀವಿ. ಸದಾ ಮನುಷ್ಯರು ಒಬ್ಬರೊಡನೆನ್ನೊಬ್ಬರು ಬೆರೆತು, ಪರಸ್ಪರ ವಿಚಾರವಿನಿಮಯ ನಡೆಸಿ, ಸಹಾಯ ಸಹಕಾರದಿಂದೊಡಗೂಡಿ ಬಾಳುತ್ತಾರೆ. ಏಕಾಕಿಯಾಗಿ ಸನ್ಯಾಸಿಯಂತೆ, ಕಾಡಿನಲ್ಲಿ ಬಾಳುವುದು ಇಂದು ಪುರಾಣಕತೆಯೇ ಆಗಿದೆ.

ದಿನಪೂರಾವು ಪ್ರತಿಯೊಬ್ಬರೂ ಇತರರ ಸಂಪರ್ಕ ಪಡೆಯುತ್ತೇವೆ. ಸಂಪರ್ಕವೆಂದರೆ ಅನುಭವಕ್ಕೆ ಇನ್ನೊಂದು ಹೆಸರು. ಸಂಪರ್ಕದಿಂದ ಮೈತ್ರಿಯುಂಟಾಗಿ, ಮೈತ್ರಿಯಿಂದ ವಿಚಾರದ ಅದಲು-ಬದಲು ಆಗುತ್ತದೆ. ಆದುದರಿಂದ ಮನುಷ್ಯ ಸಂಪರ್ಕವು ಸಮಾಜದ ರೂಪೀಕರಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಮನುಷ್ಯನ ಸ್ವಭಾವವು ಆತನು ಸಂಪರ್ಕಕ್ಕೆ ಬಂದ ವ್ಯಕ್ತಿ—ವಾತಾವರಣಕ್ಕೆ ಅನುಸರಿಸಿ ಬದಲಾಗುತ್ತದೆ; ಹೊಂದಿಕೊಳ್ಳುತ್ತದೆ. ಉದಾಹರಣೆಗಾಗಿ ಗಾಂಧೀಜಿಯವರ ವಿಚಾರವನ್ನೆ ತೆಗೆಯೋಣ. ಅವರು ಮಹಾತ್ಮರು, ದೈವಭಕ್ತರು. ಅಂತಾದ್ದಾಗ ಅವರ ಆದರ್ಶ, ಸದ್ಗುಣಗಳು ಸಂಪರ್ಕ ಪಡೆದವರಲ್ಲೂ ನೊಳೆಯುತ್ತವೆ. ಅಂತಲೇ ಮಹಾತ್ಮಾಜೀಯವರ ಆದರ್ಶಗಳನ್ನು ಪಾಲಿಸುವವರು ಅವರ 'ಮಾನಸಪುತ್ರ'ರೆನಿಸಿ ಗಾಂಧೀಜಿಯವರನ್ನು ಅಮರರಾಗಿಸಿದ್ದಾರೆ.

ಅಂತೆಯೇ ಓರ್ವ ಕುಡುಕನ ಉದಾಹರಣೆಯು ಕೂಡಾ, ನೀವು ಕುಡಿಯುವುದನ್ನು ನಿಷೇಧಿಸುತ್ತೀರಿ; ನಿಮ್ಮ ಮಿತ್ರನೊಬ್ಬ ಕುಡುಕ, ನೀವು ಆತನ ಗೆಳೆತನ ಬಿಡಲಾರಿರಿ. ಏಕೆಂದರೆ ಮೈತ್ರಿಯು ಆತನ ಕುಡುಕತನವನ್ನು ಮೀರಿ ನಿಂತಿದೆ. ಅಂತಾದ್ದಾಗ ಕೆಲವೊಮ್ಮೆ ನೀವು ಆತನ ಅನ್ನ ಕುಡುಕ ಮಿತ್ರರೊಡನೆ ಸಂಪರ್ಕ ಪಡೆಯುವಿರಿ. ಅವರು ಕುಡಿಯಲು ತೆರಳಿದಾಗ ನೀವು ತೆರಳುತ್ತೀರಿ—ಕುಡಿಯಲಿಲ್ಲ; ಹೀಗೆ ಮೋಜಿಗೆ ಮತ್ತೆ ಅದೊಂದು ದಿನ ಒತ್ತಾಯಕ್ಕೆ ಮಣಿದು ರುಚಿ ನೋಡಲೆಂದು ಸ್ವಲ್ಪ ಕುಡಿಯುತ್ತೀರಿ. ಕೊನೆಗೊಂದು ದಿನ ನೀವೂ ಕುಡುಕರಾಗಿಯೇ ಆಗುತ್ತೀರಿ. ಹೀಗೆ ಮನುಷ್ಯ ಸಂಪರ್ಕವು ನಿಮ್ಮನ್ನು ಅಧೋಗತಿಗೆಳೆಯುತ್ತದೆ.

ಒಂದೇ ದೀಪದಿಂದ ಹಲವಾರು ದೀಪಗಳನ್ನು ಉರಿಸಬಹುದು. ಅರ್ಥಾತ್ ದೀಪದಿಂದ ದೀಪಗಳು ಬೆಳಗುತ್ತವೆ. ಒಬ್ಬನ ಗುಣವನ್ನು ಮತ್ತೊಬ್ಬನಲ್ಲಿ ಬರಿಸಬಹುದು—ಸಂಪರ್ಕದಿಂದ. ಆದರೆ ಪ್ರಶ್ನೆ—ಈ ಸಂಪರ್ಕವು ಎಂತಹ ವ್ಯಕ್ತಿಯದ್ದು; ಆತನ ಗುಣವೆಂತಹದ್ದು ಎಂಬುದೇ ಆಗಿದೆ.

ದುರ್ಬುದ್ಧಿಯನ್ನು ಇತರರಿಂದ, ಕಲಿತಷ್ಟು ಸುಲಭವಲ್ಲ ಸದ್ಬುದ್ಧಿಯನ್ನು ಕಲಿಯುವುದು ಕಷ್ಟ ಎಂಬುದು ಬೆಳಕಿನಷ್ಟೆ ಸತ್ಯ. ಆದುದರಿಂದ ಮನುಷ್ಯ ಸಂಪರ್ಕ ಬೆಳೆಸುವಾಗ ನಾವು ಸದಾ ಜಾಗ್ರತೆ ವಹಿಸಬೇಕು. ನಾವು ಸಂಪರ್ಕ ಬೆಳೆಸುವಾಗ, ನಮ್ಮ ವಿಚಾರಸಾಗುವಾತ ಉತ್ತಮ ಆದರ್ಶಗಳುಳ್ಳ ವ್ಯಕ್ತಿಯೇ ಎಂದು ಯೋಚಿಸಿಯೇ ನಾವು ಸಂಪರ್ಕ ಬೆಳೆಸಬೇಕು.

"ಸಜ್ಜನರ ಸಂಘವದು ಜೆಜ್ಜೆಗು ಸವಿದಂತೆ ದುರ್ಜನರ ಕೂಡ ಒಡನಾಟ ಬಜ್ಜಲರೊಚ್ಚೆಯಂತೆ" ಎಂದು ಸರ್ವಜ್ಞನೇ ಹಾಡಿದ್ದಾನೆ.

ಸಂಪರ್ಕದಿಂದೇನು ಲಾಭ? ಅನೇಕ. "ಕೆಲವಂ ಬಲ್ಲವರಿಂದ ಕಲಿತು...." ಎಂಬ ಸೋಮೇಶ್ವರ ಶತಕದ ಈ ಸಂಕ್ತಿಯೇ ಉದಾಹರಣೆ. ಜ್ಞಾನಕ್ಕೆ ದಿಕ್ಕೆಂಬುದಿಲ್ಲ. ಅದು ಯಾರ ಸೊತ್ತೂ ಅಲ್ಲ. ಸಂಪರ್ಕದಿಂದ—ಮುಖ್ಯವಾಗಿ ಗುರುಹಿರಿಯರ ಸಂಪರ್ಕದಿಂದ—ನಾವು ಅನುಭವವೈವಿಧ್ಯತೆವನ್ನು ಪಡೆಯಬಹುದು. ಅನುಭವವೇ ಮಾನವನ ಬಾಳಿನ ಕೈದೀವಿಗೆ. ಅನುಭವಕ್ಕಿಂತಲೂ ಹಿರಿಯ ಗುರುವಿಲ್ಲ. ಹಿರಿಯರ ಅನುಭವವು ಅಮೂಲ್ಯ ಸೊತ್ತು, ಜ್ಞಾನದ ಬಿಡಿ. ಅಂತಹ ವ್ಯಕ್ತಿಗಳ ಸಂಪರ್ಕ ಲಾಭಕರ; ಸ್ವಾಗತಾರ್ಹ.

ಗ್ರಂಥವೆಂದರೆ ಅನುಭವದ ಉಲ್ಲೇಖ. ಓರ್ವ ವ್ಯಕ್ತಿಯ ಅನುಭವದ ವಿವರಣೆಯು ಗ್ರಂಥದಲ್ಲಿ ಅಡಕವಾಗಿರುವುದರಿಂದ, ಆ ಗ್ರಂಥವನ್ನು ಓದುವುದರಿಂದ ವಾಚಕನು ಲೇಖಕನೊಡನೆ ಸಂಪರ್ಕ ಪಡೆಯುತ್ತಾನೆ—ನೇರವಾಗಿ ಅಲ್ಲ, ಪುಸ್ತಕ ಮಾಧ್ಯಮವಾಗಿ. ಬಾಳಿನಲ್ಲಿ ನಮಗೆ ಮಾರ್ಗದರ್ಶಕವಾಗಬಲ್ಲ ಪ್ರಾಯೋಗಿಕ ವಿಚಾರಗಳುಳ್ಳ ಗ್ರಂಥಗಳೂ, ಧಾರ್ಮಿಕ ಮೌಲ್ಯವುಳ್ಳ ಗ್ರಂಥಗಳೂ ಸ್ವಾಗತಾರ್ಹ. ಹೊರತು ವೃಥಾ ಲೈಂಗಿಕ ವಿಚಾರವುಳ್ಳ ಕತೆ—ಕಾದಂಬರಿಗಳು ನಮ್ಮನ್ನು ಅಧೋಗತಿಗೆಳೆಯುತ್ತವೆ.

ಮನುಷ್ಯ ಸಂಪರ್ಕವು ನಮಗೆ ಅನೇಕ ಅಮೂಲ್ಯ ಪಾಠಗಳನ್ನು ಕಲಿಸುತ್ತವೆ. ಎಂತಹ ದುರುಳ ವ್ಯಕ್ತಿಯಿಂದಾದರೂ ನಮಗೆ ಅಲ್ಪ ಜ್ಞಾನ ದೊರೆತೇ ತೀರುತ್ತದೆ. ನನ್ನೊರ್ವ ಮಿತ್ರನಿದ್ದಾನೆ. ಕುಡುಕ—ಮಿತಿಮೀರಿ ಕುಡಿಯುವುದಿಲ್ಲ. ಉತ್ತಮ ವೈಚಾರಿಕ ಗ್ರಂಥಗಳೆಂದರೆ ಆತನಿಗಾಗದು. ಏನೋ ಒಂದಿಷ್ಟು ಅಶ್ಲೀಲ ಓದುತ್ತಾನೆ. ಅಂತಿದ್ದರೂ ಅವನ ಸ್ವಭಾವವು ಉತ್ತಮವೇ ಇದೆ. ನಿಷ್ಕಳಂಕ ಹೃದಯ ಅವನದು. ಮತ್ತೊರ್ವ ಮಿತ್ರನ ವಿಷಯ ಕೇಳಿ ತೋರಿಕೆಗೆ ಅವನ ನಡತೆ ಎಲ್ಲರಿಗೂ ಮೆಚ್ಚು. ಆದರೆ ಹಂದೆಯ ಹಿಂದೆ ಮಾಡುವ ವಿಶ್ವಾಸ ಘಾತುಕತನ ಮಾತ್ರ ಹೇಸುವಂತಾದ್ದು. ಆದರೂ ಅವರಿಬ್ಬರೂ ನನ್ನ ಮಿತ್ರರು. ಕಾರಣ? ನನ್ನ ಕೆಲವು ವಿಚಾರಗಳು ಅವರಿಗೂ ಪ್ರಿಯ. ಅಂದರೆ ವಿಚಾರಗಳ ಏಕತೆ ನಮ್ಮನ್ನು ಮಿತ್ರರಾಗಿಸಿದೆ. ವಿಶ್ವದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ವಿಚಾರಗಳೂ ಇವೆ ಎಂಬುದು ಸತ್ಯ. ಆದರೂ ಪೂರ್ಣ ಸತ್ಯವಲ್ಲ. ಉದಾಹರಣೆಗೆ ಹಲವಾರು ರಾಜಕೀಯ ಪಕ್ಷಗಳಿದ್ದರೂ ಪ್ರತಿಯೋರ್ವನಿಗೂ ಒಂದೊಂದು ಪ್ರತ್ಯೇಕ ಪಕ್ಷವೆಂದಿಲ್ಲ. ಕೆಲವರಿಗೆ ಒಂದು ಪಕ್ಷದ ವಿಚಾರಧಾರೆಗಳು ಹಿತ; ಉಳಿದವರಿಗೆ ಮತ್ತೊಂದು. ಹೀಗೆ ಕೆಲವರ ವಿಚಾರಗಳಲ್ಲಿ ಏಕರೂಪತೆ ಕಾಣುತ್ತದೆ. ಸಮಾಜದ ಹಿತಕ್ಕಾಗಿ ಹಲವರು ಸ್ವಾರ್ಥವನ್ನು ತೊರೆದು ಒಂದಾಗುತ್ತಾರೆ. ಈ ರೀತಿ ವಿಚಾರಾಮೃತ್ಯ ದೃಷ್ಟಿಯು ಹಲವರನ್ನು ಪರಸ್ಪರ ಮಿತ್ರರಾಗಿಸುತ್ತದೆ.

ಇದು ನಮ್ಮ ಭಾರತ

ಅಪೂರ್ವ ನಿಕ್ಷೇಪದ ರೋಮಾಂಚಕ ಇತಿಹಾಸ

ಬಸ್ತಾರ್ ಜಿಲ್ಲೆಯ ಆದಿವಾಸಿಗಳು ಎತ್ತಿನ ಹುಬ್ಬದಂತಿರುವ ಬೆಟ್ಟಗಳ ಗುಂಪಿಗೆ "ಬೈಲದಿಲ" ಎಂದು ನಾಮಕರಣ ಮಾಡಿದರು. ಆದರೆ ಈ ಬೆಟ್ಟಗಳ ಮೂಲೆ ಒಂದಾನೊಂದು ದಿನ ಅತುಳಐಶ್ವರ್ಯದ ಭಂಡಾರವಾಗಬಹುದೆಂಬ ಕಲ್ಪನೆಯವರಿಗಿರಲಿಲ್ಲ. ಬೈಲದಿಲ ೩೦೦೦ ದಶಲಕ್ಷ ಟನ್ ಕಬ್ಬಿಣದ ಅದಿರನ್ನು ಹೊಂದಿರುವ ಬೆಟ್ಟಗಳ ಮೂಲೆಯಾಗಿದೆ. ಈ ಅದಿರಿನ ನಿಕ್ಷೇಪವನ್ನು ೫೦೦ ವರ್ಷಕಾಲ ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬಹುದು.

೧೯೯೯ರಲ್ಲಿ ಇಲ್ಲಿ ಕಬ್ಬಿಣದ ಅದಿರನ್ನು ಶೋಧಿಸಿದ ಭೂವಿಜ್ಞಾನಿ ಶ್ರೀ ಪಿ. ಎನ್. ಘೋಸ್ ಗಾಗಲಿ ಅಥವಾ ೧೯೫೫ರಲ್ಲಿ ಭಾರತದ ಭೂಸರ್ವೇಕ್ಷಣ ಸಂಸ್ಥೆಯ ಬ್ರಿಟಿಷ್ ತಜ್ಞನಿಗಾಗಲಿ ವಿಶ್ವದಲ್ಲೇ ಶ್ರೇಷ್ಠ ದರ್ಜೆಯ ಕಬ್ಬಿಣದ ಅದಿರನ್ನು ಹೊಂದಿರುವ (ಶೇಕಡ ೬೬ಅಂಶ) 'ಬೈಲದಿಲ', ಜಪಾನಿನ ಉಕ್ಕಿನ ತಜ್ಞರಲ್ಲಿ ಮನೆಮಾತಾಗಬಹುದೆಂಬ ಕಲ್ಪನೆಯಿರಲಿಲ್ಲ. ಈಅದ್ಭುತ ರೂಪಾಂತರದ ಕಥೆ ರೋಮಾಂಚಕಾಂಶವಾಗಿದೆ.

ಜಪಾನೀಯರ ಜಾಣ್ಮೆ

ಯುದ್ಧದಿಂದ ನುಚ್ಚುನೂರಾಗಿದ್ದ ಕೈಗಾರಿಕೆಯನ್ನು ಪುನಶ್ಚೇತನಗೊಳಿಸಲು ತೀವ್ರಾಸಕ್ತಿಯಿಂದ ಕಾರ್ಯಮಗ್ನರಾಗಿದ್ದ ಜಪಾನಿನ ಉಕ್ಕಿನ ತಜ್ಞರು ಭೂವಿಜ್ಞಾನದ ಬಗೆಗೆ ವಿಶ್ವದಲ್ಲಿ ದೊರಕುವ ಸಾಹಿತ್ಯವನ್ನು ಗಾಢವಾಗಿ ಅಭ್ಯಸಿಸಿದರು. ಅವರು ಅತ್ಯಾಸಕ್ತಿಯಿಂದ ಮಗ್ನರಾಗಿದ್ದ ಕಬ್ಬಿಣದ ಅದಿರಿನ ಮೂಲ, ಭಾರತದ ಮಧ್ಯಪ್ರದೇಶದಲ್ಲಿರುವ 'ಬೈಲದಿಲ'ದಲ್ಲಿಇವೆಯೆಂದು ಖಚಿತಪಡಿಸಿಕೊಂಡರು. ಭಾರತದ ಕಬ್ಬಿಣದ ಅದಿರಿನಬಗ್ಗೆ ಸಮಾಲೋಚಿಸುವುದಕ್ಕೆ ಮುಂದೆ ಜಪಾನಿನ ೨೦ ತಜ್ಞರು ಹಿಲಿಗಳು, ಕಾಡು ಹಂದಿಗಳು, ಕಾಡುಕೋಣಗಳು ಮತ್ತು ಕಾಡಿಗಳಿಂದ ತುಂಬಿದ ಬೈಲದಿಲ ಬೆಟ್ಟಕ್ಕೆ ಜೇನುಹುಳುಗಳಂತೆ ಬಂದರು. ಈ ಘಟನೆ ಒಂದು ದಶಕಕ್ಕಿಂತಲೂ ಕಡಿಮೆ ಅವಧಿಯ ಹಿಂದೆ ಸಂಭವಿಸಿತು.

ಇಂದು ಬೈಲದಿಲ್ಲ ಬೆಟ್ಟದ ರಾಶಿಯಿಂದ ಭಾರತೀಯ ಇಂಜಿನಿಯರುಗಳು ವರ್ಷಂಪ್ರತಿ ಎರಡು ದಶಲಕ್ಷ ಟನ್ ಅದಿರನ್ನು ಜಪಾನಿಗೆ ರಫ್ತುಮಾಡುತ್ತಿದ್ದಾರೆ. ೧೯೭೨ನೇ ಇಸವಿಯ ಮೇಳೆಗೆ ವರ್ಷಂಪ್ರತಿ ೧೦ರಿಂದ ೧೨ ದಶಲಕ್ಷ ಟನ್ ಅದಿರಿನ ಸಾಗಾಟಕ್ಕೆ ಆರಂಭವಾಗುತ್ತದೆ. ಈ ಸಾಧನೆಗೆ ಇತರ ಹಲವು ಯೋಜನೆಗಳನ್ನು ನಿಕಟ ಸಹಕಾರದಿಂದ ಅನುಷ್ಠಾನಕ್ಕೆ ಇಳಿಸಿದುದೇ ಮುಖ್ಯ ಕಾರಣ ವಿಶಾಖಪಟ್ಟಣದ ಬಂದರನ್ನು ವಿಸ್ತರಿಸಲಾಗಿದೆ; ಅದಿರಿನ ಸಾಗಾಟಕ್ಕೆ ಯಂತ್ರ ಸ್ಥಾಪಿಸಲಾಗಿದೆ, ಬಸ್ತಾರ್ ಜಿಲ್ಲೆಯ ಕಿರಂದುಲ್‌ನಿಂದ ಕೊಟ್ಟಾವಲಸಕ್ಕೆ ಳಳಲ ಕಿಲೋಮೀಟರ್ ದೂರದ ಬ್ರಾಡ್‌ಗೇಜ್ ರೈಲುಮಾರ್ಗ ರಚಿಸಲಾಗಿದೆ; "ನಿಕ್ಷೇಪ-೧೪" ಎಂದು ಲಾಂಛನ ಹೊತ್ತಿರುವ ಬೆಟ್ಟದ ಮೇಲೆ ಬೃಹತ್ ಯಂತ್ರ ಬೃಹೊಂದನ್ನು ಸ್ಥಾಪಿಸಲಾಗಿದೆ.

ಈಗ ಒಂದು ವರ್ಷದ ಹಿಂದೆ ರೈಲು ಸಂಚಾರ ಆರಂಭವಾಗಿನಿಂದ ಬೆಟ್ಟ ಪ್ರದೇಶದಿಂದ ಆರಿಸಿ ತೆಗೆದ ಅದಿರನ್ನು ಸಾಗಿಸಿ ಜಪಾನಿಗೆ ಹಡಗಿನಲ್ಲಿ ರವಾನಿಸಲಾಗುತ್ತಿದೆ. ಈಗ ಈ ಕಾರ್ಯವನ್ನು ಯಂತ್ರಗಳು ಮಾಡುತ್ತವೆ. ಈ ಯೋಜನೆಗೆ ೨೮ ಕೋಟಿ ರೂಪಾಯಿ ವೆಚ್ಚವಾಯಿತು. ಸುತ್ತಲಿನ ನಿಕ್ಷೇಪಗಳ ಸವಿಕ್ಷೆ ಈಗ ನಡೆಯುತ್ತಿದೆ.

ನಾಲ್ಕನೆಯ ಪ್ರಗತಿ

"ನಿಕ್ಷೇಪ—೧೪ರ ಬಳಿ ಸ್ಥಾಪಿಸಿರುವ ಗಣಿ ಅದಿರಿನ ಯಂತ್ರಕ್ಕೆ ಇದೇ ಮಾರ್ಚಿ ೧೮ರಂದು ವಿದ್ಯುತ್‌ಜಾಲನೆ ನೀಡಲಾಯಿತು. ಎರಡು ವಾರಗಳೊಳಗೆ ಅಮೆರಿಕಾದ "ಕ್ಯಾಟರ್‌ಪಿಲರ್" ಬುಲ್‌ಡೋಜರ್ ಯಂತ್ರಗಳು ೧೨೨ ಪಿಸ್ಟರ್ ಎತ್ತರದ ಸ್ತಂಭಗಳನ್ನು ಕತ್ತರಿಸುವ ಕಾರ್ಯ ಆರಂಭಿಸಿದುವು. ಬೆಟ್ಟಗಳನ್ನು ಸಿಡಿಮದ್ದಿನಿಂದ ಸಿಡಿಸುವ ಕಾರ್ಯ ಆರಂಭವಾಯಿತು. ಇವು ೨,೫೦,೦೦೦ ಟನ್ ಅದಿರನ್ನು ಸಂಗ್ರಹ ರಾಶಿಗೆ ಸೇರಿಸುತ್ತವೆ. ೬೫ ಟನ್ ತೂಕದ ಜಪಾನಿನ ಎರಡು ಪುಡಿ ಮಾಡುವ ತಿರುಗುವ ರಾಕ್ಷಸ ಯಂತ್ರಗಳು ಘಂಟೆಗೆ ೩ ಸಹಸ್ರ ಟನ್ ಬಂಡೆಗಳನ್ನು ಸಣ್ಣದಾಗಿ ಪುಡಿ ಮಾಡುತ್ತವೆ. ಇದೇ ವಿಧದ ಪುಡಿ ಮಾಡುವ ಯಂತ್ರಗಳು ಅದಿರನ್ನು ಮತ್ತಷ್ಟು ಸಣ್ಣವಾಗಿ ಪುಡಿಮಾಡುತ್ತವೆ.

ಆಧುನಿಕ ದೇಗುಲ

ಈ ಅದಿರನ್ನು ೧೪ರ ಕಿಲೋಮೀಟರ್ ಸಾಗಾಣಿಕೆ ಮಾರ್ಗದಲ್ಲಿ ಬೆಟ್ಟದಿಂದ ಕೆಳಕ್ಕೆ ಕಳಿಹಿಸಲಾಗುತ್ತದೆ. ಈ ಸಾಗಾಣಿಕೆ ಮಾರ್ಗ ಇಡಿ ಪೂರ್ವಾರ್ಧ ಗೋಳದಲ್ಲೇ ಅತಿ ಉದ್ದವಾಗಿದೆ. ಈ ಅದಿರಿನ ತುಂಡುಗಳನ್ನು ಪರಿಷ್ಕರಿಸಲಾಗುತ್ತದೆ. ಅನಂತರ ಪರಿಷ್ಕೃತ ಅದಿರಿನ ವಿತರಣೆ ಯಂತ್ರಕ್ಕೆ ಕಳಿಹಿಸಲಾಗುತ್ತದೆ. ಅಲ್ಲಿ ಸ್ವಯಂಚಾಲಿತ ಸಾಗಾಣಿಕೆ ಮಾರ್ಗದಿಂದ ಒಂದು ತಾಸಿಗೆ ೬೦ ವ್ಯಾಗನ್ ಪೂರ್ತಿ ೨,೫೦೦ ಟನ್ ಅದಿರನ್ನು ಸಂಬಲಾಗುತ್ತದೆ. ಸ್ವಯಂಚಾಲಿತ ವಿಧಾನದಿಂದ ಅದಿರನ್ನು ಶೂಳ ಮಾಡಲಾಗುತ್ತದೆ. ಅನಂತರ ಯಂತ್ರ ಕಾರ್ಯ ಸಲ್ಲಿಸುತ್ತದೆ. ಏಕೆಂದರೆ ಮುಂದಿರುವ ವ್ಯಾಗನ್ ನಿರ್ದಿಷ್ಟ ಸ್ಥಳಕ್ಕೆ ಬರುವವರೆಗೆ ಅದಕ್ಕೆ ವಿಶ್ರಾಂತಿ; ಆಧುನಿಕ ಭಾರತದ ಈ ಪವಿತ್ರ ದೇಗುಲದಲ್ಲಿ ಪ್ರತಿಕಾರ್ಯವೂ ಪರೋಕ್ಷ ನಿಯಂತ್ರಣದಿಂದ ನಡೆಯುತ್ತದೆ. ಆದಿವಾಸಿಗಳೂ ಸೇರಿ ಭಾರತದ ಅನೇಕ ಪ್ರದೇಶಗಳಿಂದ ಬಂದಿರುವ ಕಾರ್ಯಕರ್ತರ ಸಂಖ್ಯೆ ಸುಮಾರು ೮೦೦.

ವಿಶಾಖ ಪಟ್ಟಣದಲ್ಲಿ ಯಂತ್ರೀಕೃತ ಅದಿರು ಸಾಗಣಿಕೆ ಹಾಗೂ ರೈಲು ಮಾರ್ಗದ ರಚನೆ ೫೫ ಕೋಟಿ ರೂ. ವೆಚ್ಚವಾಯಿತು. ಇವೆರಡೂ ಮಹಾ ಸಾಧನೆಗಳೇ ಸರಿ! ಇದೇ ಪ್ರಕಾರ ಭಾರತದ ನಿಕ್ಷೇಪ—೧೪ರಲ್ಲಿರುವ ಅದಿರುಗಳ ಯಂತ್ರವೂ ಮಹತ್ವಪೂರ್ಣವಾದುದು.

ಮಧ್ಯ ಪ್ರದೇಶ ಸರ್ಕಾರಕ್ಕೆ ಹಕ್ಕಿನ ಧನ, ವಿದ್ಯುತ್ ಸರಬರಾಜಿಗೆ ವರ್ಷಂಪ್ರತಿ ೨೦ ಲಕ್ಷ ರೂಪಾಯಿ, ರೈಲ್ವೆ ಶಾಖೆಗೆ ಸಾಗಣಿಕೆ ದರ ಮಾನವಿಶಾಖ ಪಟ್ಟಣ ಬಂದರಿನ ಆದಾಯ ಈ ವಿಧಾನಗಳಿಂದ ಭಾರತದ ವರ್ಷಂಪ್ರತಿ ೩೦ ಕೋಟಿ ರೂಪಾಯಿ ವಿದೇಶೀ ವಿನಿಮಯ ಸಂಪಾದಿಸುತ್ತದೆ.

ಚಂದಾದಾರರು

ತಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಮನಿಯಾರ್ಡರ್ ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇನೆ.

—ಮೆನೇಜರ್, ನವಯುಗ.

ಪುತ್ತೂರು IInd A ಮುನ್ಸಿಫ್ ಕೋರ್ಟಿನಲ್ಲಿ

O. S. 122/1968

P. A. Ariga (Advocate, Receiver) — Plaintiff

ಕೃಷ್ಣಪ್ಪ ಪೂಜಾರಿ, ಮಾಣಿ ಪೂಜಾರಿ ಮಗ, ಸುಳ್ಯತಾಲ್ಲೂ ಆಲಟ್ಟೆ ಗ್ರಾಮದ ಮುಂಗಲ್ಲು ಮಂಟಲ್ಲ.... Defendant

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ವಾದಿಯು, ಪ್ರತಿವಾದಿಯ ಮೇಲೆ ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾ. 5—8—1968ಕ್ಕೆ ಇಟ್ಟಿರುತ್ತದೆ. ಸದ್ರಿದಿವಸ ಪೂರ್ವಾಹ್ನ 11 ಘಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ, ನಿಮ್ಮ ಉದಾಹರಣೆಯನ್ನು ದಾಖಲು ಮಾಡತಕ್ಕದ್ದು. ಇಷ್ಟಿದ್ದರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

"ಕೋರ್ಟು ಹುಕುಂ ಪ್ರಕಾರ"

Venkataramana B. N.
Advocate for Plaintiff

ಪುತ್ತೂರು, 10—7—1968

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 87 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಎಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ನಿಧಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3.

Phone— 5711, 5712, 5713 } 3 Lines.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಆಸೆ

ಈ ಸಾಗರದ ತೀರಗಳನೇರಿ
ಜಿಗಿವಾಸೆ—
ಉಸುಬು ಹಾಸಿಗೆಯಿಂದ ನೆಗೆದು
ನೀರದಿಬ್ಬವನೇರಿ
ಮುಗಿಲುಗಳ ಮುತ್ತಿಕ್ಕಿ
ದಿಗಂತ ವೃತ್ತದ ಒಳಗೆ
ಇಣುಕುವಾಸೆ—
ಅಲೆಯಲೆಯ ಚೂಚುಕವ ಹಿಡಿದು
ಜಗ್ಗಿ ಎಳೆದೆಳೆದು ತೂರಾಡಿ
ಈಸಿ ಮೈ ಮರೆತು
ಮರಳಿ ಎಚ್ಚತ್ತು
ಮುಳುಗೇಳುವಾಸೆ—
ಫೀರ ಬಸಿರನ್ನು ಬಸಿದು
ತೆರೆಯ ತೆಕ್ಕೆಯ ಸೇರಿ
ಗಾಳಿಯ ಉಯ್ಯಾಲೆಯಲಿ ತೇಲಿ
ದೂರ ದೂರ ಬಹುದೂರ ದೂರ
ಹೋಗುವಾಸೆ—
ಹೋಗಿ ಮತ್ತೆಂದೂ
ಈ ಉಸುಬು ಹಾಸಿಗೆಗೆ
ಮರಳಿ ಬರದಿರುವಾಸೆ.

—ಕೆ. ಟಿ. ಗಟ್ಟಿ, ಎಂ. ಎ., ಬಿ. ಎಡ್.

ಆಶೀರ್ವಚನ

ಹುಟ್ಟಿತು!
ಯಾವುದೊ ಶುಭ ಗಳಿಗೆಯಲಿ
ಎರೆಲ್ಲಿ ಬಂದೆಡೆ ಮಾನವನ ಶಿಶುವಾಗಿ
ಅಲ್ಲಿ ತಲಸಿದೆ ನಾನು ಮಾನಸಿಕವಾಗಿ.
ನಕ್ಕಿತು!
ನನ್ನ ನೆರಳು ಬಿದ್ದೊಡನೆ ಆ ಶಿಶುವು
ತಾನಾಗುವೆ ಸಾಹಿತಿ ಎಂದಿತು.
ಹೃದಯ ತುಂಬಿ ಬಂದು ನಾನು ಹರಸಿದೆ.
ಬುದ್ಧನಾಗು!
ಜ್ಞಾನ ಹೀನ ಜನರ ಮನಕೆ
ಜ್ಞಾನ ಬೋಧೆಯಿತ್ತು ನೀನು
ಬುದ್ಧನಾಗು, ಪ್ರಬುದ್ಧನಾಗು.
ಕ್ಷುದ್ರ ಜನರ ಭದ್ರ ಟೀಕೆ
ಬಾನನೇರಿ ನಿಂತರೂ
ಛತ್ರಿಯಗೆಡದೆ ಮುಂದೆ ಬಂದು
ಬುದ್ಧನಾಗು, ಪ್ರಬುದ್ಧನಾಗು.
ಹಗಲು ಇರುಳು ಬರೆದು ಬರೆದು
ಭಾಷೆಯನ್ನು ತಿದ್ದಿ ತಿದ್ದಿ
ಹಸಿವೆ ತೃಷೆಯ ಮರೆತು ಬಿಟ್ಟು
ಬುದ್ಧನಾಗು, ಪ್ರಬುದ್ಧನಾಗು.

—ಎಸ್. ಪದ್ಮನಾಭ ನಾಯಕ್.

(ನಾಲ್ಕನೇ ಪುಟದಿಂದ)

ಹೈನ ಕಾವ್ಯಗಳಲ್ಲಿ ಬರುತ್ತದೆ—ನರೆತ ತಲೆಗೂದಲೊಂದು ಕಂಡದ್ದೇ ತಡ ಸನ್ಯಾಸ ದೀಕ್ಷೆ ವಹಿಸುತಿದ್ದರಂತೆ. ಆದರೆ ಈಗಿನ ಜನ ತಲೆ ಹಣ್ಣಾಗಿ ಉರುಳಿದ್ರೂ ಹಣ ಕೂಡಿಡೋದನ್ನ ಬಿಡೋದಿಲ್ಲ...."

'ಅಂದ್ರೆ ಅವ್ರೆಲ್ಲಾ ಇದನ್ನ ತಿಳ್ಕೊಂಡ ದಿನ..."

"ಹ್ಹಾಂ..."

"ಆ ದಿನವೆಂದು ಬರುತ್ತೋ..."

"ಬರುತ್ತೆ, ಒಬ್ಬರು ಇನ್ನೊಬ್ಬರ ಹೃದಯನನ್ನು ಅರಿತು ಅವರಲ್ಲಿ ಒಂದಾಗಿ ಬದುಕೋದಷ್ಟ ಕಲಿತಾಗ. ಎಲ್ಲಿಂದ ನೀನ್ ಬಂದಿ, ಅಲ್ಲಿಂದ ಏನ್ ತಂದಿ ಎಂದು ಹಾಡೋದನ್ನ ಬಿಟ್ಟು, ತಿಳಿದುಕೊಂಡು ಅಚರಣೆಗೆ ತಂದ ದಿನ...."

"ಹ್ಹಾಂ..."

'ಛಾ! ಬೇಸರವಾಯ್ತು?"

'ಇಲ್ಲಾನ್ನಿ...."

—ಗೋರಾ.

ಎಲ್ಲೆಲ್ಲಿ ಏನೇನು?

ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಉತ್ತಮ ಫಲಿತಾಂಶ

ಮಣಿಪಾಲ, ಜು. ೧೬- ಇತ್ತೀಚಿನ ವೈಸರೂ ವಿಶ್ವ ವಿದ್ಯಾನಿಲಯದ ಪರೀಕ್ಷೆಗಳಲ್ಲಿ ಇಲ್ಲಿಯ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಫಲಿತಾಂಶಗಳು ಹಿಂದಿನ ವರ್ಷಗಳಂತೆಯೆ ಖಾಸಗಿ ಕಾಲೇಜುಗಳ ಪೈಕಿ ಅತ್ಯುತ್ತಮವಾದುದುಗಳ ಸಾಲಿಗೆ ಸೇರಿವೆ.

ತೃತೀಯ ಬಿ. ಇ. ಪರೀಕ್ಷೆಯಲ್ಲಿ ಇದೇ ವಿಶ್ವವಿದ್ಯಾನಿಲಯದಲ್ಲಿ ಸರಾಸರಿ ಶೇ. ೫೨ರಷ್ಟು ತೇರ್ಗಡೆಯಾಗಿದ್ದರೆ ಈ ಕಾಲೇಜಿನ ಶೇ. ೬೬ ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ದ್ವಿತೀಯ ಬಿ. ಇ ಪರೀಕ್ಷೆಯಲ್ಲೂ ವಿಶ್ವ ವಿದ್ಯಾನಿಲಯದ ಸರಾಸರಿಗಿಂತ ಉತ್ತಮವಾದ ಫಲಿತಾಂಶ ಬಂದಿದೆ. ಕರ್ನಾಟಕ ವಿಶ್ವ ವಿದ್ಯಾನಿಲಯದ ಪರೀಕ್ಷೆಯದ ಪ್ರಕಾರ ಶೇ. ೭೪ ರಷ್ಟು ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗಳಿಗೆ ಕುಳಿತಿದ್ದ ಒಟ್ಟು ೧೩೦ ವಿದ್ಯಾರ್ಥಿಗಳ ಪೈಕಿ ಎಲ್ಲಾ ಮಂದಿ ತೇರ್ಗಡೆಯಾಗಿದ್ದು, ಶೇ. ೭೦ರಷ್ಟು ಉತ್ತಮವಾದ ಫಲಿತಾಂಶ ಸಿಕ್ಕಿದೆ. ಪ್ರಥಮ ಬಿ. ಇ. ಪರೀಕ್ಷೆಯಲ್ಲಿ ಶ್ರೀ ಹೆನ್ರಿ ಮೊರ್ಕ್ಸ್ ದಾಂತೆಯವರು ಪ್ರಥಮ ಶ್ರೇಣಿ ಹಾಗೂ ಅರನೆ ರ್‍ಯಾಂಕ್ ಗಳಿಸಿದ್ದಾರೆ. ಕರ್ನಾಟಕ ವಿಶ್ವ ವಿದ್ಯಾನಿಲಯದ ಪರೀಕ್ಷೆಯದ ಪ್ರಕಾರ ನಡೆಸಿದ ದ್ವಿತೀಯ, ತೃತೀಯ ಹಾಗೂ ಅಂತಿಮ ಬಿ. ಇ. ಪರೀಕ್ಷೆಗಳಲ್ಲಿ ಈ ಕಾಲೇಜಿಗೆ ೨೪ ರ್‍ಯಾಂಕುಗಳು ಲಭಿಸಿವೆ.

ಡಾ| ವಜಿರಾನಿ

ಮಣಿಪಾಲ, ಜುಲೈ ೧೬—ಇಲ್ಲಿಯ ಡೆಂಟಲ್ ಕಾಲೇಜಿನ ಪ್ರಿನ್ಸಿಪಲ್ ಡಾ| ಸುಂದರ್ ಜೆ. ವಜಿರಾನಿಯವರನ್ನು ಡೆಂಟಲ್ ಇನ್‌ಸ್ಟ್ರುಮೆಂಟ್ಸ್ ಸಲ್ಲಹನಲ್ ಕಮಿಟಿಯ ಸದಸ್ಯರನ್ನಾಗಿ ಇಂಡಿಯನ್ ಸ್ಟಾಂಡರ್ಡ್ಸ್ ಇನ್‌ಸ್ಟಿಟ್ಯೂಶನ್ ನಾಮಕರಣ ಮಾಡಿದೆ.

ರ್‍ಯಾಂಕ್ ವಿದ್ಯಾರ್ಥಿಗಳಿಗೆ ಸನ್ಮಾನ

ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ರ್‍ಯಾಂಕ್ ಗಳಿಸಿದ ಸಲುಜನ ವಿದ್ಯಾರ್ಥಿಗಳನ್ನು ತಾ. 17 ರಂದು ಪ್ರಿನ್ಸಿಪಾಲ್ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಆರಂಭದಲ್ಲಿ ಪ್ರೊ|ಎಂ. ರಾಜಗೋಪಾಲಾಚಾರ್ಯರು ಮತ್ತೆನಾಜ ರ್‍ಯಾಂಕ್‌ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ರ್‍ಯಾಂಕ್‌ಪಡೆದ ವಿದ್ಯಾರ್ಥಿಗಳಲ್ಲಿ ಶ್ರೀ ನಾರಾಯಣ ಕಲ್ಮಾಡಿ, ಕುಮಾರಿಯರಾದ ಗೀತಾ ಪ್ರಭು ಮತ್ತು ಸೀತಾರತ್ನ ಬಂಯಿಯವರು ಮಾತನಾಡಿದರು. ಪ್ರಿನ್ಸಿಪಾಲ್ ಅಡಿಗರು ಬಹುಮಾನ ವಿತರಣೆ ಮಾಡಿ ವಿದ್ಯಾರ್ಥಿಗಳು ತಮ್ಮ ಪ್ರಯತ್ನ ಸಾಧನೆಯನ್ನು ಮುಂದುವರಿಸಬೇಕೆಂದರು.

ಕೊನೆಯಲ್ಲಿ ಪ್ರೊ| ಶ್ರೀಪತಿ ಉಪಾಧ್ಯಾಯರು ಧನ್ಯವಾದ ಅರ್ಪಿಸಿದರು.

ಸತ್ಕಾರ ಕೂಟ

ತಾ. 10-7-68ರಲ್ಲಿ ಪರ್ಕಳ ಶಾರದಾ ಕಲಾಮಂಡಳಿಯ ಅಧ್ಯಕ್ಷರಾದ ಪರ್ಕಳ ಗುರುರಾಜ ಜೋಯಿಸರು ಹೆಗ್ಗೆ ಪಂಚಾಯತ್ ಅಧ್ಯಕ್ಷರಾದುದಕ್ಕೆ ಇಲ್ಲಿಯ ಮಹಾಲಿಂಗೇಶ್ವರ ಗಣಪತಿ ದೇವಸ್ಥಾನದಲ್ಲಿ ಶಾರದಾ ಕಲಾ ಮಂಡಳಿಯ ಪರವಾಗಿ ಸತ್ಕಾರ ಸಮಾರಂಭವು ಜರಗಿತು. ಹಿರಿಯಟ್ಟು ಸದಾಶಿವ ಹೆಗ್ಡೆಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಸತೀಶ ಹೆಗ್ಡೆ, ಮಂಜುನಾಥ ಶೆಟ್ಟಿ, ರಾಜೀವ ಕೋಟ್ಯಾನ್ ಶ್ರೀಧರ ಸಾಮಂತರು ಮಾತನಾಡಿದರು. ಗುರುರಾಜ ಭಟ್ಟರು ಈ ಪಂಚಾಯತಿಗೆ ಶಕ್ತಿಮೀರಿ ಶ್ರಮಿಸುವೆನೆಂದು ತಿಳಿಸಿದರು.

ಅಧ್ಯಕ್ಷರ ಭಾಷಣದ ತರುವಾಯ ಸಂಘದ ಕಾರ್ಯದರ್ಶಿ ಮುರಲೀಧರ ತಂತ್ರಿಯವರು ಧನ್ಯವಾದವರ್ಪಿಸಿದರು.

ಪಂಚಾಯತಿಯ ಸಭೆ

ಪಾಡಿಪುರ ಗ್ರಾಮ ಪಂಚಾಯತಿಯ ಸೂತನ ಪ್ರಥಮ ಸಭೆಯು ತಾ. 20-7-68ರಲ್ಲು ಪಾಡಿಪುರ ಪಂಚಾಯತಿಯಲ್ಲಿ ಜರಗಿತ್ತು. ಪಂಚಾಯತಿಗೆ ಅವಿರೋಧವಾಗಿ ಆರಿಸಲ್ಪಟ್ಟ ಸಭಾಪತಿ ಶ್ರೀ ಯಸ್. ವಿ. ಪದ್ಮನಾಭ ಅಚಾರ್ಯರೂ ಉಪಸಭಾಪತಿ ಶ್ರೀ ಯಂ. ರಂಗನವರೂ ಸದಸ್ಯರೂ ಪ್ರಮಾಣ ವಚನ ಸ್ವೀಕರಿಸಿದರು. ಪಂಚಾಯತಿಯ 1954ರಿಂದ ಈ ವರೆಗೆ 14ವರ್ಷ ಸಭಾಪತಿಯಾಗಿ ಪಂಚಾಯತಿಯ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿದ ಶ್ರೀ ಯಸ್. ಅಣ್ಣಾಜಿ ಬಲ್ಲಾಳರು ಮತ್ತು ಉಪಾಧ್ಯಕ್ಷರನ್ನು ಸನ್ಮಾನ ಮಾಡುವದೇ ನಿರ್ಣಯಿಸಲಾಯಿತು. ಸಾಂಗೆ ತಂಪರ್ಕ ದೃಷ್ಟಿಯಲ್ಲಿ ಅಲ್ಲಿಯ ಸೇತುವೆಯ ಇಬ್ಬದಿ ರಸ್ತೆ ಪೂರ್ಣಗೊಳಿಸುವದೇ, ಕೊಡಂಗಲ್ ಹೊಳೆಗೆ ಸೇತುವೆ ರಚಿಸುವದೇ ನಿರ್ಣಯಿಸಲಾಯಿತು. ಪಂಚಾಯತಿ ಸರ್ವಜನರ ರಸ್ತೆಗಳಿಗೆ ವಿದ್ಯುತ್ ದೀಪ ಹಾಕಿಸುವದೇ ಸಂಬಂಧಪಟ್ಟ ಅಧಿಕಾರಿ ವರ್ಗವನ್ನು ಒತ್ತಾಯಪಡಿಸುವುದು. ಪ್ರಚಾರ ಆಂದೋಲನ ಕೊರತೆ ನೀಗಿಸಲು ಸ್ಥಳೀಯ ಸೇವಾ ಸಹಕಾರ ಸಂಘಕ್ಕೆ ಹೆಚ್ಚಿನ ಪ್ರಚಾರ ಧ್ವನ್ಯ ಬದಗಿಸುವದೇ ಕೇಳಿಕೆಯೆಲ್ಲ ನಿರ್ಣಯಗಳಾದವು.

ಉಜ್ರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾಸಭೆ

ದ.ಕ. ಜಿಲ್ಲಾ ಕಾಂಗ್ರೆಸ್‌ಸಮಿತಿಯವರ ಸಮಾಹಾಸಭೆಯು ತಾ. 21-7-68ರಂದು ಉಜ್ರಿಯ ಮಂಜುನಾಥೇಶ್ವರ ಕಾಲೇಜಿನ ಸಭಾ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ದಿವಂಗತರಾದ ಪಾಜಕ ಸ್ವೀಕರ್ ಶ್ರೀ ಬಿ. ವೈಕುಂಠ ಬಾಳಿಗ, ಶ್ರೀ ಕಾಸರಗೋಡು ಉಮೇಶ ರಾವ್ ಮತ್ತು ಪಡುಬಿದ್ರಿ ಕಿಯಣ್ಣ ಶೆಟ್ಟಿ ಇವರ ಕುರಿತು ಅಧ್ಯಕ್ಷರು ಮಂಡಿಸಿದ ದುಃಖಸೂಚಕ ಠರಾವುಗಳನ್ನು ಮೌನ ಪ್ರಾರ್ಥನೆಯೊಂದಿಗೆ ಅಂಗೀಕರಿಸಲಾಯಿತು.

ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ಕಾರ್ಯಕ್ರಮದ ವಿಷಯಗಳ ಕುರಿತು ಈ ವರೆಗೆ ತೆಗೆದುಕೊಂಡ ಕಾರ್ಯಕ್ರಮಗಳನ್ನು ತಿಳಿಸುತ್ತಾ, ಮಂಗಳೂರು, ಉಡುಪಿ ನಗರ ಸಭೆ ಮತ್ತು ಮಂಗಳೂರು ತಾಲೂಕು ಬೋರ್ಡಿಗೆ ಚುನಾವಣಾ ಸಮಿತಿಗಳನ್ನು ರಚಿಸಲಾಗಿದೆಯೆಂದು ತಿಳಿಸಿದರು.

ಅನಂತರ ಈ ಕೆಲವು ಠರಾವುಗಳನ್ನು ಅಂಗೀಕರಿಸಲಾಯಿತು. ಮೊದಲನೆಯದಾಗಿ ಮೈಸೂರು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೂ, ಮುಖ್ಯ ಮಂತ್ರಿಗಳೂ ಆದ ಶ್ರೀ ವೀರೇಂದ್ರ ಪಾಟೀಲರನ್ನು ಸಭೆಯು ಹಾರ್ದಿಕವಾಗಿ ಅಭಿನಂದಿಸಿ, ಅವರು ಕಳೆದವಾರ ಬೆಂಗಳೂರಿನಲ್ಲಿ ನಡೆದ ಪ್ರಮುಖ ಅಧಿಕಾರಿಗಳ ಸಭೆಯಲ್ಲಿ ಈಗಿನ ಅಡಳಿತ ಪದ್ಧತಿಯನ್ನು ಸುಧಾರಿಸುವ ಸಲುವಾಗಿ ಮಂಡಿಸಿರುವ ಹೊಸೆಗೆ ಸಭೆಯು ಸಂಪೂರ್ಣ ಬೆಂಬಲವನ್ನೂ ಸೂಚಿಸಿತು.

ಜಿಲ್ಲಾ ಪರಿಷತ್ತನ್ನು ಸ್ಥಾಪಿಸುವ ಯೋಜನೆಯನ್ನು ಆ ಸಂಬಂಧವಾಗಿ ಶ್ರೀ ಪಿ. ಎಂ. ನಾಡಗೌಡರು ಕೈಗೊಂಡಿರುವ ಕಾರ್ಯವನ್ನೂ ಸಭೆಯು ಪ್ರಶಂಸಿಸಿತು. ನಮ್ಮ ಜಿಲ್ಲೆಯ ಮಟ್ಟಿಗೆ ಕೂಡಲೇ ಭೂಸುಧಾರಣಾ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ಜಾರಿಗೆ ತರಬೇಕೆಂದು ಸೂಚಿಸಲಾಯಿತು. ಸುಳ್ಯದಲ್ಲಿ ಕೂಡಲೇ ಎರಡು ಕೋರ್ಟುಗಳನ್ನು ಸ್ಥಾಪಿಸಬೇಕು ಎಂದೂ ಸಭೆಯು ಸರಕಾರದೊಡನೆ ಕೇಳಿಕೊಂಡಿತು. ಬೆಲೆ ಪದ್ಧತಿಯಲ್ಲಿ ತರಬಹುದಾದ ಬದಲಾವಣೆಗಳನ್ನು ಪರಿಶೀಲಿಸಲಾಗುವುದೆಂದು ಆಹಾರ ಮಂತ್ರಿ ಶ್ರೀ ವಿಟಲದಾಸಶೆಟ್ಟರು ಕೊಟ್ಟ ಆಶ್ವಾಸನೆಯನ್ನು ಸ್ವಾಗತಿಸಲಾಯಿತು. ಆಹ್ವಾದಿಬಿದಿಗಾಗಿ ಭತ್ತದ ಬದಲು ಅಕ್ಕಿಯನ್ನು ಕೊಡುವ ಸಮಸ್ಯೆನ್ನು ಕೊಡಬೇಕೆಂದು ಒತ್ತಾಯಿಸಲಾಯಿತು. ಸೋಲಿವೆಟ್ ರಸ್ತೆಯ ಪಾಕಿಸ್ಥಾನಕ್ಕೆ ಕಳ್ಳಸಾಗಣೆಗಳನ್ನು ಒದಗಿಸುವ ಕುರಿತು ನಿಷ್ಪಾಕ್ಷಿದ ಧೋರಣೆಯ ಕುರಿತು ಕೇಂದ್ರ ಸರಕಾರವೆ ತಕ್ಕ ಕ್ರಮ ಕೈಕೊಳ್ಳಬೇಕು. ಜಿಲ್ಲೆಯಲ್ಲಿ ಉಂಟಾದ ನೆರೆ ಹಾವಳಿಗಾಗಿ ಸರಕಾರ ಕಾರ್ಯವನ್ನು ಕೊಡಗಲು ಪರಿಶೀಲನಾ ಸಮಿತಿಯನ್ನು ನೇಮಿಸಲಾಯಿತು. ಈ ಠರಾವಿನ ಅನುಗುಣವಾಗಿ ಶ್ರೀ ಎಸ್. ಕೆ. ಅಮೀನ್, ಶ್ರೀ ಎಸ್. ಎಸ್. ಕೊಳ್ಳೆಬೈಲ್, ಶ್ರೀಮತಿ ಲೀಲಾವತಿ ರೈ ಮತ್ತು ಶ್ರೀಮತಿ ಜಿ. ಶ್ರೀನಿವಾಸ ಅಲ್ಪಾಕರ್ ಇವರನ್ನೊಳಗೊಂಡ ಸಮಿತಿಯು ಒಂದು ವಾರದೊಳಗೆ ಕಾಂಗ್ರೆಸ್ ಕಾರ್ಯಾಲಯಕ್ಕೆ ವರದಿ ಒಪ್ಪಿಸಬೇಕೆಂದು ನಿರ್ಧರಿಸಲಾಯಿತು.

ಶ್ರೀ ಕೆ. ಕೆ. ಶೆಟ್ಟರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಪರವಾಗಿ ಬೆಳ್ಳಂಗಡಿ ಬ್ಲೋಕ್ ಕಾಂಗ್ರೆಸ್ ಸಮಿತಿಗೆ ಕೃತಜ್ಞತೆ ಸೂಚಿಸಿದ ಮೇಲೆ ರಾಷ್ಟ್ರಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ನೆರೆಹಾವಳಿಗೀಡಾದವರಿಗೆ ಸಹಾಯದ ಕೇಳಿಕೆ

ಹೆಗ್ಗೆ ಪಂಚಾಯತ್ ಕ್ಷೇತ್ರದಲ್ಲಿ ನೆರೆಯಿಂದ ಹಲವಾರು ಮನೆಗಳು ಕೆಡಿದ್ದವೆ. ನೂರಾರು ಎಕ್ರೆ ಭತ್ತದ ಬೆಳೆ ಕೊಳೆತುಹೋಗಿದೆ. ತಾ. 23-7-68ರಲ್ಲಿ ಪಂಚಾಯತ್ ಅಧ್ಯಕ್ಷ ಗುರುರಾಜ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿದ ಪಂಚಾಯತ್ ಸಭೆಯಲ್ಲಿ ನೆರೆ ಹಾವಳಿಗೀಡಾದವರಿಗೆ ಸರಕಾರದಿಂದ ಸಹಾಯ ಬಗೆ ಮಂತೆಯೂ, ಬೀಜ ಮತ್ತೆರೆ ದೊರೆಯುವಂತೆಯೂ ನಿರ್ಣಯಿಸಲಾಯಿತು. ಈ ಸಂಬಂಧ ತುರ್ತು ಪರಿಹಾರಾರ್ಥ ಉಡುಪಿ ತಹಸೀಲ್ದಾರರು ಸ್ವಲ್ಪ ಧನ ಹಂಚಿದರು. ಸಭೆಯಲ್ಲಿ ಹಾಜರಿದ್ದ ಶ್ರೀ ಎಸ್. ಕೆ. ಅಮೀನ್, ಎಂ. ಎಲ್. ಎ. ಅವರು ಈ ಕುರಿತು ತನ್ನಿಂದಾದ ಸಹಾಯ ಮಾಡುವುದಾಗಿ ತಿಳಿಸಿದರು.

ಆಗಸ್ಟ್ 15

ನವಯುಗ
ಸ್ವಾತಂತ್ರ್ಯ ವಿಶೇಷ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ವಿಚಾರಪರ ಲೇಖನ, ಕವನ, ವಿಡಂಬನೆ ಮೊದಲಾದುವುಗಳಿಂದ ಕೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲೂ ಬೊಂಬಾಯಿ, ಮದರಾಸು ಮೊದಲಾದ ಹೊರರಾಜ್ಯ ಹಾಗೂ ವಿದೇಶದಲ್ಲೂ ಪ್ರಚಾರದಲ್ಲಿರುವ 'ನವಯುಗ'ವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ.

ದ. ಕ. ಜಿಲ್ಲೆಯ ಪ್ರವಾಹ ಪೀಡೆ

ವಿಭಾಗಾಧಿಕಾರಿಗಳ ವಿವರಣೆ

ಮೈಸೂರು ವಿಭಾಗಾಧಿಕಾರಿ ಶ್ರೀ ಆರ್. ಶ್ರೀನಿವಾಸನ್ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ ಮತ್ತು ಮಂಗಳೂರು ತಾಲೂಕುಗಳ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಂಚರಿಸಿ ಬಂದರು. ಅವರು ಸರಕಾರ ಮತ್ತು ಖಾಸಗಿ ರಂಗಗಳು ಒಂದಾಗಿ ಪ್ರವಾಹ ಪೀಡಿತರ ಮಸರ್ಥಿವೇಶದಲ್ಲಿ ಆಸಕ್ತರಾಗಿರುವುದನ್ನು ಕಂಡು ತುಂಬ ಪ್ರಸನ್ನರಾದರು.

ಪ್ರವಾಹದಿಂದ ಸುಮಾರು ೧೪೮ ಹಳ್ಳಿಗಳಿಗೆ ಅಂಶಿಕ ಹಾನಿ ತಟ್ಟಿದೆ. ಅನಗಳ್ಳಿ, ಹಟ್ಟಿಕುದ್ರು ಮತ್ತು ಶೀರೂರು ಹಳ್ಳಿಯು ಒಂದಂಶ ಸಂಪೂರ್ಣ ನಷ್ಟವಾಗಿದೆ. ೨೬೦೦ ಕುಟುಂಬಗಳು ನೊಂದಿವೆ, ೪೫೦ ಮನೆಗಳು ಬಿದ್ದಿವೆ. ಇವುಗಳ ಅಂದಾಜು ನಷ್ಟ ರೂ. ೩ ಲಕ್ಷ. ಮತ್ತೆ ಸು ೧ ಸಾವಿರ ಮನೆಗಳಿಗೆ ಅಂಶಿಕ ಹಾನಿ ತಟ್ಟಿ ಸು. ರೂ. ೨,೧೩,೦೦೦ ನಷ್ಟವಾಗಿದೆ. ೭೨ ಜಾನುವಾರುಗಳು ೧೦ ಮನುಷ್ಯ ಪ್ರಾಣಗಳು ಕಳೆದುಹೋಗಿವೆ. ೯೫೦೦ ಎಕ್ರೆ ಹೊಲದಲ್ಲಿ ನೀರು ನಿಂತಿದ್ದರೂ ೨,೫೦೦ ಎಕ್ರೆಗೆ ಮಾತ್ರ ಹಾನಿಯಾಗಬಹುದು. ಇಲ್ಲಿಯೂ ಕೃಷಿ ಇಲಾಖೆಯ ಸಲಹೆಯ ಮೇಲೆ ಪುನರ್ಬಿತ್ತನೆ ಸಾಧ್ಯ—ಇದು ಅಂದಾಜು ಅಂಕೆಸಂಖ್ಯೆಗಳು. ಹಾನಿಯ ಸಂಪೂರ್ಣ ವಿವರಗಳನ್ನು ಪರಿಶೀಲಿಸಿ ಪಡೆಯಲು ತಕ್ಕ ಆಜ್ಞೆ ನೀಡಲಾಗಿದೆ. ರಸ್ತೆ—ಮೋರಿಗಳ ನಾಶದಿಂದ ಸು. ೧೦ ಲಕ್ಷ ರೂಪಾಯಿ ನಷ್ಟ ಸಂಭವಿಸಿದೆ.

ಪ್ರವಾಹ ಪೀಡಿತರಿಗೆ ಸುಸರ್ಥಿವೇಶನಕ್ಕೆ ಶೀಘ್ರ ಮತ್ತು ದೀರ್ಘ ಕಾಲೀನ ಕ್ರಮಗಳನ್ನು ಸರಕಾರ ಕೈಕೊಳ್ಳುತ್ತದೆ. ಪ್ರವಾಹ ಪೀಡಿತರಿಗೆ ನಗದಿ ಸಹಾಯ (೫೦ ಸಾವಿರ) ರೈತರಿಗೆ ತಕಾವಿ ಸಾಲ (೪ ಲಕ್ಷ) ಕಳೆದುಕೊಂಡ ಹೊಲವನ್ನು ಮತ್ತೆ ಪಡೆಯಲು ಸಹಾಯ (೩॥ ಲಕ್ಷ) ಮನೆ—ಹೊಲ ಕಳೆದುಕೊಂಡವರಿಗೆ ಫಿಬಡ್ಡಿ ಸಾಲ—ಹೀಗೆ ಒಟ್ಟು ೯ ಲಕ್ಷ ರೂಪಾಯಿಗಳನ್ನು ಪರಿಹಾರ ಕಾರ್ಯಗಳಿಗೆ ಕೂಡಲೇ ಸರಕಾರ ಒದಗಿಸಿದೆ. ಒಂದು ಸಾವಿರ ಕ್ವಿಂಟಲ್ ಅಕ್ಕಿ, ೨೬೦೦ ಕ್ವಿಂಟಲ್ ಮಿಲೊ ಮತ್ತು ೫೦೦ ಕ್ವಿಂಟಲ್ ಗೋಧಿಯನ್ನು ಹೆಚ್ಚಿಗೆ (ಪ್ರವಾಹ ಪೀಡಿತರ ನೆಪದಿಗಾಗಿ) ಬಿಡುಗಡೆ ಮಾಡಿದೆ.

ಮನೆಗಳನ್ನು ಸಂಪೂರ್ಣವಾಗಿ ಕಳೆದುಕೊಂಡವರಿಗೆ ಉಚಿತ ಗೃಹನಿರ್ಮಾಣ ವೆಚ್ಚ ರೂ. ೧೦೦೦ ಮರಮಟ್ಟುಗಳ ನೆಲ ನೀಡುವ ಯೋಜನೆಯಿದೆ. ಕೃಷಿ ಇಲಾಖೆಯ ನಿರ್ದೇಶನದಂತೆ ಪುನರ್ಬಿತ್ತನೆ ನಡೆಸಲು ಭತ್ತದ ಬೀಜಗಳನ್ನು ಒದಗಿಸಲಾಗುವುದು. ಪ್ರವಾಹ ಪೀಡಿತರಿಗಾಗಿ ಪಿ.ಡಬ್ಲ್ಯೂ.ಡಿ.ಯಲ್ಲಿ ಉದ್ಯೋಗ ದೊರಕಿಸುವ ಪ್ರಯತ್ನವೂ ನಡೆಯುತ್ತಿದೆ. ಪ್ರವಾಹಕ್ಕೆ ಹೂವಾಗಲೂ ಗುರಿಯಾಗುವ ಬೈಲು ಪ್ರದೇಶದಲ್ಲಿ ತೆಂಗು ಗಾಟುವ ದೀರ್ಘಕಾಲೀನ ಯೋಜನೆಯೂ ಇದೆ. ಗುರುಪುರ ನದಿಯ ನೀರು ಮಂಗಳೂರು ಬಂದರ ಮತ್ತು ಉದ್ಯಮಿಕ ಪ್ರದೇಶಕ್ಕೆ ಹಾನಿ ತರುವುದರಿಂದ ತಣ್ಣೀರುಬಾವಿಯ ಬಳಿಯಲ್ಲಿ ಕಡಿದು ಹೊಳೆಯನ್ನು ಸಮುದ್ರಕ್ಕೆ ಕೂಡಿಸುವ ಯೋಜನೆಯೊಂದಿದೆ. ಉಡುಪಿ, ಕುಂದಾಪುರ ಮತ್ತು ಮಂಗಳೂರು ಕರಾವಳಿ ಪ್ರದೇಶಗಳಲ್ಲಿ ನದಿಗಳ ಕೆಸರ ತೆಗೆಯುವುದರಿಂದ ನೆರೆಯೇರದಂತೆ ತಡೆಯುವುದು ಸಾಧ್ಯವಾಗಬಹುದು. ಮರಮಂತೆಯಲ್ಲಿ ಸಮುದ್ರ ಮುಂದುವರಿಯದಂತೆ ಸಿಮೆಂಟಾಗೋಡೆಯನ್ನೂ ರಚಿಸಬಹುದು.

ಜೆಳಗು ಬಾ...!

ಜೆಳಗು ಬಾ! ಜ್ಯೋತಿಯುಸಾ
ನೆನ್ನೆದೆಯ ಮಂದಿರದಿ
ಸ್ವಾತಂತ್ರ್ಯ ದೀವಿಗೆಯ ಜೆಳಗು ಬಾ
ಶತಮಾನದಳ ತಿಮಿರದ
ಮತಿಗುಳನು ಸರಿಸಿ
ಜೆಳಕಿನ ಕಿರಣವ ಹರಿಸಿ
ಶಂಗವಲ್ಲಿಯುಸಿರಿಸಿ
ಚಿರಕಾಲ ಜೆಳಗುವಂತೆ
ಸ್ವಾತಂತ್ರ್ಯ ಉಳಿಯುವಂತೆ
ಸ್ವಾತಂತ್ರ್ಯ ದೀವಿಗೆಯ ಜೆಳಗು ಬಾ...!

—ಯನ್. ಡಿ. ಶೆಟ್ಟಿ.

ವಾಚಕರ ಕೇಳಿಕೆ—

ಗಂಗೊಳ್ಳಿ ಸೇತುವೆ

ಜಿಲ್ಲೆಯ ಉತ್ತರ ವಿಭಾಗದ ಬೃಹತ್ ನದಿ ಗಂಗೊಳ್ಳಿಗೆ ಅತ್ಯಂತ ಸಾಹಸಪೂರ್ವಕವಾಗಿಯೇ ಸೇತುವೆಯ ರಚನೆಯೊಯಿತು. ಅನಸ್ಕಳ್ಳ, ಎಪ್ರೂಚಾರೋಡುಗಳೂಸಮರ್ಪಣಗೊಂಡವು. ಈ ಸೇತುವೆಗಳು ಮಾನ್ಯ ಮಂತ್ರಿಮಹೋದಯರಿಂದ ಉದ್ಘಾಟನೆಗೊಂಡು ಹಲವು ತಿಂಗಳು ಕಳೆದವು. ಇದರಿಂದ ಜಿಲ್ಲೆಯ ಉತ್ತರೋತ್ತರಕ್ಕೂ ನೇರ ಸಂಪರ್ಕದೊರೆಯುವಂತಾಯಿತು.

ಆದರೆ ಕೈಗೆ ಬಂದ ತುತ್ತು ಇನ್ನೂ ಬಾಯಿಗೆ ಬೀಳಲಿಲ್ಲ. ಈ ಹೊಸ ಸೇತುವೆಯಲ್ಲಿ ಸಾರಿಗೆ ಬಸ್ಸುಗಳು ಸಂಚರಿಸಲು ಇನ್ನೂ ಆರಂಭವಾಗಿಲ್ಲ. ಇದೇಕೆ ಹೀಗೆ ಎಂಬುದು ಗೊತ್ತಿಲ್ಲ. ಸಾರ್ವಜನಿಕರ ಉಪಯೋಗಕ್ಕೆ ಬಾರದೆ ಈ ಸೇತುವೆಯ ಸಂಪೂರ್ಣ ಪ್ರಯೋಜನವಾಗುವುದಿಲ್ಲ. ಅದುದರಿಂದ ಸಂಬಂಧಪಟ್ಟವರು ಇತ್ತ ಲಯವಿಟ್ಟು ಗಮನ ಹರಿಸಬೇಕು—ಎಂದೊಬ್ಬ ವಾಚಕರು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ.

ಪೂನೆಯಲ್ಲಿ ಸ್ವಾಮಿ ನಿತ್ಯಾನಂದರ ಪುಣ್ಯತಿಥಿ ಆಚರಣೆ

ತಾ. 22-7-68ರಂದು ಸ್ವಾಮಿ ನಿತ್ಯಾನಂದ ಮಹಾರಾಜರ 7ನೇ ಪುಣ್ಯತಿಥಿಯು ಪೂನೆಯಲ್ಲಿ ವಿಜೃಂಭಣೆಯಿಂದ ಆದರ್ಶ ರೀತಿಯಲ್ಲಿ ಆಚರಿಸಲ್ಪಟ್ಟಿತು. ಇದನ್ನು ಜರಗಿಸುವ ವ್ಯವಸ್ಥೆಗೊಳಿಸಿದ ಉಡುಪಿ ಡೆಕ್ಕಾನ್ ಕಾಫೀಹೌಸಿನ ಮೂಲಕರಾದ ಶ್ರೀರಾಮಣ್ಣ ಜೋಗಪ್ರಭಟ್ಟರು 1,200 ಮುಸ್ಲಿಫಲ್ ಶಾಲಾ ವಿದ್ಯಾರ್ಥಿಗಳಿಗೂ ಇತರ 100 ಜನರಿಗೂ ಸಿಹಿತಿಂಡಿ ಹಂಚಿದರು. ಅಲ್ಲದೆ ಈ ಸಂದರ್ಭದಲ್ಲಿ ಸಾಧುಸಂತರನ್ನು ಬರಮಾಡಿಕೊಂಡು ಅವರನ್ನೂ ವ್ಯವಸ್ಥಾಪಕರು ಸತ್ಕರಿಸಿದರು. ಸ್ವಾಮಿ ನಿತ್ಯಾನಂದರ ಶಿಷ್ಯ ದೇವದಾಸ್ ಸ್ವಾಮಿ ಇವರು ಈ ಸಮಾರಂಭದಲ್ಲಿ ಹಾಜರಿದ್ದರು. ಶ್ರೀ ರಾಮಣ್ಣ ಶೆಟ್ಟರು ತಮ್ಮ ಧರ್ಮಬುದ್ಧಿಯಿಂದ ಪೂನೆಯ ಭಕ್ತಮಿತ್ರರಿಗೆ ಪ್ರಿಯರಾಗಿದ್ದಾರೆ.

ಉಡುಪಿ ಕರ್ನಾಟಕ ಸಂಘದ
ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ.

ಸರ್ವಋತುವಿನ ಪುಸ್ತಕ ಭಂಡಾರ
ಪುಲುಕೋಟೆ, ಉಡುಪಿ, ದ. ಕ.

ಭಜನೆ ಸಪ್ತಾಹ ಮಹೋತ್ಸವ

ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆದುಬರುತ್ತಿರುವ ಭಜನೆ ಸಪ್ತಾಹ ಮಹೋತ್ಸವವು ತಾ. ೦೧ ರಿಂದ 80-7-68ರಿಂದ ತಾ. 6-8-68ರ ತನಕ ಜರಗುವುದೆಂದೂ, ಸರ್ವರೂ ಬಂದು ಸಹಕರಿಸಿ ಶ್ರೀ ದೇವರ ಶ್ರೀಮುಡಿ ಗಂಧಪ್ರಸಾದವನ್ನು ಸ್ವೀಕರಿಸಬೇಕೆಂದೂ ಆಡಳಿತ ಮೊಕ್ತೇಸರ ಡಾ! ಪಿ. ರಾಘವೇಂದ್ರ ನಾಯಕರು ಅಪೇಕ್ಷಿಸುತ್ತಾರೆ.

ವಾರ್ಷಿಕ ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ನಿರ್ಧಾರ

ಮಣಿಪಾಲ್, ಜು. ೨೫— ಇಲ್ಲಿಯ ಅಕಾಡಮಿ ಆಫ್ ಜನರಲ್ ಎಜುಕೇಶನ್, ಸಿಂಡಿಕೇಟ್ಬ್ಯಾಂಕ್ ಮತ್ತು ಉಡುಪಿ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಉಡುಪಿ ಹಾಗೂ ಮಣಿಪಾಲದಲ್ಲಿ ಪ್ರತಿವರ್ಷ ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

ವಾಲಿಬಾಲ್, ಬಾಸ್ಕೆಟ್‌ಬಾಲ್, ಬಾಲ್ ಬ್ಯಾಡ್ಮಿಂಟನ್(ಸೈಂಗಲ್ಸ್),ಶಟ್ಲ ಬ್ಯಾಡ್ಮಿಂಟನ್(ಸಿಂಗಲ್ಸ್ ಹಾಗೂ ಡಬಲ್ಸ್), ಟೆನಿಸ್ (ಸಿಂಗಲ್ಸ್ ಹಾಗೂ ಡಬಲ್ಸ್), ಟೇಬಲ್ ಟೆನಿಸ್(ಸಿಂಗಲ್ಸ್ ಹಾಗೂ ಡಬಲ್ಸ್)ಮತ್ತು ಕ್ರಿಕೆಟ್ ಆಟಗಳಲ್ಲಿ ಸ್ಪರ್ಧೆಗಳಿರುತ್ತವೆ. ಅವೆಲ್ಲವನ್ನೂ ರಾಜ್ಯಮಟ್ಟದಲ್ಲಿ ನಡೆಸಲಾಗುತ್ತದೆ. ಕ್ರಿಕೆಟ್ ಸ್ಪರ್ಧೆಯನ್ನು ಮಾತ್ರ ಜಿಲ್ಲಾಮಟ್ಟದಲ್ಲಿ ನಡೆಸಲಾಗುವುದು.

ಫುಟ್‌ಬಾಲ್ ಸ್ಪರ್ಧೆಗಳು ಅಕಾಡಮಿ ಶಾಲೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಇತರ ಸ್ಪರ್ಧೆಗಳಲ್ಲಿ ಮಾನ್ಯತೆ ಪಡೆದ ಸಾರ್ವಜನಿಕ ತಂಡಗಳೂ, ಶಾಲಾಕಾಲೇಜುಗಳೂ ಭಾಗವಹಿಸಬಹುದು.

ಅವುಗಳನ್ನು ಡಿಸೆಂಬರ್ ಮೂರನೆ ವಾರದ ಹೊತ್ತಿಗೆ ನಡೆಸಲಾಗುವುದು ಕ್ರಿಕೆಟ್ ಸ್ಪರ್ಧೆಗಳನ್ನು ಮಾತ್ರ ಸೆಪ್ಟೆಂಬರ್‌ನಿಂದ ನಡೆಸಲಾಗುವುದು. ಅವುಗಳನ್ನು ವಿವಿಧ ಆಟಗಳ ರಾಜ್ಯ ಸಮಿತಿಗಳ ಸಹಾಯದಿಂದ ನಡೆಸಲಾಗುವುದು.

ಈ ಸಂಬಂಧದಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಶ್ರೀ ಕೆ.ಕೆ. ಪೈಯವರು ಅಧ್ಯಕ್ಷರಾಗಿಯೂ ಶ್ರೀ ಟಿ. ರಮೇಶ್ ಯು. ಪೈಯವರು ಉಪಾಧ್ಯಕ್ಷರಾಗಿಯೂ, ಶ್ರೀ ಕೃ. ಶಿ. ಹರಿದಾಸ ಭಟ್ಟರವರು ಖಜಾಂಚಿಯಾಗಿಯೂ, ಶ್ರೀ ಯು. ದಾಮೋದರ್ ಮತ್ತು ಶ್ರೀ ಯು. ವಿಜಯನಾಥ ಶೆಣೈಯವರು ಕಾರ್ಯದರ್ಶಿಗಳಾಗಿಯೂ ಇದ್ದಾರೆ. ಶ್ರೀಯುತರಾದ ಡಿ. ಎಸ್. ಸೋಮಯ್ಯಂದರ್, ಎಂ. ಎಂ. ಶೆಟ್ಟಿ, ಕೆ. ಎಂ. ಬಲ್ಲಾಳ್ ಮತ್ತು ಕೆ. ಗೋವಿಂದ ರಾವ್‌ರವರು ಸದಸ್ಯರಾಗಿದ್ದಾರೆ.

---

o o o

ನಾವು ಹೆಚ್ಚು ಓದಿ ತಿಳುವಳಿಕೆ ಬೆಳೆಸಿದಂತೆ ನಮ್ಮ ಅಜ್ಞಾನದ ಆಳವೂ ಅರಿವಾಗುತ್ತದೆ.

o o o

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಮಂಗಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಿಯಾಂ ಪ್ರತಿಗಳಿಗೆ ವಿಚಾರಿಸಿರಿ :.

ನವಯುಗ ಪ್ರೆಸ್, ಉಡುಪಿ.

ಕಾಪಿನ ಇತಿಹಾಸ—೨

(ಎರಡನೇ ಪುಟದಿಂದ)

ಗದಾ, ಪದ್ಮಗಳನ್ನು ಹಿಡಕೊಂಡ ರೀತಿಯೂ ಪ್ರಯೋಗ ಚಕ್ರವೂ ವಿಗ್ರಹದ ಅಲಂಕಾರವೂ ಕ್ರಿ. ಶ. 12—13ನೇ ಶತಮಾನದ ಶಿಲ್ಪವನ್ನು ಸೂಚಿಸುತ್ತವೆ. ಗರ್ಭಗೃಹದ ಗೋಡೆಗಳಲ್ಲಿರುವ ದ್ವಾರದಂತಹ ಗೂಡುಗಳು, ಹೊವಿನಾಕಾರದ ಡಿಸ್ಕಾಮುಗಳು ಶಿಲಾಸ್ತಂಭಗಳು ಪ್ರಾಚೀನತೆಯನ್ನು ಸೂಚಿಸುತ್ತವೆ. ಈ ದೇವಸ್ಥಾನದ ತೀರ್ಥ ಮಂಟಪದಲ್ಲಿರುವ ಕಂಬಗಳ ಮೇಲಿರುವ ನಕಾಶೆಗಳೂ ಕೆತ್ತನೆಗಳೂ ವಿಜಯನಗರದ ಕಾಲವನ್ನು ತಿಳಿಸುತ್ತವೆ.

ಕಾಪಿನ ಸಮೀಪ ಮೂಳೂರೆಂಬ ಗ್ರಾಮವಿದೆ. ಸು. 10ನೇ ಶತಕಕ್ಕೆ ಇದು ಮೂಲಾಪುರವೆಂಬುದಾಗಿ ದಾಖಲೆಗೊಂಡಿತ್ತು. ಇಲ್ಲಿ ಒಂದು ಗಡಿಯಲ್ಲಿ ಸು. ಎರಡು ಅಡಿ ಎತ್ತರದ ಬುದ್ಧನ ಶಿಲಾಮೂರ್ತಿ ಕಂಡುಬರುತ್ತದೆ. ಇದು ಎಷ್ಟೆಂದರೂ ಒಂದು ಸಾವಿರ ವರ್ಷಗಳಷ್ಟು ಪ್ರಾಚೀನ. ಪ್ರಾಯಶಃ ನಮ್ಮ ಜಿಲ್ಲೆಯಲ್ಲಿ ಬುದ್ಧನ ಮೂರ್ತಿ ಕಲ್ಲಿನಲ್ಲಿ ಇತರತ್ರ ಇಲ್ಲವೆನ್ನಬಹುದು. ಈ ವಿಗ್ರಹವನ್ನು ವಾಸುದೇವನೆಂದು ಸೂಚಿಸಿ ಮಾಡುತ್ತಾರೆ. ಈಗ ಜೀರ್ಣೋದ್ಧಾರವಾದ ಈ ಚಿಕ್ಕ ಗುಡಿಯ ಸ್ಥಳದಲ್ಲಿ ಹಿಂದಕ್ಕೆ ಮಧ್ವ ಪ್ರಮಾಣದ ದೇವಾಲಯವಿತ್ತೆಂದು ತಿಳಿದುಬರುತ್ತದೆ.

ಕಾಪಿನಲ್ಲಿ ಮೂರು ಮಾರಿಗುಡಿಗಳಿವೆ. ಮಾರಿಯಮ್ಮನ ಆರಾಧನೆಯೂ ಎಂದಿನಿಂದ ಪ್ರಾರಂಭವಾಯಿತೆಂದು ಹೇಳುವುದು ದುಸ್ತರ. ಪ್ರಾಯಃ ಕೆಲದಿನಾಯಕರ ಪ್ರಾದುರ್ಭಾವದಿಂದ ಇದು ಪ್ರಾಬಲ್ಯಕ್ಕೆ ಬಂದಿರಬೇಕು. ಕಾಪಿನಲ್ಲಿ ನಡೆಯುವ ಮಾರಿಪೂಜೆಯು ತುಳುನಾಡಿನ ಏಳು ವೈಶಿಷ್ಟ್ಯಗಳಲ್ಲಿ ಒಂದೆಂಬುದಾಗಿ ತಿಳಿಯಲ್ಪಟ್ಟಿದೆ.

ಕಾಪಿನ ಸಮೀಪದಲ್ಲಿರುವ ಮಲ್ಲಾರಿನಲ್ಲಿ ಟಿಪ್ಪು ಸುಲ್ತಾನನ ಕಾಲದ ಕೋಟೆಯು ಕಂಡುಬರುತ್ತದೆ. ಫೆರಿಗ್ರಾಮಗಳಾದ ಮಜೂರು ಮತ್ತು ಕರಂದಾಡಿಗಳಲ್ಲಿ ಕಂಡುಬರುವ ಪ್ರಯೋಗ ಚಕ್ರವನ್ನು ಧರಿಸಿದ ಶ್ರೀ ಜನಾರ್ದನ ಮೂರ್ತಿಗಳು ಶಿಲ್ಪದ ಆಧಾರದಿಂದ ಕ್ರಿ. ಶ. 11-12ನೇ ಶತಕಗಳಿಗೆ ಅನ್ವಯಿಸುತ್ತವೆ. ಸುಮಾರು ಒಂದು ಸಾವಿರ ವರ್ಷಗಳ ಹಿಂದಣ ಶ್ರೀ ಗಣೇಶ ದೇವಾಲಯವು ಪಾದೂರೆಂಬ ಗ್ರಾಮದಲ್ಲಿದೆ. ಆದರೆ ಪಾದೂರು ಎಲ್ಲೂರು ಸೀಮೆಗೆ ಸೇರಿದ ಗ್ರಾಮ.

ಧರ್ಮನಾಥ ತೀರ್ಥಂಕರನ ಬಸದಿಯು ಸಂಪೂರ್ಣವಾಗಿ ಪಾಳುಬಿದ್ದಿದೆ. ಇದು ಸುಮಾರು 14ನೇ ಶತಮಾನದ ಬಸದಿಯಾಗಿದೆ, ತುಳುನಾಡಿನಲ್ಲಿರುವ 180 ಬಸದಿಗಳಲ್ಲಿ ಇದೊಂದಾಗಿದೆ.

[ವಿ. ಸೂ.— ಅಧಿಕೃತವಾದ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಸ್ಥಳೀಯ ಇತಿಹಾಸವನ್ನು ಬರೆದು ಜನಸಾಮಾನ್ಯರಿಗೆ ತಿಳಿಸುವುದು ಅಗತ್ಯವಾಗಿದೆ. ಇದರಿಂದಾಗಿ ಇತಿಹಾಸ ಸಂಬಂಧವಾದ ಊಹಾಪೋಹಗಳು ಮಾಯವಾಗಿ ಸತ್ಯ ಸಂಗತಿ ತಿಳಿಯುವ ಅವಕಾಶವಾಗಿದೆ. ಇಂತಹ ಒಂದು ಸ್ಥಳೀಯ ಇತಿಹಾಸ ಈ ಲೇಖನದ ವಸ್ತುವಾಗಿದೆ.]

ಜೀವನದ ಗುರಿ

ಲೇಖಕ — 'ಶಿವ'

ಮಾನವ ಜೀವನ ಕ್ರಿಯಾತ್ಮಕವಾದುದು. ಕಾರ್ಯಕವೇ ಮನುಷ್ಯನ ಸ್ವಭಾವ, ಆದ್ದರಿಂದ ಕ್ರಿಯಾಶೀಲನಾಗದೆ ಇರಲು ಆತನಿಗೆ ಸಾಧ್ಯವಿಲ್ಲ. ಆತನು ಸತ್‌ಕ್ರಿಯೆಯಲ್ಲಿ ನಿರತನಾಗದಿದ್ದರೆ ಆತನು ದುಷ್ಕ್ರಿಯೆಗೆ ಬಲಿಯಾಗುತ್ತಾನೆ. ಆದ್ದರಿಂದ ಮನುಷ್ಯನು ಪ್ರತಿಕ್ಷಣ ಉತ್ತಮ ಕ್ರಿಯೆಯಲ್ಲಿ ನಿರತನಾಗಿರಬೇಕು.

ಮನುಷ್ಯನು ತಪ್ಪುದಾರಿ ತುಳಿಯುವುದಕ್ಕೆ ಮುಖ್ಯ ಕಾರಣವೆಂದರೆ ಆತನ ಹೆಗಲ ಮೇಲೆ ಜವಾಬ್ದಾರಿಯುತ ಕೆಲಸದ ಭಾರ ಇಲ್ಲದುದು. ಆದುದರಿಂದ ಜವಾಬ್ದಾರಿಯುತ ಕೆಲಸಕ್ಕೆ ಹೆಗಲು ಕೊಟ್ಟರೆ ತಪ್ಪುದಾರಿ ತುಳಿಯುವುದು ತಪ್ಪುವುದು. ತಪ್ಪುದಾರಿ ತುಳಿಯುವವನು ಕ್ರಮಾನುಗತವಾಗಿ ಅಧಃಪತನ ಹೊಂದುವನು, ದಾರಿ ತಪ್ಪಿ ಬದುಕುವುದಕ್ಕಿಂತ ಮೃತ್ಯುಲೇಸು.

ಉತ್ತಮ ಮತ್ತು ಜವಾಬ್ದಾರಿಯುತ ಕ್ರಿಯೆಯೆಂದರೆ ಹೃದಯ ಪವಿತ್ರತೆವನ್ನು ಬೆಳೆಸಿ, ಮಾನವಿಕ ಉತ್ತುಂಗತೆಗೆ ಸಹಾಯಕವಾಗುವುದು. ಇದು ಕ್ರಿಯೆ ಮಾಡುವವನಿಗೂ ಇತರರಿಗೂ ಹಿತಕರವಿದ್ದು ಸರ್ವಾಂಗಗಳ ಸಾಧನೆಯ ಮನೋಭಾವವನ್ನು ಜಾಗೃತಗೊಳಿಸುತ್ತದೆ.

ಉತ್ತಮ ಧ್ಯೇಯದ ಹಾಗೂ ಗುರಿಯ ಜವಾಬ್ದಾರಿಯುತ ಕೆಲಸದಲ್ಲಿ ನಿರತನಾಗುವುದೆಂದರೆ ದಿನ ರಾತ್ರಿ ಅದರಲ್ಲಿ ತಲ್ಲೀನನಾಗಿರುವುದೆಂದಲ್ಲ. ಈ ಕೆಲಸದ ಮಧ್ಯೆ ಚಿಂತನೆಗೆ ಅವಕಾಶ ಒದಗಿಸಿಕೊಳ್ಳಬೇಕು. ಏನು ಮಾಡಬೇಕು, ಏನು ಮಾಡಬಾರದೆಂಬುದರ ತುಲನೆಗೆ ಅನುಬೇಕು. ದೈವಿಕ ಭಕ್ತಿ, ಪ್ರಾರ್ಥನೆ, ಕುಟುಂಬದವರೊಡನೆ ಸಂಪರ್ಕಗಳಿಗೆಡೆ ಇರಬೇಕು. ಹೀಗೆ ಚಿಂತನೆಗೆ ಅವಸರವಿಲ್ಲದ ಕ್ರೀಯೂ ಜೀವನ ಚಿಪ್ಪದ ಪಂಜರವಾದೀತು.

ಕ್ರಿಯೆ ಎಂದಾಗ ಅದು ಸತ್‌ಕ್ರಿಯೆಯಾಗಿರಬೇಕು. ನ್ಯಾಯ, ನಿಷ್ಠೆಯ, ಶೀಲವರ್ಧನೆಯ, ಬೌದ್ಧಿಕ, ಮಾನಸಿಕ ಹಾಗೂ ಆತ್ಮ ತೃಪ್ತಿಯ ಕ್ರಿಯೆಯಾಗಬೇಕು. ಈ ಕ್ರಿಯೆ ಕೆಲಸ ಮಾಡುವವನ ಮಾನವ ಜೀವನ ಜಯಕ್ಕೂ, ಸಾರ್ಥಕತೆಗೂ ಸಹಕಾರಿಯಾಗಿರಬೇಕು. ಅದ್ದರಿಂದ ತನ್ನ ಕೆಲಸದಲ್ಲಿ ನಿರತನೆಂದು ತನಗೆ ಸಂಬಂಧಿಸಿದ ಇತರರನ್ನು ಕಡೆಗಣಿಸುವುದು ದುಷ್ಟಿಯೆನಿಸೀತು. ಮಾನವನ ಪ್ರತಿಕ್ರಿಯೆ ದೈವೀ ಮುಖವಾಗಿರಬೇಕು. ಮಾನವ ಜೀವನದ ಚರಮ ಗುರಿ ದೈವೀ ಸಾಕ್ಷಾತ್ಕಾರವಾಗಿರುವದರಿಂದ ಸರ್ವ ಕ್ರಿಯೆ ದೈವೀ ಪ್ರೇಮದಿಂದ ಪಡೆಯಬೇಕು.

ಮಾನವ ಜೀವನದ ಗುರಿ ವಿಷಯ ಸುಖವಲ್ಲ; ಬದಲು ದೈವ ಸಾಕ್ಷಾತ್ಕಾರ. ವಿಷಯ ಸುಖವು ತ್ಯಾಜ್ಯವಲ್ಲ. ಆದರೆ ಅದು ಭಗವತ್ ಸಾಕ್ಷಾತ್ಕಾರಕ್ಕೆ ಸಾಧಕವಾಗಿರಬೇಕು. ಅದು ಹದ್ದು ಮೀರಿ ಭಗವತ್ ಸ್ಥಾನ ಆಕ್ರಮಿಸುವಂತಾಗಬಾರದು. ದೇವರ ಭಕ್ತಿ ಅಪ್ರಮೇಯವಾಗಿರುವವನ ನೈತಿಕ ನೆಲೆ ಬೆಲೆಗಳು ಜೀವನಗೌರವವು. ವಿಷಯ ಸುಖದಲ್ಲಿ ದಿಕ್ಕು ತಪ್ಪಿದವನ ಜೀವನ ಹಗುರವಾಗಿ ಅದು ತರಗೆಲೆ ಸದೃಶವಾಗುವುದು. ಸತ್ಯಚಿತ್—ಆನಂದ ಸಾಧಿಸದ ಜೀವನ, ಸಾರ್ಥಕ ಜೀವನವಾಗದು. ಈ ಸಾಧನೆಗೆ ಭಗವತ್ ಪ್ರೇರಣೆಯ ಸತ್‌ಕೃತಿಗಳೇ ಹೆದ್ದಾರಿ.

—ಅಧಾರದಿಂದ

ಮಣಿಪ.೦

ಸಾಮಾನ್ಯವಲ್ಲ ಈ ವಿಶಾಲ ಕ್ಷೇತ್ರ
'ಸೈ'ಯೆನಿಸಿ ಬೆಳೆದ ಈ ಕೋಟೆ
ತೀರ್ಥ
ಕ್ಷೇತ್ರ ತಾ ಬಲದು ಬರೆ ಸರಸ್ವತಿಯು ನಕ್ಕು
ಪವಡಿಸಿಹಳಲ್ಲಿ ಕಾಸಿನ್ನೇಕು ಬೇಕು?
॥ ೧ ॥

ಕವಿ—ರವಿ

ಕವಿ ಕಂಡುದನು ರವಿಯು ಕಾಣನು ಕಂಡ
ದಿವ್ಯ ದೃಷ್ಟಿಯಲಿ ಲೋಕವ ಸುತ್ತಿ ಬಂದ
ಬೆಳಕ ಬೀರಿದರೂ ರವಿ ಸಮಸ್ತ ಜಗಕೆಲ್ಲ
ಹೃದಯಾಂತರಾಳವನು ಕವಿ ಮಾತ್ರ ಬಲ್ಲ ॥ ೨ ॥

—ದೇವಚಂದ್ರ, ಮಿರ್ಜಾನ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯ ಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ.

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಬೆಲೆ: ರೂ. 2—00.

ಪುಸ್ತಕದ್ದು ಬೆಲೆಯೊಂದಿಗೆ 50 ಪೈಸೆ ಅಂಚೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಯನು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA 1—8—1968
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No: 31
Licensed to Post without Prepayment

ಕಥಾ ಪ್ರಪಂಚ

ಕಡಿದ ತಂತಿಯ ಮೇಲೆ

ಬರೆದವರು — ಶ್ರೀ ಎಚ್. ಎಂ. ಅಡಿಗ.

ರಾತ್ರಿ ಜಡಿಮಳೆ ಎಡೆಬಿಡದೆ ಧಾರಾಕಾರವಾಗಿ ಸುರಿಯುತ್ತಿತ್ತು. ಅಂಧಕಾರದಲ್ಲಿ ಸಿಡಿಯುವ ಸಿಡಿಮಿಂಚು ಪ್ರಕಾಶವನ್ನು ಬೀರುತ್ತಿತ್ತು. ಜೋಸೆಫ್ ಲೂಯಿಸರ ಮನೆಯ ಮಾಡಿನಿಂದ ಧೀರು ಒಳಬರುತ್ತಿತ್ತು. ಬಡತನದ ಬೇಗೆಯಿಂದ ಬಳಲಿ ಬೆಂಡಾದ ಜೀವ, ಈ ಮಳೆರಾಯನ ಕಾಟಕ್ಕೂ ಸಿಕ್ಕಿರಲಿಲ್ಲ!

ಮನೆಯ ಎಸುರುಗಡೆ ಹತ್ತು ತೆಂಗಿನ ಮರಗಳ ಸಾಲು. ಅದರಲ್ಲಿ ಜೋತಾಡುವ ಗೊನೆಗಳು. ಪಕ್ಕದಲ್ಲಿ ಚಿಕ್ಕ ಪಡ್ಡೆ. ಅದರಲ್ಲಿ ಬೆಳೆಯತ್ತಿರುವ ಫಲಗಳು. ಇದರ ಉತ್ಪತ್ತಿಯಿಂದ ತನ್ನ ಏಕೈಕ ಪುತ್ರ ಅಂಟೋನಿಯ ಜೀವನ ಸಾಗಬೇಕಾಗಿತ್ತು. ಜೋಸೆಫರ ಹೆಂಡತಿ ಪ್ರೀತಿಯ ಮರುತಿಗಾಗಿ ಅಂಟೋನಿಯನ್ನಿತ್ತು ಇಹಲೋಕದ ಯಾತ್ರೆಯನ್ನು ಮುಗಿಸಿದ್ದರು. ಈ ಜಗತ್ತನ್ನು ಅಂಟೋನಿಯು ನೋಡಿದ. ಆದರೆ ಹೆತ್ತ ತಾಯಿಯನ್ನು ಕಾಣಲಿಲ್ಲ! ಜೋಸೆಫರು ದಿನನಿತ್ಯದ ಕೆಲಸಗಳನ್ನು ತೀರಿಸಿಕೊಂಡು, ತನ್ನ ಚಿಕ್ಕ ಮಗುವಿನ ಆರೈಕೆಯನ್ನು ನೋಡಬೇಕಾಗಿತ್ತು. ಒಮ್ಮೊಮ್ಮೆ ತನ್ನ ಹೆಂಡತಿ ನೆನಪಾದಾಗ ಗೋಳೋ ಎಂಗು ಅಳುತ್ತಿದ್ದರು. ಅಂಟೋನಿಯು ಬಂದು 'ಡ್ಯಾಡಿ' ಎಂದು ಕರೆದಾಗ ಕಣ್ಣೀರು ಒರಸಿಕೊಂಡು ಮಗುವನ್ನು ತಬ್ಬಿಕೊಳ್ಳುತ್ತಿದ್ದರು. ದುಃಖದಲ್ಲೂ ಸಂತೋಷದ ನಗೆಯನ್ನು ಬೀರುತ್ತಿದ್ದರು. ರಾತ್ರಿ ಮಲಗುವ ಮುನ್ನ ಮಡಿಮಡಿ ಹಾಲನ್ನು ಕುಡಿಸಿ, ತೊಟ್ಟಿಲಿಗೆ ಹಾಕಿ, 'ನೀನೇ ನನ್ನ ಜೀವ—ಮಲಗು ಸುಖದಿಂದ..... ಜೋ ಜೋ' ಹಾಡುತ್ತಿದ್ದರು. ಹೆಣ್ಣಿನ ಜೀವನದಲ್ಲಿ ಬರುವ ಘಮ್ಯತೆ, ವಿನಯ ಎಲ್ಲವೂ ಈಗ ತುಂಬಿ ಹರಿಯುತಿತ್ತು; ಜೋಸೆಫ ಲ್ಲಿ. ಪ್ರಕೃತಿಯು ಇವೆಲ್ಲಾ ಗುಣಗಳನ್ನು ಹೆಣ್ಣಿನ ಜೀವದಲ್ಲಿ ತುಂಬುತ್ತಾಳೆ. ಆದರೆ ಕೆಲವು ಸಂದರ್ಭದಲ್ಲಿ ಗಂಡುಜೀವಿಗಳಲ್ಲಿಯೂ ತಂಬುತ್ತಾಳೆ ಎನ್ನುವುದಕ್ಕೆ ಇವರೇ ಸಾಕ್ಷಿ. ರಾತ್ರಿಯಲ್ಲಿ ಮಗು ಎದ್ದಾಗ, ಹಾಲಿನ ಬಾಟ್ಲಿಯನ್ನು ಮಗುವಿನ ಬಾಯಿಯಲ್ಲಿಟ್ಟು ಸುಮ್ಮನಿರಿಸುತ್ತಿದ್ದರು. ಥೂ! ಇದೆಂತಹ ಜೀವನ— ಎಷ್ಟು ಕಷ್ಟದ ಜೀವನ!! 'ಸುಖ'ದ ಪ್ರಪಂಚದಲ್ಲಿ ದುಃಖದ ಬಾಳು!!!

ಬೇಡವಾದ ಜೀವನವಾದರೂ, ಎಷ್ಟು ಜನರು ಜೀವನವನ್ನು ಕೈಯಲ್ಲಿ ಹಿಡಿದು ಕೊಂಡು ಸಾಗಿಸುವವರಿಲ್ಲ! ನಾಳೆ ಸುಖ ನಿಗೆ ಬಹುದೆಂದು ಕೊನೆಯ ಉಸಿರಿನ ತನಕವೂ ಆಶಿಸುತ್ತಾರಲ್ಲಾ! ಇಂತಹ ತರ ತರದ ಯೋಚನೆಯ ತರಂಗಗಳು ಜೋಸೆಫರ ಮನದಲ್ಲಿ ಬಂದು ನೂಯವಾಗುತ್ತಿದ್ದವು.

ಮುಂಜಾವ ಎದ್ದು ತೋಟ, ಗದ್ದೆಯ ಬಳಿಗೆ ಹೋಗಿ ಬರಲೇಬೇಕಾಗಿತ್ತು. ತೆಂಗಿನ ತೋಟಕ್ಕೆ ಧೀರು ಹಾಕುವಾಗ, ಅಂಟೋನಿ 'ಡ್ಯಾಡಿ' ಎಂದು ಅಳುವ ಕೂಗು. ತೋಟದ ಕೆಲಸವನ್ನು ಬಿಟ್ಟು ಮನೆಯ ಕಡೆಗೆ ಓಟ. ಮಗುವನ್ನು ಸಮಾಧಾನಿಸಿ, ಪುನಃ ತೋಟದ ಕಡೆಗೆ ಪಯಣ. ಪ್ರಾಪಂಚಿಕ ಸಂಸಾರದ ವ್ಯಾಮೋಹ, ಇನ್ನೊಂದೆಡೆ ಬದುಕಲು ಬೇಕಾದ ತೆಂಗಿನ ತೋಟದ ಕೆಲಸ. ಜೋಸೆಫರ ಜೀವನ ತ್ರಿಶಂಕುಸ್ವರ್ಗ. ಜೀವನ ಚಕ್ರದ ತಿರುಗಾಟ.

ಅಂಟೋನಿಯು ಬೆಳೆದು ನಿಂತ. ಬೆಳೆದು ಬಂದ ಮಗುವಿಗೆ ಉತ್ತಮ ವಿದ್ಯಾಭ್ಯಾಸ ಕೊಡಬೇಕೆನ್ನುವುದು ಜೋಸೆಫರ ಪ್ರಬಲ ಇಚ್ಛೆಯಾಗಿತ್ತು. ತನ್ನ ಕೆಲಸ ಮಗಳು ಮಾಡಬಾರದು. ವಿದ್ಯೆ ಕಲಿತು ಯಾವುದಾದರೂ ಉದ್ಯೋಗ ಹಿಡಿಯಬೇಕೆಂಬಾಸೆ.

ಶಾಲೆಗೆ ಸೇರಿಸಿದರು. ತನ್ನ ಚುರುಕು ಬುದ್ಧಿಯನ್ನು ಉಪಯೋಗಿಸುತಿದ್ದ. ಪ್ರಾಯಕ್ಕೂ ಬುದ್ಧಿಗೂ ಏಕಟ ತಂಬಂಧವಿಲ್ಲ ತಾನೆ? ಶಾಲೆಯಿಂದ ಮನೆಗೆ ಬಂದಾಗ ಡ್ಯಾಡಿಯೊಡನೆ, ಒಂದು ದಿನ "ಡ್ಯಾಡಿ ಇಂದು ನನ್ನ ಮಾಷ್ಟ್ರು, ನನ್ನ ಹತ್ತಿರ ಯುದ್ಧ ವೀರನಾಗುತ್ತೀಯ ಎಂದು ಕೇಳಿದರು. ನಾನು ಆಗುತ್ತೇನೆಂದು ಹೇಳಿದೆ" ಎಂದ.

"ಯೂ ಆರ್ ಗ?" ಕುತೂಹಲದಿಂದ ಡ್ಯಾಡಿ ಕೇಳಿದಾಗ—"ಮುಂದೆ ದೊಡ್ಡವನಾದಾಗ"—ಜೋಸೆಫರ, ಸಂತೋಷದಿಂದ ಒಮ್ಮೆ ನಕ್ಕುವನ್ನು ಬೀರಿದರು.

ಪ್ರತಿದಿನ ಶಾಲೆಗೆ ಹೋದವಾಗ "ಡಾಡಿ ಟಾ....ಟಾ!" ಎಂದು ಕೇಳುವಾಗ ಜೋಸೆಫರು—ಟಾಟಾ ಮಾಡುವರು. ಮಾರಲ ಬಂದಾಗ ಅತನ ಬಟ್ಟೆ ಬದಲಾಯಿಸಿ, ತಿಂಡಿ ಕೊಡುವರು. ಕುಡಿಯಲು ಅತನಿಗೆ ಹಾಲನ್ನು ಕೊಡುವಾಗ ದುಃಖದ ಕಣ್ಣೀರು, "ತಾಯಿ ಈಗ ಇರುತ್ತಿದ್ದರೆ; ಇದೆಲ್ಲಾ ಕೆಲಸಗಳನ್ನು ಇನ್ನೂ ಜಾಗೃತವಾಗಿ ಮಾಡುತ್ತಿದ್ದಳು. ಎಂದು ತನ್ನ "ಹಣೆಯ ಬರಹ"ದ ಬಗೆ ಚಿಂತಿಸುವರು. ಮಗನನ್ನು ಕಂಡಾಗ ಪುನಃ ಹಸನಾದ ಫಗಳು...

ಅಂಟೋನಿಯು ಶಾಲೆ ಮನೆಯಿದ ಒಂದು ಮೈಲು ದೂರವಿದೆ. ಚರ್ಚಿನವರೇ ಆ ಶಾಲೆಯನ್ನು ಪಡೆಯುತ್ತಿದ್ದರು.

ಥಣ್....ಥಣ್...ಶಾಲೆಯ ಗಂಟೆ ಭಾರಿಸಿದ ಕೂಡಲೇ ಮಕ್ಕಳು ಒಟ್ಟುಸೇರಿ ಏಸುಖ್ರಿಸ್ತನಿಗೆ ವಂದಿಸಿ ತಮ್ಮ ತಮ್ಮ ತರಗತಿಗಳಿಗೆ ತೆರಳುವರು. ಇದು ಆ ಶಾಲೆಯ ಧಿಯಮ. ಎಲ್ಲಾ ಮಕ್ಕಳೂ ಶಾಲೆಸಬೇಕು. ತಪ್ಪಿದರೆ ದೇಹ ದಂಡನೆ. ಕೆಲ ಮಕ್ಕಳು ಶಿಕ್ಷೆಗೆ ಹೆದರಿ ಕ್ಲಾಸ್ ಕಾಲಕ್ಕೆ ಶಾಲೆಯಲ್ಲಿರುತ್ತಿದ್ದರು. ಶಾಲೆ ಬಿಟ್ಟೊಡನೆ ಎರಡು ಹೆಜ್ಜೆಯನ್ನು ನಾಲ್ಕೆಂದು ತಳೆದು ಮನೆಯ ಕಡೆಗೆ ಓಟ.

ರಾತ್ರಿ ಜಡಿಮಳೆ ಎಡೆಬಿಡದೆ ಧಾರಾಕಾರವಾಗಿ ಸುರಿಯುತ್ತಿತ್ತು. ಮರಗಳನ್ನು ಬೇರು ಸಹಿತ ಕಿತ್ತೆಸೆಯುವ ಬಿರುಗಾಳಿ, ಥಳ ಥಳ ಹೊಳೆಯುವ ಮಿಂಚು, ಗುಡುಗುಡು ಗುಡುಗಿನ ಶಬ್ದ....ನುರುದಿನ ನೇಸರು ಶೋಭಾಯಮಾನವಾಗಿ ಮೂಡಿದೆ. ದಿನ ನಿತ್ಯದಂತೆ ಅಂಟೋನಿಯು ಶಾಲೆಗೆ ಹೋಗುವ ಏರ್ಪಾಡಾಯಿತು. 'ಡ್ಯಾಡಿ'ಗೆ ಟಾಟಾ ಹೇಳಿ ಶಾಲೆಗೆ ಹೊರಟು ಹೋದ ಅಂಟೋನಿ ತನ್ನ ಬಳಗದೊಂದಿಗೆ ರಸ್ತೆಯ ಬದಿಯಲ್ಲಿ ಸಾಗುತ್ತಿದ್ದ.

ರಾತ್ರಿಯ ಜಡಿ ಮಳೆ-ಬಿರುಗಾಳಿಯ ಮೇಲೆ ಮರ ಬಿದ್ದಿತ್ತು. ತಂತಿ ಕಡಿದು ರಸ್ತೆಯ ಉದ್ದಕ್ಕೂ ಬಿದ್ದಿತ್ತು. ಆ ಕತ್ತಲೆಯಲ್ಲಿ ವಿದ್ಯುಚ್ಛಕ್ತಿ ಹರಿಯುತ್ತಿದೆಯೆಂದು ಆ ಚಿಕ್ಕ ಬಾಲಕನಿಗೆ ಹೇಗೆ ಗೊತ್ತಾಗಬೇಕು? ಬದಿ ಬದಿಗೆ ಸರಿದು ಆ ತಂತಿಯ ಸನಿಹಕ್ಕೆ ಬಂದ. ಕಾಲು ಮೇಲೆ ಹೋಯಿತು.—ಅಯ್ಯೋ! ಚೀರುವ ಸ್ವರ—ಅಲ್ಲಿಯೇ ದೊಪ್ಪನೆ ಬಿದ್ದು ಬಿಟ್ಟ.

'ಥಣ್...ಥಣ್....' ಶಬ್ದ ಉಳಿದ ಮಕ್ಕಳಿಗೆ ಎಚ್ಚರ ಕೊಟ್ಟಿತ್ತು.

ಅಂಟೋನಿ ಮಾತ್ರ ಕಡಿದ ತಂತಿಯ ಮೇಲೆ ಮಲಗಿದ್ದ...

ಉದಕ ಮಂಡಲ

ರಸಿಕರ ಬರ್ದಿಲ

ಉದಕ ಮಂಡಲ
ಅದಕಿಂತ ಮಿಗಿಲು
ಗಮನವಿಟ್ಟು ನೋಡಲು
ಏನು ಚಂದ ಏನು ಅಂದ
ಚಲಿಸುವ ಅಂಬುದ
ಗಗನ ಚುಂಬಿ ಮರಗಳು
ಕೈ ಎಟುಕಿಸಲಿ ತೇಲಾಡ ವ
ಮುಗಿಲುಗಳು
ಜೋಡಿ-ಜೋಡಿಯಾಗಿ ವಿಹರಿಸುವ ನವ
ದಂಪತಿಗಳು
ಸಾವಿರಡಿಗಳೆತ್ತರವಿರುವ ವನ ಪ್ರದೇಶ
ಗುಡ್ಡವ ಬೆಟ್ಟವ ಕೂರಿ ಕೊರೆದು ಹರಿವ
ಜಲಪಾತ
ಒತ-ಪ್ರೋತ, ಸಂಪ ಹಿಮದ ಶ್ವೇತ
ಕಣ್ಣನೆಸು ಗಾಳಿ, ದಂಬಿಗಳ ಹಾರಾಟ
ನಲಿದು ಬೀಸುತಿರುವ ಮಾಟ
ಹಸಿರೆಲೆಗಳ ಮಧ್ಯೆ ಬಿರಿದ ಹೂವಿನ ಕಂಪು
ನೀಲಗಿರಿಯ ಸೆಳೆವೊಡೆದುವ ತಂತ್ರ
ಸೊಬಗೆ ಸೊಬಗು ಸೊಂಪೆ—ಸೊಂಪು
ಬೇಸಿಗೆಯ ರಾಜಧಾನಿ
ಯುವ ದಂಪತಿಗಳ ತೀರ್ಥಕ್ಷೇತ್ರ
ನಿಧಿಡಾರಣ್ಯ ಹೂದೋಟ
ಚಮಂಸುಂತ ಗಿಡದ ನೋಟ
ಇರುವ ಉದಕ ಮಂಡಲ
ರಸಿಕರ ಬರ್ದಿಲ!

—"ಮಲ್ಲಿಕಾ"

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.ಎಸ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್.ಬಿ.ಬಿ.ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡಸರು, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಷದವಿಸಲ್ಪಟ್ಟ ಗೃಹಪೈತ್ಯ. ಹೊರೆದ ವಿಧಾನ ಸವಿಸ್ತಾರವಾದ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಪೈಸೆ ಹೇಳಿ)

— ಪ್ರತಿಯನ್ನು ಅಪೇಕ್ಷಿಸಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter-No. CL-4,17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

8—8—1968

ಚಾರುಚಯನ

ಅಯ್ಯೂಬಖಾನರ ನೀರುನಾಟಕ

ಎಣ್ಣೆ ಚೆಲ್ಲಿದವನಳುವುದಂಟು; ನೀರು ಚೆಲ್ಲಿದವನಳುವದುಂಟೆ? ಅತ್ತರೆ? ಅತನ ಅಳುವನ್ನು ಕೇಳಿ ಅನುಕಂಪ ಪ್ರದರ್ಶಿಸಿ ಅಳನಿಗೆ ಕೊಡತುಂಬ ನೀರಿನ ಬದಲು ಎಣ್ಣೆಯನ್ನು ತಂಬಿಕೊಡಬೇಕು ಎಂದರೆ? ಇದೆಲ್ಲಾ ಏನು ಅನರ್ಥ ಅಲ್ಲವೆ? ಎಲ್ಲಾದರೂ ಉಂಟೆ? ನೋಡುವವರೂ ಕುರುಡರೆ? ಎಂದು ಪ್ರಶ್ನೆ ಮೂಡಿಯ ಬೇಡಿ. ಈ ಜಗತ್ತಿನಲ್ಲಿ ಎಲ್ಲವೂ ನಡೆಯುತ್ತದೆ. ನಡೆಯುವುದರಿಂದಲೇ ಪಾಕಿಸ್ತಾನಿ ಅಧ್ಯಕ್ಷರು ಈಗ ಮತ್ತೊಂದು ನೀರಿನ ನಾಟಕ ಆಡತೊಡಗಿದ್ದಾರೆ.

ಭಾರತದ ಪರಮ ಪವಿತ್ರ ನದಿ ಗಂಗೆ. ಇದು ಸಮುದ್ರವನ್ನು ಸೇರುವದಕ್ಕೆ ಮೊದಲು ಸುಮಾರು ೧೪೦೦ ಮೈಲು ಉದ್ದ ಹರಿಯುತ್ತದೆ. ಇದರ ಸುಮಾರು ನೂರು ಮೈಲುಗಳ ಪಾಲು ಪೂರ್ವ ಪಾಕಿಸ್ತಾನ —ಸಮುದ್ರ ಸಂಗಮದ ಹತ್ತಿರ. ಈ ನಡುವಣ ಭೂಮಿಯನ್ನು ಸಂಮೃದ್ಧಗೊಳಿಸಲು ಭಾರತದ ನೆಲಕ್ಕೆ ನೀರೂ ಹರಿಯುತ್ತದೆ. ಗಂಗಾ ನದಿಯೊಂದಿಲ್ಲದಾದರೆ, ದೇಶದ ಉತ್ತರ — ಪೂರ್ವ ಭಾಗ ಬರಿಯ ಮರುಗಾಡು. ಪೂರ್ವ ಪಾಕಿಸ್ತಾನವೂ ಹಾಗೆಯೇ ಅಲ್ಲವೆ ಎಂದು ಕೇಳಿದರೆ ಅಲ್ಲವೆನ್ನಬೇಕು. ಭಾರತೀಯ ಗಂಗೆಯ ಬಯಲಲ್ಲಿ ಹರಿಯುವುದು ಗಂಗೆ ಮತ್ತದರ ಉಪನದಿಗಳು ಮಾತ್ರ. ಆದರೆ, ಪಾಕಿಸ್ತಾನದಲ್ಲಿ ಗಂಗೆಯೂ ಹರಿಯುತ್ತದೆ. ಇತರತ್ರ ಹರಿದು ಬರುತ್ತಿರುವ ಬ್ರಹ್ಮಪುತ್ರ, ಮೇಘನಾ ಮೊದಲಾದ ನದಿಗಳು ನೀರು ಹೊತ್ತು ತರುತ್ತವೆ. ಆದುದರಿಂದ, ಗಂಟಿಸಿರಲ್ಲಿ ವಿಶ್ವಬ್ಯಾಂಕಿನ ಅಂತಾರಾಷ್ಟ್ರೀಯ ಗೋಷ್ಠಿಯೊಂದರಲ್ಲಿ ಪೂರ್ವ ಪಾಕಿಸ್ತಾನದ ಜಲ ಮತ್ತು ವಿದ್ಯುಚ್ಛಕ್ತಿ ಅಭಿವೃದ್ಧಿ ಆಯೋಗದ ಅಧ್ಯಕ್ಷ ಶ್ರೀ ಬಿ. ಎಂ. ಅಬ್ಬಾಸರು ಅಂದಿದ್ದರು: "ಪಾಕಿಸ್ತಾನ ವಿಪುಲ ಜಲ ಸಂಪತ್ತುಗಳಿಂದ ಕೂಡಿದ ಸಮೃದ್ಧ ದೇಶ. ನಮ್ಮ ಮುಖ್ಯ ಸಮಸ್ಯೆ ನೀರುವರಿಯದ್ದಲ್ಲ; ಪ್ರವಾಹ ಪಯಂತ್ರಣದ್ದು.'

ಆದರೆ, ಇದೀಗ ಕಾಲಗತಿ ಬದಲಾಗಿದೆ. ಗಂಗಾನದಿಗೆ ಫರಕ್ಕಾದಲ್ಲಿ ಅಣೆಕಟ್ಟು ಕಟ್ಟಲು ಭಾರತ ಯೋಜಿಸಿದ್ದೇ ತಡ, ಪಾಕಿಸ್ತಾನೀ ಆಳುಕರ್ತರ ದೃಷ್ಟಿ ಬದಲಾಯಿತು. ಈ ಅಣೆಕಟ್ಟಿನಿಂದಾಗಿ ಪೂರ್ವ ಪಾಕಿಸ್ತಾನದ ಜನತೆ ನೀರಿಲ್ಲದೆ ಬೆಳೆಯಿಲ್ಲದೆ ಉಸಿರಾಡಬೇಕಾಗುವುದು ಎಂದು ಮುಂತಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲೇ ತಿರುಬೊಬ್ಬೆ ಹಾಕತೊಡಗಿದೆ ಪಾಕಿಸ್ತಾನ. ಇದರಿಂದ, ಭಾರತದ ವಿತ್ರ ರಾಷ್ಟ್ರಗಳೂ ಸಂದೇಹ ಪಡುವಂತಾಗಿದೆ. ಪಂಚಾಯತಿಯ ಮೂಲಕ 'ಸಮಸ್ಯೆ'ಯನ್ನು ಬಗೆಹರಿಸಿಕೊಳ್ಳಿ, ಎಂಬ ಸಲಹೆಯನ್ನು ನೀಡಿದವರೂ ಇದ್ದಾರೆ.

ಪಂಚಾಯತಿಗೆ ಭಾರತ ವಿರೋಧಿಯಲ್ಲ. ಆದರೆ, ನಿಜವಾದ ಸಮಸ್ಯೆಯಿದ್ದರೆ ಮಾತ್ರ ಇತ್ಯರ್ಥ. ಫರಕ್ಕಾ ಅಣೆಕಟ್ಟಿನ ಸಂಗತಿಯನ್ನೂ ನಾವು ಪಂಚಾತಿಕೆಗೆ ಒಪ್ಪಿಸಲು ಸಿದ್ಧರಾಗುವುದೆಂದರೆ, ಪಾರ್ಲಿಮೆಂಟು ಶಾಸನ ಮಾಡಬೇಕಂದರೂ ಪಂಚಾಯತಿಯ ಪೂರ್ವ ಅನುಮತಿ ಬೇಕೆಂದಾಯಿತು. ಪಾಕಿಸ್ತಾನದ ಬಣ್ಣದ ಮಾತುಗಳಿಗೆ ಮರುಳುಹೋಗುವ ಅದರ ಬಾಲ ಹಿಡಿದು ಕುಣಿಯುವ ಬುದ್ಧಿವಂತ ಪ್ರಭುಗಳೇ ದೇಶಗಳಿಗೆ ಇದೂ ಒಂದು ವಿನೋದದ ಸಂಗತಿಯೊದಿತ್ತು.

ಅಂಗೈ ನೋಡಲು ಕನ್ನಡಿಬೇಕೆ. ಫರಕ್ಕಾ ಅಣೆಕಟ್ಟು ನಿರ್ಮಾಣವಾದರೆ, ಪಾಕಿಸ್ತಾನಿಗಳು ಎಂದಿಗೂ ಉಪವಾಸ ಸಾಯುವುದಿಲ್ಲ. ಈಗಾಗಲೇ ಪೂರ್ವ ಪಾಕಿಸ್ತಾನ ಧಾರಾಳ ನೀರಾವರಿ ಸೌಲಭ್ಯಗಳನ್ನು ಸಿದ, ಮೂರು ಅಥವಾ ಮೂರಕ್ಕಿಂತ ಹೆಚ್ಚು ಬೆಳೆಯನ್ನು ಅಲ್ಲಿಯ ರೈತರು ಬೆಳೆಯುತ್ತಾರೆ. ಬ್ರಹ್ಮಪುತ್ರಾ ನದಿಯ ನೀರೇ ಪೂರ್ವ ಪಾಕಿಸ್ತಾನವನ್ನು ವರ್ಷವಿಡೀ ಉಣಿಸಬಲ್ಲದು. ಅದು ಹರಿಯುವ ಪ್ರದೇಶವಾದರೂ ಧಾರಾಳ ಮಳೆ ಬೀಳುವಂಥದ್ದು.

ಹಾಗಾದರೆ, ಪಾಕಿಸ್ತಾನದ ಗುರಿಯೇನು? ಒಂದಲ್ಲ, ಹಾಲ್ಯ. ಭಾರತದ ವಿರುದ್ಧ ಘೋಷಣೆ ಎಬ್ಬಿಸಿ ಅಪಪ್ರಚಾರಕ್ಕೊಂದು ದಾರಿ ಮಾಡಿಕೊಡುವುದು. ಪಶ್ಚಿಮ ಪಾಕಿಸ್ತಾನಿ ದಿವಾಳಿಯೋರ ರಾಜಕಾರಣದಿಂದ ಬೇಸತ್ತ ಪೂರ್ವ ಪಾಕಿಸ್ತಾನದ ಜನತೆಯ ಗಮನವನ್ನು "ಪಶ್ಚಿಮ ದ್ವೇಷ"ದಿಂದ 'ಭಾರತ ದ್ವೇಷ'ದತ್ತ ತಿರುಗಿಸುವುದ; ತನಗೆ ಭಾರತ ಅನ್ಯಾಯ ಮಾಡಿದೆಯೆಂದು ತಿರುಬೊಬ್ಬೆಯಿಟ್ಟು ವಿಶ್ವಬ್ಯಾಂಕೇ ಮೊದಲಾದ ಸಹಾಯ ಮೂಲಗಳಿಂದ ಧಾರಾಳಪ್ರಮಾಣದ ಸಹಾಯ ಪಡೆಯುವುದು. ಭಾರತವನ್ನು ಎಂತಾದರೂ ಪಂಚಾತಿಕೆಯ ಹೆಸರಲ್ಲಿ ವಂಚಿಸುವ ಪ್ರಯತ್ನ ಮಾಡುವುದು.

ಭಾರತ ಯಾವ ನೀತಿ ಅನುಸರಿಸಬೇಕೆಂಬುದು ಸ್ಪಷ್ಟ. ಕಾಶ್ಮೀರ, ಕಛ್, ಸಿಂಧೂ ನದಿಯ ನೀರಿನ ಪ್ರಶ್ನೆಯನ್ನು ವಿಶ್ವ ಸಂಸ್ಥೆ, ವಿಶ್ವ ನ್ಯಾಯಾಲಯ ಮತ್ತು ವಿಶ್ವ ಬ್ಯಾಂಕಿನ ಮಧ್ಯಸ್ಥಿಕೆಗೆ ಒಪ್ಪಿಸಿ 'ಪಂಚಾತಿಕೆ'ಯ ಕಹಿ ಅನುಭವವನ್ನು ಪಡೆದಿದ್ದೇವೆ; ಆದುದರಿಂದ ಇಲ್ಲಿ ಮೂರನೆಯವರ ಪ್ರವೇಶಕ್ಕೆಂದೂ ಒಪ್ಪಬಾರದು. ಪಾಕಿಸ್ತಾನವು ಯಾರಿಂದಲಾದರೂ ಸಾಲ ಸಹಾಯ ಪಡೆಯಲಿ; ಯಾರಾದರೂ ಅದಕ್ಕೆ ಸಾಲ ಸಹಾಯ ನೀಡಲಿ, ಭಾರತದ ಅಪೇಕ್ಷೆವಿಲ್ಲ; ಆದರೆ ಇದಕ್ಕೆ 'ಭಾರತ ವಿರೋಧ' ನೀತಿಯ ಬಲವೇ ಬಾರದು. ಫರಕ್ಕಾ ಅಣೆಕಟ್ಟಿನ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಡಿ, ಪಾಕಿಸ್ತಾನದ ಪ್ರಚಾರವು ಹುಸುಳ್ಳಲ್ಲದ್ದು, ಬಾಯಿ ರಾಜಕೀಯ ದುರುದ್ದೇಶದಿಂದ ಕೂಡಿದ್ದು ಎಂದು ತಿಳಿಸಲು ಪ್ರಯತ್ನಿಸುವುದ. ಕಣ್ಣಿದ್ದು ಕುರುಡರಂತೆ ವರ್ತಿಸುವವರ ಮಾತಿಗೆ ಅವಜ್ಞೆಯೊಂದೇ ಔಷಧಿ.

ಂ ಂ ಂ

ಸಂತಾನ ನಿಯಂತ್ರಣವಿಂದು ಒಂದು ದೇಶದ ಪ್ರಶ್ನೆಯಲ್ಲ. ಜಾಗತಿಕ ಪ್ರಶ್ನೆ. ಸಾಮಾನ್ಯವಾಗಿ ಕ್ರೈಸ್ತರೂ ಇಸ್ಲಾಮಿಯರೂ ಈ ಸಂತಾನ ನಿಯಂತ್ರಣವನ್ನು ಧರ್ಮ ವಿರೋಧಿಯೆಂದು ಒಪ್ಪುವುದಿಲ್ಲ. ದೇಶದ ಪ್ರಗತಿಯಲ್ಲಿ ದೊಡ್ಡ ತಡೆಯಾದಾಗ, ಘರ್ಷಣೆ ಸಹಜ, ಅನಾಹುತವೂ ಅಷ್ಟೇ ಸ್ವಾಭಾವಿಕ.

ಇದನ್ನೆಲ್ಲ ಪರಿಗಣನೆಗೆ ತಂದುಕೊಂಡು ಅತ್ಯಂತ ಅಳವಾದ ಅಧ್ಯಯನ ಮಾಡಿ ರೋಮನ್ ಕೆಥೋಲಿಕ್ ಜನರುಗಳ ಪೋಪ್ ಪಾಲರು ತನ್ನ ಧರ್ಮಾನುಯಾಯಿಗಳಿಗೊಂದು ನಿರೂಪ ಮೊರಡಿಸಿದ್ದಾರೆ. ಪೋಪರ ನಿರೂಪವೆಂದರೆ, ಕೆಥೋಲಿಕ್ ಜನಾಂಗಕ್ಕೆ ಸಾಕ್ಷಾತ್ ಭಗವಂತನ ಆಜ್ಞೆಯೇ. "ನೈಸರ್ಗಿಕ ಸಾಮಂಜಸ್ಯವುಳ್ಳ ಪದ್ಧತಿಯೊಂದನ್ನುಳಿದು ಜನನ ನಿಯಂತ್ರಣಕ್ಕೆ ಬೇರಾವುದೇ ವಿಧಾನವನ್ನು ಅನುಸರಿಸಿದರೂ ಕೆಥೋಲಿಕರು ಪಾಪಕೃತ್ಯ ಎಸಗಿದಂತಾಗುವುದು" ಅಂದರೆ, ಕೃತಕ ವಿಧಾನಗಳಿಂದ ಸಂತಾನ ಪ್ರತಿಬಂಧಿಸಿಕೊಳ್ಳುವುದು ಪಾಪ.

ಈ ನಿರೂಪವು ಸಂತಾನ ನಿಯಂತ್ರಣವನ್ನು ವಿರೋಧಿಸುವುದಿಲ್ಲ. ಆದರೆ, ಅದಕ್ಕಾಗಿ ನಡೆಯುವ ವಂಕಿಧೋರಣೆ, ಗುಳಿಗೆ ನುಂಗುವುದು, ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಮೊದಲಾದುವನ್ನು ಅದು ಒಪ್ಪುವುದಿಲ್ಲ. ಸಂತಾನ ನಿಯಂತ್ರಣವು ಸಹಜ ಸ್ವಾಭಾವಿಕ ಇಂದ್ರಿಯ ನಿಗ್ರಹದಿಂದಲೇ ಆಗಬೇಕೆಂದು ಅದರ ಇಚ್ಛೆ. ಇದರಿಂದಲೇ ಮಾನವನ ನೈತಿಕ ಮಟ್ಟ ಉನ್ನತಗವಾಗ ವುದೆಂದೂ ಇಲ್ಲವಾದರೆ, ಅನೈತಿಕ ವ್ಯವಹಾರಗಳು ಮಿತಿಮೀರುವವೆಂದೂ ಎಲ್ಲ ಧರ್ಮಬೀರುಗಳ ನಿಲುಮತ. ಆದರೆ, ಇಂದ್ರಿಯ ವಶವರ್ತಿಯಾದ ಭೌತಿಕ ಸುಖಲೋಲುಪವಾದ ಈ ಜಗತ್ತು ಇದನ್ನೆಂತು ಕಾರ್ಯರೂಪಕ್ಕೆ ತಂದೀತು? ಅತ್ಯಂತ ಧರ್ಮಬೀರು ಕ್ರೈಸ್ತರೇ ಪೋಪರ ನಿರೂಪವನ್ನು ಭೇದಿಂದ ಸ್ವಾಗತಿಸಿದರೆನ್ನುವಂಗ ಉಳಿದವರು?

ಂ ಂ ಂ ಂ

ಸ್ಯಾಕರೀನ್ ಬಳಸುವುದರಿಂದ ಮಾನವನಿಗೆ ಮಾಂತಿ, ತಲೆನೋವು, ಆಹಾರದ ಬಗ್ಗೆ ನಿರುತ್ಸಾಹ, ಅಜೀರ್ಣ, ಹೃದಯ ದೌರ್ಬಲ್ಯ ಮೊದಲಾದ ರೋಗಗಳು ತಲೆದೋರುವುವೆಂದು ಒಬ್ಬ ವೈದ್ಯರ ಸಂಶೋಧನಾ ಗಂತರದ ಅಭಿಪ್ರಾಯ. ಸ್ಯಾಕರೀನ್ ಸಿಹಿಯಂತಿದ್ದರೂ ಅದು ಕೋಲ್‌ಟಾರ್‌ನ ಒಂದು ಉ

(ಕಡೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

87 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್" ಕಲ್ಲಿ

ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ಮಿಗಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

Phone— 5711, 5712, 5713 } 3 Lines. ಮಂಗಳೂರು - 3.

ಶ್ರೀ ರಾಮಾನುಜಾಚಾರ್ಯರು

ಲೇಖಕರು:
ಶ್ರೀ. ಎಚ್. ಎಂ. ನಾರಾಯಣ ಭಟ್.

ದಕ್ಷಿಣ ಭಾರತದಲ್ಲಿ ಆಳ್ವಾರರು ಎಂದು ಕರೆಯಲಾಗುವ ವೈಷ್ಣವ ಭಕ್ತ ಸಮುದಾಯದವರು ಪ್ರಾಚೀನ ಪರಂಪರೆಯವರಾಗಿದ್ದರು. ಅವರು ತಮಿಳು ಭಾಷೆಯಲ್ಲಿ ಬರೆದಿದ್ದ ವೈಷ್ಣವ ಸಿದ್ಧಾಂತಗಳನ್ನೂ ವೇದ ಪುರಾಣೇತಿಹಾಸಗಳಲ್ಲಿ ಪ್ರತಿಪಾದಿಸಲಾಗಿದ್ದ ವೈದಿಕ ಸಿದ್ಧಾಂತಗಳನ್ನೂ ಸಮನ್ವಯಗೊಳಿಸಿ ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರಚಾರಮಾಡಿದರು.

ಮದ್ರಾಸಿನಿಂದ ಸುಮಾರು ೨೫ ಮೈಲಿ ಪಶ್ಚಿಮಕ್ಕೆ ಪೆರುಂಬುತ್ತೂರು ಎಂಬಲ್ಲಿ ಜನಿಸಿದ ಆ ಮಹಾಪುರುಷನ ಜನನ ೧೦೫೭ರಲ್ಲಾಗಿತ್ತು.

ಮಧ್ಯಮಾಧಿಕಾರಿಗಳನ್ನು ವೈದಿಕ ಮಾರ್ಗಗಳಿಗೆ ಆಹ್ವಾನಿಸುವುದರಲ್ಲಿ ವಿಶಿಷ್ಟಾದ್ವೈತವು ಪ್ರಭಾವ ಬೀರಿತು. ಸನಾತನಿಗಳ ಪೌಲಿಕ ಪ್ರಮಾಣ ವೇದ. ಅದರಲ್ಲಿ ಕರ್ಮ, ಜ್ಞಾನ ಮತ್ತು ಉಪಾಸನಾ ಕಾಂಡಗಳೆಂಬ ವಿಭಾಗಗಳಿವೆ. ಅವು ಪರಸ್ಪರ ಪೂರಕ. ಸ್ವಧರ್ಮಾನುಸೃತವಾದ ಕಾರ್ಯವು ಚಿತ್ತಶುದ್ಧಿ ಕೊಡುತ್ತದೆ. ಶುದ್ಧವಾದ ಚಿತ್ತವು ಈಶ್ವರೋಪಾಸನೆಯಿಂದ ನಿಷ್ಕೇಪ ವೃತ್ತಿಯನ್ನು ನಿಯಂತ್ರಿಸಿ ಈಶ್ವರನಲ್ಲಿ ವಿಶ್ವಾಸವನ್ನುಂಟು ಮಾಡುತ್ತದೆ. ಅದರಿಂದ ಜ್ಞಾನ ಸಿದ್ಧಿಸಿ ಈಶ್ವರ ಸಾಕ್ಷಾತ್ಕಾರವನ್ನು ಗಳಿಸಲು ಸಹಾಯವಾಗುತ್ತದೆ.

ಕರ್ಮ ಕಾಂಡವನ್ನು ಜೈಮಿನಿ ಮಹರ್ಷಿ ಒಂದು ಶಾಸ್ತ್ರವನ್ನಾಗಿ ಮಾರ್ಪಡಿಸಿದ್ದಾಗಿ ಪ್ರತೀತಿ.

ಜ್ಞಾನಕಾಂಡವನ್ನು ಉಜ್ಜೀವಿಸಿ ವೇದ ವ್ಯಾಸರು ಬ್ರಹ್ಮಸೂತ್ರವೆಂದು ಶಾಸ್ತ್ರವನ್ನು ಸೃಷ್ಟಿಸಿದೆನ್ನಲಾಗಿದೆ. ಇದೇ ಪೂರ್ವ ಮೀಮಾಂಸೆ ಮತ್ತು ಉತ್ತರ ಮೀಮಾಂಸೆಯೆಂದು ತಿಳಿಯಲ್ಪಟ್ಟಿವೆ.

ಉಪನಿಷತ್ತುಗಳೂ, ಭಗವದ್ಗೀತೆಯೂ ಬ್ರಹ್ಮಸೂತ್ರವೂ ಒಳಗೊಂಡ ಉತ್ತರ ಮೀಮಾಂಸೆಯೆಂಬ ವೇದಾಂತ ಶಾಸ್ತ್ರಕ್ಕೆ ಶಾಶ್ವತ ಪ್ರತಿಷ್ಠೆಯನ್ನು ನೀಡಿದರು.

ವಿಷಯದ ದುರ್ಗಮತೆಯಿಂದಾಗಿ ವೇದಾಂತ ಶಾಸ್ತ್ರ ವ್ಯಾಖ್ಯಾನಕಾರರ ಭಾಷ್ಯಗಳಲ್ಲಿ ಎಷ್ಟ ಭೇದಗಳುಂಟಾಗಲು ಕಾರಣವಾಯಿತು. ಆ ಮತ ಭೇದಗಳನ್ನು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತಗಳೆಂದು ವಿಂಗಡಿಸಬಹುದಾಗಿದೆ.

ವಿಶಿಷ್ಟಾದ್ವೈತವನ್ನು ಸೃಷ್ಟಿಸಿದ ಮಹಾಪುರುಷರು ಶ್ರೀ ರಾಮಾನುಜಾಚಾರ್ಯರು.

ದ್ವೈತವಲ್ಲದ್ದು ಅದ್ವೈತ. ದೇವರು ವಿಶಿಷ್ಟ ರೂಪದಲ್ಲಿ ಅದ್ವೈತ ಭಾವವನ್ನು ಒಂದಿಸುವುದಾಗಿ ವಾದಿಸುವ ಮತ ವಿಶಿಷ್ಟಾದ್ವೈತ. ಚಿತ್, ಅಚಿತ್, ದೇವರು —ಹೀಗೆ ಮೂರು ಶಬ್ದಗಳ ಅರ್ಥವೇ ಪ್ರಪಂಚದಲ್ಲಿ ಅಡಕವಾಗಿರುವುದೆಂದು ಶ್ರೀ ರಾಮಾನುಜಾಚಾರ್ಯರ ವಾದ. ಚಿತ್ ಎಂದರೆ ಭೋಗಿಸುವ ಜೀವಿ; ಅಚಿತ್ ಎಂದರೆ ಭೋಗ್ಯವಾದ ಜಗತ್ತು; ಈಶ್ವರನು ಸರ್ವಾಂತರ್ಯಾಮಿಯಾದ ಶ್ರೀ ಮನ್ನಾರಾಯಣನು.

ಜೀವನೂ ಜಗತ್ತೂ ನಿತ್ಯವೂ ಸ್ವತಂತ್ರವೂ ಆಗಿದ್ದುಕೊಂಡೇ ಈಶ್ವರಾಧೀನವಾಗಿವೆ. ಅಂತರ್ಯಾಮಿಯಾಗಿ ಈಶ್ವರನು ಅವುಗಳಲ್ಲಿ ಸದಾ ಪ್ರಕಾಶಿಸುವನು. ಹೀಗಾಗಿ ಚಿತ್ ಮತ್ತು ಅಚಿತ್‌ಗಳು ಈಶ್ವರನ ಭಾಗಗಳೇ. ಈಶ್ವರನು ಅವುಗಳಿಂದ ವಿಶೇಷಿಸಲ್ಪಡುವವನೂ ಅವು ಈಶ್ವರನ ವಿಶೇಷಣವೂ ಆಗಿರುವುದರಿಂದ ಈಶ್ವರನು ವಿಶಿಷ್ಟನು. ಹೀಗೆ ಈಶ್ವರನು ವಿಶಿಷ್ಟ ರೂಪದಲ್ಲಿ ಅದ್ವೈತ ಭಾವ ಅವಲಂಭಿಸುವುದಾಗಿ ಅಂಗೀಕರಿಸುವ ಮತ ವಿಶಿಷ್ಟಾದ್ವೈತವಾಯ್ತು.

ಏಕತ್ವ

ಇದರನ್ವಯ ಉಪನಿಷತ್‌ಗಳಲ್ಲಿ ಸಗುಣ ಬ್ರಹ್ಮವನ್ನು ಪ್ರತಿಪಾದಿಸಲಾಗಿದೆ. ಫಲಗುಣವಾದ ವಸ್ತುವನ್ನು ಸಂಕಲ್ಪಿಸಲು ಕೂಡಾ ಈ ಪ್ರಪಂಚದಲ್ಲಿ ಸಾಧ್ಯವಿಲ್ಲ. ಈಶ್ವರನು ಭೇದರಹಿತನಾದರೂ ಸ್ವಗತ ಭೇದಯುಕ್ತನು; ಪರಸ್ಪರ ಭೇದವುಳ್ಳ 'ಚಿತ್' ಮತ್ತು 'ಅಚಿತ್'ಗಳೇ ಅತನ ಶರೀರ! ಹಾಗೆಯೇ ಜಗತ್ತಿನ ಉಪಾದಾನ ಕಾರಣವೂ ನಿಮಿತ್ತ ಕಾರಣವೂ ಈಶ್ವರನೇ ಆಗಿದ್ದು ಜಗತ್ತಿನ ಸ್ಥೂಲ ರೂಪವನ್ನೂ ಸೂಕ್ಷ್ಮ ರೂಪವನ್ನೂ ಅತನೇ ಧರಿಸುವವನು. ಪ್ರಳಯ ಕಾಲದಲ್ಲಿ ಸೂಕ್ಷ್ಮವಾದ 'ಚಿತ್'ನೊಂದಿಗೂ ಅಚಿತ್‌ನೊಂದಿಗೂ ಸೇರಿರುವ ಈಶ್ವರನು ಕಾರಣ ಬ್ರಹ್ಮನು. ಸೃಷ್ಟಿಯಲ್ಲಿ ಸ್ಥೂಲವಾದ ಚಿತ್‌ನೊಂದಿಗೂ ಅಚಿತ್‌ನೊಂದಿಗೂ ಸೇರಿರುವ ಈಶ್ವರನು ಕಾರ್ಯಬ್ರಹ್ಮನು. "ಏಕಮೇವಾದ್ವಿತೀಯಂ" ಮುಂತಾದ ಉಪನಿಷತ್ ವಾಕ್ಯಗಳು ಅವ್ಯಾಕೃತ ಬ್ರಹ್ಮ ವಿಷಯಕವಾದುದೆಂದು ಭಾವಿಸಬಹುದು.

ಪ್ರಳಯದಲ್ಲಿ ಜೀವನೂ ಜಗತ್ತೂ ಸೂಕ್ಷ್ಮ ರೂಪೇಣ ಈಶ್ವರನಲ್ಲಿ ವರ್ತಿಸುವುದರಿಂದಾಗಿ ಏಕತ್ವವೂ ಅದ್ವಿತೀಯತ್ವವೂ ಸಿದ್ಧವಾದವು. ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಇತ್ಯಾದಿಗಳಿಂದ ಭಿನ್ನನಾದ ಚೇತನನೂ ಆನಂದ ರೂಪನೂ ನಿತ್ಯನೂ ಅಣುವೂ ಅಚಿಂತ್ಯನೂ ಜ್ಞಾನ ರೂಪನೂ ಜೀವನೆಂದು ಶ್ರೀ ರಾಮಾನುಜಾಚಾರ್ಯರ ಸಿದ್ಧಾಂತ. ಆದರೆ, ಈಶ್ವರನ ಅನುಗ್ರಹದಿಂದಲ್ಲದೆ ಒಂದು ಪ್ರವೃತ್ತಿಯೂ ಸರಿಯಾಗಿ ನಡೆಸಲು ಜೀವನು ಅಸಮರ್ಥನು.

ಮುಕ್ತಿ ಸಾಧನ

ಮುಕ್ತಿಗಾಗಿ ಕರ್ಮವು ಸಾಧನ ಮಾರ್ಗ. ವೇದ ವಿಹಿತವಾದ ಕರ್ಮದ ಅನುಷ್ಠಾನವು ಚಿತ್ತ ಶುದ್ಧಿಗನ್ನುಂಟು ಮಾಡಿ ಈಶ್ವರನನ್ನು ಸರಿಯಾಗಿ ತಿಳಿಕೊಳ್ಳಲು ಪ್ರೇರೇಪಿಸುವುದರಿಂದ ಕರ್ಮವು ಜ್ಞಾನಕ್ಕೆ ಕಾರಣವಾಗಿದೆ. ಕರ್ಮವೂ ಜ್ಞಾನವೂ ಭಕ್ತಿಗೆ ಕಾರಣ. ಬ್ರಹ್ಮ ಜಿಜ್ಞಾಸೆಯಿಂದ ಸಂಸ್ಕೃತವಾಗುವ ಹೃದಯದಲ್ಲಿ ಮುಕ್ತಿ ಸಾಧನವಾದ ಧರ್ಮಲವಾದ ಭಕ್ತಿವೃದ್ಧಿಹುಟ್ಟುತ್ತದೆ.

ಭಕ್ತಿಯಲ್ಲಿ ಈಶ್ವರನನ್ನು ಸೇರುವುದೇ ಮುಕ್ತಿ. ಹಾಗೆ ಸೇರಿದ ಜೀವನು ಮುಕ್ತಿಗಳಿಸನು. ಜೀವ ವಿಚಾರದಲ್ಲಿ ಅದ್ವೈತಿಗೂ ವಿಶಿಷ್ಟಾದ್ವೈತಿಗೂ ಅಭಿಪ್ರಾಯ ವ್ಯತ್ಯಾಸವಿದೆ. ಅದ್ವೈತಿಗೆ ಜೀವಾತ್ಮನು ವಿಭುವೂ, ವಿಶಿಷ್ಟಾದ್ವೈತಿಗೆ ಅಣುವೂ ಆಗಿರುವುದು. ಮೊತ್ತವಲ್ಲ; ಅದ್ವೈತದಲ್ಲಿ ಸ್ವಾಭಾವಿಕವಾಗಿ ಏಕಮಾಗಿರುವ ಜೀವನು ದೇಹಾದಿ ಉಪಾಧಿಗಳ ನಿಮಿತ್ತ ಅನೇಕನಾಗಿ ತೋರುವುದೆನ್ನುವಾಗ ವಿಶಿಷ್ಟಾದ್ವೈತದಲ್ಲಿ ಜೀವನು ಅನೇಕನೆಂದೂ ಒಂದು ಮತ್ತೊಂದರಿಂದ ಭಿನ್ನವೆಂದೂ ಆಧ್ಯಾತ್ಮಿಕಾದಿ ದುಃಖ ರೂಪದಿಂದ ಕ್ಲೇಶಿಸುವ ಜೀವನು ಬ್ರಹ್ಮದಿಂದ ಅಭಿನ್ನನಾಗಲು ಸಾಧ್ಯವಿಲ್ಲವೆಂದು ವಾದಿಸುತ್ತದೆ. ಪರಿಣಾಮವಾಗಿ ವೇದಾಂತ ವಾಕ್ಯದಲ್ಲಿ ಪರಮ ಪ್ರಧಾನವಾದ 'ತತ್ವಮಸಿ' ಮಹಾವಾಕ್ಯಕ್ಕೆ ಅದ್ವೈತಿ ಹೇಳುವ ಜೀವ ಬ್ರಹ್ಮೈಕ್ಯವನ್ನು ಶ್ರೀ ರಾಮಾನುಜರು ಒಪ್ಪುವುದಿಲ್ಲ. "ತ್ವಂ" ಎಂದರೆ ಅಚಿದ್ವಿಶಿಷ್ಟವಾದ ಶರೀರದಿಂದ ಕೂಡಿದ ಬ್ರಹ್ಮವೆಂದೂ "ತತ್" ಎಂದರೆ ಸರ್ವಜ್ಞನೂ ಜಗತ್ಕಾರಣನೂ ಆದ ಈಶ್ವರನೆಂದೂ ಶ್ರೀ ರಾಮಾನುಜರ ಕಲ್ಪನೆ.

ಅಂತರ್ಯಾಮಿಯಾದ ಈಶ್ವರನಿಗೂ ಪ್ರಪಂಚ ಕಾರಣವಾದ ಈಶ್ವರನಿಗೂ ಏಕತ್ವವಿದೆ. ಹಾಗೆ ಒಂದು ವಿಧದಲ್ಲಿ ವಿಶಿಷ್ಟನಾದ ಈಶ್ವರನೂ ಮತ್ತೊಂದು ವಿಧದಲ್ಲಿ ವಿಶಿಷ್ಟನಾದ ಈಶ್ವರನೆಂದೂ ಏಕತ್ವವಿರುವುದರಿಂದಾಗಿ ವೈಶಿಷ್ಟ್ಯಗಳ ಐಕ್ಯದಿಂದ ವಿಶಿಷ್ಟಾದ್ವೈತ ನೆಲಸುತ್ತದೆ.

ಕೆಲವು ವ್ಯತ್ಯಾಸಗಳು

ಅದ್ವೈತಿಗಳಂತೆ ವಿಶಿಷ್ಟಾದ್ವೈತಿಗಳು ಜೀವ ಬ್ರಹ್ಮೈಕ್ಯವನ್ನು ಮುಕ್ತಿಯಾಗಿ ಪರಿಗಣಿಸುವುದಿಲ್ಲ. ಈಶ್ವರನನ್ನು ಸೇರುವು

(ಮುಂದೆ ಪುಟ ನೋಡಿರಿ)

ನಿಮ್ಮ ಹಣ ಸರ್ಪಗಾವಲಿನಲ್ಲಿ.....



ಹಿಂದಿನಕಾಲದ ತುಂಡರಸರು, ಧನಿಕರು, ವರ್ತಕರು ತಮ್ಮ ಮುಂದಿನ ಪೀಳಿಗೆಯವರ ಅನುಭೋಗಕ್ಕಾಗಿ ನಿಧಿಯನ್ನು ಸಂಚಯಿಸಿಟ್ಟುಕೊಂಡಿದ್ದರು. ರಾಜ್ಯಗಳು ಬಾಳು ಬಿದ್ದಾಗ ಅವು ಭೂಗರ್ಭ ಸೇರಿಕೊಂಡುವು. ಮುನ್ನೆಲ್ಲಿ ಹೂತಿರುವ ಈ ಕೊಪ್ಪರಿಗೆಗಳು, ಅವುಗಳ ಒಡೆಯರು ಅಪೇಕ್ಷಿಸಿದ್ದ ಮಂದಿಗಲ್ಲದೆ ಅನ್ಯರ ವಶ ಹೋಗದಂತೆ ಸರ್ಪಗಳು ಅವುಗಳ ಸುತ್ತ ಕಾವಲಿಂಸಿಕೊಂಡಿವೆಯೆಂಬ ಪ್ರತೀತಿಯಿದೆ. ಈ ಸರ್ಪಗಾವಲು ಸಂಪತ್ತಿನ ಭದ್ರತೆಗೆ ನಿದರ್ಶನದ ಪರೆ.

ನಮ್ಮ ಕಾಲದ ಜನರು ತಾವು ಗಳಿಸಿ, ಕೂಡಿಟ್ಟ ಹಣಕ್ಕೆ ಸರ್ಪಗಾವಲಿನಸ್ಥೇ ಸುರಕ್ಷಿತತೆ ಬಯಸುವುದು ಸಹಜ.

ಸಿಂಡಿಕೇಟ್ ಬ್ಯಾಂಕಿನ ಯಾವುದಾದರೊಂದು ಉಳಿತಾಯ ಖಾತೆಯಲ್ಲಿ ನೀವು ಕೂಡಿಟ್ಟ ಹಣ ಸರ್ಪಗಾವಲಿನಲ್ಲಿರಿಸಿದ ಸಂಪತ್ತಿನಂತೆ ಅದು ಅತ್ಯಂತ ಭದ್ರವಾಗಿಯೂ, ಸುರಕ್ಷಿತವಾಗಿಯೂ ಉಳಿದು, ಕಾಲಕಾಲಕ್ಕೆ ಬೆಳೆದು, ನಿಮ್ಮ ಮುಂದಿನ ದಿನಗಳ ಅವಶ್ಯಕತೆಗೆ ಇಲ್ಲವೆ ನಿಮ್ಮ ಮಕ್ಕಳ ಜೀವನಕ್ಕೆ ಅದು ದೊರಕುವುದು.

ಸಂಪತ್ತಿನ ಭದ್ರತೆ ಮತ್ತು ಸುರಕ್ಷಿತತೆಗೆ ನೀವು ಅರಿಸಬೇಕಾದ ಸಂಸ್ಥೆ

FAITHFUL FRIENDS

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು:	ಶಾಖೆಗಳು:	ಟಿ. ಎ. ಪೈ,
ರೂ. 100 ಕೋಟಿಗೂ ಮಿಕ್ಕಿ.	235ಕ್ಕೂ ಮಿಕ್ಕಿ.	ಚೆಯರ್‌ಮೇನ್

ಅಮೃತಾಂಜನ
ಎಲ್ಲಾ ನೋವುಗಳಿಗೂ
ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ
30 ವರ್ಷ ಉಪಯೋಗದ
ಅಮೃತಾಂಜನ
ಅಮೃತಾಂಜನ ಲಿಮಿಟೆಡ್, ಮದ್ರಾಸ್

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೪೯
No. 49

ನವಯುಗ

ಸ್ಥಾಪಕರು:
ದಿ ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೮—೮—೧೯೬೮

ಎರವಲು ತಂದ ನೀತಿ

ಸಾಕಷ್ಟು ಸುದೀರ್ಘ ಸಮಯದಿಂದ ನಡೆದುಕೊಂಡು ಬರುತ್ತಿರುವ ವಿಯತ್ನಾಮ ಸಮರಕ್ಕೊಂದು ಕೊನೆ ಬೀಳುವ ಲಕ್ಷಣವಿದೆ ಎನ್ನುವಾಗಲೇ ಅಮೆರಿಕೆಯ ನೀತಿಯಲ್ಲಿ ಮತ್ತೆ ಮಾರ್ಪಾಟು ಕಂಡು ಬಂದಿದೆ. ಅಲ್ಲಿನ ಯುದ್ಧದಲ್ಲಿ ಬೇಕೆಂಬಷ್ಟು ಹೆಟ್ಟು ತಿಂದ ಅಧ್ಯಕ್ಷ ಜಾನ್ಸನ್ನರು ಸ್ವದೇಶದಲ್ಲಿಯೇ ಅಪ್ರಿಯರಾದರು; ಇವರ ವಿಯತನಾಮ ನೀತಿಯು ಉಗ್ರ ಟೀಕೆಗೆ ಗುರಿಯಾಯಿತು ಮುಂದವರು ಅರ್ಥಂಬರ್ಥ ಬಾಂಬುದಾಳಿ ನಿಲುಗಡೆಯನ್ನು ಘೋಷಿಸಿ, ವಿಯತನಾಮವನ್ನು ಸಂಧಾನದ ಮಾತುಕತೆಗಳಿಗಾಗಿ ಪೇಜಿನ ಮುಂದೆ ಅಹ್ವಾನಿಸಿದಾಗ, ಜಾನ್ಸನ್ನರು ಯುಗವಾಣಿಗೆ ಕಿವಿಗೊಡುತ್ತಿರುವರೆಂದು ನಂಬಿದ ಜನತೆಯಾಗ ಅದನ್ನು ಕುರುಡು ನಾಟಕವೆಂದೇ ತಿಳಿಯ ಬೇಕಾಗಿದೆ. ಇದೇ ವರ್ಷದ ಕೊನೆಯಲ್ಲಿ ನಡೆಯಬೇಕಾದ ಅಧ್ಯಕ್ಷ ಚುನಾವಣೆಯಲ್ಲಿ ತಾನು ಸ್ಪರ್ಧಿಸುವುದಿಲ್ಲವೆಂದು ಖಚಿತವಾಗಿ ಬಹಳಷ್ಟು ಹಿಂದೆಯೇ ಉದ್ಘೋಷಿಸಿದ ಜಾನ್ಸನ್ನರು ಮೂಲಭೂತ ನೀತಿಯನ್ನು ಅನುಸರಿಸಿಯೂರೆಂದು ನಂಬಿದ್ದರೆ, ಈಗಿನವರ ಹೇಳಿಕೆಯಿಂದ ಜನತೆಯ ಆಕ್ಷೇಪಕ್ಕೆ ಗುರಿಯಾಗಿದ್ದ ಜಾನ್ಸನ್ನರು ಮೂಲಭೂತ ನೀತಿಯನ್ನು ಸಂಧಾನದ ಮಾತುಕತೆಗಳಿಗಾಗಿ ಪೇಜಿನ ಮುಂದೆ ಅಹ್ವಾನಿಸಿದಾಗ, ಜಾನ್ಸನ್ನರು ಯುಗವಾಣಿಗೆ ಕಿವಿಗೊಡುತ್ತಿರುವರೆಂದು ನಂಬಿದ ಜನತೆಯಾಗ ಅದನ್ನು ಕುರುಡು ನಾಟಕವೆಂದೇ ತಿಳಿಯ ಬೇಕಾಗಿದೆ. ಇದೇ ವರ್ಷದ ಕೊನೆಯಲ್ಲಿ ನಡೆಯಬೇಕಾದ ಅಧ್ಯಕ್ಷ ಚುನಾವಣೆಯಲ್ಲಿ ತಾನು ಸ್ಪರ್ಧಿಸುವುದಿಲ್ಲವೆಂದು ಖಚಿತವಾಗಿ ಬಹಳಷ್ಟು ಹಿಂದೆಯೇ ಉದ್ಘೋಷಿಸಿದ ಜಾನ್ಸನ್ನರು ಮೂಲಭೂತ ನೀತಿಯನ್ನು ಅನುಸರಿಸಿಯೂರೆಂದು ನಂಬಿದ್ದರೆ, ಈಗಿನವರ ಹೇಳಿಕೆಯಿಂದ ಜನತೆಯ ಆಕ್ಷೇಪಕ್ಕೆ ಗುರಿಯಾಗಿದ್ದ ಜಾನ್ಸನ್ನರು ತಮ್ಮ ಪ್ರಿಯರಾಗಿದ್ದ ಜಾನ್ಸನ್ನರು ತನ್ನ ಬಗೆಗಿರುವ ಜನಪ್ರಿಯತೆಯನ್ನು ತೊಳೆದುಕೊಳ್ಳಲು ಬೇರೆ ಬೇರೆ ತರದ ಪ್ರಯತ್ನದಲ್ಲಿ ತೊಡಗಿದ್ದಾರೆ. ವಿಯತನಾಮದ ಕಾದಳಬ್ಬಣದ ಮೇಲೆ ಇನ್ನೊಂದು ಕೊಡಲಿಯೇಟು ಹಾಕಿಯೂದರೂ ಅದನ್ನು ಬಗ್ಗಿಸಿ ಬಿಡುವ ಮನಸ್ತತ್ವಕಾಂಕ್ಷೆ ಅವರದ್ದು. ಇದರಲ್ಲಿ ಅವರು ಸಫಲರಾದರೆ, ಜಾನ್ಸನ್ನರು ನವಿಲು ಕಿರೀಟವನ್ನೇ ತೊಟ್ಟಂತಾಯಿತು; ಅಸಫಲರಾದರೆ? ಭವಿಷ್ಯದಲ್ಲಿ ರಾಜಕೀಯ ಜೀವನದಿಂದ ನಿವೃತ್ತರಾಗುವ ವಿಧಾರ ಮೂಡಿದ ಜಾನ್ಸನ್ನರಿಗೆ ವಿಶೇಷ ಹಾನಿ ತಟ್ಟದು.

ಜಾನ್ಸನ್ನರ ನೀತಿ ಉಗ್ರವಾಗುತ್ತ ಬಂದರೆ, ಅವರ ಉಪಾಧ್ಯಕ್ಷ ಹ್ಯೂಬರ್ಟ್ ಹಂಫ್ರಿಯವರು ಹೊಸತೊಂದು ರಾಗ ಹಾಡ ತೊಡಗಿದ್ದಾರೆ. ವಿಯತನಾಮದಂಶಹ ದೇಶಗಳ ಆಂತರಿಕ ವ್ಯವಹಾರಗಳನ್ನು ನಿರ್ಧರಿಸುವ ಕೆಲಸ ನಮ್ಮದಲ್ಲ ವೆಂದು ಅವರು ಒಂಡೆಡೆ ಹೇಳಿದ್ದಾರೆ. ಡೆಮೊಕ್ರಾಟಿಕ್ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ನಾಮಕರಣಗೊಳ್ಳುವಂತೆ ಪ್ರಯತ್ನಿಸುವ ವೇಳೆಯ ಉದ್ಗಾರವಿದು—ಅಂದರೆ, ಚುನಾವಣಾ ಭಾಷಣ. ಆದರೂ ಅಮೆರಿಕೆಯಲ್ಲಿ ಚುನಾವಣಾ ಭಾಷಣವೂ ನೀತಿ ನಿರೂಪಣೆಗೆ ಆಧಾರವಾಗುತ್ತದೆ; ಅದು ನಮ್ಮ ದೇಶದ ಚುನಾವಣಾ ಭಾಷಣದಳಂತಲ್ಲ. ಹಾಗಾಗಿ ಅಧ್ಯಕ್ಷ ಜಾನ್ಸನ್ ಮತ್ತು ಉಪಾಧ್ಯಕ್ಷ ಹಂಫ್ರಿಯವರ ನಡುವೆಯೇ ವಿಯತನಾಮ ನೀತಿಯಲ್ಲಿ ನಾಮಂಜ್ಯವಿದ್ದಂತಿಲ್ಲ. ಹಂಫ್ರಿಯವರು ಸೋವಿಯತ್ ರಶ್ಯವನ್ನು ತನ್ನೆಡೆಗೆ ಆಕರ್ಷಿಸುವ ನಿಲುವೆಯನ್ನು ತಳೆದಿದ್ದಾರೆ, ಒಂದು ದೇಶದ ಸರಕಾರವನ್ನು ನಿರ್ಮಿಸುವ ಅಧಿಕಾರ ಸರೋಕ್ಷವಾಗಿ ಅವೇರಿಕೆ ವಹಿಸಿಕೊಂಡದ್ದುಂಟು. ಒಂದು ದೇಶದ ಸರಕಾರವು ನೀತಿ ನಿರೂಪಿಸುವಾಗ ತನ್ನ ಪ್ರಭಾವ ಬೀರಿದ್ದುಂಟು. ಹೆಚ್ಚೇಕೆ, ತನ್ನಿಂದ ಸಹಾಯ ಪಡೆಯುವ ದೇಶಗಳು ತನ್ನ ನೀತಿಯನ್ನು ಒಪ್ಪಬೇಕು ಎಂಬ ಶರತ್ತನ್ನು ಅದು ಹೇರಲು ಮುಂದೆ ಬಂದಿಲ್ಲವೆ? ಹಾಗಿರುವಾಗ, ಹಂಫ್ರಿಯವರ ಹೇಳಿಕೆ ಸ್ವಾಗತಾರ್ಹವಾದುದು. ಆದರೆ, ಕಶ್ಯ—ಅಮೆರಿಕಗಳು ಒಂದಾಗಿ ಜಗತ್ತಿನ ಮೇಲೆ ಪ್ರಭುತ್ವ ಹೀರುವ ವಿಧ ಹಂಫ್ರಿ ಅಧ್ಯಕ್ಷರಾದ ಮೇಲೆಯೇ ನೋಡಬೇಕು. ಇದು ಬಹಳ ದೂರದ ಮಾತೆನಿಸುತ್ತದೆ.

ಅಮೆರಿಕನ್ ವಿದೇಶನೀತಿ ಖಂಡ ವಳಕಾಹಿಯದ್ದು. ಇದರ ಅನುಭವ ಭಾರತಕ್ಕೂ ಹೊಸತಲ್ಲ. ಆದರೆ, ಈ ಬಗೆಯ ನೀತಿ ಅಮೆರಿಕೆಗೆ ರಕ್ತಗತವಾಗಿ ಬಂದದ್ದಲ್ಲ, ಎರವಲು ತಂದದ್ದು. ಆದುದರಿಂದ ಇಂದು ಅಮೆರಿಕನ್ ವಿದೇಶ ನೀತಿ ಹುಬ್ಬಾರು ವಿರೋಧಾಭಾಸಗಳಿಂದ ತುಂಬಿ ಲಾಡ ತೊಡಗಿದೆ: ಬೇಕು—ಬೇಡ, ಹಾಗೆ—ಹೀಗೆಗಳು ಅಲ್ಲಿ ಹೋರಾಡುತ್ತಿವೆ. ಬಿಳಿಯರೆಲ್ಲಾ ಒಂದಾಗಬೇಕು ಎನ್ನುವ ಒಂದು ಖಣವೂ ಅಲ್ಲಿದೆ. ಬಿಳಿಯರು ಕಮ್ಯುನಿಜಂನ್ನು ನೆಮ್ಮದಿರೂ ಅದು ಭೀಕರವೆನಿಸದೆ ಇನ್ನವರೂ ಇಲ್ಲದಿಲ್ಲ. ಹೀಗೆ ಅಮೆರಿಕೆಯ ರಾಜಕೀಯ ಇತಿಹಾಸದಲ್ಲಿದೊಂದು ಮೈಲಿಗಲ್ಲು. ಈ ವರ್ಷದ ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದುಬರುವ ನೀತಿ ಮುಂದಿನೊಂದು ದಶಕ ರಾಜ್ಯವಾಳಬಹುದು. ಶ್ರೀಮಂತರಿಗೆ ಯಾವಾಗಲೂ ತಲೆ ಬಿಸಿಯಿರುವಂತೆ ಶ್ರೀಮಂತ ರಾಷ್ಟ್ರಗಳಿಗೂ ಇದ್ದೇ ಇರುತ್ತದೆ.

ಜೇಡರ ಬಲೆ

ರಾಜಕೀಯ ಪ್ರಶ್ನೆಗಳಿಗೆ ತೀವ್ರವಾಗಿ ಉತ್ತರ ಕೊಡದೆ ಹೋದರೆ ವಿಷಾಪಬಹುದೆಂಬುದಕ್ಕೆ ಕೆಲವು ರಾಜ್ಯಗಳ ಸೀಮಾ ವಿವಾದವೇ ಸಾಕ್ಷಿ. ಮಹಾರಾಷ್ಟ್ರ-ಕರ್ನಾಟಕ ಸೀಮಾ ವಿವಾದವು ಉಲ್ಬಣಾವಸ್ಥೆಯನ್ನು ಹೊಂದಿದುದನ್ನು, ದಿನದಿನಕ್ಕೂ ಅದು ಜಟಿಲವಾಗುತ್ತ ಬರುತ್ತಿರುವುದನ್ನು ನಾವು ಕಾಣುತ್ತೇವೆ. ಮಹಾಜನ ಆಯೋಗದ ಬಗ್ಗೆ ಕೇಂದ್ರ ಸರಕಾರ ತಳೆದ ಅನಾಸಕ್ತ ಧೋರಣೆಯಿಂದಲೂ ಪರಿಸ್ಥಿತಿ ಹದಗೆಟ್ಟಿದೆ. ಇತ್ತೀಚೆಗೆ ಆಂಧ್ರ ಪ್ರದೇಶದ ಮಹಾ ಮಂತ್ರಿಗಳೂ ಕರ್ನಾಟಕದ ಕೆಲವು ಭಾಗಗಳು ತಮ್ಮ ರಾಜ್ಯಕ್ಕೆ ಸೇರಬೇಕೆಂದು ಕೇಳಿದ್ದಾರೆ. ಕಾಸರಗೋಡನ್ನು ಬಿಟ್ಟು ಕೊಡಲು ಕೇರಳ ಎಂದಿಗೂ ಸಿದ್ಧವಿಲ್ಲವೆನ್ನುತ್ತಿದೆ. ಮದ್ರಾಸವಾದರೂ ಅಷ್ಟೇ. ಇದೇ ಬಗೆಯ ಅಸಿಶ್ಚಿತ ವಾತಾವರಣವು ಮುಂದುವರಿದಂತೆ ಗಡಿ ಪ್ರದೇಶದ ಜನಜೀವನ ಸಂಕಟಮಯವಾಗುತ್ತದೆ; ಸಮಸ್ಯೆಗಳು ಕ್ಲಿಷ್ಟವಾಗುತ್ತವೆ; ಜೇಡರ ಬಲೆಯೊಗುತ್ತವೆ. ಕಾಶ್ಮೀರದ ಪ್ರಶ್ನೆಯನ್ನು ವಿಶ್ವ ಸಂಸ್ಥೆಗೊಯ್ದು ಉದಾರ ರಾಜಕೀಯ ವಿಧಾನದಿಂದಾಗಿ ಅದಿನ್ನೂ ಕಗ್ಗಂಟಾಗಿಯೇ ಉಳಿದಿದೆ. ರಾಜ್ಯಗಳ ಸೀಮೆ ಪ್ರಶ್ನೆಯನ್ನು ಹೂರ ಒಲವು—ಮೆಚ್ಚುಗೆಳನ್ನೂ ಗಣನೆಗೆ ತರದೆ ವಿಧರ್ಶಿಸುವ ಎದೆಗಾರಿಕೆಯಿಂದ ಒಂದು ರಾಜ್ಯಕೀಯ ವಿಧಾನ ಕೈಗೊಳ್ಳಬೇಕು. ಇಲ್ಲವಾದರೆ, ಕೇಂದ್ರದ ಅಶಕ್ತತೆ ಮತ್ತಷ್ಟು ಖಚರಂಗವಾಗುತ್ತದೆ.

ಆಹಾರ ಮಂತ್ರಿಗಳ ಸಂಚಾರ

ರಾಜ್ಯದ ಆಹಾರ ಮಂತ್ರಿ ಶ್ರೀ ಬಿ. ವಿಠಲದಾಸ ಶೆಟ್ಟಿರು ಇತ್ತೀಚೆಗೆ ಜಿಲ್ಲೆಯ ಸಂಚಾರವನ್ನು ಕೈಕೊಂಡು ಪ್ರವಾಹ ಪೀಡಿತ ಪ್ರದೇಶಗಳ ಪರಿಸ್ಥಿತಿಯನ್ನು ಕಣ್ಣಾರೆ ಕಂಡರು. ಕುಂದಾಪುರ, ಉಡುಪಿ ಮತ್ತು ಮಂಗಳೂರು ತಾಲೂಕುಗಳು ವಿಪರೀತವಾಗಿ ಪ್ರವಾಹದಿಂದ ಸಂತ್ರಸ್ತವಾಗಿರುವುದನ್ನು ಅವರು ಕಂಡು ನೊಂದುಕೊಂಡರು. ಪ್ರವಾಹಸಂತ್ರಸ್ತರಿಗೆ ಸರಕಾರದ ಸಹಾಯ-ಭೂತಿಯನ್ನು ಸ್ವತಃ ಪಡಿಸಿದರು; ತನ್ನ ವೈಯಕ್ತಿಕ ಸಹಾಯವನ್ನೂ ಕೆಲವೆಡೆ ನೀಡಿದರು. ಸಂತ್ರಸ್ತರ ಪರಿಹಾರ ಕಾರ್ಯದಲ್ಲಿ ಅಧಿಕಾರಿ ಅನಧಿಕಾರಿಗಳು ಒಂದಾಗಿ ಸಲ್ಲಿಸುತ್ತಿರುವ ಸೇವೆಯನ್ನವರು ಮುಕ್ತ ಕಂಠದಿಂದ ಪ್ರಶಂಸಿಸಿದರು. ಪ್ರವಾಹ ಪೀಡಿತ ಪ್ರದೇಶಗಳಿಗೆ ಭೂಕಂದಾಯ ರದ್ದುಗೊಳಿಸುವ ಮತ್ತು ಫೀಡುವ ಪರಿಜಾರದಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುವ ಬಗ್ಗೆ ಸಚಿವ ಸಂಪುಟಕ್ಕೆ ವರದಿ ಮಾಡುವುದಾಗಿಯೂ ಸಾಧ್ಯವಾದ ಪ್ರಯತ್ನ ಮಾಡುವುದಾಗಿಯೂ ಅವರು ಭರವಸೆಯಿತ್ತರು. ಉಡುಪಿ ತಾಲೂಕಿನ ಸಹಕಾರಿ ಸಂಘಗಳೇ ಪ್ರವಾಹ ಪೀಡಿತರಿಗೆ ಹಂಚಲು ಬಿಡುಗಡೆ ಮಾಡಿದ ಆಹಾರ ಧಾನ್ಯಗಳನ್ನು ಒಯ್ಯುವಲ್ಲಿ ಮಾಡಿದ ವಿಳಂಬವನ್ನವರು ಬಲವಾಗಿ ಖಂಡಿಸಿದರು.

> **ವಚನ ಸುಧೆ**
>
> ಧನೇನಾಧರ್ಮಂಲಬ್ಧೇನ
> ಯಚ್ಚಾಪ್ರಯತಿಪಾಲಿಯೇ
> ಅಸಾರೇಖಲು ಕರ್ಮ ಭವತಿ
> ತತೋಜ್ಞಾನ್ಯದವದೀಯತೇ||
>
> ಅಧರ್ಮದಿಂದ ಲಭಿಸಿದ ಹಣದ ಮೂಲಕ ದೋಷವನ್ನುಡಗಿಸಿದರೆ, ಆ ದೋಷ ದೂರವಾಗುವುದಿಲ್ಲ; ಆದರಿಂದ ಬೇರೆಯೂ ಹೊಸ ದೋಷವೊಂದು ಎದ್ದು ಬರುತ್ತದೆ.

ಸೂಚನೆ

ಸ್ವಾತಂತ್ರ್ಯ ವಿಶೇಷಾಂಕದ ಕೆಲಸದ ದೆಸೆಯಿಂದಾಗಿ ಈ ವಾರದ ಸಂಚಿಕೆಯನ್ನು ಮುಖಪತ್ರ ಕೂಡ ಇಲ್ಲದೆ ಬರೇ 8 ಪುಟಗಳಂತೆ ಪ್ರಕಟಿಸಬೇಕಾಗಿ ಬಂದುದಕ್ಕೆ ವಿಷಾದಿಸುತ್ತೇವೆ.

ಬರುವ ವಾರ ಹೆಚ್ಚು ಪುಟಗಳಿಂದ, ವೈವಿಧ್ಯಪೂರ್ಣ ಲೇಖನಗಳಿಂದ ಕೂಡಿ ವಿಶೇಷ ಸಂಚಿಕೆ ಸಕಾಲದಲ್ಲಿ ವಾಚಕರ ಕೈಸೇರುವುದು.

—ಮೆನೇಜರ್, ನವಯುಗ.

ನರಸಣ್ಣನ ಸರಸ



"ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ಪರಿಣಾಮ ನೋಡುವಾಗ ಈಗಾಗ ಅಲ್ಲಿ ಗಾಂಸರೇ ತುಂಬಿ ಕೊಂಡಿದ್ದಾರೇಂತ ಭಾಸ್ತಿಯಾಗುತ್ತೆ...."

ಅಭಿಪ್ರಾಯ

ರಾಷ್ಟ್ರೀಯ ಐಕ್ಯ ಸಮ್ಮೇಳನ

ಲೇಖಕರು

ಶ್ರೀ ಶಿವಶಂಕರ.

ಭಾರತದಲ್ಲಿಂದು ನಡೆಯುತ್ತಿರುವ ಬಡಿದಾಟವನ್ನು ಕಂಡು ಬಹಳವಿದು ಬೆಂಡಾಗಿರುವ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಜೀಯವರು ಕಾಶ್ಮೀರದಲ್ಲಿ "ನೇಶನಲ್ ಇಂಟಿಗ್ರೇಶನ್ ಕೌನ್ಸಿಲ್" ಕೂಡಿಯೋಜಿಸಬೇಕೆಂದು ಅದಕ್ಕಾಗಿ ಕರೆ ಕಳುಹಿಸಿದರು— ಹೆಚ್ಚಿನ ರಾಜಕೀಯ ಪಕ್ಷಗಳ ಪ್ರಮುಖರಿಗೆ, ಕೆಲ ಪ್ರಮುಖ ಸಂಘಟನೆಗಳ ಮುಂದಾಳುಗಳಿಗೆ ಮತ್ತು ಕೆಲವು ಮಂತ್ರಿಯ ಮುಖಂಡರ ಗಳಿಗೆ. ಸಂಯುಕ್ತ ಸಮಾಜವಾದಿಗಳೂ ಸ್ವತಂತ್ರ ಪಾರ್ಟಿಯವರೂ ಸಮ್ಮೇಳನಕ್ಕೆ ಕಾವು ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು. ರಚನಾತ್ಮಕ ಸಲಹೆಗಳಿಗಾಗಿಯೇ ಈ ಸಮ್ಮೇಳನವನ್ನು ಕರೆಯಲಾಗುತ್ತಿದೆಯೆಂಬ ಸ್ಪಷ್ಟ ಆಶ್ವಾಸನೆಯನ್ನು ಗೃಹಮಂತ್ರಿ ಶ್ರೀಮಾನ್ ಯಶವಂತ ಚವಾಣರೂ, ಪ್ರಧಾನಿ ಇಂದಿರಾಜೀಯವರೂ ಕೊಟ್ಟದ್ದರಿಂದ ಭಾರತೀಯ ಜನ ಸಂಘವು ಸಮ್ಮೇಳನದಲ್ಲಿ ಭಾಗವಹಿಸಿತು. ಸಮ್ಮೇಳನವು ನಿಷ್ಪ್ರಯೋಜಕವೆಂದವರಲ್ಲಿ ಶ್ರೀ ಜಯಪ್ರಕಾಶನಾರಾಯಣರು ಅಗ್ರಗಣ್ಯರು. ಅವರ ಅಧ್ಯಾಪ ರಾಜಕೀಯ ಪಕ್ಷದ ಪ್ರಮುಖರಲ್ಲವಾದರೂ, ಸಮಾಜವಾದಿ ರಾಜಕೀಯ ಪಕ್ಷಗಳ ಪ್ರಮುಖರೇ ಇದ್ದಾರೆ. ಅವರಿನ್ನೂ ರಾಜಕೀಯ ಸನ್ಯಾಸವನ್ನು ಹೊಂದಿರುವದಿಲ್ಲ. ಅವರು ಪ್ರಧಾನಿಯವರಿಗೊಂದು ಪತ್ರ ಬರೆದು ತಮ್ಮ ಮನದಂಗಿತವನ್ನು ಸ್ಪಷ್ಟಪಡಿಸಿದ್ದಾರೆ. ಇಂದಿನ ಪರಿಸ್ಥಿತಿಯನ್ನೆದುರಿಸಲು ಸಮ್ಮೇಳನಕ್ಕೆ ಸಾಧ್ಯವಿಲ್ಲವೆಂಬುದು ಅವರ ಅಭಿಪ್ರಾಯ. ಅದಕ್ಕೆ ಅವರು ಅನೇಕ ಕಾರಣಗಳನ್ನು ಕೊಟ್ಟಿರುವರು. ಆ ಸಮ್ಮೇಳನವು ಸರಕಾರೀ ಸಮ್ಮೇಳನವೇ ಇದ್ದು, ಅಧಿಕಾರದಲ್ಲಿರುವವರ ರುಚಿ ಮತ್ತು ಮನೋಗುಣಕ್ಕೆ ಅನುಸಾರವಾಗಿರುತ್ತದೆಂಬುದು ಅವರ ಅಭಿಪ್ರಾಯ. ಇದು ನಿಜವೇ ಇದೆಯೊದರೂ ಶ್ರೀಮಾನ್ ಜಯಪ್ರಕಾಶರು ಅದನ್ನು ಹೇಳುವಾಗ ಅಲ್ಲಿ ಬೇರೊಂದು ಅರ್ಥಕ್ಕೆ ಆಸ್ಪದವಿದೆ. ಇದು ಸರಕಾರೀ ಅಂಗವಾಗಿರುವದೆ ಅಂದರೆ ಶ್ರೀಮತಿ ಇಂದಿರಾಜೀಯವರ ಮುಂದಾಳುತನದಲ್ಲಿರುವದೆ ಶ್ರೀ ಮಾನ್ ಜಯಪ್ರಕಾಶ ನಾರಾಯಣರೇ ಅದಕ್ಕೆ ಅಧ್ಯಕ್ಷರಾಗಿರುತ್ತಿದ್ದಲ್ಲಿ ಅದು ಪೂರ್ಣ ಪ್ರಯೋಜನಕ್ಕೆ ಬರುವಂತಹ ಸಂಸ್ಥೆಯಾಗಿ ಬಿಡುತ್ತಿತ್ತಲ್ಲವೇ! ದೊಡ್ಡವರ ವಿಷಯದಲ್ಲಿ ಈ ರೀತಿ ಅಭಿಪ್ರಾಯಸೊಂದಿಕೊಂಡಿರಬಾರದಾದರೂ ಶ್ರೀ ಜಯಪ್ರಕಾಶ ನಾರಾಯಣ, ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ ಮುಂತಾದ ಮುಖಂಡರುಗಳು ಇಂದು ಅಧಿಕಾರ ದಾಹದಿಂದ ಏನೇನಾಡುತ್ತಿದ್ದಾರೆ, ಮಾಡುತ್ತಿದ್ದಾರೆಂಬುದನ್ನು ಕೇಳುವಾಗ, ನೋಡುವಾಗ ಅನ್ಯ ಅಭಿಪ್ರಾಯವನ್ನು ಹೊಂದಲಿಂದು ಸಾಧ್ಯವೇ ಇರುವದಿಲ್ಲ. ಅಧಿಕಾರದ ಆಸೆ ಅ ರೀತಿಯದ್ದಿದೆ. ಅವರಲ್ಲಿರುವ ಈ ಒಂದು ದಾಹವನ್ನು ಬಿಟ್ಟಲ್ಲಿ ಅವರು ಮುಂದಾಳುಗಳೇ ಸರಿ. ರಾಷ್ಟ್ರೀಯ ಒಕ್ಕಟ್ಟಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಸರಕಾರವೇ ತಾಯಿ—ತಂದೆಯೆಂಬುದು ಅವರ ಇನ್ನೊಂದು ಅಭಿಪ್ರಾಯ. ಇದನ್ನು ಅಲ್ಲಗಳೆಯಲು ಸ್ವತಃ ಶ್ರೀಮತಿ ಇಂದಿರಾಜಿಗೂ ಸಾಧ್ಯವಿರುವದಿಲ್ಲ. ಶ್ರೀಮತಿಜೀಯವರೂ ಅದನ್ನು ಅಲ್ಲಗಳೆಯುವಂತಹ ಮಾತುಗಳಾಡಿಕೆಗೆ ಮುಂದಾಗದೆ, ಸಮಸ್ಯೆಯ ಮೂಲವನ್ನು ಹುಡುಕುವ ಬದಲು ಪರಿಹಾರೋಪಾಯವನ್ನು ಕಂಡುಹಿಡಿಯುವ ಅನ್ವೇಷಿದ್ದಾರೆ. ಇಂದಿನ ಪಕ್ಷ ರಾಜಕೀಯವೇ ಬಿಕ್ಕಟ್ಟಿಗೆ ಕಾರಣವೆಂಬುದು ಶ್ರೀಯುತರ ಮತ್ತೊಂದು ಅಭಿಪ್ರಾಯ. ಹೌದು. ಇಂದಿನ ಸರ್ವ ಸಮಸ್ಯೆಗಳಿಗೂ ಸರಕಾರ ಹಾಗೂ ರಾಜಕೀಯ ಪಕ್ಷಗಳೇ ಪೂರ್ಣ ಜವಾಬ್ದಾರಿ ಇವೆ. ಅವುಗಳ ತುಷ್ಟೀಕರಣ ಧೋರಣೆಯಿಂದಾಗಿ ಅದೆಂತು ನಮ್ಮ ದೇಶದಲ್ಲಿರುವವರೇ ಕೆಲವರು ಪುಂಡಾಟಿಕೆ ನಡೆಯುತ್ತಿದ್ದಾರೆಂಬುದನ್ನು ಪ್ರತ್ಯೇಕವಾಗಿ ವಿವರಿಸುವ.

ಹೀಗೆ ವಾದ-ವಿವಾದ, ಆರೋಪ-ಪ್ರತ್ಯಾರೋಪಗಳಿಂದ ಶ್ರೀಮತಿ ಇಂದಿರಾ ಗಾಂಧೀಜೀಯವರ ನೇಶನಲ್ ಇಂಟಿಗ್ರೇಶನ್ ಕೌನ್ಸಿಲ್ ಕಾಶ್ಮೀರದಲ್ಲಿ ಸೇರಿತು. ಈ ನೇಶನಲ್ ಇಂಟಿಗ್ರೇಶನ್ ಕೌನ್ಸಿಲಿನ ಅರ್ಥವಾದರೂ ಏನು? ನೇಶನಲ್—ರಾಷ್ಟ್ರೀಯ; ಇಂಟಿಗ್ರೇಶನ್—ತುಂಡುಗಳನ್ನು ಜೋಡಿಸಿ ಒಂದಾಗಿ ಮಾಡುವಿಕೆ; ಕೌನ್ಸಿಲ್—ಆಲೋಚನಾ ಸಭೆ. ಆ ಸಭೆಯಲ್ಲಿ ಭಾಗವಹಿಸಿದವರು ರಾಷ್ಟ್ರೀಯರೆಂದೆನ್ನುವಾಗ ಅವರು ಸ್ವದೇಶಾಭಿಮಾನಿಗಳು ಹಾಗೂ ಸ್ವದೇಶಪ್ರಿಯರಿರಬೇಕೆನ್ನುವದು ಶ್ರೀನಾವಾಸ್ತವದ ಅಭಿಪ್ರಾಯ. ಅದರಲ್ಲಿ ಭಾಗವಹಿಸಿದ ಕಮ್ಯೂನಿಸ್ಟರೂ ಅಲಿಘರ್ ಮುಸ್ಲಿಂ ಯುನಿವರ್ಸಿಟಿಯವರೂ ಸ್ವದೇಶಾಭಿಮಾನಿಗಳೇನು? ಇವರಿಬ್ಬರೂ ಭಾರತವನ್ನು ಒಂದು ರಾಷ್ಟ್ರವೆಂದು ಪರಿಗಣಿಸುವದೇ ಇಲ್ಲವಲ್ಲಾ ?

ಇನ್ನು ಇಂಟಿಗ್ರೇಶನ್! ಇಲ್ಲಿ ಹಲವಾರು ರಾಷ್ಟ್ರೀಯತೆಯ ತುಂಡುಗಳಿವೆ ಏನು? ಇಲ್ಲಿರುವದೆಲ್ಲ ತುಂಡು ತುಂಡು ರಾಷ್ಟ್ರೀಯತೆ ಏನು? ಅವನ್ನೆಲ್ಲಾ ಜೋಡಿಸಿ (ಸತ್ತೆ ಹಾಕಿ?) ಒಂದಾಗಿ ಮಾಡಬೇಕಾಗಿದೆ ಏನು? ಇಲ್ಲಿ ಹಿಂದೂ-ಮುಸ್ಲಿಂ-ಕ್ರಿಸ್ತೀಯ—ಸಿಖ್ಖ—ಬೌದ್ಧ— ವೀರಶೈವ ವಿಧವಿಧ ವಿವಿಧ ರಾಷ್ಟ್ರೀಯತೆ ಇದೆ ಏನ ? ಇಲ್ಲಿ ಕನ್ನಡ—ಮಲೆಯಾಳಿ—ತಮಿಳು—ತೆಲುಗು—ಬಂಗಾಲಿ — ಹಿಂದಿ — ಮರಾಟಿ ಮತ್ತಿನ್ನಷ್ಟು ರೀತಿಯ ರಾಷ್ಟ್ರೀಯತೆಗಳಿವೆ ಏನು? ಇವನ್ನೆಲ್ಲಾ ಜೋಡಿಸಿ ಒಂದಾಗಿಸಬೇಕು! ಅಖಂಡ ಭಾರತವು ಒಂದು ರಾಷ್ಟ್ರವೆಂದು, ಇಲ್ಲಿರುವದು ಒಂದೇ ರಾಷ್ಟ್ರೀಯತೆಯೆಂದು ತಿಳಿದುಕೊಂಡಿರುವವರಿಗೆ ಜೋಡಿಸಲಿಕ್ಕೇನಿದೆ? ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಮುಖಂಡ ಕಾ ವೈ ಡಾ ಸುಂದರಯ್ಯನವರು ಸಭೆಯಲ್ಲಿ ಭಾರತವು ಒಂದು ಭಿನ್ನ-ಭಿನ್ನ ರಾಷ್ಟ್ರೀಯದ ದೇಶವೆಂದು ಹೇಳಿರುವರು. ಹೌದು. ಕಮ್ಯೂನಿಸ್ಟ್ ವಾದದ ಪ್ರಕಾರ ಒಂದೇ ಭಾಷೆಯನ್ನಾಡುವವರು ಒಂದು ರಾಷ್ಟ್ರೀಯರಾಗುತ್ತಾರೆ. ಕನ್ನಡಿಗರು ಒಂದು ರಾಷ್ಟ್ರೀಯರು; ಬಂಗಾಲಿಗಳು ಭಿನ್ನ ರಾಷ್ಟ್ರೀಯರು, ಮರಾಟಿಗರು ಮತ್ತೊಂದು ರಾಷ್ಟ್ರೀಯರು....ಈ ರೀತಿ. ಇದೊಂದು ವಾದ. ಅವರ ಪಿತೃಭೂಮಿ ರಷ್ಯಾದಲ್ಲೇ ಹಾಗಿರುವದಿಲ್ಲ. ಅಲ್ಲಿ ಅನೇಕಾನೇಕ ಭಾಷೆಗಳನ್ನಾಡುವವರು ಇದ್ದಾರಾದರೂ ಅವರೆಲ್ಲರೂ ರಷ್ಯನರೇ ಇದ್ದಾರೆ. ರಷ್ಯನರೂ ಜೈನೀಯರು ಭಾರತದ ಒಂದು ರಾಷ್ಟ್ರವೆಂದು ಪರಿಗಣಿಸದೆ ಇರುವವರೆಗೆ ಇಲ್ಲಿರುವ ಅವಭೇಲಾಗಳು ಭಾರತವು ಭಿನ್ನ-ಭಿನ್ನ ರಾಷ್ಟ್ರೀಯರ ದೇಶವೆಂದೇ ಹೇಳುತ್ತಿರುತ್ತಾರೆ. ಅದನ್ನು ತಡೆಯಲು ಭಾರತದ ಅಧ್ಯಾಪ ಕಾನೂನೂ ಪ್ರಯೋಜನ ಇಲ್ಲವೋ ಏನೋ!

ರಾಷ್ಟ್ರೀಯತಾ ಪ್ರಜ್ಞೆಯ ಅಭಾವ ಅಥವಾ ವಿಸ್ಮೃತಿ ಆ ಸಭೆಯಲ್ಲಿದ್ದವರಲ್ಲಿ ಹೆಚ್ಚಿನವರ ಅಸ್ತಿಯಾಗಿತ್ತು. ಇಲ್ಲದಿದ್ದಲ್ಲಿ ಅವರು ನವರಾಷ್ಟ್ರ ನಿರ್ಮಾಣದ ಮಾತನ್ನೆತ್ತುತ್ತಿರಲಿಲ್ಲ. ಪ್ರಚಲಿತ ರಾಷ್ಟ್ರೀಯತೆಯ ಮೇಲೆ ನಂಬಿಕೆ ಇಲ್ಲದಿರುವುದರಿಂದ ಅಂತಹ ಮಾತುಗಳು ಬರಲು ಸಾಧ್ಯ. ರಾಷ್ಟ್ರೀಯತೆಯಲ್ಲಾ ಗತ, ಪ್ರಚಲಿತ, ಭಾವೀರಾಷ್ಟ್ರೀಯತೆಯೆಂದಿದೆ ಏನು?

ಅದೊಂದು ಆಲೋಚನಾ ಸಭೆ ಮಾತ್ರ. ಅದಕ್ಕೆ ಅದಿನಿತೂ ಅಧಿಕಾರವಿರುವುದಿಲ್ಲ. ಕೇವಲ ಮಾತಾಡುವ ಸುಯೋಗ ಮಾತ್ರ. ರಾಷ್ಟ್ರೀಯತೆಯೆಂದರೇನೆಂಬುದರ ಸ್ಪಷ್ಟ ಯೋಚನೆ ಇಲ್ಲದಿರುವ ಅಂಧರು ಸೇರಿ ತುಂಡು ರಾಷ್ಟ್ರೀಯತೆಗಳನ್ನು ಜೋಡಿಸುವ ಕುರಿತು ಆಲೋಚಿಸಲು ಒಂದು ಸಭೆ. ಕೆಲವು ಕುರುಡರು ಒಂದು ಆನೆಯ ಭಿನ್ನ ಭಿನ್ನ ಅವಯವಗಳನ್ನು ಮುಟ್ಟಿ ನೋಡಿದ ಮೇಲೆ ಒಂದೆಡೆ ಸಭೆ ಸೇರಿದರು. ಅವರವರು ಸ್ಪರ್ಶಿಸಿದ ಭಾಗದ ವಿವರವನ್ನು ಹೇಳುತ್ತಾ ಅದೇ ಆನೆ ಎಂದರು. ಅದೇ ರೀತಿ ಈ ರಾಷ್ಟ್ರೀಯತಾ ಅಂಧರು ಭಾರತವು ಭಿನ್ನ-ಭಿನ್ನ ರಾಷ್ಟ್ರೀಯರ ತಾಂಗುದಾಣ, ಭೋಗಭೂಮಿಯೆಂದು ಭೋಗಿಗಳಾಗುತ್ತಿದ್ದಾರೆ. ಒಂದು ಮನೆಗೆ ಬೆಂಕಿ ತಾಗಿದೆ. (ಮದರಾಸು ಮಹಾನಗರದಲ್ಲಿ ಅದಿಂದು ಸರ್ವಸಾಧಾರಣ ವಿಷಯ). ಆ ಮನೆಯವರೆಲ್ಲರೂ ಸಭೆ ಸೇರಿ ಏನೇ, ಬೆಂಕಿಯ ಕುರಿತು ಮಾತುಕತೆಗೆ ಆರಂಭಿಸಿದರು. ಮನೆಗೆ ಹೇಗೆ, ಎಲ್ಲಿ, ಯಾವಾಗ ಬೆಂಕಿ ಹಿಡಿಯಿತೆಂಬುದರ ಕುರಿತು ಚರ್ಚೆ ನಡೆಯಿತು. ಬೆಂಕಿ ಯಾಕೆ, ಯಾವಾಗ, ಯಾಕೆ, ಹೇಗೆ ನೊಂದಿಸಬೇಕೆನ್ನುವ ಸಲಹೆ ಸೂಚಿಸುವ ಕೆಲಸ ನಡೆಯಿತು. ಇಷ್ಟೆಲ್ಲಾ ಆಗುವಾಗ ಮನೆ ಭಸ್ಮೀಭೂತ! ಆಲೋಚನಾ ಸಭೆ ಭಿದ್ದೆಗೆಟ್ಟು, ಹಸಿವೆ, ಮರೆತು ಜೋರಾಗಿ ನಡೆದಿತ್ತು.

ರಾಷ್ಟ್ರೀಯ ತುಂಡುಗಳ ಜೋಡಿಸುವಿಕೆಯ ಆಲೋಚನಾ ಸಭೆ ಅಷ್ಟೇ ಜೋರಾಗಿ ನಡೆಯಿತ್ತು. ಅದನ್ನಂತಿದ್ದ ಶ್ರೀ ಜಯಪ್ರಕಾಶ ನಾರಾಯಣರು ಇಂದು ಬೇಕಾಗಿರುವದು ಆಲೋಚನಾ ಸಭೆಗಳಲ್ಲ, ರಚನಾತ್ಮಕ ಕಾರ್ಯವೆಂದಿರುವರು. ಹಾಗಿಲ್ಲದಿದ್ದಲ್ಲಿ ಕಳೆದ ಸಲದ ಸಭೆಯಂತೆ ಈ ಸಲದ ಸಭೆಯು ತೀರ್ಮಾನಗಳೂ ಶೀ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಗೇಹರಾಜ್ಯದಲ್ಲಿ

ಪಾದಕ್ಕಿಂತ ಚಪ್ಪಲಿ ದೊಡ್ಡದು

"ಅಲ್ರಿ, ಇದೆಂಥದೂಂತ..."

"ಯಾವುದೆ?"

"ಮೋಡಿ, ಪ್ರವಾಹ ಪೀಡಿತರಿಗೆಂದು ಸರಕಾರ ಬಿಡುಗಡೆ ಮಾಡಿದ ಆಹಾರ ಧಾನ್ಯವನ್ನು ಸಹಕಾರಿ ಸಂಘಗಳು ಪಡೆದುಕೊಂಡಿಲ್ಲವಂತೆ....'

"ಯಾರು ಹೇಳಿದ್ರು?"

"ಆಹಾರ ಸಚಿವರೇ ಮೊನ್ನೆ ತಮ್ಮ ಕಳವಳ—ಅಸಮಾಧಾನವನ್ನು ವ್ಯಕ್ತಪಡಿಸಿದರಂತೆ..."

"ಏನೂಂತ?'

'ಬೆಂಗಳೂರಿನಲ್ಲಿ ಹದಿನೈದು ನಿಮಿಷದಲ್ಲಿ ಮಂಜೂರು ಮಾಡಿಸಿದ ಆಹಾರ ಧಾನ್ಯವನ್ನು ಹದಿನೈದು ದಿನಗಳಾದರೂ ಕೊಂಡಿಲ್ಲವೆಂದು...'

"ಸರಿಯೇ ಅನ್ನು."

"ಏನು ಸರಿ?"

"ನೋಡು, ಒಂದು ಗಾದೆಯಿದೆ..."

'ಏನದು.'

"ಮತ್ತೆಂಥದು? ದೇವರು ಕೊಟ್ಟರೂ ಪೂಜಾರಿ ಬಿಡಾಂತ..."

'ಹ್ಞಾಂ, ಅದೀಗ ಸರಿ."

'ನೋಡು, ಇದಕ್ಕಿಂತ್ಲೂ ಸ್ವಾರಸ್ಯ ಮತ್ತೊಂದಿದೆ...'

"ಏನು?"

"ದಾಸರು ಹಾಡಿದ್ದಾರೆ — ಹರಿಯೇ ನಿನ್ನ ಮೆಚ್ಚಿಸಬಹುದು. ಈ ನರರ ಮೆಚ್ಚಿಸುವುದು ಬಹು ಕಷ್ಟ..."

"ಹೀಗೂ ಅನ್ನಬಹುದಲ್ಲಾ...."

"ಹ್ಞಾಂ..."

"ಮಂತ್ರಿಯೇ, ನೀನೇ ಮಂಜೂರು ಮಾಡಬಹುದು, ಸಹಕಾರಿ ಸಂಘಗಳನ್ನೊಲಿಸುವುದು ಬಲು ಕಷ್ಟ...."

"ಅಲ್ವೆ, ಸಹಕಾರ ಸಂಘ ಇರುವುದಾದರೂ ಏತಕ್ಕೆ?"

"ಏತಕ್ಕೆ ಅಂದ್ರೆ? ಜನರಿಗೆ ಕಡಿಮೆ ದರದಲ್ಲಿ ಅವರ ಅವಶ್ಯಕತೆಯನ್ನು ಪೂರೈಕೆ ಮಾಡುವುದಕ್ಕೆ...."

'ಅದೆಲ್ಲಾ ಪುಸ್ತಕದಲ್ಲಿ ಮಾತ್ರ."

'ಮತ್ತೆ?"

"ಸಹಕಾರಿ ಸಂಘಗಳು ಕೆಲವೇ ಜನ ಸ್ವಾರ್ಥಿಗಳ ಮುಷ್ಟಿಯೊಳಗಿದ್ದು ಅವರ ವಶ್ಯ ಅವರ ಬಾಲಬಡಕರ ಸ್ವಾರ್ಥ ಸಾಧನೆಯ ಕೇಂದ್ರಗಳಾಗಿ ಬಿಟ್ಟಿವೆ. ಸರಕಾರದಿಂದ ಸರ್ವ ವಿಧದ ಸಹಾಯವನ್ನು ಇವು ಗಿಟ್ಟಿಸಿಕೊಂಡು, ಅದರ ಲಾಭವು ಬೇರಾರಿಗೂ ದೊರೆಯದಂತೆ ನೋಡಿಕೊಳ್ಳುತ್ತವೆ...."

'ಅಲ್ರಿ, ಸಹಕಾರಿ ಸಂಘವೆಂದರೆ, ಜನತೆ ತನಗಾಗಿಯೇ ತನ್ನ ಲಾಭಕ್ಕಾಗಿಯೇ ತಾನೇ ಕಟ್ಟಿಕೊಂಡ ಸಂಘ. ಆದರಿಂದ ಜನತೆಗೆ ಲಾಭವಾಗದೆ ಹೋದರೆ, ಸರಕಾರ ಸಹಕಾರಿಕ್ಕೆ ಇಷ್ಟು ಹಣಕಾಸು ಸುರಿಯುವುದು ಯಾಕೆ?"

"ಅದರ ರಚನೆ ಆದದ್ದು ಹಾಗೇನೇ. ಉದ್ದೇಶವೂ ಅದೇನೇ. ಆದರೆ, ಕಾರ್ಯ ನೀತಿ ಮಾತ್ರ ಬೇರೇನೆ."

"ಅಂದ್ರೆ?"

"ನೋಡ', ಎಲ್ಲವುಗಳ ಆರಂಭವೂ ಶುಭ ಮುಹೂರ್ತದಲ್ಲೇ ಆರಂಭವಾಗುತ್ತವೆ. ಆದ್ರೇಸು ಮಾಡೋಣ? ಶಿವಪೂಜೆಯಲ್ಲೂ ಕೆಲವೊಮ್ಮೆ ಕರಡಿಗಳು ಅಡ್ಡ ಹಾಯುತ್ತವೆ. ಕಾರ್ಯ ಕೆಟ್ಟು ಹೋಗುತ್ತದೆ. ಮತ್ತೆ ಸರ್ವಾಂತರ್ಯಾಮಿಯೆನಿಸಿದ ಲಾಭ ಭಡಕತನ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿತ್ಯಾದಿಗಳಿಂದ ಸಹಕಾರ ಸಂಘಗಳೂ ದೂರವಿರುವುದು ಸಾಧ್ಯವೆ? ಹಾಗಿರುವಾಗ....'

"ಅಲ್ರಿ, ಪ್ರವಾಹ ಪೀಡಿತರಿಗೆಂದು ಸರಕಾರ ಹಂಚಲು ನೀಡಿದ ಅಕ್ಕಿಯದು...'

'ಏನು ಹೇಳ್ತೀಯ? ಸರಕಾರ ನೀಡಿದ ಅಕ್ಕಿಯನ್ನೇ ನಂಬಿ ಪ್ರವಾಹ ಪೀಡಿತರು ಇದ್ದಾರೇನು? ಒಂದು ನೇಳೆ ಇದ್ದಾರೇನ್ನು. ಎಷ್ಟು ದಿನಗಳ ಕಾಲ ಸರಕಾರದ ಅಕ್ಕಿ ಬಂದೀತು?"

"ಅಂದ್ರೆ ಇದೆಲ್ಲಾ ಬೇಡಾಂತ ತಾವೇ ನೀವನ್ನುವುದು?"

"ಛೆ, ಛೆ, ಪ್ರಜಾಸತ್ತೆಯಲ್ಲಿ ಎಲ್ಲಾ ಬೇಕು. ಸರಕಾರ ಅಕ್ಕಿ ಕೊಡಬೇಕು; ಜನರಿಗೆ ಅದು ಸಿಗದಿರಬೇಕು...."

"ಮತ್ತೇನು ಲಾಭ?"

"ನೋಡು, ಎಲ್ಲೋ ಒಂದು ಕಾರ್ಟೂನ್ ನೋಡಿದ ನೆನಪು—ಮಂತ್ರಿ ಯಾವ ಕೆಲಸವನ್ನೂ ಮಾಡಲು ಆರ್ಡರ್ ಮಾಡಬಹುದು; ಆದರೆ ಆ ಆರ್ಡರಿಗೆ ಅಧಿಕಾರಿ ಸಹಿಮಾತ್ರದೆ ಅನು ಕಾರ್ಯರೂಪಕ್ಕೆ ಬರುವುದಂಂಟೆ?"

"ಇಲ್ಲೂ ಹಾಗೇ ಆಯಿತೆಂದು ಅನ್ನುತ್ತೀರಾ?"

'ಇವರನ್ನು ಕೇಳಿದರೆ ಹೂರು, ಕಾರಣಗಳು—ಇದೀಗ ಲಭ್ಯವಾದಂತೆ ಸ್ಟೋಕದ 8 ಡಿವಿಜನ್ನದ 95 ಬ್ರಾಂಚಗಳಿಗೂ ಉಡ್ಪಿ ವಿಭಜನ್ನದ ಸಿರಸಿಯ ಬ್ರಾಂಚಿನ ವಿಜಂಟರಾದ ಶ್ರೀ ವ್ಹಿ. ಆರ್. ಭಾಗ್ವತರು ಸುಮಾರು 21 ಲಕ್ಷಕ್ಕೂ ಹೆಚ್ಚಿಗೆ ವ್ಯವಹಾರದಿಂದ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ರೀತಿ ದಕ್ಷಿಣ ಹಿಂದೆಸ್ಥಾನಕ್ಕೆ ಕೆಳೆದ 31—3—67 ವಾರ್ಷಿಕಕ್ಕೂ ಇವರೇ ಪ್ರಥಮಸ್ಥಾನ ಪಡೆದವರಾಗಿದ್ದರು. ಭಿನ್ನ ಕೇಸರಿ ಸ್ಪರ್ಧೆಯ ವಿಜೇತರಾ ಇವರು ತಮ್ಮ ಕರ್ತವ್ಯನಿಷ್ಠೆಯಿಂದ ಖಾಲಿದಾವರಿಗೆ ಕೊಡುತ್ತಿರುವ ಸೇವೆಯಂದಾಗಿಯೇ 3-4 ವರ್ಷಗಳಿಂದಲೂ L.I.C.ಯವರು ಏರ್ಪಡಿಸಿದ ಸ್ಪರ್ಧೆಗಳಲ್ಲಿ ಜಯಗಳಿಸುತ್ತಾ ಈ ಕ್ಷೇತ್ರದಲ್ಲಿ ಮುಂದುವರಿಯುತ್ತಿದ್ದಾರೆ. ಇದರಿಂದ ಸಾಹಸವೇ ಇವರನ್ನು ಉಡ್ಪಿ ವಿಭಾಗ ವಿಜಂಟರ ಸಂಖ್ಯೆವುಳ್ಳ ತನ್ನ ಪ್ರಥಮ ಅಗ್ರಸ್ಥರನ್ನಾಗಿ ಆಯ್ದುಕೊಳ್ಳುವಂತೆ ಮಾಡಿದೆ ಎನ್ನಬಹುದು. ಜೀವವಿಮಾ ಸಂಸ್ಥೆಗಳ ಅಧಿಕಾರಿಗಳಿಂದ ಇಡೀ ಇಂಡಿಯಾದ ಆಂಕೆ-ಸಂಖ್ಯೆಗಳು ಇನ್ನು ಪ್ರಕಟಿಸಲಾಗಬೇಕಿದ್ದು ಅದರಲ್ಲಿ ಇವರ ಸ್ಥಾನ ಎಷ್ಟನೆದ್ದೆಂತ ನೋಡಬೇಕಿದೆ.

ಶ್ರೀ ವಿಠ್ಠಲ ಮಂದಿರ ಮತ್ತು ಕೇಶವಾಶ್ರಮ ಉದ್ಘಾಟನೆ

ಅಮೇರಿಕೆಯ ಮತ್ತು ಭಾರತೀಯ ಭಕ್ತಜನರು ಪೂಜೆಸಲು ಅನುಕೂಲವಾಗುವಂತೆ ಬಾಷಿಂಗ್‌ಟನ್ನಿನದಿಕ್ಕಿನ ಸೀಕ್ರಸ್ಟ್‌ಯಲ್ಲಿರುವ ಸುಂದರ ಭವನದಲ್ಲಿ ಬೆಂಗಳೂರಿನ ಸಾಸ್ತ್ರಸಿದ್ಧ ಕೀರ್ತನಕಾರರಾದ ಶ್ರೀ ಸಜ್ಜರು ಕೇಶವ ದಾಸರು 24 ಅಡಿಯ ಶ್ರೀ ವಿಠಲ ವಿಗ್ರಹವನ್ನು ತಾ. 21-7-68ರಂದು ಪ್ರತಿಷ್ಠಿಸಿ, 'ಕೇಶವಾಶ್ರಮ ಅಂತರರಾಷ್ಟ್ರೀಯಕೇಂದ್ರ'ವನ್ನು ಉದ್ಘಾಟಿಸಿದರು. 45,000 ಡಾಲರ್‌ನ (34 ಲಕ್ಷ ರೂ.) ಜೆಲ್ಲೆಯ ಮೂರು ಮಹಡಿಯ ಈ ಕಟ್ಟಡವನ್ನು ಅವರ ಶಿಷ್ಯ ದಂಪತಿಗಳಾದ ವಜೇಯನಿಯೂದ ಸಹೋದರಿ ಗೀತಾ (ಜೇನ್ ಬ್ಲಾಕ್‌ವೆಲ್) ಮತ್ತು ಮಾಧವ ಮೆಲರಿ(ಮೆಲರಿ ನ್ಯಾರ್) ಈ ಆಶ್ರಮಕ್ಕಾಗಿ ಕೊಂಡಿದ್ದಾರೆ. ಈ ಆಶ್ರಮವು ಪೂಜಾಮಂದಿರ, ಧ್ಯಾನ ಮಂದಿರ, ಸ್ವಾಧ್ಯಾಯ ಮಂದಿರ ಮತ್ತು ಗುರು ಮಂದಿರವನ್ನೊಡಗೊಂಡು ಸಂಪೂರ್ಣ 'ಏರ್ ಕಂಡಿಷನ್'ನಿಂದ ವ್ಯವಸ್ಥಿತವಾಗಿದೆ. ರಾಯಭಾರಿ ಕಛೇರಿಯ ಅನೇಕ ಕಾರ್ಯಕರ್ತರೂ, ನ್ಯೂಯಾರ್ಕ್ ಮತ್ತು ವಾಷಿಂಗ್ಟನ್‌ನ ಹೊರಭಾಗದಿಂದ ಅನೇಕ ಅತಿಥಿಗಳೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಮೇರಿಕೆಯ ಭಕ್ತರೆಲ್ಲ ಅಂದು ಸೀರೆಗಳನ್ನು ಧರಿಸಿದ್ದರು.

ಶ್ರೀ ಕೇಶವದಾಸರು ಒಂದು ತಿಂಗಳ ಕಾಲ ಇದ್ದದ್ದು, ಪ್ರವಚನ ಕೀರ್ತನೆಗಳಿಂದ ಭಾರತೀಯ ಸಂಸ್ಕೃತಿಯನ್ನು ಪರಿಚಯಮಾಡಿಸುವರು. ಭಾರತೀಯ ಸಂತಜನರ ಬೋಧೆಗಳನ್ನು ಜಗತ್ತಿಗೆ ಹರಡಲು ಇದು ಪ್ರಮುಖ ಕೇಂದ್ರವಾಗಿ ಸೇವೆಗೈಯುವುದು.

ಎಲ್ಲೆಲ್ಲಿ ಏನೇನು?

ಪುಸ್ತಕ ಪ್ರದರ್ಶನದಲ್ಲಿ ಉತ್ತಮ ಮಾರಾಟ

ಮಣಿಪಾಲ, ಜು. ೨೬ — ಇಲ್ಲಿಯ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಿನ್ನೆ ಮುಕ್ತಾಯವಾದ ಆಮೆರಿಕದ ವಿಶ್ವವಿದ್ಯಾನಿಲಯಗಳ ಪಠ್ಯಪುಸ್ತಕಗಳ ಕಡಿಮೆ ಬೆಲೆಯ ಭಾರತೀಯ ಆವೃತ್ತಿಗಳ ಮೂರು ದಿನಗಳ ಪ್ರದರ್ಶನದಲ್ಲಿ ಸುಮಾರು ೧೧,೦೦೦ ರೂ. ಬೆಲೆಯ ವಿವಿಧ ವಿಷಯಗಳ ಪುಸ್ತಕಗಳು ಮಾರಾಟವಾದವು.

ಸುಮಾರು ೫,೦೦೦ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಇತರರು ಪ್ರದರ್ಶನಕ್ಕೆ ಭೇಟಿಕೊಟ್ಟಿದ್ದರು. ಅದರ ಅಂಗವಾಗಿ ಭಾಷಣಗಳನ್ನೂ ಚಲಚ್ಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು.

ಶ್ರೀ ವಿ.ಆರ್. ಭಾಗ್ವತರ ವಿಕ್ರಮ

ಸಿರಸಿ—1968ನೇ ಪಾರ್ಟ 31ಕ್ಕೆ ಮುಗಿದ ಜೀವ-ವಿಮಾ ವಾರ್ಷಿಕ ವ್ಯವಹಾರದ ಸಾರ್ವಕ್ಷೋಣ(ಮಧ್ಯಾಸ)ದ ಅಂಕೆ ಸಂಖ್ಯೆ

ಮುಂದೆ ಇಡ ತ್ತಾರೆ—ಕಾವು ನಿರಪರಾಧಿಗಳು—ಎಲ್ಲಕ್ಕೂ ಕಾಂಗ್ರೆಸ್ ಸರಕಾರವೇ ಹೊಣೆ ಅನ್ನಬಹುದು—'

"ಎಳೆಯಲಾರದ ಎತ್ತು ಮಿಡಿಯ ಮೇಲೆ ಬೀಳುತ್ತದಂತೆ....'

'ಸದ್ಯ ಕಣಿಸು ಮೇಲ್ಬೀಳದಿದ್ರೆ ಸಾಕು....'

"ಅಲ್ರಿ, ಸಹಕಾರಿ ಸಂಘಗಳೇ ಹೀಗೆ ಮಾಡಿದ್ರೆ ಉಳಿದ ವ್ಯಾಪಾರಿಗಳು ಏನು ಮಾಡಬೇಕು?"

"ಯಾರ ಚಿತ್ರ ಕೇಳೋದು? ಬೇಲಿಯೇ ಹೊಲವನ್ನು ನುಂಗುವ ಕಾಲವಿದು. ಸಹಕಾರಿ ಸಂಘಗಳು ಜನತೆಯೊಡನೆ ಅಸಹಕಾರ ಮಾಡಿದರೆ ಆಶ್ಚರ್ಯವಿಲ್ಲ ಬಿಡು..."

"ಯಾವಾಗ್ಲೂ ಹಾಗೇನೇ. ತಲೆಗಿಂತ ಮಂಡಾಸು ದೊಡ್ಡದು, ಪಾದಕ್ಕಿಂತ ಚಪ್ಪಲಿ ದೊಡ್ಡದು..."

"ಅದು ಸರಿ..."

"ಯಾತ್ವದು?"

"ಹ್ಞಾಂ, ಯಾತ್ವದೂ ಇಲ್ಲ...."

'ಹೇಳೀಂದ್ರೆ..."

"ಹೇಳೋ ಕಾಲ ಹೋಯ್ತು. ಮಾಡೋ ಕಾಲ ಬಂದಿದೆ..."

"ಹ್ಞಾಂ...." —ಗೋರಾ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಟ್ಟಿನ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ತಲ ಕೊಂಡಿಯಲ್ಲಿ ಜೀವಾಸ್ಪಾನವಾಗಿ ಉಳಿಸುಬಲ್ಲವು.

ಈ ರೀತಿ ಶ್ರೀಮತಿ ಇಂದಿರಾ ಗಾಂಧೀಜಿ ಸುವರ ರಾಷ್ಟ್ರೀಯ ಐಕ್ಯತಾ ಸಮ್ಮೇಳನ ಕಾಶ್ಮೀರದಲ್ಲಿ ನಡೆಯಿತು.

ಕಾರ್ಕಳ ಮುನ್ಸಿಫ್ ಕೋರ್ಟ್‌ನಲ್ಲಿ

I.A No. I, O.S. 677/1966.

ಅಪ್ಪಿ ಹೆಂಗ್ಸು ಸಹಾ— ಅರ್ಜಿದಾರರು.

ಅವ್ವತಾಪತಿ ಸಹಾ— ಎದ್ರಿರು.

1. ಶಿಶುಪಾಲ ಶೆಟ್ಟಿ, 2. ಸೇವಿರಾಣಿ ಶೆಟ್ಟಿ— ಶ್ರೀದೇವಿ ಮಕ್ಕಳು.

ಕಾರ್ಕಳ ತಾಲ್ಲೂ ನಲ್ಲೂರು ಗ್ರಾಮದ ಚೌಂಡಮೇಗಿನ ಮನೆಯಲ್ಲಿರುವವರು.

1, 3, ನೇ ಎದ್ರಿರಾದ ನಿಮಗೆ ಈ ಮೂಲಕ ತಿಳಿಸುವುದೇನಂದ್ರೆ—

ಸದ್ರಿ ದಾವೆಯಲ್ಲಿ ಅದ ಪ್ರಲಿಮಿನರಿ ಡಿಕ್ರಿಗೆ ಅನುಸರಿಸಿ ಹಿಂದೆ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ಬಾಳ್ಳು ಮಾಡಿದ ಸದ್ರಿ ಅರ್ಜಿಯು ತಾರೀಖು 16-8-1968ಕ್ಕೆ ನಿಮಗೆ ಅಕ್ಕಂ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ದ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಆಕ್ಷೇಪಣೆ ಕೊಡತಕ್ಕದ್ದು. ಕಟ್ಟುದೈ ನಮ್ಮ ಗೈರಹಾಜ್ರಿಯಲ್ಲಿ ಅರ್ಜಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K.S. Kamath

Advocate for Petitioners:

ಕಾರ್ಕಳ, ತಾ. 1-8-68.

ಅಭಿಪ್ರಾಯ

ರಾಷ್ಟ್ರೀಯ ಐಕ್ಯ ಸಮ್ಮೇಳನ

ಲೇಖಕರು

ಶ್ರೀ ಶಿವಶಂಕರ.

ಭಾರತದಲ್ಲಿಂದು ನಡೆಯುತ್ತಿರುವ ಬಡಿದಾಟವನ್ನು ಕಂಡು ಬಸವಳಿದು ಬೆಂಡಾಗಿರುವ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಜೀಯವರು ಕಾಶ್ಮೀರದಲ್ಲಿ "ನೇಶನಲ್ ಇಂಟಿಗ್ರೇಶನ್ ಕೌನ್ಸಿಲ್" ಕೂಡಿಯೋಚಿಸಬೇಕೆಂದು ಅದಕ್ಕಾಗಿ ಕರೆ ಕಳುಹಿಸಿದರು— ಹೆಚ್ಚಿನ ರಾಜಕೀಯ ಪಕ್ಷಗಳ ಪ್ರಮುಖರಿಗೆ, ಕೆಲ ಶ್ರಮಿಕ ಸಂಘಟನೆಗಳ ಮುಂದಾಳುಗಳಿಗೆ ಮತ್ತು ಕೆಲವು ಮಂತ್ರಿಗಳು ಮುಖಂಡರುಗಳಿಗೆ. ಸಂಯುಕ್ತ ಸಮಾಜವಾದಿಗಳೂ ಸ್ವತಂತ್ರ ಪಾರ್ಟಿಯವರೂ ಸಮ್ಮೇಳನಕ್ಕೆ ತಾವು ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು. ರಚನಾತ್ಮಕ ಸಲಹೆಗಳಿಗಾಗಿಯೇ ಈ ಸಮ್ಮೇಳನವನ್ನು ಕರೆಯಲಾಗುತ್ತಿದೆಯೆಂಬ ಸ್ಪಷ್ಟ ಆಶ್ವಾಸನೆಯನ್ನು ಗೃಹಮಂತ್ರಿ ಶ್ರೀಮಾನ್ ಯಶವಂತ ಚವಾಣರೂ, ಪ್ರಧಾನಿ ಇಂದಿರಾಜೀಯವರೂ ಕೊಟ್ಟಿದ್ದರಿಂದ ಭಾರತೀಯ ಜನ ಸಂಘವು ಸಮ್ಮೇಳನದಲ್ಲಿ ಭಾಗವಹಿಸಿತು. ಸಮ್ಮೇಳನವು ವಿಫಲ್ಯಯೋಜಕವೆಂದವರಲ್ಲಿ ಶ್ರೀ ಜಯಪ್ರಕಾಶನಾರಾಯಣರು ಅಗ್ರಗಣ್ಯರು. ಅವರ ಅಧ್ಯಾಪ ರಾಜಕೀಯ ಪಕ್ಷದ ಪ್ರಮುಖರಲ್ಲವಾದರೂ, ಸಮಾಜವಾದಿ ರಾಜಕೀಯ ಪಕ್ಷಗಳ ಪ್ರಮುಖರೇ ಇದ್ದಾರೆ. ಅವರಿಗೆ ರಾಜಕೀಯ ಸನ್ಯಾಸವನ್ನು ಹೊಂದಿರುವದಿಲ್ಲ. ಅವರು ಪ್ರಧಾನಿಯವರಿಗೊಂದು ಪತ್ರ ಬರೆದು ತಮ್ಮ ಮನದಿಂಗಿತವನ್ನು ಸ್ಪಷ್ಟಪಡಿಸಿದ್ದಾರೆ. ಇಂದಿನ ಪರಿಸ್ಥಿತಿಯನ್ನೆದುರಿಸಲು ಸಮ್ಮೇಳನಕ್ಕೆ ಸಾಧ್ಯವಿಲ್ಲವೆಂಬುದು ಅವರ ಅಭಿಪ್ರಾಯ. ಅದಕ್ಕೆ ಅವರು ಅನೇಕ ಕಾರಣಗಳನ್ನು ಕೊಟ್ಟಿರುವರು. ಆ ಸಮ್ಮೇಳನವು ಸರಕಾರೀ ಸಮ್ಮೇಳನವೇ ಇದ್ದು, ಅಧಿಕಾರದಲ್ಲಿರುವವರ ರುಚಿ ಮತ್ತು ಮನೋಗುಣಕ್ಕೆ ಅನುಸಾರವಾಗಿರುತ್ತದೆಂಬುದು ಅವರ ಅಭಿಪ್ರಾಯ. ಇದು ನಿಜವೇ ಇದೆಯೂದರೂ ಶ್ರೀಮಾನ್ ಜಯಪ್ರಕಾಶರು ಅದನ್ನು ಹೇಳುವಾಗ ಅಲ್ಲಿ ಬೇರೊಂದು ಅರ್ಥಕ್ಕೆ ಅವಕಾಶವಿದೆ. ಇದು ಸರಕಾರೀ ಅಂಗವಾಗಿರುವ ಕಾರಣ ಶ್ರೀಮತಿ ಇಂದಿರಾಜೀಯವರ ಮುಂದಾಳುತನದಲ್ಲಿರದೆ ಶ್ರೀ ಮಾನ್ ಜಯಪ್ರಕಾಶ ನಾರಾಯಣರೇ ಅದಕ್ಕೆ ಅಧ್ಯಕ್ಷರಾಗಿರುತ್ತಿದ್ದಲ್ಲಿ ಅದು ಪೂರ್ಣ ಪ್ರಯೋಜನಕ್ಕೆ ಬರುವಂತಹ ಸಂಸ್ಥೆಯಾಗಿ ಬಿಸುತ್ತಿತ್ತಲ್ಲವೇ! ದೊಡ್ಡವರ ವಿಷಯದಲ್ಲಿ ಈ ರೀತಿ ಅಭಿಪ್ರಾಯಹೊಂದಿಕೊಂಡಿರಬಾರದಾದರೂ ಶ್ರೀ ಜಯಪ್ರಕಾಶ ನಾರಾಯಣ, ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ ಮುಂತಾದ ಮುಖಂಡರುಗಳು ಇಂದು ಅಧಿಕಾರ ದಾಹದಿಂದ ಏನೇನಾಡುತ್ತಿದ್ದಾರೆ, ಮಾಡುತ್ತಿದ್ದಾರೆಂಬುದನ್ನು ಕೇಳುವಾಗ, ನೋಡುವಾಗ ಅನ್ಯ ಅಭಿಪ್ರಾಯವನ್ನು ಹೊಂದಲಿಂಜ. ಸಾಧ್ಯವೇ ಇರುವದಿಲ್ಲ. ಅಧಿಕಾರದ ಆಸನ ಅ ರೀತಿಯದ್ದಿದೆ. ಅವರಲ್ಲಿರುವ ಈ ಒಂದು ದಾಹವನ್ನು ಬಿಟ್ಟಲ್ಲಿ ಅವರು ಮುಂದಾಳುಗಳೇ ಸರಿ. ರಾಷ್ಟ್ರೀಯ ಒಕ್ಕಟ್ಟಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಸರಕಾರವೇ ತಾಯಿ-ತಂದೆಯೆಂಬುದು ಅವರ ಇನ್ನೊಂದು ಅಭಿಪ್ರಾಯ. ಇದನ್ನು ಅಲ್ಲಗಳೆಯಲು ಸ್ವತಃ ಶ್ರೀಮತಿ ಇಂದಿರಾಜಿಗೂ ಸಾಧ್ಯವಿರುವದಿಲ್ಲ. ಶ್ರೀಮತಿಜೀಯವರೂ ಅದಕ್ಕು ಅಲ್ಲಗಳೆಯುವಂತಹ ಮಕ್ಕಳಾಟಿಕೆಗೆ ಮುಂದಾಗದೆ, ಸಮಸ್ಯೆಗಳ ಮೂಲವನ್ನು ಹುಡುಕುವ ಬದಲು ಪರಿಹಾರೋಪಾಯವನ್ನು ಕಂಡುಹಿಡಿಯುವ ಆಸ್ಥೆತಿದ್ದಾರೆ. ಇಂದಿನ ಪಕ್ಷ ರಾಜಕೀಯವೇ ಬಿಕ್ಕಟ್ಟಿಗೆ ಕಾರಣವೆಂಬುದು ಶ್ರೀಯುತರ ಮತ್ತೊಂದು ಅಭಿಪ್ರಾಯ. ಹೌದು. ಇಂದಿನ ಸರ್ವ ಸಮಸ್ಯೆಗಳಿಗೂ ಸರಕಾರ ಹಾಗೂ ರಾಜಕೀಯ ಪಕ್ಷಗಳೇ ಪೂರ್ಣ ಜವಾಬ್ದಾರಿ ಇವೆ. ಅವುಗಳ ತುಷ್ಟೀಕರಣ ಧೋರಣೆಯಿಂದಾಗಿ ಅದೆಂತು ಧರ್ಮದೇಶದಲ್ಲಿರುವವರೇ ಕೆಲವರು ಪುಂಡಾಟಿಕೆ ನಡೆಯುತ್ತಿದ್ದಾರೆಂಬುದನ್ನು ಪ್ರತ್ಯೇಕವಾಗಿ ವಿಚಾರಿಸುವ.

ಹೀಗೆ ವಾದ-ವಿವಾದ, ಆರೋಪ-ಪ್ರತ್ಯಾರೋಪಗಳಿಂದ ಶ್ರೀಮತಿ ಇಂದಿರಾ ಗಾಂಧೀಜೀಯವರ ನೇಶನಲ್ ಇಂಟಿಗ್ರೇಶನ್ ಕೌನ್ಸಿಲ್ ರಾಷ್ಟ್ರದಲ್ಲಿ ಸೇರಿತು. ಈ ನೇಶನಲ್ ಇಂಟಿಗ್ರೇಶನ್ ಕೌನ್ಸಿಲಿನ ಅರ್ಥವಾದರೂ ಏನು? ನೇಶನಲ್—ರಾಷ್ಟ್ರೀಯ; ಇಂಟಿಗ್ರೇಶನ್—ತುಂಡುಗಳನ್ನು ಜೋಡಿಸಿ ಒಂದಾಗಿ ಮಾಡುವಿಕೆ; ಕೌನ್ಸಿಲ್—ಆಲೋಚನಾ ಸಭೆ. ಆ ಸಭೆಯಲ್ಲಿ ಭಾಗವಹಿಸಿದವರು ರಾಷ್ಟ್ರೀಯರೆಂದೆನ್ನುವಾಗ ಅವರು ಸ್ವದೇಶಾಭಿಮಾನಿಗಳು ಹಾಗೂ ಸ್ವದೇಶಪ್ರಿಯರಿರಬೇಕೆನ್ನುವದು ಶ್ರೀಸಾಮಾನ್ಯನ ಅಭಿಪ್ರಾಯ. ಅದರಲ್ಲಿ ಭಾಗವಹಿಸಿದ ಕಮ್ಯೂನಿಸ್ಟರೂ ಅಲಿಘರ್ ಮುಸ್ಲಿಂ ಯುನಿವರ್ಸಿಟಿಯವರೂ ಸ್ವದೇಶಾಭಿಮಾನಿಗಳೇಯು? ಇವರಿಬ್ಬರೂ ಭಾರತವನ್ನು ಒಂದು ರಾಷ್ಟ್ರವೆಂದು ಪರಿಗಣಿಸುವದೇ ಇಲ್ಲವಲ್ಲಾ?

ಇನ್ನು ಇಂಟಿಗ್ರೇಶನ್! ಇಲ್ಲಿ ಹಲವಾರು ರಾಷ್ಟ್ರೀಯತೆಯ ತುಂಡುಗಳಿವೆ ಏನು? ಇಲ್ಲಿರುವದೆಲ್ಲ ತುಂಡು ತುಂಡು ರಾಷ್ಟ್ರೀಯತೆ ಏನು? ಅವನ್ನೆಲ್ಲಾ ಜೋಡಿಸಿ (ಕತ್ತೆ ಹಂಕಿ?) ಒಂದಾಗಿ ಮಾಡಬೇಕಾದದೆ ಏನು? ಇಲ್ಲಿ ಹಿಂದೂ-ಮುಸ್ಲಿಂ-ಕ್ರಿಸ್ತೀಯ—ಸಿಖ್ಖ್—ಬೌದ್ಧ— ವೀರಶೈವ ವಿಧವಿಧ ವಿವಿಧ ರಾಷ್ಟ್ರೀಯತೆ ಇದೆ ಏನ? ಇಲ್ಲಿ ಕನ್ನಡ—ಮಲೆಯಾಳಿ—ತಮಿಳು—ತೆಲುಗು—ಬಂಗಾಲಿ — ಹಿಂದಿ — ಮರಾಟಿ ಮತ್ತಿನ್ನಷ್ಟು ರೀತಿಯ ರಾಷ್ಟ್ರೀಯತೆಗಳಿವೆ ಏನು? ಇವನ್ನೆಲ್ಲಾ ಜೋಡಿಸಿ ಒಂದಾಗಿಸಬೇಕು! ಅಖಂಡ ಭಾರತವು ಒಂದು ರಾಷ್ಟ್ರವೆಂದು, ಇಲ್ಲಿರುವದು ಒಂದೇ ರಾಷ್ಟ್ರೀಯತೆಯೆಂದು ತಿಳಿದುಕೊಂಡಿರುವವರಿಗೆ ಜೋಡಿಸಲಿಕ್ಕೇನಿದೆ? ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಮುಖಂಡ ಕಾಮ್ರೇಡ್ ಸುಂದರಯ್ಯನವರು ಸಭೆಯಲ್ಲಿ ಭಾರತವು ಒಂದು ಭಿನ್ನ-ಭಿನ್ನ ರಾಷ್ಟ್ರೀಯದ ದೇಶವೆಂದು ಹೇಳಿರುವರು. ಹೌದು. ಕಮ್ಯೂನಿಸ್ಟ್ ವಾದದ ಪ್ರಕಾರ ಒಂದೇ ಭಾಷೆಯನ್ನಾಡುವವರು ಒಂದು ರಾಷ್ಟ್ರೀಯರಾಗುತ್ತಾರೆ. ಕನ್ನಡಿಗರು ಒಂದು ರಾಷ್ಟ್ರೀಯರು; ಬಂಗಾಲಿಗಳು ಭಿನ್ನ ರಾಷ್ಟ್ರೀಯರು, ಮರಾಟಿಗರು ಮತ್ತೊಂದು ರಾಷ್ಟ್ರೀಯರು....ಈ ರೀತಿ. ಇದೊಂದು ವಾದ. ಅವರ ಪಿತೃಭೂಮಿ ರಷ್ಯಾದಲ್ಲೇ ಹಾಗಿರುವದಿಲ್ಲ. ಅಲ್ಲಿ ಅನೇಕಾನೇಕ ಭಾಷೆಗಳನ್ನಾಡುವವರು ಇದ್ದಾರಾದರೂ ಅವರೆಲ್ಲರೂ ರಷ್ಯನರೇ ಇದ್ದಾರೆ. ರಷ್ಯನರೂ ಜೈನೀಯರು ಭಾರತವು ಒಂದು ರಾಷ್ಟ್ರವೆಂದು ಪರಿಗಣಿಸದೆ ಇರುವ ವರೆಗೆ ಇಲ್ಲಿರುವ ಅವಭೇಲಾಗಳು ಭಾರತವು ಭಿನ್ನ-ಭಿನ್ನ ರಾಷ್ಟ್ರೀಯರ ದೇಶವೆಂದೇ ಹೇಳುತ್ತಿರುತ್ತಾರೆ. ಅದನ್ನು ತಡೆಯಲು ಭಾರತದ ಅಧ್ಯಾಪ ಕಾನೂನೂ ಪ್ರಯೋಜನ ಇಲ್ಲವೋ ಏನೋ!

ರಾಷ್ಟ್ರೀಯತಾ ಪ್ರಜ್ಞೆಯು ಅಭಾವ ಅಥವಾ ವಿಶ್ವಾಸ್ತಿಯ ಸಭೆಯಲ್ಲಿದ್ದವರಲ್ಲಿ ಹೆಚ್ಚಿನವರ ಅಸ್ತಿತ್ವಗಾಗಿತ್ತು. ಇಲ್ಲದಿದ್ದಲ್ಲಿ ಅವರು ನವರಾಷ್ಟ್ರ ನಿರ್ಮಾಣದ ಮಾತನ್ನೆತ್ತುತ್ತಿರಲಿಲ್ಲ. ಪ್ರಚಲಿತ ರಾಷ್ಟ್ರೀಯತೆಯ ಮೇಲೆ ನಂಬಿಕೆ ಇಲ್ಲದಿರುವುದರಿಂದ ಅಂತಹ ಮಾತುಗಳು ಬರಲು ಸಾಧ್ಯ. ರಾಷ್ಟ್ರೀಯತೆಯಲ್ಲಾ ಗತ, ಪ್ರಚಲಿತ, ಭಾವೀರಾಷ್ಟ್ರೀಯತೆಯೆಂದಿದೆ ಏನು?

ಅದೊಂದು ಆಲೋಚನಾ ಸಭೆ ಮಾತ್ರ. ಅದಕ್ಕೆ ಅದಿನಿತೂ ಅಧಿಕಾರವಿರುವುದಿಲ್ಲ. ಕೇವಲ ಮಾತಾಡುವ ಸುಯೋಗ ಮಾತ್ರ. ರಾಷ್ಟ್ರೀಯತೆಯೆಂದರೇನೆಂಬುದರ ಸ್ಪಷ್ಟ ಯೋಚನೆ ಇಲ್ಲದಿರುವ ಅಂಧರು ಸೇರಿ ತುಂಡು ರಾಷ್ಟ್ರೀಯತೆಗಳನ್ನು ಜೋಡಿಸುವ ಕುರಿತು ಆಲೋಚಿಸಲು ಒಂದು ಸಭೆ. ಕೆಲವು ಕುರುಡರು ಒಂದು ಆನೆಯ ಭಿನ್ನ ಭಿನ್ನ ಅವಯವಗಳನ್ನು ಮುಟ್ಟಿ ನೋಡಿದ ಮೇಲೆ ಒಂದೆಡೆ ಸಭೆ ಸೇರಿದರು. ಅವರವರು ಸ್ಪರ್ಶಿಸಿದ ಭಾಗದ ವಿವರವನ್ನು ಹೇಳುತ್ತಾ ಅದೇ ಆನೆ ಎಂದರು. ಅದೇ ರೀತಿ ಈ ರಾಷ್ಟ್ರೀಯತಾ ಅಂಧರು ಭಾರತವು ಭಿನ್ನ-ಭಿನ್ನ ರಾಷ್ಟ್ರೀಯರ ತಂಗುದಾಣ, ಭೋಗಭೂಮಿಯೆಂದು ಭೋಗರೆಯುತ್ತಿದ್ದಾರೆ. ಒಂದು ಮನೆಗೆ ಬೆಂಕಿ ತಾಗಿದೆ. (ಮದರಾಸು ಮಹಾನಗರದಲ್ಲಿ ಅದಿಂದು ಸರ್ವಸಾಧಾರಣ ವಿಷಯ). ಆ ಮನೆಯವರೆಲ್ಲರೂ ಸಭೆ ಸೇರಿ ಆ ಮನೆಗೆ, ಬೆಂಕಿಯ ಕುರಿತು ಮಾತುಕತೆಗೆ ಆರಂಭಿಸಿದರು. ಮನೆಗೆ ಹೇಗೆ, ಎಲ್ಲಿ, ಯಾವಾಗ ಬೆಂಕಿ ಹಿಡಿಯಿತೆಂಬುದರ ಕುರಿತು ಚರ್ಚೆ ನಡೆಯಿತು. ಬೆಂಕಿ ಯಾರು, ಯಾವಾಗ, ಯಾಕೆ, ಹೇಗೆ ನೊಂದಿಸಬೇಕೆನ್ನುವ ಸಲಹೆ ಸೂಚಿಸುವ ಕೆಲಸ ನಡೆಯಿತು. ಇಷ್ಟೆಲ್ಲಾ ಆಗುವಾಗ ಮನೆ ಭಸ್ಮೀಭೂತ! ಆಲೋಚನಾ ಸಭೆ ಛಿದ್ದಿಗೆಟ್ಟು, ಹಸಿನೆ, ಮರೆತು ಜೋರಾಗಿ ನಡೆದಿತ್ತು.

ರಾಷ್ಟ್ರೀಯ ತುಂಡುಗಳ ಜೋಡಿಸುವಿಕೆಯ ಆಲೋಚನಾ ಸಭೆ ಅಷ್ಟೇ ಜೋರಾಗಿ ನಡೆಯಿತ್ತು. ಅದಧ್ಯಕ್ಷರಿದ್ದ ಶ್ರೀ ಜಯಪ್ರಕಾಶ ನಾರಾಯಣರು ಇಂದು ಬೇರೆಯಾಗಿರುವದು ಆಲೋಚನಾ ಸಭೆಗಳಲ್ಲ, ರಚನಾತ್ಮಕ ಕಾರ್ಯವೆಂದಿರುವರು. ಹಾಗಿಲ್ಲದಿದ್ದಲ್ಲಿ ಕಳೆದ ಸಲದ ಸಭೆಯಂತೆ ಈ ಸಲದ ಸಭೆಯು ತೀರ್ಮಾನಗಳೂ ಶೀ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಸತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಗೇಹರಾಜ್ಯದಲ್ಲಿ

ಪಾದಕ್ಕಿಂತ ಚಪ್ಪಲಿ ದೊಡ್ಡದು

"ಅಲ್ರಿ, ಇದೆಂಥದೊಂತ..."

"ಯಾವುದೆ?"

"ಕೋಡಿ, ಪ್ರವಾಹ ಪೀಡಿತರಿಗೆಂದು ಸರಕಾರ ಬಿಡುಗಡೆ ಮಾಡಿದ ಆಹಾರ ಧಾನ್ಯವನ್ನು ಸಹಕಾರಿ ಸಂಘಗಳು ಪಡೆದುಕೊಂಡಿಲ್ಲವಂತೆ....'

"ಯಾರು ಹೇಳಿದ್ರು?'

"ಆಹಾರ ಸಚಿವರೇ ಮೊನ್ನೆ ತಮ್ಮ ಕಳವಳ—ಅಸಮಾಧಾನವನ್ನು ವ್ಯಕ್ತಪಡಿಸಿದರಂತೆ..."

"ಏನೂಂತ?'

'ಬೆಂಗಳೂರಿನಲ್ಲಿ ಹದಿನೈದು ನಿಮಿಷದಲ್ಲಿ ಮಂಜೂರು ಮಾಡಿಸಿದ ಆಹಾರ ಧಾನ್ಯವನ್ನು ಹದಿನೈದು ದಿನಗಳಾದರೂ ಕೊಂಡಿಲ್ಲವೆಂದು...'

"ಸರಿಯೇ ಅನ್ನು."

"ಏನು ಸರಿ?'

"ನೋಡು, ಒಂದು ಗಾದೆಯಿದೆ..."

'ಏನದು.'

"ಮತ್ತೆಂಥದು? ದೇವರು ಕೊಟ್ಟರೂ ಪೂಜಾರಿ ಬಿಡಾಂತ..."

'ಹಹ್ಹಾಂ, ಅದೀಗ ಸರಿ."

'ನೋಡು, ಇದಕ್ಕಿಂತ್ಲೂ ಸ್ವಾರಸ್ಯ ಮತ್ತೊಂದಿದೆ...'

"ಏನು?"

"ದಾಸರು ಹಾಡಿದ್ದಾರೆ — ಹರಿಯೇ ನಿನ್ನ ಮೆಚ್ಚಿಸಬಹುದು. ಈ ನರರ ಮೆಚ್ಚಿಸುವುದು ಬಹು ಕಷ್ಟ..."

"ಹೀಗೂ ಅನ್ನಬಹುದಲ್ಲಾ...."

"ಹ್ಹಾಂ..."

"ಮಂತ್ರಿಯೇ, ನೀನು ಮಂಜೂರು ಮಾಡಬಹುದು, ಸಹಕಾರಿ ಸಂಘಗಳನ್ನೊಲಿಸುವುದು ಬಲು ಕಷ್ಟ...."

"ಅಲ್ವೆ, ಸಹಕಾರ ಸಂಘ ಇರುವುದಾದರೂ ಏತಕ್ಕೆ?"

"ಏತಕ್ಕೆ ಅಂದ್ರೆ? ಜನರಿಗೆ ಕಡಿಮೆ ದರದಲ್ಲಿ ಅವರ ಅವಶ್ಯಕತೆಗಳನ್ನು ಪೂರೈಕೆ ಮಾಡುವುದಕ್ಕೆ...."

'ಅದಲ್ಲಾ ಪುಸ್ತಕಗಳಲ್ಲಿ ಮಾತ್ರ."

'ಮತ್ತೆ?"

"ಸಹಕಾರಿ ಸಂಘಗಳು ಕೆಲವೇ ಜನ ಸ್ವಾರ್ಥಿಗಳ ಮುಷ್ಟಿಯೊಳಗಿದ್ದು ಅವರ ಸ್ವತ್ತು ಅವರ ಬಾಲಬಡಕರ ಸ್ವಾರ್ಥ ಸಾಧನೆಯ ಕೇಂದ್ರಗಳಾಗಿ ಬಿಟ್ಟಿವೆ. ಸರಕಾರದಿಂದ ಸರ್ವ ವಿಧದ ಸಹಾಯವನ್ನು ಇವು ಗಿಟ್ಟಿಸಿಕೊಂಡು, ಅದರ ಲಾಭವು ಬೇರಾರಿಗೂ ದೊರೆಯದಂತೆ ನೋಡಿಕೊಳ್ಳುತ್ತವೆ....'

'ಅಲ್ರಿ, ಸಹಕಾರಿ ಸಂಘವೆಂದರೆ, ಜನತೆ ತನಗಾಗಿಯೇ ತನ್ನ ಲಾಭಕ್ಕಾಗಿಯೇ ತಾವೇ ಕಟ್ಟಿಕೊಂಡ ಸಂಘ. ಅದರಿಂದ ಜನತೆಗೆ ಲಾಭವಾಗದೆ ಹೋದರೆ, ಸರಕಾರ ಸಹಕಾರಕ್ಕೆ ಇಷ್ಟು ಹಣಕಾಸು ಸುರಿಯುವುದು ಯಾಕೆ?"

"ಅದರ ರಚನೆ ಅದದ್ದು ಹಾಗೇನೇ. ಉದ್ದೇಶವೂ ಅದೇನೇ. ಆದರೆ, ಕಾರ್ಯ ನೀತಿ ಮಾತ್ರ ಬೇರೇನೆ."

"ಅಂದ್ರೆ?"

"ನೋಡ', ಎಲ್ಲವುಗಳ ಆರಂಭವೂ ಶುಭ ಮುಹೂರ್ತದಲ್ಲೇ ಆರಂಭವಾಗುತ್ತವೆ. ಅದ್ರೇನು ಮಾಡೋಣ? ಶಿವಪೂಜೆಯಲ್ಲೂ ಕೆಲವೊಮ್ಮೆ ಕರಡಿಗಳು ಅಡ್ಡ ಹಾಯುತ್ತವೆ. ಕಾರ್ಯ ಕೆಟ್ಟು ಹೋಗುತ್ತದೆ. ಮತ್ತೆ ಸರ್ವಾಂತರ್ಯಾಮಿಯೆನಿಸಿದ ಲಾಭ ಭಡಕತನ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿತ್ರಾಯಿಗಳಿಂದ ಸಹಕಾರ ಸಂಘಗಳೂ ದೂರವಿರುವುದು ಸಾಧ್ಯವೆ? ಹಾಗಿರುವಾಗ....'

"ಅಲ್ರಿ, ಪ್ರವಾಹ ಪೀಡಿತರಿಗೆಂದು ಸರಕಾರ ಹಂಚಲು ನೀಡಿದ ಅಕ್ಕಿಯದು...'

'ಏನು ಹೇಳ್ತೀಯ? ಸರಕಾರ ಕೊಡಿದ ಅಕ್ಕಿಯನ್ನೇ ನಂಬಿ ಪ್ರವಾಹ ಪೀಡಿತರು ಇದ್ದಾರೇನು? ಒಂದು ವೇಳೆ ಇದ್ದಾರೇನು. ಎಷ್ಟು ದಿನಗಳ ಕಾಲ ಸರಕಾರದ ಅಕ್ಕಿ ಬಂದೀತು?"

"ಅಂದ್ರೆ ಇದೆಲ್ಲಾ ಬೇಡಾಂತ ತಾವೇ ಕೀಳನ್ನುವುದು?"

"ಛೆ, ಛೆ, ಪ್ರಜಾಸತ್ತೆಯಲ್ಲಿ ಎಲ್ಲಾ ಬೇಕು. ಸರಕಾರ ಅಕ್ಕಿ ಕೊಡಬೇಕು; ಜನರಿಗೆ ಅದು ಸಿಗದಿರಬೇಕು...."

"ಮತ್ತೇನು ಲಾಭ?'

"ನೋಡು, ಎಲ್ಲೋ ಒಂದು ಕಾರ್ಯಾನ್ ನೋಡಿದ ನೆನಪು—ಮಂತ್ರಿಯಾದ ಕೆಲಸವನ್ನೂ ಮಾಡಲು ಆರ್ಡರ್ ಮಾಡಬಹುದು, ಆದರೆ ಆ ಆರ್ಡರಿಗೆ ಅಧಿಕಾರಿ ಸಹಿ ಮಾತ್ರದೆ ಅದು ಕಾರ್ಯರೂಪಕ್ಕೆ ಬರುವುದಂಟೆ?"

"ಇಲ್ಲೂ ಹಾಗೇ ಆಯಿತೆಂದು ಅನ್ನುತ್ತೀರಾ?"

'ಇವರನ್ನು ಕೇಳಿದರೆ ಸೂರು, ಕಾರಣ ಮುಂದೆ ಇಡ ತ್ತಾರೆ—ತಾವು ನಿರಪರಾಧಿಗಳು—ಎಲ್ಲಕ್ಕೂ ಕಾಂಗ್ರೆಸ್ ಸರಕಾರವೇ ಹೊಣೆ ಅನ್ನಬಹುದು—'

"ಎಳೆಯಲಾರದ ಎತ್ತು ಮಿಣಿಯ ಮೇಲೆ ಬೀಳುತ್ತದಂತೆ...'

'ಸದ್ಯ ಕತೆಯ ಮೇಲ್ಬೀಳದಿದ್ರೆ ಸಾಕು...."

"ಅಲ್ರಿ, ಸಹಕಾರಿ ಸಂಘಗಳೇ ಹೀಗೆ ಮಾಡಿದ್ರೆ ಉಳಿದ ವ್ಯಾಪಾರಿಗಳು ಏನು ಮಾಡಬೇಕು?"

"ಯಾರ ಹತ್ರ ಕೇಳೋದು? ಬೇಲಿಯೇ ಹೊಲವನ್ನು ನುಂಗುವ ಕಾಲವಿದು. ಸಹಕಾರಿ ಸಂಘಗಳು ಜನತೆಯೊಡನೆ ಅಸಹಕಾರ ಮಾಡಿದರೆ ಆಶ್ಚರ್ಯವಿಲ್ಲ ಬಿಡು..."

"ಯಾವಾಗ್ಲೂ ಹಾಗೇನೇ. ತಲೆಗಿಂತ ಮಂಡಾಸು ದೊಡ್ಡದು, ಪಾದಕ್ಕಿಂತ ಚಪ್ಪಲಿ ದೊಡ್ಡದು..."

"ಅದು ಸರಿ..."

"ಯಾವುದ.?"

"ಹಹ್ಹಾಂ, ಯಾವುದೂ ಇಲ್ಲ...."

"ಹೇಳೋಂದ್ರೆ..."

"ಹೇಳೋ ಕಾಲ ಹೋಯ್ತು. ಮಾಡೋ ಕಾಲ ಬಂದಿದೆ..."

"ಹ್ಹಾಂ...." —ಗೋರಾ.

ತಲ ಕೊರಡಿಯಲ್ಲಿ ಜೀವಾಸನವಾಗಿ ಉಳಿಯಬಲ್ಲವು.

ಈ ರೀತಿ ಶ್ರೀಮತಿ ಇಂದಿರಾ ಗಾಂಧೀಜಿ ಮುವರ ರಾಷ್ಟ್ರೀಯ ಐಕ್ಯತಾ ಸಮ್ಮೇಳನ ಕಾಶ್ಮೀರದಲ್ಲಿ ನಡೆಯಿತು.

ಎಲ್ಲೆಲ್ಲಿ ಏನೇನು?

ಪುಸ್ತಕ ಪ್ರದರ್ಶನದಲ್ಲಿ ಉತ್ತಮ ಮಾರಾಟ

ಮಣಿಪಾಲ, ಜು. ೨೬ — ಇಲ್ಲಿಯ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಿನ್ನೆ ಮುಕ್ತಾಯವಾದ ಅಮೆರಿಕದ ವಿಶ್ವವಿದ್ಯಾನಿಲಯಗಳ ಪಠ್ಯಪುಸ್ತಕಗಳ ಕಡಿಮೆ ಬೆಲೆಯ ಭಾರತೀಯ ಆವೃತ್ತಿಗಳ ಮೂರು ದಿನಗಳ ಪ್ರದರ್ಶನದಲ್ಲಿ ಸುಮಾರು ೧೧,೦೦೦ ರೂ. ಬೆಲೆಯ ವಿವಿಧ ವಿಷಯಗಳ ಪುಸ್ತಕಗಳು ಮಾರಾಟವಾದವು.

ಸುಮಾರು ೫,೦೦೦ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಇತರರು ಪ್ರದರ್ಶನಕ್ಕೆ ಭೇಟಿಕೊಟ್ಟಿದ್ದರು. ಅದರ ಅಂಗವಾಗಿ ಭಾಷಣಗಳನ್ನೂ ಚಲಚ್ಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು.

ಶ್ರೀ ವಿ.ಆರ್. ಭಾಗ್ವತರ ವಿಕ್ರಮ

ಸಿರಸಿ—1968ನೇ ಮಾರ್ಚ 31ಕ್ಕೆ ಮುಗಿದ ಜೀವ.ವಿಮಾ ವಾರ್ಷಿಕ ವ್ಯವಹಾರದ ಸೌತ್‌ಝೋನ್(ಮದ್ರಾಸ)ದ ಅಂಕಿ ಸಂಖ್ಯೆಗಳು—ಇದೀಗ ಲಭ್ಯವಾದಂತೆ ಝೋನದ 8 ಡಿವಿಜನ್ಸದ 95 ಬ್ರಾಂಚಗಳಿಗೂ ಉದ್ದಿಷ್ಟ ವಿಜನ್ಸನ ಸಿರಸಿಯ ಬ್ರಾಂಚನ ಏಜಂಟರಾದ ಶ್ರೀ ವಿ. ಆರ್. ಭಾಗ್ವತರು ಸುಮಾರು 21 ಲಕ್ಷ ಕ್ಕೂ ಹೆಚ್ಚಿಗೆ ವ್ಯವಹಾರದಿಂದ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ರೀತಿ ದಕ್ಷಿಣ ಹಿಂದೂಸ್ಥಾನಕ್ಕೆ ಕಳೆದ 31—3—67 ವಾರ್ಷಿಕಕ್ಕೂ ಇವರೇ ಪ್ರಥಮಸ್ಥಾನ ಪಡೆದವರಾಗಿದ್ದರು. ಭವ್ಯ ಕೇಸರಿ ಸ್ಪರ್ಧೆಯ ವಿಜೇತರಾ ಇವರು ತಮ್ಮ ಕರ್ತವ್ಯನಿಷ್ಠೆಯಿಂದ ಪಾಲಿಸಿದಾರರಿಗೆ ಕೊಡುತ್ತಿರುವ ಸೇವೆಯಿಂದಾಗಿಯೇ 3-4 ವರ್ಷಗಳಿಂದಲೂ L.I.C.ಯವರು ಏರ್ಪಡಿಸಿದ ಸ್ಪರ್ಧೆಗಳಲ್ಲಿ ಜಯಗಳಿಸುತ್ತಾ ಈ ಕ್ಷೇತ್ರದಲ್ಲಿ ಮುಂದುವರಿಯುತ್ತಿದ್ದಾರೆ. ಇದರ ಈ ಸಾಹಸವೇ ಇವರನ್ನು ಉದ್ದಿಷ್ಟ ವಿಭಾಗ ಏಜಂಟರ ಸಂಘಕ್ಕೆ ತನ್ನ ಪ್ರಥಮ ಅಧ್ಯಕ್ಷರನ್ನಾಗಿ ಆಯ್ದುಕೊಳ್ಳುವಂತೆ ಮಾಡಿದೆ ಎನ್ನಬಹುದು. ಜೀವವಿಮಾ ಸೆಂಟ್ರಲ್ ಅಫೀಸಿನಿಂದ ಇದೇ ಇಂದಿನವರೆಗೆ ಅಂಕೆ-ಸಂಖ್ಯೆಗಳು ಇನ್ನು ಪ್ರಕಟವಾಗಬೇಕಿದ್ದು ಅದರಲ್ಲಿ ಇವರ ಸ್ಥಾನ ಎಷ್ಟೆಂದ್ದೆಂತ ನೋಡಬೇಕಿದೆ.

ಶ್ರೀ ವಿರಾ ಮಂದಿರ ಮತ್ತು ಕೇಶವಾಶ್ರಮ ಉದ್ಘಾಟನೆ

ಅಮೇರಿಕೆಯ ಮತ್ತು ಭಾರತೀಯ ಭಕ್ತಜನರು ಪೂಜಿಸಲು ಅನುಕೂಲವಾಗುವಂತೆ ವಾಷಿಂಗ್‌ಟನ್ನಿನದೀಕ್ಷಿತೇಂದ್ರಸ್ವೀಟ್‌ರಸ್ತೆಯಲ್ಲಿರುವ ಸುಂದರ ಭವನದಲ್ಲಿ ಬೆಂಗಳೂರಿನ ಸಾಪ್ರಸಿದ್ಧ ಕೀರ್ತನಕಾರರಾದ ಶ್ರೀ ಸದ್ಗುರು ಕೇಶವದಾಸರು ೭೫ ಆಡಿಯ ಶ್ರೀ ವಿಠಲ ವಿಗ್ರಹವನ್ನು ತಾ. 21-7-68ರಂದು ಪ್ರತಿಷ್ಠಿಸಿ, 'ಕೇಶವಾಶ್ರಮ ಅಂತರರಾಷ್ಟ್ರೀಯ ಕೇಂದ್ರ'ವನ್ನು ಉದ್ಘಾಟಿಸಿದರು. 45,000 ಡಾಲರ್‌ನ (34 ಲಕ್ಷ ರೂ.)ಜೆಲ್ಲಿಯ ಮೂರು ಮಹಡಿಯ ಈ ಕಟ್ಟಡವನ್ನು ಅವರ ಶಿಷ್ಯ ದಂಪತಿಗಳಾದ ವರ್ಜೀನಿಯೊದ ಸಹೋದರಿ ಗೀತಾ (ಜೀನಾ ಬ್ಲಾಕ್‌ವೆಲ್) ಮತ್ತು ಮಾಧವ ಮೆಲರ(ಮೆಲರ ನ್ಯಾಶ್) ಈ ಆಶ್ರಮಕ್ಕಾಗಿ ಕೊಂಡಿದ್ದಾರೆ. ಈ ಆಶ್ರಮವು ಪೂಜಾಮಂದಿರ, ಧ್ಯಾನ ಮಂದಿರ, ಸ್ವಾಧ್ಯಾಯ ಮಂದಿರ ಮತ್ತು ಗುರು ಮಂದಿರವನ್ನೊಡಗೊಂಡು ಸಂಪೂರ್ಣ 'ಏರ್ ಕಂಡಿಷನ್'ನಿಂದ ವ್ಯವಸ್ಥಿತವಾಗಿದೆ. ರಾಯಭಾರಿ ಕಛೇರಿಯ ಅನೇಕ ಕಾರ್ಯಕರ್ತರೂ, ನ್ಯೂಯಾರ್ಕ್ ಮತ್ತು ವಾಷಿಂಗ್ಟನ್‌ನ ಹೊರಭাগದಿಂದ ಅನೇಕ ಅತಿಥಿಗಳೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಮೆರಿಕೆಯ ಭಕ್ತರೆಲ್ಲ ಅಂದು ಸೀರೆಗಳನ್ನು ಧರಿಸಿದ್ದರು.

ಶ್ರೀ ಕೇಶವದಾಸರು ಒಂದು ತಿಂಗಳ ಕಾಲ ಇದ್ದಿದ್ದು, ಪ್ರವಚನ ಕೀರ್ತನೆಗಳಿಂದ ಭಾರತೀಯ ಸಂಸ್ಕೃತಿಯನ್ನು ಸಂರಕ್ಷಿಸುವುದು ಸುಸರು. ಭಾರತೀಯ ಸಾಧುಜನರ ಬೋಧೆಗಳನ್ನು ಜಗತ್ತಿಗೆ ಹರಡಲು ಇದೂ ಪ್ರಮುಖ ಕೇಂದ್ರವಾಗಿ ಸೇವೆಗೈಯುವುದು.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಿಯಾಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಕೆಟ್ಟ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

I.A No. I, O.S. 677/1966.

ಅಪ್ಪು ಹೆಂಗ್ಸು ಸಹಾ— ಅರ್ಜಿದಾರರು.

ಅವ್ವತಾವತಿ ಸಹಾ— ಎದ್ರಿರು.

೩. ಶಿಶುಪಾಲ ಶೆಟ್ಟಿ, ೩.ನೇಮಿರಾಜ ಶೆಟ್ಟಿ— ಶ್ರೀದೇವಿ ಮಕ್ಕಳು.

ಕಾರ್ಕಳ ತಾಲ್ಲೂಕಿನ ನಲ್ಲೂರ ಗ್ರಾಮದ ಹೆಂಡಮೇಗಿನ ಮನೆಯಲ್ಲಿರುವವರು.

೩, ೩, ನೇ ಎದ್ರಿರಾದ ನಿಮಗೆ ಈ ಮೂಲಕ ತಿಳಿಸುವುದೇನಂದ್ರೆ—

ಸದ್ರಿ ದಾವೆಯಲ್ಲಿ ಅದ ಪ್ರಲಿಮಿನರಿ ಡಿಕ್ರಿಗೆ ಅನುಸರಿಸಿ ಹಿಶೆ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ಮೊಕ್ಕಲ ಮಾಡಿದ ಸದ್ರಿ ಅರ್ಜಿಯು ತಾರೀಖು 16-9-1968ಕ್ಕೆ ನಿಮಗೆ ಅಕ್ಕೈರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ದ ಸದ್ರಿ ದಿನ್ಸ ಬೆಳಿಗ್ಗೆ 10 ಘಂಟೆಗ ಮೇಲ್ಕಂಡ ಕೋರ್ಟು ಮುಂದೆ ನೀವು ಸಾಕ್ಷ್ಯಾಗಿ ಆಕ್ಷೇಪಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ಅರ್ಜಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K.S. Kamath
Advocate for Petitioners.

ಕಾರ್ಕಳ, ತಾ. 1-8-68.

ದ.ಕ. ಜಿಲ್ಲಾ ಕೃಷಿಕರ ಸಂಘ

ಕಾರ್ಕಳ

ಶ್ರೀ ಯಮ್. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ತಾ. 28-7-1968ರಲ್ಲು ಜರಗಿದ ಸಭೆಯ ವರ್ಣನೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕೆಲವು ದಿನಸ್ಸಗಳ ವರೆಗೆ ಎಡೆಬಿಡದೆ ಧಾರಾಕಾರವಾಗಿ ಮಳೆ ಬಂದಿರುತ್ತದೆ. ಇದರಿಂದಾಗಿ ನದಿ ಹೊಳೆ ಕೆರೆ ಬಾವಿಗಳಲ್ಲಿ ಅಪೂರ್ವವಾದ ನೆರೆಯುಂಟಾಗಿರುತ್ತದೆ. ನೆರೆಯು ಇನ್ನೂ ಸಂಪೂರ್ಣವಾಗಿ ಇಳಿಯದಿದ್ದುದರಿಂದ ವ್ಯಾಪಕವಾಗಿ ಸಂಭವಿಸಿದ ಕಷ್ಟನಷ್ಟಗಳ ಸಂಪೂರ್ಣ ವಿವರ ಸಿಕ್ಕಿರುವುದಿಲ್ಲ. ಇಷ್ಟರ ವರೆಗೆ ತಿಳಿದುಬಂದಿರುವ ವರದಿ ಪ್ರಕಾರ 10 ಜನರು ನೆರೆಯಿಂದ ಸತ್ತಿರುವರು, ಸುಮಾರು 100ಕ್ಕೂ ಮಿಕ್ಕಿ ಜಾನುವಾರುಗಳು ನೀರುಪಾಲಾಗಿರುವುವು, 10 ಸಾವಿರಕ್ಕೂ ಮಿಕ್ಕಿ ಮನೆಗಳು ನೆರೆಗೆ ತುತ್ತಾಗಿ ಅವುಗಳಲ್ಲಿ ಸುಮಾರು 450ಕ್ಕೂ ಮಿಕ್ಕಿ ಮನೆಗಳು ನೆಲಸಮವಾಗಿರುತ್ತವೆ. 9,600 ಎಕ್ರೆಗೂ ಮಿಕ್ಕಿ ವಿಸ್ತೀರ್ಣದಲ್ಲಿದ್ದ ಬತ್ತದ ಬೆಳೆಯು ನೆರೆನೀರಿನಲ್ಲಿ ಮುಳುಗಿದ್ದು ಇಮ್ಮಿಪಕ್ಷ 3,500 ಎಕ್ರೆ ಪ್ರದೇಶದಲ್ಲಿದ್ದ ಬತ್ತದ ಬೆಳೆಯು ಸಂಪೂರ್ಣವಾಗಿ ನಾಶವಾಗಿದೆ. ಅನೇಕ ಕಡೆಗಳಲ್ಲಿ ಮಾರ್ಗ ಕಡಿದುಹೋಗಿದ್ದುದರಿಂದ ಸಾರಿಗೆ ಸಂಪರ್ಕಕ್ಕೆ ತಡೆಯುಂಟಾಗಿದೆ. ಅನೇಕರು ತಮ್ಮ ಮನೆಯ ಸಾಮಾನುಗಳನ್ನೂ ಕೃಷಿಯ ಉಪಕರಣಗಳನ್ನೂ ಕಳೆದುಕೊಂಡಿರುತ್ತಾರೆ.

ನೆರೆಯಿಂದ ಉಂಟಾದ ನಷ್ಟ ಕಷ್ಟದ ಪರಿಹಾರವು ಅಗತ್ಯವಾಗಿರುತ್ತದೆ. ಜಾನುವಾರುಗಳಕೊಂಡ ಕುಟುಂಬಗಳಿಗೆ ಶೀಘ್ರ ಧನಸಹಾಯ ಅಗತ್ಯವಿರುತ್ತದೆ. ಮನೆಮಾರು ಕಳಕೊಂಡವರಿಗೆ ಮನೆಕಟ್ಟಿಸಿಕೊಳ್ಳುವರೆ ಸ್ಥಳವನ್ನೂ ಸಾಮಾನುಗಳನ್ನೂ ಹಣವನ್ನೂ ಶೀಘ್ರವಾಗಿ ಒದಗಿಸಬೇಕಾಗಿದೆ. ಸಾಂಕ್ರಾಮಿಕರಿಗೆ ಆಹಾರ, ಔಷಧಾದ್ಯ, ಬಟ್ಟೆಬರೆಗಳನ್ನು ಪೂರೈಸಬೇಕಾಗಿದೆ ಭಾವಿಯೊಳಗಾದ ಕೃಷಿಕರಿಗೆ ಸಹಾಯಧನವನ್ನೂ, ಪುಳ್ಳಿಟೆ ಬೀಜವನ್ನೂ, ಬಡ್ಡಿರಹಿತ ಸಾಲವನ್ನೂ ನೀಡುವುದಲ್ಲದೆ ಲೆವಿ ಕೊಡುವಿಕೆಯನ್ನು ವಿನಾಯಿತಿ ನೀಡಬೇಕಾಗಿದೆ. ನೆರೆಬಾಧಿತ ಸ್ಥಳಗಳ ರಿಪೇರಿ ಅಲ್ಲದೆ ನೆರೆತಡೆಯುವ ಮತ್ತು ಪ್ರಾಣಾವರಿಯ ಕಾಮಗಾರಿಗಳನ್ನು ಕೈಕೊಳ್ಳಬೇಕಾಗಿದೆ.

ನೆರೆಪರಿಹಾರವನ್ನು ಕೂಡಲೇ ವ್ಯವಸ್ಥಿತ ರೀತಿಯಲ್ಲಿ ಕೈಕೊಳ್ಳಬೇಕಾಗಿ ಕೇಂದ್ರ ಸರ್ಕಾರವನ್ನೂ ರಾಜ್ಯ ಸರ್ಕಾರವನ್ನೂ ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘವು ವಿನಂತಿಸಿಕೊಳ್ಳುತ್ತದೆ. ಅಲ್ಲದೆ ಸಾರ್ವಜನಿಕರು, ಸಂಘ ಸಂಸ್ಥೆಗಳು ಉದಾರ ಧನ ಬಟ್ಟೆಬರೆಯ ಸಹಾಯ ಕೊಟ್ಟು ನೆರೆ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘವು ಪರಿಹಾರ ಕಾರ್ಯಕ್ಕೆ ರೂ. 500/- ಧನಸಹಾಯವನ್ನು ಜಿಲ್ಲಾ ಡಿಪುಟಿ ಕಮಿಶನರಿಗೆ ಕೊಟ್ಟು ನೆರೆ ಪರಿಹಾರ ಕಾರ್ಯದಲ್ಲಿ ಭಾಗಿಯಾಗಿರುತ್ತದೆ.

ಶ್ರೀ ಪಾಂಡ್ಯರಾಜ ಬಲ್ಲಾಳರ ನಿಧನ

ಮೂಡಬಿದ್ರೆಯ ಇಥ್ಮಮನೆತನದ ಜನಪ್ರಿಯ ಮುಂದಾಳು ಹಾಗೂ ಬಲ್ಲಾಳ ಮೋಟಾರ್ ಸರ್ವಿಸ್‌ನವ್ವಾಲಕರಾದ ಶ್ರೀ ಪಾಂಡ್ಯರಾಜ ಬಲ್ಲಾಳರು ತಮ್ಮ 68ನೇ ವಯಸ್ಸಿನಲ್ಲಿ ತಾರೀಕು 28.7.68ನೇ ರಾತ್ರಿ 10.30ಕ್ಕೆ ಮಂಗಳೂರಿನಲ್ಲಿ ನಿಧನರಾದರು.

ಮೃತರು ಬಾರಾಡಿ ಬೀಡಿನ ಮನೆತನದವರಾಗಿದ್ದು ಕಾರ್ಕಳ ಗೋಮಟೇಶ್ವರಾಭಿಷೇಕ ಸಮಿತಿಯಲ್ಲಿ ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸಿದ್ದರು. ವ್ಯವಹಾರಶೀಲರೂ ಕರ್ತವ್ಯನಿಷ್ಠರೂ ಧಾರ್ಮಿಕರೂ ಆಗಿದ್ದರು

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ಸೈಟ್ ಹೈಸ್ಕೂಲಿನ ಸಂಚಾಲಕರಾದ ಮುಂಬಾಯಿಯ ಬಂಟರ ಯಾನೆ ನಾಡವರ ಸಂಘದವರು ಇಲ್ಲಿಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಯೂ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿವೇತನ ರೂಪದಿಂದ ಸಾಲ ಕೊಡುವುದರಿಂದ ಧನಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಅಗೋಸ್ತು 20ರೊಳಗೆ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಬೇಕಾಗಿ ಅಪೇಕ್ಷಿಸಲಾಗಿದೆ.

Bunt Alias Nadava Sanghe,
A-4/34 Navyug Nivas,
167 Lamington Road,
Opp Minerva Cinema
Bombay—7

ಸಿಂಡಿಕೇಟ್ ಬೇಂಕಿನ ಏಣಗುಡ್ಡೆ ಶಾಖೆಯ ಉದ್ಘಾಟನೆ

ಸಿಂಡಿಕೇಟ್ ಬೇಂಕಿನ ಚೀಫ್ ಆಫೀಸರ್ ಶ್ರೀ ಕೆ.ಕೆ. ಪೈಯವರ ಅಧ್ಯಕ್ಷತೆಯಲ್ಲಿ ಏಣಗುಡ್ಡೆ ಪಂಚಾಯತಿನಲ್ಲಿ ಬ್ಯಾಂಕಿನ 237ನೇ ಶಾಖೆಯ ಉದ್ಘಾಟನಾ ಸಮಾರಂಭವು ಕಳೆದ ತಾ. 27ರಂದು ಜರಗಿತು.

ಆರಂಭದಲ್ಲಿ ಡಾ| ಕೆ.ಜಿ. ಕಿಣಿಯವರು ಸ್ವಾಗತಿಸಿದರು. ಶ್ರೀ ಶಂಕರಲಾಲ ವಾಸುದೇವ ಕಣಿಯವರು ಅಧ್ಯಕ್ಷರಿಗೆ ಅಭಿನಂದನಾ ಪತ್ರವನ್ನು ಅರ್ಪಿಸಿದರು. ಅನಂತರ ಶ್ರೀಗಳವರ ಸಿ. ಗೋಪಾಲಕೃಷ್ಣ ನಾಯಕ್, ಡಾ| ಕೆ. ಆರ್. ಕೊರಡ್ಕಲ್, ಗೋಪಾಲ ಶೆಟ್ಟಿ ಮತ್ತು ಕೆ. ವಾಸುದೇವ ಕಾಮತರು ಬ್ಯಾಂಕಿಗೆ ಶುಭಕೋರಿ ಮಾತನಾಡಿದರು. ತಮ್ಮ ಬ್ಯಾಂಕನ್ನು ಏಣಗುಡ್ಡೆಗೆ ಸ್ವಾಗತಿಸಿದ್ದಕ್ಕಾಗಿ ಅಧ್ಯಕ್ಷರು ಊರವರನ್ನು ಅಭಿನಂದಿಸಿದರು. ಶಾಖೆಯ ಮೆನೇಜರ್ ಶ್ರೀ ಸುಬ್ರಹ್ಮಣ್ಯ ಆಚಾರ್ಯರು ಧನ್ಯವಾದ ಸಮರ್ಪಿಸಿದರು.

ಉಡುಪಿ ನಗರಸಭಾ ಚುನಾವಣೆ

ಉಡುಪಿ ನಗರಸಭೆಗೆ ಚುನಾವಣೆಯು ಸೆಪ್ಟೆಂಬರ್ ತಿಂಗಳಲ್ಲಿ ನಡೆಯಲಿದ್ದು ಅದರ ವಿವರಗಳು ಈ ಕೆಳಗಿನಂತಿದೆ ಎಂದು ತಿಳಿದು ಬರುತ್ತದೆ.

ನಾಮಪತ್ರ ಸ್ವೀಕಾರ. 28-8-68, ಪರಿಶೀಲನೆ: 26-8-68, ನಾಮಪತ್ರ ಹಿಂತೆಗೆಯುವ ಕೊನೆಯ ದಿನ: 29-8-68, ಮತದಾನ, 22-9-68, ಮತಗಣನೆ: 23-9-68.

ಶ್ರೀ ರಮೇಶ ಪೈಗಳ ವಿದೇಶ ಪ್ರವಾಸ

ಈಸ್ಟ್ ಆಫ್ರಿಕಾ ಸಂದರ್ಶಿಸಲು ಕ್ವೈರ್ ದೋರ್ಸ್‌ನಿಂದ ವ್ಯವಸ್ಥಾಪಿಸಲ್ಪಟ್ಟ ರಬ್ಬರ್ ಆವೃತ್ತ ತಂಡಿನ ನಾಲು ವಿಶ್ವಯ ಪುಸ್ತಕ ಪರಿಜ್ಞಾನ ಮಂಡಳಿಯ ಒಬ್ಬ ಸದಸ್ಯರಾಗಿ ಶ್ರೀ ಟಿ. ರಮೇಶ ಪೈಯವರು ಇದೇ ತಾ. 14ರಂದು ಬೊಂಬಾಯಿಂದ ಎಡ್ಡಿಸ್ ಅಬಾಬ ಮಾರ್ಗವಾಗಿ ಪಡ್ನಾಗೆ ತೆರಳಲಿದೆಯವರು. ಅವರು ಸೈರೋಬಿ, ಡರ್-ರ-ಸಲಾಮ್, ಮೊಂಬಾಸಾ, ಮೊಂಬಾಸಿ, ಎಂಟೆಬ್ಬೆ ಮತ್ತು ಕಾರ್ಟೋಮ್ ಮೊದಲಾದ ಕಡೆಗೆ ಸಂಚರಿಸಲಿರುವರು. ಅವರು ಮೂರು ವಾರಗಳ ಪ್ರವಾಸ ಮುಗಿಸಿ ಸೆಪ್ಟೆಂಬರ್ 12ರಂದು ಮುಂಬಯಿಗೆ ಹಿಂತಿರುಗುವರು.

ಉಜಿರೆ ಆಸ್ಪತ್ರೆಯ ನೂತನ ಕಟ್ಟಡದ ಪ್ರವೇಶೋತ್ಸವ

ಕಳೆದ ತಾ 31ರಂದು ಉಜ್ಜಿಯ ಎಲ್. ಎಫ್. ಆಸ್ಪತ್ರೆಯ ನೂತನ ಕಟ್ಟಡದ ಪ್ರವೇಶೋತ್ಸವವು ಡಾ| ಬಿ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಟ್ಟಡದ ಉದ್ಘಾಟನೆಯನ್ನು ತಹಶೀಲ್ದಾರ್ ಶ್ರೀ ಬಿ ಎಂ. ಡಿ ಸೋಜಾರವರು ನೆರವೇರಿಸಿದರು.

ಆರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಶ್ರೀ ಕೆ. ವಿ. ರಾಯರು ಅನುಕೂಲವಾದ ಆರೋಗ್ಯ ಸಿಗದಿದ್ದರೆ ದೇಶ ಎಂದಿಗೂ ಸಾಧಾರಣ ಮಲೆನಾಡಿನ ಜನತೆಗೆ ಆನಾರೋಗ್ಯ ಕಟ್ಟಿಟ್ಟದ್ದು. ಆದರಿಂದ ಇಲ್ಲಿ ಹೆಚ್ಚಿನ ಜನತೆಗೆ ಬಿಡುಗಡೆ ದೊರೆಯುವಂತಾಗಲಿ ಎಂದರು ಅನಂತರ ಬೆಳ್ತಂಗಡಿ ತಾ. ಡೇಸ್ಟ್ರಿಕ್ಟ್ ಎಕ್ಸಿಕ್ಯೂಟಿವ್ ಆಫೀಸರರಾದ ಶ್ರೀ ಮಾರಿ ಶಶಿಕಲಾರವರು ಮಾತಾಡುತ್ತಾ "ಜನತೆ ಸರ್ಕಾರದಿಂದ ಪಡೆಯುವ ಸವಲತ್ತುಗಳನ್ನು ತಮ್ಮ ಮಾಡಿಮೆ ಕೆಲಸಗಳಿಗೆಂದು ಇನ್ನಷ್ಟು ಬೆಳೆಸಿ ಉಪಯೋಗ ಹೊಂದಬೇಕು." ಎಂದರು. ಆ ಬಳಿಕ ಮಾತನಾಡಿದ ಮೆಡಿಕಲ್ ಆಫೀಸರ್ ಡಾ| ಕೆ. ಗಂಗಾಧರ ಶೆಟ್ಟರು ವೈದ್ಯಕೀಯ ಸಿಬಂದಿಗಳ ಸಮಸ್ಯೆಗಳನ್ನು ವಿವರಿಸಿ ಸಾರ್ವಜನಿಕರು ನಮ್ಮೊಂದಿಗೆ ಸಹಕರಿಸಿ, ನಮ್ಮ ಸೇವೆಯನ್ನು ಪಡೆಯುವುದು ಅನಿವಾರ್ಯವೆಂದರು.

ಅಧ್ಯಕ್ಷರು ಮಾತನಾಡುತ್ತಾ ಆಸ್ಪತ್ರೆಗಳು ಹೆಚ್ಚಾಗುವ ಬದಲು ಯೋಗ್ಯ ಶಿಬಂದಿ, ಔಷಧ, ಸಾಧನ ಸಾಮಗ್ರಿ ಹೆಚ್ಚಾದರೆ ಜನತೆಗೂ, ದೇಶಕ್ಕೂ ಹಿತವೆಂದರು.

ಕಟ್ಟಡ ನಿರ್ಮಾಣ ಕಾರ್ಯಕ್ಕೆ ಮಾಡಿದ ಧನಸಹಾಯ ವಿವರವನ್ನು ಕಾರ್ಯದರ್ಶಿ ಶ್ರೀ ಮೋಹನ ರೈಯವರು ಓದಿಸಿದರು.

ಯಕ್ಷಗಾನ ಕೂಟ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ, ಶ್ರೀ ಕೇರಿಕಾಡ್ಲ ಮಾಸ್ಟರ್ ವಿಷ್ಣುಭಟ್ ವಿರಚಿತ 'ಸ್ವಯಂಪ್ರಭಾ ಪರಿಣಯ' ಎಂಬ ಕಥಾಭಾಗದ ಯಕ್ಷಗಾನ ಕೂಟವು ಕಳೆದ ತಾ 27-7-68ರಂದು ಜರಗಿಸಲ್ಪಟ್ಟಿತು. ಶ್ರೀ ಬೆಳ್ಳಿಪ್ಪಾಡಿ ಅಣ್ಣಯ್ಯ ಗೌಡರ ವ್ಯವಸ್ಥಾಪಕತ್ವದಲ್ಲಿ ನಡೆದ ಈ ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಯಸ್.ಯನ್. ನಾಯಕರು ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದವಿತ್ತರು.

COMMONWEALTH AWARD OF HONOUR FOR SHRI B. M. CARIAPPA, SECRETARY GENERAL, TUBERCULOSIS ASSOCIATION OF INDIA

The Council of the Chest and and Heart Association, London, has decided to present to Shri B M Cariappa Sec etary- General of the Tuberculosis Association of India, New Delhi the "Commonwealth Award of Honour" in recognition of his outstanding efforts in the anti-tuberculosis campaign in India and to promote the activities of the Eastern Regional Committee of the International Union Against Tuberculosis Presentation of this Award will be made at the Kuala Lumpur meeting of the International Union Against Tuberculosis in November, 1968 This presentation represents the closer link between the National Association of India and the United Kingdom This award of honour is a great credit to the Tuberculosis' Association of India and its Secretary-General, Shri B. M. Cariappa

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ
ದಯವಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು, ಪ್ರಕಾಶಕರು,
ಪಾಬುಕೋಟೆ, ಉಡುಪಿ, ದ. ಕನ್ನಡ.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 48ನೆಯ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯವಾಡಿ ಅದಷ್ಟು ತ್ವರ್ಯ ಮನಿಯಾರ್ಡರ್‌ದ್ವಾರಾ, ಯೂ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿ ಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ

ಮೆನೇಜರ್,
ನವಯುಗ, ಉಡುಪಿ

ವಿವೇಚನೆ

ಹಣ ಕೈಸೇರಿದರೆ?

ಬರೆದವರು

ಶ್ರೀ ಬಿ. ನರಸಿಂಗರಾವ್.

ಯಾವ ವಸ್ತುವಿಗಾದರೂ ಎರಡು ಉಪಯೋಗವಿದೆ—ಸದುಪಯೋಗ, ದುರುಪಯೋಗ. ಕಾರಣ? ಮಾನವ ಸ್ವಭಾವ. ಇದಕ್ಕೆ ಉತ್ತಮ ಉದಾಹರಣೆ ಹಣ. ಹಣವನ್ನು ದೇವತಾಕಾರ್ಯಗಳಿಗೋ, ಜನಸೇವೆಗೋ ಉಪಯೋಗಿಸಬಹುದು; ತದ್ವಿರುದ್ಧ ದುಂದುಗಾರಿಕೆ, ಅನಾಚಾರಕ್ಕೂ ಉಪಯೋಗಿಸಬಹುದು.

'ಹಣ ಕಂಡರೆ ಹೆಣ ಬಾಯಿ ಬಿಡುತ್ತೆ' ಅನ್ನುವುದು ಕೇಳಿರಬೇಕು. ಹಣವಿದ್ದರೆ ಇಂದಿನ ಆಧುನಿಕ ಯುಗದಲ್ಲಿ ಸತ್ತವನನ್ನೂ ಬದುಕಿಸಬಹುದು ಎನ್ನುವಷ್ಟರ ಮಟ್ಟಿಗೆ ಆಗಿದೆ ಇಂದಿನ ಹಣದ ಪ್ರಾಬಲ್ಯ.

ಹಣದ ಹೆಸರಿನಲ್ಲಿ ಇಂದು ಪಡೆಯುವ ಭ್ರಷ್ಟಾಚಾರವೇನು? ಮಂತ್ರಿಮಹಾಶಯರಿಂದ ಹಿಡಿದು ಸರಕಾರೀ ಆಫೀಸಿನ ಪೇದೆಯ ವರೆಗೂ ಹಣದ ಲೋಭಕ್ಕೂ ಕಾಪಟ್ಯ ಗೈಯುವ ಅನಾಚಾರಗಳೇನು? ತನ್ನಲ್ಲಿ ಹಣವಿದ್ದರೆ ಮಾತ್ರ ಇಂದು ಸರಕಾರೀ ಆಫೀಸಿನಿಂದ ಯಾವತ್ತೂ ಕಾರ್ಯವು ನೆರವೇರೀತು. ಬೆಣ್ಣೆ ಬಿಸಿಯೂದಕಷ್ಟೆ ಕರಗುತ್ತೆ? ಕೈ ಬಿಸಿಯೂದರೆ ಮಾತ್ರ ಕಂಪು ಪಟ್ಟೆಯು ಸಡಿಲಾಗಿ ದಾಖಲೆ ಪತ್ರಗಳು ಸಂಚಾರಕ್ಕೆ ಹೊರಡುತ್ತವೆ. ಲಂಚಾವತಾರವು ಇಂದು ಸರ್ವ ವ್ಯಾಪಿ.

"ಎಲ್ಲರೂ ಮೂಡ ವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಈ ಎರಡನ್ನೂ ಸಾಧಿಸಲು ಮಾರ್ಗ ಮಾತ್ರ ಅನ್ಯಾಯದ್ದೇ. ಸ್ವಾರ್ಥಕ್ಕಾಗಿ. ಇಂದು ಎಲ್ಲರ ದೃಷ್ಟಿಕೆ ತನ್ನ ಬೊಕ್ಕಸಕ್ಕೆ ಹಣ ಕೂಡಿ ಹಾಕಿದರಾಯಿತ —ಹೇಗೆ ಎಂಬ ಪ್ರಶ್ನೆಯಿಲ್ಲ.

ಹಣಕ್ಕೋಸ್ಕರ ಮಾನ—ಮರ್ಯಾದೆ ಘನ—ಗೌರವ ಕಳೆಕೊಳ್ಳುವುದು ಇದೊಂದು ಪ್ರಶ್ನೆಯೇ ಇಲ್ಲ. ಹಣಕ್ಕೋಸ್ಕರ ದೇಹದ ಮಾರಾಟ ಇಂದು ಸರ್ವ ಸಾಮಾನ್ಯ. ಸಟ್ಟಾ, ಜೂಜು, ಎಂವಿಗಿಂತಲೂ ಇಂದು ಹೆಚ್ಚಾಗಿವೆ. ಜನರಿಗೆ ಹಣ ಕೂಡಿಹಾಕಬೇಕು— ಬೆವರಿಳಿಸಿಯಲ್ಲ, ಸುಲಭದಲ್ಲಿ—ಮೋಸ, ದುರ್ಮಾರ್ಗದಿಂದ. ಲಾಟ್ರಿಗಳಿಗಾಗಿ ಇಂದು ಜನ ಸುರಿಯುವ ಹಣವೆಷ್ಟು!

ಹಣದಿಂದ ಹಾಳಾದ ನನ್ನೋರ್ವ ಮಿತ್ರನ ಕತೆ ಕೇಳಿ- ಜೀವನದಲ್ಲಿ ಕಾಲಿಡುವಾಗ ಅತ ಅತಿ ಬಡವ. ಏನೋ ವೆಚ್ಚ ಮಾಡಿ ಕಾರಕೂನನಾಗಿದ್ದ. ಮಾಸಿಕ ವೇತನ ಮೂವತ್ತು ರೂಪಾಯಿ. ಚಿಕ್ಕ ಸಂಸಾರವೂ ಇತ್ತು. ಲಾಟ್ರಿಯ ಟಿಕೇಟೊಂದನ್ನು ಪಡೆದ. ಅದೃಷ್ಟ ವಶಾತ್ (ದುರದೃಷ್ಟವಶಾತ್?) ಅತನಿಗೆ ಪ್ರಥಮ ಬಹುಮಾನ—ಅರ್ಧ ಲಕ್ಷ ರೂಪಾಯಿ—ಬಂತು. ಮತ್ತೆ ಕೇಳಬೇಕೆ? ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲೆ ಕೊಡೆ ಹಿಡಿಸುವನಂತೆ. ಅಂತಾಯಿತು ಈತನ ಸ್ಥಿತಿ. ದುಂದುಗಾರಿಕೆಗೆ ಪ್ರಾರಂಭವಾಯ್ತು. ಕುಡಿತ, ಜೂಜು, ಅನಾಚಾರಕ್ಕೆ ಕಾಲಿಟ್ಟದ್ದೂ ಆಯಿತು. ತನ್ನ ಗರಿಯ ದೆಯೇ ಅತ ಹಾಳಾದ. ನಾನೂ ಅತನ ಮೈತ್ರಿ ಬಿಟ್ಟೆ. ನನಗೂ ಅತನಿಗೆ ಉಪದೇಶ ಫೀಡಿ ರೋಸಿಹೋಯಿತು. ಅತ ತನ್ನ ತಪ್ಪು ದಾರಿಯಲ್ಲೆ ಕಣ್ಣಾಚ್ಚಿ ನಡೆದ. ನನಗೂ ಗೊತ್ತು. ಒಂದಾನೊಂದು ದಿನ ಅತ ಎಡವಿ ಬಿದ್ದಾನೆಂದು. ಕೊನೆಗೂ ಹಾಗೆ ಆಯಿತೆನ್ನಿ. ಹಣವನ್ನು ಹೆಚ್ಚು ಗೈದೂ ಗೈದೂ ಬೊಕ್ಕಸ ಖರಿದಾಯಿತು. ದುಂದುಗಾರಿಕೆಗೆ ಪೂರ್ಣವಿರಾಮ ಬೀಳಲೇಬೇಕಾಯಿತು. ಚೇನು ನೊಣಗಳಂತೆ ಮುತ್ತಿದ "ಗೆಳೆಯರ ಬಳಗ" ಕರಗಿತ್ತು. ಕಾರೂ—ಅತನಲ್ಲಿ 'ಜೇನಿ'ರಲಿಲ್ಲ! ದುರದೃಷ್ಟವೆಂದರೆ ಅತ ತನ್ನ ಉನ್ನೋಗಕ್ಕೇ ರಾಜಿಯಿತ್ತಿದ್ದ. ಕೊಟೆಗೆ ದಾರಿಗಾಣದೆ ಅದೊಂದು ದಿನ ಅತ್ಮಹತ್ಯೆ ಗೈದ. ಹೀಗಿದೆ ಕತೆ! ಹಣವು ಅತನನ್ನು ಹಾಳುಗೈದಿತು ಅನ್ನುವಿರಾ ಅದು ತಪ್ಪು. ಹಣದ ಉಪಯೋಗವನು ಸರಿಯಾಗಿ ಗೈಯಲಾರದೇ ಅತ ಈ ದುರ್ಗತಿಯನ್ನೈದಿದ.

ಬುದ್ಧನ ಉದಾಹರಣೆ ತೆಗೆಯಿರಿ. ಅತ ಹುಟ್ಟಿದ್ದು ರಾಜಮನೆತನದಲ್ಲಿ. ಆದರೆ ಅತ ಪಕಲವನ್ನು ತ್ಯಜಿಸಿ ಸನ್ಯಾಸಿಯಾದ. ಅತನ ಪಾಲಿಗೆ ಹಣವೇ ಸರ್ವಸ್ವವಾಗಿರಲಿಲ್ಲ. ಹಣವನ್ನು ಅತ ಕಾಣುವ ದೃಷ್ಟಿಯಲ್ಲಿ ಭೇದವಿತ್ತು.

ಹಣವು ತ್ಯಾಜ್ಯವಲ್ಲ. ಅದನ್ನು ವೃಥಾ ಕಳೆದುಕೊಳ್ಳಲಾಗದು. ಅದನ್ನು ಸದುಪಯೋಗಿಸಬೇಕು. ಬೆವರಿಳಿಸಿ ದುಡಿತ ಹಣವೇ ನೈಜ ಸಂಪತ್ತು, ಅದಾಯ ಇಲ್ಲವಾದರೆ ಅದು ಕಪ್ಪು ಹಣ. ಇದು ದುಂದುಗಾರಿಕೆಗೆ ಮೂಲ. ಬೆವರಿಳಿಸಿ ದುಡಿತ ಹಣವನ್ನು ವೃಥಾ ಹಾಳುಗೆಡುಹಲು ಯಾರೂ ಸಿದ್ಧರಾಗಲಾರ.

ನಿಮ್ಮಲ್ಲಿ ಆವಶ್ಯಕತೆಗಿಂತ ಅಧಿಕ ಹಣವಿದೆ ಅರ್ಥಾತ್ ಫೀವು ಬೆವರಿಳಿಸಿ ಸಂಪಾದಿಸಿದ್ದೀರಿ ಆದರೆ ಅದನ್ನು ಬಾಳಿಗಾಗಿ ಉಳಿಸಿರಿ. ನಿಮಗೆ ಸರಿಯೋರಂದರೆ ದೀನ—ದಲಿತರ ಉದ್ಧಾರಕ್ಕೆ ಉಪಯೋಗಿಸಿ. ವೃಥಾ ದಾನಮಾಡಬೇಡಿ. ಅಂಗ ವಿಕಲರ ಉದ್ಧಾರಕ್ಕೆ ಆಸ್ಪತ್ರೆ ತೆರೆಯಲು ಸಹಾಯ ಮಾಡಿರಿ. ಧಾರ್ಮಿಕ ಕಾರ್ಯಕ್ಕೆ ವಿನಿಯೋಗಿಸಿ. ಆಗಲೇ ನಿಮಗೂ ಒಂದು ವಿಧದ ತೃಪ್ತಿ. ಮಾತ್ರವಲ್ಲ ನಿಮ್ಮ ಸಹಾಯಕ್ಕೆ ಪಾತ್ರರಾದವರಿಗೂ ಸಂತೃಪ್ತಿ, ನಿಮ್ಮ ಖುಗ್ಗೆ ಗೌರವಾದರ.

ಸ್ವೀಕರಿಸುವುದಕ್ಕಿಂತಲೂ ಕೊಡುವುದರಲ್ಲಿ ಆನಂದವಿದೆ. ಇನ್ನೋರ್ವ ಮಿತ್ರ ಫಿದ್ದಾನೆ. ಸ್ಟೂಡಿಯೋದಲ್ಲಿ ಅತನಿಗೆ ಕೆಲಸ. ಬಹಳ ಬಡವ ಏನೋ ಡ್ರಾಯಿಂಗ್ ಪೀಸ್ಲೆಗೆ ಕುಳಿತುಕೊಳ್ಳಲು ಆಸಕ್ತಿ. ಆದರೆ ಬೇರೆಂದ ಧನಸಹಾಯವಿಲ್ಲಿಂದ? ನನಗೂ ಹೆಚ್ಚೇನೂ ಆದಾಯವಿಲ್ಲ. ಆದರೂ ಫಲ ಖರ್ಚನ್ನು ಕೊಂಚ ಕಡಿಮೆಗೊಳಿಸಿ ತಂಗಳೂ ಹತ್ತು ರೂಪಾಯಿ ಅತನಿಗೆ ಫೀಡುತ್ತೇನೆ. ನನಗೆ ಅದರಲ್ಲಿ ಬಹಳ ಸಂತಸವಿದೆ—ನನ್ನಿಂದಾಗಿ ಒಬ್ಬ ವ್ಯಕ್ತಿಯಾದರೂ ಸಂತೃಪ್ತನಾಗುವನಲ್ಲ ಎಂದು. ಅತನೂ ಈ ಫನ್ನ ಅಳಲ ಸೇಡಿಗೆ ಅಧಾರಯಾಗಿದ್ದಾನೆ. ಹಣವನ್ನು ಈ ರೀತಿ ಸ್ವಾರ್ಥಕ್ಕಾಗಿ ವಿನಿಯೋಗಿಸದೆ, ದಂದ ವೆಚ್ಚವನ್ನು ಕಡಿಮೆಗೊಳಿಸಿ ಸರ್ಕಾರಿ ಹಾಯ್ದು ಗೈದರೆ ಅದರಲ್ಲಿ ಅತ್ಮಾನಂದವಿದೆ" ಎಂಬುದನ್ನು ಅನುಭವಿಸಿಯೆಷ್ಟೆ ಸವಿಯಬೇಕು. ಕಮ್ಯುನಿಸಮ್ ಬೆಳೆಯುವುದು ಬಡವರ ಹೊಟ್ಟೆಯ ಬೆಂಕಿಯಲ್ಲಿ ಎಂದಿದ್ದಾರೆ ರಾಜಕಾರಣಿಯೋರ್ವರು.

'ದುಡ್ಡಿದ್ದವನೇ ದೊಡ್ಡಪ್ಪ' ಎಂಬುದನ್ನೂ ಇಂದಿನ ಸಮಾಜವು ಮಾನ್ಯ ಮಾಡಿದೆ. ಹಣವಂತನು ಸಮಾಜದಲ್ಲಿ ಗೌರವಪಾತ್ರನು. ಸಮಾಜದ ಈ ತರದ ದೃಷ್ಟಿದೋಷವು ಬದಲಾಗದೆ ಭ್ರಷ್ಟಾಚಾರವು ತೊನೆಗಾಣದು. ಇಂದು ಗುಣವಲ್ಲ ಮುಖ್ಯ, ಹಣ. ಅಂತಲೇ ಮಹಾ ಮಹಾ ಅನ್ಯಾಯ-ಗೈದು ಧನಾಢ್ಯನಾದವನು ಇಂದು ಮಂತ್ರಿಯಾಗಿದ್ದಾನೆ, ಮಂದಾಳಿಸಿದ್ದಾನೆ.

ಹಣವು ಎಲ್ಲವನ್ನೂ ಮಾಡಿದರೂ ಜೀವನವನ್ನು ಪಡೆಯುವಷ್ಟು ಶಕ್ತನಾಗಿಲ್ಲವೆನ್ನುವುದಕ್ಕೆ ಇತ್ತೀಚೆಗೆ "ಹೃದಯದ ಕಸಿ"ಯಲ್ಲಿ ಸಾಯುತ್ತಿರುವ ರೋಗಿಗಳೇ ಸಾಕ್ಷಿ.

ಹಣವೊಂದಿಗೆ ಬಾಳು, ಹಣದೊಂದಿಗೆ ಸಾಯುವ ಲೋಭಿಗಳೂ ಕಡಿಮೆಯೇನಲ್ಲ. ಹಣವನ್ನು ಕಡಿಜಾಕಿ ಹೊಟ್ಟೆಗೂ ತಿನ್ನದೆ—ಏನೂ ಫಲವಿಲ್ಲ. ತಾನೂ ಅನುಭವಿಸದೆ, ಇತರರೂ ಅನುಭವಿಸಗೊಡದೆ ಹಣವನ್ನು ಕೂಡಿಹಾಕುವ ಮೂರ್ಖರು ಸಮಾಜಘಾತುಕರು. ಇಂತಹ ಹಣವು ಮರಣಾನಂತರ 'ಹದ್ದು-ಹಂದಿಗಳ ಪಾಲಾಗುತ್ತದೆ. ಲೋಭಿಯ ಹಣವು ಶ್ವಾನದ ಹಾಲಿಗಿಂತಲೂ ಕಡೆ. ಏಕೆಂದರೆ ಶ್ವಾನದ ಹಾಲು ಅದರ ಮರಿಗಾದರೂ ದೂರೆಯುತ್ತದೆ.

ಆದುದರಿಂದ ಹಣದ ಉಪಯೋಗ ಎಚ್ಚರಿಕೆಯಿಂದಾಗಬೇಕು — ಲೋಭಿಯಾಗದಿರಿ, ದಂದುಗಾರರಾಗದಿರಿ. ಹಣ ಎಂಬುದು ಬೆಂಕಿಯಂತೆ ಸದ್ಬುದ್ಧಿಯಿಂದ ಉಪಯೋಗಿಸಬಲ್ಲರೆ ಅದು ನಮ್ಮನ್ನೇ ಸುಟ್ಟೀತು.

ಶ್ರೀ ಪುರುಷರಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉದ್ಯಾನಗರದ ಪ್ರಾಣಿ ಮರಿಯಾಗಿ ಅನುಸರಿಸಿ ಇದನ್ನು ಪತ್ತೆ ನೈಪಕೀಯ ಸಂಗಾತಿಗಳಿಗೆ, ಅಂಗಡಿ ಇರಿಯಿರಿ

SHANKAR PHARMACY
BHADRAVATI (MYSORE)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ
ವಾರ್ಷಿಕ ಚಂದಾ ರೂ. ೧೦.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ
ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR
Boarding & Lodging
Near Corporation Office, 9, Mission Road
Bangalore - 2

NAVAYUGA 8—8—1968
Registered with the Registrar of News Papers for India under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ದ. ಕ. ಜಿಲ್ಲೆಗೆ ಬಂದಿರುವ

ಸುಫಲಾ ಸಮ್ಮಿಶ್ರ ಗೊಬ್ಬರ

ಬರೆದವರು: ಶ್ರೀ ಕೆ. ತೇಜಪ್ಪ ಶೆಟ್ಟಿ, ಉಡುಪಿ.

ಫರ್ಟಿಲೈಸರ್ ಕಾರ್ಪೊರೇಶನ್ ಆಫ್ ಇಂಡಿಯಾ ಇದರ ಟ್ರಾಂಬೇ ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟಿ, "ಸುಫಲಾ" ಸಮ್ಮಿಶ್ರ ಗೊಬ್ಬರವು ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿತರಣೆಯಾಗುತ್ತಿದೆ. ಇದರಲ್ಲಿ ಸೇಕಡಾ 20ರಷ್ಟು ಸಾರಜನಕ, 20ರಷ್ಟು ರಂಜಕ, 14ರಷ್ಟು ಸುಣ್ಣದಂಶ, 1 75ರಷ್ಟು ಮೆಗ್ನೀಸಿಯಮ್, ಒಂದರಷ್ಟು ಗಂಧಕದಂಶವಿದ್ದು, ಈ ಎಲ್ಲಾ ಸತ್ವಾಂಶಗಳೂ ಸಂಪೂರ್ಣ ಮೊರಕುವ ರೀತಿಯಲ್ಲಿ ಸಂಯೋಜಿಸಲ್ಪಟ್ಟಿವೆ. ಇದು ಎಲ್ಲಾ ತರದ ಭೂಮಿಗಳಿಗೂ ಉಪಯುಕ್ತವಾಗಿದ್ದು, ತಮ್ಮ ಭೂಮಿಯ ಸಾರವನ್ನು ನೋಡಿ, ಈ ಕೆಳಗಿನ ಪ್ರಮಾಣದಲ್ಲಿ ಉಪಯೋಗಿಸಲು ತಕ್ಕದಾಗಿದೆ. ಮತ್ತು ಬೇಕಾದಷ್ಟು "ಮೊಟೇಶ್" ಗೊಬ್ಬರವೊಂದಿಗೆ, ಸಂಪೂರ್ಣ ಗೊಬ್ಬರ ಹಾಕಿದಂತಾಗುತ್ತದೆ.

ಸುಫಲಾ M. ಮೊಟೇಶ್ ಹಾಕುವ ವಿಧಾನ

1. ಭತ್ತ (ಒಂದನೇ ಬೆಳೆ) 40-60 ಕೆ. ಜಿ. 20 ಕೆ. ಜಿ. ನಾಟಿ ದಿನ ಅಗತ್ಯ ಕಂಡರೆ 10 ಕೆ. ಜಿ. ಯೂರಿಯಾ ಅಥವಾ 20 ಕೆ. ಜಿ. ಸಲ್ಫೇಟ್ ಆಫ್ C. A N. ಮೇಲ್ಗೊಬ್ಬರವಾಗಿ 20-25 ದಿವಸಗಳಲ್ಲಿ ಕಳೆ ತೆಗೆಯುವಾಗ ಹಾಕಬಹುದು.

2. ಭತ್ತ (ಸುಗ್ಗಿ ಮತ್ತು ಕೊಳಕೆ) 50—65 ಕೆ. ಜಿ. 22 ಕೆ. ಜಿ. ನಾಟಿ ದಿನ ಅಗತ್ಯ ಕಂಡರೆ ಮೇಲೆ ಹೇಳಿದಂತೆ ಮೇಲ್ಗೊಬ್ಬರ ಹಾಕಬಹುದು.

3. ಅಧಿಕ ಕಳೆಯ I. R. 8 ಸಂಕರ ಬೆಳೆ-130-135 ಕೆ. ಜಿ. 44ಕೆ.ಜಿ.ನಾಟಿ ದಿನ ನಟ್ಟ 20—25 ದಿವಸಗಳಲ್ಲಿ 30 ಕೆ. ಜಿ. ಯೂರಿಯಾ ಮೇಲ್ಗೊಬ್ಬರವಾಗಿ ಕಳೆ ತೆಗೆಯುವಾಗ ಹಾಕಬಹುದು.

ಸುಫಲಾ ಗೊಬ್ಬರವನ್ನು ಮೇಲ್ಗೊಬ್ಬರವಾಗಿಯೂ ಉಪಯೋಗಿಸಬಹುದು. ಅದರ ಕಣಗಳು ಪೈರಿನ ಮೇಲೆ ನಿಲ್ಲದಂತೆ ಬಗ್ಗಿ ತೆಗ್ಗಿನ ಬೆಲ್ಲದೇಕು. ಕೂಡಲೇ ಕಳೆ ತೆಗೆದು ಪೈರನ್ನು ಅಲ್ಲಾಡಿಸಿದಂತಾದರೆ ಹೂವಾಗಿ ತೊಂದರೆಯೂ ಇಲ್ಲ.

4. ಕಬ್ಬು

a) 60—90ಕೆ.ಜಿ. 30 ಕೆ.ಜಿ.ನಾಟುವ ಮುಂಚೆ ಸಾಲುಗಳಲ್ಲಿ ಹರಡುವದು.

b) 80-100 ಕೆ. ಜಿ. 30 ಕೆ.ಜಿ. ಮೊದಲು ಬಿಡ ಮಾಡುವಾಗ ಮೇಲ್ಗೊಬ್ಬರ. ಆ ಮೇಲೆ ಬಿಡ ಮಾಡ ವಾಗ 35 ಕೆ.ಜಿ. ಯೂರಿಯಾ ಮೇಲ್ಗೊಬ್ಬರವಾಗಿ ಉಪಯೋಗಿಸಬಹುದು.

5. ತೆಂಗು (ಮರ ಒಂದರ) — 1½ — 2 ಕೆ. ಜಿ. — ¾ ಕೆ. ಜಿ. ಮರದ ಬುಡ ಬಿಡಿಸಿ, ಇದೇ ಬುಡಕ್ಕೆ ಜಿಲ್ಲಿಬೇಕು.

ಸಸಿಗಳಿಗೆ—

¼—¾ ಕೆ.ಜಿ —ಅಗೋಸ್ತು-ಸಪ್ಟಂಬರ ತಿಂಗಳಲ್ಲಿ ಉತ್ತಮ. ಸ್ವಲ್ಪ ಹಸುರೆಲೆ ಗೊಬ್ಬರ ಹಾಕಿದರೆ ಒಳ್ಳೆಯದು.

6. ಅಡಿಕೆ—

¼-½ ಕೆ.ಜಿ.—½-¾ ಕೆ.ಜಿ.—ಮರದ ಬುಡ ಬಿಡಿಸಿ, ಇದೇ ಬುಡಕ್ಕೆ ಜಿಲ್ಲಿಬೇಗತೆ ಮಾಡಬೇಕು. ಅಗೋಸ್ತು-ಸಪ್ಟಂಬರ ತಿಂಗಳಲ್ಲಿ ಹಾಕಿ, ಮೇಲೆ ಹಸುರೆಲೆ ಗೊಬ್ಬರ ಅಗತ್ಯ.

7. ಮೆಣಸು—

50-75 ಕೆ.ಜಿ.—20 ಕೆ.ಜಿ. ಅರ್ಧಾಂಶ ನಡುವ ದಿನ, ಮತ್ತು ಅರ್ಧಾಂಶ ನಾಟಿ ಮಾಡಿದ 20 ದಿವಸಗಳಲ್ಲಿ ಬುಡ ಮಾಡುವಾಗ.

8. ಬಾಳೆ—ಗಿಡ ಒಂದರ

a) ⅙ ಕೆ.ಜಿ.-⅓ ಕೆ.ಜಿ. ನಡುವಾಗ. b) ⅙ ಕೆ. ಜಿ 45 ದಿವಸದ ಮೇಲೆ. c) ⅙ ಕೆ. ಜಿ. 4 ತಿಂಗಳ ಮೇಲೆ.

7. ಗೆಣಸು—

a) 25 ಕೆ. ಜಿ -20 ಕೆ. ಜಿ. ಬಳ್ಳಿ ನಡುವಾಗ. b) 25 ಕೆ.ಜಿ. ಸುಗುವಿನ ಬುಡ ಮಾಡಿ ದಂಡೆ ಹಾಕುವ ಮುಂಚೆ.

10. ತರಕಾರಿ—

a) 30-35 ಕೆ.ಜಿ.--20 ಕೆ.ಜಿ. ನಡುವಾಗ. b) 25 ಕೆ.ಜಿ. ಬುಡ ಮಾಡುವಾಗ. ಆ ಮೇಲೆ ಅವಶ್ಯ ಕಂಡಂತೆ ಸ್ವಲ್ಪ ಸ್ವಲ್ಪ ಎಲ್ಲಾ ತರಕಾರಿಗಳಿಗೂ ಹಾಕಬಹುದು.

11. ಮೆಕ್ಕೆ ಜೋಳ—130-135 ಕೆ.ಜಿ. 44 ಕೆ.ಜಿ. ಬೀಜ ಬಿತ್ತುವಾಗ. ಆ ಮೇಲೆ 20-25 ದಿವಸಗಳಲ್ಲಿ 30 ಕೆ. ಜಿ. ಯೂರಿಯಾವನ್ನು ಮೇಲ್ಗೊಬ್ಬರವಾಗಿ ಬುಡ ಮಾಡುವಾಗ ಹಾಕಬಹುದು.

12. ರಾಗಿ—

40-50 ಕೆ.ಜಿ.—18 ಕೆ.ಜಿ. ನಾಟಿ ದಿನ.

ಸುಫಲಾ ಗೊಬ್ಬರದ ಈಗಿನ ಕ್ರಯವು ಟನ್ ಒಂದರ 840/- ರೂಪ್ಯಾ ಆಗಿದ್ದು, ಅದರಲ್ಲಿರುವ ಸತ್ವಾಂಶದ ಪರಿಮಾಣವನ್ನು ಹೋಲಿಸಿದಲ್ಲಿ, ಅದು ಬೇರೆ ಎಲ್ಲಾ ಕೃತ್ರಿಮ ಗೊಬ್ಬರಗಳಿಗಿಂತಲೂ ಸುಲಭ ಕ್ರಯದ್ದಾಗಿದ್ದು, ರೈತರಿಗೆ ಕಮ್ಮಿ ಖರ್ಚಿನದ್ದಾಗಿದೆ. 50 ಕೆ ಜಿ ಗೋಣಿಗಳಲ್ಲಿ ಪೊಲಿಥೀನ್ ಚೀಲ ಹಾಕಿರುವುದರಿಂದ ಒದ್ದೆಯಾಗದೆ, ದೊಡ್ಡ ಹರಳುಗಳಾಗಿದ್ದು ಉಪಯೋಗಿಸಲು ಅನುಕೂಲವಾಗಿದೆ. ಚೀಲಗಳ ಬಾಯಿ ತೆರೆದಿಟ್ಟರೆ ತ್ರಾವ ಹೀರಿ ಒದ್ದೆಯಾಗುವುದರಿಂದ, ಉಪಯೋಗವಾದೊಡನೆ ಚೀಲಗಳನ್ನು ಮುಚ್ಚಿ ಗಾಳಿ ತಾಗದಂತಿಡಬೇಕು.

ರೈತರಿಗೆ ಯಾವ ಗೊಬ್ಬರವೆಂಬ ಸಮಸ್ಯೆಯು ಸುಫಲಾ ಉಪಯೋಗದಿಂದ ನಿವಾರಣೆಯಾಗುತ್ತದೆ. "ಸುಫಲಾ" ಮತ್ತು "ಮೊಟೇಶ್" ಬೇಕಾದ ಪ್ರಮಾಣದಲ್ಲಿ ಹಾಕಿದರೆ, ಅವು ಎಲ್ಲಾ ಬೆಳೆಗಳಿಗೂ ಸಂಪೂರ್ಣ ಗೊಬ್ಬರ.

ಕಾಫಿ, ಟೀ, ಯಾಲಕ್ಕಿ, ಕಾಳುಮೆಣಸು, ಕಿತ್ತಳೆ, ನಿಂಬೆ, ಮಾವು, ಚಿಕ್ಕು, ಪೇರಳೆ, ಅನನಾಸು ಇತ್ಯಾದಿ ಎಲ್ಲಾ ಮರಗಿಡಗಳಿಗೂ ಉಪಯುಕ್ತವಾಗಿದೆ.

(ಒಂದನೇ ಪುಟದಿಂದ)

ಪವಿತ್ರ. ಕೋಲ್‌ಟಾರಿನ ವಸ್ತುಗಳನ್ನು ಬಳಸಿದರೆ, ಮೆದುಳು ಮತ್ತು ಶರೀರಗಳ ಮೇಲೆ ತೀವ್ರ ಪರಿಣಾಮ ಬೀರುವುದು ಎಂದೂ ಅವರ ಅನುಭವ. ಅಧಿಕ ಪ್ರಮಾಣದಲ್ಲಿ ಕೋಲ್‌ಟಾರ್ ವಸ್ತುಗಳನ್ನು ಉಪಯೋಗಿಸುವವರಿಗೆ ಮಾನಸಿಕವಾಗಿ ದುರ್ಬಲರಾದ ಮಕ್ಕಳು ಹುಟ್ಟಿದ ಉದಾಹರಣೆಗಳು ಅನೇಕವಿವೆಯೆಂದೂ ಅವರು ಹೇಳುತ್ತಾರೆ. ಹೋಟೆಲುಗಳನ್ನೇ ಅವಲಂಬಿಸಿರುವ, ಹೋಟೆಲು ಸೇವನೆಯ ಚಟವನ್ನಾಗಿ ಮಾಡಿಕೊಂಡಿರುವವರ ಹಿತ ದೃಷ್ಟಿಯಿಂದ ಬಲ್ಲ ಹೋಟೆಲುವಾಲರು ಮಾನವತೆಯನ್ನು ತೋರಿಸಿ ಬುದ್ಧಿವಂತ ಜನರಂಗೆ ಕಜನೆಯನ್ನು ಶಕ್ತಿಯುವಾಗಿ ಧಾರಣಮಹಿಸಬೇಕಲ್ಲವೆ? ಮನೆಯ ಗೃಹಿಣಿ ಬೆಲ್ಲವನ್ನಾದರೂ ಬಳಸಿಯೋಳ, ಸ್ಯಾಕ್ಷರಿನ್ ಉಪಯೋಗಿಸಳು. —ಗೋ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪಿ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಕೊರಡ್ಡಲ್ ವೆಂಕಟ್ರಾವ್, ಎಲ್. ಎಂ.ಎಸ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಶ್ರೇಷ್ಠನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಜೊಡಣೆಯ, ಗರ್ಭಿಣಿಯರ ಇವರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮುಖ್ಯವಲ್ಲೇ ಮದ್ದು ಹಾಕುವ ವಿಧಾನವು ಸುಲಭವಿಸಲ್ಪಟ್ಟ ಗೃಹವೈದ್ಯ. ಹೆಚ್ಚಿನ ವಿಶಾಲ ಸಮಸ್ಯಾಪರಿಹಾರ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨-೦೦ (ಪಿ. ಬಿಡುಗಡೆ ಹೆಚ್)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
S. C. 309/67.

ಚಿಪ್ಪರ ಯಾನೆ ರಘುರಾಮ ಶೆಟ್ಟಿ —ವಾದಿ.
ಮತ್ತು
ರುಕ್ಕಯ್ಯ ಆಚಾರಿ ಕೊಡಾ —ಪ್ರತಿವಾದಿರು.
ಪ್ರತಿವಾದಿರು:—

1. ರುಕ್ಕಯ್ಯ ಆಚಾರಿ, ನಾಗಪ್ಪ ಆಚಾರಿ ಮಗ; 2. ಗಣಪತಿ ಆಚಾರಿ, ರುಕ್ಕಯ್ಯ ಆಚಾರಿ ಮಗ—ಉಡ್ಪಿ ತಾಲ್ಲೂಕ ಕಳ್ಳೂರು ಗ್ರಾಮದ ದರಗುದ್ದೆಯಲ್ಲಿರುವವರಿಗೆ ಈ ಮೂಲ್ಯ ಕಳೆಯಪಡಿಸುವುದೇನೆಂದ್ರೆ:-

ವಾದಿರು ನಿಮ್ಮ ವ ಇತರರ ಮೇಲೆ ಅವರಿಗೆ ತಾ. 5—11—64ರಲ್ಲು ರೂ. 280—00 ಕ್ಕೆ ಬರೆಕೊಟ್ಟ ಡಿ. ಪ್ರೊ. ನೋಟಿನ ಮೇಲೆ ಅಸಲು ಬಡ್ಡಿ ಕೇಳಿ ಮಾಡಿದ ಸದ್ರಿ ದಾವೆಯನ್ನು ತಾರೀಖು 14-8-68ಕ್ಕೆ ಇಟ್ಟದ್ದರಿಂದ ನಿಮಗೇನಾದ್ರು ಆ ಬಾಬ್ತು ಆಕ್ಷೇಪವಿದ್ದಲ್ಲಿ ಸದ್ರಿ ಕೋರ್ಟಿನಲ್ಲಿ ಸದ್ರಿ ದಿವ್ಸ ದಗಲು 10 ಗಂಟೆಗೆ ಹಾಜ್ರಾಗಿ ಉದ್ದೇಶಿಸತಕ್ಕದ್ದು.

V. V. Upadhyaya,
ವಾದಿಯ ಕಡೆ ಎಡ್ವೋಕೇಟ್.

ಕಾರ್ಕಳ, ತಾರೀಖು, 28—7—68.

Edited, Printed & Published by K. B. Shetty at the Navayuga Press, Udipi, S. Kanara

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೬೮



INDEPENDENCE DAY SPECIAL
1968

೫೦
ಪೈಸೆ

ಬೆಳಕಿನೆಡೆಗೆ

ಸಂಜೆ ಸರಿಯುತ್ತಿದೆ. ಹಕ್ಕಿಗಳು ಬಾನಿನಲ್ಲಿ ರೆಕ್ಕೆಬೀಸಿ ಹಾರಾಡುತ್ತಾ ಗೂಡು ಸೇರುತ್ತಿವೆ. ಆಕಳುಗಳು 'ಅಂಬಾ' ಎನ್ನುತ್ತಾ ಬೀಡು ಸೇರುತ್ತಿವೆ. ಹೊಲದಲ್ಲಿ ದುಡಿತ ಮುಗಿಸಿ ಕೆಲಸದಾಳುಗಳು ಮನೆಯ ದಾರಿ ತುಳಿಯುತ್ತಿದ್ದಾರೆ.

ಮುಸ್ಸಂಜೆಯ ಹೊಂಬಣ್ಣ ಬಾನಿನಲ್ಲಿ ತೆಳುಪರದೆಯನ್ನು ಹಾಸಿದೆ. ಆಚಿನ ದಿಗಂತದ ಕತ್ತಲು ಭೂಮಿಯನ್ನು ಚಾಚುತ್ತಿದೆ. ಮಿಣುಕು ದೀಪಗಳು ಗ್ರಾಮವಲಯದ ಮನೆಗಳಲ್ಲಿ ಮಿನುಗ ತೊಡಗಿವೆ. ದೀಪದ ಬೆಳಕೊಂದೇ ಸುತ್ತಲೂ ಹಾಸಿದ ಕತ್ತಲನ್ನು ಹಾಯಿಸಲು ನೆರವಾಗಿದೆ.



ಕತ್ತಲನ್ನು ಹರಿಸಲು ಕಾಲ್ದೀಪ ನೆರವಾಗಿದೆ.

ಬದುಕಿನ ಕತ್ತಲ ದಿನಗಳಲ್ಲಿ ಬೆಳಕನ್ನು ಬೀರಲು ಉಳಿತಾಯದ ದೀಪವೊಂದೇ ಆಧಾರ. ದೀಪದ ಬೆಳಕಿನಲ್ಲಿ ದಾರಿದ್ರ್ಯದ ಕತ್ತಲು ಸರಿಯುತ್ತದೆ ಹೊಸ ಬೆಳಕು. ಮೂಡುತ್ತದೆ. ಚೈತನ್ಯ ಹರಿಯುತ್ತದೆ.

ದಾರಿದ್ರ್ಯದಿಂದ ಸಮೃದ್ಧಿಯೆಡೆಗೆ ಒಯ್ಯುವ ಸಂಕೇತವೇ ಈ ದೀವಿಗೆ. ರಾಜಕೀಯ ಸ್ವಾತಂತ್ರ್ಯದಿಂದ ಆರ್ಥಿಕ ಸ್ವಾತಂತ್ರ್ಯದೆಡೆಗೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: **ಮಂಗಳೂರು**, ಮೈಸೂರು ರಾಜ್ಯ.

ಸಾಧನ ಸಂಪತ್ತು:	ಶಾಖೆಗಳು:	ಟಿ. ಎ. ಪೈ
ರೂ. 100 ಕೋಟಿಗೂ ಮಿಕ್ಕಿ.	238ಕ್ಕೂ ಮಿಕ್ಕಿ.	ಚೆಯರ್‌ಮೇನ್

ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೫೦
No. 50

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಡುಪಿ ೧೫—೮—೧೯೭೮



ಸ್ವಾತಂತ್ರ್ಯ ದಿನದ ಶುಭಾಶಯಗಳು



ಪಂಜರವನ್ನು ಭದ್ರಪಡಿಸೋಣ

ನಮ್ಮ ಭಾರತ ಸ್ವತಂತ್ರಗೊಂಡ ಪವಿತ್ರ ದಿನವಿಂದು. ನಾಡಿನಾದ್ಯಂತ ಪರಕೀಯ ಶೃಂಖಲೆಯಿಂದ ಮುಕ್ತರಾಗಲು ಹೋರಾಡಿದ ವೀರ ಪುತ್ರ—ಪುತ್ರಿಯರನ್ನು ಮತ್ತೊಮ್ಮೆ ಸ್ಮರಿಸಿ ಅವರಿಗೆ ಗೌರವಾರ್ಪಣೆ ಸಲ್ಲಿಸುವ ಕರ್ತವ್ಯ ಪಾಲನೆಯ ದಿನವಿದು. ೧೯೪೭ರಲ್ಲಿ ಸ್ವತಂತ್ರರಾದ ನಾವು, ನಮ್ಮನ್ನೇ ನಾವು ರೂಪಿಸಿಕೊಳ್ಳುವ ಅಧಿಕಾರ ಪಡೆದಿದ್ದೇವೆ. ಅಧಿಕಾರದೊಡನೆಯೇ ಕರ್ತವ್ಯದ ಹೊರೆಯೂ ನಮ್ಮ ಹೆಗಲ ಮೇಲೆ ಬಂದಿದೆ.

ದೇಶ ಸ್ವತಂತ್ರಗೊಂಡಂದಿನಿಂದಲೂ ನಮ್ಮನ್ನು ಹಲವಾರು ಸಮಸ್ಯೆಗಳು ಕಾಡುತ್ತಲೇ ಬಂದಿವೆ. ಪಾಕಿಸ್ತಾನವು ವಿಭಜನೆಗೊಂಡ ಮೇಲಾದರೂ ನೆಮ್ಮದಿಯ ಉಸಿರುಬಿಟ್ಟು, ದೇಶದ ಬಡತನ, ಅಜ್ಞಾನಗಳನ್ನು ನೀಗಿಸಲು ಪ್ರಬಲ ಹೋರಾಟ ನಡೆಸಲು ನಮ್ಮ ಶಕ್ತಿಯನ್ನು ಕೇಂದ್ರೀಕರಿಸಬಹುದೆಂದು ಬಗೆದಿದ್ದರೆ, ಪಾಕ್ ಜನರನಿಂದ ಆಜನ್ಮ ಶತ್ರು ಪುಟ್ಟ ಅವತಾರ ತಳೆದಂತಾಯಿತು. ಕಾಶ್ಮೀರದ ಪ್ರಶ್ನೆ, ಪೂರ್ವ-ಪಶ್ಚಿಮ ಗಡಿ ಪ್ರಶ್ನೆ, ಸಿಂಧೂ ನದೀನೀರಿನ ವಿವಾದ, ಮತ್ತೂರ ಗಂಗಾ ನದಿಯ ಹಗರಣಗಳು ರಾಜಕೀಯ ದುರುದ್ದೇಶದಿಂದಲೇ ಪ್ರೇರಿತವಾದುವು. ಭಾರತದ ಶತ್ರುಗಳನ್ನೆಲ್ಲಾ ತನ್ನ ಮಿತ್ರರನ್ನಾಗಿ ಪರಿವರ್ತಿಸುತ್ತ ಬಂದ ಪಾಕಿಸ್ತಾನವೀಗ ಮತ್ತೊಂದು ಮೈಲು ಮುಂದ ಸಾಗಿದೆ—ಭಾರತದ ವಿಭಜನೆ ತನ್ನ ಬಟ್ಟೆಯೊಳಗೆ ತೂರಿಕೊಳ್ಳುವ ಸಾಹಸ ನಡೆಸತೊಡಗಿದೆ—ಇದರಲ್ಲಿ ಅಂಶಿಕವಾಗಿ ಅದು ಯಶವನ್ನೂ ಪಡೆದಿದೆ. ಭಾರತದ ಹಿತಶತ್ರುಗಳು ದೇಶದೊಳಗೂ ಹೊರಗೂ ಇದಕ್ಕೆ ಅನುಕೂಲ ವಾತಾವರಣವನ್ನು ಕಲ್ಪಿಸಿ ಕೂಡುತ್ತಿದ್ದಾರೆ.

ದೇಶವು ಸ್ವತಂತ್ರಗೊಂಡ ತರುವಾಯ ದಲ್ಲಿ ಕಾಶ್ಮೀರವನ್ನು ಕಬಳಿಸಲು ನುಗ್ಗಿ ಬಂದ ಪಾಕಿಸ್ತಾನಕ್ಕೆ ಎದುರಾಗಿ ಹೋರಾಡುವ ಭಾಗ್ಯ ನಮ್ಮದಾಯಿತು. ಮುಂದೆ ಮಿತ್ರನಂತೆ ಭಟಿಸುತ್ತಲೇ ಬೆನ್ನಿಗೆ ಇರಿದ ಕಂಪು ಚೀನವಂತೂ ಪಾಕಿನ ಮನೆಗೆಳೆಯ ಹಾಗಿರುವಾಗ, ಭಾರತದ ರಕ್ಷಣೆಯ ಹೊಣೆ ನಮ್ಮ ಸೈನ್ಯದ ಮೇಲೆ, ನಮ್ಮ ಮೇಲೆ ಇದೆ. ನಮ್ಮ ಕಾಲುಗಳ ಮೇಲೆಯೇ ನಿಂತುಕೊಳ್ಳುವ ಶಕ್ತಿ ನಮಗೆ ಬರಬೇಕು. ಇದಕ್ಕಾಗಿ ಈಗ ತುಸು ತ್ಯಾಗಮಯಾರ್ಹ ಶ್ರಮಪಡಬೇಕು ಭವ್ಯ ಭವಿಷ್ಯತ್ತಿಗಾಗಿ ನಾವು ಈ ಕಷ್ಟವನ್ನು ಆತ್ಮ ಸಂತೋಷದಿಂದ ಅನುಭವಿಸಲು ಸಿದ್ಧರಾಗಬೇಕು.

ದೇಶದ ಆಂತರಿಕ ನೆಮ್ಮದಿಯೂ ಇತ್ತೀಚಿನ ವರ್ಷಗಳಲ್ಲಿ ಕಲಕಿದೆ. ಹಿಂದಿಯನ್ನು ಅಧಿಕೃತ ಭಾಷೆಯನ್ನಾಗಿ ಮಾಡುವ ಸಂಬಂಧ ದ್ರಾವಿಡ ಕೆಲವು ರಾಜ್ಯಗಳಲ್ಲಿ ಹಿಂದೀ ವಿರೋಧಿ ಭಾವನೆ ತಾಂಡವವಾಡುತ್ತಿದೆ. ಉತ್ತರ-ದಕ್ಷಿಣಗಳ ಭೇದಭಾವ ಹೆಚ್ಚುತ್ತಿದೆ. ಸಂಕುಚಿತ ಪ್ರಾಂತೀಯತೆ, ಜಾತೀಯತೆ, ಭಾಷೀಯತೆಗಳ ವಿಷವು ವಿಷ ಜ್ವಾಲೆಯುಗೀಶವನ್ನೇ ನುಂಗುವಂತಹ ಸನ್ನಿವೇಶ ರಾಜಿಯುತ್ತದೆ. ರಾಜಕಾರಣಿ—ರಾಜಕೀಯ ಪ್ರಾಂತ ಸ್ವಾರ್ಥ ಲೋಲುಪತೆಯಿಂದಾಗಿ ಸರಕಾರಿ ಅಧಿಕಾರಿ-ನೌಕರ ವರ್ಗಗಳ ಭ್ರಷ್ಟಾಚಾರ-ಕರ್ತವ್ಯಚ್ಯುತಿಯಿಂದಾಗಿ ಜನತೆ ವಾಮಮಾರ್ಗ ಪಯಣವನ್ನೇ ನೆಚ್ಚಿಕೊಳ್ಳುವಂತೆ ಮಾಡಿದೆ. ರಾಜಕಾರಣಿಗಳಂತೆಯೇ ಪ್ರಜಾ ಜನರು ಅಧಿಕಾರಕ್ಕಾಗಿಯೇ ಹೋರಾಡುವಲ್ಲಿ ನಿರತರಾಗಿದ್ದಾರಲ್ಲದೆ ತಮ್ಮ ಕರ್ತವ್ಯ ಪಾಲನೆಯಿಂದ ಬಲುದೂರ ಸರಿಯುತ್ತಿದ್ದಾರೆ. ಈ ಬಗೆಯ ಅಧಿಕ್ಯಾಧಿಗಳು ಹೆಚ್ಚುತ್ತ ಬಂದಂತೆ ದೇಶದ ಆಂತರಿಕ ಸಮಸ್ಯೆಗಳೂ ಜಟಿಲವಾಗುತ್ತ ಬರುತ್ತಿವೆ. ಈ ಜೇಡರ ಬಲೆಯಿಂದ ಹೊರಬರಲು ಪ್ರಯತ್ನಗಳು ನಿಷ್ಠಾಪೂರ್ವಕವಾಗಿ ನಡೆಯುತ್ತಿವೆ ಎಂದು ತೋರಲಿಕ್ಕಾಗದು. ತನ್ನ ರೊಟ್ಟಿಯು ಜಾರಿ ತುಪ್ಪಕ್ಕೆ ಬಿದ್ದರೆ ಸಾಕೆನ್ನುವ ಹೀಡು ಪ್ರವೃತ್ತಿಯಿಂದ ನಮಗೆಂದು ಮುಕ್ತಿ ಎಂದು ಬುದ್ಧಿ ಜೀವಿಗಳು ಯೋಚಿಸುತ್ತಿದ್ದಾರೆ. ರಾಷ್ಟ್ರೀಯತೆಯ ಬೀಜವನ್ನು ಬಿತ್ತಿ ಬೆಳೆಯುವ ಸಫಲ ರಾಷ್ಟ್ರಪುರುಷರೊಬ್ಬರಿದ ಬೇಕೆನಿಸುತ್ತದೆ—ಮಹಾತ್ಮಾ ಗಾಂಧಿ—ಜವಾಹರಲಾಲ ನೆಹರೂರವರ ಉನ್ನತ ವ್ಯಕ್ತಿತ್ವದ ಪ್ರಭಾವ ಇನ್ನು ಬೇಗನೇ ಭಾರತೀಯರಿಂದ ದೂರವಾಗಬೇಕಾದರೆ, ಅಂದಿನ ಉತ್ಸಾಹ, ಮೂಡಿಬಂದ ರಾಷ್ಟ್ರೀಯ ಮನೋಭಾವ ಬರಿಯ ಬೆರೆಸೀರಿನ ಅಬ್ಬರವೆ? ಹಾಗಾಗಬಾರದೆಂದಿದ್ದರೆ, ನಾವೆಲ್ಲ ಒಂದಾಗಿ ಒಂದು ದೇಶದ ಪ್ರಜೆಗಳಾಗಿ ಅದರ ಉನ್ನತಿಗಾಗಿ ಅಹೋರಾತ್ರಿ ದುಡಿಯೋಣ. ಪಕ್ಷಿ ದಾಟಿಹೋಗುವುದಕ್ಕೆ ಮೊದಲೇ ಪಂಜರವನ್ನು ಭದ್ರಪಡಿಸೋಣ.

ನಿವೇದನ

ದೇಶವು ಸ್ವಾತಂತ್ರ್ಯ ದಿನವನ್ನು ಸ್ವಾಭಿಮಾನದಿಂದ ಆಚರಿಸಬೇಕು. ಈ ದಿನದ ನೆನಪಿಗೆಂದು 'ನವಯುಗ'ವು ವಿಶೇಷ ಸಂಚಿಕೆಯೊಂದನ್ನು ಪ್ರಕಟಿಗೊಳಿಸುವುದು ಸಂಪ್ರದಾಯವಾಗಿದೆ. ಈ ಬಾರಿಯ ವಿಶೇಷಾಂಕವು ತೀವ್ರವಾಗಿಯೇ ತಯಾರಾಗಬೇಕಾಗಿ ಬಂತು. ಹಾಗಾದರೂ ನಮ್ಮ ಪ್ರೀತಿಯ ಲೇಖಕ ಮಹಾಶಯರು ತಮ್ಮ ಅಮೂಲ್ಯವಾದ ಲೇಖನಗಳನ್ನು ನೀಡಿ ಸಹಕರಿಸಿದ್ದಾರೆ. ಇವರ ಸಂಪೂರ್ಣ ಸಹಾಯದಿಂದಲೇ ಈ ಸಂಚಿಕೆರೂಪುಗೊಳ್ಳುವುದು ಸಾಧ್ಯವಾಯಿತು. ನಮ್ಮ ಜಾಹೀರಾತುದಾರರು ಹೆಚ್ಚಿನ ಉತ್ಸಾಹದಿಂದಲೇ ನಮ್ಮೊಡನೆ ಸಹಕರಿಸಿದ್ದಾರೆ. ಇವರೆಲ್ಲರ ಸಹಕಾರವನ್ನು ಮುಂದೆಯೂ ನಿರೀಕ್ಷಿಸಿ, ಇವರೆಲ್ಲರಿಗೂ ನಮ್ಮ ಆಭಾರವನ್ನು ಸಲ್ಲಿಸಿ, ಈ ವಿಶೇಷ ಸಂಚಿಕೆಯನ್ನು ನಿಮ್ಮೆಲ್ಲರ ಮುಂದಿಡುತ್ತೇನೆ.

ರಕ್ಷಣಾ ನಿಧಿಗೆ
ಉದಾರವಾಗಿ
ಸಹಾಯ ಮಾಡಿರಿ

HOTEL DĀSAPRAKĀSH,
MADRAS.

An International Caravanserai

Phone: 61111 (8 lines) Grams: DASPRAKASH

Over 150 Rooms :: Large Number Air-conditioned :: With Three Electric Lifts

SPECIAL VEGETARIAN CUISINE FOR OVERSEAS TOURISTS

Latest artistically designed PINK HALL & SKY ROOF GARDENS—Special attraction of the Hotel

---

When Holidaying at the Queen of the Hill Stations, stay at

HOTEL DĀSAPRAKĀSH :: OOTY

(Situated in Enchanting Surroundings)

Phone: 434 & 435 Grams: DASPRAKASH

Visitors to the Garden City of India, will enjoy their sojourn at

HOTEL DĀSAPRAKĀSH :: MYSORE

Phone: 742 Grams: DASPRAKASH

..... *A HOME AWAY FROM HOME* .....

DĀSAPRAKĀSH GROUP OF HOTELS

MADRAS ..... MYSORE ..... OOTY

GO FOR

GOLD SPOT

ICE COLD

Franchisers.

Dasaprakash Bottling Company

6 Medawalkam Tank Road,

MADRAS-12

Phone: 63140

ENJOY

DĀSAPRAKĀSH

ICE CREAMS

Distributors.

Dasaprakash Ice Creams

50, Poonamallee High Road,

MADRAS-7

Phone: 61111 & 86482

ಗಾಂಧೀಜಿಯ ದೃಷ್ಟಿಯಲ್ಲಿ

ಮಾನವ ಜನಾಂಗದ ಏಳಿಗೆಯ ಮಾರ್ಗ

ಹಿಂದೂ-ಮುಸ್ಲಿಂ ಐಕ್ಯಕ್ಕೆ ಬೊಂಬಾಟೋಟಕ್ಕೆ ತೋರುವುದಕ್ಕಿಂತ—ಹೆಚ್ಚಿನ ಅರ್ಥವಿದೆ. ಈ ಐಕ್ಯ ಎಂದರೆ ಕೇವಲ ಹಿಂದೂಗಳು—ಮತ್ತು ಮುಸಲ್ಮಾನರ ಐಕ್ಯ ಎಂದಲ್ಲ. ಭಾರತವೇ ನನ್ನ ಮನೆ ಎಂದು ನಂಬಿರುವ ಎಲ್ಲಾ ಜನರ ಐಕ್ಯ. ಅವರ ಧರ್ಮ ಯಾವುದೇ ಇರಲಿ, ಅದು ಮುಖ್ಯವಲ್ಲ.

ಪ್ರೀತಿ, ಸ್ನೇಹದ ಆಧಾರ. ಅದು ಧರ್ಮದ ಆಧಾರವೂ ಹೌದು. ಪ್ರೀತಿಯ ಬಲದಿಂದ ಮುಸ್ಲಿಂ ಬಂಧುಗಳ ಸ್ನೇಹ ಸಂಪಾದಿಸುವುದೇ ಧನ್ಯ ಗುರಿ. ಒಂದು ಸಮಾಜದಲ್ಲಾದರೂ ಪ್ರೀತಿಯ ಭಾವನೆ ಇರಬೇಕು. ಆಗ ಐಕ್ಯ ಧರ್ಮ ರಾಷ್ಟ್ರೀಯ ಜೀವನದ ಅಂಗವಾಗುತ್ತದೆ.

ನಾನು ಬದುಕಿದ್ದಾಗ ಈ ಆದರ್ಶ ಕೈಗೂಡದೇ ಹೋಗಬಹುದು. ಆದರೂ ಸಮಯ ಬಂದಾಗ ಅದು ಕೈಗೂಡುವುದೆಂಬ ನಂಬುಗೆ ನನಗಿದೆ. ಈ ಒಂದು ಕ್ರಮಕ್ಕೆ ವಿಘ್ನ ತರುವ ಯಾವದೇ ಕಾರ್ಯ ನನ್ನಿಂದ ಆಗಲ್ಲವೆಂದು ನನಗೆ ಸಂತೋಷವಾಗಿದೆ. ಅದಕ್ಕಾಗಿಯೇ ನಾನು ನಾಮರಸ್ಯ ತರುವ ಎಲ್ಲಾ ಕಾರ್ಯವನ್ನು ಮಾಡಬಯಸುತ್ತೇನೆ.

ಪ್ರತಿಯೊಬ್ಬರೂ ಪರಸ್ಪರ ಧರ್ಮವನ್ನು ಗೌರವಿಸಬೇಕು. ಅಂತರಂಗದಲ್ಲಾ ಒಬ್ಬರು ಮತ್ತೊಬ್ಬರಿಗೆ ಕೇಡು ಬಗೆಯಕೂಡದು. ಒಬ್ಬರು ಇನ್ನೊಬ್ಬರ ಧರ್ಮವನ್ನು ನಿಂದಿಸಬಾರದು.

ಪರಧರ್ಮ ದೂಷಣೆ ಮಾಡುವುದು, ಸಂಯಮ ತಪ್ಪಿ ಮಾತನಾಡುವುದು, ಅಸತ್ಯ ನುಡಿಯುವುದು, ಮುಗ್ಧ ಜನರನ್ನು ಪಂಚಿಸುವುದು, ದೇವಾಲಯಗಳನ್ನು ಅಥವಾ ಮಸೀದಿಗಳನ್ನು ಭಗ್ನಗೊಳಿಸುವುದು, ದೇವರ ಅಸ್ತಿತ್ವವನ್ನೇ ಅಲ್ಲಗಳೆದಂತೆ.

ಮತೀಯ ಪ್ರಕ್ಷೋಭೆ ನಿವಾರಣೆಗೆ ಒಂದೇ ಒಂದು ಉಪಾಯವಿದೆ. ಪ್ರತಿಯೊಬ್ಬನೂ ತನ್ನ ಧರ್ಮದ ತತ್ವಗಳಂತೆ ನಡೆಯಬೇಕು. ಇತರ ಧರ್ಮಗಳ ಬಗ್ಗೆ, ಇತರ ಧರ್ಮಾನುಯಾಯಿಗಳ ಬಗ್ಗೆ ಗೌರವ ಭಾವನೆಯುಳ್ಳವನಾಗಬೇಕು. ಇದೇ ಸಮಸ್ಯೆಯ ಪರಿಹಾರಕ್ಕೆ ನಾನು ಸೂಚಿಸುವ ಮಾರ್ಗ.

ನನ್ನ ಮಟ್ಟಿಗೆ ಹೇಳುವುದಾದರೆ ನನಗೆ ಬಂಧುಗಳು-ಅಪರಿಚಿತರು, ದೇಶೀಯರು, ವಿದೇಶೀಯರು ಬಿಳಿಯರು-ಕಪ್ಪಿಯರು, ಹಿಂದುಗಳು ಮತ್ತು ಇತರ ಧರ್ಮಗಳ ಭಾರತೀಯರು, ಪಾರ್ಸಿಗಳು, ಕ್ರೈಸ್ತರು, ಅಥವಾ ಯಹೂದ್ಯರು, ಇವರ ಪಡುವೆ ಯಾವ ಅಂತರವೂ ಇಲ್ಲ. ನನ್ನ ಹೃದಯ ಇಂತಹ ಬೇಧಭಾವ ಮಾಡಲು ಸಿದ್ಧವಿಲ್ಲ. ನಾನು ಇದನ್ನು ನನ್ನ ಒಂದು ಗುಣ ವಿಶೇಷವೆಂದು ಹೇಳಲಾರೆ. ಅದನ್ನು ಪಡೆಯಲು ನಾನು ಯಾವ ಪರಿಶ್ರಮವನ್ನೂ ಮಾಡಿಲ್ಲ- ಅದು ಸ್ವಭಾವ ಸಹಜವಾಗಿ ಬಂದಿದೆ. ಇತರ ಗುಣಗಳು ಅಂದರೆ ಅಹಿಂಸೆ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ ಇವು ಸಹಜವಾಗಿ ಬಂದುದಲ್ಲ. ಈ ಗುಣಗಳನ್ನು ಅಳವಡಿಸಿಕೊಳ್ಳಲ, ಅವುಗಳ ಕೃಷಿ ಮಾಡಲು ನಾನು ನಿರಂತರ ಹೋರಾಟ ನಡೆಸ ಬೇಕಾಯಿತು.

ಧರ್ಮ ಪ್ರೇಮ ವಿಶಾಲವಾಗಬೇಕು. ಇಡಿಯ ಗ್ರಾಮವನ್ನೂ, ಜಿಲ್ಲೆಯನ್ನೂ, ಪ್ರಾಂತವನ್ನೂ, ಪ್ರಾಂತದಿಂದ ದೇಶವನ್ನೂ ಅದು ಆವರಿಸಬೇಕು. ಅಂತಿಮವಾಗಿ ಇಡಿಯ ವಿಶ್ವವೇ ಈ ಪ್ರೇಮ ಬಂಧನಕ್ಕೆ ಒಳಗಾಗಬೇಕು.

ಭಾರತೀಯ ಜನಾಂಗಗಳ ಬಾಂಧವ್ಯ ನನ್ನ ಗುರಿಯಲ್ಲ. ಭಾರತದ ಸ್ವಾತಂತ್ರ್ಯವನ್ನೇ ನನ್ನ ಧ್ಯೇಯವಲ್ಲ. ಭಾರತದ ಸ್ವಾತಂತ್ರ್ಯದ ಮೂಲಕ ಮಾನವನ ವಿಶ್ವಬಾಂಧವ್ಯ ಸಾಧಿಸುವದೇ ನನ್ನ ಗುರಿ. ನನ್ನ ದೇಶಾಭಿಮಾನದ ಕಲ್ಪನೆ ವಿಶಾಲವಾಗಿದೆ. ಅದು ಸರ್ವವ್ಯಾಪಿ. ಇತರ ರಾಷ್ಟ್ರೀಯರ ಶೋಷಣೆ ಮಾಡುವ ಅಥವಾ ಅವರ ಅಸಹಾಯಕತೆಯ ದುರ್ಲಾಭ ಪಡೆಯುವ ದೇಶಾಭಿಮಾನವನ್ನು ನಾನು ತಿರಸ್ಕರಿಸುತ್ತೇನೆ.

ಸಕಲ ಜೀವಿಗಳಿಗೆ ಲೇಸಬಯಸುವುದೇ ನನ್ನ ದೇಶಾಭಿಮಾನದ ತಿರುಳು. ನನ್ನ ದೃಷ್ಟಿಯಲ್ಲಿ ಬಂಧುತ್ವವೆಂದರೆ ಕೇವಲ ಮಾನವ ಜನಾಂಗದ ಬಂಧುತ್ವ ಮಾತ್ರವಲ್ಲ. ಸಕಲ ಜೀವಿಗಳು ಬಂಧುತ್ವವಾಗಿದೆ. ಒಬ್ಬನೇ ದೇವರು ಇವನ್ನು ನನ್ನ ಸೃಷ್ಟಿಸಿದ್ದಾನೆ. ಈ ಪ್ರಪಂಚದಲ್ಲಿನ ಸಕಲ ಪ್ರಾಣಿಗಳು ಎಲ್ಲಾ ಒಂದೇ ಎಂದು ನನ್ನ ಭಾವನೆ.

ವಿಶ್ವದ ಹಿತೈಷಿಗಳ ಅಭಿಲಾಷೆಯೇನು? ಇಂದು ಪರಸ್ಪರರ ಮೇಲೆ ಆಕ್ರಮಣ ಮಾಡುವ ಸ್ವತಂತ್ರ ರಾಷ್ಟ್ರಗಳಿಗಿಂತ ಪರಸ್ಪರಾವಲಂಬಿಯಾದ ಸ್ನೇಹಾಕಾಂಕ್ಷಿಗಳಾದ ರಾಷ್ಟ್ರಗಳ ಒಕ್ಕೂಟ ರೂಪುಗೊಳ್ಳಬೇಕು ಎಂಬುದೇ ಅದರ ಆಕಾಂಕ್ಷೆ. ಈ ಗುರಿ ಸಾಧನೆಯ ದಿನ ಇನ್ನೇನೂ ದೂರವಿರಲಾರದು. ಈ ದಿಸೆಯಲ್ಲಿ ನಾನೇನೂ ನನ್ನ ರಾಷ್ಟ್ರದ ಹೆಗ್ಗಳಿಕೆಯನ್ನು ಮಾಡತ್ತಿಲ್ಲ. ಸ್ವಾವಲಂಬನೆಗಿಂತಲೂ ವಿಶ್ವದ ಪರಸ್ಪರಾವಲಂಬನೆಯೇ ಮಾರ್ಗ ಅನುಸರಿಸುವ ಬಗ್ಗೆ ನನ್ನ ಒಪ್ಪಿಗೆಯನ್ನು ವ್ಯಕ್ತಗೊಳಿಸುವಲ್ಲಿ ಯಾವ ಅಭ್ಯಂತರವೂ ಇಲ್ಲ.

With best compliments from

M/s B. NARSAPPA & SONS

MANGALORE

Proprietors of:

1. MEHRU LUNCH HOME
2. B. N. S. MOTOR SERVICE
3. B. N. S. TRANSPORT LORRY SERVICE
4. MEHRU COLD HOUSE

&

5. 'SUJATA'

(Opposite the Kodialbail church, MANGALORE)

the newest and most delightful restaurant in the town.

ರೈತರ ಸೇವೆಗಾಗಿ ಸೇವೆ

ಸುಲಭ ದರಗಳಲ್ಲಿ ರಸಾಯನಿಕ ಗೊಬ್ಬರಗಳ ವಿತರಣೆ.

1. ಸುಫಲಾ — ಟ್ರಾಂಬೇ ವಿಭಾಗದ ಸಮ್ಮಿಶ್ರ ಗೊಬ್ಬರ. ಎಲ್ಲಾ ತರದ ಭೂಮಿಗೂ, ಎಲ್ಲಾ ಬೆಳೆಗಳಿಗೂ ಉಪಯುಕ್ತ.
(20 : 20 : 0)

2. ಯೂರಿಯಾ — ಟ್ರಾಂಬೇ ವಿಭಾಗದ ತಯಾರಿ. ನಾರಜನಕ ಗೊಬ್ಬರಗಳಲ್ಲಿ ಲಾಭದಾಯಕವಾಗಿದೆ.
(46 % N)

3. M. ಪೋಟೇಶ್ — ನಮ್ಮ ಭೂಮಿಗಳಿಗೆ ಅಗತ್ಯವಾದ ಬೂದಿ ಸತ್ವ ಗೊಬ್ಬರ.
(58-60% K 20)

ಅದಲ್ಲದೆ, ಜಿ.ಯಿ. ಸಿ., ವೋಲ್ಟಾಸ್ ಮತ್ತು ಸಿಂಪ್ಸನ್ ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು, ಲಿಸ್ಟರ್ ಇಂಜಿನುಗಳು, ಕೃಷಿ ಯಾಂತ್ರಿಕ ನೇಗಿಲುಗಳು, ಸ್ಪ್ರೇಯರುಗಳು, ಕ್ರಿಮಿಕೀಟ ಔಷಧಿಗಳು ಇತ್ಯಾದಿ ಇತ್ಯಾದಿ.

ಇದಕ್ಕೆ ಬೇಕಾದ ತಜ್ಞ ಸಲಹೆ ಮತ್ತು ಸಕಾಲದಲ್ಲಿ ಬಿಡಿ ಭಾಗಗಳು ಮತ್ತು ಪಾಳಿದನ್ನ ರಿಪೇರಿ ಕೂಡಾ ಮಾಡಿಕೊಡಲಾಗುವುದು.

ರೈತರ ಅಭ್ಯುದಯವೇ ನಮ್ಮ ಮುಖ್ಯ ಧ್ಯೇಯ.

ಎಲ್ಲಾ ಸಲಹೆ ಸಹಾಯಕ್ಕಾಗಿಗೆ ನಮ್ಮಲ್ಲಿ ಯಾ ನಮ್ಮ ಅಧಿಕೃತ ವಿತರಣೆಗಾರರಲ್ಲಿ ವಿಚಾರಿಸಿರಿ.

ಮಣಿಪಾಲ ಇಂಡಸ್ಟ್ರೀಸ್ ಲಿಮಿಟೆಡ್

ಎಗ್ರಿಕಲ್ಚರಲ್ ಡಿವಿಜನ್
ಮುಕುಂದ ನಿವಾಸ, ಉಡುಪಿ. ಫೋನ್ 589

2. ಸೇಲ್ಸ್ ಡಿವಿಜನ್
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು. ಫೋನ್ 4834

3. ಸೆಂಟ್ರಲ್ ಡಿಪೋ
ಬಂದರ, ಮಂಗಳೂರು. ಫೋನ್: 5658

ಡಾ! ಟಿ. ಯಮ್. ಎ. ಪೈ
ಚೆಯರ್‌ಮೆನ್.

॥ ಶ್ರೀ ॥

—॥ ಶುಭಮಸ್ತು ॥—

ಫೋನ್ ನಂ. { ಮಂಡ್ಯ : 100
ಮನೆ : 116
ಮದ್ದೂರು . 37

ಶ್ರೀ ಶ್ರೀನಿವಾಸ ಸಾ ಮಿಲ್ಸ್, ಮಂಡ್ಯ-ಮದ್ದೂರು.

ಇವರು ಮಂಡ್ಯದ ಶ್ರೀ ಶ್ರೀನಿವಾಸ ದೇವರ ದೇವಸ್ಥಾನಕ್ಕೆ ಕಾಣಿಕೆಯಾಗಿ ಕೊಟ್ಟಿರುವ

ನವ್ಯ ರಥದಲ್ಲಿ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೮೯೦-೯೧ಕ್ಕೆ ಸರಿಯಾದ ಶ್ರೀ ಕೀಲಕನಾಮ ಸಂವತ್ಸರದ ಶ್ರಾವಣ ಬಹುಳ ನವಮಿ

ತಾರೀಕು 17—8—1968ನೇ ಶನಿವಾರ ಸಂಜೆ 6 ಗಂಟೆಗೆ ಸರಿಯಾಗಿ

ಶ್ರೀ ಶ್ರೀನಿವಾಸದೇವರ ಹೂವಿನ ಮಂಟಪೋತ್ಸವವು

ಜರಗುತ್ತದೆ.

— ಕಾರ್ಯಕ್ರಮಗಳು —

1) ಆರ್ಕೆಸ್ಟ್ರಾ— ವಿಜಯ ಮ್ಯೂಸಿಕ್ ಪಾರ್ಟಿ-'ಅಣ್ಣ ತಂಗಿ'.

2) ಮಂಗಳವಾದ್ಯ ಗೋಷ್ಠಿ— ಶ್ರೀ ಎಂ. ನಂಜಪ್ಪ ಮತ್ತು ಶ್ರೀ ಎಂ. ರಾಮದಾಸ್ - ನಾಗಸ್ವರ ವಿದ್ವಾನ್, ಬೆಂಗಳೂರು.
ಶ್ರೀ ಎಸ್. ದಾಸಪ್ಪ ಮತ್ತು ಶ್ರೀ ಎ. ಕೃಷ್ಣಮೂರ್ತಿ - ಡೋಲು ವಿದ್ವಾನ್.
ಶ್ರೀ ಎ. ಅನಂತಪ್ಪ - ನಾಗಸ್ವರ ವಿದ್ವಾನ್.

3) ಮನಮೋಹಕ ಹೂಬಾಣಗಳು— ಶ್ರೀ ಮೊಹಿಯುದ್ದೀನ್ ಷರೀಫ್ - ದಿ ಓರಿಯಂಟಲ್ ಫೈರ್ ವರ್ಕ್ಸ್, ಗಂಜಾಂ.

4) ವಿದ್ಯುದ್ದೀಪಗಳ ಅಲಂಕಾರ— ಶ್ರೀ ಮುರುಗೇಶ್ ಅಂಡ್ ಕೋ, ಮೈಸೂರು.

5) ಪರಿಮಳ ಪುಷ್ಪಾಲಂಕಾರ— ಶ್ರೀ ಜಿ. ಆರ್. ಮುನಿಸ್ವಾಮಪ್ಪ - ಶಾರದ ಫ್ಲವರ್ ಸ್ಟಾಲ್,
ಕೃಷ್ಣರಾಜೇಂದ್ರ ಮಾರ್ಕೆಟ್, ಬೆಂಗಳೂರು.

6) ಮಹಾದ್ವಾರ ಮಂಟಪದಲ್ಲಿ— ಶ್ರೀ ಶ್ರೀನಿವಾಸದೇವರ ಮೂರ್ತಿ ನಿರ್ಮಾಣ, ಶ್ರೀ ತಿಮ್ಮಯ್ಯ-ನಜರ್‌ಬಾದ್, ಮೈಸೂರು.

7) ಆರ್ಕೆಸ್ಟ್ರಾ— ಶ್ರೀ ಗುರುರಾಜ್, (ಬಿ ಎಸ್ಸಿ) ಮತ್ತು ಅವರ ಪಾರ್ಟಿ.

8) ಮಧುರ ಮಂಗಳ ವಾದ್ಯಗೋಷ್ಠಿ— ಶ್ರೀ ರುದ್ರಯ್ಯ ಅಂಡ್ ಪಾರ್ಟಿ, ಶ್ರೀರಂಗಪಟ್ಟಣ.

ಆಸ್ತಿಕ ಮಹಾಶಯರು ಸಕಾಲಕ್ಕೆ ಸರಿಯಾಗಿ ಈ ಮಹೋತ್ಸವದಲ್ಲಿ ಭಾಗವಹಿಸಿ ಶಿರಮುಡಿ, ಗಂಧ, ಪ್ರಸಾದವನ್ನು ಸ್ವೀಕರಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಸವಿನಯ ವಿನಂತಿ.

1—8—1968
ಮಂಡ್ಯ.

"ಮಹಾ ಮಂಗಳಾರತಿ"
ಮಧ್ಯಾಹ್ನ 12-15ಕ್ಕೆ ನಡೆಯುತ್ತದೆ.

ತಮ್ಮ ವಿಶ್ವಾಸಿಗಳು.
ಎಂ ಕೃಷ್ಣಪ್ಪ, ಎಂ. ಕೆ. ಶ್ರೀನಿವಾಸಯ್ಯ.

ಉತ್ಸವದ ಮಾರ್ಗ :— ಶ್ರೀ ಶ್ರೀನಿವಾಸ ದೇವಸ್ಥಾನದಿಂದ ಹೊರಟು ಶ್ರೀ ಲಕ್ಷ್ಮೀಜನಾರ್ದನಸ್ವಾಮಿ ಬೀದಿ, ಆನೇಕೆರೆ ಬೀದಿ, ಶ್ರೀರಾಮಮಂದಿರದ ಸೇತುಬಂಧಿಯಿಂದ ರೈಲ್ವೆ ಸ್ಟೇಶನ್ ಮಾರ್ಗವಾಗಿ ಜೈನರ ಬೀದಿಗೆ ಬಂದು, ಪೇಟೆಬೀದಿ ಮಾರ್ಗವಾಗಿ ತಾಲ್ಲೂಕ್ ಆಫೀಸ್ ಸರ್ಕಲ್ ಮಾರ್ಗವಾಗಿ ವಾಪಸ್ ದೇವಸ್ಥಾನಕ್ಕೆ ತಲುಪುವುದು. ಅನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ.

ರಾಷ್ಟ್ರೀಯ ಧ್ವಜ, ರಾಷ್ಟ್ರೀಯ ಚಿಹ್ನೆ, ರಾಷ್ಟ್ರೀಯ ಗೀತ ಇತ್ಯಾದಿ ಸಾರ್ವಜನಿಕ ಸ್ಮರಣಕ್ಕೆ ಕೇಂದ್ರವೆನಿಸುವಂತಹ ಚಿಹ್ನೆಗಳನ್ನು ಸಿಕ್ಕ ಸಿಕ್ಕ ಹಾಗೆ ಉಪಯೋಗಿಸಬಾರದೆಂಬುದು ವಿಧಿ.

ಇಂತಹ ವಿಧಿ ಬರುವುದಕ್ಕೆ ಮೊದಲು, ಸ್ವಾತಂತ್ರ್ಯ ಬಂದ ಒಂಗರಡು ವರ್ಷಗಳಲ್ಲಿ ನೋಡಬೇಕಿತ್ತು. ಎಲ್ಲಿ ನೋಡಿದರೂ ಅಶೋಕ ಚಕ್ರ, ಸುಂದರ ಬಣ್ಣಗಳ ಅಲಂಕಾರ. ಗೂಡ ಯೂವ ವ್ಯಾಪಾರಸಂಸ್ಥೆಗಳ ಮೇಲೂ, ಹೆಂಗಸರ ಸೀರೆ ಬಾರ್ಡರ್, ಕೊಡೆ, ಮಕ್ಕಳ ಆಟದ ಸಾಮಾನುಗಳಲ್ಲಿ ರಾಷ್ಟ್ರೀಯ ಚಿಹ್ನೆಗಳು, ಗುರುತುಗಳು.

ಇದನ್ನೆಲ್ಲ ನೋಡಿಯೇ ಭಾರತ ಸರಕಾರವು ಅಪ್ಪುಗಳನ್ನು ಕುರಿತು ಕಠಿಣ ಕಾನೂನುಮಾಡಿ ಬಂದೋಬಸ್ತು ಮಾಡಿತು. ಇದನ್ನೇಕೆ ಜ್ಞಾಪಿಸಿಕೊಳ್ಳಬೇಕಾಯಿತೆಂದರೆ, ದೇವರ ವಿಷಯದಲ್ಲಿ ಕೂಡಾ ದೇಶಹಿಗೆಯೇ ಆಗಿದೆ ಎಂತಲೇ.

ದೇವರ ವಿಷಯ ಕೂಡಾ ಸಾರ್ವಜನಿಕ ಸಂಬಂಧವುಳ್ಳದ್ದೇ. ಪ್ರಜೆಗಳಲ್ಲಿ ಮತಗಳೂ ಪಂಥಗಳೂ ಬೇರೆ ಬೇರೆ ಇದ್ದರೂ ಎಲ್ಲಾ ಮತಗಳೂ ದೇವರನ್ನು ಸಾರುತ್ತವೆ; ಒಪ್ಪುತ್ತವೆ; ನಂಬುತ್ತವೆ; ನಂಬಬೇಕೆನ್ನುತ್ತವೆ.

ದೇವರನ್ನು ನಂಬದ ನಾಸ್ತಿಕ ಪಂಥವೂ ಇದೆ ಅನ್ನಿ. ಅದಕ್ಕೂ ಶಾಸ್ತ್ರವಿದೆ, ವಿಜ್ಞಾನವಿದೆ. ಅಸ್ತಿಕತ್ವದ ಹಾಗೆಯೇ ಪ್ರಾಚೀನ ಕಾಲದಿಂದ ಇಡೆದ. ಬಂದಿರುವ ಆಯುಷ್ಯವೂ ಅದಕ್ಕಿದೆ. ನಾಸ್ತಿಕತ್ವ ವಿದೆಯಂತಲೇ ಆಸ್ತಿಕತ್ವವೂ ಇದೆ; ಅದಕ್ಕಿಂತಲೂ ಬಲವಾಗಿದೆ.

ಆದರೆ ಇಷ್ಟು ನಾಸ್ತಿಕತ್ವದ ಗೊಡವೆ ಬೇಡ, ಅದು ಜ್ಞಾನಿಗಳು ವಿಜ್ಞಾನಿಗಳ ಮಾತು. ಸಾಮಾನ್ಯವಾಗಿ ಎಲ್ಲರೂ ಆಸ್ತಿಕರೇ. ದೇವರನ್ನು ನಂಬುವವರೇ. ಅವರನ್ನು ಕುರಿತೇ ಈಗ ಸ್ವಲ್ಪ ಹೇಳುವುದು.

ನಂಬುವ ದೇವರನ್ನು ಒಳ್ಳೇ ಗೌರವದಿಂದ, ಭಯ ಭಕ್ತಿಯಿಂದ ನಂಬುವುದು ಒಳ್ಳೆಯದಲ್ಲವೆ? ಇಲ್ಲದಿದ್ದರೆ ದೇವತ್ವದ ಮರ್ಯಾದೆ ಹೇಗೆ ಉಳಿದೀತು?

ಅದಕ್ಕಾಗಿಯೇ ನಮ್ಮ ಪೂರ್ವಿಕರು ಕೆಲ್ಲ ನಿಬಂಧನೆಗಳನ್ನು ವಿಧಿಸಿದ್ದಾರೆ. ಮನೆಯಲ್ಲಿ ಒಂದು ದೇವರ ಕೂಣೆ, ಅಲ್ಲಿ ಮಂದಾಸನ, ಇದರೊಳಗೆ ಪೀಠಗಳು, ವಿಗ್ರಹಗಳು. ಅಲ್ಲಿ ನಿಯಮಿತ ವೇಳೆಯಲ್ಲಿ, ಸ್ನಾನ, ಶುಚಿ, ಶುಭ್ರತೆಯಲ್ಲಿ, ನಿಯಮಿತ ಪದ್ಧತಿಯಲ್ಲಿ ಸೇವೆ ಮಾಡಿಸಿಬೇಕೆಂಬುದು ವಿಧಿ. ವಿಧಿಯ ಕ್ರಮಗಳು ಬೇರೆ ಬೇರೆ ಇದ್ದರೂ, ಎಲ್ಲಾ ಮತಗಳಲ್ಲಿಯೂ ದೇವರ ಸೇವೆಗೆ ಒಂದು ಗೌರವದ ವಿಧಿಯುಂಟು.

ಹೆಚ್ಚಿನ ವಿಶೇಷಗಳಿಗೆ ದೇವಾಲಯಗಳಿವೆ; ಅಲ್ಲಿಯೂ ವಿಧಿಗಳಿವೆ. ಹಬ್ಬ ಹಾಡಿ ಮೊದಲಾದ ವಿಶೇಷ ಪರ್ವದಿನ ಕೂಡ ಇವೆ.

ಹಬ್ಬ ಹಾಡಿಗಳಲ್ಲಿ ಅಧಿಕಾರಿಗಳಿಗೆಲ್ಲ ರಜೆ ಕೊಡುವುದೇಕೆ? ಅಧಿಕಾರಿಗಳಲ್ಲಿ ದೇವರ ಗೊಡವೆ ಬರಬಾರದು ಎಂದು ತಾನೆ?

ಈಗಿನ ಜನರು ಹೇಗಾಗಿದ್ದಾರೆಂದರೆ, ಅತ್ತ ನಾಸ್ತಿಕರೂ ಅಲ್ಲ, ಇತ್ತ ಆಸ್ತಿಕರೂ ಅಲ್ಲ, ಒಂದು ಗಂಟೆ ಹೊತ್ತು ಕೂಡಾ, ಚಿತ್ತೈಕಾಗ್ರತೆಯಿಂದ ಕುಳಿತು ದೇವರ ಸೇವೆ ಮಾಡುವವರಿಲ್ಲ. ಅಂತಹ ಕೊರತೆಯ ಪರಿಹಾರಕ್ಕಾಗಿಯೋ, ತಾವೂ ಆಸ್ತಿಕರೆಂಬುದನ್ನು ತೋರಿಸಲಿಕ್ಕಾಗಿಯೋ ತಪ್ಪು ಮಾಡುತ್ತಾ ಇರುತ್ತೇನೆ, ಸರಿ ಪಡಿಸುತ್ತಾ ಇರು ಎಂಬುದಕ್ಕಾಗಿಯೋ ದೇವರನ್ನು ತಮ್ಮ ಸಂಗಡವೇ ಇಟ್ಟುಕೊಂಡ ಹಾಗೆ ವರ್ತಿಸುತ್ತಾರೆ. ಮನೆಯಲ್ಲಿ. ಅವಸರದ ಸೇವೆ; ಕೆಲಸಕ್ಕೆ ಹೊರಡುವಾಗೊಂದು ನಮಸ್ಕಾರ. ಆಫೀಸಿನಲ್ಲಿ ವೇಜಿನ ಅರೆಯಲ್ಲಿಯೂ ದೇವರ ಪಟ. ಆಗಾಗ ಅದನ್ನು ಮುಟ್ಟಿ ಮುಟ್ಟಿ ಕಣ್ಣಿಗೊತ್ತಿಕೊಳ್ಳುವದು. ಶುಕ್ರವಾರ, ಶನಿವಾರಗಳಲ್ಲಿ ಆಫೀಸಿನಲ್ಲಿಯೂ ಒಂದು ಗುಂಪು ಮಾಡಿಕೊಂಡು, ಕ್ರಮ, ಪದ್ಧತಿಯೊಪ್ಪುದೂ ಇಲ್ಲದೆ ಪೂಜೆ ಮಾಡುವುದು. ಇದಕ್ಕೆ ಇತರರನ್ನು ಕೂಡಾ ಒಂದು ಬಗೆಯ ಮೌನಸಿಕ ಒತ್ತಾಯಕ್ಕೆ ಗುರಿಪಡಿಸುವುದು. ದಾಕ್ಷಿಣ್ಯಕ್ಕೆ ಒಳಗಾಗಿಸುವುದು....

ಇದನ್ನೆಲ್ಲಾ ದೈವಭಕ್ತಿ ಎನ್ನಲಾಗುವುದಿಲ್ಲ. ಹಾಗಾದರೇನು? ಕುಶಾಲೆ?

ಭಕ್ತಿ ವಿಪರೀತವಾದರೆ ಹುಚ್ಚಾಗುವುದುಂಟು. ಅ ಬಗೆಯ ವಿಪರೀತ ಹುಚ್ಚಿನವರ ರೋಗಿಗಳೂ ಇದ್ದಾರೆ. ಅವರು ತಮ್ಮ ತಲೆದಿಂಬಿನಡಿಯಲ್ಲಿರುವ ದೇವರ ಪಟವನ್ನು ಆಗಾಗ ಕಣ್ಣಿಗೊತ್ತಿಕೊಳ್ಳುತ್ತ, ತಾವು ತಿನ್ನುವ ಪ್ರತಿ ತಿಂಡಿಗಳನ್ನು ಆ ಪಟಕ್ಕೆ ತಾಗಿಸುತ್ತ ಹಣವನ್ನೂ ನೋಟುಗಳನ್ನೂ ದೇವರ ಪಾದದಲ್ಲಿ ಇಟ್ಟೆತ್ತಿಗೆಗೆಯುತ್ತ ಭಕ್ತಿಯ ಮಾಡಿಕೊಂಡಿರುವ ಸಂಸಾರಿಗರು ಬಹಳ ಮಂದಿ ಈ ಭಾರತ ಭೂಮಿಯಲ್ಲಿದ್ದಾರೆ.

(ಇಪ್ಪತ್ತಂಟನೇ ಪುಟ ನೋಡಿರಿ)

ಶ್ರೀ ಎಂ. ರಂಗರಾವ್.

ದೇವರ ಗೌರವ

ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುವುದು ರಾಷ್ಟ್ರೀಯರ ಕರ್ತವ್ಯವಾದರೆ, ದೇವರಿಗೆ ಗೌರವವರ್ಪಿಸುವುದು ಆಸ್ತಿಕರ ಧರ್ಮ. ರಾಷ್ಟ್ರಧ್ವಜಕ್ಕೆ ಅಪಮಾನ ಮಾಡದಂತೆ ಕಾನೂನು ಕಟ್ಟಳೆ ಇದೆ. ದೇವರ ಗೌರವಾರ್ಪಣೆಗೂ ಒಂದು ಕ್ರಮಬಂಧನೆ ಬೇಡವೆ?



for efficiency speed economy

KHODAY RIBBON CARBON AND ALLIED INDUSTRIES

10 - 1ST MAIN ROAD - GANDHI NAGAR - BANGALORE - 9

ಕೃಷ್ಣಿ ನೋಡಿದಾಗ ಅಲ್ಲಿ ನಮ್ಮ ಪ್ರತಿಬಿಂಬ ಕಾಣುತ್ತದೆ. ಧರ್ಮ ವೈಭವ-ವಾಯಿಕೆ ಅಂಟಿಕೊಂಡ ಕಲೆ-ಕೊಳೆಗಳನ್ನು ಅಲ್ಲಿ ನೋಡಲು ಸುಲಭವಾಗಿ ಸಾಧ್ಯವಾಗುತ್ತದೆ. ಹಾಗೆಯೇ ಪ್ರಜಾರಾಜ್ಯದಲ್ಲಿ ಪ್ರಜೆಯ ಮನೋಧರ್ಮ, ಮತ್ತು—ಪ್ರಜೆ—ಪ್ರಜ್ಞೆಗಳ ವಿಕಾಸ ಹೇಗಾಗಿದೆ, ಹೇಗಾಗಬೇಕು ಎಂಬುದನ್ನು ಅಲ್ಲಿಯ ಸರಕಾರ ತೋರಿಸುತ್ತದೆ. ಪ್ರಜೆಯ ಪ್ರಜ್ಞಾ ಪ್ರತಿಬಿಂಬವಾಗಿ ಸರಕಾರ ರೂಪಗೊಳ್ಳುವುದು ಪ್ರಜಾತಂತ್ರದಲ್ಲಿಯ ವಿಶಿಷ್ಟ ವ್ಯವಸ್ಥೆಯಾಗಿದೆ.

ದೇಶದ ಆಡಳಿತ ಪದ್ಧತಿಯಲ್ಲಿ ಈ ಪ್ರಜಾಪ್ರಭುತ್ವವೇ ಸರ್ವ ಶ್ರೇಷ್ಠವೆಂದು ಎಣಿಸಲಾಗಿದೆ. ಹಿಂದೆ ಬೇರೆ ಬೇರೆ ಪದ್ಧತಿಗಳಲ್ಲಿ ರಾಜನವು ನಡೆದರೂ ಪ್ರಜಾಪ್ರಭುತ್ವದಷ್ಟು ಪ್ರಭುತ್ವ ಗಳಿಸಿದ ಪದ್ಧತಿ ಬೇರೊಂದು ಇರಲಾರದು. ರಾಜ ಪ್ರಭುತ್ವವಿದ್ದಾಗಲೂ ರಾಜ್ಯದ ಯೋಗಕ್ಷೇಮಗಳನ್ನು ಸ್ವತಃ ರಾಜನೇ ನಡೆಸುವದನ್ನು 'ಪ್ರಜಾನು ರಂಜನಾದ್ರಾಜಾ' ಎಂಬುದನ್ನು ಸಾರ್ಥಕಗೊಳಿಸುವದು ದೇಶದ ಇತಿಹಾಸದಲ್ಲಿ ಬಾರದಷ್ಟಿದೆ ಸಂದರ್ಭಗಳೂ ಇದ್ದವು. ಹೀಗಿಲ್ಲದಿದ್ದರೆ ರಾಜ್ಯದ ಸಂಪತ್ತು ಯಾರದೋ ಸುಖ-ಸಾಕರ್ಯದ ಸಾಧನವಾಗಿ ಪ್ರಜೆಗೂ ಅಂದಿನ ಪ್ರಭುವಿಗೂ ಸರಿಯಾದ ಸಂಬಂಧಗಳು ಇಲ್ಲದಂತಾಗಿ ಬಿಡುತ್ತಿದ್ದವು. ರಾಜರನ್ನು ದೇವತಾನ್ನಾಗಿ ತಿಳಿಯುವುದು ಈ ಕಾರಣಕ್ಕಾಗಿದೆ ಇತ್ತು. ಆದರೆ ಇಂದಿನ ಪರಿಸ್ಥಿತಿಗೆ ಇಂದಿನ ಪ್ರಪಂಚಕ್ಕೆ ಬೇಕಾದುವ ರೀತಿ ನೀತಿಗಳಿಗಾಗಿ ಪ್ರಜಾತಂತ್ರವೇ ಸರ್ವಮಾನ್ಯ ಪದ್ಧತಿಯಾದ ಕಾರಣಕ್ಕಾಗಿ ಈ ಪ್ರಜಾಪ್ರಭುತ್ವ ಪದ್ಧತಿ ಪ್ರಪಂಚದ ಅನೇಕ ರಾಷ್ಟ್ರಗಳನ್ನು ಬೆಳೆದು ಕೊಂಡಿರುತ್ತದೆ

ಶ್ರೀ ವಿಶ್ವೇಶ್ವರ ಶರ್ಮಾ ತದ್ದಲಸೆ

ಪ್ರಜಾ ತಂತ್ರದಲ್ಲಿರಬೇಕಾದ

ಪ್ರಜೆ ಮತ್ತು ಪ್ರಜ್ಞೆ

ನಮ್ಮದು ಪ್ರಜಾತಂತ್ರ. ಇಲ್ಲಿ ಪ್ರಜೆಗಳೇನೊ ಇದ್ದಾರೆ. ಆದರೆ ಪ್ರಜ್ಞೆಗೆ ಮಾತ್ರ ಬರಗಾಲ. ರಾಷ್ಟ್ರೀಯ ಪ್ರಜ್ಞೆ ಕೆಲವರಿಗೆ ಮಾತ್ರ ಮೀಸಲಿರುವ ಗಂಟಲ್ಲ. ಪ್ರಜಾತಂತ್ರದ ಪ್ರತಿ ಪ್ರಜೆಯಲ್ಲೂ ಅತ್ಯವಶ್ಯವಾಗಿರಬೇಕಾದ ಗುಣವದು. ಪ್ರಜ್ಞಾವಂತ ಪ್ರಜೆಗಳಿರುವ ಪ್ರಜಾತಂತ್ರವೇ ನೈಜ ಸಾಮ್ರಾಜ್ಯ.

ಹಿಂದೆ ಪ್ರಜಾಪ್ರಭುತ್ವವಿರದಿದ್ದಾಗಲೂ ಪ್ರಜೆಯ ಅಭಿಪ್ರಾಯವನ್ನು ಸಂದರ್ಭ ಸ್ವೀಕರಿಸುವ ಪರಿವಾರವಿತ್ತು. ಪ್ರಜೆಯ ಸುಖ-ದುಃಖಗಳ ವಿಚಾರವನ್ನು ಅಂದಿನ ರಾಜರು ಮಾಡುತ್ತಿದ್ದರು, ಮತ್ತು ಮಾಡಬೇಕಾದ ಸುಧಾರಣೆಗಳನ್ನೂ ಪ್ರಜೆಯ ಅಭಿಪ್ರಾಯ ಪಡೆದು ಅದನ್ನು ನಿರ್ವಹಿಸುತ್ತಿದ್ದರು. ಆದರೆ ಇಂದಿನಂತಹ ಪ್ರಜಾತಂತ್ರವಿರಲಿಲ್ಲವಾಗಿತ್ತು. ಆದರೂ ಪ್ರಜೆಯ ಸಂಸ್ಕೃತಿ ಮನೋಧರ್ಮದ ಬೇಕು-ಬಯಕೆಗಳು ಸಫಲವಾಗುತ್ತಿದ್ದವು. ವೇದದಲ್ಲಿ ಒಂದು ಕಥೆ ಬರುತ್ತದೆ, "ರಾಜ್ಯಕ್ಕೆ ರಾಜನೊಬ್ಬ ಬೇಕಾದಾಗ ಮೇಧವೆಂಬ ವ್ಯಕ್ತಿಯನ್ನು ಅಂದಿನ ಪ್ರಮುಖರೆಲ್ಲಾ ಸೇರಿ, ಅರಿಸಿ ರಾಜನನ್ನಾಗಿ ಮಾಡಿದರು. ಅನಂತರ ಅವನ ಆಡಳಿತ ಜನಪ್ರಿಯತೆ ಕಳೆದುಕೊಂಡಾಗ, ಮನಸ್ವಿಯಾಗಿ ವರ್ತಿಸಿದಾಗ ಅದೇ ಜನರೇ ಅವನನ್ನು ಪದಚ್ಯುತಗೊಳಿಸಿದರು." ಈ ಕಥೆಗು ಆಧಾರದ ಮೇಲಿಂದ ಪ್ರಜಾಪ್ರಭುತ್ವದ ಪರಂಪರೆ ಹಿಂದೆಯೂ ಇತ್ತೆಂಬುದು ಸ್ಪಷ್ಟವಾಗುತ್ತದೆ.

ರಾಮರಾಜ್ಯದ ಇತಿಹಾಸವೂ ಹೀಗೆಯೇ. ಇತಿಹಾಸದ ಪರಿಚಯವಿಲ್ಲದಿದ್ದವರಿಗೂ ಸಹ ರಾಮರಾಜ್ಯವೆಂದಾಗ ಏನೋ ಸುಖದ ಕಲ್ಪನೆ ಮೂಡಿ ಬರುತ್ತದೆ. ಅಲ್ಲಿಯೂ ಪ್ರಜೆಯ ವಿಚಾರಕ್ಕೆ ತಕ್ಕ ಗೌರವಾದರಗಳು ಸಿಗುತ್ತಿದ್ದುವಲ್ಲದೇ ಸತ್ಯ, ನ್ಯಾಯ, ಧರ್ಮಗಳು ಎಲ್ಲಿಯೂ ಚ್ಯುತಿಯಾಗದಂತೆ ನೋಡಿಕೊಳ್ಳುವುದಲ್ಲದೇ ಯಾವ ವರ್ಗಕ್ಕೂ ಶೋಷಣೆ ಅನ್ಯಾಯವಾಗದಂತೆ ಆಡಳಿತ ನಡೆಸುತ್ತಿರುವ ರೀತಿ-ನೀತಿಗಳಿಂದಾಗಿಯೇ ಆ ರಾಮರಾಜ್ಯದ ಹೆಸರು ಸ್ಥಿರವಾಗಿ ಉಳಿಯುವಂತಾಯಿತು. ಇದು ಪ್ರಜಾಪ್ರಭುತ್ವದ ಆದರ್ಶವನ್ನು ಸಾಧಿಸಿದ ರಾಜ ಪ್ರಭುತ್ವ.

ಈ ಪ್ರಜಾಪ್ರಭುತ್ವದ ಆಚರಣೆ-ಅನುಷ್ಠಾನಗಳಿಂದ ದೇಶಕ್ಕೆ ಎಷ್ಟು ಭದ್ರ ಭವಿಷ್ಯವಿದೆಯೆಂದು ತಿಳಿಯುತ್ತೇವೆಯೋ ಹಾಗೆಯೇ ಅದನ್ನು ಅಯೋಗ್ಯ ರೀತಿಯಿಂದ ಬಳಸಿಕೊಂಡರೆ ಅಷ್ಟೇ ಗಂಡಾಂತರವೂ ಇದೆ. ಪ್ರಜೆಯೇ ಪ್ರಭುವಾಗುವ, ಪ್ರಜೆಯಿಂದ ಪ್ರಭುವೆನ್ನಿಸಿಕೊಳ್ಳುವ ಈ ಸಂಪ್ರದಾಯದಲ್ಲಿ ಧರ್ಮ ವಿಚಾರವೇನಾದರೂ ಹದಗೆಟ್ಟರೆ ಅಲ್ಲಿ ನಿರ್ಮಾಣವಾಗುವ—"ಪ್ರಭ.ಶಕ್ತಿ" ಎಂಥದಾಗಬಹುದು? ಯಾವುದಾದರೂ ಸ್ವಾರ್ಥಲಾಲಸಿಗಳು, ಅಧಿಕಾರಪ್ರಿಯರು ಏನಾದರೂ ಆಶೆ-ಆಮಿಷ ತೋರಿಸಿ ನಮ್ಮ ಪ್ರಭುಶಕ್ತಿ ಸ್ವಜನುವ ಆಂಶವನ್ನು, ಆಚಾರವನ್ನು ತಮ್ಮ ಪ್ರಚಾರದಿಂದ ಬಳಸಿಕೊಂಡರೆ ಅದರಿಂದ ನಮಗೂ—ದೇಶಕ್ಕೂ ಅಹಿತ ತಂದಂತಾಗುತ್ತದೆ. ಈ ದಿಸೆಯಲ್ಲಿ ನಮ್ಮ ವಿಚಾರ, ಧೀರ್ಧಾರ ಪರಿಪೂರ್ಣವಾಗದಿದ್ದರೆ ಪ್ರಜಾಪ್ರಭುತ್ವದ ಸಾಧನೆ ಧ್ಯಾನ ಸಿದ್ಧಿಯನ್ನೂ ಸಮೃದ್ಧಿಯನ್ನೂ ತರಲಾರದು.

ಹಿಂದೆ ರಾಜ್ಯಕ್ರಾಂತಿಯ ಸಂದರ್ಭಗಳನ್ನೂ ಅವಲೋಕಿಸಿದರೆ ಅವುಗಳಲ್ಲಿ ಬಹುಪಾಲು ಅಧಿಕಾರ ದಾಹದಿಂದಲೋ-ಇನ್ನಾವುದೋ ಸ್ವಾರ್ಥಸಾಧನೆಯಿಂದಲೋ ನಡೆದಿರುವುದು ಕಂಡುಬರುತ್ತದೆ. ಈ ಅಧಿಕಾರ ದಾಹ ಮನುಷ್ಯಕ್ಕಿಂತಲೂ ಮಿಗಿಲಾದ ಅಪಾಯಕಾರಿಯೇ ಸರಿ! ಒಮ್ಮೆ ಅದರ ರುಚಿ ಕಂಡವರು ಮತ್ತೆ ಮತ್ತೆ ಅದನ್ನು ಬಟ್ಟೆ ಇಳಿಸಿ ಬಯಸುತ್ತಲೇ ಇರುತ್ತಾರೆ. ಯಾವಾಗಲೂ ಅದು ಸಾಕೆಂದೆನುವುದಿಲ್ಲ. ಈ ಕಾರಣದಿಂದಾಗಿ ಈ ಅಧಿಕಾರದ ಮತ್ತಿಗೇ ದಾರಿಕೆಯನ್ನು ಭದ್ರವಾಗಿ ಹಿಡಿಯಲೂ ಕೆಲವು ಅಗಾಗ ದೇಶದಲ್ಲಿ ಕ್ರಾಂತಿಗಳು ಆಗಿವೆ. ಈ ಕ್ರಾಂತಿಯಲ್ಲಿ ಬಲವಂತನದೇ ದೇಶವಾಗುತ್ತದೆ. ಅವನ ತನಗೆ ಬೇಕಾದ ಹಾಗೆ ದೇಶವನ್ನು

(ಇಪ್ಪತ್ತೇಳನೇ ಪುಟ ನೋಡಿರಿ)

"BICCO" FOOD PRODUCTS

Make Day-to-day Life.

Sweeter and Convenient.

Range of Products:- Squashes, Crushes, Syrups, Canned Pineapple and Mango Slices, Pineapple Juice, Mango Pulp, Fruit Cocktail, Pickles, Ginger Preserve, Sweets and Toffees etc.

Mfrs:-

BHARATH INDUSTRIAL AND CANNING CO. LTD.

P. O. KAUP, S. KANARA.

Gram. "BICCO" Phone: 29

SALES DEPOT: Bhavanthi Street, Mangalore.

Phone. 4306

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 67/1968

ವಾದಿ— ಮಹಮ್ಮದ ಸಾಹೇಬ,

ಪ್ರತಿವಾದಿರು— ಹಿರಿಯಂಡ ಅಕ್ಕಾಲಿ ಕುಟುಂಬ

1.10.17.18ನೆ ಪ್ರತಿವಾದಿಗೆ ತಿಳಿಸುವುದೇನೆಂದರೆ,

ಈ ಪ್ರ. ಸ.ಬ್ಬಂಡ ಅಕ್ಕಾಲಿ, 10ನೆ ಪ್ರ. ಚಂದ್ರ ಅಕ್ಕಾಲಿ, ಮಹಾಬಲ ಅಕ್ಕಾಲಿ ಮಕ್ಕಳು.

11ನೆ ಪ್ರ. ರತ್ನಾಕರ ಅಕ್ಕಾಲಿ, 18 ನೆ ಪ್ರ. ಮಾಧವ ಅಕ್ಕಾಲಿ, ರಾಮಪ್ಪ ಅಕ್ಕಾಲಿ ಮಕ್ಕಳು.

ಕುಂದಾಪುರ ತಾಲ್ಲೂ ನಂಬ್ರ 11ನೆ ಉಳ್ಳೂರು ಗ್ರಾಮದವರು.

ವಾದಿಯವರಿಗೆ ಬಾಕಿ ಬಗ್ಗೆ ಮೇಲ್ಕಂಡ ದಾವೆಯನ್ನು ಕಂಡು ಮೇಲೆ ದಾಕಲು ಮಾಡಿದ್ದಾನೆ. ಸದ್ರಿ ದಾವೆಯು ತಾ. 16.9.68ಕ್ಕೆ ಕಛೇರಿಗೆ ಬರುವುದರಿಂದ ಆ ಬಗ್ಗೆ ಕಂಡು ಕಡೆಯಿಂದ ಉದಾಹರಣೆ ದಾಕಲು ಮಾಡುವದು ಇದ್ದ ಪಕ್ಷದಲ್ಲಿ ಸದ್ರಿ ತಾರೀಖು ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟ್‌ನಲ್ಲಿ ಹಾಜ್ರಾಗಿ ಜ್ಞಾಪನೆ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಹಿಂದು ಗೈರುಹಾಜರಿಯಲ್ಲಿ ಸದ್ರಿ ದಾವೆಯ ಕೇಳಿ ಕೈಗೆಲು ಮಾಡೋಣ.ದೀರ್ಘಕಾಲ ಮೂಲಕ ತಿಳಿಸೋಣಾಗುತ್ತದೆ.

M. Madhava Rao

Advocate for Plff.

ಕಛೇರಿ 6.8.68 ದೊಸ್ತಾಂ; ಕುಂದಾಪುರ

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

S.C. No. 70/1968.

P.N. ನಂಜಿಂಗ ರಾವ್ ... ವಾದಿ

ಮತ್ತು

ಬಾಬ್ಲಿ ಸೋಜ-ಮೋತಿ ಸೋಜರ ಮಗ, ಉಡುಪಿ ತಾಲ್ಲೂ ಶಿವಳ್ಳಿ ಗ್ರಾಮದ ಪೆಂಪಳ್ಳಿ—ಪ್ರತಿವಾದಿ

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿ ಮೇಲೆ ಪ್ರತಿವಾದಿಯು ಅನುಭವಿಸಿ ಬರುವ ಜಾಲಗೆಣೆ ಆಸ್ತಿ ಬಾಬ್ತು ಬಾಡಕ್ಕೆ ಕೊಟ್ಟಿ ಸಂವತ್ಸರದ ಗೇಣಿ ಬಗ್ಗೆ ವಾದಿಯ ಮೇಲ್ಕಂಡ ದಾವೆ ದಾಕಲು ಮಾಡಿದ್ದು ಆ ಕುರಿತು ಪ್ರತಿವಾದಿಗೇನಾದರೂ ಆಕ್ಷೇಪಣೆಯಿರುವ ಸಂದರ್ಭದಲ್ಲಿ ಅದನ್ನು ತಾ. 23-8-1968ರಲ್ಲಿ ಹಾಜ್ರಾಗಿ ಜ್ಞಾಪೀಯಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P.N. Madhava Rao,

Vakil for Plaintiff.

ಉಡುಪಿ, 5—8—68.

ಶ್ರೀ ಶಿವಮುಂಜೆ ಪಠಾರಿ.

ಉಕ್ಕಿನ ಮನುಷ್ಯನ ನೆನೆವು

ಭಾರತೀಯ ಇತಿಹಾಸದಲ್ಲಿ ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯಿ ಪಟೇಲರದು ಅತ್ಯಪೂರ್ವ ವ್ಯಕ್ತಿತ್ವ. ದೇಶದ ಇಂದಿನ (ದು)ಸ್ಥಿತಿಯನ್ನು ಕಾಣುವಾಗ ಸರ್ದಾರರ ದೃಢ ಕರೋರ ನಲುಮೆಯಿಂದ ತುಂಬಿದ ಕುಸುಮ ಕೋಮಲ ವ್ಯಕ್ತಿತ್ವ ಅವಶ್ಯ ನೆನಪಿಗೆ ಬರುವುದು.



ಲೇಖಕರು

++

"ಸಾವಿರ ಶತ್ರುಗಳು ಪರವಾಗಿಲ್ಲ— ಸಾವಿರದ ರಕ್ಷಕ ಸಾಯುವಾರದು" ಎಂದು ಒಂದು ಲೋಕೋಕ್ತಿಯಿದೆ. ಸರದಾರ್‌ವಲ್ಲಭಭಾಯಿ ಪಟೇಲರ ಮರಣದ ಬಳಿಕ ಈ ದೇಶವು ಅಪಾಯದ ಸುಳಿಯಲ್ಲಿ ಸಿಲುಕಿದಾಗಲೆಲ್ಲ, ಜನ ಸರದಾರರನ್ನು ನೆನಪು ಮಾಡಿಕೊಂಡಿದೆ. ದೇಶವು ಗಂಡಾಂತರವನ್ನು ಎದುರಿಸಿದಾಗಲೆಲ್ಲ, ಧೈರ್ಯದಿಂದ ಹೋರಾಡಿ, ದೇಶವನ್ನು ಹಲವಾರು ಅಪಾಯಗಳಿಂದ ಅವರು ಪಾರು ಮಾಡಿದ್ದರು. ಚೀನ ಮತ್ತು ಪಾಕಿಸ್ತಾನವನ್ನು ಸರದಾರರು ಆರಂಭದಿಂದಲೇ ಸರಿದೂಗಿ ಅರ್ಥಮಾಡಿ ಕೊಂಡಿದ್ದರು. ತಿಬೇಟಿನ ಒಳಜಗಳವನ್ನು — "ಅದು ಚೀನದ ಮನೆಯೊಳಗಣ ವಿಷಯ." ಎಂದು ಅಂದು ಭಾರತ ಸರಕಾರ ಮುಖ ತಿರುವಿಕೊಂಡಂದು, ದಿಲ್ಲಿಯ ರಾಮಲೀಲಾ ಮೈದಾನದಲ್ಲಿ— "ತನ್ನ ಈ ರಾಜಧಾನಿಗಾಗಿ ಭಾರತ ಮುಂದೆ ಬಹಿ.ದೊಡ್ಡ ಬೆಲೆಯನ್ನು ತೆರಬೇಕಾದೀತು" ಎಂದು ಅವರು ಉದ್ಗರಿಸಿದ್ದರು.

ಆ ಹಿರಿಯ ದೂರದರ್ಶಿ ರಾಜನೀತಿಜ್ಞನ ಭವಿಷ್ಯವಾಣಿ ೧೯೬೨ರಲ್ಲಿ ಸತ್ಯವಾದುದನ್ನು ನಾವು ಕಂಡಿದ್ದೇವೆ. ಆ ಸಮಯದಲ್ಲಿ ಈ ದೇಶದ ಜನ ಹೆಜ್ಜೆಹೆಜ್ಜೆಗೆ ಅವರನ್ನು ನೆನಪು ಮಾಡಿಕೊಂಡರು. ಕಾಶ್ಮೀರದ ಆಕ್ರಮಿತ ಭಾಗವನ್ನು ಅಂದೇ ಅವರ ಮಾತಿನಂತೆ ವಶಪಡಿಸಿಕೊಳ್ಳುತ್ತಿದ್ದಲ್ಲಿ ಇಂದು ಅದು ಭಾರತಕ್ಕೆ "ಕೊರಳಲ್ಲಿ ಸಿಕ್ಕಿದ ಮುಳ್ಳು" ಎಂದು ಅನಿಸುತ್ತಿರಲಿಲ್ಲ. ಶೇಖ್ ಅಬ್ದುಲ್ಲಾ ಅವರ ಮೇಲಾಗಲಿ, ಪಾಕಿಸ್ತಾನದ ಬಗೆಗಾಗಲಿ ಅವರು ಎಂದೂ ಭಯಗೆಯಷ್ಟಿಟ್ಟವರಲ್ಲ. 'ಶತ್ರುವಿಗೆ ಚೇತರಿಸಿಕೊಳ್ಳಲು ಅವಕಾಶವೀಯುವುದೆಂದರೆ ನಮಗೆ ನಾವೇ ನೋವುಮಾಡಿಕೊಂಡಂತೆ; ಶತ್ರುವನ್ನು ಮೊಳಕೆಯಲ್ಲೇ ಚಿವುಟಿ ಬಿಡಬೇಕು" ಎಂದು ಅವರು ಅನ್ನುತ್ತಿದ್ದರು. ರಣಭೂಮಿಯಲ್ಲಿ ಖಡ್ಗದಮಾತು ಮಾತ್ರ ಅರ್ಥವಾಗುತ್ತದೆ. ಅಲ್ಲಿ ಶಾಯದೆ ಕಾನೂನುಗಳನ್ನು ಆಡುವ ಮಾಡುವ ಅಗತ್ಯವಿಲ್ಲ, ಅದು ತಾನಾಗಿಯೇ ಪರ್ಯವಸಾನವಾಗುವುದು. ಯುದ್ಧ ವಿರಾಮ ರೇಖೆಯನ್ನು ಕೂಡ, ನಿರ್ದಿಷ್ಟ ಗುರಿ ತಲುಪಿದ ನಂತರ ಎಳೆಯಬೇಕಾದುದೇ ವಿನಃ, ಯುದ್ಧ ನಡೆಯುತ್ತಿರುವಾಗ ಅಲ್ಲ. ಅರ್ಧದಲ್ಲಿ ತಡೆಹಿಡಿಯುವುದು, ಯುದ್ಧದ ಬಗ್ಗೆ ಬಾರಿ ಬಾರಿ ಎಚ್ಚರಿಸುವುದೂ ಮುಂತಾದ ಶತ್ರುಗಳು ಸರದಾರರ ಬತ್ತಳಿಕೆಯಲ್ಲಿ ಇರಲೇ ಇಲ್ಲ. ಅಕ್ಷರಶಃ ಅವರೊಬ್ಬ "ಲೋಹ ಪುರುಷ"ರಾಗಿದ್ದರು.

'ಉಕ್ಕಿನ ಮನುಷ್ಯ' ಎಂಬ ಬಿರುದಿಗೆ ಅವರು ಅದೆಷ್ಟು ತಕ್ಕವರಾಗಿದ್ದರು ಎಂಬ ಬಗ್ಗೆ ಅವರ ಜೀವನದ ಕೆಲವು ಘಟನೆಗಳಲ್ಲೇ ನೋಡಬಹುದು.

೧೯೪೭ರ ಒಂದು ಘಟನೆ, ಮುಂಬಯಿಯ ನೌಕಾದಳದ ಸೈನಿಕರು ವಿದ್ರೋಹವೆದ್ದಿದ್ದರು. ಹಡಗದೊಳಗಿದ್ದ ಸೀಮಿತ ಸೈನಿಕರ ಮೇಲೆ ನೌಕಾ ಸಂಜಾಲಕ ಅಂಗ್ಲ ಅಧಿಕಾರಿ ಮಾಡಿದ ಅತ್ಯಾಚಾರದಿಂದ ಇಡಿ ದೇಶದೇ ಕ್ಷೋಭೆಗೊಂಡಿತ್ತು. ಅಂಗ್ಲ ಸೈನ್ಯಾಧಿಕಾರಿಗಳು 'ನೌಕಾ ಸೈನಿಕ'ರ ಮೇಲೆ ಗುಂಡು ಹಾರಿಸುವ ಬೆದರಿಕೆಯನ್ನಿತ್ತಿದ್ದರು. ಹಡಗದಲ್ಲಿದ್ದ ವಿದ್ರೋಹೀ ಸೈನಿಕರು ಗುಂಡಿಗೆ ಪ್ರತಿ ಗುಂಡನ್ನೀಯುವ ತಮ್ಮ ನಿರ್ಧಾರವನ್ನು ಸಾರಿದ್ದರು. ಈ ಗಲಾಟೆ ಏನಾದರೂ ಆರಂಭವಾಗಿ ಬಿಟ್ಟಿದ್ದರೆ ಇಡಿ ಮುಂಬಯಿ ನಗರ ನೆಲಸಮವಾಗುತ್ತಿತ್ತು.

ಮುಂಬೈಯ ನಾಗರಿಕರು ತಮ್ಮ ನಾಯಕತ್ವವನ್ನು ಸರದಾರರ ಕೈಗೊಪ್ಪಿಸಿದ್ದರು. ಜನ ಭಯದಿಂದ ಕಂಗಾಲಾಗಿತ್ತು. ಆದರೆ ಸರದಾರರು ಮಾತ್ರ ನಿಶ್ಚಿಂತರಾಗಿ—ಮೌನವಾಗಿದ್ದರು. ಅದಕ್ಕೆ ಮುಂಚಿತವಾಗಿಯೇ ಮುಂಬಯಿಯ ಗವ

(ಇಪ್ಪತ್ತಾರನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:- ಬೆಂಗಳೂರು, ಮಂಗಳೂರು, ಮೈಸೂರು.

ಪ್ರೊ। ಪಿ. ಗುರುರಾಜ ಭಟ್ಟ.

ಉಡುಪಿಯ ಅನಂತೇಶ್ವರನ ಹೆಸರು

ಉಡುಪಿಯ ಅನಂತೇಶ್ವರನಿಗೆ ಈ ಹೆಸರು ಎಂದಿನಿಂದ ಬಂತ ? ದೇಗುಲವು ೭-೮ನೇ ಶತಮಾನಕ್ಕೆ ಸೇರಿದುದಾದರೂ ಇಲ್ಲಿನ ದೈವಕ್ಕೆ ಸುಮಾರು ೧೭ನೆ ಶತಕದಾದಿಯಲ್ಲಿ 'ಅನಂತೇಶ್ವರ' ಎಂಬ ನಾಮಕರಣವಾದಂತೆ ತಿಳಿಯುತ್ತದೆ. ಅನಂತೇಶ್ವರನು ಶಿವ, ಈತನನ್ನು ಅನಂತಪದ್ಮನಾಭ ವಿಷ್ಣುವೆಂದರೆ ಅಪಚಾರ ಮಾಡಿದಂತಾಗುವುದು.

ವಿಶೇಷಾರ್ಥಕ ಸ್ಥಳವಾದ ಉಡುಪಿಯಲ್ಲಿ ಹಲವು ದೇವಾಲಯಗಳಿವೆ. ಅವುಗಳಲ್ಲಿ ಅನಂತೇಶ್ವರ ದೇವಾಲಯ ಮತ್ತು ಉಡುಪಿ ಶ್ರೀ ಕೃಷ್ಣ ಮಠಗಳು ಪ್ರಸಿದ್ಧವಾಗಿವೆ.

ಅನಂತೇಶ್ವರ ದೇವಾಲಯವು ಸುಮಾರು ಕ್ರಿ. ಶ. 7—8ನೇ ಶತಕಗಳಷ್ಟು ಪ್ರಾಚೀನವಾಗಿರಬೇಕೆಂದು ಅದರ ವಾಸ್ತು ಶಿಲ್ಪವನ್ನು ಪರಿಶೀಲಿಸಿದರೆ ತೀರ್ಮಾನಿಸಬಹುದು. ಈ ದೇಗುಲವು ಗಜಪೃಷ್ಠಾಕಾರವಾಗಿದ್ದು ಪಾದಾಮಿಯ ಚಾಲುಕ್ಯರ ಕಾಲದ ಶಿಲ್ಪ ಶೈಲಿಯಲ್ಲಿ ನಿರ್ಮಾಣ ಮಾಡಿದುದಾಗಿರಬೇಕು. ಇದರ ಎಡುರುಗಡೆ ಹೊರಗೆ ಕಂಡು ಬರುವ ಪ್ರಧಾನ ಬಲಿಪೀಠವು ಪ್ರಾಚೀನ ಶಿಲ್ಪವನ್ನೇ ಚೆನ್ನಾಗಿ ಸೂಚಿಸುತ್ತದೆ. ಅದರಲ್ಲಿರುವ ಸಮುದ್ರ ಕಮಲೆಗಳೂ ಸುಕಾರವೂ ಉಬ್ಬು ಚಿತ್ರಗಳೂ ಕನಿಷ್ಠತಮ 1200 ವರ್ಷಗಳ ಹಿಂದಣ ಶಿಲ್ಪ ಶೈಲಿಯೆಂದು ತಿಳಿಯಪಡಿಸುತ್ತವೆ. ಈ ಬೃಹದಾಕಾರದ ದೇವಾಲಯವು ಕರ್ನಾಟಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆಯಲು ಯೋಗ್ಯತೆಯುಳ್ಳದಾಗಿದೆ. ಈ ದೇಗುಲಕ್ಕೆ ಅನಂತಪದಲ್ಲಿ ನಾಲ್ಕು ಉಪಸ್ಥಾನ ಮೂರ್ತಿಗಳು ನಾಲ್ಕು ದಿಕ್ಕಿನಲ್ಲಿ ಪ್ರತಿಷ್ಠಿತವಾಗಿರಬೇಕು— ಕೃಷ್ಣ, ಗಣೇಶ, ಶಾಸ್ತಾರ ಮತ್ತು ದೇವಿ. ಈಗ ಶಾಸ್ತಾರ ಮೂರ್ತಿ ನೈಋತ್ಯ ದಿಕ್ಕಿನಲ್ಲಿ ಇರುವುದು ಕಂಡು ಬರುತ್ತದೆ. ಶಾಸ್ತಾರನ ಶಿಲಾಮೂರ್ತಿಯು ಒಂದು ಅಪೂರ್ವ ಮೂರ್ತಿಯಾಗಿದೆ. ಇನ್ನು ಜಿಲ್ಲೆಯಲ್ಲಿ ಇಂತಹ ಮೂರ್ತಿಯು ಇನ್ನೊಂದಿರಲಾರದು.

ಅನಂತೇಶ್ವರನಿಗೆ ಈ ಹೆಸರು ಎಂದಿನಿಂದ ರೂಢಿಗೆ ಬಂತು ಎಂಬುದು ಇಂದಿಗೂ ಸಂದೇಹಾಸ್ಪದವಾಗಿಯೇ ಉಳಿದಿದೆ. ಈ ಬಗೆಗೆ ವಾಸುಲೆಗಳು ನಮಗೆ ದೊರಕುವುದು ವಿರಳ. ಈ ಹೆಸರಿನ ಕುರಿತಾಗಿ ಅನೇಕ ಊಹಾಪೋಹೆಗಳು ಕಂಡುಬರುತ್ತವೆ. ಅದರ ಪರಿಣಾಮವಾಗಿ ನಿಜ ಸ್ಥಿತಿಯು ಮಾಸಿಹೋದಂತೆ ಭಾಸವಾಗುತ್ತದೆ. ಶ್ರೀಮಾನ್ ಗೋವಿಂದ ಪೈಗಳು ಅನಂತೇಶ್ವರನೆಂಬ ಹೆಸರು 'ಅನಂತ ಜಿನೇಶ್ವರ' ನೆಂಬ ಜೈನ ತೀರ್ಥಂಕರನ ಹೆಸರಿನಿಂದ ಬಂದಿರಬೇಕೆಂದೂ, ಯಾವುದೋ ಒಂದು ಕಾಲದಲ್ಲಿ ಅನಂತೇಶ್ವರ ದೇಗುಲವು ಬಸ್ತಿಯಾಗಿದ್ದಿರಬೇಕೆಂದೂ ಶೈವ ಧರ್ಮದ ಪ್ರಾದುರ್ಭಾವದಿಂದ ಹಿಂದೂ ದೇವಾಲಯವಾಗಿ ಮಾರ್ಪಾಟು ಹೊಂದಿರಬೇಕೆಂದೂ, ವಾದಿಸಿದ್ದಾರೆ. ಇದಕ್ಕೆ ದೇವಲದ ಎದುರಿನ ಕಲ್ಲಿನ ಸ್ತಂಭವನ್ನು ಮಾನಸ್ತಂಭವೆಂಬುದಾಗಿ ಕರೆದಿದ್ದಾರೆ. ಇತರರೂ ಇದೇ ರೀತಿಯಲ್ಲಿ ಅಭಿಪ್ರಾಯಪಟ್ಟುದುಂಟು ; ಆದರೆ ಇದು ಸರಿಯಲ್ಲವೆಂಬುದಾಗಿ ನಾನು ನನ್ನ ಕೆಲವು ಲೇಖನಗಳಲ್ಲಿ ಪ್ರತಿಪಾದಿಸಿದ್ದೇನೆ. ಜೈನ ಆಗಮದಲ್ಲಿ ಬಸದಿಯ ಆಕಾರವು ಗಜಪೃಷ್ಠಾಕಾರವಾಗಿರಲು ಆಸ್ಪದವಿಲ್ಲ. ಮಾತ್ರವಲ್ಲದೆ ದೇವಲದ ಎದರಿರುವ ಪ್ರಧಾನ ಬಲಿಪೀಠವು ಹಿಂದೂ ದೇವಾಲಯಕ್ಕೆ ಸಂಬಂಧಿಸಿದುದಾಗಿದೆ. ಕಲ್ಲಿನ ಕಂಬವು ಮಾನಸ್ತಂಭವೂ ಅಲ್ಲ. ಕಾರಣ ಅದರಲ್ಲಿ ಸೂರ್ಯ, ನಂದಿ ಕೇಶ್ವರರ ಉಬ್ಬು ಚಿತ್ರಗಳಿವೆ.

ಕ್ರಿ. ಶ. 1366ರ ಶಾಸನ ಪ್ರಕಾರ ಅನಂತೇಶ್ವರವು "ಪಡುವದೇವ" ವೆಂದು ಕರೆಯಲ್ಪಟ್ಟಿದೆ. ಚಂದ್ರೇಶ್ವರವು "ಮೂಡದೇವ" ವೆಂದು ಕರೆಯಲ್ಪಟ್ಟಿದೆ. ಇತರ ಶಾಸನಗಳು (ಕ್ರಿ. ಶ. 15ನೇ ಶತ.) ಉಡುಪಿಯ ಶ್ರೀ ಮಹಾದೇವನೆಂಬುದಾಗಿ ಈ ದೇವತೆಯನ್ನು ಕರೆದಿವೆ. ಮಹಾದೇವನೆಂದರೆ ಈಶ್ವರ, ಎಂದರೆ ಅನಂತೇಶ್ವರ ದೇಗುಲವು ಶುದ್ಧ ಶಿವಸ್ಥಾನವಾಗಿದೆ.

ನಮ್ಮ ಕೆಲವು ಲೇಖನಗಳಲ್ಲಿ ಅನಂತೇಶ್ವರನೆಂಬಹೆಸರು ಹದ್ದಾರಭೇಶಶತಮಾನದ ಅನಂತರದ ಹೆಸರೆಂದೂ ಈ ಹೆಸರುಸ್ಕಂದ (ಅನಂತ)ಮತ್ತು ಶಿವ ಎಂಬ ಅರ್ಥವನ್ನೀಯುತ್ತದೆಂದೂ ಉಡುಪಿಯು ಸ್ಕಂದಾರಾಧನೆಗೂ ಶಿವಾರಾಧನೆಗೂ ಪ್ರಸಿದ್ಧವಾಗಿತ್ತೆಂದೂ ತಿಳಿಯಪಡಿಸಿದ್ದೇನೆ. ಪುತ್ತೂರು ತಾಲೂಕಿನಲ್ಲಿ ಬಳ್ಳಮಂಜ ಎಂಬಲ್ಲಿಯೂ ಒಂದು ಅನಂತೇಶ್ವರ ದೇವಾಲಯವಿದೆ. ಸ್ಕಂದನ ಹಾಗೂ ಶಿವ ದೇವಸ್ಥಾನಗಳು ಒತ್ತೊತ್ತಾಗಿವೆ. ಕಾಸರಗೋಡಿನ ಮಧೂರಿನಲ್ಲಿ ಸುಪ್ರಸಿದ್ಧ ಶ್ರೀ ಮದನಂತೇಶ್ವರ ದೇವಾಲಯವಿದೆ. ಇಲ್ಲಿಯೂ ಸ್ಕಂದಮುಖ್ಯ ಶಿವಾರಾಧನೆ ಮುಖ್ಯ. ಉಪಸ್ಥಾಪಕ ದೇವತೆಯೂದ ಗಣಪತಿಯೂ ಬಹಳ ಪ್ರಭಾವಿತವಾಗಿರುವ ಸಂಗತಿ ಎಲ್ಲರಿಗೂ ತಿಳಿದುದಾಗಿದೆ. ಇಲ್ಲಿ ಸ್ಕಂದಾರಾಧನೆಯೇ ಪ್ರಾಮುಖ್ಯ, ಹೀಗಾಗಿ ಅನಂತೇಶ್ವರನನ್ನು ಅನಂತ ಪದ್ಮನಾಭನನ್ನಾಗಿ ನಾಮಕರಣ ಮಾಡುವುದು ಸಮಂಜಸವಾಗದು.

ಒಂದು ಶಿಲಾ ಶಾಸನವೂ ಈ ರೀತಿಯ ಸಿದ್ಧಾಂತವನ್ನು ಸುಸ್ಪಷ್ಟೀಕರಿಸುತ್ತದೆ. ಕ್ರಿ. ಶ. 1614ರ ಶ್ರೀಕೃಷ್ಣ ಮಠದಲ್ಲಿ ದೊರಕಿದ ಈ ಶಾಸನವು ಶ್ರೀಮದ್ವೇಣ ನೇದ ಶ್ರೀ ಪಾದಂಗಳ ಪೂಜಾ ಸರ್ಯಾಯ ಕಾಲದಲ್ಲಿ ಉಡಪಿನ ಶ್ರೀಕೃಷ್ಣ ದೇವರಿಗೆ ವಿಜಯ ನಗರದ ಸಾಮ್ರಾಟನಾದ ವೆಂಕಟಪತಿ ಅಜ್ಞಾನುಸಾರವಾಗಿ ಬಾರಕೂರಿನ ರಾಜ್ಯಪಾಲರಾದ ರಾಮಕೃಷ್ಣ ಒಡೆಯರು ನಾಲ್ವತ್ತು ಪಾಡೊಳಗಣ ಹೂವಿನ ಕೆರೆ ಗ್ರಾಮವನ್ನು ಮುರುಗೇಶ್ವರನ ಸನ್ನಿಧಿಯಲ್ಲಿ ಧಾರೆಯೆರೆದ ವಿಷಯ ತಿಳಿಸುತ್ತದೆ. ಮುರುಗೇಶ್ವರನೆಂದರೆ ಅನಂತೇಶ್ವರ. ಮುರುಗನೆಂದರೆ ಸ್ಕಂದ. ಅಂತೆಯೇ ಅನಂತನೆಂದರೆ ಸ್ಕಂದ. ಹದಿನೇಳನೇ ಶತಮಾನದ ಆದಿಯಿಂದ ಅನಂತೇಶ್ವರನೆಂಬ ಹೆಸರು ರೂಢಿಗೆ ಬಂದಿರಬೇಕು. ದಾಖಲೆಯಲ್ಲಿ ಈ ಹೆಸರಿಗೆ ಕ್ರಿ. ಶ. 1614ರ ಉಲ್ಲೇಖವು ಪ್ರಥಮವಾದುದು.

ವಾಧ್ವ ಸಂಪ್ರದಾಯ ಪ್ರಕಾರ ಈಶ್ವರ ಲಿಂಗಾಂತರ್ಗತನಾಗಿ ಶ್ರೀವಿಷ್ಣುವಿರುವನೆನ್ನುವುದು ಸಹಜವೇ. ಎಲ್ಲಾ ದೇವತೆಗಳಿಗೆ ಅಧಿದೇವನು ಶ್ರೀವಿಷ್ಣುವೇ. ಆದರೆ ಅನಂತೇಶ್ವರವು ಮೂಲ ಆಗಮ ಶಾಸ್ತ್ರ ಪ್ರಕಾರ ನಿರ್ಮಿಸಿದ ಪ್ರಾಚೀನ ಶಿವಾಲಯ. ಉಡಪಿಯಲ್ಲಿ ಸ್ಕಂದನ ಮತ್ತು ಶಿವನ ಆರಾಧನೆಗಳ ಪ್ರಾಮುಖ್ಯತೆಯನ್ನು ಈ ಹೆಸರು ತಿಳಿಯುತ್ತದೆ. ಶ್ರೀವಾದಿರಾಜ ಸ್ವಾಮಿಗಳಾದರೂ 'ಶಿವಾಂಶರ್ಯಾಮಿತಾಂ ಪ್ರಿಯಾನ್ ಪ್ರತಿ ಪ್ರಬೋಧಯನ್। ದಯಾವಾರಿ ನಿಧಿ ಶ್ಶಿವೀಂ ಶಿಲಾಮೂರ್ಶ್ಶ ಶೋಭತೇ' ರುದ್ರಾಂಶರ್ಯಾಮಿತ್ವವನ್ನು ತನ್ನ ಭಕ್ತರನ್ನು ಕುರಿತು ತಿಳಿಸುತ್ತಾ ಈಶ್ವರ ಸಂಬಂಧಿಗಳಾದ ಲಿಂಗಾಕಾರವನ್ನು ಆಶ್ರಯಿಸಿ ವಿಷ್ಣುವು ವಿರಾಜಮಾನನಾಗಿದ್ದಾನೆ' ಎಂದೇ ಹೇಳಿದ್ದಾರೆ ಹೊರತು ಲಿಂಗವು ವಿಷ್ಣು ಲಿಂಗವೆಂದು ಹೇಳಿಲ್ಲ. ಶೈವ ಸಂಬಂಧವಾದ ದೇವತೆಯನ್ನೇ ಲಿಂಗಾಕಾರದಲ್ಲಿ ಆರಾಧನೆ ಮಾಡುವುದು ಆಗಮ ಶಾಸ್ತ್ರಕ್ಕೆ ಸ್ವೀಕೃತವಾದುದು. ಹೀಗಾಗಿ ಈ ದೇವತೆಯನ್ನು ಅನಂತ ಪದ್ಮನಾಭನೊಡನೆ ಹೊಂದಿಸುವ ಸಂಪ್ರದಾಯವು ಅರ್ವಾಚೀನವಾಗಿದೆ.

ಅನಂತೇಶ್ವರ ದೇವಾಲಯವು ಸುಮಾರು 8ನೇ ಶತಮಾನಕ್ಕೆ ಅಸ್ತಿತ್ವದಲ್ಲಿದ್ದಿರಬೇಕೆನ್ನುವುದಕ್ಕೆ ಒಂದು ಶಾಸನಾಧಾರವೂ ಕಂಡು ಬರುತ್ತದೆ. ಈಗ ಚಂದ್ರೇಶ್ವರವಿರುವ ಸ್ಥಳವು ಆ ಸಮಯದಲ್ಲಿ ಎಂದರೆ ಕ್ರಿ. ಶ. 8—9ನೇ ಶತಕದಲ್ಲಿ ಕೆರೆಯಾಗಿದ್ದಿರಬೇಕೆಂದೂ ಈ ಕೆರೆಯನ್ನು ವಿಮಲಾದಿತ್ಯನೆಂಬ ಅರಸನು ಯಾವುದೋ ಒಂದು ತಪ್ಪಿಗೋಸ್ಕರ ಪ್ರಾಯಶ್ಚಿತ್ತವಾಗಿ ತೋಡಿಸಿದ್ದಿರಬೇಕೆಂಬುದನ್ನೂ ಈ ಶಾಸನವು ತಿಳಿಸುತ್ತದೆ.

ಭರತ ಪುತ್ರನ ಬಿಯುಕೆ

ಕವಿ. ಶ್ರೀ ಎಸ್. ತಿರುಮಲೇಶ್ವರ ಭಟ್ಟ, ವಿದ್ವಾನ್

— ೧ —

ಘನ್ನ ಕಾರಣ ಮಾತೆ, ದಿಸ್ಕಳಂಧವಿಮುಕ್ತೆ
ಇನ್ನು ಭವಗಿರಿದಸ್ಕರಾಳ್ಳನದ ಚಿಂತೆ,
ಭರತ ಪುತ್ರರು ಕೂಡಿ, ಬಾನಿಗೇರಿಸಿದ ಗುಡಿ
ಹಾರಾಡಿಹುದಮಾ ಗಂಗಾಲಹರಿಯಂತೆ.

— ೨ —

ಸುತ್ತ ಬೆಳಕಿನ ಹೊಳೆಯು ಹರಿಹರಿದು ಹೊಸ ಕಳೆಯು
ಚಿಮ್ಮಿ ಚೇತರಿಸಿಹುದು ಜಗವೆಲ್ಲ ಮಿಂದು.
ನೆಲದಾಸೆ ಕಸಿಗಟ್ಟು ಕಣಿಗೆ ಕುಂಕುಮವಿಟ್ಟು
ಸಂತಸದಿ ಹಿಂದಿಹಳು ಸ್ವಾತಂತ್ರ್ಯ ಬಂದು.

— ೩ —

ಆಂಗ್ಲೇಯ ಕಾರ್ಯವೀರ್ಯರ ಗೆಲ್ದು ಸ್ವಾತಂತ್ರ್ಯ
ಸಂಧೇಸುವಮ ತಂದ ಭಾರ್ಗವರು ನಾವು,
ಭೋರ್ಗರೆವ ಶರಧಿಯೇ ಭರದಿ ಮುಳ್ಳಾಗಿದರು
ಕಡೆವ ಕಲಿಗಳು ಕಡೆದು ಹಗೆಗಳಿಗೆ ಸಾವು.

— ೪ —

ದೇಶ ರಕ್ಷಣೆಗಾಗಿ ದೇಹದಾಸೆಯ ಫೀಗಿ
ಕದನದಲಿ ಕಾದಾಡಿ ವಿಜಯ ಪಡೆಯುವೆವು.
ಸ್ವಾರ್ಥ-ಮತ್ಸರ ಬಿಟ್ಟು ಪರಹಿತದ ಪಾದೊಟ್ಟು
ಸ್ವಾತಂತ್ರ್ಯ-ಸ್ವಾಭಿಮಾನದಲಿ ನಡೆಯುವೆವು.

— ೫ —

ಧರಣಿಯೆ ತಪೋವನವು, ದುಡಿಮೆಯೆ ತಪೋಧನವು
ದುಡಿಮೆಯ ಂದಲೆ ನಮ್ಮ ಬಾಳು ನಂದನವು.
ಹಲದ ಹಿಡಿಕೈ ಹಿಡಿದು, ಹೊಲವನುಳುತಲಿ ದುಡಿದು
ಬೆಳೆಯದಿರೆ ಬೇರಿಲ್ಲ ಬದುಕೆ ಸಾಧನವು.

— ೬ —

ಹೊಲವ ಉಂಡವ ಮಾಡಿ ಹಲದ ಹುದಿಯಿಂ ಹೂಡಿ
ಗೊಬ್ಬರದ ಚರು ಸುರಿವ ಕೃಷಿಕ ಯಾಜಕರು!
ಕೃಷಿದೇವತೆಯ ಕರೆದು ಸ್ವೇದಾಜ್ಯವನ್ನೆರೆದು
ಜಾಡ್ಯಪಶುಮೇಧವನು ನಡೆಸಿ ಋತ್ವಿಜರು!

— ೭ —

ಸ್ವಾತಂತ್ರ್ಯ ಸುರಭಿಯನು ಕರೆದೀಪ್ಸಿತಾರ್ಥವನು
ಪಡೆವದೋಗ್ಧಾರರರ ಧರಣಿ ಪುತ್ರರರ!
ಹಾಕಿದಷ್ಟು ಮೇವು, ಹಾಲು ಕೊಡುವೀ ಗೋವು
ಸ್ವಾತಂತ್ರ್ಯವೆಂಬುದಿದು; ಬಿಡದೆ ಸಾಕುವಿರ?

— ೮ —

ಮಂತ್ರಿ ಪದವಿ ಸುನೆಳೆಸೆ, ಭೋಗದ ಭಾಗ್ಯವ ಬಯಸೆ
ಮಾತೆ, ತವ ಚರಣ ಸೇವೆಯದು ಎನಗಾಸೆ.
ಬಡವಳಿದೊ ಬಂದಿಹೆನು, ಭರತ ಪುತ್ರನು ನಾನು
ಮನದಾಸೆಯನು ಸಲಿಸೆ ಶುಭ ಮಂದಹಾಸೆ!

— ೯ —

ತನುವನು ತೃಣೀಕರಿಸಿ ತಾಯ್ನಾಡ ಋಣ ಸಲಿಸಿ
ದುಡಿಯೆ, ದೃಢಶಕ್ತಿ ನಮ್ಮೊಳು ಬೆಳೆದು ನಿಲಲಿ.
ಭವ್ಯ ಭಾರತ, ಮಾತೆ ನಿನ್ನಕಲಿ ಕುಲಗಳಿಗೆ
ಭರತ ಪುತ್ರನ ಬದುಕೆ ಕೈಗೂಡಿ ಬರಲಿ!

ಎಂಟು

ಶತಮಾನ—ಸ್ವಾತಂತ್ರ್ಯ ಸಂಚಿಕೆ, ೧೯೬೮

ಶ್ರೀ ಕೆ. ಜಿ. ಹೆಗಡೆ ಮತ್ತು ಶ್ರೀ ಯು. ಎ. ಕಾಮತ್

ಲೋಕಕಲ್ಯಾಣ ಭಾರತ ಗಣರಾಜ್ಯದ ರಾಷ್ಟ್ರಪತಿಗಳಿಗೊಂದು ವಿನಂತಿಪತ್ರ

ಮಾನ್ಯ ಗಣರಾಧಿಪತಿಗಳಿಗೆ ಜೈಹಿಂದ್

ನಾವು ಸ್ವತಂತ್ರ ಭಾರತದ ಪ್ರಜೆಗಳು. ನಮ್ಮ ಸುಖ-ಸಂಕಷ್ಟಗಳನ್ನು ಯಾರಿಗೆ ತಿಳಿಸ ಬಯಸುವುದೆಂಬ ಶಂಕೆ ನೂರಾರು ದಿನಗಳಿಂದ ಕಾಡುತ್ತ ಬಂದರೂ ಈ ನಿವೇದನ ಪತ್ರ ಬರೆಯಲು ಮೂವತ್ತೂರು ದಿನಗಳ ಹಂತರ ನಿರ್ಧಾರ ಮಾಡಿದ್ದೇನೆ. ಪ್ರಚಲಿತ ಭಾರತದ ರಾಜ್ಯಾಂಗ—ಆಡಳಿತ—ವಿಧಾನ—ಸಂವಿಧಾನ—ಕಾಯಿದೆ ಕಾನೂನು ಇವೆಲ್ಲವುಗಳ ಸಮುದರ್ಶನದಲ್ಲಿ ಸಾಮಾನ್ಯ ಪ್ರಾಗರಿಕರ, ನಮ್ಮಂತಹರು—ಇನ್ನು ಮುಂದೆ ಗಣರಾಧಿಪತಿಗಳೇ ನಮ್ಮನ್ನು ಕಾಯಬೇಕು ಎನ್ನುವಂತಹ ಪರಿಸ್ಥಿತಿ ಉಂಟಾಗಿದೆ. ಇದನ್ನು ನಿವೇದಿಸಲಾಗಿದೆ. ತಾವು ಮತ್ತು ತಮ್ಮ ಸಂಪುಟದ ಮಂತ್ರಿಗಳು ಇದನ್ನು ಸೂಕ್ತವಾಗಿ ಪರಿಶೀಲಿಸಿ ಯೋಗ್ಯ ಕಾರ್ಯಕ್ರಮ ಕೈಕೊಳ್ಳುವಿರೆಂಬ ವಿಶ್ವಾಸದಿಂದ ಇದನ್ನು ಮಂಡಿಸುತ್ತೇನೆ.

ಸ್ವಾತಂತ್ರ್ಯ ಗಳಿಸಿ ಇಪ್ಪತ್ತೆರಡು ವರ್ಷಗಳು ಸಂದುಹೋದವು. ಇವೀವ

ಇಂದಿನ ರಾಜ್ಯಕೀಯದಿಂದ ನೊಂದು ಬೆಂದ ಲೇಖಕರು ರಾಷ್ಟ್ರಪತಿಗಳಿಗೊಂದು ವಿನಂತಿ ಸೂಡಿಕೊಂಡಿದ್ದಾರೆ. ಸಂವಿಧಾನದ ಆದರ್ಶ, ಉದ್ದೇಶಗಳನ್ನು ಜಾರಿಗೆ ತರುವಲ್ಲಿ ಇಂದಿನ ಸರಕಾರಗಳು ಸೋತುಬಿದ್ದಿವೆ. ಇದರಿಂದಾಗಿ ದೇಶ ನಮ್ಮದಾಗಿ ಉಳಿಯಬೇಕಾದರೆ, ಈಗಲೇ ಎಚ್ಚರಾಗಬೇಕು—ರಾಷ್ಟ್ರಪತಿಗಳು ತೀವ್ರ ಕ್ರಮ ಕೈಗೊಳ್ಳಬೇಕು ಎಂದು ನಿವೇದಿಸುತ್ತಾರೆ. ಇದು ಭಾರತೀಯರೆಲ್ಲರ ನಿವೇದನೆಯೂ ಅಲ್ಲವೆ?

ರಾಜ್ಯಘಟನೆಯನ್ನು ಗಳಿಸಿ ಹದಿನೆಂಟು ವರ್ಷಗಳಾದವು. ನಮ್ಮ ಸಂವಿಧಾನ—ಭಾರತದ ರಾಜ್ಯಘಟನೆ—ಜಗತ್ತಿನಲ್ಲೇ ಶ್ರೇಷ್ಠವಾದುದಂತೆ—ಅನುಭವವಂತೆ! ಆದರೆ ಇಂದಿನ ದೇಶದ ಪರಿಸ್ಥಿತಿ ವಸ್ತು ಸಾಮಾನ್ಯ ಪ್ರಜೆಗಳ ಪಿಕಲಾಟವನ್ನು ನೋಡಿದರೆ ನಮಗೆ ದೇವರೇ ಕಾಪಾಡಬೇಕು ಎನ್ನುವಷ್ಟು ಶೋಚನೀಯ ಅನುಭವವೇದ್ಯವಾಗುತ್ತದೆ.

ಸ್ವಾತಂತ್ರ್ಯ! ಸ್ವಾತಂತ್ರ್ಯವಂತೆ! ಸಮಾನ ಹಕ್ಕುಬಾಧ್ಯತೆಗಳಂತೆ! ಪರಮ ಶ್ರೇಷ್ಠವೆಂದು ಪರಿಗಣಿಸಿದ ಸಂವಿಧಾನಸೂಪ್ರಗಳು ಕಾಗದದ ಹೋಳಿಗೆಗಳಾಗಿವೆ. ರಾಜ್ಯ ಘಟನೆಮೂಲಭೂತ ಹಕ್ಕುಗಳು ನ್ಯಾಯಾಂಗ ಪ್ರಿಯರಿಗಿಲ್ಲ. ಕಾಯಿದೆ ಕಾನೂನುಗಳ ಅವರಣದಲ್ಲಿ ಬದುಕಿ ಬಾಳುವ ಪ್ರಜೆಗಳಿಲ್ಲ. ಸಮಾನ-ಸವಲತ್ತುಗಳು ರಾಜ್ಯಾಡಳಿತದವರಿಗೆ ಮಾತ್ರ. ನ್ಯಾಯಪ್ರಿಯರನ್ನು ಕೇಳುವವರ್ಯಾರು?

ಶಾಂತಿ ಪ್ರಿಯ, ಕಾಯಿದೆ ಪ್ರಿಯ ಪ್ರಜೆಗಳು ಕಳವಳಕ್ಕೆ ಈಡಾಗಿದ್ದಾರೆ. ಕಾರಣ ಸರಕಾರದ ಸೂತ್ರಧಾರಿಗಳು ತಮ್ಮ ಸುಖಾಭಿಲಾಷೆಯನ್ನೇ ಬಯಸುವವರು, ಮೂರ್ಖರಲ್ಲದೆ ಸಾಮಾನ್ಯ ಪ್ರಜೆಗಳ ಸಂಕಟವನ್ನು ಕೇಳುವವರೇ ಇಲ್ಲವಾಗಿದೆ. ಲೋಕ ಕಲ್ಯಾಣ ರಾಜ್ಯ ನಿರ್ಮಾಣಕ್ಕೆ ಟೊಂಕ ಕಟ್ಟಿ ದುಡಿಯುವ ಮುಖ್ಯಾಲು ವೀಶ ಅಧಿಕಾರಿಗಳು—ರಾಜ್ಯ ಸಂಚಾಲಕರು ತಮ್ಮ ಕಲ್ಯಾಣವನ್ನೇ ಸಾಧಿಸುವರಲ್ಲದೆ ದೇಶ ಕಲ್ಯಾಣವನ್ನು ಬಯಸುವ ಲಕ್ಷಣವಲ್ಲ ಕಂಡು ಬರುವುದಿಲ್ಲ.

ಘಟನೆಯಲ್ಲಿ ನಮೂದಿಸಿದ ನ್ಯಾಯವೆಲ್ಲಿದೆ? ಸಾಮಾಜಿಕ—ಮಿತವ್ಯಯ ಆರ್ಥಿಕ—ಮತ್ತು ರಾಜಕೀಯ ನ್ಯಾಯವೆಲ್ಲಿದೆ?

ವಾರ್ ಸ್ವಾತಂತ್ರ್ಯ—ವ್ಯಕ್ತಿ ಸ್ವಾತಂತ್ರ್ಯ—ವಿಚಾರ ಸ್ವಾತಂತ್ರ್ಯ- ಧರ್ಮ ಸ್ವಾತಂತ್ರ್ಯ ಎಲ್ಲಿದೆ? ಸಮಾನತೆ ಎಲ್ಲಿದೆ? ಸೋದರತೆ— ಬಂಧು ಪ್ರೇಮ ಎಲ್ಲಿ ಹೋಗಿದೆ? ದೇಶದ ಒಕ್ಕಟ್ಟು ಎಲ್ಲಿದೆ?

ಈ ಎಲ್ಲ ಸೌಲಭ್ಯಗಳನ್ನು — ಸವಲತ್ತುಗಳನ್ನು ಸಾಮಾನ್ಯ ಪ್ರಜೆಗಳು ಅಂದರೆ ಕೋಟ್ಯಂತರ ಜನರು ಅನುಭವಿಸುವುದಿಲ್ಲ. ಒಂದೇ ಒಂದು ಸಂಗಡ—ಬಣ ಮತ್ತು ಕೆಲವೇ ಅದೃಷ್ಟವಂತರು ಇವರ ಸದುಪಯೋಗವನ್ನು (ದುರುಪಯೋಗ) ಮಾಡುತ್ತಿದ್ದಾರೆ.

ಸಂವಿಧಾನದ ಹೆಸರಿನಲ್ಲಿ ದೇಶದ ಒಕ್ಕಟ್ಟು ಶಿಥಿಲವಾಗಿದೆ. ಅನ್ಯೋನ್ಯತೆ ಮತ್ತು ಸೈತ್ರಿ ಸಿಕ್ಕಾಪಟ್ಟೆಯಾಗಿದೆ. ಸಮಾನಾಧಿಕಾರ, ಸಮತೆ ಮತ್ತು ಭಾರತ ಕಲ್ಯಾಣದ ಹೆಸರಿನಲ್ಲಿ ಎಂತೆಂತಹ ಅನ್ಯಾಯಗಳು ಜರಗುತ್ತಿವೆ. ಪ್ರಾಂತ ಪ್ರಾಂತಗಳ ವ್ಯವಹಾರ ಅಡಳಿತಗಳಲ್ಲಿ ಮತಬೇಧ—ಒಡಕು—ಸ್ವಾರ್ಥ ಮತ್ತು ಸ್ವೇಚ್ಛಾಚಾರ, ಭ್ರಷ್ಟಾಚಾರ ಎಲ್ಲ ಪ್ರಾಂತಗಳ ಅಂದರೆ ಇಡಿಯ ಭಾರತ ದೇಶದ ಮೂಲಭೂತವೋ ಜನ್ಮಸಿದ್ಧ ಹಕ್ಕೋ ಎಂಬಂತಾಗಿದೆ.

ಆಹಾರ ವಲಯದ ಹೆಸರಿನಲ್ಲಿ ಎಂತಹ ಅನ್ಯಾಯವಾಗುತ್ತಿದೆ! ಆಂಧ್ರದ ಅಕ್ಕಿ, ದಕ್ಷಿಣದ ಅಕ್ಕಿ ಉತ್ತರಕ್ಕೆ ಹೋಗಲು ಸಾಗಿಸಲು ಸವಲತ್ತು

(ಇಪ್ಪತ್ತನಾಲ್ಕನೇ ಪುಟನೋಡಿರಿ)

Registered AVS Trade Mark

Vaidyaratnam P. S. Varier's

ARYA VAIDYA SALA

KOTTAKKAL (Kerala State)

Estd. 1902

Head Office Telephones — Kottakkal Exchange

Office with Extension to Managing Trustee .... Phone No. 31
Nursing Home .... Phone No. 44
Chief Physician .... Phone No. 25
Managing Trustee (Residence) .... Phone No. 27

NEW BRANCH OPENED AT

No. 1, Krishnamachari Road, Nungumbakkam—Madras-34
(Phone No 811275)

ALSO BRANCHES AT

KOZHIKODE (Phone: 2155)
PALGHAT (Phone: 104)
ALWAYE (DEPOT)
TRIVANDRUM (Phone: 3924)
TIRUR (Phone: 31)
ERNAKULAM (Phone: 3026)
ERODE (Phone: 172)

AND

Over 70 Authorised Agencies & Sales Depots

Genuine Standard Ayurvedic Medicines and expert medical advice available at our Head Office at Kottakkal and all Branches. Medical advice through correspondence given by our Chief Physician at Kottakkal. Special Treatments like Pizhichil, Navarakizhi etc, are conducted under the supervision of our Chief Physician at our

GOLDEN JUBILLE NURSING HOME AT KOTTAKKAL

MANAGING TRUSTEE.

ಶ್ರೀ ಎಂ. ವಿ. ಶರ್ಮಾ

ಭಾರತೀಯ ಸಂಸ್ಕೃತಿಯೇ ಪ್ರಾಚೀನತಮ

ಮಿಶ್ರ, ಇರಾಕ್, ಭಾರತ, ಚೀನಾ ದೇಶಗಳ ನಾಗರಿಕತೆ ಪ್ರಾಚೀನವಾದುದು. ಇವುಗಳಲ್ಲಿ ಮಿಶ್ರದ ನಾಗರಿಕತೆ ಹಳೆಯದೆಂದೂ ಇದೇ ಇತ್ಯಾದಿ ಪೂರ್ವದೇಶಗಳಲ್ಲಿ ಹರಡಿತೆಂದೂ ಒಂದು ವಾದ. ಆದರೆ, ಸಂಶೋಧನೆಗಳಿಂದ ಮಿಶ್ರೀಯ ಸಭ್ಯತೆಗಿಂತ ಭಾರತೀಯ ಸಭ್ಯತೆಯು ಪ್ರಾಚೀನತಮವೆಂದು ಕಂಡುಬಂದಿದೆ.

ವಿಚಾರಿಸಿದಲ್ಲಿ ಮಿಶ್ರದೇಶದವರ ಸಭ್ಯತೆಯೂ ಭಾರತೀಯರ ಸಭ್ಯತೆಯೂ ಹಲವು ಬಗೆಯಲ್ಲಿ ಹೋಲುತ್ತದೆ. ಪಾಶ್ಚಾತ್ಯ ಚರಿತ್ರಕಾರರಿಗೆ ಭಾರತದ ಹಾಗೂ ಭಾರತೀಯರ ಪರಿಚಯವಿರಲಿಲ್ಲ. ಆ ಕಾರಣದಿಂದ ಮಿಶ್ರ ದೇಶದ ಸಭ್ಯತೆಯೇ ಬಹಳ ಪ್ರಾಚೀನವಾದುದೆಂದೂ, ಅದುವೇ ಇತರತ್ರ ಹರಡಿತೆಂದೂ ಅರಿತು ಚರಿತ್ರೆ ಬರೆದಿರುವರು. ಇಂದಿಗೂ ಹಲವು ಚರಿತ್ರಕಾರರು ಹಾಗೇ ತಿಳಿದುಕೊಂಡಿರುತ್ತಾರೆ.

ಆದರೆ ಕೆಲವರು ವಿಮರ್ಶೆಮಾಡಿ ಮಿಶ್ರ ದೇಶದ ಹಳೆಯ ಸಭ್ಯತೆಯು ಭಾರತೀಯ ಸಭ್ಯತೆಯಂದೂ ಈಗ ತಿಳಿದಂತೆ ಭಾರತೀಯ ಸಭ್ಯತೆಯೇ ಎಲ್ಲಕ್ಕೂ ಪ್ರಾಚೀನವೆಂದೂ ಅಂಯ ಹತ್ರಿದ್ದಾರೆ.

ಈ ಅಭಿಪ್ರಾಯವನ್ನು ಸಮರ್ಥಿಸಿ ಲಂಡನ್ನಿನ "ಇಂಡಿಯನ್ ರಿವ್ಯೂ" ಪತ್ರಿಕೆಯಲ್ಲಿ ಆಲೆಗ್ಜಾಂಡರ್ ಡೆಲ್ಕಾರ್ ಎಂಬವರು ಒಂದು ವಿಸ್ತಾರವಾದ ಲೇಖನವೊಂದನ್ನು ಬರೆದಿದ್ದರು. ೧೯೧೦ರಲ್ಲಿ "ಮಾಡರ್ನ್ ರಿವ್ಯೂ" ಪತ್ರಿಕೆಯಲ್ಲೂ ಅಂತಹ ಒಂದು ಲೇಖನವಿತ್ತು. ಈ ಲೇಖನಗಳ ಆಧಾರದಿಂದ ಮಿಶ್ರ ದೇಶದ ಸಭ್ಯತೆಯು ಭಾರತೀಯರಿಂದ ಅಲ್ಲಿಗೆ ಹೋಯಿತೆಂದು ತಿಳಿಯುವುದು.

ಮೊದಲಿಗೆ ವಿಶ್ರ ದೇಶದವರಲ್ಲಿ ಯಾವ ವಾಡಿಕೆಯಿತ್ತು? ಎಂಬ ಸವಾಲಿಗೆ ದೊರೆಯುವ ಉತ್ತರವಿದು: ಪ್ರಾಚೀನಕಾಲದಲ್ಲಿ ಪಂಚ ದೇಶದಿಂದ ಕೆಲವರು ಬಹು ಸಭ್ಯರಾದ ಜನರು ಬಂದು ಅಲ್ಲಿ ನೆಲೆಸಿದರು. ಅವರು ಬಂದ ಮೇಲೆ ದೇಶದಲ್ಲಿ ನ್ಯಾಯ — ನೀತಿ-ಆಡಳಿತೆ-ಸಾಮಾಜಿಕ ಸಭ್ಯತೆಗಳು ನೆಲೆಗೊಂಡುವು. ಆ ಪಂಚ ದೇಶವು ಪೂರ್ವ ದಿಕ್ಕಿನಲ್ಲಿದ್ದು ಅಲ್ಲಿಗೆ ಹಡಗದಿಂದ ಹೋಗಬೇಕು. ಅಲ್ಲಿ ಅನೇಕ ಹುಣ್ಣು ನದಿಗಳೂ ಇರುತ್ತವೆ. ಸಕಲ ಧಾನ್ಯಗಳೂ ಅಲ್ಲಿ ಯಥೇಚ್ಛವಾಗಿ ಬೆಳೆಯುತ್ತವೆ. ಸಕಲ ಪ್ರಾಣಿಗಳೂ ಅಲ್ಲಿ ಬದುಕುತ್ತವೆ. ರಾಜರೂ ಪ್ರಜೆಗಳೂ ದೇವತೆಗಳಿಗೆ ಸಮವಾಗಿದ್ದಾರೆ. ಇತ್ಯಾದಿ... ಮಿಶ್ರದೇಶದವರು ಹೇಳುವ ಈ ಪಂಚ ದೇಶವು ವಮ್ಮ ಭಾರತ ವರ್ಷವೆಂದೇ ವಿದ್ವಾಂಸರ ವಿಚಾರ. ಪಂಚ, ಪಂಚಲು, ಎನ್ನುವ ಶಬ್ದವು ಆಂಧ್ರ ಮತ್ತು ಮಹಾರಾಷ್ಟ್ರರಲ್ಲಿ ಪಂಡಿತ, ಬ್ರಾಹ್ಮಣ, ಸಾಧು ಎಂಬ ಅರ್ಥದಲ್ಲಿ ಪ್ರಸಿದ್ಧವಾಗಿದೆ. ಆಂಧ್ರ, ಮಹಾರಾಷ್ಟ್ರದಲ್ಲಿ ಯಾರಾದರೂ ಕೆಲವರು ಮಿಶ್ರದೇಶಕ್ಕೆ ಹೋಗಿ ಅಲ್ಲಿ ಭಾರತೀಯ ನೀತಿ—ನಾಗರಿಕತೆಗಳನ್ನು ಪ್ರಚಾರ ಮಾಡಿರಬಹುದಾಗಿ ತಿಳಿಯುತ್ತದೆ.

ಇದಕ್ಕೆ ಸರಿಯಾಗಿ—ಕರ್ನಾಲ್ ಅಲ್ಯಾಟ್ ಎಂಬವರು ಈಗ್ಗೆ ೮ ಸಾವಿರ ವರ್ಷಗಳಿಗೂ ಹಿಂದೆ ಭಾರತೀಯರು ಮಿಶ್ರ ದೇಶಕ್ಕೆ ಹೋಗಿ ವ್ಯಾಪಾರ ಮಾಡುತ್ತಿದ್ದರೆಂದೂ ಅವರೇ ಭಾರತೀಯ ನಾಗರಿಕತೆ ಮತ್ತು ಕಲೆ ಕೈಗಾರಿಕೆಗಳನ್ನು ವಿಶ್ರ ದೇಶದಲ್ಲಿ ಪ್ರಚಾರ ಮಾಡಿದರೆಂದೂ ಹೇಳುತ್ತಾರೆ. ಯಾವುದನ್ನು ಈಜಿಪ್ಟಿನ ಹಳೆಯ ನಾಗರಿಕತೆಯೆಂದು ನಾವು ತಿಳಿದಿದ್ದೆವೋ ಅದು ಭರತ ಖಂಡದಿಂದಲೇ ಅಲ್ಲಿಗೆ ಹೋದದ್ದಾಗಿದೆಯೆಂದೂ ಕರ್ನಾಲ್ ಅಲ್ಯಾಟ್‌ರವರು ಹೇಳುತ್ತಾರೆ.

ಇನ್ನು ಮಿಶ್ರ ದೇಶದಲ್ಲಿ ಶಿವಲಿಂಗಗಳ ದೇವಸ್ಥಾನಗಳಿರುತ್ತವೆ. 'ಖನ್ಸು' ಎಂಬ ದೇವತೆಯ ಅವತಾರ ನರಸಿಂಗ್ ಎಂಬ ಮೂರ್ತಿಯನ್ನು ಮಿಶ್ರ ದೇಶದವರು ಪೂಜಿಸುತ್ತಾರೆ. ಅದು ವಿಷ್ಣು ಅವತಾರ ನರಸಿಂಹನೆಂಬುದು ಸ್ಪಷ್ಟವಾಗಿದೆ.

ಅಲ್ಲಿಯ ಧರ್ಮಸಿದ್ಧತಿಗಳೂ ಆರ್ಯರ ಧರ್ಮ ಪದ್ಧತಿಗಳಂತೆಯೆ ಅಲ್ಲಿಯ ಸ್ತ್ರೀಯರು ಅನ್ಮೊನ್ ಎಂಬ ಮಂದಿರದಲ್ಲಿರುವ ಶಿವಲಿಂಗ ಪೂಜೆಯಿಂದ ಸಂತಾನವಾಗುವುದೆಂದು ತಿಳಿದಿರುತ್ತಾರೆ. ಕೌಂಟ್ ಜಾನ್ಸನ್ ಜೇಮ್ಸ ಎಂಬ ವಿದ್ವಾಂಸನು ಗಂಗಾತೀರದ ಸನ್ನಿವೇಶಗಳಂತೆಯೇ ನೈಲ್ ನದೀ ತೀರವೂ ಇರುತ್ತದೆಯೆಂದು ವರ್ಣಿಸಿದ್ದಾನೆ. ದೇವಾಲಯಗಳು, ಘಾಟುಗಳು, ಅರಳೀ ಮರಗಳು ಎಲ್ಲಾ ಅಲ್ಲಿದೆ; ಸೂರ್ಯನ ಚಿಹ್ನೆ ಕಮಲವೆಂದ ತಿಳಿಯುತ್ತಾರೆ. ರಾಜನೀತಿಯ ಪ್ರವರ್ತಕನೂ ಧರ್ಮ ನೀತಿಯ ಪ್ರವರ್ತಕನೂ "ಮೆನೆಸ್" ಎಂಬವನೆನ್ನುತ್ತಾರೆ.

ಈ ಮೆನೆಸ್ ಶಬ್ದವನ್ನು ಅರಬರು ಮನ್ಸ—ಅಬಿಸೀನಿಯರು ಮನೀ—ಲೀಡಿಯದಲ್ಲಿ ಮೆನ್ಸ—ಕ್ರೀಟನಲ್ಲಿ ಮ್ಯಾನಸ್-ಆಥೆನ್ಸನಲ್ಲಿ ಮೆನ್ಸ—ಇಟ್ಟರಿಯದಲ್ಲಿ ಮೊಂಸುಸ್—ಜರ್ಮನಿಯಲ್ಲಿ ಮನ್ಸ್—ಡೆನ್ಮಾರ್ಕನಲ್ಲಿ ಮನೀ—ಅಯರ್ಲೆಂಡಿನಲ್ಲಿ ಮನಾ ಎಂದು ಹೇಳುತ್ತಾರೆ. ಈ ಎಲ್ಲಾ ಶಬ್ದಗಳು ಧರ್ಮ ಧರ್ಮ-ನೀತಿ ಪ್ರವರ್ತಕನಾದ "ಮನು"ಮಹಾರಾಜನ ಹೆಸರೆಂಬುದಕ್ಕೆ ಸಂಶಯವೇ ಇಲ್ಲ.

ಮಿಶ್ರದೇಶದ ಭಾಷೆಯು ಸಂಸ್ಕೃತದಿಂದ ಹುಟ್ಟಿದ ಭಾಷೆಯಂತೆಯೆ ಇದೆ. ಸಾಧಾರಣ ೧೬೦ ಶಬ್ದಗಳು ಇಲ್ಲಿಯಂತೆಯೇ ಇವೆ. ರೋಗಗಳ ಹೆಸರೂ ಹೀಗೆಯೆ.

ಮಿಶ್ರದೇಶದ ಪಿರಮಿಡ್ ಸಮಾಧಿಗಳು ಕ್ರಿ.ಪೂ. ೧೩೦೦ ವರ್ಷಗಳ ಸುಮಾರಿನವು. ಅವುಗಳನ್ನು ಕೆತ್ತು ಪರೀಕ್ಷಿಸಿದಾಗ —ಹಿಂದುಸ್ತಾನದ ದಕ್ಷಿಣ ಸಮುದ್ರ ತೀರದಲ್ಲಿ ಸಿಗುವ ಪ್ರತಿಮೆ-ಆಕೃತಿ ಮೊದಲಾದವು ಇದ್ದವು.

ಮಿಶ್ರದೇಶದಲ್ಲಿ ಹಣ್ಣು-ಕರಕಾರಿಗಳ ಹೆಸರೆಲ್ಲಾ ಇಲ್ಲಿಯ ಹೆಸರಿನಂತೆಯೇ ಇವೆ. ಭರತಖಂಡದ ಅನೇಕ ಔಷಧಗಳು ಮಿಶ್ರ, ಏಶಿಯಾ ಮೈನರ್, ರೋಂ, ಮತ್ತು ಗ್ರೀಸುಗಳಲ್ಲಿ ಬೆಳೆಯುತ್ತವೆ.

ಅಲಕಜಂದ್ರಿಕಾ ಎಂಬುದರ ತದ್ಭವವೇ ಅಲೆಕ್‌ಸಂದ್ರಿಯಾ ಪಟ್ಟಣದ ಹೆಸರು. ಒಂದು ಅರಬೀ ಚರಿತ್ರೆ ಪುಸ್ತಕದ ಪುಟ ೨೦೪, ೨೦೫ರಲ್ಲಿ—ಕ್ರಿಸ್ತ ಶಕೆಯ ಶತಮಾನದಲ್ಲಿ ಒಬ್ಬ ರಾಜನು ಮಿಶ್ರದೇಶದಲ್ಲಿದ್ದ ದೇವಾಲಯ-ವಿಗ್ರಹ ಮೊದಲಾದುವನ್ನೆಲ್ಲಾ ತೆಗೆಯಿಸಿಬಿಟ್ಟನೆಂದು ಬರೆದಿದೆ. ಅಲೆಕ್ಸಾಂಡ್ರಿಯಾ ಪಟ್ಟಣದಲ್ಲಿ ಒಂದು ದೊಡ್ಡ ಪಂಚ ಮಂದಿರವಿತ್ತೆಂದೂ ಬರೆದಿದೆ.

ಹೀಗೆ ಭಾಷೆ-ಭಾವ-ನೀತಿ-ನಡೆ-ಮಡಿ-ಗುಡಿ-ದೋಪುರ-ಸನ್ನಿವೇಶ-ಗಿಡ-ಮೂಲಿಕೆ ಮೊದಲಾದುವನ್ನು ವಿಚಾರ ಮಾಡಿದರೆ ಭಾರತೀಯ ಸಂಸ್ಕೃತಿಯೇ ಒಂದು ಕಾಲಕ್ಕೆ ಅಲ್ಲಿಗೆ ಹೋಗಿ ನೆಲೆಸಿತ್ತೆಂದು ಸ್ಪಷ್ಟವಾಗುವದು.

ಮಿಶ್ರ ದೇಶದಲ್ಲಿನ ಸಂಸ್ಕೃತಿಗೆ ೮, ೧೦ ಸಾವಿರ ವರ್ಷವಾಗಬಹುದಾದರೆ ಭಾರತೀಯ ಸಂಸ್ಕೃತಿಗೆ ಎಷ್ಟಾಗಬಹುದೆಂದು ಊಹಿಸಲಿಕ್ಕೇ ಅಸಾಧ್ಯ. ಭಾರತೀಯ ಸಂಸ್ಕೃತಿಯ ಆರಂಭ ಕಾಲವು ಇನ್ನೂ ಸಿಕ್ಕಿಲ್ಲ. ಶೋಧ ಹಡೆದಂತೆ ಅದು ಹಿಂದೆ ಹಿಂದೆ ಹೋಗುವದು. ಹೀಗಿದ್ದೂ ನಮ್ಮ ದೇಶದ ಚರಿತ್ರಕಾರರೇ ಕೆಲವರು ಭಾರತೀಯ ಸಂಸ್ಕೃತಿಯು ಬೇರೆ ಬೇರೆ ದೇಶದಿಂದ ಬಂತೆಂದು ಕಣ್ಣು ಮುಚ್ಚಿ ಬರೆದಿರುವದು ಶೋಚನೀಯ.

ಪಾಶ್ಚಾತ್ಯ ಚರಿತ್ರಕಾರರೇ ಅನೇಕರು ಭಾರತೀಯ ಸಭ್ಯತೆಯ ಅದಿ ಸಿಗುವದಿಲ್ಲವೆಂದೂ, ಪುರಾಣಗಳ ಕಡೆಗೆ ಹೊರಳಿದರೆ ಅದು ಲಕ್ಷಾವಧಿ ವರ್ಷಗಳ ಹಿಂದೆ ನಮ್ಮನ್ನು ಸೆಳೆದುಕೊಂಡು ಬಿಡುವದೆಂದೂ ಹೇಳುತ್ತಾರೆ. (ಸಾಧಾರ)

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು ಡಾ. ಕೊರತ್ತಳ್ ವೆಂಕಟ್ರಾವ್, ಎಲ್. ಐ.ಎಮ್.ಎಸ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಬಿ. ಎಸ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿಯರ, ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಸುಲಭವಾಗಿ ಮದ್ದು ಸಾಧಿಸುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಶಾಲ ಸವಿಸ್ತಾರವಾದ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨-೦೦ (ಅಂಚೆ ಖರ್ಚು ಬೇರೆ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಲಾಡುಸಿ, ಮೈಸೂರು.

ಸ್ತ್ರೀ ಪುರುಷರಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಪಾರಂಪರಿಯಾತ ಆಯುರ್ವೇದ ಔಷಧಿ ಮತ್ತು ಕಲ್ಪ ಪೈಷ್ಟಿಕೀಯ
ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI.(MYSORE.)

'ರವಿ ಕಾಣದುದನ್ನು ಕವಿ ಕಾಣುತ್ತಾನೆ' ಎಂಬೊಂದು ನಾಣ್ಣುಡಿಯಿದೆ. ಜಗತ್ತಿನ ಎಲ್ಲೆಡೆ ಜಗಜ್ಜ್ಯೋತಿಯೊಡರ ವಿಯು ತನ್ನ ಕಿರಣಗಳನ್ನು ಹರಡಿ, ಅಲ್ಲಿರುವ ಯಾವತ್ತೂ ವಿಷಯಗಳೂ ಕಣ್ಣಿಗೆ ಕಾಣುವಂತೆ ಬೆಳಗ ವನು. ಆದರೆ ಕವಿಯಾದರೋ ಜನ ಮನೋಮಂದಿರದಲ್ಲಿ ಹುದುಗಿರುವ ಅನೇಕ ಜಟಿಲ ಸಮಸ್ಯೆಗಳನ್ನು ಕುರಿತು ಎಳೆಯೆಳೆಯಾಗಿ ವಿಶ್ಲೇಷಿಸಿ, ಬಣ್ಣಿಸಿ, ಸರಿ ತಪ್ಪುಗಳನ್ನು- ಗುಣದೋಷಗಳನ್ನು ಹೊಳೆಯಿಸಿ, 'ಮನಂಬುಗು'ವಂತೆ ತಿಳಿಯಿಸುವನು. ರವಿಯ ಕಿರಣ ಪ್ರಕಾಶಕ್ಕಿಂತ ಕವಿಯ ಪ್ರತಿಭಾ ಪ್ರಕಾಶವು ವಿಶೇಷತಃ ಪ್ರಭಾವಿಯೊಗಿದೆ. "ಕಟ್ಟುರೆ ಕಟ್ಟದಿರ್ಕೆ ಕಡಲಂ ಕಸಿ ಸಂತತಿ" ಎಂದೊಬ್ಬನು ಹೇಳಿದ್ದಾನೆ. ಆದುದರಿಂದ, ಈ ಮೇಲಿನ ನಾಣ್ಣುಡಿ ನಿತ್ಯ ಸತ್ಯವಾಗಿ, ಶ್ರಿಕಾಲಾಬಾಧಿತವಾಗಿದೆ.

ಕವಿಯು ಶಬ್ದ ಬ್ರಹ್ಮನೆಂದೂ, ಚತುರ್ಮುಖನೆಂದೂ ಇನ್ನೂ ಹಲವಾರು ವಿಶೇಷಣ ಪದಗಳು ನಾಮಾಂತರಗಳು ಕೇಳಬರುತ್ತಿವೆ. ಇವುಗಳಲ್ಲಿ ಕೆಲವು ಅರ್ಥವತ್ತಾಗಿ ಹೇಳಿವೆ. ಕವಿಯು ತಾನು ಬಣ್ಣಿಸುವ ಹೊಸತರದ ವಸ್ತು ಭಾವಗಳಿಗೆ ತಕ್ಕ ಹೊಸ ನುಡಿತಗಳನ್ನು ಸೃಷ್ಟಿಸುವುದರಿಂದ "ಶಬ್ದ ಬ್ರಹ್ಮ" ನೆಂಬುದು ಯಥಾರ್ಥವಾಗಿದೆ. ಕವಿ ಚತುರ್ಮುಖನೆಂಬುದು ಅದರ ಪರ್ಯಾಯ ವಾಚಕವಾಗಿ ಕಂಡರೂ, ಕವಿಯ ಚತುರ್ಮುಖಗಳೇನೆಂದು ಬೇರೆ ಪ್ರಶ್ನೆಯಲು ಅವಕಾಶವಿದೆ. ಈ ಬಗೆಗೆ ಪ್ರಾಚೀನ ಕೃತಿಯ ಪದ್ಯವೊಂದನ್ನು ಆಧರಿಸಿ, ತುಸ ವಿಶದೀಕರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

"ಕವಿಮುಖ ಚಂದ್ರಂ, ಕವಿ ಚ ।
ಕ್ರವರ್ತಿ, ಕವಿರಾಜ ಶೇಖರಂ,
ಕವಿರಾಜಂ ।
ಕವಿಜನ ಚೂಡಾರತ್ನಂ ।
ಕವಿತಿಲಕಂ, ಕವಿಚತುರ್ಮುಖಂ,
ಕವಿರತ್ನಂ ॥"

ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ "ಅಭಿನವ ಚಕ್ರವರ್ತಿ"ಯೆಂದು ಹೆಸರಾಂತ ಮಹಾಕವಿ ರನ್ನನು "ಅಜಿತ ಪುರಾಣ'ದಲ್ಲಿ ಹೇಳಿದ ಪದ್ಯವಿದು. ಇದನ್ನು ಭಗ್ನಂಕರದಿಂದ ಅವನೇ ತುಸ ವಿವರಿಸಿದುದು ಹೀಗಿದೆ:

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಕವಿ ಚತುರ್ಮುಖನೆಂದರೇನು?

(ಕವಿಯ ನಾಲ್ಕು ಮುಖಗಳ ಪರಿಚಯ)

'ಕವಿ ಚತುರ್ಮುಖ' ಎಂಬ ಪದ ಪ್ರಯೋಗವು ಸಾಹಿತ್ಯದಲ್ಲಿ ಸಾಮಾನ್ಯ. ತಮ್ಮನ್ನು 'ಕವಿ ಚತುರ್ಮುಖ'ರೆಂದು ಕರೆದುಕೊಂಡ ಕವಿಗಳೂ ಇದ್ದಾರೆ. ಆದರೆ ಕವಿಯ ಚತುರ್ಮುಖಗಳಾವುವು? ಈ ಬಗ್ಗೆ ಜಿಜ್ಞಾಸೆ ನಡೆಸಿದಾಗ ಎರಡನೆ ನಾಗವರ್ಮನ ಪದ್ಯವೊಂದು ಪರಿಹಾರ ಸೂಚಿಸುತ್ತದೆ—ಇದುವೇ ಸೂತ್ರವೆನಿಸುತ್ತದೆ.

"ಪೊಸರದೇಸೆಯುಂ, ಪೆಡಂಗಂ ।
ರಸಫಟ್ಟಿಯುಂ, ಅರ್ಥ ದೃಷ್ಟಿಯುಂ,
ಬಗೆವರೊ, ಭಾ ।
ವಿಕುವರೊ ನಾರಣೆಯಂತರೆ ।
ಕಸವಂ ಪಿಡಿವರ್ ಕೆಲರ್ ಮಹಾ
ಪುರುಷರ್ಕಳ್ ॥"

ಇದೇ ರನ್ನ ಕವಿಯ 'ಗದಾಯುದ್ಧ" ಕಾವ್ಯದಲ್ಲಿ ಇದರ ಇನ್ನೊಂದು ವಿವರಣವಿದೆ:

"ರಸವಂ, ಭಾವಮುಮಂ, ಕಾ ।
ಳಸಮಂ, ಕೂಣಿಕೆಯುಂ ಮನರಿದು
ಕವಿ ಮಾರ್ಗದೊಳಂ ।
ಪೊಸ ದೇಸೆಯ ನುಡಿಗಳೊಳಂ ।
ಪೊಸಯಿಪ ಬಲ್ಮೆಗೆ ಚತುರ್ಮುಖಂ
ಕವಿ ರನ್ನಂ ॥"

ಇಲ್ಲಿ ಕಾವ್ಯದ ಚತುರಂಗಗಳನ್ನು ರಸಭಾವಾದಿಗಳನ್ನು ಹೆಸರಿಸಿದ್ದಾನೆಷ್ಟೆ. 'ಕವಿಚತುರ್ಮುಖ (ಶಬ್ದಬ್ರಹ್ಮನ) ಚತುರ್ಮುಖಗಳೇನೆಂದು ಸ್ಪಷ್ಟವಾಗುವಂತಿಲ್ಲ. ಈ ಬಗೆಯ ವಿವರಣವನ್ನು ತಿಳಿಯ ನಾಗವರ್ಮನು ಹೇಳಿದ್ದನೆ.

ಕನ್ನಡ ಸಾಹಿತ್ಯ ಭಾಂಡಾಗಾರದ 'ಕೈಪಿಡಿ' ಯಂತಿರುವ 'ಕಾವ್ಯಾವಲೋಕನ'ವು ನಾಗವರ್ಮನ ಕೃತಿರತ್ನವು. ಅದರ ಮೂರನೆಯ ಅಧಿಕರಣವನ್ನು—ಗುಣದೋಷವಿವೇಕವನ್ನು ಪೂರೈಸುವಲ್ಲಿ, ಕವಿಯು ತನ್ನನ್ನು ಕುರಿತು ಹೇಳಿದ ಪದ್ಯವೊಂದು ಹೀಗಿದೆ:

"ಶ್ರುತದೇವೀ ಮಕರಂದ ಕಲ್ಪ
ಲತನಂ,
ವಾಕ್ ಶ್ರೀನಿವಾಸಾಂಬುಜಾಯತ
ವಕ್ತ್ರಂ,
ರಸಭಾವ ಭಾಸುರ ಸಮುದ್ಯದ್ಭಾರತೀ
ನರ್ತನೋಚಿತ ರಂಗ ಪ್ರತಿಮಾನನಂ,
ಪ್ರವಿಲಸದ್ವಾಕ್ಸುಂದರೀ ಕುಂಕು
ಮಾಂಕಿತ
ಕೇಳೀ ಭವನಾಚಿರೋಷಮು ಮುಖಂ,
ಭೂಭಾಗದೊಳ್ ನಾಕಿಗಂ ॥"

ಇಲ್ಲಿ 'ಶ್ರುತ-ಲತನಂ', 'ವಾಕ್-ವಕ್ತ್ರಂ', 'ರಸಭಾವ-ಆನನಂ', 'ಪ್ರವಿಲಸದ್ವಾಕ್-ಮುಖಂ' ಎಂಬುದಾಗಿ ನಾಲ್ಕು ಬಾರಿ—ಬೇರೆಬೇರೆಯಾಗಿ ಕವಿಯ ಚತುರ್ಮುಖಗಳು ಹೇಳಿದಂತಿವೆ! 'ಭೂಭಾಗದೊಳ್ ನಾಕಿಗಂ' ಹೀಗೆ 'ಕವಿ ಚತುರ್ಮುಖ"ನಾಗಿದ್ದಾನೆಂದು ಅಂತರಿಕವಾಗಿ ಹೇಳಿದೆ! ಈ ಪದ್ಯದಲ್ಲಿ ನಾಲ್ಕು ಸರ್ತಿ—ಬೇರೆ ಬೇರೆಯಾಗಿ ಕವಿಯ ಚತುರ್ಮುಖಗಳೇನೆಂದು ಹೆಸರಿಸಿವೆ ಯಾದರೂ "ಸುಲಭಾವಗಾಹ"ವಾಗಿಲ್ಲ! ಈ ಪದಗಳನ್ನು ವಿವರಿಸಿದರೆ, ಪೂರ್ವ-ಸ್ಪಷ್ಟ-ಯಥಾರ್ಥ ವೇದ್ಯವಾಗುತ್ತದೆ!

೧. 'ಶ್ರುತದೇವೀ ಮಕರಂದ ಕಲ್ಪಲತನಂ" ಎಂದು ಬ್ರಹ್ಮನೊಂದು ಮೊಗದ ಪರಿಚಯವಿದೆ. ಕಾವ್ಯ ರಚನೆಗೆ ಕವಿಗಿರಬೇಕಾದ ಪ್ರಾಮುಖ್ಯ ಸಾಧನಗಳೇನೆಂದು ಪ್ರಾಚೀನರು ಹೇಳಿದ್ದಾರೆ. ಅವಲ್ಲಿ "ಶ್ರುತಂ ಚ ಬಹು ನಿರ್ಮಲಂ' ಎಂಬುದೊಂದು (ದಂಡಿ). ಇದನ್ನು ಆಧರಿಸಿ, ಇದೇ ಕಾವ್ಯದಲ್ಲಿ "ಕಾವ್ಯ ವಿದ್ಯಾಪ್ರಚಯ ಪರಿಚಯಂ', "ಲೋಕಾಗಮ ಸಕಲ ಕಲಾವೇದಿತಂ ವಿದ್ಯೆ'ಯೆಂದಿದೆ. ಪ್ರಸ್ತುತ ಪದ್ಯದಲ್ಲಿ 'ಶ್ರುತ'ವೊಂದು ಮೋರೆಯೆಂದು ಮೊದಲಾಗಿ ಹೇಳಿದೆ: "ಶ್ರುತ ದೇವಿಯ (ಶ್ರುತ ದೇವಿಗೆ) ಮಕರಂದ ದಂತಿರುವ—ಸಾರದಂತಹ, ಲತನವೆಂದು ಸಮಸ್ತಾರ್ಥವಾಗುತ್ತದೆ (ಮಕರಂದ—ಒಂದು ತರದ ಮಲ್ಲಿಗೆ—ಜಾಜಿ-ರೆ. ಜೆ. ಮುಚರ್ ಸಂಕಲಿತ ಕನ್ನಡ ಅಂಕ್ಲಿ ಕೋಶ). ಕವಿಗೆ ಹಲವಾರು ಗ್ರಂಥಗಳ ಅನುಭವವು—ಸಾರಾಂಶ ಮೊತ್ತ ಮೊದಲಾಗಿರಬೇಕೆಂದು ಇಲ್ಲಿ ಹೇಳಿಯದೆ!

೨. "ವಾಕ್ ಶ್ರೀನಿವಾಸಾಂಬುಜಾಯತ ವಕ್ತ್ರಂ" ಎಂಬುದು ಬೇರೆ ತರದ ಮೋರೆಯೊಂದು. ಕವಿಗೆ ನಿರರ್ಗಳವಾದ ವಾಕ್ ಸಂಪತ್ತಿಯು ಅವಶ್ಯವೆಂಬುದಕ್ಕೆ ಮರುಮಾತಿಲ್ಲ. ಏಕೆಂದರೆ, ಕಾವ್ಯವೆಂದರೆ ವಾಕ್‌ಸಂಪತ್ತಿಯಿಂದ—ಸಾರ್ಥಕದಿಂದ ರಾರಾಜಿಸಬೇಕು, 'ವಾಗರ್ಥಾವಿವ ಸಂಪೃಕ್ತೌ' ಎಂದು ಕಾಲಿದಾಸನ ಸೂಕ್ತಿ. ಆಗ ತಾನೇ—ನಿರರ್ಗಳ ವಾಙ್ಮಯವಿದ್ದರೆ ಬೃಹತ್‌ಕೃತಿಯ ನಿರ್ಮಾಣವಾದೀತು.

"ಮುಕ್ತರೇ ಕವಯೋಽನಂತಾಃ ।
ಸಂಘಾತೇ ಕವಯಃ ಶತಂ ।
ಮಹಾಪ್ರಬಂಧೇಷು ಕವಿ ।
ರೇಕೋ ದ್ವೌ ದುರ್ಲಭಾಸ್ತ್ರಯಃ ॥"

ಎಂದು 'ಕಾವ್ಯ ಮೀಮಾಂಸೆ'ಯಲ್ಲಿದೆ. 'ವಾಗ್ಮಿ ಸರ್ವಂ ಪ್ರತಿಷ್ಠಿತಂ' ಎಂಬುದು ಭರತನ 'ನಾಟ್ಯಶಾಸ್ತ್ರ'ದ ಮಾತಾಗಿದೆ. ಮನುಷ್ಯನು ಮಾತು ಬಲ್ಲವನಾದುದರಿಂದಲೇ ಎಲ್ಲಾ ಪ್ರಾಣಿಗಳಿಗಿಂತಲೂ ಮೇಲಾಗಿದ್ದಾನೆ. ಆ ಮೇರೆಗೆ, 'ವಾಕ್ಕೈಂಬಲಕ್ಷ್ಮೀದೇವಿಯು ನಿವಾಸಕ್ಕೆ ಅಂಬುಜದಂತಿರುವ ವಕ್ತ್ರ'ದೆಂದು ಇಲ್ಲಿ ಸಮಂಗತಾರ್ಥವು.

೩. "ರಸಭಾವ ಭಾಸುರ ಸಮುದ್ಯದ್ಭಾರತೀ ನರ್ತನೋಚಿತ ರಂಗ ಪ್ರತಿಮಾನನಂ" ಎಂಬುದರಲ್ಲಿ, ಕವಿಯ ಇನ್ನೊಂದು ಮುಖವಾಗಿದೆಯೆಂದು ಯಾವುದನ್ನು ಹೇಳಬೇಕೆಂದ ಪ್ರಕಟಿಸಬೇಕು. ಕಾವ್ಯದ ಮುಖ್ಯಾಂಗವೇನೆಂದು ಚರ್ಚಿಸಿದ ಪ್ರಾಚೀನರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಗೆ ಪ್ರಾಧಾನ್ಯವಿತ್ತರು. ಅವಲ್ಲಿ ಕೊನೆಯ ಹಾಗೂ ಸಂಪೂರ್ಣವಾದ ವಿಚಾರ ನಿರ್ಣಾಯವೆಂದರೆ, 'ರಸವೇ ಕಾವ್ಯದ ಆತ್ಮ'ವೆಂದು. ಕಾವ್ಯವು ಬೇರೆ ಅನೇಕ ವಿಷಯಾಂಶಗಳಿಂದ ಕೂಡಿದರೂ ವಿರಹಿತವಾದರೂ ಅಡ್ಡಿಯಿಲ್ಲ, ನೀರಸವಾದುದು ಅಸ್ವೀಕಾರ್ಯವೆಂದು ಸರ್ವ ಸಮ್ಮತವು. ಅದು ಕಾರಣ, "ರಸ-ಭಾವ ವೃತ್ತಿ ನಿರ್ಣೇತಿಯೆ ಜೀವಂ"ಎಂದು ಇದೇ

(ಇಪ್ಪತ್ತೆರಡನೇ ಪುಟ ನೋಡಿರಿ)

For all your requirements
VISIT
JANATHA BAZAAR
SAHAKARI MAHAL
MANGALORE.
S. K. C. C. W. Stores Ltd.

ಪ್ರೊ। ಎಂ. ಎಸ್. ಎಸ್. ರಾವ್.

ಭಾರತದ ವನ್ಯಜೀವಿ ಸಂರಕ್ಷಣಾ ಕೇಂದ್ರಗಳು ಮತ್ತು ರಾಷ್ಟ್ರೀಯ ಉಪವನಗಳು

ಬೇಟೆಯ ಜಟ ಹೆಚ್ಚದಂತೆ ಕೆಲವು ಜಾತಿಯ ಮೃಗ ಪಕ್ಷಿಗಳೇ ಇಲ್ಲವೆನಿಸುತ್ತ ಬರುತ್ತಿವೆ. ಇದಕ್ಕಾಗಿ ಅತ್ಯಪೂರ್ವ ಮೃಗ ಪಕ್ಷಿಗಳ ಸಂರಕ್ಷಣೆಗಾಗಿ ನೇಪಥಲ್ಲಿ ಕೆಲವೊಂದು ಕೇಂದ್ರ ಮತ್ತು ಉಪವನಗಳು ಇವೆ. ಪ್ರೊ। ರಾಯರು ಇವುಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಿಕೊಟ್ಟಿದ್ದಾರೆ.

ಭಾರತದಲ್ಲಿ ವನ್ಯ ಜೀವಿಗಳ ರಕ್ಷಣೆಗಾಗಿ ಅನುಸರಿಸಲಾದ ವಿಧಾನಗಳಲ್ಲಿ ರಕ್ಷಣಾ ಕೇಂದ್ರಗಳು (ಅಭಯಾರಣ್ಯಗಳು) ಮತ್ತು ರಾಷ್ಟ್ರೀಯ ಉಪವನಗಳನ್ನು ನಿರ್ಮಿಸುವುದು ಒಂದು ರಚನಾತ್ಮಕ ಆಧುನಿಕ ವಿಧಾನದ ಸೆಜ್ಜೆಯೆಂದೇ ಹೇಳಬೇಕು. ಈ ಪ್ರದೇಶಗಳಲ್ಲಿ ವನ್ಯ ಜೀವಿಗಳು ವಿನಾಶದ ಯಾವ ಅಳುಕು, ಅಂಜಿಕೆಯೂ ಇರದೆ, ನಿರಾತಂಕವಾಗಿ ಬಾಳುತ್ತವೆ. ಅದನ್ನಂತಲೂ ಹೆಚ್ಚು ಮಹತ್ವದ ವಿಷಯವೆಂದರೆ,—ಅವುಗಳ ವಂಶಾಭಿವೃದ್ಧಿಗೆ ಯೋಗ್ಯ ಪರಿಸ್ಥಿತಿ ಯೆನಿಸಿರುತ್ತದೆ. ರಕ್ಷಣಾ ಕೇಂದ್ರಗಳು ಮತ್ತು ರಾಷ್ಟ್ರೀಯ ಉಪವನಗಳು ಗಂಭೀರತರ ಪರಿಸ್ಥಿತಿಯೊಳಗಿದ ಯಾವುದೇ ವ್ಯಾಪಕವಾಗಿ ಯೋಗ್ಯ ಆಶ್ರಯ, ರಕ್ಷಣೆ ಮತ್ತು ಪ್ರೋತ್ಸಾಹಕೊಡಬಲ್ಲವು. ಸಧ್ಯ ಕೆಲವು ವಿಶಿಷ್ಟ ವ್ಯಾಪಗಳು ತೀರ ಅಪರೂಪವಾಗಿರುತ್ತವೆಯೆಂದೇ. ಅಂತಹ ವನ್ಯ ವ್ಯಾಪ ಸಂರಕ್ಷಣೆಯ ಹಾಗೂ ವ್ಯಾಪಗಳ ಉಪವನಗಳಲ್ಲಿ ನೊಡಲು ನಾಡು, ಸರಿ, ದೊಡ್ಡದು ಮಾಡಿ, ನಂತರ ಅವುಗಳ ಪ್ರಕೃತಿ ಸನ್ನಿವೇಶಗಳಾದ ರಕ್ಷಣಾ ಕೇಂದ್ರಗಳಿಗೆ ಹಿಂದಿರುಗಿಸಬಹುದು.

ಹಾಗಾದರೆ ವನ್ಯಜೀವಿಗಳ ರಕ್ಷಣಾ ಕೇಂದ್ರಗಳೆಂದರೇನು? ವನ್ಯ ಜೀವಿಗಳಿಗಾಗಿರುವ ಭಾರತೀಯ ಕೇಂದ್ರಮಂಡಳಿಯೊಂದು ಹೀಗೆ ವಿವರಿಸುತ್ತದೆ: ತೀರ ಅವಶ್ಯ ಬಿದ್ದಾಗ ಮತ್ತು ಯೋಗ್ಯ ಅಧಿಕಾರಿಯ ಅಪ್ಪಣೆಯ ಹೊರತು ಮತ್ತೆಲ್ಲ ವೇಳೆಯಲ್ಲಿ ರಕ್ಷಣಾ ಕೇಂದ್ರಗಳಲ್ಲಿ ಯಾವುದೇ ಪ್ರಾಣಿ ಅಥವಾ ಪಕ್ಷಿಯನ್ನು ಕೊಲ್ಲುವುದು, ಸೆರೆಹಿಡಿಯುವುದು, ಹಿಂಸಿಸುವುದು ಇತ್ಯಾದಿಗಳನ್ನು ನಿಷೇಧಿಸುತ್ತದೆ.

ಅದರ ಎಲ್ಲೆಗಳು ಮತ್ತು ಅದರ ಪ್ರಕೃತಿಸಹಜ ವಿನ್ಯಾಸವನ್ನು ಅದಕ್ಕೆ ಪರಿಮಿತಿಯದೆಂದು ತಿಳಿದುಬೇಕು. ಇದರ ಜತೆಗೆ ಅಂತಹ ರಕ್ಷಣಾ ಕೇಂದ್ರದೊಳಗೆ ಮತ್ತು ಹೊರಗಿನ ಪವಿತ್ರ ಸ್ಥಳಗಳನ್ನು ಅಥವಾ [illegible] ಎಲ್ಲೆಗಳನ್ನು ಗುರುತಿಸಬೇಕಾಗುತ್ತದೆ.

[illegible] ರಾಷ್ಟ್ರೀಯ ಉಪವನವು ಕೆಲವು "ಬ್ರಿಗೆಡಿಯರ್ ಪುಷ್ಟಿಗೊಂಡು ಸ್ಥಳಗಳ ಸೌಂದರ್ಯವನ್ನು ರಾಷ್ಟ್ರೀಯ ಮಹತ್ವದ ಪ್ರಕೃತಿ ಮತ್ತು ಐತಿಹಾಸಿಕ ಸ್ಥಳಗಳನ್ನು ಜೋಪಾನಗೊಳಿಸಿ ಅವುಗಳನ್ನು ಸಮರ್ಪಕವಾಗಿ ನೋಡಿ ಆನಂದಿಸಲು [illegible] ವ್ಯವಸ್ಥೆಗಳನ್ನು ಮಾಡುವುದರ ಜೊತೆಗೆ ಕೈಗೊಂಡಿರುವ ಸೂಚಿಸುವ.

ಸಂರಕ್ಷಣಾ ಕೇಂದ್ರ ಮತ್ತು ರಾಷ್ಟ್ರೀಯ ಉಪವನಗಳು ಇವುಗಳ ನಿರ್ಮಾಣದಲ್ಲಿ ಅಡಗಿರುವ ಮೂಲಉದ್ದೇಶ ಎರಡರಲ್ಲಿಯೂ ಒಂದೇ ಆಗಿದೆ. ಅದು ವನ್ಯ ಜೀವಿಗಳಿಗೆ ಸಾಧ್ಯವಿದ್ದ ಎಲ್ಲ ರಕ್ಷಣೆಯನ್ನು ನೀಡುವುದೇ ಆಗಿದೆ. ಆದರೆ ಅದರಲ್ಲಿ ಒಂದು ಮೂಲ ವ್ಯತ್ಯಾಸವಿದೆ. 'ರಕ್ಷಣಾ ಕೇಂದ್ರ'ವೆಂಬುದನ್ನು ಸರ್ಕಾರಿ ಒಂದು ಉಚ್ಚ ಅಧಿಕಾರಿಯ ಅಪ್ಪಣೆಯೊದ ಮೇಲೆ ನಿರ್ವಹಿಸುತ್ತದೆ. ಆ ಅಧಿಕಾರಿ ಅರಣ್ಯದ ಮುಖ್ಯಾಧಿಕಾರಿಯಾಗಿರಬಹುದು. ಒಟ್ಟು ಮಂತ್ರಿಯಾಗಿರಬಹುದು. ಇಲ್ಲವೇ ಒಂದು ರಾಜ್ಯದ ಸರ್ಕಾರವಾಗಿರಬಹುದು; ಆದರೆ ರಾಷ್ಟ್ರೀಯ ಉಪವನವನ್ನು ಒಂದು ರಾಜ್ಯದ ವಿಧಾನ ಸಭೆಯಲ್ಲಿ ಕಾಯಿದೆಯು ಮಂಜೂರಾದ ನಂತರವೇ ನಿರ್ಮಿಸಬಹುದು, ಇಲ್ಲದೇ ರದ್ದುಗೊಳಿಸಬಹುದು, ಇಲ್ಲವೆ ಅದಲು ಬದಲು ಮಾಡಬಹುದು; ಇಲ್ಲವೇ ಮೂಲಾಟ ಕೂಡ ಮಾಡಬಹುದು.

ರಕ್ಷಣಾ ಕೇಂದ್ರಗಳು
(ಬೇಟೆಯ ನಿಷಿದ್ಧ ಸ್ಥಳಗಳು)

ಭಾರತದ ಅರಣ್ಯದ ಕಾಯಿದೆಯಲ್ಲಿ ಈ ರಕ್ಷಣಾ ಕೇಂದ್ರಗಳಿಗೆ ಅಗಲೇ ಅವಕಾಶವೂ ಕೊಡಲಾಗಿದೆ. ಅರಣ್ಯಾಧಿಕಾರಿಗಳು ಬಂದು ಸ್ವಲ್ಪ ಇಲ್ಲವೇ ದೀರ್ಘಕಾಲದ ವರೆಗೆ ಅರಣ್ಯದಲ್ಲಿ ಕೆಲವು ಭಾಗಗಳನ್ನು "ರಕ್ಷಣಾ ಕೇಂದ್ರಗಳೆಂದು" ಸಾರಿ ಅವುಗಳನ್ನು ಬೇಟೆಗಾರರಿಗೆ ಮುಕ್ತವಿಡದೆ, ಬೇಕಾದ ನಿರ್ಬಂಧಗಳನ್ನು ಹಾಕಬಹುದು.

ಅಸ್ಸಾಂ, ಪಶ್ಚಿಮ ಬಂಗಾಲ ಮುಂತಾದ ರಾಜ್ಯಗಳಲ್ಲಿ ಕೆಲವು ರಕ್ಷಣಾ ಕೇಂದ್ರಗಳನ್ನು ಅಥವಾ ಬೇಟೆಯ ನಿಷಿದ್ಧ ಸ್ಥಳಗಳನ್ನು ಅತ್ಯಂತ ಪವಿತ್ರ ಸ್ಥಳಗಳೆಂದು ಕಳೆದ 25 ವರ್ಷಗಳಿಂದಲೂ ಸಾರಿ ಅಲ್ಲಿ ವನ್ಯ ಜೀವಿಗಳಿಗೆ ಯಾರೂ ಕೈ ಹಚ್ಚದಂತೆ ನೋಡಿಕೊಳ್ಳಲಾಗುತ್ತದೆ. ಹಿಂದಿನ ಸಂಸ್ಥಾನಿಕ ರಾಜ್ಯಗಳಲ್ಲಿ ಅಂದರೆ ತಿರುವಾಂಕೂರ್ ಸಂಸ್ಥಾನದ "ಪೆರಿಯಾರ್" ನಲ್ಲಿ ಮೈಸೂರಿನ 'ಬಂಡೀಪುರ' ಎಂಬಲ್ಲಿ ಜೂನಾಗಡ್ ಸಂಸ್ಥಾನದ 'ಗೀರ್' ಎಂಬಲ್ಲಿ ಪಾಟಿಯಾಲಾ ಮತ್ತು ರಾಜಸ್ಥಾನಗಳ ಕೆಲವು ಪ್ರದೇಶಗಳಲ್ಲಿ ಇಂತಹ ರಕ್ಷಣಾ ಕೇಂದ್ರಗಳೂ ಹಾಗೂ ಬೇಟೆಯ ನಿಷಿದ್ಧ ಸ್ಥಳಗಳು ಹಲವಾರು ವರ್ಷಗಳಿಂದ ಪಾಲಿಸಿ ಮಾಡಲ್ಪಟ್ಟಿವೆ. ಈಗ ಭಾರತದ ಎಲ್ಲ ರಾಜ್ಯಗಳಲ್ಲಿ ಸುಮಾರು 3,000 ಚ. ಮೈ. ಕ್ಷೇತ್ರದಲ್ಲಿ ಒಟ್ಟು 72 ರಕ್ಷಣಾ ಕೇಂದ್ರಗಳು ಬೇಟೆಯ ನಿಷಿದ್ಧ ಸ್ಥಳಗಳು ಇವೆ.

ಈ ಒಂದೊಂದು ಬೇಟೆಯ ನಿಷಿದ್ಧ ಸ್ಥಳಗಳೂ ಪ್ರಕೃತಿ ಸೌಂದರ್ಯದಲ್ಲಿ ಒಂದೊಂದು ತರಹದಿದ್ದ ವನ್ಯಜೀವಿಗಳ ಸಂಪತ್ತಿನಲ್ಲಿ ಒಂದೊಂದೂ ವೈವಿಧ್ಯಪೂರ್ಣವಾಗಿದೆ. ಒಣ ಕುರುಚಲು ಗಿಡಿಗಂಟಿಗಳಿಂದ ಕೂಡಿದ 'ಗೀರ್' ಎಂಬ ಅರಣ್ಯ ಪ್ರದೇಶವೊಂದೇ ಸಿಂಹಗಳ ಆಶ್ರಯ ಸ್ಥಾನವಾಗಿದೆ. ಮಧ್ಯಪ್ರದೇಶದ "ಖಾನಾ" ಎಂಬ ರಕ್ಷಣಾ ಕೇಂದ್ರದಲ್ಲಿಯೇ ಹೆಚ್ಚು ಜಿಂಕೆಯ ಹಿಂಡುಗಳು ಕಾಣುತ್ತವೆ. ಇದನ್ನು ನೋಡುವುದಕ್ಕೆ ಕಣ್ಣಿಗೆ ಆನಂದ. ಅಸ್ಸಾಮಿನ 'ಖಾಜಿರಂಗ' ಎಂಬ ಒಂದು ಜೌಗು ಪ್ರದೇಶದಲ್ಲಿ ಒತ್ತಾಗಿ ಬೆಳೆದ ಹುಲ್ಲುಗಳ ನಡುವೆ ಘಂಭೀರತದ ಘೇಂಡಾ ಮೃಗ ವಾಸಿಸುತ್ತದೆ. ಹಾಗೆಯೇ ಅಸ್ಸಾಮಿನ 'ಮಾನಸ್' ಎಂಬ ಬೇಟೆಯ ನಿಷಿದ್ಧ ಸ್ಥಳದೊಂದರಲ್ಲಿ ದೊಡ್ಡ ಮತ್ತು ವಿಶಾಲ ನದಿಗಳು, ಹಾಗೂ ಅವುಗಳ ಬದಿಯಲ್ಲಿರುವ ಒತ್ತಾದ ಅರಣ್ಯಗಳಲ್ಲಿ ಬೃಹದಾಕಾರದ ಕಾಡೆಮ್ಮೆಗಳನ್ನು ನೋಡಬಹುದು. ಮೈಸೂರಿನ "ಬಂಡೀಪುರ" ಎಂಬಲ್ಲಿ ಸ್ವಲ್ಪ ಗಿಡ್ಡಾದ ಸಾಗುವಾನಿ ಅರಣ್ಯಗಳ ನಡುವೆ ಕಾಡೆಮ್ಮೆ ಮತ್ತು ಕಾಡಾನೆಗಳು ಸ್ವೇಚ್ಛೆಯಾಗಿ ವಿಹರಿಸುತ್ತವೆ. ಕೇರಳದಲ್ಲಿನ 'ಪೆರಿಯಾರ್' ಎಂಬಲ್ಲಿ ಎತ್ತರ ಪ್ರದೇಶದ ಸರೋವರವೊಂದು ಈ ವನ್ಯ ಜೀವಿಗಳಿಗಲ್ಲಿ ಒಳ್ಳೆಯ ಆಶ್ರಯಸ್ಥಾನವಾಗಿದ್ದು, ಅವುಗಳನ್ನು ನೋಡುವುದಕ್ಕೂ, ಬೇಟೆಯಾಡುವುದಕ್ಕೂ ಅತ್ಯಂತ ರಮಣೀಯವಾದ ಹಾಗೂ ಅನುಕೂಲವಾದ ಸ್ಥಳವಾಗಿದೆ. ಇಲ್ಲಿ ದೋಣಿಯಲ್ಲಿ ಕೂತು, ಈ ವನ್ಯ ಜೀವಿಗಳನ್ನು ನೀರು ಕುಡಿಯಲಿಕ್ಕಾಗಲೀ, ಅಥವಾ ನೀರಿನಲ್ಲಿ ಈಜಾಡುವುದಕ್ಕಾಗಲೀ, ಹಿಂಡುಹಿಂಡಾಗಿ ಬರುವುದನ್ನು ಪ್ರೇಕ್ಷಕರು ಅಥವಾ ಬೇಟೆಗಾರರು ನೋಡಬಹುದು. ರಾಷ್ಟ್ರೀಯದ ಶ್ರೀನಗರದ ಬಳಿ "ಡಚಿಗಾಂ" ಎಂಬ ಒಂದು ಬೇಟೆಯ ನಿಷಿದ್ಧ ಸ್ಥಳವಿದೆ. ಕಾಶ್ಮೀರದ ಜಿಂಕೆಗಳು ಸಾಂಬಾರಿಗಳು ಚಳಿಗಾಲದಲ್ಲಿ ಮೇಲಿನ ಪ್ರದೇಶದಿಂದ ಈ ಕೊಳ್ಳಕ್ಕೆ ಇಳಿದು ಬಂದು ಅಲ್ಲಿ ವಿಹರಿಸುತ್ತವೆ. ಇಂತಹ ಕೆಲವು ಮುಖ್ಯ ಮತ್ತು ಸ್ವಾರಸ್ಯವಾದ ರಕ್ಷಣಾ ಕೇಂದ್ರ ಅಥವಾ ಬೇಟೆಯ ನಿಷಿದ್ಧ ಸ್ಥಳಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದು.

ರಾಜಾಜಿ ಸಂರಕ್ಷಣಾ ಕೇಂದ್ರ

ಶಿವಾಲಿಕ್ ಗುಡ್ಡಗಳ ದಕ್ಷಿಣ ಭಾಗದ ಇಳಿಜಾರು ಪ್ರದೇಶಗಳು (ಡೆಹರಾಡೂನ್) ಬಳಿಯ ಒಂದು ಸ್ಥಳವು, ಒಂದು ಕಾಲಕ್ಕೆ ನೊಗಲ್ ಅರಸರಿಗೂ ನಂತರ ಬ್ರಿಟಿಷ್ ಗವರ್ನರ್-ಜನರಲ್‌ಗಳಿಗೂ ವಿಹಾರ ಹಾಗೂ ಶಿಕಾರಿ ಸ್ಥಳವಾಗಿತ್ತು. ಕಡೆಯ ಗವರ್ನರ್-ಜನರಲ್ ಆಗಿದ್ದ ಶ್ರೀ ರಾಜಗೋಪಾಲಾಚಾರಿಯವರು (ರಾಜಾಜಿಯವರು) ಆಗ ಈ ಬೇಟೆ ಹಾಗೂ ಶಿಕಾರಿಯ ಸ್ಥಳವನ್ನು ಒಂದು ರಕ್ಷಣಾ ಕೇಂದ್ರ ಹಾಗೂ ಬೇಟೆಯ ನಿಷಿದ್ಧ ಸ್ಥಳವೆಂದು ಪರಿವರ್ತಿಸಲು ಅನುಮತಿ ಕೊಟ್ಟರು. ಈ ನೂರು ಮೈಲು ಕ್ಷೇತ್ರವುಳ್ಳ ಪ್ರದೇಶ ಈಗ ಒಂದು ಉತ್ತಮ ರಕ್ಷಣಾ ಕೇಂದ್ರವಾಗಿದೆ. ಈಗ 10—12 ವರ್ಷಗಳಿಂದ ಅಲ್ಲಿ ವನ್ಯ ಜೀವಿಗಳು ಸಾಕಷ್ಟು ವೃದ್ಧಿಯಾಗಿ ಆ ರಕ್ಷಣಾ ಕೇಂದ್ರದಲ್ಲಷ್ಟೇ ಅಲ್ಲ, ಇಡೀ ಶಿವಾಲಿಕ್ ಬೆಟ್ಟಗುಡ್ಡಗಳ ಬೈಲೆಲ್ಲಾ ಹರಡಿಕೊಂಡಿವೆ.

ಘೇಂಡಾ ಮೃಗಗಳ ಕೇಂದ್ರ

ಪಶ್ಚಿಮ ಬಂಗಾಲದ 'ಜಲಾಪಾರಾ' ಮತ್ತು ಅಸ್ಸಾಮಿನ "ಕಾಜಿರಂಗ್" ಎಂಬ ರಕ್ಷಣಾ ಕೇಂದ್ರಗಳಿಗೆ ಈಗ ವಿಶೇಷ ಮಹತ್ವ ಬಂದಿದೆ. ಈ ಪ್ರದೇಶಗಳನ್ನೂ ಕಾಡಿಡದೆ ಹೋಗಿದ್ದರೆ ಅಲ್ಲಿನ ಘೇಂಡಾ ಮೃಗಗಳೆಲ್ಲವೂ ಎಂದೋ ನಾಮಾವಶೇಷವಾಗಿ ಹೋಗುತ್ತಿದ್ದವು.

ಈ 'ಜಲಾಪಾರಾ' ಕೇಂದ್ರವು ಪಶ್ಚಿಮ ಬಂಗಾಲದ 'ಡೊರ್ಜಾ' ಜಿಲ್ಲೆಯ 'ಟೊರ್ಸಾ' ಎಂಬ ರಮಣೀಯವಾದ ನದೀ ತೀರದಲ್ಲಿದೆ. ಅದರ ಕ್ಷೇತ್ರ ಸುಮಾರು 39 ಚ. ಮೈ. ಅಲ್ಲಿ ಘೇಂಡಾಮೃಗ, ಸಾಂಬರ್, ಜೌಗು ಪ್ರದೇಶದ ಜಿಂಕೆ, ಅರಣ್ಯದ ಕರಡಿ, ಹಂದಿ ಮತ್ತು ಇನ್ನೂ ಇತರ ಪ್ರಾಣಿಗಳಿವೆ. ಅತ್ಯಂತ ಸಮೀಪದ ರೇಲ್ವೇ ಸ್ಟೇಷನ್ "ಹಸಿಮಾರಾ" ಅಲ್ಲಿಂದ 1-2 ಮೈಲಿ ಪೇಟೆಯನ್ನಲ್ಲಿ ಹೋಗಿ, ನಂತರ ಮಂಡೆ ಆನೆಗಳ ಮೇಲೆ ಕೂತು ಹೋಗಬೇಕು.

"ಕಾಜಿರಂಗ್" ಎಂಬ ಕೇಂದ್ರ ಅಸ್ಸಾಮಿನಲ್ಲಿದೆ. ಅದರ ಕ್ಷೇತ್ರ 100 ಚ. ಮೈ. ಅದು ಬ್ರಹ್ಮಪುತ್ರ ನದಿಯ ದಕ್ಷಿಣ ತೀರದಲ್ಲಿದೆ. 1900ರಲ್ಲಿ ಆ ಕೇಂದ್ರದಲ್ಲಿ ಕೇವಲ 12 ಘೇಂಡಾ ಮೃಗಗಳಿದ್ದುವಂತೆ. ಈಗ ಅದೇ ಸುಮಾರು 250ಕ್ಕೂ ಹೆಚ್ಚಾಗಿವೆಯಂತೆ. ಇದರ ಜತೆಗೆ ಅಲ್ಲಿ "ಹಾಗ್ ಡೀಯರ್", ಹಂದಿ, ಕಾಡಾನೆ, ಕಾಡೆಮ್ಮೆ, ಸಾಂಬರ್, ಜೌಗು ಪ್ರದೇಶದ ಕರಡಿ ಇತ್ಯಾದಿಗಳಿವೆ ನೀರಿನ ಮೇಲೆ ವಾಸಿಸುವ ಕೆಲವು ಆಕರ್ಷಕ ಪಕ್ಷಿಗಳೂ ಅಲ್ಲಿ ಆಣಿಸಿಗುತ್ತವೆ. ಈ 'ಕಾಜಿರಂಗ್' ಕೇಂದ್ರವನ್ನು ಸುಲಭವಾಗಿ ಸೇರಬಹುದು. ಅದು "ಜೋರ್ಹಾಟ್" ವಿಮಾನ ನಿಲ್ದಾಣದಿಂದ ಸುಮಾರು 60 ಮೈಲಿಗಳಷ್ಟೆ. ಕಲ್ಕತ್ತಾದಿಂದ ಈ "ಜೋರ್ಹಾಟ್" ಕ್ಕೆ ಕೆಲವೇ ತಾಸುಗಳಲ್ಲಿ ಹೋಗಿ ಮುಟ್ಟಬಹುದು. ಬೇಕಾದರೆ ರೈಲಿನಲ್ಲಿಯೂ ಹೋಗಿ ಆ ಕೇಂದ್ರದ ಎರಡೂ ಬದಿಗಳಲ್ಲಿರುವ (ಒಂದು 30 ಮೈಲಿ, ಇನ್ನೊಂದು 50 ಮೈಲಿ ದೂರದ) ರೇಲ್ವೆ ನಿಲ್ದಾಣಗಳನ್ನು ತಲಪಬಹುದು.

ಬೆರೋಬಾ ಕೇಂದ್ರ

ಪಾಂಗಾಪುರಕ್ಕೆ ದಕ್ಷಿಣದಲ್ಲಿ 'ಬೆರೋಬಾ' ಎಂಬ ಇನ್ನೊಂದು ಸುಂದರವಾದ ವನ್ಯ ಜೀವಿಗಳ ಕೇಂದ್ರವಿದೆ. ಅದು ವಿ

(ಇಪ್ಪತ್ತೊಂದನೇ ಪುಟ ನೋಡಿರಿ)

A NATIONAL PRODUCT

PROVIDING EMPLOYMENT FOR MORE THAN 35,000 WORKERS

Made out of the finest Materials

MANGALORE GANESH BEEDIES

Smokers cannot afford to miss them

Head Office:

MANGALORE GANESH BEEDI WORKS

VINOBA ROAD : : MYSORE-5

Telephone : 421

Telegrams : AROMA

ಚೇತನ

"ನವೋ ನವೋ ಭವತಿ ಜಾಯಮಾನಃ"

[ಕವಿ ಶ್ರೀ ಕಯ್ಯಾರ ಕಿಞ್ಞಣ್ಣ ರೈ ಎಂ ಎ]

— ೧ —

ಏತಿ ನಿ ನಿತಾಂತ ಸ್ಪರ್ಧೆದ ನುಬ್ಬು ತೆರೆಯುತ್ತಿ
ಉಸಿ ನಟಿಯು ನಲಿದ ಬಲು,
ನಾಲ್ದೆಸೆ ಮೇಲಿನ ತೇಜನೇಂದನ
ಅ ಂ ಕರಿಸಾಂಬಲು.

ಮಾಯಾ ಎಲ್ಲನ ಮೇಗೆ ನೆಲಕಾಂತಿಹ ದೇಗ ಲಕೆ
ಸುಂದರ ಮಾಂಗಳವನಿಸಿ,
ಸ್ವಾಮಿ ಮಾಯಾಸ್ವಾಮಿಯ ಪರಿಸಿ ಬರಿಸಿ ರಾಜ
ಕಾಂಜನ ಕಿರೀಟ ಧರಿಸಿ

ಒಂದು ಮಾಂಗಳಕ ಮಂಕ ಮತ್ತೆ ನಿಂದಿಹನು
ಜಾಗ್ರತ ಕರ್ಮೋತ್ಸಾಹ, ಜನ ಮನದಲಿ
ಮೊಳ ಕಾಂ ಮ ಬಂಕ್ಷ ದಿನ ದಿನ ನವೋದಯವಿಂತು
ಯುಗ ಯುಗಕ ಮಂಳಿ ಮರಳಿ.

— ನವೋ ನವೋ ಭವತಿಜಾಯಮಾನಃ...

— ೨ —

ಇರುಳಿನ ಕಳೆ ಬೆಳಕ ಬೆಳಗಿಸು ಬಾಳ ದೇಗುಲದಿ
ನಲ್ಮೆ ನಂದಾದೀಪ ನಲಿಯುತ್ತಿರೆ,
ಪೂರ್ವ ಪದ ರಾಜತೇಜದ ಮಾಮರವ ಪೆಚ್ಚಿ
ಹೆಣ್ಣೆದೆಯ ನೋಹ ಮುಗ್ಧಗೆಯುಪ್ಪರೆ,

ಬಂದನು ವಸಂತ! ರತಿಮನ್ಮಥರ ದಿಬ್ಬಣದ
ಸಂಭ್ರಮದ ಮೆರವಣಿಗೆ ಸೊಗದ ಸಂಗ್ಗಿ,
ಬಣ್ಣ ಬಣ್ಣದ ನುಣ್ಣನೆಯ ತಳಿರ ಹಂ ಹಣ್ಣು
ಗಂಧ ಮಂದಾನಿಲಂ ತಿಡೆ ಹಿಗ್ಗಿ,

ಜೀವ ಮಧುರಂ—ಜಾತ ಭಾವ ಮಧುರಂ—ವಿಳಿತ
ನೇಳ ಮಧುರಂ—ನಿರಂತರ ನೂತನಂ!
ಮಿಗು ಕಗುತ ಬಂತು, ಗಗನದಿ ತಾರೆ ಮಿನುಗಿತ್ತು!
ಜನ್ಮ ಜನ್ಮಕ ನೆಮ್ಮದಿ ಚೇತನಂ!

— ನವೋ ನವೋ ಭವತಿಜಾಯಮಾನಃ ...

— ೩ —

ಕಾರ್ಮೋಡಗಳು ಗುಡುಗು ಸಿಡಿಲು ಮಿಂಚುಗಳೆಂಗಿ
ಮುಂಗಲ ಧಾರೆಯ ಸರಿಯು ಸುರಿದ ಮೇಲೆ,
ಗಗನ ಮಂಡಲದ ಮಂಬುದಿ ಮೆರೆದಾಡುತಿಹ
ಇಂದ್ರಚಾಪ ಒಕ್ಕ ನಕ್ಷತ್ರ ಮಾಲ.



ಬೆಳ್ಳಿ ದೇವರ ಕಣ್ಣು ಧಾರಾಳ ದಯೆ ಯುಮ್ಮ
ಚೆಲ್ಲಿ ಬಾನ್ತೆರೆಯನ್ನು ಹರಯುತಿರಲು,
ಋತುರಾಜ ಬರುತಿರ್ಪನ! ತಳಿರು ತೋರಣವೇಳು!
ಧರ್ಮಾಲಂ ನೆಲ ಜಲಂ ಶರದಾಗಮಿಸಲು.

ಹಚ್ಚನೆಯ ಹಸಿರು ಸೀರೆಯನುಟ್ಟ ನೆಲತಾಯ
ಗರ್ಭದಿಂದುದಿಸಿ ಬಂದಿತೊ—ತೆನೆಯ ರಾಶಿ.
ಸೀರೆರೆದ ದೇವಗರ್ಪಿತವಿಂತು, ಬೇರ್ ಬಿಟ್ಟ
ಬುವಿಗೆ ಕಾಣಿಕೆ ಬಿತ್ತು ಜೈತನ್ಯ ನಾಪ್ತಿ.

— ನವೋ ನವೋ ಭವತಿಜಾಯಮಾನಃ ...

— ೪ —

ಶ್ರೀಪರಂಜ್ಯೋತಿ ಸರಮಾತ್ಮನಂಶದ್ಭುತಿಯು
ಜೀವಾತ್ಮನಂ ಬಿಡದೆ ಸ್ಪರ್ಶಿಪಂತೆ,
ಸೃಷ್ಟಿ ರಾಶಿಗೆ ದೃಷ್ಟಿಯಿತ್ತ ದಿನಮಣಿ ತೇಜ
ದೀಪದೀಪ್ತಿಯೊಳಡಗಿ ಪರಿಶಿಪಂತೆ,

ಕೆರೆಯ ತೋಡಿಸಿ ಸಸಿಯ ನಟ್ಟ ಮನೆ ಕಟ್ಟಿಸಿದ
ಪಿತನು ಪುಣ್ಯವ ಪುತ್ರನಲಿ ಹಂಬಿಪಂತೆ,
ಶೀಲ ಸೌಭಾಗ್ಯ ವಿನಯ ವಿವೇಕವತಿ ಪತಿಯು
ಮಗಳಲ್ಲಿ ವಾತೃತ್ವ ಬಿಂಬಿಪಂತೆ,

ಶಾಖೋಪಶಾಖ ಪ್ರಕಾಂಡದ ಮಹಾವೃಕ್ಷ
ಬೀಜದಲಿ ಸಂಜವಂ ಸೇರಿಪಂತೆ,
ವಿಶ್ವ ವಿಜಯಿ ಸಾಹಸದ ಕೇಸು ಚೇತನಂ
ನವ ನವೋನ್ಮೇಷದಿಂದವತರಿಸಿದೆ!

— ನವೋ ನವೋ ಭವತಿಜಾಯಮಾನಃ ...

[ದಿನಾಂಕ ೧೩-೩-೬೮ರಂದು ಬೆಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾದ ಕಾವ್ಯಧಾರೆ ಕಾರ್ಯಕ್ರಮದ ಕವನಗಳಲ್ಲಿ ಒಂದು]

ಬಸವೇಶ್ವರ ಪಂಚಕಂ!

ಶ್ರೀಶೈಲ ಶಿವರಂಜನಾಸ್ಥಾನದಿಂದಿಳಿದು
ಭೂಲೋಕ ಕೈಶಂದೆ ಶಿವನಾಜ್ಞೆಯಿಂದ!
ವಿಪ್ರಕುಲದಲಿ ಜನಿಸಿ ವಿಬುಧವರನೆಂದೆನಿಸಿ
ಶ್ರೀ ಶೈವ ಕೀನಾಪೆ ಹೇನಾಜ್ಞೆಯಿಂದ ||೧||

ಬಿಜ್ಜಳನ ಓಲಗಗಿ ಶೋಭಿಸುತ ಪ್ರೇಮದಿಂ
ವಿಶ್ವಬಾಂಧವನಾಗಿ ಮಾದೇವನಾಪೆ!
ಆಚಾರವೇ ಧರ್ಮ ಧರ್ಮವೇ ಕುಲಶ್ರೇಷ್ಠ—
—ಭಕ್ತಿಯೇ ಮಿಗಿಲೆಂದು ಲೋಕಕ್ಕೆ ಸಾರ್ದೆ ||೨||

ವೃಷಭದೇವನು ನೀನೆ! ಬಸವಣ್ಣನೂ ನೀನೆ!
ಬಸವನಂತೆಸೆದಿರುವೆ ಸೇವೆಯಲಿ ನೀನು!
ಎಂಟನೆಯ ಶತಮಾನದುತ್ಸವದ ಸಂಸ್ಕರಣ!
ಬಸವಣ್ಣನಾ ಸ್ಮರಣೆ! ಶರಣೆನುವೆ! ಶರಣು ||೩||

ಹೊಲೆಯನಾದೊಡೆ ಮೇಲು? ಬ್ರಾಹ್ಮಣನು ಕೀಳೇಲು?
ಶಿವಭಕ್ತನೇ ಭಕ್ತನೆಂದೊರೆದೆ ನೀನು!
ಲಿಂಗಧಾರಣೆಯ ದುಡೆ ಶಿವದಾರ! ಜನಿವಾರ!
ಬೋಧಿಸಿದೆ ಭಕ್ತಿಯಾ ಮಹಿಮೆಯನು ನೀನು ||೪||

ಸದ್ಧರ್ಮ ಬೋಧಿಸಿದೆ! ಸದ್ಭಕ್ತಿಯಂ ತೋರ್ದೆ
ಕರುಣೆಯೇ ಗವಚವದು ಮಾಧವಗೆಯೆನುತ!
ದೇವಮಾನವ ನೀನು ಅವತರಿಸಿ ಬೆಳಗಿಸಿದೆ!
ಭಾರತದ ಸಂಸ್ಕೃತಿಯ ಮಾನವತೆ—ವಿಜಯ ||೫||

— ಕೆ. ಎನ್. ಭಟ್ಟ, ಶಿರಾಡಿಪಾಲ.

ಸಗ್ಗ ಸುಖ

(ಎಲ್ಲಿ ಮನ ತಳುಕಿರೆಯೋ .. ....ಧಾಟಿಯಲ್ಲಿ)

ಸಗ್ಗ ಸುಖವುಣಲೆಂದು ಬಗೆವ ಮಾನವ ಕೇಳು!
ಸಗ್ಗ ಲೋಕೆಂಬುದದು ಬೇರೆಯುಂಟೆ? ||ಪಲ್ಲ||

ಆರ ಮನ ಸುಮ ನಲಿವ ಕಷ್ಟ ಕೂಳೆ ಕಲಿಲದಲಿ
ತಾ ಹರ್ಷದಿಂ ಆರಳಿ ಮರೆಯುವುದೋ ಅತ ||೧||

ಆರ ಮನ ತಳಿತೊರೆಯ ಸತ್ಕರ್ಮ ಭಾವಿಯಲಿ
ತಾ ಹರಿದು ದಾರತೆಯ ನೆಸಗುವುದೋ ಅತ ||೨||

ಆರ ಮನ ಸತತ ಪರ ಹಿತದ ಚಿಂತೆಯಲಿ ತನುವ
ತಾ ಹಸಂದಿಂ ಶ್ರವಿಸಿ ಗತಿಸುವುದೋ ಅತ ||೩||

ಆರ ಮನ ಪರ ಸಿರಿಗೆ ಮರುಳಾಗದೆಲೆ ಧರತ ತಾ
ಸಂತೃಪ್ತಿಯಿಂ ಸುಖಿಸಿ ಮೆರೆಯುವುದೊ ಅತ ||೪||

ಅತ ತಾ ನಿಜ ಸಗ್ಗ ಸುಖ ಸವಿದು ಇಹದೆ ಮೇಣ್!
ಗಳಿಸಿ ಸತ್ಕೀರ್ತಿ ಅಮರತ್ವ ಪಡೆವಾ ||೫||

— "ದೇವಕಿನಂದ",
ಮಿರ್ಜಾನ, ಉತ್ತರ.

SIEMENS- MYERS ELTEX PUMPSETS

SIEMENS STARTERS
SWITCHFUSE UNITS
CABLES ETC.

GENERAL REFRIGERATION ENG. WORKS
K. S. RAO ROAD, MANGALORE-1
Phone 4209

ಶ್ರೀ ಟಿ. ಎ. ಪೈ.

ಕೃಷಿಕರಿಗೆ ಆರ್ಥಿಕ ಸಹಾಯ

ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಶ್ರೀ ಪೈಯವರದು ವಿಶಾಲ ದೃಷ್ಟಿ— ದೇಶದ ಮೂಲ ಸಮಸ್ಯೆಗಳ ಪರಿಹಾರದಲ್ಲೇ ಅವರದು ಆಸಕ್ತಿ. ರೈತರಿಗೆ ಅವಶ್ಯಕ ಆರ್ಥಿಕಾದಿ ಸಹಾಯ ಒದಗಿಸಿ ಆಹಾರ ಸ್ವಾವಲಂಬನೆಯನ್ನು ದೇಶವನ್ನೆಯ್ಯುವುದು ಸಾಧ್ಯವೆನ್ನುವ ಅವರು ತನ್ನ ಬ್ಯಾಂಕ್ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗುವಂತೆ ಮಾಡಿದ್ದಾರೆ.

ಜೀವನಾಧಾರದ ಮೂಲಗಳನ್ನು ಜನಸಂಖ್ಯೆಯು ಮೆಟ್ಟಿ ಹಿಲ್ಲುವ ನಮ್ಮಂಥ ದೇಶಗಳಲ್ಲಿ ಆಹಾರ ಸಮಸ್ಯೆಗಿಂತ ಪ್ರಮುಖವಾದ, ಎತ್ತಿ ಹೇಳಬಹುದಾದ ಸಮಸ್ಯೆ ಬೇರೆಂದಿಲ್ಲ. ಆದುದರಿಂದ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಲು ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ವಿಶಿಷ್ಟ ಪ್ರಯತ್ನಗಳನ್ನು ಕೈಕೊಳ್ಳುತ್ತಿರುವುದು ಸಹಜ. ಅಧಾವದೊಡನೆ ಹೂಡಿದ ಹೋರಾಟದಲ್ಲಿ ಮದ್ರಾಸ ರಾಜ್ಯವು ಅಗ್ರಸರವಾಗಿದೆ. ಅದು ಹಿತಕರವಾದ ಧ್ಯೇಯಗಳನ್ನು ಅನುಸರಿಸುತ್ತಿದೆ. (1) ಆಹಾರ ಧಾನ್ಯೋತ್ಪಾದನೆಯನ್ನು ಹೆಚ್ಚಿಸುವುದು ಮತ್ತು (2) ಆಹಾರ ಧಾನ್ಯಗಳು ಪರಿಣಾಮಕಾರಿಯಾಗಿ ಸೈಸೇರುವಂತೆ ಪ್ರಯತ್ನಿಸುವುದು.

ಮದ್ರಾಸ ಆಹಾರ ಧಾನ್ಯದಲ ಮಟ್ಟಿಗೆ ಅಲ್ಪ ಕೊರತೆಯ ರಾಜ್ಯ. ಒಳ್ಳೆಯ ಸುಗ್ಗಿಯು ಪೂರ್ಣವಾಗಿ ಕೈಸೇರಿದರೆ ಅದು ಸ್ವಾವಲಂಬಿಯೇ ಸರಿ. ಆದರೆ, ಒಳ್ಳೆಯ ಮಳೆ–ಒಳ್ಳೆಯ ಬೆಳೆಗಳು ಬಹಳ ಅಪರೂಪ. ಮಳೆಯನ್ನೇ ಹೊಂದಿಕೊಂಡಿರುವ ಚಿತ್ರಭ್ರಮೆಯನ್ನು ಸಾಧ್ಯವಾದಷ್ಟು ನಾವು ಕಡಮೆ ಮಾಡಬೇಕು. ಮದ್ರಾಸ ಸರಕಾರದ ಉದ್ದೇಶ ಮತ್ತು ಧೋರಣೆಗಳು ರಾಜ್ಯವು ನಿರಂತರ ಮಿಗಿತೆಯ ರಾಜ್ಯವೆನಿಸಿ ತಾಮಂಡು, ಕೊರತೆಯ ರಾಜ್ಯಗಳಿಗೂ ಆಹಾರ ಪೂರೈಸಲು ಯೋಜಿಸಿವೆ ಎಂದು ಹೇಳಲು ಸಂತೋಷವಾಗುತ್ತದೆ. ಮುಖ್ಯ ಮಂತ್ರಿ ಶ್ರೀ ಅಣ್ಣಾದೊರೈಯವರು ಸರಕಾರದ ಧ್ಯೇಯವನ್ನು ಹೀಗೆ ಸಂಕ್ಷೇಪಿಸಿದ್ದಾರೆ: ಕೃಷ್ಯುತ್ಪನ್ನಗಳನ್ನು ಹೆಚ್ಚಿಸುವುದೇ ಸರಕಾರಿ ಧ್ಯೇಯದ ಮೂಲಮಂತ್ರವಾಗಬೇಕು. ರಾಜ್ಯದ ಯೋಜನೆಯಲ್ಲಿ ಇದಕ್ಕೆ ಪ್ರಥಮ ಪ್ರಾಶಸ್ತ್ಯ ದೊರೆಯಬೇಕು—ಅಂದರೆ ಮಾತ್ರ ಆಹಾರ ಸಮಸ್ಯೆಯು ತೃಪ್ತಿಕರವಾಗಿ ಪರಿಹಾರ ಕಂಡೀತು.

ಕೇಂದ್ರ ಸರಕಾರವು ಶ್ರಾಶಸ್ತ್ಯ ಕೊಡಿರುವ ಮೂರು ರಂಗಗಳಲ್ಲಿ ಕೃಷಿಯೂ ಒಂದು. ಮದ್ರಾಸ ಸರಕಾರವು ಆಹಾರೋತ್ಪಾದನೆಯಲ್ಲಿ ಪ್ರಬಲ ಕ್ರಮಗಳನ್ನು ಕೈಕೊಂಡು ತನ್ನ ಪ್ರಶಂಸನೀಯ ಉತ್ಸಾಹವನ್ನು ತೋರಿಸಿದೆ. ಹಳೆಯ ಮತ್ತು ಹೊಸ ಯಂತ್ರೋಪಕರಣಗಳ, ಹೊಸ ಉತ್ತಮ ಬೀಜಗಳು, ಗೊಬ್ಬರಗಳು ಮತ್ತಿತರ ಅವಶ್ಯಕತೆಗಳನ್ನು ಸಾಲ ಸೌಲಭ್ಯಗಳೊಡನೆ ರೈತರಿಗೆ ಕೊಡುವ ಅಂಶವು ಅತ್ಯಂತ ಮುಖ್ಯವಾದುದು. ತನ್ನ ಈ ಗುರಿಯನ್ನು ಮುಟ್ಟುವಲ್ಲಿ ಕೃಷಿಯಲ್ಲಿ ಅಸಕ್ತವಾದ ಎಲ್ಲ ಪ್ರತಿನಿಧಿಗಳನ್ನು, ಸಂಸ್ಥೆಗಳನ್ನು ಮತ್ತು ವ್ಯಕ್ತಿಗಳನ್ನು ಸಹಕರಿಸಲು ಸ್ವಾಗತಿಸಿದೆ.

ಸಿಂಡಿಕೇಟು ಬ್ಯಾಂಕು ಇಲ್ಲಿ ಮುಂದಾಗಿ ಅಗಮಿಸಿದೆ. ಕೃಷಿಕರಿಗೆ ಬದಲಾವಣೆಗೆ ಅವಕಾಶ ಕಲ್ಪಿಸಿಕೊಡಬೇಕೆಂಬುದರಲ್ಲಿ ವಿಶ್ವಾಸವಿಟ್ಟು ವೈಜ್ಞಾನಿಕ ತಳಹದಿಯ ಮೇಲೆ ಕೃಷಿ ರಂಗಕ್ಕೆ ನೆರವು ನೀಡುವಲ್ಲಿ ಮುಂದಾದ ದೇಶದ ಮೊತ್ತಮೊದಲನೆಯ ಬ್ಯಾಂಕು ಇದು. ಗ್ರಾಮೀಣ ಪ್ರದೇಶಗಳಲ್ಲಿ ಒಲವಿಟ್ಟುಕೊಂಡು ದೇಶ ತುಂಬ ಶಾಖೆಗಳನ್ನು ತೆರೆಯುವ ಬ್ಯಾಂಕ್ ಆಫ್ ಅಮೇರಿಕಾದಂತೆ ಸಿಂಡಿಕೇಟ್ ಬ್ಯಾಂಕು ಕೂಡ, ಒಳಪ್ರದೇಶದಲ್ಲಿ ಶಾಖೆಗಳನ್ನು ತೆರೆದು, ಗ್ರಾಮೀಣ ಶಾಖೆಗಳನ್ನು ಆರಂಭಿಸಿ ಕೃಷಿಗಾಗಿ ಚಿಕ್ಕ ಚಿಕ್ಕ ಸಾಲಗಳನ್ನು ಒದಗಿಸಿ ಅಧಿಕ ಪ್ರಮಾಣದಲ್ಲಿ ಜನತೆಯ ಸೇವೆಯನ್ನು ಮಾಡುತ್ತಿದೆ.

ವಾಣಿಜ್ಯ ಬ್ಯಾಂಕುಗಳಿಗೆ ಕೃಷಿರಂಗವು ಅಪರಿಚಿತವೆಂಬ ಕಾರಣದಿಂದ ಇವು ಕೃಷಿಗೆ ನೆರವೀಯುವುದನ್ನು ಅಕ್ಷೇಪಿಸುವವರಿದ್ದಾರೆ. ಕೃಷಿಕರನ್ನೇ ಬ್ಯಾಂಕಿಗೆ ತೆಗೆದುಕೊಂಡು ಅವರನ್ನು ಬ್ಯಾಂಕಿಂಗ್‌ನಲ್ಲಿ ತರಬೇತಿಗೊಳಿಸಿದರೆ, ಈ ಅಕ್ಷೇಪವಿಲ್ಲವಾಗ ಬಹುದು. ಕೃಷಿಕ ಸಾಲಗಾರರು ಮಾತ್ರ ಒಳ್ಳೆಯ ಜವಾಬ್ದಾರರಾಗಲಾರರೆಕೆಂಬುದನ್ನು ಕಂಡುಕೊಳ್ಳಬೇಕು. ಪ್ರಗತಿಪಥಗಾಮಿ ಬ್ಯಾಂಕಿಂಗ್‌ಗಾಗಿ ಈ ಸಮಸ್ಯೆಗಳತ್ತ ಬ್ಯಾಂಕುಗಳೇ ಗಮನಹರಿಸಬೇಕು. ಸಿಂಡಿಕೇಟ್ ಬ್ಯಾಂಕಿನ ವಿಶಾಲ ಆರ್ಥಿಕ ಪರಿಶೀಲನೆ, ಹೊಲಗಳಲ್ಲಿನ ಪ್ರಯೋಗ, ಪ್ರಚಲಿತ ಉತ್ಪಾದನಾ ಕ್ರಮಗಳ ಅಧ್ಯಯನಗಳಿಂದ, ಯೋಗ್ಯ ಮೇಲ್ವಿಚಾರಣೆಯಿರುವ ಕೃಷಿ ಸಾಲವು ಇತರ ಜವಾಬುದಾರಿಗಳಂತೆಯೇ ಉತ್ತಮವಾದುದು ಮತ್ತವಲ್ಲ, ಅಧಿಕ ಫಲಪ್ರದವಾಗುವೆಂದು ಕಂಡುಬಂದಿದೆ. ಆದುದರಿಂದ ಸಿಂಡಿಕೇಟ್ ಬ್ಯಾಂಕಿನ ಪ್ರಗತಿಪರ ಚಟುವಟಿಕೆಯು ವಾಣಿಜ್ಯ ಬ್ಯಾಂಕುಗಳು ದೇಶದ ಮೂಲ ಉದ್ಯಮವಾದ ಕೃಷಿಕ್ಷೇತ್ರದಲ್ಲೂ ಸೇವೆ ಸಲ್ಲಿಸುವಂತೆ ದಾರಿಯೊಂದನ್ನು ತೋರಿಸಿದೆ.

ಸಿಂಡಿಕೇಟ್ ಬ್ಯಾಂಕ್ ಇದುವರೆಗೆ ಉತ್ಪಾದನಾ ಸಾಲಗಳಿಗಾಗಿ ಸಾಕಷ್ಟು ಮೊತ್ತವನ್ನು ಒದಗಿಸಿದೆ. ಗ್ರಾಮೀಣ ಪ್ರಗತಿಯ ಧ್ಯೇಯದಿಂದ ಚಂಗಲ್ಪೇಟ ಜಿಲ್ಲೆಯ ಕೃಷಿಕರಿಗೆ ಆರ್ಥಿಕ ಸಹಾಯ ಕೊಡುವ ಸಾಹಸಕ್ಕೆ ತೊಡಗಿದೆ. ಆಹಾರೋತ್ಪಾದನೆಯಲ್ಲಿ ಹೆಚ್ಚಿನ ಸಾಧಿಸುವ ಮದ್ರಾಸ ಸರಕಾರದ ಪ್ರಯತ್ನಗಳಲ್ಲಿ ಪಾಲುಗೊಳ್ಳಲು ಸಿಂಡಿಕೇಟ್ ಬ್ಯಾಂಕು ಹರಿಸುತ್ತದೆ. ಈ ಯೋಜನೆಗೆ ತಮಿಳು ನಾಡಿನ ಅಧಿಕಾರಿಗಳ ಶೀಘ್ರ ಉತ್ಸಾಹಯುತ ಸಹಕಾರವನ್ನು ಬ್ಯಾಂಕು ಪಡೆದಿದೆ. ಮುಖ್ಯ ಮಂತ್ರಿ ಶ್ರೀ ಅಣ್ಣಾದೊರೈಯವರು ತಾ ೭-೩-೧೯೬೮ರಂದು ಕಾಂಚೀಪುರಂನ ಸಮೀಪದ ವಲ್ಲಾಜಬಾದದಲ್ಲಿ ಈ ಯೋಜನೆಯನ್ನು ಉದ್ಘಾಟಿಸಿದರು. ಈ ಯೋಜನೆ ಬಹು ಅತ್ಯಂತ ಯಶಸ್ವಿಯಾಗಿ ಇಂಥಹುದೇ ಯೋಜನೆಗಳನ್ನು ಮುಂದೆಯೂ ವ್ಯವಹಾರಕ್ಕೆ ತರಲು ಪ್ರೇರಕ ಶಕ್ತಿಯಾಗುವುದೆಂಬ ಅಚಲ ವಿಶ್ವಾಸವಿದೆ. ವಿಶ್ವಾಸವೆಂದಿಗೂ ಸುಳ್ಳಾಗಲಾರದು.

ಕೆಸುವಿನ ಎಲೆ

ಕೆಸುವಿನ ಎಲೆ—
ಧಾರಾಕಾರ ಸುರಿಯುತಿದೆ ಮಳೆ
ಹುಲುಸಾಗಿ ಬೆಳೆಯುತಿದೆ ಬೆಳೆ
ತಾಮರಸ ಜಲನ್ಯಾಯದಂತಿದರ ಗೆಳೆ.

ಫೀರೆಂಗಳಿಗೆ ಅದ್ದಿದರೂ
ನೀರ ಸೋಂಕದ ಕಲೆ
ನೂರಕ್ಕೆ ನೂರು ಪರಿಪೆಕ
ಕೆಸುವಿನ ಎಲೆ

ಮಾದದಲಿ ಫೀರು
ಕಾಲಿನಲಿ ನೀರು
ತಲೆಯಲ್ಲೂ ಫೀರೇ.
ಶಿಖೆಗೆ ಮಾತ್ರವೆ ನೀರ
ಸೋಂಕು ತಾಗದ ಕಲೆಗೆ
ವಿಮಲಲಿದೆ ಕೆಸುವಿನೆಲೆ.

'ಶಾಲೆ'ಯಲ್ಲಿ ಏನೇನೋ ಸುರಿ ಮಳೆ
ವನೆಗಳಲ್ಲೂ ಜರೆ ಮಳೆ
ಅಂಗಾಂಗಗಳಲ್ಲಿ ಬರು ಮಳೆ
ಸಂದರೂ ಇವರೆಲ್ಲ ಕೆಸುವಿನೆಲೆ.

ಓದಿ ತಿಳಿದರೆ ಪಾಸಾಗಲೆಲ್ಲ
ತಿಳಿದು ಕೊಳ್ಳದೆ ಪಾಸಾಪನೆಂತು?
ಪಾಸಾಗಿ ಬೀದಿಯಳೆಯುವುದಕಿಂತ
ನಾಪಾಸಾಗಿ ಅಲೆಯಬೇಡ ಲೇಸು.
ಇಂಜಿನಿಯರರು ಬೀದಿಯಳೆಯರೆ?
ಕೃಷ್ಟಿಗೂ ಒಂದು ಕಾರಣ ಬೇಕು.

ದೇಶದಲ್ಲಿ ಹಂಗಿತಿದೆ
ವಿದೇಶಿ ಹಣದ ನೆರೆ,
(ಪದಿನೆಂಟನೇ ಪುಟ ನೋಡಿರಿ)

for BEST TEAS
CONTACT
PUNJA & CO., MULKI
Phone No: Office: 26. Res. 36.
Dealers of.
Waterfall
Waverley
Rousdon Mullai
Sholayar
TEAS

Best Quality
TORCH BRAND
MANGALORE
TILES
MFRS:-PUNJA TILE WORKS, MANGALORE

ಶ್ರೀ ಬೈಕಾಡಿ ವೆಂಕಟಕೃಷ್ಣರಾಯ

ಗಾಂಧೀ ಮಹಾರಾಜಕೀ ಜೈ!!!

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಶತಾಬ್ದಿ ದಿನಾಚರಣೆಯ ಪೂರ್ವಸಂಧ್ಯಾಕಾಲದಲ್ಲಿ ಗಾಂಧೀತತ್ವಗಳ ದಯನೀಯತೆಯತ್ತ ಒಮ್ಮೆ ದೃಷ್ಟಿ ತೇಯಿಸಿರಿ. ಗಾಂಧೀ ಭೋಧನೆಯಿಂದಲೇ ಗಾಂಧೀ ತತ್ವಗಳ ಅನುಷ್ಠಾನವಾಗುವುದಿಲ್ಲ, ಅದಕ್ಕಾಗಿ ಮುಕ್ತಹೃದಯದ ಕೃತಿಶೀಲರು ಬೇಕು, ಇವರೆಲ್ಲಿದ್ದಾರೆ?

ಉಂ ಬಿಸಿಲ ,—ಕಾದಂಬರಿ ಭಾಷೆಯಲ್ಲಿ ಹೇಳಬೇಕಾದರೆ ಮಟ ಮಟ ಮಧ್ಯಾಹ್ನದ ಬಿಸಿಲು ಬೆಳಗಿನ ಕಾಲದ ಮಂಗಳಿ ಮನೆಗೆ ನುಗ್ಗಿದ್ದೆ.—ನಂಬಿಕೆಯ ಹೆಣ್ಣು ಮಕ್ಕಳು ಎಂದಾದರೆ, ಕೈಯಲ್ಲಿ ಭಾರಿ ಬಟ್ಟೆಗೆ—ಎಲ್ಲಿಂದ ಹೊರಟು ಬಾಗಿತ್ತು ಬಹುಶಃ ಕೂಲೋಕರು ಮಾತು ಕತೆಯಾದ ಮೇಲೆ ಈ ಪಯಣ ಎತ್ತ ಎಂಬ ಕುತೂಹಲ ಪ್ರತ್ಯಕ್ಷವಿದೆ.

ಮಹಿಳಾ ಮಂಡಳಕ್ಕೆ—ಅವರ ಉತ್ತರ ಇವತ್ತಿನ ದಿನ ಸಿಗಲಿಯೆ ವಿದ್ಯಾರ್ಥಿಗಳಾದ್ದರಿಂದ ಸ್ವಲ್ಪ ಕಲಿಗೆಯಲ್ಲಿ—ಇ ದೂರನಾಮವುಳ್ಳ ಸಾಧ್ಯವಾಗಿತ್ತು.

ಮಹಿಳಾ ಮಂಡಳಕ್ಕೆ—ಈ ರೀತಿಯ ವಿಚ್ಛಿಣ್ಣ ನಾನಾ ಕಡೆಗಳಿಂದಲೂ ಬರುತ್ತದೆ ಈ ದೃಶ್ಯ ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲೂ ಬಂದಿ.

ಎಸ್. ಎಸ್. ಎಲ್. ಸಿ. ಯಾ ಪಿ. ಯು. ಸಿ. ಯ (—ಕಲಿತವರಿಗೆ ಏಕೆ ಸಿಗುತ್ತಿಲ್ಲ ಈ ಶಿಕ್ಷಣವೂ ಇವರ ಬದುಕಿಗೆ ಮಾರ್ಗ ತೋರಲಿಲ್ಲ. ಮಂಡೇನ ? ಮನೆಯಲ್ಲಿ ಮಾಡುವ ಕೆಲಸ ಬೇಕಲ್ಲ — ಮಹಿಳಾ ಮಂಡಲಕ್ಕೆ ಯಾತ್ರೆ.

ಈ ಮಹಿಳಾ ಮಂಡಲ — ಸ್ತ್ರೀಕ್ರಾಂತಿ ವೃದ್ಧಿಯ ಇಲಾಖೆಯ ಹೆಸರಿನಿಂದ ಸಂಘಟಿಸಲ್ಪಟ್ಟಿದೆ. ಮಹಿಳೆಯರಿಗೆ ಉದ್ಯೋಗ ಇಷ್ಟಪಡಿಸಲಿಲ್ಲ ಕೇಂದ್ರ ಸರ್ಕಾರ ದ್ಯೋಗ ದ್ಯೋಗ ಇದೂ ಪಂಚವಾರ್ಷಿಕ ಯೋಜನೆಯ ಒಂದು ಬಾಬ್ತು.

ಅಲ್ಲಿ ಇದು. ಕಲಿಯುವುದಾದರೂ ಏನು?—ಕತ್ತರಿಸುವುದ—ಕತ್ತರಿಸಿ ಹೊಲಿಯುವುದು.—ಒಟ್ಟಿ ಕತ್ತರಿಸುವುದು—ಹೊಲಿಯುವುದು, ಕಂಪ್ಯೂಟರ್ ಲಂಗ, ಹಂಡಾಬಿ ಬ್ಲೌಸ್—ಸಂಗೀತ ಶಾಲೆ—ಮಂಗಳಾದಿ ಶ್ರೀಮಂತ ಮಕ್ಕಳ ಉಡುಪು—ಈ ಹೊಲಿಗೆ ಕಸೂತಿ ಕಲೆ ಯವರು ಗ್ರಾಮಾಂತರ ಪ್ರದೇಶದ ಮಧ್ಯಮ ವರ್ಗದ, ಬಡ ವರ್ಗದ ಹೆಣ್ಣುಮಕ್ಕಳು ಪಿಡಿದಷ್ಟು ಅಧಿಕಾಂಶ ಕಲಿತ ವರ್ಗದೆಯಾದವರಿಗೆ ಅರ್ಥ ಕ್ರಿಯಾದ್ದು ಹೊಲಿಗೆ ಯಂತ್ರ ದೊರೆಯುತ್ತದೆ—ಹೊಲಿಗೆ ಕಂಪೆನಿಯವರ ಫಾಗ್!

ನಿರುದ್ಯೋಗಿ ಮಹಿಳೆಯರಿಗೆ ಜೀವನೋಪಾಯಕ್ಕೆ ಉದ್ಯೋಗ ಕಲಿಸಬೇಕು ಈ ಏರ್ಪಾಟು, —ಈ ವೆಚ್ಚ.—ನಮ್ಮ ದೇಶದಲ್ಲಿ ವಿದ್ಯಾವಂತರೂ, ಅವಿದ್ಯಾವಂತರೂ, ಎಲ್ಲರೂ ನಿರುದ್ಯೋಗಿಗಳೇ. ಈ ಇಪ್ಪತ್ತು ವರ್ಷದಲ್ಲಿ ಉತ್ಪಾದನೆ ಮಾತು ಮಾತ್ರ ಕೇಳುತ್ತಿದೆಯೇ ಹೊರತು—ಉತ್ಪಾದನೆಯಲ್ಲಿ ಜನತೆಯ ಶ್ರಮವೂ ಇರಬೇಕು—ಉತ್ಪಾದನೆ ಹಿರುದ್ಯೋಗವನ್ನು ನಿವಾರಿಸಬೇಕೆಂಬ ಯೋಜನೆ ಇಲ್ಲ—ಪ್ರಯತ್ನ ಮಹಿಳಾ ಮಂಡಳಿಯ ಒಂದು ಚಟುವಟಿಕೆಯನ್ನೆ ವಿಮರ್ಶಿಸೋಣ. ಈ ದರಿದ್ರನಾರಾಯಣನ ದೇಶದಲ್ಲಿ ಜನ ಎಷ್ಟು ಒಟ್ಟಿ ಉಪಯೋಗಿಸಬಲ್ಲರು? ವರ್ಷ ಒಂದರ ತಲಾ ಎರಡು ರವಿಕೆಯಾ ಒಟ್ಟಿ ಉಪಯೋಗಿಸಿಯಾರೇ? ಅಂದ ಮೇಲೆ ಇದಕ್ಕೆ ಹೊಲಿಗೆ ಕೆಲಸ ಎಷ್ಟು ಬೇಕಾದೀತು—ಈ ಕಸುಬು ಪ್ರತಿ ಮಹಿಳೆಗೂ, ಪ್ರತಿ ಮನೆಗೂ ಉದ್ಯೋಗ ದೊರಕಿಸೀತೇ?

ಇಷ್ಟರ ಮೇಲೆ ಇಲ್ಲಿ ಕಲಿಯುವುದು— ಕತ್ತರಿಸಲು—ಮತ್ತು ಹೊಲಿಯಲು. ಇವರು ಕತ್ತರಿಸುವ ಒಟ್ಟಿ ತಯಾರಾಗುವುದು ಎಲ್ಲಿ? ಯಾರು? ನೂಲುವುದ —ನೇಯುವುದು—ಈ ಉದ್ಯೋಗ ಎಲ್ಲಿ ಕಡೆಯ ಇತ್ತದೆ?—ನೂಲುವುದನ್ನು ನೇಯುವುದನ್ನು ನಮ್ಮ ಮಹಿಳೆಯರು—ಮಕ್ಕಳು ಏಕೆ ಕಲಿಸಬಾರದು ಒಂಡವಳಕಾಡು ಸಮೂಹ ಇದನ್ನು ಒಪ್ಪಲಾರದು.

ಪ್ರತಿ ಮನೆಯೂ ನೂಲುವ, ನೇಯುವ ಕೇಂದ್ರವಾಗಬೇಕು—ಕೃಷಿಯ ನಂತರ ನಮ್ಮ ದೇಶದಲ್ಲಿ ಹೆಚ್ಚಿನ ಉತ್ಪಾದನೆಯಾಗಬೇಕು—ಹೆಚ್ಚು ಮಂದಿಗೆ ಉದ್ಯೋಗ ಕೊಡಬಲ್ಲ ವೃತ್ತಿ ನೂಲುವುದು—ನೇಯುವುದ—ಕಥವಾ ಬಟ್ಟೆ ಹೊಟ್ಟೆ ಬಟ್ಟೆ ಇವೆಂಡರಲ್ಲಿ ನಾವು ಸ್ವಾವಲಂಬಿಗಳಾಗಬೇಕು. ನಮ್ಮ ಜನ ಎಲ್ಲರಿಗೂ ಈ ವೃತ್ತಿಯಲ್ಲಿ ದುಡಿಯಲು ಅವಕಾಶವಿರಬೇಕು—ಈ ವೃತ್ತಿಗಳು ಬಂಡವಳಿಗರ ಕಾಲಡಿಯಲ್ಲಿ ಬದ್ಧ ನರಳುತ್ತಿರಬಾರದು.

ಇತ್ತೀಚಿನ ಕಥೆ ನಮ್ಮ ಶಾಲೆಗಳಲ್ಲಿ ಮಕ್ಕಳು ತಕಲಿಯಲ್ಲಿ ನೂಲುವುದನ್ನು ಕಲಿಯುತ್ತಿದ್ದರು. ನಮ್ಮ ಬುನಾದಿ ಶಿಕ್ಷಣ ಕೇವಲ ಅಧ್ಯಾಯದ ತರಬೇತಿ ಶಾಲೆಯಲ್ಲೇ ಉಳಿದಿದೆ. ನಮ್ಮ ಅಂಬರ ಚರಖಾ ಎತ್ತ ಹೋಯಿತು? ನಮ್ಮ ಖಾದಿ ಬೋರ್ಡು ಏನು ಮಾಡುತ್ತಿದೆ? ಇದು ಕೇವಲ ಅಕ್ಷರ ಕಲಿಯದ ಹೆಣ್ಣುಮಕ್ಕಳ ವಿಚಾರ ಮಂದಿರವೆ?

ನಮ್ಮ ಈ ಮಹಿಳಾ ಮಂಡಳಗಳು ಸತ್ತರಿಸುವುದು—ಹೊಲಿಯುವುದು— ಕಲಿಸುವ ಮೊದಲು ನೂಲಲು, ನೇಯಲು ಕಲಿಸಬಹುದಲ್ಲ? ಪ್ರತಿಯೊಂದು ಮಹಿಳಾ ಮಂಡಳವೂ ಮಗ್ಗ ನಡೆಸಬಹುದಲ್ಲ.

ಗಾಂಧೀಜಿ ಖಾದಿ ಚಳುವಳಿ ನಡೆಸಿದರು. ಕಾಂಗ್ರೆಸ್ ಬಾವುಟದಲ್ಲಿ ಚರಖಾ ಶೋಭಿಸಿತು. ಚರಖಾ ಚಲಾ ಚಲಾಜೀ—ಸ್ವರಾಜ್ಯ ಲೇಂಗೇ—... ಅಂದಿಗೆ ಅದು ಎಲ್ಲರಿಗೂ ಸಫ್ಯವಾಯಿತು. ಶ್ರೀವಂಕರೆಲ್ಲ ವಿದೇಶೀ ಅರಿವೆ ತ್ಯಜಿಸಿದರ .....ವೆಂಜೆಸ್ಟರ್, ಲೆಂಕೆಶಯರ್ ನಷ್ಟಿ ನಿರುದ್ಯೋಗ, ಭಾರಿಭಾರಿ ಮಿಲ್ಲುಗಳೆಲ್ಲಿಲ್ಲ ಕೆಲಸ ನಿಂತುಹೋಯಿತು. ಬ್ರಿಟಿಷ್ ಸಾಮ್ರಾಜ್ಯಶಾಹಿ ಗಾಂಧಿಜಿಗೆ ಮಣಿಯಬೇಕಾಯಿತು— ...

ಅಂದಿನ ಆ ಸ್ಫೂರ್ತಿ ಇಂದೇಕೆ ಅರಿ ಹೋಗಿದೆ? ನಮ್ಮದು ಗಾಂಧಿ ದೇಶವಲ್ಲವೆ? ಗಾಂಧೀಜಿ ಹೇಳಿದ್ದರೂ ಕಾಂಗ್ರೆಸ್ಸನ್ನು ವಿಜರ್ಜನೆ ಇನ್ನೂ ಉಳಿಸಿಕೊಂಡಿದ್ದೇವೆ. ಅಪತ್ತು ಬಂದಾಗ ಗಾಂಧಿ ಜಪ ಮಾಡುತ್ತಾರೆ. ಅವರ ತತ್ವದಲ್ಲಿ ನಮಗೆ ಹಂಬುಗೆ—ನಿಷ್ಠೆ ಇಲ್ಲವೆ?

ಹೇಳುವುದು ಬಹಳ ಸುಲಭ. ಮತ್ತೆ ಖಾದಿ, ಗ್ರಾಮ ಕೈಗಾರಿಕೆಗಳಿಗೆ ಕಾಲ ಬಂದರೆ...ಗ ಜರ ಥಿನ ಕೂಯಂಬತ್ತಾ ದಿನ ಭಾರಿ ಮಿಲ್ಲುಗಳು ಏನು ಮಾಡಬೇಕು? ಆ ಸಂಸ್ಥೆಗಳಿಗೆ ಹಾಕಿದ ಬಂಡವಳ—ಆ ಬಂಡವಳಿಗರ ಗತಿ ಏನು? ಆ ಮಿಲ್ಲುಗಳಲ್ಲಿ ಕೆಲಸ ಮಾಡುವ ಲಕ್ಷೋಪಲಕ್ಷ ಕೆಲಸಗಾರರ ಗತಿಯೇನು? ಅಂದರೆ ಕೇವಲ ಕೆಲವೇ ಜನರ ಬಂಡವಳಕಲವು ಲಕ್ಷ ಜನರ ಉದ್ಯೋಗ ಇವುಗಳ ಹಿತಕ್ಕಾಗಿ ದೇಶದ ಕೋಟಿ ಜನ ನಿರುದ್ಯೋಗಿಗಳಾಗಿ — ಕುಳ್ಳುವಂತಿರಕೂಡದೆಗಳಾಗಿ ಉಳಿಯ ಬೇಕು

ಇದು ಗಾಂಧಿಶತಾಬ್ದಿ ವರ್ಷ. ಈ ವರ್ಷ ಈ ಉತ್ಸವ ಎಲ್ಲೆಲ್ಲೂ ವಿಜೃಂಭಣೆಯಿಂದ ಆಚರಣೆಯಾಗಲೇ ಬೇಕು. ಉತ್ಸವಗಳು ಆಚರಿಸುವದರಲ್ಲಿ ನಾವು ಶೂರರು, ಧೀರರು. ವಷಮಹೋತ್ಸವ, ವನ್ಯಮೃಗಗಳ ದಿನ, ನೊಣ ಸಪ್ತಾಹ, ತಿಲಕ ಜಯಂತಿ, ನೆಹರು ದಿನ ಯಾವದು ಬೇಕು—ಎಲ್ಲವೂ ಆಚರಿಸುತ್ತೇವೆ.

ಸರಕಾರದಿಂದ ಫಿದೇಶ ಬರುತ್ತದೆ. ಶಾಲಾ ಕಾಲೇಜುಗಳಲ್ಲಿ ದಿನಾಚರಣೆ ನಡೆಯುತ್ತದೆ—ಅಂಚೆ ಕಚೇರಿ ವಿಶೇಷ ಸ್ಟಾಂಪು ಹೊರಡಿಸುತ್ತದೆ. ದೊಡ್ಡ ದೊಡ್ಡ ನಗರಗಳಲ್ಲಿ ಸತ್ಯಾಗ್ರಹ, ಸಂಗೀತ, ವೃಕ್ಷ ಸಮಾರಂಭಗಳು ನಡೆಯುತ್ತವೆ—ಇತ್ಯಾದಿ.

ಗಾಂಧಿ ಶತಾಬ್ದಿಯೂ ಇಷ್ಟೇ ಅದೀತೆ?

ಗಾಂಧಿ ಶತಾಬ್ದಿ ಆಚರಿಸುವ ದೇಶ ಗಾಂಧಿ ತತ್ವಗಳಲ್ಲಿ ಎಷ್ಟನ್ನು ಅನುಷ್ಠಾನಕ್ಕೆ ತಂದಿದೆ?

ಖಾದಿಯೆ? ಹರಿಜನೋದ್ಧಾರವೆ? ರಾಷ್ಟ್ರಭಾಷಾ ಪ್ರಚಾರವೆ? ಪ್ರಧಾನವಾಗಿ ಶುದ್ಧ, ನಿರ್ಮಲ, ನಿಷ್ಕಲಂಕ ರಾಜಕೀಯ ಜೀವನವೇ? ವ ದ್ಯಪಾನ ನಿಷೇಧವೆ?

ಗಾಂಧೀಜಿಯ ಖಾದಿ ಅರ್ಥಶಾಸ್ತ್ರದಲ್ಲಿ ಎಲ್ಲವೂ ಅಡಗಿತ್ತು. ಧರ್ಮ—ರಾಜಕೀಯ ಎರಡನ್ನು ಒಂದೇ ವೇದಿಕೆಯಲ್ಲಿ ಅಳವಡಿಸಿಕೊಂಡವರು ಗಾಂಧೀಜಿ ಭಗವಂತ ಶ್ರೀಕೃಷ್ಣನ ಕೈಯ ಸುದರ್ಶನದಂತೆ ಗಾಂಧೀಜಿಯ ಚರಖಾ—ರಾಟೆ. ಜೆ. ಸಿ. ಕುಮಾರಪ್ಪ ಖಾದಿ ಅರ್ಥಶಾಸ್ತ್ರದ ಕುರಿತು ಬೃಹತ್ ಗ್ರಂಥವನ್ನೇ ಬರೆದರು. ರಾಷ್ಟ್ರದ ಪ್ರಾಣ ಗ್ರಾಮದಲ್ಲಡಗಿದೆಯೆಂಬ ಸತ್ಯ ಹೊಳೆದದ್ದು ಗಾಂಧೀಜಿಗೆ.

ಅದರೆ ನಮ್ಮ ಸ್ವಾತಂತ್ರ್ಯೋತ್ತರದ ಭಾರತದ ಯೋಜಕರಿಗೆ ಗಾಂಧೀಜಿ ಅರ್ಥಶಾಸ್ತ್ರ ನೆರವಾಗಲಿಲ್ಲ. ಮಹಲ್ಲಬೀಸ್ ಯೋಜನೆ ವ್ಯರ್ಥವಾಯಿತು.

ಗಾಂಧೀಜಿಗೆ ನಮ್ಮ ದೇಶದಲ್ಲಿ ಇಂದು ಯಾವ ಸ್ಥಾನವಿದೆ.

ಕಾಂಗ್ರೆಸ್ಸು ಇಂದು ಆಳುವ ಪಕ್ಷ. ಇದರ ಪೋಷಕರು ಗಾಂಧೀಜಿ. ರಚನಾತ್ಮಕ ಕಾರ್ಯಕ್ರಮಗಳಿಗಾಗಿ ಮಾತ್ರ ಈ ಸಂಸ್ಥೆ ಇರಲಿ. ಅಧಿಕಾರ ಎಂದೂ ಈ ಪಕ್ಷ ವಹಿಸಬಾರದು ಎಂದು ಗಾಂಧೀಜಿ ಹೇಳಿದ್ದರು. ರ್ಗಾಸರಲ್ಲಿ ಪಂತ್, ಪಟೇಲ್, ರಾಜಾಜಿಯವರ ಒತ್ತಾಯಕ್ಕಾಗಿ ಕಾಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಲು ಒಪ್ಪಿಗೆ ಕೊಡಿದರು. ತಾನು ಮಾತ್ರ ನಾಲ್ಕಾಣೆ ಸದಸ್ಯತನಕ್ಕೆ ರಾಜನಾಮೆ ಇತ್ತರು.

ರ್ಗಾಜರ ನಂತರ ಕಾಂಗ್ರೆಸ್ಸು ಅವರ ಅಪೇಕ್ಷೆಯಂತೆ ಎಂದೋ ಭಗ್ನಾಸ್ತಾಗಬೇಕಿತ್ತು.—ಅದರೆ ಉಳಿಯಿತು. ಏನು ಸಾರ್ಥಕವಾಯಿತು? ಇಂದಿನ ಕಾಂಗ್ರೆಸ್ಸು ಅಧಿಕಾರ ಕೈಯಲ್ಲಿಟ್ಟುಕೊಂಡೂ ಗಾಂಧಿ ತತ್ವಗಳನ್ನು ಎಷ್ಟರ ಮಟ್ಟಿಗೆ ಆಚರಣೆಗೆ ತಂದಿದೆ? ಪಕ್ಷ ಪಾವಿತ್ರ್ಯ ಎಷ್ಟರ ಮಟ್ಟಿಗೆ ಉಳಿಸಿಕೊಂಡಿದೆ! ವಿರೋಧ ಪಕ್ಷಗಳಿಗಾದರೂ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಏನು ಆದರ್ಶ ನೀಡಿದೆವೆ? ದೇಶದ ರಾಜಕೀಯವಾದರೂ ಇಂದು ಶುದ್ಧವಾಗಿದೆಯೆ? ಸಮಾಜದ ಅಹಿತಗಳನ್ನು ತಡೆಗಟ್ಟಲು ಕಾಂಗ್ರೆಸ್ಸು ಸಮರ್ಥವಾಯಿತೆ?

ಗಾಂಧೀಜಿ ತತ್ವಗಳಲ್ಲಿ ಹೆಲವು ಇಂದಿನ ಈ ಯುಗದಲ್ಲಿ ಅನ್ವಯಸಾರ್ಯ ಎಷ್ಟೋಣ. ಮಾಗೆ ಹೇಳುವ ಎಷ್ಟಗಾಂಕೆಯಾವರೂ ಬೇಡವೆ?

ಸ್ವತಃ ಗಾಂಧೀಜಿ ತನ್ನ ಸತ್ಯ ಪರೀಕ್ಷೆಯ ಕಾಲದಲ್ಲಿ, ತನ್ನ ಪ್ರಯೋಗದಲ್ಲಿ

ಕ್ರಾಂತಿ ಗೀತೆ - 'ವಂದೇ ಮಾತರಂ'

ಶ್ರೀ ಸೆ. ನಾರಾಯಣ

ದೇಶದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಸೆಲೆಯಾಗಿ ಮೆರೆದ "ವಂದೇ ಮಾತರಂ" ಕ್ರಾಂತಿ ಗೀತೆಯಾಗಿ ಪರಿಣಮಿಸಿತು. ಅದು ವಿಶಾಲ ಕಾಯ ರಾಷ್ಟ್ರದ ವೈವಿಧ್ಯಮಯ ಜನತೆಯನ್ನು ಒಂದು ಉದ್ದೇಶದತ್ತ ಒಯ್ದು ಸಫಲವಾಯಿತು. ಈ ಗೀತೆಯ ಉಗಮ ಹೇಗಾಯಿತು? ಸ್ಫೂರ್ತಿಯ ಸೆಲೆಯಲ್ಲಿ ಮೂಡಿತು?

ರೆನ್ನಾ ಕುಮಾರಿಯಿಂದ ಕಾಶ್ಮೀರದ ವರೆಗೆ ವ್ಯಾಪಿಸಿದ ಭವ್ಯ ಭಾರತ ಆಂಗ್ಲರ ಅಧೀನದಲ್ಲಿದ್ದಾಗ ಅನೇಕ ಪವಾಡಗಳು ನಡೆದವು. ಭಾರತದ ಬಂಧನ ವಿಮೋಚನೆಗಾಗಿ ಅಸಂಖ್ಯಾತ ಸ್ವಾತಂತ್ರ್ಯ ಯೋಧರು ತಾಯ್ನಾಡಿಗಾಗಿ ಬಲಿಯಾದರು. ಸ್ವಾತಂತ್ರ್ಯ ಪೂರ್ವದಲ್ಲಿ 'ವಂದೇ ಮಾತರಂ' ಗೀತೆ ನಾಡಿಗೆ—ಸ್ವಾತಂತ್ರ್ಯಾಭಿಮಾನಿಗಳಿಗೆ ಹೊಸ ಸ್ಫೂರ್ತಿಯನ್ನು ನೀಡಿತು. ವಂದೇ ಮಾತರಂ ಗೀತೆ ಬಳಕೆಗೆ ಬಂದ ತರುವಾಯ ನಾಡಿನ ಜನತೆಯ ಮನದಲ್ಲಿ ಹೊಸ ಚೈತನ್ಯ ಉಂಟಾಯಿತು. ಜನ ಕೋಟಿಯಲ್ಲಿ ಜಾಗೃತಿಯನ್ನುಂಟು ಮಾಡಿ, ಯುವಕರಲ್ಲಿ ಸ್ವಾಭಿಮಾನವನ್ನು ಕೆರಳಿಸಿ, ಹೊಸ ಪರಂಪರೆಗೆ ಕಾರಣವಾದ 'ವಂದೇಮಾತರಂ'ಗೀತೆಯ ಕರ್ತೃ ಬಂಕಿಂ ಚಂದ್ರ ಚಟರ್ಜಿಯವರು. ಬಂಕಿಂ ಚಂದ್ರರು ತಮ್ಮ 'ಆನಂದ ಮಠ' ಕಾದಂಬರಿಯಲ್ಲಿ ಈ ಗೀತೆಯನ್ನು ಸಾರಸ್ವತ ಲೋಕಕ್ಕೆ ಪರಿಚಯ ಮಾಡಿಕೊಟ್ಟರು.

ಬಂಗಾಳ ಭೀಕರ ಕ್ಷಾಮದಿಂದ ಬಳಲಿ ಹೋಗಿತ್ತು. ಜನ ನಿಸ್ತೇಜರಾಗಿದ್ದರು. ಸಂಪರ್ಕಸೌಕರ್ಯವಾದ ಭೂಮಿ ಬರಡಾಗಿ ಹೋಗಿತ್ತು. ಬಂಗಾಳ, ಬಿಹಾರಗಳಲ್ಲಿ ಭೀಕರ ಹಾಹಾಕಾರ. ಸಹಸ್ರಾರು ಮಂದಿ ಗಂಡಸರು, ಹೆಂಗಸರು, ಮಕ್ಕಳು ಸಾವಿಗೆ ಬಲಿಯಾಗಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ನೋಡಿದರಲ್ಲಿ ಸಾವಿನ ಆಕ್ರಂದನ. ನೂರಕ್ಕೆ ಎಪ್ಪತ್ತರಷ್ಟು ಜನಸಂಖ್ಯೆ ಹೇಳಹೆಸರಿಲ್ಲದಂತಾಗಿತ್ತು. ಸತ್ತ ದೇಹಗಳಿಗೆ ತಕ್ಕ ಸಂಸ್ಕಾರವೂ ಇರಲಿಲ್ಲ. ಎಲ್ಲಿ ನೋಡಿದರಲ್ಲಿ ಶವಗಳ ಸಾಲು. ಅದೊಂದು ಭೀಕರ ನೋಟ ಸ್ಮಶಾನವನ್ನು ಕಣ್ಣಿಗೆ ತರುತ್ತಿತ್ತು. ಅ ದೃಶ್ಯ. ಪ್ರಕೃತಿ ಒಂದು ಕಡೆಯಿಂದ ಜನತೆಯನ್ನು ಸೀಡಿಯುತ್ತಿತ್ತು. ಸರ್ಕಾರ ಮತ್ತೊಂದು ಕಡೆಯಿಂದ ಜನತೆಯನ್ನು ನಿರ್ಜೀವಗೆಸಳೆಯುತ್ತಿತ್ತು.

ಕ್ರಿ. ಶ. ೧೭೫೭ರಲ್ಲಿ ಪ್ಲಾಸಿ ಕದನ ನಡೆಯಿತು. ಈ ಕದನದ ನಂತರ ಭಾರತ ರಾಹುಗ್ರಸ್ತ ಸೂರ್ಯನಂತಾಯಿತು. ಮೀರ್ ಜಾಫರ್ ೨೪ ಪರಗಣಗಳ ಜಮೀನ್ದಾರಿ ಹಕ್ಕನ್ನು ಪೂರ್ಣವಾಗಿ ಈಸ್ಟ್ ಇಂಡಿಯಾ ಕಂಪೆನಿಗೆ ವಹಿಸಿಕೊಟ್ಟ. (ಅದಕ್ಕೆ ಲಾರ್ಡ್ ಕ್ಲೈವನ ಜಹಗೀರೆಂದೇ ಹೆಸರಾಯಿತು.)

ದೆಹಲಿಯ ಬಾದಷಹ ಷಾ ಆಲಂ ೧೭೫೯ರಲ್ಲಿ ಆಜ್ಞೆಯೊಂದನ್ನು ಹೊರಡಿಸಿದ. ಆ ಆಜ್ಞೆಯ ಪ್ರಕಾರ ಆ ಪ್ರದೇಶದ ಪೂರ್ಣ ಅಧಿಕಾರ ಈಸ್ಟ್ ಇಂಡಿಯಾ ಕಂಪೆನಿಗೆ ಒಳಪಟ್ಟಿತು. ಜನರಿಗೆ ಇದರಿಂದ ವಿಶೇಷ ತೊಂದರೆಯೂ ಆಯಿತು. ಪೌರಾಡಳಿತ ವ್ಯವಹಾರ ನೆಪಮಾತ್ರಕ್ಕೆ ನವಾಬ ಕೈಯಲ್ಲಿತ್ತು. ಭೂಕಂದಾಯವನ್ನು ವಸೂಲುಮಾಡುವ ಅಧಿಕಾರ ಈಸ್ಟಿಂಡಿಯಾ ಕಂಪೆನಿಗೆಇತ್ತು.

ಮಹೇಂದ್ರ ಮತ್ತು ಅವನ ಪತ್ನಿ ಕಲ್ಯಾಣಿ ಮನೆಯಲ್ಲಿ ಚಿಂತಿಸುತ್ತಾ ಕುಳಿತಿದ್ದರು. ಮಹೇಂದ್ರ ಪದಚಿನ್ನ ಗ್ರಾಮದ ಜಮೀನ್ದಾರ. ಅವರದು ಸುಖಮಯ—ಪ್ರೇಮಮಯ, ಸಂತೃಪ್ತ ದಾಂಪತ್ಯ. ಅವರ ಹೆಣ್ಣು ಮಗು ತೆಪ್ಪಲ್ಲಿ ಮಲಗಿತ್ತು. ಬಂಗಾಳದ ಕ್ಷಾಮದಿಂದ ಅವರ ಮನಸ್ಸು ಬಹುವಾಗಿ ನೊಂದು ಹೋಗಿತ್ತು. ರೈತರೆಲ್ಲ ಹೊರಟು ಹೋಗಿದ್ದರು. ದನಕರುಗಳೆಲ್ಲ ಸತ್ತು ಹೋಗಿದ್ದವು. ಭೀಕರ ಸನ್ನಿವೇಶದಿಂದ ಅವರ ಶೋಕ ತಪ್ತರಾಗಿದ್ದರು. ಸ್ಮಶಾನ ಸದೃಶ ಪದಚಿನ್ನ ಗ್ರಾಮವನ್ನು ತೊರೆಯಲು ಮಹೇಂದ್ರ ಮತ್ತು ಕಲ್ಯಾಣಿ ನಿರ್ಧರಿಸಿದರು.

ಮಹೇಂದ್ರ ಮತ್ತು ಕಲ್ಯಾಣಿ ಊರನ್ನು ತೊರೆದು ೨೪ ಪರಗಣಗಳ ರಾಜಧಾನಿಯತ್ತ ಪಟ್ಟಣದಲ್ಲಿ ನಡೆದಿದ್ದರು. ಪೂರ್ವ ಮಧ್ಯದಲ್ಲಿ ಅವರಿಗೆ ಸಾಧುಗಳ ಗುಂಪೊಂದು ಎದುರಾಯಿತು. ಸಾಧುಗಳ ಗುಂಪಿನ ನಾಯಕ ಮುಂದಕ್ಕೆ ಹೋಗದಿರುವಂತೆ ಎಚ್ಚರಿಕೆ ನೀಡಿದ. "ಮೊಗಲ್ ಬಾದಷಹರು ಈಸ್ಟ್ ಇಂಡಿಯಾ ಕಂಪೆನಿಗೆ ವಹಿಸಿ ಕೊಟ್ಟಿರುವ ದಿವಾನಿ ಸನ್ನದಿನಿಂದ ಕಂಪೆನಿ ಕೊಬ್ಬಿದೆ. ಬಂಗಾಳದ ಜನತೆ ನರಕದ ಜ್ವಾಲೆಯಲ್ಲಿ ಬೆಂದು ಹೋಗುತ್ತಿದ್ದಾರೆ. ನೀವು ಮುಂದೆ ಹೋಗುವುದರಿಂದ ಅಪಾಯವಿದೆ" ಎಂದನು.

ಮಹೇಂದ್ರ ಸಭ್ಯತೆಯ ಮಾತಿನ ಅಂತರಾರ್ಥವನ್ನು ಅರಿತ. ಪತ್ನಿ ಕಲ್ಯಾಣಿಗೆ ಪರಿಸ್ಥಿತಿಯನ್ನು ಪರಿಚಯ ಮಾಡಿಕೊಟ್ಟ. ಜನರ ಅಸಹಾಯಕತೆಯನ್ನು ತಿಳಿಸಿದ. "ರಾಷ್ಟ್ರದಲ್ಲಿ ಪುರುಷರ ಪೌರುಷವೇ ಅಡಗಿಹೋಗಿದೆ. ಈಗ ಮಹಿಳೆಯರೇ ಮುಂದೆ ಬರಬೇಕು" ಎಂದಳು ಕಲ್ಯಾಣಿ.

"ಇದು ಮನುಷ್ಯರೇ ಸೃಷ್ಟಿಸಿದ ಕ್ಷಾಮ ಕಲ್ಯಾಣಿ. ಬಡಜನ ಸಾವಿನೊಂದಿಗೆ ಸೇರಲು ಧಾವಿಸುತ್ತಿದೆ. ಪೀಡನೆಯ ಕೋಟೆಲೆಯಿಂದ ಮಡಿದ ಜನರ ಶವದಳವೇ ಮೇಲೆ ಅಧಿಕಾರಿಗಳು ನಿಂತು ಅಟ್ಟಹಾಸದಿಂದ ನಗುತ್ತಿದ್ದಾರೆ. ಇದೊಂದು ದುರ್ದೈವಕರ ಪ್ರಸಂಗ" ಎಂದು ವಿಷಾದದಿಂದ ಪುಡಿದ ಮಹೇಂದ್ರ.

ಮಹೇಂದ್ರ ಮತ್ತು ಕಲ್ಯಾಣಿಯರನ್ನು ಹಡಗಾಯಿತರು ಮಾರ್ಗದಲ್ಲಿ ಬಂಧಿಸಿ ಕರೆದೊಯ್ದರು. ಆಗ ಬಂಗಾಳದಲ್ಲಿ ಎರಡು ಬಗೆಯ ಹಡಗಾಯಿತರಿದ್ದರು. ಪರವಾನಗಿ ಪಡೆದ ಹಡಗಾಯಿತರದು ಮೊದಲಗುಂಪು (ಕಂಪೆನಿಯ ಅಧಿಕಾರಿಗಳು) ಬಡತನದಿಂದ, ಕಷ್ಟಕೋಟಲೆಗಳಿಂದ ತೊಂದರೆಗೀಡಾಗಿದ್ದ ಜನರಿಗೆ ಪರಿಹಾರವನ್ನು ನೀಡಲು ಶ್ರೀಮಂತರನ್ನು ಆಕ್ರಮಿಸುತ್ತಿದ್ದಹಡಗಾಯಿತರದು ಇನ್ನೊಂದು ಗುಂಪು.

ಮಹೇಂದ್ರ ಮತ್ತು ಕಲ್ಯಾಣಿ ಸುರನ್ನು ಬಂಧಿಸಿದವರು ಎರಡನೆಯ ಗುಂಪಿನವರು. ಈ ಎರಡನೆಯ ಗುಂಪಿನವರು 'ಆನಂದ ಮಠ' ವೆಂಬ ಸನ್ಯಾಸಿಗಳ ಪಂಗಡಕ್ಕೆ ಸೇರಿದವರು. ಇದು ನಿಸ್ತೇ

ಸೋಲು ಕಂಡಲ್ಲಿ ಸೋಲನ್ನು ಬಹು ಬೇಗ ಒಪ್ಪಿಕೊಳ್ಳುವದಕ್ಕೆ ಹಿಂಜರಿಯುತ್ತಿರಲಿಲ್ಲ.

ಗಾಂಧಿ ಶತಾಬ್ಧಿಯನ್ನು ಆಚರಿಸುವವರು ಮಾತ್ರ ನೊಂದಲು ಕಾಂಗ್ರೆಸ್ಸನ್ನು ವಿಸರ್ಜಿಸಬೇಕು.—ಕಾಂಗ್ರೆಸ್ಸು ಜನತೆಗೆ ಸ್ವಾಮಿಯಾದ ಮಾರ್ಗದರ್ಶನ ಮಾಡಲಿಲ್ಲ. ಗಾಂಧಿ ತತ್ವಗಳೆಲ್ಲ ಕಾಂಗ್ರೆಸ್ಸಿನಿಂದಲೇ ಮೂಲ ಪಡಲಾದುವು.

ಅಧಿಕಾರದಲ್ಲಿರುವ ಕಾಂಗ್ರೆಸನ್ನು ಮರೆಯೋಣ. ಆಳುವ ಪಕ್ಷವಾದ ಕಾಂಗ್ರೆಸ್ಸು ರಚನಾತ್ಮಕ ಕಾರ್ಯ ಏನು ನಡೆಸಿತ.? ಮದ್ಯಪಾನ ನಿಷೇಧದಂತಹ ಕಾನೂನು ಆಳುವ ಕಾಂಗ್ರೆಸ್ಸೇ ಜಾರಿಗೆ ತರಬೇಕೆ? ಅಧಿಕಾರಿಗಳೇ ಅದರ ಹೊಣೆಗಾರರೇ? ಗ್ರಾಮಾಂತರ ಪ್ರದೇಶಗಳಲ್ಲಿ ಕಾಂಗ್ರೆಸ್ಸಿಗರು ಎಷ್ಟು ಪ್ರಚಾರ ನಡೆಸಿದರು? ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಸೇರಿದ ಅಂಗಡಿ ಮುಂದೆ ಪಿಕೆಟಿಂಗ್ ನಡೆಸಿ, ಪೋಲಿಸರ ಏಟಿಗೆ ಗುರಿಯಾದ ಕಾಂಗ್ರೆಸ್ಸಿಗರೆಲ್ಲ ಇಂದೆಲ್ಲಿ ಹೋದರು? ಮಂತ್ರಿಪದವಿಗೆ ರಾಜನಾಮೆ ನೀಡಿ, ಪತ್ರಿಕಾ ಹೇಳಿಕೆಗಳ ಮೂಲಕ ಗುಡುಗುಡಿಸಿದರೆ ಆಯಿತೆ?

ಸದ್ಯ ಕೆಲವು ರಾಜ್ಯ ಸರಕಾರಗಳನ್ನಾದರೂ ಅಭಿನಂದಿಸಬೇಕು. ತಮ್ಮ ಸೋಲನ್ನು ತಾವು ಒಪ್ಪಿಕೊಂಡಿವೆ. ಯಾವದೇ ಒಂದು ಆದರ್ಶ ವ್ಯವಹಾರದಲ್ಲಿ ಅ ಸಾಧ್ಯ ಎಂದು ಕಂಡಾಗ-ಜನರು ಅದರ ದುರುಪಯೋಗ ಪಡೆಯುತ್ತಿರುವಾಗ ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿರುವಾಗ—ಅಂತಹ ಶಾಸನ ಹಿಂದೆ ಸರೆವ ಸಾಹಸ ಮಾಡಿದ ಸರಕಾರಗಳು ಅಭಿನಂದನೆಗೆ ಅರ್ಹವಾದವು.

ಖಾದಿಯ ಮಾತೂ ಅಷ್ಟೇ—ಖಾದಿ-ಗುಡಿ ಕೈಗಾರಿಕೆಗಳಿಗಾಗಿ ಬೋರ್ಡುಗಳನ್ನು ರಚಿಸಿ ಅದರ ಅಡಳಿತ ಅಧಿಕಾರಿಗಳಿಗೆ ಒಪ್ಪಿಸಿದರಾಯಿತೆ? ಆ ಅಧಿಕಾರಿಗಳಿಗೆ ಈ ವೃತ್ತಿಯಲ್ಲಿ ಎಷ್ಟು ಅಭಿಮಾನ? ಅ ಸಮಿತಿಯಲ್ಲಿರುವವರು ಎಷ್ಟು ನಿಷ್ಠಾವಂತರು?—ಇಪ್ಪತ್ತು ವರ್ಷಗಳಾದರೂ ಇನ್ನೂ ಈ ಉದ್ದಿಮೆಗಳು ಸರಿಯಾದ ದೃಶ್ಯಗಳಂದಲೇ ನಡೆಕೊಂಡು ಬರಬೇಕಾದರೆ ಇವನ್ನೂ ಕೈಬಿಡುವುದು ವಿವೇಕವಲ್ಲವೆ?

ಖಾದಿ— ನಿಷ್ಠಾವಂತಧಾರಿಗಳಿಗಾದರೂ ಮುಂಚೆ ದೊರಕಿತ್ತು. ಅದು ಸರಕಾರದ ಸ್ವತ್ತಾದ ಮೇಲೆ ಖಾದಿ ಕೊಳ್ಳಲು ನಾವು ನಗರಗಳಿಗೆ ಹೋಗಬೇಕು—ಅದೂ 'ಸಬ್ ಸ್ಟೇಂಡರ್ಡ್' ಖಾದಿ. ಹಾಗೆಂದು ಬಹು ಬೆಲೆಯ ವಿದೇಶೀಯರ, ಶ್ರೀಮಂತರ ಕಣ್ಣು ಕೊರೆಯುವ ಖಾದಿಗಳೂ ಇವೆ—ನಗರಗಳಲ್ಲಿ-ಪ್ರದರ್ಶನಾಲಯಗಳಲ್ಲಿ.—ಬಡ ಬೋರೆ ಗೌಡನೇನು ಬಂತು ಇದರಿಂದ?

ಈ ಇಪ್ಪತ್ತು ವರ್ಷಗಳ್ಳಿ ಖಾದಿ ಮತ್ತು ಗ್ರಾಮ ಕೈಗಾರಿಕಾ ವಸ್ತುಗಳ ಬಳಕೆ ಎಷ್ಟು ಪಟ್ಟು ಏರಿದೆ? ನಮ್ಮ ನಿರುದ್ಯೋಗ ಸಮಸ್ಯೆ ಎಷ್ಟು ನಿವಾರಣೆ ಆಗಿದೆ? ಸ್ವಾವಲಂಬನೆ ಎಷ್ಟು ಸಾಧಿಸಿದೆ-ಈ ಬೋರ್ಡುಗಳು ಹೇಳಬಲ್ಲವೆ?

ಖಾದಿ-ಗ್ರಾಮ ಕೈಗಾರಿಕೆಗಳನ್ನು ನಮ್ಮವರಿಗೆ ನಿಜವಾಗಿಯೂ ಅಭಿಮಾನವಿದ್ದರೆ ಅದನ್ನು ಸರಕಾರ ಕೋಣೆಯಿಂದ ಹೊರಗಿರಿಸಲಿ—ಅ ಮೇಲೆ ದೇಶದಲ್ಲಿ ಇನ್ನು ಕನಿಷ್ಠ ಹತ್ತು ವರ್ಷ ಖಾದಿ-ಕೈಮಗ್ಗ ಬಟ್ಟೆಗಳಿಗೆ—ಗ್ರಾಮ ಕೈಗಾರಿಕಾ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಪ್ರಾಶಸ್ತ್ಯ ನೀಡಲಿ. ಯಂತ್ರೋತ್ಪಾದಿತ ಸಾಮಗ್ರಿಗಳು—ಬಟ್ಟೆಗಳ ಮೇಲೆ ನಿಯಂತ್ರಣ ಹಾಕಲಿ—ಆಗ ಖಾದಿ-ಗ್ರಾಮ ಕೈಗಾರಿಕೆಗಳು ಖಾಸಗಿ ನಲಯದಲ್ಲಿ ಏಕೆ ಬೆಳೆಯುವುದಿಲ್ಲ ನೋಡೋಣ? ಈ ಸಾಹಸ ನಮ್ಮ ಸರಕಾರ ಮಾಡೀತೆ? ಮಾಡಿದರೆ ಆಗ ನಿಜವಾಗಿಯೂ ಗಾಂಧಿ ಶತಾಬ್ಧಿ ಆಚರಿಸಿದಂತಾಗುವುದಿಲ್ಲವೆ?

ಅಮೇರಿಕೆಯದೇ ಈ ದೇಶಕ್ಕೆ ಒಂದು ಸಾವಿರ ಬಿಲ್ಲಿಯನ್ ಡಾಲರ್ (ಈ ಸಂಖ್ಯೆ ಸ್ಪಷ್ಟವಾಗಿ ನನಗೆ ನೆನಪಿಲ್ಲ. ಅಂತೂ ಬಹು ದೊಡ್ಡ ಮೊತ್ತ) ಬೆಲೆಯ ಸಾಮಗ್ರಿಗಳನ್ನು ಈ ತಪಕ (ಪ್ರಾಯಶಃ ಇತ್ತೀಚಿನ ಕೆಲವು ವರ್ಷಗಳಲ್ಲಿ) ಕಳಿಸಿದೆಯಂತೆ ಅಂದ ಮೇಲೆ ಅಷ್ಟರ ಮಟ್ಟಿಗೆ ನಾವು ಅವರ ಗಿರಾಕಿಗಳಾದೆವು. ಅಷ್ಟೇ ನಮ್ಮ ಉತ್ಪಾದನೆಯೂ ಕಡಮೆಯಾಗಲಿಲ್ಲವೆ? ನಿರುದ್ಯೋಗವೂ ಇದಕ್ಕೆ ಅಂಟಿಕೊಂಡಿತಲ್ಲವೆ?—ಹಾಗಾದರೆ ನಾವು ಸ್ವತಂತ್ರರಾಗಿ ಸಾಧಿಸಿದ್ದೇನು? ಇಂಗ್ಲೆಂಡ್, ಯುರೋಪ್ ಅಲ್ಲ ಅಮೇರಿಕೆಯ ವಸ್ತುಗಳ ಮಾರುಕಟ್ಟೆ ಇಂಡಿಯ ಆಯಿತು—ಈಗ ಸ್ವತಂತ್ರರು ಯಾರು? ಸ್ವರಾಜ್ಯ ಯಾವುದು!

ಗಾಂಧಿ ಚಳವಳಿಗೆ ಏನು ಬೆಲೆ ಬಂತು?—ಅದರೂ ಗಾಂಧಿ ಶತಾಬ್ಧಿ ಆಚರಿಸುತ್ತೇವೆ. ಆಚರಿಸಬೇಕು — ಗಂಟಲು ಬಿರಿಯುವ ತನಕ ಕೂಗೋಣ—ಕಿವಿಯ ಪರೆ ಬರಿಯುವಷ್ಟು ಕೇಳೋಣ.

ಗಾಂಧೀ ಮಹಾರಾಜಕೀ ಜೈ!!!

ಮಹಾರಾಜ ಗಾಂಧೀಜೀಕೀ ಜೈ!!!

ಹದಿನೇಳು

ಜರಾಗಿದ್ದ ಜನತೆಯ ಮನದಲ್ಲಿ ಸ್ವಾತಂತ್ರ್ಯಾಭಿಮಾನದ ಜ್ಯೋತಿಯನ್ನು ಬೆಳಗಲು ಹೊರಟಿದ್ದ ಸನ್ಯಾಸಿಗಳ ತಂಡ. ಭವಾನಂದನೆಂಬ ಸನ್ಯಾಸಿ ಮಹೇಂದ್ರನನ್ನು ಸಂತೈಸುತ್ತಾ ಹೇಳಿದ:

"ನಾವು ಮಣ್ಣಿನ ಮಕ್ಕಳು ಅಂಜಬೇಕಾದುದಿಲ್ಲ."

"ಯಾರು ಮಕ್ಕಳು?"

"ಭಾರತ ಮಾತೆಯ ಮಕ್ಕಳು."

"ಒಂದೇ ತಾಯಿಯ ನಾಲ್ಕು ಒಬ್ಬ ಮಕ್ಕಳ್ಳಾದ ಲೂಟಿ ಮಾಡುವರೇ?"

"ನಾವು ಮಾಡಿದ್ದು ಲೂಟಿ ಅಲ್ಲ."

"ನೀನು ಹಿಂದೆ ತಂದಿರುವುದು ರಾಜ ಖಜಾನೆಯನ್ನು ಮೇಲಿಲ್ಲವೆ?"

"ರಾಜನಿಗೆ ಆ ಖಜಾನೆದ ಮೇಲೆ ನನ್ನ ಅಧಿಕಾರವಿದೆ."

"ಆದ ರಾಜನ ಹೆಸರೇನು" ಎಂದು ಮಹೇಂದ್ರ ಕೇಳಿದ

ಭವಾನಂದ ಉದಿಸಿ ಕ್ರುದ್ಧನಾದ. ಅವನ ಕಂಠಸ್ವರದಲ್ಲಿ ಕಂಡ ಮೊಗದಿತ.

"ಮಾತೃ ರಾಜ! ದೇಶಕ್ಕಾಗಿ ದುಡಿಯುವೆ ಮಾತೆಯ ಮಕ್ಕಳಿಗರ ನವನು ರಾಜನೆ? ತನ್ನ ಪ್ರಜೆಗಳ ಸ್ಥಿತಿ ಚಿಂತನೆ ಮಾಡದಿರುವವನು ಎಂತಹ ರಾಜ? ಅವನು ರಾಜನಲ್ಲ. ಸುಲಿಗೆಗಾರ. ಜನ ತಿನ್ನಲು ಅನ್ನವಿಲ್ಲದೆ ಮರದ ಎಲೆ, ತೊಗಟೆ, ಹುಲ್ಲು ಸತ್ತ ಕಳೇಬರಗಳನ್ನೇ ತಿನ್ನುತ್ತಿದ್ದಾರೆ ಇವರ ಪರಿಸ್ಥಿತಿಯನ್ನು ಕಂಡು ರಾಜ ಅವರಿಗೆ ಏನು ಸಹಾಯ ಮಾಡಿದ? ಎಲ್ಲಿ ನೋಡಿದರು ಬಡವನ, ಅಪಮಾನಿಕೆ, ಅವಿದ್ಯೆ, ಅವಿಶ್ವಾಸಗಳು ಬೃಹದಾಕಾರ ತಾಳಿ ನಿಂತಿವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಈ ಎಲ್ಲ ಮೂಲ ಸಮಸ್ಯೆಗಳ ವಿರುದ್ಧ ಹೋರಾಡಬೇಕು."

ಮಹೇಂದ್ರನನ್ನು ಆವರಿಸಿದ್ದ ಕತ್ತಲೆ ದೂರ ಸರಿಯಿತು ಪರಿಸ್ಥಿತಿಯನ್ನು ಅರಿತ ಮಹೇಂದ್ರನ ಮೈ ಬಿಸಿಯಾಯಿತು. ಜನರ ಅಸಹಾಯಕ ಸ್ಥಿತಿಯನ್ನು ತಿಳಿದಾಗ ಅವನ ಕಣ್ಣಲ್ಲಿ ನೀರು ಬಂತು. "ಈಗ ನನಗೆ ಅರ್ಥವಾಗುತ್ತಿದೆ, ಜನರ ಮೇಲೆ ದರ್ಪ, ದೌರ್ಜನ್ಯಗಳು ನಡೆಯುತ್ತಿವೆ. ಒಲ್ಲದವರ ಅಧಿಕಾರ. ಎಂತಹ ದುರ್ಮಾರ್ಗಿಗಳು. ಅವರ ವರ್ತನೆಯ ಹಿಂದೆ ಅವರ ದುಷ್ಟ ಉದ್ದೇಶ ಸ್ಪಷ್ಟವಾಗಿದೆ" ಎಂದ ಮಹೇಂದ್ರ.

"ನಾವು ಭಳುಂದ ತಕ್ಕಡಿಯಲ್ಲಿ ತೂಗಾಡುತ್ತಿದ್ದೇವೆ. ಒಂದು ಕಡೆ ವಿಮಾ ಜಾಫರನ ಸರ್ಕಾರ; ಮತ್ತೊಂದು ಕಡೆ ಈಸ್ಟ್ ಇಂಡಿಯಾ ಕಂಪೆನಿ ಸರ್ಕಾರ. ಈ ಎರಡು ಸರ್ಕಾರಗಳ ಒತ್ತಡದಿಂದ ಜನ ನುಚ್ಚುನೂರಾಗುತ್ತಿದ್ದಾರೆ. ಈ ಪೀಳಿಗೆಯ ಹೆಣೆಯಬರಹವೇ ಇಷ್ಟಾಗಿದೆ. ಮುಂದಿನ ಪೀಳಿಗೆಯ ನ್ಯಾದರೂ ಸುಖವಾಗಿರುವಂತೆ ಮಾಡಬೇಕಾದುದು ನನ್ನ ಕರ್ತವ್ಯ. ಜೀವನದ ಸುಖ ಅಥವಾ ಸಂಪತ್ತುಗಳು ಎಲ್ಲರಿಗೂ ಸಮಾನವಾಗಿ ವಿತರಣೆಯಾಗುವುದಿಲ್ಲ ಎಂಬ ಮಾತಿನಲ್ಲಿ ಸತ್ಯವಿದೆ" ಎಂದ ಭವಾನಂದ.

ಮಹೇಂದ್ರ 'ರಾಷ್ಟ್ರೀಯ ಭೋಧಣೆಯಲ್ಲಿ ಬದಲಾವಣೆಯೇ ಇದಕ್ಕೆ ಸೂಕ್ತ ಪರಿಹಾರವೆಂದು ನನ್ನ ಭಾವನೆ" ಎಂದ. ಭವಾನಂದ ಆನಂದದಿಂದ ಇದೇ ಸರಿಯಾದ ಮಾರ್ಗ. ಈ ಸಿದ್ಧಾಂತದ ಮಾರ್ಗದ ದೃಷ್ಟಿಯೇ ನಾವು ಅಡಿ ಇಡಬೇಕು. ಈ ದಬ್ಬಾಳಿಕೆಯ ಅಡಳಿತವನ್ನು ಎದುರಿಸಲು ಕ್ರಾಂತಿಕಾರಿ ಬುದ್ಧಿವಂತರ ತಂಡ ಒಂದನ್ನು ವ್ಯವಸ್ಥೆಗೊಳಿಸುವುದೇ ಸೂಕ್ತ ಮಾರ್ಗ ಎಂದ. "ವಂದೇ ಮಾತರಂ" ಗೀತೆಯನ್ನು ಭವಾನಂದ ಸ್ವಾಭಾವಿಕವಾಗಿ ಹಾಡ ತೊಡಗಿದ. ಭವಾನಂದ ಹಾಡಿನಲ್ಲಿ ಲೀನವಾಗಿದ್ದ

"ಯಾರು ಈ ತಾಯಿ?" ಎಂದು ಆತುರದಿಂದ ಪ್ರಶ್ನಿಸಿದ ಮಹೇಂದ್ರ

ಆ ವೇಳೆಗೆ ಅವರು ಆನಂದ ಮಠದ ಸಮೀಪಕ್ಕೆ ಬಂದಿದ್ದರು. ಭವಾನಂದ ಭಾರತ ಮಾತೆಯ ವಿಗ್ರಹವನ್ನು ಮಹೇಂದ್ರನಿಗೆ ತೋರಿಸಿದ. ಪರಾತಪ ದೇಗುಲದಂತಿದ್ದ ಭವನವನ್ನು ಕಂಡು ಮಹೇಂದ್ರ ಸಿಗ್ಭ್ರಾಂತನಾದ. ವಾತ-ವರಣ ಪ್ರಶಾಂತವಾಗಿತ್ತು. ಆನಂದ ಮಠದ ವಿಲಕ್ಷಣತೆಯನ್ನು ಕಂಡು ಮಹೇಂದ್ರ ಬೆರಗಾದ. 'ಸೊಡಬಾದ ಗೀತೆ—ನಮ್ಮ ದೇಶಕ್ಕೆ ಅತ್ಯಂತ ಯೋಗ್ಯವಾದ ಗೀತೆ' ಎನಿಸಿತು ಅವನಿಗೆ. ಭವಾನಂದ "ವಂದೇ ಮಾತರಂ" ಗೀತೆಯನ್ನು ಹಾಡುತ್ತಿದ್ದ. ಗೀತೆ ಮುಗಿದ ತರುವಾಯ ಮಹೇಂದ್ರ "ಹೆಮ್ಮೆಯ ಜನತೆಗೆ ಯೋಗ್ಯವಾದ ಹೆಮ್ಮೆಯ ಗೀತೆ" ಎಂದ.

ಭವಾನಂದ ಆನಂದ ಮಠದ ಪ್ರಮುಖ ನಾಯಕರಾಗಿದ್ದ ಜೀವಾನಂದ, ದಯಾನಂದ, ಧೀರಾನಂದರಿಗೆ ಮಹೇಂದ್ರನ ಪರಿಚಯ ಮಾಡಿಕೊಟ್ಟ. ಮೊದಲಿಗೆ ಮಹೇಂದ್ರನಿಗೆ ಅವರನ್ನು ಕಂಡು ಅಂಜಿಕೆಯೇ ಆಯಿತು. ಆದರೆ ಸನ್ಯಾಸಿಗಳ ಕಣ್ಣುಗಳಲ್ಲಿ ಹೊರ ಸೂಸುತ್ತಿದ್ದ ಸ್ನೇಹ, ವಾತ್ಸಲ್ಯಗಳನ್ನು ಕಂಡು ಸಮಾಧಾನ ಹೊಂದಿದ.

ಜೀವಾನಂದ ಮಹೇಂದ್ರ ಮತ್ತು ಕಲ್ಯಾಣಿಯರನ್ನು ಉದ್ದೇಶಿಸಿ ಹೇಳಿದ: "ನಮ್ಮ ಶಿಕ್ಷಕರಿಗೆ ಶಿಕ್ಷಣ ನೀಡುವುದೇ ಈಗ ಅಗತ್ಯವಾಗಿ ಆಗಬೇಕಾಗಿರುವ ಕೆಲಸ. ಕೈ ಕಟ್ಟಿ ಕುಳಿತುಕೊಳ್ಳುವ ಸಮಯವಲ್ಲ ಇದು. ನಾವು ಪರಿವರ್ತನೆ ಹೊಂದಬೇಕು ಪರಿವರ್ತನೆಯೇ ಇಂದಿನ ಜಗತ್ತಿನ ನ್ಯಾಯಸೂತ್ರ."

"ಗಾಯಗೊಂಡಿರುವ ಹಾಗೂ ಭಿನ್ನವಾಗಿರುವ ಈ ದೇಶದ ರೋಗಗಳನ್ನು ಗುಣಪಡಿಸ ಬಲ್ಲೆನೆಂಬ ನಂಬಿಕೆ, ವಿಶ್ವಾಸ ನನಗಿದೆ, ಎಲ್ಲ ಮಾನವ ಜೀವಿಗಳ ಸುಖ-ಸಂತೋಷಗಳೇ ಆನಂದ ಮಠದ ಉದ್ದೇಶ. ಸಮತೆಯಿಂದ ಈ ಸಂತೋಷ ಸಾಧ್ಯ" ಎಂದು ಧೀರೇಂದ್ರ ದನಿಗೂಡಿಸಿದ.

ಈ ಘಟನೆ, ಸನ್ಯಾಸಿಗಳ ವಿಚಾರಲಹರಿ, 'ವಂದೇ ಮಾತರಂ' ಗೀತೆ- ಇವುಗಳಿಂದ ಮಹೇಂದ್ರನ ಮನದಲ್ಲಿ ವಿಪ್ಲವವೇ ಪ್ರಾರಂಭವಾಯಿತು. ರಾತ್ರಿ ಎಲ್ಲ ದೀರ್ಘವಾಗಿ ಚಿಂತಿಸಿದ. ವಂದೇ ಮಾತರಂ ಗೀತೆ ಅವನನ್ನು ವಿಚಾರ ಪರಿವರ್ತನಕ್ಕಾಗಿ ಮಾಡಿತ್ತು. ಕೊನೆಗೆ ಸನ್ಯಾಸಿಗಳ ತಂಡದಲ್ಲಿ ಸೇರಲು ನಿರ್ಧರಿಸಿದ ಮಹೇಂದ್ರ. ಅವನ ಪತ್ನಿ ಕಲ್ಯಾಣಿ ಮತ್ತು ಮಗಳಿಗೂ ಆನಂದ ಮಠದ ಸಂತರ ಶ್ರೇಣಿಯಲ್ಲಿ ಸ್ಥಾನ ದೊರೆಯಿತು.

ಅಂದಿನಿಂದ 'ವಂದೇ ಮಾತರಂ' ಗೀತೆ ಸನ್ಯಾಸಿಗಳ ತಂಡದಲ್ಲಿ ಕೇಳಿ ಬರಲಾರಂಭಿಸಿತು. ಈ ಗೀತೆ ಸಂತರಲ್ಲಿ ರಾಷ್ಟ್ರಾಭಿಮಾನದ ಕಿಚ್ಚನ್ನು ಕೆರಳಿಸುವ ಕಿಡಿಯೂ ಯಿತು. ಸುರೇಂದ್ರನಾಥ ಬ್ಯಾನರ್ಜಿಯವರು ಈ ಗೀತೆಯನ್ನು ಆಯಾ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಹಾಡಲು ಅವಕಾಶ ಮಾಡಿ ಕೊಟ್ಟರು. ಲೋಕಮಾನ್ಯ ತಿಲಕರು ಈ ಗೀತೆಯನ್ನು ಮಹಾರಾಷ್ಟ್ರಕ್ಕೆ ತಂದರು. ಗಣೇಶೋತ್ಸವಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಜನಪ್ರಿಯ ಮಾಡಿದರು. ರಾಷ್ಟ್ರದಲ್ಲಿ ಈ ಗೀತೆ ಹೊಸ ಪರಂಪರೆಯೊಂದನ್ನೇ ಬಳಕೆಗೆ ತಂದಿತು. ರಾಷ್ಟ್ರೈಕ್ಯ ಭಾವನೆಗೆ, ಸ್ವಾತಂತ್ರ್ಯಾಭಿಮಾನಕ್ಕೆ ಕಾರಣವಾಯಿತು. ಆಂಗ್ಲ ಸರ್ಕಾರವನ್ನು ಪ್ರಚೋದಿಸಿದ ಕ್ರಾಂತಿ ಗೀತೆಯಾಯಿತು.

ಕೆಸುವಿನ ಎಲೆ

(ಹದಿನೈದನೇ ಪುಟದಿಂದ)

ಕೊಂತೆಧನ ವಿಧಿಯೋಗ, ಹಣದುಬ್ಬರ,
ಬೋಟು ನೋಟುಗಳ ಹೊಳೆ
ಐಟಿಕದ ಜೇಡರ ಬಲೆ
ಶಿಕ್ಷಿತ ನಿರುದ್ಯೋಗಿಗಳ ಸಂಖ್ಯಾಬಲ
ಹೊಲಗಳಲ್ಲಿ ಪೈರಿನ ನೆರೆ
ಅದರ ಮೇಲೆ ಕೀಟದ ನೆರೆ
ಜನದಲ್ಲಿ ಕೃತಿಗೆ ಧಾರಾ ಕೊರೆ
ನೂತಿಗೆ ಮಾತ್ರ ಧಾರಾಳ ನೆರೆ.

ನಾಲಿಗೆಯು ಉನ್ನ, ತಲೆ ದೊಡ್ಡ
ಕೈಮಾತ್ರ ಇಲ್ಲವೇ ಇಲ್ಲ
ನೆನಪಿಸುತಿದೆ ಕೆಸುವಿನ ಎಲೆ.

—ಗೋರಾ.

ಪ್ರಕಟಣೆ

ಉಡುಪಿ ತಾಲೂಕು ನಾಲ್ಕೂರು ಗ್ರಾಮದ ಮುದ್ದೂರು ಕೃಷ್ಣಯ್ಯ ಮಧ್ಯಸ್ಥನು ಸರ್ವಜನರಿಗೆ ತಿಳಿಸುವುದೇನೆಂದ್ರೆ ನನ್ನ ಮಗ ಭಲರಾಮನು ಕೆಲವು ಸಮಯದಿಂದ ಮನೆ ಕೆಲಸ ಕಾರ್ಯಮಾಡದೆ ಸ್ವಇಚ್ಛೆಯಿಂದ ಇದ್ದು ಕೆಲವರಲ್ಲಿ ತಾನು ಕೆಲಸಮಾಡುವರೆ ಸ್ವಾತಂತ್ರ್ಯ ಬೇಕೆಂತ ಅಪೇಕ್ಷಿಸಿದ್ದಿಂದ ನಾನು ತಾರೀಖು 10-10-67ರಲ್ಲಿ ಕೆಲವು ಗ್ರಹಸ್ತರ ಮುಖಾಂತ್ರ ಒಂದು ಪ್ರೊಸಿಂಗ್ಸ್ ಮಾಡಿ ನನ್ನ ಮಗನೇ ಮನೆ ಕೆಲಸಮಾಡಿ ಖರ್ಚ ಪೆಟ್ಟಿಮಾಡಿಕೊಂಡು ಬರುವಂತೆಯೂ ಸಾಲವಮಾಡಬಾರದಾಗಿಯೂ ಹಿಂದಿನ ಸಾಲ ಅವನಿಗೆ ಇಲ್ಲದಾಗಿಯೂ ನಾನು ಮಾಡಿದ ಸ್ಥಿರ ಚರ ಸೊತ್ತುಗಳನ್ನು ವಿಕ್ರಯಿಸುವ ಹಕ್ಕು ಅವನಿಗೆ ಇಲ್ಲದಾಗಿಯೂ ತೀರ್ಮಾನಿಸಿದ್ದೇನೆ ಈಗ ಅಚಾಚಿ ಸ್ವಲ್ಪ ಸಾಲಮಾಡುವುದರಲ್ಲಿದ್ದಾನೆಂದು ತಿಳಿದು ಈ ಮೂಲಕ ತಿಳಿಸುವುದೇನೆಂದ್ರೆ ಯಾರಾದರೂ ಸಾಲ ಕೊಟ್ಟಿ ಅವನ ದೇಹ ಜವಾಬ್ದಾರಿಯಲ್ಲದೆ ನಾನು ಮಾಡಿದ ಸ್ಥಿರ ಚರ ಸೊತ್ತಿನ ಮೇಲೆ ಬಾಸಿಸಕಕ್ಕಿದ್ದಲ್ಲ ಎಂತ ತಿಳಿಸಿರುತ್ತೇನೆ.

ತಾ. 7-8-68. ಕೃಷ್ಣಯ್ಯ ಮಧ್ಯಸ್ಥ

Ladies!
Why suffer silently?
*** OVANO ***
Helps you forget the period problem—keeping you capable, cheerful & charming Perfectly harmless. Each phial Rs. 7-50
Three phials at a time Rs 20-00
WELKIN LABORATORY,
(N—J)
9/3, C. I. Lane,
CALCUTTA.

ಕುಂದಾಪುರ ಮುನ್ಸಿಫ್ ಕೋರ್ಟನಲ್ಲಿ

O S 2[illegible]/[illegible]

R I A 413/1-67

ವೆಂಕಟ್ರಮಣ ಜೋಳ್ಳ — ವಾದಿ.
ದೇವದಾಸ ಶ್ಯಾನಭೋಗ ಪ್ರತಿ ಕೊಡಗಾ— ಪ್ರತಿವಾದಿರು.

ಯೂ ದಾವೆಯ 8ನೇ ಪ್ರತಿವಾದಿ ರಮಣ, ವೆಂಕಟ್ರಾಯ ಪೈರ ಹೆಂಡತಿ, ಉಮಾ ಕಸಬ.

9ನೇ ಪ್ರತಿವಾದಿ ವಿಠಾಣ ದೇವದಾಸ ಶ್ಯಾನಭೋಗರ ಮಗ, ಉಪ್ಪಿತಾಲ್ಯ ಸಾಲಿಗ್ರಾಮ ಸ್ಥಿರಾಸ್ತಿ ಇಟ್ಟುಕುಲ್ಲಿ 8ನೇ ಎದ್ರಿ ಮಾಡಯನೆ ಸುಬ್ರಾಯ ಶ್ಯಾನಭೋಗ, ದೇವದಾಸ ಶ್ಯಾನಭೋಗರ ಮಗ, ಕೋಟೆಶ್ವರ ಗ್ರಾಮ ಇವರಿಗೆ

ವಾದಿ ವೆಂಕಟ್ರಮಣ ಜೋಳ್ಳರು ಮೇಲ್ಕಂಡ ಕೋರ್ಟನಲ್ಲಿ ರೂಪಾಯಿ 5488-22ಕ್ಕೆ ದಾವೆ ಮಾಡಿದ್ದು ಪ್ರತಿವಾದಿರ ಹಕ್ಕಿನ ಆಸ್ತಿಗಳನ್ನು ಜಪ್ತಿ ಆಜ್ಞೆಪಿಸಿ R. I A-41-67ನೇಗೆ ಅರ್ಜಿಮಾಡಿ ಜಪ್ತಿ ಪ್ರಕಾರ ಸಜಾ, ಪಡೆದುಕೊಂಡಿರುವರೆ, ಸದ್ರಿ ದಾವೆಯ 6, 9 ನೇ ಪ್ರತಿವಾದಿಗಳಾದ ಸದ್ರಿ ಅರ್ಜಿಯ ಮೇಲ್ಕಂಡ 8ನೇ ಎದ್ರಿಗೂ ಸಹಾ ನೋಟೀಸು ಆದಾಗ ಇಂದುಳದಂದ ಯೂ ಮೂಲಕ ಜಾಬ್ತಿ ಕೊಡಮಾಡುವುದೇನೆಂದ್ರೆ ಮೇಲ್ಕಂಡ ದಾವೆ ಅರ್ಜಿ ಸದರ ತಾರೀಖು 9-9-1968ರ ಸಾ. ಮೇಲ್ಕಂಡ ಕೋರ್ಟ ಮುಂದ ತನ್ನ ಬಗ್ಗೆ ಪೂರ್ವಾಹ್ನ 11 ಗಂಟೆಗೆ ಕರೆಯಲ್ಪಡುತ್ತದೆ. ಮೇಲ್ಕಂಡ ಪ್ರತಿವಾದಿರು ವ ಎದ್ರಿರು ಸಹಾ ಸ್ವತಃ ಹಾಗೂ ಅಗಲೇ ವಕೀಲರ ಮುಖಾಂತರವಾಗಲೆ ಹಾಜರು ಆಗಿ ತನ್ನ ಸಾಧನೆಗಳನ್ನು ಮಾಡತಕ್ಕದ್ದು. ಇಷ್ಟಾದ್ದಿಲ್ಲ ಅವರನ್ನು ಯೆಕ್ಪಾರ್ಟಿಯನ್ನಾಗಿ ಮಾಡಿ ನಂಬ್ರದಲ್ಲಿ ಎತ್ತಿಕೊಂಡು ತೀರ್ಮಾನವಾದೀತು.

By Order of the Court

K. Raghunatha Shenoy,
Advocate for Plaintiff.

Coondapoor 6-5-68.

ಉಡುಪಿ ಮುನ್ಸಿಫ್ ಕೋರ್ಟನಲ್ಲಿ

Execution case. No 147/1968'

in

O. S. No 95 of 1967.

ವೆಂಕಟ್ರಮಣ ಉಪಾಧ್ಯ— ಅರ್ಜಿದಾರ ಮತ್ತು

ದೇವಸ್ ಜೆ ಡೊಸ್ ಫುಂಡ್ಸ್ ಡೊ ರುಜಾರಿಯೊ ಫುಂಡ್ಸ್ ಡೊರ ಮಗ್ಗ ಉಪ್ಪಿತಾಲೂಕು ಕೊಡಪುರು ಗ್ರಾಮದ ಮತ್ತೆ— ಎದ್ರಿ

ಸದ್ರಿ ಎದ್ರಿಯವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ :—

ಡಿಕ್ರಿ ಹೊಲ್ಲರನು ನಿಮಗೆ ಕೈಪಿಡಿ ವಾರಂಟು ಆಜ್ಞೆಪಿಸಿ ಮೇಲ್ಕಂಡ ಅಮಲ್ಜಾರಿಯನ್ನು ಬಾಕಿಮಾಡಿದ್ದಾನೆ. ನಿಮಗೆ ಸಿವಿಲ್ ಬಂಧಿಖಾನೆಗೆ ಯೂಳೆ ಹಾಕಕೂಡದು ಎಂದು ಸಬಬು ತೋರಿಸಲು ತಾರೀಖು 29-9-68ಕ್ಕೆ ಯಿಟ್ಟಿದೆ. ಅಕ್ಷೇಪಣೆಯಿದ್ದರೆ ಆ ದಿನ ಪೂರ್ವಾಹ್ನ 10 ಘಂಟೆಗೆ ಈ ಕೋರ್ಟ ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ಕಟ್ಟಪ್ಪೆ ನಿಂದ್ರ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟ ಹುಕುಂ ಪ್ರಕಾರ

K. Balachandra Rao,
Advocate for Petitioner.

Udipi, Dt. 8-8-58.

ಶ್ರೀ ಯು. ನಾ. ಉಡುಪ, ವಿದ್ವಾನ್.

ಅಮರ ಅಗೋಸ್ತು

ಅಗೋಸ್ತು ತಿಂಗಳು ಭಾರತಕ್ಕೆ ಮಾತ್ರವಲ್ಲ, ಜಗತ್ತಿಗೇ ಮಹತ್ವದ ತಿಂಗಳು. ಈ ಸರ್ವ ಮಾನವ ಸಾಂಸ್ಕೃತಿಕವಾಗಿ, ರಾಜನೈತಿಕವಾಗಿ, ಐತಿಹಾಸಿಕವಾಗಿ ಮಹತೋ ಮಹತಿಯನ್ನು ಎಲ್ಲೆಲ್ಲಾ ಪಡೆದಿದೆ. ಸಾಗರ ಸುಂದರವಾದ ಅಗೋಸ್ತು ಭಾರತೀಯರಿಗೆ ಶಾಂತಿ ಸುಖಕ್ಷೇಮವನ್ನು ತಂದೀಯ ಲಾರದೆ?

ಅಗೋಸ್ತು ಪ್ರಾಚೀನ ಕಾಲದಿಂದಲೂ ತನ್ನ ನಿಸರ್ಗ ಸೌಂದರ್ಯದಿಂದ ಸಮಗ್ರ ಭಾರತದಲ್ಲೇ ಅಮರ ಸ್ಥಾನಗಳಿಸಿದೆ. ಕೃಷಿ ದೇಶವಾದ ಭಾರತದ ಈ ತಿಂಗಳಿನ ಶೋಭೆಯು ಅದ್ವಿತೀಯವಾದುದು; ಅನುಪಮವಾದುದು. ಭಾರತದ ಅಧಿಕಾಂಶ ಜನರು ಈ ತಿಂಗಳಿನಲ್ಲೇ ಹೃತ್ಪೂರ್ವಕವಾಗಿ ಭಾವೀ ದಿನಗಳ ಅಭಿವೃದ್ಧಿ ಧಾನ್ಯಗಳ ಸಂಗ್ರಹದ ಕನಸನ್ನು ಕಂಡು ಪುಲಕಿತರಾಗುವರು. ಈ ತಿಂಗಳಲ್ಲೇ ಕೆಲವು ಶತಮಾನಗಳಿಂದ ದಾಸ್ಯ ಶೃಂಖಲೆಯಿಂದ ನರಳುತ್ತಿದ್ದ ಭಾರತವು ವಿಮೋಚನೆ ಹೊಂದಿ ನಿಟ್ಟುಸಿರೊಂದನ್ನು ಹೊರ ಹೊಮ್ಮಿಸಿತು. ಅಖಂಡ ಭಾರತದ ಅಂಗ ವಿಭಜನೆಯ ಶೋಚನೀಯ ದಿನಗಳನ್ನು ಭಾರತೀಯರು ಈ ಮಾಸದಲ್ಲೇ ಕಂಡು ಕಣ್ಣೀರ ಗರೆದರು. ಇದೇ ದಿನಗಳಲ್ಲೇ ಭಾರತದ ಶಾಸನವು ಪೂರ್ಣ ಬದಲಾದಿದ್ದರೂ ಶಾಸಕರು ಮಾತ್ರ ಬದಲಾದರು. ಬಿಳಿಯರ ಸ್ಥಾನದಲ್ಲಿ ಕಪ್ಪು ಚರ್ಮದವರು ಶಾಸನಾರೂಢರಾದರು!

ಧಾರ್ಮಿಕ ದೃಷ್ಟಿಯಿಂದ ಅಗೋಸ್ತು ತಿಂಗಳು ಅಮರವಾದುದು. ಶ್ರೀ ಕೃಷ್ಣನು ಕಾಳಿಯುನನ್ನು ಮರ್ದಿಸಿ, ಗೋಕುಲರಿಗೆ ಆನಂದವನ್ನುಂಟು ಮಾಡಿದ ಮಾಸ ಇದೇ. ದುಷ್ಟನಾದ ಕಾಳಿಯನ್ನು ಶಿಷ್ಟನಾದ ಅ ದಿನವನ್ನು ನಾಗರಂಚಮಿಯೆಂದು ಭಾರತೀಯರಲ್ಲಿ ಇಂದೂ ಹಲವರು ಆಚರಿಸುತ್ತಾರೆ. ಉತ್ತರ ಕರ್ನಾಟಕದ ನಮ್ಮ ಭಗಿನಿಯರು ಈ ದಿನದಲ್ಲೇ ಉಯ್ಯಾಲೆಯಲ್ಲಿ ಕುಳಿತುಕೊಂಡು ಮಂಗಲ ಗೀತೆಗಳನ್ನು ಹಾಡಿ ಕೂಗಿಕೊಳ್ಳುತ್ತಾ ಆನಂದಗೊಳ್ಳುವರು.

ಇತಿಹಾಸವು ಆರಂಭವಾಗುವ ಮೊದಲಿಂದಲೂ ಉಪಾಕರ್ಮವನ್ನು ಬ್ರಾಹ್ಮಣರು ಅಗೋಸ್ತಿನಲ್ಲೇ ಆಚರಿಸುತ್ತಿದ್ದರು. ಬ್ರಾಹ್ಮಣರು ಬ್ರಹ್ಮತೇಜಸ್ಸಿನ ದೀಕ್ಷೆಯನ್ನು ಹೊಂದುವ ನೂಲಹುಣ್ಣಿಮೆಯೂ ಇದೇ ತಿಂಗಳಲ್ಲಿ ಬಂದುಹೋಗುವುದು. ಕಾರಿಯರ ರಕ್ಷಣೆಯ ಭಾರವನ್ನು ಉತ್ತರ ದೇಶೀಯರು ಹೊರುವ ರಕ್ಷಾಬಂಧನದ ಉತ್ಸವವೂ ಈ ಸಮಯದಲ್ಲೇ ಮುಗಿದುಹೋಗುವುದು. ಮಹಾರಾಷ್ಟ್ರೀಯರ ಮೊಸರುಉತ್ಸವವಾದ—ಕೃಷ್ಣಜಿಗರ ಕುಲೋತ್ಸವವಾದ—ಗೌರೀ ಶ್ರೀಕೃಷ್ಣಾಮತ್ತು ಗಣೇಶ ಚತುರ್ಥಿಯೂ ಈ ತಿಂಗಳ ಕೊನೆಯಲ್ಲಿ ಬಂದು ಅಗೋಸ್ತು ತಿಂಗಳ ಸ್ಥಾನಮಾನವನ್ನು ಹೆಚ್ಚಿಸುವುದು. ಈ ಗೌರೀ ಶ್ರೀಕೃಷ್ಣೋತ್ಸವ ದಿನದ ಗೀತೆಗಳು ಲಾಹೋರಿನಲ್ಲಿ ಆಂಗ್ಲ ಸರಕಾರವನ್ನು ಗಡಿಪಾರು ಮಾಡುವ ಶಪಥ ಮಾಡಿ ಸಫಲವಾದವು.

ಹಿಂದೀ ಸಾಹಿತ್ಯದ ವಾಲ್ಮೀಕಿಯಾದ—ರಾಮನಾಮದ ಮಹಿಮೆಯನ್ನು ಪ್ರಚಾರ ಮಾಡಿದ—ಗೋಸ್ವಾಮಿ ತುಳಸೀದಾಸರು ಈ ತಿಂಗಳಲ್ಲೇ ಅಂದರೆ ಶ್ರಾವಣ ಶುಕ್ಲ ಸಪ್ತಮಿಯ ದಿನ ಮಹಾ ಪ್ರಯಾಣವನ್ನು ಕೈಗೊಂಡನು. ದುರಾಚಾರ, ಅಶಾಚಾರಗಳ ನಾಶಕ್ಕಾಗಿ ಶ್ರೀಕೃಷ್ಣ ಭಗವಂತನು ಇದೇ ಅಗೋಸ್ತು ಮಾಸದಲ್ಲಿ ಕಾರಾಗೃಹದಲ್ಲಿ ಅವತರಿಸಿದನೆ. ಪ್ರಪಂಚದ ಮಹಾಭಾಷೆಗಳಲ್ಲೆಲ್ಲಾ ಭಾಷಾಂತರ ಹೊಂದಿದ ಭಗವದ್ಗೀತೆಯನ್ನು ಈ ವಾಸುದೇವನೇ ರಚಿಸಿದನು. ಈ ಗೀತೆಯಲ್ಲಿ ದೊರೆಯುವ ರಾಜನೀತಿ, ಧರ್ಮವಿಚಾರಗಳೇ ಇಲ್ಲ. ಶ್ರೀಕೃಷ್ಣ— ಶ್ರೀಮದ್ ಭಗವದ್ಗೀತೆ— ಇವು ಒಂದೊಂದೇ ಅಗೋಸ್ತು ತಿಂಗಳನ್ನು ಅಮರವೆನ್ನಿಸಲು ಸಾಕು.

ಭಾರತೀಯ ಕಾಂಗ್ರೆಸ್ಸಿನ ಎಡಪಕ್ಷದ ಪ್ರಮುಖ ನಾಯಕರಾದ ಲೋಕಮಾನ್ಯ ಬಾಲಗಂಗಾಧರ ತಿಲಕರು ಇದೇ ಅಗೋಸ್ತು ಒಂದರಲ್ಲೇ ಸ್ವರ್ಗಸ್ಥರಾದರು. 'ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು' ಎಂದ ಲೋಕಮಾನ್ಯರ ಹರಿಕಂರ ಗರ್ಜನೆಯು ಸಮಸ್ತ ಭಾರತವನ್ನೇ ಬಡಿದೆಬ್ಬಿಸಿತು. ಕೇಸರಿ ಪತ್ರಿಕೆಯ ಸಂಸ್ಥಾಪಕರಾದ ಈ ತಿಲಕರು ಬರ್ಮಾದ ಕಾರಾಗೃಹದಲ್ಲಿರುವಾಗ ತಮ್ಮ ಅಮರ ಗ್ರಂಥವಾದ ಗೀತಾ ರಹಸ್ಯವನ್ನು ಬರೆದರು. ಈ ಲೋಕ ಮಾನ್ಯರ ಮಹಾ ಪ್ರಯಾಣಕ್ಕೆ ನೆರವಾದ ಅಗೋಸ್ತು ತಿಂಗಳನ್ನು ಯಾವ ಭಾರತೀಯನು ಮರೆಯಬಲ್ಲನು?

ಲಾರ್ಡ್ ಕರ್ಜನ್‌ನು ಬಂಗಾಲಿಯರ ರಕ್ತ ಹೃದಯವನ್ನು ವಂಗ ಭಂಗದಿಂದ ಸೂರೈಗಲಿಸಿದ್ದನಾದಾಗ ಅಂದರೆ ೧೯೦೫ನೇ ಅಗೋಸ್ತು ೭ರಲ್ಲೇ—ಪವಿತ್ರ ರಕ್ಷಾ ಬಂಧನದ ಸಮಯದಲ್ಲೇ—ಬಂಗಾಲಿಗಳು ಶರತ್ಕಾಲವನ್ನಾಚರಿಸಿ ಭಾರತೀಯರ ಎದೆಗಾರಿಕೆಯನ್ನೊಮ್ಮೆ ಆಂಗ್ಲರಿಗೆ ತೋರಿಸಿದರು. ರಾಜಕೀಯದಲ್ಲಿ ಭಾರತೀಯರ ಪ್ರಗತಿ ಬಳಬಳವಾದ ಇದು, ಅಗೋಸ್ತು ತಿಂಗಳಲ್ಲೇ ನಡೆಯಿತು.

೧೯೪೦ನೇ ಅಗೋಸ್ತು ೭ ಸಮಸ್ತ ಭಾರತೀಯರಿಗೊಂದು ಸೂತಕದ ದಿನ! ಅಂದು ಗೀತಾಂಜಲಿಯ ಜನ್ಮದಾತರಾದ—ಶಾಂತಿ ನಿಕೇತನದ ಪಿತರಾದ—ರವೀಂದ್ರನಾಥ ಠಾಕೂರರು ಭಾರತೀಯರಿಂದ ಚಿರವಿದಾಯವನ್ನು ಪಡೆದರು. ಇವರು ಭಾರತೀಯರಲ್ಲಿ ಮೊತ್ತ ಮೊದಲು ನೋಬೆಲ್ ಬಹುಮಾನ ಪಡೆದ ಮಹನೀಯರು. ಇವರ ತಿಥಿಯನ್ನು ಭಾರತೀಯರು

ತಂತಿ: "ಸಹಕಾರಿ"] ಸ್ಥಾಪನೆ: 1919 [ಫೋನ್: 4687.

The S. K. A. C. M. S. Ltd.,

MANGALORE-1.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ ಲಿಮಿಟೆಡ್

ಸಹಕಾರಿ ಮಹಲ್,

ಮಂಗಳೂರು-1

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಗೇರುಬೀಜ, ತೆಂಗಿನ ಕಾಯಿ ವಗೈರೆ (ಅಕ್ಕಿ ಭತ್ತ ಹೊರತು) ವ್ಯವಸಾಯದ ಎಲ್ಲಾ ಉತ್ಪತ್ತಿಗಳನ್ನು ಕಮಿಶನ್ ವ್ಯಾಪಾರಕ್ಕೆ ಪಡೆಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುವ

ಜಿಲ್ಲೆಯ ಪ್ರಾಮುಖ್ಯ ಸಹಕಾರಿ ಮಾರಾಟ ಸಂಘ

ಎಸ್. ನರಸಪ್ಪಯ್ಯ B. A. B. L., ಉಪಾಧ್ಯಕ್ಷ — ಬಿ. ಪ್ರಭಾಕರ ರಾವ್, M. A. B. L., ಅಧ್ಯಕ್ಷ

ಸ್ವಾತಂತ್ರ್ಯ ದಿನದ ಶುಭಾಶಯಗಳು!

Kirloskar



ಆಹಾರೋತ್ಪಾದನೆಯ ಕ್ಷೇತ್ರದಲ್ಲಿ ಯಶಸ್ವಿಯಾಗಲು ಒಂದೇ ಉಪಾಯವೆಂದರೆ

ಕಿರ್ಲೋಸ್ಕರ್ ಪಂಪ್ ಸೆಟ್‌ಗಳನ್ನು ಉಪಯೋಗಿಸುವುದು.

ಅತ್ಯ ಶ್ರೇಷ್ಠತೆಯಲ್ಲಿ, ದೀರ್ಘ ಬಾಳಿಕೆಯಲ್ಲಿ, ಮಿತ ವ್ಯಯದ ನಿರ್ವಹಣೆಯಲ್ಲಿ ದೇಶದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ಸಣ್ಣ ಹಿಡುವಳಿದಾರರಿಗಂತೂ ಅತ್ಯನುಕೂಲವಾಗಿವೆ.

ವಿತರಣೆಗಾರರು

ಕರ್ಕೇರಾ ಸನ್ಸ್ & ಕೊ.

ಮೈದಾನ್ ವೆಸ್ಟ್ ರೋಡು, ಮಂಗಳೂರು-1

Phone 3967

ಮಾತ್ರವಲ್ಲ, ವಿಶ್ವದ ಅನೇಕ ರಾಷ್ಟ್ರಗಳು ಇಂದೂ ಆಶ್ಚರ್ಯಪಡುತ್ತಿವೆ.

ಇದೇ ಅಗೋಸ್ತು ತಿಂಗಳಲ್ಲಿ ಪೂರ್ವ ಪಾಕಿಸ್ತಾನದಲ್ಲಿರುವ— ಢಾಕಾಜಾಹ್ಮರದಲ್ಲಿರುವ ರಾಜೂರರ ನಿವಾಸವನ್ನು ಪಾಕಿಸ್ತಾನ ಸರಕಾರವು ತೀರಾ ಕಡೆಗಣಿಸಿದ ಅಧಿಕೃತ ವರದಿಯನ್ನು ಕೇಳಿ ಭಾರತೀಯರು ತಲೆ ಎತ್ತದಂತಾಗಿದೆ. ಪೂರ್ವ ಪಾಕಿಸ್ತಾನ ಸರಕಾರವು ಕವಿಗಳು ನಿವಾಸವನ್ನು ಕಂದಾಯ ಕಚೇರಿಯನ್ನು ಕೆಡವಿದೆ. ಇವರ ಮನೆಯ ಪ್ರಧಾನ ಅಂಶವು ಪ್ರಯಾಣಕಾ ಬಂಗಲೆಯಾಗಿದೆ. ಕವಿಯ ಅಧ್ಯಯನದ ಕೋಣೆಯೂ ಗ್ರಂಥಾಲಯವೂ ಪಾಕಿಸ್ತಾನಿಗಳಿಂದ ಮರುಸಯೋಗಗೊಳಿಸಲ್ಪಟ್ಟಿವೆ. ಈ ಅಗೋಸ್ತು ತಿಂಗಳು ಪಾಕಿಸ್ತಾನ ಸರಕಾರದ ನಿರ್ಲಕ್ಷ್ಯತನ್ನು ಮನೆಯ ತಿಂಗಳಾಗಿದೆ.

ಭಾರತೀಯರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಗೋಸ್ತು ೧೮ನೇ ತೇದಿಯು ಉಜ್ವಲವಾದುದು. ಈ ದಿನ ಭಾರತೀಯರು "ಮಾಡಿ ಅಥವಾ ಮಡಿಯಿರಿ" 'ಭಾರತವನ್ನು ವಿದೇಶೀ ರಾಜಶಾಸನವು ನಡೆಯಲಾರದು' ಎಂದು ಉದ್ಘೋಷಿಸಿ ಪ್ರಬಲ ಅಂತ್ಯ ಸಂಕಲ್ಪದ ಸಾತ್ವಿಕ ಶಕ್ತಿಯನ್ನು ಕಾಣಿಸಿದರು.'

ಅಗೋಸ್ತು ೯, ಭಾರತೀಯ ಯುವಕರ ಉತ್ಸವದ ದಿನ! "ಆಂಗ್ಲರು ಭಾರತವನ್ನು ಬಿಟ್ಟು ಹೋಗಲಿ" ಎಂದು ಘೋಷಿಸಿದ ಭಾರತೀಯ ಯುವಕರು ಬ್ರಿಟಿಷರಿಂದ ಗುಂಡಿಗೆ ಬಾಯಿ ಮಾಡಲ್ಪಟ್ಟರು. ಆ ದಿನ ಭಾರತೀಯ ತರುಣರಿಂದ ಸಿಹಿ ಮನೆಗಳು ತುಂಬಿ ಹೋಯಿತು. ಅನೇಕ ಯುವಕರು ಅಸಂಖ್ಯವಾದ ಗಡ್ಡಗೇರಿಸಲ್ಪಟ್ಟರು. ಈ ಉದ್ವೇಗ ಮಾನವನ್ನೇ ಅಲ್ಲಾಡಿಸಿ ಹೋಯಿತು. ಸರಮನಮಾಡ್ಲ ಅಳಿಸಿರಿಂದ ಪೀಡಿತನಾದ ಯುವ ಪ್ರಜೆಯು ಅನಶನ ವ್ರತದಿಂದ ಆಂಗ್ಲ ಶಾಸನವನ್ನು ತಲೆಬಾಗಿಸಿದನು. ಈ ಅಗೋಸ್ತಿನಲ್ಲೇ ಭಾರತದ ಹಿರಿಯಂತ ಮತ್ತು ದರ್ಶಿಗ ಸಿಂಹರೆಂಬ ಸುಪುತ್ರರು ಈ ದೇಶಕ್ಕಾಗಿ ಅತ್ಯ ಬಲಿ ಯನ್ನು ಸಿಸಿ ಕಮಾರಿಸಿದರು.

೧೯೦೮ನೇ ಅಗೋಸ್ತು ೧೧ನೇ ದಿನ ಬ್ರಿಟಿಷರನ್ನು ಪ್ರತಿಭಟಿಸಿದ ಖುದಿರಾಮ ಬೋಸ್ ಹಿಂದಾಮ ಬೋಸನು. ಹಲ್ಲಗೇರಿ ಸಲ್ಪಟ್ಟನು. ಒಂಗ ಲಂಡನ್ನಲ್ಲಿ ಮೊತ್ತ ಮೊದಲ ಭಾರತೀಯ ವಿದ್ಯಾರ್ಥಿಗಳ ಹೋಳಿಯು ಹುದಿರಾಮನಿಂದ ಈ ತಿಂಗಳಲ್ಲೇ ನಡೆಸಲ್ಪಟ್ಟಿತು. ಭಾರತ ಮಾತೆಯು ತನ್ನ ಸುಪುತ್ರನ ಈ ಕೋಡಕ್ಕಾಗಿ ಮಾಣಕ್ಕಾಗಿ ಅಂದು ಬಿಕ್ಕಿ ಬಿಕ್ಕಿ ಅತ್ತಳಂತೆ! ಇದೇ ತಿಂಗಳಲ್ಲೇ ಪ್ರಥಮ ಬಾರಿ ಭಾರತೀಯರಿಂದ 'ವಂದೇ ಮಾತರಂ' ಗೀತೆಯು ಹಾಡಲ್ಪಟ್ಟಿತು.

ಶ್ರೀ ಶ. ೧೮೮೮ನೇ ಅಗೋಸ್ತು ೧೫ನೇ ಭಾನುವಾರ ನವ ಮನ್ವಂತರದ ಆಚಾರ್ಯರಾದ ಶ್ರೀ ಶ್ರೀ ರಾಮಕೃಷ್ಣ ಪರಮಹಂಸರು ಸಂಧಾನವನ್ನೈದಿದರು. ಭಾರತೀಯರಲ್ಲಿ ಸ್ವಾಭಿಮಾನವನ್ನು ಹುಟ್ಟಿಸಿ, ಘನತೆಯ ಭಾರತವನ್ನು ಕಟ್ಟಿಸುವುದರಲ್ಲಿ ಶ್ರಮಿಸಿದ ಸ್ವಾಮಿ ವಿವೇಕಾನಂದರು ಇವರ ಒಬ್ಬರು ಶಿಷ್ಯರು. ಈ ಭಗವಾನ್ ಪರಮಹಂಸ ಶಿಷ್ಯರಿಂದಲೇ ಪಾಶ್ಚಾತ್ಯ ದೇಶಗಳಿಗೆ ಭಾರತೀಯರ ಬಗೆಗಿದ್ದ ತಪ್ಪು ಕಲ್ಪನೆಗಳು ಮಾಯವಾಗಿ, ಭಾರತೀಯ ಸಂಸ್ಕೃತಿ, ತತ್ವಜ್ಞಾನ ಇವುಗಳ ಮಹತ್ವದ ಅರಿವಾಯಿತು.

೧೯೪೭ನೇ ಅಗೋಸ್ತು ೧೪ನೇ ಮಧ್ಯರಾತ್ರಿಯಲ್ಲಿ ಭಾರತದಲ್ಲಿ ವಿದೇಶೀ ಶಾಸನವು ಅಂತ್ಯಗೊಳಿಸಲ್ಪಟ್ಟಿತು. ಅಗೋಸ್ತು ೧೫ರಂದು ಬೆಳಗ್ಗೆ ಸ್ವತಂತ್ರ ದಿಲ್ಲಿಯ ಕೆಂಪು ಕೋಟೆಯ ಮೇಲೆ ಬಾಲ ಸೂರ್ಯನ ಕಿರಣದಿರುಳುಗಳು ಬೀಳುವ ಮೊದಲೇ ಬ್ರಿಟಿಷ್ ಧ್ವಜವು ಮಾಯವಾಗಿ ಭಾರತೀಯರ ತ್ರಿವರ್ಣ ಧ್ವಜವು ಮಾರುತನೊಡನೆ ಕ್ರೀಡೆಯಲ್ಲಿ ತೊಡಗಿತ್ತು! ಆ ದಿನವೇ ಕಾಂಗ್ರೆಸ್ ಮುಖಂಡರು ಭಾರತೀಯರ ಅನ್ನ ವಸ್ತ್ರ ವಸತಿ ಸಮಸ್ಯೆಗಳನ್ನು ಪರಿಹರಿಸುವೆವೆಂದು ಘೋಷಿಸಿದರು. ಅಂದೇ ಅವರು 'ಕಾಂಗ್ರೆಸ್ ಎಂಬುದು ಪಕ್ಷವಲ್ಲ; ರಾಷ್ಟ್ರ! ಅದರಲ್ಲಿ ಒಂದೇ ಜಾತಿ—ಭಾರತೀಯರು! ಅದರಲ್ಲಿ ಒಂದೇ ಧರ್ಮ—ಮಾನವ ಧರ್ಮ! ಅದರಲ್ಲಿ ಒಂದೇ ಧ್ಯೇಯ—ದೇಶಹಿತ!' ಎಂದು ಸಾರಿದರು. ಅಗೋಸ್ತು ೧೪ರಲ್ಲೇ ಮಹಾತ್ಮಾಜೀಯವರ ಕಾರ್ಯದರ್ಶಿಗಳಾದ ಮಹಾದೇವ ದೇಸಾಯಿಗಳು ಅಹಮ್ಮದನಗರದ ಕಾರಾಗೃಹದಲ್ಲಿ ಸ್ವರ್ಗಸ್ಥರಾದರು. ಅದು ಮಹಾತ್ಮಾಜೀಯವರಿಗೆ ತಮ್ಮ ಬಲಗೈಯೇ ಮುರಿದು ಬಿದ್ದಂತೆನಿಸಿತು.

ಭಾರತೀಯ ಸಂಸ್ಕೃತಿಯ ಸಾರಸರ್ವಸ್ವವೆನ್ನಿಸಿದ ಅಧ್ಯಾತ್ಮದ ಸಂದೇಶವನ್ನು ಜಗತ್ತಿಗೆ ಬೀರಿದ ಮಹಾತಪಸ್ವಿಗಳಾದ ಶ್ರೀ ಅರವಿಂದರು ೧೮೭೨ನೇ ಅಗೋಸ್ತು ೧೫ರಂದು ಜನಿಸಿದರು. ಇವರು ಪಾಶ್ಚಾತ್ಯ ಪೌರಾಸ್ತ್ಯ ಸಂಸ್ಕೃತಿಗಳ ಸಂಯೋಗವಾಗಿದ್ದರು. ಇವರು ತಮ್ಮ ಸ್ವಂತದ ಮುಕ್ತಿಗಾಗಿ ಸಾಧಕರಾಗಲಿಲ್ಲ. ಲೋಕ ಕಲ್ಯಾಣಕ್ಕಾಗಿ ತಮ್ಮ ದೇಹವನ್ನು ಸವೆದರು. ಇವರ ಹುಟ್ಟುಹಬ್ಬದ ದಿನವೇ ಭಾರತಕ್ಕೆ ಸ್ವಾತಂತ್ರ್ಯ ದೊರಕಿದುದು ಒಂದು ದೈವೀಸಂಕೇತವೆನ್ನಬೇಕು.

೧೯೦೦ನೆಯ ಅಗೋಸ್ತು ೧೬ರಲ್ಲಿ ಲಂಕಾದ್ವೀಪದಲ್ಲಿ ಜನ್ಮತಃ ಸಾಮ್ರಾಜ್ಯವಾದಿಯಾದ ಕರ್ನಲ್ ವಾಯಲಿಯ ರಕ್ತವನ್ನು ಯಮಲೋಕಕ್ಕಟ್ಟಿದ ಅಪರಾಧಿ ಶ್ರೀ ಮದನಲಾಲ ಡಿಂಗ್ರಾರವರಿಗೆ ಭಾರತೀ ಶಿಕ್ಷೆ ವಿಧಿಸಲ್ಪಟ್ಟಿತು. ಇದೇ ತಿಂಗಳಿನಲ್ಲೇ ಪೂಜ್ಯ ಗಾಂಧೀಜಿಯವರು ಭಾರತೀಯ ಕಾಂಗ್ರೆಸ್ಸಿನ ಸದಸ್ಯತನಕ್ಕೆ ರಾಜೀನಾಮೆ ಇತ್ತರು! ಅಲ್ಲದೆ, ಭಾರತೀಯ ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ ಸಂಸ್ಥೆಯ ಸಂಬಂಧವನ್ನು ಸಂಪೂರ್ಣ ಮುರಿದುದೂ ಇದೇ ಮಾಸದಲ್ಲೇ. ೧೯೨೧ನೇ ಅಗೋಸ್ತಿನಲ್ಲಿ ಮಹಮ್ಮದಾಲಿ ಜಿನ್ನಾ ಸಾಹೇಬರು ಕಾಂಗ್ರೆಸ್ಸನ್ನು ಬಿಟ್ಟು ಹೊರ ನಡೆದರು. ಸಿಮ್ಲಾ ಸಮ್ಮೇಳನವು ಇದೇ ತಿಂಗಳಲ್ಲಿ ನಡೆಸಿ ವಿಫಲವಾಯಿತು. ಚರ್ಚಿಲ್ಲರ ಅಗೋಸ್ತು 'ಓಫರ್' ಕೂಡ ಇದೇ ತಿಂಗಳಲ್ಲಿ ಭಾರತಕ್ಕೆ ಬಂತು. ಭಾರತವು ಈ 'ಓಫರ್'ನ್ನು ತಿರಸ್ಕರಿಸಿ ಸ್ವಾತಂತ್ರ್ಯ ಘೋಷಣೆಯನ್ನು ಮಾಗಿಲು ಮುಟ್ಟಿಸಿತು.

ದುರ್ದೈವಿ ಜಪಾನು ಪ್ರದೇಶಗಳಲ್ಲಿ ಇದೇ ತಿಂಗಳಲ್ಲಿ ಅವೇರಿಕನರಿಂದ ಅಣುಬಾಂಬು ಸುರಿಸಲ್ಪಟ್ಟು ಕೆಲವು ಶತಮಾನಗಳ ವರೆಗೆ ಆದು ಈ ವೇದನೆಯನ್ನು ಮರೆಯುವಂತಾಯಿತು.

೧೯೨೪ನೇ ಅಗೋಸ್ತಿನಲ್ಲಿ ರಶ್ಯನರ ಆರಾಧ್ಯ ದೇವತೆಯಾದ ಲೆನಿನ್ ಮೃತ್ಯುವಶನಾದನು. ರಶ್ಯನರು ಅಂದೇ ಮಹಾತ್ಮಾ ಲೆನಿನನ ಮೆಚ್ಚಿನ ಮಾರ್ಗದಲ್ಲಿ ಮುನ್ನಡೆಗ್ಗಲು ಪ್ರತಿಜ್ಞೆಗೈದರು. ಹೀಗೆ ಅಗೋಸ್ತು ತಿಂಗಳು ತನ್ನ ಸಿಹಿ ಕಹಿ ಅನುಭವಗಳಿಂದ ಭಾರತೀಯರಿಗೆ ಮಾತೃವಲ್ಲ; ಜಗತ್ತೇ ಮರೆಸುವಂತಾದ ಅಮರ ಮಾಸವೆನ್ನಿಸಿಕೊಂಡಿದೆ! ಸುಖ ದುಃಖಗಳ ಮಿಶ್ರಣವಾದ ಮರ್ತ್ಯ ಪ್ರಪಂಚದ ಪ್ರತೀಕವೆನ್ನಿಸಿದ ಅಗೋಸ್ತೇ, ಇನ್ನು ಮುಂದಾದರೂ ನೊಂದು ಬೆಂದಿರುವ ಭಾರತೀಯರಿಗೆ ನೀನು ಅಮೃತ ಮಾಸವಾಗಿ ಪರಿಣಮಿಸುವಂತೆ ದಯೆ ದೋರು. ಜಯಭಾರತ!

ಂ ಂ ಂ

ಮಕ್ಕಳೊಡನೆ ಬೆಳೆತನ, ಕಾಣವಿಲ್ಲದ ನೆಗಳು ಹೆಂಗಸರೊಡನೆ ಜಗಳ, ದುರ್ಜನರ ಸೇವೆ, ಕತ್ತೆಯ ಸವಾರಿ, ಒರಟು ಮಾತು ಈ ಆರು ಜರ್ಯೆಗಳಿಂದ ಮನುಷ್ಯ ಕ್ಷುದ್ರನೆನಿಸುವನು.

ಂ ಂ ಂ

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯ ಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ.

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಬೆಲೆ: ರೂ. 2—00,

ಪುಸ್ತಕದ ಬೆಲೆಯೊಂದಿಗೆ 50 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಷ್ಠಿತ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನನಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಭಾರತದ ವನ್ಯಜೀವಿ ಸಂರಕ್ಷಣಾ ಕೇಂದ್ರಗಳು ಮತ್ತು ರಾಷ್ಟ್ರೀಯ ಉಪವನಗಳು

(ಹನ್ನೆರಡನೇ ಪುಟದಿಂದ)

ಶೇಷವಾಗಿ ಪಾಗ ವಾಸಿಗಳ ಅರಣ್ಯ ಹುಲಿಗಳಿಗೆ ಒಳ್ಳೆಯ ಆಶ್ರಯ ಸ್ಥಾನ

ಮಧುಮಲೈ ಮತ್ತು ಬಂಡೀಪುರದ ಕೇಂದ್ರಗಳು:

ವಿದ್ಯಾಸಿನಲ್ಲಿ 23 ಚ. ಮೈ. ಕ್ಷೇತ್ರವುಳ್ಳ 'ಮಧುಮಲೈ' ಎಂಬ ಒಂದು ಕೇಂದ್ರ ಅದಕ್ಕೆ ಹತ್ತಿರದಂತೆಯೇ ಮೈಸೂರು ಭಾಗದಲ್ಲಿರುವ ಇನ್ನೊಂದು 22 ಚ ಮೈ. ಕ್ಷೇತ್ರವುಳ್ಳ "ಬಂಡೀಪುರ" ಎಂಬ ಕೇಂದ್ರಗಳಲ್ಲಿ ದಕ್ಷಿಣ ಭಾರತದ ಎಲ್ಲ ವನ್ಯ ಜೀವಿಗಳ ಪ್ರತಿನಿಧಿಗಳೂ ಕಾಣ ಸಿಗುತ್ತವೆ. ಈ ಕೇಂದ್ರಗಳು ಮೈಸೂರು ನೀಲಗಿರಿ ರಸ್ತೆಯಲ್ಲಿ, ಮೈಸೂರಿನಿಂದ 50 ಮೈಲಿ ದೂರದಲ್ಲಿದೆ. ಅನೆ, ಸಾಂಬರ್, ಕಾಡೆಮ್ಮೆ ಚಿಗರಿ, "ಲಾಂಗೂರ್" ಎಂಬ ಕೋತಿಗಳು ಬಾನ್ನೆಟ್ ಮಂಗ 'ಪೀಫೌಲ್' ಎಂಬ ಪ್ರಾಣಿ ಪಕ್ಷಿಗಳು ವಿಶೇಷವಾಗಿ ಗಮನಾರ್ಹವಾದುವು.

ಪೆರಿಯಾರ್ ಕೇಂದ್ರ

ಇಡೀ ಭಾರತದ ವನ್ಯಜೀವಿಗಳ ರಕ್ಷಣಾ ಕೇಂದ್ರಗಳಲ್ಲಿಯೇ ಅತ್ಯಂತ ಸೊಗಸಾದುದು ಕೇರಳದಲ್ಲಿದೆ. ಅದೇ 260 ಚ. ಮೈ. ಕ್ಷೇತ್ರವುಳ್ಳ "ಪೆರಿಯಾರ್" ಎಂಬ ಕಾಡಿಟ್ಟ ಸ್ಥಳ ಈ ಪ್ರದೇಶ ಇತರೆಲ್ಲ ಸ್ಥಳಗಳಿಗಿಂತಲೂ ಭಿನ್ನವಾಗಿದೆ. ಅದು ಒಂದು ನದಿ ಕೊಳ್ಳದಂತಿದ್ದು ಅಲ್ಲಿ ಒಂದು ಆಣೆಕಟ್ಟನ್ನು ಹಾಕಿ ಒಂದು ದೊಡ್ಡ ಆಕರ್ಷಕವಾದ ಸರೋವರವನ್ನಾಗಿ ಪಿರ್ಮಸಿದ್ದಾರೆ. ಅದು ಸುಮಾರು 3000 ಅಡಿಗಳ ಎತ್ತರದಲ್ಲಿದೆ ಆ ಸರೋವರದ ಸುತ್ತಲೂ ಅರಣ್ಯಗಳಿಂದ ಕೂಡಿದ ಹಚ್ಚ ಹಸಿರು ಬೆಟ್ಟ ಗುಡ್ಡಗಳು ಕಾಣುತ್ತದೆ. ಅಷ್ಟೇ ಅಲ್ಲದೆ ಆ ಸರೋವರದ ಅಂಚಿನಲ್ಲಿ ಅಲ್ಲಲ್ಲಿಯೇ ಕಂದಕ ಕೊರೆಯಲುಗಳು ಇರುವುದರಿಂದ ,ಅಲ್ಲಿ ಈ ವನ್ಯಜೀವಿಗಳು ಸುತ್ತಲಿನ ಬೆಟ್ಟ ಗುಡ್ಡಗಳಿಂದ ಕೆಳಗೆ ಇಳಿದು ಬಂದು ನೀರಿನಲ್ಲಿ ವಾಸಿಸಿರುತ್ತವೆ. ಅಲ್ಲಿ ಆನೆಗಳು ಕಾಡೆಮ್ಮೆ, ಸಾಂಬರ್ ಮತ್ತು ಇನ್ನೂ ಇತರ ಎಷ್ಟೋ ಪ್ರಾಣಿಗಳಿವೆ. ಆದರೆ ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಕೇಂದ್ರ ಕಾಡಾನೆಗಳಿಗೆ ಹೆಸರುವಾಸಿಯಾಗಿದೆ.

ಉತ್ತರ ಕಾಮರೂಪ ಕೇಂದ್ರ

ಇದು ಅಸ್ಸಾಮಿನಲ್ಲಿ "ಮಾನಸ್" ಎಂಬಲ್ಲಿದೆ ಇಲ್ಲಿ ಪೇಂಡಾ ಮೃಗ,

(ಇಪ್ಪತ್ತಮೂರನೇ ಪುಟ ನೋಡಿರಿ)

ಕೆನರಾ ಬ್ಯಾಂಕ್
ಸಮೃದ್ಧ ಬೆಳೆಯ ಬೀಜಾರೋಪಣ ಮಾಡುತ್ತಿದೆ!

ಸಮೃದ್ಧ ಬೆಳೆಗಳಿಗೆ ಆಧುನಿಕ ಸಾಧನಗಳು ಅತ್ಯವಶ್ಯ. ಆ ಸಾಧನಗಳೆಂದರೆ ಉತ್ತಮ ಬೀಜ, ರಾಸಾಯನಿಕ ಗೊಬ್ಬರ, ಪಂಪ್‌ಸೆಟ್, ಟ್ರಾಕ್ಟರ್, ಬೇಸಾಯದ ಇತರ ಸಾಮಗ್ರಿ, ಪಾಸುವಾರು, ಇತ್ಯಾದಿ, ಇತ್ಯಾದಿ.

ಸಮೃದ್ಧ ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಸಮಗ್ರಾಭಿವೃದ್ಧಿಯ ಮಹತ್ವವನ್ನು ಮನಗಂಡು ಕೆನರಾ ಬ್ಯಾಂಕ್, ಸಮೃದ್ಧ ಬೆಳೆಯನ್ನು ಪಡೆಯ ಬಯಸುವ ರೈತರ ಸಾಲ ಎಗೆಯ ಬೇಡಿಕೆಗಳಿಗಾಗಿ ಆರ್ಥಿಕ ನೆರವನ್ನು ನೀಡುವ ಯೋಜನೆಗಳನ್ನು ಕೈಗೊಂಡಿದೆ ಹೀಗೆ, ಕೆನರಾ ಬ್ಯಾಂಕ್ ಸಮೃದ್ಧ ಬೆಳೆಯ ಆಶಾಂಕುರದ ಬೀಜವನ್ನು ಈಗಾಗಲೇ ಬಿತ್ತಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸ್ ಲೈಟ್‌ಹೌಸ್ ಹಿಲ್ ರಸ್ತೆ, ಮಂಗಳೂರು
ಆಡಳಿತ ಆಫೀಸ್ 112, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು.

141 ಕೋಟಿ ರೂಪಾಯಿಗಳ ಮೇಲ್ಪಟ್ಟ ಸಂಪನ್ಮೂಲಗಳು—245ಕ್ಕೆ ಮೀರಿದ ಶಾಖೆಗಳು—ಜಗತ್ತಿನಾದ್ಯಂತ ಪ್ರತಿನಿಧಿಗಳು

ಕವಿ ಚತುರ್ಮುಖನೆಂದರೇನು?

(ಸಮ್ಮೊಂದನೇ ಪುಟದಿಂದ)

ಗ್ರಂಥದಲ್ಲಿ ನಾಕಿಗನು ಹೇಳಿದ್ದಾನೆ. ಅದನ್ನೆ ಇಲ್ಲಿ ವಿಸ್ತಾರವಾಗಿ, "ರಸಭಾವ ಭಾವುಕ ಸಮುದ್ಯಾ ಭಾರತಿ" ಯೆಂದು ಹೇಳಿರಬೇಕು.

'ರಸ-ಭಾವಗಳು ಎಷ್ಟು?' ಎಂಬ ಪ್ರಶ್ನೆಯಲ್ಲಿ ತಿಳಿಯಬಹುದು. ಇದೇ ಕೃತಿಯಲ್ಲಿ ಇನ್ನೊಂದೆಡೆ ಹೇಳಿದುದು.

ಶೃಂಗಾರಾದಿಗಳನ್ನು ನಿ
ಸಂಗಲ್ ಪರ್ತಿಸುವುದುಂತೆಂಟ್
ವಲಂಕಾ।
ವ್ಯಾಂಗಸ್ಥೆ ಸತ್ಪ್ರಿಯರೂ ರಸ
ಸಂಗಲ್ ಪಿತ್ಯಾದಿ ಭಾವ
ಸಂಪನ್ನಂಗಳ್॥"

ಕಾವ್ಯದಲ್ಲಿ ಎಂಟು ರಸವೆಂದಂತೆ, ಶಾಂತ ರಸದ ಪ್ರಸ್ತಾವವು ಮತ್ತೆ ಹೇಳಿದುದು.

"ಸಮಭಾವ ಸ್ವಭಾವಂ ಶಾಂ
ತಮಕ್ಕುಮಂತಾ ಸಮಸ್ತಮುಂ
ವರ್ತಿಸುವುದುಂ।
ಸಮನಿಸಿ ಸಮ್ಯಕ್ ಜ್ಞಾನಂ |
ತಮಮಂ ರಾಗಮುನ ನಳಿದು
ತೊಲಗಿಸು ಮನಮಂ ॥"

ಈ ಲಕ್ಷಣಕ್ಕೆ ಉದಾಹರಣವಾಗಿ ಮತ್ತೆಯದು ಪದ್ಯಗೂ ಹೇಳಿದೆ. ಸಾಕ್ಷಾತ್ ಪ್ರಕೃತಿಯನ್ನು ವಿವರಿಸುವಾಗ 'ಶಾಂತ ಸ್ವಭಾವದುಂ' ಎಂದಿದೆ. ಈ ವಿಚಾರ ಪ್ರಾಚೀನರಿಂದಲೂ ಕಾಣಬಂದಿದೆ: "ಒಂದಿದ ಶೃಂಗಾರಮದ್ದುಮೊಂದೆ ರಸಮೊಂಬ ತೆಯ್ದೊಡಂಬಟ್ಟವು" ಎಂದು ಪಂಪಾ ಕವಿ ರನ್ನನು ಹೇಳಿದ್ದಾನೆ. ಅತನು ತನ್ನ ಕೃತಿಗಳಲ್ಲಿ ಇದನ್ನು ಬಳಸಿದ್ದಾನೆ. "ಅಷ್ಟೌ ನಾಟ್ಯೇ ರಸಾಃ ಸ್ಮೃತಾಃ" ಎಂದು ಭರತಾದಿ ಹೇಳಿದ್ದಾನೆ. ಅತನ ಸ್ಕಂದ ವ್ಯಾಖ್ಯಾನದಲ್ಲಿ, ಕಾಲಿದಾಸ ಶಾಂತರಸದ ಸೂಚನೆಗಳನ್ನು ಕಳಿಸಿದುದನ್ನು ಸಾರಿದ್ದಾನೆ. 'ಅಗ್ನಿ ಪುರಾಣ'ದಲ್ಲೂ ಶಾಂತ ರಸದ ವಿಚಾರ ಹೇಳಿದೆ.

"ಶಾಂತರಸವು ನಾಟಕಗಳಲ್ಲಿ ಪ್ರದರ್ಶನಕ್ಕೆ ಬಾರದಿರುವುದರಿಂದ ಅದನ್ನು ಧಕಕಾದಿಗಳು ಬಿಟ್ಟಿದ್ದಾರೆ. ಆದರೆ ಕಾವ್ಯದಲ್ಲಿ ಅದರ ನಿರೂಪಣೆಯು ಸಾಧ್ಯವಿರುವುದರಿಂದ ಮಮ್ಮಟಾದಿಗಳು 'ಶಾಂತೋಽಪಿ ನವಮೋ ರಸಃ' ಎಂದು ಒಪ್ಪಿಕೊಂಡಿರುತ್ತಾರೆ .... ಶಾಂತರಸವು ವಿಷಯ ಜುಗುಪ್ಸೆಯೇ ಕಾರಣವಾದ ಬೀಭತ್ಸದಲ್ಲಿ ಅಂತರ್ಭಾವವಾಗುವುದೇ ಎಂಬ ಪ್ರಶ್ನೆಗೆ ಉತ್ತರ ರೂಪವಾಗಿ ಹೀಗೆ ಹೇಳಬಹುದು: ಬೀಭತ್ಸದಲ್ಲಿ ಜುಗುಪ್ಸೆಯು ಸ್ಥಾಯಿಭಾವವಾದರೂ ಶಾಂತದಲ್ಲಿ ಅದು ಸಂಚಾರಿ ಭಾವಮಾತ್ರ, ಜುಗುಪ್ಸೆ ಇರುವ ವರೆಗೆ ಶಾಂತಿಯು ಉಂಟಾಗದಿರುವುದರಿಂದ ಶಾಂತವು ಬೀಭತ್ಸದಿಂದ ಭಿನ್ನವು" ಎಂದು "ಕಾವ್ಯಾನಲೋಕ"ದ ಟಿಪ್ಪಣಿ ಸೂಚಿಸಿದೆ.

ಪ್ರಕೃತ, ನಾಗವರ್ಮನ ಪದ್ಯದಲ್ಲಿ "ರಸ-ಭಾವ"ಗಳೆಂದೆರಡು ನುಡಿಗಳಿವೆ. ಅಮೇರೆಗೆ, ಈ ಮೇಲೆಂದಂತೆ ಶೃಂಗಾರಾದಿ ರಸಗಳು ಮಾತ್ರವಲ್ಲ, ಭಕ್ತಿ ಮೊದಲಾದ ಭಾವಗಳೂ ಕೂಡಿ ಹೇಳಿರಬೇಕು. (ಭಕ್ತಿಯು ಒಂದು ಭಾವವೆಂಬ ಬಗೆಗೆ 'ಕನ್ನಡ ಕೈಪಿಡಿ'ಯಲ್ಲಿ ವಿವರಿಸಿದ್ದಾರೆ).

೪) "ಪ್ರವಿಲಸದ್ವಾಕ್ಸುಂದರೀ ಕುಂಕುಮಾಂಕಿತ ಕೇಳೀಭವನಾಜ ರೋಪಮಮುಖಂ" ಎಂಬುದು ನಾಲ್ಕನೆಯ ಮುಖವಾಗಿದೆ. ಈ ನುಡಿ ಹಿಂದಿನವುಗಳಷ್ಟು ಬೇಗ ಸುವ್ಯಕ್ತವಾಗುವುದಿಲ್ಲ. ಈ ಮೊದಲು ಕಾವ್ಯದೇಹದಲ್ಲಿ "ರಸಭಾವವೃತ್ತಿ ಫಿರ್ಣೀತಯೆ ಜೀವ"ವೆಂದೂ "ವಾಕ್ ಸಂಪತ್ತಿ"ಯಿರಬೇಕೆಂದೂ ಸೂಚಿತವಾಗಿದೆ, ಹಾಗಾದರೆ, ಇನ್ನುಳಿದ ಕಾವ್ಯಾಲಂಕಾರಗಳು ಈ ವಾಕ್ಯದಲ್ಲಿ ಹೇಳಲ್ಪಟ್ಟಿರಬೇಕು.

"ಪದಿನಾರಲ್ಲವಲಂಕ್ರಿಯೊರ್ಚಿಸೆ ಮೂವತ್ತಾರುನೇರ್ಪಟ್ಟುವು" ಎಂದು ಕವಿ ರನ್ನನು ಶ್ಲೇಷೆಯಿಂದ ವಾಕ್ಸುಂದರಿಯ ಅಲಂಕಾರಗಳನ್ನು ಹೇಳಿದ್ದಾನೆ. ಲೌಕಿಕವಾಗಿ, ಸ್ತ್ರೀಯರ ಅಲಂಕಾರಗಳೇನೆಂದು ಅದರ ಟಿಪ್ಪಣಿಯಾಗಿ ಹೇಳಿದುದನ್ನು ಗಮನಿಸಬಹುದು.

"ಸ್ತ್ರೀಯರ ಅಲಂಕಾರಗಳು ಹದಿನಾರು: ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ (ಕಾಡಿಗೆ), ನಾನಾಭೂಷಣ, ಮಕರಪತ್ರ (ಕೆನ್ನೆಗಳ ಮೇಲೆ ಚಿತ್ರಿಸಿಕೊಳ್ಳುವ ವರ್ಣವಿನ್ಯಾಸ), ಕುಂಡಲ, ಹಾರ, ಕೇಯೂರ (ಭುಜಗಳ ತೊಡಿಗೆ), ಮಣಿಭೂಷಣ, ಅಂಗಲೀಯಕ, ಕಾಂಚೀದಾಮ (ಒಡ್ಯಾಣ), ನೂಪುರ (ಕಾಲಂದುಗೆ), ಅಲಕ್ತಕ (ಅರಗಿನ ರಸದ ಲೇಪನ)ಗಳು" (ಶ್ರೀ ಶೀ. ನಂ. ಶ್ರೀ. ಅವರ ಟಿಪ್ಪಣಿ).

"ಕಟಕ ಕಟಿಸೂತ್ರ ಕುಂಡಲಾಭರಣಂ ಮೊದಲಾಗೊಡೆಯ" ಎಂದು ಹದಿನಾರು ಆಭರಣಗಳು ಬೇರೆಡೆ ಹೇಳಿದೆ (ಪಡ್ಡಾರಾಧನೆ). ಸುಮಂಗಲೀಯರು ನಿತ್ಯವೂ ಬಳಸತಕ್ಕವುಗಳಷ್ಟೆ(ಆಯ್ದು ಬಗೆದಿಗಳಲ್ಲಿ) ಕುಂಕುಮವೂ ಒಂದಾಗಿದೆ. ಪ್ರಸ್ತುತ ವಾಕ್ಯದಲ್ಲಿ, ಹೀಗೆ ಹೇಳಿರಬಹುದು—'ಚೆನ್ನಾಗಿ ಹೂಳೆಯುವ ವಾಕ್ಸುಂದರಿಯು ಕುಂಕುಮದಿಂದ ಅಂಕಿತವಾದ ಕೇಳೀಗೃಹದ ಅಂಗಣದಂತಿದ್ದ ನೋಟ'ಯೆಂದು. ಕಾವ್ಯಸ್ತ್ರೀಯು ಅಲಂಕಾರಗಳೆಂದರೆ, ಪ್ರಾಸಾದಿಗಳೂ ಉಪಮಾದಿಗಳೂ ಕೂಡಿರಬೇಕೆಂದು (ಶಬ್ದ- ಅರ್ಥಗಳಲ್ಲಿಯೂ ಅಲಂಕಾರದಳಿರಬೇಕೆಂದು) ಬೇರೆ ಹೇಳಬೇಕಾಗಿಲ್ಲ. ಈ ವಿಚಾರಕ್ಕೆ ಇದೇ ಗ್ರಂಥದ "ಸಾರ ವಿಚಾರ ಬಂಧುರಮತಿ ಪ್ರಸರಂ" ಎಂಬ ಪದ್ಯವನ್ನು ಪರಿಶೀಲಿಸಬಹುದು.

ಒಟ್ಟಿನಲ್ಲಿ, ಕವಿ ಚತುರ್ಮುಖನು ಶ್ರುತ, ವಾಕ್, ರಸ, ಅಲಂಕಾರಗಳೆಂಬ ನಾಲ್ಕು ಪ್ರ-ಮುಖಗಳಿಂದ ಕೂಡಿದವನೆಂದು ಇದರಲ್ಲಿ ನಿರೂಪಿಸಲಾಗಿದೆ. ಕವಿ ರನ್ನನು ಹೇಳಿದವು ಬೇರೆ ಬಗೆಯಲ್ಲಿ—ಕಾವ್ಯರೂಪದಲ್ಲಿ ವ್ಯಕ್ತವಾಗುವ ನಾಲ್ಕು ಮೋರೆಗಳಾಗಿವೆ. ನಾಗವರ್ಮನು ಕವಿ ಚತುರ್ಮುಖರ ವಿಚಾರ-ಕವಿಯ ಚತುರ್ಮುಖಗಳ ವಿವರ ಹೇಳಿದ್ದಾನೆ! ಸಾಲಂಕಾರ-ರಸ ಭಾವಭರಿತ—ವಾಕ್ ಸಂಪತ್ತಿ, 'ಶ್ರುತ'ಗಳಿರಬೇಕೆಂ. ಸಾಹಿತ್ಯರಂದದಲ್ಲಿ ಕೇವಲ 'ಶಬ್ದ ಬ್ರಹ್ಮ'ರಿಗಿಂತ (ಶಬ್ದಾಡಂಬರಕ್ಕಿಂತ) ಹೆಚ್ಚಿನದಾಗಿ, 'ಕವಿ ಚತುರ್ಮುಖ'ರು (ಕಾವ್ಯದಲ್ಲಿ ನಾಲ್ಕು ಪ್ರಧಾನಾಂಗಗಳನ್ನೂ ಬಳಸುವವರು) ಉದಯಿಸಲೆಂದು ನಾವು ಇದರಿಂದ ಹಾರಯಿಸಬಹುದಾಗಿದೆ! ಅದಕ್ಕೆ 'ಪ್ರತಿಭೆ'ಯ ಹನ್ನೆಲೆಯಿರಬೇಕಾದುದೂ ಅಹುದು.!

ಡಾ। ಮಾಳವ ಪೈ

ಬೆರಳೆಣಿಕೆಯಲಿ ಇಲ್ಲ ನಿನ್ನಂಥ ಧುರೀಣ
ಶತಾಯುಷಿಯೊಗು ಹೇ ಎಪ್ಪತ್ತರ ತರುಣ
ನೀ ನುಡಿಯ ಹೊಳ್ಳುದುರುವುದು ಮಹಾತ್ಮಾ
ರಚಿಸಿದೆ ನಾಲಂದಾ ಹೇ ವಿಶ್ವಕರ್ಮ
— ದೇವಕಿನಂದ್ಯ ವಿಜಾಸ

ನೀವು ಪ್ರಗತಿಪರ ರೈತವರ್ಗಕ್ಕೆ ಸೇರಿದವರಾಗಿದ್ದರೇ,
ಇಂದೇ ನಿಮ್ಮ ಸಮೀಪದ

ಕೊಪ್ಪೊರೇಶನ್ ಬೇಂಕ್‌ನಲ್ಲಿ

ಪಂಪು ಸೆಟ್ಟು ಮತ್ತು ಉಳುವ ಯಂತ್ರಗಳ ಮೇಲೆ ಆರ್ಥಿಕ ನೆರವು ನೀಡುವ ಆಕರ್ಷಕ ಯೋಜನೆಯ ವಿವರಗಳಿಗಾಗಿ ವಿಚಾರಿಸಿರಿ!

ಕೊಪ್ಪೊರೇಶನ್ ಬೇಂಕು

ನಿಮಗೆ — ನಿಮ್ಮ ಜೀತಕ್ಕೆ, ಬೇಕಾದಷ್ಟು ಆಹಾರವನ್ನು ಆಧುನಿಕ ಯಂತ್ರೋಪಕರಣಗಳ ಮೂಲಕ ಅಧಿಕ ಪ್ರಮಾಣದಲ್ಲಿ ಬೆಳೆಸಲು ಬೇಕಾಗುವ ಸಹಾಯ ಸಹಕಾರಗಳನ್ನು ನೀಡಲು ಸದಾ ಸಿದ್ಧವಿದೆ!!

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು — ಉಡುಪಿ)
ಆಡಳಿತ ಆಫೀಸು — ಮಂಗಳೂರು

ಕೆ. ರಾಮದಾಸ್ ನಾಯಕ್
ಜನರಲ್ ಮೆನೇಜರ್.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧಿ
ಎಲ್ಲಾ ಕಡೆ ಸಿದಿತ ಮಧ್ಯ ನೋವುಗಳಿಗೆ
50 ವರ್ಷ ಉಪಯೋಗ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿಮಿಟೆಡ್, ಮದ್ರಾಸ್-ಕರ್ನಾಟಕ

ಸಂಗ್ರಾಹ್ಯ ಸಂಕಲನಗಳು

ಜೀವನ ಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00
ಏಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ವಿಚಿತ್ರ ಕಳ್ಳೆಸೇಟೆ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಪುಷ್ಪ ವನ	2—00

ಕೆಳಲಾಗಿ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಭಾರತದ ವನ್ಯಜೀವಿ ಸಂರಕ್ಷಣಾ ಕೇಂದ್ರಗಳು ಮತ್ತು ರಾಷ್ಟ್ರೀಯ ಉಪವನಗಳು

(ಇಪ್ಪತ್ತೊಂದನೇ ಪುಟದಿಂದ)

ಕಾಡಾನೆ, ಕಾಡೆಮ್ಮೆ, ಹಾಗೂ ಡೀರ್ ಪೆಲಿಕನ್ ಮತ್ತು ಇತರ ನೀರಿನ ಮೇಲೆ ವಾಸಿಸುವ ಪಕ್ಷಿಗಳನ್ನೂ ನೋಡಬಹುದು.

ಕಿಯುಲೋದೇವ್ ಘಾನಾ ಕೇಂದ್ರಗಳು:

ಇದು 21 ಚ. ಮೈಲಿಗಳಷ್ಟಿದ್ದು "ಭರತ್‌ಪೂರ್" ಎಂಬ ಪ್ರದೇಶದ ಸಮೀಪ ಇರುತ್ತದೆ. ಅದು ಪಕ್ಷಿಗಳಿಗೆ ಒಳ್ಳೆಯ ಆಶ್ರಯ ಸ್ಥಳ. ಅಲ್ಲಿಯ ಒಂದು ಸರೋವರದ ಸುತ್ತಲೂ ಅಸಂಖ್ಯಾತ ಪಕ್ಷಿಗಳು ಜೂಲೈಯಿಂದ ಅಕ್ಟೋಬರ್ ತಿಂಗಳ ವರೆಗೆ ವಿಹಾರ ಮಾಡುತ್ತವೆ. ಮೇಲಾಗಿ ವಿಪುಲವಾದ ಎಲೆಸೆ ಹೋಗುವ ಬಾತು ಮತ್ತು ಇತರ ಪಕ್ಷಿಗಳು ಚಳಿಗಾಲದ ದಿನಗಳಲ್ಲಿ ಆ ಸ್ಥಳವನ್ನು ಸಂದರ್ಶಿಸುತ್ತವೆ.

ವೇದಾಂತಗಳ್ ಕೇಂದ್ರ:

ಇದು ಮತ್ತೊಂದು ಪ್ರಖ್ಯಾತವಾದ ಪಕ್ಷಿಗಳ ಆಶ್ರಯ ಸ್ಥಳ. ಅದು ಮದ್ರಾಸಿಗೆ 54 ಮೈಲಿಗಳಷ್ಟು ದೂರದಲ್ಲಿದೆ. ಅಲ್ಲಿ ಪಕ್ಷಿಗಳು ಸೆಪ್ಟೆಂಬರ್ ತಿಂಗಳಿಂದ ಮಾರ್ಚ್ ತಿಂಗಳ ವರೆಗೆ ಮಾರ ಮಾಡುತ್ತವೆ.

ಶ್ರೀರಂಗ ಪಟ್ಟಣದ ಕೇಂದ್ರ

ಇನ್ನೊಂದು ಸುಂದರವಾದ ಪಕ್ಷಿಗಳ ಆಶ್ರಯ ಸ್ಥಾಪನೆ ಮೈಸೂರಿನ 8-10 ಮೈಲು ದೂರದಲ್ಲಿರುವ ಶ್ರೀರಂಗ ಪಟ್ಟಣದ ಬಳಿ ಇದೆ. ಅಲ್ಲಿ ಗೂಡುಕಟ್ಟುವ ಮತ್ತು ಆಹಾರವನ್ನು ಸೇವಿಸುವ ಪಕ್ಷಿಗಳೇ ಹೆಚ್ಚು.

ಗೀರ್ ಅರಣ್ಯ

ಸೌರಾಷ್ಟ್ರದ "ಗೀರ್" ಎಂಬ ಅರಣ್ಯವು ಸಿಂಹಗಳ ಮನೆಯೆಂದು ಮೇಲೆ ಹೇಳಿದೆ. ಒಂದು ಕಾಲಕ್ಕೆ ಸಿಂಹಗಳು ಉತ್ತರ ಮತ್ತು ಪಶ್ಚಿಮ ಭಾರತದಲ್ಲಿ ದಕ್ಷಿಣಕ್ಕೆ ನರ್ಮದಾ ನದಿಯ ವರೆಗೆ ಹರಡಿದ್ದವು. ಈಗ ಅವು ಆ ಪ್ರದೇಶಗಳಲ್ಲೆಲ್ಲಾ ಅದೃಶ್ಯವಾಗುತ್ತ ಬಂದು 'ಗೀರ್' ಎಂಬ ಅರಣ್ಯಕ್ಕೆಷ್ಟೇ ಮೀಸಲಾದಿತವಾಗಿವೆ. ಅದರ ಕ್ಷೇತ್ರ 500 ಚ. ಮೈ. ಸಿಂಹಗಳ ಜತೆಗೆ ನೀಲ್‌ಗಾಯ್, ಸಾಂಬರ್, ಚಿತಲ್, ಜಂಕಾರ್, ಪೀಫೌಲ್ ಮತ್ತು ಇನ್ನೂ ಅನೇಕ ಪ್ರಾಣಿಗಳಿವೆ. ಈ 'ಗೀರ್' ಎಂಬ ಅರಣ್ಯವನ್ನು ರೈಲಿನಿಂದಲೂ ವಿಮಾನ ನಿಲ್ದಾಣದಿಂದಲೂ ಹೋಗಿ ಸೇರಬಹುದು. ಮುಂಬೈಯಿಂದ 'ಕೇಶಡ್' ಎಂಬ ವಿಮಾನ ನಿಲ್ದಾಣಕ್ಕೆ 1½ ತಾಸುಗಳ ಹಾರಾಟ. ಅಲ್ಲಿಂದ 40 ಮೈಲಿನ ಬಸ್ಸಿನ ಪ್ರಯಾಣ.

ರಾಷ್ಟ್ರೀಯ ಉಪವನಗಳು

ಹಳ್ಳಿ ದೇಶದಲ್ಲಿ ಅನೇಕ ಬೇಟೆಯು ನಿಷಿದ್ಧ ಸ್ಥಳಗಳಿದ್ದರೂ, ರಾಷ್ಟ್ರೀಯ ಉಪವನಗಳು ಕೇವಲ ಮೂರೇ ಇವೆ. ಉತ್ತರ ಪ್ರದೇಶದಲ್ಲಿ "ಹೇಲಿಲಿ ಉಪವನ" ಮಧ್ಯ ಪ್ರದೇಶದಲ್ಲಿ 'ಶಿವಪುರಿ" ಮತ್ತು 'ಕಾನ್ಹಾ" ಉಪವನಗಳು.

"ಹೇಲಿಲಿ' ಉಪವನ

ಇದು ನೈನಿತಾಲ್‌ನ 'ರಾಮನಗರ' ದಿಂದ ರೈಲು ಹಾದಿಯಲ್ಲಿ 15 ಮೈಲಿ ದೂರವಿದೆ. ಅದರ ಕ್ಷೇತ್ರ 125 ಚ. ಮೈಲಿಗಳು. ಅಲ್ಲಿ ಹಿಮಾಲಯದ ದಕ್ಷಿಣಕ್ಕೆ ಕಂಡು ಬರುವ ಪ್ರಾಣಿಗಳೇ ಹೆಚ್ಚಿದೆ. ಅದು ವಿಶೇಷವಾಗಿ 'ಸಾಲ್' ಎಂಬ ಅರಣ್ಯವಾಗಿದ್ದು ವಸಂತ ಋತುವಿನಲ್ಲಿ ಹೊಸ ಎಲೆಗಳು ಹುಟ್ಟುವಾಗ ಆ ಇಡೀ ಪ್ರದೇಶವೆಲ್ಲ ಹಸಿರು ಮತ್ತು ಹಳದಿ ಬಣ್ಣದ್ದಾಗಿ ಕಾಣುತ್ತದೆ. ಅಲ್ಲಿ ಕಾಡಾನೆ, ಸಾಂಬರ್-ಚಿತಲ್, ಅರಚುವ ಜಿಂಕೆ, 'ಲಾಂಗೂರ್', ಎಂಬ ಜಾತಿಯ ಕೋತಿಗಳು, ಪೀಫಾಲ್, ಕಾಡು ಕೋಳಿ ಮತ್ತು ಇನ್ನೂ ಅನೇಕ ತರಹದ ವನ್ಯ ಜೀವಿಗಳಿವೆ. ಆದರೆ ಹುಲಿಗಳು ಮಾತ್ರ ಅತ್ಯಂತ ವಿಪುಲವತ್ತು ಮುಖ್ಯವಾದುವು.

ಶಿವಪುರಿ ಉಪವನ

ಹಿಂದಿನ ಗ್ವಾಲಿಯರ್ ಸಂಸ್ಥಾನದ ಈ ಕಾದಿಟ್ಟ ಅರಣ್ಯವು 1955ರಲ್ಲಿ ಒಂದು ರಾಷ್ಟ್ರೀಯ ಉಪವನವಾಗಿ ಮಾರ್ಪಾಟಾಯಿತು. ಅದರ ಕ್ಷೇತ್ರ 60 ಚ. ಮೈಲುಗಳಿದ್ದು ಅಲ್ಲಿಯ ಜಿಂಕೆ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ಒಂದು ಸರೋವರ ಇದೆ. ಅಲ್ಲಿ ಹುಲಿಗಳೇ ಹೆಚ್ಚು. ಜತೆಗೆ ಇಂಡಿಯನ್ ಗೆಜಲ್, ಜಂಕಾರಾ, ಸಾಂಬರ್, ಚಿತಲ್, ಸ್ವರ್‌ಫಾಲ್, ಇತ್ಯಾದಿಗಳೂ ಇವೆ.

ಕಾನ್ಹಾ ಉಪವನ

ಮಧ್ಯಪ್ರದೇಶದ 'ಬಂಜಾರ್' ಎಂಬ ಕಾದಿಟ್ಟ ಪ್ರದೇಶವು ಸುಮಾರು 100 ಚ. ಮೈ. ಯ ಕ್ಷೇತ್ರ ಹೊಂದಿದ್ದು, 1955ರಲ್ಲಿ ಬೇಟೆಗೆ ಸಂಪೂರ್ಣವಾಗಿ ನಿಷೇಧಿಸಲ್ಪಟ್ಟ ಅತ್ಯಂತ ಪವಿತ್ರ ಸ್ಥಳವೆಂದು ಸಾರಲಾಯಿತು. 1955ರಲ್ಲಿ ಅದನ್ನು "ರಾಷ್ಟ್ರೀಯ ಉಪವನ" ವೆಂತಲೂ ಮಾರ್ಪಡಿಸಲಾಯಿತು. ಈ "ಕಾನ್ಹಾ" ವಿಶ್ರಾಂತಿ ಗೃಹವು 'ಖೂಂಡ್ಲಾ' ಎಂಬ ಸ್ಥಳದಿಂದ 45 ಮೈ. ಗಳ ದೂರದಲ್ಲಿದ್ದು, ಈ ಸಂರಕ್ಷಣಾ ಕೇಂದ್ರದ ಮಧ್ಯದಲ್ಲಿಯೇ ಇದೆ. ಈ ಸ್ಥಳವು ಪ್ರಾಚೀನ ಕಾಲದಿಂದಲೂ ಕ್ರೀಡಾಸಕ್ತರ ಹಾಗೂ ಬೇಟೆಗಾರರ 'ಸ್ವರ್ಗ' ವೆಂದು ಪ್ರಖ್ಯಾತವಾಗಿದೆ. ಆ ಸ್ಥಳದಲ್ಲಿ ಚಿತಲ್, ಜೌಗು ಪ್ರದೇಶದ ಜಿಂಕೆ, ಕರಬರ್, ಸಾಂಬರ್, ನೀಲಿಬರ್, ಕಾಡೆಮ್ಮೆಗಳೇ ಹೆಚ್ಚಾಗಿವೆ. ಅಲ್ಲಿ ಹುಲಿ, ಚಿರತೆ, ಕಾಡುನಾಯಿ ಮತ್ತು ಕತ್ತೆಕಿರುಬ ಎಂಬ ಪ್ರಾಣಿಗಳೂ ಇವೆ. ಪಕ್ಷಿಗಳಂತೂ ವಿಪುಲ ಮತ್ತು ವೈವಿಧ್ಯಪೂರ್ಣವಾದವು. ಅಲ್ಲಿ ಕಾಡ, ಹಂಜ, ಕ್ವೇಲ್, ಪಾರಿವಾಳ, ಮತ್ತು ಎಲೆಸೆ ಹೋಗುವ ಬಾತುಗಳೂ ಇವೆ.

ಪ್ರಾಣಿಗಳ ಸಂಗ್ರಹಾಲಯ

ಮೇಲೆ ವಿವರಿಸಿದವುಗಳ ಜತೆಗೆ 12 ರಾಜ್ಯಗಳಲ್ಲಿ 20 ಪ್ರಾಣಿಗಳ ಸಂಗ್ರಹಾಲಯ ಅಥವಾ ಉಪವನಗಳು ಇವೆ. ಭಾರತ ಸರ್ಕಾರವೂ ಹೊಸದಿಲ್ಲಿಯಲ್ಲಿ ಒಂದು ರಾಷ್ಟ್ರೀಯ ಪ್ರಾಣಿಗಳ ಉಪವನವನ್ನು ನಿರ್ಮಿಸಿತ್ತಿದೆ.

ಈ ಪ್ರಾಣಿಗಳ ಉಪವನವೆಂದರು ರಕ್ಷಣಾ ಕೇಂದ್ರ ಅಥವಾ ಬೇಟೆಯನ್ನು ನಿಷೇಧಿಸಿದ ಸ್ಥಳ ಮತ್ತು ರಾಷ್ಟ್ರೀಯ ಉಪವನ ಇವೆರಡರಿಂದ ಭಿನ್ನವಾಗಿರುತ್ತದೆ. ಪ್ರಾಣಿಗಳ ಉಪವನ (ಸಂಗ್ರಹಾಲಯ)ವೆಂದರೆ ನಮಗೆಲ್ಲ ಗೊತ್ತೇ ಇದೆ. ಪಂಜರಗಳು ಮತ್ತು ಕೃತಕ ಬೇಲಿಗಳಲ್ಲಿಟ್ಟು ವನ್ಯಜೀವಿಗಳನ್ನು ಪ್ರದರ್ಶಿಸುವ ಸಲುವಾಗಿ ವಿಂಗಡಿಸಿದ ಕ್ಷೇತ್ರ. ಆದರೆ ಈ ತರಹದ ಪಂಜರಗಳು ಕೃತಕ ಬೇಲಿಗಳು ಅಲ್ಲಿರುವ ಪ್ರಾಣಿ ಪಕ್ಷಿಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಸಿದುಕೊಳ್ಳುತ್ತವೆಯೆಂದು ಬೇರೆ ಹೇಳಬೇಕಾಗಿಲ್ಲ. ಅದು ಸಹಜವೇ. ಪ್ರಾಣಿಗಳ ಉಪವನವೆಂದರೆ ಅದೊಂದು ಸಲಾಕಿ ಅಥವಾ ಜಾಳಿಗೆಗಳಿಲ್ಲದ ಪ್ರಾಣಿ ಸಂಗ್ರಹಾಲಯವೆನ್ನಬಹುದು. ಇಲ್ಲಿ ಪ್ರಾಣಿ ಮತ್ತು ಪಕ್ಷಿಗಳು ಬಹುಮಟ್ಟಿಗೆ ಸ್ವತಂತ್ರವಾಗಿಯೇ ಇರುತ್ತವೆ. ಅವುಗಳನ್ನು ಸಾಧ್ಯವಿದ್ದಷ್ಟು ಅವುಗಳ ಸಹಜವಾದ ಪ್ರಕೃತಿ ಸನ್ನಿವೇಶಗಳಲ್ಲಿಯೇ ಇಡಲಾಗುತ್ತದೆ.

ಅಭಿವೃದ್ಧಿ ಯೋಜನೆಗಳು

ಪಂಚವರ್ಷೀಕ ಯೋಜನೆಗಳ ಅವಧಿಯಲ್ಲಿ ಈಗಿರುವ ವನ್ಯ ಜೀವಿಗಳ ರಕ್ಷಣಾ ಕೇಂದ್ರಗಳನ್ನು ಸುಧಾರಿಸುವುದು, ಇನ್ನೂ ಕೆಲವನ್ನು ನಿರ್ಮಿಸುವುದು; ಮತ್ತು ಇನ್ನು ಕೆಲವು ರಾಷ್ಟ್ರೀಯ ಉಪವನಗಳನ್ನು ರೂಪಿಸುವುದು, ಇತ್ಯಾದಿ ಯೋಜನೆಗಳಿಗೆ ಸುಮಾರು ೧೫೦ ಲಕ್ಷ ರೂ. ಗಳನ್ನು ತೆಗೆದಿರಿಸಲಾಗಿತ್ತು. ಈಗಿನ ಕೆಲವು ಉತ್ತಮ ರಕ್ಷಣಾ ಕೇಂದ್ರಗಳನ್ನು ರಾಷ್ಟ್ರೀಯ ಉಪವನಗಳನ್ನಾಗಿಯೂ ಪರಿವರ್ತಿಸುವ ಯೋಜನೆಗಳಿದ್ದವು. ವನ್ಯ ಜೀವಿಗಳಿಗಾಗಿರುವ ಭಾರತೀಯ ಕೇಂದ್ರ ಮಂಡಳವು ಉಪವನಗಳ ನಿರ್ಮಾಣಕ್ಕೆ ಬೇಕಾದ ಸೂಕ್ತ ಕಾಯಿದೆಗಳನ್ನೆಲ್ಲ ಒಂದು ಮಾದರಿ ಬಿಲ್ಲನ್ನು ರಾಜ್ಯಗಳ ಕರಡಿನನ್ನಿ ಸೇರಿಸಿ, ವಿವಿಧ ರಾಜ್ಯಗಳಿಗೆ ಮಾರ್ಗದರ್ಶನ ಮಾಡುತ್ತದೆ. ವಿವಿಧ ರಾಜ್ಯಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಅಂತಹ ಕಾಯಿದೆಗಳನ್ನು ಆಗಲೇ ಅನ್ವಯಿಸಿವೆ. ಇಂತಹ ಕಾಯಿದೆಗಳ ಬಲದಿಂದ ವರ್ಷದ ಎಲ್ಲ ಕಾಲದಲ್ಲಿಯೂ ವನ್ಯಜೀವಿಗಳ ರಕ್ಷಣಾ ಕೇಂದ್ರ ಮತ್ತು ರಾಷ್ಟ್ರೀಯ ಉಪವನಗಳಲ್ಲಿ ಬೇಟೆಯಾಡುವುದನ್ನು ನಿಷೇಧಿಸಿದೆ. ಇತರ ಅರಣ್ಯ ಭಾಗಗಳಲ್ಲಿಯೂ ವರ್ಷದ ಕೆಲವೊಂದು ಅವಧಿಯಲ್ಲಿ ಮಾತ್ರ ಕೆಲವು ನಿರ್ದಿಷ್ಟ ಆಯುಧಗಳಿಂದಷ್ಟೇ ಕೆಲವು ನಿರ್ದಿಷ್ಟ ಪ್ರಾಣಿ ಮತ್ತು ದೊಡ್ಡ ಪ್ರಾಣಿಗಳನ್ನು ಕೇವಲ ಬೇಟೆಯ ಕ್ರೀಡೆಗಾಗಿ ಅಷ್ಟೇ ಶಿಕಾರಿ ಮಾಡುವುದಕ್ಕೆ ಅನುಮತಿ ದೊರೆಯುತ್ತದೆ.

ಇನ್ನೂ ಒಂದು ಯೋಜನೆ ಇದೆ. ಅದು ವನ್ಯ ಜೀವಿಗಳ ರಕ್ಷಣಾ ಕೇಂದ್ರಗಳ ಸುತ್ತಲೂ ವನ್ಯ ಜೀವಿಗಳಿಗೆ ದಯಕರುಣೆಯಿಂದ ಪ್ರಸಾರವಾಗುವ ರೋಗವನ್ನು ತಡೆಗಟ್ಟಲು, ಹಲವು ಮೈಲಿಗಳಷ್ಟು 'ತಡೆಪ್ರದೇಶವನ್ನು' ನಿರ್ಮಿಸುವುದೇ ಆಗಿದೆ. ಈ ಯೋಜನೆಗಳುಗುಣವಾಗಿ ಗ್ರಾಮಗಳಿಗೆ ದನಕರುಗಳನ್ನು ಈ ತಡೆ ಪ್ರದೇಶಗಳಲ್ಲಷ್ಟೇ ಮೇಯುವುದಕ್ಕೆ ಬಿಡಲಾಗುತ್ತದೆ. ಆದರೆ ಅವು ವನ್ಯಜೀವಿಗಳೊಡನೆ ಯಾವ ತರಹದ ಸಂಬಂಧವನ್ನೂ ಪಡೆಯದಂತೆ, ಅವುಗಳನ್ನು ವನ್ಯ ಜೀವಿಗಳಿರುವ ಅರಣ್ಯಗಳಲ್ಲಿ ಬಿಡಗೊಡುವುದಿಲ್ಲ.

ಶುಷ್ಕ ಮತ್ತು ಒಣ ಕಾಡು ಪ್ರದೇಶಗಳಲ್ಲಿ—'ಗೀರ್' ಎಂಬ ಅರಣ್ಯ ಪ್ರದೇಶಗಳಲ್ಲಿ—ಅಲ್ಲಿಯ ವನ್ಯ ಜೀವಿಗಳಿಗೆ ವಷಾಕಾಲವೂ ಕುಡಿಯುವುದಕ್ಕೆ ನೀರನ್ನು ಒದಗಿಸಲು ಹಲವಾರು ಕೆರೆಗಳನ್ನು ಅಗೆಯಲಾಗುತ್ತಿದೆ. ದೇಶದ ವಿವಿಧ ಭಾಗಗಳಲ್ಲಿರುವ ಫದೀ-ಕೊಳ್ಳಗಳ ಯೋಜನೆಗಳಲ್ಲಿ ಪೈಲಿನಿಂದ ನೀರು ಹರಿದು ಬಂದು ಸಂಗ್ರಹವಾಗುವ ಪ್ರದೇಶಗಳಲ್ಲಿ ಕೆಲವು ವನ್ಯ ಜೀವಿಗಳ ರಕ್ಷಣಾ ಕೇಂದ್ರಗಳನ್ನು ನಿರ್ಮಿಸಲು ಒಳ್ಳೆಯ ಅವಕಾಶಗಳಿರುತ್ತದೆ. ಅಂತಹ ಕ್ಷೇತ್ರಗಳನ್ನು ಸಾರ್ವಜನಿಕರಿಗೆ ವಿಹಾರ ಸ್ಥಳಗಳೆಂದು ಮುಕ್ತವಿಡಬಹುದು. ಮೇಲಾಗಿ ಈ ಫದಿ ಕೊಳ್ಳಗಳಲ್ಲಿ 'ಡಾಮ್' (ಅಣೆಕಟ್ಟು)ಗಳಿರುವುದರಿಂದ ಸುತ್ತಲಿನ ಮತ್ತು ಮೇಲಿನ ಪ್ರದೇಶಗಳಿಗೆ ಮೇಲಿಂದ ಮೇಲೆ ಲಕ್ಷ್ಯ ಕೊಡಬೇಕಾಗುತ್ತದೆ. ಅದೂ ಅಲ್ಲದೆ ಅಲ್ಲಿ ದನಗಳನ್ನು ಮೇಯಿಸುವುದು, ಮರಗಳನ್ನು ಕಡಿಯುವುದು ಮತ್ತು ಸುಡುವುದು ಇತ್ಯಾದಿ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಅಲ್ಲಿ ವನ್ಯ ಜೀವಿಗಳು ವೃದ್ಧಿಯಾಗುವ ಸಂಭವ ಹೆಚ್ಚಿರುತ್ತದೆ.

(ಸಾರಾಂಶ)

ವಿಶ್ವಾಸವೇ ಜೀವನ, ಸಂಕೋಚವೇ ಸಾವು, ಪ್ರೇಮವೇ ಪ್ರಾಣ, ದ್ವೇಷವೇ ಮರಣ.

ಂ ಂ ಂ

ಮರಣಾನಂತರವೇ ಮಾನವನ ನಿಜವಾದ ಶ್ರೇಷ್ಠತೆ ಗೊತ್ತಾಗುವುದು.

ಂ ಂ ಂ

ಜನರಿಗಿಂದು ಬೇಕಾದುದು ಹೊರಳಿಸಿದ ಹೊಸ ಧೋರಣವಲ್ಲ, ಅಥವಾ ನೂತನ ಕರಣಾರವಲ್ಲ, ಆದರೆ ಒಳ್ಳೆಯ ಅಡಳಿತ ಅವರಿಗೆ ಬೇಕು.

ಂ ಂ ಂ

ಬೊಜ್ಜು ಬೆಳೆದ ಶಾಸನ ಸಭೆಯು ಸಂಖ್ಯಾ ಬಲವು ಕಡಿಮೆಯಾದರೆ ಅದರ ಆರೋಗ್ಯವು ಸುಧಾರಿಸುತ್ತದೆ.

ಂ ಂ ಂ

ನಂಬಿ ಕರೆದೊಡೆ ಹಿ ಎಂಬವನೆ ಶಿವನು.

ಂ ಂ ಂ

ಸತ್ಯಾರ್ಥ ಧರ್ಮವ ನಿಶ್ಚಿತ ಭೋಧಿಸೆ ಹೊತ್ತಿನ ಮನಸಿಗೆ ಸೂಗಸೀತೆ.

ಂ ಂ ಂ

ಸಂಲಾ ಸೇವಕನಾಗಿರುವದರಿಂದಲೇ ದೇವನು ದೇವನಾಗಿರುತ್ತಾನೆ.

ಂ ಂ ಂ

ಸದ್ಗುಣವು ಏಕಾಕಿಯಾಗಿ ಇರಲಾರದು. ಅದರ ಅನುಷ್ಠಾನವನ್ನು ಮಾಡುವವರಿಗೆ ನೆರೆಹೊರೆಯವರು ಸುಲಭವಾಗಿ ದೊರೆಯುವರು.

ಂ ಂ ಂ

ಜಗತ್ತಿಗೆ ಶಾಂತಿ ದೊರೆತೇ ತೀರುವುದು. ಮನುಷ್ಯನು ಉತ್ತಮನಾಗುವನೆಂಬ ಕಾರಣದಿಂದಲ್ಲ. ಆದರೆ ವಿಶ್ವದ್ದು ಹೊಸ ವ್ಯವಸ್ಥೆ, ಹೊಸ ವಿಜ್ಞಾನ, ಹೊಸ ಅರ್ಥ ಪದ್ಧತಿ ತಲೆದೋರಿ ಶಾಂತಿಯನ್ನು ಪ್ರಸ್ತಾಪಿಸುವವು.

ರಾಷ್ಟ್ರಪತಿಗಳಿಗೊಂದು ವಿನಂತಿ ಪತ್ರ

(ಬಂಭತ್ತನೇ ಸುಟದಿಂದ)

ಇಲ್ಲ. ಉತ್ತರದ ಪಂಜಾಬದ ಗೋಧಿ ದಕ್ಷಿಣಕ್ಕೆ ಸಾಗಾಣಿಕೆಯಿಲ್ಲ. ದವಧಾನ್ಯಗಳ ವಿತರಣೆ ವಿಸ್ಮಯಕಾರಕವಾಗಿದೆ. ಅಕ್ಕಿ ತಿನ್ನುವವರಿಗೆ ಗೋಧಿ ಸಂಚಯ. ಗೋಧಿ ತಿನ್ನುವವರಿಗೆ ಅಕ್ಕಿಯ ಪರ್ಯಾಯ. ಕಳ್ಳನೇಟಿಸುವಲ್ಲಿ ಎರ್ಲಾ ಸಿಗುತ್ತದೆ. ಸರಕಾರವಾದ ಸಂಸ್ಥೋಣದ ನೆರವಲ್ಲಿ ಕೀನಾ (ಕೇರಸ್) ಅನ್ನಕ್ಕೆ ಇಂಬು ಮಾಡಿದೆ. ಕ್ಷಾರ ಗಿಂತ ಬೆಳ್ಳಕ್ಕೆ ಕ್ರಮ ಹೆಚ್ಚು—ಎಂದರೆ ತೆಗ್ಗಾಲಿ ಗಾವನ ಮಾಡಿ ಕೂಡ ಕೆಯ ಕಂತಂಬ ವಿಚ್ಛಾ ಮಾಡಿತ್ತೇನೆ? ಅಕ್ಕಾ ಸಂಬಾಗಳನ್ನು ನಿಷ್ಪ ಮಾಡಿದಿ. ವಿದೇಶೀ ಅಮದುಗಳನ್ನು ನಿಷ್ಕ್ರಿಯ. ದೈಶರ ದೇಶ ಮಹಾಭಾರತ ಸ್ವಾತಂತ್ರ್ಯಗಳಿ ಇಪ್ಪತ್ತು ವರ್ಷಗಳಾದ ಬಳಿಕವೂ ಪರಾವಲಂಬಿಯೆಂದಾದರೆ— ಸ್ವಾವಲಂಬನೆಂದು?

ಗಿರಣಿಗಳಲ್ಲಿ ಒಟ್ಟೆಯ ಪ್ರಳಯವಾಗಿದೆಯಂತೆ! ಎಷ್ಟೋ ಮಿಲ್ಲುಗಳನ್ನು ಮುಚ್ಚಲಾಗಿದೆ. ಯಾಂತ್ರಿಕ ಉತ್ಪಾದನೆಯ ನಿಮಿತ್ತ ಕೈಮಗ್ಗ ಮತ್ತು ಕುಶಲ ಕೈಗಾರಿಕೆಗಳು ಸಂಪೂರ್ಣ ನಾಶವಾಯಿತು! ಬಟ್ಟೆಬರೆಗಳಿಗೆ ನಿರಾಕಯಿ.ಲ್ಲವಂತೆ? ಒಂದು ಅಂಗ ವಸ್ತ್ರಕ್ಕೆ ಮೂರು ರೂಪಾಯಿ ಬೆಲೆ ಕೊಡಬೇಕಾದರೆ ಭಾರತದ ಪ್ರಜೆ ಶ್ರೀಸಾಮಾನ್ಯ ತನ್ನ ವೈಕೈಗಳನ್ನು ಬಟ್ಟೆಯಿಂದ ಮುಚ್ಚಿಯೇನೇ? ಗಿರಣಿಯೊಡೆಯರಿಗೆ ಅಧಿಕ ಉತ್ಪಾದನೆ ಮತ್ತು ಮಾರಾಟದಲ್ಲಿ ವಿಶ್ವಾಸವಿಲ್ಲ. ಅವರಿಗೆ ಅಧಿಕ ಲಾಭ ಮತ್ತು ಕಡಿಮೆ ಉತ್ಪಾದನೆಯ ಸೂತ್ರ ಸಾಕು.

ದೇಶದಲ್ಲಿ ಮನುಷ್ಯರಗಳು, ಬೀಡಿ ಕಟ್ಟುವವರಿಂದ ಹಿಡಿದು ಸಾವಿರ ರೂಪಾಯಿಗಳೂ ಹೆಚ್ಚಿನ ಸಂಬಳ ಪಡೆಯುವ ಕಾರ್ಮಿಕರೂ ಸಂಪಿನಲ್ಲಿ ಧಾರವಹಿಸುತ್ತಾರೆ. ಇಲ್ಲವಾದರೆ ವರ್ಷಕ್ಕೆ ಮೂವತ್ತು ನಾಲ್ವತ್ತು ಸಹಸ್ರಕ್ಕಿಂತಲೂ ಹೆಚ್ಚು ವೇತನ ಪಡೆಯುವ "ಎರ್ ಇಂಡಿಯಾ"ದ (Air India) ರಾಜ ವೇತನ ಗಳಿಸುವ ಕಾರ್ಮಿಕರೂ ಮುಷ್ಕರ ಮಾಡುವುದರಲ್ಲಿ ಅರ್ಥವಿದೆಯೇ?

ಕಾರ್ಮಿಕ ಸಂಘಟನೆಯು ದುಷ್ಪರಿಣಾಮ! ಕಾರ್ಮಿಕರ ಸಂರಕ್ಷಣಾ (Trade Union) ಕಾಯಿದೆಗಳ ದುರುಪಯೋಗ. ದೇಶದಲ್ಲಿ ಮಹಾ ಮಹಾ ಘಟಿಸುತ್ತಿದ್ದಾರೆ. ಕಾರ್ಮಿಕರ ಮುಂದಾಳುಗಳಿದ್ದಾರೆ. ಒಬ್ಬ ಮಹಾತ್ಮನಾದರೂ ತನ್ನ ಹಿಡಿತದಡಿಯಲ್ಲಿನ ಕೆಲಸಗಾರರು ಸದಸ್ಯರಿಗೆ "ಹೆಚ್ಚು ಕೆಲಸ ಮಾಡಿ ದೇಶದ ಐಶ್ವರ್ಯವನ್ನು ಹೆಚ್ಚಿಸಿರಿ"— ಎಂಬ ಸೂಕ್ಷ್ಮ ಬುದ್ಧಿ ಮಾತನ್ನು ಹೇಳುವವನಿಲ್ಲ. ಒಂದು ವೇಳೆ ಅಂತಹ ಪುಣ್ಯಾತ್ಮನೊಬ್ಬ ಸಲಹೆ ಸೀಡಿದರೂ, ಕೆಲಸಗಾರರೂ ಫ್ಯಾಕ್ಟರಿಯಿಂದ ಸಂಪತ್ತು ಉತ್ಪಾದನೆಗಳನ್ನು ಹೆಚ್ಚಿಸಿದರೂ ಅವನ್ನು ಗಣನೆಗೆಕೊಳ್ಳುವ ಭಂಡ ಸಾಕಾರನಿಲ್ಲ. ಮುಂಗುಸಿ-ಪಾವಿಸ ತೆರದಲ್ಲಿ ದುಡಿಯುವವರು ಮತ್ತು ದುಡಿಯುವವರು ವರ್ತಿಸಿದರೆ ದೇಶದ ಉದ್ಧಾರವೆಂತಾದೀತು? ಆದುದರಿಂದ ಕಾರ್ಮಿಕರು ವೃಥಾ ಮುಷ್ಕರ ಹೊಡೆದ ವ್ಯವಸ್ಥೆಯಾಗಬೇಕು. ಭಂಡವಾಳಗಾರರು ಮಾಲಿಕರು ಕಾರ್ಮಿಕರ ನ್ಯಾಯವಾದ ಹೆಕ್ಕುರ್ಕಳವೆಗಳನ್ನು ಮನ್ನಿಸಿದವರನ್ನು ಶಿಕ್ಷೆಗೆ ಗುರಿಪಡಿಸಬೇಕು.

ಬಸ್ಸು ನೌಕರರಿಂದ—ರೈಲು ನೌಕರರಿಂದ ಮನೆ ಬಂದಂತೆ ಒಂದು ತಿಂಗಳ ಮುಷ್ಕರ ನಡೆದರೆ ಈ ದೇಶದಲ್ಲಿ ರಾಜ್ಯ ನಡೆದೀತೇ? ಈ ಹುಚ್ಚಾಟಗಳಿಂದ ದೇಶದ ಉನ್ನತಿ ಸಾಧಿಸೀತೇ? ಉತ್ಪಾದನೆಯಲ್ಲಿ ಪ್ರಗತಿಯಾಗಿ ಸಂಪದಭಿವೃದ್ಧಿಯಾದೀತೇ?

ಸ್ವಾತಂತ್ರ್ಯದ ದುರುಪಯೋಗವಾಗುತ್ತದೆ. ಕಳ್ಳನೇಟಿಸುವವಂಗೆ ಸ್ವಾತಂತ್ರ್ಯ. ಸುಳ್ಳು ಹೇಳುವವಂಗೆ ಸ್ವಾತಂತ್ರ್ಯ. ನೀತಿ-ಗೀತಿಗಳಿಗೆ ಬೆಲೆಯಿಲ್ಲ. ಶಾಂತಿ-ಅಹಿಂಸೆಗಳಿಗೆ ಬೆಲೆಯಿಲ್ಲ. ಗೊಂದಲವೆಬ್ಬಿಸಿದವರಿಗೆ ಸಮಪಾಲು. ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಸಿದವರಿಗೆ ಮುಂದಾಳು. ಯಾರು ಕಲ್ಲನ್ನು ಎಸೆಯುತ್ತಾರೋ ಅವನೇ ಜಾಣ. ಯಾರು ಉದ್ದುದ್ದ, ತಲೆ ಬುಡವಿಲ್ಲದ ಭಾಷಣ ಕೊಡ.ತ್ತಾನೋ ಅವನೇ ಧುರೀಣ. ಒಂದು ಪ್ರಾಂತದವ ಇನ್ನೊಂದು ಪ್ರಾಂತಕ್ಕೆ—ಭಾರತದಲ್ಲಿ ಬೇಕಾದೆಡೆಗೆ ಹೋಗಿ ವ್ಯವಹಾರ-ಜೀವನ ಕ್ರಮ ಮಾಡುವ ಅಧಿಕಾರ ಸಂವಿಧಾನದಲ್ಲಿ ಮೂಡಿಸಿದ್ದಾಗ್ಯೂ "ಶಿವಸೇನೆ"ಯಂತಹ ದುರಾಡಳಿತಕ್ಕೆ ಏನೆನ್ನಬೇಕು? ಈ ವಿಷ ಬೀಜ ಈಗ ದೇಶದಾದ್ಯಂತ ಪಸರಿದೆ. ಎಲ್ಲಿ ಕಂಡರಲ್ಲಿ ಸೇನೆ. ಭಾರತ ಸೇನೆಯೊಂದನ್ನು ಬಿಟ್ಟು ಬೇರಾವ ಸೇನೆಯನ್ನಾದರೂ ಕಟ್ಟಲು—ಜರಗಿಸಲು ಅಧಿಕಾರವಿದೆಯೇ? ಪ್ರಾಂತ ಪ್ರಾಂತಗಳೊಳಗೆ ನೀರಿಗಾಗಿ—ನದಿ ನೀರಿಗಾಗಿ—ಜಗಳ.ಭೂಮಿ ಗಾಗಿ ವಿವಾದ. ಗಡಿ ಸರಹದ್ದುಗಳಿಗಾಗಿ ಆಂದೋಲನ! ಇದೆಲ್ಲ ಸ್ವರಾಜ್ಯ ಮತ್ತು ಸ್ವಾತಂತ್ರ್ಯದ ಸುಲಕ್ಷಣಗಳೇನೇ?

ಭಾಷಾವಾರು ಪ್ರಾಂತದ ವಿಭಜನೆ ಪ್ರಾರಂಭವಾದಂದಿನಿಂದ ದೇಶದ ಐಕ್ಯ ಸಿಕ್ಕಾಕಟ್ಟೆಯಾಗಿದೆ. ಜಾತಿ-ಜಾತಿಯೊಳಗೆ ಜಗಳ. ಭಾಷೆಯ ಹೆಸರಿನಲ್ಲಿ ವೈಮನಸ್ಸು ದ್ವೇಷ. ಈ ರೀತಿಯಲ್ಲಿ ದೇಶ ನಡೆದರೆ ನಾವು ಎತ್ತ ಸಾಗ.ವೆವು ಎಂಬುದನ್ನು ದೇವರೇ ಬಲ್ಲ!

ಒಂದು ದೇಶ, ಒಂದು ಭಾಷೆ

ನಾವೆಲ್ಲರೂ ಭಾರತೀಯರು. ನಮ್ಮ ಭಾಷೆ ಭಾರತಿ ಎಂಬ ಗತಿಯಲ್ಲಿ ನಾವು ಮುನ್ನಡೆಯದಿದ್ದರೆ ನಮ್ಮ ನಾಶವನ್ನು ನಾವೇ ಕೈಗೊಂಡಂತಾಗುತ್ತದೆ. ಪ್ರಚಲಿತ ಭಾಷೆಯಲ್ಲಿ ಒಮ್ಮತವಿಲ್ಲದೆಂದಾದಲ್ಲಿ ಬೇರೊಂದು ಭಾಷೆಯ ಸೃಷ್ಟಿಯಾಗಲಿ. ಸಾವಿರಾರು ವರ್ಷಗಳಿಂದ ರೂಪ್ಯಾ, ಅಣೆ, ಪೈಗಳೆಂದು ಲೆಕ್ಕವಾಡುತ್ತಿದ್ದ ಭಾರತದಲ್ಲಿ ದಶಮಾಂಶ ಪದ್ಧತಿಯು ಪ್ರಾರಂಭವಾಗಿಲ್ಲವೆ! ಇದೇ ರೀತಿಯಲ್ಲಿ ಭಾಷೆ ಬರಲಿ. ಸಾವಿರಾರು ವರ್ಷಗಳ ನಂತರ ಇಸ್ರಯೇಲ್ ಜನರು "ಹಿಬ್ರೂ" ಭಾಷೆಯನ್ನು ಬಳಕೆಗೆ ತಂದಿರುವಾಗ ಭಾರತ ಸಂಸ್ಕೃತವನ್ನೇಕೆ ದೇಶ ಭಾಷೆಯನ್ನಾಗಿ ಮಾಡಬಾರದು? ಬೇಕಾದರೆ ಒಂದು ಹೊಸ ಭಾಷೆಯ ನಿರ್ಮಾಣವಾಗಲಿ. ಆದರೆ ಭಾಷೆಯೊಂದು, ದೇಶವೊಂದು—ಆಗಬೇಕು. ಅರ್ಥಾತ್ ನಾನು ಮರಾಠಿ, ಅವನು ಬಂಗಾಲಿ, ಇವನು ಪಂಜಾಬಿ, ಉಳಿದವರು ಮದರಾಸಿಗಳು ಎಂಬ ಪರಿಪಾಠ ನಿಲ್ಲಬೇಕು. ದೇಶದಲ್ಲಿ ದೇಶಪ್ರಿಯ ತಜ್ಞರಿಗೇನೂ ಕೊರತೆಯಿಲ್ಲ. ರಾಜಕೀಯ ಬಣ—ಪಂಗಡಗಳ ಪಿಕಲಾಟದ ದೆಸೆಯಿಂದಾಗಿ ಅನೇಕರಿಗೆ ರಾಜಕೀಯ ಇನ್ನು ಬೇಕಾಗಿಲ್ಲ. ಇದನ್ನು ಸರಕಾರ ಗಮನಿಸಬೇಕು.

ಇಲ್ಲವೆ ಪ್ರತಿಯೊಂದು ಪ್ರಾಂತ ಭಾಷೆಯವರೂ ತಮ್ಮ ಭಾಷೆಯನ್ನು ಹಿಂದೀ ಅಕ್ಷರಗಳಲ್ಲಿ ಬರೆಯುವ ಕ್ರಮ ಬರಬೇಕು. ಉದಾಹರಣೆಗೆ Post Office, Railway Station, Aeroplane — ಮುಂತಾದ ಶಬ್ದಗಳನ್ನು ಇದ್ದಂತೆ ಎಲ್ಲಾ ಪ್ರಾಂತೀಯ ಭಾಷೆಯಲ್ಲೂ ಅಳವಡಿಸಬಹುದು. ಇನ್ನೂರು ವರ್ಷ ಆಂಗ್ಲೇಯರ ಆಡಳಿತ ಇಂಗ್ಲೀಷಿನಲ್ಲಿ ನಡೆದರೂ ಪ್ರಾಂತೀಯ ಭಾಷೆಗಳ ಅವಸಾನವಾಗಿಲ್ಲ. ಒಂದು ದೇಶದ ಅವರಣದಲ್ಲಿ ನಾವು ಮುನ್ನಡೆಯಬೇಕಾದರೆ ಬದುಕಿ ಬಾಳಿ ಬೆಳಗಬೇಕಾದರೆ ಒಂದು ಭಾಷೆ ಬೇಕೇ ಬೇಕು.

ಪ್ರಾಥಮಿಕ ಮಟ್ಟದ ವಿದ್ಯಾಭ್ಯಾಸವನ್ನು ಪ್ರಾಂತೀಯ ಭಾಷೆಯಲ್ಲಿ ಕಲಿಸಿ ನಂತರದ ಉನ್ನತ ವಿದ್ಯಾಭ್ಯಾಸ ಶಿಕ್ಷಣ ಕ್ರಮ ದೇಶ ಭಾಷೆಯಲ್ಲಿ ನಾಗಬೇಕು. ಇಲ್ಲವೆ ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಹೋಗಿ ಕಲಿಯಬೇಕಾದ ಪ್ರಸಂಗದಲ್ಲಿ ಎಂತಹ ಅನರ್ಥವಾದೀತು? (ಉದಾ: ಉಡುಪಿಯ ವಿದ್ಯಾರ್ಥಿಗೆ ಬನಾರಸ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವ ಅವಕಾಶವಿಲ್ಲವಾಗುವುದು)

ಜಿಲ್ಲಾ ಕಲೆಕ್ಟರ್, ಡೆಪ್ಯೂಟಿ ಕಲೆಕ್ಟರ್ ಮುಂತಾದ ಎಲ್ಲಾ ಅಧಿಕಾರಿ ವರ್ಗದವರನ್ನು ಭಾರತೀಯರು ಅಂದರೆ ವಿವಿಧ ಪ್ರಾಂತೀಯರಿಂದ ತುಂಬ ಬೇಕು. ಹಿಂದುಳಿದ ಮತ್ತು ಮುಂದುಳಿದ ಜಾತಿ ನೀತಿಗೆ ಮುಟ್ಟುಗೋಲು ಹಾಕಬೇಕು. ವಿದ್ವತ್ತಿಗೆ ಬೆಲೆಬೇಕೇ ವಿನಾ ಜಾತಿಗಲ್ಲ. ನೀತಿಗೆ ಮರ್ಯಾದೆ ಸಲಬೇಕೇ ವಿನಾ ಕೋತಿಗಲ್ಲ. ಅಹರ್ತೆಗೆ ಅವಕಾಶವಿಲ್ಲದ ರಾಜ್ಯದಲ್ಲಿ ಅರಾಜಕತೆಗೆ ನೆಲೆಕಟ್ಟುತ್ತದೆ.

ಈಗಾಗಲೇ ರಾಜ್ಯಘಟನೆ ಅನೇಕ ಬಾರಿ ತಿದ್ದುಪಡಿಗಳಿಗೆ ಒಳಗಾಗಿದೆ. ಮೂಲಭೂತ ಹಕ್ಕುಗಳಿಗೂ ಕೊಡಲಿಯೇಟು ದಕ್ಕಲಿದೆಯೆಂಬ ಮಾತು ಕೇಳಿ ಬರುತ್ತಿದೆ. ಸುಪ್ರೀಂ ಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ಶ್ರೀ ಕೆ. ಸುಬ್ಬರಾಯರು ಅಭಿಪ್ರಾಯದಂತೆ ಸಂವಿಧಾನ ಸರ್ವಶ್ರೇಷ್ಠವಂತೆ. ಲೋಕಸಭೆಯೂ

ಸ್ವಾತಂತ್ರ್ಯ ದಿನದ ಹಾರ್ದಿಕ ಶುಭಾಶಯಗಳು!

ಜ್ಯೋತಿ ಟಾಕೀಸ್

ಮಂಗಳೂರು - 1.

ನಿಮ್ಮ ಮೆಚ್ಚಿನ ಚಿತ್ರಮಂದಿರ!

ಪ್ರದರ್ಶಿತವಾಗುತ್ತಿರುವ ಚಿತ್ರ—

ಮೂನ್ರೆಳುತ್ತು (ತಮಿಳು)

ಬರಲಿರುವ ಆಕರ್ಷಣೆಗಳು—

ಪುದಿಯ ಭೂಮಿ (ತಮಿಳು)
ರೌಡಿ ರಂಗಣ್ಣ (ಕನ್ನಡ)
ಕನವನ್ (ತಮಿಳು)

JYOTHI TALKIES
MANGALORE-1

ಅದನ್ನು ಶಿಕ್ಷಾಪಟ್ಟಿತಿದ್ದು ಪಡಿಗೊಳಿಸುವ ಅಧಿಕಾರವಿಲ್ಲವಂತೆ. ಇದೊಂದು ತರ್ಕಾಸ್ಪದವಾದ ಸಂಗತಿ. ಗಣರಾಜ್ಯದಲ್ಲಿ ಪ್ರಜೆಗಳೇ ಪ್ರಭುಗಳು. ಆದರೆ ನಿರಂಕುಶ ಪ್ರಭುಗಳಾಗಬಾರದು. ಜನರು ತಮ್ಮ ಮೂಲಭೂತ ಹಕ್ಕು ಬಾಧ್ಯತೆಗಳೊಂದಿಗೆ ಮೂಲಭೂತ ಕರ್ತವ್ಯ ಪರಿಪಾಲನೆಯನ್ನೂ ಕಲಿಯಬೇಕು. ನಮ್ಮ ಊರಲ್ಲೇ ಉಕ್ಕಿನ ಕಾರ್ಖಾನೆಯೊಗಬೇಕು; ಸ್ಕೂಲೆ ಕಾರ್ಖಾನೆಯೊಗಬೇಕೆಂದು ತುಂಟ ಹಟ ಹಿಡಿದು ವಿಧ್ವಂಸಕ ಕೃತಿಗಳಲ್ಲಿ ತೊಡಗಿದರೆ ಅಂತಹ ಆಂದೋಲನಗಳನ್ನು ನಿರ್ದಾಕ್ಷಿಣ್ಯದಿಂದ ಹತ್ತಿಕ್ಕಬೇಕು. ದೇಶದಲ್ಲಿ ಪ್ರಜೆಗಳು ನಿರ್ಭೀತರಾಗಿರಬೇಕಾದುದೇನೋ ನೂರುಪಾಲು ನಿಜ ಮತ್ತು ಸತ್ಯ. ಆದರೆ ನಿರ್ಭೀತಿ ಮನಬಂದಂತೆ ವರ್ತಿಸುವ ಸಲುವಾಗಿ ಅಲ್ಲ. ಕಾಯಿದೆ ಕಾನೂನುಗಳ ಉಲ್ಲಂಘನೆಕ್ಕಾಗಿ ಅಲ್ಲ. ಈ ಮಹಾ ದೇಶದಲ್ಲಿ ಒಂದೇ ಬಾರಿ ಎಲ್ಲಾ ಪ್ರಾಂತದ ಜನರಿಗೆ ಅಥವಾ ಪ್ರದೇಶಗಳಿಗೆ ಸಮನಾದ ಸೌಲಭ್ಯಗಳನ್ನು ರಚಿಸುವ ಕಾರ್ಯ ಸುಲಭವಲ್ಲ. ಹಿಂದುಳಿದ ಪ್ರಾಂತಗಳಲ್ಲಿ, ಉದ್ದಿಮೆ, ಕೈಗಾರಿಗೆ, ಕಾರ್ಖಾನೆಗಳಿಗೆ ಅವ್ಪದಬೇಕು. ಒಂದು ಪಕ್ಷ ಅಂತಹ ಅವಕಾಶ ಸಿಗದಾಗ ರೈಲು ಬಂಡಿ ಉರುಳಿಸುವುದರಲ್ಲಿ ಅರ್ಥವಿಲ್ಲ. ಸಾರ್ವಜನಿಕ ಅಂದರೆ ದೇಶದ ಸ್ವತ್ತುಗಳನ್ನು ಉರಿಸುವುದರಲ್ಲಿ, ಕೆಡಿಸುವಲ್ಲಿ ನ್ಯಾಯವಿಲ್ಲ. ಅನ್ಯಾಯವೆಂದೂ ನ್ಯಾಯವಾಗದು!

ಇದಕ್ಕೆಲ್ಲಾ ಕಾರಣ ಮೂನವೀಯ ಸ್ವಾರ್ಥ. ಆದುದರಿಂದ ಲೋಕ ಸಭಾ ಸದಸ್ಯರನ್ನು ಆರಿಸುವಾಗ ಪರ ಪ್ರಾಂತೀಯರಿಗೆ ಅವಕಾಶ ಕೊಡಬೇಕು. ಒಬ್ಬ ಸದಸ್ಯ, ತನ್ನ ಯೋಗ್ಯತೆ, ನಿಪುಣತೆ, ಕಾರ್ಯ ಕುಶಲತೆ ಮತ್ತು ಸಮರ್ಥತೆಗಳನ್ನು ಬೇರೆ ಪ್ರಾಂತದಲ್ಲಿನ ಜನರಿಗೆ ಪ್ರಕಟಿಸಿ ಇಲ್ಲವೇ ಪ್ರಸ್ತೀಕರಿಸಿ ಆರಿಸಿ ಬರಬೇಕೇ ವಿನಾ ನಿರಕ್ಷರ ಕುಕ್ಷಿಗಳಿಗೆ ಮೋಸಮಾಡಿ ಅಲ್ಲ. ಲೋಕ ಸಭಾ ಸದಸ್ಯರು ದೇಶ ಕಲ್ಯಾಣಕ್ಕಾಗಿ ದುಡಿಯಬೇಕೇ ವಿನಾ ನಮ್ಮ ಮನೆ, ನಮ್ಮ ಊರು, ನಮ್ಮ ಜಿಲ್ಲೆ ನಮ್ಮ ಪ್ರಾಂತ ಎಂಬ ಸಂಕುಚಿತ ದೃಷ್ಟಿಯಿಂದಲ್ಲ. "ನಾನು ನಮ್ಮ ದೇಶದ ಪ್ರತಿನಿಧಿ, ನಮ್ಮ ದೇಶದ ಕಲ್ಯಾಣ ನನ್ನ ಕಲ್ಯಾಣ. ನಮ್ಮ ಕಲ್ಯಾಣ" ಎಂಬ ದೂರ ದೃಷ್ಟಿ ಮತ್ತು ವಿಶಾಲ ಭಾವನೆ ಬೆಳೆಯಬೇಕು.

ಮಂತ್ರಿ ಮಾಡಿದರು ಆರ್ಥಿಕ, ಸಾಮಾಜಿಕ ಮತ್ತು ಇತರ ಆಧಾರ ಮತ್ತು ಅನುಭವಗಳ ಮೇಲೆ ಅವಲಂಭಿಸಿ ತಮ್ಮ ನಿರ್ಧಾರವನ್ನು ವ್ಯಕ್ತಪಡಿಸಬೇಕೇ ವಿನಾ ತಮ್ಮ ರಾಜಕೀಯ ಪಂಗಡವನ್ನು ನೆನೆಯ ಬಾರದು. ಒಮ್ಮೆ ಮಂತ್ರಿಯಾಡವನ - ಅವನು ಯಾವ ಖಣಕ್ಕೆ ಸೇರಿದವನೇ ಇರಲಿ. ಸಚಿವಾಲಯ ಸೇರಿದ ಬಳಿಕ ದೇಶದ ಹಿತ ಚಿಂತನೆಯನ್ನೆ ಮಾಡಬೇಕು. ವಿನಾ ಪಂಗಡದ್ದಲ್ಲ.

ಯಾವುದಾದರೊಂದು ಪ್ರಾಂತ ಅಥವಾ ಅಲ್ಲಿನ ಮಂತ್ರಿಮಂಡಲ ರಾಜ್ಯಘಟನೆಯ ವಿರುದ್ಧ ಅಂದರೆ ಮೂಲಭೂತ ಹಕ್ಕುಗಳ ವಿರುದ್ಧ ವರ್ತಿಸಿದ್ದೇ ಆದರೆ ಅಂತಹ ರಾಜ್ಯವನ್ನು ಕೇಂದ್ರ ಸರಕಾರ ಉರುಳಿಸಲೇ ಬೇಕು. ರಾಷ್ಟ್ರಪತಿಗಳು ಅಧಿಕಾರ ಚಲಾಯಿಸಲೇ ಬೇಕು.

ಇಲ್ಲದಾದರೆ ನಮ್ಮ ದೇಶ ಹೊರು ವಿಭಾಗಗಳಾಗುವುದು ಖಂಡಿತ! ಈಗಾಗಲೇ ಪ್ರಾಂತ-ಪ್ರಾಂತಗಳ- ಪ್ರಾಂತ ಸರಕಾರಗಳ ತಿಕ್ಕಾಟಕ್ಕೆ ಪ್ರಾರಂಭವಾಗಿದೆ. ಇದನ್ನೂ ನಿರ್ದಾಕ್ಷಿಣ್ಯದಿಂದ ಹತ್ತಿಕ್ಕದಿದ್ದರೆ ನಮ್ಮ ನಾಶವನ್ನು ನಾವೇ ಮಾಡಿಕೊಳ್ಳುತ್ತೇವೆ.

ನಮ್ಮ ರಾಜ್ಯ ಘಟನೆಯಲ್ಲಿ ಅಡಕವಾದ ಮಹಾ ತತ್ವಗಳು ಎಂತವು? ನೆಹರೂ ರವರ ದೂರದರ್ಶಿತ್ವ ಎನ್ನುವ ಮಹೋನ್ನತವಾದುದು? ಭಾರತದ ಜನರಿಗೆ ನ್ಯಾಯ ಸಾಮಾಜಿಕ, ಆರ್ಥಿಕ— ರಾಜಕೀಯ— ಸಮಾನತ್ವ- ಸಮಾನತ್ವ- ಇವಲ್ಲ ಎಲ್ಲಿ ಹೋದುವು?

ಒಂದು ಪ್ರಾಂತದಲ್ಲಿ ಪಾನ ಪ್ರತಿಬಂಧ ಇನ್ನೊಂದು ಪ್ರಾಂತದಲ್ಲಿ ಹೊರು ಅಂಶದ ಮಾದಕ ಪೇಯ ಮತ್ತೊಂದರಲ್ಲಿ ಸೇಕಡಾ ಹತ್ತು ಅಂಶದ ಪೇಯ. ಮತ್ತೊಂದರಲ್ಲಿ ಐದು ಅಂಶದ ಕುಡಿತ. ಒಂದ. ಪ್ರಾಂತದಲ್ಲಿ ಸೇಕಡಾ ಹತ್ತ ವಿಕ್ರಯ ಶುಂಗೆ. ಇನ್ನೊಂದು ಪ್ರಾಂತದಲ್ಲಿ ಏಕಾ. ಮಗು ದೊಂದರಲ್ಲಿ ಮೂರು ಒಂದು ಪ್ರಾಂತದಲ್ಲಿ ಶಿಕ್ಷಣ ಪುಕ್ಕಟೆ: ಕಾಲೇಜು ಮಟ್ಟದ ವರೆಗೆ. ಇನ್ನೊಂದೆಡೆ ಹೈಸ್ಕೂಲು ಮುಗಿಸಬೇಕಾದರೆ ಸಾವಿರಾರು ರೂಪಾಯಿಗಳ ಖರ್ಚು. ಒಂದು ಪ್ರಾಂತದಲ್ಲಿ ಇಪ್ಪತ್ತು ಮೂವತ್ತು ಅಂತಸ್ತಿನ ಮನೆಗಳು; ಇಮೂರತಿ ಸಾದಗಳು. ಇನ್ನೊಂದೆಡೆಯಲ್ಲಿ "ಸೋಪಡಿ ಗುಡಿಸಲು"ಗಳಿಗೂ ಜನರಿಗೆ ಸೌಲಭ್ಯ ಇಲ್ಲ. ಇದೆಂತಹ ಸಮತೆ!—ಕಲ್ಯಾಣ ರಾಜ್ಯ?

ಅಗತ್ಯವೆಂದಾದಲ್ಲಿ ಮಗುದೊನ್ಮೆ ರಾಜ್ಯಘಟನೆಯ ಪುನರ್ರಚನೆಬೂಗಲಿ. ದೇಶದ "ಅರಾಜಕೀಯ" (ಅಪಕ್ಷೀಯ Non-Political) ಮೇಧಾವಿಗಳಿಗೊಂದು ಅವಕಾಶ ಸಿಗಲಿ. ದೇಶ ಒಂದಾಗಿ ಉಳಿಯಲಿ. ಭಾರತ ತನ್ನ ಪ್ರಾಚೀನ ಪ್ರತಿಭೆಯಲ್ಲಿ ಮಗುದೊನ್ಮೆ ಬೆಳೆಯಲಿ. ನವೀನ ಹೆಜ್ಜೆಯನ್ನು ತುಳಿಯಲಿ. ಈ ಹಿನ್ನೆಲೆಯಲ್ಲಿ ಬೇಕಾದ ಕಾರ್ಯಕ್ರಮವನ್ನು ಕೈಗೊಳ್ಳಲಿ. ರಾಷ್ಟ್ರಪತಿಗಳು ನಮ್ಮನ್ನು ರಕ್ಷಿಸುವರೆಂದು ಭರವಸೆಯಿದೆ. ಜೈಹಿಂದ್!

ಶಾಂತ ಚಿತ್ತನಾದ ವ್ಯವಸ್ಥಿತ ಬುದ್ಧಿಯುಳ್ಳವನು ಸಿಟ್ಟಾದರೂ ಅದು ಭಯಂಕರವಲ್ಲ. ಬುದ್ಧಿ ಸ್ಥಿರವಿಲ್ಲದವನು. ಪ್ರಸನ್ನನಾದರೂ ಅದು ಭಯಂಕರವೆ.

ಂ ಂ ಂ

ಸಿಡಿಲ ಹೊಡೆದೊಡೆ ಹಿಡಿದ ಕೊಡೆ ಕಾವುದೆ?

ಂ ಂ ಂ

ನಮ್ಮ ಗ್ರಾಹಕರಿಗೂ ಪ್ರೋತ್ಸಾಹಕರಿಗೂ

ಸ್ವಾತಂತ್ರ್ಯದಿನದ ಶುಭಾಶಯಗಳು!

ಸುವಾಸಿನಿ
ಬೀಡಿ ವರ್ಕ್ಸ್
ಕದ್ರಿ ರಸ್ತೆ—ಮಂಗಳೂರು-3

With best compliments from

THE PARTNERS
SUVASINI
BEEDI WORKS
Kadri Road — Mangalore-3

ಸ್ವಾತಂತ್ರ್ಯದಿನದ ಶುಭಾಶಯಗಳು

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P.
'ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.....

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ರೈತ ಭಾಂದವರ ಜೀವನ ಸಂಗಾತಿ.....

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H.P.) ಮತ್ತು ಪಂಪು ಸೆಟ್ಟುಗಳು.....

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(½ H.P. ಯಿಂದ 2 H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಪೀಟರ್ ಸ್ಟಾರ್ಟರುಗಳು.....

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರುಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಉಕ್ಕಿನ ಮನುಷ್ಯನ ಸವಿನೆನಪು

(ಏಳನೇ ಸುಟದಿಂದ)

ನರಫಿಗೆ ಅವರ—"ಮುಂದೆ ಹೆಚ್ಚೆ ಇಡುವ ಮೊದಲು, ಈ ದೇಶದಿಂದ ನೀವು ಮಿತ್ರರಂತೆ ಹೋಗಲು ಇಚ್ಛಿಸುತ್ತೀರೋ ಅಥವಾ ಹೆಣಗಳ ರೂಪದಲ್ಲಿಯೋ ಎಂಬ ಬಗೆಗೆ ನಿನ್ನ ಬ್ರಿಟಿಷ್ ಸರಕಾರದಿಂದ ಕೇಳಿ ತಿಳಿದುಕೊಳ್ಳು." ಎಂದು ಸೂಚನೆಯನ್ನಿತ್ತಿದ್ದರು.

ಸರದಾರರ ಮಾತಿನಿಂದ ಕ್ರುದ್ಧನಾದ ಗವರ್ನರನು ಅವರ ಜೊತೆ ಚರ್ಚಿಸಲನುವಾದಾಗ-"ನೋಡಿ,ನೀವು ಸುಮ್ಮಸುಮ್ಮನೆ ನನ್ನ ಸಮಯ ಹಾಳು ಮಾಡುತ್ತಿದ್ದೀರಿ, ನನಗೆ ಏನು ಹೇಳಲಿತ್ತೋ ಅದನ್ನ ನಾನು ಹೇಳಿ ಆಗಿದೆ. ಒಂದು ವೇಳೆ ನೊದಲ ಗುಂಡು ನಿಮ್ಮ ಕಡೆಯಿಂದ ಹಾರಿದರೆ,ದಾದರೆ. ಅನಂತರ ಜರಗಬಹುದಾದ ಎಲ್ಲಾ ಅನಾಹುತಗಳ ಹೊಣೆ ಬರೀ ನಿಮ್ಮದು ಮಾತ್ರ ಎಂಬುದು ನೆನಪಿರಲಿ." ಎಂದು ಸರದಾರರು ಗರ್ಜಿಸಿದರು.

ಅನಂತರ ಪಟೇಲರು ಮೌನವಾದರು. ಅಂದ್ರ ಜಲಪಡೆ ಮುಂಬಯಿಯತ್ತ ಹೊರಟಿತ್ತು. ಸರದಾರರೇ ಏನಾದರೂ ಮಾಡಿರಿ. ಸ್ಥಿತಿ ಬಿಗಡಾಯಿಸುತ್ತಿದೆ. ಎಂದು ಜನ ಮೊರೆಯಿಟ್ಟರು, ಆದರೆ ಸರದಾರರು ತಲೆ ತೆರೆಯಲಿಲ್ಲ.

ಇಡೀ ದೇಶ ಕ್ಷೋಭೆಗೊಂಡಿತ್ತು. ದೇಶದ ಹಿರಿಯರು ನಾಯಕರೆಲ್ಲರೂ ಪಟೇಲರ ಮೇಲೆ ಪ್ರಹಾರ—ಒತ್ತಡವನ್ನು ಹಾಕಿದ್ದರು. ಮುಂಬಯಿ ಸಿಡಿದ್ದಿನ ಭಂಡಾರದ ಮೇಲೆ ನಿಂತಿದೆ, ಆಂಗ್ಲರು ಅದನ್ನು ಧೂಳೀಪಟ ಮಾಡುವರು ಎಂದು ಇಡಿ ದೇಶ ಬಾಯಿ ಬಾಯಿ ಬಿಡುತ್ತಿತ್ತು. ಉರಿಯುತ್ತಿರುವ ಕಣ್ಣುಗಳಿಂದ ನೋಡಿದರೂ ವಿನಾ ಪಟೇಲರು ಬಾಯಿ ತೆರೆಯಲಿಲ್ಲ.

ಗಾಬರಿಗೊಂಡ ಪಂ. ಜವಾಹರಲಾಲ ನೆಹರೂ ಕೂಡ ಮುಂಬೈಯತ್ತ ಧಾವಿಸಿದರು. ಪಟೇಲರು ಇದರಿಂದ ಕೋಪಗೊಂಡು—"ನೀವೆಲ್ಲಾ ಯಾಕೆ ಇಷ್ಟು ಹೆದರುತ್ತೀರಿ? ಆಂಗ್ಲರ ಬಲಾಬಲಗಳು ನನಗೆ ತಿಳಿದಿರುವಂತೆಯೇ, ನನ್ನ ಬಲಾಬಲಗಳು ಆಂಗ್ಲರಿಗೂ ತಿಳಿದಿವೆ. ಈ ಕುಸ್ತಿಯ ಕಣದಿಂದ ನೀವು ತುಸು ದೂರ ಇರಿ" ಎಂದು ಬಿಟ್ಟರು.

ಸರದಾರರ ಹಿಡಿತ ಸರಿಯಾಗಿಯೇ ಇತ್ತು. ಗವರ್ನರನು ಸರದಾರರ ಸಹಕಾರ ಯಾಚಿಸಿದ ಗಳಿಗೆ ಹಾವಾಗಲು ತಣ್ಣಗಾಯಿತು. ಅದೇ ದಿನ ಮುಂಬೈಯ ಚೌಪಾಟಿಯಲ್ಲಿ ಸೇರಿದ್ದ ವಿಶಾಲ ಜನಸಮೂಹವನ್ನು ಉದ್ದೇಶಿಸಿ ಸರದಾರ ಪಟೇಲ ಅವರು.—"ನನ್ನ ದೇಶದ ಶಕ್ತಿಯನ್ನು ನಾನು ಬಲ್ಲೆ. ಅದನ್ನ ಬಲಹೀನತೆ ಎಂದು ತಿಳಿಯುವವನು ಮೂರ್ಖ. ನಾವು ಯಾರ ಸ್ವಾತಂತ್ರ್ಯವನ್ನೂ ಅಪಹರಿಸಲಾರೆವು. ಆದರೆ ನಮ್ಮ ಸ್ವಾತಂತ್ರ್ಯಕ್ಕೆ ಆತಂಕವುದಗಿಲು ಇಡಿ ಜಗತ್ತೇ ಒಂದಾಗಿ ಬಂದರೂ ಪ್ರಾಣದನ್ನು ಧೂಳೀಪಟ ಗೈಯುವೆವು."ಎಂದರು.

ಸರದಾರರ "ಉಕ್ಕು"ತನದ ಇನ್ನೊಂದು ಉದಾಹರಣೆ ನೋಡೋಣ—

ಹೈದರಾಬಾದು ಎಂಬ ಹೆಣ್ಣನ್ನು ಆಪರೇಶನ್ ಮಾಡಿ ಮುಗಿಸಿ ಕೆಲವು ದಿನದ ಕಳೆದಿದ್ದವು. ಒಂದು ದಿನ ಅವರು ಭಾರತೀಯ ಜಲಪಡೆಯ ಹೊಸ, ವಿಶಾಲ ಹಡಗದ ಡೆಕ್ಕಿನಲ್ಲಿ ಕುಳಿತು ಸಮುದ್ರಯಾನ ಮಾಡುತ್ತಿದ್ದರು. ಇದ್ದಕ್ಕಿದ್ದಂತೆಯೇ ಹಡಗ ನಿಂತಿತು. ಹಡಗವನ್ನು ನಿಲ್ಲಿಸಿದ್ದೇಕೆ ಎಂದು ಸರದಾರರು ವಿಚಾರಿಸಿದಾಗ, ಕಮಾಂಡರನು

—"ಇಲ್ಲಿಂದ ಗೋವಾದ ಸಮುದ್ರ ಸೀಮೆ-ಆರಂಭವಾಗುತ್ತದೆ.ನಾವುಅದನ್ನು ದಾಟಬಾರದು"ಎಂದನು.

"ಏಕೆ?" ತುಸು ಆಶ್ಚರ್ಯದಿಂದಲೇ ಸರದಾರರು ವಿಚಾರಿಸಿದರು.

"ಏಕೆಂದರೆ ಗೋವೆ ಪೋರ್ಚುಗೀಸರ ಅಧೀನದಲ್ಲಿದೆ" ಎಂದು ಶಾಂತವಾಗಿ ಉತ್ತರಿಸಿದ ಕಮಾಂಡರ್.

"ಅದರಿಂದ ಏನಾಯಿತು? ಇವತ್ತು ಅದು ಪೋರ್ಚುಗೀಸರ ಅಧೀನದಲ್ಲಿರಬಹುದು, ಆದರೆ ಒಂದಲ್ಲ ಒಂದು ದಿನ ನಾವು ಅದನ್ನು ವಶಪಡಿಸಿಕೊಳ್ಳಲೇ ಬೇಕು. ನೀನು ಹಡಗವನ್ನು ಮುಂದುವರಿಸು. ನಾನು ಗೋವೆಯನ್ನು ಸವಿೂಪದಿಂದ ನೋಡಬೇಕು."

"ನಾವು ಗೋವಾದ ಸಮುದ್ರ ಸೀಮೆಯನ್ನು ದಾಟಿದರೆ ನಮ್ಮ ಮೇಲೆ ಗುಂಡುಗಳ ಆಕ್ರಮಣವಾಗಬಹುದು."

"ನೀನು ಕೂಡ ಗುಂಡುನಿಂದಲೇ ಉತ್ತರ ಕೊಡು. ಇದು ಇಷ್ಟು ದೊಡ್ಡ ಹಡಗ ಮತ್ತೆ ಇರುವುದಾದರೂ ಏಕೆ? ನಿನ್ನ ಹತ್ತಿರ ಸೈನಿಕರು ಮತ್ತು ಗುಂಡು ಮದ್ದು ಇಲ್ಲವೇನು?"

"ಇದೆ. ಆದರೆ..."

"ಆದರೆ ಗೀದರೆ ಏನೂ ಇಲ್ಲ. ನೀನು ಹಡಗ ಮುಂದುವರಿಸು. ಗೋವಾದ ಮೇಲೆ ಆಕ್ರಮಣ ಮಾಡು. ಇನ್ನತ್ತೇ ಪೋರ್ಚುಗೀಸರಿಗೂ ಗೊತ್ತಾಗಿ ಬಿಡಲಿ." ಎಂದು ಸರದಾರರು ಆವೇಶದಿಂದ ಉತ್ತರಿಸಿದರು.

ಕಮಾಂಡರ ದಿಗ್ಭ್ರಮೆಗೊಂಡನು. ಕೂಡಲೇ ಅವನು ಚೇತರಿಸಿಕೊಂಡು—"ನಿಮ್ಮ ಅಪ್ಪಣೆಯನ್ನು ಒಂದು ಕಾಗದದ ಮೇಲೆ ಬರೆದು ಕೊಡಿರಿ. ನಾನು ಈಗಲೇ ಆಕ್ರಮಣ ಮಾಡುತ್ತೇನೆ" ಎಂದನು.

ಸರದಾರರು ಒಂದೆರಡು ನಿಮಿಷ ಆಲೋಚಿಸಿ—"ಹೂಂ. ಹೋಗಲಿ ಬಿಡು. ಈಗ ಬೇಡ." ಎಂದರು.

ಯಾರಾದರೂ ಬೇಕೆಂದೇ ಇನ್ನೊಬ್ಬನಿಗೆ ತೊಂದರೆಯೊಯುವುದನ್ನು ಸರದಾರರು ಎಂದೂ ಸಹಿಸುತ್ತಿರಲಿಲ್ಲ. ೧೯೪೦-೪೧ರಲ್ಲಿ ದೇಶದ ಅಗ್ರನಾಯಕರೆಲ್ಲರೂ ಸೆರೆಮನೆಯೊಳಗಿದ್ದರು. ಆಗ ಸರದಾರರು ಕೂಡ ಸೆರೆಮನೆಯಲ್ಲಿದ್ದರು. ಆಹಾರೋಗ್ಯದ ನಿಮಿತ್ತ ಸರದಾರರು ಬಿಸಿನೀರಿನಲ್ಲಿ ಸ್ನಾನಮಾಡುತ್ತಿದ್ದರು. ಜೈಲಿನಲ್ಲಿ ಕೂಡ ಅವರಿಗೆ ಬಿಸಿನೀರನ್ನು ಒದಗಿಸಲು ನ್ಯಾಯಾಲಯ ಆದೇಶ ವಿತ್ತಿತ್ತು. ಆದರೆ ಆ ಜೈಲಿನ ಜೇಲರ ತುಸು ಉದ್ದಟನಾಗಿದ್ದನು. ಅವನು ಯಾವಾಗಲೂ ಸಮಯಕ್ಕೆ ಸರಿಯಾಗಿ ನೀರನ್ನು ಒದಗಿಸದೆ ಸರದಾರರಿಗೆ ತೊಂದರೆಯೊಯುತ್ತಿದ್ದನು. ಹೇಳಿದರೆ ಕೇಳುವ ವ್ಯಾಣಿ ಇದಲ್ಲ ಎಂಬುದು ಅವರಿಗೆ ಮನದಟ್ಟಾಗಿತ್ತು. ಆದುದರಿಂದ ಒಂದು ದಿನ ಅವರು ಜೈಲರನನ್ನು ಕರೆದು-"ನೋಡು, ನಾಳೆಯಿಂದ ಸಮಯಕ್ಕೆ ಸರಿಯಾಗಿ ಬಿಸಿ ನೀರು ಸಿಕ್ಕಿತೋ ಸರಿ. ಇಲ್ಲದಿದ್ದರೆ ನಿನ್ನ ಈ ಮೇಜು ಕುರ್ಚಿಗಳನ್ನೇ ಮುರಿದು ನಾಳೆಯಿಂದ ನೀರು ಬಿಸಿ ಮಾಡಿಕೊಳ್ಳುತ್ತೇನೆ. ಅನಂತರ ನಿನಗೇನು ಮಾಡಲಿದೆಯೋ ನೀನಾ ಮಾಡಿಕೊಳ್ಳು" ಎಂದು ಬಿಟ್ಟರು.

ಸರದಾರರು ಕೇಳಿದಂತೆಯೇ ಮಾಡುತ್ತಾರೆ ಎಂಬ ವಿಷಯ ಎಲ್ಲರಿಗೂ ತಿಳಿದುದೇ ಆಗಿದೆ. ಅನಂತರ ಅದರಿಂದ ಆಗಬಹುದಾದ ಪರಿಣಾಮವನ್ನು ಅವರೆಂದೂ ಲೆಕ್ಕಿಸಿದವರಲ್ಲ. — ಮರುದಿನದಿಂದ ಸರದಾರರಿಗೆ ಜೈಲಿನಲ್ಲಿ ಬಿಸಿ ನೀರು ಸಮಯಕ್ಕೆ ಸರಿಯಾಗಿ ಸಿಗ ತೊಡಗಿತು.

ಇನ್ನೊಮ್ಮೆ ಸರದಾರರು ಜೈಲಿನಲ್ಲಿದ್ದಾಗ, ಒಂದು ದಿನ ಜೇಲರನು ಬಂದು "ಸೊಳ್ಳೆ ಪರದೆ ಹರಿದು ಹೋಗಿರುವುದರಿಂದ ಇಂದಿನಿಂದ ಸೊಳ್ಳೆ ಪರದೆ ಜೈಲಿನಲ್ಲಿ ಕೊಡಲ್ಪಡುವುದಿಲ್ಲ" ಎಂದು ಆದೇಶ ವಿತ್ತನು.

ಸರದಾರರು ರೊಚ್ಚಿಗೆದ್ದರು. ಹೆದರಿ ಕೊಂಡ ಜೈಲರನು ಅವರ ಬಾಯಿಯಿಂದ ತಪ್ಪಿಸಿಕೊಳ್ಳಲಿಕ್ಕಾಗಿ—"ತಾವು ದಯವಿಟ್ಟು ಜೈಲ್ ಸುಪರಿಂಟೆಂಡೆಂಟರನ್ನು ಯಾಕೆ ಬೆಟ್ಟಿಯಾಗಬಾರದು?" ಎಂದರು.

ಸರದಾರರು ತನ್ನ ವಿಶಿಷ್ಟ ಶಾಂತ ಗಂಭೀರ ಸ್ವರದಲ್ಲಿ—"ನಾನು ನನ್ನ ಇಚ್ಛೆಯಿಂದ ಜೈಲಿಗೆ ಬಂದಿಲ್ಲ. ನೀನು ಒತ್ತಾಯದಿಂದ ಕರೆದುಕೊಂಡು ಬಂದಿದ್ದೀರಿ. ಸೊಳ್ಳೆ ಪರದೆ ಒದಗಿಸುವುದು ಸಾಧ್ಯವಿಲ್ಲವಾದರೆ, ಜೈಲಿನ ಬಾಗಿಲು ತೆರೆದುಬಿಡ, ನಾನು ಹೊರಟುಹೋಗುತ್ತೇನೆ. ಪರದೆ ಬಂದಾಗ ತಿಳಿಸು. ಪುನಃ ಬರುತ್ತೇನೆ." ಎಂದರು. ಗಳಿಸುರು ಸರದಾರರ ಮಾತು ಕೇಳಿ ಮೌಢಿಸ್ಯಯೇ ನಗುತ್ತಿದ್ದರು. ಸರದಾರರ ಶಾಂತ—ಗಂಭೀರ ಸ್ವರ ಮತ್ತು ಮಾತು ಕೇಳಿದ ಜೈಲರ ಪಾಪ, ಹೆದರಿ ಕಂಗಾಲಾದನು. ಕೂಡಲೇ ಅವನು ಸುಪರಿಂಟೆಂಡರ ಬಳಿ ಹೋಗಿ ಎಲ್ಲವನ್ನೂ ಹೇಳಿ ಕೊಂಡನು.

ಅನಂತರ ಒಂದು ಗಂಟೆಯೊಳಗಾಗಿ ಎಲ್ಲ ಕೈದಿಗಳಿಗೂ ಸೊಳ್ಳೆ ಪರದೆಯನ್ನು ಒದಗಿಸಲಾಯಿತು.

ಕರ್ತವ್ಯದ ವಾಲನೆಯಲ್ಲಿ ಹಾಗೂ ಕರ್ತವ್ಯವನ್ನು ಪೂರೈಸುವಾಗ ಅವರು ತೀರಾ ಕಠಿಣರಾಗಿ ವರ್ತಿಸುತ್ತಿದ್ದರು. ಆದರೆ ಅವರು ಅಷ್ಟೇ ಮೃದು ಹೃದಯಿಗಳೂ—ಸಂಯಮಿಗಳೂ ಆಗಿದ್ದರೆಂಬುದನ್ನು ಮರೆಯುವಂತಿಲ್ಲ.

(ಮೂಲ:—ಸತ್ಯದೇವ ನಾರಾಯಣ ಸಿನ್ಹಾ)

ಸ್ವಾತಂತ್ರ್ಯ ದಿನದ ಶುಭಾಶಯಗಳು !

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಕೇಟುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಿಷ್ಟವಾದ "ಹೊಟೆಲ್"

ಪ್ರಜೆ ಮತ್ತು ಪ್ರಜ್ಞೆ

(ಅರನೇ ಪುಟದಿಂದ)

ಬಳಸಿಕೊಳ್ಳುತ್ತಾನೆ. ಇದರಿಂದಾಗಿ ಜನರ ವಿತ್ತ — ಜೀವಿತಗಳಿಗೆ ನೆಮ್ಮದಿ—ರಕ್ಷಣೆ, ಸ್ಥಿರತೆಯಿಲ್ಲದ ಪ್ರಸಂಗಗಳೇ ಹೆಚ್ಚಾಗುತ್ತವೆ.

ಇಂಥ ಪರಿಸ್ಥಿತಿ ಪ್ರವೇಶಿಯಬಳನ್ನು ಹೋಗಲಾಡಿಸಲು ಜನತೆಯೇ ಶಮಗೆ ಬೇಕಾದವರನ್ನು ಆರಿಸಿಕೊಳ್ಳುವುದರಲ್ಲಿ ಸ್ವಾತಂತ್ರ್ಯವಿರುವ ಈ ಪ್ರಜಾಪ್ರಭುತ್ವ ಪದ್ಧತಿ ಸರ್ವೋತ್ತಮವಾದುದಾಗಿದೆ. ಆದರೆ ಇದರಲ್ಲಿ ರಾಜಕೀಯ ಪ್ರಜ್ಞೆಯೊಂದು ಪ್ರಬುದ್ಧವಾಗಿ ತೀರ ಅವಶ್ಯ. ಈ ಹಿಂದೆ ರಾಜ ಪ್ರಭುತ್ವ ಮತ್ತು ಬೇರೆ ಬೇರೆ ಬಗೆಯ ಆಡಳಿತವಿರುವಾಗ ಜನ ತಮ್ಮ ರಾಜಕೀಯ ವಿಚಾರದಿಂದ ದೂರ ಉಳಿಯುತ್ತಿದ್ದ ಮೂಲಕ ಇಂದೂ ಈ ರಾಜಕೀಯ ಜಾಗೃತಿ ನಮ್ಮಲ್ಲಿ ತೀವ್ರವಾಗಿ ಆಗುತ್ತಿಲ್ಲವಾಗಿದೆ ರಾಜಕೀಯ ವಿಚಾರ ಕೇವಲ ಕೆಲವರಿಗೆ ಮಾತ್ರ ವಿಷಯವಾಗಿ ಎಲ್ಲರಿಗೂ ಅದು ಬೇಕಾದುದಲ್ಲ ಎಂಬಲ್ಲಿಯವರೆಗೆ ಕೆಲವರ ಭಾವನೆಯೂಗಿದೆ. ಇದರಿಂದಾಗಿ ಸರಿಯಾದ ರಾಜಕೀಯ ಜಿಜ್ಞಾಸೆ—ವೀಕ್ಷಣೆಗಳು ನಮ್ಮಲ್ಲಿ ಹೇಗೆ ಉದಯವಾಗುತ್ತವೆ? ಹೇಗೆ ವಿಕಾಸವಾಗುತ್ತವೆ?

ಇಂದಂತೂ ರಾಜಕೀಯವೆಂದೊಡನೆ ಅದರ ಅರ್ಥವನ್ನೇ ಬೇರೊಂದು ಬಗೆಯಲ್ಲಿ ಮಾಡಲಾಗುತ್ತಿದೆ. ಏನಾದರೂ ತಿಳಿದವರು, ಗೌರವಸ್ಥರು, ಗೌರವದಿಂದ ನೋಸ—ಮಾಟ—ಮಾಯಬಳನ್ನು ಮಾಡುವುದಕ್ಕೆ ರಾಜಕೀಯ ಮಾಡಲಾಗಿದೆ ಎಂದು ಹೇಳುವುದಾಗಿದೆ. ರಾಜಕೀಯ ಶಬ್ದಕ್ಕೆ ಕಲ್ಪಿಸಿದ ಅರ್ಥ ಇಷ್ಟು ಅವಾರ್ಥದ್ದಾಗಿದೆ. ಅದರ ಪಾವಿತ್ರ್ಯವನ್ನು ನಾವೆಷ್ಟು ಉಳಿಸಿ ಕೊಂಡಿದ್ದೇವೆ—ಬಳಸಿ ಕೊಂಡಿದ್ದೇವೆ ಎಂಬುದು ಇದರ ಮೇಲಿಂದ ಸ್ಪಷ್ಟವಾಗುತ್ತದೆ.

ಪ್ರಜಾತಂತ್ರದಲ್ಲಿ ರಾಜಕೀಯ ವೆನ್ನುವುದು ನಮಗೆ ನಿತ್ಯದ ಆಹಾರದಷ್ಟು ಅವಶ್ಯಕ. ಬದುಕುವುದಕ್ಕೆ ಆಹಾರವೆಷ್ಟು ಅವಶ್ಯವೋ—ಹಾಗೆಯೇ ಸುಖವಾಗಿ ಬಾಳುವುದಕ್ಕೆ ರಾಜಕೀಯ ಅವಶ್ಯವೆನಿಸಿದೆ. ನಮ್ಮ ರಾಜಕೀಯ ಪ್ರಜ್ಞೆ ತಿಳಿಯೂದಷ್ಟು ವಿಕಾಸವಾದಷ್ಟು ನಮಗೆ—ಲೋಕಕ್ಕೆ ಅದು ಹಿತಕಾರಿಯಾಗುತ್ತದೆ. ಇಷ್ಟು ನಿಕಟ ಸಂಬಂಧ ಪ್ರಜೆಗೂ ರಾಜಕೀಯಕ್ಕೂ ಹೆಣೆದು ಕೊಂಡಿದೆ.

ಅಂದಾಗ ರಾಜಕೀಯದ ಬಗ್ಗೆ ನಮ್ಮಲ್ಲಿ ಬೆಳೆಯಬೇಕಾದ ಭಾವನೆ—ಸಾಧನೆಗಳ ವಿಚಾರ ಎಷ್ಟು ಮಹತ್ವದ್ದೆಂದು ಪ್ರಜೆಯಾದವನು ಊಹಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ನಮ್ಮಲ್ಲಿ ಸರಕಾರವನ್ನು ಬೇಕಾದಂತೆ ಬಯ್ಯುವುದಕ್ಕೆ ಸ್ವಾತಂತ್ರ್ಯವುಂಟು. ಈ ರೀತಿ ಬಯ್ಯುವವನೇ ದೊಡ್ಡ ರಾಜಕಾರಣಿ ಎನ್ನಿಸುತ್ತಾನೆ. ನಮ್ಮ ಪ್ರತಿನಿಧಿಗಳನ್ನು ಆರಿಸಿದ ನಂತರ ಅವರು ಅದನ್ನು ಮಾಡಲಿಲ್ಲ—ಇದನ್ನು ಮಾಡಲಿಲ್ಲ ಎಂದು ಹೇಳಿ ಅವರ ಕರ್ತವ್ಯಲೋಪಗಳನ್ನು ವಿವರಿಸುವುದಕ್ಕೆ ಲಕ್ಷಿಸಿದಷ್ಟು ಅವಕಾಶವನ್ನು ಪ್ರಜೆಯಾದವನು ತಾನೇನು ಮಾಡಬೇಕು? ತನ್ನ ಕರ್ತವ್ಯ ಹೇಗೆಯೇಳು? ಎಂಬುದನ್ನು ಲಕ್ಷಿಸಿದ್ದರೆ ದೇಶಕ್ಕೆ ಅವರು ಎಷ್ಟೋ ಹೆಚ್ಚಿನ ಕೆಲಸ ಮಾಡಿದಂತಾಗುತ್ತಿತ್ತು. ನಮ್ಮಲ್ಲಿಂದು ಅನೇಕರು ರಾಜಕೀಯದಿಂದ ನಿರ್ಲಿಪ್ತರು. ಯಾವ ಪಕ್ಷದ ಕಕ್ಷೆಯಲ್ಲೂ ಅವರು ಮನುಷ್ಯರುಗಳಾಗಿ ಸೇರದೇ ಇರುವುದರಿಂದ ಪಕ್ಷ ರಾಜಕೀಯಕ್ಕೆ ಧನಾರ್ಥಕಾಮಗಳಲ್ಲದೇ ಮೋಕ್ಷ ಪ್ರಾಪ್ತಿ ಸಂಭವಿಸುವುದೂ ಇದೆ. ಇದರಿಂದಾಗಿ ರಾಜಕೀಯ ಪಕ್ಷಕ್ಕೆ ಅಪಕೀರ್ತಿಯೇ ಹೆಚ್ಚು. ಈ ಕಾರಣದಿಂದಾಗಿ ರಾಜಕೀಯ ಪಕ್ಷಗಳು ಹುಟ್ಟುವುದೂ—ಸಾಯುವುದೂ ಇದ್ದೇ ಇರುತ್ತದೆ. ಇದಕ್ಕೆಂತಲೂ ಜನರೇ ರಾಜಕೀಯ ಪಕ್ಷ ಸೇರಿ ಹೆಚ್ಚು ಜನ ವೈಚ್ಛವ ವ್ಯಕ್ತಿಯನ್ನು ಪಕ್ಷಕ್ಕೆ ಸೂಚಿಸಿ ಅವರೇ ಅಧಿಕೃತ ಪ್ರತಿನಿಧಿಗಳಾಗುವಂತೆ ಮಾಡುವುದು ಹೆಚ್ಚು ಸಮಂಜಸವಾಗುತ್ತದೋ ಏನೋ.

ನಮ್ಮಲ್ಲಿ ಪ್ರಜಾತಂತ್ರವು ಆರಂಭವಾಗಿ ಎಷ್ಟೋ ಕಾಲಕಳೆದಿವೆ. ನಾಲ್ಕು ಚುನಾವಣೆಯ ಪರೀಕ್ಷೆಮುಗಿದಿವೆ. ಅದರೂ ಪ್ರಜಾಪ್ರಭುತ್ವವೆಂದು ಹೇಳಿಕೊಳ್ಳುವಷ್ಟು ಧೈರ್ಯವಿಲ್ಲವಾಗಿದೆ. ಪ್ರಜಾರ ಹೆಚ್ಚಾದವರ ಕಡೆಗೇ ನಮ್ಮ ವಿಚಾರ ಹೆಚ್ಚು ಒಲಿಯುವ ಪ್ರವೇಶಿಯಗಳೇ ಇರುವುದರಿಂದ—ಪ್ರಜ ಪ್ರಭುತ್ವದ ಬೆಳೆವಣಿಗೆಗೆ ಇದು ಒಳ್ಳೆಯ ಲಕ್ಷಣವೆಂದು ಹೇಳಬರುವಂತಿಲ್ಲ. ಹಾಗಾಗಿ ರಾಜಕೀಯ ಸ್ಥಿತಿಯಲ್ಲಿ ನಮ್ಮ ಆಸ್ಥೆ ಹೆಚ್ಚು ಬೆಳೆಯಬೇಕು. ಇಲ್ಲಿ ನಾವೇ ಪ್ರಜೆ, ನಾವೇ ಪ್ರಭು. ಆಳುವವರೂ ನಾವೇ. ಆಳಿಸಿಕೊಳ್ಳುವವರೂ ನಾವೇ. ಇಲ್ಲಿ ಆಗುತ್ತಿರುವ ಒಳಿತು, ಕೆಡಕುಗಳು ನಮ್ಮ ಮೇಲೇ ಆಗುತ್ತಿವೆ. ಈ ಕಾರಣದಿಂದಾಗಿ ಪ್ರಜೆಯ ಮನೋಧರ್ಮ ಅರ್ಥಕಾಮಗಳ ಆವೇಷ-ಆಕರ್ಷಣೆಗೆ ಬಲಿಯಾದದೇ ಆದುದರಿಂದ ಪವಿತ್ರವೂ ಹಂಸ್ಯೆಯವೂ ಆದರೆ ಪ್ರಜಾಪ್ರಭುತ್ವ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಯಾರದೋ ಅರ್ಥ, ಕಾಮಕ್ಕೆ ಸಹಾಯಕವಾದಂತಾದೀತು.

ಆರು?-6-ಆರು!

ನಾನಾರ ? ನೀನಾರು?
ಉಳಿದುದಾರು?
ಮೂವೆಲೆಯ ಸಸಿಗೆಲ್ಲಿ
ತಾಯಿ ಬೇರು? ॥ ೧ ॥

ನಾನೆಂದು—ನೀನೆಂದು
ಅತ್ತ ಬಳಿಕ ॥
ಉತ್ತರದಿ ನಗುತಿರುವ—
—ನತ್ತ ರಣಿಕ ॥ ೨ ॥

'ನಾ'ನಾರಿ—'ನೀ'ನಾರಿ!
ಮಾಯೆ ಜಾರಿ ॥
ಕಂಡಾಪೆ—ರಸಿಂಧು....
—ಮೇರೆ ಮೀರಿ....! ॥ ೩ ॥

ಆರು ನಾನಾರು ನೀ—
—ನುಳಿದುದಾರು ॥
ನಾನಾರ !—ನೀನಾರು!
ಉಳಿದುದಾರು!

—'ಕಶ್ಚಿತ್.'

ಕುಂದಾಪುರ ಮುನ್ಸಿಫ್ ಕೋರ್ಟನಲ್ಲಿ

O.S. 181/1962 I A. 1/68.

ನಾರಾಯಣ ಪೈ—— ವಾದಿ.
ವಿರುದ್ಧ ಬಾಯಿ ಕೊಡಾ— ಪ್ರತಿವಾದಿರು

ಪ್ರತಿವಾದಿಯು: ೩. ಪದ್ಮನಾಭ ಪೈ, ೩. ಸಕ. ಬಾಯಿ—ನಾರಾಯಣ ಪೈಗಳ ಮಕ್ಕಳು, ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮ, P O. Koteshwar ಇವರುಗ—

ವಾದಿಯು ಮೇಲ್ಕಂಡ ಡಿಕ್ರಿವಿಧಿ ಪ್ರಕಾರ ಪ್ರತಿವಾದಿರಿಂದ ಹಣ ವಸೂಲ್ ಪಡೆಯುವರೇ ಡಿಕ್ರಿಯಲ್ಲಿ ವಿಧಿಯಿರುವ ಆಸ್ತಿಗಳನ್ನು ಯೇಲಂ ಮಾಡುವರೇ ಫೈನಲ್ ಡಿಕ್ರಿ ಬಗ್ಗೆ ವಾದಿಯು ಅರ್ಜಿ ದಾಖಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು ೩-೯-೧೯೬೮ಕ್ಕೆ ಮೇಲ್ಕಂಡ ಕೋರ್ಟನಲ್ಲಿ ಹಾಜರು ಆಗಿ ಜ್ಞಾಪಿಸುವುದಿಲ್ಲೊಳ್ಳತಕ್ಕದ್ದು. ತಪ್ಪದಲ್ಲಿ ನಿಮ್ಮ ಉಚ್ಚ ಶಿಕ್ಷಾಯೋಗ್ಯಪಕ್ಷವಾಗಿ ತೀರ್ಮಾನಿಸಲಾದೀತೆಂದು ಸಂಗ್ರಿ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೊಲಕ ತಿಳಿಸೋಣವಾಗಿಯದೆ.

K. Raghunath Shenoy,
Advocate for Plff.

Coondapoor, 1-8-68.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿಗೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಕೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0.90 ಪೈಸೆ M O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟಿ, ಉಡುಪಿ, ದ. ಕ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ಸರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ದೇವರ ಗೌರವ

(ಇದರೆ ಪುಟದಿಂದ)

ಇವರೆಲ್ಲರೂ ಕಲಿತ ನಾಗರಿಕ ವೇಧಾವಿಗಳೇ, ಅನಾಗರಿಕರಾರೂ ದೇವರ ವಿಷಯದಲ್ಲಿ ಹೀಗೆಲ್ಲ ವರ್ತಿಸುವುದಿಲ್ಲ.

ನವರವಳಲ್ಲಿ ಇನ್ನು ಕೆಲವು ವಿಚಿತ್ರಗಳನ್ನು ನೋಡಬಹುದು. ಬೀದಿಯಲ್ಲಿ ನಡೆಯುವಾಗ, ಅಥವಾ ಬಸ್ಸಿನಲ್ಲೋ ಕಾರಿನಲ್ಲೋ ಹೋಗುವಾಗ ದೇವಸ್ಥಾನದ ದಿಕ್ಕು ಕಾಣಕಾಣದೇ ನಮಸ್ಕಾರಮಾಡುವವರಿದ್ದಾರೆ. ಅಲ್ಲಿಗೇ ಎಂಗಿಯಿತು. ಅವರ ಇಡೀ ಜೀವನ ಪುಣ್ಯ. ಇನ್ನೂ ನಾಗರಿಕ ಭಕ್ತ ಸಮುದಾಯದ್ದೆ ಉತ್ಕೃಷ್ಟವಾದ ಕೊಡಲಿಕ್ಕಾಗಿ ದೇವರ ಚಿತ್ರಗಳನ್ನು ಕಲಂಡರುಗಳಲ್ಲಿ ಅಚ್ಚು ಹಾಕಿಸಿ ಬಸ್ಸಿನಲ್ಲಿ ಸಿಕ್ಕಾಬಟ್ಟೆ ಹರಡಿ ವ್ಯಾಪಾರ ಮಾಡುತ್ತಾರೆ. 'ನಾವು ತಿರುಪತಿಯಾತ್ರೆ ಮಾಡುತ್ತೇವೆ, ತಿರುಪತಿಗೆ ಕೊಡಿ ಬಂದ್ಯತ್ತೇವೆ' ಎಂದು ಫಿಲ್ಮ್ ಪ್ರಕಟಣೆ ಕೊಂಡಿಸಿ ಬೀದಿಗಳಲ್ಲಿ ಸಂದುಗೊಂದು ಸಾಹಿತ್ಯ ಮೇಳೆಗಳಲ್ಲಿ ಕೂಡಾ ಇಂಟಿಸುವುದನ್ನು ನೋಡುತ್ತೇವೆ. ಕಾಳ, ಮಾರವ್ಯಾಗಳಂತಹ ಭಕ್ತಾಂಕರ ದೇವತೆಗಳ ಗುಡಿಕಟ್ಟಿಸುವೆನೆಂದು ಹೆದರಿಸಿ ಹಂತಗೆ ತೆಗೆದುಕೊಂಡು ಹೋಗಿ ಶ್ರೀಮಂತರಾದವರಿದ್ದಾರೆ. ಹೀಗೆ ಹೇಳಿಕಾಣ್ತಾ ಕೋದರೆ ಏನೇನೋ ಇದೆ.

ಈ ಬಗೆಯ ಪ್ರವರ್ತನೆಗಳಿಂದ ದೇವರ ಗೌರವ, ಮರ್ಯಾದೆ, ಪರಂಪರೆ ಪರಿಶ್ವ ಮಹತ್ವಗಳೆಲ್ಲ ಏನಾ ಉಳಿದಂತಾಯಿತು? ಕೇವಲ ಹುಸ್ತಕದ ಬದನೇಕಾಯಿಗಳೇ. ಹೀಗಾಗಬಹುದೇ? ದೇವರನ್ನು ಕೇಳುವವರಿಲ್ಲದಂತಾಗಬಹುದೇ?

ಪೂರ್ವಕರು ಮಾಡಿಟ್ಟ ಶಾಸ್ತ್ರಪದ್ಧತಿಗಳೆಲ್ಲ ಗಾಳಿಗೆ ಹಾರಿದೆ. ಸಿಕ್ಕಾಬಟ್ಟೆ ಹರಡಿದೆ, ಹಾಂದೆ. ಇದಕ್ಕೇನಾದರೂ ಒಂದು ಶಾಸ್ತ್ರ ವಿಧಿ ಮತ್ತೆ ಬರಬೇಕಾಗಿದ್ದು ಅಗತ್ಯವೆಂದು ತೋರುವುದಿಲ್ಲವೆ?

"ಗೊತ್ತುಮಾಡಿದ ಹೊತ್ತಿನಲ್ಲೇ ದೇವರ ಪೂಜೆ ಮಾಡಿ; ಆ ಮೇಲೆ ಕರ್ತವ್ಯ ಕರ್ಮಗಳಲ್ಲಿ ನಿರತರಾಗಿ. ಮಾತು ಮಾತಿಗೂ ಚಟಿಕೆಗೂ ನಶ್ಯಕ್ಕೂ ದೇವರನ್ನು ಎಳೆಯಬಾರದು" ಎಂದು ಯಾರಾದರೂ ಮಹನೀಯರು ಹೇಳಲಾರರೇ ಎನಿಸುತ್ತದೆ.

ಜನತೆಯಲ್ಲಿ ಭಕ್ತಿ ಹೆಚ್ಚಿಹೋಯಿತೋ ಎಂಬ ಹಾಗೆ ಇಲ್ಲವಲ್ಲೆಲ್ಲ ಗುಡಿಗಳು, ಗುಡಾರಗಳು. ಊರಿಗೊಂದು ಗುಡಿಬೇಕು ನಿಜ; ಕೇರಿಕೇರಿಗೂ ಗುಡಿಯೇ? ಅದೂ ಸಾಲದಂತೆ ಹೆಜ್ಜೆಹೆಜ್ಜೆಗೊಂದು ಗುಡಿಯೆ? ಮನೆ ಪೂಜಾ ದೇವಾಲಯವಾಗಬಹುದೆ? ಸ್ವಲ್ಪ ಕಷ್ಟಪಟ್ಟು ನಡೆದು ಗುಡ್ಡವೇರಿ ದೇವರನ್ನು ದರ್ಶಿಸಬೇಕೆಂಬಲೇ ದೇವರು ದೂರ ದೂರ ಗುಡ್ಡಬೆಟ್ಟಗಳಲ್ಲಿರುವ ತತ್ವವೇ ಹಾರಿಹೋಗಿದೆ. ಬಸ್ಸಾಯಿತು, ರೈಲಾಯಿತು. ದೇವಾಲಯದ ಬಾಗಿಲ ವರೆಗೂ ವಾಹನಗಳಲ್ಲೇ ಹೋಗುವುದು. ದುಡ್ಡಿದ್ದಲ್ಲಿ ದೇವರು. ತೀರ ಹತ್ತಿರ್ತ

ಅಂತೂ ಇನ್ನರಿಗೆ ಶಾಂತಿ ಸಮಾಧಾನಗಳಿಲ್ಲ. ನಾವಕಾಶವಾಗಿ ಕುಳಿತು, ಪದ್ಧತಿಯಂತೆ ದೇವರ ಸೇವೆ ಇಲ್ಲ. ಆ ಕೊರತೆಯ ಪರಿಹಾರಕ್ಕಾಗಿ ಮನೆಯಲ್ಲಿ, ಆಫೀಸಿನಲ್ಲಿ ದೇವರೂ, ದೇವರು ದೇವರು! ದೇವರುಮಯ!

ದೇವರ ವಿಷಯದಲ್ಲಿ ಮಾತ್ರವೆಂದೇನು? ತಿಂಡೀ ವಿಷಯ ಸರಿಯಾದ ಕ್ರಮ ಪದ್ಧತಿ ಇದೆಯೆ? ಕುಳಿತು ನಾವಕಾಶವಾಗಿ ಹೊಟ್ಟೆತುಂಬ ಉಂಡು ತೇಗುಬಿಡುವ ಸುಖವಂತರು ಯಾರಿದ್ದಾರೆ? ಹಾಗೆ ಉಂಡು ಇನ್ನೊಂದು ಹೊತ್ತಿನ ವರೆಗೆ ಉಪವಾಸವಿರುವ ಬಲಶಾಲಿಗಳು ಇದ್ದಾರೆಯೆ? ಕಾಲಪರಿಸ್ಥಿತಿಯಿಂದಾಗಿ ಈಗ ಎಲ್ಲರಿಗೂ ಮಧ್ಯೆಮಧ್ಯೆ ಆಗಾಗ ಚೂರು ಚೂರು ತಿಂಡಿ, ಕಾಫಿ, ಟೀ, ಡ್ರಿಂಕ್ಸ್ ಅದು ಇದು ಅಂತ ಬೆಳಗ್ಗಿನಿಂದ ರಾತ್ರಿ ಮಲಗುವ ವರೆಗೂ ಏನಾದರೂ ಬೇಕೇ ಬೇಕು. ತೃಪ್ತಿಯಂತೂ ಯಾವುದರಿಂದಲೂ ಇಲ್ಲ; ಶಾಂತಿಯೂ ಇಲ್ಲ.

ಹಾಗೆಯೇ ತನ್ನ ಆಸ್ತಿತ್ವವೂ ಶಾಂತಿ ತೃಪ್ತಿಗಳನ್ನು ಕೊಡುವುದಾಗಿಲ್ಲ. ಅದಕ್ಕೇ ಮೊತ್ತ ಮೊತ್ತಿಗೂ ದೇವರು ದೇವರು ಅನ್ನುವುದು.

ತಮಿಳು ನಾಡಿನ ಡಿಯಂಕೆ ಪ್ರಭುತ್ವವು ನಾಸ್ತಿಕತ್ವಕ್ಕೆ ವಾಲಿರುವುದರ ದ್ಯೋತಕವಾಗಿ, ಸರಕಾರೀ ಕಾರ್ಯಾಲಯಗಳಿಂದ ದೇವತ್ವವನ್ನು ಹೋಗಲಾಡಿಸಲು ಒಂದು ಆಜ್ಞೆಯನ್ನು ಹೊರಡಿಸಿದಂತೆ, ಅದರ ಮೇಲೆ ಬಿಂಡನೆ ಮಂಡನೆಗಳು ನಡೆಯುತ್ತಿರುವದಾದರೂ, ಆಸ್ತೀಕ—ನಾಸ್ತೀಕ ಪ್ರಶ್ನೆಗಳನ್ನು ಬದಿಗಿಟ್ಟು ಕಂಡ ಕಂಡ ಹಾಗೆ ದೇವರ ಕೊಂಡಾಟಗಳು ಕಡೆಯುವುದನ್ನು ಖಂಡಿಸುವಂತಹ ಶಾಸನ ಬರುವುದಾದರೆ ಒಳ್ಳೆಯದೆನಿಸುತ್ತದೆ. ತಿರುಗಿ ಕೇಳಿದರೆ ಇದು ಆಸ್ತಿಕತ್ವವನ್ನು ಬಲಪಡಿಸುವಂತಹ ವಿಧಿಯೇ ಆದೀತು. ದೇವರ ಮರ್ಯಾದೆಯನ್ನುಳಿಸುವ, ದೇವರ ಸ್ಥಾನಮಾನ ಗೌರವಗಳನ್ನು ಕಾಪಾಡುವ ಒಂದು ವಿಧಿ ಇರುವುದು ಒಳ್ಳೆಯದಲ್ಲವೆಂದು ಯಾರು ಹೇಳಿಯಾರು?

ನಾವು ಹೆಚ್ಚು ಓದಿ ತಿಳುವಳಿಕೆ ಬೆಳೆಸಿದಂತೆ ನಮ್ಮ ಅಜ್ಞಾನದ ಆಳದ ಅರಿವಾಗುತ್ತದೆ.

ಂ ಂ ಂ

ಪ್ರಭಾತದಲ್ಲಿ ಚಿಂತಿಸಬೇಕು, ಹಗಲು ಪರಿಶ್ರಮ ಮಾಡಬೇಕು, ಸಂಜೆಗೆ ಊಟ ಮಾಡಬೇಕು, ರಾತ್ರಿ ನಿದ್ರಿಸಬೇಕು.

ದುರ್ದಿನಗಳಲ್ಲಿ ಸುಖದ ಕನಸನ್ನು ಕಾಣುವ 'ಮೂಢ' ಸುದಿನಗಳಲ್ಲಿ ಉಳಿತಾಯದ ಮಹತ್ವವನ್ನು ಅರಿಯದಾಗುತ್ತಾನೆ. ಆದರೆ 'ತೀಕ್ಷ್ಣಮತಿ.....

ದ.ಕ. ಕೇಂದ್ರಸಹಕಾರ ಬ್ಯಾಂಕ್ ಲಿಮಿಟೆಡ್,

ಮಂಗಳೂರು

ಶಾಖೆಗಳು: ಕುಂದಾಪುರ, ಪುತ್ತೂರು ಬಂಟ್ವಾಳ ಮತ್ತು ಉಡುಪಿ.

ಇಲ್ಲಿಯ ಪಾತ್ರೆಯಾದ ಭರವಸೆಯ ರೇವಣಾತಿಗಳಲ್ಲಿ ತನ್ನ ಹಣವನ್ನು ತೊಡಗಿಸಿ, ಅತೀ ಹೆಚ್ಚಿನ ಬಡ್ಡಿ ಪಡೆಯುವುದರೊಂದಿಗೆ ದೇಶದ ಆಹಾರೋತ್ಪಾದನೆಯ ಹೆಚ್ಚಳದಲ್ಲಿ ತನ್ನ ಹಣಪಾಲುಗೊಳ್ಳುವುದನ್ನು ಕಂಡು ಸಂತೋಷಿಸುತ್ತಾನೆ.

ಬಿ. ಪ್ರಭಾಕರ ರಾವ್, M.A.B.L., ಉಪಾಧ್ಯಕ್ಷ.

ಬಿ. ನಾರಾಯಣ ನಾಯಕ್ ಅಧ್ಯಕ್ಷ.

ಕೆ. ಸಿ. ಜಗನ್ನಾಥ ರಾವ್, B.Com., ಕಾರ್ಯದರ್ಶಿ.

MODERN GARAGE

UDIPI

(Estd 1948)

A well equipped garage and workshop with qualified technical personal.

Service Station attached.

MODERN GARAGE, UDIPI

TELE { Phone — 534 / Grams — Karnad } Residence: 480

They're here!

The '1210' Series
TATA MERCEDES - BENZ VEHICLES

Authorised Dealers:

ARVIND MOTORS

BALMATTA ROAD, MANGALORE.

Telephone: 4762

Telegrams: 'ARVIND'

With best compliments

from

BALLAL MOTOR SERVICE

MOODABIDRI - - MANGALORE

ಮಣಿ—ಕನ್ನಡ್ಕ ಮಂಗಳೂರು, ೧೯೬೮

ಇಪ್ಪತ್ತೈದು ಪೈಸೆ

ದೇವರ ಗೌರವ

(ಐದನೇ ಪುಟದಿಂದ)

ಇವರೆಲ್ಲರೂ ಶಿಕ್ಷಿತ ನಾಗರಿಕ ಪ್ರಜೆಗಳೇ. ಅನಾಗರಿಕರಾರೂ ದೇವರ ವಿಷಯದಲ್ಲಿ ಹೀಗೆಲ್ಲ ವರ್ತಿಸುವುದಿಲ್ಲ.

ನಗರಗಳಲ್ಲಿ ಇನ್ನು ಕೆಲವು ವಿಚಿತ್ರಗಳನ್ನು ನೋಡಬಹುದು. ಬೀದಿಯಲ್ಲಿ ನಡೆಯುವಾಗ, ಅಥವಾ ಬಸ್ಸಿನಲ್ಲೋ ಕಾರಿನಲ್ಲೋ ಹೋಗುವಾಗ ದೇವಸ್ಥಾನದ ದಿಕ್ಕು ಕಂಡಕೂಡಲೇ ನಮಸ್ಕಾರಮಾಡುವವರಿದ್ದಾರೆ. ಅಲ್ಲಿಗೇ ಮುಗಿಯಿತು. ಅವರ ಇಡೀ ದಿನದ ಪೂಜೆ. ಇನ್ನೂ ನಾಗರಿಕ ಭಕ್ತ ಸಮುದಾಯಕ್ಕೆ ಉತ್ತೇಜನ ಕೊಡಲಿಕ್ಕಾಗಿ ದೇವರ ಚಿತ್ರಗಳನ್ನು ಕೆಲಂಡಸುಗಳಲ್ಲಿ ಅಚ್ಚೆಸಿ ಬೀದಿಯ ಬದಿಯಲ್ಲಿ ಸಿಕ್ಕಾಬಟ್ಟೆ ಹರಡಿ ವ್ಯಾಪಾರ ಮಾಡುತ್ತಾರೆ. 'ನಾವು ತಿರುಪತಿ ಯಾತ್ರೆ ಮಾಡುತ್ತೇವೆ, ತಿರುಪತಿಗೆ ಕೊಡಿ ಒಯ್ಯುತ್ತೇವೆ' ಎಂದು ಭಿತ್ತಿ ಪ್ರಕಟಣೆ ಹೊಂದಿಸಿ ಬೀದಿಗಳಲ್ಲಿ ಸಂದುಗೊಂದು ಸೌಚದ ಗೋಡೆಗಳಲ್ಲಿ ಕೂಡಾ ಅಂಟಿಸುವುದನ್ನು ನೋಡುತ್ತೇವೆ. ಕಾಳಿ, ಮಾರಮ್ಮಗಳಂತಹ ಭಯಂಕರ ದೇವತೆಗಳ ಗುಡಿಕಟ್ಟಿಸುವೆನೆಂದು ಹೆದರಿಸಿ ಮಂತಿಗೆ ತೆಗೆದುಕೊಂಡು ಹೋಗಿ ಶ್ರೀಮಂತರಾದವರಿದ್ದಾರೆ. ಹೀಗೆ ಹೇಳುತ್ತಾ ಹೋದರೆ ಎಷ್ಟೋ ಇದೆ.

ಈ ಬಗೆಯ ಪ್ರವರ್ತನೆಗಳಿಂದ ದೇವರ ಗೌರವ, ಮರ್ಯಾದೆ, ಪರಾತ್ಪರತ್ವ ಮಹತ್ವಗಳೆಲ್ಲ ಏನು ಉಳಿದಂತಾಯಿತು? ಕೇವಲ ಪುಸ್ತಕದ ಬದನೇಕಾಯಿಗಳೇ. ಹೀಗಾಗಬಾರದೇ? ದೇವರನ್ನು ಕೇಳುವವರಿಲ್ಲದಂತಾಗಬಹುದೇ?

ಪೂರ್ವಕಾಲದ ಮಡಿಟ್ಟ ಶಾಸ್ತ್ರಪದ್ಧತಿಗಳೆಲ್ಲ ಗಾಳಿಗೆ ಹಾರಿವೆ. ಸಿಕ್ಕಾಬಟ್ಟೆ ಹರಡಿವೆ, ಹಾರಿವೆ. ಇದಕ್ಕೇನಾದರೂ ಒಂದು ಶಾಸ್ತ್ರ ವಿಧಿ ಮತ್ತೆ ಬರಬೇಕಾಗಿದ್ದು ಅಗತ್ಯವೆಂದು ತೋರುವುದಿಲ್ಲವೆ?

"ಗೊತ್ತುವಾಡಿದ ಹೊತ್ತಿನಲ್ಲೇ ದೇವರ ಪೂಜೆ ಮಾಡಿ ಆ ಮೇಲೆ ಕರ್ತವ್ಯ ಕರ್ಮಗಳಲ್ಲಿ ನಿರತರಾಗಿ, ಮಂತ್ರ ಮಾತಿಗೂ ಚಿಟಿಕೆಗೂ ನಶ್ಯಕ್ಕೂ ದೇವರನ್ನು ಎಳೆಯಬಾರದು" ಎಂದು ಯಾರಾದರೂ ಮಹನೀಯರು ಹೇಳಲಾರರೇ ಎನಿಸುತ್ತದೆ.

ಜನತೆಯಲ್ಲಿ ಭಕ್ತಿ ಹೆಚ್ಚಿಹೋಯಿತೋ ಎಂಬ ಹಾಗೆ ಇಲ್ಲವಲ್ಲೆಲ್ಲ ಗುಡಿಗಳು, ಗುಡಾರಗಳು. ಊರಿಗೊಂದು ಸುಡಿಬೇಕು ನಿಜ; ಕೇರಿಕೇರಿಗೂ ಸುಡಿಯೇ? ಅದೂ ಸಾಲದಂತೆ ಹೆಜ್ಜೆಹೆಜ್ಜೆಗೊಂದು ಗುಡಿಯೆ? ಮನೆ ಪೂರಾ ದೇವಾಲಯವಾಗಬಹುದೆ? ಸ್ವಲ್ಪ ಕಷ್ಟಪಟ್ಟು ನಡೆದು ಗುಡ್ಡದೇರಿ ದೇವರನ್ನು ದರ್ಶಿಸಬೇಕಂತಲೇ ದೇವರು ದೂರ ದೂರ ಗುಡ್ಡಬೆಟ್ಟಗಳಲ್ಲಿರುವ ತತ್ವದೇ ಹಾರಿಹೋಗಿದೆ. ಬಸ್ಸಾಯಿತು, ರೈಲಾಯಿತು, ದೇವಾಲಯದ ಬಾಗಿಲ ವರೆಗೂ ವಾಹನಗಳಲ್ಲೇ ಹೋಗುವುದು. ದುಡ್ಡಿದ್ದಲ್ಲಿ ದೇವರು. ತೀರ ಹತ್ತಿರ!

ಅಂತೂ ಜನರಿಗೆ ಶಾಂತಿ ಸಮಾಧಾನಗಳಿಲ್ಲ. ಸಾವಕಾಶವಾಗಿ ಕುಳಿತು, ಪದ್ಧತಿಯಂತೆ ದೇವರ ಸೇವೆ ಇಲ್ಲ. ಆ ಕೊರತೆಯ ಪರಿಹಾರಕ್ಕಾಗಿ ಮನೆಯಲ್ಲಿ, ಆಫೀಸಿನಲ್ಲಿ ದೇವರೇ, ದೇವರು ದೇವರು! ದೇವರುಮಯ!

ದೇವರ ವಿಷಯದಲ್ಲಿ ಮಾತ್ರವೆಂದೇನು? ತಿಂಡೀ ವಿಷಯ ಸರಿಯಾದ ಕ್ರಮ ಪದ್ಧತಿ ಇದೆಯೆ? ಕುಳಿತು ಸಾವಕಾಶವಾಗಿ ಹೊಟ್ಟೆತುಂಬ ಉಂಡು ತೇಗುಬಿಡುವ ಸುಖವಂತರು ಯಾರಿದ್ದಾರೆ? ಹಾಗೆ ಉಂಡು ಇನ್ನೊಂದು ಹೊತ್ತಿನ ವರೆಗೆ ಉಪವಾಸವಿರುವ ಬಲಶಾಲಿಗಳು ಇದ್ದಾರೆಯೆ? ಕಾಲಪರಿಸ್ಥಿತಿಯಿಂದಾಗಿ ಈಗ ಎಲ್ಲರಿಗೂ ಮಧ್ಯೆಮಧ್ಯೆ ಆಗಾಗ ಹೂರು ಹೂರು ತಿಂಡಿ, ಕಾಫಿ, ಟೀ, ಡ್ರಿಂಕ್ಸ್ ಅದು ಇದು ಅಂತ ಬೆಳಗ್ಗಿನಿಂದ ರಾತ್ರಿ ಮಲಗುವ ವರೆಗೂ ಏನಾದರೂ ಬೇಕೇ ಬೇಕು. ತೃಪ್ತಿಯಂತೂ ಹೂವುದುಂದಲೂ ಇಲ್ಲ; ಶಾಂತಿಯೂ ಇಲ್ಲ.

ಹಾಗೆಯೇ ತನ್ನ ಆಸ್ತಿತ್ವವೂ ಶಾಂತಿ ತೃಪ್ತಿಗಳನ್ನು ಕೊಡುವುದಾಗಿಲ್ಲ. ಅದಕ್ಕೇ ಮೊತ್ತ ಮೊತ್ತಿಗೂ ದೇವರು ದೇವರು ಅನ್ನುವುದು.

ತಮಿಳು ನಾಡಿನ ಡಿಯುಂಕೆ ಪ್ರಭುತ್ವ ನಾಸ್ತಿತತ್ವಕ್ಕೆ ವಾಲಿರುವುದರ ದ್ಯೋತಕವಾಗಿ, ಸರಕಾರೀ ಕಾರ್ಯಾಲಯಗಳಿಂದ ದೇವತ್ವವನ್ನು ಹೋಗಲಾಡಿಸಲು ಒಂದು ಆಜ್ಞೆಯನ್ನು ಹೊರಡಿಸಿದೆಯಂತೆ. ಅದರ ಮೇಲೆ ಖಂಡನೆ ಮಂಡನೆಗಳು ನಡೆಯುತ್ತಿರುವದಾದರೂ, ಆಸ್ತೀಕ—ನಾಸ್ತೀಕ ಪ್ರಶ್ನೆಗಳನ್ನು ಬದಿಗಿಟ್ಟು ಕಂಡ ಕಂಡ ಹಾಗೆ ದೇವರ ಕೊಡಾಟಗಳು ಕಡೆಯುವುದನ್ನು ಖಂಡಿಸುವಂತಹ ಶಾಸನ ಬರುವುದಾದರೆ ಒಳ್ಳೆಯದೆನಿಸುತ್ತದೆ. ತಿರುಗಿ ಕೇಳಿದರೆ ಇದು ಆಸ್ತಿತತ್ವವನ್ನು ಬಲಪಡಿಸುವಂತಹ ವಿಧಿಯೇ ಆದೀತು. ದೇವರ ಮರ್ಯಾದೆಯನ್ನುಳಿಸುವ, ದೇವರ ಸ್ಥಾನಮಾನ ಗೌರವಗಳನ್ನು ಕಾಪಾಡುವ ಒಂದು ವಿಧಿ ಇರುವುದು ಒಳ್ಳೆಯದಲ್ಲವೆಂದು ಯಾರು ಹೇಳಿಯಾರು?

ನಾವು ಹೆಚ್ಚು ಓದಿ ತಿಳುವಳಿಕೆ ಬೆಳೆಸಿದಂತೆ ನಮ್ಮ ಅಜ್ಞಾನದ ಆಳದ ಅರಿವಾಗುತ್ತದೆ.

o o o

ಪ್ರಭಾತದಲ್ಲಿ ಚಿಂತಿಸಬೇಕು, ಹಗಲು ಪರಿಶ್ರಮ ಮಾಡಬೇಕು, ಸಂಜೆಗೆ ಊಟ ಮಾಡಬೇಕು, ರಾತ್ರಿ ನಿದ್ರಿಸಬೇಕು.

ದುರ್ದಿನಗಳಲ್ಲಿ ಸುಖದ ಕನಸನ್ನು ಕಾಣುವ 'ಮೂಢ' ಸುದಿನಗಳಲ್ಲಿ ಉಳಿತಾಯದ ಮಹತ್ವವನ್ನು ಅರಿಯದಾಗುತ್ತಾನೆ. ಆದರೆ 'ತೀಕ್ಷ್ಣಮತಿ.....

ದ.ಕ. ಕೇಂದ್ರಸಹಕಾರ ಬ್ಯಾಂಕ್ ಲಿಮಿಟೆಡ್,
ಮಂಗಳೂರು

ಶಾಖೆಗಳು: ಕುಂದಾಪುರ, ಪುತ್ತೂರು ಬಂಟ್ವಾಳ ಮತ್ತು ಉಡುಪಿ.

ಇಲ್ಲಿಯ ಖಾತ್ರಿಯಾದ ಭರವಸೆಯ ಠೇವಣಾತಿಗಳಲ್ಲಿ ತನ್ನ ಹಣವನ್ನು ತೊಡಗಿಸಿ, ಅತೀ ಹೆಚ್ಚಿನ ಬಡ್ಡಿ ಪಡೆಯುವುದರೊಂದಿಗೆ ದೇಶದ ಆಹಾರೋತ್ಪಾದನೆಯ ಹೆಚ್ಚಳದಲ್ಲಿ ತನ್ನ ಹಣ ಪಾಲುಗೊಳ್ಳುವುದನ್ನು ಕಂಡು ಸಂತೋಷಿಸುತ್ತಾನೆ.

ಬಿ. ಪ್ರಭಾಕರ ರಾವ್, M. L.B.L., ಉಪಾಧ್ಯಕ್ಷ.
ಬಿ. ನಾರಾಯಣ ನಾಯಕ್ ಅಧ್ಯಕ್ಷ.
ಕೆ. ಸಿ. ಜಗನ್ನಾಥ ರಾವ್, B.Com., ಕಾರ್ಯದರ್ಶಿ.

MODERN GARAGE
UDIPI
(Estd 1948)

A well equipped garage
and workshop
with
qualified technical personal.

Service Station
attached.

MODERN GARAGE, UDIPI

TELE { Phone — 834 / Grams — Karnad } Residence : 480

They're here!

The '1210' Series
TATA MERCEDES - BENZ VEHICLES

Authorised Dealers:

ARVIND MOTORS

BALMATTA ROAD, MANGALORE.

Telephone: 4762

Telegrams: 'ARVIND'

With best compliments

from

BALLAL MOTOR SERVICE

MOODABIDRI - - MANGALORE

ಪಡುಬಿದ್ರಿ—ಸ್ವತಂತ್ರ ಸಂಚಿಕೆ, ೧೯೬೮

ಇಪ್ಪತ್ತೈದು ಪೈಸೆ

ಶ್ರೀ ಶಿರ್ವಾಡಿ ವಿಲಿಯಂ ಪಿಂಟೋ

ರಾಷ್ಟ್ರೀಯ ಭಾವೈಕ್ಯ ಅಗತ್ಯ

ದೇಶದ ಸ್ವಾತಂತ್ರ್ಯವನ್ನುಳಿಸಲು ರಾಷ್ಟ್ರೀಯ ಭಾವೈಕ್ಯ ಅತ್ಯಗತ್ಯ. ಸಂಕುಚಿತ ಮನೋಭಾವನೆಯಿರುವ ಜನತೆ ತನ್ನ ಸ್ವಾತಂತ್ರ್ಯವನ್ನು, ಸಾರ್ವಭೌಮತೆಯನ್ನು ಉಳಿಸಿಕೊಳ್ಳುವುದು ತ್ರಾಸಕರ.

ವರುಷಕ್ಕೊಮ್ಮೆ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತದರಿಂದಲೇ ಸ್ವಾತಂತ್ರ್ಯ ಲಭಿಸಿದಂತಾಗಲಿಲ್ಲ. ನಮ್ಮ ಸ್ವತಂತ್ರ ಸಾರ್ವಭೌಮಾಧಿಕಾರವನ್ನು ಉಳಿಸಿಕೊಳ್ಳಲು ಬೇಕಾದಷ್ಟು ಐಕ್ಯತೆ, ಪ್ರಜ್ಞೆ, ಪೌರುಷತ್ವಗಳನ್ನು ಸಾಕಷ್ಟು ಗಳಿಸಿಕೊಂಡಿದ್ದೇವೆಯೆ?

ಜನತೆಗಳಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ನಮ್ಮ ಭಾರತ, ಆ ದಿಶೆಯಲ್ಲಿ ಆರೋಗ್ಯಕಾವಸ್ಥೆಯತ್ತ ಸಾಗುತ್ತಿರುವಾಗ ಪ್ರಜಾತಂತ್ರವನ್ನು ಕಬಳಿಸುವ ದುಷ್ಟ ಶಕ್ತಿಗಳು ದೇಶದಲ್ಲಿ ತಾಂಡವವಾಡುತ್ತಿವೆ, ಅಂತಹಾ ದುಷ್ಟ ಶಕ್ತಿಗಳಲ್ಲವನ್ನು ನಾಶ ಮಾಡಬೇಕಾದಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿಕೊಳ್ಳಬೇಕು. ದೇಶದ ಐಕ್ಯತೆಗೆ ಧಕ್ಕೆ ತರುವ ಅಥವಾ ಐಕ್ಯವನ್ನು ಬಲಹೀನಗೊಳಿಸುವ ಕೃತ್ಯಗಳನ್ನೆಸಗುವವನು ರಾಷ್ಟ್ರದ್ರೋಹಿಯೆನಿಸುತ್ತಾನೆ. ಸ್ವಾತಂತ್ರ್ಯಾನಂತರದ ಘಟನೆಗಳನ್ನು ವಿಮರ್ಶಿಸಿ ನೋಡಿದಲ್ಲಿ 'ರಾಷ್ಟ್ರೀಯತೆ'ಯನ್ನು ಬೆಳೆಸುವುದರಲ್ಲಿ ನಾವು ತಪ್ಪಿ ಬಿದ್ದಂತೆ ತೋರುತ್ತಿದೆ.

ಭಾರತ—ಚೈನಾ ಆಕ್ರಮಣ, ಪಾಕಿಸ್ತಾನದ ಯುದ್ಧ ಭೀತಿಯನ್ನು ಇನ್ನೂ ಕಳಕೊಂಡಿಲ್ಲ. ಯಾವ ಕ್ಷಣಕ್ಕೂ ನಮ್ಮ ಧೂರ್ತ ವೈರಿಗಳು ಧಾಳಿ ಮಾಡಿಯಾವು. ರಾಷ್ಟ್ರದೊಳಗೆ ಆಹಾರ ಸಮಸ್ಯೆ, ಉದ್ಯೋಗ ಸಮಸ್ಯೆ, ಭಾಷಾ ಸಮಸ್ಯೆಗಳು ಕಾಡುತ್ತಿವೆ. ಭಾವೈಕ್ಯ ಸಾಧಿಸಬೇಕೆಂದು ಬೇರೆಯವರಿಗೆ ಉಪದೇಶ ಮಾಡುವ ಮುಖಂಡರಿಗೇನೂ ನಮ್ಮಲ್ಲಿ ಕೊರತೆ ಇಲ್ಲ. ಆಚಾರಕ್ಕಿಲ್ಲದ ಉಪದೇಶ ಫಿಲ್ಮ್ಯಯೋಜನೆ, ಪ್ರತಿ ನಾಗರಿಕನೂ ತನ್ನ ಶಕ್ತಿಮೀರಿ 'ಭಾರತೀಯತೆ'ಯನ್ನು ಗಳಿಸಿಕೊಂಡಾಗಲೇ ಭಾವೈಕ್ಯ ಸಾಧಿತವಾಗುವುದು. ಈ ಸಂದಿಗ್ಧ ಕಾಲದಲ್ಲಾದರೂ ಒಕ್ಕಟ್ಟಿಲ್ಲದೆ ನಾವು ಬದುಕಲಾರೆವು—ಉಳಿಯಲಾರೆವು—ತ್ಯಾಗಮಾಡಿ ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರೆವು.

ಭಾರತವನ್ನು ಆಡಳಿತೆಯ ಸುಗಮತೆಯ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯಗಳನ್ನಾಗಿ 1956ರಲ್ಲಿ ವಿಂಗಡಿಸಲಾಯ್ತು. ಸದುದ್ದೇಶವುಳ್ಳ ಈ ಕಾರ್ಯವನ್ನು ಕೆಲವು ಹುಟ್ಟಿಸಿ ದ್ವೇಷ ಭಾವವನ್ನು ಉತ್ಪನ್ನಮಾಡಿ ನಮ್ಮ ಪ್ರಗತಿಯ ಭವ್ಯ ಮಾರ್ಗದಲ್ಲಿ ವಿಘ್ನಗಳನ್ನು ತಂದೊಡ್ಡುವಂತಾಗಿ, ಪ್ರಜೆ ಸಂಕುಚಿತ ದೃಷ್ಟಿಯನ್ನು ಬಿಟ್ಟು ತಾನು ಭಾರತೀಯ ಎಂಬ ಭಾವನೆಯನ್ನು ಬೆಳೆಸಿಕೊಳ್ಳುವ ವರೆಗೆ ನಮ್ಮ ಸಮಸ್ಯೆಗಳು ಎಂದಿಗೂ ಪರಿಹಾರವಾಗವು.

ಭಾರತೀಯರೆಲ್ಲರೂ ಒಂದಾಗಿರುವ ಮತ್ತು ಪರಸ್ಪರರಲ್ಲಿ ಭ್ರಾತೃಭಾವದಿಂದ ಇರುವ ಪುಣ್ಯವಾದ ಸಾಹಸೀ ರಾಷ್ಟ್ರವು ಇಂದು ನಮಗೆ ಬೇಕು. ಬುದ್ಧಿ ಮತ್ತು ಹೃದಯದ ಐಕ್ಯ ಮತ್ತು ರಾಷ್ಟ್ರವನ್ನು ಪ್ರೇರೇಪಿಸುವ ಅಧ್ಯಾತ್ಮಿಕ ಐಕ್ಯಗಳನ್ನು ನಿರ್ಮಿಸತಕ್ಕವುದೇ ಮುಖ್ಯವಾದ ಕೆಲಸ. ನಮಗೆ ಇಂದು ರಾಷ್ಟ್ರೀಯ ಭಾವೈಕ್ಯದ ಅವಶ್ಯಕತೆ ತುಂಬಾ ಇದೆ. ನಾವು ಭೌತಿಕ ಪ್ರಗತಿಯನ್ನು ಸಾಧಿಸಬಹುದು. ಆದರೆ ಮೈತ್ರಿಯಿಂದ ಬಾಳಿ ಬಾಳಿಯದಿದ್ದಲ್ಲಿ ಅವನತಿಯನ್ನಪ್ಪಬೇಕಾದೀತು.

ಭಾರತ ಅನೇಕ ಧರ್ಮ ಸಂಧ ಸಂಗಡಗಳನ್ನೊಳಗೊಂಡಿದೆ. ಪ್ರತಿಯೊಂದು ಧರ್ಮವೂ ನಮ್ಮ ಗೌರವಾದರಗಳಿಗೆ ಅರ್ಹವಾಗಿದೆ. ಆದರೆ ಪರಿಸ್ಥಿತಿ ಇಂದು ಬದಲಾಗಿದ್ದು ಜಾತಿಯ ಪೆಸಂಬೂತ ವಿವಿಧ ರಂಗಗಳಲ್ಲಿ ತಲೆ ಎತ್ತಿ ಬರುತ್ತಿರುವುದು ಗಂಡಾಂತರಕಾರಿ. ನಾವು ನಮ್ಮ ಧರ್ಮಗಳನ್ನು ಅನುಸರಿಸುತ್ತಿರುವಾಗ 'ಭಾರತ ಧರ್ಮ' ಎಂಬ ವಿಶಾಲ ಧರ್ಮವಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಅದೇ ಧರ್ಮದೊಡನೆ ಕೂಡಿ ಬಾಳಬೇಕು; ಕೂಡಿ ದುಡಿಯಬೇಕು; ಮತ್ತು ಕೂಡಿಯೇ ಮುಪ್ಪಡೆಯಬೇಕು.

ನಮ್ಮಲ್ಲಿ ರಾಷ್ಟ್ರೀಯ ಭಾವೈಕ್ಯ ಅಗುವರೆಗೆ ಬಹಳ ಶ್ರಮದಾನವಾಗಲು ಕಾರಣಗಳೇನಿರಬಹುದೆಂದು ಆಲೋಚಿಸುವ, ಪ್ರಥಮವಾಗಿ ಭಾರತದಲ್ಲಿ 70% ಕ್ಕಿಂತಲೂ ಹೆಚ್ಚಿನ ಜನರು ಅವಿದ್ಯಾವಂತರು. ಇಂತಹ ಜನರಿಗೆ 'ಭಾವೈಕ್ಯ' ರಾಷ್ಟ್ರ ಪ್ರೇಮ ಎನೆಂದು ಸ್ವಲ್ಪವೂ ತಿಳಿದಿಲ್ಲವಾದ್ದರಿಂದ ನಮ್ಮ ಘಟನೆಯನ್ನು ಸಿದ್ಧಮಾಡುವಾಗ 14 ವರ್ಷಗಳಿಂದ ಕಡಿಮೆ ವಯಸ್ಸಿನ ಮಕ್ಕಳಿಗೆ ಧರ್ಮಾರ್ಥ ಮತ್ತು ಖಡ್ಡಾಯ ಶಿಕ್ಷಣವನ್ನು ಒದಗಿಸಲೇ ಬೇಕೆಂದು ಸೇರಿಸಿಬಿಟ್ಟರು. ಈ ದಿಸೆಯಲ್ಲಿ ಈಗ ಕೆಲಸ ನಡೆಯುತ್ತಿದೆ. ಇದು ಎಷ್ಟು ಯಶಸ್ವಿಯಾಗುವುದೋ?

ಎರಡನೆಯದಾಗಿ ಭಾರತದಲ್ಲಿ ಒಂದೇ ರಾಷ್ಟ್ರಭಾಷೆ ಇಲ್ಲದಿರುವುದು. ಜಗತ್ಪ್ರಸಿದ್ಧಿ ಪಡೆದ ಎಲ್ಲಾ ರಾಷ್ಟ್ರಗಳಲ್ಲಿ ಅವರದೇ ಆದ ರಾಷ್ಟ್ರಭಾಷೆ ಇದೆ. ಈ ಭಾಷೆಗಳಲ್ಲಿಯೇ ಸಾರ್ವಜನಿಕ ವ್ಯವಹಾರ ಸುಗಮವಾಗಿ ನಡೆದು ತತ್ಪರಿಣಾಮವಾಗಿ ಜನತೆಯೊಳಗೆ ಆತ್ಮೀಯತೆ, ಸಹೋದರತೆ ಸಾಕಷ್ಟು ಬೆಳೆದಿದೆ. ನಮ್ಮಲ್ಲಿ 14ಕ್ಕಿಂತಲೂ ಹೆಚ್ಚಿನ ಪ್ರಮುಖ ಭಾಷೆಗಳಿರುವುದರಿಂದ ಜನ ತಮ್ಮ ಭಾಷೆ ವ್ಯವಹಾರಕ್ಕೆ ಉತ್ತಮ ಎಂಬುದಾಗಿ ಪರಸ್ಪರ ಜಗಳವಾಡುತ್ತಾರೆ.

ಮೂರನೆಯದಾಗಿ ಭಾರತದಲ್ಲಿ ಇಂದು ಜನತೆಯನ್ನು ಸಂಘಟಿಸಿ ಅವರಲ್ಲಿ ಸ್ಫೂರ್ತಿ ತುಂಬ ಬಲ್ಲ ಸಿಷ್ಯವಂತ ನಾಯಕರುಗಳ ಕೊರತೆ ಎದ್ದು ಕಾಣುತ್ತದೆ. ಈಗಿನ ರಾಜಕಾರಣಿಗಳು ಸ್ವಾರ್ಥಿಗಳಾಗಿದ್ದು ಜನರ ಒಲವನ್ನು ಕಳೆದುಕೊಂಡಿದ್ದಾರೆ. ಅಧಿಕಾರ ಮೋಹದ ಜಾಲದಲ್ಲಿ ಸಿಲುಕಿ ಬಿದ್ದ ತಮ್ಮೊಳಗೆ ಕಚ್ಚಾಡಿಕೊಳ್ಳುವ ಸ್ವಜಾತಿ ಪಕ್ಷಪಾತಿಗಳಿಂದ ಬಂಧುತ್ವ ಮತ್ತು ಐಕ್ಯ ನಮ್ಮಲ್ಲಿ ಬೆಳೆಯದು.

ಅಲ್ಪಸಂಖ್ಯಾತರ ಪಕ್ಷ, ಅಧಿಕಾರ ಮೋಹದ ದೆಸೆಯಿಂದ ತಪ್ಪು ಮಾಡಿದಲ್ಲಿ ಅದನ್ನು ತಿದ್ದುವ, ಬೆರಳೆತ್ತಿ ತೋರಿಸುವ ಪ್ರಬಲ ಪ್ರತಿ ಪಕ್ಷದ ಕೊರತೆ ನಮ್ಮ ರಾಷ್ಟ್ರದಲ್ಲಿ ಎತ್ತಿ ಕಾಣುತ್ತಿದೆ. ಅಮೇರಿಕ—ಇಂಗ್ಲೆಂಡುಗಳಲ್ಲಿ ಪ್ರಬಲ ಪ್ರತಿಪಕ್ಷ ಬೆಳೆದಿದ್ದು—ಅಲ್ಪಸಂಖ್ಯಾತರ ಪಕ್ಷಕ್ಕೆ ಈ ಪಕ್ಷ ಸಿಂಹ ಸ್ವಪ್ನವಾಗಿದೆ. ಭಾರತದಲ್ಲಿ ಇನ್ನೊಂದು ಪಕ್ಷವಿದೆ. ಜನತೆ ಸಬಲ ವಿರೋಧ ಪಕ್ಷವನ್ನು ಸಂಘಟಿಸದಿದ್ದಲ್ಲಿ ನಮ್ಮ ಸ್ವಾತಂತ್ರ್ಯಕ್ಕೇನೇ ಧಕ್ಕೆ ಬಂದೀತು.

ಭಾರತ ಎಲ್ಲ ದುರ್ಬಲತೆ ದುರ್ಮಾನಗಳನ್ನು ತೃಣಿಸಿ ಮೇಲೇಳಬೇಕು. ಸ್ವಾತಂತ್ರ್ಯದ ಸ್ಪಂದನ ನಮ್ಮ ಹೃದಯಗಳಲ್ಲಿ ಮಿಡಿಯಬೇಕು. ಭಾರತ ಮಾತೆಯ ಭಕ್ತಿ ಅಭಿಮಾನಗಳ ರಕ್ತ ನಮ್ಮ ಧಮನಿಗಳಲ್ಲಿ ಹರಿಯಬೇಕು. ಅವಳ ಅಖಂಡತೆಗಾಗಿ ಸ್ವಾತಂತ್ರ್ಯ ಸಾರ್ವಭೌಮತೆಗಳಿಗಾಗಿ ಹೋರಾಡುವ ಹುಚ್ಚು ನಮ್ಮಲ್ಲಿ ಬೆಳೆಯಬೇಕು. ಇದು ನಮ್ಮ ಸಾಧನೆಯ ಗುರಿ. 'ಭಾವೈಕ್ಯ' ಸಾಧಿಸುವುದರಲ್ಲಿ ನಾವು ಸೋತು ಬಿದ್ದಲ್ಲಿ—ಸಾವಿರಾರು ಜನರ ಬಲಿದಾನ, ತ್ಯಾಗ, ಶ್ರಮದಿಂದ ಪಡೆದ 'ಸ್ವಾತಂತ್ರ್ಯದ ಜ್ಯೋತಿ' ನಂದಿಹೋದೀತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 172/1968

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್—ಯುದ್ಧ ಹೋಲ್‌ಸೇಲ್ ಡಿಪಾರ್ಟ್‌ಮೆಂಟನ ಕಡೆಯಿಂದ ಪಾರ್ಟನರ್ಸ್ ಕೆ. ಕಮಲದಾಸ ಶೆಣೈ ಕೂಡಾ ...ವಾದಿ.

ಮತ್ತು

ಜನಾಬ್ ಬಿ. ಎಚ್. ಮೈದಿನ್—ಕುಂದಾಪುರ ಕಸಬಾ ...ಪ್ರತಿವಾದಿ.

ಸದರಿ ಪ್ರತಿವಾದಿರಿಗೆ—

ವಾದಿರ ಕೋರಿಕೆಯಲ್ಲಿ ಪ್ರತಿವಾದಿಯು ತಾರೀಖು 30-9-1966ರಂದಾ 11-4-67ರ ವರೆಗೆಗಡ್ಡಿದ ದೇವಾದೇಶಿಬಾಬ್ತು ಪ್ರತಿವಾದಿಯಿಂದ ವಾದಿಗೆ ಬರ್ತಕ್ಕ ಅಸಲು ಬಡ್ಡಿ ಕೂಡಾ ರೂಪ್ಯಾ 2727-56ಕ್ಕೆ ವಾದಿರ ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಖು 21-8-68ಕ್ಕೆ ತಕ್ಕಿಗೆ ಯಿಟ್ಟಿದೆ. ಆ ದಿನ ಸದರಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಆದರಿಸಿದೆಯಿದ್ರೆ ಅತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿಗೆ ಯಿ ಮೂಲಕ ತಿಳಿಯಪಡಿಸೋಣಾಗಿದೆ.

H. RAMANATH PAI,
Advocate for Plaintiff

ಉಡುಪಿ, ತಾರೀಖು 3-8-68.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 18/1968.

ದಾಸಪ್ಪ ನಾರಾಯಣ ಪೈ ...ವಾದಿ.

ಜನಾಬ್ ಶೇಕ್ ಯಿಸೂಬ್ ಸ್ಯಾಬ ಕೂಡಾ ...ಪ್ರತಿವಾದಿರು.

1ನೇ ಪ್ರತಿವಾದಿ ಜನಾಬ ಶೇಕ್ ಯಿಸೂಬ ಸಾಹೇಬ, ಶೇಕ್ ಹಸನ್‌ಸಾಹೇಬ ಮಗ, ಕುಂದಾಪುರ ತಾಲೂಕು ಬಸ್ರೂರು ಗ್ರಾಮ—ಇವರಿಗೆ—

ವಾದಿಯು ಪ್ರತಿವಾದಿರ ಮೇಲೆ ವರ್ಷ 1ರ ರೂಪ್ಯಾ 86-00ರಂತೆ ಬರತಕ್ಕ ರೂಪ್ಯಾ 164-75ರ ಬಾಕಿ ಬಗ್ಗೆ ದಾವೆ ಮಾಡಿರುವುದರಿಂದ 1ನೇ ಪ್ರತಿವಾದಿರಿಗೆ ನೋಟಿಸು ಆಗದೇ ಇರುವುದರಿಂದ ಯಿ ಮೂಲಕ ಜ್ಞಾಪೀಸು ಮಾಡಿಕೊಳ್ಳುವುದೇನೆಂದ್ರೆ ಮೇಲ್ಕಂಡ ದಾವೆಯು ತಾರೀಖು 9-9-1968ರಲ್ಲು ಮೇಲ್ಕಂಡ ಕೋರ್ಟು ಮುಂದೆ ತನ್ನ ಬಗ್ಗೆ ಪೂರ್ವಾಹ್ನ ಗಂಟೆ 11ಕ್ಕೆ ಕರಿಯಲ್ಪಡುತ್ತದೆ. ಮೇಲ್ಕಂಡ ಪ್ರತಿವಾದಿ ಸ್ವತಹಾ ಆಗಲೇ ವಕೀಲರ ಮುಖಾಂತರವಾಗಲೇ ಹಾಜರಾಗಿ ತಮ್ಮ ಸಾಧನೆಗಳನ್ನು ಮಾಡತಕ್ಕದ್ದು. ಇಲ್ಲವಾದಲ್ಲಿ ಅದರನ್ನು Exparte ಯನ್ನಾಗಿ ಮಾಡಿ ನಂಬ್ರದಲ್ಲಿ ಎಕ್ಸಪಾರ್ಟ ತೀರ್ಮಾನ ಮಾಡೀತು.

By Order of the Court.

K. Raghunatha Shenoy,
Advocate for Plff.

Coondapur, 6-8-68.

ಮದುವೆ ಹಾಗೂ ವಿಶೇಷ ಸಮಾರಂಭಗಳ,
ವೈವಿಧ್ಯಪೂರ್ಣ ಬಟ್ಟೆಬರೆಗಳಿಗಾಗಿ

ಗಜಾನನ ಕ್ಲಾತ್ ಸ್ಟೋರ್ಸ್

ತೆಂಕಪೇಟೆ, ಉಡುಪಿ, ದ. ಕ.

ಸಂದರ್ಶಿಸಲೇ ಬೇಕಾದ ಅಚ್ಚುಮೆಚ್ಚಿನ ಅಂಗಡಿ.

ಫೋನ್:
ಚಿಲ್ಲರೆ ಮಾರಾಟದ ಅಂಗಡಿ—431
ರಬ್ಬಿಂ ಮಾರಾಟದ ಅಂಗಡಿ—481

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ
ಹಾಗೂ ಎಲ್ಲಾ ತರದ ವಿಶೇಷವಿದೆ.

HOTEL SATKAR

Boarding & Lodging
Near Corporation Office, 9, Mission Road
Bangalore-2

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ

ಶ್ರೀಕೃಷ್ಣನ ಉಡುಪಿಯ ಮೋಲ್ರಗತಿಯ ಪ್ರಪ್ರಥಮ
ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್
ಮ್ಯಾನೇಜರು

ROYAL MAHAL

Up-to-date Boarding and Lodging
UDIPI, S. K.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI WORKS,
UDIPI, S.K.

ಮೈಸೂರು ಟೈಪ್ ಫೌಂಡ್ರಿ

ಎಸ್. ಸಿ. ರೋಡು, ಬಂದಿ ಶೇಷಮ್ಮ ಚೌಲ್ಟ್ರಿ,
ಬೆಂಗಳೂರು- 9.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾದ 'ಮೈಸೂರು ಟೈಪ್ ಫೌಂಡ್ರಿ'ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ.

THE MYSORE TYPE FOUNDRY

LETTERS FOUNDERS
S. C. Road, Bandi Seshamma Choultry
BANGALORE—9.

With best compliments from:

Taj Mahal Group of Hotels

Leading vegetarian hotels in the twin Cities of Hyderabad & Secunderabad. (A. P.)

TAJ MAHAL HOTEL

88, Sarojini Devi Road, SECUNDERABAD

Grams:- 'COURTESY'
Phones.- 73171 (Office)
70105—5 lines.
Connecting all rooms.

TAJ MAHAL HOTEL • TAJ MAHAL CAFE

King Kothi Road
(Abid Road)
HYDERABAD.

Grams:- 'COURTESY'
Phones:- 35591 (Office)
38451—10 lines
Connecting all rooms.

University Road,
Himayathnagar,
HYDERABAD

Grams:- "TAJCAFE"
Phones.. 33446 (Office)
32135— 3 lines
Connecting all rooms.

With best compliments from

S. C. S. MOTOR SERVICE

MANGALORE

We also have an up-to-date extra Bus which is available for Special Tourists Trips.

For particulars apply:-

S. Chandrashekar
Proprietor
S. C. S. Motor Service
MANGALORE.

ಶ್ರೀ ವಿಶ್ವಾಡ ವಿಲಿಯಂ ಪಿಂಟೋ

ರಾಷ್ಟ್ರೀಯ ಭಾವೈಕ್ಯ ಅಗತ್ಯ

ದೇಶದ ಸ್ವಾತಂತ್ರ್ಯವನ್ನುಳಿಸಲು ರಾಷ್ಟ್ರೀಯ ಭಾವೈಕ್ಯ ಅತ್ಯಗತ್ಯ ಸಂಕುಚಿತ ದುರಭಿಮಾನವಿರುವ ಜನತೆ ನಮ್ಮ ಸ್ವಾತಂತ್ರ್ಯವನ್ನು, ಸಾರ್ವಭೌಮತೆಯನ್ನು ಉಳಿಸಿಕೊಳ್ಳುವುದು ಅಸಾಧ್ಯ.

ಪರಕೀಯರ ಸ್ವಾತಂತ್ರ್ಯ ದಿನವನ್ನು ಆಚರಿಸುವುದಿಂದಲೇ ಸ್ವಾತಂತ್ರ್ಯ ಲಭಿಸಿದಂತಾಗಲಿಲ್ಲ. ನಮ್ಮ ಸ್ವಾತಂತ್ರ್ಯ ಸಾರ್ವಭೌಮಾಧಿಕಾರವನ್ನು ಉಳಿಸಿಕೊಳ್ಳಲು ಯೋಗ್ಯತೆ, ಇಚ್ಛೆ, ಪ್ರಜ್ಞೆ, ಪೌರುಷಗಳನ್ನು ಸಾಧಿಸಿಕೊಂಡಿದ್ದೇವೆಯೆ?

ಜನಶಕ್ತಿಯಲ್ಲಿಯೇ ದೊಡ್ಡ ಪ್ರಜಾಸ್ವಾಮ್ಯ ರಾಷ್ಟ್ರವಾಗಿರುವ ನಮ್ಮ ಭಾರತ ಅ ದಿಕೆಯಲ್ಲಿ ಆರ್ಥಿಕಾಭಿವೃದ್ಧಿಯನ್ನು ಸಾಗುತ್ತಿರುವಾಗ ಪ್ರಜಾಪ್ರಭುತ್ವವನ್ನು ಕಬಳಿಸುವ ದುಷ್ಟ ಶಕ್ತಿಗಳು ದೇಶದಲ್ಲಿ ಅಂತರ್ಯುದ್ಧವನ್ನುಂಟುಮಾಡುವ ಶಕ್ತಿಗಳಲ್ಲದೆ ಸ್ವಾರ್ಥ ಮಾಡಬೇಕಾದಲ್ಲಿ ರಾಷ್ಟ್ರೀಯತೆಯನ್ನು ಬಲಿಸಿಕೊಳ್ಳಬೇಕು. ದೇಶದ ಸ್ವತ್ವಕ್ಕೆ ಧಕ್ಕೆ ತರುವ ಅಥವಾ ಇಳ್ಳವನ್ನು ಬಲಹೀನಗೊಳಿಸುವ ಕೃತ್ಯಗಳನ್ನೆಸಗುವವರು ರಾಷ್ಟ್ರದ್ರೋಹಿಯೂ ಸಮಾಜದ ಸ್ವಾಸ್ಥ್ಯಕ್ಕೆ ಸ್ವಾಂಶಕ್ಕೆ ಸಂಬಂಧದ ಘಟನೆಗಳನ್ನು ವಿಮರ್ಶಿಸಿ ನೋಡಿದಲ್ಲಿ 'ರಾಷ್ಟ್ರೀಯತೆ'ಯನ್ನು ಬೆಳೆಸುವುದರಲ್ಲಿ ನಾವು ತಪ್ಪಿ ಬಿದ್ದಂತೆ ತೋರುತ್ತದೆ.

ಭಾರತ—ಚೈನಾ ಆಕ್ರಮಣ, ಪಾಕಿಸ್ತಾನದ ಯುದ್ಧ ಭೀತಿಯನ್ನು ಇನ್ನೂ ತಳೆಕೊಂಡಿಲ್ಲ. ಯಾ ಕ್ಷಣಕ್ಕೂ ನಮ್ಮ ಧೂರ್ತ ವೈರಿಗಳು ಭಾರತ ಮಾಡಿಯೂ ರಾಷ್ಟ್ರದೊಳಗೆ ಅಶಾಂತಿ ಸಮಸ್ಯೆ, ಪಿರುದ್ಯೋಗ ಸಮಸ್ಯೆ, ಭಾಷಾ ಸಮಸ್ಯೆಗಳು ತಾಂಡವವಾಡುತ್ತಿವೆ. ಭಾವೈಕ್ಯ ಸಾಧಿಸಬೇಕೆಂದು ಬೇರೆಯವರಿಗೆ ಉಪದೇಶ ಮಾಡುವ ಮುಖಂಡರೇನೂ ನಮ್ಮಲ್ಲಿ ಕೊರತೆ ಇಲ್ಲ. ಅಚಾರಕ್ಕಲ್ಲದ ಉಪದೇಶ ಶಿಷ್ಟಯೋಜನೆ, ಪ್ರತಿ ಸಾಧಿಸಿ ನೂರಿಷ್ಟ ಶಕ್ತಿ ಮೂರು 'ಭಾರತೀಯ ಸ್ವಾತಂತ್ರ್ಯ' ನ್ನು ಬಲಿಸಿಕೊಂಡಾಗಲೇ ಭಾವೈಕ್ಯ ಸಾಧಿಸಲಾಗುವುದು. ಈ ಸಂದರ್ಭ ಕಾಲದಲ್ಲಿ ತೋಚಿದ್ದನ್ನು ಬರೆಯಲಾರೆನು—ತ್ಯಾಗವಂದು ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರೆವು.

ಭಾರತವನ್ನು ಆಡಳಿತೆಯ ಸುಗಮವಾಯ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯಗಳನ್ನಾಗಿ 1956ರಲ್ಲಿ ವಿಂಗಡಿಸಲಾಯ್ತು. ಸದುದ್ದೇಶವುಳ್ಳ ಈ ಕಾರ್ಯ ನಮ್ಮಲ್ಲಿ ಒಡಕು ಹುಟ್ಟಿಸಿ ದ್ವೇಷ ಭಾವವನ್ನು ಉತ್ಪನ್ನಮಾಡಿ ನಮ್ಮ ಪ್ರಗತಿಯ ಭವ್ಯ ಮಾರ್ಗದಲ್ಲಿ ಸಿಳ್ಳಗಳನ್ನು ತಂದೊಡ್ಡುವುದೆಂದೆ. ಪ್ರಗತಿ ಗಂಭೀರ ದೃಷ್ಟಿಯನ್ನು ಬಿಟ್ಟ ತಾನು. ಭಾರತೀಯ ಎಂಬ ಭಾವನೆಯನ್ನು ಬೆಳೆಸಿಕೊಳ್ಳುವ ಬದಲಿಗೆ ನಮ್ಮ ಸಮುದಾಯ ಎಂದಿಗೂ ಸರಿಯಾದುದಾಗುವುದು.

ಭಾರತೀಯರೆಲ್ಲರೂ ಒಂದಾಗಿರುವ ಮತ್ತು ಸರ್ವರಲ್ಲಿ ಭ್ರಾತೃಭಾವದಿಂದ ಇರುವ ಪುಣ್ಯವಾದ ಸಾಮಾನ್ಯ ರಾಷ್ಟ್ರವನ್ನು ಇಂದು ನಮಗೆ ಬೇಕು. ಬುದ್ಧಿ ಮತ್ತು ಹೃದಯದ ಐಕ್ಯತೆಯನ್ನು ರಾಷ್ಟ್ರವನ್ನು ಪ್ರೇರೇಪಿಸುವ ಅಭ್ಯಾತ್ಮಿಕ ಐಕ್ಯತೆಗಳನ್ನು ನಿರ್ಮಾಣವೇ ಮುಖ್ಯವಾದ ಕೆಲಸ. ನಮಗೆ ಇಂದು ರಾಷ್ಟ್ರೀಯ ಭಾವೈಕ್ಯದ ಅವಶ್ಯಕತೆ ಬಹಳ ಇದೆ. ಭಾವೈಕ್ಯ ಸಾಧಿಸಲು ಪ್ರತಿಕ್ರಿಯೆಯನ್ನು ಸಾಧಿಸಬಹುದು. ಅದರ ಮೈತ್ರಿಯಿಂದ ಬಾಳಿ ಬಾಳಲು ಬಯಸಿದ್ದಲ್ಲಿ ಅವಸರಿಸುವುದೇ ಬೇಕಾಗಿದೆ.

ಭಾರತ ಅನೇಕ ಧರ್ಮ ಪಂಥ, ಸಂಗಡಗಳ ಸ್ಥಾಪಕಗೊಂಡಿದೆ. ಪ್ರತಿಯಾಂದು ಧರ್ಮವೂ ನಮ್ಮ ಗೌರವಾದರಗಳಿಗೆ ಅರ್ಹವಾಗಿವೆ. ಅದರ ಸರಿಸ್ಥಿತಿ ಇಂದು ಬದಲಾಗಿದ್ದು ಜಾತಿಯ ಮತಂಬೂತ ವಿವಿಧ ರಂಗಗಳಲ್ಲಿ ಬಲಿ ಎಲ್ಲಿ ಬರುತ್ತಿರುವುದು ಗಂಡಾಂತರಕಾರಿ. ಭಾರತ ನಮ್ಮ ಧರ್ಮಗಳನ್ನು ಅನುಸರಿಸುತ್ತಿರುವಾಗ ಭಾರತ ಧರ್ಮ ಎಂಬ ವಿಶಾಲ ಧರ್ಮವಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಭಾರತ ಬದ್ಧ ಧರ್ಮದೊಡನೆ ಕೂಡಿ ಬಾಳಬೇಕು; ಕೂಡಿ ಬಾಳಿ ಬಿಡಬೇಕು; ಮುಕ್ತ ಕೂಡಿಯೇ ಮುನ್ನಡೆಸಬೇಕು.

ಪಮ್ಮಲ್ಲಿ ರಾಷ್ಟ್ರೀಯ ಭಾವೈಕ್ಯ ಅನುಸರಿಸಬೇಕಾದ ವಿಧಾನವಾಗಿದ್ದು ಕಾರಣಗಳೇನಿರಬಹುದೆಂದು ಆಲೋಚಿಸುವ ಪ್ರಥಮವಾಗಿ ಭಾರತದಲ್ಲಿ 70% ಕ್ಕಿಂತಲೂ ಹೆಚ್ಚಿನ ಜನರು ಅವಿದ್ಯಾವಂತರು. ಇಂತಹ ಜನರಿಗೆ 'ಭಾವೈಕ್ಯ' ರಾಷ್ಟ್ರ ಪ್ರೇಮ ಏನೆಂದು ಸ್ವಲ್ಪವೂ ತಿಳಿದಿಲ್ಲವಾದ ದರಿಂದ ನಮ್ಮ ಘಟನೆಯನ್ನು ಸಿಗ ಮಾಡುವಾಗ 14 ವರ್ಷಗಳಿಂದ ಕಡಿಮೆ ಪ್ರಾಯದ ಮಕ್ಕಳಿಗೆ ಧರ್ಮಾರ್ಥ ಮತ್ತು ಬಿಡ್ಡಾಯ ಶಿಕ್ಷಣವನ್ನು ಒದಗಿಸಬೇಕೆಂದು ಸೇರಿಸಿಬಿಟ್ಟರು. ಈ ವಿಷಯದಲ್ಲಿ ಈಗ ಕೆಲಸ ನಡೆಯುತ್ತಿದೆ. ಇದು ನಮ್ಮ ಯಶಸ್ವಿಗೂಗುವುದೂ?

ಎಲ್ಲವನ್ನೂ ಗಾಗಿ ಭಾರತದಲ್ಲಿ ಒಂದೇ ರಾಜ್ಯ ಭಾಷೆ ಇಲ್ಲದಿರುವುದು. ಜಗತ್ತಿನ ಪ್ರಮುಖ ಎಲ್ಲ ರಾಷ್ಟ್ರಗಳಲ್ಲಿ ಅನಾದಿ ಅದ ರಾಷ್ಟ್ರಭಾಷೆ ಇದೆ. ಈ ಭಾಷೆಗಳಲ್ಲಿಯೇ ಸಾರ್ವಜನಿಕ ವ್ಯವಹಾರ ಸುಗಮವಾಗಿ ನಡೆದು ಪ್ರಜ್ಞಾಪೂರ್ವಕವಾಗಿ ಜನತೆಯೊಳಗೆ ಅನ್ಯೋನ್ಯತೆ. ಸಹೋದರತೆ ಸಾಧ್ಯವು ಬೆಳೆದಿದೆ. ನಮ್ಮಲ್ಲಿ 14 ಕ್ಕಿಂತಲೂ ಹೆಚ್ಚಿನ ಪ್ರಮುಖ ಭಾಷೆಗಳಿರುವುದರಿಂದ ಜನ ಪ್ರಜ್ಞೆ ಭಾಷೆ ವ್ಯವಹಾರಕ್ಕೆ ಉಪಯೋಗಿಸಲಾಗಿ ಪರಸ್ಪರ ಭಾವನಾಭಾವ ಕುಂಠಿತವಾಗಿದೆ.

ಮಾರನೆಯದಾಗಿ ಭಾರತದಲ್ಲಿ ಇಂದು ಜನತೆಯನ್ನು ಸಂಘಟಿಸಲಿಲ್ಲ. ಸ್ಥಾಪಿಸಲಾಗಿ ಬಲ್ಲ ಪಿಷ್ಟಾಂಶ ಸಾಮಾಜಿಕರುಗಳ ಕೊರತೆ ಎದ್ದು ಕಾಣುತ್ತದೆ. ಈಗಿನ ರಾಜಕಾರಣಿಗಳು ಸ್ವಾರ್ಥಗಳಾಗಿದ್ದು ಜನತೆ ಒಗ್ಗಟ್ಟನ್ನು ಬಲಿದುಕೊಂಡಿದ್ದಾರೆ. ಅಧಿಕಾರ ಮೋಹದ ಜಾಲದಲ್ಲಿ ಸಿಲುಕಿ ಪಿಷ್ಟ ಪಮ್ಮಲ್ಲಿಗೆ ಕಚ್ಚಾಡಿಕೊಳ್ಳುವ ಸ್ವಜನ ಪಕ್ಷಪಾತಗಳಿಂದ ಸಂಘಟಿಸಲ್ಪಟ್ಟ ಇತ್ತ ಪಮ್ಮಲ್ಲಿ ಬೆಳೆಯದು.

ಆಳ್ವಿಕೆಯ ಪಕ್ಷ ಅಧಿಕಾರ ನೋಡದ ಬೆಸೆಯಿಂದ ಪಕ್ಷ ಮಾಡಿದಲ್ಲಿ ಅದನ್ನು ಎದ್ದನ್ನ ಬೆಳೆತ್ತಿ ನೋಡಿದ ಪ್ರಬಲ ಪ್ರತಿ ಪಕ್ಷದ ಕೊರತೆ ನಮ್ಮ ರಾಷ್ಟ್ರದಲ್ಲಿ ಎತ್ತಿ ಕಾಣುತ್ತಿದೆ. ಅಮೇರಿಕ—ಇಂಗ್ಲೆಂಡುಗಳಲ್ಲಿ ಪ್ರಬಲ ಪ್ರತಿಪಕ್ಷ ಬೆಳೆದಿದ್ದು ಅಲ್ಲಿಯ ಪಕ್ಷಕ್ಕೆ ಈ ಪಕ್ಷ ಸಂಪೂರ್ಣವಾಗಿದೆ. ಭಾರತದಲ್ಲಿ ಬಹುಸಂಖ್ಯಾತ ಪಕ್ಷವಿದೆ. ಜನತೆ ಸಬಲ ವಿರೋಧ ಪಕ್ಷವನ್ನು ಸಂಘಟಿಸದಿದ್ದಲ್ಲಿ ನಮ್ಮ ಸ್ವಾತಂತ್ರ್ಯಕ್ಕೇನೇ ಧಕ್ಕೆ ಬಂದೀತು.

ಭಾರತ ಎಲ್ಲ ದುರ್ಬಲರಿಗೆ ಮುಮ್ಮಾನಗಳನ್ನು ಶತ್ರುವಿ ಮೇಲೇಳಬೇಕು. ಸ್ವಾತಂತ್ರ್ಯದ ಪ್ರಜೆಗಳ ನಮ್ಮ ಹೃದಯಗಳಲ್ಲಿ ಏಕಿಯಬೇಕು. ಭಾರತ ಮಾತೆಯ ಭಕ್ತಿ ಅಭಿಮಾನಗಳ ರಕ್ಷ ನಮ್ಮ ದೇಶಭಕ್ತಿಗಳಲ್ಲಿ ಬರಿಯಬೇಕು. ಅದಕ್ಕೆ ಅಂಗಡಿಗಾಗಿ ಸ್ವಾತಂತ್ರ್ಯ ಸಾರ್ವಭೌಮತೆಗಾಗಿ ಹೋರಾಡುವ ಹುಚ್ಚು ನಮ್ಮಲ್ಲಿ ಬೆಳೆ ಬಾರದೇ. ಇದು ನಮ್ಮ ಸಾಧನೆಯ ಗುರಿ. 'ಭಾವೈಕ್ಯ' ಸಾಧಿಸುವುದಲ್ಲಿ ಭಾರತ ಸಾಧಿಸಿ ಬೆಳ್ಳಿ—ಸಾವಿರಾರು ಜನತೆ ಬಲಿದಾನ, ತ್ಯಾಗ, ಶ್ರಮದಿಂದ ಪಡೆದ 'ಸ್ವಾತಂತ್ರ್ಯದ ಜ್ಯೋತಿ' ನಂದಿಹೋಗದೀತು.

ಮುದುವೆ ಹಾಗೂ ವಿಶೇಷ ಸಮಾರಂಭಗಳ್ಳ ವೈವಿಧ್ಯಪೂರ್ಣ ಬಟ್ಟೆಬರೆಗಳಿಗಾಗಿ

ಗಜಾನನ ಕ್ಲಾತ್ ಸ್ಟೋರ್ಸ್

ತೆಂಕಪೇಟೆ, ಉಡುಪಿ, ದ. ಕ.

ಸಂದರ್ಶಿಸಲೇ ಬೇಕಾದ ಅಚ್ಚುಮೆಚ್ಚಿನ ಅಂಗಡಿ.

ಫೋನ್:
ಬಿಲ್ಲರೆ ಮಾರಾಟದ ಅಂಗಡಿ—431
ಥಮಂ ಮಾರಾಟದ ಅಂಗಡಿ—481

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

O. S. No 172/196

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್—ಯುದ್ಧ ಹೋಲ್‌ಸೇಲ್ ಡಿಸ್ಟ್ರಿಬ್ಯೂಟರ್ಸ್ ಎಂಬಿನ ಕಡೆಯಿಂದ ಸಾರ್ಟರ್ಸ್ ಎ. ಕಮಲಾಬಾಯಿ ಶೆಟ್ಟಿ ಕೂಡಾ —ನಾನು

ಮುಖ್ಯ

ಜನಾರ್ಧನ ಬಿ. ಎಸ್. ಮೈದಿನ್—ಕುಂದಾಪುರ ಕಸಬಾ —ಪ್ರತಿವಾದಿ.

ಸದರಿ ಪ್ರತಿವಾದಿಗೆ—

ವಾದಿರ ಕೋರಿಸಿನಲ್ಲಿ ಪ್ರತಿವಾದಿಯು ದಾವೇಯ 30.8.1966ರಂದಾ 11.1.67ರ ಸರೆಗೆನಡ್ಡಿದ ಲೇವಾದೇವಿಬಾಬ್ತು ಪ್ರತಿವಾದಿಯಿಂದ ವಾದಿರಿಗೆ ಬರ್ತಿಕ್ಕಿ ಆಗಲಿ ಬಡ್ಡಿ ಕೂಡಾ ರೂಪಾಯಿ 2727.66ಕ್ಕೆ ವಾದಿರ ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ಸಾರೀಲು 21.6.68ಕ್ಕೆ ತನ್ನಿಗೆ ಯಿಟ್ಟಿದೆ. ಆ ದಿನ ಸದರಿ ಪ್ರತಿವಾದಿಯು ಇಲ್ಲಿ ಹಾಜರಾ ಏಕೇಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಯಿಸಿದೆಯಿದ್ದ ಅದನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯತ ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿಗೆ ಯೂ ಸೂಚಿಸಲ್ಪಡಿಸಲಾಗಿದೆ.

H. RAMANATH PAI,
Advocate for Plaintiff

ಉಡುಪಿ, ತಾರೀಖು 3.8.68.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 18/1968

ದಾಸಪ್ಪ ನಂಜಯ್ಯ ಶೆಟ್ಟಿ —ವಾದಿ.

ಬಸಾರ್ ಶೇಖ್ ಯಿಸೂಫ್ ಸ್ವಾಮಿ ಕೂಡಾ —ಪ್ರತಿವಾದಿಯು

1ನೇ ಪ್ರತಿವಾದಿ ಜನಾಬ ಶೇಖ್ ಯಿಸೂಫ್ ಸಾಹೇಬ್, ಪೇಟೆ ಬಸಾರ್ ಸಾಹೇಬ್ ಮಗ, ಕುಂದಾಪುರ ತಾಲೂಕು ಬಸ್ರೂರು ಗ್ರಾಮ—ಇವರಿಗೆ—

ವಾದಿಯ ಪ್ರತಿವಾದಿರ ಮೇಲೆ ಸದರಿ 1ರ ರೂಪಾಯಿ 36-00ರಂತೆ ಬರತಕ್ಕ ರೂಪಾಯಿ 164-75ರ ಬಾಕಿ ಬಗ್ಗೆ ದಾವೆ ಮಾಡಿರುವುದರಿಂದ 1ನೇ ಪ್ರತಿವಾದಿರಿಗೆ ನೋಟೀಸು ಆಗಬೇಕಾಗಿರುವುದರಿಂದ ಸದರಿಮೂಲಕ ಜ್ಞಾಪಿಸಲು ಮಾಡಿಕೊಳ್ಳುವುದೇನೆಂದರೆ ದಾವೆಯು ತಾರೀಖು 9.9.1968ರಲ್ಲು ಮೇಲ್ಕಂಡ ಕೋರ್ಟು ಮುಂದೆ ತನ್ನ ಬಗ್ಗೆ ಪೂರ್ವಾಹ್ನ ಗಂಟೆ 11ಕ್ಕೆ ತರೆಯಲ್ಪಡುತ್ತದೆ. ಮೇಲ್ಕಂಡ ಪ್ರತಿವಾದಿ ಸ್ವತಹಾ ಆಗಲೇ ಅಥವಾ ಏಕೇಲರ ಮುಖಾಂತರವಾಗಲೇ ಹಾಜರು ಆಗಿ ತಮ್ಮ ಸಾಧನೆಗಳನ್ನು ಮಾಡಿಕೊಳ್ಳತ್ತು. ಇಲ್ಲವಾದಲ್ಲಿ ಅದರನ್ನು Exparte ಯನ್ನಾಗಿ ಮಾಡಿ ತಂಬ್ರದಲ್ಲಿ ಎಕ್ಸಪಾರ್ಟೆ ತೀರ್ಮಾನ ಮಾಡಿದೆವು.

By Order of the Court
K. Raghunatha Shenoy,
Advocate for Plff.

Coondapur, 6-8-68.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ ಹಾಗೂ ಎಲ್ಲಾ ತರದ ವಿಶಾಲವಿದೆ.

HOTEL SATKAR

Boarding & Lodging
Near Corporation Office, 9, Mission Road
Bangalore-2

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ

ಶ್ರೀಕೃಷ್ಣನ ಉಡುಪಿಯ ಮೇಲ್ತರಗತಿಯ ಪ್ರಪ್ರಥಮ
ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್
ಮ್ಯಾನೇಜರು

ROYAL MAHAL

Up-to-date Boarding and Lodging
UDIPI, S. K.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ.
ಅಂದರೆ ನೀವು ತಪ್ಪದೆ ಅದನ್ನು
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI WORKS,

UDIPI, S.K.

ಮೈಸೂರು ಟೈಪ್ ಫೌಂಡ್ರಿ

ಎಸ್. ಸಿ ರೋಡು, ಬಂದಿ ಶೇಷಮ್ಮ ಚಾಳಿ,
ಬೆಂಗಳೂರು - 9.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾದ 'ಮೈಸೂರು ಟೈಪ್ ಫೌಂಡ್ರಿ'ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ತಯಾರು ಮಾಡಿಸುವುದರಿಂದ ವಿಶೇಷ ಉಪಯುಕ್ತವಾದುದಾಗಿದೆ.

ದಕ್ಷಿಣ ಕನ್ನಡದ ಬಹುಪಾಲು ಮುದ್ರಣಾಲಯಗಳಿಗೆ ನಾವು ಟೈಪು ಸರಬರಾಜು ಮಾಡಿಕೊಡುತ್ತಿದ್ದೇವೆ. ಇಂದೇ ವಿಳಾಸಗೊಳಿಸಿರಿ.

THE MYSORE TYPE FOUNDRY

LETTERS FOUNDERS
S. C. Road, Bandi Seshamma Choultry
BANGALORE—9.

With best compliments from:

Taj Mahal Group of Hotels

Leading vegetarian hotels in the twin Cities of Hyderabad & Secunderabad. (A. P.)

TAJ MAHAL HOTEL

88, Sarojini Devi Road, SECUNDERABAD

Grams.- 'COURTESY'
Phones.- 73171 Office)
70105—5 lines.
Connecting all rooms.

TAJ MAHAL HOTEL • TAJ MAHAL CAFE

King Kothi Road
(Abid Road)
HYDERABAD.

Grams:- 'COURTESY'
Phones:- 35591 (Office)
38451—10 lines
Connecting all rooms.

University Road,
Himayathnagar,
HYDERABAD.

Grams:- "TAJCAFE"
Phones.- 33446 (Office)
32136— 3 lines
Connecting all rooms.

With best compliments from

S. C. S. MOTOR SERVICE

MANGALORE

We also have an up-to-date extra Bus which is available for Special Tourists Trips.

For particulars apply:-

S. Chandrashekar
Proprietor:
S. C. S. Motor Service
MANGALORE.

ಶತಾಯುಷಿ ಗಂಗಾಬಾಯಿ

ಶ್ರೀಮತಿ ಕೆ. ಸೀತಾರಾಮ ರಾಯರೂ ಅವರ ಸಹೋದರರೂ ಹೋಟೇಲು ಉದ್ದಿಮೆಯ ಕ್ರಾಂತಿ ಪುರುಷರೆಂದೂ ಧಾರ್ಮಿಕ ಕಂಚದ ಅಧ್ವರ್ಯುಗಳೆಂದೂ ಹೆಸರುಗಳಿಸಿದವರು. ಭಕ್ತ ಗೋವಿಂದ ದಾಸರ ಧರ್ಮಪತ್ನಿಯಾಗಿ, ಕುತ್ತೆತ್ತೂರು ಸಹೋದರರ ಮಹಾಮಾತೆಯಾಗಿ, ಹತ್ತಾರು ಧರ್ಮಪ್ರೇಮಿ ನೊಮ್ಮಕ್ಕಳ, ಮರಿ ಮಕ್ಕಳ ಪ್ರೇಮದ ಪುತ್ಥಳಿಯಾಗಿ ಬಾಳಿ ತಮ್ಮ ನೂರಿಪ್ಪತ್ತು ವರ್ಷಗಳ ಜೀವನವನ್ನು ಧರ್ಮಪರಾಯಣೆಯಾಗಿ ಬದುಕಿ ವಿಷ್ಣುಪದ ಸೇರಿದ ಶ್ರೀಮತಿ ಗಂಗಾಬಾಯಿಯವರು ಭಾರತಾಂಬೆಯ ಪುತ್ರಿಯರಲ್ಲಿ ಒಬ್ಬರು.

ಉಡುಪಿಯ ಶ್ರೀ ಪುತ್ತಿಗೆ ಮಠದ ಶತಾಯುಷಿ ಯತಿವರ್ಯ ಶ್ರೀ ಶ್ರೀ ಸುಧೀಂದ್ರ ತೀರ್ಥರ ಶತಮಾನೋತ್ಸವ, ಸಹಸ್ರ ಬ್ರಾಹ್ಮಣಾರಾಧನೆ, ಸಹಸ್ರ ಚಂದ್ರ ದರ್ಶನ ಶಾಂತಿ, ಶ್ರೀಕೃಷ್ಣ ಸನ್ನಿಧಿಯಲ್ಲಿ ಸಪ್ತರಾತ್ರೋತ್ಸವ, ಧರ್ಮ ಪ್ರಕಾಶ ಧರ್ಮ ಸಂಸ್ಥೆ, ಅಖಿಲ ಭಾರತ ಮಾಧ್ವ ಮಹಾ ಮಂಡಳದ ೪ನೆ ಅಧಿವೇಶನ, ಆಗಾಗ್ಗೆ ಬಡ ಬ್ರಾಹ್ಮಣ ಬಾಲಕರ ಧರ್ಮಸಭೆಯ, ವಟುಗಳಿಗೆ ಕ್ಷೌರ್ಯ ಮೌಲ್ಯ ಕಾರ್ಯದಲ್ಲಿ ಶಿಕ್ಷಣ, ವಿದ್ಯಾರ್ಥಿ ಮಾಧ್ವ ಸಂಘದ ರಜತೋತ್ಸವ, ಶ್ರೀ ಮನ್ಮಾಧ್ವರಾದ್ಧಾಂತ ಸಂವರ್ಧಿನೀ ಸಭೆಯ ೨೨ನೆಯ ಅಧಿವೇಶನ ಮೊದಲಾದ ಮಹಾ ಧರ್ಮ ಕಾರ್ಯಗಳನ್ನು ತಮ್ಮ ಪುತ್ರರ ಮೂಲಕ ಅನುದ್ದೇಶವಾಗಿ ಕಡಿಸಿದ ಪುಣ್ಯಜೀವಿ ದಿ| ಗಂಗಾಬಾಯಿಯವರು.

ತಮ್ಮ ೧೦೨ನೇ ವಯಸ್ಸಿನಲ್ಲೂ ತನ್ನ ಪುತ್ರರನ್ನೂ, ಕುಟುಂಬದವರನ್ನೂ ಕೂಡಿಕೊಂಡು ಬದರೀ ಯಾತ್ರೆಯನ್ನೂ ಪೂರೈಸಿದ ವೀರಮಾತೆಯವರು. ಶ್ರೀಮತಿ ಗಂಗಾಬಾಯಿಯವರು ತಾ. ೧೨-೭-೬೮ರಂದು ಉತ್ತರಾಯಣದಲ್ಲೇ, ಹರಿಚರಣದಲ್ಲಿ ತಮ್ಮನ್ನು ಸಮರ್ಪಿಸಿದ ಇಚ್ಛಾಮರಣಿಗಳು.

ಇಂತಹ ಪರಮ ಸಾಧ್ವಿ, ವೀರ ಜನನಿ, ಧರ್ಮಭೀರು ಕ್ರಾಂತಿಕಾರಿಯೇಯರೇ ಸರಿ.

In the Court of the Munsif of Coondapoor.

S. C. No 143/1968

Between—

Manjunatha Upadya—Plaintiff

and

Sitarama Upadya and another —Defendants

To

Sitarama Upadya, Son of Kuradi Haridas Upad,a, now residing at Sagar Town, Sagar. (Ist defendant)

Please take notice that the plaintiff had filed the above suit for recovering rents due to the plaintiff from your family and the said suit stands posted to 9—9—1968 before the above Court. You are requested to appear before the above Court at 11 A. M. and urge your defence if any, failing which you will be declared Ex- Parte and further orders will be passed

(By order)

(Sd.) K. Ramappayya,

B. A., B. L.,

Advocate for plaintiff.

Coondapoor, 7—8—68.

With best compliments from

V. R. BHAGWAT

Merchant & Agent, L. I. C.

SIRSI (N. K.)

ವಿ. ಆರ್. ಭಾಗ್ವತ

ವ್ಯಾಪಾರಿಗಳು ಹಾಗೂ ಜೀವ-ವಿಮಾ ಏಜಂಟರು

ಶಿರಸಿ (ಉತ್ತರ ಕನ್ನಡ)

೧) ಅಡಿಕೆ, ಮೆಣಸು, ಯಾಲಕ್ಕಿ ವ್ಯಾಪಾರಿಗಳು

೨) ಕೋಕ ಕಿರಾಣಿ ಜೀನಸುಗಳ ವ್ಯಾಪಾರಿಗಳು

೩) ಜೀವ ವಿಮಾ ಏಜಂಟರು

ತಮ್ಮ ಸಮೃದ್ಧ ಜೀವನಕ್ಕೆ ಮಕ್ಕಳ ಶಿಕ್ಷಣ ವ ಮದುವೆಗೆ ಕುಟುಂಬದ ಭದ್ರತೆಗೆ ನಮ್ಮ ದೇಶದ ಕಲ್ಯಾಣಕ್ಕೆ

ಜೀವ ವಿಮಾ ಉಳಿತಾಯವೇ

ಸರ್ವಶ್ರೇಷ್ಠ ಉಳಿತಾಯ

● ಜೀವ ವಿಮಾ ಸಂಬಂಧಿ ಸಲಹೆ, ಪಾಲಿಸಿದಾರರಿಗೆ ನಾಲ ವರ್ಗೈರೆ ದೊರಕಿಸಿ ಕೊಡುವುದೇ ಮೊದಲಾದ ಸೇವೆಯನ್ನು ಉಚಿತವಾಗಿ ಕೀಡಲಾಗುವುದು.

AGENTS for

Life & General Insurance

Life Insurance Provides Money When You Need It Most

• ಉಡುಪಿಯ ಭಾರತದಲ್ಲಿ 809 ವರ್ಷಗಳಿಂದ ಪ್ರಸಿದ್ಧ ಕ್ಷೇತ್ರ!

• ಐರೋಡಿಯವರ ಪಾತ್ರೆಭಂಡಾರವು 89 ವರ್ಷಗಳಿಂದ ಉಡುಪಿಯಲ್ಲಿ ಪ್ರಸಿದ್ಧ!!

ಕಡಿಮೆ ಕ್ರಯದಲ್ಲಿ
ಉತ್ತಮ ಸೌಂದರ್ಯದ
ಮನೆ, ಮಠ,
ದೇವಾಲಯಗಳಿಗೆ ಬೇಕಾಗುವ
ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು,
ಸ್ಟೀಲ್, ಎಲ್ಯುಮಿನಿಯಮ್
ಪಾತ್ರೆಗಳು
ರಖಂ ಆಗಿಯೂ ಚಿಲ್ಲರೆಯಾಗಿಯೂ
ಸಿಗುವ ಒಂದೇ ಅಂಗಡಿ

ಮೆಸರ್ಸ್
ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿ ಅನಂತೇಶ್ವರ ಸನ್ನಿಧಿ,
ರಥಬೀದಿ, ಉಡುಪಿ, ದ. ಕನ್ನಡ.

ವಿಶೇಷ ಸೂಚನೆ:— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

THE
BHARATH MOTOR SERVICE

Maidan III Cross Road

MANGALORE-1

(Phone : 3446)

We provide special buses at moderate charges for the conveyance of marriage, excursion and tourist parties.

P. S: **Special concession allowed for students' educational tours.**

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ.....

ಹಿಂದುಸ್ಥಾನ್ ಬ್ರೈನ್ ಬೊವೆರಿ

ಮೋಟಾರು ಪಂಪುಸೆಟ್ಟುಗಳನ್ನೇ ಆರಿಸುತ್ತಾರೆ.

ಕಾರಣವೇನೆಂದರೆ..... .....

- ಸ್ವಿಜರ್‌ಲ್ಯಾಂಡಿನ ತಜ್ಞರ 75 ವರ್ಷಗಳ ತಾಂತ್ರಿಕ ಜ್ಞಾನ ಮತ್ತು ಅನುಭವದ ಮೇರೆಗೆ ಮೋಟಾರು ತಯಾರಿಸಲ್ಪಟ್ಟಿದೆ.
- ಅದು ಅತ್ಯಂತ ವಿಶ್ವಾಸನೀಯವಾಗಿದೆ, ಗಟ್ಟಿಮುಟ್ಟಾಗಿದೆ, ನೋಡಲು ಚೆನ್ನಾಗಿದೆ.
- 'E' ಇನ್ಸುಲೇಶನಿಂದಾಗಿ ಕಡಿಮೆ ವೋಲ್ಟೇಜಿನಲ್ಲಿ ಕೂಡಾ ಸರಾಗವಾಗಿ ನಡೆಯುತ್ತದೆ. ಸುಟ್ಟು ಹೋಗುವುದಿಲ್ಲ.
- ಕಡಿಮೆ ವಿದ್ಯುತ್ ಖರ್ಚಿನಲ್ಲಿ ಅಧಿಕ ಕೆಲಸವನ್ನು ಕೊಡುತ್ತದೆ.
- ಒಂದು ವರುಷದ ಗ್ಯಾರಂಟಿಯನ್ನು ಪಡೆದಿದೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು ಕೆಳಗಿನವರಲ್ಲಿ ಸದಾ ದಾಸ್ತಾನದಿಂದ ಪಡೆಯಬಹುದು

VICTOR TRADING CORPORATION
FALNIR ROAD - - MANGALORE-1

GOPAL FARM ENGINEERS
FALNIR ROAD - - MANGALORE-1

ಶತಾಯುಷಿ ಗಂಗಾಬಾಯಿ

ಶ್ರೀಮತಿ ಕೆ. ಸೀತಾರಾಮ ರಾಯರೂ ಅವರ ಸಹೋದರರೂ ಹೊಟೇಲು ಉದ್ಯಮದ ಕ್ರಾಂತಿ ಪುರುಷರೆಂದೂ ಧಾರ್ಮಿಕ ರಂಗದ ಅಧ್ವರ್ಯುಗಳೆಂದೂ ಹೆಸರುಗಳಿಸಿದವರು. ಭಕ್ತ ಗೋವಿಂದ ದಾಸರ ಧರ್ಮಪತ್ನಿಯಾಗಿ, ಕಾತ್ತೆತ್ತೂರು ಸಹೋದರರ ಮಹಾಮಾತೆಯಾಗಿ, ಹತ್ತಾರು ಧರ್ಮಪ್ರೇಮಿ ಮೊಮ್ಮಕ್ಕಳ, ಮರಿ ಮಕ್ಕಳ ಪ್ರೇಮದ ಪುತ್ಥಳಿಯಾಗಿ ಬಾಳಿ ತಮ್ಮ ನೂರಿಪ್ಪತ್ತು ವರ್ಷಗಳ ಜೀವನವನ್ನು ಧರ್ಮಪರಾಯಣೆಯಾಗಿ ಬದುಕಿ ವಿಷ್ಣುಪದ ಸೇರಿದ ಶ್ರೀಮತಿ ಗಂಗಾಬಾಯಿಯವರು ಭಾರತಾಂಬೆಯ ಪುತ್ರಿಯರಲ್ಲಿ ಒಬ್ಬರು.

ಉಡುಪಿಯ ಶ್ರೀ ಪುತ್ತಿಗೆ ಮಠದ ಶತಾಯು ಯತಿವರ್ಯ ಶ್ರೀ ಶ್ರೀ ಸುಧೀಂದ್ರ ತೀರ್ಥರ ಶತಮಾನೋತ್ಸವ, ಸಹಸ್ರ ಬ್ರಾಹ್ಮಣಾರಾಧನೆ, ಸಹಸ್ರ ಚಂದ್ರ ದರ್ಶನ ಶಾಂತಿ, ಶ್ರೀಕೃಷ್ಣ ಸನ್ನಿಧಿಯಲ್ಲಿ ಸಪ್ತರಾತ್ರೋತ್ಸವ, ಧರ್ಮ ಪ್ರಕಾಶ ಧರ್ಮ ಸಂಸ್ಥೆ, ಅಖಿಲ ಭಾರತ ಮಾಧ್ವ ಮಹಾ ಮಂಡಳದ ಎರಡನೆ ಅಧಿವೇಶನ, ಆಗಾಗ್ಗೆ ಬಡ ಬ್ರಾಹ್ಮಣ ಬಾಲಕರ ಧರ್ಮೋಪನಯನ, ಮಠಗಳಿಗೆ ನಿತ್ಯ ನೈಮಿತ್ತಿಕ ಕಾರ್ಯಗಳ ಶಿಕ್ಷಣ, ವಿದ್ಯಾರ್ಥಿ ಮಾಧ್ವ ಸಂಘದ ರಜತೋತ್ಸವ, ಶ್ರೀ ಮನ್ಮಾಧ್ವರಾದ್ಧಾಂತ ಸಂವರ್ಧಿನೀ ಸಭೆಯ ೨೨ನೆಯ ಅಧಿವೇಶನ ಮೊದಲಾದ ಮಹಾ ಧರ್ಮ ಕಾರ್ಯಗಳನ್ನು ತಮ್ಮ ಪುತ್ರರ ಮೂಲಕ ಅನುದಶವಾಗಿ ಕಡೆಸಿದ ಪುಣ್ಯಜೀವಿ ಶ್ರೀ ಗಂಗಾಬಾಯಿಯವರು.

ತನ್ನ ೧೦೨ನೇ ವಯಸ್ಸಿನಲ್ಲೂ ತನ್ನ ಪುತ್ರರನ್ನೂ, ಕುಟುಂಬದವರನ್ನೂ ಕೂಡಿಕೊಂಡು ಬದರೀ ಯಾತ್ರೆಯನ್ನು ಪೂರೈಸಿದ ವೀರ ಮಾತೆಯವರು. ಶ್ರೀಮತಿ ಗಂಗಾಬಾಯಿಯವರು ತಾ. ೧೨-೭-೬೮ರಂದು ಉತ್ತರಾಯಣದಲ್ಲೇ, ಹರಿಚರಣದಲ್ಲಿ ತಮ್ಮನ್ನು ಸಮರ್ಪಿಸಿದ ಇಚ್ಛಾಮರಣಿಗಳು.

ಇಂತಹ ಪರಮ ಸಾಧ್ವಿ, ವೀರ ಜನನಿ, ಧರ್ಮಭೀರು ಪ್ರಾತಃಸ್ಮರಣೀಯರೇ ಸರಿ.

In the Court of the Munsif of Coondapoor.

S. C. No. 143/1968

Between—

Manjunatha Upadya—Plaintiff

and

Sitarama Upadya and another —Defendants

To

Sitarama Upadya, Son of Kuradi Haridas Upadya, now residing at Sagar Town, Sagar. (Ist defendant)

Please take notice, that the plaintiff had filed the above suit for recovering rents due to the plaintiff from your family and the said suit stands posted to 9—9—1968 before the above Court. You are requested to appear before the above Court at 11 A. M. and urge your defence if any, failing which you will be declared Ex- Parte and further orders will be passed.

(By order)

(Sd.) K. Ramappayya,

B. A., B. L.,

Advocate for plaintiff.

Coondapoor, 7—8—68.

With best compliments from

V. R. BHAGWAT

Merchant & Agent, L. I. C.

SIRSI (N. K.)

ವಿ. ಆರ್. ಭಾಗ್ವತ

ವ್ಯಾಪಾರಿಗಳು ಹಾಗೂ ಜೀವ-ವಿಮಾ ಏಜಂಟರು

ಶಿರಸಿ (ಉತ್ತರ ಕನ್ನಡ)

೧) ಅಡಿಕೆ, ಮೆಣಸು, ಯಾಲಕ್ಕಿ ವ್ಯಾಪಾರಿಗಳು

೨) ಕೋಕ ಕಿರಾಣಿ ಜೀನಸುಗಳ ವ್ಯಾಪಾರಿಗಳು

೩) ಜೀವ ವಿಮಾ ಏಜಂಟರು

ತಮ್ಮ ಸಮೃದ್ಧ ಜೀವನಕ್ಕೆ ಮಕ್ಕಳ ಶಿಕ್ಷಣ ವ ಮುದುವೆಗೆ
ಕುಟುಂಬದ ಭದ್ರತೆಗೆ ನಮ್ಮ ದೇಶದ ಕಲ್ಯಾಣಕ್ಕೆ

ಜೀವ ವಿಮಾ ಉಳಿತಾಯವೇ

ಸರ್ವಶ್ರೇಷ್ಠ ಉಳಿತಾಯ

● ಜೀವ ವಿಮಾ ಸಂಬಂಧಿ ಸಲಹೆ, ಪಾಲಿಸಿದಾರರಿಗೆ ಸಾಲ ವಗೈರೆ ದೊರಕಿಸಿ ಕೊಡುವುದೇ ಮೊದಲಾದ ಸೇವೆಯನ್ನು ಉಚಿತವಾಗಿ ಕೀಡಲಾಗುವುದು.

AGENTS for

Life & General Insurance

Life Insurance Provides Money When You Need It Most

● ಉಡುಪಿಯ ಭಾರತದಲ್ಲಿ 809 ವರ್ಷಗಳಿಂದ ಪ್ರಸಿದ್ಧ ಕ್ಷೇತ್ರ!

● ಐರೋಡಿಯವರ ಪಾತ್ರಭಂಡಾರವು 89 ವರ್ಷಗಳಿಂದ ಉಡುಪಿಯಲ್ಲಿ ಪ್ರಸಿದ್ಧ!!

ಕಡಿಮೆ ಕ್ರಯದಲ್ಲಿ
ಉತ್ತಮ ಸೌಂದರ್ಯದ
ಮನೆ, ಮಠ,
ದೇವಾಲಯಗಳಿಗೆ ಬೇಕಾಗುವ
ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು,
ಸ್ಟೀಲ್, ಎಲ್ಯುಮಿನಿಯಮ್
ಪಾತ್ರೆಗಳು
ರಬಿಂ ಆಗಿಯೂ ಚಿಲ್ಲರೆಯಾಗಿಯೂ
ಸಿಗುವ ಒಂದೇ ಅಂಗಡಿ

ಮೆಸರ್ಸ್

ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿ ಅನಂತೇಶ್ವರ ಸನ್ನಿಧಿ,
ರಥಬೀದಿ, ಉಡುಪಿ, ದ. ಕನ್ನಡ.

ವಿಶೇಷ ಸೂಚನೆ:— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

THE
BHARATH MOTOR SERVICE

Maidan III Cross Road

MANGALORE-1

(Phone : 3446)

We provide special buses at moderate charges for the conveyance of marriage, excursion and tourist parties.

P. S: **Special concession allowed for students' educational tours.**

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ.....

ಹಿಂದುಸ್ಥಾನ್ ಬ್ರೌನ್ ಬೊವೆರಿ

ಮೋಟಾರು ಪಂಪುಸೆಟ್ಟುಗಳನ್ನೇ ಆರಿಸುತ್ತಾರೆ.

ಕಾರಣವೇನೆಂದರೆ.....

- ಸ್ವಿಜರ್‌ಲ್ಯಾಂಡಿನ ತಜ್ಞರ 75 ವರ್ಷಗಳ ತಾಂತ್ರಿಕ ಜ್ಞಾನ ಮತ್ತು ಅನುಭವದ ಮೇರೆಗೆ ಮೋಟಾರು ತಯಾರಿಸಲ್ಪಟ್ಟಿದೆ.
- ಅದು ಅತ್ಯಂತ ವಿಶ್ವಾಸನೀಯವಾಗಿದೆ, ಗಟ್ಟಿಮುಟ್ಟಾಗಿದೆ, ನೋಡಲು ಚೆನ್ನಾಗಿದೆ.
- 'E' ಇನ್ಸುಲೇಶನಿಂದಾಗಿ ಕಡಿಮೆ ವೋಲ್ಟೇಜಿನಲ್ಲಿ ಕೂಡಾ ಸರಾಗವಾಗಿ ನಡೆಯುತ್ತದೆ. ಸುಟ್ಟು ಹೋಗುವುದಿಲ್ಲ.
- ಕಡಿಮೆ ವಿದ್ಯುತ್ ಖರ್ಚಿನಲ್ಲಿ ಅಧಿಕ ಕೆಲಸವನ್ನು ಕೊಡುತ್ತದೆ.
- ಒಂದು ವರುಷದ ಗ್ಯಾರಂಟಿಯನ್ನು ಪಡೆದಿದೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು ಕೆಳಗಿನವರಲ್ಲಿ ಸದಾ ದಾಸ್ತಾನದಿಂದ ಪಡೆಯಬಹುದು

VICTOR TRADING CORPORATION
FALNIR ROAD - - MANGALORE-1

GOPAL FARM ENGINEERS
FALNIR ROAD - - MANGALORE-1

NAVAYUGA
15-8-1968

REGD. No. B. G. 176
LICENCE No. 31
Licensed to Post
without Prepayment

ಸ್ವಾತಂತ್ರ್ಯದಿನದ ಶುಭಾಶಯಗಳು!

ಡೈರೆಕ್ಟರರ ಮಂಡಳಿ:-

1. ಶ್ರೀ ಯಂ. ಸುಂದರ್‌ರಾಮ ಶೆಟ್ಟಿ, ಬೆಂಗಳೂರು (ಚೆಯರ್‌ಮೇನ್)
2. " ವೈ. ಮಂಜಯ ಶೆಟ್ಟಿ, ಕುಂದಾಪುರ.
3. ಡಾ। ಯಂ. ವೇಣುಗೋಪಾಲ ಶೆಟ್ಟಿ, ಮಂಗಳೂರು.
4. ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ.
5. ಡಾ। ಕೆ. ವಿಠಲ ಶೆಟ್ಟಿ, ಕಾಪು.
6. ಡಾ। ಕೆ. ಬಾಲಪ್ಪ ಶೆಟ್ಟಿ, ಮಂಗಳೂರು.
7. ಶ್ರೀ ಬಿ. ಟಿ. ರವೀಂದ್ರನಾಥ ಪೂಂಜ, ಬೆಂಗಳೂರು.
8. " ಬಿ. ಜಿ. ವೀರಣ್ಣ, ಬೆಂಗಳೂರು.
9. " ಕೆ. ಸಿ. ಪುಟ್ಟಿಯ್ಯ, ದೊಡ್ಡಬಳ್ಳಾಪುರ.
10. " ಯಚ್. ಟಿ. ಭಂಡಾರಿ, ಮುಂಬಾಯಿ.
11. " ಕೆ. ಪಿ. ಮಾಧವನ್ ನಾಯರ್, ಎರ್ನಾಕುಳಂ.
12. " ಆನಂದರಾವ್ ಬಿಂದೂರಾವ್ ದೇಸಾಯಿ, ಹುಬ್ಬಳ್ಳಿ.

ಶ್ರೀ ಪಿ. ಜಯರಾಮ ಶೆಟ್ಟಿ, ಸೆಕ್ರೆಟರಿ.

ಶ್ರೀ ಪಿ. ಯಂ. ಹೆಗ್ಡೆ, ಆಡಿಟರ್.

ಶ್ರೀ ಎಸ್. ವಿಠಲ ಶೆಟ್ಟಿ, ಡೆಪ್ಯುಟಿ ಸೆಕ್ರೆಟರಿ.

ನಮ್ಮ ಶಾಖೆಗಳು:-

ಮೈಸೂರು ರಾಜ್ಯದಲ್ಲಿ	....	55
ಕೇರಳ ರಾಜ್ಯದಲ್ಲಿ	....	25
ಮದ್ರಾಸ್ ರಾಜ್ಯದಲ್ಲಿ	....	5
ಮಹಾರಾಷ್ಟ್ರ ರಾಜ್ಯದಲ್ಲಿ	....	2
		87

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು:- "ವಿಜಯಾ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3

ಸ್ಥಾಪನೆ: 1931

ಫೋನ್ ನಂಬ್ರ: 5711, 5712, 5713 } 3 Lines.

Edited, Printed & Published by K. H. Shetty, at the Navayuga Press, Udipi, S. India

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

22—8—1968

೨೦
ಪೈಸೆ

ಕಥಾ ಪ್ರಪಂಚ

ಡಾಕ್ಟರ್ ತಿಳಿಯದ ಖಾಯಿಲೆ

ಬರೆದವರು:
ಶ್ರೀ ಎಚ್. ಎಂ. ನಾರಾಯಣ ಭಟ್.

ರಾಜಣ್ಣನೂ ಬೋರಯ್ಯನೂ ಇಬ್ಬರೂ ಸಾಮಾನ್ಯ ಒಂದೇ ವಯಸ್ಸಿನವರು —ರೋಗಿಗಳು. ಐವತ್ತರ ಹೊಸ್ತಿಲು ದಾಟಿದವರು. ರಾಜಣ್ಣನ ಶರೀರ ಸ್ಥೂಲ. ನಿಂಬೆ ಹಣ್ಣಿನ ವರ್ಣ. ಮುಖದಲ್ಲಿ ಒಳ್ಳೆಯ ತೇಜಸ್ಸು ಇದ್ದರೂ ಯಾವುದೋ ಚಿಂತಾವೇಷ್ಟಿತ ಅವರಿಸಿದೆ.

ಬೋರಯ್ಯನದು ಕೃಶ ಶರೀರ ಎಲುಬು ಗೂಡಿಗೆ ಚರ್ಮ ಹೊದಿಸಿದಂತೆ. ಹೊಟ್ಟೆ ಬೆನ್ನೆಲುಬಿಗೇ ಅಂಟಿಕೊಂಡ ಹಾಗೆ. ಕೆಲವು ವರ್ಷದಲಿಂದಲೇ ರೋಗಗ್ರಸ್ತನಾಗಿದ್ದಂತೆ ಯಾರಾದರೂ ಭಾವಿಸಿದರೂ ತಪ್ಪಲ್ಲ.

ಇಬ್ಬರೂ ಆಸ್ಪತ್ರೆಯ ಒಂದೇ ಜಗಲಿಯಲ್ಲಿ ಸಮೀಪವರ್ತಿಗಳಾಗಿ ಮಂಚ ಹಿಡಿದು ಸಹಬಾಳ್ವೆಯ ಯತ್ನಿಸುತ್ತಿರುವಂತೆ ತೋರುತ್ತಿತ್ತಾದರೂ ರೋಗಗಳು ವಿಭಿನ್ನ. ಡಾಕ್ಟರು ಒಬ್ಬರೇ. ದಾದಿಯೂ ಒಬ್ಬಳೇ. ಆದರೂ ಔಷಧಗಳು ಬೇರೆ ಬೇರೆ.

ರಾಜಣ್ಣನಿಗೆ ಖಾಯಿಲೆ ಬಾಧಿಸಿ ಹೆಚ್ಚುಕಾಲವಾಗಿಲ್ಲ. ಮನೆಯಲ್ಲಿ ಒಂದು ಚೆಕ್ಕಣ ಕೂಟವಿತ್ತು. ಊಟ ಬಹಳ ಚೆನ್ನಾಗಿತ್ತು. ರಾತ್ರಿ ಹಿದ್ದೆ ಬಂದಿರಲಿಲ್ಲ. ಭೀಕರವಾದೊಂದು ಸ್ವಪ್ನ. ಯಾರೋ ವೇಷ ಪಲ್ಲಟ ಮಾಡಿದ್ದ ಯಮದೂತರಂತಿದ್ದ ಈರ್ವರು ಕತ್ತು ಹಿಡಿದು ಅಮುಕಿದರೆಂದು! ರಾಜಣ್ಣ ಹೆದರಿ ಚೀತ್ಕಾರಮಾಡಿಯೇ ಎಚ್ಚತ್ತು ದು! ಮನೆಯ ಡೀ ಗದ್ದಲ. ಎಲ್ಲರಿಗೂ ಆಶ್ಚರ್ಯ. ರಾಜಣ್ಣ ತನ್ನಗಂಟಲು ಸವರಿಕೊಳ್ಳುತ್ತಿದ್ದಂತೆ ಪ್ರಾಥಮಿಕ ಔಷಧೋಪಚಾರಗಳೂ ಆದವು. ಹಾಗೆ ಪ್ರಾರಂಭವಾದ ಖಾಯಿಲೆ. ಕೊರಳಿನ ಸುತ್ತಲೂ ಹಗ್ಗ ಬಿಗಿದಂತೆ ಮತ್ತು ಹೊಟ್ಟೆಗೆ ಸೂಜಿಗಳಿಂದ ಚುಚ್ಚಿದಂತೆ...ಸದಾ ತೋರಿಕೆ.

ಬೋರಯ್ಯನಿಗೆ ಕೆಲವು ವರ್ಷಗಳಿಂದಲೂ ಖಾಯಿಲೆ. ನಿತ್ರಾಣವೂ ಕೆಮ್ಮೂ ಎದೆ ನೋವೂ....! ಕಫ ಕಡಿಯುಲು ಅತಿ ಪ್ರಯಾಸ. ಆದರೂ ನಿತ್ಯದ ಕಸುಬು ಬಿಡಲಿಲ್ಲ. ಕಲ್ಲು ಕಡಿಯುವ ಕೆಲಸ ಬಿಟ್ಟರೆ ಮನೆವಂದಿ ಉಪವಾಸ. ಒಂದು ದಿನ ರಕ್ತ ಕಾರಿದ್ದರಿಂದಾಗಿ ಆಸ್ಪತ್ರೆಯನ್ನು ಪ್ರವೇಶಿಸದೆ ಇರಲು ಧೈರ್ಯ ಬರಲಿಲ್ಲ.

ರಾಜಣ್ಣನಂತಹ ಶರೀರಕ್ಕೆ ಪ್ರವೇಶಿಸಿ ಬಾಧಿಸುವ ಸಾವ ರ್ಥ್ಯ ಯಾವ ರೋಗಕ್ಕೆಂದೇ ಬೋರಯ್ಯನ ಸವ ಸ್ಯೆ.

ಬೋರಯ್ಯನಷ್ಟೂ ಫಿಸ್ಸಾರನಾದ ಒಂದು ಜೀವಿಗೆ ತನ್ನಂಶೆಯೇ ಆಸ್ಪತ್ರೆಯ ಶುಶ್ರೂಷೆ ಅಗತ್ಯವೆ? ಎಂಬುದು ರಾಜಣ್ಣನ ಸಮಸ್ಯೆ.

ಸನಗೆ 'ಸ್ಪೆಶಲ್ ರೂಂ' ಅನುಮತಿಸುವಂತೆ ರಾಜಣ್ಣ ಹಲವು ಬಾರಿ ಡಾಕ್ಟರನ್ನು ವಿನಂತಿಸಿದ್ದರೂ ರೂಂ ಖಾಲಿಯಾಗದೆ ಹೇಗೆ?

ರಾಜಣ್ಣನದು ಶ್ರೀಮಂತ ಕುಟುಂಬ ಖರ್ಚಿಗೆ ಬೇಕಾದುದಕ್ಕಿಂತಲೂ ಹೆಚ್ಚಿಗೆ ಆದಾಯವೂ ವರಮಾನವೂ ಇದೆ, ಒಬ್ಬನೇ ಮಗ ಆಧುನಿಕ ಸೌಕರ್ಯಗಳೆಲ್ಲವೂ ಇವೆ. ಪತ್ನಿಯೂ ಶ್ರೀಮಂತ ಕುಟುಂಬದವಳ.

ಬೋರಯ್ಯನಿಗೆ ತನ್ನ ಶರೀರವೇ ಆಸ್ತಿ. ಅದರದೇ ಸಂಪಾದನೆ. ಒಂದು ದಿನ ಕಲ್ಲು ಕಡಿಯಲು ಹೋಗದಿದ್ದರೆ ಅಂದು ಒಲೆಗೆ ಬೆಂಕಿ ಹಚ್ಚುವುದಕ್ಕೂ ರಜೆ ಸಾರಬೇಕಾಗಿತ್ತು. ಒಬ್ಬ ಪತ್ನಿ ಮತ್ತು ನಾಲ್ವರು ಮಕ್ಕಳು. ಮಕ್ಕಳು ಚಿಕ್ಕವರು.

ಆಸ್ಪತ್ರೆಯಲ್ಲಿ ರಾಜಣ್ಣನ ಆರೋಗ್ಯದ ಬಗ್ಗೆ ಎಲ್ಲರೂ ವಿಶೇಷ ಶ್ರದ್ಧೆ ಹರಿಸುವರು. ಅನೇಕ ಸ್ನೇಹಿತರು ಬುಟ್ಟಿಹಣ್ಣುಗಳನ್ನು ತರುವರು. ಸದಾ ಸಂದರ್ಶಕರ ತನ್ನ ಖಾಯಿಲೆ ಯಾರಿಗೂ ತಿಳಿದಿಲ್ಲವೆಂದೇ ರಾಜಣ್ಣನ ವಿಶ್ವಾಸ—ಅಕ್ಷೇಪ. ತಾನು ಸತ್ತುಹೋಗುವುದಾಗಿ ಪದೇಪದೇ ದಿನಕ್ಕೆ ನೂರಾವರ್ತಿಯಾದರೂ ಹೇಳದೆ ಮನಶ್ಶಾಂತಿಯಿಲ್ಲ. ಯಾರಿಗೂ ತನ್ನ ಬಗ್ಗೆ ಶ್ರದ್ಧೆ ಸಾಲದೆಂದೇ!

ತನಗೆ ಅಂತಹ ಕರಿಣ ಆಪತ್ತೇನೂ ಇಲ್ಲ, ತನ್ನನ್ನು ಹೋಗಲು ಬಿಡುವುದಿಲ್ಲ ಬೇಕೆಂದೇ ಬೋರಯ್ಯನ ಯೋಚನೆ.

ರಾಜಣ್ಣ ತೀರಿಕೊಂಡರೆ ಜಗತ್ತಿಗೇ ತುಂಬಲಾಗದ ನಷ್ಟವೆಂಬಲ್ಲಿ ವರೆಗೂ ಅಭಿಪ್ರಾಯ ವ್ಯಕ್ತಪಡಿಸುವ ಅನೇಕ ಮಂದಿ ಸಂದರ್ಶಕರೂ ಬಂಧುಬಳೂ ರಾಜಣ್ಣನ ಸುತ್ತುಗಟ್ಟಿ ಕಣ್ಣೀರು ಸುರಿಸಿ ಹೋಗುವರು.

ಬೋರಯ್ಯನ ಆರೋಗ್ಯವೇ ತನ್ನ ಭಾಗ್ಯವೆಂದು ಬಯಸಿದವಳು ಆಸ್ಪತ್ರೆಗೆ ಬರುವವರ ಪೈಕಿ ಆಕನ ಪತ್ನಿ ಮಾತ್ರ. ಬಂದರೆ ತುಂಬಾ ಹೊತ್ತಿನ ಬಳಿಕವೇ ಆಕೆಯ ಆಗಮನ. ಹಣ್ಣು ತರಲು ಹಣವಿಲ್ಲ. ಬಹಳ ಗೋಪ್ಯವಾಗಿಯೇ ಸಂಭಾಷಣೆ

ರಾಜಣ್ಣನ ಪತ್ನಿ ತನ್ನ ಶಯ್ಯಾಗೃಹಸ್ಥನಾದ ಪತಿಯ ಭೇಟಿಗೆ ಬರುವುದೇ ವಿರಳ. ನೌಕರರು ನಿತ್ಯಲೂ ಫಿಯೋಗಿಸಲ್ಪಡುವರು. ಈ ದಂಪತಿಗಳಿಗೆ ಸಂಭಾಷಣೆ ಕಡಿಮೆ. ಇದ್ದಷ್ಟೂ ವಿರಸಾಗಿ. ಖಂಡಾಗ ಯಾರಲ್ಲಾದರೂ ವಿನಾದರೂ ತಪ್ಪು ಹುಡುಕಿ ಗದ್ದಲವೆಬ್ಬಿಸಿಯೇ ಮರುವಯಣ.

ಪತ್ನಿಯನ್ನು ಕಾಣಬೇಕೆಂಬ ಹಂಬಲ ರಾಜಣ್ಣನಿಗೂ ಕಡಿಮೆ. ಆಕೆಯ ಇದಿರಲ್ಲಿ ರಾಜಣ್ಣ ತನ್ನ ಕಷ್ಟಗಳ್ನೂ ಹೊಟ್ಟೆಯನ್ನೂ ಸವರುವುದಾಗಲೀ ಒತ್ತುವುದಾಗಲೀ ಹೆಚ್ಚು

'ಮನೆಯಲ್ಲಿ ಮಂಚವಿಲ್ಲದೆ ಇಲ್ಲಿ ಖಂಡುದಾಗಿರಬೇಕು' ಎಂದು ಆಕೆ ಅಗಾಗ ಹೇಳುತ್ತಿದ್ದ ಮಾತು.

"ನಿನಗೆ ನನ್ನ ಸುಖತ್ವ ತಿಳಿಯದು. ಇದರಲ್ಲಿ 'ಬಚ ನ' ಇಲ್ಲ—"ಎಂಬ ದು ಪ್ರತಿಸಲದ ಉದ್ಗಾರ.

ರಾಜಣ್ಣನ ಈ ಮಾತುಗಳು ಆಕೆಯ ಮುಖಕ್ಕೆ ಹಾಸ್ಯರಸವನ್ನು ತುಂಬಲು ಮಾತ್ರ ಸಹಕಾರಿ.

ಪತ್ನಿ ಮರಳುವಾಗ ರಾಜಣ್ಣನ ಆಸೇಕ್ಷೆ ಒಂದೇ! "ಮರನನ್ನು ಮಾತ್ರ ಇಲ್ಲಿಗೆ ಕಳುಹಿಸದಿರು...." ಹೇಳುತ್ತಾ ರಾಜಣ್ಣನ ಕತ್ತಿನಲ್ಲೂ ಹೊಟ್ಟೆಯಲ್ಲೂ ಸುಖ ಲಾರದ ನೋವು!

ಆಕೆ ಡಿಟ್ಟಿಸಿ ನೋಡಿ ಮರಳುವಳು.

ಮಗನು ಅತಿ ಸವ ರ್ಥ. ಟ್ಯೂಟೋರಿಯಲ್, ಹಗಲು ನಿದ್ರೆ, ಪಾರ್ಟಿ, ಸಿನೇಮಾ, ಸಮುದ್ರ ದಂಡೆ, ವೈದಾನ್ನು, ಬಾರ್...ಇಷ್ಟೆಲ್ಲಾ ಕಳೆದು ಆಸ್ಪತ್ರೆಗೆ ಖಂದು ಎಂದಾದರೂ ಸಾಯುವುದು ಖಂಡಿತವಾಗಿರುವ ತಂದೆಯನ್ನು ಕಾಣಲೂ ಅನ್ವೇಷಿಸಲೂ ಬಿಡುವೆಲ್ಲಿ? ಒಂದು ವೇಳೆ ಬಿಡುವಿದ್ದರೂ ಬರಬೇಕಾಗಿಲ್ಲವೆಂಬ ಫಿರ್ದೇಶ ಬೇರೆ.

ಬೋರಯ್ಯನು ಪತ್ನಿಯೊಡನೆ ಹಲವನ್ನು ವಿಚಾರಿಸಿ ತಿಳಿದು ತಲೆ ಬಿಸಿ ಮಾಡಿಕೊಳ್ಳುವನು. "ನಾನು ಬರುತ್ತೇನೆ ... ಇಲ್ಲಿದ್ದು ಪ್ರಯೋಜನವಿಲ್ಲ...."ಎಂದು ಪತ್ನಿಯನ್ನು ಸಂತೈಸುವನು.

"ಬೇಡ ಹಾಗೆ ಅವಸರ ಮಾಡಿ ಬರಬೇಡಿ. ಡಾಕ್ಟರು ಹೇಳಿದ ಬಳಿಕವೇ ಸಾಕು...." ಆಕೆ ಒತ್ತಾಯಿಸುವಳ ವಿಧಂತಿಸುವಳು.

"ಆ ಮಕ್ಕಳನ್ನು ಫೀನು ಕರೆತರಲಿಲ್ಲ ನೇಕೆ? ನನಗೆ ಅವರನ್ನು ಕಾಣಬೇಕು...."

"ಅವರಿಗೂ ಬಿಡುವಿಲ್ಲ."

ಇಬ್ಬರೂ ಪರಸ್ಪರ ನೋಡಿ ದಾರಿದ್ರ್ಯದ ನೋವಿನ ಅನುಭವವನ್ನು ಸ್ಮರಿಸಿ ಸುಮ್ಮನಾಗುವರು.

ದಿನಸೂದಂತೆ ರಾಜಣ್ಣ ಕೃಶನಾಗುತ್ತಿದ್ದನೆ. ಹಲವು ಪರೀಕ್ಷೆಗಳು ಆದವು. ತಜ್ಞರೆಲ್ಲರಿಗೂ ರಾಜಣ್ಣನನ್ನು ಪರೀಕ್ಷಿಸಲು ಅವಕಾಶ ಲಭಿಸಿತ್ತು. ರೋಗ ಪರಿಹಾರೋಪಾಯ ಲಭ್ಯ ದೇ ಉಳಿಯಿತು.

ಬೋರಯ್ಯನ ಖಾಯಿಲೆ ದುಣ ಮುಖವಾದುದು ಅಭಿರೀಕ್ಷಿತವಾಗಿ!

ರಾಜಣ್ಣನ ಪುತ್ರನ ಸ್ಕೂಟರ್ ಓರ್ವ ಸೈಕಲ್ ಸವಾರನಿಗೆ ಢಿಕ್ಕಿ ಹೊಡೆದ ವಾರ್ತೆ ತಂದ ನೌಕರನನ್ನು ರಾಜಣ್ಣ ಆತುರದಿಂದ ವಿಚಾರಿಸಿ ನನ :—

'ಅವನಿಗೇನೂ ಸಂಭವಿಸಿಲ್ಲವೆ?'

(ಹನ್ನೊಂದನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. No 109/1968

ರಕ್ಷಾಸಿತಿ ಅಮ್ಮ — ವಾದಿಳು

ಮತ್ತು

ಬೆನ್ನ ಸೋಜ ಕೂಡಾ —ಪ್ರತಿವಾದಿರು

1) ಬೆನ್ನ ಸೋಜ - ನಿಕ್ಲಂ ಸೋಜರ ಹೆಂಡತಿ. 3) ಪಸ್ಕಾ ಸೋಜ - ಮತ್ತೇಸ್ ಸೋಜರ ಮಗ— ಉಡ್ಪಿ ತಾಲ್ಲೂ ಶಿವಳ್ಳಿ ಗ್ರಾಮದ ಪೆರಂಪಳ್ಳಿ —

1, 3ನೆ ಪ್ರತಿವಾದಿರಿಗೆ ಈ ಮೂಲಕ ತಿಳಿಸುವದೇನಂದ್ರ

ವಾದಿಳಿಗೆ ಪ್ರತಿವಾದಿರಿಂದ ಬರತಕ್ಕ ಕ್ರೋಧಿ ಸಂವತ್ಸರದ ಮೂಲಗೇಣಿ, ಬಡ್ಡಿ ಎಗ್ರೆಗೆ ವಾದಿಳು ಮೇಲ್ಕಂಡ ದಾವೆಯನ್ನು ದಾಖಲು ಮಾಡಿದ್ದು ಆ ಕುರಿತು 1 ಮತ್ತು 3ನೆ ಪ್ರತಿವಾದಿರಿಗೇನಾದರೂ ಅಕ್ಷೇಪಣೆ ಯಿರುವ ಸಂದ್ರಿಯಲ್ಲಿ ಆದನ್ನು ತಾ. 18.8.1968ರಂದು ಸಾಯಂಕಾಲ ಹಾಜರು ಮಾಡಿಕೊಳ್ಳಲಿಕ್ಕೆ ತಪ್ಪಿದ್ರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. N. Madhava Rao
Vakil for Plaintiff

ಉಡುಪಿ, ತಾ. 12—6—1968

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ
ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಫೋನ್: 77
ಶಿಷ್ಟ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಂಡಿತಿಂಡಿಗಳು
ಬಾಹೀಕರಣದ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಿಷ್ಟಾತ್ರ ಹೊಟೆಲ್.

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೫೧
No. 51

ನವಯುಗ

ಉಡುಪಿ ೨೨—೮—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಅಯ್ಯೂಬರ ಅಬ್ಬರ ತಾಳ

ಅಗೋಸ್ತು ೧೪ರಂದು ಅಯ್ಯೂಬರ ಶಸಿಮಂಡಳಿಯು ಪಾಕಿಸ್ತಾನ ಸ್ವಾತಂತ್ರ್ಯ ದಿನಕ್ಕನ್ನಾಚರಿಸಿತು. ಆ ದಿನ ಅಯ್ಯೂಬ್ ಖಾನರು ದೇಶದ ಜನತೆಗೆ ಗಂಭೀರ ಎಚ್ಚರಿಕೆ ಕೊಡುತ್ತ ಭಾರತವನ್ನು ಪ್ರತ್ಯಕ್ಷವಾಗಿಯೆ ಖಂಡಿಸಿದರು. ಪಾಕಿಸ್ತಾನವು ಭಾರತವೊಂದನ್ನು ಬಿಟ್ಟು ತನ್ನ ನೆರೆಹೊರೆಯ ಎಲ್ಲ ರಾಷ್ಟ್ರಗಳೊಡನೆಯೂ ಇದ್ದ ವಿವಾದಗಳನ್ನು ಮೇಜಿನ ಸುತ್ತು ಸೇರಿ ಇತ್ಯರ್ಥಗೊಳಿಸಿದೆ—ಇದರಲ್ಲಿ ಶಕ್ತಿ ಕಾಣಿದೆ ಎಂದು ಹೆಗ್ಗಳಿಕೆ ಪ್ರದರ್ಶಿಸಿ, ಭಾರತ ಮಾತ್ರ ವಿವಾದ ಪರಿಹಾರದಲ್ಲಿ ಮುಕ್ತಸೂರ್ಯಕ ನೆರವಾಗುವುದಿಲ್ಲ ಎಂಬ ತತ್ವ ಹಳೆಯ ಟೊಳ್ಳು ತಂಬೂರಿಯ ತಂತಿಯನ್ನು ಮತ್ತೊಮ್ಮೆ ಮೀಟಿದರು. ಇಮ್ಮಡಿ ಮತ್ತು ಕಾಶ್ಮೀರ ವಿವಾದಗಳಿಗೆ ಗೌರವಾನ್ವಿತ ಹಾಗೂ ನ್ಯಾಯಯುತ ಪಾದ ಇತ್ಯರ್ಥವೊಂದನ್ನು ರೂಪಿಸಲು ಪಾಕಿಸ್ತಾನವು ತನ್ನ ಪ್ರಯತ್ನಗಳನ್ನು ಮುಂದುವರಿಸುವುದು ಎಂದವರು ಭರವಸೆ ಕೊಡಿದರು.

ಅಯ್ಯೂಬ್ಖಾನರ ಮಾತಿನಲ್ಲಾಗಲೀ, ಅದರ ಧಾಟಿಯಲ್ಲಾಗಲೀ ಯಾವ ಹೊಸತನವೂ ಇಲ್ಲ. ಅವರು ಈ ಹಿಂದೆ ಸ್ವಾತಂತ್ರ್ಯ ದಿನದಂದು, ಮತ್ತಿತರ ಹಲವಾರು ಸಂದರ್ಭಗಳಲ್ಲಿ ಮಾಡಿದ ಭಾಷಣ, ಕೊಡಿದ ಸಂದೇಶಗಳ ಧ್ವನಿ ಮುದ್ರಿಕೆಯಿದು. 'ಕಾಶ್ಮೀರ'ದ ಪ್ರತ್ಯೆಯೊಂದನ್ನು ಒಟ್ಟುಕೊಂಡು, ಅದಕ್ಕೆ ಪಾಕಿಸ್ತಾನ ಸೂಚಿಸುವಂತೆ ಉತ್ತರ ಹೇಳಿದರೆ ಸಾಕು—ಅಲ್ಲಿಗೆ ಪಾಠ—ಹಿಂದಿ ಭಾಯಿ ಭಾಯಿ. ಆದರೆ, ಒಂದು ಶರ್ತ—ಪರಿಣಾಮವಾಗಿ ಕಾಶ್ಮೀರ ಪಾಕಿಸ್ತಾನಕ್ಕೆ ಹೋಗಬೇಕು. ಇದು ಗೌರವಾನ್ವಿತ ಹಾಗೂ ನ್ಯಾಯವಾದ ತೀರ್ಮಾನ ಅಯ್ಯೂಬರಿಗೆ, ಆದರೆ, ಒಂದು ದೇಶವನ್ನು ಗೌರವಿಸುವಾಗ ತಮ್ಮ ದೇಶದ ಗೌರವವನ್ನು ಬಲಿ ಕೊಡುವುದು ಸರಿಯಾದೀತೆ? ಒಂದು ದೇಶಕ್ಕೆ ನ್ಯಾಯವೊದಗಿಸಲು ನಾವು ಅನ್ಯಾಯಕ್ಕೆ ತುತ್ತಾಗಲು ಸಿದ್ಧರಾದೇವೆ? ತಮ್ಮ ದೇಶದ ಗೌರವ—ಪ್ರತಿಷ್ಠೆಗಳು ಅಯ್ಯೂಬ್ಖಾನರಂತೆಯೇ ನಮಗೂ ಹೆಚ್ಚಿನವು. ದಾಖಲೆ—ಕಾಗದಗಳು ಮತ್ತು ವ್ಯವಹಾರಗಳ ಮೂಲಕ ಗೌರವ ರಕ್ಷಣೆಯಾಗಬೇಕು; ನ್ಯಾಯವೊದಗಬೇಕು. ತೋಳನ ನ್ಯಾಯ, ಸಿಂಹದ ಗೌರವ ಬೊಕ್ಕೆಯಿರುವವನದೇ ಎಮ್ಮೆಯಾಗಲು ಭಾರತೀಯರು ಎಂದಿಗೂ ಸಿದ್ಧರಿಲ್ಲ. ಭಾರತದ ಭೂಭಾಗವನ್ನು ನೆರೆ ರಾಷ್ಟ್ರದವಗೆ ದಾನಮಾಡಿ ಪಾಕಿಸ್ತಾನ ಅವುಗಳೊಡನೆ ಮೈತ್ರಿ ಸಾಧಿಸಿದೆ; ಭಾರತದೊಡನೆಯೂ ಮೈತ್ರಿ ಸಾಧಿಸ ಬೇಕಾದರೆ, ಭಾರತ ಕಾಶ್ಮೀರವನ್ನು ಅವರಿಗೆ ಸಿಂಧೂ ಗಂಗಾ ನದಿಗಳ ಶೀರ್ಷಿಕೆಯಿಂದ ಧಾರೆ ಬಿಡಬೇಕು. ದಾನ ತೆಗೆದುಕೊಳ್ಳುವ ಪಾತ್ರತ್ವ ಪಾಕಿಸ್ತಾನಕ್ಕಿಲ್ಲವೆಂಬುದನ್ನು ಅಯ್ಯೂಬರು ಇನ್ನೂ ತಿಳಿದುಕೊಳ್ಳದೆ ಹೋದುದು ದುರ್ದೈವ. ಕಾಶ್ಮೀರದ ಪ್ರತ್ಯೆಯನ್ನು ಭಿದ್ರಶಾ ಸಮಿತಿಯಲ್ಲಿ ಮತ್ತೊಂದು ಬಾರಿ ಎತ್ತುವುದಾಗಿ ಹೆದರಿಸುತ್ತಿದ್ದಾರೆ. ಅಯ್ಯೂಬರು, ಆದರೆ, ಅವರ ಹೆದರಿಕೆಗೆ ಅಲ್ಲಾ ಸೊಪ್ಪು ಹಾಕುವವ್ವು ಹೇಡಿಗಳು ಭಾರತೀಯರಲ್ಲ.

ದೇಶದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಸ್ವಾತಂತ್ರ್ಯ ದಿನೋತ್ಸವದ ಸಮಾರಂಭದಲ್ಲಿ ಮಾತಾಡುತ್ತ ಯುದ್ಧ ನಿಷೇಧ ಒಡಂಬಡಿಕೆಗೆ ಮುಂದೆ ಬರುವಂತೆ ಪಾಕಿಸ್ತಾನಕ್ಕೆ ಕರೆ ನೀಡಿದ್ದಾರೆ. ಇಂತಹುದೇ ಕರೆಯನ್ನು ಮಾಜಿ ಪ್ರಧಾನಿಗಳೂ ಕೊಡಿದ್ದರು. ಅದಕ್ಕೆ ಪಾಕಿಸ್ತಾನ ಉತ್ತರವೊಂದೆ—ಕಾಶ್ಮೀರವನ್ನು ನಮಗೆ ಕೊಡಿ, ಮತ್ತೆ ಯುದ್ಧವಿಲ್ಲ. ಅಂದರೆ, "ಕಾಶ್ಮೀರ ನಮ್ಮ ಬಾಯೊಳಗೆ ಬೀಳುವುದಕ್ಕಾಗಿ ನಾವು ಯುದ್ಧವನ್ನೂ ಮಾಡುತ್ತೇವೆ" ಎಂದರ್ಥ. ಇದು ೧೯೬೫ರಲ್ಲಿ ಸತ್ಯವಾಯಿತು. ಭಾರತದ ಮೇಲೆ ಆಕ್ರಮಣ ನಡೆಸಿದ ಪಾಕಿಗಳು ಸೋತು ಸುಸ್ತಾದರು. ಯುದ್ಧ ವಿರಾಮಕ್ಕೆ ಒಪ್ಪಿದರು—ತಾಷ್ಕೆಂಟ್ ಘೋಷಣೆಗೆ ಸಹಿ ಹಾಕಿದರು. ಯುದ್ಧ ಪಾಕಿಗಳ ಪಾಲಿಗೆ, ವಿರಾಮ ನಮ್ಮ ಪಾಲಿಗೆ ಜಯ. ತಾಷ್ಕೆಂಟ್ ಭಾರತೀಯ ಪ್ರಧಾನಿಯನ್ನು ಬಲಿತೆಗೆದು ಕೊಂಡಿತು, ಘೋಷಣೆ ಪಾಕ್ ಅಧ್ಯಕ್ಷರ ಕಂಠಾಹಾರವಾಯಿತು. ಪರಿಣಾಮ? ಶೂನ್ಯ. ಇದೀಗ ಪಾಕಿಸ್ತಾನವು ಶಸ್ತ್ರಾಸ್ತ್ರಗಳನ್ನು ಸಿಕ್ಕ ಮೂಲಗಳಿಂದ ಸಂಗ್ರಹಿಸುತ್ತಿದೆ. ರಶ್ಯ, ಅಮೆರಿಕ, ಫ್ರಾನ್ಸ್, ಇಂಗ್ಲೆಂಡ್, ಕೆಂಪು ಚೀನಗಳಿಂದ ಅದು ಗಳಿಸಿದೆ, ಗಳಿಸುತ್ತಿದೆ. ಆತ್ತ ಕೆಂಪು ಚೀನಾದಲ್ಲಿ ಆಂತರಿಕ ಭೇದ ಉಲ್ಬಣಗೊಂಡಿದೆ. ಹಾಗಾಗಿ ಜನತೆಯು ಗಮನವನ್ನು ಅತ್ತ ಹರಿಯ ಬಿಡುವುದು ಕೆಂಪು ಸರಕಾರಕ್ಕೆ ಅಗತ್ಯವೆನಿಸಿದ್ದು ಅದಕ್ಕೆಂದೇ ಕೆಂಪು ಚೀನಾ ಮತ್ತೊಮ್ಮೆ ಭಾರತವನ್ನು ಹಡಿಯುತ್ತಿದೆ ಆಕ್ರಮಣ ಮಾಡುವ ಸಾಧ್ಯತೆಯಿದೆ; ಜನತೆಯಲ್ಲೇ ಅಳಿಯ ಅಯ್ಯೂಬರೂ ಅತ್ತ ಇತ್ತ ಸುತ್ತುವರಿದಾರು. ತಮ್ಮ ವಿದೇಶ ಸಚಿವ ರನ್ನು ಕೆಂಪು ಚೀನಾಕ್ಕೆ ಕಳಿಸಿದುದು ಸೋವಿಯತ್ ರಶ್ಯದಿಂದ ತಾನು ಶಸ್ತ್ರಾಸ್ತ್ರ ಪಡೆಯುವುದನ್ನು ಸಮರ್ಥಿಸಲು ಮಾತ್ರವಲ್ಲ, ಮುಂದಿನ ಘಿತೂರಿಗೊಂದು ಕಾರ್ಯಕ್ರಮ ತಯಾರಿಸುವುದಕ್ಕಾಗಿ ಇದ್ದರೂ ಇರಬಹುದು. ರಶ್ಯದಿಂದ ಹುಡುಕಿ ತಂದುಕೊಂಡುದರಿಂದ ಕೊಚ್ಚಿಗೆದ್ದ ಸೋದರಮಾವನನ್ನು ಮುಸಲಾಯಿಸುವುದೂ ಅಷ್ಟೇ ಅಗತ್ಯ. ಈ ಸಂಗತಿಯನ್ನು ಸಂರಕ್ಷಣಾ ಮಂತ್ರಿ ಸರ್ದಾರ್ ಸ್ವರ್ಣ ಸಿಂಗರು ಹೊರಗೆಡಹಿದ್ದಾರೆ. ಯಾವ ಕಾಲದಲ್ಲೂ ಸಂಭವಿಸಬಹುದಾದ ಆಕ್ರಮಣಗಳನ್ನು ಯಾವುದೇ ಬೆಲೆ ತೆತ್ತಾದರೂ ಎದುರಿಸಲು ನಮ್ಮ ಸೇನೆ ಸುಸಜ್ಜಿತವಾಗಿದೆ ಎಂಬ ವಿಶ್ವಾಸ ಅವರದ್ದು, ದೇಶದ್ದು. ಈ ವಿಶ್ವಾಸ ಸುಳ್ಳಾಗದು. ೧೯೬೫ರಿಂದ ನಮ್ಮ ಸೇನೆ ಸಿದ್ಧತೆಯಲ್ಲಿ ಬಹಳಷ್ಟು ಕ್ರಾಂತಿಯಾಗಿದೆಯೆಂಬುದು ನಿರ್ವಿವಾದ.

ಪ್ರತಿಭಾ ನಿರ್ಗಮನ

ಕ್ಯಾಸ್ಟೇಷ್ಟಾ ಸಮ್ಮೇಳನವು ಹಲವಾರು ಪ್ರಶ್ನೆಗಳನ್ನು ವಿಮರ್ಶಿಸಿತು. ಅವುಗಳಲ್ಲಿ ಪ್ರತಿಭಾ ವಿರ್ಗಮನವೂ ಒಂದು. "ಪ್ರತಿಭಾ ನಿರ್ಗಮನ' ಎಂದರೇನು? ಒಂದು ರಾಷ್ಟ್ರದಲ್ಲಿನ ಪ್ರತಿಭಾವಂತರು ದೇಶವನ್ನು ಬಿಟ್ಟು ವಿದೇಶಗಳಿಗೆ ಹೋಗುವುದು. ಒಂದು ದೇಶದ ಎಳ್ಳನಷ್ಟು ವಸ್ತು ವಿದೇಶಕ್ಕೆ ನಿರ್ಯಾತವಾದರೆ ದೇಶಕ್ಕೆ ಚಿಲ್ಲಾಸಾದರೂ ದೊರೆಯುತ್ತದೆ; ಪ್ರತಿಭೆ ಪರದೇಶಕ್ಕೆ ಹೋದರೆ, ಭಾರೀ ನಷ್ಟವಾತ್ರ. ಆದುದರಿಂದಲೇ ಇದನ್ನು ನಿರ್ಯಾತವಲ್ಲ, ನಿರ್ಗಮನ, ಪ್ರತಿಭಾ ನಿರ್ಗಮನದ ಮೂಲ ಕಾರಣವೇನು? ಸ್ವದೇಶೀ ವೂರುಕಟ್ಟೆಯಲ್ಲಿ ಇದಕ್ಕೆ ನಿರಾಕರಿಯಿಲ್ಲ; ಹಾಗಾಗಿ ಬೆಲೆಯಿಲ್ಲ. ವಿದೇಶೀ ವೂರುಕಟ್ಟೆಯಲ್ಲಿ 'ವಿದೇಶೀ ಮೂಲ' ಆದುದರಿಂದ ನಿರಾಕರಿಯಿರುತ್ತದೆ; ಕೆಲವೆಡೆ ಧಾರಣೆಯೂ ಹೆಚ್ಚಿರುತ್ತದೆ. ಹಾಗಾಗಿ, ದೇಶದ ಪ್ರತಿಭೆಯನ್ನು ದೇಶದಲ್ಲಿಯೇ ಉಳಿಸಿಕೊಳ್ಳಲು ಅದಕ್ಕೆ ಸೂಕ್ತ ವೂರುಕಟ್ಟೆಯನ್ನು ಒದಗಿಸಲು ನ್ಯಾಯ ಸಮ್ಮತವಾದ ಬೆಲೆ ನಿಗದಿ ಮಾಡಲು ಕ್ಯಾಸ್ಟೇಷ್ಟಾ ಸಮ್ಮೇಳನ ನಿರ್ಧರಿಸಿದೆ. ಇದು ಕಾರ್ಯರೂಪಕ್ಕೆ ಯಾವರೂಪದಲ್ಲಿ ಬರುವುದೋ ಕಾದು ನೋಡಬೇಕು.

ಕೃಷಿ ಚೇಂಬರಿನ ಆಡಳಿತ ಸಮಿತಿ ಸಭೆ

ದ.ಕ. ಜಿಲ್ಲಾ ಕೃಷಿ ಚೇಂಬರಿನ ಆಡಳಿತ ಸಮಿತಿಯ ಸಭೆಯು ತಾ. 4-8-68ರಂದು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಚೇಂಬರಿನ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿ ಮೈಸೂರು ಭೂ ಸುಧಾರಣಾ ಕಾನೂನಿಗೆ ಈ ಮೊದಲು ಸೂಚಿಸಿದ ಕೆಲವು ತಿದ್ದುಪಡಿಗಳಲ್ಲದೆ ಮತ್ತೆ ಕೆಲವು ಸಲ್ಲನಾಗಳಿಗೆ ತಿದ್ದುಪಡಿಗಳನ್ನು ಸೂಚಿಸುತ್ತಾ ಸರಕಾರವು ಈ ತನಕ ತಳೆದಿರುವ ನಿರ್ಲಕ್ಷ್ಯ ಧೋರಣೆಗೆ ಅಸಮಾಧಾನವನ್ನು ವ್ಯಕ್ತಪಡಿಸಿತು. ಒಕ್ಕಲು ಮತ್ತು ಧನಿಗಳ ಹಿತ ದೃಷ್ಟಿಯಿಂದ ಸೂಚಿಸಿದ ಈ ತಿದ್ದುಪಡಿಗಳನ್ನು ಸರಕಾರ ಕೂಡಲೇ ಜಾರಿಗೆ ತಂದಿದ್ದ ಪಕ್ಷದಲ್ಲಿ ಚೇಂಬರು ಕೈಗೊಳ್ಳತಕ್ಕ ಮುಂದಿನ ಕಾರ್ಯಕ್ರಮದ ಬಗ್ಗೆ ಮಹಾಸಭೆ ಕರೆದು ಸೂಕ್ತ ತೀರ್ಮಾನ ಮಾಡಲಾಗುವುದೆಂದೂ ನಿರ್ಣಯಿಸಲಾಯಿತು. ಈ ಸಭೆಗೆ ಜಿಲ್ಲೆಯ ಎಲ್ಲಾ ಶಾಸಕರನ್ನೂ ಇತರ ಸಂಬಂಧಪಟ್ಟ ಅಧಿಕಾರಿಗಳನ್ನೂ ಆಮಂತ್ರಿಸ ಬೇಕೆಂದೂ ತೀರ್ಮಾನಿಸಲಾಯಿತು.

ವಚನ ಸುಧೆ

ನ ವೈ ಭಿನ್ನಾ ಜಾತಿ ಚರಂತಿಧರ್ಮಾಂ
ನ ವೈ ಸುಖಂ ಸ್ವಾಪ್ನ ವಂತೀಹಭಿನ್ನಾಃ
ನ ವೈ ಭಿನ್ನಾ ಗೌರವಂ ಸ್ವಾಪ್ನ ವಂತಿ
ನ ವೈ ಭಿನ್ನಾ ಪ್ರಶಸಂ ರೋಚಯಂತಿ॥

ಪರಸ್ಪರ ಭೇದಭಾವ ತಳೆದಿರುವವರು ಧರ್ಮಾಚರಣೆ ಮಾಡಿರುವುದಿಲ್ಲ. ಸುಖಿಗಳಾಗುವುದಿಲ್ಲ. ಗೌರವ ಸಂಪಾದಿಸುವುದಿಲ್ಲ. ಶಾಂತಿಯ ಮಾರ್ಗಕ್ಕೆ ಅವರಿಗೆ ರುಚಿಸುವುದಿಲ್ಲ.

ಸಿಂಡಿಕೇಟಿನ ಹೊಸ ಶಾಖೆಗಳು

ಸಿಂಡಿಕೇಟ್ ಬ್ಯಾಂಕಿನ ಇನ್ನೆರಡು ಶಾಖೆಗಳು ಇದೇ ತಿಂಗಳಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ತೆರೆಯಲ್ಪಡುವುವು.

1.) ಕುಂದಾಪುರ (ಕೇರಳ ರಾಜ್ಯದ ಕಿರೋನ್ ಜಿಲ್ಲೆ.) ತಾ. 24-8-68ಕ್ಕೆ.

2.) ಪಾಲೆ (ಗೋವಾ) ತಾ ೦೧ ಸು 30—8—1968.

ಈ ಎರಡು ಶಾಖೆಗಳ ತೆರೆಯುವಿಕೆಯಿಂದ ಸಿಂಡಿಕೇಟಿಗೆ ಒಟ್ಟು 940 ಶಾಖೆಗಳಾದಂತಾಗುತ್ತದೆ.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 47ನೇ ವರ್ಷವು ಕೊನೆಗೊಂಡು ಸಪ್ತಂಬರಾದಿಯಿಂದ 48ನೆ ಹೊಸ ವರ್ಷಾರಂಭವಾಗಲಿರುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಅದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ, ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿ ಕೊಟ್ಟು ಸಹಕರಿಸುವಂತೆವಿನಂತಿಸುತ್ತೇವೆ

ಮೆನೇಜರ್,
ನವಯುಗ, ಉಡುಪಿ

ನರಸಣ್ಣನ ನರಸ



ನಾಯಿಳರನ್ನು ಬಹಿರಂಗವಾಗಿ ಕೆಗಳುವುದೊಂದು ಸಮಸ್ಯೆಯಂತೆ, ಮತ್ತೇನು ಮುಂದೆ ಭರಾ ಎಂದು ಹಿಂದಾಡಿಕೊಳ್ಳಬೇಕೆ? —ಅಂಜುಬುರುಳರು!

ಮುಖಚಿತ್ರ

ರಾಷ್ಟ್ರ ಭಾಗ್ಯ ವಿಧಾತ
ಮಹಾತ್ಮಾ ಗಾಂಧಿ

ಗೇಹ ರಾಜ್ಯದಲ್ಲಿ

ಸತ್ತು ಕಾಂಬ ಸಗ ಬೇಸೆನ್ನಬೇಕು

"ಓದ್ರೋ, ಸುಸು ಇತ್ತ ಕಿವಿಗೊಡ್ರೀಂ ದ್ರೆ....'

"ಅಲ್ವೆ, ನಿನ್ನ ಕೈಹಿಡಿದ ದಿನಾನೇ ಕಿವಿಯನ್ನೂ ನಿನ್ನತ್ತ ಕೊಟ್ಟಿದ್ದೀನಲ್ಲಾ ...."

"ಸಾಕು ಬಿಡ್ರೀಂದ್ರೆ...."

"ಸಾಕೂಂತ ನನ್ಗೂ ಒಮ್ಮೊಮ್ಮೆ ಅನ್ನಿಸುತ್ತೆ. ಆದ್ರೆ ಬಿಡೋಕೆ ಕಾನೂನು ಒಪ್ಪಬೇಕಲ್ಲಾ...."

"ಸುರುವಾಯ್ತು ಬೇಡಾದ್ದು..."

"ಅಲ್ವೆ, ಮತ್ತೆ ಬೇಕಾಗಿರೋದಾದ್ರೂ ಏನೂಂತ?'

"ನೋಡ್ರಿ, ನನ್ನ ಪಂಚಾಂಗದಲ್ಲಿ ಬರೆದಿರೋದು ಸತ್ಯವಾಯ್ತು....",

'ಏನು ಬರೆದಿದೆಯೇ ನಿನ್ನ ಪಂಚಾಂಗ ದಲ್ಲಿ?"

'ಪಂಚಾಂಗದಲ್ಲಿ ಕನ್ನಡು ನಿಮ್ಮದೂಂ ಶೇಳಿದೇರಂ? ಅದು ಎಲ್ರದ್ದೂ...'

"ಸರಿಯಪ್ಪ....ಪರೋಪಕಾರಾಯ ಪುಣ್ಯಾಂ, ಏತದರ್ಥವಿದಂ ಶರೀರಂ..."

"ಛೆ..ಏನು ಹೊಲಸು ಮಾತಾಡ್ತೀರಿಂತ...'

"ಹೊಲಸು ಏನು ಖಂತೆ ಇದ್ರಲ್ಲಿ... ಪಂಚಾಂಗದ ಶರೀರ ಪರೋಪಕಾರಾರ್ಥಾಂತಂದ್ರೆ..."

"ಹೋಗ್ಲಿ ಬಿಡಿ....ನೋಡ್ರಿ, ಈ ವರ್ಷ ಒಂದು ಕೊಳವೆ ಮಳೆ ಹೆಚ್ಚು ಅಂತ ಪಂಚಾಂಗದಲ್ಲಿ ಬರೆದಿದೆ..'

"ಹ್ಹೂಂ...'

"ಅದೇ ನೋಡಿ, ಎಲ್ಲಿ ನೋಡಿದರಲ್ಲಿ ಮಳೆಯೇ ಮಳೆ, ನೆರೆಯೇ ನೆರೆ....'

'ಹ್ಹೂಂ....'

"ನೋಡಿ, ಪಶ್ಚಿಮ ಕರಾವಳಿ, ಒರಿಸ್ಸಾ, ಬಂಗಾಳ, ಅಸಾಮ, ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಗುಜರಾತ್—ಹೀಗೆ ಎಲ್ಲ ರ್ಯಾಜಗಳಲ್ಲೂ ವಿಪರೀತ ನೆರೆ ಬಂದು ಬೆಳೆ ಹಾನಿಯಾಯ್ತು..."

"ಹ್ಹೂಂ...."

'ಅನೇಕ ಪ್ರಾಣಿಗಳೂ ಪಶುಗಳೂ ಹೋದುವು..."

"ಹ್ಹೂಂ...!

'ಮನೆಗಳು ಉರುಳಿದುವು...."

"ಹ್ಹೂಂ...."

"ಅಲ್ರಿ, ಗುಜರಾತದ ರಾಜ್ಯವೊಂದರಲ್ಲಿಯೇ ೭೦ ಸಾವಿರಕ್ಕೂ ಮೀರಿದನ್ನು ಜಾನುವಾರುಗಳು ನೆಲಸಮವಾದವಂತೆ ..."

'ಹ್ಹೂಂ...'

'ಒಂದು ಸಾವಿರಕ್ಕೂ ಮಿಕ್ಕಿ ಮಾನವ ಪ್ರಾಣ ಹಾನಿಯಾಯ್ತಂತೆ—"

"ಹ್ಹೂಂ—'

"ಸೌರಾಷ್ಟ್ರ ರಾಜ್ಯ ಎಂದೂ ಕಂಡರಿಯದ ನೆರೆಯಂತೆ ಇದು...."

"ಹ್ಹೂಂ...."

"ಅಲ್ರಿ, ಬರೀ ಹ್ಹೂಂ ಹ್ಹೂಂ ಅನ್ತಾ ಇದ್ದೀರಲ್ಲಾ...'

"ಹ್ಹೂಂ...'

"ಬೇಡ ಹಾಂಗಾದ್ರೆ..."

'ಹ್ಹೂಂ...."

"ಹ್ಹೂಂ....ಎಂಥದು?'

"ನೀನು ಹೇಳಿದ್ದಕ್ಕೆಲ್ಲಾ ಹ್ಹೂಂ..."

'ಒಂದನಾಡಿದ್ರೆ ನೂರು ಆಡೋವ್ರು ಈ ದಿನ ಮಾತ್ರ ಹ್ಹೂಂ ಹ್ಹೂಂ ಅಂತ"

"ಪಂಚಾಂಗ ಫಲ ಕೇಳೋವಾಗ ಬರೀ ಹ್ಹೂಂಗಟ್ಟು ಬೇಕಷ್ಟೆ ನೋಡು... ಅದ್ರ ನಡುವೆ ಕ್ರಾಸ್ ಕೊಶ್ಚನ್ ಹಾಕಿದ್ರೆ ಅತ ಧರ್ಮಲಂಪಟ ಕ್ರಾಸ್ತಿಕನಾಗ್ತಾನ ...."

"ನೀವೇನನ್ನೋದು? ಪಂಚಾಂಗದಲ್ಲಿ ಬರೆದಿರೋ ಫಲ ಸುಳ್ಳಾಂತೆ?'

"ಛೆ, ಛೆ..ಎಂದಿಗಾದ್ರೂ ಆದೀತೆ? ಪಂಚಾಂಗದ ಲೆಕ್ಕಾಚಾರ ತಪ್ಪಿ ಹೋಗಬಹುದು; ಆದ್ರೆ, ಅದರ ಫಲ ಮಾತ್ರ ನೂರಕ್ಕೆ ನೂರರಷ್ಟು ಸತ್ಯ—'

"ನಿಮಗೆ ನಂಬಿಕೆ ಇಲ್ಲದಿದ್ರೆ ಬಿಡಿ ನಂಗೇನು? ಅವರವರ ನಂಬಿಕೆ ಅವರವರಿದೆ"

"ನಂಬಿಕೆ ಇಲ್ಲಾಂತ ಯಾರು ಅಂಗ್ರು?"

'ಮತ್ತೆಂಥದು?'

'ಏನೂಂತನ್ನೋದು? ಎರಡು ದಡಿಯೂರಗಳು ಒಂದೇ ಸಮಯವನ್ನು ತೋರಿಸುವುದಿಲ್ಲ ಅಂತ ವಿದೇಶೀ ಗಾದೆಯಾದ್ರೆ, ಎರಡು ಪಂಚಾಂಗದಲು ಒಂದೇ ಫಲಗೆಯನ್ನು ಹೇಳುವುದಿಲ್ಲಾನ್ನೋದು ಸ್ವದೇಶಿ ಗಾದೆ..."

"ಅದ್ರೂ..."

"ಅದ್ರೂ, ಎಲ್ಲಾ ಜಾರಿಗಳು ರೋಮನ್ನು ಮುಟ್ಟುತ್ತವೆ ಅಂತ ವಿದೇಶಿ ನೂತಾಪ್ತಿ ಎಲ್ಲಾ ಪಂಚಾಂಗಗಳೂ ಸತ್ಯವನ್ನು ಮುಟ್ಟುತ್ತವೇಂತ ಸ್ವದೇಶಿ ನೂತು...."

"ಸಾಕು ಬಿಡ್ರಿ....ನೋಡಿ, ಅಲ್ರಿ, ಬಂಗಾಳದಲ್ಲಿ...."

"ಹ್ಹೂಂ.....ಬಂಗಾಳದಲ್ಲೂ ನೆರೆ ಬಂತು....'

"ನೆರೆಯ ಕಥೆ ಹಾಗಿರ್ಲಿ, ಅಲ್ಲಿ ಯಾವುದೋ ನಗರ ಸಭೆಯಲ್ಲಿ..."

"ಓಹೋ, ಕಲ್ಕತ್ತದ ನಗರ ಸಭೆಯ ಕಥೆ...'

'ಹ್ಹೂಂ...ಏನಂತೆ? ಏನೋ ಭಾರೀ ಗಲಾಟೆ ಅಂತ ಹೇಳೋದು ಕೇಳಿದೆ...."

"ಅದು ಭಾರೀ ತಮಾಶೆ...'

"ಏನು?"

"ಅಲ್ಲಿನ ಮೇಯರು ವಿದೇಶ ಸಂಚಾರಿಗಳು, ಉಪಮೇಯರರು ವಿರೋಧಿ ಪಕ್ಷೀಯರಿದೆ ಅವಿಶ್ವಾಸಿಗಳು — ಗೊತ್ತುವಳಿ ಬಂದರೆ, ಜಯಾವಧಿಯಲ್ಲಿ ಉಪಮೇಯರರು ಅಧ್ಯಕ್ಷ ಸ್ಥಾನದಲ್ಲಿರಬಾರದೂಂತ...ಆಕ್ಷೇಪ ಬಿದ್ದು ಹೋದ ಮೇಲೆ ಸುದ್ದಾಗುದ್ದಿ....ಉಪಮೇಯರಿದೆ ಗಾಯ ....ನಡುವೆಯೇ ಅವಿಶ್ವಾಸ ನಿರ್ಣಯ ತಿರಸ್ಕೃತವೆಂಬ ಘೋಷಣೆ...."

'ಅವೀಗ ಸರಿ ಸೂಯ್ತು. ವಿಧಾನ ಸಭೆಯಲ್ಲಿ ನಡೆದದ್ದೇ ಮತ್ತೆ ಪುನರಾವರ್ತನೆಯಾಯ್ತಿನ್ನಿ. ಪಂಜಾಬದ ಬಜೆಟ್ ಅಧಿವೇಶನವಾದಂತಾಯ್ತಲ್ಲಾ! ಅಲ್ರಿ, ಈ ಬಂಗಾಲದ ಜನ ಹೀಗೇಕಂತೆ?'

"ನೋಡ್ರಿ, ಬಂಗಾಳದ ಹುಲಿ ಮತ್ತು ಪಂಜಾಬದ ಕೇಸರಿಗಳು ಭಾರೀ ಹುಷಾರು, ಆ ಎರಡು ರಾಜ್ಯಗಳು ಇರುವುದರಿಂದಲೇ ದೇಶದ ಭಾರ ಸರಿತೂಗುತ್ತೆ. ಈಗ ತಮಿಳರೂ ತಾವೂ ಸಮ.ಭಂ.ರರೆನ್ನ ಹೊರಟಿದ್ದಾರೆ. ಮತ್ತೆ ನೋಡ, ಬಂಗಾಲಿ ಹುಲಿಗಳು ಬೆಲ್ಲರೆಯವರಲ್ಲ....'

"ಯಾಕೆ? ಮತ್ತೇನಾಯ್ತು?"

"ಕಲ್ಕತ್ತ ಉಚ್ಚ ನ್ಯಾಯಾಲಯದ ಅಡ್ವೊಕೇಟರುಗಳು ನ್ಯಾಯಾಲಯವನ್ನೇ ಬಹಿಷ್ಕರಿಸಿ ಬಿಡುವಷ್ಟು ಮುಂದಾಗಿದ್ದಾರೆ.'

"ಯಾಕೆ? ಏನಾಯ್ತು?'

"ಆಗೋದಲ್ಕೇನು? ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಡಿ. ಎನ್. ಸಿನ್ಹರು ಬ್ಯಾರಿಸ್ಟರುಗಳನ್ನು ನ್ಯಾಯಮೂರ್ತಿಗಳಾಗಿ ನೇಮಿಸುವುದರಲ್ಲಿ ಅನ್ಯಾಯವೆಸಗಿದ್ದಾರೆಂದು ಅವರ ದೂರು.?

"ಇದೊಳ್ಳೆ ಕಥೆಯಾಯ್ತಲ್ಲಾ...."

"ಶ್ರೀ ಸಿನ್ಹರನ್ನು ಬೇರೆಡೆಗೆ ವರ್ಗಮಾಡುವ ವರೆಗೂ ಈ ಬಹಿಷ್ಕಾರ ಹೇರುವ ಧೃಢ ನಿರ್ಧಾರ ಮಾಡಿದ್ದಾರೆ....'

'ಅಲ್ರಿ, ಮದ್ರಾಸದ ಶಾಸನ ಸಭೆಯ ಸ್ಪೀಕರು ರಾಜಿನಾಮೆ ನೀಡಿದರಂತೆ....'

'ಹ್ಹೂಂ...ತಮ್ಮ ಮೇಲೆ ಅವಿಶ್ವಾಸ ಠರಾವು ಬರುವುದಕ್ಕೆ ಮೊದಲೇ ಅವರು ಪದವಿಯಿಂದ ಜಾರಿಕೊಂಡರು...'

"ಅಲ್ರಿ, ಅವು ಡಿಎಂಕೆಯವ್ರೇ ಅಲ್ವೆ? ಹಾಗಿರುವಾಗ, ಒಂದು ವೇಳೆ ಅವಿಶ್ವಾಸ ಗೊತ್ತುವಳಿ ಬಂದ್ರೂ ಅದು ಸ್ವೀಕಾರವಾಗೋದು ಹೇಗೆ?"

"ಅದ್ರಲ್ಲೂ ಒಂದು ರಾಜಕೀಯ ಪಕ್ಷಗಾರಿಕೆ ಇದೇನ್ನಿ."

'ಎಂಥದ್ದು?'

"ಅಧ್ಯಕ್ಷ ಅದಿತ್ಯನ್ ಪಕ್ಷದ ಪ್ರಚಾರಕಾರ್ಯದಲ್ಲಿ ತೊಡಗಿದರೆಂಬ ಆರೋಪ ಹೊರಿಸಿ ಕಾಂಗ್ರೆಸಿಗರು ಅವಿಶ್ವಾಸ ಠರಾವು ತರಲು ನಿಶ್ಚಯಿಸಿದ್ದಾರೆ. ವಿಧಾನ ಸಭೆಯ ಒಂದು ಸಂಗಡನ ಅವಿಶ್ವಾಸಕ್ಕೆ ಪಾತ್ರರಾದ ತಾವು ಹುದ್ದೆಗೆ ರಾಜಿನಾಮೆ ನೀಡಿದ್ದೇನೆಂಬ ಹೆಗ್ಗಳಿಕೆ ಅವಿಶ್ವಾಸಿಗರಿಗೆ. ಅಧಿಕಾರ ಮೋಹ ಕಾಂಗ್ರೆಸ್ಸಿಗರಿಗೆ ಮಾತ್ರ

(ಒಂಥತ್ತನೇ ಪುಟ ನೋಡಿರಿ)

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 36/1968.

ದಿ. ಉಡ್ಪಿ ಮುನ್ಸಿಫರ್ ಕಾನ್ಸಲ್— by its Chief officer, M. Somanath —ವಾದಿ.

ಮತ್ತು

E. ಹನುಮಂತಪ್ಪ — ಬನ್ನಪ್ಪನ ಮಗ, ಸಾಗರ ಕ್ಲಬ್ಬಾ, ಶಿವಮೊಗ್ಗ ಡಿಸ್ಟ್ರಿಕ್ಟ್ —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಯೂ ಮೂಲ್ಯ ತಿಳಿಯಪಡಿಸುವುದೇನೆಂದರೆ—

ವಾದಿ ಮುನ್ಸಿಪಾಲಿಟಿಯ ಬಾಬ್ತು Mutton & ball ಪ್ರತಿವಾದಿಯು ಯೇಲಮನದ್ದಿ ಪಡೆದ ಬಾಬತ್ತಿನ ಪ್ರತಿವಾದಿಯಿಂದ ಬರತಕ್ಕ ಬಾಕಿಗೆ ಬಾಕಿ ಅಸಲು ಬಡ್ಡಿ ಅಯವೇಜಿಗೆ ವಾದಿಯು ದಾಕಲು ಮಾಡಿದ ಮೇಲ್ಕಂಡ ದಾವೆಯು ತಾ. 31.8.1968ಕ್ಕೆ ಯಿಟ್ಟಿದೆ. ಸದ್ರಿ ಪ್ರತಿವಾದಿಗೆ ಅಪೇಕ್ಷೆ ಹೇಳತಕ್ಕದ್ದು ಯದ್ರೆ ಸದ್ರಿ ಎನ್ನ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಬ್ ಹೇಳಿ ಮಾಡಿಕೊಳ್ಳತಕ್ಕದ್ದು ಎಂದು ಸಂಗ್ತಿ ತಿಳಿಸೋಣಾಗಿಯದೆ.

N. V. Kamath
Advocate for Plaintiff.

ಉಡ್ಪಿ, 12.8.1968.

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—

ದಯಮಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O.S. 83/67

ಕಾಳಿ ಹೆಂಗ್ಸು ಸಹಾ— ವಾದಿರು.
ಚಂದಪ್ಪ ಸಹಾ— ಪ್ರತಿವಾದಿರು.

ಬೆಳ್ತಂಗಡಿ ತಾಲ್ಲೂಕು ಕಾಶಿಪಟ್ಣ ಗ್ರಾಮದಲ್ಲಿರುವ ಸಂಕಂಮ ಹೆಂಗ್ಸಿನ ಮಗ ಬಾಬು ಪೂಜಾರಿಯವರಿಗೆ—

ಬೆಳಗಾಂನ ಕೊನನಾಳಗಳ್ಳಿ ಎಂಬಲ್ಲಿರುವ ಚಂದಪ್ಪ ಹೆಂಗ್ಸಿನ ಮಗ ಕಿಂತಯ್ಯ ಪೂಜಾರಿಯವರಿಗೆ—

ಮಂಗ್ರಾಬಾದ್ ತಾಲ್ಲೂಕ್ ಕೆಂಚಲ ನಗರ ಎಂಬಲ್ಲಿರುವ ಚಂದಪ್ಪ ಹೆಂಗ್ಸಿನ ಮಗ ಟೀಗಿ ಪೂಜಾರಿಯವರಿಗೆ — ಮತ್ತು ಮಾಡಿಗೆರೆ ತಾಲ್ಲೂ ಲೋಳಲ್ಳಿ ತೋಟ ಎಂಬಲ್ಲಿರುವ ಕಾಳಿ ಹೆಂಗ್ಸಿನ ಮಗ ಕುಂಡ ಪೂಜಾರಿಯವರಿಗೆ—

ಕೋರ್ಟ್ ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ವಾದಿರು ಜೀವನಾಂಶದಬಗ್ಗೆ ಮಾಡಿದ ದಾವೆಯು ತಾ. 30-8-1968ಕ್ಕೆ ಇಟ್ಟಿರುತ್ತದೆ. ಆದುದರಿಂದ ನಿಮ್ಮೆಲ್ಲರ ಅಪೇಕ್ಷೆಗೆ ಇದ್ದರೆ ಆ ದಿವಸ ಬೆಳಗ್ಗೆ 11 ಗಂಟೆಗೆ ವಕೀಲರ ದ್ವಾರಾ ಯಾ ಸ್ವತಹಾ ಕೋರ್ಟ್ ಮುಂದೆ ಹಾಜ್ರಾಗ ತಕ್ಕದ್ದು. ತಪ್ಪಿದ್ದಲ್ಲಿ ತಮ್ಮನ್ನು ತಿರ್ಯಾ ಮಾಡಿ ದಾವೆಯನ್ನು ಮುಂದುವರಿಸಲಾಗುವುದು ತಿಳಿದಿರಲಿ.

N. J. KADAMBA,
Advocate, Belthangady.

ಬೆಳ್ತಂಗಡಿ, 22.8.68.

ವಿಚಾರ ವರ್ಷ

ತಾರ್ಕಿಕ ದರ್ಶನ

ಲೇಖಕರು: ಶ್ರೀ ಎನ್. ರಂಗನಾಥ್ ಶರ್ಮ.

ನಮ್ಮ ಭಾರತೀಯರ ವೈದಿಕ ದರ್ಶನಗಳು ಆರು. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತ. ಇವುಗಳಲ್ಲಿ ನ್ಯಾಯಶಾಸ್ತ್ರದ ಪ್ರವರ್ತಕರು ಗೌತಮರು. ಇವರ ನ್ಯಾಯಸೂತ್ರಗಳಿಗೆ ವಾತ್ಸ್ಯಾಯನರ ಭಾಷ್ಯವಿದೆ. ವೈಶೇಷಿಕ ಶಾಸ್ತ್ರದ ಪ್ರವರ್ತಕರು ಕಣಾದರು. ಇವರ ಸೂತ್ರಗಳಿಗೆ ಪ್ರಶಸ್ತಪಾದರ ಭಾಷ್ಯವಿದೆ. ಈ ಸೂತ್ರಕಾರರ ಕಾಲ ಸರಿಯಾಗಿ ತಿಳಿಯದು. ಭಾಷ್ಯಕಾರರಾದ ವಾತ್ಸ್ಯಾಯನರು ಕ್ರಿ. ಶ. ೨೧೦ನೆಯ ಶತಮಾನದವರೆಂದೂ ಇತಿಹಾಸ ವಿಮರ್ಶಕರ ಅಭಿಪ್ರಾಯ ವಿದೆ.

ಈ ಎರಡು ದರ್ಶನಗಳಲ್ಲಿ ವೈಶೇಷಿಕ ದರ್ಶನವೇ ಪ್ರಾಚೀನವೆಂದು ತೋರುತ್ತದೆ. ನ್ಯಾಯ ವೈಶೇಷಿಕ ದರ್ಶನಗಳಲ್ಲಿ ಗಣನೀಯವಾದ ದೊಡ್ಡ ಭೇದವಿಲ್ಲ. ಇರುವ ಸ್ವಲ್ಪ ಭೇದವನ್ನು ಮುಂದಿನ ವಿದ್ವಾಂಸರು ಸಮನ್ವಯಗೊಳಿಸಿ ಒಂದೇ ಶಾಸ್ತ್ರದಂತೆ ಬೆಳೆಸಿದರು. ಗಂಗಾ ಯಮುನೆಗಳಂತೆ ಇವೆರಡೂ ಒಟ್ಟುಗೂಡಿ ತರ್ಕಶಾಸ್ತ್ರವೆಂದು ಪ್ರಸಿದ್ಧವಾಯಿತು.

ಉದ್ಯೋತಕರಾರ, ವಾಚಸ್ಪತಿ ಮಿಶ್ರ, ಉದಯನ, ಜಯಂತ ಭಟ್ಟ ಮುಂತಾದ ವಿಖ್ಯಾತ ವಿದ್ವಾಂಸರು ಈ ದರ್ಶನವನ್ನು ಸರ್ವತೋಮುಖವಾಗಿ ಬೆಳೆಸಿದರು. ಗಂಗೇಶೋಪಾಧ್ಯಾಯ, ರಘುನಾಥ ಗದಾಧರ ಭಟ್ಟಾಚಾರ್ಯ ಮೊದಲಾದ ಕುಶಾಗ್ರಮತಿಗಳು ತರ್ಕಶಾಸ್ತ್ರವನ್ನು ಹಿಗುಕಿ ಹಿಂಜಿ ತಮ್ಮ ಪ್ರತಿಭೆಯಿಂದ ವಾದ ಗ್ರಂಥಗಳನ್ನು ರಚಿಸಿದರು. ಈ ವಾದ ಗ್ರಂಥಗಳಲ್ಲಿ ದಾರ್ಶನಿಕವಾದ ವಿಚಾರ ಅತ್ಯಲ್ಪ. ಅಷ್ಟರ ಶಾಸ್ತ್ರದ ಪ್ರಮೇಯವನ್ನೂ ವಾದವನ್ನೂ ಸಮನ್ವಯಗೊಳಿಸಿ ಸಂಗ್ರಹಿಸಿದ ಹಲವಾರು ಗ್ರಂಥಗಳು ಹೊರಬಂದವು. ಇವುಗಳಲ್ಲಿ ಕೇಶವಮಿಶ್ರನ ತರ್ಕಭಾಷಾ, ತಾರಾಕ್ಷಿ ಭಾಸ್ಕರನ ತರ್ಕಕೌಮುದೀ, ವಿಶ್ವನಾಥನ ಸಿದ್ಧಾಂತ ಮುಕ್ತಾವಳಿ, ಅನ್ನಂಭಟ್ಟನ ತರ್ಕಸಂಗ್ರಹ—ಮುಖ್ಯವಾದವು. ಇವುಗಳಿಗೆ ವ್ಯಾಖ್ಯಾನಗಳು, ವ್ಯಾಖ್ಯಾನಗಳಿಗೆ ವ್ಯಾಖ್ಯಾನಗಳು ಈ ರೀತಿಯಲ್ಲಿ ತರ್ಕಶಾಸ್ತ್ರವು ಅತಿ ವಿಸ್ತೃತವಾಗಿ ಬೆಳೆದು ಬಂದಿತು.

ತರ್ಕ ಎಂದರೆ ಯುಕ್ತಿಯಿಂದ ಸ್ಥಾಪಿಸಲ್ಪಡುವ ಪದಾರ್ಥ, ಪದಾರ್ಥದ ಸ್ವರೂಪವನ್ನು ಯುಕ್ತಿಯಿಂದ ಸಪ್ರಮಾಣವಾಗಿ ವಿವೇಚಿಸುವುದು ಈ ಶಾಸ್ತ್ರದ ಉದ್ದೇಶ. ಪದಾರ್ಥಗಳ ನಿಜ ಸ್ವರೂಪವನ್ನು ನಾವು ಏಕೆ ಅರಿಯಬೇಕು? ಈ ಪ್ರಶ್ನೆಗೆ ಸೂತ್ರಕಾರರು "ಪದಾರ್ಥತತ್ತ್ವಜ್ಞಾನಾನ್ನಿಃಶ್ರೇಯಸಾಧಿಗಮಃ" ಎಂದು ಉತ್ತರಿಸುತ್ತಾರೆ. ಪದಾರ್ಥಗಳ ತತ್ತ್ವವನ್ನರಿಯುವುದರಿಂದ ಮೋಕ್ಷವು ದೊರೆಯುತ್ತದೆ ಎಂಬುದು ಅವರ ನಿರ್ಣಯ.

ದರ್ಶನವು ಪ್ರಧಾನವಾಗಿ ಮೂರು ಅಂಶಗಳನ್ನು ವಿವೇಚಿಸುತ್ತದೆ: ನಮ್ಮ ಕಣ್ಣಿಗೆ ಕಾಣುವ ಈ ಜಗತ್ತು, ಈ ಜಗತ್ತನ್ನು ಕಾಣುವ ನಾವು, ಜಗತ್ತಿಗೂ ನಮಗೂ ಕಾರಣವಾದ ಚೈತನ್ಯ ಎಂದರೆ ಈಶ್ವರ. ಹೀಗೆ ಜಗತ್ತು, ಜೀವ, ಈಶ್ವರ ಇವರ ಸ್ವರೂಪ ಗುಣ ಧರ್ಮಗಳು, ಸಂಬಂಧ, ಉದ್ದೇಶಗಳನ್ನು ವಿಮರ್ಶಿಸಿ ಒಂದು ನಿರ್ಣಯವನ್ನು ಹೇಳುವುದು ದರ್ಶನ ಶಾಸ್ತ್ರದ ಗುರಿ.

ತಾರ್ಕಿಕ ದರ್ಶನವು ಈ ಉದ್ದೇಶ ಸಾಧನೆಗೋಸ್ಕರ ವಿಚಾರ ಸೌಕರ್ಯಕ್ಕಾಗಿ ಒಟ್ಟು ಪದಾರ್ಥಗಳನ್ನು ಏಳು ವಿಭಾಗವಾಗಿ ಸೂಚಿಸುತ್ತದೆ. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವ ಎಂಬಿವೇ ಸಪ್ತ ಪದಾರ್ಥಗಳು. ಅನಂತರ ದ್ರವ್ಯವು ಒಂಭತ್ತು ಬಗೆಯೆಂದೂ ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ, ಕಾಲ, ದಿಕ್ಕು, ಆತ್ಮ, ಮನಸ್ಸು — ಇವುಗಳೇ ದ್ರವ್ಯಗಳೆಂದೂ ಹೇಳುತ್ತಾ ಹಾಗೆಯೇ ಗುಣದಲ್ಲಿ ರೂಪ, ರಸ, ಗಂಧ ಮೊದಲಾದ ಇಪ್ಪತ್ತನಾಲ್ಕು ವಿಧಗಳುಂಟು. ಈ ರೀತಿಯಲ್ಲಿ ಎಲ್ಲ ಪದಾರ್ಥಗಳ ವಿಭಜನೆ, ಅಂತರ್ವಿಭಜನೆಗಳು ನಡೆಯುತ್ತವೆ.

ಈ ವಸ್ತುಗಳಲ್ಲಿ ಕೆಲವು ಇಂದ್ರಿಯಗಳಿಗೆ ನೇರವಾಗಿ ಗೋಚರಿಸತಕ್ಕವು, ಕೆಲವು ಅರಿಯ ಯುಕ್ತಿಯಿಂದ ಸಿದ್ಧವಾಗತಕ್ಕವು. ತಾರ್ಕಿಕರು ವಸ್ತು ವಿಭಜನೆ ಅಧುನಿಕ ವಿಜ್ಞಾನಕ್ಕೆ ಸಂಮತವಾಗದಿರಬಹುದು. ಉದಾಹರಣೆಗೆ, ಬಣ್ಣವು ಏಳುವಿಧವೆಂದು ತಾರ್ಕಿಕರು ಹೇಳುತ್ತಾರೆ. ಬಿಳುಪು, ಕಪ್ಪು, ಹಳದಿ, ಕೆಂಪು, ಹಸಿರು, ಕಂದು ಮತ್ತು ಚಿತ್ರವರ್ಣ. ವಿಜ್ಞಾನ ಶಾಸ್ತ್ರದಂತೆ ಹಳದಿ, ಕೆಂಪು, ನೀಲಿ ಎಂದು ಮೂರೇ ಬಣ್ಣದಲ್ಲಿರಬಹುದು. ಮೂರಾಗಲಿ, ಎರಡಾಗಲಿ, ಒಂದೇ ಆಗಲಿ ಅಥವಾ ವಸ್ತುವಿನಲ್ಲಿ ಬಣ್ಣವಿಲ್ಲ ಅದು ಬೆಳಕಿನ ಕಿರಣದಲ್ಲಿರತಕ್ಕದ್ದು ಎಂದೇ ಆಗಲಿ —ಇದರಿಂದ ನಾವು ದರ್ಶನಕಾರರಲ್ಲಿ ನ್ಯೂನತೆಯನ್ನೆಣಿಸಲು ಸಾಧ್ಯವಿಲ್ಲ. ಕಣ್ಣಿಗೆ ಕಾಣಿಸತಕ್ಕ ಬಣ್ಣಗಳಿವು, ನಮ್ಮ ವ್ಯವಹಾರಕ್ಕೆ ಇಷ್ಟು ಬೇಕು ಎಂಬುದು ಮಾತ್ರ ಇಲ್ಲಿ ಉದ್ದಿಷ್ಟ. ಲೋಕಾನುಭವವನ್ನನುಸರಿಸಿ ಅದರ ಆಧಾರದಿಂದ ಶಾಸ್ತ್ರೀಯ ವ್ಯವಹಾರವು ಬಟ್ಟೆಯ ಮೂಲವಸ್ತು ಹತ್ತಿನೂಲು ಒಂದೇ ಅದರೂ ಸೀರೆ, ಪಂಚೆ ಎಂಬ ವಿಭಾಗ ತಪ್ಪಲ್ಲ. ಅವಶ್ಯಕವೂ ಹೌದು. ಈ ಪದಾರ್ಥಗಳ ವಿಭಾಗ ಆತ್ಮ—ಅನಾತ್ಮಗಳ ವಿವೇಚನೆಗಾಗಿ. ಅನಾತ್ಮ ವಸ್ತು ಎಷ್ಟಾದರೂ ಇರಲಿ, ಹೇಗಾದರೂ ಇರಲಿ, ಅವುಗಳ ಕೂಲಂಕಷ ವಿಮರ್ಶೆ ಇಲ್ಲಿ ಉದ್ದಿಷ್ಟವಲ್ಲ.

ಪೃಥಿವ್ಯಾದಿದ್ರವ್ಯಗಳಲ್ಲಿ ನಿತ್ಯ ಅನಿತ್ಯ ಎಂದು ಎರಡು ವಿಭಾಗ. ಪೃಥಿವೀ, ಜಲ, ಅಗ್ನಿ, ವಾಯು ಇವು ನಾಲ್ಕು ಅನಿತ್ಯ. ಇವುಗಳಿಗೆ ನಾಶ ಉಂಟು. ಆಕಾಶ, ಕಾಲ, ದಿಕ್ಕು, ಆತ್ಮ, ಮನಸ್ಸು ಇವೈದು ನಿತ್ಯ. ಇವುಗಳಿಗೆ ನಾಶವಿಲ್ಲ. ಯಾವುದಕ್ಕೆ ಅವಯವ ಉಂಟೋ ಅದು ಅನಿತ್ಯ. ಘಟ ಪಟಗಳಿಗೆ ಅವಯವ ಉಂಟು. ಇವು ಅನಿತ್ಯ. ಆಕಾಶ ಮೊದಲಾದವುಗಳಿಗೆ ಅವಯವ ಇಲ್ಲ. ಇವುಗಳನ್ನು ಒಡೆಯುವುದು ಸಾಧ್ಯವಿಲ್ಲ. ಆದ್ದರಿಂದ ಇವು ನಿತ್ಯ.

ಪೃಥಿವಿ ಮೊದಲಾದ ನಾವಯವ ವಸ್ತುವನ್ನು ವಿಭಜಿಸುತ್ತ ಹೋಗಬಹುದು. ಕಡೆಯಲ್ಲಿ ಅತ್ಯಂತ ಚಿಕ್ಕದಾದ ವಸ್ತು ದೊರೆಯುವುದು. ಅದು ಪರಮಾಣು. ಅದಕ್ಕೆ ಅವಯವ ಇಲ್ಲ. ಅದು ನಿತ್ಯ. ಹೀಗೆ ಪೃಥಿವ್ಯಾದಿ ನಾಲ್ಕು ದ್ರವ್ಯಗಳಿಗೂ ಪರಮಾಣುಗಳುಂಟು. ನಮ್ಮ ಕಣ್ಣಿಗೆ ಕಾಣಿಸತಕ್ಕದ್ದು ಪರಮಾಣುಗಳ ಸಂಘಟನೆಯಿಂದ ಜನಿಸಿದೆ.

ಆಕಾಶ, ದಿಕ್ಕು, ಆತ್ಮಗಳು ವಿಭು. ವಿಭು ಎಂದರೆ ಸರ್ವವ್ಯಾಪಿ. ದೇಶದ ಪರಿಮಿತಿ ಇವಕ್ಕೆ ಇಲ್ಲ. ಒಂಭತ್ತನೆಯ ದ್ರವ್ಯವಾದ ಮನಸ್ಸು ಪರಮಾಣು. ಇವೆಲ್ಲವೂ ನಿತ್ಯ ವಸ್ತುಗಳು.

ಹೀಗೆ ತಾರ್ಕಿಕರು ದ್ರವ್ಯಗಳನ್ನು ನಿತ್ಯ—ಅನಿತ್ಯ ಎಂದು ವಿಂಗಡಿಸಿದರೂ ಒಂದು ರೀತಿಯಲ್ಲಿ ಇವೆಲ್ಲವೂ ನಿತ್ಯವೆಂದು ಒಪ್ಪಿಕೊಂಡಂತೆಯೇ ಆಗುತ್ತದೆ. ಏಕೆಂದರೆ, ಪೃಥಿವ್ಯಾದಿಗಳು ಸಹ ಪರಮಾಣು ರೂಪದಲ್ಲಿ ನಿತ್ಯ ವಸ್ತುಗಳೇ.

ಹೀಗೆ ವಿವಿಧ ವೈಚಿತ್ರ್ಯಗಳಿಂದ ಕೂಡಿದ ಜಗತ್ತು ನಮಗೆ ಗೋಚರಿಸುತ್ತದೆ. ನಾವು ಎಂದರೆ ಯಾರು?

ತಾರ್ಕಿಕರು ಹೇಳುವುದೇನೆಂದರೆ, ಈ ನಮ್ಮ ಶರೀರವು ಪಂಚಭೂತಗಳಿಂದ ಆದದ್ದು. ಐದು ಇಂದ್ರಿಯಗಳೂ ಪಂಚಭೂತಗಳ ಅಂಶಗಳೇ. ಮೂಗು—ಎಂದರೆ, ಘ್ರಾಣೇಂದ್ರಿಯ ಪೃಥಿವೀ ಸಂಬಂಧಿ. ಜಿಹ್ವೇಂದ್ರಿಯ ಜಲಸಂಬಂಧಿ. ಚಕ್ಷುಸ್ಸು ಅಗ್ನಿ ಸಂಬಂಧಿ. ಚರ್ಮ—ಎಂದರೆ ತ್ವಚೇಂದ್ರಿಯ ವಾಯು ಸಂಬಂಧಿ. ಶ್ರವಣೇಂದ್ರಿಯ ಆಕಾಶ ಸಂಬಂಧಿ. ಈ ಇಂದ್ರಿಯಗಳು ಕ್ರಮವಾಗಿ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳನ್ನು ನಮಗೆ ತಿಳಿಸಿಕೊಡುತ್ತವೆ. ಇವು ಐದು ಬಹಿರಿಂದ್ರಿಯವಳು. ಇನ್ನೊಂದು ಅಂತರಿಂದ್ರಿಯ ವಿದೆ. ಅದು ಮನಸ್ಸು. ಮನಸ್ಸು ಇಂದ್ರಿಯಗಳೊಡನೆ ಸೇರಿ ಇಂದ್ರಿಯವು ಶಬ್ದಾದಿ ವಿಷಯದೊಡನೆ ಸೇರಿದಾಗ ನಮಗೆ ವಸ್ತುವಿನ ಜ್ಞಾನವುಂಟಾಗುತ್ತದೆ. ಜ್ಞಾನವಾಗತಕ್ಕದ್ದು ಯಾರಿಗೆ? 'ಜ್ಞಾನಾಧಿಕರಣಮಾತ್ಮಾ' ಎಂದು ತಾರ್ಕಿಕರ ಸಿದ್ಧಾಂತ. ಜ್ಞಾನವು ಆತ್ಮನಿಗಾಗುತ್ತದೆ. ಜ್ಞಾನ ನಿಲುವುದು ಆತ್ಮನಲ್ಲಿ. ಮನಸ್ಸೂ ಪಂಚೇಂದ್ರಿಯಗಳೂ ಜ್ಞಾನಕ್ಕೆ ಸಾಧನಗಳು. ಆದ್ದರಿಂದ 'ಜ್ಞಾನ' ಎಂದರೆ ಆತ್ಮ. ಇವನು ಜೀವಾತ್ಮ. ಶರೀರವೂ ಭೋಗಾಯತನ. ಸುಖ-ದುಃಖಗಳ ಅನುಭವ ಈ ಶರೀರದಲ್ಲಿ ಇಂದ್ರಿಯಗಳ ಮೂಲಕ ಆತ್ಮನಿಗಾಗುತ್ತದೆ.

ಜ್ಞಾನವು ಸ್ಮೃತಿ ಅನುಭವ—ಎಂದು ಎರಡು ವಿಧ. ಅನುಭವದ ಮೂಲಕ ಉಂಟಾದ ಸಂಸ್ಕಾರವೆಂದಾಗುವ ಜ್ಞಾನವೆ ಸ್ಮೃತಿ. ಅನುಭವದಲ್ಲಿ ಪ್ರಮೆ, ಭ್ರಮೆ ಎಂದು ಎರಡು ಬಗೆ. ಭ್ರಮೆ ಎಂದರೆ ತಪ್ಪು ತಿಳಿವಳಿಕೆ. ಇದನ್ನು ಅನ್ಯಥಾಖ್ಯಾತಿ ಎಂದು ಕರೆಯುತ್ತಾರೆ. ಪ್ರಮೆಯೆಂದರೆ ಯಥಾರ್ಥ ಜ್ಞಾನ. ಇದ್ದಂತೆ ಇದ್ದಂತೆ ತಿಳಿಯುವುದು ಪ್ರಮೆ. ಪ್ರಮೆಗೆ ಸಾಧನವಾದದ್ದು ಪ್ರಮಾಣ. ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ—ಎಂಬ ನಾಲ್ಕು ಪ್ರಮಾಣಗಳಿಂದ ನಮಗೆ ಅನುಭವ ಉಂ

(ಎಂಟನೇ ಪುಟ ನೋಡಿರಿ)

ಶ್ರಾವಣ ಸಂದೇಶ

ಬೀಜ ಮೊಳೆತು ಸಸಿಯು ಚಿಗುರಿ ಹೂವ ಬಿಡುವುದು
ದುಡಿಮೆ ಮೊಳೆತು ಗಳಿಮೆ ಚಿಗುರಿ ಸಿರಿಯು ಬೆಳೆವುದು.

ಸಫಲ ಬದುಕಿಗೆ ಬೇಕು ಸಮೃದ್ಧ ಸಂಪತ್ತು
ಅದರಿಂದ ನೀಗುವುದು ನಮ್ಮೆಲ್ಲ ಆಪತ್ತು.

ಸಂಪತ್ತಿನ ಬೀಜ ದುಡಿಮೆಯಲ್ಲಿ ಅಡಗಿದೆ.
ಬೀಜ ಹೂವಾಗಬೇಕಾದರೆ ದುಡಿಮೆಯ ಜತೆಗೆ ಉಳಿತಾಯವನ್ನು ಸಾಧಿಸಬೇಕು.
ಸಸ್ಯದ ಬೆಳವಣಿಗೆಗೆ ಶ್ರಾವಣದ ನಿರಂತರ ಮಳೆ ಪೋಷಕವಾಗುವಂತೆ
ಸಂಪತ್ತಿನ ಬೆಳವಣಿಗೆಗೆ ಉಳಿತಾಯವು ಸಹಕಾರಿಯಾಗುತ್ತದೆ.
ಕೂಡಿಟ್ಟ ಸಂಪತ್ತೇ ನಿಮ್ಮ ಬದುಕನ್ನು ಆಪತ್ತಿನಿಂದ ರಕ್ಷಿಸುವ ಬಂಧು.

ಸಂಪತ್ತನ್ನು ಕೂಡಿಡಲು ಬಯಸುವ
ಉಳಿತಾಯಗಾರರ ಬಂಧು:

FAITHFUL FRIENDS

ಸಿಂಡಿಕೇಟ್ ಬಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.
ಶಾಖೆಗಳು: 235ಕ್ಕೂ ಮಿಕ್ಕಿ.
ಟಿ. ಎ. ಪೈ ಚೆಯರ್‌ಮೇನ್

ಸ್ವಾಭಿಮಾನ ಸಹಿತ ಸ್ವಾತಂತ್ರ್ಯ ಸಂರಕ್ಷಣೆ

ಭಾರತವನ್ನು ಕಬಳಿಸಲು ಶತ್ರು ರಾಷ್ಟ್ರಗಳೂ ಅವರ ಚೇಲಾರೂ ಒಂದಾಗಿ ಪ್ರಯತ್ನ ನಡೆಸುತ್ತಿರುವುದು ಶ್ರೀ ಸಾವರ್ಕರ್‌ರಿಗೆ ಸುಸ್ಪಷ್ಟ. ಈ ಪರಿಸ್ಥಿತಿಯಲ್ಲಿ ಆಂತರಿಕ ಸಂಘಟನೆಯಿಂದ ಮಾತ್ರ ಸ್ವಾಭಿಮಾನ ಸಹಿತ ಸ್ವಾತಂತ್ರ್ಯ ಸಂರಕ್ಷಣೆ ಸಾಧ್ಯ. ರಾಷ್ಟ್ರ ಪ್ರೇಮಿಗಳು ರಾಷ್ಟ್ರಧ್ವಜ ಹಾರಿಸಿ ಮೆರವಣಿಗೆ ತಿಂದು ತುಪ್ಪರಾದರೆ ಸಾಲದು, ರಾಷ್ಟ್ರೀಯ ಐಕ್ಯ ಸಾಧನೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

ನಮ್ಮ ನೆಚ್ಚಿನ ನಾಡು, ಭಾಗ್ಯದ ಬೀಡು ಭಾರತದ ಸ್ವಾತಂತ್ರ್ಯವನ್ನು ಸಂರಕ್ಷಿಸಲು ಸರಿಯಾದ ರಕ್ಷಣಾ ಪಡೆಗಳು ಇಲ್ಲವೆಂಬ ಅಭಿಪ್ರಾಯ ವ್ಯಕ್ತವಾದಾಗ, ಅಗಿನಿ ಪ್ರಧಾನಿ ಪಂಡಿತ ಜವಾಹರಲಾಲ ನೆಹ್ರೂಜೀಯವರು ತನ್ನ ವೈಯಕ್ತಿಕ ಸ್ನೇಹಸೂತ್ರವನ್ನು ಸರಿಸಿಬಿಟ್ಟು, ಶ್ರೀ ಯಶವಂತ ಭವಾನರನ್ನು ಚಟ್ಟನೆ ಕರೆಸಿಕೊಂಡರು. ಇನ್ನು ಭಾರತದ ಯಶೋದುಂದುಭಿ 'ಮೊಳಗಿತು, ಸ್ವಾತಂತ್ರ್ಯ ಸೂರ್ಯನ ಗ್ರಹಣಕಾಲ ಮುಗಿಯಿತೆಂದು ಶ್ರೀಸಾವರ್ಕರ್ರನ್ನು ಭಾವಿಸಿಕೊಂಡಿದ್ದ, ಅವನ ಭಾವನೆಯ ಭಾಸ್ಕರಭಿಲೆನೇ ಗ್ರಹಣಕಾಲ ಬಂದುಬಿಟ್ಟಿದೆ. ಶ್ರೀ ಯಶವಂತ ಭವಾನರು ರಕ್ಷಣಾಖಾತೆಯಿಂದ ಕಾಲ್ತೆಗೆದು ಗೃಹ ಖಾತೆಯಲ್ಲಿ ಕಾಲಿಟ್ಟಿರುವರು.

ದೇಶದ ರಕ್ಷಣಾಖಾತೆಯು ಹಾಗೆನೇ ಗೃಹ ಖಾತೆ ಎಂ ದೇಶದ ರಕ್ಷಣೆ, ಸ್ವಾತಂತ್ರ್ಯದ ಸಂರಕ್ಷಣೆಗೆ ಅತ್ಯಾವಶ್ಯಕತೆನ್ನುವುದರಲ್ಲಿ ಎರಡಭಿಪ್ರಾಯಕ್ಕಂತೂ ಆಸ್ಪದವಿರಲಾರದು. ಗೃಹಖಾತೆಯು ಗಟ್ಟಿಮುಟ್ಟಾಗಿದ್ದರೆನೇ ರಕ್ಷಣಾರಂಗವು ರಕ್ಷಣೆಯಿಂದಿರಬಹುದು. ಆದುದರಿಂದ ಅದಕ್ಕೆ ಸರಿಯಾದ ಸಚಿವರನ್ನು ಆಯ್ಕೆಮಾಡಿಕೊಳ್ಳಬೇಕು. ಅದನ್ನು ಅರಿತುಕೊಂಡೇ ಪ್ರಧಾನಿ ಇಂದಿರಾ ಗಾಂಧೀಜೀಯವರು ಶ್ರೀ ಯಶವಂತ ಭವಾನರನ್ನು ತಮ್ಮ ಮಂಡಳಿಯಲ್ಲಿ ಗೃಹಶಾಖೆಯ ಮಂತ್ರಿಯನ್ನಾಗಿ ಆರಿಸಿಕೊಂಡರು. ಗೃಹ ಖಾತೆಯ ಅಮಾತ್ಯರು ಗೃಹ ವಿಭಾಗದ ಮಂತ್ರಿಯಾಗಿ ಬಿಟ್ಟಲ್ಲಿ ಆದ ದೇಶಕ್ಕೆ ಅಪಾಯ ಆದಾಗಿಯೇ ಸಂಭವಿಸುವದರಲ್ಲಿ ಸಂದೇಹವಿರುವದಿಲ್ಲ. ಚೈನಾ—ಪಾಕಿಸ್ಥಾನಗಳೆರಡೂ ಅವೇಳಿಕ ಅಲ್ಲದೆ ರಷ್ಯಾ ಮತ್ತು ಬ್ರಿಟನ್‌ಗಳ ಶಸ್ತ್ರಾಸ್ತ್ರಗಳ ಸಹಾಯದಿಂದ ನಮ್ಮ ದೇಶವನ್ನು ಆಕ್ರಮಿಸಿದರೂ ಕೂಡಾ ದೇಶದೊಳಗೆ ಒಕ್ಕಟ್ಟಿದ್ದಲ್ಲಿ ನಾವು ಅವರನ್ನು ಅಟಂತಾದರೂ ಎದುರಿಸಲು ಸಾಧ್ಯವಿದೆ. ಗೃಹ ಖಾತೆಯ ಸಚಿವರ ಗವನ ದೇಶದೊಳಗಿನ ಅರು ಹೋಗು ಶಾಂತಿ-ಕಾನೂನು ಪರಿಪಾಲನೆಯ ಮೇಲೆ ಇರಬೇಕು. ಅದನ್ನು ಬಿಟ್ಟು ಅದಿನಿತಾದರೂ ಅತ್ತ ಸರಿದಲ್ಲಿ, ಗರಿ, ಮುಗಿದು ಹೋಯ್ತು. ಶ್ರೀ ಯಶವಂತರಾವ್ ಭವಾನರು ಅದನ್ನೆಲ್ಲಾ ಸರಿದೂಗಿಸಿಕೊಂಡು ಹೋಗಬಹುದೆಂಬ ಸಿರೀಕ್ಷೆ ಇತ್ತು. ಆದರೆ ಅವರು ಅದ್ಯಾವ ಸಮಯದಲ್ಲಿ ಗೃಹ ಮಂತ್ರಿಯಾದರೋ, ಅಂದಿನಿಂದ ದೇಶದೊಳಗೆ ಕಲಹ—ಬಡಿದಾಟ ಬಲಿಯುತ್ತಿದೆ. ಹಾಗಿದ್ದರೂ ಗಂಡೆದೆಯ ಗೃಹಸಚಿವರು ಆ ಸ್ಥಾನಕ್ಕೆ ಬಾರದಿದ್ದಲ್ಲಿ ಭಾರತ ಸ್ವಾಭಿಮಾನ ಶೂನ್ಯವಾಗುವದು ಮಾತ್ರವಲ್ಲ, ಅದಕ್ಕೆ ಸ್ವಾತಂತ್ರ್ಯದ ಸಂರಕ್ಷಣೆ ಮಾಡಲು ಸಾಧ್ಯವೇ ಇಲ್ಲ. ಈ ದಿಶೆಯಲ್ಲಿ ಶ್ರೀ ಯಶವಂತರಾಯರು ನಮ್ಮನ್ನೆಷ್ಟು ಕೊಂಡೊಯ್ಯುತ್ತಿದ್ದಾರೆ?

ಸ್ವಾತಂತ್ರ್ಯ ದಿನಾಚರಣೆಯಂದು ಸಂರಕ್ಷಣೆಯ ಕುರಿತು ಯೋಚನೆ ಮಾಡಬೇಕಾಗುತ್ತದೆ. ಸ್ವಾಭಿಮಾನ ಸಹಿತ ಸ್ವಾತಂತ್ರ್ಯ ಸಂರಕ್ಷಣೆ ಸಾಧ್ಯವೇನು? ಸ್ವಾಭಿಮಾನ ಸಹಿತ ಸ್ವಾತಂತ್ರ್ಯ ಸಂರಕ್ಷಣೆಯೆಂದೊಡನೆ ಗೃಹಸಚಿವರ ಇತ್ತೀಚೆಗಿನ ಗಡಿಬಿಡಿ ಜಟ್ಟಿಸಳಕ್ಕೆ ಬರುತ್ತದೆ.

ಅಗಿನ್ನೂ ರಾಷ್ಟ್ರೀಯ ಐಕ್ಯತಾ ಸಮಿತಿಯ ಸಭೆ ಸೇರಲು ಕೆಲವೇ ದಿನಗಳಿದ್ದುವು. ಆಗ ದೈನಿಕಾಲಿನಲ್ಲಿ ನಮ್ಮ ಗೃಹಸಚಿವ ಶ್ರೀ ಯಶವಂತರಾವ್ ಭವಾನರು ಭಾಷಣ ಮಾಡುತ್ತ, "ಜಾತಿಯ ನಡುವೆ ಜಗಳ ಉಂಟಾಗುವಂತೆ ಪ್ರಚೋದಿಸುವ ಬರೆಹಗಳನ್ನು ನಾಶ ಮಾಡಬೇಕು. ಅಕ್ಷೇಪಣೀಯ ಕೃತಿಗಳ ವಿಷಯದ್ಧವಾಗಿ ಜಿಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಅದಕ್ಕೆ ಅವರಿಗೆ ಅಧಿಕಾರವನ್ನೀಯಬೇಕೆ"ಂದೂ ಹೇಳಿದರು. ಪೂರ್ಣ ಅಧಿಕಾರ ಇರುವ ಶ್ರೀ ಭವಾನರು ಸ್ಥಳೀಯ ಅಧಿಕಾರಿಗಳಿಗೆ ಅಪ್ಪಣೆ ಕೊಡುವದು ಬಹಳ ಒಳ್ಳೆಯದು. ಆದರೆ ಇಲ್ಲಿ ಆಕ್ಷೇಪಣೀಯ ಅಥವಾ ಕಲಹ ಪ್ರಚೋದನೆಯ ಬರೆಹ, ಲೇಖನ, ಕೃತಿಗಳ್ಯಾವುವು? ಸರಕಾರ ಅದನ್ನೆಂತು ತೀರ್ಮಾನಿಸಿಕೊಳ್ಳುತ್ತದೆನ್ನುವ ಪ್ರಶ್ನೆ ಬರುತ್ತದೆ.

"I firmly believe all the sacred truths which the Catholic Church believeth and teacheth, because Thou hast revealed them."

ಕೆಥೋಲಿಕ ಇಗರ್ಜಿ ನಂಬುವ ಮತ್ತು ಬೋಧಿಸುವ ಪವಿತ್ರ ಸತ್ಯಗಳನ್ನು ನಾನು ದೃಢವಾಗಿ ನಂಬುತ್ತೇನೆ, ಯಾಕೆಂದರೆ ಅದನ್ನು ದೇವರು ಅದೇಶಿಸಿರುವರು.

ಇದು ಕೆಥೋಲಿಕರು ದಿನಂಪ್ರತಿ ರಾತ್ರಿ ಹೇಳುವ ಪ್ರಾರ್ಥನೆ.

"I firmly believe that there is one God; and that in this one God there are three persons – the Father, the Son and the Holy Ghost."

"Most emeciful Father, who hast given us Thy only Son to be our daily sacrifice, incline Thy ears to our prayers and favour our desires, protest, unite and govern Thy whole Church, throghout the world...."

"ಒಂದೇ ಒಂದು ದೇವರು ಇರುವದು. ಆ ಒಂದು ದೇವರಲ್ಲಿ ಮೂರು ಪಾತ್ರಗಳು—ತಂದೆ, ಮಗ ಮತ್ತು ಪವಿತ್ರಾತ್ಮ ಅನ್ನುವದನ್ನು ನಾನು ದೃಢವಾಗಿ ನಂಬುತ್ತೇನೆ."

"ಅತ್ಯಂತ ಕರುಣಾಮಯಿ ತಂದೆಯೇ, ನಿನ್ನ ಏಕಮೇವ ಮಗನನ್ನು ನಮ್ಮ ದೈನಂದಿನ ಬಲಿಗಾಗಿ ಕೊಟ್ಟಿರುವೆ; ನೀನು ನಮ್ಮ ಪ್ರಾರ್ಥನೆಗೆ ಕಿವಿಗೊಡು ಮತ್ತು ನಮ್ಮ ಅಶೆಗಳಿಗೆ ದಯೆತೋರು, ನಿನ್ನ ಎಲ್ಲಾ ಇಗರ್ಜಿಗಳಲ್ಲಿ, ಪ್ರಪಂಚದಲ್ಲೆಲ್ಲಾ ಇರುವ ಇಗರ್ಜಿಗಳನ್ನು ಕಾಪಾಡು, ಒಂದುಗೂಡಿಸು ಮತ್ತು ಆಡಳಿತ ನಡೆಸು...."

ಈ ವಾಕ್ಯಗಳನ್ನು ಕೆಥೋಲಿಕರ ಪ್ರಾರ್ಥನಾ ಪುಸ್ತಕದಿಂದ ಉದಾಹರಿಸಲಾಗಿರುತ್ತದೆ. ಇದರಿಂದ ಸ್ಪಷ್ಟವಾಗುವ ವಿಷಯವೇನೆಂದರೆ ಒಬ್ಬನೇ ಒಬ್ಬ ದೇವರಿದ್ದು, ಆತನ ಮೂಲಕ ಆದೇಶಿಸಲ್ಪಡುವ ಇಗರ್ಜಿಯ ಆದೇಶಗಳನ್ನು ಮಾತ್ರ ಕೆಥೋಲಿಕರು ಕೇಳುತ್ತಾರಲ್ಲದೆ—ಬೇರೆ ಇನ್ನಾವದನ್ನೂ ಇಲ್ಲ. ಬೇರೆ ಯಾವ ದೇವರೂ ಇಲ್ಲ, ಅಲ್ಲದೆ ಆ ದೇವರಿಗೆ ಒಬ್ಬನೇ ಒಬ್ಬ ಮಗನಲ್ಲದೆ ಬೇರಿನ್ನಾರೂ ಇಲ್ಲ. ಬೇರೆಯವರ ಮಾತನ್ನು ಕೆಥೋಲಿಕರು ಕೇಳಲು ಸಿದ್ಧರಿಲ್ಲವೆಂಬುದು ಇದರಿಂದ ಗೊತ್ತಾಗುತ್ತದೆ.

ಬಾಯಿಬಲಿಕ ಹೊಸ-ಒಡಂಬಡಿಕೆಯಲ್ಲಿ ಸ್ವತಃ ಯೇಸುವೇ ಉಪದೇಶಿಸುತ್ತಾನೆ—ಕ್ರಿಸ್ತನೇ ದೇವರ ಏಕಮೇವ ಮಗ—ಕೆಲವರು ತಾವು ದೇವರೆಂದೂ, ದೇವರ ಮಕ್ಕಳೆಂದೂ, ಪ್ರವಾದಿಗಳೆಂದೂ ಹೇಳುತ್ತ ಮೂಢಜಾಲಗಳನ್ನು ಪ್ರಕಟಿಸಿ ನಿಮ್ಮನ್ನು ಮೋಸಗೊಳಿಸಬಹುದು. ಅದಕ್ಕೆ ಮೋಸ ಹೋಗಬೇಡಿ. ಸ್ವರ್ಗಕ್ಕೆ ಹೋಗಲು ಇರುವದು ಒಂದೇ ಒಂದು ದಾರಿ. ಅದು ಕ್ರಿಸ್ತನ ಮೂಲಕವೇ ಹೋಗಬೇಕು.

ಹೀಗಿರುವಾಗ ಕ್ರಿಸ್ತೀಯರು, ಬಾಯಿಬಲಿನ ಭಕ್ತರು ಅನ್ಯಮತಗಳತ್ತ ಸಹನೆ ತೋರಿಸಲು ಸಾಧ್ಯವೇನು?

"ದೇವರು ಒಬ್ಬನೇ, ಅವನೇ ಅಲ್ಲಾ ಮತ್ತು ಮಹಮ್ಮದನು, ಅವನ ಪ್ರೇಷಕನು....ದೇವರೇ ಇಲ್ಲ, ಅಲ್ಲಾ ಮಾತ್ರ ವಿಜ. ಬೇರಿನ್ನಾವ ದೇವರೂ ಇಲ್ಲ." ಇವು ಖುರಾನಿನಲ್ಲಿರುವ ವಾಕ್ಯಗಳು.

ಕ್ರಿಸ್ತಿಯರಿಗೂ ಮುಸಲ್ಮಾನರಿಗೂ 'ಕೊನೆಯ ದಿನ'ದಲ್ಲಿ ನಂಬಿಕೆ ಇದೆ. ಕೊನೆಯ ದಿನವೆಂದರೆ ಅಂದು ಕ್ರಿಸ್ತೀಯರ ಪ್ರಕಾರ ಕ್ರಿಸ್ತನೂ, ಮಹಮ್ಮದೀಯರ ಪ್ರಕಾರ ಅಲ್ಲಾನೂ ಬಂದು ನ್ಯಾಯ ವಿಚಾರಣೆ ಮಾಡುವ ದಿನ. ನಂಬಿದವರು ಅಂದರೆ ಕ್ರಿಸ್ತೀಯರು ಅಥವಾ ಮುಸಲ್ಮಾನರು (ಅವರವರ ಪ್ರಕಾರ) ಮಾತ್ರ ಸ್ವರ್ಗಕ್ಕೆ ಹೋಗುತ್ತಾರೆ; ಉಳಿದವರು ನರಕಕ್ಕೆ ಹೋಗುತ್ತಾರೆ, ಅನಂತರ ಪುನಃ ಹುಟ್ಟುತ್ತಾರೆ.

ಇವತ್ತು ಕ್ರಿಸ್ತೀಯ ಪ್ರಚಾರಕರು ಬಹಳ ಕೀಳ್ಮಟ್ಟ ರೀತಿಯಲ್ಲಿ 'ಪಾಪಿ'ಗಳಿಗೆ ದಿನಂಪ್ರತಿ ಬೋಧಿಸುತ್ತಿದ್ದಾರೆ. ಈ ವಿಷಯಗಳು ಮತೀಯ ಮಾರಾಮಾರಿಗೆ ಪ್ರಚೋದಿಸುವದಿಲ್ಲವೇನು? ಈ ಕೃತಿಗಳ ಮೇಲೆ ಶ್ರೀ ಯಶವಂತ ಭವಾನರು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಮತೀಯ ಪ್ರಚೋದನೆಯೇ ಪಾಕಿಸ್ಥಾನ ನಿರ್ಮಾಣಕ್ಕೆ ಕಾರಣವೆಂಬುದನ್ನು ಶ್ರೀ ಭವಾನರು ಮರೆಯುವಂತಿಲ್ಲ. ಹಿಂದೂ-ಮುಸಲ್ಮಾನರನ್ನು ಒಂದಾಗಿಸಲು ಪ್ರಯತ್ನಪಟ್ಟವರಲ್ಲಿ ಈಶ್ವರ ಅಲ್ಲಾ ತೇರೇ ನಾಮವ ದಿವಂಗತ ಮೋಹನದಾಸ ಕರಂಚಂದ ಗಾಂಧೀಜಿಯವರ ಹೆಸರನ್ನು ಮರೆತು ಬಿಡಲು ಸಾಧ್ಯ ಇರುವದಿಲ್ಲ. ಅವರ ಕುರಿತೇ ಮಹಮ್ಮದಾಲಿ ಹೇಳಿದ್ದೇನು? ಕುಡುಕ, ಕೊಲೆಗಡುಕ, ಕೃತಿಯ ದಜೇಯ ಮಾಕಮ್ಮದೀಯ ಮಾಹಾತ್ಮಾ ಗಾಂಧೀಜಿಯವರಿಗಂತಲೂ ಮೇಲ್ಮಟ್ಟ

ಟ್ಟಿದವನು ಈ ಬರಹಗಳನ್ನು ಶ್ರೀ ಯಶವಂತ ಭವಾಳರಿಂದ ಅಡಗಿಸಲು ಸಾಧ್ಯವೇನು?

ಮತೀಯ ಮೂರ್ಖಾಮಾಯಂತೆ ಗೃಹ ಖಾತೆಯನ್ನು ಗದರಿಸುತ್ತಿರುವ ಇನ್ನೊಂದು ಪೆಶಂಭ ತವು ಪ್ರಾದೇಶಿಕ ಮನೋಭಾವನೆ. ಈ ದಳ್ಳುರಿಗೆ ಭಾಷೆಯೆಂಬ ಗನಿ ಎಣ್ಣೆ ಸೇರಿದಾಗ ಹಬ್ಬುವ ಜ್ವಾಲೆಯನ್ನು ತಡೆಗುವುದು ಬಹಳ ಕಷ್ಟ.

ಇಂತಹ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವ ಬದಲು ಶ್ರೀ ಭವಾನರು ತುಷ್ಟೀಕರಣ ಧೋರಣೆಯನ್ನೇ ಅನುಸರಿಸುತ್ತಿದ್ದಾರೆ. ಮಹಾತ್ಮಾಜೀಯವರೇ ಕೊನೆಯಲ್ಲಿ ಮರುಗಿದ್ದರು....ಮುಸ್ಲಿಂ ತುಷ್ಟೀಕರಣದಿಂದ ತಾನು ಮೋಸಹೋದೆನೆಂದು.

ಪಂಡಿತ ಜವಾಹರಲಾಲ ನೆಹ್ರೂಜಿಯವರು ಸವ್ಯ ರಾಷ್ಟ್ರದ ನವ-ಭೇಷಣೆಯನ್ನು ತಂದರು. ಅದರ ಪರಿಣಾಮವಾದರೂ ಏನು? ಕೊನೆಯಲ್ಲಿ, ಮುಸ್ಲಿಂ ಲೀಗಿನೊಂದಿಗೆ ಮಂಡಿಯೂರಿ ಚುನಾವಣಾ ಮೈತ್ರಿಯನ್ನು ಮಾಡಿಕೊಂಡರು. ತುಷ್ಟೀಕರಣದ ಬಾವಿಯಿಂದ ಹೊರಗೆ ಬರಲು ಅವರಿಂದ ಸಾಧ್ಯವಾಗಲಿಲ್ಲ.

ಇದೀಗ ಶ್ರೀ ಭವಾನರು ನವ-ಭಾರತೀಯತೆಯ ಕೂಗನ್ನೆಬ್ಬಿಸಿದ್ದಾರೆ. ಗೃಹ ಭದ್ರತೆಗೆ ಉಪಾಯ ಹುಡುಕಲೇ ಬೇಕು. ಸವ್ಯ-ರಾಷ್ಟ್ರೀಯತೆಯ ಕೂಗೆಬ್ಬಿಸುತ್ತ ಅವರು ರಾಷ್ಟ್ರೀಯ ವೀರರುಗಳ ಹೆಸರನ್ನು ಜಪಿಸಿದ್ದಾರೆ—ಅಶ್ಫಾಕ್ ಮತ್ತು ಶಿವಾಜಿ ನಮ್ಮ ರಾಷ್ಟ್ರೀಯ ವೀರರು—ನಮ್ಮ—ಭಾರತೀಯರ ನೇತಾಗಳು!

ಅಖಂಡ ಭಾರತದ ಸ್ವಾತಂತ್ರ್ಯಕ್ಕಾಗಿ ಛತ್ರಪತಿ ಶಿವಾಜಿ ಮಹಾರಾಜರು ಹೋರಾಟ ನಡೆಸಿದ್ದರೂ, ಅವರು ಶ್ರೀ ಭವಾನರ ದೃಷ್ಟಿಯಲ್ಲಿ ಮಹಾರಾಷ್ಟ್ರದವರಿದ್ದಾರೆ. ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ರಾಷ್ಟ್ರೀಯಮಹಾಪುರುಷರಾದಲ್ಲಿ ಮಹಾರಾಣಾ ಪ್ರತಾಪಸಿಂಹರೇತಕ್ಕೆ ರಾಷ್ಟ್ರೀಯ ವೀರಪುರುಷರಲ್ಲ? ಶ್ರೀ ಭವಾನರ ಪ್ರಾದೇಶಿಕ ಮನೋಭಾವನೆಯ ಧ್ಯೋತಕವಿದು.

ಶ್ರೀಸಾವಾರ್ಕರ ದೃಷ್ಟಿಯಲ್ಲಿ ಮಹಾರಾಣಾ ಪ್ರತಾಪಸಿಂಹ ಮತ್ತು ಛತ್ರಪತಿ ಶಿವಾಜಿ ಮಹಾರಾಜರುಗಳು ರಾಷ್ಟ್ರೀಯ ಮಹಾಪುರುಷ, ವೀರಪುರುಷರಿದ್ದಾರೆ ಪ್ರಾದೇಶಿಕ ಮನೋಭಾವನೆ ಅವರನ್ನು ತಪ್ಪುದಾರಿಗೆಳೆಯಲಾರದು.

ಅಕ್ಬರ ಭಾರತದಲ್ಲಿಆಳುವಾಗ ಭಾರತದ ಬಾವುಟದಡಿಯಲ್ಲಿ, ಭಾರತೀಯ ಸಂಸ್ಕೃತಿ—ಧರ್ಮಕ್ಕನುಸಾರವಾಗಿ ರಾಜ್ಯಭಾರ ನಡೆಸಲಿಲ್ಲ, ಅತ.

ಭಾರತದ ಗೃಹದೊಳಗಿಂದು ಮತೀಯ ಮನೋಭಾವನೆ ಮತ್ತು ಪ್ರಾದೇಶಿಕ ಮನೋಭಾವನೆಯ ಹೆಣ್ಣಗಳು ದೊಡ್ಡ ದೊಡ್ಡ ಬಿಲಗಳನ್ನಂಟು ಮಾಡಿನೆ, ಅಷ್ಟ ತುಷ್ಟೀಕರಣದ ವಿಷಜಂತು ಮನೆ ಮಾಡಿಕೊಂಡಿದೆ. ದೇಶದ ಹೊರಗೆ ಚೈನಾ, ಪಾಕಿಸ್ಥಾನಗಳು, ಅಮೇರಿಕ, ರಷ್ಯಾ, ಬ್ರಿಟಿಷ್, ಫ್ರಾನ್ಸ್ ಮುಂತಾದ ದೇಶಗಳ ಶಸ್ತ್ರಾಸ್ತ್ರಗಳ ಸಹಾಯದಿಂದ ಆಕ್ರಮಣ ಪಡಿಸಲು, ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು, ಹೊಂಚು ಹಾಕುತ್ತಿದ್ದಾರಾದಲ್ಲಿ, ಇಲ್ಲಿರುವ ಅವರ ಬಾಲಬಡಕರು ಹಾಗೂ ಭಾರತೀಯತೆಯ ವಿರೋಧಿಗಳು ಅವರಿಗೆ ಸಹಾಯಮಾಡಲು ಸಮಯ ನೋಡುತ್ತಿದ್ದಾರೆ. ಅನ್ಯರಾಷ್ಟ್ರಗಳು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವದನ್ನು ಹಡೆಯಲು ನಮ್ಮ ಪರದೇಶ ಸಂಪರ್ಕ ಸಚಿವ ವಿದೇಶಗಳಲ್ಲಿರುವ ರಾಯಭಾರಿಗಳಿಗೆ ಅಸಾಧ್ಯವಾಗಿರುವಂತೆ ಗೃಹ ಮಂತ್ರಿಯವರಿಗೆ ಮನೆಯಲ್ಲಿ ಶಾಂತಿಯನ್ನಿಟ್ಟು ಕೊಳ್ಳಲು ಸಾಧ್ಯವಾಗಿರುವದಿಲ್ಲ. ಹಾಗಿರುವಾಗ ಭಾರತದ ಸ್ವಾತಂತ್ರ್ಯ ಸಂರಕ್ಷಣೆಯ ಗತಿ ಏನು? — ಸ್ವಾಭಿಮಾನ ಹಾಗಿರಲಿ — ಕೇವಲ ಸ್ವಾತಂತ್ರ್ಯವನಾದರೂ ಇಂತಹವರಿಂದ ಸಂರಕ್ಷಿಸಿಕೊಳ್ಳಲು ಸಾಧ್ಯವೇನು?

ಹೀಗಿರುವಾಗ ಭಾರತದ ಭವಿಷ್ಯತ್ತೇನು?

ಇಂದು ಸ್ವಾತಂತ್ರ್ಯದಿನಾಚರಣೆಯೊಂದಿಗೆ ಶ್ರೀಕೃಷ್ಣ ಜನ್ಮಾಷ್ಟಮಿಯ ಹಬ್ಬದ ದಿನವೂ ಇದೆ. ಸ್ವಾತಂತ್ರ್ಯ ಸಿಕ್ಕಿರುವ ದಿನವಂದೆನ್ನುವದನ್ನು ಅಲ್ಲಗಳೆಯುವ ರಾಷ್ಟ್ರ ಭಕ್ತರ್ಯಾವನೂ ಇರಲಾರ. ಶ್ರೀ ಕೃಷ್ಣನಲ್ಲದೆ ಇನ್ನಾರು ನಮ್ಮನ್ನು ರಕ್ಷಿಸುವರು? "ಧರ್ಮಗ್ಲಾನಿ ನಡೆದಾಗ ಧರ್ಮದ ಸಂಸ್ಥಾಪನೆಗಾಗಿ ದುಷ್ಟರನ್ನು ದಮನಮಾಡಲು, ಶಿಷ್ಟರನ್ನು ಪರಿಪಾಲಿಸಲು, ನಾನು ನನ್ನನ್ನೇ ಸೃಷ್ಟಿಸಿಕೊಳ್ಳುತ್ತೇನೆ"ಂದು ಶ್ರೀಕೃಷ್ಣಗೀತೆಯ ಮೂಲಕ ಶ್ರೀಕೃಷ್ಣನು ತಿಳಿಸಿರುವನು. ಕಲಿಯುಗದಲ್ಲಿ ಸಂಘವೇ ಶಕ್ತಿಯೆಂದು ಶ್ರೀಕೃಷ್ಣನು ತಿಳಿಸಿರುವನು. ಆದುದರಿಂದ ಧರ್ಮಾಭಿಮಾನಿಗಳು, ರಾಷ್ಟ್ರದ ಮೇಲೆ ಪ್ರೀತಿ ಮತ್ತು ಭಕ್ತಿಯುಳ್ಳವರು ಇಂದು ಸಂಘಟಿತರಾಗಬೇಕಾಗಿದೆ. ಸುಸಂಘಟನೆಯಿಂದಲೇ ಸ್ವಾಭಿಮಾನ ಸಹಿತ ಸ್ವಾತಂತ್ರ್ಯ ಸಂರಕ್ಷಣೆ ಮಾಡಲು ಸಾಧ್ಯ.

ಓರ್ವ ಮಿಲಿಟರಿ ವರದಿಗಾರ

ನಮ್ಮ ನಾಡಿನ ಹೆವ್ಯಿ-ಟ್ಯಾಂಕ್‌ಪಡೆ

ದೇಶ ರಕ್ಷಣೆಯಲ್ಲಿ ಹಿಂದೆ ಅಶ್ವಬಲ ತೋರಿಸುತ್ತಿದ್ದ ಸಾಹಸವನ್ನೀಗ ಟ್ಯಾಂಕು ಪಡೆ ಪ್ರದರ್ಶಿಸಬೇಕಾಗಿದೆ. ನಮ್ಮ ಟ್ಯಾಂಕು ಪಡೆಗಳು ಸದಾ ದೇಶ ರಕ್ಷಣೆಗಾಗಿ ಹೋರಾಡಿವೆ; ಯುದ್ಧಗಳಿವೆ. ಈಗ ಸ್ವದೇಶೀ ಟ್ಯಾಂಕ್ ವಿಜಯಾಂತ ನಿರ್ಮಾಣವಾಗಿ ಟ್ಯಾಂಕು ಪಡೆಯ ಗೌರವಾದರಗಳಿಗೆ ಪಾತ್ರವಾಗಿದೆ.

ಸ್ವಯಂಚಾಲಿತ ಶಸ್ತ್ರಾಸ್ತ್ರಗಳು ಬಳಕೆಗೆ ಬಂದಾಗಿನಿಂದ ಆಧುನಿಕ ಯುದ್ಧದಲ್ಲಿ ಅಶ್ವದಳದ ಮಹತ್ವವೇ ಕಡಿಮೆಯಾಗಿದೆ ಏಕೆಂದರೆ ಅಶ್ವದಳ ಈ ಆಧುನಿಕ ಶಸ್ತ್ರಾಸ್ತ್ರಗಳನ್ನು ಎದುರಿಸಿ ಹೋರಾಡಲಾರದು. ಈ ಕಾರಣದಿಂದಾಗಿಯೇ ಇಪ್ಪತ್ತನೆಯ ಶತಮಾನದ ಆರಂಭದಿಂದಲೂ ಅಶ್ವದಳಕ್ಕೆ, ಹೊಸ ಕೆಲಸವನ್ನು ಮಾಡಿಕೊಡಲಾಗಿದೆ. ಸೇನಾ ಪಡೆಗೆ ಕಾಯುವುದು, ಆಗಾಗ್ಗೆ ದಾಳಿಮಾಡುವುದು, ಸೇನೆ ಹಿಂದೆ ಸರಿಯುವಾಗಲೆಲ್ಲ ಅದಕ್ಕೆ ರಕ್ಷಣೆ ಒದಗಿಸುವುದು ಇವೇ ಅಶ್ವದಳದ ಕಾರ್ಯಗಳಾಗಿವೆ.

ಮೊದಮೊದಲು ಅಶ್ವದಳದ ಅನೇಕ ಯೋಧರಿಗೆ ಈ ಬದಲಾವಣೆ ಸರಿಬರಲಿಲ್ಲ. ಏಕೆಂದರೆ ಈ ಮುಂಚೆ ಯುದ್ಧದಲ್ಲಿ ಶ್ರೇಯಸ್ಸು ಅವರಿಗೇ ದೊರಕುತ್ತಿತ್ತು. "ಕಬ್ಬಿಣದ ಕುದುರೆ"ಗಳಾದ ಟ್ಯಾಂಕ್‌ಗಳ ಶೋಧದಿಂದಾಗಿ ಯುದ್ಧದ ಸಮಗ್ರ ಸ್ವರೂಪವೇ ಬದಲಾಯಿತು. ಇಂದು ಆಧುನಿಕ ಯುದ್ಧದಲ್ಲಿ ವಿಜಯಗಳಿಗೆಲು ಟ್ಯಾಂಕ್‌ಗಳು ಅತ್ಯವಶ್ಯವಾದ ಸಾಧನವೆಂದು ಪರಿಗಣಿಸಲಾಗುತ್ತಿದೆ.

"ಟ್ಯಾಂಕ್" ಎಂದರೆ ಏನು? ಇದನ್ನು ತಿಳಿದುಕೊಳ್ಳಲು ಪ್ರತಿಯೊಬ್ಬರೂ ಉತ್ಸುಕರಾಗುವುದು ಸಹಜ. ಟ್ಯಾಂಕ್ ಎಂದರೆ ಹೊಗೆಯುಗುಳುವ ಒಂದು ಮಾರಕಾಸ್ತ್ರ. ಒಂದು ಬಲಿಷ್ಠವಾದ ಫಿರಂಗಿ. ಸಮತಟ್ಟಾದ ಮಂಚದ ಮೇಲೆ ಇದನ್ನು ಜೋಡಿಸಿರುತ್ತಾರೆ. ಟ್ಯಾಂಕಿನಲ್ಲಿ ಚಾಲಕರ ರಕ್ಷಣೆಗೆ ಸೂಕ್ತ ವ್ಯವಸ್ಥೆ ಇದೆ. ಸಣ್ಣ-ಪುಟ್ಟ ಫಿರಂಗಿಗಳು ಹಾರಿಸುವ ಗುಂಡುಗಳು ಟ್ಯಾಂಕಿಗೆ ಏನೇನೂ ಮಾತ್ರವಾರವು. ಟ್ಯಾಂಕ್ ತಗ್ಗು-ದಿನ್ನೆಗಳಿರುವ ಪ್ರದೇಶದಲ್ಲೂ ಸ್ವಾತಂತ್ರವಾಗಿ ವೇಗದಿಂದ ಚಲಿಸಬಲ್ಲದು. ಟ್ಯಾಂಕ್‌ಗಳ ನಿರ್ಮಾಣದಲ್ಲಿ ಈಗ ಸಾಕಷ್ಟು ಸುಧಾರಣೆಗಳಾಗಿವೆ ಇಂದು ಟ್ಯಾಂಕುಗಳು ನದಿ-ಕೊಳ್ಳಗಳನ್ನು ಸುಲಭವಾಗಿ ದಾಟಬಲ್ಲವು. ಟ್ಯಾಂಕ್‌ಗಳನ್ನು ವಿಮಾನದಲ್ಲಿ ಸಹ ಸಾಗಿಸಬಹುದು. ಪ್ಯಾರಾಷ್ಯೂಟ್ ಮೂಲಕ ಕೆಳಗೆ ಇಳಿಸಬಹುದಾಗಿದೆ. ಟ್ಯಾಂಕ್ ಚಾಲಕರಿಗೂ ಅಶ್ವದಳದ ಯೋಧರಂತೆ ಶೌರ್ಯ-ಸಾಹಸಗಳನ್ನು ತೋರಿಸುವ ಅವಕಾಶಗಳು ಸೇರಾದಷ್ಟು ಇರುತ್ತವೆ. ಅವರ ಯಾವ ಕ್ಷಣದಲ್ಲಿ ಯಾವ ರೀತಿ ಸಾಹಸ ತೋರಿಸುವರೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ಅವರು ಅಷ್ಟೇ ಅನಿರೀಕ್ಷಿತವಾಗಿ ಸಾಹಸ ಪ್ರಕಟಿಸಿ ವಿಶ್ವವನ್ನೇ ಆಶ್ಚರ್ಯಚಕಿತಗೊಳಿಸುತ್ತಾರೆ!

ಸುಡ್ಡ ಬೆಟ್ಟಗಳು, ಅರಣ್ಯಗಳು, ಮರುಭೂಮಿ ಇವು ಟ್ಯಾಂಕಿನ ಶತ್ರುಗಳಾಗಿವೆ. ಕೆಳಮಟ್ಟದಲ್ಲಿ ಹಾರುವ ವಿಮಾನಗಳು ಈ ಟ್ಯಾಂಕ್‌ಗಳ ಮೇಲೆ ಬಾಂಬುದಾಳಿ ಮಾಡುವ ಭೀತಿಯೂ ಇರುತ್ತದೆ. ಬಯಲು ಪ್ರದೇಶದಲ್ಲಿ ಟ್ಯಾಂಕ್ ಯುದ್ಧ ನಡೆದಾಗ ಅವುಗಳಿಗೆ ವಿಮಾನಬಲದ ರಕ್ಷಣೆ ಇರಬೇಕಾಗುತ್ತದೆ. ಅಂದರೆ ಮೂರು ಟ್ಯಾಂಕ್‌ಗಳಿಂದ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಅಲ್ಪಾವಧಿಯಲ್ಲೇ ಶತ್ರುಗಳ ನೆಲೆಗಳನ್ನು ಧ್ವಂಸಗೊಳಿಸಲು ಟ್ಯಾಂಕ್‌ಗಳನ್ನು ಉಪಯೋಗಿಸಬೇಕಾಗುತ್ತದೆ. ಟ್ಯಾಂಕ್‌ಗಳಿಂದ ಹೀಗೆ ಪ್ರಬಲ ದಾಳಿ ಮಾಡಿದ ಟ್ಯಾಂಕ್‌ಗಳಿಗೆ ಅಗತ್ಯವಾದ ದುರಸ್ತಿ ಮಾಡಲು ಪೆಟ್ರೋಲ್ ತುಂಬಲು ಸಾಕಷ್ಟು ಸಮಯ ದೊರೆಯುತ್ತದೆ.

ಸೂಕ್ತ ಸಮಯದಲ್ಲಿ ಸೂಕ್ತ ಸ್ಥಾನದಲ್ಲಿ ಶತ್ರುಗಳ ಮೇಲೆ ಟ್ಯಾಂಕ್‌ಗಳು ಹಾಗೂ ತೋಪುಗಳಿಂದ ಒಂದೇ ಸಮಯ ಗುಂಡಿನ ಸುರಿಮಳೆ ಮಾಡಿದಾಗ ಮೂಪ್ರಯುದ್ಧದಲ್ಲಿ ವಿಜಯ ಪಡೆಯಲು ಸಾಧ್ಯವಾಗುತ್ತದೆ.

ಎರಡನೆಯದಾಗಿ ಪರಮಾಣು ಬಾಂಬುಗಳ ದಾಳಿಯ ಸಂದರ್ಭಗಳಲ್ಲಿ ಟ್ಯಾಂಕ್‌ಗಳು ಅಣುವಿಕಿರಣ ಕ್ರಿಯೆಯನ್ನು ಲೆಕ್ಕಿಸದೇ ಚಲಿಸಬಲ್ಲುವು. ಇತ್ಯ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಲ್ಪ ಕಾಲದಲ್ಲಿಯೇ ಶತ್ರುಗಳ ವಿರುದ್ಧ ವ್ಯೂಹವನ್ನು ರಚಿಸಿಕೊಳ್ಳಬಲ್ಲವು.

ಶತ್ರುಗಳ ಸಾಲೆಗಳ ಮೇಲೆ ಧಾಳಿಮಾಡಿ ಅವುಗಳನ್ನು ಧ್ವಂಸಮಾಡಲು ಟ್ಯಾಂಕ್‌ಗಳನ್ನು ಬಳಸುತ್ತಾರೆ. ಅಂತೆಯೇ ರಕ್ಷಣೆಗಾಗಿಯೂ ಟ್ಯಾಂಕ್‌ಗಳನ್ನು ಬಳಸಲಾಗುತ್ತಿದೆ. ದಾಳಿ ಮಾಡುವದೇ ಟ್ಯಾಂಕ್‌ಗಳ ಮುಖ್ಯ ಕೆಲಸ. ಕಾಲ್ದಳವು ಶತ್ರುಗಳ ವ್ಯೂಹವನ್ನು ಭೇದಿಸಿ ಮುಂದೆ ನುಗ್ಗಿದಾಗ ಟ್ಯಾಂಕ್‌ಗಳ ದಳಪತಿಗೆ ಶೌರ್ಯ ಸಾಹಸ ಪ್ರಕಟಿಸಲು ಸದವಕಾಶ ಲಭಿಸುತ್ತದೆ. ಇತರ ಸಂದರ್ಭಗಳಲ್ಲಿ ಅವರು ಆಕಸ್ಮಿಕವಾಗಿ ಭಾರೀ ಪ್ರಮಾಣದ ದಾಳಿ ಮಾಡಿ ಶತ್ರುಗಳ ಸಾಮರ್ಥ್ಯ ಉಡುಗುವಂತೆ ಮಾಡತ್ತಾರೆ. ಬಳಿಕ ಶತ್ರುಗಳನ್ನು ಸಮೂಲ ನಾಶ ಮಾಡಲು ಯತ್ನಿಸಲಾಗುತ್ತದೆ. ಇಂತಹ ಪ್ರಸಂಗದಲ್ಲೆಲ್ಲ ವಿಮಾನ ಬಲದ ಹೊಣೆಗಾರಿಕೆ ಹೆಚ್ಚು. ಏಕೆಂದರೆ ಅದು ಶತ್ರುವಿಮಾನಗಳು ಸಮೀಪಕ್ಕೆ ಬಾರದಂತೆ ನೋಡಿಕೊಳ್ಳಬೇಕಾಗಿರುತ್ತದೆ. ಅಂದರೆ ಮಾತ್ರ ಟ್ಯಾಂಕ್‌ಪಡೆ ಭಯರಹಿತವಾಗಿ ಕಾರ್ಯಮಗ್ನವಾಗಬಲ್ಲುದು. ಟ್ಯಾಂಕ್‌ದಳವನ್ನು ಇತರ ಕ್ಷೇತ್ರಗಳಲ್ಲಿ ಉಪಯೋಗಿಸಬಹುದಾಗಿದೆ. ಉದಾಹರಣೆಗೆ ಸೈನಿಕ ವೃಷ್ಟಿಯಿಂದ ಮಹತ್ವದ್ದೆಂದು ಕಂಡುಬಂದ ಪ್ರದೇಶದಿಂದ ಶತ್ರುದಳವನ್ನು ಹೊಡೆದೋಡಿಸಲು ಟ್ಯಾಂಕ್‌ಗಳ ಸಹಾಯ ಪಡೆಯಲಾಗುತ್ತದೆ.

ಟ್ಯಾಂಕ್‌ಗಳು ಈ ಮುಂಚೆ ರಾತ್ರಿಯ ಕಾಲದಲ್ಲಿ ಚಲಿಸುತ್ತಿರಲಿಲ್ಲ. ಈಗ ಈ ದೋಷ ನಿವಾರಣೆಗೊಂಡಿದೆ. ಇದರಿಂದಾಗಿ ಟ್ಯಾಂಕುಗಳು ರಾತ್ರಿ ಸಮಯದಲ್ಲೂ ಯಾವುದೇ ಆತಂಕವಿಲ್ಲದೇ ಚಲಿಸುತ್ತವೆ.

ಭಾರತೀಯ ಟ್ಯಾಂಕ್ ದಳ ಅಲ್ಪಾವಧಿಯಲ್ಲೇ ಬಹಳಷ್ಟನ್ನು ಸಾಧಿಸಿದೆ. 1947ರಲ್ಲಿ ಪಾಕಿಸ್ತಾನವು ಕಾಶ್ಮೀರದ ಮೇಲೆ ದಾಳಿ ಮಾಡಿದ ಸಂದರ್ಭ. ನಮ್ಮ ಟ್ಯಾಂಕ್ ಪಡೆಗಳು ಜೋಜಿಲಾದ ಎರಡೆ ಅಂದರೆ 11 ಸಾವಿರ ಅಡಿ ಎತ್ತರದ ವರೆಗೂ ಹೋಗಿ ಕಾಳಗ ನಡೆಸಿದವು. ಟ್ಯಾಂಕ್‌ಗಳು ಇದ್ದೊಂದು ಎತ್ತರಕ್ಕೆ ಏರಿ ಶಾಯೂಚರಣೆ ಹೂಡಿದುದು ಒಂದು ಐತಿಹಾಸಿಕ ಘಟನೆಯೇ ಸರಿ. ಭಾರತದ ಟ್ಯಾಂಕ್ ಪಡೆಯ ಈ ಸಾಹಸದಿಂದ ಶತ್ರುಗಳು ಆಶ್ಚರ್ಯಚಕಿತರಾದರು. ಅಷ್ಟೆಲ್ಲ ವಿಶ್ವದಲ್ಲಿನ ಮಿಲಿಟರಿ ವೃತ್ತಿಪರಾಗಳ ತಜ್ಞರಿಗೆ ಇದು ಆಶ್ಚರ್ಯವುಂಟು ಮಾಡಿತ್ತು. ಈ ಘಟನೆಯಿಂದ ವಿಶ್ವಕ್ಕೆ ಒಂದು ಸತ್ಯಾಂಶ ಮಾತ್ರ ಸ್ಪಷ್ಟವಾಯಿತು. ಬೆಟ್ಟ—ಗುಡ್ಡದಲ್ಲಿ ಮೇಲೂ ಟ್ಯಾಂಕಗಳು ಚಲಿಸಬಲ್ಲವು ಎಂಬುದೇ ಈ ಸತ್ಯಾಂಶವಾಗಿದೆ. 1962ರಲ್ಲಿ ಚೀನಾ ಭಾರತದ ಮೇಲೆ ದಾಳಿ ಮಾಡಿದಾಗ ನಮ್ಮ ಟ್ಯಾಂಕ್ ಪಡೆಯು ಕಾರ್ಯಕ್ಷಮತೆ ಮತ್ತೆ ಬೆಳಕಿಗೆ ಬಂದಿತು. ಆಗ ರಾತ್ರಿಯ ಸಮಯದಲ್ಲೇ ಟ್ಯಾಂಕುಗಳನ್ನು ವಿಮಾನ ಮೂಲಕ ಲಡಾಖಿಗೆ ಸಾಗಿಸಲಾಯಿತು. ಶತ್ರುಗಳು ಈ ಪ್ರದೇಶದಲ್ಲಿ ನಮ್ಮ ಕೆಲಸಗಳಿಗೆ ತಲೆಹೂರುವ ಮುನ್ನವೇ ನಮ್ಮ ಟ್ಯಾಂಕ್ ದಳವು ಅವರನ್ನು ಅಲ್ಲಿಂದ ಓಡಿಸ ತೊಡಗಿತು.

ಪುನಃ 1965ರಲ್ಲಿ ಪಾಕಿಸ್ತಾನ ನಮ್ಮ ಮೇಲೆ ದಾಳಿ ಮಾಡಿದಾಗ ದಾಳಿಯನ್ನು ಎದುರಿಸುವ ಹೊಣೆ ನಮ್ಮ ಟ್ಯಾಂಕ್ ಪಡೆಯ ಮೇಲೆಯೆ ಬಿದ್ದಿತು. ಶತ್ರು ಸೇನೆ ಅಧಿಕ ಹಾಗೂ ಅತ್ಯುತ್ತಮ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿದ್ದಿತು. ನಮ್ಮ ಟ್ಯಾಂಕ್ ಪಡೆಯು ಧೀರ ಯೋಧರೂ ಧೈರ್ಯಗುಂದದೆ ಶತ್ರುಗಳ ಮೇಲೆ ದಾಳಿ ಮಾಡಿ ಅವರನ್ನು ಮಣ್ಣು ಮುಕ್ಕಿಸಿದರು. ಶತ್ರುದಳ ಅನೇಕ ಪೇಟನ್ ಟ್ಯಾಂಕುಗಳ ಧ್ವಂಸಗೊಂಡವು.

ಭಾರತೀಯ ಟ್ಯಾಂಕ್‌ಗಳು ಹಾಗೂ ಫಿರಂಗಿದಳ ಹಾರಿಸಿದ ಗುಂಡುಗಳಿಂದ ಕಂಗೆಟ್ಟ ಶತ್ರುಗಳು ಕಂಬಿ ಕೀಳಲಾರಂಭಿಸಿದರು. ಈ ಕಾರ್ಯಾಚರಣೆಯ ಶ್ರೇಯಸ್ಸು ನಮ್ಮ ಟ್ಯಾಂಕ್ ಪಡೆಗೆ ಲಭಿಸುತ್ತದೆ. ಟ್ಯಾಂಕ್ ಪಡೆಗೆ "ವಿಜಯಂತ" ಎಂಬ ಹೆಸರಿನ ಹೊಸ ಟ್ಯಾಂಕ್ ದೊರೆತಿದೆ. ವಿಜಯಂತ ಟ್ಯಾಂಕ್ ನಮ್ಮ ದೇಶದಲ್ಲಿ ತಯಾರಾದ ಟ್ಯಾಂಕ್. ವಿಜಯಂತ ಟ್ಯಾಂಕ್‌ಗಳಿಂದ ಸಾಹಸ ಪ್ರದರ್ಶಿಸುವ ಅವಕಾಶ ಟ್ಯಾಂಕ್‌ಪಡೆಗೆ ಇನ್ನೂ ಸಿದ್ಧವಾಗಿಲ್ಲ.

ಭಾರತದಲ್ಲಿ ವಿಶಾಲವಾದ ಬಯಲು ಪ್ರದೇಶವಿದೆ. ಈ ಕಾರಣದಿಂದಾಗಿ ಟ್ಯಾಂಕ್‌ಗಳು ನಮ್ಮ ರಕ್ಷಣಾ ವ್ಯವಸ್ಥೆಯಲ್ಲಿ ಹೆಚ್ಚಿನ ಮಹತ್ವ ಪಡೆದಿವೆ. ಶತ್ರುದಳ ಪರಮಾಣು ಅಸ್ತ್ರಗಳಿಂದ ದಾಳಿ ಮಾಡಿದರೆ ಪ್ರದೇಶದ ರಕ್ಷಣೆಯ ಸಂಪೂರ್ಣ ಹೊಣೆಯಾರಿಕೆ ನಮ್ಮ ಟ್ಯಾಂಕ್ ಪಡೆಯದೇ ಆಗಿದೆ. ಈ ಕಾರಣದಿಂದಾಗಿ ನಾವು ನಮ್ಮ ಟ್ಯಾಂಕ್ ಪಡೆಯನ್ನು ಬಲಗೊಳಿಸುವುದು ಅತ್ಯಂತ ಅವಶ್ಯವಾಗಿದೆ. ಈ ದಿಶೆಯಲ್ಲಿ ನಾವು ಹೆಚ್ಚಿನ ವೆಚ್ಚದ ಹೊರೆಯನ್ನು ಹೊರಬೇಕಾಗಿ ಬಂದರೂ ಸಂತೋಷಪೂರ್ವಕವಾಗಿ ಅದನ್ನು ಭರಿಸಬೇಕು. ನಮ್ಮ ಟ್ಯಾಂಕ್ ನಮ್ಮ ಪುರುಷಾರ್ಥಕ್ಕೆ ತಕ್ಕಂತೆ ಅಜೇಯವಾದ ಅಭೇದ್ಯವಾದ ಒಂದು ಶಕ್ತಿಯಾಗಿ ರೂಪುಗೊಳ್ಳಲು ನಾವು ಈ ಬಗೆಯ ತ್ಯಾಗ ಮಾಡಬೇಕಾದೆ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಶುಭಂ ಪ್ರತಿಗಳಿಗೆ ವಿಶೇಷ ಸವಲತ್ತುಗಳುಂಟು

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಿನಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಸೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ತಾರ್ಕಿಕ ದರ್ಶನ

(ಐದನೇ ಸುಟದಿಂದ)

ಟಾಗುತ್ತದೆಯೆಂದು ನೈಯಾಯಿಕರು ಹೇಳುತ್ತಾರೆ. ಪ್ರತ್ಯಕ್ಷ, ಅನುಮಾನ ಇವೆರಡೇ ಪ್ರಮಾಣಗಳೆಂದು ವೈಶೇಷಿಕರ ಅಭಿಪ್ರಾಯ. ತಾರ್ಕಿಕರು ವೇದವನ್ನು ಪ್ರಮಾಣವೆಂದು ಅಂಗೀಕರಿಸುತ್ತಾರೆ. ಅದು ಶಬ್ದ ಪ್ರಮಾಣ. ವೇದದಿಂದ ಈಶ್ವರಸಿದ್ಧಾನೆಂಬುದು ಸಿದ್ಧವಾದರೂ ತಾರ್ಕಿಕರು ಅನುಮಾನವೆಂಬ ಯುಕ್ತಿಯಿಂದ ಈಶ್ವರನನ್ನು ಸಾಧಿಸುತ್ತಾರೆ. ಪ್ರತ್ಯಕ್ಷವಾದುದನ್ನು ಯುಕ್ತಿಯಿಂದ ವಿಮರ್ಶಿಸಿ ನಿರ್ಣಯಿಸಬೇಕೆಂಬುದು ಅವರ ದೃಢವಾದ ನಿಲುವು.

ಈಶ್ವರನು ಒಬ್ಬನೇ. ಅವನು ಪರಮಾತ್ಮ. ಅವನು ಸರ್ವಜ್ಞ; ವಿಭು. ಅವನ ಜ್ಞಾನ ನಿತ್ಯವಾದುದು. ಜೀವಾತ್ಮರು ಅಸಂಖ್ಯ. ಜೀವಾತ್ಮರ ಜ್ಞಾನ ಅನಿತ್ಯ. ಅವರೂ ವಿಭುಗಳು,

ಸಂಸಾರವು ಅನಾದಿಯಾದದ್ದು. ಇದರಲ್ಲಿ ಸುಖದ ಅಂಶವಿದ್ದರೂ ದುಃಖವೇ ಹೆಚ್ಚು. ಈ ದುಃಖಗಳೆಲ್ಲವನ್ನೂ ಹೀಗಿಸಿಕೊಳ್ಳುವುದು ಮನುಷ್ಯನ ಪರಮ ಧ್ಯೇಯ. ಅದೇ ಮೋಕ್ಷ. ದುಃಖಕ್ಕೆ ಕಾರಣವೇನು? ಜನ್ಮ. ಅದೇ ಶರೀರಗ್ರಹಣ. ಶರೀರವಿದ್ದ ಮೇಲೆ ದುಃಖವು ತಪ್ಪಿದ್ದಲ್ಲ. ಶರೀರವೇಕೆ ಬರುತ್ತದೆ? ಪುಣ್ಯಪಾಪಗಳ ಫಲವನ್ನು ಅನುಭವಿಸುವುದಕ್ಕಾಗಿ. ಪುಣ್ಯಪಾಪಗಳನ್ನಾಚರಿಸುವುದು ರಾಗದ್ವೇಷಗಳಿಂದ. ರಾಗದ್ವೇಷದಳಿಗೆ ಕಾರಣ ವಿಥ್ಯಾಜ್ಞಾನ. ವಿಥ್ಯಾಜ್ಞಾನವೆಂದರೆ ಆತ್ಮ-ಅನಾತ್ಮಗಳ ಅರಿವಿಲ್ಲದಿರುವುದು. ದೇಹವನ್ನೇ ಆತ್ಮವೆಂದು ತಿಳಿಯುವುದು, ದುಃಖದಲ್ಲಿ ಸುಖದ ಭ್ರಮೆ, ಅನಿತ್ಯವನ್ನು ನಿತ್ಯವೆಂದು ಭಾವಿಸುವುದು, ಹೇಯವಾದದ್ದನ್ನು ಗ್ರಾಹ್ಯವೆಂದೂ ಗ್ರಾಹ್ಯವನ್ನು ಹೇಯವೆಂದೂ ತಿಳಿಯುವುದು— ಹೀಗೆ ಅನೇಕ ವಿಧ.

ಆದ್ದರಿಂದ ದುಃಖಗಳಿಗೆ ಮಿಥ್ಯಾಜ್ಞಾನವೇ ಮೂಲ ಕಾರಣವೆಂದು ತಾರ್ಕಿಕ ದರ್ಶನದ ಸಿದ್ಧಾಂತ. ಮಿಥ್ಯಾಜ್ಞಾನವು ನಾಶವಾದರೆ ದುಃಖಗಳ ಅತ್ಯಂತಿಕ ನಾಶವಾಗಿ ಮೋಕ್ಷವೆಂಬ ಪುರುಷಾರ್ಥವು ಸಿದ್ಧಿಸುವುದು. ಈ ವಿಷಯವನ್ನು ತರ್ಕಬದ್ಧವಾಗಿ ಸೂತ್ರಕಾರರು ಹೀಗೆ ನಿರೂಪಿಸಿದ್ದಾರೆ: "ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನಾನಂ ಉತ್ತರೋತ್ತರಾಪಾಯೇ ತದನಂತರಾಪಾಯಾದಪವರ್ಗಃ."

ತಾರ್ಕಿಕದರ್ಶನದಲ್ಲಿ ಮೋಕ್ಷವು ಸುಖರೂಪವಲ್ಲ. ಅದು ದುಃಖಧ್ವಂಸ ರೂಪವೂ ಮೋಕ್ಷಾವಸ್ಥೆಯಲ್ಲಿದ ದುಃಖವೂ ಇಲ್ಲ, ಸುಖವೂ ಇಲ್ಲ. ಮುಕ್ತನಿಗೆ ಪುನರ್ಜನ್ಮವಿಲ್ಲವಾದ್ದರಿಂದ ದುಃಖವು ಅತ್ಯಂತಿಕವಾಗಿ ನಾಶಹೊಂದಿರುತ್ತದೆ.

ಮೋಕ್ಷಾವಸ್ಥೆಯಲ್ಲಿ ಸುಖವೇಕೆ ಇಲ್ಲವೆಂದರೆ, ಸುಖವಿದ್ದರೆ ದುಃಖವೂ ಇರಬೇಕಾಗುತ್ತದೆ ಎಂದು ತಾರ್ಕಿಕರ ವಾದ. ಸುಖವು ವಿಷಯಭೋಗದಿಂದ ಬರಬೇಕು. ಭೋಗಕ್ಕೆ ಮೊದಲು ಅದು ಇಲ್ಲವೆಂದೂ ಆ ಮೇಲೆ ಮುಗಿದುಹೋಯಿತೆಂದೂ ದುಃಖವು ಹಂಬಲಿಸುತ್ತದೆ. ಸುಖವು ದುಃಖಾನುಬಂಧಿ. ಆದ್ದರಿಂದ ಸುಖವನ್ನೂ ದುಃಖದಲ್ಲಿಯೆ? ತಾರ್ಕಿಕರು ಸೇರಿಸಿದ್ದಾರೆ. ದುಃಖಗಳು ಇಪ್ಪತ್ತೊಂದು, "ವಿಕಲವಿಂಶತಿದುಃಖಧ್ವಂಸೋ ಮೋಕ್ಷಃ". ಅವು ಯಾವುವೆಂದರೆ, ಸಂಶೇಂದ್ರಿಯಗಳು ಮತ್ತು ಮನಸ್ಸು ಎಂಬ ಒಟ್ಟು ಆರು ಇಂದ್ರಿಯಗಳು, ಇವುಗಳಿಗೆ ಗೋಚರಿಸುವ ಆರು ವಿಷಯಗಳು, ಇವುಗಳಿಂದಾಗುವ ಆರು ಬಗೆಯ ಬುದ್ಧಿಗಳು. ಶರೀರ, ಸುಖ ಮತ್ತು ದುಃಖ ಈ ದುಃಖದ ಧ್ವಂಸವೇ ಮೋಕ್ಷ.

ಮೋಕ್ಷಸ್ಥಿತಿಯಲ್ಲಿ ಆತ್ಮನೊಡನೆ ಮನಸ್ಸು ಎಂಬ ಬುದ್ಧಿಶಕ್ತಿಯವು ಮಾತ್ರ ಉಳಿದಿರುತ್ತದೆ. ಆದ್ದರಿಂದಲೂ ಅವೇ ಕಾತ್ಮವಾದಿಗಳಾದ್ದರಿಂದಲೂ ತಾರ್ಕಿಕರಷ್ಟು ದ್ವೈತಿಗಳೆಂದು ಕರೆಯುತ್ತಾರೆ.

ಮಿಥ್ಯಾಜ್ಞಾನದ ನಿವೃತ್ತಿಯು ಆತ್ಮಜ್ಞಾನದಿಂದ. ಆತ್ಮಜ್ಞಾನವು ಭಗವಂತನಲ್ಲಿ ಭಕ್ತಿಯಿಂದಲೂ, ಒಳ್ಳೆಯ ನಡತೆಯಿಂದಲೂ ಸಾಧ್ಯ. "ಆತ್ಮಾವಾ ಅರೇ ದ್ರಷ್ಟವ್ಯಃ. ಶ್ರೋತವ್ಯೋ ಮಂತ್ರವ್ಯೋ ನಿಧಿಧ್ಯಾಸಿತವ್ಯಃ' ಇತ್ಯಾದಿ ವೇದವಾಕ್ಯಗಳಿಂದ ಆತ್ಮಜ್ಞಾನಕ್ಕೆ ಮನನವು ಅವಶ್ಯಕ ಮನನವೆಂದರೆ ಯುಕ್ತಿಗಳಿಂದ ಚಿಂತಿಸಿ ದೃಢಗಡಿಸಿಕೊಳ್ಳುವುದು. ಇದು ಆತ್ಮ ಇದು ಅನಾತ್ಮ ಎಂಬ ದೃಢ ನಿರ್ಣಯ ಮನನದಿಂದ ಸಾಧ್ಯ. ಮನನದ ವಿಧಾನವನ್ನು ತಿಳಿಸುವುದು ತರ್ಕಶಾಸ್ತ್ರದ ಉದ್ದೇಶ.

ಈ ತಾರ್ಕಿಕ ದರ್ಶನದಲ್ಲಿ ಮತೀಯ ವಿಷಯಗಳ ತೊಡಕಿಲ್ಲ. ಮತಾಚಾರಗಳು ಧರ್ಮಶಾಸ್ತ್ರಕ್ಕೆ ಸಂಬಂಧಿಸಿದವು. ದರ್ಶನವು ವಿಚಾರ ಪ್ರಧಾನವಾದ ಶಾಸ್ತ್ರ.

(ಆಕಾಶವಾಣಿಯಿಂದ)

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 30-4-1966.

ಸತ್ತು ಕಾಂಬ ಸಗ್ಗ ಲೇಸೆನ್ನಬೇಕು

(ನಾಲ್ಕನೇ ಪುಟದಿಂದ)

ಮೊಸಲು, ತಮಿಳಲ್ಲ ಎಂದು ಸಾರಿ ಹೇಳುವ ಅಣ್ಣಾವಾದ....."

"ಅಣ್ಣಾ ಅಂದಾಗ ನೆನಪಾಯಿತು, ನೋಡಿ, ಮದ್ರಾಸ ರಾಜ್ಯದ ಎಸ್‌ಎಸ್‌ಎಲ್‌ಸಿ ತಮಿಳು ಸತ್ಯ ಪುಸ್ತಕದಲ್ಲಿ ಏನೇನೋ ರಾಷ್ಟ್ರೀಯ ಆಕ್ಷೇಪಣೆಯ ಪಾಠಗಳು—ಮೊತುಗಳಿವೆಯಂತೆ...."

"ಹ್ಞೂಂ....ಅಂತೆ. ತಮಿಳುನಾಡು ತಮಿಳು ಸಂಸ್ಕೃತಿ, ತಮಿಳು ಭಾಷೆ, ತಮಿಳರು 'ಭಾರತೀಯತೆ"ಗಿಂತ ದೂರಾದವರು ಎಂಬ ಅರ್ಥ ಬರುವಂತ ಪಾಠಗಳಿವೆಯಂತೆ...'

"ಇದರ ಮೇಲೆ ಏನು ಕ್ರಮ ಕೈಕೊಳ್ಳಬಾರದೆ?'

"ಅದೇ ಈಗ ಶಿಕ್ಷಣ ವಿಭಾಗ ರಾಜ್ಯ ಸರಕಾರದ ಕಕ್ಷೆಯಲ್ಲಿ ಬರುವುದು. ಕೇಂದ್ರ ಬರಿಯ ಸಲಹೆ ಮಾಡಬಹುದಷ್ಟೇ.... ಅದನ್ನು ಕೇಳುವಷ್ಟು ಸೌಜನ್ಯ ತೋರಿಸುವವರು ಯಾರು?'

'ಮತ್ತೆ ಅಣ್ಣಾ ಅಂದಿದ್ದರಲ್ಲಾ, ಪ್ರತ್ಯೇಕ ತಮಿಳುನಾಡಿನ ಕೂಗನ್ನು ತನ್ನ ಪಕ್ಷ ತ್ಯಜಿಸಿದೇಂತ...."

'ಸದ್ಯ ತ್ಯಜಿಸಿದೆ. ಕಾಲವನ್ನು ಹಣ್ಣು ಮಾಡಿ, ಮತ್ತೆ ಅದನ್ನು ಸ್ವೀಕರಿಸಬಾರದೆಂದೇನೂ ಇಲ್ಲವಲ್ಲ?"

"ಇದೊಳ್ಳೆ ಕಥೆಯೊಯ್ಯ...'

'ಆಗುವುದೆಲ್ಲಾ ಒಳ್ಳೆಯದಕ್ಕೇ...'

"ಏನು?"

"ಕೆನೆಡಾದ ಇಬ್ಬರು ಯುವಕರು ೨೦ ಸಾವಿರ ಡಾಲರ್ ವೆಚ್ಚದಲ್ಲಿ ಬೆಲೂನನ್ನು ತಯಾರಿಸಿ ಅದರ ಸಹಾಯದಿಂದ ೪೦೦೦ ಮೈಲು ಅಗಲವಾದ ಅತ್ಲಾಂತಿಕ ಸಾಗರವನ್ನು ದಾಟಲು ತೊಡಗಿದರು. ಆದರೆ, ಕರಾವಳಿಯಿಂದ ೪೫ ಮೈಲು ದೂರದಲ್ಲೇ ೨೦ ತಾಸು ಪ್ರಯಾಣದ ನಂತರ ಅವರ ಬೆಲೂನ್ ಅವರು ಕೂತಿದ್ದ ಎಲ್ಯೂಮಿನಿಯಂ ಬಟ್ಟಲನ್ನು ಬಿಟ್ಟು ಹಾಹಾರಿಹೋಯಿತು. ಇವರಿಬ್ಬರೂ ಸಮುದ್ರ ಪಾಲಾದರು..."

'ಅಯ್ಯೋ ಪಾಪವೇ...."

"ಸುದೈವದಿಂದ ಮೀನುಗಾರರ ದೋಣಿಯೊಂದು ಅವರ ರಕ್ಷಣೆಗೆ ನೆರವಾಯ್ತು.....'

"ಅಂದ್ರೆ ಅವ್ರು ಬದುಕುಳಿದರು...."

"ಹೌದ್ಲಾಂ...."

"ಅಲ್ರಿ, ಬೆಲೂನು ಬಟ್ಟಲದಿಂದ ಪ್ರತ್ಯೇಕಗೊಂಡುದಾದ್ರೂ ಹೇಗೆ?'

'ಗೊತ್ತಿಲ್ಲ.....'

"ಅಲ್ರಿ, ಎಲ್ಲಾದ್ರೂ ನಡು ಸಾಗರದಲ್ಲಿ ಬೀಳುತಿದ್ರೆ...."

"ಅವರ ಪ್ರಾಣ ಉಳ್ಳಗವಾಗುತಿತ್ತು; ಅವರ ಹೆಸರು ಇತಿಹಾಸದಲ್ಲಿ ಅಮರವಾಗುತಿತ್ತು...."

"ಇದೊಳ್ಳೇ ಅಮರತೆ. ಸತ್ತು ಕಾಂಬ ಸಗ್ಗಕ್ಕಿಂತ ಇದ್ದು ಕಾಂಬ ಪರಕವೇ ಲೇಸು ಅಂತೆ...."

"ಇದನ್ನು ನಂಬಿರೋವಷ್ಟು ಕಾಲ ನಾವು ಹೀಗೆಯೇ ಇರ್ತೇವೆ. ಜನತೆ ಸಾಹಸಪ್ರಿಯ ವಾಗಬೇಕು, ಧೈರ್ಯಶೀಲವಾಗಬೇಕು. ಹಾಗಿದ್ದರೆ ಮಾತ್ರ ದೇಶ ಉನ್ನತವಾಗುವುದು..."

'ಭಾರೀ ರಾಜಕೀಯ ಪುಢಾರಿಯಂತೆ ಮಾತು..."

'ಸ್ವಾತಂತ್ರ್ಯ ದಿನವನ್ನು ಆಚರಿಸಿದ್ವಲ್ಲಾ...'

"ಓ, ಹಾಗಾದ್ರೆ ಇನ್ನೊಂದು ವಾರ ಪೇಪರ್ರು ನೋಡೋದೇ ಬೇಡ..."

"ಯಾಕೆ?'

'ಸ್ವಾತಂತ್ರ್ಯ ಅನುಭವಿಸುವವರು ಗ್ರಾಮ ಪಂಚಾಯತುಗಳು ಶಾಲೆ ಕಾಲೇಜುಗಳ ಮಕ್ಕಳು ಅಂತ ಯಾರಿಗೆ ಗೊತ್ತಿಲ್ಲ—'

"ಹ್ಞೂಂ....ಏನೇ ಭಾರಿ ದುರುಗುಟ್ಟಿ?'

"ಏನಿಲ್ಲ ಬಿಡು..."

'ಗೊತ್ತಾಯ್ತು ಬಿಡು. ಇನ್ನೊಬ್ಬನ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಸ್ವಾತಂತ್ರ್ಯ ಮಾತ್ರ ಯಾರಿಗೂ ಇಲ್ಲಾಂತ ನೆನಪಿರ್ಲಿ..."

"ಅದೇ ಈಗ ಮತ್ತು ಹೋಗ್ತಿರೋದು 'ನೆಪ್ಪಿಟ್ಟುಕೊಳ್ಳು...."

'ಹ್ಞೂಂ..."

'....ತಿಳೀತು ಬಿಡು...."

"ಅಷ್ಟಾದ್ರೆ ಸಾರ್ಥಕ."

—ಗೋರಾ

ವನಮಹೋತ್ಸವ

ಕಡಿಯಾಳಿ :- ಕಡಿಯಾಳಿ ಹಾ. ಎ. ಶಾಲೆಯಲ್ಲಿ ವನಮಹೋತ್ಸವ ಸಮಾರಂಭವು ಜುಲೈ 27 ರಂದು ಯು. ಕಡಲಾ ಬ್ಯಾ ಹೈಸ್ಕೂಲಿನ ಸಹಾಯಕ ಅಧ್ಯಾಪಕರಾದ ಪಿ. ಮುರಲೀಧರ ಆಚಾರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯೊಡನೆ ತರುವಾಯ ಮುಖ್ಯೋಪಾಧ್ಯಾಯರು ಸ್ವಾಗತಿಸಿದರು. ವಿವಿಧ ಮಕ್ಕಳು ಕನ್ನಡ ಹಾಡುಗಳನ್ನು ಸಂಶ್ರದ್ಧವಾಗಿ ಹಾಡಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ವನಮಹೋತ್ಸವದ ಕುರಿತು ಭಾಷಣವನ್ನಿತ್ತರು. ಅಧ್ಯಕ್ಷರು ವನಮಹೋತ್ಸವದ ಮಹತ್ವವನ್ನು ವಿವರಿಸಿದ ಬಳಿಕ ಮುಖ್ಯೋಪಾಧ್ಯಾಯರು ಧನ್ಯವಾದ ಸಮರ್ಪಿಸಿದರು.

ಶಾಲಾ ಮುಖಂಡನ ಚುನಾವಣೆ

ಕಡಿಯಾಳಿ ಹಾ. ಎ. ಶಾಲೆಯ 1968—69ರ ವಾರ್ಷಿಕ ಚುನಾವಣೆ ನಡೆದು ಎಸ್. ನಾಗರಾಜ ಉಪಾಧ್ಯಕ್ಷನು ಶಾಲಾ ಮುಖಂಡನಾಗಿಯೂ ಕುಮಾರಿ ಬಿ. ಚಂದ್ರಕಲಾ ಧಕ್ಷಳು ಉಪಮುಖಂಡಳಾಗಿಯೂ ಆರಿಸಲ್ಪಟ್ಟರು. ಮಕ್ಕಳ ಕೂಟದ ಕಾರ್ಯದರ್ಶಿಯಾಗಿ ಕೆ. ರಘು ಸೆಟ್ಟಿಯೂ ಉಪಕಾರ್ಯದರ್ಶಿಯಾಗಿ ಕೆ. ಜಯಂತಿ ಬ್ಯಾ ಇವರೂ ಆರಿಸಲ್ಪಟ್ಟರು.

In the Court of the Munsiff, Coondapur.

O. S. 128/68

Plf: Appu Rao alias Laxminarayan Kedilaya.

Deft: H. V. Subba Rao.

To

H. V. Subba Rao,
S/o Venkat Rao,
Retired Junior Engineer,
72/7, 7th Cross, 3rd Main,
Prakash Nagar,
Bangalore—21.

(Defendant in the above suit)

Please take notice that the suit by the above-named against you for the plaint reliefs is posted for your appearance and written statement to 16—9—68. If you fail to appear either in person or by your advocate duly instructed before the said Court on that day, the suit will be heard in your absence and proceeded with.

(By order of the said Court)

(Sd.) A. N. Rao,
Advocate for the Plf.

Coondapur, 14-8-68.

"ಎಂಥ ಕಾಲದಲ್ಲೂ ನಾಲ್ಕನೇ ಪ್ರಸವ ಕೂಡದೆಂದು ಬಲ್ಲವರ ಅಭಿಮತ" ಎಂದಳು ಕುಂತಿ.

(ಮಹಾಭಾರತ, ಸಂಭವ ಪರ್ವ)

ಮೂರನೇ ಮಗು ಅರ್ಜುನ ಜನಿಸಿದ ಮೇಲೆ ಇನ್ನಷ್ಟು ಮಕ್ಕಳನ್ನು ಪಡೆಯಬೇಕೆಂಬ ಆಸೆಯನ್ನು ಪಾಂಡು ಚಕ್ರವರ್ತಿಯು ಕುಂತಿಗೆ ತಿಳಿಸಿದಾಗ ಆಕೆ ಇದು ಬಲ್ಲವರಿಗೆ ಸಲ್ಲದ ವಿಚಾರ ಎಂದಳು. ಆ ಕಾಲ ಬೇರೆ, ಈ ಕಾಲ ಬೇರೆ. ಆದರೆ ಕುಂತಿಯ ಮಾತು ಎಲ್ಲಾ ಕಾಲಕ್ಕೂ ಅನ್ವಯಿಸುವ ಮಾತು. ಅಷ್ಟೇ ಏಕೆ, ಆಕೆಯ ಮಾತಿಗೆ ಇಂದು ವಿಶೇಷ ಅರ್ಥವೂ ಇದೆ. ಇಂದು ನಾಲ್ಕನೇ ಮಗು ಆಗಕೂಡದು ಎಂದು ಬಲ್ಲವರು ಹೇಳುವುದು ಯಾಕೆಂದು ಗೊತ್ತಲ್ಲ? ಸಣ್ಣ ಕುಟುಂಬದಲ್ಲಿ ಎಲ್ಲಾ ಮಕ್ಕಳಿಗೂ ಸಾಕಷ್ಟು ಆರೈಕೆ ಆಹಾರ, ಶಿಕ್ಷಣ ಮತ್ತು ಇತರ ಸೌಕರ್ಯಗಳು ದೊರೆಯಲು ಸಾಧ್ಯ. ಹೆಚ್ಚು ಮಕ್ಕಳನ್ನು ಪಡೆಯುವುದು ತಾಯಿಯ ಆರೋಗ್ಯಕ್ಕೂ ಅಪಾಯ.

ಮುಂದೆ ಮಕ್ಕಳಾಗುವುದೇ ಬೇಡವೆಂದು ಮನಸಿದ್ದರೆ ಅದಕ್ಕೆ ಮಾರ್ಗವಿದೆ. ಅಥವಾ ನಮಗೆ ಬೇಕಾದಾಗ ಮಾತ್ರ ಮಕ್ಕಳಾಗಬೇಕೆಂದಿದ್ದರೆ ಅದೂ ಸಾಧ್ಯ. ಸಮೀಪದಲಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಹೋಗಿರಿ. ಅಲ್ಲಿ ನಿಮಗೆ ಉಚಿತ ಸೇವೆ ಕೊಡಲಾಗುತ್ತದೆ.

ಸಣ್ಣ ಸಂಸಾರ ಸುಖದ ಸಂಸಾರ

ಚಾರಿಂಚೆಯೆನೆ

ಹಿಂದುಳಿವಿಕೆಯುಳ್ಳೊಂದು ಮೈಲಿಗಲ್ಲು

ಕರ್ನಾಟಕ ರಾಜ್ಯ ಬೇಕಾದುದರಲ್ಲಿ ಹಿಂದುಳಿದ ರಾಜ್ಯವಾದರೂ ಬೇಡವಾದುದರಲ್ಲಿ ಬಹಳ ಮುಂದುವರಿದ ರಾಜ್ಯ. ಶಾಸನ ಸಭೆಗಳ ವಿರೋಧಿ ಪಕ್ಷದ ನಾಯಕರಿಗೆ ದೇಶದ ಕೆಲವು ರಾಜ್ಯಗಳಲ್ಲಿ ವಿಶೇಷ ಸೌಲಭ್ಯಗಳು ದೊರೆಯುತ್ತಿದೆ. ನಮ್ಮ ರಾಜ್ಯ ಮಾತ್ರ ತಡವಾದರೂ ಆವರಿಗೆ ಉಚಿತ ಮನೆ ಅಥವಾ ಮನೆ ಬಾಡಿಗೆ ಭತ್ತೆ (ರೂ. ೩೫೦), ನೌಕರ ಭತ್ತೆ (ರೂ. ೩೫೦) ಟೆಲಿಫೋನ್ ಸೌಕರ್ಯ (ಟ್ರಂಕ್‌ಕಾಲ್ ಬಿಟ್ಟು) ಕೊಡಮಾಡಿದೆ. ವಿರೋಧೀ ಪಕ್ಷದ ನಾಯಕರು ರೂ. ೩೫೦ ಬಾಡಿಗೆಯ ಮನೆಯಲ್ಲಿ ಉಳಕೊಳ್ಳಬಹುದು. ಆದರೆ, ತಮ್ಮ ನೌಕರ ಜವಾನ ರೂ. ೧೦ ಬಾಡಿಗೆಯ ಮನೆಯಲ್ಲೂ ಉಳಕೊಳ್ಳಲು ಭತ್ತೆ ಸರಕಾರ ನೀಡುವುದಿಲ್ಲ — ಈ ಸಂಗತಿ ಬೇರೆ.

ಇವರ ಜತೆಗೆ ಕುಟುಂಬ ಯೋಜನೆಯ ಬಗ್ಗೆ ನಮ್ಮ ರಾಜ್ಯಕ್ಕೆ ಎಚ್ಚಿಲ್ಲದ ಮೋಹ. ಸಚಿವ ಸಂಪುಟದ ಗಾತ್ರವನ್ನು ಮಿತಗೊಳಿಸದವರು ಕುಟುಂಬದ ಗಾತ್ರವನ್ನು ಮಿತಗೊಳಿಸಲು ಹೆಲ್ಪು ಬರೆಯಾಅತೆ—ಅಮಿಷಗಳನ್ನು ಕೊಡುತ್ತಿದ್ದಾರೆ. ನಗಣಿ ಹಣಕ್ಕೆ ಮರುಳಾಗದವರಿಗೆ ಟ್ರಾಫಿಸ್ಟರೂ ದೊರೆಯುತ್ತಂತೆ. ಈಗ್ಗೆ ನಮ್ಮ ಸರಕಾರವೊಂದು ಅಜ್ಞೆ ಹೊರಡಿಸಿ ಮುಂದಿನ ವರ್ಷದಿಂದ ಮೂರಕ್ಕಿಂತ ಹೆಚ್ಚು ಮಕ್ಕಳಿರುವ ಹೆತ್ತವರ ಮಕ್ಕಳಿಗೆ ಶಿಕ್ಷಣ ರಿಯಾಯಿತಿಯನ್ನು ಹಿಂದೆಗೆದು ಕೊಂಡಿದೆ. (ಸ್ತ್ರೀ ನೌಕರರಿಗೆ ಮೂರು ಬಾರಿ ಮಾತ್ರ ಹೆರಿಗೆ ರಜೆಯನ್ನು ನೀಡುವ ಅಜ್ಞೆ ಬೊದಲೇ ಹೊಟಿಕ್ಕಿತ್ತು.)

ಸಂತಾನ ನಿಯಂತ್ರಣ ರಾಷ್ಟ್ರೀಯ ಪ್ರಶ್ನೆಯಲ್ಲ; ಅಂತರಾಷ್ಟ್ರೀಯ ಸವಾಲು ಅದನ್ನು ಜನಪ್ರಿಯಗೊಳಿಸಬೇಕಲ್ಲದೆ ಒತ್ತಾಯದಿಂದ ಹೇರುವುದರಿಂದ ಆಸ್ಪತ್ರೆಕ ವ್ಯವಹಾರದಲ್ಲಿ ಹೆಚ್ಚತ್ತವೆ ಮತ್ತು ಆರೋಗ್ಯಕ್ಕೂ ಹಾನಿ. ಸಂತಾನ ಹರಣ ಶಸ್ತ್ರ ಚಿಕಿತ್ಸೆಗಳೂ ನೂರಕ್ಕೆ ನೂರ ಸಫಲವಾಗದಿರುವಾಗ ದಂಡನೆಯ ಅಜ್ಞೆ ಹುಚ್ಚುತನ. ಪೋಪ್ ಪಾಲರೂ ಸಂತಾನ ನಿರೋಧದ ಕೃತಕೋಪಾಯಗಳನ್ನು ಒಪ್ಪಲಿಲ್ಲ.

ಉಚಿತ ಕಡ್ಡಾಯ ಶಿಕ್ಷಣವು ಸಂವಿಧಾನದ ಕೊಡ ಗೆ. ಇದನ್ನು ಯಾವ ಸರಕಾರವೂ ಹಿಂದೆಗೆದುಕೊಳ್ಳುವುದು ಅನ್ಯಾಯ. ಆದರೆ, ಪ್ರೌಢ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೊರೆಯುವ ಉಚಿತ ಶಿಕ್ಷಣಕ್ಕೂ ಇನ್ನಿತರ ರಿಯಾಯಿತಿಗಳಿಗೂ ಈ ಅಜ್ಞೆ ಅನ್ವಯಿಸುವುದೆಂದು ತೋರುತ್ತದೆ. ಈ ಅಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಹತ್ತು ಮಕ್ಕಳಲ್ಲಿ ಹೆತ್ತ ಬಡತಾಯಿ ಮಕ್ಕಳು ರಿಯಾಯಿತಿಗೆ ಹೊರತಾಗುತ್ತಾರೆ. ಹರಿಜನ—ಗಿರಿಜನ—ಹಿಂದುಳಿದ ವರ್ಗಗಳು ಶೈಕ್ಷಣಿಕವಾಗಿ ತಮ್ಮೂಲಕ ಸಾಮಾಜಿಕವಾಗಿ, ಮತ್ತೆ ತಮ್ಮ ಸಮಧವನ್ನು ಹಿಂದುವರಿಸುತ್ತವೆ.

ನಮ್ಮ ರಾಜ್ಯ ಸರ್ವ ಪ್ರಕಾರದಲ್ಲಿಯೂ 'ಹಿಂದುಳಿದ ರಾಜ್ಯ'ವೆಂದು ಅಗನಾವು ಹೆಮ್ಮೆಪಟ್ಟುಕೊಳ್ಳಬಹುದ ; ಕೇಂದ್ರದೊಡನೆ ಹೊಡೆದಾಡಿ ಅಧಿಕ ಸಹಾಯ ಗಿಟ್ಟಬಹುದೋ ಏನೋ!

o o o

ಕೇಂದ್ರ ಸರಕಾರವು ಕೇರಳ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂಬ ದೂರು ಹಳೆಯದು. ಮೊನ್ನೆ ಮೊನ್ನೆ ಲೋಕ ಸಭೆಯಲ್ಲಿ ಒಂದು ವಾಗ್ಯುದ್ಧ ನಡೆಯಿತು. ರಾಜ್ಯದ ಯೋಜನೆಗಳಿಗೆ ಕೇಂದ್ರ ನೆರವು ಕೊಡುವಾಗ ನ್ಯಾಯದಾನ ಮಾಡುತ್ತಿಲ್ಲ. ಕಾಂಗ್ರೆಸ್ಸೇತರ ಸರಕಾರವನ್ನು ಅಪಕ್ಷಪೆಗೆ ಗುರಿ ಮಾಡುವುದೇ ಕೇಂದ್ರದ ಉದ್ದೇಶ—ಇದು ಕೆಂಪು ಎಂ ಪಿ ನಯಕಾರರ ಬಾಣ.

ರಾಜ್ಯಗಳಲ್ಲಿರುವ ಅಳಮೊನತೆಯನ್ನು ನಿವಾರಿಸಲು ಕೇಂದ್ರವು ನೆರವನ್ನು ನೀಡುತ್ತದೆ. ಕೇರಳ ರಾಜ್ಯಕ್ಕೆ ನೀಡಲಾಗಿರುವ ಕೇಂದ್ರ ಸಹಾಯವು ತಲಾ ರೂ. ೧೬. ಇದು ಉಳಿದೆಲ್ಲ ರಾಜ್ಯಗಳಿಗಿಂತ ಹೆಚ್ಚು — ಸಚಿವ ಭಗತರ ತಿರುಗುಬಾಣ.

ಉಳಿದ ರಾಜ್ಯಗಳಿಗಿಂತ ಹೆಚ್ಚು ಸಹಾಯ ತಾವು ಪಡೆಯುತ್ತಿರುವುದು ಅನಾಮ್ಯವಾದವರಾದುದರಿಂದಲೇ ಭಯನಾರರು ಕ್ಯಾಯಾನ್ಯಾಯದ ಕಳಕ್ಕೆಳಿದರೆ?

—ಗೋ.

ಎಲ್ಲೆಲ್ಲಿ ಏನೇನು?

ಮಕ್ಕಳ ಪಾರ್ಲಿಮೆಂಟ್ ಉದ್ಘಾಟನೆ

ಉಡ್ಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳ ಪಾರ್ಲಿಮೆಂಟಿನ ಉದ್ಘಾಟನಾ ಸಮಾರಂಭವು ಉಡ್ಪಿ ಸಬ್ ಡಿವಿಜನ್ಸ್‌ನ ಸಹಾಯಕ ನಿದ್ಯಾಧಿಕಾರಿ ಶ್ರೀ ಶ್ಯಾಮ್‌ಭಟ್ಟರವರಿಂದ, ಶುಕ್ರವಾರ ಕರಿಯ ಶಾಲಾ ಪರಿಸ್ಥಿತಿಕಾರಿ, ಶ್ರೀ ಸುಶೀಲೇಂದ್ರ ಆಚಾರ್ಯರಧ್ಯಕ್ಷತೆಯಲ್ಲಿ ತಾರೀಖು 9.8.68 ರಂದು ಜರಗಿತು.

ಶಾಲಾ ಸಮಾಜದ ಖಾಯಂ ಅಧ್ಯಕ್ಷರೂ, ಶಾಲಾ ಮುಖ್ಯೋಪಾಧ್ಯಾಯರೂ ಆದ ಶ್ರೀ ಎಚ್. ಎಲ್. ಭಟ್ಟರು ಮಂತ್ರಿಗಳ ಪರಿಚಯ ಮಾಡಿ ಸ್ವಾಗತ ಭಾಷಣ ಮಾಡಿದರು. ವಿದ್ಯಾಧಿಕಾರಿಗಳಿಂದ ಉದ್ಘಾಟನಾಭಾಷಣವಾದಬಳಿಕ ಪ್ರಶ್ನೋತ್ತರ ವಿಭಾಗದಲ್ಲಿ ಸದಸ್ಯರ ಪ್ರಶ್ನೆಗಳಿಗೆ ಮಂತ್ರಿಗಳಿಂದ ಯೋಗ್ಯ ಉತ್ತರ ಕೊಡಲ್ಪಟ್ಟಿತು. ಸದಸ್ಯರೊಬ್ಬರು ಶಾಲಾ ಅಧ್ಯಾಪಕರಾಗಿದ್ದ ಶ್ರೀ ರಾಜಶೇಖರ ಶೆಟ್ಟರು ನಿವೃತ್ತರಾದುದರಿಂದ ಅವರ ಭಾವಚಿತ್ರವನ್ನು ಶಾಲಾ ಸಭಾಂಗಣದಲ್ಲಿಡಬೇಕೆಂಬ ತಿಲುವಳಿಕೆ ಸೂಚನೆಯು ವಿಫುಲವಾಗಿ ಚರ್ಚಿಸಲ್ಪಟ್ಟು ಮಕ್ಕಳ ಹಾಳಾಗಿ ಸ್ವೀಕರಿಸಲ್ಪಟ್ಟಿತು.

ಅತಿಥಿಗಳಿಂದ ಮತ್ತು ಅಧ್ಯಕ್ಷರಿಂದ ಸಲಹೆ ಸೂಚನೆಗಳ ಬಳಿಕ ಮೌನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಹಳೆ ವಿದ್ಯಾರ್ಥಿ ಸಂಘದ ಮಹಾಸಭೆ

ಉಡ್ಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ಮಹಾಧಿವೇಶನವು ಸಂಘದ ಅಧ್ಯಕ್ಷರಾದ ಡಾ| ಕೆ. ಮೋಹನದಾಸ ಸ್ಯ, ಇವರ ಘನ ಅಧ್ಯಕ್ಷತೆಯಲ್ಲಿ ತಾರೀಖು 11.8.68ರಂದು ನಡೆಯಿತು.

ಉಪಾಧ್ಯಕ್ಷ ಶ್ರೀ ಎನ್. ಶ್ರೀಶ ಬಲ್ಲಾಳ್ ಇವರಿಂದ ಸ್ವಾಗತ ಭಾಷಣವಾಯಿತು. ಕಾರ್ಯದರ್ಶಿ ಶ್ರೀ ಕೆ.ವಿ. ಪೈಗಳಿಂದ ಗತವರ್ಷದ ವರದಿ, ಆಯವ್ಯಯ ಪಟ್ಟಿ ಓದಲ್ಪಟ್ಟು, ಮಂಜೂರಾಯಿತು. ಹೊಸವರ್ಷಕ್ಕೆ ಹಿಂದಿನ ಅಧಿಕಾರೀ ವರ್ಗವೇ ಪುನಃ ಆರಿಸಲ್ಪಟ್ಟು ಅಧ್ಯಕ್ಷರ ಭಾಷಣ, ಲಘೂಪಹಾರದೊಂದಿಗೆ ಸಭಾಂತ್ಯವಾಯಿತು.

ಸ್ವಾತಂತ್ರ್ಯ ದಿನಾಚರಣೆ

ತಾ. 15.8.1968ರಂದು ಮಣಿಪುರ ಪಂಚಾಯತಿ ವತಿಯಿಂದ ಪಂಚಾಯತಿ ಆಫೀಸಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಅಚರಿಸಲಾಯ್ತು. ಬೆಳಗ್ಗೆ ಪಂಚಾಯತಿ ಸಭಾಪತಿ ಶ್ರೀ N. V. ಪದ್ಮನಾಭ ಆಚಾರ್ಯರು ರಾಷ್ಟ್ರಧ್ವಜವನ್ನು ಆರೋಹಿಸಿದರು. ಗ್ರಾಮಸೇವಕ ಶ್ರೀ K R. ಸೋಮನ ಗೌಡರು ಮತ್ತು ಪಂಚಾಯತಿಯ ಕಾರ್ಯದರ್ಶಿ G A. ಬೆಳ್ಳಿಯವರು ಭಾಷಣಮಾಡಿದರು. ಸಭಾಪತಿಗಳು ಸ್ವಾತಂತ್ರ್ಯ ದಿನವು ನಮ್ಮ ರಾಷ್ಟ್ರೀಯ ಹಬ್ಬವೆಂದು ಹೇಳುತ್ತಾ ನನಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಮಹಾತ್ಮರನ್ನು ಸ್ಮರಿಸಿದರು. ಅಪರಾಹ್ನ ಮಣಿಪುರದ ಮಿತ್ರ ಮಂಡಳಿಯವರಿಂದ "ದ್ರೌಪದಿ ಪ್ರಕಾಶ" ಎಂಬ ಕಥಾಭಾಗದ ಯಕ್ಷಗಾನ ಪ್ರದರ್ಶನ ಜರಗಿತು.

ಸ್ವಾತಂತ್ರ್ಯೋತ್ಸವ

ಉಡುಪಿ ನಗರ ಸಭೆಯ ವತಿಯಿಂದ 21ನೇ ಸ್ವಾತಂತ್ರ್ಯೋತ್ಸವವು ವಿವಿಧ ಕಾರ್ಯಕ್ರಮಗಳಿಂದ ವಿಂಗ್ರಭಾಣಿಯಿಂದ ಜರಗಿತು. ಬೆಳಗ್ಗೆ ವಿದ್ಯಾರ್ಥಿಗಳು ಪ್ರಭಾತ ಫೇರಿ ನಡೆಸಿ ಮೆರವಣಿಗೆಯಿಂದ ಅಜ್ಜರಕಾಡು ಗಾಂಧಿ ಮೈದಾನಕ್ಕೆ ಬಂದ ಬಳಿಕ ನಗರ ಸಭಾಪತಿ ಶ್ರೀ ಕೆ. ಎಂ. ಮಧ್ವಸ್ಥರು ರಾಷ್ಟ್ರಧ್ವಜಾರೋಹಣಮಾಡಿದರು. ಬಳಿಕ ಮಕ್ಕಳಿಗೆ ಕಾರ್ಯಾಯ ಮುರದ ಕೆಡೆಯಿಂದ ಸಿಹಿತಿಂಡಿ ಹಂಚಲಾಯ್ತು.

ಸಾಂಜೆ ಬೋರ್ಡರ್ ಹೈಸ್ಕೂಲಿನ ಜನತಾ ಭವನದಲ್ಲಿ ಪ್ರಿನ್ಸಿಪಾಲ್ ಯಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ ಎ.ಜೆ. ಅಲ್ಲಿ, ಎಸ್. ಅನಂತಕೃಷ್ಣ ಆಚಾರ್ ಇವರೂ ಅಧ್ಯಕ್ಷರೂ ಸಂದರ್ಭೋಚಿತವಾಗಿ ಭಾಷಣ ಮಾಡಿದರು. ಶ್ರೀ ಕೆ. ಎಂ. ಮಧ್ವಸ್ಥರ ಆರಂಭದಲ್ಲಿ ಸ್ವಾಗತಿಸಿ ಅಂತ್ಯದಲ್ಲಿ ಧನ್ಯವಾದ ಸಮರ್ಪಿಸಿದರು.

ಕಾಲೇಜ್ ಯೂನಿಯನ್ ಉದ್ಘಾಟನೆ

ಉಡ್ಪಿ, ಅ. 14, ಶ್ರೀ ಪೂರ್ಣಪ್ರಜ್ಞ ಕಾಲೇಜ್ ಯೂನಿಯನ್ನಿನ ಉದ್ಘಾಟನಾ ಸಮಾರಂಭವು ಎಂ ಜಿ ಎಂ. ಕಾಲೇಜ್ ಪ್ರಿನ್ಸಿಪಾಲ್ ಕಾ. ಶಿ. ಹರದಾಸ ಭಟ್ಟರಿಂದ ನೆರವೇರಿಸಲ್ಪಟ್ಟಿತು.

ಶ್ರೀ ಕೃಷ್ಣ ಉಚಿತ ಚಿಕಿತ್ಸಾಲಯ

ಉಡುಪಿ ಮತ್ತು ಸುತ್ತಮುತ್ತಲ ಬಡ ಕುಟುಂಬದವರ ಸೌಲಭ್ಯಕ್ಕಾಗಿ ಪರ್ಯಾಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರ ಸಾಂಜನ್ಯದಿಂದ ರಥಬೀದಿಯಲ್ಲಿರುವ ಶ್ರೀ ಭೀಮಸೇನಟ್ಟಿ ಮಠದ ಕಟ್ಟಡದಲ್ಲಿ ಶ್ರೀ ಕೃಷ್ಣ ಉಚಿತಚಿಕಿತ್ಸಾಲಯವು ತಾ. 18ರಂದು ಆರಂಭಿಸಲ್ಪಟ್ಟಿರುವುದು.

ಕೋಲೇಜ್ ಮತ್ತು ಯೂನಿಯನ್ ದಿನಾಚರಣೆ

ಉಡುಪಿ ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನ ಎರಡನೇ ವಾರ್ಷಿಕ ಮತ್ತು ಯೂನಿಯನ್ ದಿನಾಚರಣೆಯು ತಾ. 17.8.68 ರಂದು ಸಂಸ್ಕೃತ ಕಾಲೇಜಿನ ಸಭಾ ಭವನದಲ್ಲಿ ಎಲ್. ಐ. ಸಿ. ಯ ಆ| ವಿಭಾಗದ ಮೆನೇಜರ್ ಶ್ರೀ ಜಿ. ವೆಂಕಟ ಸುಬ್ಬಯ್ಯನವರು ಮುಖ್ಯ ಅತಿಥಿಗಳಾಗಿ, ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಸಿಜ್ಜಂ ಭಾಷಣದೊಂದಿಗೆ ವಿವಿಧ ಕಾರ್ಯಕ್ರಮಗಳಿಂದ ನೆರವೇರಿಸಲ್ಪಟ್ಟಿತು.

ದುಡಿಮೆ!

ಪೈಸೆ ಮುರಿದು ದುಡಿವವನು
ಸೋಮಾರಿಯೂಗಿರುವೆಕೆ ನೀನು?
ಸ್ವಾವಲಂಬನೆಗಳ ತಿಳಿಯು
ನಿನಗಾಗಿ ನಿನ್ನವರಿಗಾಗಿ ಬೆಳೆಯು!
ಕಂಗೆಡುತಿದೆ ದೇಶ
ಅನ್ನಾಭಾವದಿಂದ!
ಕೈನು ದೇಶಕ್ಕಾಗಿ ದುಡಿಯು
ದೇಶ ಸೇವೆ ನಡೆಸು
ದಿನವಿಡೀ ದುಡಿಯು!
ಅತಿಯೂಗಿ ಬಳಿಸು
ದುಡಿತದ ಫಲವನನುಭವಿಸು!

—ಯೆನ್. ಡಿ. ಶೆಟ್ಟಿ.

ಕಾರ್ಕಳ ಮುನ್ಸಿಫ್ ಕೋರ್ಟ್‌ನಲ್ಲಿ

O. S. 99/1968

S. ವರದರಾಯ ಪ್ರಭು —ವಾದಿ.

ಕೂಕ್ರಾಚಾರಿ ಸಾಯ —ಪ್ರತಿವಾದಿರು.

1ನೇ ಪ್ರತಿವಾದಿ ಕೂಕ್ರಾಚಾರಿ S/o. ಸೀತು ಹೆಂಗ್ಸು, ಕಾರ್ಕಳ ತಾಲ್ಲೂ ಮುಡಾರು ಗ್ರಾಮದ ಅಂಬಿದಿಂಡಿ ಎಂಬಲ್ಲಿರುವವರಿಗೆ.. ತಿಳಿಸುವದೇನೆಂದರೆ—

ಮೇಲ್ಕಾಣ್ಸಿದ ವ್ಯವಹಾರಣೆಯಲ್ಲಿ ದಾವಾ ಪ್ಲೈಂಟಿನಲ್ಲಿ ತಿಳಿದ ನಿಮ್ಮ ಪ್ರಕ್ರಿಗಳ ಬಗ್ಗೆ ನಿಮ್ಮ ಮೇಲೆ ಮೇಲ್ಕಾಣ್ಸಿದ ದಾವೆಯನ್ನು ವಾದಿರು ದಾಖಲು ಮಾಡಿರುತ್ತಾರೆ. ಸದ್ರೀ ದಾವೆಯನ್ನು ತಾ. 19.9.1968ರಲ್ಲು ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತಾರೆ. ಸದ್ರೀ ದಿನ ಬೆಳಗ್ಗೆ 10 ಘಂಟೆಗ ಸದ್ರೀ ಕೋರ್ಟಿನ ಮುಂದೆ ನೀವು ಖುದ್ದಾಗಿಯೂ ಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪದಲ್ಲಿ ನಿಮ್ಮನ್ನು ಸಿವ್ವಿಯೂಡಿ ಕೋರ್ಟಿಗೆ ಯುಕ್ತಕಂಡ ತೀರ್ಮಾನ ಕೈಕೊಳ್ಳಲಾದೀತು.

(By order)

M. J. ಪಡಿವಾಳ್,

ವಾದಿಗಳ ಎಡ್ವೋಕೇಟ್.

ಕಾರ್ಕಳ ತಾ. 10.8.1968.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 2

ಇಲ್ಲಿಗೆ ಸಂದರ್ಶನ ಕೊಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ. ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office, 9, Mission Road

Bangalore—2

ಡಾಕ್ಟರ್ ತಿಳಿಯದೆ ಖಾಯಿಲೆ

(ಎರಡನೇ ಕುಟದಿಂದ)

"ಇಲ್ಲ"—ಉತ್ತರ.

ಹಾಗಾಗ ಬಾರದಿತ್ತೆಂದೇ ರಾಜಣ್ಣನ ಭಾವನೆಯೊಗಿತ್ತೆಂದು ಆತನ ಮುಖ ಹೇಳುತ್ತಿತ್ತು.

ಒಂದುದಿನ ಬೋರಯ್ಯನ ಪತ್ನಿ ಬಂದವಳು ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ವಿಚಾರ ವಿನಿಮಯವನ್ನು ಅತೀ ದೈನ್ಯದಿಂದ ಉದ್ಘಾಟಿಸಿದಳು.

"ನಾನು ಒಮ್ಮೆ ಬರುತ್ತೇನೆ.... ಮತ್ತೆ ಎಲ್ಲಾ ಸುಗಮವಾಗಿ ಸಾಗುವುದು."

"ದುಡ್ಡಿಗಾಗಬೇಡಿ. ಡಾಕ್ಟರು ಹೇಳಿದ ಮೇಲೆ ಮಾತ್ರ ಬಂದರೆ ಸಾಕು....ನನಗೆ ಎಷ್ಟು ಕಷ್ಟವಾದರೂ ಚಿಂತಿಲ್ಲ."

ಒಂದು ದಿನ ರಾಜಣ್ಣನ ಪತ್ನಿ ಬಂದವಳೆಂದಳು:—

"ಹುಡುಗ ಸೇಫಿನಿಂದ ರೂ. ಸಾವಿರ ಸಹಿತ ಹೋಗಿ ಮೂರು ದಿನಗಳಾದವು...."

ಸ್ವಲ್ಪ ಹೊತ್ತಿನ ನಿಶ್ಶಬ್ದತೆಯನ್ನು ನೀಗಿ ರಾಜಣ್ಣ ಕತ್ತನ್ನೂ ಹೆಗಲ್ಟೆಯನ್ನೂ ಒರೆಸುತ್ತಾ ಹೇಳಿದ್ದು:—

"ಹೋಗಲಿ; ಎಲ್ಲವೂ ಹೋಗಲಿ... ನಾನು ಸುರಳಿ ಮನೆಗೆ ಬರಬಹುದಿಲ್ಲ... ಏನು ಬೇಕಾದರೂ ಮಾಡಲಿ..."

ಆ ಗೃಹಣಿ ರಹಸ್ಯವಾಗಿ ನೆನುನಗೆ ಬೀರಿದಂತಿತ್ತು. ಆದರೂ, 'ಇಲ್ಲಿ ಹೀಗೇಕೆ ಇರಬೇಕು? ಮನುಷ್ಯರಾದರೆ ಇತರರನ್ನು ಅನಾಕರ್ಯಕ್ಕೀಡು ಮಾಡಬಾರದು...." ಹೇಳಿದಳು.

ರಾಜಣ್ಣ ಜವಾಬು ಕೊಡಲಿಲ್ಲ. ಕತ್ತನ್ನೂ ಹೆಗಲ್ಟೆಯನ್ನೂ ಒತ್ತಿ ತಡವರಿಸಿ ಸುಮ್ಮನಾದನು.

ಬೋರಯ್ಯನ ಪತ್ನಿ ತನ್ನ ಪತಿಗೆ ತಿಳಿಸಿದಳು:—

"ಮನೆಯಲ್ಲಿದ್ದ ಒಂದು ಹತ್ತಾಳೆ ತಂಬಿಗೆ ಮತ್ತು ತಪ್ಪಲೆಯನ್ನು ಮಾರಿದ್ದೇನೆ. ರೇಶನ್ ತರಲು ಬೇರೆ ದಾರಿಯಿರಲಿಲ್ಲ...."

"ಹೋಗಲಿ, ನೀನು ಬೇರೇನು ಮಾಡಬಲ್ಲೆ! ಅಷ್ಟೇ ತಾನೆ? ಏನು ಬೇಕಾದರೂ ಮಾರು. ಮಕ್ಕಳನ್ನು ಉಪವಾಸ ಹಾಕಬಾರದು ..... ನಾನು ಒಂದ ಕಳಿಕೆ ಹೊಸ ಪಾತ್ರೆಗಳನ್ನು ಖರೀದಿಸೋಣ—"—ಸಂತೈಸಿದನು.

ಒಮ್ಮೆ ಬೋರಯ್ಯ ಡಾಕ್ಟರರಲ್ಲಿ ಹೇಳಿದ—"ನಾನು ಒಂದು ತಿಂಗಳುಗಳಾದವು. ಒಮ್ಮೆ ಮನೆಗೆ ಹೋಗಿ ಮಕ್ಕಳನ್ನು ಕಾಣಬೇಕು—"

ಡಾಕ್ಟರ್ ಉತ್ತರ ಕೊಡಲಿಲ್ಲ. ವಾಡಿಕೆಯಂತೆ ಮಂದಹಾಸ ಬೀರಿದರು.

ಒಂದುದಿನ ರಾಜಣ್ಣನ ಮಗ ಆಧುನಿಕ ಪೋಷಾಕು ಧಾರಿಯಾಗಿ ತನ್ನ ತಂದೆಯ ಭೇಟಿಗಾಗಿ ಬಂದಾಗ ರಾಜಣ್ಣ ತಲೆ ತಗ್ಗಿಸಿ ಬೇರೆ ಯೋಚನೆಯಲ್ಲಿ ಶ್ರದ್ಧೆ ಹರಿಸಿದ್ದವನಂತೆ ಕುಳಿತನು.

ಸ್ವಲ್ಪ ಹೊತ್ತು ಕಾದಿದ್ದ ಮಗನು ಅಲ್ಲಿಗೆ ಬಂದ ವಿಚಾರವನ್ನು ತಂದೆಗೆ ತಿಳಿಸಿ ಹೋಗುವುದರಲ್ಲಿ ಆತುರಪಡುತಿದ್ದನು.

'ಸ್ವಲ್ಪ ಮಾತಾಡಲೆಂದು ಬಂದೆ..."

ರಾಜಣ್ಣನ ಪ್ರತಿಕ್ರಿಯೆಯಿಲ್ಲ.

"ಒಂದು ವಿಚಾರ ತಿಳಿಸೋಣವೆಂದು ಬಂದಿದ್ದೇನೆ..."

ರಾಜಣ್ಣನ ಅವಗಾಹನೆಗೆ ಬಂದಂತಿಲ್ಲ.

"ನಾನು ವಿವಾಹಿತನಾದೆ...."

ಎಂದೆಂದೂ ಯೂರನ್ನೆಂದರೂ ರಾಜಣ್ಣ ತಿಳಿಯಲು ಆಶಕ್ತಿ ತೋರಲಿಲ್ಲ.

"ನನ್ನ ಸಹಪಾಠಿನಿಯೋರ್ವಳನ್ನು"

ರಾಜಣ್ಣ ತಿಳಿಯಲೇ ಇಲ್ಲ.

"ವಿವಾಹ ದೇವಾಲಯದಲ್ಲಾಗಿತ್ತು."

ರಾಜಣ್ಣ ಹೆಗ್ಗೆ ತಡವರಿಸಿದ; ಕತ್ತನ್ನು ಸವರಿದ!

"ವಿಶೇಷವಾಗಿ ಯಾರಿಗೂ ತಿಳಿಸಿರಲಿಲ್ಲ. ಆಮಂತ್ರಿಸಿರಲಿಲ್ಲ...."

ಮತ್ತೂ ಮೌನ.

"ತಂದೆಗೆ ಈಗ ಮಾತ್ರವೇ ತಿಳಿಸಲು ಅನುಕೂಲವೂ ಸೌಕರ್ಯವೂ ಆದುದು...."

ರಾಜಣ್ಣನ ಉತ್ತರವಿಲ್ಲ.

"ಅಕೆಯನ್ನು ಮನೆಗೆ ಕರಕೊಂಡು ಬಂದಿದ್ದೇನೆ...."

"ಛೂ....ಛಡೆಯಿಲ್ಲಿಂದ...."

ಬೆಚ್ಚಿಬಿದ್ದ ಮಗ ನಡೆದುಹೋಯ್ತು.

ಮರುದಿನ ಡಾಕ್ಟರ್ ರಾಜಣ್ಣನಿಗೆ ತಿಳಿಸಿದರು— "ನಿಮಗೆ ಅಂತಹ ಕಠಿಣ ಖಾಯಿಲೆಯೇನೂ ಇಲ್ಲ. ಮನೆಗೆ ಹೋಗಿ ಸ್ವಲ್ಪ ವಿಶ್ರಾಂತಿ ಹೊಂದಿರಿ. ಒಂದೆರಡು ಟಾನಿಕ್‌ಗೆ ಚೀಟಿ ಕೊಡುತ್ತೇನೆ..."

"ಡಾಕ್ಟರ್! ನಿಮಗೆ ನನ್ನ ಖಾಯಿಲೆಯನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲವೆನ್ನಿ...ನನಗೆ ಖಾಯಿಲೆಯೂಗಂ ಹೆಚ್ಚಾಗಿದೆ...."

"ಹಾಗಿಲ್ಲ, ನಿಮ್ಮ ಭಾವನೆ ಮಾತ್ರ..."

"ನನಗೆ ನಿಮ್ಮ ವಿಶ್ವಾಸವಿಲ್ಲ. ನನ್ನ ಖಾಯಿಲೆಯನ್ನು ನೀವು ಕಂಡು ಹಿಡಿಯಲಾರದವಾಗಿರುವಿರಿ..."

'ಮಾನಸಿಕ ಭಯ ಮಾತ್ರ ನಿಮ್ಮ ಖಾಯಿಲೆ...'

'ನಾನೇನು ಮಾಡಬೇಕು, ಡಾಕ್ಟರ್?'

'ಮನೆಗೆ ಹೋಗಿ ಸುಖವಾಗಿರಿ...."

"ಅಲ್ಲಿ ಮನಶ್ಶಾಂತಿಯಿಲ್ಲದ್ದರಿಂದಾಗಿಯೇ ಇಲ್ಲಿಗೆ ಬಂದ ನನಗೆ ನೀವು ಹೀಗೆ ಹೇಳಿದರೆ?...."

ಡಾಕ್ಟರಿಗೆ ಏನೂ ಸಹಿಸಲಿಲ್ಲ. ಅವರು ಮಹಗಹಿಸಿ ಎದ್ದರು.

ಬೋರಯ್ಯನ ಪತ್ನಿ ತನ್ನ ಮಕ್ಕಳ ಪೈಕಿ ಒಬ್ಬಳನ್ನು ಕರೆ ತಂದಿದ್ದಳು. ಅಶಕ್ತಿಯಿಂದ ಬೋರಯ್ಯ ಪತ್ನಿಯನ್ನು ವಿಚಾರಿಸಿದ:—

"ಈಗ ಹೇಗೇಕೆ ಒಣಗಿ ಶುಂಠಿಯಾಗಿರುವಳು?..." ಎನ್ನುತ್ತಾ ಮಗುವನ್ನು ಆಲಿಂಗಿಸಿದ.

"ಗಂಜೀನೀರು ಕುಡುದಿನಗಳು ಹಲವಾದವು...."—ಕಣ್ಣು ದನಿಯಲ್ಲಿ ಬೋರಯ್ಯನಿಗೆ ಪತ್ನಿ ತಿಳಿಸಿದಳು.

ಬೋರಯ್ಯನ ಕಣ್ಣಿನಿಂದ ನೀರು ಸುರಿಯಿತು.

"ಎಲ್ಲಿಯೂ ಸಾಲ ಸಿಗದಿದ್ದರೆ ಬೇರೇನು ದಾರಿ?..." ಆ ದಂಪತಿಯೋರ್ವರೂ ಒಂದಾಗಿ ಮರುಗಿದರು.

ಬೋರಯ್ಯ ಡಾಕ್ಟರನ್ನು ವಿನಂತಿಸಿ ಅನುಮತಿ ಯಾಚಿಸಿದ್ದಾಯ್ತು.

"ಇನ್ನೂ ಪೂರ್ಣ ಸೌಖ್ಯವಾದಿರುವಾಗ ಹೀಗೆ ಒತ್ತಾಯ ಮಾಡಿದರೆ ಅಪಾಯಕರ. ಖಾಯಿಲೆ ಇನ್ನೊಮ್ಮೆ ಬಗುವಾದರೆ?....ಈಗ ತುಂಬಾ ವಿಶ್ರಾಂತಿ ಮತ್ತು ಸಾತ್ವಿಕಾಹಾರವೇಕು..."

"ಏನಾದರೂ ಆಗಲಿ, ಡಾಕ್ಟರ್! ಸಾಧ್ಯವಿದ್ದಷ್ಟು ದುಡಿದು ಹೇಗಾದರೂ ಮಕ್ಕಳನ್ನು ಸಾಲೆತ್ತಿಸುತ್ತೇನೆ. ಇನ್ನೂ ಕುಟುಂಬವನ್ನು ಉಪವಾಸ ಹಾಕಲು ಅಸಾಧ್ಯ..." ಎಂದು ಬೋರಯ್ಯ ಆಸ್ಪತ್ರೆಯಿಂದ ಹೊರ ಹೊರಟಿದ್ದಾಯ್ತು.

ಇನ್ನೂ ಕೆಲವು ದಿನ ಆಸ್ಪತ್ರೆಯಲ್ಲಿಯೇ ಇರುವಂತೆ ಡಾಕ್ಟರರೂ ಪತ್ನಿಯೂ ಅಪೇಕ್ಷಿಸಿದ್ದು ವಿಫಲವಾಯ್ತು.

ನಮ್ಮ ಹೆಮ್ಮೆಯ ಸಾಧನೆ

ಆಧುನಿಕ ಜೆಟ್ ಯಂತ್ರಗಳನ್ನು ತಯಾರಿಸುವ ಶಕ್ತಿ ಹೊಂದಿರುವ ಅತ್ಯಂತವೀನ ಯಂತ್ರ ಸಾಧನಗಳನ್ನೂ ಅತ್ಯಾಧುನಿಕ ವಿಮಾನ-ಎಂಜಿನ್‌ಗಳನ್ನೂ ಯಂತ್ರೋಪಕರಣಗಳನ್ನೂ ತಯಾರಿಸುವ ಶಾಖೆ ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನಾಟಿಕ್ಸ್ ಸಂಸ್ಥೆಯಲ್ಲಿದೆ. ಇಲ್ಲಿ ಇದುವರೆಗೆ ೮೦೦ ಓರ್ಫಿಯಸ್ ಎಂಜಿನ್‌ಗಳು ತಯಾರಾಗಿವೆ. ಈ ಎಂಜಿನ್‌ಗಳನ್ನು "ನಾಟ್" ಮತ್ತು ಎಚ್. ಎಫ್.-೨೪" ವಿಮಾನಪಡೆಗೆ ಅಳವಡಿಸಲಾಗಿದೆ. "ಫೇರ್‌ಚೈಲ್ಡ್-ಫ್ಯಾಕೆಟ್" ವಿಮಾನಗಳಿಗೆ ಉಪ ಎಂಜಿನ್‌ಗಳಾಗಿ ಕಾರ್ಯವೆಸಗುತ್ತವೆ.

ಅತ್ಯಂತ ಮುಂದುವರೆದಿರುವ ದೇಶಗಳಲ್ಲಿರುವ ಹಲವಾರು ತಯಾರಿಕಾ ಸಂಸ್ಥೆಗಳ ದೀರ್ಘಾನುಭವದ ಲಾಭದಿಂದ, ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ 'ಏರೋ-ಎಂಜಿನ್ ವಿಭಾಗವು' ಈ ಕ್ಷೇತ್ರದಲ್ಲಿ ಅಪೇಕ್ಷ ಯುವಕರಿಗೆ ತರಬೇತಿ ನೀಡಿದೆ. ಇಲ್ಲಿ ನವನವೀನ ಸಾಮಗ್ರಿಗಳನ್ನು ಬಳಸಲಾಗುತ್ತಿದೆ.

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಇಂಜಿನ್ ತಯಾರಿಕಾ ವಿಭಾಗದ ಅನುಮತಿ ಪಡೆದು "ಓರ್ಫಿಯಸ್" ಶ್ರೇಷ್ಠ ಇಂಜಿನುಗಳು, ಕಾನ್ಪುರದಲ್ಲಿ ತಯಾರಿಸುವ "ಎಚ್. ಎಸ್-೧೪" ಸಾರಿಗೆ ವಿಮಾನಗಳ "ಡಾರ್ಟ್" ಎಂಜಿನ್‌ಗಳು, ಆಲೌಟ್ಟ್ ಹೆಲಿಕಾಪ್ಟರುಗಳಿಗೆ ಅಗತ್ಯವಾದ "ಅರ್ಟಾಸ್" ಇಂಜಿನುಗಳನ್ನು ತಯಾರಿಸುತ್ತಿದೆ.

ವಿದೇಶಗಳಿಂದ ಆಮದು ಮಾಡಿಕೊಂಡ ಕಂಬಿಗಳು, ಹಾಳೆಗಳು ಮತ್ತು ನಿಯತ ಪ್ರಮಾಣದ ಕುಲುಮೆ ಯಂತ್ರಗಳು, ಎಂಕಗಳು ಮುಂತಾದ ಕಚ್ಚಾ ವಸ್ತುಗಳಿಂದ ಇಂಜಿನುಗಳನ್ನು ತಯಾರಿಸಲಾಗುತ್ತಿದೆ. ಶೇಕಡ ೬೦ ಭಾಗ ಶುದ್ಧಮೆ ಹಾಗೂ ಎಂಕದ ಕಾರ್ಯ ಬೆಂಗಳೂರಿನಲ್ಲಿ ಮಾಡಲಾಗುತ್ತಿದೆ. ಸಂಪೂರ್ಣ ಯಾಂತ್ರಿಕ ಸಂಸ್ಕರಣ, ಶಾಖ ಚಿಕಿತ್ಸೆ, ಅಂತಿಮ ಸಂಸ್ಕರಣ ಮತ್ತು ಪರೀಕ್ಷೆಯನ್ನೂ ಇಲ್ಲೇ ಪಡೆಸಲಾಗುತ್ತಿದೆ.

ಈ ವಿಭಾಗವು "ಅರ್ಟಾಸ್" ಇಂಜಿನ್‌ಗಳ ತಯಾರಿಕೆಯಿಂದ ನವಪಥದಲ್ಲಿ ಹೆಜ್ಜೆ ಯಿಟ್ಟಿದೆ. ಇತರ ನವಮಾನೆಯ ಇಂಜಿನುಗಳಿಗೆ ಬೇಕಾದ ಉಪಭಾಗಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ ಅವುಗಳನ್ನು ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತಿದೆ.

"ಓರ್ಫಿಯಸ್" ಟರ್ಬೊ-ಜೆಟ್ ಇಂಜಿನ್ ಪರಮಾವಧಿ ೪,೫೦೦ ಪೌಂಡ್ ಒತ್ತಡ ಶಕ್ತಿ ಹೊಂದಬಲ್ಲದು. ಇದರಲ್ಲಿ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 89/1967

ಉಡ್ಪಿ ಅದಮಾರು ಮಠದ ಶ್ರೀ ವಿಶ್ವಾಧೀಶ ತೀರ್ಥ ಸ್ವಾಮಿಯರು ——— ವಾದಿರು,

ಮತ್ತು

ಶೇಷಿ ಪೂಜಾರ್ತಿ ಕಾಡಾ— ಪ್ರತಿವಾದಿರು

ಇದರೊಳಗೆ

ಸಿಟ್ಟು ಮೊಂಬಲ್‌ಕನ ಪ್ರತಿವಾದಿಳು—ರಾಜಂಮ, ಶೇಷಿ ಪೂಜಾರ್ತಿ ಮಗಳು—ಉಡ್ಪಿ ತಾಲ್ಲೂಕೋಟೆ ಗ್ರಾಮ-ಯವರಿಗೆ ಈ ಮೂಲಕ ತಿಳಿಸುವುದೇನೆಂದರೆ —

ವಾದಿರು—ಚಾಲಗೇಣಿ ಬಾಕಿ ಅಸಲು ಬಡ್ಡಿಗೆ ಮಾಡಿದ ಮೇಲ್ಮಂಡ ದಾವೆಯು ತಾ ೦೭ ತಾ ೨೪—೪—೧೯೦೪ ಕ್ಕೆ ಯಿಟ್ಟದ್ದೆ. ಸದ್ರಿ ೪ನೆ ಪ್ರತಿವಾದಿಳಿಗೆ—ಅಕ್ಟೋಬರ ನೋಟಿಕ್ಕಿದ್ದ ಯಿದ್ರೆ—ಸದ್ರಿ ದಿನ್ಸ—ಪೂರ್ವಾಹ್ನ 11ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ—ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಈ ಮೂಲ್ಕ ತಿಳಿಸೋಡಾಗಿಯದೆ.

V. R. Kidiyur
Advocate for Plaintiff

ಉಡ್ಪಿ, 10—8—68.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

87 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಯಲ್ಲಿ

ಸಂಪರ್ಕ ಬೆಳಿಸಿ.

ಶೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - ೩.

Phone— 5711, 5712, 5713 } 3 Lines.

NAVAYUGA 22—8—1968
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 31
Licensed to Post without Prepayment

ಬೋಲಂಗೀರದಲ್ಲಿ ಕೃಷಿ ಕ್ರಾಂತಿ

ಒರಿಸ್ಸಾ ರಾಜ್ಯದ ಬೋಲಂಗೀರ್ ಜಿಲ್ಲೆಯ ರೈತರು ಇಂದು ಸಂತೃಪ್ತ ಮನೋಭಾವವನ್ನು ತಾಳಿದ್ದಾರೆ. ತಮ್ಮ ಪ್ರಯತ್ನ ಮತ್ತು ನಿರ್ಧಾರದಿಂದ ಆ ಜಿಲ್ಲೆಯ ರೈತ ಸಮುದಾಯ ದೇಸಾಯಿ ರಂಗದಲ್ಲಿ ಹಿಂದೆಂದೂ ನಡೆದಿರದಿದ್ದ ಕ್ರಾಂತಿಯನ್ನು ಸಾಧಿಸಿದ್ದಾರೆ. ಅಭಾವದ ಪರಿಸ್ಥಿತಿಯನ್ನು ತೊಡೆದು ಹಾಕಿ ಸ್ವಯಂ ಪೂರ್ಣ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ.

ಈ ಭಾಗದ ರೈತರಿಗೆ 1966—67ರ ವರೆಗೂ ತಾಯ್‌ಚುಂಗ್ ಜಾತಿಯ ಭತ್ತದ ವಿಷಯ ಏನೇನೂ ಗೊತ್ತಿರಲಿಲ್ಲ. 1967—68ರ ಸಂಗಾರನಲ್ಲಿ ಆ ಜಿಲ್ಲೆಯಲ್ಲಿ ಕೃಷಿ ಕ್ಷೇತ್ರದಲ್ಲಿ ಅಭೂತಪೂರ್ವವಾದ ಕ್ರಾಂತಿಯೊಂದು ನಡೆಯಿತು. ಪ್ರಥಮತಃ 5,494 ಎಕರೆಗಳಷ್ಟು ಭೂಮಿಯಲ್ಲಿ ತಾಯ್‌ಚುಂಗ್ ನೇಟಿವ್-1 ಜಾತಿಯ ಬೀಜದ ಭತ್ತವನ್ನು ಬಿತ್ತಲಾಯಿತು.

ಈ ಬಿತ್ತನೆಯ ಬೀಜವನ್ನು ಉಪಯೋಗಿಸಿದಾಗ ಬಂದ ಅಧಿಕಾಧಿಕ ಬೆಳೆಯು ಅಲ್ಲಿನ ರೈತರ ಕಣ್ಣನ್ನು ತೆರೆಸಿತು. ಲಾಯ್‌ಸಿಂಘ್ ಬ್ಲಾಕಿನ ಕುತೆನ್‌ವಾಲಿ ಎಂಬ ಸ್ಥಳದ ಶ್ರೀ ಲಕ್ಷ್ಮಣಕುಮಾರ್ ಧಾರುವ ಅವರು ಎಕರೆಗೆ 195 ಮಣಗಳಷ್ಟು ಧಾನ್ಯವನ್ನು ಬೆಳೆದು ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದರು.

ಶ್ರೀ ಲಕ್ಷ್ಮಣಕುಮಾರ್ ಧಾರುವರವರ ಈ ಸಾಧನೆಯನ್ನು ಒರಿಸ್ಸಾ ರಾಜ್ಯ ಸರ್ಕಾರ ಮನ್ನಿಸಿ ಅವರಿಗೆ ನೀರೆತ್ತುವ ಪಂಪ್ ಯಂತ್ರವೊಂದನ್ನು ಉಚಿತವಾಗಿ ಕೊಟ್ಟಿತು. ಪಂಚಾಯತ್ ಸಮಿತಿಯು ಈ ರೈತ ನಾಯಕನಿಗೆ ಒಂದು ವಿದ್ಯುತ್ ಜಾಲಿತ ಸ್ಪ್ರೇಯರ್ ಕೊಟ್ಟು ಗೌರವಿಸಿತು. ಆ ರಾಜ್ಯದ ಮುಖ್ಯ ಮಂತ್ರಿಗಳ ಹೊಸ ವರುಷದ ಶುಭಾಶಯದ ಕಾರ್ಡಿನಲ್ಲಿ ಅವನ ಮತ್ತು ಇನ್ನೊಬ್ಬ ರೈತನ ಭಾವ ಚಿತ್ರಗಳು ಸ್ಥಾನಗಳಿಸಿದುವು.

ಈ ಗೌರವಗಳ ಪರಿಣಾಮವಾಗಿ ಆ ಜಿಲ್ಲೆಯ ರೈತರಲ್ಲಿ ಒಂದು ಸ್ಪರ್ಧಾ ಮನೋಭಾವ ಏರ್ಪಟ್ಟಿತು. 1967—68ರ ಮುಂಗಾರಿನಲ್ಲಿ ತಾಯ್‌ಚುಂಗ್ ಜಾತಿಯ ಬೀಜವನ್ನು ಬಳಸಿದ್ದರಿಂದ ಬಂದ ಬೆಳೆಯು ಅವರಿಗೆ ಎಷ್ಟೋ ಉತ್ತೇಜನ ಕೊಡಿತು. ಹಿಂಗಾರಿನಲ್ಲಿಯೂ ಇದೇ ಜಾತಿಯ ಬೀಜವನ್ನು ಬಿತ್ತಬೇಕೆಂದು ಅವರು ಮನಸ್ಸುಮಾಡಿದರು. ಆ ಜಿಲ್ಲೆಯಲ್ಲಿ ಇರುವ ನೀರಾವರಿ ಸೌಲಭ್ಯಗಳ ಕೊರತೆಯನ್ನು ನಿರ್ಲಕ್ಷಿಸಿ ಅಲ್ಲಿನ ಜನ ಹೆಚ್ಚು ಬೆಳೆಯನ್ನು ಬೆಳೆಯಬೇಕೆಂಬ ಸಂಕಲ್ಪವನ್ನು ಎದುರಿಸಲು ಎಲ್ಲೆಲ್ಲಿಂದ ಸಾಧ್ಯವೋ ಅಲ್ಲಲ್ಲಿಂದಲೆಲ್ಲ ನೀರನ್ನು ಎತ್ತಿ ಬೇಸಾಯ ನಡೆಸಿದರು. ನದಿಗಳು ಕಾಲುವೆಗಳು ಇವುಗಳಿಗೆಲ್ಲ ಕಣ್ಣು ಕಣ್ಣು ಕಿಡ್ಡುಗಳನ್ನು ನಿರ್ಮಿಸಿದರು. ಹೊಸ ಭೂಮಿಗಳನ್ನು ಸಾಗುವಳಿಗೆ ತಂದರು. ಕಣ್ಣು ಪುಟ್ಟ ಜಲಾಶಯುವಳಿಂದ ನೀರನ್ನು ಸಂಪುಗಳಿಂದ ಎತ್ತಿ ಹಾಯಿಸಿದರು. ಯುವಕ ಸಂಘಗಳು ಭೂ ಸಾಗುವಳಿ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ತಳೆದರು.

1967—68ರ ಹಿಂಗಾರು ಬೇಸಾಯ ಕಾರ್ಯಕ್ರಮ 20,690 ಎಕ್ರೆಗಳಷ್ಟು ಭೂಮಿಯಲ್ಲಿ ತಾಯ್‌ಚುಂಗ್ ಭತ್ತವನ್ನು ಬೆಳೆಯಬೇಕೆಂದು ಗುರಿ ಇಟ್ಟುಕೊಳ್ಳಲಾಗಿತ್ತು. ಅದರಲ್ಲಿ 20,000 ಎಕ್ರೆಗಳು ಎರಡು ಬ್ಲಾಕ್‌ಗಳಲ್ಲಿ ಇವೆ. ಇನ್ನುಳಿದ 690 ಎಕ್ರೆಗಳು ಈ ಜಿಲ್ಲೆಯ ವಿವಿಧ ಬ್ಲಾಕುಗಳಲ್ಲಿ ಹರಡಿವೆ. ರೈತರ ದೃಢ ನಿರ್ಧಾರ ಮತ್ತು ಧೈರ್ಯೋತ್ಸಾಹದ ಜೊತೆಗೆ ಸರ್ಕಾರದ ಇಲಾಖೆಗಳಿಂದ ದೊರೆತ ಮಾರ್ಗದರ್ಶನ ಮತ್ತು ನೆರವು ಈ ಕಾರ್ಯಕ್ರಮಕ್ಕೆ ಹಿಂದೆಂದೂ ಆಗಿರದ ಯಶಸ್ಸನ್ನು ತಂದುಕೊಟ್ಟಿತು.

ತಾಯ್‌ಚುಂಗ್ ಭತ್ತವನ್ನು 20,690 ಎಕರೆಗಳಲ್ಲಿ ಬೆಳೆಯುವ ಗುರಿಯನ್ನು ಮೀರಿ 22,800 ಎಕರೆಗಳಲ್ಲಿ ಬೆಳೆದಿರುವುದು ಆ ಜಿಲ್ಲೆಯ ರೈತರ ಮಹತ್ ಪ್ರಯತ್ನಕ್ಕೆ ಧೀರ್ಧಾರಿ ಮನೋಭಾವಕ್ಕೆ ಒಂದು ನಿದರ್ಶನವಾಗಿದೆ.

ಇಂದು ಬೋಲಂಗೀರ್‌ನ ಅನೇಕ ಭಾಗಗಳಲ್ಲಿ ತಾಯ್‌ಚುಂಗ್ ಗದ್ದೆಯು, ಸಮೃದ್ಧವಾಗಿ ಬೆಳೆದು ರೈತರೆಲ್ಲರ ಮುಖದ ಮೇಲೆ ಮುಗುಳುನಗೆ ಅಸ್ಫುರವಾಡುತ್ತಿದೆ. ಅವರಲ್ಲಿ ಒಂದು ಹೊಸ ಧೈರ್ಯ, ಒಂದು ನಂಬಿಕೆ ಬಂದಿದೆ.

ಈಗಾಗಲೇ, ಆ ಜಿಲ್ಲೆಯಲ್ಲಿ ಅಧಿಕ ಭತ್ತದ ಬೆಳೆಯು ಫಲ ಧಾನ್ಯದ ಸಂಗ್ರಹಣೆ ಸಂದರ್ಭದಲ್ಲಿ ಸತ್ಪರಿಣಾಮವನ್ನುಂಟುಮಾಡಿದೆ. 1968ರ ಜೂನ್ ತಿಂಗಳಲ್ಲಿ 25 ಸಾವಿರ ಟನ್ನುಗಳಷ್ಟು ಧಾನ್ಯವನ್ನು ರೈತರಿಂದ ಸಂಗ್ರಹಿಸಲಾಗಿದೆ. 1964—65ರಲ್ಲಿ ಕೇವಲ 7 ಸಾವಿರ ಟನ್ನುಗಳಷ್ಟು ಧಾನ್ಯವನ್ನು ಸಂಗ್ರಹಿಸಲು ಸಾಧ್ಯವಾಗಿತ್ತು. ಆ ಪ್ರಾಂತ್ಯದಲ್ಲಿ 1959ರ ನಂತರ ಆಗಿರುವ ಧಾನ್ಯ ಸಂಗ್ರಹಣೆ ಪ್ರಮಾಣದಲ್ಲಿ 68ರ ಜೂನ್‌ವರೆಗೆ ಆದ ಸಂಗ್ರಹಣೆಯೇ ಹೆಚ್ಚು.

ಮುಂಬರುವ ವರ್ಷಗಳಲ್ಲಿ ದುರುಪರ ಕಾರ್ಯ ಕೈಗೊಂಡು, ವಾಯುಯಾನ ವಿಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಕ್ರಾಂತಿಕಾರಿ ಬದಲಾವಣೆಗಳಿಗೆ ಸಮನಾಗಿ ಬೆಳೆಯಲು ಅಹರ್ನಿಶಿ ಶ್ರಮಿಸುತ್ತಿದೆ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ. ೨-೦೦ [ಪೆ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು: ಡಾ। ಶೊರೆಡ್ಡಲ್ ವೆಂಕಟ್ರಾವ್, ಎಲ್. ಐ.ಎಮ್.,

'Ably written- Quite up-to-date valuable service'

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್., ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಡತಿಯರು, ಬರ್ಥಿಜೆಯರು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿಷದವಾಗಿ ಗೃಹವೈದ್ಯ, ಹೆರಿಗೆ ವಿಭಾಗ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨-೦೦ (ಪೆ. ಖರ್ಚು ಕೇಳಿ)

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಗಾಳಿಯನ್ನು ಕುಗ್ಗಿಸಲು ಏಳು ಮಜಲಿನ "ಕಂಪ್ರೆಸರ್" ಇದೆ. ಈ ಗಾಳಿಯನ್ನು ದಹನ ಕೊಠಡಿಯಲ್ಲಿ ಇಂದನದೊಂದಿಗೆ ಉರಿಸಿ ವಾಯುಚಕ್ರ ತಿರುಗಿಸಲು ಅಗತ್ಯವಾದ ಶಕ್ತಿಯನ್ನು ಉತ್ಪಾದಿಸಿಕೊಳ್ಳಲಾಗುತ್ತದೆ. ವಾಯುಚಕ್ರದಿಂದ ಹೊಮ್ಮುವ ಬಿಸಿ ಅನಿಲಗಳನ್ನು ಶಬ್ದದ ವೇಗದಲ್ಲಿ ಜಾಲಕದಂಡದ ಮೂಕಿಯ ಮೂಲಕ ಹೊರಕ್ಕೆ ಕಳುಹಿಸಲಾಗುತ್ತದೆ. ಈ ಅನಿಲಗಳ ವೇಗವು ವಿಮಾನಕ್ಕೆ ಮುಂದಕ್ಕೆ ಚಿಮ್ಮುವ ಒತ್ತಡವನ್ನು ನೀಡುತ್ತದೆ.

"ಡಾರ್ಟ್" ಇಂಜನುಗಳಲ್ಲಿ ದಹನ ಕೊಠಡಿಯಲ್ಲೇ ಅನಿಲಗಳನ್ನು ಉರಿಸಿ ಮೂರು ಮಜಲಿನ ವಾಯುಚಕ್ರ ತಿರುಗಿಸಲು ಬಳಸಲಾಗುತ್ತದೆ. ಇವರ ಬಹುಪಾಲು ಶಕ್ತಿಯನ್ನು ವಿಮಾನದ ಜಾಲಕದಂಡ ನಡೆಸಲು ಬಳಸಲಾಗುತ್ತದೆ. ಈ ಇಂಜನ್ ಸುಮಾರು ಎರಡು ಸಹಸ್ರ ಅಶ್ವಶಕ್ತಿ ಉತ್ಪಾದಿಸುತ್ತದೆ.

"ಟರ್ಬೊಜೆಟ್" ಇಂಜನಿನ ಕಂಪ್ರೆಸರ್ ಮತ್ತು ವಾಯುಚಕ್ರದ ಮಟ್ಟದಲ್ಲಿ ಸುಮಾರು ೫,೦೦೦ ತೆಳ್ಳನಾದ ಪರ್ವಗಳಿವೆ. ಪ್ರತಿದಳವನ್ನೂ ಅದರ ನಾಜೂಕಿನ್ಯಕ್ಕಾಗಿ ತನಿಖೆಮಾಡಿ ಇರಬಹುದಾದ ದೋಷಗಳನ್ನು ವೈಜ್ಞಾನಿಕ ಮತ್ತು ಕ್ಷೇತ್ರೀಯ ವಿಧಾನದಿಂದ ಪರೀಕ್ಷಿಸಲಾಗುತ್ತದೆ. ಒಂದು ಟರ್ಬೊಯನ್ ಇಂಜನನ್ನು ರಚಿಸಲು ಸುಮಾರು ೫,೦೦೦ ವಿವಿಧ ಉಪಭಾಗಗಳೂ ಡಾರ್ಟ್ ಇಂಜನ್ನಿಗೆ ಸುಮಾರು ೮,೦೦೦ ಉಪಭಾಗಗಳೂ ಅಗತ್ಯವಾದುತ್ತದೆ.

ಬೆಂಗಳೂರಿನ 'ಹಿಂದೂಸ್ಥಾನ್ ಏರೋ-ಇಂಜಿನ್' ವಿಭಾಗದಲ್ಲಿ ತಯಾರಾಗುವ ಇಂಜನುಗಳ ಗುಣ, ಉನ್ನತ ಮಟ್ಟದಿಂದಾಗಿ ವಿದೇಶೀ ಬೇಡಿಕೆ ಹೆಚ್ಚಾಗಿದೆ. ಡಾರ್ಟ್ ಇಂಜನುಗಳ ಮುಖ್ಯ ಹೊದಿಕೆಗಳನ್ನು 'ರೋಲ್ಸ್ ರೋಯ್ಸ್' ಸಂಸ್ಥೆಗೆ ಕಳುಹಿಸುತ್ತಿರುವುದು ಅತಿ ಮುಖ್ಯ ಅಂಶವಾಗಿದೆ. ಈ ವಸ್ತುವಿನ ಸರಬರಾಜಿನಿಂದ ಭಾರತವು ಕಳೆದ ವರ್ಷ ಏಳು ಲಕ್ಷ ರೂಪಾಯಿ ವಿದೇಶೀ ವಿನಿಮಯ ಗಳಿಸಿತು.

ಈ ವಿಭಾಗದಲ್ಲಿ ಮಿಲಿಟರಿ ಮತ್ತು ನಾಗರಿಕ ವಿಮಾನದಳ ಇಂಜನುಗಳನ್ನು ದುರಸ್ತುಗೊಳಿಸಿ ಪರೀಕ್ಷಿಸಲಾಗುತ್ತದೆ. ಇದರಿಂದ ವಿದೇಶೀ ಗ್ರಾಹಕರು ಅಕರ್ಷಿತರಾಗಿದ್ದಾರೆ ಈ ವಿಭಾಗ ವಿದೇಶದ 'ಎವಾನ್' ಇಂಜನುಗಳನ್ನು ದುರಸ್ತುಗೊಳಿಸಿಕೊಟ್ಟಿದ್ದಾರೆ.

ಹಿಂದುಸ್ಥಾನ್ ವಿಮಾನ ಕಾರ್ಖಾನೆ



Edited, Printed & Published by K. H. Shetty, at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

29—8—1968

೨೦
ಪೈಸೆ

ಬರ್ಮಾ ದೇಶದ ಜಾನಪದ ಕಥೆ

ವಿಜೇತನಾದ ಯಾತ್ರಿಕ

ಬರೆದವರು:
ಶ್ರೀ ಎಚ್. ಎಂ. ನಾರಾಯಣ ಭಟ್.

ಒಂದು ಗ್ರಾಮದಲ್ಲಿ ನಾಲ್ವರು ಯುವಕರು ವಾಸ ಮಾಡಿದ್ದರು. ಕಟ್ಟುಕಥೆಗಳನ್ನು ಹೇಳುವುದರಲ್ಲಿ ಅವರಷ್ಟು ಸಾಮರ್ಥ್ಯ ಇತರರಿಗೆ ವಿರಳ.

ಒಂದು ದಿನ ಇವರೊಂದಾಗಿಯೇ ಸಂಚಾರ ಮಾಡುತ್ತಿದ್ದಾಗ ಓರ್ವ ಯಾತ್ರಿಕನನ್ನು ಕಂಡರು. ಶುಭ್ರವಾದ ಉಡುಪುಗಳನ್ನು ತೊಟ್ಟಿದ್ದ—ಆ ಯಾತ್ರಿಕ. ಹೇಗಾದರೂ ಆ ಯಾತ್ರಿಕನ ಉಡುಪುಗಳನ್ನು ಕಸಿಯ ಬೇಕೆಂಬ ನಿರ್ಧಾರ ಮಾಡಿ ಅತನನ್ನು ಯುವಕರು ಸಮೀಪಿಸಿ ಸಂಭಾಷಣೆಗೆ ಪ್ರಾರಂಭಿಸಿದರು.

ಸ್ವಲ್ಪ ಹೊತ್ತಿನ ಸಂಭಾಷಣೆಯ ಪರಿಣಾಮವಾಗಿ ಅವರು ಪರಸ್ಪರ ಸ್ನೇಹಿತರಾದರು.

ಕೊನೆಗೆ ಒಂದು ಕಥಾ ಸ್ಪರ್ಧೆಗೆ ನಿರ್ಣಯವಾಯ್ತು. ಪ್ರತಿಯೊಬ್ಬನೂ ಒಂದೊಂದು ವೀರ ಸಾಹಸಿಕ ಕಥೆ ಹೇಳುವುದು, ಕಥೆಯ ಸತ್ಯ ಸ್ಥಿತಿಯನ್ನು ಯಾರೂ ಪ್ರಶ್ನಿಸಕೂಡದು. ಸಂದೇಹ ಪ್ರಕಟಿಸಿ ಪ್ರಶ್ನಿಸುವವನು ಕಥೆ ಹೇಳಿದವನ ಗುಲಾಮನಾದರೂ ಸಿದ್ಧವಾಗಿರಲೂ ಬೇಕು. ಈ ಶರ್ತಗಳನ್ನೆಂಗೀಕರಿಸಿ ಸ್ಪರ್ಧೆಯನ್ನಾಯ ಕಥೆಗಳ ಸಿದ್ಧತೆಯೂ ಆಯ್ತು.

ಹೆಡ್ಡನಾದ ಆ ಯಾತ್ರಿಕನು ಈಸಲ ಸಿಕ್ಕಿಬಿದ್ದನೆಂದು ನಾಲ್ವರು ಯುವಕರೂ ಮನಸ್ಸಿನಲ್ಲೇ ಅನಂದಭರಿತರಾದರು. ಸತ್ಯ ಉದ್ದೇಶ ಸಾಧನೆಯೊಗುವ ಗಳಿಗೆ ದೂರವಿಲ್ಲವೆಂದೂ ನಂಬಿ ಹಿಗ್ಗಿದರು. ತಾವು ಹೇಳುವ ಕಥೆಗಳು ಅಸಂಭಾವ್ಯಗಳೂ ಅಸಂಬದ್ಧಗಳೂ ಆಗಿ ಮುಂದಿನವಾದ ಯಾತ್ರಿಕನು ಸ್ವಾಭಾವಿಕವಾಗಿಯೇ ಪ್ರಶ್ನಿಸದಿರಲು. ಸಾಕು; ಅತನ ಶರೀರದ ಪ್ರತಿಯ ಗುಲಾಮನಾಗುವನು. ಅವನ ವಶವಿರುವ ಉಡುಪುಗಳೂ ಇತರ ಸಾಧನಗಳೂ ಹೊಕ್ಕಸಕ್ಕೆ ಬಿದ್ದಂತೆಯೇ ಸರಿ. ಹೀಗಿತ್ತು ಯುವಕರ ಚಿಂತಾಗತಿ.

ಐದೂ ಸೇರಿ ಗ್ರಾಮದ ಪ್ರಧಾನಿಯನ್ನು ಸಮೀಪಿಸಿದರು. ಅತನ ಸಮಕ್ಷಮ ಸ್ಪರ್ಧೆ ಪ್ರಾರಂಭವಾಯ್ತು.

ಒಂದನೇ ಕಥೆ

"ನಾನು ಹುಟ್ಟುವುದಕ್ಕೂ ಮೊದಲ ಸಂಭವ. ನಮ್ಮ ಮನೆಯ ಹಿರಿ ಮೂಲೆ ಮರದಿಂದ ಕೆಲವು ಹಣ್ಣುಗಳನ್ನು ಕೊಯ್ದು ತರುವಂತೆ ತಾಯಿ ನನ್ನ ತಂದೆಯನ್ನು ಅಪೇಕ್ಷಿಸಿದಳು. ಮರವು ಎತ್ತರವಾಗಿದ್ದರಿಂದ ತನ್ನಿಂದ ಸಾಧ್ಯವಿಲ್ಲವೆಂದು ತಂದೆಯ ಉತ್ತರ ಬಂತು. ತಾಯಿಯು ನನ್ನ ಅಣ್ಣ-ತಮ್ಮಂದಿರಲ್ಲಿ ಹೇಳಿ ನೋಡಿದರೂ ವಿಫಲವಾಯ್ತು. ಅವರಿಗೂ ಸಾಧ್ಯವಿಲ್ಲವೆಂದಾಗಿತ್ತು ಉತ್ತರ. ತಾಯಿ ನಿರಾಶೆಪಟ್ಟಳು. ಇದೊಂದಾಗಿ ನನಗೆ ಬೇಸರವಾಯ್ತು. ಮನಸ್ಸನೊಂದಿತು. ತಾಯಿಯ ಅಪೇಕ್ಷೆಯನ್ನು ಪೂರೈಸದ ಮಗನಿದ್ದು ಪ್ರಯೋಜನವೇನು? ಯೋಚಿಸಾಣದಂತೆ ನಾನು ಕೂಡಲೇ ಮರ ಹತ್ತಿದೆ. ಹಣ್ಣುಗಳನ್ನು ಕೊಯ್ದು ತಂದು ಅಡಿಗೆ ಕೋಣೆಯಲ್ಲಿರಿಸಿದೆ. ಹಣ್ಣುಗಳನ್ನು ತಂದುದಾರೆಂದು ತಾಯಿಗೆ ತಿಳಿಯದಿದ್ದರೂ ಅವು ಲಭಿಸಿದ ಬಗ್ಗೆ ಸಂತೃಪ್ತಿಯಿತ್ತು."

ಕತೆಗಾರನು ಯಾತ್ರಿಕನ ಮುಖ ನೋಡಿದ.

ಈ ಕಥೆ ಹಸಿ ಹಸಿ ಸುಳ್ಳೆಂದೇ ಯಾತ್ರಿಕನು ಅಭಿಪ್ರಾಯ ಪಡುವುದಾಗಿ ಭಾವಿಸಿದ್ದನು. ಆದರೆ ಯಾತ್ರಿಕನು ಕಥೆಯನ್ನು ಅನುಮೋದಿಸಿದನು. ಮಿಕ್ಕವರೂ ಸಮ್ಮತಿಸಿದರು.

ಎರಡನೇ ಕಥೆ

"ನಾನು ಹುಟ್ಟಿ ಒಂದು ವಾರವಾಗಿರಬಹುದು. ನಾನು ಒಂದು ಕಾಡಿನಲ್ಲಿ ಪಡೆಯುತ್ತಿದ್ದೆ. ಒಂದೆಡೆ ದಾರಿಯ ಬಳಿ ಬೈನಿ ಮರದ ತುದಿಯಲ್ಲಿ ತುಂಬಾ ಹಣ್ಣುಗಳು ಗೊಂಚಲು ಗೊಂಚಲುಗಳಾಗಿದ್ದವು. ನನಗೆ ಚಿಪ್ಪಾಗಿ ಹಸಿವೆಯಾಗಿತ್ತು. ಮರ ಹತ್ತಿ ಆ ಹಣ್ಣುಗಳೆಲ್ಲವನ್ನೂ ಕೊಯ್ದು ತಿಂದೆ. ಆ ಮೇಲೆ ತುಂಬಿದ ಹೊಟ್ಟೆ ಸಹಿತ ಕೆಳಕ್ಕಿಳಿಯಲು ಕಷ್ಟವೆಂದು ತೋರಿತು. ಸಮೀಪದ ಹಳ್ಳಿಗೆ ಓಡಿ ಹೋಗಿ ಒಂದು 'ಏಣಿ' ತಂದು ಅದರ ಸಹಾಯದಿಂದ ಕೆಳಕ್ಕಿಳಿದೆ. ಅಂದು ಆ ಏಣಿ ಸಿಗದಿರುತ್ತಿದ್ದರೆ ಇಂದಿಗೂ ನಾನು ಆ ಮರದ ಮೇಲೆಯೇ ಕುಳಿತಿರಬೇಕಿತ್ತು."

ಇಷ್ಟು ಹೇಳಿ ಮುಗಿಸಿದ ಕತೆಗಾರನನ್ನು ಯಾತ್ರಿಕನ ಮುಖ ನೋಡಿದನು. ಯಾತ್ರಿಕನು ಕಥೆಯನ್ನು ಅನುಮೋದಿಸಿದನು. ಮಿಕ್ಕವರಿಗೂ ಸಂದೇಹವಿರಲಿಲ್ಲ.

ಮೂರನೇ ಕಥೆ

"ನಾನು ಹುಟ್ಟಿ ಒಂದು ವರ್ಷದಲ್ಲೇ ವಾರ್ಧಿಕ್ಯವನ್ನು ಪ್ರವೇಶಿಸಿದ್ದಾಗಿನ ಸಂಭವವಿದು. ಓಡಿ ಹೋಗುತ್ತಿದ್ದ ಒಂದು ನವಿಲನ್ನು ಕಂಡು ನಾನು ಹಿಂಬಾಲಿಸಿದೆ. ನವಿಲು ಓಡಿ ಹೋಗಿ ಒಂದು ಹುಲ್ಲಿನ ಕಾಡನ್ನು ಪ್ರವೇಶಿಸಿತ. ನಾನು ಅದರ ಬಾಲವನ್ನು ಹಿಡಿದೆ. ಅದು ನವಿಲಾಗಿರದೆ ಹುಲಿಯಾಗಿತ್ತೆಂದು ಅಕಸ್ಮಾತ್ ನನಗೆ ಅರಿವಾದುದು. ಹುಲಿ ನನ್ನನ್ನು ತಿನ್ನಲು ಬಾಯಿ ತೆರೆಯಿತ್ತು. ನಾನು ಅದರೊಂದಿಗೆ ವಾದಕ್ಕಿಳಿದೆ. ನಾನು ಹಿಡಿದುದು ನವಿಲಿನ ಬಾಲವಾಗಿತ್ತೆಂದೂ ಅದ್ದರಿಂದ ಹುಲಿಯ ಬಾಲ ಹಿಡಿಯುವ ಉದ್ದೇಶವೇ ಇದ್ದಿರಲಿಲ್ಲವೆಂದೂ ಹುಲಿಯೆಂದು ತಿಳಿದಿದ್ದರೆ ನಾನು ಹೀಗೆ ಬಾಲ ಹಿಡಿಯುತ್ತಿರಲಿಲ್ಲವೆಂದೂ ಅದ್ದರಿಂದ ನನ್ನನ್ನು ಮಂಗುವುದು ನ್ಯಾಯವಲ್ಲವೆಂದೂ ವಾದಿಸಿದೆ. ಆದರೆ ಹುಲಿ ಕೇಳದು. ಅದರ ಅನ್ಯಾಯ ಸಹಿಸದೆ ನನ್ನನ್ನೂ ಸಿಟ್ಟು ಬಂತು. ನನ್ನ ಎಡಗೈಯಿಂದ ಹಿಡಿದಿದ್ದ ಅದರ ಬಾಲವನ್ನೆತ್ತಿ ನೆಲಕ್ಕೆ ಅಪ್ಪಳಿಸಿ ಒಂದು ಹೊಡೆತ ಹುಲಿ "ವನ್ ಬೈಕೂ..."

ಕತೆಗಾರನು ಯಾತ್ರಿಕನ ಮುಖವನ್ನು ನೋಡಿದನು. ಈ ಬಾರಿಯೂ ಯಾತ್ರಿಕನು ತಲೆಯಲ್ಲಾಡಿಸಿ ಅನುಮೋದಿಸಿದನು. ಮಿಕ್ಕವರೂ ಸಮ್ಮತಿಸಿದರು.

ನಾಲ್ಕನೇ ಕಥೆ

"ಕಳೆದ ವರ್ಷದ ಒಂದು ಸಂಭವವನ್ನು ಹೇಳುತ್ತೇನೆ. ಒಂದು ದಿನ ನಾನು ದೋಣಿಯೇರಿ ಮೀನುಹಿಡಿಯಲು ಹೋದೆ. ನನ್ನಂತೆಯೇ ಇತರರೂ ಬಂದಿದ್ದರು. ಆದರೆ ಒಂದೇ ಒಂದು ಮೀನಾದರೂ ಹಿಡಿಯಲು ಸಿಗಲಿಲ್ಲ. ನನಗೆ ಮಾತ್ರವಲ್ಲ; ಯಾರಿಗೂ ಇಲ್ಲ. ಇದರ ಕಾರಣವೇನೆಂದು ತಿಳಿಯಬೇಕೆಂದು ನದಿಯ ತಳವನ್ನೇ ಪರಿಶೋಧಿಸಲು ನಿರ್ಧರಿಸಿದೆ- ಕೀರಲ್ಲಿ ಮುಳುಗಿ ಕೆಳಕ್ಕೆ ಯಾತ್ರೆ ಪ್ರಾರಂಭಿಸಿದೆ. ಮೂರು ದಿನವಾದಾಗ ತಳಕ್ಕೆ ತಲಪಿದೆ. ಅಲ್ಲಿ ಒಂದು ಭೀಮಾಕೃತಿಯ ಮೀನು ಅದಕ್ಕಿಂತ ಸಣ್ಣ ಮೀನುಗಳೆಲ್ಲವನ್ನೂ ತಿಂದು ಮುಗಿಸುತ್ತಿದೆ. ಕೈಮುಷ್ಟಿಯಿಂದ ಒಂದು ಬಾರಿಸಿದೆ. ಮತ್ಸ್ಯಾವತಾರ ಕೋಪಗೊಂಡಿತು. ಅದು ಸತ್ತು ಮಗುಚಿ ಬಿತ್ತು. ನನಗೆ ಹಸಿವಾಗಿಯೂ ಇತ್ತು. ಅಲ್ಲಿಯೇ ಒಂದು ಒಲೆಗೆ ಬೆಂಕಿಹಚ್ಚಿ ಮತ್ಸ್ಯನನ್ನು ಸುಟ್ಟು ಸಂಪೂರ್ಣ ತಿಂದೆ. ಮತ್ತೆ ಮೇಲಕ್ಕೆ ಬಂದು ದೋಣಿ ಹತ್ತಿ ಮನೆ ಕಡೆಗೆ ತೆರಳಿದೆ..."

ಇದು "ಹಸಿ ಸುಳ್ಳು" ಎಂದೇ ಯಾತ್ರಿಕನು ಹೇಳುವನೆಂದು ಭಾವಿಸಿದ್ದ ಮಣಲ ದಂಡೆಯ ಜನರ ಚಿಂಬಿ ಕುಸಿಯಿತು.

ಬುದ್ಧಿವಂತನಾಗಿದ್ದ ಯಾತ್ರಿಕನು ಜಾಣ್ಮೆಯಿಂದಲೇ ಕಥೆಯನ್ನು ಅನುಮೋದಿಸಿದಾಗ ಯುವಕ ತಂಡಕ್ಕೆ ನಿರಾಶೆಯಾಯ್ತು.

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ

ಊಟ, ಉಪಾಹಾರಾದಿಗಳಿಂದ ಕೂಡಿದ
ಮನಮೆಚ್ಚುವ ಸರ್ವ ಸೌಕರ್ಯಗಳ

ವಸತಿ ಗೃಹ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಸೂಪ, ಸಕಲ ವಿಧದ ತಿಂಡಿತಿನಿಸು, ಪಾಕೀಯುಸಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S.C. No. 161 of 1968.

Between :

ವೆಂಕಟ್ರಮಣ ನೋಡಯೊಡೆ — ವಾದಿ,
ಮತ್ತು
ನರಸಿಂಹ ಶೆಟ್ಟಿ — ಪ್ರತಿವಾದಿ.

ಪ್ರತಿವಾದಿ: ನರಸಿಂಹ ಶೆಟ್ಟಿ, ಬೆಳೂರು ರಾಮಯ್ಯ ಶೆಟ್ರ ಮಗ, ಕುಂದಾಪುರ ತಾಲೂಕು ಕಾಳಾವರ ಗ್ರಾಮದಲ್ಲಿರುವವನು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ವಾದಿ ತಾ. 2.6.1965ರಲ್ಲು ಬರೆಕೊಟ್ಟ ದಿನಾಂಕ ಪ್ರೊ.ನೋಟಿನ ಅಸಲು, ಬಡ್ಡಿ ಅಪೇಜು ವಸೂಲು ವಗೈರೆ ನಿವೃತ್ತಿ ಕೇಳಿ ನಿಮ್ಮ ಮೇಲೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 5.9.1968ಕ್ಕೆ ಇಟ್ಟಿದೆ. ನಿಮ್ಮದೇನಾದರೂ ಅಕ್ಷೇಪಣೆ ಯಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದರಿ ಕೋರ್ಟು ಮುಂದೆ ಹಾಜ್ರಾಗಿ ಜಾಬೀರು ಮಾಡಿಕೊಳ್ಳತಕ್ಕದ್ದು, ತಪ್ಪಿದ್ದೆ ನಿಮ್ಮ ಗೈರು ಹಾಜರಿಯಿಂದ ನಿಕಾಲ್ಯವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ

K. Balachandra Rao,
Advocate for Plaintiff,
Udipi, Dt. 16—8—1968.

ಎಲ್ಲಾಕಡೆ ಸಿದಿತ ಮಾಡ್ಲ ನೋಪ್ಪುಗಳ್ ಉಪಾಯದ
10 ವರ್ಷ

ಫೋನ್ : 526
ಸಂಪುಟ ೪೭
VOL. 47
ಸಂಚಿಕೆ ೫೨
No. 52

ನವಯುಗ

ಉಡುಪಿ ೨೯—೮—೧೯೬೮

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಿಸ್ತರಣೆ ಎಂದಿಗೆ?

ಮಲ್ಪೆ ಪಶ್ಚಿಮ ಕರಾವಳಿಯ ಸಹಜ ಬಂದರು. ಇದರ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರಕಾರ ತಾತ್ವಿಕವಾಗಿ ಒಪ್ಪಿಕೊಂಡಿದೆ ಎಂದು ಸುದ್ದಿ ಬಂದಿದೆ. ಆದರೆ, ಅಭಿವೃದ್ಧಿಯ ಕಾರ್ಯಕ್ರಮ ತೊಡಗಬೇಕಾದರೆ ಇನ್ನೂ ಒಂದು ಪಂಚವಾರ್ಷಿಕ ಯೋಜನೆ ಮುಗಿಯಬೇಕಾದೀತು; ಪೂರ್ಣಗೊಳ್ಳಬೇಕಾದರೆ ಅದೆಷ್ಟು ಮಳೆಗಾಲಗಳು ದಾಟಬೇಕೋ ಏನೋ. ಇದರ ಜತೆಗೆ ಮಂಗಳೂರು-ಉಡುಪಿ ರೈಲು ದಾರಿಯ ಬಗ್ಗೆ ನಮ್ಮ ಪ್ರತಿನಿಧಿಗಳು ಒತ್ತಾಯಿಸಿದರಂತೆ. ಮಂಜೂರಾಗಿ ಕಾರ್ಯಾರಂಭಗೊಂಡ ದಾಸನ - ಮಂಗಳೂರು ರೈಲ್ವೆ ದಾರಿಯೇ ನನೆಗುದಿಗೆ ಬಿದ್ದಿದೆ. ಮಂಗಳೂರು—ಪಣಂಬೂರು ರೈಲು ಪ್ರಯಾಣಕ್ಕೆ ಸಿದ್ಧವಾಗುತ್ತಿದೆ ಎನ್ನುವಾಗಲೇ ಪ್ರವಾಹ ಪೀಡೆಯಿಂದ ಬಂದರ ಪ್ರದೇಶದಲ್ಲಿ ಅವ್ಯವಸ್ಥೆ ತಲೆದೋರಿತು. ಅಂತೂ ಇನ್ನೂ ಮೂರಾರು ಮಳೆಗಾಲ ದಾಟುವಷ್ಟರಲ್ಲಿ ಹಾಸನ—ಮಂಗಳೂರು—ಪಣಂಬೂರು ರೈಲು ದಾರಿ ಸಿದ್ಧವಾಗಬಹುದು— ಇದು ಆಶಾಜೀವಿಯ ಆಶೆ. ಸರಕಾರದ ಮಂದಗತಿ ನಮನವನ್ನು ಅರಿತುಕೊಂಡಿರುವ ಪ್ರತಿನಿಧಿಗಳು ಮಂಗಳೂರು—ಉಡುಪಿ ರೈಲುದಾರಿಗೆ ಬಲವಂತ ಮಾಡತೊಡಗಿದ್ದ ಸಹಜವೇ. ಏಕಂದರೆ, ಈ ರೈಲುದಾರಿಯೂವ ಮಾರ್ಗವಾಗಿ ಹೋಗಬೇಕೆಂದು ಜಗಳಾಡಿ ಇತ್ಯರ್ಥಗೊಳ್ಳಬೇಕು. ಪಣಂಬೂರಿನಿಂದ ಮೂಲ್ಕಿ ಮಾರ್ಗವಾಗಿಯೋ, ಕಾರ್ಕಳ ಮಾರ್ಗವಾಗಿಯೋ ಅಥವಾ....ಎಂಬ ನಿರ್ಧಾರವಾಗಬೇಕು ತಾನೆ!

ರಾಜ್ಯದ ಕರಾವಳಿ ಭಾಗದ ಮಹಾನಗರ ಮಂಗಳೂರು. ಇದು ಪ್ರಬುದ್ಧ ಬಂದರಾಗುವುದಕ್ಕೆ ಮೊದಲೇ ವಿಮಾನ ನಿಲ್ದಾಣವಾಗಿತ್ತೆಂಬುದನ್ನು ಎಲ್ಲರೂ ಬಲ್ಲರು. ಪ್ರಧಾನಿ ಜವಾಹರಲಾಲ ನೆಹರು ಮತ್ತು ಶ್ರೀನಿವಾಸ ಮಲ್ಯರು ಪ್ರಥಮ ಸಾರ್ವತ್ರಿಕ ಚುನಾವಣೆಗಳ ಬೇಳೆಯಲ್ಲಿ ಇದೇ ನಿಲ್ದಾಣದಲ್ಲಿಳಿದು ನಗರಕ್ಕಾಗಮಿಸಿದುದನ್ನು ಯಾರೂ ಮರೆಯರು. ಸ್ವಾತಂತ್ರ್ಯೋತ್ತರದ ಬೆಳೆಣಿಕೆಯ ವರ್ಷಗಳಲ್ಲೇ ವಿಮಾನ ನಿಲ್ದಾಣ ರಚನೆಯ ಬಗ್ಗೆ ನಿರ್ಧಾರವಾಗಿ ಅದು ಪೂರ್ಣ ರೂಪೇಣ ಕಾರ್ಯಗತವಾಯಿತು. ನಗರದಿಂದ ಸುಮಾರು ೧೫ ಮೈಲಿ ದೂರ ವಿದ್ದರೂ, ಬಜಪೆಯ ನಿಲ್ದಾಣದಿಂದ ವರ್ಷದ ಎಲ್ಲಾ ದಿನಗಳಲ್ಲಿಯೂ ವಿಮಾನ ಪ್ರಯಾಣ ಸಾಧ್ಯವಾಯಿತು. ಬೊಂಬಾಯಿಗೆ ಮೂರ್ತ ಡಕೋಟಾ ವಿಮಾನಗಳು ೨೧ ಪ್ರಯಾಣಿಕರನ್ನು ಹೊತ್ತು ಮೂರು ಬಾರಿ ಹಾರುತಿದ್ದುವು. ಇದು ಅರಂಭಿಸಿದ ಬೆಂಗಳೂರು ಸೇವೆ ಲಾಭದಾಯಕವಲ್ಲದೆ ಹೋದುದರಿಂದ ನಿಂತುಹೋದರೂ ಮಂಗಳೂರಿನಿಂದ ವಿಮಾನಗಳು ತುಂಬಿಯೇ ಹಾರುತಿದ್ದುವು. ದಕ್ಷಿಣ ಕನ್ನಡ ಮತ್ತದರ ಅಸುಪಾಸಿನ ಜಿಲ್ಲೆಗಳವರು ಇಷ್ಟೊಂದಲೇ ಪ್ರಯಾಣ ಮಾಡತೊಡಗಿದರು. ಹೀಗೆ ವಿಮಾನವು ಶ್ರೀಮಂತರ ವಾಹನವೆಂದು ಹೆಸರಾದರೂ ಪ್ರಯಾಣ ಮಾಡಬಲ್ಲ 'ಶ್ರೀಮಂತ'ರಿಗೆ ಇಲ್ಲಿ ಅಭಾವ ಬೀಳಲಿಲ್ಲ. ಸೀಟುಗಳು ಸಿಗಬೇಕಾದರೇನೇ ತ್ರಾಸವೆನಿಸುವ ದಿನಗಳೂ ಬಂದುವು. ಹೆಚ್ಚು ಸೀಟುಗಳಿರುವ ವಿಮಾನಗಳೇಕೆ ಹಾರಬಾರದು? ದೆಚ್ಚಿನ ಸರ್ವಿಸುಗಳೇಕೆ ಆಗಬಾರದು? ಎಂದವರೂ ಇದ್ದರು. ರಾಜ್ಯದ ಹಾಲಿ ಮುಖ್ಯ ಮಂತ್ರಿ ಆಗಿನ ಲೋಕೋಪಯೋಗಿ ಮಂತ್ರಿ ವೀರೇಂದ್ರ ಪಾಟೀಲರು ಫಾರಿನ್ ಫ್ರೆಂಡ್‌ಶಿಪ್ ವೈಕಾಂಟ್‌ಗಳು ಬರುವಂತೆ ಮಾಡಬೇಕೆಂದರು. ಮುಂದೆ ವಿಸ್ತರಣೆಗಾಗಿ ವಿಮಾನ ನಿಲ್ದಾಣದನ್ನು ದುಬ್ಬವ ಅಜ್ಜಿ ನಾಗರಿಕ ವಿಮಾನಯಾನ ಸಚಿವ ಶಾಖೆ ಮುಂದೆ ಹೊರಟಿತು.

ಹೀಗೆ ಮಂಗಳೂರಿನ ವಿಮಾನ ನಿಲ್ದಾಣ ಮುಚ್ಚಿ ಒಂದು ಮಳೆಗಾಲ ಕಳೆಯುತ್ತ ಬಂತು. ೧೯೬೮ ಎಪ್ರಿಲ್ ತಿಂಗಳೊಳಗೆ ವಿಸ್ತರಣೆ ಪೂರ್ಣಗೊಳ್ಳುತ್ತದೆ ಎಂದು ಮೊದಲು ಹೇಳಲಾಗಿತ್ತು. ಆದರೆ, ಅದು ಹಾಗಾಗಲಿಲ್ಲ. ನೀರಿನ ಅಭಾವದಿಂದ ವಿಸ್ತರಣಾ ಕಾರ್ಯಕ್ಕೆ ತಡೆಯೊಗಿದೆ. ಜೂನ್ ತಿಂಗಳ ಕೊನೆಯೊಳಗೆ ಕೆಲಸ ಮುಗಿಯುತ್ತದೆ ಎನ್ನಲಾಯಿತು. ದುರದೃಷ್ಟವಶದಿಂದ ಮಳೆ ಆರಂಭವಾಗುವಾಗಲೇ ಜೂನಿನಲ್ಲಿ ಎರಡು ಬಾರಿ ಕಳೆಯಿತು, ಅನಂತರ ತೊಡಗಿದ ಮಳೆಯಾದರೂ ತಡೆಯಲಿಲ್ಲ. ಆಕಾಶವೇ ತೂತು ಬಿದ್ದಂತೆ ಭೋರೆಂದು ಮಳೆ ಸುರಿಯುತ್ತಲೇ ಇತ್ತು, ಧಾರಾಕಾರವಾಗಿ ಸುರಿಯುವ ಮಳೆಯಲ್ಲಿ ವಿಸ್ತರಣಾ ಕಾರ್ಯ ಹೇಗೆ ಸಾಧ್ಯವಾದೀತು? ಮಳೆ ಕಡಮೆಯಾದ ಮೇಲೆ ಕಾರ್ಯಾರಂಭವಾಗಿದ್ದರೂ ಹಿಂದೆ ಬೇಳೆದ ಅವಧಿಯಂತೆ ಇಷ್ಟರಲ್ಲೇ ನಿಲ್ದಾಣ ಸಾರಿಗೆಗೆ ತೆರೆಯಬೇಕಿತ್ತು, ಆದರೆ, ಸಪ್ತಂಬರ-ಅಕ್ಟೋಬರಗಳ ಹೆಸರುಗಳು ಮಂಗಮಾಯವಾಗಿ ಈಗ ಜನವರಿಯೂ ಕೆಲವರ ಬಾಯಿಂದ ಕೆಳಬರುತ್ತಿದೆ. ಇತ್ತೀಚೆಗೆ ರೈಲ್ವೆ ಸಚಿವ ಪೂರ್ಣಚ್ಚರವರು ಜಿಲ್ಲೆಯನ್ನು ಜುಲೈಯಲ್ಲಿ ಸಂದರ್ಶಿಸಿದಾಗ ಈ ವಿಷಯವನ್ನು ನಾಗರಿಕ ವಿಮಾನೋಡ್ಡಾಣ ಮಂತ್ರಿ ಡಾ| ಕರಣಸಿಂಗರೊಡನೆ ಪ್ರಸ್ತಾಪಿಸುವ ಭರವಸೆ ಕೊಡಿದ್ದರು. ಅವರು ತನ್ನ ಪ್ರಯತ್ನವನ್ನು ಮಾಡಿರಬಹುದು. ಆದರೆ, ಕೇಂದ್ರ ಸರಕಾರದ ಕಾರ್ಯ ನೀತಿಯ ಈ ರೀತಿ ವಿಳಂಬವಾಗುವುದಕ್ಕೆ ಕಾರಣವೇನು? ಬೆಂಗಳೂರು ರೇಲ್ವೆ ನಿಲ್ದಾಣದ ವಿಸ್ತರಣೆಯ ಕಾರ್ಯವೂ ಆರಂಭವಾಗಿ ಪೂರ್ಣಗೊಳ್ಳಬೇಕಾದರೆ, ಅದೆಷ್ಟು ವರ್ಷಗಳು ಉರುಳಲಿಲ್ಲ? ಮಂಗಳೂರು ಬಂದರ ಯೋಜನೆಯು ಕಾರ್ಯವೆಂತು ನಡೆಯುತ್ತಿದೆ! ಇದೇ ಬಗೆಯ ಹಲವಾರು ಉದಾಹರಣೆಗಳನ್ನು ಕೊಡಬಹುದು. ಯೋಜನೆಯನ್ನು ಆರಂಭಿಸಿ ಇರುವೆಯಂತೆ ನಡೆಸಿದರೆ, ಅದರಿಂದ ವೆಚ್ಚವೂ ಹೆಚ್ಚು, ನಷ್ಟವೂ ಹೆಚ್ಚು, ಕೇಂದ್ರ ಸರಕಾರದ ಮೇಲೆ ಒತ್ತಾಯ ಹೇರಬಲ್ಲ, ನಮ್ಮ ನ್ಯಾಯವಾದ ಬೇಡಿಕೆಗಳನ್ನು ಅದರ ಮುಂದಿಡಬಲ್ಲ ಕೆಚ್ಚೆದೆಯ ಕಲಿಗಳು ಇಲ್ಲ— ಎಂತಲೇ ಈ ಬಗೆಯ ಅನ್ಯಾಯ ನಡೆಯುತ್ತಿದೆ. ಗಡಿ ವಿವಾದದ ಸಂಬಂಧದಲ್ಲಿ ಮಹಾಜನ ವರದಿ ನನೆಗುದಿಗೆ ಬೀಳುತ್ತಿರುವುದಕ್ಕೂ ಇದೇ ಕಾರಣ ತಾನೆ? ಹೀಗಾಗದಂತೆ ನಮ್ಮ ಪ್ರತಿನಿಧಿಗಳು ಜಾಗ್ರತರಾಗುವ ಕಾಲವೀಗ ಸನ್ನಿಹಿತವಾಗಿದೆ.

ಶ್ರೀ ಸಾಮಾನ್ಯ ಗಾಂಭೀರ್ಯ

ಪರೀಕ್ಷೆಗಳಲ್ಲಿ ಅನುತ್ತೀರ್ಣತೆಯ ಪ್ರಮಾಣಮಾರ್ಚಿಯಿಂದ ಸಪ್ತಂಬರಕ್ಕೆ ಸಪ್ತಂಬರದಿಂದ ಮಾರ್ಚಿಗೆ ಹೆಚ್ಚುತ್ತ ಬರುತ್ತಿರುವುದು ವಿದ್ಯಾರ್ಥಿಗಳಿಗೂ ಅವರ ಹೆತ್ತವರಿಗೂ ಸರಕಾರಕ್ಕೂ ವಿಶ್ವವಿದ್ಯಾಲಯಗಳಿಗೂ ಶಿಕ್ಷಣಾಂಗದಲ್ಲಿ ದುಡಿಯುವವರಿಗೂ ಎಲ್ಲರಿಗೂ ಏಕ ಸಮಾನದ ಸಮಸ್ಯೆ. ಇದನ್ನು ಹೇಗೆ ಕಡಿಮೆ ಮಾಡಬೇಕು ಎಂಬುದೊಂದು ಬಲೆ. ಇತ್ತೀಚೆಗೆ ಸರಕಾರವು ಶಿಕ್ಷಕರನ್ನು, ವಿದ್ಯಾರ್ಥಿಗಳನ್ನು 'ದಂಡಿಸುವ' ಹಲವು ಬಗೆಯ ಅಜ್ಞೆಗಳನ್ನು ನೀಡಿದೆ. ಇತ್ತೀಚೆಗೆ ಸಂಘಟನೆಗಳು ಬೆಳೆಯುತ್ತ ಅನ್ಯಾಯಗಳನ್ನೇ ನ್ಯಾಯವೆಂದು ಹರಿಗಣಿಸಬೇಕೆಂದು ಒತ್ತಾಯ ಹೇರುವಲ್ಲಿ ಎಲ್ಲ ರಂಗದಲ್ಲಿಯೂ ಸಫಲತೆ ಕಾಣುತ್ತಿದೆ. ಶಿಕ್ಷಣಾಲಯಗಳಲ್ಲಿ ಕಾರಖಾನೆಗಳಲ್ಲೂ, ಅಂಗಡಿಗಳಲ್ಲೂ ಘೇರಾವೋ ಸರ್ವವ್ಯಾಪಿಯಾಗಿದೆ. ನ್ಯಾಯದ ತಲೆ ತಗ್ಗಿಸುವುದಕ್ಕೆ ಅಶಿಸ್ತು ಒಂದು ಬಲವಂತದ ಸಾಧನ. ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಪರೀಕ್ಷಾ ನಿಯಮಗಳನ್ನು ಭದ್ರಮುಷ್ಟಿಯಿಂದ ಸಡಿಲಬಿಟ್ಟು ವಿದ್ಯಾರ್ಥಿಗಳ ಕೇಳಿಕೆಗಳನ್ನು ಸನ್ನಿಸುವ ಉದಾರತೆ ತೋರಿದೆ. ಈ ಸಡಿಲಿಕೆಯಿಂದ ಧಾರಾಳ ಪ್ರಮಾಣದಲ್ಲಿ ಚೆಕ್ಕ—ಸಟ್ಟ ಕಾರಣಗಳಿಗಾಗಿ ಅನುತ್ತೀರ್ಣರಾಗುವವರ ಸಂಖ್ಯೆ ಕಡಮೆಯಾಗುವ ನಿರೀಕ್ಷೆಯಿದೆ. ವಿದ್ಯಾರ್ಥಿಗಳಲ್ಲಿನ ಅಶಾಂತಿಕೆ ದೂರಮಾಡುವಲ್ಲಿ ಈ ಕ್ರಮವು ಸಫಲವಾದೀತು; ವಿದ್ಯಾರ್ಥಿ ಶಿಕ್ಷಣಾಲಯಗಳ ಪಾಲಿಗೆ ಇದೊಂದು ಸಾಧನವಾದೀತು. ವಿಶ್ವವಿದ್ಯಾಲಯಗಳು ತನ್ನ ಹಳೆಯ ಧೋರಣೆಯನ್ನೂ ಬಿಡಬೇಕು. ಶ್ರೀಮದ್ಗಾಂಭೀರ್ಯದಲ್ಲಿ ನ್ಯಾಯಸಿದ್ಧ ವ್ಯಾವಹಾರಿಕ ಸಾಮಾಜಿಕ ರಂಗಗಳತ್ತವೂ ದೃಷ್ಟಿ ಹಾಯಿಸುವುದು, ಶ್ರೀ ಸಾಮಾನ್ಯ ಗಾಂಭೀರ್ಯ ಧರಿಸುವುದೂ ಅಗತ್ಯವೆನಿಸುತ್ತದೆ. ಈ ದಿಸೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯವೊಂದು ಹೆಜ್ಜೆ ಮುಂದಿಟ್ಟದ್ದು ಪ್ರಶಂಸನೀಯ.

> **ವಚನ ಸುಧೆ**
>
> ನಿಷ್ಪ್ರಜ್ಞ ವಾಪಮೇದ
> ಶಿಷ್ಯ ಮೂರಭೇದ ನರಃ
> ಪುಣ್ಯಂ ಪ್ರಜ್ಞಾಂ ದರ್ಶಯತಿ
> ಕ್ರಿಯಾಮಾಣಂ ಪುನಃ ಪುನಃ
>
> ಬುದ್ಧಿಗೇಡಿಯು ಯಾವಾಗಲೂ ಪಾಪ ಮಾಡುತ್ತಿರುತ್ತಾನೆ. ಪದೇ ಪದೇ ಪುಣ್ಯ ಮಾಡುವುದರಿಂದ ಪುಣ್ಯ ಬುದ್ಧಿಯು ಬೆಳೆಯುತ್ತದೆ.

ಸ್ವಾತಂತ್ರ್ಯ ದಿನಾಚರಣೆ

ಮಂಡ್ಯ ಟಿ. ಡಿ. ಸಂ.ರಾಮಾಡು ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯೋಪಾಧ್ಯಾಯ ಶ್ರೀ ಯು. ಶುಕನಾಥ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳಲ್ಲಿ ಉಮಾನಾಥ ಶೆಟ್ಟಿ, ಮಂಜಯ್ಯ ಶೆಟ್ಟಿ, ಪ್ರಸನ್ನ ಕುಮಾರ ಶೆಟ್ಟಿ, ನರಸಿಂಹ ಗಾಣಿಗ, ಸೂಲಿಯಣ್ಣ ಶೆಟ್ಟಿ, ರವೀಂದ್ರನಾಥ ಶೆಟ್ಟರು, ಅಧ್ಯಾಪಕರಲ್ಲಿ ಸರ್ವಶ್ರೀ ಬಿ. ಶ್ರೀಧರ ಹೆಗ್ಡೆ, ಬಿ. ಮೆಹಬೂಬಿನ್ ಸಾಹೇಬ್, ಬಿ. ಪಾಂಡುರಂಗ ಆಚಾರ್ಯರೂ ಭಾಷಣಗೈದರು.

ಅನಂತರ ರತ್ನಾಕರ ಹೆಗ್ಡೆ, ಮಂಜಯ್ಯ ಶೆಟ್ಟಿ, ಸೋಮೇಶ್ವರ ಶಾಸ್ತ್ರಿ, ಮೋಹನದಾಸ ಶೆಟ್ಟಿ, ನಂದಾಪ್ಪ ಶೆಟ್ಟಿಯವರಿಂದ ರಾಷ್ಟ್ರ ಮಂಜರಿ ಕಾರ್ಯಕ್ರಮ ಜರಗಿತು ಬಳಿಕ ವಿದ್ಯಾರ್ಥಿ ಮುಖಂಡ ಕೊರಗಯ್ಯ ಶೆಟ್ಟಿಯವರಿಂದ ಧನ್ಯವಾದ ಸಮರ್ಪಣೆಯಾಯಿತು.

ನರಸಣ್ಣನ ಸರಸ

ಪಂಜಾಬಿನ ರಾಷ್ಟ್ರಪತಿ ಆಳಿಕೆಗೂ ಬಂದಿತು...ಮುಂದಿನ ಸರದಿ ಯಾರದ್ದು?

ಮುಖಪತ್ರ
—
ವಿಘ್ನಾಧಿಪತಿ
ವಿಘ್ನೇಶ್ವರ

ಹಡಿಯಚ್ಚು—
ಶ್ರೀ ಕೃಷ್ಣಾಪುರ ಮಠದ ಕೃಷ್ಣಿ

ಗೇಹರಾಜ್ಯದಲ್ಲಿ

ಧೈರ್ಯದಿಂದ ಉಸಿರಾಡಲೆ?

"ಕೇಳಿದ್ದೇನೇ, ನಿನ್ನ ಇಂದಿರಮ್ಮ ಮತ್ತೊಂದು ಮೇಚಿಲ್ಲಿ ಬಿದ್ದು ಬಿಟ್ಟು...."

"ನನ್ನ ಇಂದಿರಮ್ಮ? ಯಾರ್ರಿ?'

'ಅಯ್ಯೋ, ಸದ್ದಿ, ನನ್ನ ಇಂದಿರಮ್ಮ, ಛಾ ಇಂದಿರಮ್ಮಾಂತ ಭಾರಿ ಮೇಲ್ದೆಡೆಯಲ್ಲಾ, ಎಷ್ಟು ಬೇಗ ಮರವೆ ಬಂದ್ಬಿಟ್ಟಯ್ತು?'

'ಓ, ನಮ್ಮ ಪ್ರಧಾನಿ...'

"ಹಲ್ಲಿಂ ಅವರೇ...'

"ಎಂಥದ್ರಿ ಹೊಸ ಸೇಚು? ಏನು ಪಾಕಿಸ್ತಾನ ಮತ್ತೆ ಆಕ್ರಮಣ ಮಾಡಿತೇನ ?"

"ಅದು ಹಳೆಯದ್ದೇ. ಸದ್ಯ ಕಡೆಯುವುದರಲ್ಲೇ ಇದೆ. ಆಗೊಂದು ಈಗೊಂದು ಸೀರ್ಪನಿ ಉಸುರುತ್ತೇನ್ನು. ಆದರೆ, ಹೊಯ್ಯೋಕೆ ಇನ್ನೂ ಕೆಲಕಾಲ ಬೇಕಾಗಬಹುದು....'

'ಮತ್ತೆ ಕೆಂಪು ಚೀನ....'

'ಛೆ...ಛೆ..ಅದು ಆಂದಿನಿಂದಲೂ ಬಿಸುಗುಟ್ಟುವುದನ್ನು ಬಿಟ್ಟಿಲ್ಲ. ಆದರೆ, ಈಗ ಪಡೆದದ್ದು ಬೇರೆನೇ...."

"ಏನ್ರಿ ಅದು?"

"ನೋಡ', ಅವರ ಸಚಿವ ಸಂಪುಟದ ಶ್ರೀ ಅಶೋಕ ಮೆಹತಾರು ರಾಜಿನಾಮೆ ಕೊಡ್ತಿದ್ರಂತೆ...."

"ಅಯ್ಯೋ, ಅದ್ರಲ್ಲೇನೂಂತೆ? ಅದೆಷ್ಟೋ ಜನ ಮಂತ್ರಿಗಳು ರಾಜೀಕೊಟ್ಟಿದ್ದಾರೆ. ಅದೂ...'

"ಅದು ಸರೀನ್ನು, ಅದ್ರೂ..."

'ನೋಡಿ, ಸೂತಿಗೆ ಹೇಳ್ತೇನೆ. ಛಾಗ್ಲ ರಂಥವ್ರು ರಾಜಿನಾಮೆ ಕೊಟ್ರೂ ಛಮ್ಮ ಇಂದಿರಮ್ಮ ಕಂಗೆಡಲಿಲ್ಲ. ಮತ್ತೆ ಈ ಅಶೋಕ ಮೆಹತಾ...'

"ಹ್ಹಾ...ಹ್ಹಾ.....ನೋಡ', ನೀನಿಲ್ಲಿಯೇ ಜಾರಿ ಬಿದ್ದಿಬೇಡ....."

'ಯಾಕೆ?"

'ಮೆಹತಾರು ಸ್ವತಂತ್ರ ಪಕ್ಷದಿಂದ ಯೋಜನಾ ಆಯೋಗದ ಉಪಾಧ್ಯಕ್ಷ. ಮತ್ತೆ ಕಾಂಗ್ರೆಸ್ ಸೇರಿ ಯೋಜನಾ ಮಂತ್ರಿಯಾದವರು. ಮುಂದೆ ಅವರ ಖಾತೆ ಖದಲಾಯಿತೆನ್ನು. ಸಮಾಜವಾದದ ಅದರ್ಶದಿಂದ ತುಂಬಿ ತುಳುಕಾಡಿದ ಮೆಹ್ತಾ ಅಧೀಕ್ಷಿತವಾಗಿಯೇ ಸಕ್ರಿಯ ರಾಜಕಾರಣಕ್ಕೆಳಿದರು, ಅಂತೆಯೇ ನಿರ್ಗಮಿಸಿದರು...'

"ಓ, ನಮ್ಮ ಇಂದಿರಮ್ಮ ಬೇರೊಂತ ಅವರನ್ನು ಕರೆದದ್ದು. ಅಲ್ರಿ, ಹಾಗೆ ಅಗೋಕೆ ಕಾರಣವಾದ್ರೂ ಏನು?"

"ಮತ್ತೇನನ್ನೋದು? ಜೆಕೊಸ್ಲೋವಾಕಿಯೂದ ಹೆಸ್ರು ಕೇಳಿದ್ದಿಯಲ್ಲಾ?"

"ಅಂದ್ರೆ...ನೋಡಿ ಸೋವಿಯತ್ತಿನೊಡನೆ ಕಾತ್ತಿಳ ಭಿನ್ನತೆಯಿದ್ದ ದೇಶ ತಾನೆ? ಮತ್ತೆ, ಮೊನ್ನೆ ಮೊನ್ನೆ ರಶ್ಯದೊಡನೆ ಮಾತುಕತೆ..."

"ಹ್ಹಾಂ...ಅದೇ. ಅದರ ಅಧ್ಯಕ್ಷ ಡುಬ್ಚೆ...'

'ಅಲ್ರಿ, ಜೆಕ್ಕಿಗೂ ಮೆಹ್ತಾರಿಗೂ ಯಾವ ಸಂಬಂಧ?'

'ತುಸು ಕೇಳೇ. ಜೆಕ್ಕಿಳಲ್ಲಿನ ಸುಧಾರಣಾವಾದ ತನಗೆ ಮುಳುವೆಂದು ರಶ್ಯ ಭಾವಿಸಿತು. ಕಮ್ಯುನಿಸ್ಟ್ ದೇಶಗಳ ವಾರ್ಸಾ ಒಕ್ಕೂಟದ ಲಾಭ ಪಡೆಯಿತು. ಪೂರ್ವ ಜರ್ಮನಿ, ಪೋಲೇಂಡ್, ಹಂಗೇರಿ ಮತ್ತು ಬಲ್ಗೇರಿಯಾಗಳನ್ನು ಕೂಡಿಕೊಂಡು ಧಾಳಿ ಮಾಡಿ ಜೆಕ್ಕನ್ನು ವಶಪಡಿಸಿಕೊಂಡಿತು...'

'ಓಯ್, ಇದೆಂಥದ್ರಿ?'

"ಎಂಥದೊಂದ್ರೆ, ಮಿಂಚಿನ ಧಾಳಿ...'

"ಅಲ್ರಿ, ಇದು ಆಕ್ರಮಣವಲ್ವೆ?'

'ಜೆಕ್ಕಿನಲ್ಲಿ ವಿದೇಶೀ ರಾಷ್ಟ್ರವೊಂದರ ಪ್ರೇರಣೆಯಿಂದಾಗಿಗಬಹುದಾದ ಕ್ರಾಂತಿಯನ್ನು ತಡೆಗಟ್ಟಲು, ವಾರ್ಸಾಕೂಟ ರಾಷ್ಟ್ರಗಳು ನೆರವಾದವು..."

"ಅಲ್ರಿ, ಇವ್ರು ಹೇಳುವ ಕ್ರಾಂತಿಯೆಂದರೆ, ಸುಧಾರಣೆ ಇರಬೇಕು. ತತ್ವ, ಸಿದ್ಧಾಂತಗಳನ್ನು ರೂಪಿಸುವ ಅಧಿಕಾರ ಒಂದು ದೇಶಕ್ಕೆ ಇಲ್ಲಾಂತಂದ್ರೆ...'

"ವಾರ್ಸಾ ಒಕ್ಕೂಟ ಅಂದ್ರೆ, ರಶ್ಯ ಮತ್ತದರ ಕೈಗೊಂಬೆಗಳ ಕೂಟ.'

"ಅಲ್ರಿ, ಹೀಗೆಲ್ಲಾ ಆದ್ರೆ, ಇವತ್ತು ಜೆಕ್ಕು, ನಾಳೆ ಬಲ್ಗೇರಿಯೂ...'

"ಹ್ಹಾಂ....ನಡೆದರೂ ನಡೆಯಬಹುದು. ವಾರ್ಸಾ ರಾಷ್ಟ್ರಕೂಟ ಇದನ್ನೇ ಸಮರ್ಥಿಸುತ್ತದೇಂತ ತೋರುತ್ತೆ..."

"ಹೀಗೆಲ್ಲಾ ಆದ್ರೆ, ಊರನ್ನು ಊರು ನಂಬುವುದು?"

'ಯಾರಿಗೆ ಊರೂ ಇಲ್ಲ. ಅವರವರ ತಲೆ ಮೇಲೆ ಅವರವರೇ ಕೈ...'

"ಅಲ್ರಿ, ಒಂದು ದೇಶದ ಸ್ವಾತಂತ್ರ್ಯ ಹರಣ ಅಂದರೆ, ಅಂತಾರಾಷ್ಟ್ರೀಯ ಸ್ವಾಯೋಲ್ಲಂಘನೆಯಿಲ್ಲವೆ?'

"ಉಳಿದವರು ಹಾಗನ್ನುತ್ತಾರೆ...'

"ಮತ್ತೆ ರಶ್ಯಾ ಏನನ್ನುತ್ತದೆ...'

"ವಿದೇಶೀ ಕ್ರಾಂತಿಯನ್ನು ತಡೆಗಟ್ಟಲು ವಾರ್ಸಾಕೂಟ ದೇಶಗಳು ಸೇನೆ ಕಳಿಸಬೇಕಾಯಿತು ಎನ್ನುತ್ತದೆ__'

'ಹ್ಹಾಂ .... ಅಸಹಾಯಕ ದೇಶಗಳು ಇಷ್ಟು ಧೈರ್ಯದಿಂದ ಉಸಿರಾಡ ವುದೇ ಕಷ್ಟ....ಅಲ್ರಿ, ಇದಕ್ಕೂ ಮೆಹ್ತಾರಿಗೂ...'

"ಅದೇ ನೋಡ', ರಶ್ಯವನ್ನು ಖಂಡಿಸುವ ಗೊತ್ತುವಳಿಯನ್ನು ಸರಕಾರ ವಿರೋಧಿಸಿತ್ತು. ಮೆಹ್ತಾ ಮೂತ್ರ ಪರವಾಗಿ ಮತ ಕೊಡಿಸಿದರು; ಹುದ್ದೆಗೆ ರಾಜಿನಾಮೆ ನೀಡಿದರು..."

"ಅಲ್ರಿ, ಇವೆಂತಹ ಕಾಕತಾಳೀಯೂಂತ. ವಾಸ, ಬೇಕೂಂತ ಕರೆ ತಂದವರು ಕೈಬಿಟ್ಟು ಹೋಗುವಾಗ...."

"ಏನು ಮಾಡೋದು? ಒಂದೊಂದು ಸಲ ಹೀಗೂ ಆಗುತ್ತೆ..."

'ಅಯ್ತಲ್ಲ! ಇನ್ನೇನು ಮಾಡೋಕಾಗುತ್ತೆ? ಅಲ್ರಿ, ಇಂದಿರಮ್ಮ ಏನು ಹೇಳ್ತಾರೆ?"

"ಹೇಳೋದೇನೆ? ರಶ್ಯ ಜೆಕ್ಕಿನಿಂದ ಬೇಗನೇ ನಿರ್ಗಮಿಸಬೇಕು ಅಂತ ರೆ.?"

'ಯಿಯತನಾಮದಿಂದ ಕಮೆರಿಕೆ ಕಾಲ್ತೆಗೆಯಬೇಕು, ಕಾಶ್ಮೀರದಿಂದ ಪಾಕಿಸ್ತಾನ ಕಂಬಿ ಕೀಳಬೇಕು...'

"ಈ ಬೇಕುಗಳ ಸಾಲಿನಲ್ಲಿ ಇಂದೊಂದು ಹೆಚ್ಚಿಸಬೇಕು__"

"ಅಲ್ರಿ, ಪಂಜಾಬದಲ್ಲಿ ಕಾಂಗ್ರೆಸ್ಸು ಗಿಲ್ಲರ ಸಂಪುಟಕ್ಕೆ ಕೊಡಿದ ಬೆಂಬಲವನ್ನು ಹಿಂದೆ ಪಡೆದುಕೊಂಡಿತಂತೆ, ಗಿಲ್ಲರು ರಾಜಿನಾಮೆ ಕೊಡಿದರಂತೆ...."

"ಮತ್ತೆ ಮಾಡುವುದಾದರೂ ಏನು?'

"ಇನ್ನು ಮುಂದೆ....?"

"ಮುಂದೇನು? ರಾಷ್ಟ್ರಪತಿ ಆಡಳಿತ ದ್ವಿಘೋಷಣೆ—ಮಧ್ಯಾವಧಿ ಚುನಾವಣೆ."

"ಅಲ್ರಿ, ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ ಮತ್ತೆ ಪಂಜಾಬ--ಹರಿಯಾಣಾದಲ್ಲಾ ಇತ್ತೂನ್ನಿ — ಗಂಗಾ ಸಿಂಧೂ ನದೀ ಬಯಲಿನಲ್ಲಿ ರಾಷ್ಟ್ರಪತಿ ಆಳಿಕೆ ಭಾರೀ ಹುಲುಸಾಗಿ ಬೆಳೆದಂತಾಯಿತು.'

"ಹ್ಹಾಂ...."

"ಅಲ್ರಿ, ಬೆಂಗಳೂರಲ್ಲಿ ಜತ್ತಿಯವರು ಮುಖ್ಯ ಮಂತ್ರಿಯವರಿಗೆ ಬೆದರಿಕೆಯ ಪತ್ರ ಬರೆದಿದ್ದಾರಂತೆ..."

"ಬೆದರಿಕೆಯೆಂಥದೆ? ಇದ್ದದ್ದನ್ನು ಇದ್ದಂತೆ ಬರೆದಿದ್ದಾರೆ. ಮಂತ್ರಿಗಳ ಸಂಪುಟ ಬೆಳೆಸಿಕೊಂಡು ಭದ್ರ ಸಚಿವ ಮಂಡಳಿ ರಚಿಸುವವರು ಜತ್ತಿಯವರೊಡನೆ ಈ ನಾಲ್ಕು ತಿಂಗಳಲ್ಲಿ ಇತ್ಯರ್ಥ ಮಾಡಿಕೊಳ್ಳಲು ಅಸಮರ್ಥರಾಗುವುದೆಂದರೆ, ಅವ ಜ್ಞೆ ತಾವ?"

"ಹ್ಹಾಂ....ಇರಬಹುದೂನ್ನಿ. ಅಲ್ಲಿಗೆ ಸರಿಯೂರುತ್ತೆ. ಮಂತ್ರಿಗಳಲ್ಲಿ ಭಾವೈಕ್ಯ ಮೂಡಿಸುವುದು ಹೀಗೇಂತ ಅಧ್ಯಯನ ಮಾಡಲೊಂದು ಉಪಸಮಿತಿ ನೇಮಿಸಿ ಅದಕ್ಕೆ ಜತ್ತಿಯವರನ್ನೇ ಅಧ್ಯಕ್ಷರಾಗಿ ಮಾಡಿದರೆ?'

"ಸಚಿವ ಸಂಪುಟದಲ್ಲಿ ಬೆರಳೆಣಿಕೆಯ ಜನರಿರಬೇಕು ಅಂತ ವರದಿ ಕೊಡಿಸೂರು....'

"ಅದೂ ಹೌದೂನ್ನಿ....'

"ಮತ್ತೆ ಯಾವುದಲ್ಲ?'

"ಎಲ್ಲವೂ ಹೌದೂನ್ನಿ...."

"ಅದ್ರೇನೇ ಸುಖ-ದುಃಖಗಳನ್ನು ಸಮವಾಗಿ ಅನುಭವಿಸುವ ಮನೋಬಲ ಬರುತ್ತೆ..."

'ಏನಾತ್ತಿದೀರಾ....'

'ಏನೂ ಇಲ್ಲಾನ್ನು...'

"ತಳೀತು ಬಿಡಿ. ಇಲ್ಲಾಂತೇನೆಯೆ?'

"ಅದು ನಂಗೂ ಗೊತ್ತು..."

'ಹ್ಹಾಂ....'

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O.S. No. 92/1968.

ಉಡುಪಿ ಶ್ರೀ ಶೀರೂರು ಮಠದ ಅಧಿಪತಿಗಳಾದ ಶ್ರೀ ಲಕ್ಷ್ಮೀವರತೀರ್ಥ ಸ್ವಾಮಿಯವರು— ವಾದಿರು.

ಮತ್ತು

ಶಾದಿ ಸೋಜ್ಯ, ಗಾಬ್ರಿಯೆಲ್ ಸೋಜರ ಮಗ, ಉಡುಪಿ ಹಾಲ್ಕಲ್ ಉಪ್ಪರಿಗ್ರಾಮದ ಕರಾರಿ ಎಂಬಲ್ಲಿರುವವರು—ಪ್ರತಿವಾದಿ.

ಇದರೊಳಗೆ

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ವಾದಿರ ಮೇರೆ ಒಳಗೆ ಚಾಲಗೇಣಿಗೆ ಅನುಭವಿಸುವ ಸ್ಥಿರಾಸ್ತಿಗಳ ಬಾಬ್ತು ನಿಮ್ಮಿಂದ ವಾದಿರಿಗೆ ಬಂತಕ್ಕ ಕಳೆದ ವಿಶ್ವಾಸ ಮತ್ತು ಸಂಭವ ಸಂವತ್ಸರಗಳ ಪೂರಾ ಗೇಣಿಗಳನ್ನು ಬಾಕಿಮಾಡಿಕೊಂಡಿರುವುದರಿಂದ ಸದ್ರಿ ಗೇಣಿ ಬಾಕಿಗಳ ವಸೂಲಿಬಗ್ಗೆ ವಾದಿರು ನಿಮ್ಮ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ತಾರೀಕು 4-9-1968ಕ್ಕೆ ಇಟ್ಟಿರುವುದರಿಂದ ಆ ಕಾರಣ ನೀವು ಉದಾಹರಿಸುವುದಿದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Venkatasubba Rao,
Advocate for Plaintiff.

ಉಡುಪಿ, ತಾರೀಕು 28.8.1968.

ಬೆಂಗಳೂರಿನಲ್ಲಿ

ಹಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 2

ಇಲ್ಲಿಗೆ ಸಂದರ್ಶನ ಕೊಡಲು ಮರೆಯದಿರಿ.
ಏಕೆಂದರೆ ಇಲ್ಲಿ ವರತ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.
ಹಾಗೂ ಎಲ್ಲಾ ತರದ ಏರ್ಪಾಡಿದೆ.

HOTEL SATKAR

Boarding & Lodging

Near Corporation Office. 9, Mission Road

Bangalore—2

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ಹರಿಸಿಕೊಂಡು ಸ್ವೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ವಿಚಾರವರ್ಷ

ಯೋಗ ದರ್ಶನ

ಬರೆದವರು: ಶ್ರೀ ಸ್ವಾಮಿ ಪ್ರಬುದ್ಧಾನಂದ

ಪುರಾತನ ಕಾಲದಿಂದಲೂ ಮಾನವನು ಈ ಪ್ರಪಂಚದಲ್ಲಿನ ದುಃಖ, ಬಂಧನ, ಅಶಾಂತಿಗಳಿಂದ ಬೇಸತ್ತು, ನಿರಂತರ ಸುಖ, ಸ್ವಾತಂತ್ರ್ಯ ಮತ್ತು ಶಾಂತಿಗಳಿಗಾಗಿ ಪ್ರಯತ್ನಿಸುತ್ತಾ ಬಂದಿದ್ದಾನೆ. ನಮ್ಮ ಪೂರ್ವಿಕರು ಈ ಬಗೆಗೆ ಅನೇಕ ಬಗೆಯ ಸಂಶೋಧನೆಗಳನ್ನು ನಡೆಸಿ ಈ ಗುರಿಯನ್ನು ಮುಟ್ಟಲು ಕೆಲವು ನಿರ್ದಿಷ್ಟ ವಿಧಾನಗಳನ್ನು ಕಂಡುಹಿಡಿದಿದ್ದಾರೆ. ಈ ಮಾರ್ಗಗಳನ್ನು ಅನುಸರಿಸಿ ಅನೇಕ ಸಾಧಕರು ಜಯಗಳಿಸಿದ್ದಾರೆ. ನಮಗೆ ಕಂಡು ಬರುವ ವಿವಿಧ ದರ್ಶನಗಳು ಧರ್ಮಗಳು, ಇಂತಹ ಸಂಶೋಧನೆಗಳ ಫಲ. ಭಾರತೀಯ ತತ್ತ್ವ ಶಾಸ್ತ್ರದಲ್ಲಿ ಷಡ್ದರ್ಶನಗಳ ಸ್ಥಾನ ಹಿರಿದು. ಈ ಷಡ್ದರ್ಶನಗಳಲ್ಲಿ ಒಂದು ಯೋಗ ದರ್ಶನ. ಈ ದರ್ಶನಕ್ಕೆ ಮೂಲಪುರುಷ ಪತಂಜಲಿ. ಮಾನವ ಸಿದ್ಧಾಂತದ ಧರ್ಮದ ಅಥವಾ ಸಂಪ್ರದಾಯದ ಮೂಲಕ ನಾವು ಸತ್ಯವನ್ನು ತಿಳಿಯಬೇಕಾದರೂ ಚಿತ್ತಶುದ್ಧಿ ಹಾಗೂ ಚಿತ್ತೈಕಾಗ್ರತೆ ಅತ್ಯಾವಶ್ಯಕ. ಸತ್ಯದರ್ಶನವು ಶಾಂತ ಮನಸ್ಸು ಹಾಗೂ ಪವಿತ್ರ ಹೃದಯವುಳ್ಳವರಿಗೆ ಮಾತ್ರ ಸಾಧ್ಯ. ಈ ಅರ್ಹತೆ ಪಡೆಯಲು ಎಲ್ಲಾ ಸಾಧಕರೂ ಯೋಗಾಭ್ಯಾಸವನ್ನು ಮಾಡಲೇಬೇಕು. ಅದ್ದರಿಂದ ಎಲ್ಲ ಪಂಥದವರು ಪತಂಜಲಿಯು ಬೋಧಿಸಿದ ಯೋಗಸಾಧನೆಗಳನ್ನು ತಮ್ಮ ಅನುಷ್ಠಾನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಅಳವಡಿಸಿಕೊಂಡಿದ್ದಾರೆ.

ಯೋಗವು ಸಾಂಖ್ಯದರ್ಶನಕ್ಕೆ ಅತ್ಯಂತ ಸಮೀಪವಾದದ್ದು. ಸಾಂಖ್ಯ ತತ್ತ್ವಗಳನ್ನು ಯೋಗವು ಅನುಭವಕ್ಕೆ ತರುತ್ತದೆ. ಸಾಂಖ್ಯದಂತೆ ಯೋಗವೂ ಪುರುಷ ಮೊದಲಾದ ಇಪ್ಪತ್ತೈದು ತತ್ತ್ವಗಳನ್ನು ಒಪ್ಪಿಕೊಳ್ಳುತ್ತದೆ. ಆದರೆ ಯೋಗದಲ್ಲಿ ಈಶ್ವರನ ಸ್ಥಾನ ಹೆಚ್ಚಿನದು. ಧ್ಯಾನಕ್ಕೆ ಈಶ್ವರನು ಅತ್ಯಂತ ಯೋಗ್ಯವಾದ ವಸ್ತು ಮಾತ್ರವಲ್ಲದೆ ಅವನು ಪ್ರಭು, ಸರ್ವೇಶ್ವರ. ಅವನ ಅನುಗ್ರಹದಿಂದ ಸಾಧಕನು ಚಿತ್ತಶುದ್ಧಿಯನ್ನು ಪಡೆಯುತ್ತಾನೆ; ಅಗಲೇ ಯೋಗಸಿದ್ಧಿ ಸುಲಭವಾಗುತ್ತದೆ. ಯೋಗದ ಅನುಷ್ಠಾನದಲ್ಲಿ ಬರುವ ಅಡ್ಡಿ ಆತಂಕಗಳು ದೂರವಾಗುವುದು ಅವನ ಕೃಪೆಯಿಂದಲೇ. ಈಶ್ವರನ ಅನುಗ್ರಹದಿಂದಲೇ ಎಲ್ಲವೂ ಸಾಧ್ಯವಾದರೂ ಸಾಧಕನು ತನ್ನ ಜೀವನದಲ್ಲಿ ಸತ್ಯ ಅಹಿಂಸೆ ಇತ್ಯಾದಿ ಸಾಧನೆಗಳನ್ನು ಅನವರತವೂ ಮಾಡುತ್ತಿರಬೇಕು.

ಯೋಗಕ್ಕೆ ಬೇರೆ ಬೇರೆ ಸಿದ್ಧಾಂತಗಳಲ್ಲಿ ಬೇರೆ ಬೇರೆ ಅರ್ಥವನ್ನು ಕೊಟ್ಟಿರತ್ತಾರೆ. ಪತಂಜಲಿ ಯೋಗದರ್ಶನದಲ್ಲಿ ಯೋಗವೆಂದರೆ ಚಿತ್ತವೃತ್ತಿಗಳ ನಿರೋಧ —"ಯೋಗಶ್ಚಿತ್ತವೃತ್ತಿ" ನಿರೋಧ ಒಂದು ಶಾಂತವಾದ ಕೊಳದಲ್ಲಿ ಕಲ್ಲನ್ನೆಸೆದರೆ ಹೇಗೆ ಅಲೆಗಳುಂಟಾಗುತ್ತವೆಯೋ ಹಾಗೆ ನಮ್ಮ ಚಿತ್ತದಲ್ಲಿ ನಮ್ಮ ಸಂಸ್ಕಾರಗಳಿಂದ, ಬಾಹ್ಯ ವಿಷಯ ವಸ್ತುಗಳಿಂದ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ. ಚಿತ್ತದಲ್ಲಿ ಉಂಟಾಗುವ ಈ ಅಲೆಗಳನ್ನು ಪ್ರಾಪ್ತ ವೃತ್ತಿಗಳೆಂದು ಕರೆಯುತ್ತೇವೆ. ಈ ರೀತಿ ಅಲೆಗಳು ಏಳದಂತೆ ಮಾಡುವುದೇ ಯೋಗ. ನೀರಿನ ಮೇಲಿನ ಅಲೆಗಳೆಲ್ಲ ಶಾಂತವಾದಾಗ ಸೂರ್ಯನು ಹೇಗೆ ಸ್ಪಷ್ಟವಾಗಿ ಪ್ರತಿಬಿಂಬಿಸುವನೋ ಹಾಗೆ ಚಿತ್ತದಲ್ಲಿ ವೃತ್ತಿಗಳನ್ನು ನಿರೋಧ ಮಾಡಿದಾಗ ಪ್ರಕೃತಿಯ ಪ್ರಭಾವದಿಂದ ವಿಮುಕ್ತನಾಗಿ ಸ್ವಯಂ ಜ್ಯೋತಿಯೂ, ನಿತ್ಯ, ಶುದ್ಧ, ಬುದ್ಧ, ಮುಕ್ತನೂ ಆದ ಪುರುಷನು ಪ್ರಕಾಶಿಸುತ್ತಾನೆ. ಇದೇ ಯೋಗದ ಗುರಿ.

ಅಭ್ಯಾಸ ಮತ್ತು ವೈರಾಗ್ಯಗಳಿಂದ ಚಿತ್ತವೃತ್ತಿ ನಿರೋಧ ಸಾಧ್ಯ. ಚಿತ್ತವೃತ್ತಿಯನ್ನು ಸಂಪೂರ್ಣ ಸ್ವಾಧೀನದಲ್ಲಿಟ್ಟುಕೊಳ್ಳುವುದಕ್ಕಾಗಿ ನಿರಂತರ ಪ್ರಯತ್ನಿಸುವುದೇ ಅಭ್ಯಾಸ. ಅಭ್ಯಾಸದಿಂದ ನಮ್ಮ ಚಿತ್ತದಲ್ಲಿ ಸಂಸ್ಕಾರಗಳುಂಟಾಗುತ್ತವೆ. ಸಂಸ್ಕಾರಗಳ ಪ್ರಭಾವದಿಂದ ಶೀಲ ನಿರ್ಮಾಣವಾಗುತ್ತದೆ. ಕೇಳಿದ ಮತ್ತು ನೋಡಿದ ವಿಷಯಗಳ ತೃಷ್ಣೆಯನ್ನು ತ್ಯಜಿಸಿ ಇಂದ್ರಿಯಗಳನ್ನು ನಿಗ್ರಹಿಸಲು ಮಾಡಬೇಕಾದ ಪ್ರಯತ್ನಗಳ ಪರಿಣಾಮವೇ ವೈರಾಗ್ಯ. ಯೋಗ ಸಿದ್ಧಿಗೆ ಅಭ್ಯಾಸ ವೈರಾಗ್ಯಗಳೇ ಮುಖ್ಯ ಸಾಧನೆ. ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನೂ ಮನೋನಿಗ್ರಹವು ಅಭ್ಯಾಸ ವೈರಾಗ್ಯಗಳಿಂದಲೇ

ಚಿತ್ತಶುದ್ಧಿಯಾಗುವ ತನಕ ಯೋಗದ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ. ಚಿತ್ತ ನೈರ್ಮಲ್ಯಕ್ಕಾಗಿ ಪತಂಜಲಿಯು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳೆಂಬ ಎಂಟು ಯೋಗಾಂಗಗಳನ್ನು ಹೇಳಿರುತ್ತಾನೆ. ಯಮವೆಂದರೆ ಅಹಿಂಸೆ, ಸತ್ಯ, ಅಸ್ತೇಯ ಬ್ರಹ್ಮಚರ್ಯ ಮತ್ತು ಅಪರಿಗ್ರಹ. ಮಾತಿನಲ್ಲೂ ಧಾವನೆಯಲ್ಲೂ, ಕಾರ್ಯದಲ್ಲೂ ಇತರ ಜೀವಿಗಳಿಗೆ ನೋವನ್ನುಂಟು ಮಾಡದಿರುವುದು ಅಹಿಂಸೆ. ಎಂತಹ ಪ್ರಸಂಗದಲ್ಲೂ ಸಿಜವನ್ನೇ ನುಡಿಯುವುದು, ನುಡಿದಂತೆ ನಡೆಯುವುದು ಸತ್ಯ. ತನ್ನದಲ್ಲದ ವಸ್ತುವನ್ನು ಅಪಹರಿಸದೆಯೂ, ಅಪಹರಿಸದೆಯೂ ಇರುವುದು ಅಸ್ತೇಯ. ಇಂದ್ರಿಯ ನಿಗ್ರಹ ಮತ್ತು ಪರಿಶುದ್ಧತೆಯೇ ಬ್ರಹ್ಮಚರ್ಯ. ತನಗೆ ಸಲ್ಲತಕ್ಕದಲ್ಲದ ವಸ್ತುವನ್ನು ಪರಿಗ್ರಹಿಸದೇ ಇರುವುದು ಅಪರಿಗ್ರಹ. ಇಂತಹ ಯಮವೆಂಬ ಯೋಗಾಂಗವು ಬಹು ಮುಖ್ಯವಾದ ಸಾಧನ. ಸಾರ್ವಜನಿಕವಾದ ವೈಯಕ್ತಿಕ ಮತ್ತು ಸಾಮಾಜಿಕ, ಲೌಕಿಕ ಹಾಗೂ ಆಧ್ಯಾತ್ಮಿಕ ಜೀವನಕ್ಕೂ ಇದರ ಅನುಷ್ಠಾನ ಮಾಡಿದ ಮೇಲೆಯೇ ಯೋಗದ ಇತರ ಸೋಪಾನಗಳನ್ನು ಏರಲು ಅರ್ಹತೆ ಬರುತ್ತದೆ. ಅದ್ದರಿಂದಲೇ ಪತಂಜಲಿಯು ಇವುಗಳನ್ನು ಸಾರ್ವಭೌಮ ವೆಂದೂ ಮಹಾವ್ರತಗಳೆಂದೂ ಕರೆಯುತ್ತಾನೆ.

ಅಂತರಂಗ ಮತ್ತು ಬಹಿರಂಗ ನೈರ್ಮಲ್ಯ, ತೃಪ್ತಿ, ತಪಸ್ಸು, ಸ್ವಾಧ್ಯಾಯ, ಈಶ್ವರೋಪಾಸನೆ ಇವು ನಿಯಮ. ಸ್ಥಿರವಾಗಿಯೂ ಸುಖವಾಗಿಯೂ ಇರುವ ದೇಹದ ಸಮಸ್ಥಿತಿಯೇ ಆಸನ. ಮುಂದಿನ ಯೋಗಾಂಗಗಳಾದ ಪ್ರಾಣಾಯಾಮ, ಪ್ರತ್ಯಾಹಾರ ಇತ್ಯಾದಿಗಳಿಗೆ ಸರಿಯಾದ ಆಸನ ಅತ್ಯಾವಶ್ಯಕ. ಪ್ರಾಣಾಯಾಮ ಎಂದರೆ ಉಚ್ಛ್ವಾಸ, ನಿಶ್ವಾಸಗಳ ನಿಗ್ರಹ. ಪ್ರಾಣಾಯಾಮವನ್ನು ಅಭ್ಯಾಸ ಮಾಡುವ ಸಾಧಕನು ಯಮ, ನಿಯಮಗಳನ್ನು ಪೂರ್ಣವಾಗಿ ಅನುಷ್ಠಾನ ಮಾಡಿರಬೇಕು. ಒಬ್ಬ ಸಿದ್ಧಗುರುವಿನ ನೇತೃತ್ವದಲ್ಲಿ ಸಾಧನೆ ಮಾಡುವುದು ಕ್ಷೇಮ. ಇದರಲ್ಲಿ ದಾರುಣವಿದೆ ಮಾನಸಿಕ ಮತ್ತು ದೈಹಿಕ ರೋಗಗಳಿಗೆ ಗುರಿಯಾಗುವದು. ಇಂದ್ರಿಯಗಳನ್ನು ವಿಷಯ ವಸ್ತುಗಳಿಂದ ಹಿಂತಿರುಗಿಸಿ ಮನಸ್ಸಿನ ವಶಕ್ಕಿಟ್ಟುಕೊಂಡಿರುವದಕ್ಕೆ ಪ್ರತ್ಯಾಹಾರವೆಂದು ಹೆಸರು. ಮನಸ್ಸನ್ನು ಧ್ಯೇಯದಲ್ಲಿ ನಿಲ್ಲಿಸಿ ಅದೇ ಸ್ಥಿತಿಯಲ್ಲಿಟ್ಟಿರುವುದಕ್ಕೆ ಧಾರಣವೆಂದು ಹೆಸರು. ಅವಿಚ್ಛಿನ್ನ ತೈಲಧಾರೆಯಂತೆ ಮನಸ್ಸನ್ನು ಏಕಾಗ್ರತೆಯಿಂದ ಧ್ಯಾನವಸ್ತುವಿನ ಮೇಲೆ ನಿಲ್ಲಿಸಿದರೆ ಅದೇ ಧ್ಯಾನ. ಧ್ಯಾನವು ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಮುಖ್ಯವಾದ ಸಾಧನೆ. ಇದರಿಂದ ಕೊನೆಯಲ್ಲಿ ಮೋಕ್ಷವು ದೊರೆಯುವುದರ ಜೊತೆಗೆ ಸಾಧನೆಯ ಕಾಲದಲ್ಲಾ ಮನಸ್ಸನ್ನು ಸಮಸ್ಥಿತಿಯಲ್ಲಿ ಇಡಲು ಸಹಾಯ ಮಾಡುತ್ತದೆ. ಮನಸ್ಸಿಗೆ ವಿಶ್ರಾಂತಿಯನ್ನು ಕೊಡುತ್ತದೆ. ಶಕ್ತಿಸಂಗ್ರಹ ಮಾಡುತ್ತದೆ. ಆಕಾರವನ್ನು ತ್ಯಜಿಸಿ ಪರತತ್ತ್ವದ ಧ್ಯಾನವನ್ನು ಮಾತ್ರ ಧ್ಯಾನಿಸುವುದೇ ಸಮಾಧಿ. ಚಿತ್ತವು ಶುದ್ಧವಾಗಿ ಮತ್ತು ಏಕಾಗ್ರವಾಗಿ ಧ್ಯಾನವಸ್ತುವಿನ ಮೇಲೆ ಸ್ಥಿತವಾದರೆ ಅದನ್ನು ಸಂಪ್ರಜ್ಞಾತ ಯೋಗ ಅಥವಾ ಸಂಪ್ರಜ್ಞಾತ ಸಮಾಧಿ ಎಂದು ಕರೆಯುತ್ತಾರೆ. ಇದರಲ್ಲಿ ಧ್ಯಾನವಸ್ತುವಿನ ಅರಿವು ಇರುತ್ತದೆ. ಅಸಂಪ್ರಜ್ಞಾತ ಸಮಾಧಿಯಲ್ಲಿ ಈ ಅರಿವೂ ಇರುವುದಿಲ್ಲ. ಚಿತ್ತದಲ್ಲಿ ಯಾವ ವಿಧವಾದ ವೃತ್ತಿಯೂ ಇರುವುದಿಲ್ಲ. ಇದೇ ಸಮಾಧಿಯ ಕೊನೆಯ ಹಂತ. ಈ ಸ್ಥಿತಿಯಲ್ಲಿ ಆತ್ಮನು ಸಂಪೂರ್ಣ ಸ್ವತಂತ್ರನಾಗಿ, ಚೈತನ್ಯಸ್ವರೂಪಿಯಾಗಿ, ಸ್ವಯಂಜ್ಯೋತಿಯಾಗಿ ಪ್ರಕಾಶಿಸುತ್ತಾನೆ. ಸಾಧಕನು ಈ ಮಟ್ಟಕ್ಕೆ ಬಂದಾಗ ಜೀವನದ ಪರಮ ಗುರಿಯಾದ ಮೋಕ್ಷ ಅಥವಾ ಕೈವಲ್ಯವನ್ನು ಪಡೆಯುತ್ತಾನೆ.

ಯೋಗದ ಗುರಿಯ ಇನ್ನೊಂದು ಮುಖ್ಯ ಸಾಧನವೆಂದರೆ ಪ್ರಣವ ಮಂತ್ರ ಜಪ. ಪರಮಾತ್ಮನಾದ ಈಶ್ವರನು ಮಂತ್ರದ ಮೂಲಕ ಪ್ರಕಾಶವಾಗುತ್ತಾನೆ. ತದ್ವಾಚ್ಯಾರ್ಥ ಭಾವನೆಯಿಂದ ಜಪಿಸುವುದರ ಜೊತೆಗೆ ಅದರ ಅರ್ಥವನ್ನು ಪರಿಭಾವಿಸುವುದರಿಂದ ಮನಸ್ಸಿನಲ್ಲಿ ಪವಿತ್ರ ಸಂಸ್ಕಾರಗಳುಂಟಾಗುತ್ತವೆ ಮತ್ತು ಧ್ಯಾನಕ್ಕೆ ಸಹಾಯವಾಗುತ್ತದೆ. ಆತ್ಮ ಸಂಶೋಧನಾ ಶಕ್ತಿ ವರ್ಧಿಸುತ್ತದೆ ಮತ್ತು ಯೋಗದ ಅತಂಕಗಳು ಮಾಯವಾಗುವವು. ಮೊದಲಾಗುತ್ತದೆ. ಮಂತ್ರಜಪ ಎಲ್ಲರೂ ಎಲ್ಲ ಕಾಲದಲ್ಲಿಯೂ ಮಾಡಬಹುದಾದ ಬಹಳ ಸುಲಭವಾದ ಸಾಧನವಾದುದರಿಂದ ನಮ್ಮ ಸಂತರು, ಆಚಾರ್ಯರು, ಅವತಾರಪುರುಷರು - ಎಲ್ಲರೂ ಮಂತ್ರಜಪಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ.

(ಎಂಟನೇ ಪುಟ ನೋಡಿರಿ)

ವಿದ್ಯಾ ಗಣಪತಿಯ ಮೂಲ ಪಾಠ

ಸಂಪತ್ತು ಸಮೃದ್ಧಿ ಜತೆಗೆ ಮುನ್ನೋಟ
ಬದುಕಿಗೆ ಬೇಕು ಈ ಬಗೆಯ ಒಕ್ಕೂಟ

ಬದುಕಿನ ಅವಶ್ಯಕತೆಗೆ, ಅವಂದಕ್ಕೆ ಸಂಪತ್ತು ಬೇಕು. ಅದು ಸಮೃದ್ಧವಾಗಿ ಬೆಳೆಯಬೇಕು. ಆದರೆ ಮುನ್ನೋಟ ವಿಲ್ಲದ ಸಂಪತ್ತು ನಾಳೆ ಕರಗಿ ಹೋದೀತು. ಸಮರ್ಪಕವಾದ ಮುನ್ನೋಟವಿದ್ದರೆ ನಾಳೆಯ ಯೋಚನೆಯಿದ್ದರೆ ಗಳಿಸಿದ ಸಂಪತ್ತನ್ನು ಕೂಡಿಡುತ್ತಾ ಬರಬಹುದು.

ಉಳಿತಾಯ ಯೋಜನೆಯೇ ಮುನ್ನೋಟದ ಫಲ. ಚೆನ್ನಾದ ಬದುಕನ್ನು ಪಡೆಯಲು ಕಲಿಯಬೇಕಾದ ವಿದ್ಯೆಯಿದು. ವಿದ್ಯಾ ಗಣಪತಿಯ ಅನುಗ್ರಹದ ಪ್ರಸಾದವಿದು.

FAITHFUL B

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಸಾಧನ ಸಂಪತ್ತು:	ಶಾಖೆಗಳು:	ಟಿ. ಎ. ಪೈ
ರೂ. 100 ಕೋಟಿಗೂ ಮಿಕ್ಕಿ.	238 ಕ್ಕೂ ಮಿಕ್ಕಿ.	ಚೆಯರ್‌ಮೇನ್

ಪ್ರಧಾನಿ ಸಂದೇಶ

ನಾವು ಸುದೃಢ ದೇಶಜರು

"ಸ್ವತಂತ್ರ ಭಾರತಕ್ಕೆ ಈಗ ಇಪ್ಪತ್ತೊಂದರ ನ್ಯಾಯ. ಈ ಇಪ್ಪತ್ತೊಂದು ವರ್ಷಗಳಲ್ಲಿ ನಾವು ಒಂದಲ್ಲ ಅನೇಕ ಸಮಸ್ಯೆಗಳನ್ನೂ — ಆಹಾರ, ಪ್ರವಾಹ, ಹಾವಳಿ, ಕ್ಷಾಮ ಪರಿಸ್ಥಿತಿ — ಇವೇ ಮೊದಲಾದ ಕಷ್ಟ ಪರಂಪರೆಗಳನ್ನೂ ಎದುರಿಸಿದ್ದೇವೆ. ಇದೇ ಕಾಲದಲ್ಲೇ ನಮ್ಮ ಕಣ್ಣೆದುರಿನಲ್ಲೇ ಬೃಹತ್ ಅಭಿವೃದ್ಧಿ ಯೋಜನೆಗಳು ರೂಪು ತಳೆದಿವೆ. ಎಷ್ಟೇ ತೊಂದರೆಗಳು ಬಂದಾಗಲೂ ಅವುಗಳನ್ನು ಧೈರ್ಯದಿಂದ ಎದುರಿಸಿದ ನಮ್ಮ ಜನತೆಗೆ ನನ್ನ ಹಾರ್ದಿಕ ಅಭಿನಂದನೆಗಳು. ನಮ್ಮ ಮಹಾನಾಯಕರ ತ್ಯಾಗ ಮಾನ ಸತತ ಪರಿಶ್ರಮದಿಂದ ನಮ್ಮ ಇಂದಿನ ಶಕ್ತಿಯು ಮೂಲವಾಗಿದೆ.

ಸ್ವಾತಂತ್ರ್ಯೋತ್ಸವದ ದಿನವಾದ ಇಂದು ನಾವು ನಮ್ಮ ಹಿಂದಿನ ಸಾಧನೆಗಳನ್ನು ವಿವರಿಸಿ ಮುಂದಿನ ದಿನಗಳನ್ನು ಆಶಾಭಾವನೆಯಿಂದ ನಿರೀಕ್ಷಿಸುತ್ತೇವೆ. ನಾವು ಒಂದು ಬೃಹತ್ ರಾಷ್ಟ್ರವೆಂಬುದು ನಿಶ್ಚಯವೇ. ನಾವು ಇನ್ನೂ ಬಹುದೂರ ನಡೆಯಬೇಕಾಗಿದೆ ಎಂಬುದನ್ನು ಮರೆಯದಿರೋಣ. ನಮ್ಮ ಮಹಾನಾಯಕರು ತೋರಿದ ಮಾರ್ಗದಲ್ಲಿ ನಡೆದರೆ, ಅವರು ಹಾಕಿಕೊಟ್ಟ ತತ್ವಗಳಿಗೆ ದೃಢವಾಗಿ ಅಂಟಿಕೊಂಡಿದ್ದರೆ ನಮ್ಮ ಗುರಿಯನ್ನು ನಾವು ತೀವ್ರ ಸಾಧಿಸುವೆವು ಎಂದು ನನಗೆ ದೃಢ ವಿಶ್ವಾಸವಿದೆ.

ಬುದ್ಧ, ಅಕ್ಬರ, ಗಾಂಧಿಜಿಯವರು ಉದಿಸಿದ ಈ ನಾಡಿನಲ್ಲಿ ಹಿಂಸೆ ಕಂಡು ಬರುತ್ತಿರುವುದು ವಿಷಾದಕರ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ವಿವಿಧ ಜನವರ್ಗದಲ್ಲಿ ನಡುವೆ ಭಿನ್ನಾಭಿಪ್ರಾಯಗಳು ಇರುವುದು ಸಹಜ. ಮಾತುಕತೆ ಮೂಲಕ ಈ ಭಿನ್ನಾಭಿಪ್ರಾಯಗಳು ನಿವಾರಣಗೊಳ್ಳಬೇಕು. ಈ ಕ್ರಮದಲ್ಲಿ ನೆರವಾಗುವುದು ಭಾರತದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.

ಹಿಂಸೆಗೆ ಅವಕಾಶವಿಲ್ಲದಂತಹ ವಾತಾವರಣವನ್ನು ನಿರ್ಮಿಸಲು ನಾವು ಸಹಕರಿಸಬೇಕು. ನಮ್ಮ ದೇಶದಲ್ಲಿ ಬಹುತೇಕ ಜನರು ಶಾಂತಿಪ್ರಿಯರು. ಪರಿಸ್ಥಿತಿ ಹೀಗಿರುವಾಗ ಕೆಲವೇ ಜನ ಶಾಂತಿಭಂಗ ಮಾಡಲು ಹೇಗೆ ಸಾಧ್ಯವಾಗುತ್ತಿದೆ? ಹರಿಜನರು ಮತ್ತಿತರ ಅಲ್ಪಸಂಖ್ಯಾತ ವರ್ಗದಲ್ಲಿ ವಿಷಯದಲ್ಲಿ ಕೆಲವೊಂದು ಸಲ ಹೇಯ ಕೃತ್ಯಗಳು ನಡೆದಿವೆ. ಇದ್ದಿಲ್ಲೂ ನಮ್ಮ ರಾಷ್ಟ್ರದ ಬಲವನ್ನು ಕುಗ್ಗಿಸಿವೆ. ದೇಶದ ಜನತೆಯಲ್ಲಿ ಭಿನ್ನಾಭಿಪ್ರಾಯ ಬೆಳೆಸಲು, ಸಂಶಯ ಮೂಡಿಸುವ ಯತ್ನಗಳೂ ನಡೆದವು. ಜನತೆಯ ವಿಶ್ವಾಸಕ್ಕೆ ಭಂಗ ತರುವುದೇ ಈ ಎಲ್ಲಾ ಕೃತ್ಯಗಳ ಉದ್ದೇಶವಾಗಿತ್ತು.

ಇಂದಿನ ಶುಭ ದಿನದಲ್ಲಿ ಮತ್ತೊಂದೂ ಇಂತಹ ಅಧೋಗತಿಯ ಕೃತ್ಯಕ್ಕೆ ಅವಕಾಶ ನೀಡಬಾರದೆಂದು ನಾವು ದೃಢ ಕೃತಿಶ್ಚಯ ಮಾಡೋಣ. ಖಂಡಿತವಾಗಿಯೂ ಸರ್ಕಾರ ಈ ದಿಶೆಯಲ್ಲಿ ಮಾಡಬೇಕಾದ ಕರ್ತವ್ಯವಿದೆ. ಆದರೆ ಭಾರತದ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಸ್ಥೆಗಳು, ಹಾಗೂ ಭಾರತದ ಪ್ರಜೆಗಳು, ಧೈರ್ಯದಿಂದ ಹೇಗೆ ಬೇಕಾದ ಹೊಣೆಗಾರಿಕೆಗಳಿವೆ. ಪ್ರಾಂತೀಯವಾದ ರಾಷ್ಟ್ರೀಯ ಸಮಗ್ರತಾ ಪರಿಷತ್ತು ಕೆಲವೊಂದು ನಿರ್ಧಾರಗಳನ್ನು ಕೈಗೊಂಡಿದ್ದು ಈಗ ಅವುಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ನಮ್ಮ ದೇಶದಲ್ಲಿ ಶಾಂತಿ ಹಾಗೂ ರಾಷ್ಟ್ರೀಯ ಸಮಗ್ರತೆಯ ಹೊಸ ವಾತಾವರಣವನ್ನು ಸೃಷ್ಟಿಸುವಲ್ಲಿ ನಾವು ಯಶಸ್ವಿಯಾಗುವೆವೆಂದು ನನಗೆ ಬಲವಾದ ನಂಬುಗೆ ಇದೆ.

ಶಾಂತಿಯೇ ನಮ್ಮ ಎಲ್ಲಾ ಪ್ರಗತಿಯ ಅಡಿಪಾಯ. ಕಳೆದ ಇಪ್ಪತ್ತೊಂದು ವರ್ಷಗಳಲ್ಲಿ ನಾವು ಈ ಅಡಿಪಾಯವನ್ನು ಬಲಗೊಳಿಸಿದ್ದೇವೆ. ನಾವೀಗ ನಮ್ಮ ಕಾಲುಗಳ ಮೇಲೆ ನಿಲ್ಲಲಾರಂಭಿಸಿದ್ದೇವೆ. ಶತಮಾನಗಳ ನಿರ್ಲಕ್ಷ್ಯದ ನಂತರ ನಾವು ಸ್ವಾವಲಂಬನೆಯತ್ತ ಮುನ್ನಡೆಯುತ್ತಿದ್ದೇವೆ.

ಬೇಸಾಯ ರಂಗದಲ್ಲಿ ಕ್ರಾಂತಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಈ ಸಲ ಬೆಳೆ ಸಮೃದ್ಧವಾಗಿ ಬಂದಿದೆ. ಆದರೂ ದೇಶದ ಕೆಲವು ಕಡೆಗಳಲ್ಲಿ ಅನಾವೃಷ್ಟಿ ಪ್ರವಾಹದ ಹಾವಳಿ ಇದೇ ಮೊದಲಾದ ತೊಂದರೆಗಳು ತಲೆದೋರಿವೆ. ಈ ತೊಂದರೆಗಳಿಂದ ಸಂಪ್ರಸ್ತರಾದವರ ಕಷ್ಟನಷ್ಟಗಳನ್ನು ನಿವಾರಿಸಲು ನಾವು ಎಲ್ಲಾ ವಿಧದಲ್ಲೂ ಯತ್ನಿಸುತ್ತಿದ್ದೇವೆ.

ಸಮೃದ್ಧವಾದ ಬೆಳೆ ನಮ್ಮ ಸುವ್ಯವಸ್ಥಿತ ಯೋಜನೆಯ ಫಲ. ಬೇಸಾಯ ಕ್ಷೇತ್ರದಲ್ಲಾಗಿರುವ ಈ ಕ್ರಾಂತಿ ನಮ್ಮ ಆರ್ಥಿಕ ವ್ಯವಸ್ಥೆಗೆ ಬೇಕಷ್ಟು ಕೀಡಲಿದೆ. ಈಗ ರೈತರಿಗೆ ಒದಗಿಸಲಾಗುತ್ತಿರುವ ಉತ್ತಮ ಬಿತ್ತನೆಯ ಬೀಜಗಳು, ರಾಸಾಯನಿಕ ಗೊಬ್ಬರಗಳು ಮತ್ತು ಇತರ ವಸ್ತುಗಳು ನೀರಾವರಿ ಸಾಕಷ್ಟಿಗಳಿಲ್ಲದ ರೈತರಿಗೆ ದೊರೆಯುವಂತಾಗಬೇಕು. ಇದರಿಂದ ಬೇಸಾಯ ಉತ್ಪಾದನೆ ಹೆಚ್ಚಿಸುವಲ್ಲಿ ಅವರು ಸಕ್ರಿಯ ಪಾತ್ರ ನಿರ್ವಹಿಸಬಲ್ಲರು.

ನಮ್ಮ ಕೈಗಾರಿಕಾ ಪ್ರಗತಿ ಕೆಲವುಟ್ಟಿಗೆ ಬೇಸಾಯವನ್ನೇ ಅವಲಂಬಿಸಿದೆ. ಬೇಸಾಯ ಉತ್ಪಾದನೆಯ ಅಭಿವೃದ್ಧಿಯಿಂದಾಗಿ ನಮ್ಮ ಕೈಗಾರಿಕಾ ವ್ಯವಸ್ಥೆಯ ಮೇಲೂ ಒಳ್ಳೆಯ ಪರಿಣಾಮವಾಗುತ್ತಿದೆ. ನಮ್ಮ ದುಃಖದ ದಿನಗಳು ಕೊನೆಗೊಳ್ಳತೊಡಗಿವೆ. ನಮ್ಮ ಎಲ್ಲಾ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ. ದೃಢ ನಿರ್ಧಾರದಿಂದ ನಾವು ಮುಂದುವರಿದರೆ ನಮ್ಮ ದೇಶದಲ್ಲಿ ಹೊಸ ಯುಗದ ಆರಂಭವಾಗುತ್ತದೆ.

ನಾವು ಪ್ರಗತಿ ಸಾಧಿಸುತ್ತ ನಡೆದಂತೆ, ಜನರ ನಿರೀಕ್ಷೆಗಳು ಹೆಚ್ಚುತ್ತ ಹೋಗುತ್ತದೆ. ಕಾರ್ಮಿಕರ ಅಸ್ತಿತ್ವದ ಬಗ್ಗೆ ಮತ್ತು ಹಾಡುವಾಗ ಕೈಗಾರಿಕೋದ್ಯಮಿಗಳು ಹಾಗೂ ಧನಿಕರಾದ ವ್ಯಾಪಾರಸ್ಥರು ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಬಾರದೆಂದು ನನ್ನ ಅಭಿಪ್ರಾಯ. ಅವರು ಸಾಕಷ್ಟು ಗಳಿಸುತ್ತ ನಡೆದರೆ, ಶಿಕ್ಷಣನ್ನು ಕಾದುಕೊಳ್ಳಲಾರರು. ಬಡತನ ಹಾಗೂ ಶ್ರೀಮಂತಿಕೆಗಳ ನಡುವಣ ಅಂತರವನ್ನು ಕಡಿಮೆ ಮಾಡಲು ನಾವು ಯತ್ನಿಸಬೇಕು. ವೈಯಕ್ತಿಕ ಹಿತಕ್ಕಿಂತ ರಾಷ್ಟ್ರದ ಹಿತಕ್ಕೆ ಮಿಗಿಲಾದ ಪ್ರಧಾನ್ಯ ದೊರೆಯಬೇಕು.

ಇಂದು ಎಂಜನೀಯರುಗಳು ಹಾಗೂ ಸುಶಿಕ್ಷಿತ ಯುವಕರು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ನಾವು ಈ ಸಮಸ್ಯೆಯನ್ನು ನಿವಾರಿಸಲು ಯತ್ನಿಸುತ್ತಿದ್ದೇವೆ. ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ಅಧಿಕ ಉದ್ಯೋಗಾವಕಾಶಗಳನ್ನು ನೀಡುವ ವಿಷಯವನ್ನು ನಾವು ಪರಿಶೀಲಿಸಬೇಕಾಗಿದೆ. ಸುಶಿಕ್ಷಿತ ಯುವಕರು ಕೇವಲ ಸರ್ಕಾರಿ ಕೆಲಸಗಳಿಗಾಗಿಯೇ ಯತ್ನಿಸಬಾರದು. ಅವರು ತಮಗಾಗಿಯೇ ಹೊಸಹೊಸ ಅವಕಾಶಗಳನ್ನು ನಿರ್ಮಿಸಿಕೊಳ್ಳಲು ಯತ್ನಿಸಬೇಕು. ಅಭಿವೃದ್ಧಿ ಹೊಂದುತ್ತಿರುವ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಅದಕ್ಕೆ ಸಾಕಷ್ಟು ಅವಕಾಶವಿದೆ. ಸುಶಿಕ್ಷಿತ ಯುವಕರು ಸ್ವಸಹಾಯ ಹಾಗೂ ಸ್ವಾವಲಂಬನೆಯ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ನಾನು ಮನವಿಮಾಡಿಕೊಳ್ಳುತ್ತೇನೆ.

ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳಲ್ಲಿ ನಾವು ಕೋಟಿಗಟ್ಟಲೆ ರೂಪಾಯಿಗಳ ಬಂಡವಾಳವನ್ನು ಕೊಡಗಿಸಿದ್ದೇವೆ. ಈ ಹಣ ಬಂಡವಾಳಶಾಹಿಗಳದ್ದಾಗಲಿ, ಕೈಗಾರಿಕೋದ್ಯಮಿಗಳದ್ದಾಗಲಿ ಅಲ್ಲ. ಅದು ಸಾರ್ವಜನಿಕರ ಹಣ. ಸಮಗ್ರ ಭಾರತದ ಪ್ರಜೆಗಳು ಈ ಕೈಗಾರಿಕೆಗಳಲ್ಲಿ ಪಾಲ್ಗೊಂಡಿದ್ದಾರೆ. ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳಲ್ಲಿನ ವ್ಯವಸ್ಥೆಯಲ್ಲಿ ಹಾಗೂ ಕಾರ್ಮಿಕರ ಮೇಲೆ ಒಂದು ವಿಶಿಷ್ಟ ಹೊಣೆಗಾರಿಕೆ ಇದೆ.

ರಾಷ್ಟ್ರೀಯ ಒಗ್ಗಟ್ಟು, ಶಾಂತಿ, ಆರ್ಥಿಕ ಹಾಗೂ ರಾಜಕೀಯ ಸ್ಥಿರತೆಯನ್ನೇ ನಮ್ಮ ಪ್ರಗತಿ ಅವಲಂಬಿಸಿದೆ. ಭಾರತ ಸದಾ ಯುದ್ಧದ ಬಣಕ್ಕೆ ಸೇರದ ಅಲಿಪ್ತ ನೀತಿಯನ್ನು ಅನುಸರಿಸುತ್ತಿದೆ. ಇತರ ರಾಷ್ಟ್ರಗಳೂ ಈ ನೀತಿಯನ್ನು ಹೆಚ್ಚು ಹೆಚ್ಚಾಗಿ ಅನುಸರಿಸತೊಡಗಿವೆ.

ಸೋವಿಯತ್ ರಷ್ಯಾ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೀಡಲು ನಿರ್ಧರಿಸಿದೆ. ಈ ನಿರ್ಧಾರ ನಮಗೆ ಕಳವಳವನ್ನುಂಟು ಮಾಡಿದೆ. ನಮ್ಮ ವಿಚಾರದಲ್ಲಿ ಇದೊಂದು ದುರದೃಷ್ಟಕರ ಘಟನೆ. ಆದರೆ ಇದರಿಂದ ನಾವು ಭಯಪಡುವ ಅಗತ್ಯವಿಲ್ಲ. ಭಾರತ ಒಂದು ಬಲಿಷ್ಠ ರಾಷ್ಟ್ರ. ಕಳೆದ ಎರಡು ವರ್ಷಗಳಲ್ಲಿ ನಮ್ಮ ರಾಷ್ಟ್ರ ಇನ್ನಷ್ಟು ಬಲಗೊಂಡಿದೆ. ಧೈರ್ಯಶಾಲಿಗಳಾದ ನಮ್ಮ ಯೋಧರು ರಾಷ್ಟ್ರದ ಗಡಿಗಳನ್ನು ಕಾಯ್ದು ಕಾಪಾಡೋಣ. ಖಂಡಿತವಾಗಿಯೂ ಸರ್ಕಾರ ಈ ದಿಶೆಯಲ್ಲಿ ಮಾಡಬೇಕಾದ ಕರ್ತವ್ಯವಿದೆ. ಆದರೆ ಭಾರತದ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಸ್ಥೆಗಳು, ಹಾಗೂ ಭಾರತದ ಪ್ರಜೆಗಳು, ಧೈರ್ಯದಿಂದ ಹೊಣೆಗಾರಿಕೆಗಳಿವೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಾರುಚೆಯನ

ಶಾಂತಿ ವಧುವಿಗೆ ದಕ್ಷಿಣೆ ಬೇಕು

ಮುರಾರ್ಜಿ ಭಾಯಿಯವರು ತಮ್ಮ ಮಗ ಕಾಂತಿಲಾಲ ಭಾಯಿಯವರ ಸಂಬಂಧದಲ್ಲಿ ನೀಡಿದ ಹೇಳಿಕೆ ಸುಳ್ಳಿನ ಕಂತೆಯಿಂದ ತುಂಬಿದೆ—ಇದು ಎಸ್ಸೆಸ್ಪಿ ನಾಯಕ ಮಧುಲಿಮಯೆ ಮಂಡಿಸಿದ್ದ ಒಂದು ಖಂಡನಾ ನಿರ್ಣಯದ ತಿರುಳು. ಮಗ ತಂದೆಯ ಖಾಸಗಿ ಕಾರ್ಯದರ್ಶಿಯಾಗಿದ್ದಾಗಲೂ ಇತರತ್ರ ವೇತನ ಪಡೆಯುತ್ತಿದ್ದರು, ಅಪ್ಪನ ಸಚಿವ ಪದವಿಯ ಪ್ರಭಾವ ಬೀರಿ ಅಡ್ಡ ಸಂಪಾದನೆ ಪಡೆಯುತ್ತಿದ್ದರು ಎಂಬ ಅವರ ಮಾತನ್ನು ಮುರಾರ್ಜಿಯವರು ತಳ್ಳಿ ಹಾಕಿ ತನ್ನ ಮಗ ವೇತನ ಪಡೆಯುತ್ತಿದ್ದಿಲ್ಲವೆಂದೂ ಲೋಕಸಭೆಯನ್ನು ಅಡ್ಡ ದಾರಿಗೆಳೆವ ಸುಳ್ಳು ಸಂಗತಿ, ವಾದಕ್ಕೆ ಪುಷ್ಟಿ ಕೊಡುವ ದಾಖಲೆಗಳನ್ನೂ ಒದಗಿಸಲು ಅವರು ಬದ್ಧಕಂಕಣರು. ಇವೆಲ್ಲಾ ಸುಳ್ಳು. ತನ್ನ ಖಾಸಗಿ ಕಾರ್ಯದರ್ಶಿಯಾದ ಮೇಲೆ ಆತ ಪಾಕರಿ ಬಿಟ್ಟಿದ್ದಾನೆ. ಅವನ ವಾಡೆಜ್ಜ ವ್ಯವಹಾರ ನಾನರಿಯೆ- ಆತನು ವೇತನ ಪಡೆಯುತ್ತಿದ್ದನೆನ್ನುವುದು, ನನ್ನ ಸಚಿವ ಪದವಿಯ ದುರುಪಯೋಗ ಮಾಡಿಕೊಂಡನೆನ್ನುವುದು ಶುದ್ಧ ಕುಹಕ. ನನ್ನ ರಾಜ

ಕಾಯುತ್ತಿದ್ದಾರೆ. ರಾಷ್ಟ್ರ ಆತ್ಮರಕ್ಷಣೆಗೆ ಸಮರ್ಥವಿದೆ.

ನಮಗೆ ಪಾಕಿಸ್ತಾನದೊಂದಿಗೆ ಭಿನ್ನಾಭಿಪ್ರಾಯಗಳಿದ್ದವು. ಈ ಭಿನ್ನಾಭಿಪ್ರಾಯಗಳು ಹಿಂದಿನ ನಿಕಟ ಸಂಬಂಧದಿಂದ ತಲೆದೋರಿದ ಸಮಸ್ಯೆಗಳು. ಪಾಕಿಸ್ತಾನದೊಂದಿಗೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ, ಜವಾಹರಲಾಲ ನೆಹರೂ ಮತ್ತು ಲಾಲಬಹಾದೂರ್ ಶಾಸ್ತ್ರಿ ಅವರು ಪಾಕಿಸ್ತಾನದೊಂದಿಗೆ ಯುದ್ಧ ನಿಷೇಧ ಒಪ್ಪಂದಕ್ಕೆ ಸಹಿ ಹಾಕಲು ಮುಂದೆ ಬಂದರು; ಈ ಸಂದರ್ಭದಲ್ಲಿ ನಾನು ಸಹ ಪಾಕಿಸ್ತಾನದ ಪರಿಶೀಲನೆಗಾಗಿ ಯುದ್ಧ ನಿಷೇಧ ಒಪ್ಪಂದದ ಸೂಚನೆಯನ್ನು ಪುನಃ ಮುಂದಿಡುತ್ತೇನೆ.

ಸ್ವಾಮಿ ವಿವೇಕಾನಂದರು ಒಮ್ಮೆ ಹೀಗೆ ಹೇಳಿದರು. 'ಈ ನಾಡಿನಲ್ಲಿ ಜನ್ಮತಳೆಯುವವರೇ ಧನ್ಯರು' ಎಂದು. ಮಹಾತ್ಮರ ಜನ್ಮಭೂಮಿಯೂದ ಭಾರತವೇ ಧನ್ಯ. ಈ ವರ್ಷದ ಅಕ್ಟೋಬರ್ ತಿಂಗಳಲ್ಲಿ ಗಾಂಧೀಜಿ ಅವರ ಜನ್ಮಶತಾಬ್ದಿ ಉತ್ಸವಗಳನ್ನು ಆರಂಭಿಸುತ್ತೇವೆ. ಗಾಂಧೀಜಿ ಅವರು ಕಲಿಸಿದ ಉದಾತ್ತವಾದ ತತ್ವಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ. ಈ ತತ್ವಗಳು ಸದಾ ಶ್ರೇಷ್ಠ ತತ್ವಗಳಾಗಿವೆ. ಗಾಂಧೀಜಿ ತಮ್ಮ ಜೀವನವೂ ಎಲ್ಲವನ್ನು ಹಂಚಿದರು, ಬಡವರು ಹಾಗೂ ನಿಮ್ನ ವರ್ಗಗಳ ಸೇವೆಗಾಗಿಯೇ ಮುಡಿಪಾಗಿಟ್ಟರು. ಇದಮತ್ಯ ಸಾಧನೆಗಾಗಿಯೇ ಅವರು ತಮ್ಮ ಪ್ರಾಣ ತ್ಯಾಗ ಮಾಡಿದರು. ಗಾಂಧೀಜಿ ಅವರ ತತ್ವಗಳಿಂದ ಹಾಗೂ ಅವರ ಉಪದೇಶದಿಂದ ನಾವು ಪಾಠ ಕಲಿತುಕೊಳ್ಳಬೇಕು".

(ಸ್ವಾತಂತ್ರ್ಯದಿನ ಮಾಡಿದ ಭಾಷಣದಿಂದ)

ಕೀಯ ಜೀವನ ತೆರೆದ ಪುಸ್ತಕ. ಇದಕ್ಕೆ ಕೆಸರೆರೆಚುವ ಹುಚ್ಚು ಸಾಹಸವಿದು—ಭಾಯಿಯವರ ನಿರಾಕರಣ.

ಸರಕಾರದ ಪ್ರಬಲ ಕಂಬ ಮುರಾರ್ಜಿಯವರ ಮೇಲಿನ ಈ ಖಂಡನಾ ನಿರ್ಣಯವನ್ನು ಲಿಮಯೇ ಮಂಡಿಸಲು ಸಮರ್ಥರಾದರು. ಆದರೆ, ವಿರೋಧೀ ಪಕ್ಷಗಳ ಬೆಂಬಲ ಪಡೆಯಲು ಅವರು ಸಂಪೂರ್ಣ ಅಶಕ್ತರು. ಸ್ವತಂತ್ರರು ಫಿರಿಪ್ತ ನೀತಿಯಲ್ಲಿ ಆಸಕ್ತರಾದರೆ, ಪ್ರಜಾವಾಗಳೂ ಸಾಮಾನ್ಯ ಹಾಗೆಯೇ ಆದರು. ಕಾಂಗ್ರೆಸ್ಸಿಗರೆಲ್ಲರೂ ಈ ನಿರ್ಣಯವನ್ನು ಎಂದಿಗೂ ಒಪ್ಪುವಲ್ಲಿ ಅಸಹಾಯಕರು. ಹಾಗಾಗಿ ನಿರೀಕ್ಷಿಸಿದಂತೆ ಮಧುಲಿಮಯೆ ನಿರ್ಣಯ ಮಧುರಾಂತ್ಯವಾಯಿತು ಸರಕಾರಕ್ಕೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಮಾನನೇ. ಆತನಿಗೆ ಅಧಿಕಾರವೂ ಕರ್ತವ್ಯವೂ ಇದೆ. ಸಚಿವನೊಬ್ಬನ ಸಂಬಂಧಿಕನೆಂದ ಮಾತ್ರಕ್ಕೆ ಆತ ಸನ್ಯಾಸ ಪೀಕ್ಷೆ ವಹಿಸಬೇಕೆಂಬ ವಾದಕ್ಕೆ ಎಂದಿಗೂ ಬೆಲೆಯಿಲ್ಲ. ಪದವಿಯ ದುರುಪಯೋಗ ಸಚಿವ ಮಟ್ಟದಲ್ಲಿ ಮಾತ್ರ ನಡೆಯುವುದಲ್ಲ- ಎಂ.ಪಿ., ಎಂ.ಎಲ್.ಎ. ಮಟ್ಟದಲ್ಲೂ ನಡೆಯುತ್ತದೆ. ಸರಕಾರದ ಎ.ಎ.ಎಸ್. ಅಧಿಕಾರಿ ಮಟ್ಟದಿಂದ ಚಪರಾಸಿ ಮಟ್ಟದಲ್ಲೂ ನಡೆಯುತ್ತದೆ. ಇದು ವ್ಯಕ್ತಿಗತ ದುರ್ಬಲತೆಯ ಪ್ರಶ್ನೆ. ಜನತಾ ಪ್ರತಿನಿಧಿಗಳು ಜನಸೇವೆಯನ್ನು ಮಾಡಹೋದರೆ, ಅದೂ ಒಂದು ಬಗೆಯ ಅಧಿಕಾರದ ದುರುಪಯೋಗವಾಗಲಾರದೆ— ಮುಂದಿನ ಚುನಾವಣೆಯಲ್ಲಿ ಮತಗಿಟ್ಟಿಸಿಕೊಳ್ಳಲು ಈ "ಸೇವೆ"ಯಿಂದ ಸಹಾಯವಾಗದೆ?

ಮುರಾರ್ಜಿ ದೃಢ ನಿಲುಮೆಯ ವ್ಯಕ್ತಿ. ಅವರ ಚರಿತ್ರೆ ತೆರೆದ ಪುಸ್ತಕವೇ. ರಾಜಕೀಯವಾಗಿ, ಸಾಮಾಜಿಕವಾಗಿ ಮುರಾರ್ಜಿ ತುಂಬ ಸೇವೆ ಸಲ್ಲಿಸಿದವರು.

ಅವರ ಮೇಲೆ ಇದುವರೆಗೂ ಯಾವ 'ದಂಭೀರ' ಆರೋಪವೂ ಬರಲಿಲ್ಲ. ಈ ಇಳಿ ವಯಸ್ಸಿನಲ್ಲಿ ಮುಖಕ್ಕೆ ಮಸಿ ಬಳೆಯುವ ಪ್ರಯತ್ನ ವಿರೋಧೀ ಪಕ್ಷಗಳದ್ದು. ಜನನಾಯಕ ಪಂ. ಜವಾಹರಲಾಲ ನೆಹರೂ ತವರೇ ತನ್ನ ಕೊನೆಯ ದಿನಗಳಲ್ಲಿ ರಾಜಕೀಯದ ಹೊಲಸು ರಾಜಕಾರಣದಿಂದ ಬೇಸತ್ತರಂತೆ. ಪ್ರಪಂಚ ಯಾರನ್ನಾದರೂ ಒಂದೇ ರೀತಿಯಾಗಿ ನೋಡುವುದಿಲ್ಲ. ಯಾರೊಬ್ಬನಿಗೂ ಸುಖ ಕೊಡಿಲ್ಲ.

x x x x

ಪ್ರಧಾನಿ ಇಂದಿರಾ ಗಾಂಧಿಯವರು ತಮ್ಮ ಪೂರ್ವಾಶ್ರಮ ಪಾಕಿಗೆ ನೀಡಿದ ಸಮರ ನಿಷೇಧ ಕೊಡುಗೆ ಮತ್ತು ಕೊಡಮಾಡಿದರು. ನಿರೀಕ್ಷಿಸಿದಂತೆ ಪಾಕಿಗಳು ಅದನ್ನು ತಿರಸ್ಕರಿಸಿದರು. ಭಾರತವು ಸಮರ ನಿಷೇಧ ಒಡಂಬಡಿಕೆಯನ್ನು ಮುಂದಿಡುತ್ತದೆ ಸಂಪ್ರದಾಯ, ಇದನ್ನು ತಿರಸ್ಕರಿಸುವುದು ಪಾಕ್ ಸತ್‌ಸಂಪ್ರದಾಯ.

'ಯುದ್ಧವಿಲ್ಲ' ಒಪ್ಪಂದ ಮಾಡಿಕೊಳ್ಳೋಣ— ಆದರೆ, ಅದಕ್ಕೆ ಮೊದಲು ಕಾಶ್ಮೀರವನ್ನು ನಮಗೆ ಧಾರೆಯೆರೆದು ಕೊಡಿ—ಇದು ಅಯ್ಯೂಬರ.— ಹಿಂದಿಯ—ಪುಂಡವಾದ. ಭಾರತದ ಸೂಚನೆಯನ್ನು ಜಾಗತಿಕ ದೃಷ್ಟಿಗೆ ಮಣ್ಣೆರಚುವ ಇನ್ನೊಂದು ಪ್ರಯತ್ನವೆಂದರೆ ಖಂಡವಾದ, ಯುದ್ಧವಿಲ್ಲ ಘೋಷಣೆಗೆ ಸಹಿ ಹಾಕುವುದಕ್ಕೆ ಮೊದಲು ಕಾಶ್ಮೀರದ ಪ್ರಶ್ನೆಯನ್ನು ಸ್ಪಷ್ಟಿಕರವಾಗಿ ಬಗೆಹರಿಸುವುದನ್ನು ಭಾರತ ಒಟ್ಟುಕೊಳ್ಳಬೇಕು.— ಇದ ರಾವಲ್ಪಿಂಡಿಯ ಹಳೆಯ ರಾಗಯಾರಿಗೆ ತೃಪ್ತಿಕರ? ಪಾಕಿಸ್ತಾನಕ್ಕೆ!

ಅಂದರೆ, ನಾವು ಬಡಾಯಿದ ಭೂಮಿಯನ್ನು ಕೆಂಬು ಚೀನೀಯ ಮಾವನಿಗೆ ಕೊಟ್ಟು ಶಾಂತಿಯನ್ನು ತಂದುಕೊಂಡಿದ್ದೇವೆ. ನೀವು ಕಾಶ್ಮೀರವನ್ನು ವಧುದಕ್ಷಿಣೆ ನೀಡುವಿರಾದರೆ ನಮ್ಮ 'ಜೈ ನೀ ಹುಡುಗ'ಯನ್ನು ಕೊಡುತ್ತೇವೆ. ಪಾಕಿಗಳು ಬುದ್ಧಿವಂತರು—ಬೇರೆಯವರ ಜಮೀನಿನಿಂದ ತನ್ನ ಕಾರ್ಯ ಸಾಧಿಸಿದ ಅಂತಾರಾಷ್ಟ್ರೀಯ ಮೇಧಾವಿಗಳು. ಭಾರತೀಯರು? ಟಿಬೇಟವನ್ನು ಚೀನಾ ಮೆಟ್ಟಿ ಬಂದಾಗ ಅದರದು "ಅಂತರಿಕ ವಿಚಾರ" ವೆಂದು ಕಣ್ಣು ಮುಚ್ಚಿ ಕುಳಿತ ಅಂತರ್ರಾಷ್ಟ್ರೀಯ ನ್ಯಾಯ ಪರಿಪಾಲಕರು. ಕಚ್-ರಾಣವನ್ನು ಮಧ್ಯಸ್ಥಿಕೆಗೆ ನೀಡಿ ಪಾಕಿಗೆ ಧಾರೆಹೀಡಲು ಮುಂದಾದ ದಾನಶೂರರು, ಕಾಶ್ಮೀರವನ್ನೂ ಯಾಕೆ ದಾಹ ನೀಡಬಾರದು?

ಶಾಂತಿ ಬೇಕಾಗಿರುವುದು ಇಂದು ಪಾಕಿಸ್ತಾನಕ್ಕಲ್ಲ, ಭಾರತಕ್ಕೆ. ಆದುದರಿಂದ ಬೇಕಾದವರು ಬೇಡವಾದವರನ್ನು ಸಮಾಧಾನ ಪಡಿಸಬೇಕು. ಕಾಶ್ಮೀರ ದಾನವೊಂದರಿಂದಲೇ ಈ ಸಮಾಧಾನ ಸಾಧ್ಯ ಆದುದರಿಂದ ನಿಮಗೆ ಶಾಂತಿ ಬೇಕಾದರೆ ಹೀಗೆ ಬಿಷ್ಟಿ--ಅಯ್ಯೂಬರ ಗಂಡುವಾದ. ಈ ಗಂಡ ದ್ವೇಷ ಬಂದುದಾದರೂ ಹೇಗೆ? ಪಾಶ್ಚಾತ್ಯ-ಪಾರಾತ್ಯ ರಾಷ್ಟ್ರಗಳ ಶಸ್ತ್ರಾಸ್ತ್ರ ಬಲದಿಂದ ಮೊದಲೇ ಕೊಬ್ಬಿದ ಅವರಿಗೆ ಈಗ ಔತ್ತರೇಯರೂ ಕೊಬ್ಬೂಡಿಸಲು ಮುಂದೆ ಬಂದಿದ್ದಾರೆ. ಹಾಗೆ ಮೂರು ಸುತ್ತಲೂ ಭದ್ರರಕ್ಷೆಯಿರುವ ಅಯ್ಯೂಬ ಖಾನರು ಒಂದೇ ಕಡೆಯ ಭಾರತಕ್ಕೆ ಸೊಪ್ಪು ಹಾಕುವುದುಂಟೆ? ಭಾರತವನ್ನು, ಭಾರತದ ನೀತಿಯನ್ನು ಹುಲ್ಲಿಗಿಂತ ಕಡೆಯಾಗಿ ಕಾಣುವ ಅಯ್ಯೂಬರ ಗಂಡುನೀತಿಗು ಮುಂದೆ ಭಾರತದ ಹೆಣ್ಣು ನೀತಿ--ಅಂಜುಬುರುಕ ಯ ಬಳವಾದ.

ಭಾರತವು ಶಾಂತಿ ಪಾಲನೆಯಲ್ಲಿ ತಾನು ಮುಂದೆಂದು ತೋರಿಸಿಕೊಟ್ಟಿದೆ ನಿಜ. ಕೋಸಿಗಿನ್ನರ ಸಾನ್ನಿಧ್ಯದಲ್ಲಿ ಸಹಿ ಮಾಡಿದ ತಾಷ್ಕೆಂಟ್ ಘೋಷಣೆಯನ್ನೇ ಕಾಲಿಂದೊದ್ದು ತುಳಿದ ಅಯ್ಯೂಬ ಖಾನರು ಯಾವ ಘೋಷಣೆಯನ್ನು ಮಾಡಿದರೂ ಅದನ್ನು ಪರಿಪಾಲಿಸುವ ಪರಿಪಾಟಿಯವರಲ್ಲ. ಬರಿಯ ಘೋಷಣೆಯೆಂದರೆ, ಕಂಠಶೋಷಣೆ ಮಾತ್ರ. ಪಾಕಿಗೆ ಬೇಕು ಕಾಶ್ಮೀರ, ಅದಕ್ಕಾಗಿ ಶಸ್ತ್ರಾಸ್ತ್ರ ಬಲ-ಯುದ್ಧ. ಯುದ್ಧ ನಿಷೇಧದ ಕೂಡುಗೆಯೆಂದರೆ, ಅದೂ ಅವಾಂಛಿತವೆಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಬೇಕೆ?

ಭಾರತೀಯ ಯುವತಿಯರನ್ನು ಅಪಹರಿಸಿ, ಅವರಿಗೆ ನಾನಾ ಪ್ರಕಾರದ ಆಶೆ-ಆಮಿಷ-ಪ್ರಲೋಭನಾದಿಗಳನ್ನು ತೋರಿಸಿ ವಿದೇಶಗಳಲ್ಲಿ ಮಾರಲಾಗುತ್ತಿದೆಯೆಂಬ ಆರೋಪ ಬಹಳ ಹಿಂದಿನದೇ. ಅರಬ ದೇಶದಲ್ಲಿ ಭಾರತೀಯ ನವೋಧೆಯರಿಗೆ ಧಾರಾಳ ಸಾಮಾಗಟ್ಟಿಗೆ ಮಾಲುಗಳನ್ನು ಪೂರೈಸುವ ಅಂತಾರಾಷ್ಟ್ರೀಯ ತಂಡವೊಂದಿದೆ ಇದೆ. ಈ ತಂಡದ ಒಬ್ಬ ಸದಸ್ಯ ಅರಬ್ಬ ರಾಷ್ಟ್ರೀಯನೊಬ್ಬ ಈಗ ಬಂಧನಕ್ಕೊಳಗಾಗಿದ್ದಾನೆ. ಭಾರತದ ಮಹಾನಗರ ಬೊಂಬಾಯಿ ಎಲ್ಲವುಗಳಲ್ಲಿಯೂ ಮುಂದುವರಿದಂತೆ ಈ ಪಾರೀ ವಿಕ್ರಯದಲ್ಲೂ ಅಗ್ರತಮ. ಅರಬ್ಬ ನೆಲಕ್ಕೆ ತರುಣಿಯರನ್ನು ತರುವುದೇ ಪ್ರಯಾಸ—ಆ ಮೇಲೆ ಅವರ ವಿಕ್ರಯ ನಿಮಿತ್ತಾರ್ಥದಲ್ಲಿ. ಗಾರಿಂದ ೨೦ ಸಾವಿರ ರೂಪಾಯಿಗಳ ಸಂಪಾದನೆ ಈ ವಿಕ್ರಯಗಾರನಿಗೆ. ವಿಕ್ರೀತಳಿಗೆ? ಧನ ಮದೋನ್ಮತ್ತರ ಕಾಮತೃಪ್ತಿ ಮಾಡುವ ಪರಿಚರ್ಯೆ.

ಸದ್ಯ ಬಂಧಿತನಾದ ಅರಬ್ಬನ ಸಹಾಯದಿಂದ ಅಂತಾರಾಷ್ಟ್ರೀಯ ಕನ್ಯಾ ವಿಕ್ರಯಗಾರ ತಂಡದ ರೋಳವಾದೀತೆ? ಭಾರತೀಯ ನಾರಿಯರು--ತರುಣಿಯರು—ನಿರ್ಭಾತಕ್ಕೊಂದು ಕೊನೆ ಬಿದ್ದೀತೆ? ಅವರ ಮಾನ ರಕ್ಷಣೆಯಾದೀತೆ?

—ಗೋ.

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಪಾಕರಿಯಾಕ ಆಯುರ್ವೇದ ಔಷಧಿ ಮತ್ತು ಪಥ್ಯ ಪೈದ್ಯರ ಸೇವೆಯ
ಗೆಲವಿಗಾಗಿ, ಇಷ್ಟರಿಗೆ ಇರಲಿ

SHANKAR PHARMACY
BHADRAVATI.(MYSORE.)

ಯೋಗೆ ದರ್ಶನ

(ಐದನೆ ಸಂಚಿಕೆಯಿಂದ(

ಯೋಗಾಭ್ಯಾಸಕ್ಕೆ ಅನೇಕ ಅಡಂಕಗಳು ಬರುತ್ತವ. ಮೊದಲನೆಯ ಅಡಂಕ ವ್ಯಾಧಿ. ಶರೀರವು ರೋಗರಹಿತವಾಗಿಯೂ, ಶಕ್ತಿಯುತವಾಗಿಯೂ ಇಲ್ಲದಿದ್ದರೆ ಯೋಗಸಾಧನೆ ಸಾಧ್ಯವಿಲ್ಲ. ಆದ್ದರಿಂದಲೇ ನಮ್ಮ ಹಿರಿಯರು 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂದಿರುವದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಆಹಾರ, ವಿಹಾರ, ನಿದ್ರಾ ಸಂಬಂಧದವುಗಳೆಲ್ಲವೂ ಯುಕ್ತವಾಗಿ ಇರಬೇಕು ಎಂದಿರುತ್ತಾನೆ. ಹೀಗೆ ವಿಷಯ, ಅವರ ತಂತ್ರಗಳು ಹಾಗುವವನ ಪ್ರತಿಗೆ ಶಕ್ತವು ಮೂತ್ರ ಬಿಗಿಯಾಗಿದ್ದರೆ, ಕರ್ಣಾಸಂಬಂಧವಾದ ನಾದವನ್ನು ಕೊಡಬಲ್ಲದೋ ಹಾಗೆಯೇ ದೇಹಪೋಷಣೆಯಲ್ಲಿ ಮಧ್ಯ ಪಂಥವನ್ನು ಅವಲಂಬಿಸಿದರೆ ಈ ಶರೀರದ ಪೂರ್ಣ ಪ್ರಯೋಜನವನ್ನು ಪಡೆಯಬಹುದು. ಮೂರನೆಯ ಅಡ್ಡಿಯೇ ಎರಡನೆಯ ಅಡಂಕ. ಮೂರನೆಯ ಆಲಸ್ಯದಿಂದ ಸಾಧನೆ ಮಾಡುವ ಉತ್ಸಾಹವೇ ಮರೆಯಾಗುವುದು. ಅಲ್ಲದೆ, ಆಲಸ್ಯವು ಅನೇಕ ರೀತಿಯ ಪ್ರಮಾದಗಳಿಗೆ ಎಡೆಗೊಡುವುದು. ಇದರಿಂದ ಸಾಧನೆಯಲ್ಲಿ ಬೇಸರ, ಯೋಗಾಭ್ಯಾಸಕ್ಕೆ ನಮ್ಮ ದೈನಂದಿನ ಕರ್ತವ್ಯಗಳ ನಡುವೆ ಸಮಯವೇ ಸಿಕ್ಕದೆಂಬ ಮನೋಭಾವ ಉಂಟಾಗುತ್ತದೆ. ಯೋಗದಲ್ಲಿ ಮುಂದುವರಿಯುವಾಗ ಬೇರೆ ಬೇರೆ ಹಂತಗಳಲ್ಲಿ ಅನೇಕ ಸಂಶಯಗಳು ತಲೆದೋರುತ್ತವೆ. ಉಪಾಸಕನಿಗೆ ಪರಮ ಗುರಿಯನ್ನು ಸೇರುವ ಸಾಧ್ಯತೆಯ ಬಗ್ಗೆ, ಸಂಪರ್ಕ ಉಪದೇಶದ ಬಗ್ಗೆ, ಶಾಸ್ತ್ರ ಪ್ರಾಮಾಣ್ಯದ ಬಗ್ಗೆ ಸಂಶಯ ಸಮೂಹವೇ ತಲೆದೋರಬಹುದು. ವಿಷಯಲೋಲುಪತೆ, ಮನಸ್ಸಿನ ಚಂಚಲತೆ ಇವು ಇನ್ನು ಕೆಲವು ಅಡ್ಡಿಗಳು. ಯೋಗಕ್ಕೆ ಭಂಗವನ್ನು ತರುವ ಅಲೋಚನೆಗಳನ್ನು ಹಡೆಯುವುದಕ್ಕಾಗಿ ಅದಕ್ಕೆ ವಿರೋಧವಾದ ಭಾವನೆಗಳನ್ನು ಮನಸ್ಸಿನಲ್ಲಿ ಪ್ರಯತ್ನ ಪೂರ್ವಕವಾಗಿ ತರಬೇಕು.

ಸಹನೆ, ಕರುಣೆ, ಉಪೇಕ್ಷೆ, ಸಂತೋಷ ಇತ್ಯಾದಿಗಳನ್ನು ಹಾಗೂ ಯೋಗಾಂಗಗಳನ್ನು ಅತ್ಯಂತ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಅಭ್ಯಾಸದಿಂದ ಅಡಂಕಗಳನ್ನು ದೂರಗೊಳಿಸಬಹುದು.

ಅನೇಕರು ಯೋಗಾಭ್ಯಾಸದಿಂದ ಬರುವ ಪೂರ್ವಜನ್ಮ ಸ್ಮರಣ, ಭವಿಷ್ಯ ದರ್ಶನ, ಪರಕಾಯ ಪ್ರವೇಶ, ಇನ್ನೊಬ್ಬನ ಮನಸ್ಸಿನಲ್ಲಿ ಇರುವುದನ್ನು ತಿಳಿಯುವುದು ಇತ್ಯಾದಿ ಸಿದ್ಧಿ ಅಥವಾ ಸವಾದ ಶಕ್ತಿಗಳನ್ನು ಪಡೆಯತ್ತಾರೆ. ಆದರೆ ಇವು ಪ್ರಾಪಂಚಿಕ ದೃಷ್ಟಿಯಿಂದ ಎಷ್ಟು ಅದ್ಭುತವೆನಿಸಿದರೂ ಪರಮ ಗುರಿಯ ಸಾಧನೆಗೆ ಅಡಚಣೆಗಳೇ. ಕೆಳದರ್ಜೆಯ ಸಾಧಕರು ಸೂಕ್ಷ್ಮ ಇವನ್ನು ಪಡೆಯಲು ಕ್ರಮಿಸುತ್ತಾರೆ. ಉತ್ತಮಾಧಿಕಾರಿಗಳು ಇವುಗಳನ್ನು ಕೇವಲ ಪ್ರಲೋಭನೆಗಳೆಂದು ತಿಳಿದು ತ್ಯಜಿಸಿ ಮುಂದುವರೆಯುತ್ತಾರೆ.

ಯೋಗವೆಂದರೆ ವಿಶಾಲವಾದ ಅರ್ಥದಲ್ಲಿ 'ಯಾವ ಶಾರ್ಗದಿಂದ' ಜೀವಾತ್ಮ ಪರಮಾತ್ಮರ ಐಕ್ಯ ಸಾಧ್ಯವಾಗುವುದೋ ಅಂತಹ ಸಾಧನ ವಿಧಾನ ಎಂದಾಗುವುದು. ಇಂತಹ ಮಾರ್ಗಗಳನ್ನು ಸ್ಥೂಲವಾಗಿ ಜ್ಞಾನ್ಯ ಬಗೆಯಾಗಿ ವಿಂಗಡಿಸಿಕೊಳ್ಳುವುದು. ಭಗವದರ್ಪಿತವಾದ ನಿಷ್ಕಾಮ ಕರ್ಮವೇ ಪ್ರಧಾನವಾದ ಮಾರ್ಗವು ಕರ್ಮಯೋಗವೆನಿಸಿಕೊಳ್ಳುವುದು. ಭಗವತ್ಪ್ರೇಮವೇ ಪ್ರಧಾನವಾಗುಳ್ಳ ಮಾರ್ಗವು ಭಕ್ತಿಯೋಗ. ಪಿತ್ಯಾನಿತ್ಯ ವಸ್ತು ವಿವೇಕವೇ ಪ್ರಧಾನವಾಗಿರುಳ್ಳ ಮಾರ್ಗವು ಜ್ಞಾನಯೋಗವೆನಿಸಿಕೊಳ್ಳುವುದು ಪ್ರಾಣಾಯಾಮ, ಪ್ರತ್ಯಾಹಾರ ಮೊದಲಾದ ಯೋಗಾಂಗಗಳು ಪ್ರಧಾನವಾಗುಳ್ಳ ಸಾಧನಮಾರ್ಗಕ್ಕೆ ರಾಜಯೋಗವೆಂದು ಹೆಸರು. ಈ ಯೋಗಗಳಲ್ಲಿ ಒಂದೊಂದೂ ಪರಮ ಗುರಿಯೆಡೆಗೆ ಸಾಧಕವನ್ನು ಕರೆದೊಯ್ಯಲು ಸಮರ್ಥವಾಗಿದ್ದರೂ ಇವುಗಳ ಸವ ಸ್ವರೂಪವು ಸರ್ವತೋಮುಖವಾದ ಆಧ್ಯಾತ್ಮಿಕ ಉನ್ನತಿಗೆ ಬಹಳ ಸಹಾಯಕಾರಿ. ಕೆಲವು ವೇಳೆ ಕರ್ಮವು ಉದ್ದೇಶರಹಿತವಾಗಿ ಪರಿಣಮಿಸಿ ಕೇವಲ ಮನಶ್ಶಾಂತಿಚಲ್ಯಕ್ಕೆ ಕಾರಣವಾಗಬಹುದು. ರಾಜಯೋಗವು ಸರಿಯಾದ ಗುರುವಿಲ್ಲದಿದ್ದರೆ ಕೇವಲ ದೇಹದಂಡನೆ ಮತ್ತು ಸಿದ್ಧಿಗಾಮವೆಯಲ್ಲಿ ಪರ್ಯವಸಾನಗೊಳ್ಳಬಹುದು. ಭಕ್ತಿಯು ಅರ್ಥವಿಲ್ಲದ ಉದ್ರೇಕ, ಮೂಢ ನಂಬಿಕೆಗಳಲ್ಲಿ ಕೊನೆಗಾಣಬಹುದು. ಜ್ಞಾನವು ಶುಷ್ಕವಾಂಡಿತ್ಯ ಮತ್ತು ತರ್ಕಗಾಣದಲ್ಲಿ ಕೂಡಿದ ಕರ್ಮಸನ್ಯಾಸದಲ್ಲಿ ಕೊನೆಗಾಣಬಹುದು. ಇದ್ದರಿಂದ ಈ ಎಲ್ಲ ಯೋಗಗಳನ್ನು ಸಮನ್ವಯ ಮಾಡಿ ಏಕಕಾಲದಲ್ಲಿ ಅಭ್ಯಾಸಮಾಡುವುದರಿಂದ ಒಂದೇ ಯೋಗದಿಂದ ಬರಬಹುದಾದ ಅಪಾಯವನ್ನು ತಪ್ಪಿಸಿಕೊಂಡು ಸಾಧನೆಯನ್ನೂ ಸುಲಭ ಮಾಡಿಕೊಳ್ಳಬಹುದು.

ಗಾಂಧಿವಾಣಿ

ಭಕ್ತನಾರು?

(ಪ್ರಶ್ನೋತ್ತರ)

ಭಕ್ತನಾರು?

ಆಶೆಯೆ ಇಲ್ಲದವನು.

ದಯಾವಂತನಾರು?

ಅಹಂಕಾರ ಇಲ್ಲದವನು.

ನಿಸ್ವಾರ್ಥಿ ಯಾರು?

ಶೀತ—ಉಷ್ಣ ಸುಖ-ದುಃಖಗಳನ್ನು ಒಂದೇ ರೀತಿಯಾಗಿ ಭಾವಿಸುವವನು.

ಕ್ಷಮಾಶೀಲನಾರು?

ಸದಾ ತೃಪ್ತನಾದವನು.

ಯಾರು ದೃಢನಿಶ್ಚಯವನು?

ದೇವರಲ್ಲಿ ಮನಸ್ಸನ್ನೂ ಅತ್ಮವನೂ ನೆಲೆಗೊಳಿಸಿದವನು.

ಯಾವನು ಭಯ ಉಂಟು ಮಾಡುವುದಿಲ್ಲ?

ಯಾರಿಗೆ ಅನ್ಯರ ಭಯವಿಲ್ಲವೊ ಅತನು.

ಯಾವನು ಶೋಕ, ಸಂತೋಷ, ಭೀತಿಗಳಿಂದ ದೂರವಿರುತ್ತಾನೆ?

ಪರಿಶುದ್ಧನಾದವನು.

ಕರ್ಮಕುಶಲನಾಗಿಯೂ, ಕರ್ಮಗಳಿಂದ ಅಲಿಪ್ತನಾಗಿರುವವನಾರು?

ಅವುಗಳ ಇಷ್ಟಾನಿಷ್ಟ ಫಲಗಳನ್ನು ತ್ಯಾಗ ಮಾಡುವವನು.

ಶತ್ರು-ಮಿತ್ರರನ್ನು ಒಂದೇ ದೃಷ್ಟಿಯಿಂದ ನೋಡುವವನಾರು?

ಮಾನಾಪಮಾನಗಳಿಂದ ಅಲಿಪ್ತನಾಗಿರುವವನು.

ಹೊಗಳಿಕೆಯಿಂದ ಹಿಗ್ಗಿಗೊಳ್ಳದವನಾರು?

ಯಾರು ಜನರ ಛಂದಿಯಿಂದ ಕುಗ್ಗುವದಿಲ್ಲವೊ ಅವನು.

ಯಾರು ಮೌನ ಮತ್ತು ನಿಶ್ಚಿಂತ ಬಯಸುತ್ತಾನೆ?

ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡವನು.

(ಆಂಗ್ಲದಿಂದ ಭಾಷಾಂತರಿಸಿದ್ದು)

—ಪಾಂ.

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ ರೂ. ೩-೦೦ [ಪ. ಖ. ಪ್ರತ್ಯೇಕ]

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ 'ಮನೆಮದ್ದು' ಇದ್ದರೆ ಗಾಬರಿಯೇಕೆ?

ಮನೆ-ಮದ್ದು HOME REMEDIES

ಪ್ರತಿ ಮನೆಯಲ್ಲಿ ಇರಲೇಬೇಕಾದ
ಅತ್ಯುಪಯುಕ್ತ ಪುಸ್ತಕ

ಬರೆದವರು ಡಾ॥ ಕೊರ್ಡ್ಲಲ್ ವೆಂಕಟ್ರಾವ್, ಎಲ್ ಐ ಎಮ್.

'Ably written- Quite up-to-date valuable service'
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ ಶ್ರೀನಿವಾಸ ಮೂರ್ತಿ, ಎಮ್. ಆರ್. ಸಿ. ಎಸ್. ಇವರು ಮುನ್ನುಡಿಯನ್ನು ಕೊಟ್ಟಿದ್ದಾರೆ.

ಮಠಗಳು, ಹೆಂಡತಿರು, ಸರ್ಕಾರಿಯವರು ಇವರು ಎಲ್ಲರು ಸಾಮಾನ್ಯ ಕಾಹಿಲೆಗಳಿಗೂ ಕುಳೆಯಲ್ಲೇ ಮದ್ದು ಪಡಾಡುವ ವಿಧಾನವು ಇದರಿಂದ ಸಲ್ಪಟ್ಟಿ ಗೃಹಪೈದ್ಯ. ಹೊಸ ವಿಧಾನ ಸರಳವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೩-೦೦ (ಪ. ಖರ್ಚು ಬೇರೆ)

— ಪ್ರತಿಗಳಿಗೆ ಇರೆಯರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S.C. 105/67.

ಉಡುಪಿ ಶ್ರೀ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಸ್ವಾಮಿರು—ವಾದಿರು,

ಮತ್ತು

ಸೀತಾರಾಮ ಬಲ್ಲಾಳ ಕೂಡಾ—

ಪ್ರತಿವಾದಿರು,

ಇವರೊಳಗೆ

1ನೆ ಪ್ರತಿವಾದಿ..ಸೀತಾರಾಮ ಬಲ್ಲಾಳ, ಕಾವು ಸಿದ್ದಿ ದೇಗ, ಉಡುಪಿ ತಾಲೂಕು ಮೂಡಬೆಟ್ಟು ಗ್ರಾಮದ ಕಟಪಾಡಿ.

ಇವರಿಗೆ ಈ ಮೂಲ್ಯ ತಿಳಿಯಪಡಿಸುವುದೇನೆಂದರೆ—

ವಾದಿರ ಮಠಕ್ಕೆ ಪ್ರತಿವಾದಿರಿಂದ ಬರಬೇಕ್ಕ ಮೂಲಗೇಣಿ ಬಾಕಿ ಅಸಲು, ಬಡ್ಡಿಗೆ ಬಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 12.9.68ಕ್ಕೆ ಯಿಟ್ಟಿದೆ. ಆ ಕುರಿತು 1ನೇ ಪ್ರತಿವಾದಿಗೆ ಅಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿನ ಪೂರ್ವಾಹ್ನ 11 ಗಂಟೆಗೆ ಯಿ ಕೋರ್ಟಿಗೆ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidiyur,
Advocate for Plaintiff.

ಉಡ್ಪಿ, 20.8.68.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O.S. No. 162/1968.

ಉಡ್ಪಿ ಶ್ರೀ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಸ್ವಾಮಿರು—ವಾದಿರು,

ಮತ್ತು

1. ಸಾವಿತ್ರಿ—ನಾಗಪ್ಪ ನಾಯ್ಕನ ವಿಧವೆ.
2. ವೆಂಕಪ್ಪ ನಾಯ್ಕ—1ನೆ ಪ್ರತಿವಾದಿಗಳು ಅಲಿಯ, ಉಡ್ಪಿ ತಾಲ್ಕ, ಬೆಳ್ಳರಪಾಡಿ ಗ್ರಾಮದ ನಂಕಟೆಟ್ಟು— ಪ್ರತಿವಾದಿರು

ಇವರೊಳಗೆ

ಸದ್ರಿ ಪ್ರತಿವಾದಿರಿಗೆ ಯಿ ಮೂಲ್ಯ ತಿಳಿಸುವುದೇನೆಂದರೆ—

ಸದ್ರಿ ವಾದಿರ ಮಠದ ಎಳಗೆ ಪ್ರತಿವಾದಿರು ಚಾಲಗೇಣಿಗೆ ಅನುಭವಿಸುವ ಅಸ್ತಿಯ ಬಾಬ್ತು ಬರತಕ್ಕ ಗೇಣಿ ಬಾಕಿ ಅಸಲು ಬಡ್ಡಿಗೆ ವಾದಿರು ಬಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 5.9.68ಕ್ಕೆ ಯಿಡೇಣಾಗಿಯುದೆ. ಪ್ರತಿವಾದಿರಿಗೆ ಅಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿನ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ತಿಳಿಸೋಣಾಗಿಯುದೆ.

V. R. KIDIYUR
Advocate for Plaintiff.

ಉಡ್ಪಿ 16.8.68.

ಮುಖ್ಯಮಂತ್ರಿ ಸಂದೇಶ

ಜಾತೀಯ ಸೌಹಾರ್ದದಿಂದಲೇ ಶಾಂತಿ

(ಶ್ರೀ ವೀರೇಂದ್ರ ಪಾಟೀಲರ ಭಾಷಣದಿಂದ)

"ನಮ್ಮ ಈ ಭರತ ಭೂಮಿಯಲ್ಲಿ ಭಿನ್ನ ಭಾಷೆಗಳಿದ್ದರೂ, ಭಿನ್ನ ಪಡವಳಿಕೆಗಳಿದ್ದರೂ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ನಾವೆಲ್ಲಾ ಒಂದೇ ದೇಶ ಮಾತೆಯ ಮಕ್ಕಳು ಎಂಬುದನ್ನು ಮರೆಯಲಾಗದು. ಗಾಂಧೀಜಿ, ನೆಹರೂ, ವಲ್ಲಭಭಾಯಿ ಪಟೇಲ್ ಮುಂತಾದ ಮಹಾ ನಾಯಕರು ಭಾವೈಕ್ಯತೆಗೆ ಶ್ರಮಿಸಿದ್ದಾಗ್ಯೂ ನಮ್ಮ ಜನರಲ್ಲಿ ಐಕ್ಯತೆ ಸಾಕಷ್ಟು ಮೂಡಿ ಬಂದಿಲ್ಲ. ಪ್ರಾಂತೀಯ ಸಂಕುಚಿತ ಭಾವನೆಗಳೂ, ಭಾಷಾ ಪ್ರೇಮದ ಅತಿರೇಕಗಳೂ, ಭಾಷಾವಾರು ಪ್ರಾಂತ್ಯಗಳ ಗಡಿ ವಿವಾದಗಳೂ, ನದಿಗಳ ನೀರಿನ ಹಂಚಿಕೆಯ ವಿವಾದಗಳೂ ಅನಿಷ್ಟ ಪರಂಪರೆಯಲ್ಲಿ ಬೆಳೆದಿವೆ. ಇಂತಹ ಸಂಕುಚಿತ ಭಾವನೆಗಳ ಇಷ್ಟಿದ್ದಲ್ಲಿ ನಮ್ಮ ದೇಶೋನ್ನತಿ ಸಾಧ್ಯವಿಲ್ಲ. ನಮ್ಮ ನಾಡಿನ ಮಕ್ಕಳು ಭಾವೈಕ್ಯತೆಯ ತಳದಿಯ ಮೇಲೆ ದೇಶದ ಸ್ವಾತಂತ್ರ್ಯವನ್ನು ಭದ್ರಗೊಳಿಸಬೇಕು.

"ಪ್ರಜಾಪ್ರಭುತ್ವದ ಶ್ರೇಷ್ಠತೆಯು ಚೆನ್ನಾಗಿ ಬೆಳಗಬೇಕಾದರೆ, ಜನರಲ್ಲಿ ಶಿಕ್ಷಣ, ಸಂಯಮ ಸದ್ಬುದ್ಧಿ ಮತ್ತು ನಿರಂತರ ರಾಷ್ಟ್ರಭಕ್ತಿ ನೂರ್ವಾಡಿಯಾಗಿ ಪ್ರಕಟಗಬೇಕು. ಶಿಕ್ಷಣ, ಸಂಯಮಗಳಿಂದಲೇ ಪ್ರಜಾಪ್ರಭುತ್ವದ ದೃಢ ಭದ್ರತೆ ಬೆಳೆದೀತು. ಈ ಅಂಶಗಳಲ್ಲಿ ಕುಡಿಲತೆ—ಇದ್ದರೆ, ಆಗ ಪ್ರಜಾಪ್ರಭುತ್ವದ ಪದ್ಧತಿಗೆ ಧಕ್ಕೆ ಬರುವುದರಲ್ಲಿ ಸಂಶಯವಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಸ್ ಫೂರ್ತಿ ಒದಗಿ ಬಂದಾಗ ಅದರ ಜವಾಬ್ದಾರಿಗಳೇನೆಂಬುದನ್ನು ಜನರಿಂದು ಸಂಘಟನೆ, ಐಕ್ಯತೆ, ಭ್ರಾತೃಭಾವ ಮತ್ತು ದೇಶ ಪ್ರೇಮಗಳಿಂದ ನಡೆಯಬೇಕೆಂಬುದೇ ನನ್ನ ಪೂರ್ಣ ಆಶಯ."

1947ನೆಯ ಇಸವಿ, ಆಗಸ್ಟ್ ಹೂಹೆ 15ನೆಯ ತಾರೀಕಿನ ಶುಭೋದಯದಂದು ನಮ್ಮ ಸ್ವಾತಂತ್ರ್ಯ ಜ್ಯೋತಿ ಬೆಳಗಿ, ಭಾರತೀಯರಲ್ಲಿ ನವಚೈತನ್ಯವನ್ನುಂಟು ಮಾಡಿತು. ಅಂದಿನಿಂದ ಅನೇಕ ಸಮಸ್ಯೆಗಳು ನಮ್ಮ ಮುಂದೆ ಬಂದವು; ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು: ಭಾರತ — ಪಾಕಿಸ್ತಾನದ ವಿಭಜನೆಯ ಆಂದೋಲನ, ದೇಶಿಯ ಸಂಸ್ಥಾನಗಳ ವಿಲೀನೀಕರಣ, ನಿರಾಶ್ರಿತರ ವಸತಿ ಸಮಸ್ಯೆ ಇವನ್ನೆಲ್ಲಾ ಧೈರ್ಯ ಸ್ಥೈರ್ಯಗಳಿಂದ ಪರಿಹರಿಸಲಾಯಿತು.

ಚೀನಾ ಮತ್ತು ಪಾಕಿಸ್ತಾನದವರು ನಮ್ಮ ಕಡೆ ಇನ್ನೂ ವಕ್ರ ದೃಷ್ಟಿಯಿಂದಲೇ ಇದ್ದಾರೆ. ಶಾಂತಿಯ ಆರಾಧಕರಾದ ನಮ್ಮ ಮೇಲೆ ವೃಥಾ ಏರಿಬಂದ ಈ ನೆರೆಯ ರಾಷ್ಟ್ರಗಳ ಮನೋಭಾವನೆ ಏನೆಂಬುದು ನನಗೆ ಇನ್ನೂ ಗೊತ್ತಾಗಿಲ್ಲ. ಅವರೂ, ನಾವೂ ಶಾಂತಿಯಿಂದ ಸಹಬಾಳ್ವೆ ಪಡೆಯಬೇಕೆಂಬುದೇ ನಮ್ಮ ಇಚ್ಛೆ.

ಭಾರತದ ವಿದೇಶಾಂಗ ನೀತಿ ಕೆಲವಿಡೆ ಬಳಲ್ಲಿ ಟೀಕೆಗೊಳಗಾಗಿದ್ದರೂ ರಾಷ್ಟ್ರ ರಾಷ್ಟ್ರಗಳಲ್ಲಿ ಸ್ನೇಹ ಮೈತ್ರಿಗಳಿರಬೇಕೆಂಬುದೇ ನಮ್ಮ ಸದ್ಭಾವನೆ ವಿದೇಶಾಂಗ ನೀತಿ.

ನಮ್ಮ ದೇಶದ ಆಹಾರ ಸಮಸ್ಯೆ ಇನ್ನೂ ನಮ್ಮನ್ನು ಕಾಡುತ್ತಿದೆ. ಅತಿವೃಷ್ಟಿ, ಅನಾವೃಷ್ಟಿಗಳಿಂದ ಜನಸಾಮಾನ್ಯರ ಕ್ಷೇಮ ನೆಮ್ಮದಿಗಳು ಅಲ್ಲೋಲ ಕಲ್ಲೋಲವಾಗಿವೆ. ಮೈಸೂರು ರಾಜ್ಯದ ಅನೇಕ ಭಾಗಗಳಲ್ಲಿ ಸಕಾಲದ ಮಳೆ ಬಾರದೆ, ಬೆಳೆಯಾಯ್ದೆ ಪಡೆಯುಂಟಾಗಿದೆ. ಅಭಾವ ಪರಿಹಾರಗಳಿಗೆ ಕೇಂದ್ರದ ಋಣಕಾಸಿನ ನೆರವನ್ನು ಕೇಳಿದ್ದೇವೆ, ಅದರಿಂದ ನಮ್ಮ ಕಷ್ಟಗಳು ಪರಿಹಾರವಾಗುವುದೆಂಬ ನಂಬಿಕೆ ನಮಗಿದೆ.

ಪಂಚವಾರ್ಷಿಕ ಯೋಜನೆಗಳಿಂದ ದೇಶದ ಆರ್ಥಿಕ ಸ್ಥಿತಿಗೆ ಭದ್ರತೆ ದೊರೆತಾಗ್ಯೂ, ಆ ಯೋಜನೆಗಳಿಂದ ಜನಾಶಯ ನೆರವೇರಿಲ್ಲ ಎಂಬ ಟೀಕೆಗಳಿವೆ. ಆರ್ಥಿಕಾಭಿವೃದ್ಧಿಯ ಪೂರ್ಣ ಫಲಗಳು ದೊರೆಯಬೇಕಾದರೆ ಜನರಲ್ಲಿ ಸಹನೆ ಅವಶ್ಯಕ. ಅವ ನರಡಲ್ಲಿ ಯಾವ ಕಾರ್ಯ ಯೋಜನೆಯೂ ಫಲ ನೀಡುವುದಿಲ್ಲ.

ಅರ್ಥಿಕೋನ್ನತಿಯು ಮಹಾ ವೇಗದಲ್ಲಿ ಬೆಳೆಗಳ ಏರಿಕೆ ಸ್ವಾಭಾವಿಕ. ಆಧುನಿಕ ವೈಮಾನಿಕ ವಿಧಾನಗಳಿಂದ ಬೆಳೆಗಳು ಅಧಿಕಗೊಂಡರೆ, ಪದಾರ್ಥಗಳ ಬೆಲೆ ಇಳಿದೀತು. ಈ ಅಧಿಕೋತ್ಪತ್ತಿಯ ಕಡೆ ನಮ್ಮ ರೈತಾಪಿ ವರ್ಗದವರು, ಗಮನ ನೀಡಬೇಕು. ಅವರು ಪರಿಪೂರ್ಣ ದೇಶಭಕ್ತಿಯಿಂದ ನಡೆದುಕೊಳ್ಳಬೇಕು.

ದೇಶದ ಕೆಲವು ಕಡೆ ಅರಾಜಕತೆ ಬೆಳೆದಿದೆ. ಕೋಮುವಾರು ದ್ವೇಷಗಳ ಕ್ರೂರ ಕಿಡಿಗಳಿಂದ ಶಾಂತಿ ಕದಡಿದೆ. ದೇಶಾಭಿಮಾನಿಗಳಾದ ಸತ್ಪ್ರಜೆಗಳು ಕೋಮು, ಕೋಮುಗಳಲ್ಲಿ ಸ್ನೇಹ ಸೌಹಾರ್ದಗಳನ್ನು ಕಲ್ಪಿಸಿ, ಶಾಂತಿಯ ಮಂತ್ರವನ್ನು ಉಪದೇಶಿಸಬೇಕು. ಭಾರತದ ಜನಕೋಟಿ, ಅನಂತ ಕಲ್ಯಾಣ ದೃಷ್ಟಿಯಿಂದ ಕೋಮು ಕೋಮುಗಳ ಪರಸ್ಪರ ಮೈತ್ರಿಗೆ ಶ್ರಮಿಸಬೇಕು. ಈ ಸದ್ಭಾವನೆಯೇ ನಮ್ಮ ಹರಿಯೂಸೆಯಾಗಬೇಕು.

ಸ್ವತಂತ್ರ ಭಾರತದ ಕಷ್ಟ ಕಾರ್ಪಣ್ಯಗಳು ಇನ್ನೂ ತಪ್ಪಿಲ್ಲ. ನಮ್ಮ ಜನಸಾಮಾನ್ಯರಿಗೆ ಪೂರ್ಣ ಕ್ಷೇಮ ನೆಮ್ಮದಿಗಳು ಅವಶ್ಯಕ. ಈ ಕರ್ತವ್ಯ ಭಾರದಲ್ಲಿ ಕೇಂದ್ರ ಸರ್ಕಾರವೂ, ರಾಜ್ಯ ಸರ್ಕಾರಗಳೂ ಶಕ್ತಿಮೀರಿ ಶ್ರಮಿಸುತ್ತಿವೆ. ಸ್ವಾತಂತ್ರ್ಯೋತ್ಸವದ ಈ ಶುಭದಿನ ನಾವು ಸರ್ವರೂ ದೇಶೋನ್ನತಿಗೆ ಕಂಕಣ ಬದ್ಧರಾಗಬೇಕು. ನಮ್ಮೆಲ್ಲರ ಸರ್ವಶಕ್ತಿಗಳಿಂದ ದೇಶವನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕು. ಇದೇ ನಮ್ಮ ಇಂದಿನ ಪ್ರತಿಜ್ಞೆ. ಎಲ್ಲರಿಗೂ ಭಗವಂತನು ಸದ್ಬುದ್ಧಿ ನೀಡಲಿ.

ಕಾರ್ಕಳ ಮುನ್ಸಿಫ್ ಕೋರ್ಟ್‌ನಲ್ಲಿ

O.S.No. 540/1967 I. A II B.

ವಿನೋದ ಕುಮಾರ ಯಿಂದ್ರ-ವಾದಿ Applicant.

ಮತ್ತು

ಗುಂಡುಂಣ ಹೆಗ್ಗೆ ಸಹಾ-ಪ್ರತಿವಾದಿಗಳು Opponents.

ಕೋರ್ಟು ಹುಕುಂ ಪ್ರಕಾರ ಸದ್ರಿ ವ್ಯವಹರಣೆಯ ೩ನೇ ಪ್ರತಿವಾದಿಳು ಹೇರೋಲ್ಡ ಲೋಬೊ ಬ್ಯಾ 1,6ನೇ ಪ್ರತಿವಾದಿಳು ಮಿಸ್ಸಿ ಲೋಬೊಬ್ಯಾ ಕ್ಲಿ ಮಿಸ್ಸಿ ಲೋಬೊಬ್ಯಾ ಮಕ್ಕಳು; ಮಂಗಳೂರು ಶ್ಯಾಂ Lower Bendoor ಎಂಬಲ್ಲಿರುವವರು.

ಇವರಿಗೆ ಯಾ ಮೂಲ್ಯ ತಿಳಿಯಪಡಿಸುವುದೇನೆಂದ್ರೆ—

ಸದ್ರಿ ದಾವೆಯಲ್ಲಿ ವಾದಿರ ಗುಣಾಕ್ಕೆ ಅದ ಪ್ರಿಲಿಮಿನರಿ ಡಿಕ್ರಿ ಏಕ ಪ್ರಕಾರ ಡಿಕ್ರಿ ಮಣವನ್ನು ಡಿಕ್ರಿಯಲ್ಲಿ ಮೂರಾಬಟ್ಟೆ ವಿಧಿಯರುವ ಆಸ್ತಿ ಯೇಲಂತಾದಿಂದ ವ್ಯಲ್ಲು ಮಾಡುವ ಬಗ್ಗೆ ವಗೈರೆ ಕೇಳಿ ವಾದಿ ಗುಣಕ್ಕೆ ಪಂದು ಪೈನಲ್ ಡಿಕ್ರಿ ಕೊಡಿಸಬೇಕಾಗಿ ದಾಖ್ಲು ಮಾಡಿದ ಸದ್ರಿ ಅರ್ಜಿಯು ಸದ್ರಿ 4-5ನೇ ಪ್ರತಿವಾದಿರ ಅಕ್ಷೇಪದ ಬಗ್ಗೆ ತಾ. 26-9-68ಕ್ಕೆ ಯಿಟ್ಟಿದೆ. ಆದ್ರಿಂದ ಆ ಹುಕುಂ ಸದ್ರಿ ಪ್ರತಿವಾದಿರ ಅಕ್ಷೇಪಯಿದ್ದರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿ ಸದ್ರಿ 4-5ನೇ ಪ್ರತಿವಾದಿಗಳು ಹಾಜ್ರಿಯಲ್ಲಿ ತೀರ್ಮಾನ ನಿಸಲ್ಪಡುತ್ತದೆ.

(Sd) H.K.Gopalkrishna Rao
Vakil for Plffs.

Karkala, 21—8—68.



ಗಣೇಶನ ಸ್ತುತಿ

ಕನ: ದಿ| ಎಚ್. ವೆಂಕಟರಮಣಯ್ಯ.
ಸಂಗ್ರಹ: ಕೆ. ವೆಂಕಟರಾಘವಾಚಾರ್ಯ,
ಸಾರಕ್ಕಲ್ಲು.

(ಪೌರಾಣಿಕ ಕತೆಗಳಂತೆ ಎಲ್ಲಾ ಕೆಲಸಗಳ ಮೊದಲಲ್ಲಿ ಗಣಪತಿಯ ನಮನ ಅವಶ್ಯಕ, ಇಲ್ಲಿಂದು ಕರು ಹಾಡು ರಾಗ-ತಾಳಗಳಿಂದ ಹೇಳುವಂತಿರುವುದು.)

ಶ್ರೀ ಗಿರಿಜೆಯ ಮೋಹದ ಕುವರ |
ಜಯ ಜಯ ವಿಘ್ನೇಶ್ವರ ॥ ಪ ॥

ನಾಗವದನ ಶರ- |
ಣಾಗತ ವತ್ಸಲ ।
ಭೋಗಿಶ ವಿಘ್ನವ |
ನಾಗು ಪ್ರಸನ್ನ ॥ ೧ ॥

ಮೊದಲನೆ ಪೂಜೆಯ ।
ಪದವಿ ಪಡೆದ ವಿಭ |
ವಿಭ ಭವ್ಯವ ಕೊಳು ।
ವುದರೊಳಿತಿ ಮದ ॥ ೨ ॥

ಸಿದ್ಧಿ ವಿನಾಯಕ ।
ತಿದ್ದುತ ರಸನೆಯ |
ವಿದ್ಯೆಯ ನೆನ್ನೊಳು |
ಹೊದಿಸಿ ಸಲಹೆ ॥ ೩ ॥

ವೆಂಕಟರಮಣನ ।
ಕಂಕರ ರನ್ನತಿ ।
ಬಂಕದಿ ಪೊರೆಯುವ ।
ಶಂಕರ ಸುತನೇ ॥ ೪ ॥

ಹೆಸರಿಸು

ಜಾನ ಹತ್ತದೊಳಾರು ಬರೆದರು
ರಂಗಿನ ಮದರಂಗಿಯ?
ಬಯಲು ಕಂದಗೆ ತೊಡಿಸಿದವರಾರ್
ಬಣ್ಣ ಬಣ್ಣದ ಅಂಗಿಯ?

ಬೈಗು ಬಾಲೆಯ "ಅಧರ ದಂಡ"ವೊ?
ತುಂಬು ಹೆರಳಿನ ಲಾಡಿಯೊ?
ಗಲ್ಲ ಮುನ್ನೀರಿನಲಿ ತೇಲಿಹ
ಜೇನು ಕುಸ್ವದ ನೋಡಿಯೊ?

ಹಳಿಯ ಮುತ್ತಿನ ಹೇಮ ಪಟ್ಟೆಯೊ
ತಂಬೆ ಕೈಗಡಿಯೂರದ?
ಕುಡಿಯೊ ಏನೋ? ಗಾಳಿಗೂಳಿದು
ನಾಸಿಕದ ಮುಗದಾಣದ.

"ಬಿಲ್ಲು ಕಾಮನ" ಎನುವ ಹಳಸಿದ
ಸೊಲ್ಲ ಕೇಳಿಯೆ ರೋಸಿದೆ.
ನಲ್ಲೆ, ಸೂಚಿಸು ಹೊಸತು ಹೆಸರನು
ನಿನ್ನ ಹೆಸರೇಕಾಗದೆ?

—ಗೋಪೀನಾಥ.

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸರಳವಾದುದಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ನಿರೋಧಕ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-00ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

ಅವಶ್ಯ ತಿಳಿಯಿರಿ

ಮನುಷ್ಯರ ಜೀವಮಾನ ಎಷ್ಟು?

(ಪಂಡಿತ ಸಾಹಿತಿಗಳು)

"ಅಶೋಡಷಾತ್ ಸಪ್ತತಿ ವರ್ಷ ಪರ್ಯಂತಂ ಯಾವನಂ" ಎಂದು ವಾಸ್ತ್ರಾಯನ ಸೂತ್ರ ಅನ್ನುತ್ತದೆ. ಅರ್ಥಾತ್ ೧೬ರಿಂದ ೭೦ ವರ್ಷದ ವರೆಗೆ ತಾರುಣ್ಯ ಎಂದು. ಮುಂದೆ ೩೦ ವರ್ಷ ಪರಿಹಾಣೀ ಅವಸ್ಥೆ. ಅನಂತರ ೧೦ ವರ್ಷ ವೃದ್ಧಾವಸ್ಥೆ ಮತ್ತು ಕೊನೆಗೆ ೧೦ ವರ್ಷ ಪ್ರೇಕ್ಷಾವಸ್ಥೆ. ಅಂತೂ ಮನುಷ್ಯರ ನೈಸರ್ಗಿಕ ಆಯುರ್ವರ್ಷನ ೧೩೦ ವರ್ಷ. ಇಷ್ಟುಕಾಲ ಬದುಕಲಿಕ್ಕೆ ಪ್ರತಿಯೊಬ್ಬನಿಗೂ ಜನ್ಮಸಿದ್ದ ಹಕ್ಕು ಇದೆ.

ಭಾಂಡೋಗ್ಯ ಉಪನಿಷತ್ತಿನಲ್ಲಿ ಮನುಷ್ಯರ ಆಯುಷ್ಯವೇ ಒಂದು ಯಜ್ಞವೆಂದೂ ಮೊದಲಿನ ೩೪ ವರ್ಷ ಪ್ರಾತಃಸವನ ಅರ್ಥಾತ್ ಬ್ರಹ್ಮಚರ್ಯ, ಮುಂದೆ ೪೪ ವರ್ಷ ಮಧ್ಯಂದಿನಸವನ ಅರ್ಥಾತ್ ಗೃಹಸ್ಥಾಶ್ರಮ, ಕೊನೆಯ ೪೮ ವರ್ಷ ಸಾಯಂಸವನ ಅರ್ಥಾತ್ ವಾನಪ್ರಸ್ಥಾಶ್ರಮ, ವಿದ್ಯಾದಾನ ಮತ್ತು ಧರ್ಮಪ್ರಚಾರದ ಆಯುಷ್ಯ—ಅಂತೂ ವರ್ಷ ೧೧೬ ಎಂದು ಹೇಳಿದೆ. ಉಪನಯನಪೂರ್ವದ ಅಸಂಸ್ಕೃತ ಆಯುಷ್ಯ ೮ ವರ್ಷ ಇದರಲ್ಲಿ ಹಿಡಿದಿಲ್ಲ. ಅದನ್ನು ಹಿಡಿದರೆ ಒಟ್ಟು ವರ್ಷ ೧೨೪!

ಪಾಂಡವರು ೭೦ ವರ್ಷ ವಯಸ್ಸಿನಲ್ಲಿ ಮಹಾಭಾರತ ಯುದ್ಧ ಮಾಡಿದರು. ಮುಂದೆ ೩೦ ವರ್ಷ ಸ್ವರಾಜ್ಯ ಉಪಭೋಗಿಸಿದರು. ಅನಂತರ ತ್ರಿವಿಷ್ಟಪದಲ್ಲಿ ತಪಾಚರಣೆ ಮಾಡಲು ಶಾಲ್ಮಡಿಗೆಯಿಂದ ಹೋದರು. ಕೃಷ್ಣಬಲರಾಮರಿಬ್ಬರೂ ೧೨೫ ವರ್ಷ ವಯಸ್ಸಿನಲ್ಲಿ ತೀರಿಕೊಂಡರು. ಆಗ ಅವರ ತಂದೆತಾಯಿ ವಸುದೇವ ದೇವಕಿಯರು ಜೀವಂತವಿದ್ದು—ಇದೆಂಥ ಕಲಿಕಾಲ ಬಂತು, ತಂದೆತಾಯಿಯರ ಕಣ್ಣು ಮುಂದೆ ಮಕ್ಕಳು ಸಾಯಬಹುದಿದವಲ್ಲಾ ಎಂದು ಶೋಕಮಾಡಿದರು! ಆಗ ಅವರಿಗೆ ೧೨೫ ವರ್ಷ ವಯಸ್ಸಾಗಿರಬಹುದು.

ಎರಡು ಸಾವಿರ ವರ್ಷಗಳ ಹಿಂದೆ ಪಂಜಾಬಕ್ಕೆ ಬಂದ ಗ್ರೀಕರು ಇಷ್ಟು ಕಂಡ ಎರಡು ಚಮತ್ಕಾರಗಳನ್ನು ಬರೆದು ಇಟ್ಟಿದ್ದಾರೆ—(೧) ಭಾರತದಲ್ಲಿ ಮನುಷ್ಯರಿಗೆ ಬೀಗವನ್ನೇ ಹಾಕುವದಿಲ್ಲ ಮತ್ತು (೨) ೧೪೦ ವರ್ಷ ವಯಸ್ಸಿನ ಮುದುಕರೂ ರಸ್ತೆಗಳಲ್ಲಿ ಓಡಿದಾಡುವುದು ಕಾಣುತ್ತದೆ ಎಂದು.

ಸ್ವಾತಂತ್ರ್ಯ ದಿನಾಚರಣೆ

ಉಡುಪಿ ಮೋಡರ್ನ್ ಹಾ. ಎ. ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ. ಸುಧಾಕರ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಧ್ವಜಾರೋಹಣವನ್ನು ಶ್ರೀ ಶ್ರೀಶ ಬಲ್ಲಾಳರು ಮಾಡಿದರು. ಮಕ್ಕಳಿಂದ ಭಾಷಣ, ವಿವಿಧವಿನೋದಾವಳಿಗಳು ನಡೆದುವು.

ಬೀಳ್ಕೊಡುಗೆ

ಉಡುಪಿಯ ಪಾಸ್ ಟ್ಯುಟೋರಿಯಲ್ ಕಾಲೇಜಿನಲ್ಲಿ ತಾ. 16ರಂದು ಅಗ್ರಾಪಕ ಶ್ರೀ ಸುರೇಂದ್ರ ರಾಮಾರವರನ್ನು ಬೀಳ್ಕೊಡುವ ಸಮಾರಂಭವು ಡಾ| ಕೆ.ಕೆ. ಶಿಲ್ಪಾರ್ರವರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದವು.

ಸ್ವಾತಂತ್ರ್ಯೋತ್ಸವ

ಮಿತ್ತಬಾಗಿಲು ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಪಂಚಾಯತ್ ಅಧ್ಯಕ್ಷ ಶ್ರೀ ಬಿ. ಕೆಂಪಯ್ಯ ಗೌಡರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಮೂಡಬಿದ್ರೆ ಪಂಚಾಯತ್ ಅಧ್ಯಕ್ಷರಾದ ಪರೇಲ್ ಶ್ರೀ ಬಿ.ಕೆ. ಸಂಕಯ್ಯಬ್ಬರಾಯ್ ಅವರು ಧ್ವಜವನ್ನು ಆರೋಹಿಸಿ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತಿನ ಕಾರ್ಯನಿರ್ವಹಣೆಯ ಹೊಣೆಗಾರಿಕೆಯ ಕುರಿತು ಭಾಷಣಮಾಡಿದರು. ಸಭಿಕರ ಭಾಷಣ, ಸಿಹಿತಿಂಡಿ ಹಂಚಿದ ಬಳಿಕ ಸಭಾಕಾರ್ಯವಾಯಿತು.

"ಶ್ರೀಕೃಷ್ಣ ವಿಜಯ"

ದೇಲಂಬಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 15ರಂದು ಶ್ರೀಕೃಷ್ಣಾಷ್ಟಮಿ ಸ್ಮಯುಕ್ತ 'ಶ್ರೀಕೃಷ್ಣ ವಿಜಯ' ಎಂಬ ಕಥಾಭಾಗದ ವಿಶೇಷ ಕಾರ್ಯಕ್ರಮವು ನಡೆಸಲ್ಪಟ್ಟಿತು.

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಯಲ್ಪಟ್ಟ ಈ ರೂಪಕದ ಆರಂಭದಲ್ಲಿ ಶ್ರೀಕೃಷ್ಣ ಪೂಜೆ ಮಹಾಮಂಗಳಾರತಿಯಾಗಿ ಕೊನೆಗೆ ಪ್ರಸಾದ ವಿತರಣೆಯಾಗುತ್ತಲೇ ವೈದ್ಯಸ್ಥಾಪಕ ಶ್ರೀ ಯಂ.ಟಿ. ಗೌಡರು ಸಂದೇಶಾರ್ಪಣೆಯಿತ್ತರು.

ಸಾತಂತ್ರ್ಯ ದಿನಾಚರಣೆ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ 10ರಿಂದ 5ನೆಯ ತರಗತಿಗಳ ಮಕ್ಕಳ ಕೂಡುವಿಕೆಯಿಂದ "ಸ್ವಾತಂತ್ರ್ಯ ದಿನಾಚರಣೆ"ಯ ಸಭೆಯು ವಿವೇಕಾನಂದ ಸಮಾಜದ ವತಿಯಿಂದ ಶ್ರೀ ದಾಮೋದರ ಅಡಾರ್-ಇವರ ಅಧ್ಯಕ್ಷತೆಯಲ್ಲಿ ಜರಗಿತು ಮಕ್ಕಳಿಂದ ಮನೋರಂಜನೆಗಳೂ ಭಾಷಣಗಳೂ ನಡೆದವು. ಬಳಿಕ ಅಧ್ಯಾಪಕರಾದ ಶ್ರೀ ಕೆ. ವಾಸು ಸೇರಿಗಾರರೂ ಅಧ್ಯಕ್ಷರೂ ಭಾಷಣಮಾಡಿದರು.

ಚಿಕಾಗೋ, ಸ್ಯಾನ್‌ಫ್ರಾನ್ಸಿಸ್‌ಕೋಗೆ ಶ್ರೀ ಭದ್ರಗಿರಿ ಕೇಶವ ದಾಸರು

ವಾಷಿಂಗ್‌ಟನ್, ಅ. 19, ಜುಲೈ 2 ರಂದು ಇಲ್ಲಿಗೆ ಆಗಮಿಸಿದ ಶ್ರೀ ಭದ್ರಗಿರಿ ಕೇಶವದಾಸರು ಅವರಿಂದಲೇ ಉದ್ಘಾಟಿತವಾದ "ಕೇಶವಾಶ್ರಮ ಅಂತರ್ರಾಷ್ಟ್ರೀಯ ಕೇಂದ್ರ"ದಲ್ಲಿ ಭಾರತದ ಅಧ್ಯಾತ್ಮ ಕಲೆಯ ವಿವಿಧ ಅಂಗಗಳ ಕುರಿತು ಒಂದು ಮಾಸ ಪರ್ಯಂತ ಸ್ವಪ್ರವಚನವನ್ನು ನಡೆಸಿದರು. ತಾ. 22ರಿಂದ ಅವರು ಚಿಕಾಗೋ ಕ್ರಿಯಾ ಮಂದಿರದಲ್ಲಿ ಎರಡು ವಾರಗಳ "ಗೀತಾ ಪ್ರವಚನ"ಕ್ಕೆ ಆಮಂತ್ರಿತರಾಗಿದ್ದಾರೆ.

ಬಳಿಕ ಸ್ಯಾನ್‌ಫ್ರಾನ್ಸಿಸ್‌ಕೋ ನಗರದ "ಕ್ಯಾಲಿಫೋರ್ನಿಯ ಇನ್ಸ್ಟಿಟ್ಯೂಟ್ ಆಫ್ ಏಶಿಯನ್ ಸ್ಟಡೀಸ್ ಸಂಸ್ಥೆಯಲ್ಲಿ ನಾಲ್ಕು ತಿಂಗಳ ಸೆಮಿನಾರ್‌ಗೆ ಆಮಂತ್ರಿತರಾಗಿರುವುದರಿಂದ ಅಲ್ಲಿಗೆ ತೆರಳುವರು. ಸೆಪ್ಟಂಬರ್ 6ರಿಂದ ಅಲ್ಲಿ "ಪ್ರೇಮ ಯೋಗ" "ದೇವ ಸಾಕ್ಷಾತ್ಕಾರಕ್ಕೆ ಸಾಧನೆಯ ನೆಲೆಗಳು", 'ನಾರದ ಭಕ್ತಿ ಸೂತ್ರ', 'ರಾಮಾಯಣದಿಂದ ರಾಮದಾಸರ ವರೆಗೆ' ಎಂಬ ಬಗೆ ಹಲವಾರು ಪ್ರವಚನಗಳನ್ನು ನಿರ್ವಹಿಸಿ, ಭಾರತದ 'ನಾಟಕ' ಕಲೆ ದಕ್ಷಿಣ ಕನ್ನಡದ 'ಯಕ್ಷಗಾನ'ಕಲೆಯನ್ನೂ ಪ್ರದರ್ಶಿಸುವರು. ಡಿಸೆಂಬರ್ 22ರ ವರೆಗೆ ಅಲ್ಲಿದ್ದು ಬಳಿಕ ಟ್ರಿನಿಡಾಡ್‌ಗೆ ತೆರಳಿದ್ದಾರೆ.

ಪಾಂಡ್ಯರಾಜ ಬಲ್ಲಾಳರಿಗೆ ಸಂತಾಪ ಸೂಚಕ ಸಭೆ

ಮೂಡಬಿದಿರೆಯ ಸಮಾಜಸೇವಾ ಧುರಂಧರ ಶ್ರೀ ಬಾರಾಡಿಬೀಡು ಕೆ. ಪಾಂಡ್ಯರಾಜ ಬಲ್ಲಾಳರ ನಿಧನದ ಬಗ್ಗೆ ಸಂತಾಪ ಸೂಚಕ ಸಾರ್ವಜನಿಕ ಸಭೆಯೊಂದು ತಾ. 18-8-68 ರಂದು ಮೂಡಬಿದ್ರೆ ಸಮಾಜಮಂದಿರದಲ್ಲಿ ವಿಧಾನ ಪರಿಷತ್ ಸದಸ್ಯ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯ ರೋಟರಿ ಡಿಸ್ಟ್ರಿಕ್ಟ್ 317, ಇದರ ಗವರ್ನರ್ ಆಗಿರುವ ಡಾ| ಕೆ.ಸಿ. ಗಣೇಶಾರವರು ಭಾಗವಹಿಸಿದ್ದರು.

ಪುಷ್ಪಾಹಾರಗಳಿಂದ ಅಲಂಕರಿಸಿದ ದಿವಂಗತರ ಭಾವಚಿತ್ರವೊಂದನ್ನು ವೇದಿಕೆಯ ಮೇಲಿರಿಸಲಾಗಿತ್ತು.

ದಿವಿ ಬಲ್ಲಾಳರ ಜೀವನ ಸ್ವಾಮುಖ್ಯ ಘಟನೆಗಳನ್ನು ಸ್ಮರಿಸಿದ ಸಮಾಜ ಮಂದಿರ ಸಭಾದ ಅಧ್ಯಕ್ಷ ಶ್ರೀ ಎಸ್.ಡಿ. ಸಾಮ್ರಾಜ್ಯರು ಮಾತನಾಡಿ, ದಿವಂಗತ ಬಲ್ಲಾಳರು ಸಮಾಜದ ಜೀವನ ನಡೆಸಿದ ವ್ಯಕ್ತಿಯೆಂದರು. ಮಂಗಳೂರಿನ ಎಡ್ವೋಕೇಟ್ ಶ್ರೀ ಎಸ್. ನರಸಪ್ಪಯ್ಯ, ಎಡ್ವೋಕೇಟ್ ಶ್ರೀ ಎಂ.ಕೆ. ದೇವರಾಜ್, ವಿದ್ವಾನ್ ಶ್ರೀ ಕೆ. ಶಾಂತ ರೈ, ಶ್ರೀ ಜಿ.ವಾಸುದೇವ ಭಟ್ಟ, ಶಾಂತಾವರದ ಶ್ರೀ ಶ್ರೀನಿವಾಸ ರಾವ್‌ರವರು ದಿವಂಗತ ಬಲ್ಲಾಳರು ಬಹುಮುಖ ಚಟುವಟಿಕೆಗಳ ಗುಣಯುಕ್ತ ದಯಾಗ್ರಹಣೆಯೂ, ಪರಮತ ಸಹಿಷ್ಣುವೂ ಎಂದು ಹೇಳಿದರು.

ಶ್ರೀ ಕೆ. ಎಸ್. ಅಡಿಗರು ಮಾತಾಡಿ ದಿವಂಗತ ಬಲ್ಲಾಳರಿಗೆ ಕಾರ್ಯಶ್ರದ್ಧೆ, ಗೌರವ ಭಾವಗಳಿದ್ದುದಿಂದಲೇ ಅವರು ಕೈಗೆತ್ತಿಕೊಂಡ ಎಲ್ಲಾ ಕಾರ್ಯಗಳೂ ಪರಿಪೂರ್ಣಯಶಸ್ಸನ್ನು ಪಡೆದಿವೆ. ಸದ್ಗುಣಮಯಿಯೂ ದಯಾಳುವೂ ಆದ ಅವರ ಗುಣ ನಡತೆಗಳನ್ನು ಆದರ್ಶವಾಗಿಟ್ಟುಕೊಳ್ಳುವುದೇ ದಿವ್ಯ ಸ್ಮಾರಕವೆಂದರು. ಸಮಾಜ ಮಂದಿರ ಸಭೆಯ ಸಂಸ್ಥಾಪಕರಲ್ಲೊಬ್ಬರಾಗಿ ಪ್ರಾರಂಭದಿಂದಲೇ ಅದರ ಆಡಳಿತ ಸಮಿತಿ ಸದಸ್ಯರಾಗಿ ಶ್ರಮಿಸಿದ ದಿವಂಗತ ಕೆ. ಪಾಂಡ್ಯರಾಜ ಬಲ್ಲಾಳರಿಗೆ ಸಭೆಯ ಪರವಾಗಿ ಶ್ರೀ ಜಿ. ವಾಸುದೇವ ಭಟ್ಟರು ಶ್ರದ್ಧಾಂಜಲಿಯರ್ಪಿಸಿದರು.

ಪ್ರಾರಂಭದಲ್ಲಿ ನೂರಾರು ಮಿತ್ರರಿಂದಲೂ, ಸಂಘ ಸಂಸ್ಥೆಗಳಿಂದಲೂ, ಘನ ವ್ಯಕ್ತಿಗಳಿಂದಲೂ ಬಂದ ಸಂತಾಪ ಸೂಚಕ ಪತ್ರಗಳನ್ನು ಶ್ರೀ ಎಸ್. ಪಿ ರಾಯರ್ ಓದಿದರು. ದಿವಂಗತ ಬಲ್ಲಾಳರ ಆತ್ಮಕ್ಕೆ ಚಿರಶಾಂತಿಯನ್ನು ಅನುಗ್ರಹಿಸುವ ಸಂತಾಪ ಸೂಚಕ ಠರಾವೊಂದನ್ನು ಸಭಾಧ್ಯಕ್ಷರು ಮಂಡಿಸಿದರು. ದಿವಂಗತರ ಆತ್ಮಕ್ಕೆ ಶಾಂತಿ ಕೋರಿ ಸಭೆ ಎದ್ದು ನಿಂತು ಮೌನ ಪ್ರಾರ್ಥನೆ ನಡೆಸಿತು.

ಧರ್ಮಸ್ಥಳ ಹೆಗ್ಗಡೆಯವರ ಶ್ರದ್ಧಾಂಜಲಿ

ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ದಿವಂಗತರ ಪತ್ನಿ, ಪುತ್ರ, ಪುತ್ರಿಯರಿಗೆ ದೊಡನೆ ಶ್ರೀ ಬಲ್ಲಾಳರ ಆತ್ಮಕ್ಕೆ ಚಿರಶಾಂತಿ ಲಭಿಸಲು ಮೂಡಬಿದ್ರೆ ಶ್ರೀ ಗುರುಗಳ ಬಸದಿಯಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿಗೆ 108 ಕಲಶ ಮಹಾಭಿಷೇಕವನ್ನೂ, ಸಿದ್ಧಾಂತ ದರ್ಶನವನ್ನೂ, ಧರ್ಮಸ್ಥಳದ ಶ್ರೀ ಚಂದ್ರನಾಥ ಸ್ವಾಮಿಗೆ 108 ಕಲಶಾಭಿಷೇಕವನ್ನೂ ಮಾಡಿಸಿ ಶ್ರದ್ಧಾಂಜಲಿಯನ್ನರ್ಪಿಸಿದರು.

ರ್‍ಯಾಂಕ್ ವಿಜೇತ ರಘುನಾಥ ಶೆಟ್ಟರಿಗೆ ಅಭಿನಂದನೆ

ಕಳೆದ ಮೇ ತಿಂಗಳಲ್ಲಿ ಜರಗಿದ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ. ಅಡಿ. ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದ ಬಸ್ರೂರು ಹಾಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಎನ್. ರಘುನಾಥ ಶೆಟ್ಟಿಯವರನ್ನು ಸತ್ಕರಿಸಲು ಶಾಲೆಯ ಅಧ್ಯಾಪಕ ಸಂಘವು ತಾ. 20ರಂದು ಸಮಾರಂಭವೊಂದನ್ನು ಏರ್ಪಡಿಸಿ ಶ್ರೀಯುತರಿಗೆ ಉಜ್ವಲವಾದ ಭವಿಷ್ಯವನ್ನು ಹಾರೈಸಿ ಅವರಿಗೆ ಹೃನ್ಮನ ಅಭಿನಂದನೆಗಳನ್ನರ್ಪಿಸಿತು.

ರವೀಂದ್ರ ದಿನಾಚರಣೆ

ಎಂ. ಜಿ. ಎಂ. ಕಾಲೇಜಿನ ಸಾಹಿತ್ಯ ಸಂಘದ ಆಶ್ರಯದಲ್ಲಿ ನಡೆದ ವಿಶ್ವ ಕವಿ ರವೀಂದ್ರನಾಥ ಠಾಗೋರರ ದಿನಾಚರಣೆಯು ತಾ. 9ರಂದು ಉಡುಪಿ ಶ್ರೀಕೃಷ್ಣ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಠಾಗೋರರ ಜೀವನ ಚರಿತ್ರೆ, ಸಾಹಿತ್ಯ, ಬಾಲಸಾಹಿತ್ಯ ಮತ್ತು ನೂರೊಂದು ಕವನಗಳು ಈ ವಿಷಯಗಳ ಮೇಲೆ ಶ್ರೀಮತಿ ಎನ್. ವಿ. ಯಶೋದೆ, ಶ್ರೀ ಎಂ. ಜನಾರ್ಧನ, ಶ್ರೀಮತಿ ಲಲಿತಾ ಭಟ್ಟ ಮತ್ತು ಶ್ರೀ ಎಸ್. ಕೆ. ಶ್ರೀಪತಿ ಅಧ್ಯಾಪಕರು ಪ್ರಬಂಧಗಳನ್ನೋದಿದರು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಕೃ. ಶಿ. ಹರಿದಾಸಭಟ್ಟರು ಆರಂಭದಲ್ಲಿ ಸ್ವಾಗತಿಸಿದರು. ಶ್ರೀ ಪಿ. ಪ್ರೇಮಾನಂದ ಭಟ್ಟರು ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಚಂದಾದಾರರು

ತಮ್ಮ ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ದಯವಾಡಿ ಮನಿಯಾರ್ಡರು ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇನೆ.

—ಮೆನೇಜರ್, ನವಯುಗ.

NAVAYUGA DEEPAVALI SPECIAL

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds. It will contain rich food for thought and entertainment for the masses Thousands of Kannada people read this issue with relish.

It would be a happy idea for you to use the Navayuga Deepavali Special, as a medium for advertising your goods; for, Navayuga is able to carry your message to every home.

Kindly send your advertisement on or before 10—10—1968.

Date of publication : 20-10-1968.

Adv. Manager.

ಕಂಡದ್ದು... ಕೇಳಿದ್ದು

ನಂಬುಗೆಗೆ ತಕ್ಕ ದೃಶ್ಯ

ಬರೆದವರು: "ನವಗಿರಿನಂದ"

ಅದೊಂದು ಗ್ರಾಮ. ಅಲ್ಲಿಗೆ ಒಬ್ಬ ಮಹಾತ್ಮನ ಆಗಮನವಾಗಿತ್ತು. ಗ್ರಾಮದ ಹೊರಗೆ ಪ್ರಶಾಂತವಾದ ಸ್ಥಳದಲ್ಲಿ ಆಶ್ರಮ ಹಾಕಿಕೊಂಡು ಭಗವದ್ಧ್ಯಾನ ಮಾಡುತ್ತಿರುವನು ಆ ಮಹಾತ್ಮ. ತನ್ನ ಬಳಿಗೆ ಬರುವವರಿಗೆ ಅತನು ಹಿತೋಪದೇಶಗಳನ್ನು ಕೊಡುವನು. ಅತನ ಉಪದೇಶಗಳು ಅನರಿಗೆಲ್ಲ ತುಂಬ ಹಿಡಿಸುತ್ತಿದ್ದವು.

ಆ ಮಹಾತ್ಮನು ಯಾರಿಂದಲೂ ಯಾವುದನ್ನೂ ಅಪೇಕ್ಷಿಸುತ್ತಿರಲಿಲ್ಲ. ಯಾಚನೆ ಮಾಡುತ್ತಿರಲಿಲ್ಲ. ಅತನಿಗೆ ಯಾರೋ ದಾನವಾಗಿ ಕೊಟ್ಟಿದ್ದ ಹಸುವನ್ನು ತನ್ನೊಂದಿಗೇ ಸಾಕಿಕೊಂಡಿದ್ದ. ತಾನೇ ಹಸುವನ್ನು ಹಿಂಡಿಕೊಳ್ಳುವನು. ಬೆಳಗ್ಗೆ ಸಾಯಂಕಾಲ ಒಂದೊಂದು ಲೋಟೆ ಹಸುವಿನ ಹಾಲೇ ಅವನ ಆಹಾರ.

ಜನರು ತಾವಾಗಿಯೇ ಹಸುವಿಗೆ ಅಗತ್ಯವಾದ ಹಿಂಡಿ, ಕಲಬಟ್ಟೆ, ಹುಲ್ಲುಗಳನ್ನು ತಂದು ಕೊಡುತ್ತಿದ್ದರು. ಮತ್ತೆ ಊರೋ ಧನವಂತರು ಇನ್ನೆರಡು ಆಳುಗಳನ್ನೂ ಆ ಮಹಾತ್ಮನಿಗೆ ದಾನ ಮಾಡಿದರು. ಹಾಗೆಯೇ ಅವನ ಬೋಧನೆಗಳನ್ನು ಕೇಳಲು ಬರುವವರ ಗಂಪೂ ಬೆಳೆಯಿತು.

ಮಹಾತ್ಮನು ಬಂದವರಿಗೆಲ್ಲ ದೇವರ ಪ್ರಸಾದ ರೂಪವಾಗಿ ಉಳಿದಿರುವ ಹಾಲನ್ನು ಹಂಚಿಕೊಟ್ಟು ಅವಂತರ ತಾನೂ ತೆಗೆದುಕೊಳ್ಳುವನು. ಅತನಿಂದ ಕೊಡಲಾಗುವ ಆ ಹಾಲು ಅಮೃತದ ಹಾಗಿದೆ ಎಂದು ಜನರು ಹೇಳಿಕೊಳ್ಳುವರು

ಆ ಊರಿನಲ್ಲಿ ಒಬ್ಬ ನಾಸ್ತಿಕ ಮಹಾರಾಯನೂ ಇದ್ದನು. ಅವನು ಯಾವ ಮಹಾತ್ಮರನ್ನೂ ನಂಬುವವನಾಗಿರಲಿಲ್ಲ. ಮಹಾತ್ಮರೆನಿಸಿಕೊಂಡು ಬಿಕಾಣಿ ಹಾಕುವವರೆಲ್ಲ ಒಂದುದಿನ ಭಾರಿ ಮೋಸ ಮಾಡುವರೆಂದು ಅವನು ಹೇಳುವನು. ಜನರನ್ನು ಮೂಢನೆಗಳನ್ನು ಗಳಿಸಲು ಮೊದಮೊದಲು ಬಹಳ ಪ್ರಾಮಾಣಿಕರಾಗಿ ಆಸೆಯಿಲ್ಲದವರ ಹಾಗೆ ತೋರಿಸಿಕೊಳ್ಳುವರೆಂದು ಅವನ ಅಭಿಪ್ರಾಯ.

ಆ ಮಹಾತ್ಮನು ಕೊಡುವ ಹಾಲು ಅಮೃತದ ಹಾಗಿದೆಯೆಂದು ಅನೇಕರು ಹೊಗಳುವಾಗ "ಮೂಢ ಜನರು! ಅವನು ಗೋಮೂತ್ರವನ್ನು ಹಾಲೆಂದು ಕೊಟ್ಟರೂ ನಂಬುತ್ತಾರೆ. ಅಮೃತದ ಹಾಗಿದೆಯೆನ್ನುತ್ತಾರೆ" ಎಂದು ನಗುವನು.

ಅದನ್ನು ಕೇಳಿ ಒಬ್ಬ--"ಒಮ್ಮೆ ನೀವೂ ಬಂದು ಆ ಹಾಲು ಕುಡಿದು ನೋಡಿ, ಮತ್ತೆ ಹೇಳಿ" ಎಂದನು.

ಒಂದುದಿನ ನೋಡಿ ಬಿಡುವ ಎಂದು ಆ ನಾಸ್ತಿಕನೂ ತೋರಿಕೆ ಸಾಯಂಕಾಲ ಹಿತೋಪದೇಶ ಕೇಳುವವರ ಗುಂಪಿನಲ್ಲಿ ತಾನೂ ಹೋಗಿ ಕುಳಿತ.

ಮಹಾತ್ಮನು ದೇವರ ಲಸ್ತಿತ್ವವನ್ನು ಕುರಿತು ಉಪದೇಶ ಕೊಡುತ್ತ ಗುಂಪಿನಲ್ಲಿ ಕುಳಿತಿರುವ ನಾಸ್ತಿಕ ಮಹಾರಾಯನನ್ನು ಕುರಿತು 'ಅಪ್ಪಾ, ನಾಸ್ತಿಕವಾದದ ಭ್ರಮೆಯಲ್ಲಿ ತೊಳಲಾಡುವವನೆ, ಇಂದು ನೀನು ಇಲ್ಲಿಗೆ ಬಂದುದೇ ಒಂದು ವಿಶೇಷ, ಇಂದಿನಿಂದಾದರೂ ನಿನ್ನ ಭ್ರಮೆಗಳು ತೊಲಗಿ ಹೋಗಲಿ. ದೇವರಿದ್ದಾನೆ ಎಂಬ ನಂಬುಗೆ ನಿನಗುಂಟಾಗಲಿ. ಆ ನಂಬುಗೆಗೆ ಅನುಸಾರವಾಗಿಯೇ ನಿನ್ನ ವರ್ತನೆಗಳೂ ಸಾಗಲಿ" ಎಂದನು.

ಇದನ್ನು ಕೇಳಿ ನಾಸ್ತಿಕನಿಗೆ ಆಶ್ಚರ್ಯವಾಯಿತು. ತನ್ನ ಪರಿಚಯವೇ ಇಲ್ಲದ ಈತನಿಗೆ ತನ್ನ ಸಂಗತಿ ಹೇಗೆ ಗೊತ್ತಾಯಿತು?.... ಓಹೋ! ಇಲ್ಲಿರುವವರಾರೋ ಅವನಿಗೆ ತಿಳಿಸಿರಬೇಕು. ಅದಕ್ಕೇ ದಿವ್ಯಜ್ಞಾನಿಯಂತೆ ಹಾಗೆ ಈ ಉಪದೇಶ—ಎಂದುಕೊಂಡನು.

ತರುವಾಯ ಎಲ್ಲರಿಗೂ ಹಾಲಿನ ಪ್ರಸಾದವನ್ನು ಕೊಡುತ್ತಾ ಬಂದರು. ಮಹಾತ್ಮನ ಕಡೆಯವನೊಬ್ಬ ದೊಡ್ಡ ತಂಬಿಗೆಯಲ್ಲಿದ್ದ ಹಾಲನ್ನು ಸಣ್ಣ ಲೋಟೆಗೆ ಹಾಕಿ ಎಲ್ಲರಿಗೂ ಕೊಡುತ್ತಾ, ಹಾಗೆಯೇ ನಾಸ್ತಿಕನಿಗೂ ಕೊಟ್ಟ. ನಾಸ್ತಿಕನು ಅದನ್ನು ಕೈಯಲ್ಲಿ ತೆಗೆದುಕೊಂಡು ನೋಡುವಾಗ ಅದು ಬರಿ ನೀರಾಗಿ ಅವನ ಕಣ್ಣಿಗೆ ಕಾಣಿಸಿತು.

ಕೂಡಲೇ ಅವನು ಕೋಪದಿಂದ—"ಇದೇನು? ಇಂದ್ರಜಾಲ ತೋರಿಸುವಿರಾ? ಗೋಮೂತ್ರ, ಗೋಮೂತ್ರ!" ಎಂದು ಅರಚಿದ.

"ತಂಬಿಗೆಯ ಹಾಲನ್ನೇ ಹಾಕಿದೆನಲ್ಲ?"

'ಇದನ್ನು ಆ ಕಳ್ಳ ಮಹಾತ್ಮನೇ ಕುಡಿಯಬೇಕು" ಎಂದು ಹೇಳುತ್ತ ನಾಸ್ತಿಕನು ಮಹಾತ್ಮನ ಮುಂದೆ ತಪ್ಪಲೋಟೆಯನ್ನಿಟ್ಟು, "ಈ ಗೋಮೂತ್ರ ನೀನೇ ಕುಡಿ, ನೋಡ ತ್ತೇನೆ" ಎಂದ.

"ಪಾಪ, ನಿನಗೆ ಗೋಮೂತ್ರವಾಗಿ ತೋರಿತ್ತಿದೆಯೆ? ನನಗೆ ಹಾಲಾಗಿಯೇ ಇದೆ" ಎಂದು ಹೇಳುತ್ತ ಮಹಾತ್ಮನು ಅದನ್ನು ಗಳಗಳನೆ ಕುಡಿದು, "ನಾನು ಕುಡಿಯಲಿಟ್ಟಿರುವ ಈ ಹಾಲನ್ನಾದರೂ ನೀನು ಕುಡಿಯಪ್ಪ. ಇಲ್ಲಿಗೆ ಬಂದವರು ಸುಮ್ಮನೆ ಹೋಗಬಾರದು' ಎಂದು ತನ್ನ ಹಾಲನ್ನು ಅವನಿಗೆ ಕೊಟ್ಟನು. ನಾಸ್ತಿಕ ಮ ಅದನ್ನು ಕೈಗೊತ್ತಿಕೊಂಡ, "ನೋಡಿದಿಯಾ? ಇನ್ನೂ ತೋರಿಸುವಿಯಲ್ಲ ನಿನ್ನ ಇಂದ್ರಜಾಲ ವಿದ್ಯೆಯನ್ನು! ಛೀ!' ಎನ್ನುತ್ತ ಕೆಳಕ್ಕೆ ಚೆಲ್ಲಿ ಬಿಟ್ಟನ.

ಅವನ ಕೈಯಲ್ಲಿ ಅವನ ಕಣ್ಣಿಗೆ ಗೋಮೂತ್ರದಂತೆ ಕಾಣಿಸಿದ.ದ, ಕೆಳಗೆ ಚೆಲ್ಲಿದಾಗ ಬೆಳ್ಳಗೆ ಹಾಲೇ ಆಗಿತ್ತು. ದೂರದಲ್ಲಿ ಕುಳಿತಿದ್ದ ಒಂದು ಬೆಕ್ಕು ಓಡಿ ಬಂದು ಆ ಹಾಲನ್ನು ನೆಕ್ಕುವುದಕ್ಕೂ ತೊಡಗಿತು.

"ಅಪ್ಪಾ, ನಂಬುಗೆ ಅವನಂಬುಗೆಗಳೆರಡೂ ಮನ ಸ್ಥರ ಮನಸ್ಸಿನಲ್ಲೇ ಇರುವ ಹಾಗೆ, ಹಾಲೂ ಮೂತ್ರವೂ ಒಂದೇ ಗೋವಿನಲ್ಲೇ ಇರುವಂಥಾದ್ದು ತಾನೆ? ಊರ ನಂಬುಗೆ ಹೇಗೋ ಹಾಗೆಯೇ ಇದಿರಿನ ವಸ್ತುಗಳೂ ಕಾಣಿಸುತ್ತವೆ. ಒಳ್ಳೆಯದನ್ನೇ ನಂಬಬೇಕು ತಮ್ಮೂ" ಎಂದನು ಮಹಾತ್ಮ.

"ಸಾಕು ನಿನ್ನ ಉಪದೇಶ! ನಿನಗಿಂತ ದೊಡ್ಡ ಇಂದ್ರಜಾಲಕರನ್ನು ನೋಡಿದ್ದೇನೆ" ಎಂದು ಹೇಳಿ ನಾಸ್ತಿಕನು ಭರಭರನೆ ಹೊಟ್ಟೆ ಹೋದನು.

ವಿಜೇತನಾದ ಯಾತ್ರಿಕ

(ಎರಡನೇ ಸುಟದಿಂದ)

ಆದರೂ ಯಾತ್ರಿಕನ ಕಥೆ ಕೇಳಲು ಸಿದ್ಧರಾದರು. ಯಾತ್ರಿಕನು ಕಥೆ ಪ್ರಾರಂಭಿಸಿದನು.

ಐದನೇ ಕಥೆ

'ಕೆಲವು ವರ್ಷಗಳ ಹಿಂದಿನ ಕಥೆ. ನನಗೆ ಒಂದು ತೋಟವಿತ್ತು. ಅದರಲ್ಲಿ ಒಂದು ವಿಶಿಷ್ಟ ಮರವಿತ್ತು. ಅದಕ್ಕೆ ಎಲೆಗಳಿರಲಿಲ್ಲ. ನಾಲ್ಕು ಕೊಂಬೆಗಳು ಮಾತ್ರ. ಪ್ರತಿ ಕೊಂಬೆಯಲ್ಲೂ ಒಂದರಂತೆ ಹಣ್ಣು ಇತ್ತು. ನಾನು ಆ ನಾಲ್ಕು ಹಣ್ಣುಗಳನ್ನೂ ಕೊಯ್ದೆ. ಆದರೆ, ಅದ್ಭುತವೆಂದಲ್ಲದೆ ಬೇರೇನು ತಾನೇ ಹೇಳಲಿ! ಆ ಹಣ್ಣುಗಳನ್ನು ತುಂಡುಮಾಡಿದಾಗ ಪ್ರತಿಯೊಂದರೊಳಗೂ ಒಂದೊಂದು ಮಗು! ನನ್ನ ತೋಟದ ಮರದಲ್ಲಿ ಹುಟ್ಟಿದವರಾದುದರಿಂದ ಆ ನಾಲ್ವರನ್ನೂ ನನ್ನ ಸೋದರರಾಗಿ ಸಾಕಿ ಬೆಳೆಸಿದೆ. ಅವರಿಂದ ಕೆಲಸ ಮಾಡಿಸಿದೆ. ಅದರೆ ದಡ್ಡರಾಗಿದ್ದ ಆ ಯುವಕರು ಕೆಲಸ ಫಲಕಾರಿಯಾಗುವಷ್ಟು ಶಕ್ತಿಯಿಲ್ಲದೆ ಕಟ್ಟು ಕಥೆಗಳನ್ನು ಹೇಳುತ್ತಾ ಸಮಯದ ಕೊಲೆಯಾತ ಮಾಡಿ ಯಾರಿಗೂ ತಿಳಿಯದಂತೆ ತಲೆ ತಪ್ಪಿಸಿಕೊಂಡರು. ಅಂದಿನಿಂದಲೂ ನಾನು ಅವರನ್ನು ಹುಡುಕುತ್ತಿದ್ದೇನೆ. ಇಲ್ಲಿ ಅವರನ್ನು ಕಂಡು ಸಿಕ್ಕಿದ ಬಗ್ಗೆ ನನಗೆ ಸಂತೃಪ್ತಿಯಿದೆ. ನಾನು ಧನ್ಯನಾದೆ. ಹಾಗಲ್ಲವೇ, ಯುವಕರೆ! ನೀವೇ ನನ್ನಲ್ಲಿಂದ ಓಡಿ ತಪ್ಪಿಸಿದ ಯುವಕ ಗುಲಾಮರೆಂದು ನಿಮಗೇ ತಿಳಿದಿದೆ ತಾನೆ?.... ಈಗ ನನ್ನೊಂದಿಗೇ ವರಳಿ ಬನ್ನಿ. ಅದೇ ಒಳ್ಳೆಯದು. ತೋಟವಿದೆ; ಕೆಲಸಗಳೂ ಇವೆ...."

ಕಥೆ ಕೇಳಿದ ಯುವಕರಿಗೆ ಸಿಡಿಲು ಬಡಿದಂತಾಯಿತು.

ಯಾತ್ರಿಕನ ಕಥೆ ಸರಿಯೆಂದು ಅನುಮೋದಿಸಿದರೆ ಯುವಕರು ತಪ್ಪಿಸಿಕೊಂಡು ಓಡಿ ಹೋದ ಗುಲಾಮರಿಂದೇ ಋಣಿತವಾಗುವುದು. ಅಕ್ಷೇಪಿಸಿದರೆ, ಸ್ಪರ್ಧೆಯ ಶರತ್ಕಾಲಗುಣವಾಗಿ ಯಾತ್ರಿಕನ ಗುಲಾಮರಿಗೆ ಸಿದ್ಧ!

ವಸ್ತುಸ್ಥಿತಿ ಮಧ್ಯೆ ಪ್ರಶ್ನಿಸಿದರೂ ಯುವಕರ ದಮ್ಮಿಲ್ಲ.

ಯಾತ್ರಿಕನೇ ಸ್ಪರ್ಧೆಯಲ್ಲಿ ವಿಜಯಗಳಿಸಿದ್ದಾಗಿ ಘೋಷಿಸಲ್ಪಟ್ಟಿತು.

ಕೂಡಲೇ ಯಾತ್ರಿಕನು ಯುವಕರನ್ನುದ್ದೇಶಿಸಿ ಹೀಗೆಂದನು:

"ಯುವಕರೇ, ನೀವೀಗ ನನ್ನ ಗುಲಾಮರಾಗಿರುವಿರಿ. ನಿಮ್ಮ ಮೈ ಮೇಲಿನ ಉಡುಪುಗಳಲ್ಲವನ್ನೂ ತೆಗೆದು ಕೊಡಿರಿ. ಹಾಗಾದರೆ ನಿಮಗೆ ನಾನು ಸ್ವಾತಂತ್ರ್ಯ ನೀಡುವೆನು...."

ಹೆಡ್ಡತನದ ಪರಮಾವಧಿಯ ಅನುಭವ ಹೊಂದಿದ ಅಧಿಕ ಪ್ರಸಂಗಿಗಳಾಗಿದ್ದ ಯುವಕರು ಬಟ್ಟೆಬರೆಗಳೆಲ್ಲವನ್ನೂ ಕಳಚಿ ಕೊಟ್ಟರು; ನಗ್ನರಾಗಿ ನಾಚಿ ನಿಂತಿದ್ದಂತೆಯೇ ಯಾತ್ರಿಕನು, ತನ್ನ ಗಂಟು ಮೂಟೆ ಸಹಿತ ಯಾತ್ರೆ ಹೊರಟನು.

ಸ್ವಾಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

87 ವರ್ಷಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ರೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

Phone— 5711, 5712, 5713 } 3 Lines. ಮಂಗಳೂರು - 3.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S.C. No. 155 of 1968.

Between :

ಕೆ. ಸಂಕಪ್ಪ ಶೆಟ್ಟಿ— ವಾದಿ,

ಮತ್ತು

ಕಟ್ಟೆ ಗೊಡ್ಡ ಕೊಡಾ— ಪ್ರತಿವಾದಿರು.

1ನೇ ಪ್ರತಿವಾದಿ-ಕಟ್ಟೆ ಗೊಡ್ಡ, 2ನೇ ಪ್ರತಿವಾದಿ-ಸಿಂಗು ಗೊಡ್ಡ ಕೊ.-ಬೀಜು ಗೊಡ್ಡತರ ಮಕ್ಕಳು, ಉಡುಪಿತಾಲ್ಲೂ ಮೂಳೂರು ಗ್ರಾಮದಲ್ಲಿರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮ ಪೈಕಿ 1ನೆಯವರು ಅವರ ತಾಯಿ (ಈಗ ಪೌತ್ರಿ) ಬೀಜು ಗೊಡ್ಡತಿಯರ ಕೂಡ ವಿಳಿಯಂದ ವಾಗಿಗೆ ತಾ. 17-6-1965ರಲ್ಲಿ ಬರೆಕೊಟ್ಟ ದಿವಾಂಡು ಪ್ರೊಮಿಸರಿ ನೋಟಿನ ಅಸಲು, ಬಡ್ಡಿ ಅಪೇಜು ಸಮಾಲು ವಗೈರೆ ನಿವೃತ್ತಿ ಕೇಳಿ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾ. 8-9-1968ಕ್ಕೆ ಇಟ್ಟಿದೆ. ನಿಮ್ಮ ದೇನಾದ್ರೂ ಅಕ್ಷೇಪಣೆಯುಂದ್ದರೆ ಆ ದಿನ ಪೂರ್ವಾಹ್ನ 10 ಘಂಟೆಗೆ ಸದರಿ ಕೋರ್ಟು ಮುಂದೆ ಹಾಜರ್ಾಗಿ ಜ್ಞಾಪೀಸುಮಾಡಿಕೊಳ್ಳತಕ್ಕದ್ದು. ತಪ್ಪಿದ್ದೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷನಾಗಿ ತೀರ್ಮಾನಿಸಲಾದೀತು.

[ಕೋರ್ಟು ಹುಕುಂ ಪ್ರಕಾರ]

K. BALACHANDRA RAO,

Advocate for Plaintiff.

Udipi, Dt.: 16—8—1968.

NAVAYUGA 29-8-1968
Registered with the Registrar of News Papers for India under No. R. N. 3546/'57

REGD: No: B. G: 176
LICENCE No: 31
Licensed to Post without Prepayment

ಸಾರಸ್ವತಕಲೋಕ

'ಉತ್ತರ ರಾಮಚರಿತ' ದಲ್ಲಿ

ದಾಂಪತ್ಯ ಜೀವನ

ಲೇಖಕರು. ಶ್ರೀ ಕವಿ ಹೆಬ್ಬಾರ್, ವಂಧೂರು.

ಉತ್ತರ ರಾಮಚರಿತವು ಒಂದು ಆದರ್ಶ ಸಾಂಸಾರಿಕ ಜೀವನದ ಸುಂದರ ಪ್ರತಿಬಿಂಬ. ಪ್ರಥಮ ಪ್ರಣಯದ ಕಾವು ಕುಗ್ಗಿದ ಮೇಲೆ ಅದಕ್ಕಿಂತ ಸಾವಿರ ಪಾಲು ಮಿಗಿಲಾದ ಎರಡು ಹೃದಯಗಳ ಅದ್ವೈತ ರೂಪವೇ ದಾಂಪತ್ಯ ಜೀವನ. ಪ್ರಥಮ ಮೂನ್ರಾವಸ್ಥೆ ರಾಮಸೀತೆಯರ ಪ್ರೇಮವೇ ಪ್ರಬಲವಾದರೆ ರಾಮನು ಪಟ್ಟಮಹಿಷಿಯೊಂದು, ಕ್ರಮೇಣ ಪ್ರೇಮವೆಂಬ ದಿವ್ಯತೆಯೆಡೆಗೆ ಸಾಗಿ, ಸಾಂಸಾರಿಕ ಜೀವನವು ರಾಜಿಸುತ್ತದೆ. ಸಂಭೋಗ ಶೃಂಗಾರವು ಕಾಮದ ಫಲವಾದರೆ, ವಿಪ್ರಲಂಭ—ಶೃಂಗಾರವು ಪ್ರೇಮದ ನಿಗೂಢತೆಗೆ ಮೂಲ. ಭವಭೂತಿ ಆದರ್ಶ ಪ್ರೇಮದ ಸಾರವನ್ನು ಈ ರೀತಿ ಬಣ್ಣಿಸಿದ್ದಾನೆ:—

"ಅದ್ವೈತಂ ಸುಖ-ದುಃಖಯೋರನುಗತಂ
ಸರ್ವಾವಸ್ಥಾಸು ಯತ್
ವಿಶ್ರಾಂತೋ ಹೃದಯಸ್ಯ ಯತ್ರ ಜರಸಾ
ಯಸ್ಮಿನ್ ಮಹಾಯೋಗಿ ರಂ॥"

ಅಂದರೆ—ಯಾವುದು ಸುಖದುಃಖಗಳಿರಡರಲ್ಲೂ ಒಂದೇ ರೂಪವಾಗಿ, ಎಲ್ಲ ಅವಸ್ಥೆಗಳಲ್ಲೂ ಒಂದೇ ಸಮನಾಗಿರುವುದೋ, ಎಲ್ಲಿ ಹೃದಯಕ್ಕೆ ಪೂರ್ಣ ಶಾಂತಿ ಲಭಿಸುವುದೋ ಮತ್ತು ಸವಿಯು ಮುಪ್ಪಿನಿಂದಲೂ ಮಾಳದೊ, ಶಾಲಕ್ರಮೇಣ ಅವರಣಗಳೆಲ್ಲಾ ಸಡಿಲಿದ ಮೇಲೆ ಯಾವುದು ಮಾಗಿ ಪ್ರೇಮಸಾರವಾಗಿ ಮಾತ್ರ ಉಳಿಯುತ್ತದೋ ಆ ಮಂಗಲಮಯವಾದ ಸಾಕ್ಷಾತ್ಸಾನುಭವವೇ ಆದರ್ಶ ಪ್ರೇಮದ ಸಾರಸರ್ವಸ್ವ.

ಭವಭೂತಿಯು ದಾಂಪತ್ಯ ಜೀವನದ ಪರಮಸಾರವನ್ನು ಸೀತಾರಾಮರ ದಾಂಪತ್ಯ ಜೀವನದಲ್ಲಿ ಎರಕಹೊಯ್ದಿದ್ದಾನೆ. ಶರೀರವೆರಡು, ಆತ್ಮ ಒಂದು ಎಂಬಂತೆ ಒಬ್ಬರ ಪ್ರತಿಛಾಯೆಯಂತೆ ಇನ್ನೊಬ್ಬರು ಜೀವನದಲ್ಲಿ ಸರ್ವದಾ ಸೊಂದಿಕೊಂಡು, ಸಾಂಸಾರಿಕ ಜೀವನದ ಅಮೃತಮಯ ರಸವನ್ನು ಈಂಟಿ, ಜಗತ್ತಿಗೆ ಆದರ್ಶ ಗೃಹಸ್ಥರಾಗಿ ಹಿಂದೂ ಜನರ ಹೃದಯ ಮಂದಿರದಲ್ಲಿ ಇಂದಿಗೂ ರಾರಾಜಿಸುತ್ತಾರೆ; ಸೀತಾರಾಮರು, ಅವರ ಆದರ್ಶ ಗಾರ್ಹಸ್ಥ್ಯ—ಜೀವನದಲ್ಲಿ ಯಾವ ಭೇದಭಾವದಲಿಯೂ ಎಡೆಯಿಲ್ಲ. ವಿಯೋಗದಲ್ಲಿ ಕಾಣುವ ಪ್ರೇಮ ಪುಟಕ್ಕಿಟ್ಟ ಚಿನ್ನದಂತೆ ಬಹಳ ಪ್ರಜ್ವಲಿಸುತ್ತದೆ. ಮಲ್ಲಮೆಲ್ಲನೆ ರಾಮ ಪಿತೃತ್ವವಾದ ಸ್ವಸುಖದ ಭಾವವು ಸಂಪೂರ್ಣ ಲುಪ್ತವಾಗಿ, ದೈಹಿಕ ಸುಖಭೋಗದ ಪ್ರತ್ಯಾಶೆಯು ಕ್ಷೀಣವಾಗಿ, ಪವಿತ್ರ ಪ್ರೇಮ ಹೊರ ಹೊಮ್ಮಿ ಸೀತಾರಾಮರ ಪ್ರೇಮವು ದಿವ್ಯತೆಯೆಡೆಗೆ ಸಾಗುತ್ತದೆ. ಪತಿ ತನ್ನನ್ನು ತೊರೆದರೂ ಆಕೆಗೆ ಗೊತ್ತು—ರಾಮನು ತನ್ನನ್ನು ತನ್ನ ಹೃದಯ ದೇಗುಲದಿಂದ ಹೊರ—ಹಾಕಲಿಲ್ಲವೆಂದು. ರಾಜಾರಾಮನಾಗಿ, ಪ್ರಜೆಗಳ ನಿಂದಾ ವಾಕ್ಯಕ್ಕೆ ಒಗೊಟ್ಟು, ರಾಮನು ಸೀತೆಯನ್ನು ದೈಹಿಕವಾಗಿ ಪರಿತ್ಯಜಿಸಿದನೇ ವಿನಃ ಹೃದಯದಿಂದಲ್ಲ. ಸೀತಾಪರಿತ್ಯಾಗದಿಂದ ರಾಮನು ಮನೋವಿಶ್ লೇಷಣೆಗೆ ಒಳಗಾಗಿ, ಒಳಗೊಳಗೇ ಸೀತೆಗಾಗಿ ಹಂಬಲಿಸುತ್ತಿದ್ದಾನೆ. ಇದರಿಂದಾಗಿ ರಾಮನ ಪವಿತ್ರ ಅಳವನ್ನು ಸಹೃದಯರು ಮನಗಾಣಬಹುದು. ಅನುಭಾವಿಗಳು ಮೆಚ್ಚಬಹುದು. ಇಂತಹ ಪ್ರೇಮವನ್ನೇ ಪ್ರತಿಷ್ಠಿಸಲೂ ದೇವತೆಗಳೂ ಮೆಚ್ಚುವುದು, ಬಯಸುವುದು.

ಧರ್ಮ, ಅರ್ಥ, ಕಾಮ ಮೋಕ್ಷಗಳು ಸಾಂಸಾರಿಕ ಜೀವನದ ಧ್ಯೇಯ, ಫಲ. ಕಾಮ, ಅರ್ಥಗಳನ್ನು ಧರ್ಮಕ್ಕಾಗಿ ವಿನಿಯೋಗಿಸಿದರೆ, ಮೋಕ್ಷವು ತನ್ನಿಂತಾನೆ ದೊರಕುವುದೆಂಬುದು ವೇದಸಮ್ಮತವಾದ ಮಾತು. ಸೀತಾರಾಮ ಗೃಹಸ್ಥ ಜೀವನವನ್ನು ಈ ದೃಷ್ಟಿಯಿಟ್ಟುಕೊಂಡು ವಿಶೇಷಿಸಿದರೆ, ಈ ದಂಪತಿಗಳು ಧರ್ಮಕ್ಕಾಗಿ ಕಾಮಾರ್ಥಗಳನ್ನು ಸರಿಯಾಗಿ ಭುಂಜಿಸಿದ್ದಾರೆ; ಇನ್ನೊಂದೆಡೆ ಕಾಮಾರ್ಥಗಳನ್ನು ತೃಣೀಕರಿಸಿ ಧರ್ಮಕ್ಕಾಗಿ ಅಡವಿಗೆ ಹೋಗಿ ಅನೇಕ ಎಡರು ತೊಡರುಗಳನ್ನು ಎದೆಯೊಂದದೆ ಎದುರಿಸಿದ್ದಾರೆ. ಸಂಸಾರವೆಂದರೆ ಬರೀ ಸುಖದ ಸುಪ್ತಿಗೆಯಲ್ಲ; ಅಥವಾ ಕೇವಲ ವೇದನಾದಾಯಕ ಮುಳ್ಳಿನ ರಾಶಿಗೆಯೂ ಅಲ್ಲ. ಸುಖದುಃಖಗಳ ಸಮ್ಮಿಳಿತವೇ ಸಂಸಾರದ ಬೀಜ. ಇವೆರಡು ಸಮರಸಗೊಂಡರೇನೇ ಗೃಹಸ್ಥ ಜೀವನವು ಪರಿಪೂರ್ಣವಾಗುವುದು. ದಾಂಪತ್ಯ ಜೀವನದ ಫಲ, ಸುತೋತ್ಪತ್ತಿ, "ಅಪತ್ಯಸ್ಯ ಪತಿರ್ವಾಸಿ" ಆದ್ದರಿಂದ ಸಂತಾನೋತ್ಪತ್ತಿ, ಮೋಕ್ಷಕ್ಕೆ ಸಾಧನ. ಆದಕ್ಕಾಗಿ ತಾಯಿ ಯಾ ಪೆಲೆಯಲ್ಲಿ ಸೀತೆ ಹಂಬಲಿಸುತ್ತಾಳೆ. ರಾಮನೂ ಬಯಸುತ್ತಾನೆ. ಅಂತೂ ಅವರ ಬಯಕೆ ಈಡೇರಿತು. ಸೀತೆ ತುಂಬು ಗರ್ಭಿಣಿಯಾಗಿರುವಾಗಲೇ ವಿಧಿ ಆಕೆಯನ್ನು ರಾಮನಿಂದ ಅಗಲಿಸಿಗೊಂಡಾರಣ್ಯಕ್ಕೆ ಅಟ್ಟುತ್ತದೆ. ವಂಶವನ್ನು ಬೆಳಗುವ ಪುತ್ರೋತ್ಪತ್ತಿವು ಗಂಡಿಯಲ್ಲಿ ಸೀತೆಗೆ ಆಗುತ್ತದೆ. ವಾಲ್ಮೀಕಿಯ ಬಳಿ ಮಕ್ಕಳನ್ನು ವ್ಯಾಸಂಗಕ್ಕಾಗಿ ಕಳಿಸಲಾಗುತ್ತದೆ. ರಾಮ ಸೀತೆಯನ್ನು ತೊರೆದಿದ್ದರೂ ಇಬ್ಬರ ಕರ್ತವ್ಯವನ್ನೂ ಇಲ್ಲಿ ಸೀತೆಯೇ—ರಾಮನನ್ನು ಏನೊಂದೂ ಹಳಿಯದೆ—ನೆರವೇರಿಸುತ್ತಾಳೆ. "ತನ್ನ ಮಕ್ಕಳನ್ನು ರಾಮನು ಆಲಂಗಿಸದಿದ್ದರೆ ತಾನು ಹೆತ್ತೂ ವ್ಯರ್ಥ" ಎಂದು ಸೀತೆ ಖೇದಿಯುತ್ತಾಳೆ. ಅರ್ಧಾಂಗಿಯು ಯೋಚಿಸಬೇಕಾದ ಯೋಗ್ಯ ವಿಚಾರವೇ ಇದು.

"ಉದಾರ ಚರಿತಾನಾಂತು ವಸುಧೈವ ಕುಟುಂಬಕಂ" ಎಂಬುದೂ ಆದರ್ಶ ಜೀವನದ ಒಂದು ಅಂಶ. "ಜನರಂ ರಂಜಿಸ ಕಾರ್ಯದೊಳಿನಿಗೆ" ಎಂದು ರಾಮನು ಪೌರಜನರ ಮಾತಿಗಾಗಿ ಸೀತೆಯನ್ನೇ ತ್ಯಜಿಸಿದ. ಆಕೆಯಲ್ಲೂ ಉದಾರತೆಯನ್ನು ಇಟ್ಟಿದ್ದ. ಆದ್ದರಿಂದ ಒಳಗೊಳಗೇ ಬೇಸುತ್ತಿದ್ದ. ಸೀತೆಯು ಅಗಲುವಿಕೆಯಿಂದ ಸಹ್ಯಾಸಿಯಂತಾದ ಜನಕ, ದಶಬಿ ಕೌಸಲ್ಯೆ, ಅರುಂಧತಿ, ವನದೇವತೆ, ಭಾಗೀರಥಿ, ಸೀತೆಯ ಮಕ್ಕಳಿಗೆ ತನ್ನ ಸಾರಸರ್ವಸ್ವವನ್ನು ಧಾರೆಯೆರೆದು ಸೀತಾರಾಮರ ಪುನಃ ಸಮಾಗಮಕ್ಕೆ ಪ್ರಯತ್ನಿಸಿದ ವಾಲ್ಮೀಕಿ, ಮಂಗಳವನ್ನು ಬಯಸುವ ವಸಿಷ್ಠರು ಎಲ್ಲರೂ ಉದಾರ ಚಾರಿತ್ರ್ಯದ ಮಾರ್ಗಗಳು. ಅನ್ಯರಿಗೆ ಕಷ್ಟಕಂಡು ಮನ್ಮಲ ಮರುಗುವವರು. ಗೃಹಸ್ಥ ಜೀವನದ ಚಿತ್ರವನ್ನು ಭವಭೂತಿ ಇಲ್ಲಿ ಚೆನ್ನಾಗಿ ಎಳೆದಿದ್ದಾನೆ. ದಶರಥ ಮಾತನ್ನು ಉಳಿಸಿಕೊಳ್ಳಲು ಜೀವವನ್ನು ತೆತ್ತನು. ಜನರನ್ನು ರಂಜಿಸಲು ರಾಮನು ಪ್ರಾಣಕ್ಕಿಂತ ಹೆಚ್ಚಿನ ಸೀತೆಯನ್ನೇ ತೊರೆದು ಸುಖದ ಆಶೆಗೇ ತಿಲಾಂಜಲಿಯನ್ನಿತ್ತನು.

ಭಾಯೊ ಪ್ರಕರಣದಲ್ಲಿ ಶಾಂತಿ ರಾಮನ ಅಂತಃಕರಣವನ್ನೂ, ಚರ್ಮಯನ್ನೂ ಒರೆಗಲ್ಲಿಗೆ ಹಚ್ಚಿವಿ ಜಾರ್ಜಿತೆಡಗಿದಾಗ ಸೀತೆಯ ವೃದ್ಧಾಲ ಪ್ರೇಮಿ ಹೃದಯ ಅಗನ್ನು ಸಹಿಸಲಾಗದೆ ಗೋಗರೆಯುತ್ತದೆ. ತನ್ನ ಮೇಲಣ ಪ್ರೀತಿ ಕೊಂಚವೂ ಅಳಿದಿಲ್ಲವೆಂದು ತಿಳಿದು ಆಕೆ ಅನ್ಯಾಶಮಯ ಪ್ರೇಮ ಧಾರೆಯನ್ನೇ ಸುರಿಯಲು ಸಿದ್ಧಳಾಗುತ್ತಾಳೆ. ಸ್ಮೃತಿ ತಪ್ಪಿದ ರಾಮನಿಗೆ ಆಕೆಯ ಪ್ರೇಮ ಹಸ್ತದ ಸ್ಪರ್ಶವೇ ಸಂಜೀವಿನಿಯಾಗುತ್ತದೆ. ಭವಭೂತಿ ಇಲ್ಲಿ ಪ್ರೇಮ ವಿಮರ್ಶೆಯ ತುತ್ತ ತುದಿಗೇರಿದ್ದಾನೆ.

"ಕಣ್ಣಿರಿಯದಿದ್ದರೂ ಕರುಳರಿಯದೇ" ಎಂಬಂತೆ ಜನಕ ಕೌಸಲ್ಯೆ ಶ್ರೀರಾಮರು ಲವಕುಶರ ದರ್ಶನದಿಂದ ಪಡೆದ ಆನಂದ ಅಪಾರವಾಗಿದೆ. ಏಕೆಂದರೆ—'ಸುಖಲಾಭಪಾರ್ಥಿನಿ ಪ್ರೀತಿಃ ಸಂಶ್ರಯಂತೇ."

ಅಲ್ಲದೆ—

"ಅಗಾದಂಗಾಂ ಸ್ವತ ಇವ ನಿಜ ಸ್ನೇಹಜೋ ದೇಹಸಾರಃ ಪ್ರಾದುರ್ಭೂಯಸ್ಥಿತ ಇವ ಬಹಿಶ್ಚೇತನಾ ಧಾತುರೇಖಃ"

ಬಾಲಕನ ಆಲಿಂಗನದಿಂದ ನನ್ನ ದೈಯೆಲ್ಲ ಅಮೃತಸಿಂಚನಗೊಂಡಿದಂತಾಗಿದ್ದ ಪ್ರೀತಿ, ಶರೀರದ ಸಾರವನ್ನೆಲ್ಲ ಒಂದೊಂದು ಅಂಗದಿಂದಲೂ ಹರಿಯಿಸಿದ ಪ್ರವಾಹವೇ ಇವನಿರಬಹುದೇ? ನನ್ನ ಒಳಗಿನ ಚೇತನಾಧಾತುವೇ ಹೊರಗೆ ಮೈವೆತ್ತು, ಹೀಗೆ ಬಾಲಕನ ರೂಪವನ್ನು ತಳೆದಿರಬಹುದೇ ಎಂಬಂತಿದೆ. ಹೀಗೆ ಭವಭೂತಿ ರಾಮನಿಂದ ಹೇಳಿಸಿದಾಗ—ತಾನು ಸಂಸಾರಿಯಾಗಿ ಜೀವನದಲ್ಲಿ ಕಂಡ ತನ್ನ ಸುಖಾನುಭವವನ್ನೆಲ್ಲ ಇಲ್ಲಿ ಭವಭೂತಿ ಭಟ್ಟ ಇಳಿಸಿರುವನೋ ಎನಿಸುತ್ತದೆ.

ರಾಮ ದೈವಾಂಶ ಸಂಭೂತನಾದರೂ ಅತಿ ಮಾನವನು ಮಾಡುವ ಕಾರ್ಯವನ್ನು ರಾಮನಿಂದ ಮಾಡಿಸಿದೆ, ಮನುಷ್ಯ ಪ್ರಯತ್ನಿಸಿದರೆ ಸಾಧಿಸಬಹುದಾದ ಉಜ್ವಲ ಆದರ್ಶ ದಾಂಪತ್ಯ ಜೀವನವನ್ನು ಭವಭೂತಿ ಚಿತ್ರಿಸಿ ಕೃತಾರ್ಥನಾಗಿದ್ದಾನೆ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಲಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.
ರಟ್ಟಿನ ಪ್ರತಿಗಳಿಗೆ ವಿಶೇಷ ಸವಲತ್ತುಗಳುಂಟು

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪ್ರಿಂಟಿಂಗ್ ಕಂಪನಿ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

Printed & Published by K. H. Shetty at the Navayuga Press, Udupi, S. Kanara